VEC,Library
004583

VEC,Library
004583

VIJAYA EVENING COLLEGE,
LIBRARY
BANGALORE-4.
ACCN. NO 4583
SECTION
COST
Date 25:5:73 Librarian.

ಪ್ರಬುದ್ಧ ಕರ್ಣಾಟಕ

ಸಂಪುಟ ೩೨—ಸಂಚಿಕೆ ೧

೧೨೩

ವಿಕೃತಿ ಸಂವತ್ಸರ

ಚೈತ್ರ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೦

ವಿಷಯ ಸೂಚಿಕೆ

ವಿಷಯ	ಲೇಖಕರು	ಪುಟ
	ಶ್ರೀಯುತರಾದ	
೧. ‘ಶ್ರೀ ಸಾಮಾನ್ಯ’ರ ದೀಕ್ಷಾಗೀತೆ—ಕುವೆಂಪು	....	೧
೨. ಅಳುಕದೀ ಕನ್ನಡಂ—ಕುವೆಂಪು	....	೬
೩. ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನಸಂದೇಶ—ಕುವೆಂಪು	....	೭
೪. ರಾಸಕ್ರೀಡೆ—ಕಣೇಕಲ್ಲ ಗೋವಿಂದ	....	೨೭
೫. ಆನಂದವರ್ಧನನ ಕಾವ್ಯಮೀಮಾಂಸೆ (೪. ಧ್ವನಿಪ್ರಪಂಚ)—ಡಾ|| ಕೆ. ಕೃಷ್ಣಮೂರ್ತಿ	....	೩೫
೬. ಕನ್ನಡಮಹಾಭಾರತಗಳು—ಎಚ್. ಎಂ. ಶಂಕರನಾರಾಯಣರಾವ್	....	೬೭
೭. ಕಾವ್ಯಾವಲೋಕನ	....	೭೮
೮. ಸಂಪಾದಕೀಯ	....	೮೨
೯. ಸಾದರ ಸ್ವೀಕಾರ	....	೮೩

ಪ್ರಬುದ್ಧ ಕರ್ಣಾಟಕ

ವಿಕೃತಿ ಸಂವತ್ಸರ | ೧೨೩ | ಚೈತ್ರ ಸಂಚಿಕೆ

‘ಶ್ರೀಸಾಮಾನ್ಯ’ರ ದೀಕ್ಷಾಗೀತೆ*

೧

‘ಶ್ರೀಸಾಮಾನ್ಯ’ವೆ ಭಗವನ್ ಮಾನ್ಯಂ;
‘ಶ್ರೀಸಾಮಾನ್ಯ’ನೆ ಭಗವದ್ ಧನ್ಯಂ!
ಸಾಮಾನ್ಯವೆ ಭಗವಂತನ ರೀತಿ;
ಸಾಮಾನ್ಯನೆ ದಿಟ ಭಗವತ್ ಪ್ರೀತಿ!
ಸಾಮಾನ್ಯರೊ ನಾವು:
ಓ ಬನ್ನಿಂ, ಓ ಬನ್ನಿಂ
ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ ನೀಂ!
ಸರ್ವರಿಗಾಗಿಯೆ ಸರ್ವವ ತನ್ನಿಂ;
“ಸರ್ವರಿನೆನಗೆ! ಸರ್ವರಿಗೆನ್ನಿಂ!
ಸರ್ವರಿಗಾಗಿಯೆ ಸರ್ವಂ!” ಎನ್ನಿಂ.
ಓ ಬನ್ನಿಂ, ಓ ಬನ್ನಿಂ
ಸಾಮಾನ್ಯದ ಪೂಜೆಗೆ ಶ್ರೀ ದೀಕ್ಷೆಯ ಕೊಳ್ಳಿಂ!

---

* ೧೯೫೦ ನೆಯ ಜನವರಿ ೨೬ ನೆಯ ಗುರುವಾರ ಭಾರತವು ಸರ್ವಪ್ರಜಾಧಿಪತ್ಯ (ರಿಪಬ್ಲಿಕ್) ವನ್ನು ಘೋಷಿಸಿದ ಸಂದರ್ಭದಲ್ಲಿ.

೨

ಕೊನೆಗಂಡಿತೊ ಓರೊರ್ವರ ಗರ್ವದ ಕಾಲ,
ಇದು ಸರ್ವರ ಕಾಲ!
"ಸರ್ವೋದಯ!" "ಸರ್ವೋದಯ!"
ಸರ್ವೋದಯ ಯುಗಮಂತ್ರ!
ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ!
ಮೇಲಿಲ್ಲವೊ ಕೀಳಿಲ್ಲವೊ
ಸರ್ವ ಸಮಾನದ ರಾಜ್ಯ:
ಅಧ್ಯಕ್ಷನೊ ಸೇನಾನಿಯೊ
ಕಮ್ಮಾರನೊ ಚಮ್ಮಾರನೊ
ಕಾಯಕವೆಲ್ಲವು ಪೂಜ್ಯ!
ಕೈಗಾರನೊ ಕಲೆಗಾರನೊ
ಇರ್ವರಿಗೂ ಸಮಭೋಜ್ಯ;
ಇನ್ನಿಲ್ಲವೊ ಅಹಮಹಮಿಕೆ,
ತರತಮಗಳ ವ್ಯಾಜ್ಯ!
ಉಣಿಸಿಗೆ ಮೇಣ್ ಉಡುಪಿಗೆ ಮೇಣ್
ಆರಾಗಲಿ ಆರಡಿಯನ್
ಹಿಡಿಯುವುದಿನ್ ತ್ಯಾಜ್ಯ!
ಲೌಕಿಕದೊಳ್ ಲೌಕಿಕರಿಗೆ
ಆರಾಗಲಿ ಆರಡಿಯೊಳ್
ಹೊರಳುವುದಿನ್ 'ಪೂಜ್ಯ'!
—ಇದು ಲೌಕಿಕ ರಾಜ್ಯ!

೩

ಸಾಮಾನ್ಯರೊ ನಾವು:
ಓ ಬನ್ನಿಂ
ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ
ನೀವೂ! ನೀವೂ! ನೀವೂ!—
ನಿಲ್ ಇನ್, ದಿಟ್ಟಗೆ ನಿಲ್ ಇನ್!
ಬಾಗಿದ ಸೊಂಟವ ನೆಟ್ಟಗಿಡು;

ಬಿದರಿದ ಬೆನ್ನಂ ನೇರ್ ಮಾಡು.
ನೆಲ ನೋಡುವ ಕಣ್ಣಂ ಮೇಲೆತ್ತಿ
ಅಭ್ಯಾಸಂ ಮರೆತಾ ತಲೆಯೆತ್ತಿ
ಎದುರಾಳಿಯ ಮೊಗ ನೋಡು!
ಶತಶತಮಾನಂ ಗಗನವ ಹೀರದೆ,
ದಾಸ್ಯದ ತಿಮಿರದಿ ದಾರಿಯೆ ತೋರದೆ,
ದಾರಿದ್ರ್ಯದ ಶವಭಾರದಿ ಬಗ್ಗಿ,
ದರ್ಪದ ಪದಘಾತಕೆ ದೈನ್ಯದಿ ಕುಗ್ಗಿ
ಕುನಿದಿಹ ವಕ್ಷವಸುಬ್ಬಿಸಿ ಉಸಿರಾಡು!
ತೊಲಗಿತು ನಿನ್ನೆಯ ನಾಯ್‌ಪಾಡು;
ಇನ್ನಿದು ದಿಟಕೂ ನಿನ್ನಯ ತಾಯ್‌ನಾಡು:
ನಿನ್ನದೆ ನೆಲ! ನಿನ್ನದೆ ಹೊಲ!
ನಿನ್ನದೆ ಕಾನ್! ನಿನ್ನದೆ ಬಾನ್
ನಿನ್ನದೆ ನುಡಿ! ನಿನ್ನದೆ ಗುಡಿ!
ನಿನ್ನದೆ ಹೊಳೆ! ನಿನ್ನದೆ ಬೆಳೆ!
ನಿನಗಾಗಿಯೆ ನಿನ್ನೊಲವಿಗೆ
ಇನ್ ಮೀಸಲ್ ನೀ ಬೆಳೆವ ಬೆಳೆ!
ನಿನಗಾಗಿಯೆ ನಿನ್ನೊಲವಿಗೆ
ಇನ್ ಮೀಸಲ್ ನೀ ಉಳುವ ಇಳೆ!

೪

'ಶ್ರೀಸಾಮಾನ್ಯರೊ' ನಾವು:
ಶ್ರೀಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ ನೀವೂ!
ಹೆಸರಾಸೆಗೆ ಕೆಸರಾಸೆಗೆ
ಉಸಿರನು ನೋಯಿಸೆವಾವು;
ಹಿಡಿಯದು ನಮ್ಮನು ಕೀರ್ತಿಯ ಹವ್ಯಾಸದ ಹೆಬ್ಬಾವು!
ಭಗವಂತನೆ ಸರ್ವೋತ್ತಮ ಸಾಮಾನ್ಯನ್:
ಸಾಮಾನ್ಯನೆ ಸರ್ವೋತ್ತಮ ಶ್ರೀಮಂತನ್!
ಆತನೆ ಒರ್ವನ್, ಆತನೆ ಸರ್ವನ್,
ಸರ್ವಾತ್ಮನ್ ತಾನ್ ಸರ್ವಾಸನ್ನನ್!

ನಮಗಿಲ್ಲಯ್ ಶಾಶ್ವತ ನಾಮದ ಗರ್ವಂ,
ನಶ್ವರವನೆ ಶಾಶ್ವತವಾಗಿಸುವಾ
ಅಹಂಕಾರದಾ ಮಿಥ್ಯಾಗರ್ವಂ.
ನಶ್ವರ ಸುಖಿಗಳ್ ನಾವು :
ಕೇಡಲ್ಲವೊ ನಮಗಾ ಹೆಸರಿಲ್ಲದ ಸಾವು !
ಹಿಂಜರಿಯೆವು, ಅಂಜೆವು, ಸಾಮಾನ್ಯತೆಗಾವು !
ನೇಗಿಲ್ ಲೇಖನಿ ತಕ್ಕಡಿ ಕತ್ತಿ
ನಮಗೆಲ್ಲಂ ಸಮರಸ ಸಂಪತ್ತಿ.
ನಮಗಲ್ಲವೊ ಪತ್ರಿಕೆಗಳ್
ಪೊತ್ತಿಸುವಾ ಪ್ರಖ್ಯಾತಿಯ
ಪುಲ್‌ವೆಂಕೆಯ ಕಾಂತಿ,
ಹೆಸರಿನ ವಿಭ್ರಾಂತಿ !
ಹೆಸರರಿಯದ ದಿನದಿನದಾ
ಒಲುಮೆಯ ಬಾಳಿನ, ನಲುಮೆಯ ಸೇವೆಯ,
ಅಖ್ಯಾತಿಯೆ ನಮ್ಮಾತ್ಮದ ಚಿರಶಾಂತಿ !
ಶಾಂತಿಗೆ ದುರ್ಗಂ, ಶಾತಿ ಸ್ವರ್ಗಂ,
ಅಖ್ಯಾತಿಯೆ ಸಾಮಾನ್ಯರ ಶ್ರೀಮನ್‌ಮಾರ್ಗಂ :

೫

ಬರಿ ಲೌಕಿಕವಲ್ಲಯ್ ನಮ್ಮೆದೆಯುಸಿರಿನ ಗಮನಂ :
ಹುಸಿಯಲ್ಲದ ಋಷಿತನಕಿದೊ ನಮ್ಮಯ ನಮನಂ ;
ರಸ ತುಂಬಿದ ಕವಿಕಲೆಗಿದೊ ನಮ್ಮಯ ನಮನಂ !
ಭಗವತ್ ತ್ಯಾಗಿಗೆ ಇದೊ ನಮನಂ !
ಶ್ರೀಮದ್ ಯೋಗಿಗೆ ಇದೊ ನಮನಂ !—
ಮೇಣ್. . .
ಮರೆ ಮೋಸದ ಬೂಟಾಟಿಕೆಗಿದೊ ಮರ್ದನ ದಮನಂ !
ಧರ್ಮದ ಸೋಗಿನ ದುರ್ಲಾಭಕೆ ಕೋ ಧಿಕ್ಕಾರದ ಶಮನಂ ;
ಮೇಣ್ ಬಲಭೇಷಜ ವಮನಂ !—
ಹನಿ ಹನಿ ಸೇರುತ ಹರಿಯುವ ಜನ ಜನತಾ ಭಕ್ತಿ
ತಾನದೆ ತಿಳಿಯಯ್ ಸಾಮಾನ್ಯರ ಶ್ರೀಶಕ್ತಿ.

ಸರ್ವೋದಯವೆಮ್ಮಯ ಗುರುದೀಕ್ಷಾಮಂತ್ರಂ ;
ಸರ್ವಪ್ರೇಮಜ ಸಮತಾಭಾವಂ ಶಿಕ್ಷಾತಂತ್ರಂ ;
ಸರ್ವಸಮರ್ಪಣ ಯೋಗದ ಮರ್ಮಂ
ಬೋಧಿಪ ನಿತ್ಯ ನಿರಂತರ ಕರ್ಮಂ
ಸಾಧಿಪ ಲೀಲಾನಂದದ ಧರ್ಮಂ ರಕ್ಷಾಯಂತ್ರಂ !
'ಶ್ರೀಸಾಮಾನ್ಯರೊ' ನಾವು :
ಓ ಬನ್ನಿಂ,
ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ
ನೀವೂ ! ನೀವೂ ! ನೀವೂ !

—ಕುವೆಂಪು

ಅಳುಕದೀ ಕನ್ನಡಂ !

ಪಂಪರನ್ನರ್ ಕುಮಾರವ್ಯಾಸ ಲಕ್ಷ್ಮೀಶ
ಹರಿಹರಾದಿಗಳುಸಿರ್ ಸಮ್ಮೇಳಿರ್ಪನ್ನೆಗಂ
ಅಳುಕದೀ ಕನ್ನಡಂ ! ಅಳಿಯದೀ ಕನ್ನಡಂ !
ಉಳಿವುದೀ ಕನ್ನಡಂ !—
ಮೊನ್ನೆ ಕಣ್‌ಬಿಟ್ಟುದೀ
ಪಸುಳೆ ವಿದ್ಯಾನಿಲಯವಾ ಮುತ್ತ ನುಡಿತಾಯ್ಗೆ
ಮೊಲೆವಾಲನಿತ್ತೊಲಿದು ಸಲಹಿದಪುದೆಂಬಾಸೆ
ನಗೆಗೀಡು, ನಾಣ್ಗೀಡು, ಬೆಳ್ತನಂ ! ತಾಯಿಂದೆ
ಪಸುಳೆಬಾಳ್ ; ತಾಯೆರ್ದೆಯೆ ಸಿಸುಗೆ ಕೂಳ್ ! ಪೆತ್ತಳಂ
ಪಳಿದುಳಿವುದೇನರ್ಭಕಂ ಪೇಳ್ ? ಪ್ರಭೇದವೇನ್
ಗೊತ್ತೆ, ಪಸುಳೆಗೆ ಮತ್ತೆ ಪೇನ್ಗೆ ? ನೆತ್ತರುಣೆ ಪೇನ್ ;
ಪಾಲುಣಲ್ ಪಸುಳೆ: ಕೊಂದು ಸಾವುದು ಕೊನೆಗೆ ತಾನ್
ಪೇನ್ ; ಬಳ್ದು ಬರ್ದುಕಿಪುದು ತನ್ನಬ್ಬೆಯಂ ಪಸುಳೆ !
ನೆತ್ತರುಣಿ ಪೇನಾಗದೆಯೆ ಪಸುಳೆ ತಾನಾಗಲೀ
ಕನ್ನಡಮ್ಮನ ಎರ್ದೆಯ ಅಮೃತ ಜೀವನಸವೀಂಟಿ ,
ಮರಳಿ ಜೀವಾಮೃತವನೀವವೋಲ್ ವಿದ್ಯಾಲಯಂ !

—ಕುವೆಂಪು.

ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ

೧

ವ್ಯಷ್ಟಿಸಿದ್ಧಿ

" ಯುಗದೊಳ್ಳಿಗೆ ಜಗದೊಳ್ಳಿಗೆ
ನಿನ್ನೊಳ್ಳನೆ ನೀಂ ಗೆಲ್ಲು "

—ಶತಮಾನ ಸಂಧ್ಯೆ

'ಸ್ವಾಮಿ ವಿವೇಕಾನಂದ'ರ ಜೀವನಚರಿತ್ರೆಯನ್ನು ಕುರಿತು ನಾವು ಸಮಾಲೋಚನೆ ಮಾಡಲಿರುವ ಈ ಲೇಖನದ ಮೂರು ಭಾಗಗಳಲ್ಲಿ ಮೊದಲನೆಯದು 'ವ್ಯಷ್ಟಿಸಿದ್ಧಿ'; ಎರಡನೆಯದು 'ಸಮಷ್ಟಿಸಿದ್ಧಿಗಾಗಿ'; ಮೂರನೆಯದು 'ದೃಷ್ಟಿಯಂತೆ ಸೃಷ್ಟಿ.' ಮೊದಲನೆಯದರಲ್ಲಿ: ನರೇಂದ್ರನು ವಿವೇಕಾನಂದರಾದದ್ದು ಹೇಗೆ? ವ್ಯಕ್ತಿ ಜೀವನ ದೃಷ್ಟಿಯಿಂದ ಅದರ ಅರ್ಥವೇನು? ಮಹಿಮೆಯೇನು? ಪ್ರಯೋಜನವೇನು? ಎರಡನೆಯದರಲ್ಲಿ: ವಿವೇಕಾನಂದರು ಅಮೆರಿಕಾಕ್ಕೆ ಹೋದದ್ದು ಏಕೆ? ಪ್ರಪಂಚ ಜೀವನ ದೃಷ್ಟಿಯಿಂದ ಅದಕ್ಕೆ ಅರ್ಥವೇನು? ಅದರ ಬೆಲೆಯೇನು? ಅದರಿಂದ ಪ್ರಯೋಜನವೇನು? ಮೂರನೆಯದರಲ್ಲಿ: ಅಂತಹ ಜಿಜ್ಞಾಸೆಯಿಂದ, ಅಂತಹ ಪರಿಶೀಲನೆಯಿಂದ ನಮ್ಮಲ್ಲಿ ಎಂತಹ ದೃಷ್ಟಿ ಮೂಡುತ್ತದೆ? ವ್ಯಷ್ಟಿಯಲ್ಲಿ ಹಾಗೆ ಸಿದ್ಧವಾಗುವ ದೃಷ್ಟಿ ಮುಂದಣ ಜಗತ್ ಸಮಾಜದ ಸಮಷ್ಟಿಸೃಷ್ಟಿಗೆ ಏನು ಬೆಳಕು ನೀಡುತ್ತದೆ? ಯಾವ ತಪಸ್ಸನ್ನು ಆಶಿಸುತ್ತದೆ; ಎಂತಹ ಶಕ್ತಿಯನ್ನು ಆಹ್ವಾನಿಸುತ್ತದೆ? ಅಂತಹ ದಿವ್ಯದರ್ಶನದಿಂದ ದೀಪ್ತವಾಗುವ ವ್ಯಷ್ಟಿಸಿದ್ಧಿಯಿಂದ ಎಂತಹ ಸಮಷ್ಟಿಸಿದ್ಧಿ ಸಂಸ್ಥಾಪಿತವಾಗಿ ಸರ್ವೋದಯುವಾಗಲು ಸಾಧ್ಯವಾಗುತ್ತದೆ?

ವಿವೇಕಾನಂದರ ಜೀವನ ಚರಿತ್ರೆಯನ್ನು ಕುರಿತ ಈ ಪರ್ಯಾಲೋಚನೆ ಮೂರು ಭಾಷಣಗಳಲ್ಲಿ ಹಸುಗೆಗೊಂಡಿದ್ದರೂ ಅವುಗಳನ್ನು ಒಂದೇ ತ್ರಿಕೋನದ ಬೇರೆಬೇರೆ ಭುಜಗಳಂತೆ ಭಾವಿಸಬೇಕು. ಏಕೆಂದರೆ ಪೂರ್ಣದೃಷ್ಟಿಗಲ್ಲದೆ ಪೂರ್ಣಪ್ರಯೋಜನ ಲಭಿಸುವುದಿಲ್ಲ.

ವಿವೇಕಾನಂದರ ಜೀವನಚರಿತ್ರೆಯನ್ನು ಓದುವ ತರುಣರು ಮೊದಲು ಬೆರಗಾಗುವುದು ಅದರ ಅದ್ಭುತಕ್ಕೆ; ಪೌರಾಣಿಕ ಎಂಬಂತಿರುವ ಅದರ ಸಾಹಸ

ಪೂರ್ಣತೆಗೆ; ರೋಮಾಂಚನಕರವೂ ಅಲೋಕಭವ್ಯವೂ ಆಗಿ ತೋರುವ ಅದರ ಉಜ್ಜ್ವಲ ವಿಭೂತಿಯ ದುರ್ದಮ್ಯಶಕ್ತಿಗೆ. ಆ ವ್ಯಕ್ತಿತ್ವದ ಪ್ರಚಂಡ ಜ್ಯೋತಿಯ ಮುಂದೆ, ಅದರ ಅಪ್ರತಿಹತವಾದ ದೈತ್ಯೋಪಮವಾದ ದಿವ್ಯಾಧಿಕಾರದ ಮುಂದೆ ಓದುಗನ ಕಿರಿಯ ವ್ಯಕ್ತಿತ್ವ ಅಪ್ಪಳಿಸಿದಂತಾಗಿ ಶರಣುಹೋಗುತ್ತದೆ. ಆದರೂ ಒಡನೊಡನೆಯೆ ಅದರ ಭೀಮಶಕ್ತಿ ನಮ್ಮ ನಾಡಿನಾಡಿಗಳಲ್ಲಿ ಹರಿದು ಅಲ್ಲಿಯ ದುರ್ಬಲತೆ ಅಲ್ಪತೆಗಳನ್ನೆಲ್ಲ ಕೊಚ್ಚಿ, ನಮ್ಮ ಹೃದಯಗಳಲ್ಲಿಯೂ ತನ್ನ ಮಹಾಶಕ್ತಿಯನ್ನು ಉದ್ದೀಪಿಸಿ, ನಮ್ಮನ್ನೂ ತನ್ನತನಕ್ಕೆ ಏರಿಸುತ್ತಿರುವ ದಿವ್ಯಾನುಭವವೂ ಸ್ಫುರಿಸುತ್ತದೆ.

ಅಂತಹ ಶಕ್ತಿ ನರೇಂದ್ರನಲ್ಲಿ ಹೇಗೆ ಆವಿರ್ಭಾವವಾಯಿತು? ಇತರರಂತೆ ಕಾಲೇಜಿನ ಸಾಮಾನ್ಯ ವಿದ್ಯಾರ್ಥಿಯಾಗಿದ್ದ ಆತನಲ್ಲಿ ಜಗತ್‌ಕಂಪನಕಾರಿಯಾಗುವ ಶಕ್ತಿ ಹೇಗೆ ಉದ್ಭವಿಸಿತು? ಅಂತಹ ಎಳವಯಸ್ಸಿನಲ್ಲಿಯೆ ಆ ಅದ್ಭುತ ಮೇಧಾಶಕ್ತಿ, ಆ ಆಧ್ಯಾತ್ಮಿಕ ಓಜಸ್ಸು, ಆ ಸಿಡಿಲ್ದನಿರೋಪಮ ವಾಗ್ಮಿತೆ, ಆ ಧೀರೋದಾತ್ತ ಸಿಂಹಧೈರ್ಯ, ಆ ಸರ್ವರಹಸ್ಯ ಹೃದಯಭೇದಿಯಾದ ಯೋಗದೃಷ್ಟಿ, ನಿಶ್ಚಲ ನಿರ್ವಿವಾದವಾದ ಆತ್ಮಾನುಭವ ಇವೆಲ್ಲ ಆತನಿಗೆ ದೊರೆಕೊಂಡುದು ಹೇಗೆ?

ಈ ಪರಿಶೀಲನೆ ಇಂದಿನ ತರುಣರಿಗಂತೂ ಅತ್ಯಗತ್ಯ. ಏಕೆಂದರೆ “ಸ್ವಪ್ರಯತ್ನದಿಂದಲೇ ಸರ್ವವನ್ನೂ ಸಾಧಿಸುತ್ತೇನೆ” ಎಂಬ ಅಹಂಕಾರ ಮೂಲವಾದ ಸಾಹಸ ಗರ್ವದ ಹುಲಿ ಒಂದುಕಡೆ; “ನನ್ನಿಂದ ಏನಾಗುತ್ತದೆ? ಎಲ್ಲ ಹಣೆಯ ಬರಹ; ಪಡೆದುಕೊಂಡುಬಂದಷ್ಟು ಲಭಿಸುತ್ತದೆ; ನಾನು ಎಷ್ಟು ಒದ್ದಾಡಿದರೂ ದೇವರು ಅಸ್ತು ಎನ್ನದಿದ್ದರೆ ಏನೂ ಆಗುವುದಿಲ್ಲ” ಎಂಬ ತಮಃಪ್ರಧಾನವೂ ಆಲಸ್ಯ ಮೂಲವೂ ಆದ ಹೆಂಬೇಡಿತನದ ದರಿ ಮತ್ತೊಂದು ಕಡೆ. ಹೀಗೆ ಅಪಾಯವೆರಡರ ನಡುವೆ ಅನಾಹುತದ ಅಂಚಿನಲ್ಲಿ ಓಲಾಡುತ್ತದೆ ಅನೇಕ ತರುಣರ ಮನಸ್ಸು.

ವಿವೇಕಾನಂದರ ಜೀವನಚರಿತ್ರೆಯನ್ನು ಎಚ್ಚರಿಕೆಯಿಂದ ಗಮನಿಸಿದರೆ, ಹುಲಿಯ ಮೇಲೆಯೆ ಏರಿ ದರಿಯನ್ನು ನೆಗೆಯುವ ಮಹೋಪಾಯವನ್ನು ಸಂದರ್ಶಿಸುತ್ತೇವೆ.

ವಿವೇಕಾನಂದರಲ್ಲಿ ಪ್ರಕಾಶವಾಗಿರುವ ಸರ್ವಮಹತ್ತೂ ನರೇಂದ್ರನಲ್ಲಿ ಬೀಜರೂಪವಾಗಿ ಸಂಸ್ಕಾರರೂಪವಾಗಿ ಇತ್ತೆಂದು ಒಪ್ಪಿಕೊಂಡರೂ ಅದು ವ್ಯಕ್ತಿಯ ಸಾಧನೆಯೂ ಅದಕ್ಕೆ ಸಂವಾದಿಯಾದ ಗುರುಶಕ್ತಿಯ ಕೃಪೆಯೂ ಇಲ್ಲದೆ ವ್ಯಕ್ತವಾಗಲಾರದು ಎಂಬುದು ಸ್ಪಷ್ಟವಾಗುತ್ತದೆ. ನೆಲ ನೀರು ಗಾಳಿಗಳ ಗುರುಕೃಪೆಯಿದ್ದರೆ ತಾನೆ ಬೀಜದಲ್ಲಿ ಗುಪ್ತವಾಗಿರುವ ವೃಕ್ಷತ್ವ ತನ್ನ ಸುಪ್ತಿಯಿಂದ ಎಚ್ಚತ್ತು ಬೆಳೆಯಲು ಸಾಧ್ಯವಾಗುತ್ತದೆ! ನಮ್ಮೆಲ್ಲರಲ್ಲಿಯೂ ಗುಪ್ತವಾಗಿರುವ ಆ ಸುಪ್ತಶಕ್ತಿ

ಎಚ್ಚರಗೊಳ್ಳಬೇಕಾದರೆ ಅಂತಹ ಗುರುಕೃಪಾರೂಪವಾದ ದೈವೇಚ್ಛೆಯು ಬಲ ಅತ್ಯಂತ ಆವಶ್ಯಕ. ಯಾವ ರೂಪದಲ್ಲಿಯೆ ಒದಗಲಿ, ಯಾವ ರೀತಿಯಲ್ಲಾದರೂ ಕೆಲಸಮಾಡಲಿ, ಅಂತಹ ಗುರುಕೃಪೆಯ ಆಶೀರ್ವಾದದ ಬಲಕ್ಕಾಗಿ ನಾವು ಸಾಧನೆ ಮಾಡದಿದ್ದರೆ ನಮ್ಮ ಅಂತಃಶಕ್ತಿ ಸಮರ್ಪಕವಾಗಿ ಸಂಪೂರ್ಣವಾಗಿ ಶ್ರೀಯುಕ್ತ ವಾಗಿ ಮೈದೋರಲಾರದು. ಒಂದು ವೇಳೆ ಅವಿನಯಶೀಲವಾದ ಅಹಂ ಪ್ರಯತ್ನದಿಂದ ಸ್ವಪ್ರತಿಷ್ಠೆಯ ಉದ್ದೇಶಕ್ಕಾಗಿ ಹೊರಹೊಮ್ಮಿದರೂ ಬಂಡೆಯ ಮೇಲಿರುವ ಅಲ್ಪ ಮೃತ್ತಿಕೆಯಲ್ಲಿ ಮೊಳೆಯುವ ಗಿಡದಂತೆ ಹ್ರಸ್ವವೂ ಕುಬ್ಜವೂ ವಿಕೃತವೂ ಆಗಿ ವ್ಯರ್ಥವಾಗುವುದರಲ್ಲಿ ಸಂದೇಹವಿಲ್ಲ.

ಸ್ವಾಮಿ ವಿವೇಕಾನಂದರ ಪಕ್ಕದಲ್ಲಿ ಶ್ರೀರಾಮಕೃಷ್ಣ ಪರಮಹಂಸರನ್ನು ನಿಲ್ಲಿಸಿ ನೋಡುವ ತರುಣದೃಷ್ಟಿಗೆ ದಕ್ಷಿಣೇಶ್ವರದ ಗುಡಿಯ ಪೂಜಾರಿ ನಗೆಪಾಟಲಾಗಿ ಕಾಣಬಹುದು. "ಅಯ್ಯೋ ಈ ಕಾಡು ಕಾಡಾದ ಗೊಡ್ಡು ಪೂಜಾರಿಯಿಂದ ಚಿಕಾಗೊ ಸರ್ವಧರ್ಮ ಸಮ್ಮೇಲನದಲ್ಲಿ ನಿಂತು ಭಾಷಣಮಾಡಿ ಜಗತ್ತನ್ನೇ ಬೆರಗುಗೊಳಿಸಿ ಅಡಿಗೆರಗಿಸಿದ ಈ ಭೀಮವ್ಯಕ್ತಿ ಏನನ್ನು ತಾನೆ ಪಡೆದಿದ್ದಾನು!" ಎಂಬ ಉದ್ಗಾರ ಹೊಮ್ಮಬಹುದು. ಅಂತಹ ಮನೋಧರ್ಮ ತಾರುಣ್ಯಕ್ಕೆ ಸ್ವಾಭಾವಿಕವಾದದ್ದೆ. ಬಹಿರ್‌ವೈಭವಕ್ಕೆ ಬೆರಗಾಗಿ ಶರಣಾಗುವುದೇ ಅದರ ಲಕ್ಷಣ. ಠಾಕೂರರು ಹೇಳಿದಂತೆ "ಗಿರಲುಮೀಸೆ ಬಿಟ್ಟು, ರಂಗಿನ ರುಮಾಲಿಟ್ಟು, ಹೊಳೆಯುವ ಹಿತ್ತಾಳೆಯ ಬಿಲ್ಲೆಯ ಕೆಂಪು ದವಾಲಿ ತೊಟ್ಟು, ದಂಡಿನ ಉಡುಪು ಉಟ್ಟು, ಬಾಗಿಲು ಕಾಯುತ್ತಾ ನಿಮಿರಿ ನಿಲ್ಲುವ ದ್ವಾರಪಾಲಕನಿಗೆ ಕೊಡುವ ಗೌರವವನ್ನು ಒಳಗಿರುವ ಸಾಧಾರಣವಸನಧಾರಿಯಾದ ಅಧಿಕಾರಿಗೆ ಅದು ಕೊಡ ಲಾರದು. ಕಾರಣ, ನಿಜವಾದ ಶಕ್ತಿಯ ಸ್ಥಾನದ ಅರಿವಿರುವುದಿಲ್ಲ ತಾರುಣ್ಯ ಸಹಜವಾದ ಬಹಿರ್‌ಮುಖತೆಗೆ. ಉತ್ಸವಮೂರ್ತಿಯಂತಿರುವ ವಿವೇಕಾನಂದರ ವ್ಯಕ್ತಿತ್ವಕ್ಕೆ ಡಂಗುಬಡಿದುಹೋಗುವ ತರುಣ ಹೃದಯ ಪರಮಹಂಸರಿಂದ ಮೊದ ಮೊದಲು ಆಕರ್ಷಿತವಾಗುವುದಿಲ್ಲ. ಅನುಭವ ವಿಸ್ತರಿಸಿ, ದೃಷ್ಟಿ ಗಭೀರವಾಗಿ, ಸಂಸ್ಕಾರ ಹೆಚ್ಚು ಹೆಚ್ಚು ಪಕ್ವವಾಗಿ, ಪ್ರಾಣಮಯದ ರಜಸ್ಸು ಮನೋಮಯದ ಸತ್ತ್ವದಿಂದ ಪಳಗಿದಂತೆಲ್ಲ ಒಯ್ಯೊಯ್ಯನೆ ಅರಿವಾಗುತ್ತದೆ ಆ ಒಳನನ್ನಿ.

ಮೇಲೆ ಹೇಳಿದ ತಾರುಣ್ಯದ ದೃಷ್ಟಿಯಿಂದಲೇ ನರೇಂದ್ರನೂ ಶ್ರೀರಾಮಕೃಷ್ಣರ ಬಳಿಗೆ ಹೋದದ್ದು. ಆದರೆ "ದೇವಗಂಗೆಯ ಮಹಾ ಮಕರವು ನೀರು ಕುಡಿಯಲು ಬಂದ ಕಿಶೋರ ಕೇಸರಿಯನ್ನು ಭದ್ರವಾಗಿ ಹಿಡಿದುಕೊಂಡಿತು. ಸಿಂಹದ ಮರಿ ತಪ್ಪಿಸಿಕೊಳ್ಳಲು ಎಷ್ಟು ಪ್ರಯತ್ನಪಟ್ಟರೂ ಪ್ರಯೋಜನವಾಗಲಿಲ್ಲ. ಒಮ್ಮೆ ಕಚ್ಚಿದ

ಮಕರಕ್ಕೆ ತನ್ನ ಕೊಂಕುದಾಡೆಗಳನ್ನು ಕಳಚಿ ಬಿಚ್ಚಿ ಬಾಯ್ದೆರೆದು ಆ ಸಿಂಹ ಶಾಬಕವನ್ನು ಬಿಟ್ಟುಬಿಡಲೂ ಸಾಧ್ಯವಾಗಲಿಲ್ಲ. ಹೋರಾಡುತ್ತಾ ಹೋರಾಡುತ್ತಾ ಎರಡೂ ಅಮೃತನದಿಯ ಪವಿತ್ರ ತೀರ್ಥದಲ್ಲಿ ಮಗ್ನವಾಗುವುದನ್ನು ನೋಡುತ್ತೇವೆ."[1]

ಇಹಲೋಕದ ವ್ಯಾಪಾರಗಳನ್ನು ವಿವರಿಸುವುದಕ್ಕೆ ಲೌಕಿಕ ಕಾರಣಗಳೇ ಸಾಕು ಎಂಬ ದೃಷ್ಟಿಯೂ, ಬೇರೆ ಲೋಕಗಳಾಗಲಿ ಅಥವಾ ಅವುಗಳಿಗೆ ಸಂಬಂಧಿಸಿದ ಅಲೌಕಿಕ ಕಾರಣಗಳಾಗಲಿ ಅನಾವಶ್ಯಕ, ಆದ್ದರಿಂದ ಇಲ್ಲ, ಎಂಬ ದೃಷ್ಟಿಯೂ ಆಧುನಿಕ ಭೌತವಿಜ್ಞಾನಕ್ಕೆ ಮೂಲಭೂತವಾಗಿವೆ. ಆದರೆ ಸ್ವಾಮಿ ವಿವೇಕಾನಂದ ಶ್ರೀರಾಮಕೃಷ್ಣರ ಸಂಬಂಧವನ್ನೂ ಅದರ ಅಲೋಕ ಸಾಮಾನ್ಯವಾದ ರೀತಿಯನ್ನೂ ತತ್ಸಂಬಂಧ ಸಮೀಕ್ಷೆಯಿಂದ ನಮ್ಮ ಚೇತನದಲ್ಲಿ ಸ್ಫುರಿಸುವ ಧ್ವನಿಸಂಪತ್ತಿಯನ್ನೂ ಅನುಭವಿಸಿ ಅರಿಯುವ ಶ್ರದ್ಧೆಗೆ ಭಿನ್ನದೃಷ್ಟಿ ಒದಗುವುದು ಅನಿವಾರ್ಯ. ಇಲ್ಲಿ ನಡೆಯುವ ವ್ಯಾಪಾರಗಳಿಗೆ ಇಲ್ಲಿಯ ಕಾರಣಗಳಿಗೆ ಅತೀತವಾದ ಅನ್ಯಲೋಕ ಕಾರಣಗಳೂ ಇರಬಹುದೆಂಬ ಅನುಮಾನಕ್ಕೆ ಪ್ರತ್ಯಕ್ಷಪ್ರಮಾಣ ದೊರೆತಂತಾಗಿದೆ ಆ ಗುರುಶಿಷ್ಯ ಸಂಬಂಧದಲ್ಲಿ.

ವಿವೇಕಾನಂದರ ಜೀವನ ಅರ್ಥಪೂರ್ಣವಾಗಬೇಕಾದರೆ, ಆ ಜೀವನದ ಪೂರ್ಣಾರ್ಥ ನಮಗೆ ಹೊಳೆಯಬೇಕಾದರೆ ಶ್ರೀ ರಾಮಕೃಷ್ಣರ ಜೀವನ ಕಥೆಯ ಹೃದಯ ಪರಿಚಯವಿಲ್ಲದೆ ಸಾಧ್ಯವಿಲ್ಲ. ಸ್ವಾಮಿ ವಿವೇಕಾನಂದರೆ ಹೇಳಿರುವಂತೆ "ಈ ನವಯುಗ ಧರ್ಮಪ್ರವರ್ತಕ ಭಗವಾನ್ ಶ್ರೀ ರಾಮಕೃಷ್ಣನು ಹಿಂದೆ ಅವತರಿಸಿದ ಯುಗಧರ್ಮಪ್ರವರ್ತಕ ಸಮೂಹದ ಪುನಃಸಂಸ್ಕೃತ ಮಹಾಪ್ರಕಾಶವಾಗಿರುತ್ತಾನೆ." ವಿವೇಕಾನಂದರು ಆ ಬೃಹಚ್ಛಕ್ತಿಯ ಒಂದು ಬಾಹು; ಆ ಪ್ರಕಾಶದ ಒಂದು ಕಿರಣ. ಆ ಬಾಹುವಿನಲ್ಲಿ ಮೈದೋರಿದ ಬಲವನ್ನು ಅರ್ಥಮಾಡಿಕೊಳ್ಳಬೇಕಾದರೆ ಅದನ್ನು ಚೋದಿಸಿದ ಆ ಮೂಲಶಕ್ತಿಗೇ ನಾವು ಹೋಗಬೇಕಾಗುತ್ತದೆ. ಅನಂತರ ಶಕ್ತಿಗಳ ರಹಸ್ಯವಿರುವುದು ಆದಿಶಕ್ತಿಯಲ್ಲಿ[2].

ಪರಮಹಂಸರು ನರೇಂದ್ರನ ಆಗಮನಕ್ಕಾಗಿ ಕಾತರಿಸಿ ಕುದಿಯುತ್ತಿದ್ದರು; ನಿರೀಕ್ಷಿಸುತ್ತಿದ್ದರು; ಆದ್ದರಿಂದಲೆ ಕಂಡೊಡನೆ ಗುರುತಿಸಿದರು. ನರೇಂದ್ರನ ಸ್ವಸ್ವರೂಪದ ಮೇಲೆ ಪರ್ವತಪರ್ವತಗಳಾಗಿ ಹಬ್ಬಿ ಹರಡಿ ಮುಚ್ಚಿ ಬಿದ್ದಿದ್ದ ಆವರಣದ ಚಪ್ಪಡಿಗಳನ್ನು ತಮ್ಮ ವಿದ್ಯುತ್‌ಸ್ಪರ್ಶದಿಂದ ಮುಗಿಲುಗ್ಗೈದು ಚೆದರಿಸಿ,

---

[1] ಸ್ವಾಮಿ ವಿವೇಕಾನಂದ ಗ್ರಂಥದ 'ಅನುಭೂತಿ' ಎಂಬ ೭ ನೆಯ ಅಧ್ಯಾಯ ನೋಡಿ.

[2] ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಮಾಲೆಯ 'ಶ್ರೀ ರಾಮಕೃಷ್ಣ ಪರಮಹಂಸ' ಎಂಬ ಗ್ರಂಥದಲ್ಲಿ 'ಚೈತ್ರಯಾತ್ರೆ' ಎಂಬ ೩ ನೆಯ ಅಧ್ಯಾಯವನ್ನು ಓದಿ.

ತಾವು ಸಮಾಧಿಯಲ್ಲಿ ಕಂಡ 'ದರ್ಶನ'ದ ಸತ್ಯಾಂಶವನ್ನು ಸ್ಥಿರಪಡಿಸಿಕೊಂಡರು.[1] ನರೇಂದ್ರನು ಮಾತ್ರ ಗುರುವಿನ ಆ ವಿಚಿತ್ರ ವ್ಯಾಪಾರಗಳನ್ನೆಲ್ಲ ಒಮ್ಮೊಮ್ಮೆ ಕುತೂಹಲದಿಂದ, ಒಮ್ಮೊಮ್ಮೆ ಭಯಮಿಶ್ರಿತವಾದ ಆಶ್ಚರ್ಯದಿಂದ ವೀಕ್ಷಿಸುತ್ತಿದ್ದನೇ ಹೊರತು ಹೆಚ್ಚಿನ ಸಡ್ಡೆಗೆ ಹೋಗಲಿಲ್ಲ. ಪರಮಹಂಸರು ಸರ್ವಸಿದ್ಧಿಗಳನ್ನು ಪಡೆದ ಯೋಗೀಶ್ವರರಾಗಿದ್ದರೂ ಅವರು ಕಲ್ಲನ್ನು ರೊಟ್ಟಿಮಾಡುವ ಅಥವಾ ಕಬ್ಬಿಣವನ್ನು ಚಿನ್ನಮಾಡುವ ಪವಾಡಗಳ ಗೋಜಿಗೆ ಹೋಗಲಿಲ್ಲ. ಪವಾಡಗಳನ್ನೂ ಪವಾಡ ಮಾಡುವವರನ್ನೂ ಕೀಳಾಗಿ ಭಾವಿಸಬೇಕೆಂದು ಹೇಳುತ್ತಿದ್ದರು. ಆದರೆ ನರೇಂದ್ರನಿಂದ ವಿವೇಕಾನಂದರನ್ನು ಸೃಷ್ಟಿಸುವ ಆ ಒಂದು ಜಗದ್ಭವ್ಯವಾದ ದಿವ್ಯ ಲೀಲಾ ಕಾರ್ಯದಲ್ಲಂತೂ ತಮ್ಮ ವ್ರತನಿಷ್ಠೆಯನ್ನು ಲೋಕಸಂಗ್ರಹಕ್ಕಾಗಿ ಉಲ್ಲಂಘಿಸುವ ಕೃಪೆ ಮಾಡಿದ್ದಾರೆಂದು ನಾವು ಒಪ್ಪಲೇಬೇಕಾಗುತ್ತದೆ. ಅವರು ನರೇಂದ್ರನನ್ನು ವಿವೇಕಾನಂದರನ್ನಾಗಿ ಮಾರ್ಪಡಿಸಿದುದು ತತ್ತ್ವಶಾಸ್ತ್ರೋಪದೇಶದಿಂದಲ್ಲ. ತತ್ತ್ವಶಾಸ್ತ್ರಗಳ ಒಣಕಟ್ಟಿಗೆಗಳ ಹೊರೆಗಳನ್ನು ಪರಮಹಂಸರಿಗೆ ಬೇಕಾಗಿದ್ದರೆ ನರೇಂದ್ರನೇ ಬಂಡಿಗಟ್ಟಲೆ ಕೊಡಬಲ್ಲವನಾಗಿದ್ದನು. ಅವನು ಗುರುವಿನಲ್ಲಿಗೆ ಹೋದುದು ಆ ಒಣ ಕಟ್ಟಿಗೆಗಾಗಿ ಅಲ್ಲ; ಅನುಭವಪೂರ್ಣವಾದ ಸತ್ಯಸಾಕ್ಷಾತ್ಕಾರದ ಜೀವಂತ ವೃಕ್ಷಕ್ಕಾಗಿ. ಆ ಪುಲಕಕಾರಿಯಾದ ಪುಣ್ಯಕಥೆಯನ್ನು ಓದಿದರೂ ಸಾಕು ಅದರ ಭವ್ಯತೆ ಹೃದಯಸ್ಪಂದಿಯಾಗಿ ನಮ್ಮ ಸಮಗ್ರ ಚೇತನದಲ್ಲಿಯೂ ಸ್ಪಂದಿಸುತ್ತದೆ.[2]

ಲೋಕ ಸಂಗ್ರಹಕ್ಕಾಗಿ, ಎಂದರೆ 'ಸಮಷ್ಟಿಸಿದ್ಧಿ'ಗಾಗಿ, ಶ್ರೀ ರಾಮಕೃಷ್ಣರು ನರೇಂದ್ರನಿಗೆ 'ವ್ಯಷ್ಟಿಸಿದ್ಧಿ'ಯನ್ನು ದಯಪಾಲಿಸಿದರು. ಏಕೆಂದರೆ ಪರಿಣಾಮ ಕ್ರಮದ ಈ ಸೃಷ್ಟಿಯಲ್ಲಿ ವ್ಯಷ್ಟಿಯ ಮುಖಾಂತರವೇ ಸಮಷ್ಟಿಯ ಉತ್‌ಕ್ರಮಣವೂ ಉದ್ಧಾರವೂ ಆಗಬೇಕಾಗಿದೆ. ವ್ಯಷ್ಟಿಯ ಪರಿವರ್ತನೆಯಾಗದೆ, ವ್ಯಷ್ಟಿಯ ಮುಖಾಂತರವಾಗಿ ಪರಿಣಾಮಪಥಪ್ರವೇಶಮಾಡದೆ, ಸಿದ್ಧವ್ಯಷ್ಟಿಯಾದವನು ಸಮಷ್ಟಿಯ ಉದ್ಧಾರಕ್ಕಾಗಿ ತನ್ನನ್ನು ತಾನು ಸಮರ್ಪಿಸಿಕೊಳ್ಳದೆ ಸಮಷ್ಟಿಯಲ್ಲಿ ಯಾವ ಪರಿವರ್ತನೆಯೂ ಮೊಳೆತು ಬೆಳೆದು ಸುಪ್ರತಿಷ್ಠಿತವಾಗಲಾರದು. ಆದ್ದರಿಂದಲೆ ಲೋಕೋದ್ಧಾರ ಮಾಡುವುದಕ್ಕೆ ಹೊರಡುವ ಮೊದಲು ಪ್ರತಿಯೊಬ್ಬ ವ್ಯಕ್ತಿಯೂ ತನ್ನನ್ನು ತಾನು ನಿಜವಾಗಿಯೂ 'ಉದ್ಧಾರ' ಮಾಡಿಕೊಳ್ಳಬೇಕು. ಬೆಳಕು ನೀಡುವ ಮುನ್ನ ಬೆಳಕು ಪಡೆಯಬೇಕು. ತನ್ನ ಪ್ರಸಿದ್ಧಿಯೇ ಜಗತ್ಕಲ್ಯಾಣಸಿದ್ಧಿ ಎಂಬ ಭ್ರಾಂತಿ ಹಳ್ಳಿಯೊಳಿದ್ದರೇನು? ದಿಳ್ಳಿಯೊಳಿದ್ದರೇನು? ಅಂತಹ ಕೀರ್ತಿಶನಿಯಿಂದ ಎಂದಿಗೂ

[1] ಶ್ರೀ ರಾಮಕೃಷ್ಣ ಪರಮಹಂಸ, ಅಧ್ಯಾಯ ೬, ದೇವಶಿಲ್ಪಿ.

[2] ಸ್ವಾಮಿ ವಿವೇಕಾನಂದ, ಅಧ್ಯಾಯ ೫, 'ಮುಕ್ತಿರಾಹು' ಓದಿ.

ಸಿದ್ಧಿಸದು ಜಗತ್ ಶಾಂತಿ. ಇಂದು ಮುಂದುವರಿಯಲೆಳಸುವ ನಾವು ಅಂದು ನರೇಂದ್ರನಿಟ್ಟ ತಪ್ಪು ಹೆಜ್ಜೆಗಳನ್ನೆಲ್ಲ ಮತ್ತೆಯೂ ಇಡಬೇಕಾಗಿಲ್ಲ. ಆತನು ನಮಗಾಗಿ ಗೆದ್ದುಕೊಟ್ಟಿರುವ ಸತ್ಯವನ್ನು ಸ್ವೀಕರಿಸಿ ಮುನ್ನುಗ್ಗಬೇಕಾದುದೆ ನಮ್ಮ ಕರ್ತವ್ಯ.

ಯುಗಯುಗಯುಗದತಿಕಷ್ಟದಿ ಜಡವನು ಜಯಿಸಿತು ಜೀವ;
ಬಹುತಪದಿಂದಾ ಜೀವಕೆ ಬಂದುದು ಮಾನವ ಭಾವ.
ಯುಗಯುಗ ಬೇಕೀ ಮನುಜತೆ ಮಾನವತನವನೆ ಮೀರಿ
ದೇವತ್ವವ ಸಂಪಾದಿಸೆ ಸಂಯಮ ಸ್ವರ್ಗಕ್ಕೇರಿ!

ಯುಗಚಕ್ರವ ಮುನ್ನೂಂಕಲು ಇದೆ ಗುರುದೇವನ ಶಕ್ತಿ;
ನಮಗಿಂದಿಗೆ ಬೇಕಾದುದು ಉದ್ಧಾರದ ಆಸಕ್ತಿ.
ಮತಿವಂತನೆ, ಓ ಮಾನವ, ಕಟಿ ಬಂಧನಗೈ, ನಿಲ್ಲು:
ಯುಗದೊಳ್ಪಿಗೆ ಜಗದೊಳ್ಪಿಗೆ ನಿನ್ನೊಳ್ಪನೆ ನೀಂ ಗೆಲ್ಲು!

೨

ಸಮಷ್ಟಿ ಸಿದ್ಧಿಗಾಗಿ

'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'

ಶ್ರೀಗುರುಕೃಪೆಯಿಂದಲೂ ಸ್ವಂತ ಸಾಧನೆಯಿಂದಲೂ ನರೇಂದ್ರನಿಗೆ ವ್ಯಷ್ಟಿ ಸಿದ್ಧಿಯೇನೊ ಲಭಿಸಿತು. ಅಂತಹ ಆತ್ಮಸಾಕ್ಷಾತ್ಕಾರಕ್ಕಾಗಿ ಆತನ ಹೃದಯ ತೃಷ್ಣೆ ಅಸೀಮವ್ಯಾಕುಲವಾಗಿತ್ತು. ಬದುಕಿನ ಸರ್ವಸಾರ್ಥಕತೆಯೂ ಸತ್ಯ ಸಾಕ್ಷಾತ್ಕಾರದಲ್ಲಿ; ಅದಿಲ್ಲದೆ ಬದುಕು ವ್ಯರ್ಥ; ಎಂಬ ದೃಢನಿಶ್ಚಯ ಬುದ್ಧಿಯಿಂದ ಅಂತಹ ಸತ್ಯಕ್ಕಾಗಿ ಶಾಂತಿಗಾಗಿ ಆನಂದಕ್ಕಾಗಿ ಅವನು ಕುದಿಯುತ್ತಿದ್ದನು. ಶ್ರೀರಾಮಕೃಷ್ಣರು ತಮ್ಮ ಸ್ಪರ್ಶಮಾತ್ರದಿಂದ ಆತನಲ್ಲಿ ಎರಡು ಮೂರು ಸಾರಿ ಪ್ರಚೋದಿಸಿದ ದಿವ್ಯಾನುಭವಗಳಿಂದ ಆತನಲ್ಲಿದ್ದ ಸಂದೇಹತಿಮಿರ ಸಂಪೂರ್ಣವಾಗಿ ತೊಲಗಿತಾದರೂ ರುಚಿಯರಿತ ತೃಷ್ಣೆ ಆ ಅನುಭವಪಾರಮ್ಯದ ನೈರಂತರ್ಯಕ್ಕಾಗಿ ಹಾತೊರೆಯತೊಡಗಿತು. ಅದಕ್ಕಾಗಿ ಗುರು ಹೇಳಿದಂತೆ ಸಾಧನೆ ಮಾಡಿದನು. ಅದು ತನಗಿನ್ನೂ ದೊರೆಯಲಿಲ್ಲವಲ್ಲಾ ಎಂದು ಒದ್ದಾಡಿದನು. ಗುರುದೇವನನ್ನು ಕಾಡಿ ಕಾಡಿ ಪೀಡಿಸಿದನು. ಗುರು "ಕಾಲಬಂದಾಗ ಎಲ್ಲವೂ ದೊರೆಯುತ್ತದೆ" ಎಂದು ಸಮಾಧಾನ ಹೇಳಿದರು. ಅಂತಹ ಕಾಲವೂ ಒದಗಿತು. ಕಾಶೀಪುರದ ತೋಟದಲ್ಲಿ ಧ್ಯಾನಮಗ್ನನಾಗಿದ್ದ ನರೇಂದ್ರನಿಗೆ ಬ್ರಹ್ಮಸಾಕ್ಷಾತ್ಕಾರಾನುಭವವನ್ನು ಕೃಪೆಗೈಯುವ ನಿರ್ವಿಕಲ್ಪಸಮಾಧಿಯೂ ಸಿದ್ಧಿಸಿತು[1]

[1] ಸ್ವಾಮಿ ವಿವೇಕಾನಂದ, ಅನುಭೂತಿ, ಪುಟ ೯೮.

ಅಂತಹ ಸಿದ್ಧಿ ತನಗೆ ತಾನೆ ಮಹೋನ್ನತವಾದುದು; ಬದುಕಿನ ಕೃತಕೃತ್ಯತೆಯ ಅನುಭವವನ್ನು ಪೂರ್ಣವಾಗಿ ತಂದುಕೊಡತಕ್ಕದು. ಅದಕ್ಕೆ ಅದೇ ಪರಮ ಪ್ರಯೋಜನ. ವ್ಯಕ್ತಿಗೆ ಅದಕ್ಕಿಂತಲೂ ಹೆಚ್ಚಿನ ಅನ್ಯಪ್ರಯೋಜನ ಬೇರಾವುದೂ ಇಲ್ಲ. ಅದನ್ನು ಪಡೆದಮೇಲೆ ಪಡೆಯತಕ್ಕದ್ದು ಇನ್ನೇನೂ ಇರುವುದಿಲ್ಲ. ಅದು ಪರಮ ಮೌನ; ಪರಮ ನೈಷ್ಕರ್ಮ್ಯ; ಸರ್ವಕರ್ತವ್ಯ ವಿರಾಮ. ಆದ್ದರಿಂದಲೆ ಆ ಸಿದ್ಧಿಯನ್ನು ಪಡೆದ ಸಾಧಕರು ಜೀವನರಂಗದಿಂದ ಸಂಪೂರ್ಣವಾಗಿ ವಿರಕ್ತರಾಗುತ್ತಾರೆ. ನರೇಂದ್ರನಿಗೂ ಅಂತಹ ಪೂರ್ಣವಿರಾಮದ ಆಸಕ್ತಿ ಸ್ವಾಭಾವಿಕವಾಗಿಯೆ ಮೂಡಿದುದನ್ನು ಕಾಣುತ್ತೇವೆ.

ನರೇಂದ್ರನೊಮ್ಮೆ ಗುರುದೇವನಿಗೆ ಹೇಳಿದನು, "ಗುರುದೇವ, ನಿಮ್ಮಂತೆ ನಾನೂ ಸರ್ವದಾ ನಿರ್ವಿಕಲ್ಪ ಸಮಾಧಿಯಲ್ಲಿ ಮುಳುಗಿರಬೇಕೆಂಬುದೇ ನನ್ನ ಮಹದಭಿಲಾಷೆ!" ಅದನ್ನು ಕೇಳಿ ಸ್ವಲ್ಪ ಅಧೀರರಾಗಿ ಪರಮಹಂಸರು ಹೇಳಿದರು "ಮತ್ತೆ ಮತ್ತೆ ಅದೇ ಕತೆ! ನಿನಗೆ ನಾಚಿಕೆಯಾಗದೆ? ಇಷ್ಟು ಕಾಲ ಮಹಾ ವಟವೃಕ್ಷದಂತೆ ಬೆಳೆದಿರುವೆ. ಸಾವಿರಾರು ಜನರಿಗೆ ಶಾಂತಿಛಾಯೆಯನ್ನು ನೀನು ನೀಡಬೇಕಾಗಿದೆ. ಅದನ್ನು ಬಿಟ್ಟು ಸ್ವಂತ ಮುಕ್ತಿಗಾಗಿ ಬಾಯಿ ಬಾಯಿ ಬಿಡುತ್ತೀಯಲ್ಲಾ! ಎಂತಹ ಕ್ಷುದ್ರ ಆದರ್ಶ ನಿನ್ನದು!"

ಅಭಿಮಾನ ಕೆಣಕಿ ನರೇಂದ್ರ ಹೇಳಿದನು. "ನಿರ್ವಿಕಲ್ಪ ಸಮಾಧಿ ದೊರಕುವವರೆಗೂ ನನ್ನ ಮನಸ್ಸಿಗೆ ಶಾಂತಿಯಿರದು. ಅದು ದೊರಕುವವರೆಗೆ ನಾನು ಏನನ್ನೂ ಮಾಡುವುದಿಲ್ಲ."

ಅದಕ್ಕೆ ಗುರು "ಹೆದರಬೇಡ, ಅದೂ ದೊರೆಯುತ್ತದೆ" ಎಂದು ಸಾಂತ್ವನ ಹೇಳಿದರು.

ಗುರು ಹಾಗೆ ಆಶೀರ್ವದಿಸಿದ ಎರಡು ದಿನಗಳಲ್ಲಿಯೆ ನರೇಂದ್ರನಿಗೆ ನಿರ್ವಿಕಲ್ಪ ಸಮಾಧಿಯ ಅನುಭವವೂ ಆಯಿತು.[1]

ನರೇಂದ್ರನು ಶ್ರೀ ರಾಮಕೃಷ್ಣರ ಬಳಿಗೆ ಬಂದು ದಂಡಪ್ರಣಾಮ ಮಾಡಿದಾಗ ಅವರು ಹೇಳಿದರು "ಜಗದಂಬೆ ನಿನಗೆಲ್ಲವನ್ನೂ ತೋರಿಸಿದಳಷ್ಟೆ? ಇನ್ನು ಅದಕ್ಕೆ ಬೀಗ ಹಾಕಿದೆ. ಬೀಗದ ಕೈ ನನ್ನಲ್ಲಿದೆ. ನೀನು ಮಾಡಬೇಕಾಗಿರುವ ಕೆಲಸವೆಲ್ಲವನ್ನೂ ಮುಗಿಸಿದಮೇಲೆ ಬೀಗ ತೆಗೆಯುತ್ತೇನೆ." ಜೊತೆಗೆ ಜಗಜ್ಜನನಿಯನ್ನೂ ಬೇಡಿದರಂತೆ; "ಅಮ್ಮಾ, ಅವನ ನಿರ್ವಿಕಲ್ಪಾನುಭೂತಿಯ ಮೇಲೆ ನಿನ್ನ ಮಾಯಾವರಣವನ್ನು ದಯಮಾಡಿ ಬೀಸು. ಅವನಿಂದ ನಾನು ಮಾಡಿಸಬೇಕಾದ ಕೆಲಸ ಬಹಳವಿದೆ' ಎಂದು.

---

[1] ಸ್ವಾಮಿ ವಿವೇಕಾನಂದ: ಅನುಭೂತಿ. ಪುಟ ೯೯.

ನರೇಂದ್ರನ ವ್ಯಷ್ಟಿಸಿದ್ಧಿಯನ್ನು ಲೋಕಕಲ್ಯಾಣರೂಪವಾದ ಸಮಷ್ಟಿಸಿದ್ಧಿಗಾಗಿ ಧಾರೆಯೆರೆಯಲು ಪರಮಹಂಸರು ಮೊದಲೇ ಸಂಕಲ್ಪಿಸಿದ್ದುದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಆ ದಕ್ಷಿಣೇಶ್ವರ ದೇವಮಾನವನ ಇಚ್ಛಾಶಕ್ತಿ ನರೇಂದ್ರನನ್ನು ಆಕ್ರಮಿಸಿ ತನ್ನ ಸಂಕಲ್ಪವನ್ನು ಹೇಗೆ ಈಡೇರಿಸಿಕೊಂಡಿತೆಂಬುದೇ ವಿವೇಕಾನಂದರ ಜೀವನಚರಿತ್ರೆ. ವ್ಯಷ್ಟಿಸಿದ್ಧಿಯನ್ನು ಪಡೆದು ಹೊರಹೊರಟ ನರೇಂದ್ರನು ಸ್ವಲ್ಪಕಾಲ ಅನಾಮಧೇಯನಾಗಿ ಭರತಖಂಡವನ್ನೆಲ್ಲ ಸುತ್ತಿದನು. ಪರಿವ್ರಾಜಕನಾಗಿ ತಾಯ್ನಾಡಿನ ದುಃಖ ದಾರಿದ್ರ್ಯ ದಾಸ್ಯ ಸಂಸ್ಕೃತಿ ನಾಗರಿಕತೆ ಸೌಜನ್ಯ ದೌಷ್ಟ್ಯ ಇತ್ಯಾದಿ ಸರ್ವಸಮಷ್ಟಿಯನ್ನೂ ಗ್ರಹಿಸಿದನು. ಅಷ್ಟರಲ್ಲಿ ಒಂದು ಅದ್ಭುತ ನಡೆಯಿತು. ಆ ಅದ್ಭುತ ಅಂದು ಅಷ್ಟೇನೂ ಅಸಾಧಾರಣವಾಗಿ ತೋರಲಿಲ್ಲ; ಆಕಸ್ಮಿಕವಾಗಿ ಒದಗಿದಂತೆಯೂ ಇತ್ತು. ಆದರೆ ಆ ಅದ್ಭುತ ಪರಮಹಂಸರ ಸ್ಪರ್ಶದಿಂದ ವಿವೇಕಾನಂದರಿಗೆ ಒದಗಿದ ದಿವ್ಯಾನುಭವದಷ್ಟೇ ಪವಾಡವಾಗಿತ್ತು. ವ್ಯತ್ಯಾಸವಿಷ್ಟೇ: ಅಂದು ಅದು ಆಂತರಿಕಾನುಭವವಾಗಿ ಬಂದಿತ್ತು; ಇಂದು ಬಹಿರಂಗಘಟನೆಯಾಗಿ ಮೈದೋರಿತು.[1]

ಆ ಸಾಗರಸಾಹಸದ ಕಥೆಯನ್ನು ನೀವೆಲ್ಲ ಓದಿದ್ದೀರಿ. ಅದರ ವಿದ್ಯುತ್ ವೈಭವಕ್ಕೆ ಮಾರುಹೋಗಿದ್ದೀರಿ. ನಿಮ್ಮ ಹೃದಯದ ತೊಟ್ಟಿಲುಗಳಲ್ಲಿಯೂ ಅಂತಹ ಸಾಹಸವನ್ನು ಅನುಕರಿಸುವ ಮಹತ್ವಾಕಾಂಕ್ಷೆಯ ಶಿಶು ಒಮ್ಮೊಮ್ಮೆ ತೊದಲಿರಬಹುದು; ಇನ್ನೊಮ್ಮೆ ಅಂಬೆಗಾಲಿಕ್ಕಿರಲೂ ಬಹುದು. ಆದರೆ ಅದು ಎದ್ದುನಿಂತು ಓಡಾಡುವುದಕ್ಕೆ ಮೊದಲೆ ಒಂದಿನಿತು ವಿವೇಚನೆ ಮಾಡುವುದು ಶ್ರೇಯಸ್ಕರ.

ವಿವೇಕಾನಂದರು ಅಮೆರಿಕಾಕ್ಕೆ ಹೋಗಿ ದಿಗ್ವಿಜಯಗಳಿಸಿ ಬಂದಮೇಲೆ ಅದರಂತೆಯೆ ವಿಖ್ಯಾತರಾಗುವುದಕ್ಕಾಗಿ ಅನೇಕ ಭಾರತೀಯರು ಪ್ರಯತ್ನಿಸಿದರು. ಅವರಲ್ಲಿ ಇಂದಿಗೂ ಬಹುಜನ ಅಖ್ಯಾತರಾಗಿಯೊ ಅಲ್ಪಖ್ಯಾತರಾಗಿಯೊ ಉಳಿದಿದ್ದಾರೆ. ಆದರೂ ವಿದೇಶಗಳಲ್ಲಿ ಯೋಗ್ಯತಾ ಪತ್ರಿಕೆ ಪಡೆಯದೆ ತಮ್ಮ ನಾಡಿನಲ್ಲಿ ತಮಗೆ ಕೀರ್ತಿ ಲಭಿಸುವುದಿಲ್ಲ ಎಂಬ ಭಾವನೆ ಬಹುಮಟ್ಟಿಗೆ ಸಕಲ ಮನೋವ್ಯಾಪಿಯಾಗಿದೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. ದಾಸ್ಯ ಸಹಜವಾದ ಅತೀವ ಪರಪ್ರತ್ಯಯನೇಯ ಬುದ್ಧಿ ತನ್ನ ಯೋಗ್ಯತೆಯನ್ನೇ ತಾನು ಮರೆಯುತ್ತದೆ. ಅನ್ಯರು ಕೊಟ್ಟಲ್ಲದೆ ತನ್ನವರಿಗೆ ಅದು ಬೆಲೆ ಕೊಡುವುದಿಲ್ಲ. ಹಿತ್ತಲ ಗಿಡ ಅದಕ್ಕೆ ಮದ್ದಲ್ಲ. ಇತರರು ಕೊಟ್ಟ ಬೆಲೆಯನ್ನೆ ತಾನೂ ಕಟ್ಟುತ್ತದೆ. ಐರ್ಲೆಂಡಿನ ಈಟ್ಸ್ ಕವಿ

[1] ಸ್ವಾಮಿ ವಿವೇಕಾನಂದ 'ಪರಿವ್ರಾಜಕ ಸಂನ್ಯಾಸಿ' ಮತ್ತು 'ಕಡಲಿನಾಚೆಗೆ' ಎಂಬ ೯, ೧೦ ನೆಯ ಅಧ್ಯಾಯಗಳನ್ನು ನೋಡಿ.

ಕಟ್ಟಿದ ಮೇಲೆ, ನೊಬೆಲ್ ಬಹುಮಾನವು ಆ ಬೆಲೆಯನ್ನು ಕೊಟ್ಟಮೇಲೆ ತಾನೆ ನಮ್ಮ ರವೀಂದ್ರರಿಗೂ ಇಲ್ಲಿ ಬೆಲೆ ಬಂದದ್ದು. ಅದಕ್ಕೆ ಪೂರ್ವದಲ್ಲಿಯೆ ಮೂವತ್ತು ನಾಲ್ವತ್ತು ವರ್ಷಗಳಿಂದ ಅವರು ಬರೆಯುತ್ತಿದ್ದರೂ ಭಾರತೀಯರ ಲಕ್ಷ್ಯ ಅತ್ತಕಡೆ ಹರಿದಿರಲಿಲ್ಲ. ಇಂತಹ ನಾಲ್ಕಾರು ಪ್ರಸಿದ್ಧ ನಿದರ್ಶನಗಳು ಯಾರ ತಲೆಗೆ ಬೇಕಾದರೂ ಹೊಳೆಯುತ್ತವೆ. ಹೆಸರಿಸಬೇಕಾಗಿಲ್ಲ. ಅದನ್ನಿಲ್ಲಿ ಹೇಳುವ ಉದ್ದೇಶವಿಷ್ಟೆ! ನಮ್ಮ ಪರಪ್ರತ್ಯಯನೇಯ ಬುದ್ಧಿ ಅತ್ಯಂತ ಅವಹೇಳನಕರವೂ ಅಸಹ್ಯವೂ ಆಗುವಷ್ಟರ ಮಟ್ಟಿಗೆ ಬೆಳೆದಿದೆ. ಸ್ವಾತಂತ್ರ್ಯ ಬಂದ ಮೇಲಾದರೂ ಅದು ಕಡಮೆಯಾಗ ಬಹುದೆಂಬ ಆಶೆಯಿತ್ತು. ಬರಿಯ ರಾಜಕೀಯವಾದ ಸ್ವಾತಂತ್ರ್ಯದಿಂದ ಅಂತಹ ಆತ್ಮಶ್ರದ್ಧೆ ಸಂಭವಿಸುವುದಿಲ್ಲ ಎಂಬುದು ಹೆಚ್ಚು ಹೆಚ್ಚಾಗಿ ಮನದಟ್ಟಾಗುತ್ತಿದೆ. ಏಕೆಂದರೆ ಸಮಾಚಾರ ಸಂಚಾರಾದಿ ಸೌಕರ್ಯ ಸೌಲಭ್ಯಗಳ ದೆಸೆಯಿಂದಾಗಿ ಆ ದೌರ್ಬಲ್ಯ ದಿನದಿನಕ್ಕೂ ಉಲ್ಬಣಿಸುತ್ತಿರುವಂತೆ ತೋರುತ್ತದೆ. ಯಂತ್ರನಾಗರಿಕತೆಯಲ್ಲಿ ನಮಗೆ ಮಾರ್ಗದರ್ಶಕವಾಗಬಹುದಾದ ಅಮೆರಿಕೆ ಜಗತ್ತಿನ ಶಾಂತಿ ಪಾಲನೆಯಲ್ಲಿಯೂ ಶಾಂತಿಸಾಧನೆಯಲ್ಲಿಯೂ ಗುರುವಾಗುತ್ತದೆ ಎಂಬುದು ಬರಿಯ ಭ್ರಾಂತಿ. ಎಷ್ಟು ಅರ್ಥಸಿದ್ಧಿಯಿದ್ದರೇನು? ಎಷ್ಟು ಯಂತ್ರಬುದ್ಧಿಯಿದ್ದರೇನು? ತನ್ನ ಶಾಂತಿಯನ್ನೆ ತಾನು ಸಂಪಾದಿಸಿಕೊಳ್ಳಲಾರದ ದೇಶ ಅನ್ಯದೇಶಗಳಿಗೆ ಎಂತು ತಾನೆ ಶಾಂತಿದಾನ ಮಾಡಬಲ್ಲುದು? ಮೊದಲ ಸಾರಿ ಅಮೆರಿಕಾಕ್ಕೆ ಹೋದಾಗ ವಿವೇಕಾನಂದರೂ ಅಮೆರಿಕಾದ ಅರ್ಥಬಲದಿಂದ ನಮ್ಮ ದಾರಿದ್ರ್ಯದ ಅನರ್ಥವನ್ನು ಪರಿಹರಿಸಿಕೊಳ್ಳಬಹುದೆಂಬ ಹಿರಿಯಾಸೆಗೆ ಪಕ್ಕಾಗಿದ್ದರು. ಆದರೆ ಎರಡನೆಯ ಸಾರಿ ಅಲ್ಲಿಗೆ ಹೋಗುವ ವೇಳೆಗೆ "ಅರ್ಥಮಾತ್ರದಿಂದ ಅನರ್ಥವಲ್ಲದೆ ಬೇರೆಯೇನೂ ಸಿದ್ಧಿಸದು" ಎಂಬುದು ಮನದಟ್ಟಾಗಿ, ಅಲ್ಲಿಯ ಧನಿಕವರ್ಗದವರನ್ನು ಆಶ್ರಯಿಸುವುದಕ್ಕೆ ಬದಲಾಗಿ 'ತಪೋಧನ'ರನ್ನೂ ಆತ್ಮಶ್ರೀಸಾಧನಾಕಾಂಕ್ಷಿಗಳನ್ನೂ ಆಕರ್ಷಿಸಿ ತಮ್ಮ ಕಾರ್ಯಸಾಧನೆಗೆ ತಳಹದಿ ಹಾಕಿದರು. ಆ ಕಾರ್ಯಸಾಧನೆ ರಾಜಕೀಯಘಟನಾ ಪರಂಪರೆಗಳಂತೆ ಪತ್ರಿಕೆಗಳಲ್ಲಿ ದಿನಂಪ್ರತಿ ದಪ್ಪಕ್ಷರಗಳಲ್ಲಿ ಘೋಷಿತವಾಗಿ ಜಗತ್ತಿನ ಜನಕೋಟಿಯ ಹೃದಯಗಳಲ್ಲಿ ಅದ್ಭುತಾನುಭವ ಸ್ಪಂದನಗಳನ್ನೆಬ್ಬಿಸುವಂಥಾದ್ದಲ್ಲ. ಅದು ಮಾನವಹೃದಯದ ಮೂಲಪರಿವರ್ತನೆಗೆ ಸಂಬಂಧಪಟ್ಟದು. ಯಾವ ಪರಿವರ್ತನೆಯಿಂದ ಅಶಾಂತಿಮೂಲವಾಗಿ ಸದ್ಯಕ್ಕೆ ಮಾನವಸಹಜವಾಗಿರುವ ಅಸ್ಮಿತಾಸಕ್ತಿಯ ಶಾಖೆಗಳಾದ ಅಹಂಕಾರ, ದ್ವೇಷ, ಸ್ಪರ್ಧೆ, ಅಸೂಯೆ, ಪ್ರತೀಕಾರಾದಿ ಆಸುರೀಗುಣಗಳು ಚಿರಶಾಂತಿಕರವೂ ನಿತ್ಯಾನಂದಕರವೂ ಆಗಿರುವ ದೈವೀಗುಣಗಳಾವುವೋ ಅಂತಹ ತಪಸ್ಯೆಗೆ ಸಂಬಂಧಪಟ್ಟದ್ದು. ಅತಿ ಶೀಘ್ರಸಿದ್ಧಿಯ

ಆತುರತೆಗೆ ಅಲ್ಲಿ ಎಡೆಯಿಲ್ಲ. ಸ್ವಪ್ರತಿಷ್ಠೆಗೆ ಅಲ್ಲಿ ಸ್ಥಾನವಿಲ್ಲ; ಅದು ಕೀರ್ತಿಶನಿಯ ಕ್ರೀಡಾರಂಗವಲ್ಲ. ಅದು ಪೂರ್ಣತ್ಯಾಗದಿಂದ ಪೂರ್ಣಸಿದ್ಧಿಯನ್ನು ಪಡೆಯುವ ಪೂರ್ಣದೃಷ್ಟಿಯ ತಪೋನಂದನ. ಅದಕ್ಕೆ ಬೇಕಾದುದು ತಪಸ್ಸೆ; ಎಲ್ಲರೂ ಅಮೆರಿಕಾಕ್ಕೆ ಹೋಗಲೇ ಬೇಕಾದುದಿಲ್ಲ. ಕೀರ್ತಿವಂತರಾಗಬೇಕಾದುದೂ ಇಲ್ಲ. ಎಲ್ಲಿದ್ದರಲ್ಲಿಯೆ, ಏನಾಗಿದ್ದರದಾಗಿಯೆ, ಅನ್ಯಸ್ಥಾನಕ್ಕೆ ಅಸೂಯೆಪಡದೆ, ತನ್ನ ಸ್ಥಾನವನ್ನು ಅಗೌರವಿಸದೆ, ಚಮ್ಮಾರನಾಗಲಿ ಚಕ್ರವರ್ತಿಯಾಗಲಿ ಸಮದರ್ಶನದಿಂದ ಕೈಗೊಳ್ಳಬೇಕಾದ ತಪಸ್ಯೆ ಅದು:

"ಶ್ರೀ ಸಾಮಾನ್ಯವೆ ಭಗವನ್ಮಾನ್ಯಂ;
ಶ್ರೀ ಸಾಮಾನ್ಯನೆ ಭಗವದ್ ಧನ್ಯಂ!"

ಎಂಬುದು ಅದರ ಮಂತ್ರ.

"ಸಾಮಾನ್ಯತೆ ಭಗವಂತನ ರೀತಿ;
ಸಾಮಾನ್ಯವೆ ಭಗವತ್ ಪ್ರೀತಿ!"

ಎಂಬುದು ಅದರ ತಂತ್ರ. 'ಸಾಮಾನ್ಯವೆ ಸರ್ವಮಾನ್ಯ'ವೆಂಬ ಅನುಭವವು ಸಾಮಾನ್ಯವಾದಾಗ ಜಗಚ್ಛಾಂತಿ ಸ್ವತಃಸಿದ್ಧ.

ವಿವೇಕಾನಂದರ ಅಮೇರಿಕಾಯಾತ್ರೆಯನ್ನು ಪೂರ್ಣದೃಷ್ಟಿಯಿಂದ ಪರಿಶೀಲಿಸಬೇಕು. ಅದರ ಉದ್ದೇಶ ಪ್ರಯೋಜನಗಳನ್ನು ನಿಜವಾಗಿಯೂ ವೈಜ್ಞಾನಿಕವಾಗಿ ಗೊತ್ತುಹಚ್ಚಬೇಕು. ಅದರಿಂದಾದುದೇನು: ವಿವೇಕಾನಂದರ ಸ್ವಂತ ಪ್ರಖ್ಯಾತಿಯೆ? ಭರತಖಂಡದ ಮತ್ತು ಹಿಂದೂಧರ್ಮದ ಪ್ರತಿಷ್ಠೆಯೆ? ಅನ್ಯಮತಗಳ ಅಹಂಕಾರಕ್ಕೆ ಒದಗಿದ ಆಘಾತವೆ? ಅವೊತ್ತಿನವರೆಗೆ ಪಾಶ್ಚಾತ್ಯ ಮತದೃಷ್ಟಿಗೆ ಸಂಪೂರ್ಣವಾಗಿ ಅಪರಿಚಿತವೂ ಅಸಹನೀಯವೂ ಅಸಾಧುವೂ ಆಗಿದ್ದ ಸರ್ವಧರ್ಮಸಮನ್ವಯ ದೃಷ್ಟಿಯ ಪ್ರಪ್ರಥಮ ಸಾರ್ವಲೌಕಿಕ ಪ್ರತಿಷ್ಠಾಪನಾಂಕುರಾರ್ಪಣೆಯೆ? ಮೇಲೆ ಹೇಳಿದ ನಾಲ್ಕು ಪ್ರಯೋಜನಗಳಲ್ಲಿ ಮೊದಲ ಮೂರು ಒಂದಲ್ಲ ಒಂದು ರೀತಿಯಿಂದ ಅಹಂಕಾರಮೂಲವಾಗಿವೆ; ಕೀರ್ತಿಶನಿಯ ಕಿಂಕರರಾಗಿವೆ. ಆ ಮಿಥ್ಯಾ ಪ್ರಯೋಜನಗಳನ್ನು ತಿರಸ್ಕರಿಸಿದರೆ ಉಳಿಯುವುದು ಕೊನೆಯದಾದ ಆತ್ಮಶ್ರೀಕರವಾದ ಸತ್ಯಪ್ರಯೋಜನ. ನಿಜವಾಗಿಯೂ ಭರತಖಂಡ ಹಿಂದೆಯೂ ಇನ್ನು ಮುಂದೆಯೂ ಲೋಕದ ಶ್ರೇಯಸ್ಸಿಗಾಗಿ ದಾನಮಾಡಬೇಕಾಗಿರುವ ನಿತ್ಯಸತ್ಯದ ಮತ್ತು ಶಾಶ್ವತಶಾಂತಿಯ ದಿವ್ಯ ಸಂದೇಶ: ಸರ್ವಧರ್ಮಸಮನ್ವಯದೃಷ್ಟಿ; ಸರ್ವಸಮತೆ; ಸರ್ವೋದಯ, ಸರ್ವಪುಷ್ಟಿ, ಮತ್ತು ಸರ್ವತುಷ್ಟಿ.[1]

---

[1] ಸ್ವಾಮಿ ವಿವೇಕಾನಂದ, ಪು. ೧೪೭.

ಪ್ರಪಂಚದ ಸ್ವಮತಭ್ರಾಂತಿಯ ಎದೆಗೆ ಭರತಖಂಡವು ಹೊಡೆದ ಮೊದಲ ಸಿಡಿಲ್‌ಗುಂಡು ಸ್ವಾಮಿ ವಿವೇಕಾನಂದರು ಚಿಕಾಗೊ ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ದಿವ್ಯೋಜ್ವಲವಾದ ಭಾಷಣ! ಅವರ ತರುವಾಯ ಅವರನ್ನು ಹಿಂಬಾಲಿಸಿ ಅನುಸರಿಸಿ ಅನೇಕ ಮಹನೀಯರು ಆ ವೇದಾಂತ ದೃಷ್ಟಿಯ ಉದಾರವಾಣಿಯನ್ನು ಬೇರೆ ಬೇರೆ ದೇಶಗಳಲ್ಲಿ ಅದ್ಭುತವಾಗಿ ಸಾರಿದ್ದಾರೆ; ಮತ್ತು ಸಾರುತ್ತಲೂ ಇದ್ದಾರೆ. ವಿವೇಕಾನಂದರ ತರುವಾಯ ಶ್ರೀರಾಮಕೃಷ್ಣರ ಇತರ ಅಂತರಂಗ ಶಿಷ್ಯರಲ್ಲಿ ಕೆಲರೂ, ಮತ್ತು ಸಾಮಾನ್ಯ ಶಿಷ್ಯರಲ್ಲಿ ಬಹುಜನರೂ ಶ್ರೀ ರಾಮಕೃಷ್ಣ ಮಹಾಸಂಘದ ಆಶ್ರಯದಲ್ಲಿ ಆ ಸಂದೇಶ ಕಾರ್ಯಕ್ಕೆ ನಿವೇದಿತರಾಗಿ ನಿರಂತರವೂ ನಿಶ್ಶಬ್ದವಾಗಿ ಅನಾಮವಾಗಿ ದುಡಿಯುತ್ತಿದ್ದಾರೆ. ರವೀಂದ್ರರು, ಗಾಂಧೀಜಿ, ಶ್ರೀ ಅರವಿಂದರು ಮೊದಲಾದ ವಿಭೂತಿಗಳೂ, ರಾಧಾಕೃಷ್ಣನ್ ಮೊದಲಾದ ತತ್ತ್ವಶಾಸ್ತ್ರಜ್ಞರೂ, ನೆಹರೂ ಮೊದಲಾದ ರಾಜಕಾರಣ ನಿಪುಣರೂ ಆ ಸಂದೇಶವನ್ನು ನಾನಾಮುಖಗಳಿಂದ ವಿಸ್ತರಿಸಿದ್ದಾರೆ. ಹೆಸರು, ಕೀರ್ತಿ, ಪ್ರಸಿದ್ಧಿ ಇವುಗಳಿಗೇನಾದರೂ ಬೆಲೆಯಿದ್ದರೆ ಆ ಅಮೃತಸಂದೇಶಪ್ರಸಾರಕಾರ್ಯಕ್ಕೆ ಪ್ರಣಾಳಿಕೆಗಳಾಗುವುದರಲ್ಲಿಯೆ. ಇತರ ಅಭಿಸಂಧಿಗಳೆಲ್ಲ ಬರಿಯ ಕೆಲಸಕ್ಕೆ ಬಾರದ ಅಹಂಭ್ರಾಂತಿ.

ಅಂತಹ ಅಹಂಭ್ರಾಂತಿಗೆ ಮರುಳಾಗದೆ, ಆ ಅಮೃತ ಸಂದೇಶದ ಅನುಷ್ಠಾನದಲ್ಲಿ ನಿರತರಾಗಬೇಕಾದುದು ನಮ್ಮ ಸದ್ಯದ ಕರ್ತವ್ಯ. ಅಂತಹ ತಪಸ್ಯೆಯಿಂದ ತಮಗೆ ತಾವಾಗಿಯೇ ಹೊರಹೊಮ್ಮಿದರೆ ಹೊಮ್ಮಲಿ—ಕೀರ್ತಿ, ಸ್ಥಾನ, ಮಾನ, ಸಮಾಜ ಗೌರವ, ಸಮಾಜ ಸುಧಾರಣೆ, ಅರ್ಥಲಾಭ, ಯಶೋಲಾಭ, ಇತ್ಯಾದಿ ಉಪಲಭ್ಯಗಳು. ಅವುಗಳನ್ನು ಬೇಡವೆನ್ನುವ ವೈರಾಗ್ಯವೂ ಕೀರ್ತಿಶನಿಯ ವೇಷಾಂತರವಾಗದಂತೆ ನಾವು ಹೃತ್ಪೂರ್ವವಾಗಿ ವಿನಯಶೀಲರಾಗಬೇಕಾದುದು ನಮ್ಮ ಆಧ್ಯಾತ್ಮಿಕ ಕ್ಷೇಮಕ್ಕೆ ಅತ್ಯಾವಶ್ಯಕ.

''ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ ಧನಂ''

ಎಂಬುದು ಉಪನಿಷತ್ತಿನ ಮಂತ್ರೋಪದೇಶ. ಅದು 'ಮಾ ಗೃಧಃ' ಎಂದು ಮಾತ್ರ ಹೇಳಿಲ್ಲ. 'ಭುಂಜೀಥಾ' ಎಂದೂ ಆಶೀರ್ವದಿಸಿದೆ. ವ್ಯಷ್ಟಿಸಿದ್ಧಿ ಅತ್ಯಾವಶ್ಯಕ; ಆದರೆ ಅದು ಸಮಷ್ಟಿಸಿದ್ಧಿಗೆ ಸಮರ್ಪಿತವಾಗದಿದ್ದರೆ ಲೋಕಕಲ್ಯಾಣವು ದೂರ ದೂರವಾಗಿ ಬಹುದೀರ್ಘಸೂತ್ರಿಯಾಗಬೇಕಾದೀತು. ನಾವು ಬಯಸುವ ಶಾಂತಿ ನಾವು ಬಯಸುವ ಪ್ರಮಾಣದಲ್ಲಿ ಸ್ಥಾಪಿತವಾಗುವುದಕ್ಕೆ ಬಹಳಕಾಲ ಬೇಕಾಗಬಹುದು:

"ಇಳಿತಂದುದು ಈ ಭೂಮಿಗೆ
ಅವತಾರದ ಮೇಲವತಾರ!
ಆದುದ್ಧಾರಕೆ ಸಾವಿರ
ಮಡಿಯಿಹುದಾಗುವ ಉದ್ಧಾರ!"

ಆದರೆ ಸಾಧಕನಾದವನ ಶ್ರದ್ಧೆ ಹಿಂಜರಿಯುವುದಿಲ್ಲ. ವಿವೇಕಾನಂದರು ನಮಗಿತ್ತಿರುವ ಈ ಕರೆಯನ್ನು ಆಲಿಸಿ.

"ಓ ಮಾನವ, ಅತೀತದ ಪೂಜೆಯಿಂದ ಪ್ರತ್ಯಕ್ಷದ ಪೂಜೆಗೆ, ನಿನಗಿದೋ ಆಹ್ವಾನ! ಹೋದ ದುಃಖದಿಂದ ಬರುವ ಸುಖಕ್ಕೆ, ನಿನಗಿದೋ ಆಹ್ವಾನ! ಗತಾಸು ಶೋಚನೆಯಿಂದ ಆಧುನಿಕ ನವಪ್ರಯತ್ನಕ್ಕೆ, ನಿನಗಿದೋ ಆಹ್ವಾನ! ಲುಪ್ತ ಪಂಥದ ಪುನರುದ್ಧಾರಸಾಹಸದ ವೃಥಾಶಕ್ತಿಕ್ಷಯದಿಂದ ಸದ್ಯೋನಿರ್ಮಿತ ವಿಶಾಲ ಸನ್ನಿಕಟ ಪಥಕ್ಕೆ, ನಿನಗಿದೋ ಆಹ್ವಾನ! ಓ ಬುದ್ಧಿವಾನ್ ಮಾನವಾ, ಇದನ್ನು ತಿಳಿ; ಸಿದ್ಧನಾಗು, ಪ್ರಬುದ್ಧನಾಗು!

"ಯಾವ ಶಕ್ತಿಯ ಉನ್ಮೇಷ ಮಾತ್ರದಿಂದಲೇ ದಿಗ್ದಿಗಂತ ವ್ಯಾಪಿಯಾದ ಪ್ರತಿಧ್ವನಿಯಿಂದ ಜಗತ್ತು ಜಾಗ್ರತವಾಗುತ್ತಿರುವುದೋ ಆ ಶಕ್ತಿಯ ಪೂರ್ಣತ್ವವನ್ನು ಭಾವಿಸಿ ಅನುಭವಿಸು; ವೃಥಾ ಸಂದೇಹಬೇಡ; ದುರ್ಬಲತೆ ಬೇಡ; ದಾಸ ಜಾತಿ ಸುಲಭವಾದ ಈರ್ಷ್ಯಾದ್ವೇಷಗಳನ್ನು ದೂರಮಾಡಿ ಈ ಮಹಾ ಯುಗಚಕ್ರ ಪರಿವರ್ತನೆಯ ಸಹಾಯಾರ್ಥವಾಗಿ ಹೆಗಲುಕೊಟ್ಟು ನಿಲ್ಲು; ಸೊಂಟಕಟ್ಟಿ ನಿಲ್ಲು; ಧೀರನಾಗಿ ನಿಲ್ಲು!

"ನಾವು ಪ್ರಭುವಿನ ದಾಸರು, ಪ್ರಭುವಿನ ಪುತ್ರರು; ಪ್ರಭುವಿನ ಲೀಲೆಗೆ ಸಹಾಯಕರು ಎಂಬುದನ್ನು ತಿಳಿ. ವಿಶ್ವಾಸ ಹೃದಯದಿಂದ ದೃಢಭಾವಧಾರಿಯಾಗಿ ಕಾರ್ಯಕ್ಷೇತ್ರಕ್ಕೆ ಧುಮುಕು! ನಿರ್ಭರತೆಯಿಂದ ಧುಮುಕು!"

೩

ದೃಷ್ಟಿಯಂತೆ ಸೃಷ್ಟಿ

"ಹಾರೈಸು ಹಾರೈಸು ಹಾರೈಸು, ಜೀವ:
ಹಾರೈಸು ನೀನಾಗುವನ್ನೆಗಂ ದೇವ!"

ಇಂದಿನ ಕನಸು ನಾಳೆಯ ಮನಸ್ಸು; ನಾಳೆಯ ಮನಸ್ಸು ನಾಡಿದ್ದಿನ ಉಣಿಸು. ಇವೊತ್ತಿನ ಹಾರೈಕೆ ನಾಳೆಯ ಪೂರೈಕೆ. ವಟಬೀಜದ ಖುತಹೃದಯದಲ್ಲಿ ಶಕ್ತಿ ಪೂರ್ಣವಾಗಿರುವ ಚಿತ್‌ಸಂಕಲ್ಪವು ತಪೋಮಯವಾಗಿ ಆಶಿಸಿತೆಂದರೆ, ಆ ಆಶೆಯೆ

ಇಚ್ಛಾಬಲವಾಗಿ ಅಂತಸ್ಸುಪ್ತವಾಗಿರುವ ವ್ಯಕ್ತಿತ್ವವನ್ನು ಬಹಿಃಸ್ಫುಟವಾಗುವಂತೆ ಮಾಡುತ್ತದೆ. ಒಂದು ವರ್ಗದ ಪ್ರಾಣಿ ಮತ್ತೊಂದು ವರ್ಗದ ಪ್ರಾಣಿಯಾಗಿ ಪರಿಣಾಮಗೊಳ್ಳುವುದೂ ಅಂತರ್‌ನಿಗೂಢವಾದ ಋತಸಂಕಲ್ಪದ ಚಿತ್‌ತಪಸ್ಸಿನಿಂದಲೆ ಎಂದು ಪತಂಜಲಿಯ ಯೋಗಸೂತ್ರ ಹೇಳುತ್ತದೆ:

"ಜಾತ್ಯಂತರ ಪರಿಣಾಮಃ ಪ್ರಕೃತ್ಯಾಪೂರಾತ್ ‖" (ಅ. ೪, ಸೂ. ೨) ಪ್ರಕೃತಿಯ ಆಪೂರಣದಿಂದಲೆ ಜಾತ್ಯಂತರ ಪರಿಣಾಮ ಸಾಧ್ಯ. ಪ್ರಕೃತಿರೂಪದಲ್ಲಿ ಅವ್ಯಕ್ತವಾಗಿರುವ ಶಕ್ತಿಯ ಇಚ್ಛಾವಿಕಾಸದಿಂದಲೆ ಸೃಷ್ಟಿಯಲ್ಲಿ ಬೇರೆಬೇರೆ ಪರಿಣಾಮ ಗಳಾಗುತ್ತವೆ. ಬರಿಯ ಸನ್ನಿವೇಶ ಮಾತ್ರದಿಂದಲ್ಲ. ಸನ್ನಿವೇಶಪ್ರಭಾವ ಅಭಿನಿವೇಶಕ್ಕೆ, ಎಂದರೆ ಅಸ್ಮಿತಾಸಕ್ತಿಗೆ ನಿಮಿತ್ತಭಿತ್ತಿಯಾಗುತ್ತದೆಯೆ ಹೊರತು ಅದೇ ಪರಿಣಾಮ ಕರ್ತೃವಲ್ಲ. "ಹಾರೈಸಿ ಹಾರೈಸಿ ಹಾರೈಸಿ ಹಾರಿದುದೊ ನೀರಧಿಯ ಮೀನ!" ಎಂದು ಆಧುನಿಕ ಜೀವ ವಿಜ್ಞಾನವೂ ಅದೇ ತತ್ತ್ವವನ್ನು ಸೂಚಿಸುತ್ತದೆ. ಮಾನವ ವರ್ಗದಲ್ಲಿ ಯಾವ ಪ್ರಗತಿಪರಿಣಾಮವಾಗಬೇಕಾದರೂ ಅದು ಮೊದಲು ವ್ಯಷ್ಟಿಯ ಮನೋಮಯಕ್ಕೆ ಭಾವನಾರೂಪದಲ್ಲಿ ಅವತರಿಸಿ ಬುದ್ಧಿಗ್ರಾಹ್ಯವಾಗುತ್ತದೆ. ಮೊದಲು 'ಬುದ್ಧಿ ಗೋಚರ'ವಾದುದು ಕ್ರಮೇಣ 'ಹೃದಯ ಗೋಚರ' ವಾಗುತ್ತದೆ. ತರುವಾಯ ಕಾಯಕ್ರಿಯೆಯಲ್ಲಿ ಪ್ರತಿಷ್ಠಿತವಾಗಿ ವಾಸ್ತವವಾಗುತ್ತದೆ.[1] ಒಳಹೊಕ್ಕು ನೋಡಿದರೆ ಹೊಳೆಯುತ್ತದೆ—ಅಭಿಪ್ರಾಯಗಳ ಶಕ್ತಿ ಆಟಂ ಶಕ್ತಿ ಗಿಂತಲೂ ಬಲವತ್ತರವಾದದ್ದು; ಅಮೋಘವಾದದ್ದು ಎಂದು. ಭಾರತ ಸ್ವಾತಂತ್ರ್ಯದ ಉದಯ, ಪಾಕಿಸ್ತಾನ್ ಇಸ್ರಯೇಲ್ ರಾಷ್ಟ್ರಗಳ ವಿಸೃಷ್ಟಿ, ದುರ್ದಮ್ಯ ಚಕ್ರಾಧಿ ಪತ್ಯಗಳ ದಮನ ಮತ್ತು ದಲನ,—ಇಂತಹ ಅತ್ಯಂತ ಬಹಿರ್ಮುಖವಾದ ರಾಜಕೀಯ ಘಟನೆಗಳಿಗೂ 'ಮಂತ್ರ'ಗಳೆ, ಎಂದರೆ ಶಕ್ತಿಪೂರ್ಣವಾದ ಭಾವನೆಗಳೆ, ಕಾರಣ ವಾದುದನ್ನು ನಾವೆಲ್ಲ ಕಂಡಿದ್ದೇವೆ. ಸತ್ ಸೃಷ್ಟಿಗಾಗಲಿ ಅಸತ್ ಸೃಷ್ಟಿಗಾಗಲಿ 'ಮಂತ್ರ' ನಿಷ್ಪಕ್ಷಪಾತವಾಗಿ ನೆರವಾಗುತ್ತದೆ. ಅದಕ್ಕೆ ಅಧೀನವಾಗಿ ಆವಶ್ಯಕವಾದ 'ತಂತ್ರ' ಸಿದ್ಧವಾಗುತ್ತದೆ; ಅದನ್ನಾಶ್ರಯಿಸಿ ಶಾಸ್ತ್ರವಿಜ್ಞಾನ 'ಯಂತ್ರ'ಗಳನ್ನು ಕಂಡುಹಿಡಿದು ಒದಗಿಸುತ್ತದೆ. ಲೆನಿನ್ ಸ್ಟಾಲಿನ್ ಗಾಂಧಿಯಂಥವರೂ ಹಿಟ್ಲರ್ ಮುಸ್ಸೊಲಿನಿಯ ವರ್ಗದವರೂ ಜರ್ಮನಿ ಇಟಲಿ ರಷ್ಯಾ ಇಂಡಿಯಾ ಮೊದಲಾದ

---

[1] 'Take up one idea. Make that one idea your life; think of it; dream of it; live on that idea. Let the brain, muscles, nerves, every part of your body be full of that idea, and just leave every other idea alone. This is the way to success, and this is the way great spiritual giants are produced.'

—Swami Vivekananda

ದೇಶಗಳ ಅಚಿರಪೂರ್ವ ಇತಿಹಾಸಗಳೂ ಅದಕ್ಕೆ ನಿದರ್ಶನಗಳಾಗಿವೆ. 'ಮಂತ್ರಶಕ್ತಿ' ಎಂಬ ಪದದ ಅರ್ಥ ಎಷ್ಟು ಹಿಗ್ಗಲಿಸಿ ಎಲ್ಲಿಗೆಳೆದರೂ ಅಸತ್ಯವಾಗಲಾರದೆಂದು ತೋರುತ್ತದೆ. ಆದ್ದರಿಂದಲೆ ನಾವು ಸ್ವೀಕರಿಸುವ 'ಮಂತ್ರ' ಸನ್ಮಂತ್ರವಾಗಿರ ಬೇಕಾದುದು ಅತ್ಯಂತ ಆವಶ್ಯಕ, ಲೋಕದ ಕ್ಷೇಮಕ್ಕೆ ಮತ್ತು ನಮ್ಮ ಶ್ರೇಯಸ್ಸಿಗೆ.

ದೃಷ್ಟಿಯಂತೆ ಸೃಷ್ಟಿ. ಅದೇನೊ ನಿಜ. ಆದರೆ ನಿರ್ಬಲವಾದ ದೃಷ್ಟಿಯಿಂದ ಯಾವ ಸೃಷ್ಟಿಯೂ ಆಗಲಾರದು. ಅಂತಹ ನಿರ್ವೀರ್ಯತೆಯಿಂದ ದಿವಾಸ್ವಪ್ನಗಳು ಬೇಕಾದರೆ ಮಿಣುಕಬಹುದು. ಸತ್ಯಸೃಷ್ಟಿಯಾಗದು. ಋತವಿಲ್ಲದ ಮಿಥ್ಯಾದೃಷ್ಟಿ ಯಿಂದ ಅನೃತಸೃಷ್ಟಿ ಮಾತ್ರ ಸಾಧ್ಯ. ಆಲೋಚನೆ ಭಾವಮಯವಾದರೆ 'ತಪಸ್' ಒದಗುತ್ತದೆ; ತಪಸ್ಯೆಯಿಂದಲ್ಲದೆ ಲಭಿಸಲಾರದು 'ತಪಸ್'. ವಿವೇಕಾನಂದರು ಸಾರಿರುವ ಸಂದೇಶದಿಂದ, ನೀಡಿರುವ ಆವೇಶದಿಂದ, ಅಂತಹ ತಪೋಮಯ ದೃಷ್ಟಿ ನಮಗೆ ಒದಗುತ್ತದೆಯೆ? ಅಂತಹ 'ದರ್ಶನ' ಶಕ್ತಿ ನಮ್ಮಲ್ಲಿ ಪ್ರಜ್ವಲಿಸುತ್ತದೆಯೆ?

ವಿವೇಕಾನಂದರು ಲೋಕಕ್ಕೆ ಇತ್ತ ಸಂದೇಶವನ್ನು ಕುರಿತು ಹಿಂದಣ ಭಾಷಣ ಗಳಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದೇವೆ. ಅದರಲ್ಲಿ ಒಂದಂಶ ವ್ಯಷ್ಟಿಗೆ ಸಂಬಂಧಿ ಸಿದ್ದು; ಇನ್ನೊಂದು ಸಮಷ್ಟಿಗೆ. ಇವೆರಡೂ ನಿಜವಾಗಿ ಬೇರೆ ಬೇರೆ ಅಲ್ಲ; ಒಂದಕ್ಕಾಗಿ ಇನ್ನೊಂದು. ವ್ಯಷ್ಟಿಸಿದ್ಧಿಗೆ ಸಂಬಂಧಿಸಿದ ತಪಸ್ಯೆಯನ್ನು ಕುರಿತು, ನರೇಂದ್ರನನ್ನೆ ಉದಾಹರಣೆಯಾಗಿಟ್ಟುಕೊಂಡು ಸಂಕ್ಷೇಪವಾಗಿಯಾದರೂ ನಾಲ್ಕಾರು ಮಾತು ಹೇಳಿದ್ದೇವೆ. ಇಲ್ಲಿ ಯಾವ ರೂಪದ ಮುಂದಣ ಸೃಷ್ಟಿಗಾಗಿ ಯಾವ ಸ್ವರೂಪದ ವ್ಯಷ್ಟಿದೃಷ್ಟಿ ಸಿದ್ಧವಾಗಬೇಕಾಗಿದೆ ಎಂಬುದನ್ನು ಪರ್ಯಾಲೋಚಿಸುತ್ತೇವೆ.

ಇಂದಿನ ಪ್ರಪಂಚದ ಸಮಸ್ಯೆಗಳೆಲ್ಲ ಎರಡು ಪ್ರಧಾನ ಚಿತ್ತವೃತ್ತಿಗಳ ಮೇಲೆ ನಿಂತಂತಿವೆ: ಒಂದು ಯುದ್ಧಭೀತಿ; ಮತ್ತೊಂದು ಶಾಂತಿಪ್ರೀತಿ. ಗಮನಿಸಬೇಕಾದ ಮತ್ತೊಂದು ವಿಚಿತ್ರವೆಂದರೆ, ಒಂದರಿಂದ ಮತ್ತೊಂದು ಉದ್ಭವಿಸಿ, ಒಂದರಿಂದ ಮತ್ತೊಂದು ಪ್ರೇರಿತವಾಗಿ, ಒಂದು ಮತ್ತೊಂದಕ್ಕೆ ಕಾರಣವಾಗಿ, ಒಂದಕ್ಕೊಂದು ಪೂರಣವಾದಂತಿದೆ! ಎರಡು ಘೋರಯುದ್ಧಗಳನ್ನು ನೋಡಿದ ಜಗತ್ತು, ಒಂದ ಕ್ಕಿಂತ ಒಂದು ಘೋರತರವಾಗಿ ಪ್ರಲಯಕಾರಿಯಾದುದನ್ನು ಕಂಡರಿತ ಜಗತ್ತು, ಮುಂದೇನಾದರೂ ಯುದ್ಧ ಸಂಭವಿಸಿದರೆ ಅದು ಅತ್ಯಂತ ಘೋರತಮವಾಗಿ ಸರ್ವನಾಶದಲ್ಲಿಯೆ ಕೃತಕೃತ್ಯವಾಗಬಹುದೆಂಬ 'ಪ್ರಾಣಭೀತಿ'ಯಿಂದ ಶಾಂತಿಯನ್ನು ಪ್ರೀತಿಸುವಂತೆ ತೋರುತ್ತಿದೆಯೆ ಹೊರತು ಶಾಂತಿಯಲ್ಲಿ ಆರೂಢವಾಗಿ ಸ್ವತಃಸಿದ್ಧ ವಾಗಿರುವ ಆತ್ಮಶ್ರೀಯ ಆಧ್ಯಾತ್ಮಿಕ ಪ್ರಯೋಜನಕ್ಕಾಗಿ ಅದನ್ನು ಬಯಸುತ್ತಿರುವಂತೆ ಕಾಣುವುದಿಲ್ಲ. ಆದಕಾರಣವೆ 'ಶಾಂತಿರಕ್ಷಣೆ'ಗಾಗಿ ಉನ್ಮಾದವೇರಿದಂತೆ 'ಯುದ್ಧ

ಸಿದ್ಧತೆ' ಮಾಡಿಕೊಳ್ಳುವ ವಿಪರೀತ ಪರಿಸ್ಥಿತಿ ಒದಗಿರುವುದನ್ನು ನೋಡುತ್ತಿದ್ದೇವೆ. 'ಯುದ್ಧಸಿದ್ಧತೆ'ಗಾಗಿ ಬುದ್ಧಿವ್ರಯ, ಶಕ್ತಿವ್ರಯ, ಧನವ್ರಯ, ಎಲ್ಲಕ್ಕಿಂತಲೂ ಹೆಚ್ಚಾಗಿ ಸೌಜನ್ಯವ್ರಯವಾಗುವುದರಿಂದ ಮಾನವನ ದೈನಂದಿನ ಸರಳ ಜೀವನಕ್ಕೆ ಬೇಕಾಗುವ ಅನ್ನವಸ್ತ್ರಾದಿಗಳ ಉತ್ಪತ್ತಿ ಹಿಂದೆ ಬಿದ್ದು, ಅನೇಕರಿಗೆ ಅವು ದೊರೆಯದೆ ಹಾಹಾಕಾರವೆದ್ದು 'ಅಶಾಂತಿ'ಗೆ ಕಾರಣವಾಗುತ್ತದೆ. 'ಕ್ರಾಂತಿಶಕ್ತಿ' ಅಂತಹ 'ಅಶಾಂತಿ'ಯನ್ನೆ ತನಗೆ ಮೂಲಧನವನ್ನಾಗಿಯೂ ಮೂಲಬಲವನ್ನಾಗಿಯೂ ಮಾಡಿಕೊಂಡು ತನ್ನ ಸ್ವಾರ್ಥದ ದುರಭಿಸಂಧಿಗೆ ಅದನ್ನು ಉಪಯೋಗಿಸಿಕೊಳ್ಳುತ್ತದೆ. ಅದರಿಂದೊದಗುವ 'ಅಶಾಂತಿ'ಯನ್ನು ಶಮನಮಾಡಲು 'ಯುದ್ಧಸಿದ್ಧತೆ'; ಯುದ್ಧಸನ್ನಾಹ; ಕೊನೆಗೆ ಯುದ್ಧ! ಹೀಗೆ ತನ್ನ ಬಾಲದ ತುದಿಕಡೆಯಿಂದ ತನ್ನನ್ನೇ ನುಂಗಿಕೊಳ್ಳುವ ಈ ವಿಚಿತ್ರವಾದ ಸತ್‌ಪ್ರಯತ್ನದಲ್ಲಿ ಸರ್ವದಾ ನಿರತವಾಗಿರುವ ಈ ಅನರ್ಥಶಾಸ್ತ್ರ ವಿಷಮುಸರ್ಪದಿಂದ ಮೂಡಿರುವ 'ಯುದ್ಧಭೀತಿ—ಶಾಂತಿಪ್ರೀತಿ'ಯ ಜಟಿಲ ವಿಷವರ್ತುಲಗರ್ತದಿಂದ ಮಾನವತೆಗೆ ಮುಕ್ತಿಯಿದೆಯೆ ಎಂಬ ಪ್ರಶ್ನಚಿಹ್ನೆ ಹಾವಿನ ಹೆಡೆಯಂತೆಯೆ ನಿಮಿರಿ ನಿಲ್ಲುತ್ತದೆ!

ನಿಜವಾದ ಶಾಂತಿಗೆ ಮುನ್ನ ಮನುಷ್ಯತ್ವ ಶಮವನ್ನು ಸಾಧಿಸಬೇಕಾಗುತ್ತದೆ. ಶಮವಿಲ್ಲದ ಶಾಂತಿ ಬರಿಯ ಭ್ರಾಂತಿ. ವ್ಯಷ್ಟಿ ವ್ಯಷ್ಟಿ ಸೇರಿ ಸಮಷ್ಟಿಯಾಗಿದೆ. ಸಮಷ್ಟಿಯೂ ಅನೇಕ ವ್ಯಷ್ಟಿಗಳಾಗಿ ಮೈದೋರಿದೆ. ಆದ್ದರಿಂದ ವ್ಯಷ್ಟಿ ವ್ಯಷ್ಟಿಯೂ ತನ್ನಲ್ಲಿ ಶಮವನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿದರೆ ಸಮಷ್ಟಿಯ ಶಮಕ್ಕೆ ಬಲವಾದ ತಳಹದಿಯಾಗುತ್ತದೆ. ವ್ಯಷ್ಟಿ ವ್ಯಷ್ಟಿಯ ಅಹಂಕಾರ ಶಮನವಾದರೆ ಸಮಷ್ಟಿ ಸಮಷ್ಟಿಗಳ ಅಹಂಕಾರವೂ ಶಮನವಾಗುವುದು ಸಾಧ್ಯ. ದೇಶಭಕ್ತಿ, ರಾಷ್ಟ್ರೀಯತೆ, ಸ್ವಮತ ಸ್ವಸಂಸ್ಕೃತಿ ಸ್ವಭಾಷಾಭಿಮಾನಿಗಳೆಲ್ಲ ಅಹಂಕಾರಮೂಲವಾದ ವ್ಯಷ್ಟಿ ಪ್ರತಿಷ್ಠೆಯ ಸಮಷ್ಟಿರೂಪಗಳಲ್ಲದೆ ಮತ್ತೇನು? ಆದ್ದರಿಂದ ವ್ಯಷ್ಟಿ ವ್ಯಷ್ಟಿಗಳಲ್ಲಿ ಅಂತಹ ಶಮಸಾಧನೆಯಿಂದ ಮೂಡುವ ಮೂಲಪರಿವರ್ತನೆಗಾಗಿ ನಾವು ಸಾಮೂಹಿಕವಾಗಿ ಕಾರ್ಯೋನ್ಮುಖವಾಗದಿದ್ದರೆ ಬರಿಯ ಅರ್ಥಶಾಸ್ತ್ರದ ಅಥವಾ ರಾಜಕೀಯ ಶಾಸ್ತ್ರದ ತೇಪೆಹಾಕುವ ಕುಶಲಕರ್ಮದಿಂದ ಎಂದಿಗೂ ಸರ್ವರೂ ಅಪೇಕ್ಷಿಸುವ ಸಮಷ್ಟಿಶಾಂತಿ ಸಿದ್ಧಿಸುವುದಿಲ್ಲ. ಸ್ವಭಾವ ಬದಲಾಯಿಸದೆ ಬದುಕು ಬದಲಾಯಿಸುವುದಿಲ್ಲ. ಅಂತಹ ಬದಲಾವಣೆಗಾಗಿ ಲೋಕಶೋಷಣೆ ಮಾಡಬೇಕಾಗಿಲ್ಲ. ನಮ್ಮ ಸ್ವರೂಪದಲ್ಲಿಯೆ ಆ ದೈವೀಶಕ್ತಿ ಸುಪ್ತವಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಅದನ್ನು ಎಚ್ಚರಗೊಳಿಸಲು ಪ್ರಯತ್ನಮಾಡಿದರೆ ಲೋಕ ಕಲ್ಯಾಣಕ್ಕೆ ಪ್ರತ್ಯಕ್ಷವಾಗಿ ಸಕ್ರಿಯವಾಗಿ ನೆರವಾಗುತ್ತಾನೆ. ಆ ದೈವೀ ಸ್ವರೂಪವೆ ಸ್ವಭಾವವಾದರೆ ಅದನ್ನು

ಅನುಷ್ಠಾನಕ್ಕೆ ತರುವ ಸ್ವಧರ್ಮ ಸ್ವತಃ ಸಿದ್ಧವಾಗಿ, ತದನುಗುಣವಾದ ಸ್ವಕರ್ಮದಲ್ಲಿ ಸುಪ್ರತಿಷ್ಠಿತವಾಗಿಯೆ ಆಗುತ್ತದೆ. ಪುರಾತನ ಮಹರ್ಷಿಗಳೆಲ್ಲರಿಂದಲೂ ಒಂದಲ್ಲ ಒಂದು ರೀತಿಯಿಂದ ಘೋಷಿತವಾಗುತ್ತಲೆ ಬಂದಿರುವ ಈ ಸನಾತನ ಸತ್ಯವು ನಮ್ಮ ಅರ್ವಾಚೀನ ವಿಭೂತಿಗಳಿಂದ ಮತ್ತೊಮ್ಮೆ ಆಧುನಿಕವಾಗಿ ಮಹೋಜ್ಜ್ವಲವಾಗಿ ಪ್ರಕಾಶಿತವಾಗಿದೆ.

ವಿವೇಕಾನಂದರು ಸರ್ವಧರ್ಮ ಸಮ್ಮೇಲನದಲ್ಲಿ ಮಾಡಿದ ಉಜ್ವಲ ಭಾಷಣಗಳಲ್ಲಿ ಈ ದೃಷ್ಟಿಗೆ ಪೀಠಿಕಾಪ್ರಾಯವಾದ ವಜ್ರವೇದಿಕೆಯನ್ನು ವಿರಚಿಸಿದ್ದಾರೆ. ಅವರ ಪ್ರಪ್ರಥಮ ಸಂಬೋಧನೆಯೆ ಆ ದೃಷ್ಟಿಗೆ ಮೂಲಮಂತ್ರದಂತಿದೆ: "ಅಮೆರಿಕಾ ದೇಶದ ಭ್ರಾತೃ ಭಗಿನಿಯರೆ!" ವಾಚ್ಯವಾಗಿ ನೋಡಿದರೆ ಅತಿ ಸಾಮಾನ್ಯವಾಗಿ ಅತ್ಯಲ್ಪವಾಗಿ ತೋರುವ ಆ ಸಂಬೋಧನೆ ಚಿಚ್ಛಕ್ತಿಯ ಎಂತಹ ವಿದ್ಯುತ್ ಪ್ರವಾಹವನ್ನು ಆಲಿಸಿದವರ ಹೃದಯಗಳಲ್ಲಿ ಪ್ರಚೋದಿಸಿತೆಂಬುದನ್ನು ಸಾಕ್ಷಿಗಳಿಂದಲೆ ಅರಿಯಬೇಕು, ಅನುಭವಿಸಬೇಕು. ಅಸೀಮವಾಗಿದೆ ಅದರ 'ಧ್ವನಿಶಕ್ತಿ'! ಊದಿದನಿತೂ ಉಜ್ಜ್ವಲವಾಗುವ ಬೆಂಕಿಯಂತೆ ಭಾವಿಸಿದನಿತೂ ನಿರ್ದಿಗಂತವಾಗುತ್ತದೆ ಅದರ ವ್ಯಾಪ್ತಿ; ನಿಶ್ಶಿಖರವೆಂಬಂತೆ ಏರುತ್ತದೆ ಅದರ ಉನ್ನತ ದೀಪ್ತಿ.[1]

ಇಂದು ವಿವೇಕಾನಂದರ ಕೃಪೆಯಿಂದ ನಮಗೆ ನಿತ್ಯಾಚಾರದ ಸಾಮಾನ್ಯ ವಿಷಯಗಳಾಗಿ ತೋರುವ ಚಿಂತನಾಶಕ್ತಿಗಳು ಅಂದು ಆ ಜನಕ್ಕೆ ಸತ್ಯಕ್ಕೆ ತೆರೆದ ವೈಚಿತ್ರ್ಯ ಪೂರ್ಣವಾದ ನವೋನವ್ಯವಾದ ದಿವ್ಯಗವಾಕ್ಷಗಳಂತೆ ರಾರಾಜಿಸಿದುವು. ಆ ವಿಶಾಲದರ್ಶನದ ಔದಾರ್ಯಕ್ಕೆ ಅಲ್ಲಿಯವರ ಮತದೃಷ್ಟಿಯ ಸಂಕೋಚ ಕಾರ್ಪಣ್ಯಗಳು ಅಪ್ಪಳಿಸಿ ಹೋಗಿ ನಿಬ್ಬೆರಗಾದುವು. ಬಾವಿಯಲ್ಲೆ ಹುಟ್ಟಿ ಬೆಳೆದಿದ್ದ ಕಪ್ಪೆಗಳನ್ನು ಹಿಡಿದೆತ್ತಿ ಸಮುದ್ರಕ್ಕೆ ಬೀಸಿದಂತಾಗಿ ಅವರು ತತ್ತರಿಸಿ ಹೋದರು: ಎಂತು ಪಥ ಅಂತು ಮತ! ದೃಷ್ಟಿಗಳೆನಿತೊ ದಾರಿಗಳನಿತು! ಪೂಜಿಸುವ ರೂಪಗಳೆಲ್ಲ ಪರಮಾತ್ಮನ ಪ್ರತಿಮೆಗಳೆ! ಭಕ್ತನ ಭಾವದಂತೆ ಭಗವಂತನ ಆವಿರ್ಭಾವ!

> "ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ
> ರುಚೀನಾಂ ವೈಚಿತ್ರ್ಯಾದೃಜುಕುಟಿಲ ನಾನಾಪಥಜುಷಾಂ
> ನೃಣಾಮೇಕೋ ಗನ್ಯಸ್ತ್ವಮಸಿ ಪಯಸಾಮರ್ಣವ ಇವ"

> "ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ
> ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ"

[1] ಸ್ವಾಮಿ ವಿವೇಕಾನಂದ, ಪು. ೧೪೭ ರಿಂದ ೧೫೧ ರ ವರೆಗೆ ಓದಿ.

ಸೃಷ್ಟಿಯೆಲ್ಲ ಭಗವಂತನ ಅಭಿವ್ಯಕ್ತಿ. ಜೀವದಲ್ಲಿ ಶಿವನಿದ್ದಾನೆ. ಶಿವನೆ ಜೀವವಾಗಿದ್ದಾನೆ. ಜೀವತ್ವದಲ್ಲಿ ಶಿವತ್ವಸ್ಥಾಪನೆಯೆ ಬದುಕಿನ ಗಮ್ಯ; ಅದೇ ಸರ್ವಜೀವರ ಗಂತವ್ಯ. ಆದ್ದರಿಂದ ಸ್ವಮತ ಶ್ರೇಷ್ಠತಾ ಭ್ರಾಂತಿ ನಿಷಿದ್ಧ, ಅಕ್ಷಮ್ಯ, ಅವೈಜ್ಞಾನಿಕ. ಸಮಸ್ತ ಜಡಚೇತನಗಳಲ್ಲಿ ಅಂತರ್ಯಾಮಿಯಾಗಿರುವುದು ಏಕಮಾತ್ರ ಪರತತ್ತ್ವ. ಅದು ಚಿನ್ಮಯ, ಆನಂದಮಯ, ಸದ್ರೂಪ.

> "ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ
> ಭಯಾದಿಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ"
>
> "ಆನಂದೋ ಬ್ರಹ್ಮೇತಿ ವ್ಯಜಾನಾತ್
> ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ
> ಆನಂದೇನ ಜಾತಾನಿ ಜೀವಂತಿ
> ಆನಂದಂ ಪ್ರಯಂತ್ಯಭಿಸಂವಿಶಂತಿ ||"

ಆದ್ದರಿಂದ ಭಯ ಬೇಡ; ಜುಗುಪ್ಸೆ ಸಲ್ಲದು. ಅಸೂಯಾದಿಗಳು ಅಜ್ಞಾನ ಜನ್ಯ. ತಿರಸ್ಕಾರ ಮಹಾಪಾಪ. ಪರಿಣಾಮಯಾತ್ರೆಯಲ್ಲಿ ಒಬ್ಬನು ಮುಂದೆ, ಇನ್ನೊಬ್ಬನು ಹಿಂದೆ; ಇಲ್ಲಿ ಶಕ್ತಿ, ಅಲ್ಲಿ ಅಶಕ್ತಿ. ಅದು ಲೀಲಾವಿಧಾನ. ಈಶ್ವರನ ವಿಭೂತಿಗಳಲ್ಲಿ ಲೀಲಾಕಾರಣವಾದ ತಾರತಮ್ಯಗಳಿದ್ದರೂ ನಿತ್ಯದೃಷ್ಟಿಯಲ್ಲಿ ಅವನು ಸರ್ವರಲ್ಲಿಯೂ ಸಮನಾಗಿದ್ದಾನೆ. "ತತಃ ಕೃತಾರ್ಥಾನಾಂ ಪರಿಣಾಮಕ್ರಮಸಮಾಪ್ತಿರ್ಗುಣಾನಾಂ" ಎಂದು ಯೋಗವಿಜ್ಞಾನಿ ಪತಂಜಲಿ ಹೇಳುವಂತೆ ವಿಕಾಸಪಥದಲ್ಲಿ ಮುಂದೆ ಮುಂದೆ ನಡೆದು ಕೊನೆಗೆ ಎಲ್ಲರೂ ಕೃತಾರ್ಥರಾಗಿಯೆ ಆಗುತ್ತಾರೆ. ಪರಮ ಪುರುಷಾರ್ಥ ಸಾಧನೆಯೆ ಸೃಷ್ಟಿಯ ಸರ್ವೋತ್ತಮೋದ್ದೇಶ.

ಆದ್ದರಿಂದ ಲೌಕಿಕವನ್ನು ಯಾರೂ ಅಲಕ್ಷಿಸದಿರಲಿ. ಏಕೆಂದರೆ ಅಲೌಕಿಕವು ಲೌಕಿಕದಲ್ಲಿಯೆ ಉನ್ಮೇಷಿತವಾಗಬೇಕು. ಋತಚಿತ್‌ಶಕ್ತಿ ನಮ್ಮ ವಿಶ್ವದ ಪರಿಣಾಮದ ಕ್ರಮವನ್ನು ಹಾಗೆ ಇಚ್ಛಿಸಿ, ಸಂಕಲ್ಪಿಸಿದೆ. ಒಮ್ಮೆ ವಿವೇಕಾನಂದರು ಕಲ್ಕತ್ತೆಯ ಮೃಗಶಾಲೆಗೆ ಬೇಟಿಯಿತ್ತರಂತೆ. ಅಲ್ಲಿಯ ಮುಖ್ಯಾಧಿಕಾರಿಯೊಡನೆ ಡಾರ್ವಿನ್ನನ ವಿಕಾಸವಾದ (Theory of Evolution) ವನ್ನು ಪ್ರಸ್ತಾಪಿಸುತ್ತಾ ಅದರ ನ್ಯೂನತೆಯನ್ನು ವಿವರಿಸಿ, ವೇದಾಂತದೃಷ್ಟಿಯಿಂದ ಅದನ್ನು ತಿದ್ದಿದರಂತೆ: "ಜಾತ್ಯಂತರ ಪರಿಣಾಮಃ ಪ್ರಕೃತ್ಯಾಪೂರಾತ್" ಎಂಬ ಯೋಗಸೂತ್ರದಂತೆ ಆಪೂರಣದ ಪೂರ್ವಸ್ಥಿತಿ ಇಲ್ಲದೆ ಪರಿಣಾಮದ ಉತ್ತರಸ್ಥಿತಿ ಹೇಗೆ ಒದಗುತ್ತದೆ? ಯಾವ ಯಂತ್ರಕ್ಕಾಗಲಿ ನಾವು ತುಂಬುವಷ್ಟು ಶಕ್ತಿಯನ್ನು ಮಾತ್ರವೆ ಅದರಿಂದ ಪಡೆಯಲು ಸಾಧ್ಯ. ಆ ಶಕ್ತಿ ರೂಪಾಂತರ ಹೊಂದಬಹುದು; ಆದರೆ ಪ್ರಮಾಣಾಂತರ

ಹೊಂದಲಾರದು. ಎಷ್ಟು ಪೆಟ್ರೋಲ್ ಹಾಕಿದರೆ ಅಷ್ಟು ದೂರ ಹೋಗುತ್ತದೆ ವಿಮಾನ; ಎಷ್ಟು ಕಲ್ಲಿದ್ದಲು ತುಂಬಿದರೆ ಅಷ್ಟು 'ದೂರ ಕೊಡುತ್ತದೆ' ರೈಲು. ಹಾಗೆಯೆ ಜೀವಿಗಳ ವಿಕಾಸಾತ್ಮಕವಾದ ಪರಿಣಾಮವೂ ತತ್‌ಪೂರ್ವವಾದ ಆಪೂರಣದ ಶಕ್ತಿ, ವೇಗ, ಪ್ರಮಾಣ, ಸಂಕಲ್ಪ, ಉದ್ದೇಶಾದಿಗಳ ಕ್ರಮದಲ್ಲಿಯೆ ಸಾಗುತ್ತದೆ. ಆ ಸಾಗುವಿಕೆಯ ಸ್ವಭಾವ ಮತ್ತು ಸ್ವಧರ್ಮಗಳಲ್ಲಿ ಜೀವಿಯಿಂದ ಜೀವಿಗೆ ಅಂತರವಿರುತ್ತದೆ. ಡಾರ್ವಿನ್ನನ 'ಬಲಕ್ಕೆ ಬದುಕು' 'ಬಲಿಷ್ಠನಿಗೆ ಬಾಳು' ಎಂಬ ನಿರಂತರಸ್ಪರ್ಧೆಯ ಸಿದ್ಧಾಂತವು ಪ್ರಾಣಿವರ್ಗದ ವಿಚಾರದಲ್ಲಿ ಸತ್ಯವಾಗುವಷ್ಟರ ಮಟ್ಟಿಗೆ ಮನುಷ್ಯವರ್ಗದಲ್ಲಿ ಪೂರ್ಣ ಸತ್ಯವಾಗುವುದಿಲ್ಲ. ಏಕೆಂದರೆ ಪರಿಣಾಮದಲ್ಲಿ ಮುಂದುವರಿದಂತೆಲ್ಲ ಸ್ಪರ್ಧೆಯ ಸ್ವರೂಪವೆ ವ್ಯತ್ಯಾಸವಾಗುತ್ತದೆ. ಮೊದಲು ಭೋಗಾತ್ಮಕವಾದದ್ದು ಕೊನೆಗೆ ತ್ಯಾಗಾತ್ಮಕವಾಗುತ್ತದೆ. ಸ್ವಭೋಗದಲ್ಲಿಯೆ ಸರ್ವತೃಪ್ತವಾಗುತ್ತಿದ್ದ ಪ್ರಾಣಿ ಸ್ವಾರ್ಥತ್ಯಾಗದಲ್ಲಿಯೆ ತನ್ನ ಆತ್ಮಭೋಗವನ್ನು ಅನುಭವಿಸುವ ಸಾಮರ್ಥ್ಯವನ್ನು ಪಡೆಯುತ್ತದೆ, ಮನುಷ್ಯತ್ವದಲ್ಲಿ. ಯಾವುದನ್ನು ಡಾರ್ವಿನ್ 'Struggle for Life' ಎಂದು ಕರೆಯುತ್ತಾನೆಯೊ ಅದನ್ನು ಪತಂಜಲಿ 'ಅಭಿನಿವೇಶ' ಎಂದು ಕರೆದಿದ್ದಾನೆ. ಅದು ಅಸ್ಮಿತಾಸಕ್ತಿ. 'ನಾನಿರಬೇಕು, ನಾನಿರಬೇಕು; ಬದುಕಬೇಕು, ಬದುಕಬೇಕು' ಎಂಬ ಆಸಕ್ತಿ. ಇದು ಪ್ರಾಣಿಗಳಲ್ಲಿ ಮಾತ್ರವಲ್ಲ, ಜ್ಞಾನಿಗಳಲ್ಲಿ ಕೂಡ ಇರುತ್ತದೆ. ಏಕೆಂದರೆ ಈ ಅಭಿನಿವೇಶ ಸ್ವರಸವಾಹಿಯಾದದ್ದು. ತನಗೆ ತಾನೆ ರುಚಿಯಾದದ್ದು. ಬದುಕಿನ ಇತರ ಸವಿಗಳಿಗೆಲ್ಲ ಮೂಲ ಸವಿ ಬದುಕುವ ಸವಿ:

"ಸ್ವರಸವಾಹೀ ವಿದುಷೋಽಪಿ ತಥಾರೂಢೋಽಭಿನಿವೇಶಃ"

(ಯೋ. ಸೂ. ೨, ೯.)

ಇದು ಪಶು ಸಹಜವಾದರೂ ಮಾನವನಲ್ಲಿ ರೂಪಾಂತರ ಹೊಂದುತ್ತದೆ. ಬರಿಯ 'ಬದುಕಬೇಕು' ಎಂಬ ಆಸಕ್ತಿ 'ಅಮೃತನಾಗಬೇಕು' ಎಂಬ ಅಭೀಪ್ಸೆಯಾಗುತ್ತದೆ. ಆ ಅಮೃತತ್ವ ಪ್ರಾಣಿಸಹಜವಾದ ಭೋಗಸ್ಪರ್ಧೆಯಿಂದ ಸಿದ್ಧವಾಗದೆ ಪ್ರೇಮಸಹಜವಾದ ತ್ಯಾಗಸ್ಪರ್ಧೆಯಿಂದ ಲಭಿಸುತ್ತದೆ. ಆದ್ದರಿಂದ ಜಾತ್ಯಂತರ ಪರಿಣಾಮವು ಪ್ರಾಣಿವರ್ಗದಿಂದ ಮಾನವವರ್ಗಕ್ಕೆ ಕಾಲಿಟ್ಟಮೇಲೆಯೂ ಪ್ರಾಣಿವರ್ಗಕ್ಕೆ ಸ್ವಾಭಾವಿಕವಾಗಿದ್ದ ಹೋರಾಟದ ವಿಧಾನಗಳನ್ನು ಮತ್ತೆಯೂ ಮುಂದುವರಿಸುವುದು ಪ್ರಗತಿಶೀಲವಲ್ಲ; ಪುರೋಗಮನದ ಲಕ್ಷಣವಲ್ಲ; ತಿರೋಗಮನಕ್ಕೆ ಹಾದಿಯಾಗುತ್ತದೆ. ಆದ್ದರಿಂದ ಪಶುಧರ್ಮದಿಂದ ಮಾನವಧರ್ಮವನ್ನು ಅಳೆಯುವುದು ತಪ್ಪು; ಪಶುಸ್ವಭಾವದಿಂದ ಮಾನವ ಸ್ವಭಾವವನ್ನು ನಿರ್ಣಯಿಸುವುದಂತೂ

ಪರಮ ಬೆಪ್ಪು. ಅಂತಹ ತಪ್ಪು ತತ್ತ್ವದಿಂದಾದ ಬೆಪ್ಪು ನಿರ್ಣಯಗಳನ್ನು ಒಪ್ಪಿಕೊಂಡೆ ಅಲ್ಲವೆ ದೇಶಗಳೂ ಜನಾಂಗಗಳೂ ಯುದ್ಧದಿಂದ ಯುದ್ಧಕ್ಕೂ ಅಶಾಂತಿಯಿಂದ ಅಶಾಂತಿಗೂ ಮುಗ್ಗುತ್ತಿರುವ ಸಂಕಟಕರ ದೃಶ್ಯವನ್ನು ನಾವಿಂದು ನೋಡುತ್ತಿದ್ದೇವೆ!

ಸ್ವಾಮಿಜಿಯ ಈ ಅದ್ಭುತವಾದವನ್ನು ಆಲಿಸಿದವರೊಬ್ಬರು, ಅವರು ಭಾರತೀಯರು, ಪ್ರಶ್ನಿಸಿದರಂತೆ: "ಹಾಗಾದರೆ ನೀವು ಅಮೆರಿಕಾದಿಂದ ಹಿಂತಿರುಗಿದ ಮೇಲೆ ಕೊಲೊಂಬೊದಿಂದ ಆಲ್ಮೋರದವರೆಗೆ ಬಿರುಗಾಳಿಯಾಗಿ ಬೀಸಿದ ವಿದ್ಯುದ್ ಭಾಷಣಗಳಲ್ಲಿ ಲೌಕಿಕೋದ್ಧಾರ ಲೌಕಿಕಕ್ಷೇಮ ಲೌಕಿಕಶ್ರೀ ಲೌಕಿಕಬಲ ಇವುಗಳ ಸಾಧನೆ ಸಂಪಾದನೆಗಳನ್ನೇ ಕುರಿತು ನಮಗೆ ಹೇಳಿದ್ದೇಕೆ? ಈಸಬೇಕು, ಇದ್ದು ಜೈಸಬೇಕು; ಜೀವನ ಸ್ಪರ್ಧೆಯಲ್ಲಿ ಗೆದ್ದು ಬಾಳಬೇಕು ಎಂದು ಬೊಧಿಸಿದ್ದೇಕೆ?"

ತೆಕ್ಕನೆ ಉಕ್ಕಿತಂತೆ ಸ್ವಾಮಿಜಿಯ ಕಣ್ಣಿನಲ್ಲಿ ಧರ್ಮಕೋಪಜ್ವಾಲೆ. ಗುಡುಗಿ ಹೇಳಿದನಂತೆ ಆ ಸಿಡಿಲಾಳು: "ನೀವು, ನೀವು ಭಾರತೀಯರು, ನೀವು ಮನುಷ್ಯರೆ? ನೀವು ಪಶುಗಳಿಗಿಂತ ಮೇಲಲ್ಲ. 'ಆಹಾರ ನಿದ್ರಾ ಭಯ ಮೈಥುನಂ ಚ'. ನಿಮಗೂ ಚತುಷ್ಪಾದಿಗಳಿಗೂ ಏನು ಅಂತರ? ಏನೊ ಸ್ವಲ್ಪಮಾತ್ರವಾದರೂ ಬುದ್ಧಿಶಕ್ತಿ ಮಿನುಗುತ್ತಿರುವುದರಿಂದ ನಿಮಗಿನ್ನೂ ರೂಪಾಂತರ ಒದಗಿಲ್ಲ. ಇಲ್ಲದಿದ್ದರೆ ಇಷ್ಟು ಹೊತ್ತಿಗೆ ನೀವೆಲ್ಲ ಚತುಷ್ಪಾದಿಗಳಾಗುತ್ತಿದ್ದಿರಿ! ನೀವಿನ್ನೂ ಪಶುಸ್ವಭಾವದಲ್ಲಿಯೆ ಬಿದ್ದಿರುವುದರಿಂದ ನಿಮಗೆ ಹೋರಾಡಿ ಗೆಲ್ಲುವ ಪಶುಧರ್ಮವನ್ನೇ ಬೋಧಿಸಬೇಕಾಯಿತು. ಮೊದಲು ಅನ್ನಮಯ ಪ್ರಾಣಮಯಗಳ ಸ್ಪರ್ಧೆಯಲ್ಲಿ ಗೆಲ್ಲಿ. ಆಮೇಲೆ ಮನೋಮಯ ವಿಜ್ಞಾನಮಯ ಆನಂದಮಯಗಳ ಹೋರಾಟಕ್ಕೆ ನಿಮಗೆ ಯೋಗ್ಯತೆ ಬರುತ್ತದೆ. 'ನಾಯಮಾತ್ಮಾ ಬಲಹೀನೇನ ಲಭ್ಯಃ' ನಿರ್ಬಲನಿಗೆಲ್ಲಿ ಆತ್ಮಸಾಕ್ಷಾತ್ಕಾರ?" ತಮ್ಮ ಶ್ರೇಯಸ್ಸಿಗಾಗಿ, ಜಗತ್ತಿನ ಶ್ರೇಯಸ್ಸಿಗಾಗಿ, ಭಾರತೀಯರು ಮೊತ್ತಮೊದಲು ತಮ್ಮ ಪ್ರೇಯಸ್ಸನ್ನು ಸಾಧಿಸಲೆಬೇಕು ಎಂಬುದು ವಿವೇಕಾನಂದರ ಕಟ್ಟಾಣೆ.

ಆ ಪ್ರೇಯಸ್ಸಾಧನೆಗೆ ಪೀಠಿಕಾಪ್ರಾಯವಾಗಿ ಭರತಖಂಡ ಇಂದು ಸ್ವಾತಂತ್ರ್ಯವನ್ನು ಸಂಪಾದಿಸಿದೆ. ಆಧ್ಯಾತ್ಮಿಕ ಕ್ಷೇಮಕ್ಕೆ ವಿರೋಧವಾಗದಂತೆ ಲೌಕಿಕವಾದ ಎಲ್ಲ ಅಭ್ಯುದಯಗಳನ್ನೂ ನಾವು ಸಾಧಿಸಲೆಬೇಕು. ಆದರೆ ದಿಕ್ಕು ತಪ್ಪದಂತೆ ದಿವ್ಯ ಶ್ರೇಯಸ್ಸಿನ ಧರ್ಮಧ್ರುವ ತಾರೆಯ ಕಡೆ ಸದಾ ಒಂದು ಕಣ್ಣಿಟ್ಟಿರಬೇಕು. ಇಲ್ಲದಿದ್ದರೆ ಬರಿಯ ಅಮೆರಿಕೆಗಳೊ ರಷ್ಯಗಳೊ ಆಗಿಬಿಡುವ ದುರಂತಕ್ಕೆ ಗುರಿಯಾಗುತ್ತೇವೆ.[1]

---

[1] ಸ್ವಾಮಿ ವಿವೇಕಾನಂದ, 'ಕರೆಯುತಿದೆ ಯುಗವಾಣಿ' ಎಂಬ ೧೭ನೆಯ ಅಧ್ಯಾಯ ನೋಡಿ.

ಸ್ವಾಮಿ ವಿವೇಕಾನಂದರ ಆಶಾವಾಣಿ ನಮ್ಮನ್ನು ಆ ದುರಂತಕ್ಕೆ ಇಳಿ ಬಿಡುವುದಿಲ್ಲ ಎಂಬುದಕ್ಕೆ ಅನೇಕ ನಿದರ್ಶನಗಳು ನಮಗೆ ಕಾಣಿಸುತ್ತಿವೆ. ಅದು ನಮ್ಮ ಪುಣ್ಯ, ಸೌಭಾಗ್ಯ. ಪೂಜ್ಯ ಗಾಂಧೀಜಿ ಶ್ರೀಅರವಿಂದಾದಿ ಮಹಾವ್ಯಕ್ತಿ ಗಳಿಂದಲೂ ಶ್ರೀಮದ್ ಭಗವದ್ಗೀತೆ, ಶ್ರೀರಾಮಕೃಷ್ಣ ವಚನಾಮೃತ,[1] 'ದಿವ್ಯ 'ಜೀವನ[2]' ಮೊದಲಾದ ಭವ್ಯ ವಾಙ್ಮಯ ಕೃತಿಗಳಿಂದಲೂ ಶ್ರೀರಾಮಕೃಷ್ಣ ಮಹಾಸಂಘ ಮೊದಲಾದ ಅಮರಸಂಸ್ಥೆಗಳಿಂದಲೂ ಪುನಃ ಪುನಃ ಪ್ರಣೀತ ವಾಗುತ್ತಿರುವ ಭಾರತೀಯವಾದ ಸರ್ವಧರ್ಮ ಸಮನ್ವಯ ದಿವ್ಯದೃಷ್ಟಿಯ ಅಮೃತ ಸೇಚನೆಯಿಂದ ಬಹುದೂರ ದೇಶಗಳಲ್ಲಿಯೂ ಅನೇಕ ಭಾಷಾಸಂಸ್ಕೃತಿಗಳಲ್ಲಿಯೂ ಈ ನವಯುಗ ಧರ್ಮವು ಅಪ್ರತಿಹತವಾಗಿ ಪ್ರಫುಲ್ಲಿತವಾಗುತ್ತಿದೆ. ಭರತಖಂಡ ಆಶಿಸುವ ಲೋಕನಾಯಕತ್ವದ ಅಂತಸ್ಥ ರಾಜಕೀಯವಾದುದಲ್ಲ, ಆಧ್ಯಾತ್ಮಿಕವಾದದ್ದು; ದರ್ಪಮನೋಭಾವದ್ದಲ್ಲ, ಸೇವಾಮನೋಭಾವದ್ದು; ಅದು ಸ್ವಾರ್ಥ ದೂರವಾಗಿ ಅಕೃತ್ರಿಮ ಸ್ನೇಹಪೂರ್ಣವಾದದ್ದು; ಸರ್ವೋದಯದ ವಿನಾ ಬೇರೆ ಯಾವ ಪ್ರತಿ ಫಲಾಪೇಕ್ಷೆಯೂ ಇಲ್ಲದ ಅಹೇತುಕವಾದ ಪ್ರೇಮದಿಂದ ಪೂರ್ಣವಾದದ್ದು.[3]

ಆ ದಿವ್ಯ ಧ್ವನಿಯನ್ನೆ ಪ್ರತಿಧ್ವನಿಸುತ್ತಿದೆ ರಾಜಕೀಯ ಸ್ವಾತಂತ್ರ್ಯವನ್ನು ಆಧ್ಯಾತ್ಮಿಕ ಶ್ರೇಯಸ್ಸಿಗೆ ಸಮರ್ಪಿಸುವ ವಾಗ್ದೇವಿಯ ಆಶೀರ್ವಾಣಿ:

"ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಶ್ರೀ ಚಾಮುಂಡಿಯ ಪದತಲಕೆ!
ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಶ್ರೀ ಪುರುಷೋತ್ತಮ ಕ್ರೀ ಬಲಕೆ!
ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಪರಮಹಂಸ ಗುರುವರನಡಿಗೆ!
ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಅರುಣಾಚಲ ಋಷಿಯೆದೆಗುಡಿಗೆ!
ಸಮರ್ಪಿತವಾಗಲಿ ಈ ಸ್ವಾತಂತ್ರ್ಯಂ
ಶ್ರೀ ಅರವಿಂದರ ಸಿರಿಮುಡಿಗೆ!
ಸಮರ್ಪಿತವಾಗಲಿ ಈ ಸ್ವಾತಂತ್ರ್ಯಂ
ಚಿರ ಕಲ್ಯಾಣಕೆ ಅಡಿಗಡಿಗೆ!

ಕುವೆಂಪು.

---

1 *The Gospel of Sri Ramakrishna*—By M. Translated by Swami Nikhilananda.
2 *The Life Divine*—By Sri Aurobindo.
3 'ಶ್ರೀರಾಮಕೃಷ್ಣ ಪರಮಹಂಸ' 'ಅನಂತರ' ಎಂಬ ೮ನೆಯ ಅಧ್ಯಾಯ ನೋಡಿ.

ರಾಸಕ್ರೀಡೆ

ರಾಸಕ್ರೀಡೆಯ ಮಾಧವನಾಡಿದ ಗೋಪಿಯರೊಡವೃಂದಾವನದಿ
ವಾಸವಬಾಜಿಸಿ ಜಗವನು ಮೋಹಿಸಿ ನಲಿಸಿದನಾನಂದದ ಜಲಧಿ ||ಪಲ್ಲವಿ||

ಸಿದ್ಧಿತತಪಪಾರ್ವತಿ-ನೇತ್ರದ್ವಯಪೂರಿತಹರ್ಷದ ಬಾಷ್ಪಗಳ
ತಿಳಿಜಳದಿಂ ಸಲೆತುಂಬಿದ, ತುಂಬುರುಗಾನಕೆ ಅರಳಿಪ ಕಮಲಗಳ
ಶಾಶ್ವತವಾಸದ ಮಾನಸಸರದಿಂ ಜನಿಸುತ ಒಳ್ಕುತ ಸಳಸಳನೆ
ಹರಿವವು ಭಾರತದಾರ್ಯಾವರ್ತದ ನೆಲದಲಿ ಆ ಗಂಗಾಯಮುನೆ ೧

ಹಿಮನಗಜಾತೆಯು, ಶಂಕರಪತ್ನಿಯು ನಿಜತನುಜಾತೆಗೆ ಭಾರತಿಗೆ
ಇತ್ತಿಹ ಕರಿಮಣಿ ಮುತ್ತಿನಸರಗಳ ತೆರದಲಿ ಯಮುನಾಪಗೆ ಗಂಗೆ
ಕಾಣ್ಬರು, ಪರಿವರು ಜೊತೆಜೊತೆ ಮುಂದಕೆ ಮೆಲ್ಲಗೆ ಮಧುರನಿನಾದದಲಿ,
ಕತ್ತುರಿ ಪಸದನಗೈದಳು ಯಮುನೆಯು, ಗಂಗೆಯು ಮಿಂದಳು ಕೀರ್ತಿಯಲಿ ೨

ಅಸಿತದ ಜಲದಾವಸನವನುಟ್ಟಿಹಳೀ ಕಾಳಿಂದಿಯು ಹೊಳೆರಾಣಿ,
ಕೋಕಸ್ತನಗಳ ಹಂಸಿಯ ಗಮನದ ಕಿರುಜಳತೆರೆಗಳ ತೆರೆವೇಣಿ ;
ಕೃಷ್ಣವರ್ಣಜಲ, ಸ್ಫಟಿಕಶುಭ್ರಮುಸವೆಸೆದಿರೆ ತನ್ನಲಿ ಕಾಳಿಂದಿ
ಕೃಷ್ಣನ ಪಾದವ ತೊಳೆಯಲು ವೃಂದಾವನದೆಡೆ ಬಂದಳು ಸಾನಂದಿ ೩

ವೃಂದಾವನವೆನೆ ವೃಂದೆಯನೆಲವನೆ, ವೃಂದೆಯ ದೃಶ್ಯವೆ ಎಲ್ಲೆಲ್ಲು !
ಸಾವಿರರೂಪದಿ ನಸುನಗುತಿರುವಳು, ಬೆಳೆದಿದೆ ತುಳಸಿಯು ಕಲ್ಲಲ್ಲು ;
ಗೋಪೀಗೋಪರ ಕ್ರೀಡನ ನೋಡಲು ತಳೆದಳೊ ತುಳಸಿಯು ಬಹುರೂಪ
ಎಂಬೊಲು ಕಾಂಬಳು ಸತಿಯರ ತಲೆವಣಿ, ಹದಿಬದೆ ಇಂತಹಳಪರೂಪ ! ೪

ಕಾಮಸಮಾಧಿಯ ಬ್ರಹ್ಮನಮಾನಸಮೋಹಕಸೃಷ್ಟಿಯೊಯೆಂಬಂತೆ
ಋತುಗಳರಾಜನು ರತಿಪತಿಕಾಮನು ಸುಂದರಬನವನು ನೆಟ್ಟಂತೆ
ಜಗದಗಲದಲಿಹ ಸೌಂದರ್ಯವೆ ತಾನಿಲ್ಲಿಯೆ ಕುಜಲತೆಯಾಗಿಹುದು ;
ನಂದನ ಪರಮಾನಂದದ ಪುರುಷಗೆ ನಂದವನೀಯಲು ಬಂದಿಹುದು ೫

ವಸಂತ ಬಂದನು ಪ್ರಾಯವನಿತ್ತನು ಗಿಡಕೆಗಿಡಕೆ ಲತೆಲತೆಗಳಿಗೆ ;
ಬಂದನು ಮಂದಾನಿಲ ಮೆಲುದನಿಯಲಿ ಉಸುರಿದ ಪ್ರೇಮವ ಹೂಹೂಗೆ :

ಉಸಿರುತ ಕಾಮನು ಸೊಬಗಿನಧಾಮನು ನಲ್ಲನಲ್ಲೆಯರ ನೇಮವನು
ಬಂದನು, ಪಂಚಮ ಪಂಚಮಸರದಲಿ ಹಾಡಿತು ಪ್ರೇಮದ ಕವನವನು ೬

ನಲ್ಲನ ಸೋಂಕಿಗೆ ನಲ್ಲೆಯ ತನುತನು, ನಲ್ಲೆಯ ಸೋಂಕಿಗೆ ತನುಪತಿಯ
ಅಡಿಯಿಂ ಮುಡಿವರ ಪುಲಕಿತವಾದೊಲು, ಸ್ಪರುಶಕೆ ಬೀಸುವ ಮಾರುತನ
ಹಸಿರಾಯಿತು ಧರೆ, ಚಿಗುರಾದವು ನೆರೆ ಆ ಬನಕುಜಲತೆ-ಕಂಟಿಗಳು
ಹೂತವು ಮಲ್ಲಿಗೆ ಪಾದರಿ ಕೇದಿಗೆ ಸೇವಂತಿಗೆ ಇರವಂತಿಗಳು ೭

ಹಸಿರನು ಉಟ್ಟಳೊ ವೃಂದಾವನವನಿತೆಯು ಎಂಬಂತಿರೆ ಬನವೆಲ್ಲ
ಹಸುರಿನ ಪಸಲೆಯ ಪಸದನ ಹೊಂದಿತು, ಚೆಂದಳಿರನು ಗಿಡಗಿಡವೆಲ್ಲ ;
ಮಾಮರ ಕೋದಿತು ತಳಿರಿನ ತೋರಣ, ಅಸುಗೆಯು ಚಿಗುರಿನ ಚೆಲುಗುಡಿಯ
ಎತ್ತಿತು, ಲತೆಗಳು ಮಾಲೆಯ ಹಿಡಿದವು, ಸುನಾದ ಹೆಚ್ಚಿತು ಆರಡಿಯ ೮

‘ ಕೃಷ್ಣಮುರಾರೇ, ಕೃಷ್ಣಮುರಾರೇ ’ ಎನ್ನುತ ಕೂಗಿತು ಕೋಗಿಲೆಯು,
‘ ಹರಿ ಹರಿ, ಸಿರಿವರ, ಗಿರಿಧರ ’ ಎನ್ನುತ ತೊದಲುತ ಗಳಪಿತು ಶುಕಕುಲವು ;
‘ ಬ್ರಹ್ಮಾನಂದವನೀಯೆ ಮುಕುಂದನು ಬಂದಪ ಬೃಂದಾಬನಕೆ ’ಂದು
ಗಾನವಗೈದಿತು ತುಂಬಿಯ ಬಂಬಲು, ಥಕಥಕ ಕುಣಿದಿತು ಶಿಖಿಕುಲವು ೯

ನನ್ನಯ ತೇಜಕೆ ಪತಂಗಕಾಂತಿಯು ಎಂದಾದರು ಸರಿಯಾದೀತೆ ?
ಶ್ರೀಹರಿಕಾಂತಿಯ ಮುಂದಕೆ ನನ್ನಯ ತೇಜವು ಬೆಳಕನು ಬೀರೀತೆ ?
ಎನ್ನುತ ಆ ಹರಿ ಈ ಹರಿತೇಜಕೆ ಹೆದರಿಯೆ ಹೋದನೊ ಎಂಬಂತೆ
ಪಡುವಣ ಕಡಲಲಿ ಕಣ್ಮರೆಯಾದನು ಕಾಲವು ಕ್ಷಣಕ್ಷಣ ಸರಿದಂತೆ ೧೦

ನೇಸರು ಸರಿದರು ಮುಗಿಲರಮನೆಯಾ ಬೆಡಗೇನಿನಿಸೂ ಕೆಡಲಿಲ್ಲ,
ಅಲ್ಲು ಇಲ್ಲು ಎಲ್ಲೆಲ್ಲಿಯು ಹೊಳೆದವು ಉಡುಗಳು ಮುಗಿಲಿನ ತುಂಬೆಲ್ಲ ;
ಬಾನಬಯಲಿನಲಿ, ಹರಿಯ ಮಂದಿರದಿ ಕಾರ್ತಿಕಪೂಜೆಯು ನಡೆದಿಹುದೊ ?
ಇಲ್ಲವೆ ದೇವರ ವೃಂದವು ರಾಸಕ್ರೀಡೆಯ ನೋಡಲು ಬಂದಿಹುದೋ ೧೧

ಹಾಲುಗಡಲಿನಲಿ ಹಾದು ಬೆಂಗದಿರ ಮೂಡಣದಿಕ್ಕಿಗೆ ಬಂದಂತೆ
ಇಂದ್ರನದೆಸೆಯೊಳು ಚಂದ್ರನು ಕಂಡನು ಪ್ರಶಾಂತಮುದ್ರೆಯ ಋಷಿಯಂತೆ;
ರಜನಿರಮಣಿ ಬಂಗಾರತಬಕದಲಿ ತುಂಬಿಹೂಗಳನು ಸುರಿದಂತೆ
ಕಂಡನು ಉಡುಪತಿ, ಕಂಡವು ಉಡುಗಳು ಸಗ್ಗವೆ ಮುಗಿಲಿಗೆ ಇಳಿದಂತೆ! ೧೨

ಇಂಗಡಲೊಡಲೊಳು ಚಂದಿರ ಜನಿಸಿದನೆಂಬರು ಕವಿಗಳು ಅಲ್ಲಲ್ಲ !
ಚಂದಿರನಿಂದಲೆ ಇಂಗಡಲಾಯಿತು ಎಂಬಂತಿರೆ ಜಗತುಂಬೆಲ್ಲ
ತಿಂಗಳು ಹಬ್ಬಿತು, ಚಕೋರ ನಲಿದವು, ನಕ್ಕವು ಕುವಲಯ ಪುಷ್ಪಗಳು
ರಂಗವಲ್ಲಿಯನು ಬರೆದವು ಬನದಲಿ ವೃಂದಾವನ ಗಿಡಬಳ್ಳಿಗಳು ೧೩

ಮದನನ ಸೋದನ ದೀವಿಗೆ ಏನಿದು ? ರಾತ್ರಿಯು ನೋಡುವ ಕನ್ನಡಿಯೊ ?
ಸುಧೆಯನು ಸುರಿಯುವ ಸ್ವರ್ಣದ ಕಲಶವೊ ? ಆಗಸದೇವಿಯ ಮೂಗುತಿಯೊ ?
ಇಲ್ಲವೆ ಐರಾವತ ಸಲೆತೂರಿದ ದಧಿಯನ್ನದ ಸಿತಪಿಂಡವಿದೊ ?
ಎಂಬಂತಿರೆ ಮೆಲ್ಲನೆ ಮೇಲೇರ್ದನು ಚಂದ್ರನು ಬಾನಿನ ಅಂಗಳಕೆ ! ೧೪

ಅಮೃತಕಿರಣ ನಿಜಕರದಿಂ ತುಂಬಿದ ನೆಲದಿಂ ಬಾನಿಗೆ ಅಮೃತವನು,
ಅಮೃತಕರನ ಕರಸೋಂಕಲು ಬೃಂದಾವನ ಕರೆಯಿತು ಹೂಮಳೆಯನ್ನು ;
ನೆಲವೇ ಹೂವಿನ ಹಾಸಿಗೆಯಾಯಿತು ರಕ್ಷಿಸೆ ಗೋಪಿಯರಡಿಗಳನು
ಮಂದಮಾರುತನು ಸುಳಿಯಲು ತೊಡಗಿದ ಅರುಹುತು ಮುರಾರಿ ಬರವನ್ನು ೧೫

ದವನದ ಹುಣ್ಣಿಮೆ ಸೊಬಗನು ನೋಡುತ ಶ್ರೀಹರಿ ನಕ್ಕನು ಮನದಲ್ಲಿ,
ರಸಮಯಸಮಯದಿ ರಾಸಕ್ರೀಡೆಯನಾಡಲು ಬಯಸಿದ ಬನದಲ್ಲಿ ;
ಸುಂದರಕಾಲದಿ ಸುಂದರಹೃದಯದ ಸುಂದರರೂಪದ ಗೋಪಿಯರ
ಮನಗಳ ನಲಿಸಲು ತಣಿಸಲು ಬಯಸಿದ ಯಮುನಾಕುವಲಯನೇತ್ರೆಯರ ೧೬

ಫಾಲಕೆ ಹಚ್ಚಿದ ಗೋಪೀಚಂದನ, ಉಟ್ಟನು ಪೀತಾಂಬರವನ್ನು
ನವಿಲುಗರಿಯತಲೆದೊಡವನು ತೊಟ್ಟನು, ಇಟ್ಟನು ಕತ್ತುರಿ ತಿಲಕವನು ;
ಘನಘನದೇಹಕೆ ಒಪ್ಪುವ ಮಿಂಚಿನಹೂಗಳಹಾರವ ಹಾಕಿದನು
ಅಧರಸುಧೆಯು ಸೂಸುತ್ತಿರೆ ರಾಗದಿ ಬಂದನು ನುಡಿಸುತ ಕೊಳಲನ್ನು ೧೭

ಪದುಮನಾಭನಾಪಾದಸ್ಪರುಶಕೆ ಭೂರಮೆ ಮೈಸೊಂಪೇರಿದುದು,
ಹರಿಯು ಬಂದ, ಮುರಹರನು ಬಂದನೆಂದೆಲ್ಲಬನವು ನುಡಿಗೊಡುತಿಹುದು ;
ಹರಿಯ ರಾಗರಸ ಬೆರೆತು ಸುಧಾಕರಕಾಂತಿ ಕಾಂತಿಯುತವಾಗಿಹುದು,
ವನದಮೌನವೇ ಕೊಳಲಿನಗಾನಕೆ ತಾಳವು ಹಿನ್ನೆಲೆಯಾಗಿಹುದು ೧೮

“ ನಲಿಸುವೆನೆನ್ನಯ ಗಾನದಿ ಜನವನು, ತಣಿಸುವೆ ಶರಣರ ಮನಗಳನು ;
ನಲಿದು ನಲಿಸುವೆನು, ನಲಿಸಿ ನಲಿಯುವೆನು, ಜಗದಿ ನಾನು ಒಂದಾಗುವೆನು ;

ಆತ್ಮನಾನು ಪರಮಾತ್ಮನಾನು, ದಿಟನಾನು, ಇರುವೆ ಶಿವಸೊಬಗಿನಲಿ"
ಎಂಬುದ ತೋರುವೆನೆಂದು ಬಂದ ಹರಿ ಮಂದಾರದ ಗಿಡದಡಿಯಲ್ಲಿ . ೧೯

ಆವಭಂಗಿಯಲಿ ಶ್ರೀಹರಿ ನಿಂತನು ಎಂಬುದ ಬಣ್ಣಿಸಲೆನ್ನಳವೆ?
ಒಳಗಿನ ಕಣ್ಣಿಗೆ ಚಿತ್ರವು ಕಾಂಬುದು ಕಂಡುದ ಬಣ್ಣಿಸೆ ಬಾರದಿದೆ!
ಕುಣಿವ ಕೇಕಿ ಗರಿಗೆದರಿ ನಿಲ್ಲುವೊಲು ಕೊಂಕಿಸಿ ಕೊರಳನು ಎಡಗಡೆಗೆ
ಕೇಶವ ವಾಸವ ಬಾಜಿಸ ತೊಡಗಿದ ನಲಿಯೆ ನವಿಲುಗರಿ ಸಿರದೆಡೆಗೆ ೨೦

ತಿಂಗಳಸೊಬಗನು ಮನದಿ ತುಂಬಿ ಶ್ರೀಕಂಠ ಕೊಳಲ ಬಿಡದೂದಿದನು;
ಸುಗ್ಗಿಯ ಸೊಬಗನು ನೆನೆಯುತ ಸಿರಿವರ ಕೊಳಲನು ಕೊರಳನು ಮಾಡಿದನು;
ಸುಧೆಯ ಸಾಗರವ ನಾದದಿಂದ ತುಂತುಂಬುವಂತೆ ಕೊಳಲೂದಿದನು
ಹಾಡಿನಕಡಲಲಿ ಎಲ್ಲಾ ವಿಶ್ವವು ಮುಳುಗುವಂತೆ ಹರಿಯೂದಿದನು ೨೧

ವಾಸವನಾದವು ಆಗಸ ಮುಟ್ಟಿತು ಕೇಳಿಚಂದ್ರ ತಲೆದೂಗಿದನು
ನಕ್ಷತ್ರದ ಗಣ ಮೈಕಿವಿಮಾಡುತಮಿನುಕದೆ ಮಿಣುಕದೆ ಕೇಳಿದವು;
ಸಾವಿರಕಿವಿಗಳು ಇಲ್ಲವೇಕೆ ನನಗೆಂದು ಇಂದ್ರ ಮಿಡುಮಿಡುಕಿದನು
ಯಮುನಾವಾಹಿನಿ ಕಳಕಳಮಾಡದೆ ಮಂದಂಮಂದಂ ನಡೆದಿಹಳು ೨೨

ಕಸ್ತೂರಿಕಡ್ಡಿಯ ವಾಸನೆ ಕೂಡಲೆ ಪಸರಿಸುವಂತೆಯೆ ಎಲ್ಲೆಡೆಗು
ರಾತ್ರಿರಾಣಿಹೂವಿನ ಇನಿಗಂಧವು ಹಬ್ಬುವಂತೆಯೆ ನಾಲ್ದೆಸೆಗು;
ಮುರಲಿಯನಾದವು ಗೋಕುಲ ಸೇರಿತು, ಎಬ್ಬಿಸಿತೆಲ್ಲಾ ಗೋಪಿಯರ
ನಡೆದರು ನಾದವು ಬಂದೆಡೆ ಕರೆಯಲು ಹರಿಯು ಹೆಸರುಗೊಂಡವರವರ ೨೩

ಕಿತ್ತಳೆಕೆನ್ನೆಯ ಸಂಪಿಗೆಮೂಗಿನ, ಕೆಂದಳಿರಡಿಗಳ ಅಧರಗಳ
ಕದಳಿಯೂರುಗಳ ಒಪ್ಪಿಡಿನಡುಗಳ ಆಕರ್ಣಾಯತನೇತ್ರಗಳ
ಬೆಳುಗಾಯ್‌ಮೊಲೆಗಳ ಆರಡಿಕುರುಳ್ಗಳ ಶ್ರೀಯಾಕಾರದ ಕರ್ಣಗಳ
ಗೋಪವನಿತೆಯರು ನಲಿಯುತ ಬಂದರು ಏಳಿಸೆ ಗನುನವು ಹಂಸಿಗಳ ೨೪

ಬಂದಳು ಪಸದನ ಗೈಯುತ ಕುಳಿತಿಹ ಕಮಲಮುಖಿಯು ವೃಂದಾವನಕೆ
ನಾದ ಕೇಳಲೊಡನೋಡುತ ಬಂದಳು ಮಲ್ಲಿಗೆ ಎಡಹುತ ಪದಪದಕೆ;
ಹಾಲನು ಕರೆಯುವ ಗೌರಿಯು ಬಂದಳು ಹಿಡಿದೇ ಪಾತ್ರೆಯ ಕೈಯಲ್ಲಿ
ಇನಿಯನ ಅಪ್ಪುಗೆ ಸಡಲಿಸಿ ನಡೆದಳು ಕಾಮಾಕ್ಷಿಯು ಆ ಕ್ಷಣದಲ್ಲಿ! ೨೫

ಬಂದಳು ಚಂದಿರೆ ಕಾಮನ ಸಿಂಧುರೆ ಬಂದಳು ಲಲಿತೆಯು, ವನಲತೆಯು,
ಬಂದರು ಭಾರತಿ, ಮಾಲತಿ, ಕಲರುತಿ, ಸರಸತಿ, ವದರತಿ, ಕೀರುತಿಯು ;
ಬಂದಳು ನಾಗಿಣಿ ಕಾಮನ ಅರಗಿಣಿ, ಬಂದಳು ರಾಗಿಣಿ ಬನರಾಣಿ,
ಬಂದಳು ಉತ್ಪಲಲೋಲಲೋಚನೆಯು, ಬಂದಳು ಕಾಳೋರಗವೇಣಿ ೨೬

ಬಂದಳು ಮುಕ್ತೆಯು ಹರಿರಸುರಕ್ತೆಯು, ಬಂದಳು ಚಿತ್ರೆಯು ಮಧುಪಾತ್ರೆ,
ಬಂದರು ಕಾದಂಬರಿ ಶಾತಂಭರಿ ಕಿಂಕಿಣಿ ಗುಣಮಣಿ ವರನೇತ್ರೆ ;
ಬಂದಳು ಗೋಮಿನಿ ಗೋಕುಲಭಾಮಿನಿ ಸಿರಿವರಪುರುಷನ ಕಾಮಿನಿಯು
ಬಂದರು ಗೋಗಳ ಕುಲವೇ ಬರುವೊಲು ಗೋಕುಲದೆಲ್ಲಾ ಗೋಪಿಯರು ೨೭

ನಗೆಮೊಗದಿಂದೊಗೆತರಲು ನಗೆಗಡಲು ಬಂದಳು ನಗುನಗುತಿಂದುಮುಖಿ,
ತಿಂಗಳಕಾಂತಿಯು ಉಗುರ್ಗಳಹೊಗರಿಂ ಪೆರ್ಚುಲು ಬಂದಳು ಚಂದ್ರನಖಿ ;
ನಡಗೆಯ ಬೆಡಗಿಗೆ ಮುಡಿಯರಳಲ್ಲುಗೆ ಕುಣಿಯುತ ಬಂದಳು ಕುಸುಮಾಂಗಿ,
ಮನದ ಭಿತ್ತಿಯಲಿ ಶ್ರೀಹರಿಚಿತ್ರವ ಚಿತ್ರಿಸಿ ಬಂದಳು ಚಿತ್ರಾಂಗಿ ೨೮

ಬಂದಳು ವಿಮಲೆಯು, ನಡೆದಳು ಕಮಲೆಯು, ಬಂದಳು ಬಿಂಕದ ಶಾರದೆಯು,
ಕೋಕಿಲೆ, ಗೀತಿಕೆ. ಷಟ್ಪದಿ, ದ್ರುತಪದಿ, ಮಂದಾಕ್ರಾಂತೆಯು, ಚಂಚಲೆಯು
ಬಂದರು ನಲಿಯುತ, ಬಂದಳು ರಾಧೆಯು ಹೃದಯವಾಸಿಹರಿಪ್ರಣಯಿನಿಯು
ನಾದದ ನದಿಯಲಿ ತೇಲುತ ಬಂದರು ಗೋಕುಲದೆಲ್ಲಾ ಗೋಪಿಯರು ೨೯

ಗೆಜ್ಜೆಯುಲಿಯೆ, ಕಣ್ನೋಟ ನಲಿಯೆ, ಇಳಿಹೆರಳು ಅಲೆಯೆ ಬೆಂಬಳಿಯಲ್ಲಿ,
ಕುರುಳು ಕುಣಿಯೆ, ಪೊರವಾರು ಪೊಡರೆ, ಪೂಮಾಲೆ ಅಲೆಯೆ ಚೆಲುಗೊರಳಲ್ಲಿ,
ಬಣ್ಣಬಣ್ಣಗಳನುಟ್ಟು ಕಟ್ಟಿ ವೊಲೆಗಟ್ಟು ಕಟ್ಟಿಕಾಲ್ಗೆಜ್ಜೆಗಳ
ಗೋಪವನಿತೆಯರು ಬಂದರು, ತಂದರು ಬೇರೆಬೇರೆ ಹೂಮಾಲೆಗಳ ೩೦

“ಬಾ, ಬಾ, ಮಲ್ಲಿಗೆ, ಬಾರ ಕೋಕಿಲೇ, ಬಾರೇ ಬಿಂಕದ ಶಾರದೆಯೇ,
ಬನ್ನಿಬನ್ನಿರೇ ಷಟ್ಪದಿ ದ್ರುತಪದಿ ಮುಂದಾಕ್ರಾಂತೆಯೆ ಚಂಚಲೆಯೇ,
ಬಾರೆ ಬಾರೆ ಬಾ, ನೀರೇ ರಾಧೇ, ಸಹಿಸೆನು ವಿರಹದ ಬಾಧೆಯನು
ಬನ್ನಿ ವಿರಹಿಗಳೆ, ಬನ್ನಿ ಪ್ರೇಮಿಗಳೆ, ನಲಿದು ಹೊಂದುವಾಮೋದವನು” ೩೧

ಎಂದು ವಿರಹ ಹೊರಸೂಸುವಂತೆ ಶ್ರೀಹರಿಯು ವೇಣುವಂ ಬಾಜಿಸಲು
ಓಡಿಬಂದರೋ ಗೋಪವನಿತೆಯರು ಯಮುನಾತೀರವ ಸಾರಿದರು ;

ಸಾವಿರಾರು ಗೋಪಿಯರೊಡಗೂಡಿದ ಕೃಷ್ಣನು ವೃಂದಾವನದಲ್ಲಿ
ಕಂಡನು ಅಗಣಿತತಾರಾಪರಿವೃತ ರಾಜನಂತೆ ಆಗಸದಲ್ಲಿ ೩೨

ಅಡಿಯ ಗೆಜ್ಜೆ ಝಣಝಣಿಸೆ ಹೆಜ್ಜೆ ಹಾಕಿದನು ಕೃಷ್ಣನಾಕ್ಷಣದಲ್ಲಿ
ಹರಿಯ ಬಯಕೆಯನು ತಿಳಿದು ಗೋಪಿಯರು ನಲಿದರು ಮನದಲಿ ಬನದಲ್ಲಿ;
ಹುಣ್ಣಿಮೆ ಸೊಬಗನು ವಾಸವಮುಖದಿಂ ಸೊಗಸೆ ಕೇಶವನು ಹಾಡಿದನು
ಕೃಷ್ಣನಂಕಮಾಲೆಯನು ಗೋಪಿಯರು ಇಂಚರಧ್ವಿಂದಲಿ ಹಾಡಿದರು ೩೩

ನಂದಗೋಪನಾಕಂದ ಮುಕುಂದಾ, ಸುರಮನುಮುನಿಗಣನುತಚರಣಾ,
ಜಗದೋದ್ಧಾರಣಕಾರ್ಯತತ್ಪರಾ, ಭಕ್ತವತ್ಸಲಾ ಘನನೀಲಾ;
ಪರಮಪ್ರೇಮಮಧುವನ್ನು ಈಂಟಿಸೋ ಪ್ರೇಮಮೂರುತಿಯೆ ಪರಮೇಶಾ,
ಹಿಡಿ, ಕುಡಿ, ಕೊಡುವೆವು ನಲ್ಮೆವಾಲು, ಕಳೆ ಜನನ ಮರಣಗಳ ಜಗದೀಶಾ ೩೪

ನಿನ್ನಿಂದಲೆ ಜಗ ಜನಿಸಿಬಂದಿಹುದು, ಉಳಿದು ಬೆಳೆದಿಹುದು ನಿನ್ನಿಂದಾ,
ನಿನ್ನಿಂದಲೆ ತಿರೆ ಪ್ರಳಯಹೊಂದುವದು ಮತ್ತೆ ಜನಿಸುವದು ನಿನ್ನಿಂದಾ;
ನೀನೆ ಕಾರಣನು ಸರ್ವಕ್ರಿಯೆಗಳಿಗೆ, ಇಲ್ಲ ನಿನಗೆ ಸಂಸೃತಿಬಂಧಾ
ಗೋಕುಲಪಾಲಕ ಕುಲಪತಿ, ಬಯಸುವೆವಾವು ಮುಕ್ತಿಯನು ನಿನ್ನಿಂದಾ ೩೫

ಇಂತು ಪಾಡುತಲಿ ಮಂದಗಮನೆಯರು ವಾಣಿವೀಣೆಕಲಕಂಠಿಯರು
ಮರೆಯುತ ಮನವ್ಮೈ, ಹಿಡಿಯುತ ಕೈಕೈ, ಕುಣಿಯುತ ಥಕಥೈ ಗೋಪಿಯರು;
ಹೊಳೆಯುವ ಗ್ರಹಗಣ ದಿನಪತಿಸುತ್ತಲು ತಿರುಗುವಂತೆ ಆಗಸದಲ್ಲಿ
ರತ್ನಕಾಂತೆಯರು ಕೃಷ್ಣನ ಸುತ್ತಲು ನಲಿದರು ಕೆಲೆದರು ಬನದಲ್ಲಿ ೩೬

ಕೃಷ್ಣಬಾರೊ, ಶ್ರೀ ವಿಷ್ಣುಬಾರೊ, ಬಾ ತೃಷ್ಣೆಕಳೆಯೊ ಗಡ ಕೃಷ್ಣೆಯರ,
ಕಪಟನಾಟಕದ ಸೂತ್ರಧಾರ ಕೋ ನೃತ್ಯವ ನಿನ್ನಯ ಭಕ್ತೆಯರ,
ಎಂದು ತಾಳಲಯ ಬಿಡದೆ ಹಾಡುತಲಿ ಹಿಂದೆ ಮುಂದೆ ಮೇಲ್ ಕೆಳಗಡೆಗು
ಚಪ್ಪಳೆ ತಟ್ಟುತೆ ಕೈಪರೆಕುಣಿತವ ಕುಣಿದು ತೋರಿದರು ಗೋಪಿಯರು ೩೭

ಕೂರ್ಮರೀತಿಯಿಂದೊಮ್ಮೆ ಒಮ್ಮೆ ವಿಭ್ರಮದ ವೇಗದಿಂ ಮತ್ತೊಮ್ಮೆ
ಮುಂದೆ ಹಿಂದೆ ಎಡಬಲಕೆ ತಿರುಗಿ, ಮುಂಬರಿದು ಹಿಂಬರುತಲಿನ್ನೊಮ್ಮೆ
ಕೈಯ ದಂಡಗಳು ಖಣಿಲು ಖಣಿಲು ಖಣಿ, ಖಣಿಲು ಖಣಿಲನುಡಿಗೊಡುತಿರಲು
ಕೋಲಿನಾಟದಲಿ ಗೋವಳರಾಯನ ಮನವ ತಣಿಸಿದರು ಗೋಪಿಯರು ೩೮

ಕೃಷ್ಣಹೃದಯಗಳ ಕೃಷ್ಣೆಯರೆಲ್ಲರು 'ಕೃಷ್ಣಕೃಷ್ಣಕೃಷ್ಣಾ' ಯೆನುತ-
ಹೊರಗಣ್ ಮುಗಿಯುತ ಒಳಗಣ್ ತೆರೆಯುತ ಮನಬನಜಗಗಳಮರೆಯುತ್ತ
ಹರಿಯ ಚಕ್ರ ತಿರುತಿರುಗುವಂತೆ ಗರಗರನೆ ಗಿರನೆ ವರಗೋಪಿಯರು
ಹರಿಯ ಸುತ್ತಲೂ ತಿರುಗುತಲಿದ್ದರು ಆನಿತಂಬಚಳವೇಣಿಯರು ೩೯

ವೃಂದಾವನ ಗಿಡಬಳ್ಳಿ ತಿರುಗಿದವು ಕರೆಯುತ ಹೂವಿನ ಮಳೆಯನ್ನು
ಕಾಳಿಂದಿಯ ತೆರೆ ಹಿಂದೆ ತಿರುಗಿದವು ನೋಡಲು ರಾಸಕ್ರೀಡೆಯನು ;
ಗ್ರಹಗಳು, ಉಡುಗಳು, ಸಪ್ತಋಷಿಗಳು, ಸೂರ್ಯ ಚಂದ್ರ ಶುಕ್ರಾದಿಗಳು
ಒಂದೆ ಮನದಿ ಮೈದುಂಬಿ ಸಿರಿವರನ ಗಾನಕೆ ಕುಣಿಯಲು ತೊಡಗಿದರು ೪೦

ಕುಣಿಯಲು ಹೂಬನ ಕುಣಿಯಲು ಭೂಬನ ಕುಣಿಯಲು ಗೋಪೀಜನವೃಂದ
ಹಾಡುತ ಕುಣಿದರು ರಾಧಾಕೃಷ್ಣರು ತುಂಬಲು ಭುವನವನಾನಂದ ;
ಭಕ್ತಿಕಡಲು ಹೊರಸೂಸಿ ಹರಿಯುತಿರೆ ಆಯಿತು ವೃಂದಾವನ ಭುವನ,
ಜಗದ ಆದಿಯಿಂ ನಡೆದಿದೆ ರಾಸಕ್ರೀಡೆಯು ಶರಣಮನೋಹರಣ ! ೪೧

ಅಗಣಿತಸಂಖ್ಯೆಯ ಗೋಪೀಜನಗಣಿತಗಳಿಗೆ ಮೋಹಕರೂಪಗಳ
ತೋರಿದ ನರಹರಿ ಭಕ್ತೋದ್ಧಾರೀ ತೋರಿದ ತನ್ನಯ ಲೀಲೆಗಳ ;
ಅಲ್ಲಿಯು ಕೃಷ್ಣನು, ಇಲ್ಲಿಯು ಕೃಷ್ಣನು, ಎಲ್ಲಿಯು ಕೃಷ್ಣನು ಎಂಬುವದ
ಅಂದು ತೋರಿದನು ವೃಂದಾವನದಲಿ ರಾಸಕೇಳಿಯಲಿ ಗೋವಿಂದ ೪೨

ಜಗವನಲಿಸಿ ನಲಿಯಲಿಕೆ ರಾಗದಿಂ ಕೊಳಲ ಬಾಜಿಸಿದ ಗೋವಿಂದ
ಗೋಪವನಿತೆಯರ ಮನಗಳ ತಣಿಸಲು ಕುಣಿದನು ಅವರೊಡ ಗೋವಿಂದ,
ರಾಸಕೇಳಿಯಾನಂದ ಕಡಲಿನಲಿ ಅದ್ದಿದ ಜಗವನು ಗೋವಿಂದ
ತನ್ನಯ ಲೀಲೆಯ ನೋಡುತ ತಾನೇ ನಲಿದನು ಮನದಲಿ ಗೋವಿಂದ ೪೩

ಹರಿಯು ನಿಂತು ಕೊಳಲೂದುತಲಿದ್ದನು ತುಂಬಿತು ನಾದವು ಭುವನವನು
ಸುರಕಲ್ಲೋಲಿನಿ ಬರುವೊಲು ಧುಮುಕಿತು, ತುಂಬಿತು ಜಗಗಳ ಕಿವಿಗಳನು ;
ನಿಲ್ಲಿಸಿ ಮನಗಳ ಹರಿಯಧ್ಯಾನದಲಿ ಕೃಷ್ಣನ ಸುತ್ತಲು ತಿರುಗಿದರು
ಗೋಪವನಿತೆಯರು ತಿರುಗುತಲಿರುವರು ನಕ್ಷತ್ರದ ಗಣವಾಗಿಹರು ೪೪

ರಾಸಕ್ರೀಡೆಯು ನಡೆದಿದೆ ನಡೆದಿದೆ ವಿಶ್ವದವೃಂದಾವನದಲ್ಲಿ
ವಿಶ್ವೇಶ್ವರ ಕೊಳಲೂದುತಲಿರುವನು ವಿಶ್ವಮೋಹಕಸ್ವರದಲ್ಲಿ

ನಾದೋದಧಿಯಲಿ ಮುಳುಗಿ ಮುಳುಗಿ ಮೇಲೇಳುತಲಿರುವವು ಲೋಕಗಳು
ವಾಸವನಾದಕೆ ನರ್ತಿಸುತಿರುವವು ಸೂರ್ಯಚಂದ್ರತಾರಾದಿಗಳು ೪೫

ಗೊಲ್ಲನ ಕೊಳಲಿನ ಗಾನಕೆ ನಲಿದರು ಗೋಪಿಕೆಯರು ವೃಂದಾವನದಿ
ಗೊಲ್ಲನ ಕೊಳಲಿನ ಗಾನಕೆ ನಲಿವವು ಜಗಜಗಗಳು ಆಕಾಶದಲಿ,
ಗೊಲ್ಲನ ಗಾನಕೆ ಕಿವಿಗಳ ನಿಗುರಿಸಿ ನಿಂತಿರುವವು ಗೋಗೋವುಗಳು
ಗೊಲ್ಲನ ಗಾನವ ಕೇಳುತ ಶರಣರು ಬ್ರಹ್ಮಾನಂದವ ಹೊಂದುವರು ೪೬

ವಿಶ್ವದವೃಂದಾವನದಲಿ ಕುಳಿತು ಗೋಪಾಲಕ ಕೊಳಲೂದುವನು
ಕಾಣದ ಕಾಣುವ ಲೋಕಗಳೆಲ್ಲವ ವಿವಿಧ ಸ್ವರಗಳಿಂ ಸೃಜಿಸಿದನು ;
ಶ್ರೀಹರಿ ಶುಭಸಂಗೀತವ ಕೇಳುತ ಲೋಕಗಳೆಲ್ಲಾ ಬಾಳಿಹವು
ರುದ್ರಸ್ವರದಲಿ ಬಾಜಿಸತೊಡಗಲು ಜಗಕೆ ಪ್ರಳಯ ಮೈದೋರುವದು ೪೭

ಹೊರಕಿವಿಗಳಿಗಿದು ಕೇಳದು ಕೇಳದು ರಂಗನಮುರಲಿಯ ಸಂಗೀತ,
ಒಳಗಿವಿಗಳ ತೆರೆ, ದೊರಕಿಸು ರಂಗನ ಮುರಲಿಯ ನಾದದ ಆನಂದ ;
ಈ ಆನಂದವೆ ಬ್ರಹ್ಮಾನಂದಂ, ಪರಮಾನಂದಂ, ತಾರಕವು !
ಇದನು ಹೊಂದಿದಗೆ ಜನನ ಮರಣಗಳ ಬಂಧನವಿಲ್ಲದು ನಿಶ್ಚಿತವು ೪೮

ಹೊರಗಿನ ಸ್ವರಗಳು ಎಲ್ಲಾ ಪಸ್ವರಗಳು ಅರಕ್ಷಣಸುಖವೀಯುವವು ;
ಶ್ರೀಹರಿ ಮುರಲಿಯ ಸ್ವರವೇ ಸುಸ್ವರ, ಶ್ಯಾಶ್ವತ ಹೃತ್ಸುಖದಾಯಕವು ;
ಮುರಲಿಯ ನಾದದ ಶೋಧನೆಯಲ್ಲಿಯೆ ಶರಣರು ಜೀವನ ಸವೆಸಿದರು,
ನಾದೋದಧಿಯಲಿ ಧುಮುಕುತ ಈಜುತ ಅಮರಾನಂದವ ಹೊಂದಿದರು ೪೯

ನಿನ್ನಯ ಮುರಲಿಯ ಮಧುರಗಾನವನು ಆಲಿಸಬಯಸುವೆ ಗೋವಿಂದ,
ಆ ಸುಖವನು ಕೊಡು, ಒಡೆಯ ಮುನಿಸು ಬಿಡು, ಉದ್ಧರಿಸೆನ್ನನು ಗೋವಿಂದ,
ಎನ್ನ ಗೋಪಿಯನು ಮಾಡು ಇಲ್ಲದಿರೆ ಗೋವನು ಮಾಡೈ ಗೋವಿಂದ,
ನಿನ್ನ ಕೀರ್ತನೆಯ ಕನ್ನಡನುಡಿಯಲಿ ಮಾಡಲು ಬಯಸುವೆ ಗೋವಿಂದ ೫೦

ಕಣೇಕಲ್ಲ ಗೋವಿಂದ

ಆನಂದವರ್ಧನನ ಕಾವ್ಯಮೀಮಾಂಸೆ

೪. ಧ್ವನಿಪ್ರಪಂಚ

ಸಾಹಿತ್ಯಸಮಾಲೋಚನೆಯಲ್ಲಿ ಧ್ವನಿತತ್ವದ ಪ್ರಾಶಸ್ತ್ಯವನ್ನು ತುಲನಾತ್ಮಕ ದೃಷ್ಟಿಯಿಂದ ಕಳೆದ ಲೇಖನದಲ್ಲಿ ವಿವರಿಸಲಾಯಿತು. ಧ್ವನಿವಿವೇಕವು ನಿಷ್ಕೃಷ್ಟವೂ ಸಾರ್ಥಕವೂ ಆಗಬೇಕಾದರೆ ಧ್ವನಿಪ್ರಪಂಚದ ಸೂಕ್ಷ್ಮಪರಿಚಯವು ಆವಶ್ಯಕ. ಅನಂತವಾದ ಕಾವ್ಯರಾಶಿಯಲ್ಲಿ ಧ್ವನಿಯ ವಿವಿಧ ಆವಿರ್ಭಾವ ಪ್ರಕಾರಗಳನ್ನು ಉದಾಹರಣೆಗಳ ಮೂಲಕ ತೋರಿಸುವುದು ಈ ಲೇಖನದ ಗುರಿ. ಧ್ವನಿತತ್ವದ ಸಾಧಕ ಯುಕ್ತಿಗಳನ್ನು ಹಿಂದೆಯೇ ಪ್ರತಿಪಾದಿಸಲಾಗಿದೆ; ಈಗ ಧ್ವನಿಪ್ರಪಂಚದ ಇತಿ ಮಿತಿಗಳನ್ನು ನಿರ್ದೇಶಿಸುವುದಲ್ಲದೆ ಅದರ ಆಳ ಅಗಲಗಳನ್ನು ಅಳೆದು ನೋಡಲು ಪ್ರಯತ್ನಿಸಿದೆ. ಆನಂದವರ್ಧನನ ಕಾವ್ಯಮೀಮಾಂಸೆಯನ್ನು ಕುರಿತು ಹೊರಟ ಲೇಖನಮಾಲೆಯಲ್ಲಿ ಇದೇ ಕಡೆಯದಾದುದರಿಂದ ಉಳಿದ ವಕ್ತವ್ಯಾಂಶಗಳನ್ನೂ ಸಂಗ್ರಹಿಸಿದೆ.

I

ಧ್ವನಿಯ ವಿಭಾಗವನ್ನು ಸೂಚಿಸುವಾಗ ಯಾವುದೇ ಒಂದು ನಿರ್ದಿಷ್ಟ ಕ್ರಮವನ್ನು ಅನುಸರಿಸುವುದೂ ಕಷ್ಟವಾಗುತ್ತದೆ. 'ವ್ಯಂಗ್ಯ', 'ವ್ಯಂಜಕ'ಗಳೆರಡೂ ಧ್ವನಿಯೆನಿಸುವುದರಿಂದ ಧ್ವನಿವಿಭಾಗವು ಸಾಧುವಾಗಬೇಕಾದರೆ ಈ ಎರಡೊಂದು ದೃಷ್ಟಿಗಳನ್ನೂ ಮರೆಯದೆ ಇರಬೇಕು. 'ವ್ಯಂಗ್ಯ'ವನ್ನು ಮಾತ್ರ ದೃಷ್ಟಿಯಲ್ಲಿಟ್ಟರೆ ನಾವು ಈಗಾಗಲೇ ನೋಡಿರುವಂತೆ[1] ರಸ, ಅಲಂಕಾರ, ವಸ್ತು ಎಂಬ ಮೂದೆರನಾದ ಧ್ವನಿವಿಭಾಗವನ್ನು ಹೇಳಬಹುದು. ಆದರೆ ಇವುಗಳನ್ನು ವ್ಯಂಜಿಸುವ ವ್ಯಂಜಕಗಳಾವುವು? ಎಂಬ ಪ್ರಶ್ನೆಗೆ 'ಕಾವ್ಯ' ಎನ್ನುವುದು ಸ್ಥೂಲವಾದ ಉತ್ತರ. ಕಾವ್ಯದ ಯಾವ ಅಂಶ? ಎಂಬ ಪ್ರಶ್ನೆಯು ಅದರ ಹಿಂದೆಯೇ ಏಳುವುದು. 'ಶಬ್ದ' ಮತ್ತು 'ಅರ್ಥ' ಎಂಬವೇ ಆ ಎರಡು ಅಂಶಗಳು ಎಂದು ಉತ್ತರ ಹೇಳಿದರೆ 'ಅಲಂಕಾರ'ಗಳನ್ನೂ 'ವಸ್ತು'ವನ್ನೂ ಒಂದು ರೀತಿಯಿಂದ ವಿವರಿಸಿದಂತಾಗ ಬಹುದು; ಆದರೆ 'ರಸ'ವನ್ನು ಪೂರ್ಣವಾಗಿ ವಿವರಿಸಿದಂತಾಗುವುದಿಲ್ಲ. ಶಬ್ದ ಹಾಗು ಅರ್ಥಗಳು ರಸಕ್ಕೆ ವ್ಯಂಜಕಗಳೆನ್ನುವುದು ನಿಜ; ಆದರೆ ಇವಷ್ಟೇ ವ್ಯಂಜಕ

---

[1] ಪ್ರಬುದ್ಧ ಕರ್ಣಾಟಕ, ಸಂಪುಟ ೩೧; ಸಂಚಿಕೆ ೧; ಪುಟ ೪೧.

ಗಳಲ್ಲ. ಇವುಗಳಂತೆ ನಾಮಪದ, ಕ್ರಿಯಾಪದಗಳ ವಿಶೇಷ ಪ್ರಯೋಗ, ಲಿಂಗ ವಚನಗಳ ವಿಶೇಷ, ವಿಭಕ್ತಿಗಳ ಔಚಿತ್ಯ, ಕೃತ್ಪ್ರತ್ಯಯ, ತದ್ಧಿತಪ್ರತ್ಯಯ, ಸಮಾಸಗಳ ವಿಶೇಷರಚನೆ—ಎಲ್ಲವೂ ವ್ಯಂಜಕಗಳಾಗಬಹುದು.[1] ಅಕ್ಷರ, ಪದ, ವಾಕ್ಯ, ಪ್ರಬಂಧ—ಎಂದು ಬೇರೆ ರೀತಿಯಲ್ಲಿ ಕಾವ್ಯವನ್ನು ವಿಭಜನೆ ಮಾಡಿದರೆ ಆಗ ಈ ಅಂಶಗಳೂ ಪ್ರತ್ಯೇಕವಾಗಿ ರಸಕ್ಕೆ ವ್ಯಂಜಕಗಳೇ ಆಗುವುವು[2]. ಆದುದರಿಂದ ಕೇವಲ ಶಬ್ದ, ಅರ್ಥಗಳೇ ರಸವ್ಯಂಜಕಗಳೆಂದರೆ ಅವ್ಯಾಪ್ತಿ ದೋಷವು ಸಂಘಟಿಸುತ್ತದೆ. ಇದನ್ನೇ ಇನ್ನೊಂದು ದೃಷ್ಟಿಯಿಂದ ಎಂದರೆ ವ್ಯಂಗ್ಯಾಂಶದ ದೃಷ್ಟಿಯಿಂದ ನೋಡಿದರೆ ಆಗಲೂ ದೋಷವೇ ಬರುತ್ತದೆ. ರಸವು ವ್ಯಂಗ್ಯವಾಗುವ ಸಂದರ್ಭದಲ್ಲಿ ಶಬ್ದ ಮತ್ತು ಅರ್ಥಗಳು (=ವಾಚ್ಯ ಮತ್ತು ಲಕ್ಷ್ಯ) ಇದ್ದೇ ಇರುವುವಾದರೂ, ಸರ್ವದಾ ಸಮಪ್ರಾಧಾನ್ಯದಿಂದಿರುವುದಿಲ್ಲ; ಒಂದೇ ಸಮನಾದ ಗೌಣಸ್ಥಾನವನ್ನೂ ಹೊಂದಿರುವುದಿಲ್ಲ. ಮುಖ್ಯಾರ್ಥದಿಂದ ನೇರವಾಗಿ ವ್ಯಂಗ್ಯಾರ್ಥವು ಹೇಗೆ ಬರಬಹುದೋ ಹಾಗೆಯೇ ಮುಖ್ಯಾರ್ಥ ವ್ಯಂಗ್ಯಾರ್ಥಗಳ ನಡುವೆ ಲಕ್ಷ್ಯಾರ್ಥವು ಬಂದು ಸೇರಿಕೊಳ್ಳಬಹುದು. ಮುಖ್ಯಾರ್ಥದಿಂದ ನೇರವಾಗಿ ವ್ಯಂಗ್ಯಾರ್ಥವಾದ 'ವಸ್ತು'ವು ಹೇಗೆ ಸ್ಫುರಿಸುವುದೋ ಹಾಗೆಯೇ ವ್ಯಂಗ್ಯವಾದ 'ರಸ'ವೂ ಸ್ಫುರಿಸುವುವೆನ್ನಲು ಬರುವುದಿಲ್ಲ. ವಸ್ತುಧ್ವನಿಯಲ್ಲಿ ಮುಖ್ಯಾರ್ಥಕ್ಕೂ ವ್ಯಂಗ್ಯಾರ್ಥಕ್ಕೂ ಒಂದು ಪೂರ್ವಾಪರಕ್ರಮವನ್ನು ಸಹೃದಯನು ಕಾವ್ಯವನ್ನೋದುವ ಕಾಲದಲ್ಲಿ ಸ್ಪಷ್ಟವಾಗಿ ಕಾಣಬಹುದು. ಆದರೆ ನಿರತಿಶಯವಾದ ರಸಪ್ರತೀತಿಯ ಕಾಲದಲ್ಲಿ ಮುಖ್ಯಾರ್ಥಕ್ಕೂ ರಸಕ್ಕೂ ಯಾವ ಬಗೆಯ ಪರಸ್ಪರ ಪೌರ್ವಾಪರ್ಯವೂ ಅವನ ಅನುಭವಕ್ಕೆ ಬರುವುದಿಲ್ಲ. ರಸಕ್ಕೆ ಹೇಳಿದ ಮಾತೇ ರಸಪೋಷಕಗಳಾದ ವಿಭಾವಾದಿ ಸಾಮಗ್ರಿಗಳನ್ನು ಆಸ್ವಾದಿಸುವ ಅನುಭವಕ್ಕೂ ಒಪ್ಪುತ್ತದೆ. ಇದಲ್ಲದೆ ಲಕ್ಷ್ಯಾರ್ಥಕ್ಕೂ ಮುಖ್ಯಾರ್ಥ ವ್ಯಂಗ್ಯಾರ್ಥಗಳ ನಡುವೆ ಎಡೆಯೊದಗುವ ಸಂದರ್ಭಗಳಲ್ಲಿ ಕೆಲವು ವೇಳೆ ಮುಖ್ಯಾರ್ಥಕ್ಕೆ ಸಂಪೂರ್ಣ ಬಾಧೆ ಬಂದರೆ, ಉಳಿದೆಡೆಗಳಲ್ಲಿ ಲಕ್ಷ್ಯಾರ್ಥದಲ್ಲಿಯೇ ಮುಖ್ಯಾರ್ಥಕ್ಕೂ ಅವಕಾಶ ಸಿಕ್ಕುತ್ತದೆ. ಇಷ್ಟು

---

[1] ಸುಪ್ತಿಙ್‌ವಚನಸಂಬಂಧೈಸ್ತಥಾ ಕಾರಕಶಕ್ತಿಭಿಃ |
ಕೃತ್ತದ್ಧಿತಸಮಾಸೈಶ್ಚ ದ್ಯೋತ್ಯೋಽಲಕ್ಷ್ಯಕ್ರಮಃ ಕ್ವಚಿತ್ ||

—ಧ್ವನ್ಯಾಲೋಕ, III, 16

[2] ಯಸ್ತ್ವಲಕ್ಷ್ಯಕ್ರಮವ್ಯಂಗ್ಯೋ ಧ್ವನಿರ್ವರ್ಣಪದಾದಿಷು |
ವಾಕ್ಯೇ ಸಂಘಟನಾಯಾಂ ಚ ಸ ಪ್ರಬಂಧೇಽಪಿ ದೀಪ್ಯತೇ ||

—ಧ್ವನ್ಯಾಲೋಕ, III, 2

ಸೂಕ್ಷ್ಮವಾಗಿ ವಿಮರ್ಶೆಮಾಡಿದ ಆನಂದವರ್ಧನನು ಧ್ವನಿಯ ವಿಭಾಗವನ್ನು ಹೇಳುವಾಗ, ಸುಮ್ಮನೆ ಸುಲಭವಾಗಿದ್ದರೆ ಸಾಕೆಂದು ಒಂದೆರಡು ಹೆಸರುಗಳನ್ನು ಸೂಚಿಸುವುದಕ್ಕೆ ಬದಲಾಗಿ, ಆಪಾತತಃ ಬಹು ಕ್ಲೇಶದಾಯಕವಾಗುವಂತೆ ಕಾಣುವ ಹೆಸರುಗಳನ್ನೇ ಧೈರ್ಯದಿಂದ ಆರಿಸಿಕೊಂಡಿದ್ದಾನೆ. ಅವನ ಶಾಸ್ತ್ರದೃಷ್ಟಿಗೆ ಇದನ್ನೇ ಉತ್ತಮವಾದ ಉದಾಹರಣೆಯನ್ನಬಹುದು. ಈ ಹೆಸರುಗಳ ಔಚಿತ್ಯವು ಮುಂದೆ ಸ್ಪಷ್ಟವಾಗುವುದು.

ರಸವು ವ್ಯಂಗ್ಯವೆಂದಮೇಲೆ ಇತರ ವ್ಯಂಗ್ಯಾಂಶಗಳಿಗೂ ಅದಕ್ಕೂ ಇರುವ ವ್ಯತ್ಯಾಸ ವೈಶಿಷ್ಟ್ಯಗಳನ್ನು ಸ್ಪಷ್ಟಪಡಿಸುವಂತಹ, ಮೇಲೆ ನೋಡಲಾದ ದೋಷಗಳನ್ನು ನಿವಾರಿಸುವಂತಹ, ಒಂದು ಹೊಸ ಧ್ವನಿ-ವಿಭಾಗಕ್ರಮವನ್ನು ಆನಂದವರ್ಧನನು ಸೂಚಿಸಿದ್ದಾನೆ. ಈ ವಿಭಾಗಕ್ಕೆ ಮೂಲವಾದ ತತ್ವವು ನಿಸ್ಸಂದಿಗ್ಧವಾಗಿ ಅರ್ಥವಾಗಲು ಎಷ್ಟು ಪ್ರಕಾರಗಳ ಗಣನೆಯೂ ಉದಾಹರಣೆಯೂ ಅತ್ಯವಶ್ಯವೋ ಅಷ್ಟನ್ನು ಮಾತ್ರ ಅವನು ಬರೆದಿದ್ದಾನೆ. ಧ್ವನಿಯ ಭೇದ-ಪ್ರಭೇದಗಳ ಸಂಖ್ಯೆಯನ್ನು ಬೆಳೆಸಿ ಬೆರಗುಗೊಳಿಸಬೇಕೆಂಬ ಉದ್ದೇಶ ಅವನಿಗಿರಲಿಲ್ಲ. ಅಭಿನವಗುಪ್ತ, ಮಮ್ಮಟ, ವಿಶ್ವನಾಥ, ವಿದ್ಯಾನಾಥ ಮೊದಲಾದವರು ಈ ದೃಷ್ಟಿಯಿಂದಲೇ ಹೊರಟು ಐದು ಸಾವಿರದಿಂದ ಹತ್ತುಸಾವಿರ ಚಿಲ್ಲರೆ ಭೇದಪ್ರಭೇದಗಳನ್ನು ಲೆಕ್ಕ ಹಾಕಿದ್ದಾರೆ. ವಿಶೇಷಪ್ರಕಾರ ಅಥವಾ ಪ್ರಭೇದಗಳು ಅನಂತವೆಂದು ಆನಂದವರ್ಧನನು ಹೇಳಿದುದರಲ್ಲಿ ತೃಪ್ತಿಯಿಲ್ಲದೆ ಇಂತಿಷ್ಟೇ ಎಂದು ತೀರ್ಮಾನಮಾಡುವ ಸಾಹಸ ಮಾಡಿದ್ದಾರೆ. ಗಾಳಿಯನ್ನು ಸೆರೆಹಿಡಿಯುವ ಈ ಶಾಸ್ತ್ರಕಾರರ ಸಾಹಸವು ನಮಗಿಲ್ಲಿ ಅಪ್ರಕೃತ.

II

ಧ್ವನಿವಿಭಾಗವನ್ನು ಸೂಚಿಸಲು ಪ್ರವೃತ್ತನಾದ ಆನಂದವರ್ಧನನು ಮುಖ್ಯಾರ್ಥದಿಂದ ಪ್ರಾರಂಭಿಸುತ್ತಾನೆ. ಮುಖ್ಯಾರ್ಥವು ತನ್ನ ಸ್ವತ್ವವನ್ನು ಪೂರ್ಣವಾಗಿಯೋ ಇಲ್ಲವೆ ಅಪೂರ್ಣವಾಗಿಯೋ ಕಳೆದುಕೊಂಡು ಲಕ್ಷ್ಯಾರ್ಥದ ಮೂಲಕವಾಗಿ ವ್ಯಂಗ್ಯಾರ್ಥವನ್ನು ಬೋಧಿಸಬಹುದು. ಅಥವಾ ಲಕ್ಷ್ಯಾರ್ಥದ ತಂಟೆಯೇ ಇಲ್ಲದೆ, ತನ್ನ ಸ್ವತ್ವವನ್ನು ಪೂರ್ಣವಾಗಿ ಕಾಯ್ದುಕೊಂಡು ವ್ಯಂಗ್ಯಾರ್ಥವನ್ನು ಬೋಧಿಸಬಹುದು. ಇದೇ ಮಾತನ್ನೇ ಆನಂದವರ್ಧನನ ಮಾತಿನಲ್ಲಿ ಹೇಳಿದರೆ ಧ್ವನಿಯೆಲ್ಲ 'ಅವಿವಕ್ಷಿತ ವಾಚ್ಯ' ಮತ್ತು 'ವಿವಕ್ಷಿತಾನ್ಯಪರವಾಚ್ಯ' ಎಂಬ ಎರಡು ಪ್ರಕಾರಗಳಲ್ಲಿ ಅಂತರ್ಗತವಾಗುವುದೆಂದಾಗುತ್ತದೆ, ಮೊದಲನೆಯದು ಎಂದರೆ 'ಅವಿವಕ್ಷಿತ ವಾಚ್ಯ' ಧ್ವನಿಯು ಲಕ್ಷಣಾಮೂಲ. ಇಲ್ಲಿ ವಾಚ್ಯ ಅಥವಾ ಮುಖ್ಯಾರ್ಥವು ವಿವಕ್ಷಿತವಲ್ಲ, ಮುಖ್ಯವಲ್ಲ. ಲಕ್ಷ್ಯಾರ್ಥದಲ್ಲಿಯೇ ಅಲ್ಪಾಂಶದಿಂದ ಅದು ಲೀನವಾಗಿ

ಹೋಗಬಹುದು ಅಥವಾ ಸಂಪೂರ್ಣವಾಗಿ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳ ಬಹುದು. ಮೊದಲು ಹೇಳಿದಂತಾದರೆ ಅದನ್ನು 'ಅರ್ಥಾಂತರಸಂಕ್ರಮಿತವಾಚ್ಯ' ವೆನ್ನುತ್ತೇವೆ. ಎರಡನೆಯ ಪಕ್ಷದಲ್ಲಿ ಅದನ್ನು 'ಅತ್ಯಂತತಿರಸ್ಕೃತವಾಚ್ಯ' ವೆನ್ನುತ್ತೇವೆ. ಹೀಗೆ ಈ ಎರಡೂ ಅವಿವಕ್ಷಿತವಾಚ್ಯಧ್ವನಿಯ ಎರಡು ಒಳಭೇದ ಗಳಾಗುತ್ತವೆ. ಲಕ್ಷಣಾವ್ಯಾಪಾರವು ಪದನಿಷ್ಠವಾದುದರಿಂದ ಈ ಬಗೆಯ ಧ್ವನಿಯ ವ್ಯಾಪ್ತಿಯು ಬಹಳ ಸಂಕುಚಿತ. ಪ್ರತ್ಯೇಕ ಪದಗಳ ಸ್ವಾರಸ್ಯವನ್ನು ಹುಡುಕುವಾಗ ಮಾತ್ರ ಇದು ಗೋಚರವಾಗುತ್ತದೆ. ಪ್ರಸಿದ್ಧವಾದ ರೂಪಕ, ಅತಿಶಯೋಕ್ತಿ ಅಲಂಕಾರಗಳ ವ್ಯಾಪ್ತಿಯನ್ನು ಸೇರದೆ, ಲಕ್ಷಣಾವ್ಯಾಪಾರವು ಸೌಂದರ್ಯ ವಿಶೇಷವನ್ನು ತರುತ್ತಿರುವ ಪದಪ್ರಯೋಗಗಳೆಲ್ಲ ಈ ಬಗೆಯ ಧ್ವನಿಗೆ ಉದಾಹರಣೆ. ಭಾವಾವೇಶದಲ್ಲಿರುವ ನಾಯಕನ ಒಂದು ತಿರಸ್ಕಾರಾತಿಶಯವನ್ನೋ, ಇಲ್ಲವೆ ಒಂದು ದರ್ಪಾತಿಶಯವನ್ನೋ, ಇಲ್ಲವೆ ಒಂದು ಕರುಣಾತಿಶಯವನ್ನೋ ಸೂಚಿಸಲು ಒಂದು ಅಂಕಿತನಾಮವೇ ಸಾಕಾಗುತ್ತದೆ. ಅದರಲ್ಲಿ ವಾಚ್ಯವಾದ ಅರ್ಥಕ್ಕಿಂತಲೂ ಎಷ್ಟೋ ಹೆಚ್ಚಿನ ಭಾವಾತಿರೇಕವು ತುಂಬಿರುತ್ತದೆ. ಇಂತಹ ವಿಶಾಲಾರ್ಥಭರಿತ ಪದಗಳನ್ನು ಕಾವ್ಯದ ಬಹುಮುಖ್ಯ ಅಂಶಗಳಲ್ಲೊಂದೆನ್ನಲಡ್ಡಿಯಿಲ್ಲ. ಆನಂದವರ್ಧನನ ಮಾತಿನಲ್ಲಿ ಅವು 'ಅವಿವಕ್ಷಿತವಾಚ್ಯ'ಧ್ವನಿಗೆ ಉದಾಹರಣೆಗಳೆನಿಸುವುವು. ಇಂತಹ ಕೆಲವು ಕನ್ನಡ ಪ್ರಯೋಗಗಳನ್ನು ಕೆಳಗೆ ಕೊಡಲಾಗಿದೆ:—

ಪಾಂಚಾಲಿಯ ಪರಾಭವವನ್ನು ಸಹಿಸಲಾರದೆ ಕೋಪಾವೇಶದಲ್ಲಿ ವೇಣೀ ಸಂಹಾರ ಮತ್ತು ಊರುಭಂಗ ಪ್ರತಿಜ್ಞೆಗಳನ್ನು ಮಾಡಿದ ಭೀಮನು ಸಭೆಯೆಲ್ಲ ಮೊಳಗುವಂತೆ ಹೀಗೆ ಗರ್ಜಿಸುತ್ತಾನೆ—

> ಮುಳಿಸಂ ಮಾಡಿಯುಮೇವಮಂ ಪಡೆದುಮಿನ್ನೀ ಪಂದೆಗಳ್ ಪ್ರಾಣದಿಂ
> ದೊಳರಿನ್ನುಂ ತಲೆ ಮತ್ತಮಟ್ಟೆಗಳ ಮೇಲಿರ್ದಪ್ಪುವೆಂದಂದೆ ದಲ್
> ಮುಳಿಸಿಲ್ಲಣ್ಣನ ನನ್ನಿಯೆಂಬುದನೆ ಪೇಟೀವೇಟ್ವುದೀ ಕೌರವ-
> ರ್ಕಳನುಂತಿನ್ನೆಗಮುರ್ಚಿ ಮುಕ್ಕದೆ ಸಡಿಲ್ದೀ ಭೀಮನೇಂ ಮಾಣ್ಬನೇ ?[1] ||

ಇಲ್ಲಿ "ಈ ಭೀಮಂ" ಎಂದರೆ ಸುಮ್ಮನೆ 'ಧರ್ಮರಾಯನ ತಮ್ಮ' ಅಥವಾ 'ಕುಂತಿಯ ಮಗ' ಎಂದಿಷ್ಟೇ ಅರ್ಥವಲ್ಲ. ಇದಕ್ಕೆ ಸಾವಿರ ಪಾಲು ಮಿಗಿಲಾಗಿ ಪೌರುಷ, ಸಾಹಸ, ರೋಷ, ಪರಾಕ್ರಮಗಳಿಗೆಲ್ಲ ಆದರ್ಶಪ್ರಾಯನಾದ ಒಬ್ಬ ಲೋಕೈಕವೀರನೆಂಬ ವ್ಯಂಗ್ಯಾರ್ಥವೇ ಆ ಶಬ್ದದಿಂದ ಸಹೃದಯರಿಗೆ ಭಾಸವಾಗುತ್ತದೆ. ಇಲ್ಲಿ ಮೊದಲು ಹೇಳಿದ ಅರ್ಥಕ್ಕೆ ಬಾಧೆಯೇನೂ ಇಲ್ಲದಿದ್ದರೂ ಅದು ಸ್ವತಂತ್ರವಾಗಿ

[1] ಪಂಪಭಾರತಂ, VII, ೧೪.

ಆಕರ್ಷಕವಲ್ಲ ; ಅನಂತರ ಹೇಳಿದ ಮಹಾ ವ್ಯಂಗ್ಯಾರ್ಥಸಾಗರದಲ್ಲಿ ಅದು ಲೀನವಾಗಿ ಹೋಗುತ್ತದೆ. ಇದನ್ನೇ ಆನಂದವರ್ಧನನು 'ಅರ್ಥಾಂತರ ಸಂಕ್ರಮಿತವಾಚ್ಯ' ಧ್ವನಿಯೆನ್ನುವುದು. ಇಲ್ಲಿ ಮುಖ್ಯಾರ್ಥವು ಪರಿಮಿತವಾಗಿರುವುದೇ ಹೊರತು ವ್ಯಂಗ್ಯಾರ್ಥದಂತೆ ಅಪರಿಮಿತವಲ್ಲ.

ಇದರಂತೆಯೇ ಚಿತ್ರಾಂಗದನಿಂದ ಹಿಂಗಟ್ಟುಮುರಿ ಕಟ್ಟಿಸಿಕೊಂಡು ಮಾನ ಭಂಗಿತನಾದ ದುರ್ಯೋಧನನನ್ನು ಅರ್ಜುನನು ಕಟ್ಟುಗಳ ಸಮೇತ ತಂದು ದ್ರೌಪದಿಗೆ ಕಟ್ಟನ್ನು ಕಳೆಯುವಂತೆ ಹೇಳಿದಾಗ ಅವಳ ಬಾಯಿಂದ ಬರುವ ಚುಚ್ಚುನುಡಿಗಳನ್ನು ಗಮನಿಸಬಹುದು—

ಎಮ್ಮಂ ಪಿಡಿದೆೞೆವಂದಿನ
ನಿಮ್ಮದಟುಗಳೀಗಳೆತ್ತ ವೋದುವೊ ? ಪಿಡಿವ-|
ಟ್ಟಮ್ಮ ಬಟಿಲ್ದಿರೆ ? ಕಂಡಿರೆ
ನಿಮ್ಮಳವಂ ? ನಿಮಗಮೀಗಳೀಯೆಡಱಾಯ್ತೇ ||[1]

ಇಲ್ಲಿ 'ನಿಮಗಂ' ಎನ್ನುವಾಗ ಕೇವಲ ಮುಖ್ಯಾರ್ಥದಲ್ಲಿಲ್ಲದ, 'ದುರ್ನಯ, ದುರಭಿಮಾನ, ದುರಹಂಕಾರಗಳಿಂದ ವೈಮರೆತು ಬೀಗಿದ ದುರಾತ್ಮ 'ನೆಂಬ ವ್ಯಂಗ್ಯಾರ್ಥವೂ, ಅಪಹಾಸ್ಯ, ಕುಚೋದ್ಯಗಳೂ ವ್ಯಕ್ತವಾಗುವುದು ಮೇಲೆ ಹೇಳಿದ ಧ್ವನಿಯ ಪ್ರಭಾವದಿಂದಲೇ.

ಹೀಗೆಯೇ—

ಬಡವಾದಿರರಸ ! ಕಾಲೊಳ್
ನಡೆದಪಿರೊಡನಾರುಮಿಲ್ಲ; ಕಟಿಲೆಗಳೇಂ ನಿ|
ಮ್ಮುಡಿಯೊಳಗೆ ? ಪಡುವ ದೇಗುಲ
ದೆಡೆಯಾವುದು ? ಕುಡದ ನಿಮಗಮೀಯೆಡಱಾಯ್ತೇ ||[2]

ಎಂಬ ಹಾಸ್ಯೋಕ್ತಿಯಲ್ಲಿಯೂ 'ಅರ್ಥಾಂತರಸಂಕ್ರಮಿತವಾಚ್ಯ' ಧ್ವನಿಯನ್ನು ಕಾಣಬಹುದು.

ಒಂದೇ ಶಬ್ದವನ್ನು ಕವಿಯು ವಿಶೇಷಾರ್ಥವಿವಕ್ಷೆಯಿಂದ ಎರಡು ಮೂರು ಸಾರಿ ಪ್ರಯೋಗಿಸುವಾಗಲೂ ಈ ಧ್ವನಿಯ ವಿಲಾಸವನ್ನು ನೋಡಬಹುದು. ದ್ವಿರುಕ್ತಿ, ಪುನರುಕ್ತಿಗಳು ದೋಷವೇ ಆದರೂ ವ್ಯಂಗ್ಯಾರ್ಥದ ವಿಪುಲತೆಯಿರುವಲ್ಲಿ ಗುಣಗಳಾಗಿಬಿಡುವುವು. ಕೆಳಗೆ ಉದಾಹರಿಸಿರುವ ರನ್ನನ ಪದ್ಯದಲ್ಲಿ ಕೊನೆಯ

---

[1] ಪಂಪಭಾರತಂ, VII, ೩೯.

[2] ಶಬ್ದಮಣಿದರ್ಪಣಂ, ೧೦೩ ನೆಯ ಸೂತ್ರದ ಉದಾಹರಣೆ.

ಸಾರಿ ಪ್ರಯುಕ್ತವಾಗಿರುವ 'ಕವಿ' ಎಂಬ ಶಬ್ದಕ್ಕೆ ಅಪಾರವಾದ ವ್ಯಂಗ್ಯಾರ್ಥವಿರುವುದನ್ನು ಕಾಣಬಹುದು. 'ಉತ್ತಮೋತ್ತಮವೂ ನವರಸಪರಿಪೂರ್ಣವೂ ಆದ ಕಾವ್ಯಕರ್ತ'ನೆಂದು ಅದಕ್ಕೆ ಅರ್ಥ. ಆದರೆ ಮುಂಚೆ ಬರುವ ಅದೇ ಶಬ್ದಕ್ಕೆ 'ಪದ್ಯದ ಸಾಲುಗಳನ್ನು ರಚಿಸುವವನು' ಎಂಬ ಸಾಮಾನ್ಯಾರ್ಥವಷ್ಟೇ ಆಗುತ್ತದೆ:—

ಕವಿಮಾರ್ಗದೊಳೊಳಪೊಕ್ಕು೦
ನವರಸಮಂ ತಿಳಿಯೆ ನುಡಿದನೆನಿಸಿದ ಕವಿ ಸ|
ತ್ಕವಿಯೆನಿಕುಂ ; ಗೂಡಾರದ
ಕವಿಯಂತಿರೆ ಮುಚ್ಚಿಪೋದ ಕವಿಯುಂ ಕವಿಯೇ ?[1]||

ಇದನ್ನೇ ಪ್ರಶ್ನಾರ್ಥಕವೆನ್ನುವ ಬದಲು 'ಕವಿಯುಂ ಕವಿಯೇ !' ಎಂದು ಕಾಕುವಿನಿಂದ ಹೇಳಿಕೊಂಡರೆ ಕೊನೆಯ ಶಬ್ದಕ್ಕೆ ಅತ್ಯಂತ ಕ್ಷುದ್ರ ಹಾಗು ಪರಿಗಣನೆಗೇ ಯೋಗ್ಯನಲ್ಲದವನೆಂಬ ನಿಕೃಷ್ಟಾರ್ಥವು ಬರಬಹುದು. ಹೇಗಾದರೂ 'ಅರ್ಥಾಂತರ ಸಂಕ್ರಮಿತ ವಾಚ್ಯ' ಧ್ವನಿಯು ಮಾತ್ರ ಸ್ಪಷ್ಟವೇ.

ಇನ್ನು 'ಅವಿವಕ್ಷಿತವಾಚ್ಯ ಧ್ವನಿ'ಯ ಎರಡನೆಯ ಪ್ರಕಾರವಾದ 'ಅತ್ಯಂತ ತಿರಸ್ಕೃತವಾಚ್ಯ' ಧ್ವನಿಯನ್ನು ತೆಗೆದುಕೊಳ್ಳಬಹುದು. ಇಲ್ಲಿಯೂ ಮೇಲೆ ಉದಾಹರಿಸಿದ ಮೊದಲನೆಯ ಪ್ರಕಾರದಂತೆಯೇ ಲಕ್ಷ್ಯಾರ್ಥವೇ ಪ್ರಧಾನ; ಆದರೆ ಮುಖ್ಯಾರ್ಥಕ್ಕೆ ಅಲ್ಲಿ ಲೇಶಮಾತ್ರವಾದರೂ ಎಡೆಯಿದ್ದರೆ ಇಲ್ಲಿ ಮುಖ್ಯಾರ್ಥಕ್ಕೆ ಯಾವ ಸ್ಥಾನವೂ ಇಲ್ಲವೇ ಇಲ್ಲ. ಅದು ಸರ್ವಥಾ ಅಸಂಭವವೇ ಆಗುವುದರಿಂದ ಕೇವಲ ಲಕ್ಷ್ಯಾರ್ಥವೊಂದೇ ಪರಮಪ್ರಧಾನವಾಗಿರುತ್ತದೆ. ಚೇತನ ಕ್ರಿಯೆಗಳನ್ನು ಅಚೇತನ ವಸ್ತುಗಳಲ್ಲಿ ಆರೋಪಿಸುವಾಗಲೆಲ್ಲ ಇಂತಹ 'ಅತ್ಯಂತ ತಿರಸ್ಕೃತವಾಚ್ಯ' ಧ್ವನಿಯನ್ನು ನೋಡಬಹುದು. ಕಾವ್ಯಪ್ರಪಂಚದಲ್ಲಿ ಈ ಬಗೆಯ ಪ್ರಯೋಗಗಳು ಅನಂತವಾಗಿವೆ:—

ಬನಮಂ ಕೆಂದಳಿರಿಂದ ಬಾಸಣಿಸುತುಂ, ದಿಗ್ಭಿತ್ತಿಯಂ ಬಂದ ಮಾ
ವಿನ ಕಂಪಿಂದಮೆ ಪೂಸುತುಂ, ವಿರಹಿಯಂ ಮತ್ತಾಳಿನೀಕೋಕಿಲ-|
ಧ್ವನಿಯಿಂದಂಜಿಸುತುಂ, ಸಮಸ್ತಜನಮಂ ಪುಷ್ಪಾಸವಾಸಾರದು—
ರ್ದಿನದಿಂ ಸೊರ್ಕಿಸುತುಂ ಪೊದಟ್ಟುದು ಜಗತ್ಕಾಂತಂ ವಸಂತಾಗಮಂ |[2]

ಇಲ್ಲಿ ವಸಂತಋತುವು ಅಲಂಕರಿಸುವುದೂ, ಪೂಸುವುದೂ, ಅಂಜಿಸುವುದೂ ಸೊಕ್ಕಿಸುವುದೂ ಸಾಧ್ಯವಿಲ್ಲ. ಏಕೆಂದರೆ ಋತುವು ಅಚೇತನವಸ್ತು ; ಈಗ ಹೇಳಿದ

[1] ಅಜಿತಪುರಾಣಂ, I, ೮೭.

[2] ನಾಗವರ್ಮನ ಕರ್ಣಾಟಕ ಕಾದಂಬರಿ, ಉ. ಭಾ., ೭೮೧.

ಕ್ರಿಯೆಗಳೆಲ್ಲವೂ ಸಚೇತನರಿಗೆ ಮಾತ್ರ ಸಾಧ್ಯವಾದ ಕ್ರಿಯೆಗಳು. ಆದುದರಿಂದ ಈ ಶಬ್ದಗಳಿಗೆ ಮುಖ್ಯಾರ್ಥವನ್ನು ಬಿಟ್ಟು ನಿರತಿಶಯ ಸೌಂದರ್ಯವ್ಯಂಜಕವಾದ 'ಹೆಚ್ಚಿಸುತ್ತಾ' ಎಂಬ ಲಕ್ಷ್ಯಾರ್ಥವನ್ನು ಮಾತ್ರ ಸ್ವೀಕರಿಸುತ್ತೇವೆ. ಹೊಸಗನ್ನಡ ಸಾಹಿತ್ಯದಲ್ಲಿ ಈ ಬಗೆಯ ಪ್ರಯೋಗಗಳು ಯಥೇಚ್ಛವಾಗಿಯೇ ಸಿಕ್ಕುತ್ತವೆ!—

'. . . ಅಲ್ಲಿ ತೆರೆತೆರೆಯದ್ರಿಪಂಕ್ತಿಗಳೆಲ್ಲೆ ಕಾಣದೆ ಹಬ್ಬಿವೆ;
ನಿಬಿಡಕಾನನರಾಜಿ ಗಿರಿಗಳನಪ್ಪಿ ಸುತ್ತಲು ತಬ್ಬಿವೆ
ದೆಸೆಯ ಬಸವನ ಹಿಣಿಲ ಹೋಲಿವೆ ಮುಗಿಲ ಚುಂಬನಗೈದಿವೆ
ತುಂಗಶೃಂಗಗಳಲ್ಲಿ ದಿಕ್ತಟದಲ್ಲಿ ಸೊಂಡಿಲ ನೆಯ್ದಿವೆ.[1]

'. . . ಅಲ್ಲಿ ನಡುಹಗಲಲ್ಲಿ ಮೌನದಿ ನಿದ್ದೆಗೈದಿರೆ ಬನಗಳು . . .'[2]

'. . . ಅಭೀಃ! ಅಭೀಃ! ಅಭೀಃ! ಎಂಬ ನುಡಿ ಏಳುತಿದೆ
ಹೇಡಿತನದಳುಕುಗಳ ಓಡಿಸಿದೆ ಚೆದರಿಸಿದೆ
ವೀರ ಸಂಜೀವನವ ಊಡಿಸುತಿದೆ! [3]

'ಕತ್ತಲೆಯು ತೆರೆಹೊದಿಸೆ, ಶಾಂತಿ ನೆಲಕಿಳಿಯೆ,
ತಾರೆಗಳು ಕಿರುದೆರೆಗಳುಯ್ಯಲೊಳು ನಲಿಯೆ,
ಜಗದ ಚೆಲ್ವಿನ ಪುರುಳ ಕಂಡಾತ್ಮ ತಣಿಯೆ,
ಗಾನವೆನ್ನೀ ಭುವಿಯನಾವರಿಪುದಾಗ.'[4]

'ಕುರುಡು ಪ್ರೀತಿಯ ಹಾಂಗೆ
ಕುರುಡು ಚಿತ್ತಿಯ ಮಳೆಯು
ಮುಗುಳು ನಗಿ ಸುತ್ತುರುಳಿಸಿ
ಸುರದ್ಯತ್ತ ಸುರದಾವ'[5]

ಈ ಪ್ರಯೋಗಗಳಲ್ಲಿ ಧ್ವನಿಯಿಂದ ಒದಗುವ ಸೌಂದರ್ಯವನ್ನು ವ್ಯಾಖ್ಯಾನಮಾಡಿ ತೋರಿಸಬೇಕಾಗಿಲ್ಲ. ಸಹೃದಯರೆಲ್ಲರೂ ಸುಲಭವಾಗಿ ಗ್ರಹಿಸಬಹುದು. ಅಲಂಕಾರವೆನ್ನುವ 'ಉತ್ಪ್ರೇಕ್ಷೆ'ಗೂ ಈ ಧ್ವನಿಗೂ ಸ್ವಲ್ಪ ಹತ್ತಿರದ ಸಂಬಂಧವಿರುವಂತೆ ಕಂಡರೂ ಇಲ್ಲಿ ವಾಚ್ಯಾಂಶಕ್ಕಿಂತಲೂ ವ್ಯಂಗ್ಯಾಂಶಕ್ಕೆ ಹೆಚ್ಚಿನ ಪ್ರಾಧಾನ್ಯವಿರುವುದರಿಂದ ಭೇದವನ್ನು ಒಪ್ಪಬೇಕು. ಎರಡಕ್ಕೂ ಕವಿಕಲ್ಪನೆಯೇ ಮೂಲವೆಂಬ ಅಂಶವು ಮಾತ್ರ ಸಮಾನ; ಆದರೆ ಕವಿವಿವಕ್ಷೆಯಲ್ಲಿ ಐಕ್ಯವಿಲ್ಲ. ಅಲ್ಲದೆ, ವಾಚ್ಯ

---

[1] ಕುವೆಂಪು ಅವರ "ಹೋಗುವೆನು ನಾ" ಎಂಬ ಕವನ (ಪಕ್ಷಿಕಾಶಿ)

[2] ಕುವೆಂಪು ಅವರ "ಹೋಗುವೆನು ನಾ" ಎಂಬ ಕವನ (ಪಕ್ಷಿಕಾಶಿ)

[3] ವಿ.ಸೀ. ಅವರ 'ಅಭೀಃ' ಎಂಬ ಕವನ (ಕನ್ನಡದ ಬಾವುಟ)

[4] ಪು.ತಿ.ನ. ಅವರ 'ಗಾನವೆನ್ನೀ ಭುವಿಯ . . .' ಎಂಬ ಕವನ (ಹಣತೆ)

[5] ಅಂಬಿಕಾತನಯದತ್ತರ 'ಚಿತ್ತಿಯ ಮಳೆಯ ಸಂಜೆ' ಎಂಬ ಕವನ (ಸಖೀಗೀತ)

ವಲ್ಲದಿದ್ದರೂ ಗಮ್ಯವಾದ ಒಂದು ಸಮಾರೋಪದ ಅಥವಾ ರೂಪಕದ ಅಂಶವು ಮಾತ್ರ ಈ ಎಡೆಗಳಲ್ಲಿ ಇರುವುದೆನ್ನಬಹುದು. ಕಾನನರಾಜಿಯು ಅದ್ರಿಯನ್ನು ಅಪ್ಪುವುದೆನ್ನುವಾಗ ಕಾನನರಾಜಿಯು ಕಾಮಿನಿಯೆಂಬ ಗಮ್ಯರೂಪಕವೂ, 'ಕುರುಡು ಪ್ರೀತಿ'ಯೆನ್ನುವಾಗ ಪ್ರೀತಿಯೇ ಅದನ್ನು ಹೃದಯದಲ್ಲುಳ್ಳ ಪುರುಷನೆಂಬ ಗಮ್ಯ ರೂಪಕವೂ ಭಾಸವಾಗುವುದೆಂದು ಹೇಳಬಹುದು. ಆದರೆ ನಮ್ಮ ಅಲಂಕಾರ ಶಾಸ್ತ್ರದಲ್ಲಿ ಇಂತಹ ಗಮ್ಯರೂಪಕಗಳನ್ನೂ ಅಚೇತನ ವಸ್ತುಗಳಲ್ಲಿ ಸಚೇತನ ವೃತ್ತಿಯ ವ್ಯವಹಾರವನ್ನೂ (=Pathetic Fallacy) ಅಲಂಕಾರಗಳೆಂದು ಒಪ್ಪಿಲ್ಲ. ಆದುದರಿಂದ ಇವುಗಳ ಸ್ವಾರಸ್ಯವನ್ನು ಒಪ್ಪುವವರು ಇವುಗಳನ್ನು ಹೊಸ ಅಲಂಕಾರ ಗಳೆಂದು ಪರಿಗಣಿಸಬೇಕು, ಇಲ್ಲವೆ 'ಧ್ವನಿ'ಯೆನ್ನಬೇಕು.[1] ಇವನ್ನು 'ರಸವದ ಲಂಕಾರ'ವೆನ್ನಬಹುದಲ್ಲಾ ಎಂಬ ಪಕ್ಷವನ್ನು ಆನಂದವರ್ಧನನೇ ಎತ್ತುತ್ತಾನೆ. ಆದರೆ ಉಳಿದ ಕೆಲವು ಅಲಂಕಾರಗಳೂ ಈ ದೃಷ್ಟಿಯಿಂದ ತಮ್ಮ ಸ್ವತಂತ್ರತೆಯನ್ನು ಕಳೆದುಕೊಳ್ಳಬೇಕಾಗುವುದರಿಂದ ಆ ವಾದವನ್ನೊಪ್ಪುವುದಿಲ್ಲ. ಉಳಿದ ಅಲಂಕಾರಗಳ ವಿಷಯವ್ಯಾಪ್ತಿಯನ್ನು ವಿರಳಗೊಳಿಸುವುದು ಅವನಿಗೆ ಇಷ್ಟವಿಲ್ಲ. ಸೂಕ್ಷ್ಮವಾಗಿ ಪರೀಕ್ಷಿಸಿದರೆ, ಇಲ್ಲಿ ಪ್ರಸ್ತುತವಾದ ಲಕ್ಷ್ಯದ ಪದಗಳಿಗೆ ಸಮಂಜಸವಾದ ವಿವರಣೆ ಯನ್ನು ಕೊಡುವುದು ಸೂಕ್ತವೇ ಹೊರತು, ಅದಕ್ಕೆ ಸಂಬಂಧಿಸಿದ ಪದಾಂತರಗಳಿಗೆ ಮೇಲೆ ಸೂಚಿಸಿದಂತಹ ವಿವರಣೆಗಳನ್ನು ಕೊಡುವುದು ಶಾಸ್ತ್ರಮರ್ಯಾದೆಯಲ್ಲ. ಆದುದರಿಂದ ಇವುಗಳನ್ನೆಲ್ಲ 'ಅತ್ಯಂತ ತಿರಸ್ಕೃತ ವಾಚ್ಯ' ಧ್ವನಿಯೆಂದು ಹೇಳುವುದು ಯೋಗ್ಯವೆನ್ನಲಡ್ಡಿಯಿಲ್ಲ. ಸಾಹಿತ್ಯದ ಸೌಂದರ್ಯಕ್ಕೆ ಈ ಧ್ವನಿಯು ಎಷ್ಟೋ ಸಹಾಯಮಾಡುತ್ತದೆ. ಮೊದಲು ಕವಿಯ ಬಾಯಿಂದ ಹೊಚ್ಚ ಹೊಸದಾಗಿ ಬಂದ ಈ ಪ್ರಯೋಗಗಳು ಪದೇ ಪದೇ ಇತರರಿಂದ ಪ್ರಯುಕ್ತವಾದಾಗ ತಮ್ಮ ಮೊದಲಿನ ಅಪೂರ್ವ ವ್ಯಂಗ್ಯಾತಿಶಯವನ್ನು ಕಳೆದುಕೊಂಡು 'ಕವಿಸಮಯ'ಗಳಾಗಿಬಿಡುತ್ತವೆ.[2] ಇದಕ್ಕೆ ನಾಗವರ್ಮನು ಕಾವ್ಯಾವಲೋಕನದಲ್ಲಿ ಕೊಟ್ಟಿರುವ ಕೆಳಗಿನ ಉದಾಹರಣೆ ಗಳೇ ಸಾಕ್ಷಿ ; ಅವನ್ನು 'ಧ್ವನಿ' ಯೆನ್ನಬಾರದು :—

ಮುಕುಳಿತವಿಲೋಚನಂ ಕಂ
ಟಕಿತಾಂಗಂ ಸ್ವೇದಬಿಂದುದಂತುರಿತಮುಖಂ |
ಪ್ರಕಟಶ್ವಸಿತೋತ್ಕಂಪಂ
ನಿಕಾಮಕಮನೀಯಮಾದುದಿಂತು ರತಾಂತಂ ||

---

[1] ನಾಗವರ್ಮನು ಇದನ್ನೂ 'ಕವಿಸಮಯ'ವೆಂದೇ ಹೇಳುತ್ತಾನೆ (ಕಾವ್ಯಾವಲೋಕನ, ಸೂತ್ರ ೨೩೪), ಹಾಗೆ ಹೇಳುವುದರಿಂದ ಸಮಸ್ಯೆಗೆ ಉತ್ತರ ಕೊಟ್ಟಂತೇನೂ ಆಗುವುದಿಲ್ಲ.

[2] ಮಾಕ್ಸ್ ಮುಲರನು ಇವನ್ನು *Dead Metaphors* ಎನ್ನುತ್ತಾನೆ.

ವಿನಿಮೀಳನ್ನೀಳಾಂಬುಜ-
ವನಮೀಷದ್ವಿಕಸದರುಣಸರಸಿರುಹವನಂ |
ದಿನಮುಖಮಳಿಸಂತತಿಗೇಂ
ಜನಿಯಿಸಿದುದೊ ಭಿನ್ನರುಚಿಗಳಂ ಪರಿಮಳದೊಳ್ ||
ನಗೆಯಂ ಬಲ್ಮುಗುಳ್ಗಳ್ಗೆ ಕಂಪನಳಿಗಳ್ಗಾನಂದಮಂ ಕೋಕಿಳಾ-
ಳಿಗೆ . . . ಎಯ್ದೆ ಮಾಡಿ . . . ತೆಂಗಾಳಿ ತೀಡುಗುಂ . . . |
ಆಲರ್ದ ಮೊಗಂ ಕಿಱಿದಾದುದು
ನೆಲಸಿದುದಬಲೆರ್ದೆಯೊಳಪ್ಪು ಕಣೆಸಿರ್ದುವು ಚಾ |
ಪಲನಯನಕುವಲಯಂ ಸು
ಯ್ಯೆಲರಾದಂ ಬಿಸಿಯವಾದುವಾ ಸತಿಗಾಗಳ್ ||[1]

III

ಇಲ್ಲಿಯವರೆಗೂ ವಾಚ್ಯಾರ್ಥವು ಅಷ್ಟು ಮುಖ್ಯವಲ್ಲದ ಅಂದರೆ 'ಅವಿವಕ್ಷಿತ ವಾಚ್ಯ'ವೆಂಬ ಧ್ವನಿಯ ಸ್ವರೂಪವನ್ನೂ ಅದು ಕಾವ್ಯದಲ್ಲಿ ಸೂಸುವ ಸೌಂದರ್ಯದ ಪರಿಯನ್ನೂ ಪರೀಕ್ಷಿಸಲಾಯಿತು. ಇದಕ್ಕಿಂತಲೂ ಇಮ್ಮಡಿ, ನೂರ್ಮಡಿ, ಮಿಗಿಲಾದ ಸೌಂದರ್ಯವನ್ನು ತರುವ ಶಕ್ತಿಯು ಈಗ ವಿವರಿಸಲಿರುವ 'ವಿವಕ್ಷಿತಾನ್ಯಪರವಾಚ್ಯ' ಧ್ವನಿಯಲ್ಲಿದೆ. ಈ ಧ್ವನಿಯಲ್ಲಿ ಲಕ್ಷಣಾವೃತ್ತಿಯ ಸಂಪರ್ಕವಿಲ್ಲ; ಮುಖ್ಯಾರ್ಥಕ್ಕೆ ಯಾವ ಚ್ಯುತಿಯೂ ಇಲ್ಲ. ವಿವಿಧ ರಸಗಳ ಮತ್ತು ಭಾವಗಳ, ಅವುಗಳ ದೀಪ್ತಿ ಮತ್ತು ಪ್ರಶಮನಗಳ, ಅವುಗಳ ಆಭಾಸ ಮತ್ತು ಸಂಧಿ ಶಬಲತೆಗಳ, ಪ್ರತೀತಿಯು ಕಾವ್ಯದಿಂದಾಗುವ ರೀತಿಗಳನ್ನು ಈ ಧ್ವನಿಭೇದದ ಮೂಲಕ ಸ್ಪಷ್ಟಪಡಿಸಬಹುದು. ಎಲ್ಲ ಬಗೆಯ ಕಾವ್ಯಗಳಲ್ಲೂ ಈ ರಸಭಾವಾದಿಗಳ ಧ್ವನಿಯು ಸ್ಪಷ್ಟವಲ್ಲದಿದ್ದರೆ ಅಸ್ಪಷ್ಟರೂಪದಲ್ಲಿಯಾದರೂ ಇದ್ದೇ ಇರುತ್ತದೆ. ಒಂದಲ್ಲದಿದ್ದರೆ ಒಂದು ರಸಕ್ಕೆ ಕಾವ್ಯದಲ್ಲಿ ಬರುವ ಎಲ್ಲ ವರ್ಣನೆಗಳೂ ಪೋಷಕವಾಗಿಯೇ ಆಗುತ್ತವೆ; ಆಗಬೇಕು. ಏಕೆಂದರೆ ಕವಿಯ ಪ್ರತಿಭೆಗೆ ವಿಷಯಭೂತವಾದ ವಸ್ತುಪ್ರಪಂಚದಲ್ಲೂ, ಕಲ್ಪನಾ ಪ್ರಪಂಚದಲ್ಲೂ ವಿಭಾವ, ಅನುಭಾವ, ವ್ಯಭಿಚಾರಿಗಳ ರೂಪದಲ್ಲಿ ರಸಾಂಗವಾಗಿ ಪರ್ಯವಸನ್ನವಾಗದೆ ಹೋಗುವ ವಿಷಯವೇ ಇಲ್ಲ.[2] ಆದುದರಿಂದ ರಸ, ಭಾವಾದಿ

---

[1] ಕಾವ್ಯಾವಲೋಕನಂ, ೯೧೫-೯೧೯. ಈ ಪ್ರಯೋಗಗಳನ್ನು ನೃಪತುಂಗನು ಸಮಾಹಿತ ಗುಣವೆನ್ನುತ್ತಾನೆ—ಕವಿರಾಜಮಾರ್ಗಂ, II, ೭೩-೭೫.

[2] ಹೋಲಿಸಿರಿ—ಯತ್ರ ತು ರಸಾದೀನಾಮವಿಷಯತ್ವಂ ಸ ಕಾವ್ಯಪ್ರಕಾರೋ ನ ಸಂಭವತ್ಯೇವ. ವಸ್ತು ಚ ಸರ್ವಮೇವ ಜಗದ್ಗತಮವಶ್ಯಂ ಕಸ್ಯಚಿದ್ರಸಸ್ಯ ಚಾಂಗತ್ವಂ ಪ್ರತಿಪದ್ಯತೇ ವಿಭಾವತ್ವೇನ. ಚಿತ್ತವೃತ್ತಿವಿಶೇಷಾ ಹಿ ರಸಾದಯಃ; ನ ಚ ತದಸ್ತಿ ವಸ್ತು ಕಿಂಚಿದ್ಯನ್ನ ಚಿತ್ತವೃತ್ತಿವಿಶೇಷಮುಪಜನಯತಿ, ತದನುತ್ಪಾದನೇ ಕವಿವಿಷಯತೈವ ತಸ್ಯ ನ ಸ್ಯಾತ್.—ಧ್ವನ್ಯಾಲೋಕ, III, ೪೩ ff.

ಧ್ವನಿಗೆ ಉದಾಹರಣೆಗಳನ್ನು ಯಾರೂ ಹುಡುಕಿಕೊಂಡು ಹೊರಡುವ ಪ್ರಸಕ್ತಿಯೇ ಇಲ್ಲ. ಸಹೃದಯರ ಮನೋಲ್ಲಾಸಕ್ಕೆ ಆಶ್ರಯವೆನಿಸುವ ಕಾವ್ಯವೆಲ್ಲವೂ ರಸಧ್ವನಿಯಿಂದ ತುಂಬಿಯೇ ಇರುತ್ತದೆ. ಚಿತ್ತವೃತ್ತಿ-ವಿಶೇಷವನ್ನೇ ರಸವೆನ್ನುವುದರಿಂದ ಸಹೃದಯದಲ್ಲಿ ಒಂದಿಲ್ಲೊಂದು ಚಿತ್ತವೃತ್ತಿವಿಶೇಷಕ್ಕೆ ಕಾರಣವಾಗದೆ ಇರತಕ್ಕ ಕಾವ್ಯದ ಅಸ್ತಿತ್ವ ವನ್ನೇ ಒಪ್ಪುವುದು ಅಶಕ್ಯ. ಅತ್ಯಂತ ವಿಶಾಲವಾದ ರಸಭಾವಪ್ರಪಂಚದಲ್ಲಿ ಎಲ್ಲ ಬಗೆಯ ಆನಂದಮಯ ಚಿತ್ತವೃತ್ತಿಗಳಿಗೂ ಎಡೆಯಿದ್ದೇ ಇರುವುದು. ಇದಕ್ಕೆ ವಿರುದ್ಧವಾದ ಜುಗುಪ್ಸಾದಿಚಿತ್ತವೃತ್ತಿಗಳು ಯಾವದಾದರೊಂದು ಕಾವ್ಯದಿಂದ ಸಹೃದಯನಲ್ಲಿ ಮೂಡುವುದಾದರೆ ಆಗ ರಸಭಂಗವಾಯಿತೆನ್ನುತ್ತೇವೆ. ಅಂತಹ ರಚನೆಗೆ ಕಾವ್ಯತ್ವವೇ ಸಿದ್ಧಿಸುವುದಿಲ್ಲ. ಹೀಗೆ ಸಹೃದಯರು ಮೆಚ್ಚುವ ಸಾಹಿತ್ಯದಲ್ಲೆಲ್ಲ ಸಾರಭೂತವಾಗಿ ಸೇರಿಕೊಂಡಿರುವ ರಸಭಾವಧ್ವನಿಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಂಗಡಿಸಿ ಹೆಸರು ಹೇಳುವುದು ಒಂದು ಕ್ರಮ. ಎಲ್ಲ ಬಗೆಯ ಪ್ರಭೇದಗಳಿಗೂ ಅನ್ವಯಿಸುವಂತೆ ಅತಿ ವಿಶಾಲವಾದ ಧರ್ಮವನ್ನು ಮಾತ್ರವೇ ನಿರೂಪಿಸುವುದು ಇನ್ನೊಂದು ಕ್ರಮ. ಅನಂತವಾದ ರಸಭಾವಪ್ರಕಟನಪ್ರಕಾರಗಳನ್ನು ಬೇರೆಬೇರೆಯಾಗಿ ವಿಂಗಡಿಸಿ ತೋರಿಸುವುದು ಅಸಾಧ್ಯವಾದ ಪ್ರಯುಕ್ತ, ಎಲ್ಲಕ್ಕೂ ಸಮಾನವಾದ ಸಾಮಾನ್ಯ ನಿಯಮವನ್ನು ಹೇಳುವುದೇ ಅಲಂಕಾರಶಾಸ್ತ್ರದಲ್ಲಿ ಸೂಕ್ತವೆಂದು ತಿಳಿದು ಆನಂದ ವರ್ಧನನು ಈ ಮಾರ್ಗವನ್ನು ಅನುಸರಿಸಿದ್ದಾನೆ. ಭರತನೇ ಮೊದಲಾದವರು ಪ್ರತ್ಯೇಕ ಪ್ರಕಾರಗಳ ನಿರ್ವಚನೆಗೆ ಕೊಟ್ಟ ಪ್ರಾಮುಖ್ಯತೆಯನ್ನು ಆತನು ಸಾಮಾನ್ಯ ಧರ್ಮನಿರ್ವಚನೆಗೆ ಕೊಡುತ್ತಾನೆ. ಒಂದೊಂದು ರಸಕ್ಕೂ ನೂರಾರು ಅಂಗೋ ಪಾಂಗಗಳನ್ನು ಲೆಕ್ಕಹಾಕಿ ಪಟ್ಟಿಮಾಡುವುದರಿಂದ ಕಾವ್ಯದ ರಹಸ್ಯವು ವಿದಿತ ವಾಗುವುದಿಲ್ಲ. ಪ್ರಸಿದ್ಧವಾದ ಶೃಂಗಾರರಸವನ್ನೇ ವಿಭಾಗಮಾಡುತ್ತಾ ಹೊರಟರೆ, ಮೊದಲು 'ಸಂಭೋಗ', 'ವಿಪ್ರಲಂಭ' ಎಂಬ ಎರಡು ಬಗೆಗಳನ್ನೂ, ಮತ್ತೆ 'ಸಂಭೋಗಶೃಂಗಾರ'ದಲ್ಲಿ ನಾಯಕನಾಯಿಕೆಯರ ಪರಸ್ಪರ ಆಲೋಕನ, ಆಲಿಂಗನ, ಅಧರಪಾನ, ಪರಿಚುಂಬನ, ಮುಂತಾದ ಕಾಮಶಾಸ್ತ್ರದಲ್ಲಿ ಪ್ರಸಿದ್ಧವಾದ ಪ್ರಭೇದ ಗಳನ್ನೂ, 'ವಿಪ್ರಲಂಭ-ಶೃಂಗಾರ'ದಲ್ಲಿ ವಿಯೋಗಕ್ಕೆ ಕಾರಣಗಳಾದ ಅಭಿಲಾಷೆ, ವಿರಹ, ಈರ್ಷ್ಯೆ, ಪ್ರವಾಸ, ಶಾಪ, ಮೊದಲಾದವುಗಳ ವೈವಿಧ್ಯವನ್ನೂ, ಅದಕ್ಕೆ ಪೋಷಕಗಳಾಗುವ ವಿಭಾವಾದಿ ಸನ್ನಿವೇಶಗಳನ್ನೂ ಲೆಕ್ಕಮಾಡುತ್ತಾ ಹೊರಡ ಬಹುದು. ಅವುಗಳಿಗೆ ಉದಾಹರಣೆಯನ್ನು ಕೊಡುವ ಪ್ರಯತ್ನವನ್ನೂ ಮಾಡ ಬಹುದು. ಆದರೆ ಅಂತಹ ಪ್ರಯತ್ನಗಳು ಹೆಚ್ಚು ಪ್ರಯೋಜನವನ್ನು ತರಲಾರವು. ಒಂದೊಂದು ರಸದ ಪ್ರಪಂಚವೇ ಇಷ್ಟು ವಿಶಾಲವಾಗಿರುವಾಗ, ಎಲ್ಲ ರಸಗಳ

ಮತ್ತು ಎಲ್ಲ ಭಾವಗಳ ಸಮಸ್ತ ಆವಿರ್ಭಾವಪ್ರಕಾರಗಳನ್ನೂ ಒಂದು ಶೀರ್ಷಿಕೆಯ ಕೆಳಗೆ ತರುವುದು ಸುಲಭವಾದುದೇನೂ ಅಲ್ಲ. ಆದರೆ ಆನಂದವರ್ಧನನು ದೃಷ್ಟಿಕೋನವನ್ನು ಸ್ವಲ್ಪ ಬದಲಾಯಿಸಿಕೊಂಡು ಈ ಸಮಸ್ಯೆಗೆ ಸುಲಭವಾಗಿಯೇ ಪರಿಹಾರವನ್ನು ಸೂಚಿಸಿದ್ದಾನೆ. ರಸಭಾವಾದಿಧ್ವನಿಗಳನ್ನು ಬಿಟ್ಟರೆ, ಎಲ್ಲ ಬಗೆಯ ಧ್ವನಿಗಳಲ್ಲೂ ಮುಖ್ಯಾರ್ಥಕ್ಕೂ ವ್ಯಂಗ್ಯಾರ್ಥಕ್ಕೂ ಸ್ಪಷ್ಟವಾದ ಕ್ರಮಭೇದವು ಇರುತ್ತದೆ. ಇದ್ದಕ್ಕಿದ್ದಂತೆಯೇ ಸಹೃದಯನ ಮಾನಸೋಲ್ಲಾಸವನ್ನು ತರುವ ರಸಾದಿಧ್ವನಿಯಲ್ಲಿ ಈ ಕ್ರಮಭೇದವು ಮನಸ್ಸಿಗೆ ಭಾಸವಾಗುವುದೇ ಇಲ್ಲ. ಮುಖ್ಯಾರ್ಥವನ್ನು ಚರ್ವಣ ಮಾಡುತ್ತಿರುವ ಸಮಕಾಲದಲ್ಲಿಯೇ, ಯಾವ ಅಂತರವೂ ಇಲ್ಲದೆ ರಸಧ್ವನಿಯ ಚಮತ್ಕಾರವನ್ನು ಸಹೃದಯನು ಅನುಭವಿಸುತ್ತಾನೆ. ಆದುದರಿಂದ ಉಳಿದ ಜಾತಿಯ ಧ್ವನಿಭೇದಗಳಿಗೂ ರಸಭಾವಾದಿಧ್ವನಿಗಳಿಗೂ ಮುಖ್ಯವಾಗಿರುವ ವ್ಯತ್ಯಾಸವೆಂದರೆ ಈ 'ಅಲಕ್ಷ್ಯಕ್ರಮ'ತ್ವವನ್ನೇ ಹೇಳಬೇಕು. ರಸದ ಚಮತ್ಕಾರವು ಅಷ್ಟು ಶೀಘ್ರ ಹಾಗು ಮೋಹಕ. ಹೀಗೆ ಕಾವ್ಯಪ್ರಪಂಚದ ಬಹುಭಾಗವು 'ಅಸಂಲಕ್ಷ್ಯಕ್ರಮ ವ್ಯಂಗ್ಯ'ವೆಂಬ ಧ್ವನಿ-ಪ್ರಕಾರದಲ್ಲೇ ಗತಾರ್ಥವಾಗಬೇಕಾಗುತ್ತದೆ. ರಸಭಾವಾದಿಗಳು ವ್ಯಂಗ್ಯವಲ್ಲದೆ ಹೋಗಿ, ವಸ್ತು ಅಲಂಕಾರಗಳು ಮಾತ್ರ ವ್ಯಂಗ್ಯವಾಗುತ್ತಿದ್ದರೆ ಅಲ್ಲಿ ಮುಖ್ಯಾರ್ಥಕ್ಕೂ ವ್ಯಂಗ್ಯಾರ್ಥಕ್ಕೂ ಪೂರ್ವಾಪರ ಕ್ರಮವು ಸುಸ್ಪಷ್ಟ ಅಥವಾ 'ಸಂಲಕ್ಷ್ಯ'ವಾಗಿಯೇ ಇರುತ್ತದೆ. ಹೀಗೆ 'ವಿವಕ್ಷಿತಾನ್ಯಪರವಾಚ್ಯ' ಧ್ವನಿಯನ್ನು 'ಅಸಂಲಕ್ಷ್ಯಕ್ರಮ', 'ಸಂಲಕ್ಷ್ಯಕ್ರಮ' ಎಂದು ಎರಡು ವಿಭಾಗ ಮಾಡಿಕೊಳ್ಳಬೇಕು.

ಈ ಸಂದರ್ಭದಲ್ಲಿ ಒಂದು ಸಮಸ್ಯೆಯೇಳಲು ಅವಕಾಶವಿದೆ. ವಿಭಾವ, ಅನುಭಾವ, ವ್ಯಭಿಚಾರಿಭಾವಗಳು ಸ್ಥಾಯಿಭಾವಗಳೊಡನೆ 'ಸಂಯೋಗ'ವನ್ನು ಪಡೆದಾಗ ಮಾತ್ರ 'ರಸ'ವು ನಿಷ್ಪನ್ನವಾಗುವುದೆಂಬುದು ಭರತನೇ ಆದಿಯಾಗಿ ಎಲ್ಲರೂ ಒಪ್ಪಿರುವ ವಿಷಯ. ಮುಕ್ತಕಗಳನ್ನು ಬಿಟ್ಟರೆ, ಮಿಕ್ಕ ಯಾವದೇ ಕಾವ್ಯದ ಬಿಡಿ ಶ್ಲೋಕದಲ್ಲಾಗಲಿ, ಗದ್ಯವಚನದಲ್ಲಾಗಲಿ ಈ ವಿಭಾವಾದಿಗಳೆಲ್ಲವೂ ಸಂಯೋಗ ಹೊಂದಿ ರಸನಿಷ್ಪತ್ತಿಗೆ ಕಾರಣವಾಗುವುದು ಸಾಧ್ಯವೇ? ಎಂಬುದೇ ಸಮಸ್ಯೆ. ಮುಕ್ತಕಗಳಲ್ಲಿಯೂ ಸಹ ವಿಭಾವಗಳ, ಅಥವಾ ಅನುಭಾವಗಳ, ಅಥವಾ ಇನ್ನೊಂದು ಪ್ರತ್ಯೇಕಾಂಶದ ವರ್ಣನೆಯು ಸಾಮಾನ್ಯವಾಗಿ ಬರುವುದೇ ಹೊರತು ಈ ಸಮಸ್ತ ರಸಸಾಮಗ್ರಿಗಳಿಗೂ ಸರ್ವಾಂಗಪರಿಪೂರ್ಣವಾದ ನಿರೂಪಣೆಯು ಸಿಕ್ಕುವುದು ಅತ್ಯಂತ ವಿರಳ; ಸಿಕ್ಕುವುದೇ ಇಲ್ಲವೆಂದರೂ ಎನ್ನಬಹುದು. ಉದಾಹರಣೆಗೆ ನಾಗವರ್ಮನು ಪ್ರತ್ಯೇಕರಸಗಳಿಗೆ ಉದಾಹರಣೆಗಳೆಂದು ಹೇಳಿಕೊಟ್ಟಿರುವ ಶ್ಲೋಕಗಳನ್ನು ಪರೀಕ್ಷಿಸಬಹುದು:

ಪದೆಯಿಸಿ ಸೋಂಕಿ ಸಂಕೆಗಿಡೆ ನೋಳಿಸಿ ಮೆಯ್ಯುಡೆ ಕಳ್ತು ತೋಳ ತ-
ಳ್ತಿದಿರ್ಗೊಳೆ ಮೆಲ್ಲನಪ್ಪಿ ಮೊಗಮಿತ್ತಿರೆ ಚುಂಬಿಸಿ ಸೋಲ್ತು ನಾಣಸೊ-
ಕ್ಕುದನೞಿದಿೞ್ದು ಕಾರ್ತನದ ಲಲ್ಲೆಗಳಂ ನುಡಿದಂತಲಂಪಿನು-
ಬ್ಬಿದಿಗಮನಾ ಲತಾಂಗಿಗೆ ನೃಪಂ ಪಡೆದಂ ನವಸಂಪ್ರಯೋಗದೊಳ್[1] ||

ಇದು ನಾಗವರ್ಮನ ಪ್ರಕಾರ ಸಂಭೋಗಶೃಂಗಾರಕ್ಕೆ ಉದಾಹರಣೆ. ಇಲ್ಲಿ ಪ್ರಸ್ತುತವಾದುದು 'ಮುಗ್ಧಸಮಾಗಮ.' ಶ್ಲೋಕದಲ್ಲಿ 'ರತಿ'ಯ ಆಲಂಬನ ವಿಭಾವಗಳ ಹಾಗು ಕೆಲವು ಅನುಭಾವಗಳ ಪ್ರಸ್ತಾಪವಿರುವುದೇ ಹೊರತು ಉದ್ದೀಪಕ ಸಾಮಗ್ರಿಗಳ ಮತ್ತು ವ್ಯಭಿಚಾರಿಭಾವಗಳ ಪ್ರಸ್ತಾಪವಿಲ್ಲ.

ಇನಿಯನಗಲ್ದು ಪೋಗಿ ಪರದೇಶದೊಳಿರ್ದಪನಾನುಮಿಲ್ಲಿ ಮಾ-
ವಿನ ತಳಿರ್ವಾಸಿನೊಳ್ ಪೊರಳುತಿರ್ದಪೆನಾಗಳುಮಿಂತೆ ನೀನುಮೆ- |
ನ್ನನೆ ನಡೆ ನೋಡುತುಂ ನಭದೊಳಿರ್ದಪಯಪ್ಪುದಱಿಂದೆ ನಿನ್ನನಾ-
ನನುವಿಪೆನೆನ್ನ ಮೆಯ್ ಬಡವೊ ನಲ್ಲನ ಮೆಯ್ ಬಡವೋ ನಿಶಾಕರಾ[2] ||

ಇದು ವಿಪ್ರಲಂಭಶೃಂಗಾರಕ್ಕೆ ಉದಾಹರಣೆ. ಈ ಶ್ಲೋಕದಲ್ಲಿ ಮಾತ್ರ ಆಲಂಬನೋದ್ದೀಪಕ ವಿಭಾವಗಳ, ಅನುಭಾವಗಳ, ಹಾಗು ಶಂಕೆಯೆಂಬ ವ್ಯಭಿಚಾರಿಭಾವದ, ಸಂಯೋಗವನ್ನು ಸ್ಪಷ್ಟವಾಗಿ ನೋಡಬಹುದು. ಆದರೆ,

ಪದವೆತ್ತಿರ್ದರ ಜೀವನೊಂದೊಡಲೆ ಬೇಱೆಂಬಂತುಟಂ ಮಾಡಿದಂ
ಮದನಂಗಾವುದು ದೋಷಮುಂತೆ ನುಡಿಯಲ್ಕೇಂ ಬರ್ಕುಮೇ ಪಾಪಮಂ |
ಬಿದಿಯೆಂಬಾಱಿಡಿಗಳ್ಳನಿಂದಮುಱಿವಾಯ್ತಿರ್ದರ್ಗರ್ವಿನ್ನೊರ್ಮೆ ದೈ-
ವದಿನೆತ್ತಾನುಮದಿಂದುಬಿಂಬಮುಖಿಯಂ ಕಾಣ್ಬೊಂದು ಸಯ್ಪುಕ್ಕುಮೇ[3] ||

ಎಂಬ ಅದೇ ವಿಪ್ರಲಂಭಶೃಂಗಾರದ ಇನ್ನೊಂದು ಉದಾಹರಣೆಯಲ್ಲಿ ವ್ಯಭಿಚಾರಿಭಾವಗಳ ಪ್ರಸ್ತಾಪವಿರುವುದೇ ಹೊರತು ಅನುಭಾವಗಳಾಗಲಿ ಉದ್ದೀಪಕ ವಿಭಾವಗಳಾಗಲಿ ವರ್ಣಿತವಾಗಿಲ್ಲ.

ಹಾಗೆಯೇ—

ಕುಳ್ಳಿರ್ದು ಕುಳಿರ್ವ ಮೞೆಯೊಳ್
ಪಳ್ಳದ ಕೇದಗೆಗೆ ಪಾಯ್ದು ಪತ್ತಿದ ಕೆಯ್ಯಂ |
ಮುಳ್ಳುರ್ಚೆ ತೆಱೆದು ಪಲ್ಲಂ
ಘೊಳ್ಳನೆ ನಗಿಸಿದುದು ಕಟಕಮಂ ಮರ್ಕಟಕಂ[4] ||

---

[1] ಕಾವ್ಯಾವಲೋಕನಂ, ೮೦೦.

[2] ಕಾವ್ಯಾವಲೋಕನಂ, ೮೦೭.

[3] ಕಾವ್ಯಾವಲೋಕನಂ, ೮೦೫.

[4] ಕಾವ್ಯಾವಲೋಕನಂ, ೮೧೩

ಎಂಬ ಹಾಸ್ಯರಸದ ಉದಾಹರಣೆಯಲ್ಲಿಯೂ ಆಲಂಬನೋದ್ದೀಪಕ ವಿಭಾವಗಳ ವರ್ಣನೆಯಲ್ಲದೆ ಅನುಭಾವಗಳ ಅಥವಾ ವ್ಯಭಿಚಾರಿಭಾವಗಳ ಪ್ರಸಕ್ತಿಯಿಲ್ಲ. ಹೀಗೆ ನಿರ್ದಿಷ್ಟ ಉದಾಹರಣೆಗಳಲ್ಲಿ ವಿಭಾವಾದಿಗಳ ಸಂಯೋಗವು ವಿಕಲವಾಗಿರುವುದೇ ಹೆಚ್ಚಾಗುದುದರಿಂದ ಅವುಗಳನ್ನು ರಸಕ್ಕೆ ಸರಿಯಾದ ಉದಾಹರಣೆಗಳೆನ್ನುವುದು ಹೇಗೆಂಬ ಪ್ರಶ್ನೆಯು ತಲೆದೋರುತ್ತದೆ. ಕಾವ್ಯಪ್ರಕಾಶಕಾರನೂ ಕೂಡ ಈ ವಾದದ ಸತ್ಯತೆಯನ್ನು ಅಂಗೀಕರಿಸುತ್ತಾನೆ. ಆದರೆ ರಸಸಾಮಗ್ರಿಯು ವಿಕಲವಾದೆಡೆಗಳಲ್ಲಿಯೂ ರಸನಿಷ್ಪತ್ತಿಕಾರಕಗಳಾದ ಮಿಕ್ಕವುಗಳನ್ನು ಊಹೆಮಾಡಿಕೊಳ್ಳುವಂತಿರುವುದು ಅವುಗಳ ಅಸಾಧಾರಣತ್ವವೆಂದು ಹಾರಿಸಿಬಿಡುತ್ತಾನೆ. ಈ ಕೊನೆಯ ಶ್ಲೋಕದಲ್ಲಿ ಕೇವಲ ವಿಭಾವಗಳೇ ಇದ್ದರೂ, ಅಲ್ಲಿಲ್ಲದ ಅನುಭಾವ, ವ್ಯಭಿಚಾರಿಭಾವಗಳನ್ನು ಸಹೃದಯರು ಸ್ವಬುದ್ಧಿಯಿಂದ ಊಹಿಸಿಕೊಳ್ಳುವಂತೆ ಮಾಡುವ ಅಸಾಧಾರಣತ್ವವೂ ಈ ವಿಭಾವವೊಂದಕ್ಕೇ ಇರುವುದೆಂದು ಮಮ್ಮಟನ ಅಭಿಪ್ರಾಯ[1]. ಆನಂದವರ್ಧನನು ಮಾತ್ರ ಈ ಚರ್ಚೆಯನ್ನು ಬೆಳೆಯಿಸಿಲ್ಲ. ಆದರೆ ಅಸಂಲಕ್ಷ್ಯಕ್ರಮಧ್ವನಿಗೆ ಹೆಚ್ಚು ಉದಾಹರಣೆಗಳನ್ನು ಕೊಡುವುದಕ್ಕೂ ಕೈಹಾಕಿಲ್ಲ. ರಸವು ಪ್ರತೀತವಾಗಲು ಒಂದು ವಾಕ್ಯಕ್ಕಿಂತ ಹೆಚ್ಚಾಗಿ ಒಂದು ದೀರ್ಘವರ್ಣನಾಭಾಗಕ್ಕೆ, ಇಲ್ಲವೆ ಒಂದು ಕಾವ್ಯಸರ್ಗಕ್ಕೆ, ಇಲ್ಲವೆ ಒಟ್ಟು ಪ್ರಬಂಧಕ್ಕೆ, ಅವಕಾಶವು ಸಾಕಷ್ಟು ದೊರೆಯುವುದೆಂಬುದೇ ಅವನ ಮತ. ಒಟ್ಟು ರಾಮಾಯಣದಲ್ಲಿ ಕರುಣರಸವನ್ನೂ ಮಹಾಭಾರತದಲ್ಲಿ ಶಾಂತರಸವನ್ನೂ ಆನಂದವರ್ಧನನು ಆರಂಭದಿಂದ ಅಂತ್ಯದವರೆಗೂ ಅನುಸ್ಯೂತವಾಗಿರುವುದೆಂದು ತೋರಿಸಿದುದರ ಮರ್ಮವೇ ಇದು. ಇಂದಿನ ಭಾವಗೀತೆಗಳ ಸೊಗಸಿಗೂ 'ಅಸಂಲಕ್ಷ್ಯಕ್ರಮ'-ವ್ಯಂಗ್ಯಧ್ವನಿಯೇ ಬಹುಮಟ್ಟಿಗೆ ಕಾರಣವೆನ್ನಲಡ್ಡಿಯಿಲ್ಲ. ಹೀಗೆ ರಸ-ಧ್ವನಿಗೆ ಉದಾಹರಣೆಗಳನ್ನು ಕೊಡುವ ಕಾರಣವಿಲ್ಲದಿದ್ದರೂ ರಸಪ್ರತೀತಿಗೆ ಪೋಷಕವಾಗುವಂತೆ, ಅಕ್ಷರಗಳು, ಶಬ್ದಗಳು, ಪದರಚನೆ, ಸಮಾಸ, ಸಂಧಿ, ಪ್ರತ್ಯಯ ಮೊದಲಾದುವೆಲ್ಲವೂ ಪ್ರಯುಕ್ತವಾಗಬಹುದೆಂಬುದನ್ನು ನಿರ್ದಿಷ್ಟ ಉದಾಹರಣೆಗಳ ಮೂಲಕ ತೋರಿಸಬಹುದು :—

> ನುಡಿದುದನೆಯ್ದೆ ತುತ್ತತುದಿಯೆಯ್ದುವಿನಂ ನುಡಿದಂ ಚಲಂ ಚಲಂ
> ಬಿಡಿದುದನೆಯ್ದೆ ಮುಂ ಪಿಡಿಸುದಂ ಪಿಡಿದಂ ಸಲೆ ಪೂಣ್ದು ಪೂಣ್ಕೆ ನೇ-|

[1] '(ಲಕ್ಷ್ಯೇಷು) ಯದ್ಯಪಿ ವಿಭಾವಾನಾಮನುಭಾವಾನಾಂ ವ್ಯಭಿಚಾರಿಣಾಂ ಕೇವಲಾನಾಂ ಸ್ಥಿತಿಃ, ತಥಾಪ್ಯೇತೇಷಾಮಸಾಧಾರಣತ್ವಮಿತ್ಯನ್ಯತಮದ್ವಯಾಕ್ಷೇಪಕತ್ವೇ ಸತಿ ನಾನೈಕಾಂತಿಕತ್ವಮಿತಿ.'—ಕಾವ್ಯಪ್ರಕಾಶ, IV, 30 f.

ರ್ಪಡೆ ನಡೆವನ್ನೆಗಂ ನಡೆದನಳ್ಕದೆ ಬಳ್ಕದೆ ತನ್ನೊಡಲ್ ಪಡ
ಲ್ವಡುವಿನಮಣ್ಮುಗುಂದನೆ ದಲೇನಭಿಮಾನಧನಂ ಸುಯೋಧನಂ ||[1]

ದುರ್ಯೋಧನನು ಬಿದ್ದಾಗ ಪಂಪನು ಹಾಡುವ ಈ ಚರಮಗೀತೆಯಲ್ಲಿ ದೇಸಿಮಾತು ಗಳ ಸಮಾಸರಹಿತ ರಚನೆಯು ಕರುಣರಸಕ್ಕೆ ಪೋಷಕವಾಗುವಂತೆಯೇ

ಸುರತರುನಂದನಂಗಳಿರ, ರತ್ನಪಿನದ್ಧವಿಮಾನಕುಟ್ಟಿಮಾಂ—
ತರಸುರತಾಲಯಂಗಳಿರ, ಚಾರುವಿಲೋಲಕಟಾಕ್ಷಪಾತಸಾಂ-|
ದರಪರಿವಾರದೇವಿಯರಿರಾ, ಕಡುಕಯ್ದು ಕೃತಾಂತನಿಂತು ನಿ-
ರ್ದರಮೆಟೆದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇ ||[2]

ಎಂಬ ಲಲಿತಾಂಗನ ಮೊರೆಯಲ್ಲಿ ಕೋಮಲವಾದ ಸಮಾಸರಚನೆಯು ಅದೇ ರಸಕ್ಕೆ ಪುಷ್ಟಿಯನ್ನು ಕೊಡುತ್ತದೆ. 'ಕಡುಕಯ್ದು,' 'ನಿರ್ದರಂ', 'ಎಟೆದು,' 'ಕೆಮ್ಮನೆ' ಮೊದಲಾದ ಪದಗಳಲ್ಲಿಯೂ ವಿಶೇಷವಾದ ಧ್ವನಿಯು ತುಂಬಿರುವುದನ್ನೂ ಗಮನಿಸ ಬಹುದು. ಇಲ್ಲಿ 'ಗಳಿರ' ಎಂಬ ಸಂಬೋಧನೆಯ ವಿಭಕ್ತಿಪ್ರತ್ಯಯವೇ ಪ್ರಸ್ತುತ ರಸಕ್ಕೆ ಪೋಷಣೆಯನ್ನು ತರುತ್ತದೆ. ಇದೇ ರೀತಿ ಕೃತ್ಪ್ರತ್ಯಯವು ಭಾವವ್ಯಂಜಕ ವಾಗುವುದನ್ನು ಕೆಳಗಿನ ಪದ್ಯದಲ್ಲಿ ನೋಡಬಹುದು :—

ತೆಂಕಣ ಗಾಳಿ ಸೋಂಕಿದೊಡಮ್, ಒಳ್ನುಡಿಗೇಳ್ದೊಡಮ್, ಇಂಪನಾಳ್ದ ಗೇ-
ಯಂ ಕಿವಿವೊಕ್ಕೊಡಮ್, ಬಿರಿದ ಮಲ್ಲಿಗೆಗಂಡೊಡಮ್, ಆದಕೆಂದಲಂ|
ಪಂ ಗೆಡೆಗೊಂಡೊಡಮ್, ಮಧುಮಹೋತ್ಸವಮಾದೊಡಮ್, ಏನನೆಂಬೆನಾ-
ರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ ||[3]

ತದ್ಧಿತಾದಿಗಳ ರಸೌಚಿತ್ಯವನ್ನೂ ಹೀಗೆಯೇ ವಾಚಕರು ಊಹಿಸಿಕೊಳ್ಳಬೇಕು. ಆನಂದವರ್ಧನನ ಕಾವ್ಯಮೀಮಾಂಸೆಯ ಪ್ರಕಾರ ಸಾಹಿತ್ಯಾಭ್ಯಾಸದ ಅಥವಾ ಸಹೃದಯತೆಯ ಕೊನೆಯ ಮೆಟ್ಟಿಲೇ ಈ ರಸಿಕತೆ. ಮಹಾಕವಿಯ ರಸವಾಣಿಯಲ್ಲಿ ಪದಗಳ, ಪದಾಂಶಗಳ, ಸ್ವಾರಸ್ಯವನ್ನೂ ಗ್ರಹಿಸುವುದರಲ್ಲಿಯೇ ಈ ರಸಿಕತೆಯು ಚರಿತಾರ್ಥವಾಗುತ್ತದೆ. 'ಅಸಂಲಕ್ಷ್ಯಕ್ರಮವ್ಯಂಗ್ಯ'ವೆನಿಸುವ ಧ್ವನಿಯ ಮಹತ್ವವು ವೇದ್ಯವಾಗುವುದು ಅಂತಹ ರಸಿಕಜನರ ವಿಮರ್ಶೆಗಳಲ್ಲಿ ಮಾತ್ರ. ಶುಷ್ಕವಿದ್ಯಾ ಜಡರಿಗೆ ಇದರ ಮಹತ್ವವು ಕನಸಿನಲ್ಲೂ ತಿಳಿಯಲಾರದು :

---

[1] ಪಂಪಭಾರತಂ, XIII, ೯೭.

[2] ಆದಿಪುರಾಣಂ, III, ೪.

[3] ಪಂಪಭಾರತಂ, IV, ೩೦.

ರಸಮಂ ನಾಲಗೆ ಕವಿತಾ.
ರಸಮಂ ಕವಿ ಕುಸುಮರಸಮನಳಿಮಾಲೆ ಸುಧಾ-|
ರಸಮಂ ಸುರರಕ್ಷಯಸುಖ
ರಸಮಂ ಪರಮಾತ್ಮನಱಿವನುಟಿದವರಱಿಯರ್ ||[1]

IV

'ವಿವಕ್ಷಿತಾನ್ಯಪರವಾಚ್ಯಧ್ವನಿ'ಯ ಪ್ರಥಮ ಪ್ರಕಾರವಾದ 'ಅಸಂಲಕ್ಷ್ಯ ಕ್ರಮವ್ಯಂಗ್ಯ'ವನ್ನು ಮೇಲೆ ವಿವರಿಸಲಾಯಿತು. 'ಸಂಲಕ್ಷ್ಯಕ್ರಮವ್ಯಂಗ್ಯ'ವೆಂಬುದು ಅದೇ ಧ್ವನಿಯ ಎರಡನೆಯ ಪ್ರಕಾರ. ರಸಭಾವಾದಿಗಳ ಪ್ರತೀತಿಗೂ ಮುಖ್ಯಾರ್ಥದ ಪ್ರತೀತಿಗೂ ಕಾಲಭೇದವು ಸ್ಫುಟವಲ್ಲವೆಂಬುದನ್ನು ನೋಡಿದೆವು. ಆದರೆ ವ್ಯಂಗ್ಯವಾದ ವಸ್ತು, ಅಲಂಕಾರಗಳ ಪ್ರತೀತಿಗೂ ಮುಖ್ಯಾರ್ಥದ ಪ್ರತೀತಿಗೂ ಕಾಲಭೇದವು ಸ್ಫುಟವಾಗಿರುತ್ತದೆ. ಹೀಗೆ ಸ್ಫುಟವಾಗಿ ಕಾಲಭೇದವು ಅನುಭವಕ್ಕೆ ಬರುವ ಲಕ್ಷ್ಯ ಗಳನ್ನು 'ಸಂಲಕ್ಷ್ಯಕ್ರಮ'ವೆಂದು ಆನಂದವರ್ಧನನು ಹೇಳುತ್ತಾನೆ. ಈ ಧ್ವನಿಯಲ್ಲಿ ವ್ಯಂಜಕವಾದುದು 'ಶಬ್ದ'ವಾಗಬಹುದು; ಇಲ್ಲವೆ 'ಅರ್ಥ'ವಾಗಬಹುದು. 'ಶಬ್ದ' ವಾಗಿದ್ದರೆ ಅದನ್ನು 'ಶಬ್ದಶಕ್ತಿಮೂಲಧ್ವನಿ'ಯೆನ್ನಲಾಗುತ್ತದೆ; 'ಅರ್ಥ'ವಾಗಿದ್ದರೆ 'ಅರ್ಥಶಕ್ತಿಮೂಲಧ್ವನಿ'ಯೆನ್ನಲಾಗುತ್ತದೆ. ವ್ಯಂಗ್ಯವಾದ ಅಂಶವು ಕೂಡ ನಾಲ್ಕು ರೀತಿಯಾಗಿರಬಹುದು:

೧. ವಸ್ತುವಿನಿಂದ ವಸ್ತು.
೨. ವಸ್ತುವಿನಿಂದ ಅಲಂಕಾರ.
೩. ಅಲಂಕಾರದಿಂದ ವಸ್ತು,
೪. ಅಲಂಕಾರದಿಂದ ಅಲಂಕಾರ.

ಈ ವಸ್ತು ಮತ್ತು ಅಲಂಕಾರಗಳು ವ್ಯಂಗ್ಯವಾಗುವಾಗ 'ಸ್ವತಃಸಂಭವಿ', 'ಕವಿ ಪ್ರೌಢೋಕ್ತಿ-ಮಾತ್ರ-ಸಿದ್ಧ', 'ಕವಿನಿಬದ್ಧಪ್ರೌಢೋಕ್ತಿ-ಮಾತ್ರ-ಸಿದ್ಧ' ಎಂಬ ಮೂರು ದಾರಿಗಳಲ್ಲಿ ಬರುವುವು. ಧ್ವನಿಕಾವ್ಯದ ಪ್ರಪಂಚವು ಇಷ್ಟು ಭೇದಪ್ರಭೇದ ಗಳಿಂದಲೇ ಪೂರ್ಣವಾಗುತ್ತದೆ. ಇವುಗಳಿಗೆ ಉದಾಹರಣೆಯನ್ನು ಕೊಡುವುದಕ್ಕೆ ಮೊದಲು ನಕ್ಷೆಯ ಸಹಾಯದಿಂದ ಈ ಭೇದಗಳನ್ನು ಹೀಗೆ ಚಿತ್ರಿಸಬಹುದು:—

[1] ನಾಗಚಂದ್ರನ ಮಲ್ಲಿನಾಥಪುರಾಣಂ, ೧-೨೮.



ಶಬ್ದದಿಂದಾಗಲಿ ಅರ್ಥದಿಂದಾಗಲಿ ವ್ಯಂಗ್ಯಾರ್ಥವು ಬೇರೆಯಾಗಿ ಒಡೆದು ಕಾಣುತ್ತಿರುವುದೇ ಸಂಲಕ್ಷ್ಯಕ್ರಮಧ್ವನಿಯ ಲಕ್ಷಣ. ಗಂಟೆಯನ್ನು ಬಾರಿಸಿದರೆ ನಾದದ ಅನುರಣನವು ಬಾರಿಸಿದ ಕೆಲವು ಕ್ಷಣಗಳನಂತರದವರೆಗೂ ಪ್ರಸಾರವಾಗುವಂತೆ, ಒಂದು ಶಬ್ದ ಅಥವಾ ಅರ್ಥದ ಪ್ರಥಮ ಪ್ರತೀತಿಯನಂತರ ವ್ಯಂಗ್ಯಾಂಶವು ಅನುರಣಿತವಾಗುತ್ತದೆ. ಆದುದರಿಂದ ಆನಂದವರ್ಧನನು ಈ ಧ್ವನಿಯನ್ನು 'ಅನುರಣನರೂಪ'ವೆಂದು ಕರೆದಿದ್ದಾನೆ. ಶ್ಲೇಷಾಲಂಕಾರದಂತೆ ಕೇವಲ ಶಬ್ದಗಳ ಬಹ್ವರ್ಥ-

4583 VIJAYA EVENING COLLEGE LIBRARY BANGALORE-4.

ಬೋಧಕ ಚಮತ್ಕಾರವನ್ನವಲಂಬಿಸಿ ಬರುವ ಅಲಂಕಾರ ಧ್ವನಿಯನ್ನು 'ಶಬ್ದಶಕ್ತಿ ಮೂಲ (ಅನುರಣನರೂಪ)' ವೆನ್ನಬಹುದು. ಶ್ಲೇಷಾಲಂಕಾರಕ್ಕೂ ಈ ಶಬ್ದಶಕ್ತಿ ಮೂಲಧ್ವನಿಗೂ ಇರುವ ವ್ಯತ್ಯಾಸವಿಷ್ಟೆ: ಶ್ಲೇಷೆಯಲ್ಲಿ ಎರಡು ಪ್ರಕೃತಾರ್ಥಗಳು ಒಂದೇ ಶಬ್ದದಿಂದ ವಾಚ್ಯವಾಗುತ್ತಿರುವುವು. ಆದರೆ ಶಬ್ದಶಕ್ತಿಮೂಲಧ್ವನಿಯಲ್ಲಿ ಪ್ರಕರಣದ ಬಲದಿಂದ ಒಂದೇ ಅರ್ಥವು ಮುಖ್ಯವಾಗಿ ವಾಚ್ಯವಾಗುತ್ತದೆ. ಎರಡನೆಯ ಅರ್ಥವು ತೋರುವುದಕ್ಕೆ ಬೇರೊಂದು ವ್ಯಂಗ್ಯವಾದ ಕಾರಣವಿರುತ್ತದೆ. ಕೆಳಗೆ ಉದಾಹರಿಸಿರುವ ಶ್ಲೋಕದಲ್ಲಿ ರಾಜನನ್ನು ವರ್ಣಿಸುವುದು ಪ್ರಸ್ತುತವಾಗಿರುವುದರಿಂದ, ಚಂದ್ರಸಂಬಂಧವು ಆ ಶಬ್ದಕ್ಕಿದ್ದರೂ ಅದನ್ನು ನಾವು ಸ್ವೀಕರಿಸುವುದಕ್ಕೆ ಮುಂಚೆ 'ರಾಜನು ಚಂದ್ರನಂತೆ ಆನಂದಕರನಾಗಿರುವನು' ಎಂಬ ಉಪಮಾಲಂಕಾರವನ್ನು ಅನುಲಕ್ಷಿಸುತ್ತೇವೆ. ಎರಡನೆಯ ಅರ್ಥವೂ ಕೂಡ ಶ್ಲೇಷಾಲಂಕಾರದ ಪ್ರಭಾವವೇ ಎಂದು ಹೇಳುವವರೂ ಸಹ ಈ ಉಪಮಾಲಂಕಾರವನ್ನು ವ್ಯಂಗ್ಯವೆಂದೇ ಒಪ್ಪಿಕೊಳ್ಳಬೇಕಾಗುವುದು. ಈ ಉಪಮಾಲಂಕಾರವು ವಾಚ್ಯವಾಗಿಲ್ಲದೆ, ವ್ಯಂಗ್ಯವಾಗಿರುವುದರಿಂದ ಇದನ್ನು ಶಬ್ದಶಕ್ತಿಮೂಲಧ್ವನಿಯೆನ್ನಬೇಕು. ಆ ಶಬ್ದಗಳನ್ನು ಪರಿವೃತ್ತಿಮಾಡಿದರೆ ಈ ಧ್ವನಿಯ ಸ್ವಾರಸ್ಯವು ಹೋಗಿಬಿಡುತ್ತದೆ:—

> ಉದಯಾರೂಢಂ ಕಾಂತ್ಯಾ
> ಸ್ಪದನನುರಕ್ತಾತ್ಮ ಮಂಡಳಂ ಕುಮುದಕರಂ |
> ಮೃದುತರಕರಂಗಳಿಂದತಿ
> ಮುದಮಂ ಲೋಕಕ್ಕೆ ಪಡೆಗುಮಿಂತೀ ರಾಜಂ[1] ||

ಆದರೆ ಇದೇ ಶ್ಲೋಕದಲ್ಲಿ 'ಇಂತೀ ರಾಜಂ' ಎಂಬುದಕ್ಕೆ ಬದಲಾಗಿ 'ಚಂದ್ರನಂತೀ ರಾಜಂ' ಎಂದು ಉಪಮಾಲಂಕಾರವನ್ನು ವಾಚ್ಯವಾಗಿ ಹೇಳಿಬಿಟ್ಟಿದ್ದರೆ ಆಗ ಶ್ಲೇಷಾಲಂಕಾರವೇ ಆಗುತ್ತಿತ್ತು. ಈಗಲೂ ಅರಸನು ಮಾತ್ರ ವರ್ಣನೆಗೆ ಪ್ರಸ್ತುತನೆನ್ನುವ ಬದಲು ಅರಸ, ಚಂದ್ರ, ಇಬ್ಬರೂ ಪ್ರಸ್ತುತರೇ ಎಂದುಬಿಟ್ಟರೂ ಶ್ಲೇಷಾಲಂಕಾರವೇ ಆಗುತ್ತದೆ; ಆಗಲೂ ಈ ಎರಡರಲ್ಲಿ ಒಂದಕ್ಕೊಂದು ಸಾಧರ್ಮ್ಯವಿರುವುದೆನ್ನುವುದಾದರೆ ಶ್ಲೇಷಾಲಂಕಾರದ ಜತೆಗೆ ಶಬ್ದಶಕ್ತಿಮೂಲಧ್ವನಿಯೂ ಉಂಟೆಂದೇ ಒಪ್ಪಬೇಕಾಗುತ್ತದೆ.

ಶಬ್ದಶಕ್ತಿಮೂಲಧ್ವನಿಯು ಉಪಮಾಲಂಕಾರದ ಪ್ರತೀತಿಯನ್ನುಂಟುಮಾಡುವಂತೆಯೇ ಬೇರೆ ಅಲಂಕಾರಗಳನ್ನು ಕೂಡ ವ್ಯಕ್ತಗೊಳಿಸಬಹುದು. ಉದಾಹರಣೆಗೆ—

---

[1] ಕವಿರಾಜಮಾರ್ಗಂ, III, ೧೧೦.

ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳಬಂದಿ
ಕೆನ್ನೆ ತುಂಬ ಮುತ್ತು[1].

ಎಂಬಲ್ಲಿ 'ನಾನು ಬಡವಿ, ಆತ ಬಡವ' ಎಂದು ಮೊದಲಾಗುವ ಭಾವವನ್ನು ಲಕ್ಷ್ಯದಲ್ಲಿಟ್ಟರೆ, ಆಲಿಂಗನ ಚುಂಬನಗಳೆಂಬ ಅರ್ಥಾಂತರಗಳು ಶ್ಲೇಷೆಯಿಂದ ವ್ಯಕ್ತವಾದೊಡನೆಯೇ ಅವು ಕೇವಲ ಉಪಮೆಯಲ್ಲಿ ವಿಶ್ರಾಂತವಾಗದೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬಂದಿ ಮುತ್ತುಗಳಿಗಿಂತ ನೂರ್ಮಡಿ ಅಧಿಕವಾದ ಒಡವೆ ವಸ್ತುಗಳಾಗಿದ್ದುವೆಂಬ ವ್ಯತಿರೇಕಾಲಂಕಾರವನ್ನು ಧ್ವನಿಸುತ್ತವೆ.

ಕಾಮಿ ಬಿಟ್ಟೋಡಿದನಬಲೆಯ ಸತ್ರದಿ
ಕಾಮದ ಬಿಸಿಯಾರಿಹೋಗೆ.
ಭೀಮಭವಾರ್ಣವದೊಳಗೀಜಲಬ್ಬರೆ
ರಾಮಿ—ಮತ್ತಾಕೆಯ ಪಾಪ[2]

ಎನ್ನುವಾಗ 'ಪಾಪ' ಎಂದರೆ ಶ್ಲೇಷೆಯ ಮಹಿಮೆಯಿಂದ 'ಶಿಶು' ಮತ್ತು 'ದುಷ್ಕೃತ' ಎಂಬ ಎರಡು ಅರ್ಥಗಳೂ ತೋರುತ್ತವೆ. ಆಮೇಲೆ ಪಾಪದ ಫಲದ ಮೂರ್ತರೂಪವೇ ಶಿಶು ಎಂಬ ಅಭೇದದ ಅಧ್ಯವಸಾಯವೂ ಬರುವುದರಿಂದ ಒಂದು ರೀತಿಯ ಅತಿಶಯೋಕ್ತಿಯ ಛಾಯೆಯನ್ನು ಇಲ್ಲಿ ಕಾಣಬಹುದು. ಇಂತಹ ಸ್ಥಳಗಳಲ್ಲೆಲ್ಲ ಚಮತ್ಕಾರಕ್ಕೆ ಶ್ಲೇಷವನ್ನು ಕಾರಣವೆನ್ನುವುದಕ್ಕಿಂತಲೂ ಶಬ್ದಶಕ್ತಿಮೂಲ ಧ್ವನಿಯನ್ನೇ ಕಾರಣವೆನ್ನಬೇಕೆಂಬುದು ಆನಂದವರ್ಧನನ ಅಭಿಪ್ರಾಯ.

V

ಇನ್ನು ಧ್ವನಿಪ್ರಪಂಚದಲ್ಲಿ ಉದಾಹರಿಸಿ ತೋರಿಸಲು ಉಳಿದಿರುವ ಅಂಶವೆಂದರೆ 'ಅರ್ಥಶಕ್ತಿಮೂಲಧ್ವನಿ'. ಇಲ್ಲಿ ವ್ಯಂಗ್ಯವಾದುದು 'ವಸ್ತು' ಅಥವಾ 'ಅಲಂಕಾರ'ವೇ ಹೊರತು ರಸಭಾವಗಳಲ್ಲವೆಂದು ಹಿಂದೆಯೇ ಹೇಳಲಾಯಿತು. ಏಕೆಂದರೆ ಎಲ್ಲೆಲ್ಲಿ ರಸಭಾವಗಳು ಮುಖ್ಯವಾಗಿ ಕವಿಯಿಂದ ವಿವಕ್ಷಿತವಾಗಿರುವುವೋ ಎಂದರೆ ಎಲ್ಲಿ ಭಾವಾದಿಗಳು ರಸಪ್ರತೀತಿಯಲ್ಲಿ ಪರ್ಯವಸನ್ನವಾಗುವುವೋ, ಅಲ್ಲೆಲ್ಲ ಅವು 'ಅಸಂಲಕ್ಷ್ಯಕ್ರಮ' ಧ್ವನಿಯೇ ಆಗಿಬಿಡುತ್ತವೆ; ಸಂಲಕ್ಷ್ಯಕ್ರಮವಾಗುವುದಿಲ್ಲ. ಮುಖ್ಯ ವಿವಕ್ಷೆಯಿಲ್ಲದಿರುವ ಸಂದರ್ಭದಲ್ಲಿ ಭಾವಾದಿಗಳೂ ಕೂಡ ಸಂಲಕ್ಷ್ಯಕ್ರಮದ

[1] ಅಂಬಿಕಾತನಯದತ್ತರ 'ನಾನು ಬಡವಿ' ಎಂಬ ಕವನ (ನಾದಲೀಲೆ)

[2] ಪು. ತಿ. ನ. ಅವರ 'ರಾಮಿಯ ಗಂಡು' ಎಂಬ ಕವನ (ಮಾಂದಳಿರು)

ಅರ್ಥಶಕ್ತಿ ಮೂಲಧ್ವನಿಯೆನಿಸಬಹುದು. ಅವುಗಳ ಸ್ವಾರಸ್ಯವು ವ್ಯಂಗ್ಯಾಂಶಕ್ಕಿಂತಲೂ ವಾಚ್ಯಾಂಶದಲ್ಲಿಯೇ ಹೆಚ್ಚಾಗಿರುತ್ತದೆ. ಕಾಳಿದಾಸನು 'ಕುಮಾರಸಂಭವ'ದಲ್ಲಿ ಮದುವೆಯ ಮಾತನ್ನು ಕೇಳುತ್ತ ತಂದೆಯ ಪಕ್ಕದಲ್ಲಿ ನಿಂತಿದ್ದ ಪಾರ್ವತಿಯ ಮನೋಭಾವವನ್ನು ವರ್ಣಿಸುವಾಗ, ಆಕೆಯು 'ಅಧೋಮುಖಿಯಾಗಿ • ಲೀಲಾ ಕಮಲಪತ್ರಗಳನ್ನು ಲೆಕ್ಕಮಾಡಿದಳು' ಎನ್ನುತ್ತಾನೆ. ಇಲ್ಲಿ ಅವಳ ನಾಚಿಕೆಯು ವ್ಯಂಗ್ಯ. ಆದರೆ ಈ ನಾಚಿಕೆಯು ಭಾವವಾಗಿಯೇ ಉಳಿಯುವುದೇ ವಿನಾ ಶೃಂಗಾರ ರಸದಲ್ಲಿ ಪರ್ಯವಸನ್ನವಾಗುವುದಿಲ್ಲ. ಆದುದರಿಂದ ಇಂತಹ ರಸತ್ವವನ್ನು ಪಡೆಯದ ಭಾವಧ್ವನಿಯನ್ನು ವ್ಯಂಗ್ಯವಾದ ವಸ್ತು, ಅಲಂಕಾರಗಳ ಜತೆಗೇ ಸೇರಿಸಬಹುದು.

ಈ ಧ್ವನಿಪ್ರಕಾರದ ರಹಸ್ಯವನ್ನು ಗ್ರಹಿಸಬೇಕಾದರೆ ಅಲಂಕಾರಗಳ ರಹಸ್ಯವನ್ನೂ ತಿಳಿಯುವುದು ಅವಶ್ಯವಾಗುತ್ತದೆ. ಪ್ರಸಿದ್ಧವಾದ ಅಲಂಕಾರಗಳಲ್ಲಿ ವ್ಯಂಗ್ಯವಾದ 'ವಸ್ತು'ಗಳು ಇರುವಂತಹ 'ಅಪ್ರಸ್ತುತಪ್ರಶಂಶೆ, 'ಸಮಾಸೋಕ್ತಿ', 'ಪರ್ಯಾಯೋಕ್ತ' ಮೊದಲಾದುವು ಇರುವಂತೆಯೇ ವ್ಯಂಗ್ಯವಾದ ಅಲಂಕಾರಾಂತರಗಳೂ ಇರುವ 'ದೀಪಕ', 'ತುಲ್ಯಯೋಗಿತಾ', 'ದೃಷ್ಟಾಂತ,' 'ಅತಿಶಯೋಕ್ತಿ' ಮೊದಲಾದುವುಗಳೂ ಇರುವುವು. ಸಾದೃಶ್ಯಮೂಲವಾದ ಅಲಂಕಾರಗಳಲ್ಲೆಲ್ಲ ಉಪಮಾಲಂಕಾರವು ವ್ಯಂಗ್ಯವೆನ್ನಬಹುದು. ವಿರೋಧಮೂಲವಾದ ಅಲಂಕಾರಗಳಲ್ಲೆಲ್ಲ 'ವಿರೋಧಾಲಂಕಾರವು' ವ್ಯಂಗ್ಯ. ಹಾಗೆಯೇ ಇನ್ನುಳಿದ ಅಲಂಕಾರಗಳಲ್ಲೂ ಒಂದು ಚಮತ್ಕಾರಾತಿಶಯವನ್ನೊಪ್ಪಿದರೆ ಭಾಮಹಾದಿಗಳು ಹೇಳುವಂತೆ[1] 'ವಕ್ರೋಕ್ತಿ' ಅಥವಾ 'ಅತಿಶಯೋಕ್ತಿ'ಯು ವ್ಯಂಗ್ಯವೆನ್ನಬೇಕು. ಉದ್ಭಟನು ಮಾತ್ರ 'ವಕ್ರೋಕ್ತಿ' ಯೆನ್ನುವ ಬದಲು 'ಶ್ಲೇಷ' ವೆನ್ನುತ್ತಾನೆ. ಈ ಯಾವ ಗುಂಪಿನಲ್ಲೂ ಸೇರದ ಅಲಂಕಾರಗಳೆಂದರೆ 'ಜಾತಿ' ಅಥವಾ 'ಸ್ವಭಾವ' ಮೂಲವಾದ ಅಲಂಕಾರಗಳು. ಇವನ್ನು ಅಲಂಕಾರವೆನ್ನಬಹುದೇ ಇಲ್ಲವೇ ಎಂಬ ಚರ್ಚೆಯು ಪ್ರಾಚೀನರಲ್ಲಿಯೂ ಬಂದಿದೆ. ಹೀಗೆ ಇರುವುದರಿಂದ ಅಲಂಕಾರಗಳಿಗೆಲ್ಲ ಪ್ರಾಣ

---

[1] ಸರ್ವೈವಾತಿಶಯೋಕ್ತಿಸ್ತು ತರ್ಕಯೇತ್ ತಾಂ ಯಥಾಗಮಮ್ ||
ಸೈಷಾ ಸರ್ವತ್ರ ವಕ್ರೋಕ್ತಿರನಯಾರ್ಥೋ ವಿಭಾವ್ಯತೇ |
ಯತ್ನೋಽಸ್ಯಾಂ ಕವಿನಾ ಕಾರ್ಯಃ ಕೋಽಲಂಕಾರೋಽನಯಾ ವಿನಾ ||

—ಕಾವ್ಯಾಲಂಕಾರ, II. ೮೪, ೮೫

ಅಲಂಕಾರಾನ್ತರಾಣಾಮಪ್ಯೇಕಮಾಹುಃ ಪರಾಯಣಮ್ |
ವಾಗೀಶಮಹಿತಾಮುಕ್ತಿಮಿಮಾಮತಿಶಯಾಹ್ವಯಾನ್ ||

—ಕಾವ್ಯಾದರ್ಶ, II, ೨೨೦

ಭೂತವಾದ ಅಂಶವೆಂದರೆ ವ್ಯಂಗ್ಯಾಂಶವೇ ಎಂದು ಒಪ್ಪುವುದು ಅನಿವಾರ್ಯವೇ ಆಗುತ್ತದೆ. ಆದರೆ ವ್ಯಂಗ್ಯಾಂಶವನ್ನು ಅಲಂಕಾರವೆನ್ನಬೇಕೇ ಅಥವಾ ವಾಚ್ಯಾಂಶವನ್ನೇ? ಎಂದು ಕೇಳಿದರೆ, ಚಮತ್ಕಾರಕ್ಕೆ ಹೆಚ್ಚು ಪ್ರಯೋಜಕವಾದುದು ಯಾವ ಅಂಶವೆಂದು ಮೊದಲು ನಿರ್ಧರಿಸಿಕೊಳ್ಳಬೇಕಾಗುತ್ತದೆ; ಆಮೇಲೆ ವಾಚ್ಯಾಂಶವು ಹೆಚ್ಚು ಚಮತ್ಕಾರಕಾರಕವಾಗಿದ್ದರೆ ಯಾವ ಹೆಸರಿನಿಂದ ಅದನ್ನು ಕರೆಯಬೇಕು, ವ್ಯಂಗ್ಯಾಂಶವು ಚಮತ್ಕಾರದಾಯಕವಾಗಿದ್ದರೆ ಯಾವ ಹೆಸರಿನಿಂದ ಕರೆಯಬೇಕು, ಎಂಬ ನಿರ್ಣಯವನ್ನೂ ಮಾಡಿಕೊಳ್ಳಬೇಕಾಗುತ್ತದೆ. ಆನಂದವರ್ಧನನ ಕಾವ್ಯಮೀಮಾಂಸೆಯಲ್ಲಿ ಚಮತ್ಕಾರವುಳ್ಳ ವಾಚ್ಯಾಂಶಕ್ಕೆ ಮಾತ್ರ 'ಅಲಂಕಾರ' ವೆಂಬ ಹೆಸರು; ಚಮತ್ಕಾರವುಳ್ಳ ವ್ಯಗ್ಯಾಂಶಕ್ಕೆಲ್ಲ 'ಧ್ವನಿ' ಯೆಂಬ ಹೆಸರು, ಎಂದು ಈಗಾಗಲೇ ನೋಡಿದ್ದೇವೆ. ಆದುದರಿಂದ ಆನಂದವರ್ಧನನು ಒಪ್ಪುವ 'ಅಲಂಕಾರ' ಗಳಲ್ಲೂ ವ್ಯಂಗ್ಯಾಂಶವಿದ್ದರೆ ಅದು 'ಅಪ್ರಧಾನ' ಅಥವಾ 'ಅಮುಖ್ಯ' ಅಥವಾ 'ಗುಣೀಭೂತ' ವಾಗಿಯೇ ಇರಬೇಕು. ಅಲ್ಲಿ ಮುಖ್ಯವಾದ ಧ್ವನಿಯಿರುವುದಿಲ್ಲ. ಆದುದರಿಂದ ದೀಪಕಾಲಂಕಾರದ ಸ್ಥಳದಲ್ಲೆಲ್ಲ ಉಪಮಾಲಂಕಾರವನ್ನಾಗಲಿ, ಅಪ್ರಸ್ತುತ ಪ್ರಶಂಸೆಗಳಲ್ಲೆಲ್ಲ ವ್ಯಂಗ್ಯವಸ್ತುವನ್ನಾಗಲಿ 'ಧ್ವನಿ 'ಯೆನ್ನಲಾಗದು. ಅವನ್ನು 'ಗುಣೀಭೂತ ವ್ಯಂಗ್ಯ 'ವೆನ್ನಬೇಕು. ವ್ಯಂಗ್ಯಾಂಶದ ಸಂಪರ್ಕವು ಹೀಗೆ ಗೌಣವಾಗಿ ಆದರೂ ಕೂಡ ಕಾವ್ಯಕ್ಕೆ ಸ್ವಾರಸ್ಯವು ಹೆಚ್ಚುತ್ತದೆಂದು ತಿಳಿಯಬೇಕು. ಆದುದರಿಂದ ಈ 'ಗುಣೀಭೂತ ವ್ಯಂಗ್ಯದ' ವ್ಯಾಪ್ತಿಗೆ ಒಳಪಡದೆ ಇರುವ ವಸ್ತು ಮತ್ತು ಅಲಂಕಾರ 'ಧ್ವನಿ 'ಗಳೆಲ್ಲ 'ಅರ್ಥಶಕ್ತಿಮೂಲಧ್ವನಿ 'ಗಳಾಗುತ್ತವೆ. ವ್ಯಂಗ್ಯಾಂಶವು ಎಲ್ಲಿ 'ಧ್ವನಿ', ಎಲ್ಲಿ 'ಗುಣೀಭೂತ', ಎಂದು ಹೇಳಬೇಕಾದರೆ ಅದರ ಪ್ರಾಧಾನ್ಯ, ಅಪ್ರಾಧಾನ್ಯಗಳ ವಿವೇಕವನ್ನು ಮಾಡಿಕೊಂಡಲ್ಲದೆ ಸಾಧ್ಯವಾಗುವುದಿಲ್ಲ.[1] ವ್ಯಂಗ್ಯವು ಪ್ರಧಾನವಾಗಿರುವ ಕಾವ್ಯವಲ್ಲಿ ಒಂದು ಬಗೆಯ ಸೌಂದರ್ಯವು ಬಂದರೆ, ವಾಚ್ಯವು ಪ್ರಧಾನವಾಗಿರುವ ಕಾವ್ಯದಲ್ಲೂ—ವ್ಯಂಗ್ಯವು ಅಲ್ಲಿ ಗುಣೀಭೂತವಾಗಿದ್ದರೆ—ಒಂದು ರೀತಿಯ ಸೌಂದರ್ಯವು ಬರುತ್ತದೆ. ಈಗ ನಾವು ವಿವೇಚಿಸುತ್ತಿರುವುದು ಮೊದಲನೆಯ ಜಾತಿಗೆ ಸೇರಿರುವ ಕಾವ್ಯಗಳನ್ನು; ಎರಡನೆಯದನ್ನು ಮುಂದೆ ವಿವರಿಸಲಾಗುತ್ತದೆ.

ವ್ಯಂಗ್ಯಾಂಶವನ್ನೇ ವಾಚ್ಯವಾಗಿಯೂ ಹೇಳಿಬಿಡುವ ಸಂದರ್ಭದಲ್ಲಿ ಅದು 'ಧ್ವನಿ 'ಯೆನಿಸುವುದಿಲ್ಲ, ಗುಣೀಭೂತವ್ಯಂಗ್ಯ ಅಥವಾ ಅಲಂಕಾರವೆನಿಸುತ್ತದೆ.[2]

---

[1] ... ವಾಚ್ಯವ್ಯಂಗ್ಯಯೋಃ ಪ್ರಾಧಾನ್ಯಾಪ್ರಾಧಾನ್ಯವಿವೇಕೇ ಪರಃ ಪ್ರಯತ್ನೋ ವಿಧಾತವ್ಯಃ; ಯೇನ ಧ್ವನಿಗುಣೀಭೂತವ್ಯಂಗ್ಯಯೋರಲಂಕಾರಾಣಾಂ ಚಾಸಂಕೀರ್ಣೋ ವಿಷಯಃ ಸುಜ್ಞಾತೋ ಭವತಿ.—ಧ್ವನ್ಯಾಲೋಕ, III, 4. ff.

[2] ಧ್ವನ್ಯಾಲೋಕ, II, 23; III, 35. ff.

ಆದುದರಿಂದಲೇ ಮೇಲೆ ಕಾಳಿದಾಸನ ಪಾರ್ವತೀವರ್ಣನೆಯಲ್ಲಿ ನಾವು ನೋಡಿದ ಅರ್ಥಶಕ್ತಿಮೂಲಧ್ವನಿಯು ಕೆಳಗೆ ಕೊಟ್ಟಿರುವ ಲಕ್ಷ್ಮೀಶ, ಕುಮಾರವ್ಯಾಸರ ವರ್ಣನೆಗಳಲ್ಲಿಲ್ಲ :

ರಜ್ಜು ಬಂಧವನುಗಿದ ಮೃಗಸಂತೆ ತಾಂ ನೆನೆದ
ಕಜ್ಜ ಮೊಡಗೂಡಲ್ಕೆ ಮೊಗಮುರಲ್ದುದು ಬಳಿಕ
ಲಜ್ಜೆ ಮೊಳೆದೋರಿದುದು ತಲೆವಾಗಿ ನೆಲನನುಂಗುಟದಿಂದೆ ಬರೆಯುತಿರಲು[1] |

ಇತ್ತ ನೋಡೌ ತಾಯೆ ಹಾರುವ-
ರತ್ತ ಗಡ್ಡದುಪಾಧ್ಯರನು ತಾ-
ವೆತ್ತುವರು ಗಡ ಧನುವನಿಸುವರು ಗಡ ತಿಮಿಂಗಿಲನ |
ಹೊತ್ತುಗಳೆವರೆ ಲೇಸು ಬಳಿಕಿ
ನ್ನುತ್ತಮರಲಾ ವಿಪ್ರರೆನೆ ತಲೆ-
ಗುತ್ತಿ ನಾಚಿದಳುಂಗುಟದೊಳೌಕುತ ಮಹೀತಳವ[2] ||

ಈ ಉದಾಹರಣೆಗಳಲ್ಲಿ 'ಲಜ್ಜೆ ಮೊಳೆದೋರಿದುದು', 'ನಾಚಿದಳು' ಎಂದು ಮುಂದೆ ವ್ಯಂಗ್ಯವಾಗುವ ಅಂಶವನ್ನು ವಾಚ್ಯವಾಗಿಯೂ ಹೇಳಿಬಿಟ್ಟಿದೆ ; ಹೇಳದೆ ಹೋಗಿದ್ದರೆ ಅರ್ಥಶಕ್ತಿ ಮೂಲಧ್ವನಿಗೆ ಇವೂ ಉದಾಹರಣೆಗಳಾಗಬಹುದಾಗಿದ್ದುವು. ಈಗಾಗಲೇ 'ವಸ್ತು'ವಿನಿಂದ ಬರುವ ಅನ್ಯವಸ್ತುಧ್ವನಿಗೆ ಕೆಲವು ಉದಾಹರಣೆಗಳನ್ನು ಪ್ರಾಸಂಗಿಕ ವಾಗಿ ಕೊಡಲಾಗಿದೆ.[3] ಆ ಉದಾಹರಣೆಗಳೂ ಮೇಲೆ ತೋರಿಸಲಾದ ಕಾಳಿದಾಸನ ಪಾರ್ವತೀ ವರ್ಣನೆಯೂ 'ಸ್ವತಃಸಂಭವಿ' ಎಂಬ ಅರ್ಥಶಕ್ತಿಮೂಲಧ್ವನಿಯ ಪ್ರಕಾರದಲ್ಲಿ ಅಂತರ್ಗತವಾಗುತ್ತವೆ. ಇಲ್ಲಿ ವರ್ಣಿತವಾಗಿರುವ ವಿಷಯವು ಅಸಂಭವವೂ ಅಲೌಕಿಕವೂ ಆಗಿರದೆ ಲೋಕದಲ್ಲಿ ಸಂಭವವಾದುದೇ ಆಗಿದೆ. ಆದರೆ ಕವಿಯು ತನ್ನ ಕಲ್ಪನೆಯ ಆವೇಶದಲ್ಲಿ ಲೋಕಾತೀತವಾದ ಘಟನೆಯನ್ನು ವರ್ಣಿಸಿ ದರೆ ಆಗ ಅದು 'ಕವಿಪ್ರೌಢೋಕ್ತಿಸಿದ್ಧ'ವೆನಿಸುತ್ತದೆ. ಆ ವರ್ಣನೆಯು ಸಾಕ್ಷಾ ತ್ತಾಗಿ ಕವಿಯ ಮಾತಾಗಿರದೆ ಕವಿಯು ಸೃಷ್ಟಿಸಿದ ಯಾವುದಾದರೊಂದು ಪಾತ್ರದ ಮಾತಾಗಿದ್ದರೆ ಆಗ 'ಕವಿನಿಬದ್ಧ ಪ್ರೌಢೋಕ್ತಿಸಿದ್ಧ'ವೆನಿಸಿಕೊಳ್ಳುತ್ತದೆ.

ದಂಡಿಯಂತೆ ನೃಪತುಂಗನು 'ಅಗ್ರಾಮ್ಯಗುಣ'ವೆಂದು ಹೇಳುವ ಅಂಶವು ಆನಂದವರ್ಧನನ 'ಕವಿ ಪ್ರೌಢೋಕ್ತಿ'ಯಲ್ಲೇ ಅಂತರ್ಗತವಾಗುತ್ತದೆ.

---

[1] ಜೈಮಿನಿ ಭಾರತ. XXXI, 4.

[2] ಕುಮಾರವ್ಯಾಸ ಭಾರತ, I, XV. 20.

[3] ಪ್ರಬುದ್ಧ ಕರ್ಣಾಟಕ, ಸಂಪುಟ ೩೧, ಸಂಚಿಕೆ ೨, ಪು ೭೩-೪.

ನೆನೆದಿರುಳುಂ ಪಗಲುಂ ನಿ
ನ್ನನೆ ಪೀನವೊಱಿಲ್ದು ಮಱುಗಿ ಕಾತರಿಸುತ್ತುಂ |
ಮನದೊಳ್ ಸೈರಿಸಲಾಱೆಂ
ನಿನಗಿನಿಸುಂ ಕರುಣಮಿಲ್ಲ ಮರವಾನಿಸನ್ನೆ ||[1]

ಎಂದು ಹೇಳುವುದು ಗ್ರಾಮ್ಯಾಲಾಪ. ಆದರೆ ಅದನ್ನೇ

ಕಂದರ್ಪಂ ಚಲದೆನ್ನೊಳ್
ನಿಂದಂ ಮುನಿಸಿಲ್ಲ ನಿನ್ನೊಳಾತಂಗಿನಿಸುಂ |[2]

ಎಂದು ವರ್ಣಿಸಿದರೆ, ನೃಪತುಂಗನ ಪ್ರಕಾರ 'ಅಗ್ರಾಮ್ಯ ಗುಣ'; ಆನಂದವರ್ಧನನ ಪರಿಭಾಷೆಯಲ್ಲಿ ಪ್ರೌಢೋಕ್ತಿಸಿದ್ಧವಾದ ಅರ್ಥಶಕ್ತಿಮೂಲಧ್ವನಿ. ಇದು ಕವಿಯ ವಾಕ್ಯವಾಗಿರದೆ ಶೃಂಗಾರ-ನಾಯಕನ ವಾಕ್ಯವಾಗಿರುವುದರಿಂದ ಇದನ್ನೇ 'ಕವಿನಿಬದ್ಧ' ಪ್ರೌಢೋಕ್ತಿಯೆನ್ನಬೇಕು. ಆದರೆ—

ಎನಿತೆನಿತಂಬುಜಪತ್ರನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ |
ಅನಿತನಿತಂ ವನದೊಳ್ ವನೇಚರಂ
ತನತ್ತು ಬಿಲ್ಲಾನದನಂತು ಕೀಸುಗುಂ[3] ||

ಎಂಬ ಪದ್ಯದಲ್ಲಿ ಮೊದಲು ಸಾಹಸಿಯಾಗಿದ್ದ ಬೇಡನು ಈಗ ಹೆಣ್ಣಿನ ಸೌಂದರ್ಯಕ್ಕೆ ಮರುಳಾಗಿ ಕೃಶಾಂಗನೂ ದುರ್ಬಲನೂ ಆಗಿರುವನೆಂಬ ವಸ್ತುವು ಆತನು ತನ್ನ ಬಿಲ್ಲನ್ನು ಸಣ್ಣಗೆ ಮಾಡಿಕೊಳ್ಳುತ್ತಿದ್ದಾನೆಂಬ ವಸ್ತುವರ್ಣನೆಯಿಂದ ವ್ಯಂಗ್ಯವಾಗುತ್ತದೆ. ಈ ಉದಾಹರಣೆಯು 'ಸ್ವತಃಸಂಭವಿ'; ಏಕೆಂದರೆ ಬಿಲ್ಲನ್ನು ಎತ್ತಲಾರದಿರುವಾಗ ಸಣ್ಣಗೆ ಮಾಡಿಕೊಳ್ಳುವುದು ಅಸಂಭವವಾದುದೇನೂ ಅಲ್ಲ. ಆದರೆ ಕಿರಾತೆಯ ಲಾವಣ್ಯವು ಎಷ್ಟೆಷ್ಟು ಹೆಚ್ಚುವುದೋ ಅಷ್ಟಷ್ಟೇ ಪ್ರಮಾಣದಲ್ಲಿ ಬಿಲ್ಲನ್ನು ಕುಗ್ಗಿಸುವನು ಎನ್ನುವಾಗ ಕವಿಪ್ರೌಢೋಕ್ತಿಯೂ ಸೇರಿಕೊಂಡಿದೆ. ಕವಿಯ ಕಲ್ಪನೆಯಲ್ಲಿ ಈ ಎರಡಕ್ಕೂ ಸಾಮ್ಯವಿರಬಹುದೇ ಹೊರತು ಲೋಕದಲ್ಲಿಲ್ಲ.

ಈ 'ಸ್ವತಃಸಂಭವಿ'ಯಾದ ಅರ್ಥಶಕ್ತಿಮೂಲ ವಸ್ತುಧ್ವನಿಗೆ ಇಂದುಮತೀ ಸ್ವಯಂವರ-ಪ್ರಸ್ತಾವದಲ್ಲಿ ಕಾಳಿದಾಸನು ವರ್ಣಿಸುವ ರಾಜಕುಮಾರರ ಶೃಂಗಾರ ಚೇಷ್ಟೆಗಳು ಉತ್ತಮವಾದ ಉದಾಹರಣೆ. ಕಾಮಶಾಸ್ತ್ರದ ವಿವಿಧ ಭಂಗೀವಿನ್ಯಾಸಗಳು

[1] ಕವಿರಾಜಮಾರ್ಗಂ, II, ೮೩.

[2] ,, II, ೮೪ b.

[3] ಕಾವ್ಯಾವಲೋಕನಂ, ೩೫೯.

ಈ ವರ್ಣನೆಯಿಂದ ಧ್ವನಿತವಾಗುವುವೆಂದು ಮಲ್ಲಿನಾಥನು ವಿವರಿಸಿದ್ದಾನೆ. ಈ ಭಾಗವನ್ನು ಕನ್ನಡಕ್ಕೆ ಪರಿವರ್ತಿಸಿಕೊಂಡಿರುವ ಪೊನ್ನನ ಶಾಂತಿಪುರಾಣದ ಪದ್ಯಗಳನ್ನು ಕೆಳಗೆ ಬರೆಯಲಾಗಿದೆ:—

ಲೀಲಾಬ್ಜಮಂ ಕರೋದ್ಧೃತ-
ನಾಲಮನಂತಃಪರಾಗಪರಿವೇಷಮನಾ- |
ಲೋಲದಲನಿಹತಮಧುಕರ-
ಮಾಲೆಯನೊರ್ವಂ ತಗುಳ್ದು ತಿರಿಪಿದನಾಗಳ್[1] ||

ಇಂಬಾಗಿರೆಯಂ ಮಕುಟಮ-
ದಂ ಬಿಣ್ಪಿನೊಳೋರೆವೋದೊಡೋಸರಿಪವೊಲೊ- |
ರ್ವಂ ಬಹಳನಖಮಯೂಖ ಕ-
ದಂಬಕಮಂ ಕರಮನುತ್ತಮಾಂಗಕ್ಕೊಯ್ದಂ[2] ||

ಎಡಗೈಯನೂಱಿ ಪೀಠದ
ಕಡೆಯೊಳ್ ಮುಯ್ಯುದ್ದಮಾಗೆ ಮುರಿದ ಬೆಡಂಗ-|
ಚ್ಚುಡಿದಿರೆ ಹಾರಂ ಕೆಲಕೋ-
ರ್ಗುಡಿಸೆ ನಿಜಾನುಗರೊಳಾಗಳೊರ್ವಂ ನುಡಿದಂ ||

ಹಾರದ ಲಂಬಣಮಂ ಕೇ-
ಯೂರಶಿಖಾಕೋಟಿಯೊಳ್ ತಗುಳ್ದುದನಿಭಹ-|
ಸ್ತೋರುಭುಜಂ ಸಾಚೀಕೃತ-
ಚಾರುವದನನೊರ್ವನಿರದುರಕ್ಕದನುಯ್ದಂ ||

ಬಗೆ ಮತ್ತೊಂದೆನೆಯುಂ ಗೆ-
ಯ್ವೆಗವಿತ್ತೊಂದೆನೆಯುಮ್, ಅಂಗುಳೀನಖಚಯಕಾಂ-|
ತಿಗಳನವಗಯಿಸ್ಸಿ ಸಲೆ ಪಾ-
ಸಗೆಯ ದೆಸೆದೆಸೆಗೆ ಪೊರಳ್ಚಿದಂ ಮತ್ತೊರ್ವಂ ||[3]

ಮೇಲಿನವೆಲ್ಲಾ ವಸ್ತುವಿನಿಂದ ವ್ಯಂಗ್ಯವಾಗುವ ವಸ್ತುವಿಗೆ ಉದಾಹರಣೆಗಳು. ಅಲಂಕಾರದಿಂದ ವ್ಯಂಗ್ಯವಾಗುವ ವಸ್ತುವಿಗೆ ಕೆಳಗಿನ 'ವಂದಿವೃಂದಾರಕರ ಮಂಗಳ ವಚನರಚನೆ'ಯನ್ನು ಉದಾಹರಿಸಬಹುದು—

[1] ಶಾಂತಿಪುರಾಣಂ, V, ೧೦೦.

[2] ಶಾಂತಿಪುರಾಣಂ, V, ೧೦೨.

[3] ಶಾಂತಿಪುರಾಣಂ, V, ೧೦೩-೧೦೫.

ವಾರಿಜಗಂಧಿ ವಿಭಾತ ಸ-
ಮೀರಂ, ನಿಜಸುರಭಿ ನಿನ್ನ ಸುಯ್, ಅದರೊಳದೆಂ-
ತೋರಂತಕ್ಕುಮೊ ? ಪರಗುಣ
ಹಾರಿಗೆ ನಿಜಗುಣಮದೇಕೆ ಸಮನಿಸಿದಪುದೋ ? ||[1]

ಇಲ್ಲಿ ಸುಪ್ರಭಾತವಾಯಿತೆಂಬ ವಸ್ತುವು ವಾಚ್ಯವಾದ ವ್ಯತಿರೇಕಾಲಂಕಾರದಿಂದ ವ್ಯಂಗ್ಯ. ಗಾಳಿಯ ಪರಿಮಳವು ಸಹಜ ಅಥವಾ ನಿಸರ್ಗಸಿದ್ಧವಲ್ಲ; ಪದ್ಮಗಳಿಂದ ಪಡೆದುದು. ಆದರೆ ರಾಜನ ಉಸಿರು ಸ್ವಭಾವವಾಗಿಯೇ ಸುರಭಿ. ಎಂದು ಮುಂತಾಗಿ ರಾಜನನ್ನು ಗಾಳಿಗಿಂತಲೂ ಮಿಗಿಲೆಂದು ವರ್ಣಿಸುವಾಗ ವ್ಯತಿರೇಕಾಲಂಕಾರ. ಆದರೆ ಪದ್ಮಗಳು ಅರಳಿ ಅವುಗಳ ಪರಿಮಳವನ್ನು ಗಾಳಿಯು ಹೊತ್ತು ಬೀಸುತ್ತಿದೆ ಎನ್ನುವುದರಿಂದ ಬೆಳಗಾಯಿತು ಎಂಬ ವಸ್ತು ವ್ಯಂಗ್ಯ. ಆದರೆ ವಾಚ್ಯಾಂಶವನ್ನು ನೇರವಾಗಿ ಹೇಳದೆ ಕವಿಯು ವ್ಯತಿರೇಕಾಲಂಕಾರದ ಮೂಲಕ ಬಿಂಬಿಸಿದ್ದಾನೆ. ವ್ಯಂಗ್ಯಾಂಶವಿರುವುದರಿಂದ ಅಲಂಕಾರಕ್ಕೆ ಹೊಸ ಸೊಗಸು ಬರುತ್ತದೆ.

ಕೆಳಗಿನ ವಸಂತವರ್ಣನೆಯಲ್ಲಿ ಕವಿಪ್ರೌಢೋಕ್ತಿಸಿದ್ಧವಾದ ವಸ್ತುವಿನಿಂದ ಅತಿಶಯೋಕ್ತ್ಯಲಂಕಾರವು ವ್ಯಂಗ್ಯ—

ಮನಸಿಜಚಕ್ರವರ್ತಿ ನಡೆಯುತ್ತಿರೆ ದಿಗ್ವಿಜಯಕ್ಕೆ ಮುಂದು ಮುಂ-
ದನೆ ಮಧು ಬಂದು ಮಚ್ಚಱಿದು ಕೂಡೆ ವಿನಿರ್ಮಿಸಿದೋಳಿವೀಡು ನಂ-|
ದನಚಯಮಲ್ಲಿ ರಾಜಿಪುವು ಬಳ್ಳಿಗವುಂಗಿನ ತಟ್ಟಿ ಬಳ್ಳಿಮಾ-
ವಿನ ಮನೆ ಬಳ್ಳಿಮಲ್ಲಿಗೆಯ ಮಂಡಪಮೆಂಬಿನಿತುಂ ಬಸಂತದೊಳ್ ||[2]

ಇದರಂತೆಯೇ ಕೆಳಗೆ ಬರೆದ ಸ್ತ್ರೀರೂಪವರ್ಣನೆಯಲ್ಲಿ ಅಪಹ್ನುತ್ಯಲಂಕಾರದಿಂದ ನಾಯಿಕೆಯು ಚಂದ್ರನಂತೆ ರಮಣೀಯಳೂ, ತೆಂಗಾಳಿಯಂತೆ ಸುಖಸ್ಪರ್ಶಳೂ, ಚಂದನದಂತೆ ಗಂಧವತಿಯೂ, ಕಮಲದಂತೆ ಕಮನೀಯಳೂ, ಇಮ್ಮಾವಿನಂತೆ ಮಧುರಳೂ, ಮಲ್ಲಿಗೆಯಂತೆ ಮನೋಹರಳೂ, ಅಮೃತದಂತೆ ಸಂಜೀವನಶಕ್ತಿಯುಳ್ಳವಳೂ ಆಗಿರುವಳೆಂಬ ಮಾಲೋಪಮೆಯು ವ್ಯಂಗ್ಯ—

ಜಗಮಂ ಮಾಡಿದ ಪದ್ಮಜಂ ಪಡೆದನಿಲ್ಲೀ ಕನ್ನೆಯಂ ಮಾಡುವ-
ಲ್ಲಿಗೆ ಚಂದ್ರಂ ಮಳಯಾನಿಳಂ ಮಳಯಜಂ ನೀರೇಜಮಿಮ್ಮಾವು ಮ-|
ಲ್ಲಿಗೆಯೆಂದಿಂತಿವನಟ್ಟಿಱಿಂದಮರ್ದಿನೊಳ್ ತಾನಟ್ಟಿಯಿಂ ತೊಯ್ದು ಮೆ-
ಲ್ಲಗೆ ಸಂದಂಗಜನೆಂಬಜಂ ಪಡೆದನಂತಾ ಕಾಂತೆಗೀ ಕಾಂತಿಯಂ ||[3]

---

[1] ಶಾಂತಿಪುರಾಣಂ, V, ೮೫.

[2] ಶಾಂತಿಪುರಾಣಂ, VII, ೧೩೦

[3] ಪಂಪಭಾರತಂ, IV, ೭೫

‘ ನಿನಗಿಲ್ಲ ಸ್ವಾಗತವಿಲ್ಲ ; ಬೇರೆಲ್ಲಾದರೂ ಹೋಗಬಹುದು ’ ಎಂಬ ವಸ್ತುವು ಕೆಳಗಿನ ಸರಸಸಲ್ಲಾಪದಿಂದ ವ್ಯಂಗ್ಯ—

> ವನಜಾತಾನನೆ ಪೇಟ್ ಸುಧಾಂಶುಯತ ಕೇಳ್ ಹಂಸಾಂಗನಾಯಾನೆ ಪೇಟ್
> ಘನನಾದಾನ್ವಿತ ಕೇಳ್ ಮದದ್ವಿರದಕುಂಭೋರೋಜೆ ಪೇಟ್ ಸಿಂಹಶಾ-|
> ರ್ಯನೆ ಕೇಳ್ ಮತ್ತಮದಾಳಿಕಾಕಬರಿ ಪೇಟ್ ಚಂಪಕಾಮೋದೆ ಕೇ-
> ಳೆನಲಾ ಕಾಂತೆಯನಂತೆ ಬಿಟ್ಟನದನಿನ್ನೇನೆಂಬೆನಾಶ್ಚರ್ಯಮಂ ||[1]

ಈ ಉದಾಹರಣೆಗಳನ್ನು ಇನ್ನು ಹೆಚ್ಚಾಗಿ ಬೆಳೆಸಬೇಕಾಗಿಲ್ಲ.

VI

ಮೇಲೆ ವಿವರಿಸಿದ ಧ್ವನಿಪ್ರಪಂಚದ ವ್ಯಾಪ್ತಿವೈಶಾಲ್ಯವನ್ನು ಗ್ರಹಿಸಿದರೆ ಕಾವ್ಯ ವೈವಿಧ್ಯದ ಮರ್ಮವೂ ಅರ್ಥವಾಗುತ್ತದೆ. ಕೇವಲ ಅಲಂಕಾರಗಳಿಂದ ಬರುವ ಚಮತ್ಕಾರಕ್ಕೂ ಧ್ವನಿಸಂಪರ್ಕದಿಂದ ಅವುಗಳಿಗೆ ಬರುವ ಚಮತ್ಕಾರಕ್ಕೂ ಇರುವ ಅಂತರವನ್ನು ಕವಿಯು ಗ್ರಹಿಸದೆ ಹೋದರೆ ಪಾಂಡಿತ್ಯಪ್ರದರ್ಶಕವಾದ ಶಬ್ದಾಡಂಬರವೇ ಹೆಚ್ಚಿ ಶುಷ್ಕರಚನೆಗಳು ಹೊರಬೀಳುತ್ತವೆ. ಸಂಸ್ಕೃತ ಚಂಪೂಕಾವ್ಯಗಳ ಶುಷ್ಕತೆಗೆ ಇದೇ ಕಾರಣ. ಅನೇಕ ರಸಸ್ಥಾನಗಳಿಗೆ ಆಗರವಾದ ಒಂದು ಕಥಾ ಸೂತ್ರವನ್ನಾರಿಸಿ ಕವಿಯು ರಸದೃಷ್ಟಿಯಿಂದ ಮಾತ್ರ ವರ್ಣನೆಗಳನ್ನು ಮಾಡಿದರೆ ಆಗ ಒಂದು ಮಹಾಕಾವ್ಯವಾಗುತ್ತದೆ. ಶೈಲಿಯು ಗದ್ಯವಾಗಿರಬಹುದು, ಪದ್ಯವಾಗಿರ ಬಹುದು, ಅಥವಾ ಮಿಶ್ರವಾಗಿರಬಹುದು—ಇದರಿಂದ ಕಾವ್ಯದ ಮಹತ್ವವು ಹೆಚ್ಚು ಕಡಿಮೆಯಾಗುವುದಿಲ್ಲ. ರಸಾನುಗುಣವಾದ ವರ್ಣನೆಯಲ್ಲಿ ಉಪಮಾ, ರೂಪಕ, ಉತ್ಪ್ರೇಕ್ಷೆ ಮೊದಲಾದ ಅಲಂಕಾರಗಳಿಗೆ ನಿಸರ್ಗಸಿದ್ಧವಾದ ಸ್ಥಾನವೇ ಇದೆಯೆಂದು ಹೇಳಿದರೂ ಹೇಳಬಹುದು. ರಸಪ್ರತಿಪಾದನೆ ಮಾಡುವ ಕಾಲದಲ್ಲಿ ಮಹಾಕವಿಯ ಪ್ರತಿಭೆಯು ಅಲಂಕಾರಗಳ ಉಪಯೋಗವನ್ನು ಪಡೆಯುವುದು ಸಹಜವಾಗಿಯೇ ಇದೆ. ಬಾಣನು ಮಹಾಶ್ವೇತೆಯ ವರ್ಣನೆಯನ್ನು ಮಾಡುವಾಗ ಅವನ ಪ್ರತಿಭೆಯಲ್ಲಿ ಸ್ಫುರಿಸುವ ನೂರಾರು ಅಲಂಕಾರಗಳನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಆದರೆ ಆ ಅಲಂಕಾರಗಳು ಅತ್ಯಂತ ಸರಳವೂ ಅಕ್ಲಿಷ್ಟವೂ ಆಗಿರುತ್ತವೆ. ಕವಿಯು ಯಾವ ವಿಶೇಷ ಪ್ರಯತ್ನವನ್ನೂ ಮಾಡದೆ ಸಹಜವಾಗಿ ಬರೆದಂತಿರುತ್ತವೆ. ಆದರೆ ಯಮಕ, ಶ್ಲೇಷ ಮೊದಲಾದ ಕ್ಲಿಷ್ಟ ಅಲಂಕಾರಗಳು ಒಂದರಮೇಲೊಂದು ಅತಿ ಯಾಗಿ ಬರಲಾರಂಭಿಸಿದರೆ, ಆಗ ಕವಿಯು ತನ್ನ ಮುಖ್ಯೋದ್ದೇಶವಾದ ರಸವನ್ನು

---

[1] ಪುಷ್ಪದಂತಪುರಾಣಂ, VIII, ೧೧೧

ಮರೆತು, ಅಲಂಕಾರಗಳನ್ನು ಪ್ರಯಾಸದಿಂದ ತಂದು ಸಂಯೋಜಿಸಬೇಕೆಂದು ಹೊರಟಿರುವನೆಂಬುದು ಸಹೃದಯರಿಗೆ ಸ್ವಯಂವೇದ್ಯ. ಇಂತಹ ಅಲಂಕಾರಗಳು ಕಾವ್ಯಸೌಂದರ್ಯವನ್ನು ಹೆಚ್ಚಿಸುವ ಬದಲು ಕುಗ್ಗಿಸುತ್ತವೆ. ಆದುದರಿಂದ ಕಾವ್ಯ ರಚನೆಯ ಕಾಲದಲ್ಲಿ ಕವಿಗೂ, ಕಾವ್ಯಾಸ್ವಾದಕಾಲದಲ್ಲಿ ವಿಮರ್ಶಕನಿಗೂ, ರಸದೃಷ್ಟಿ ಯೊಂದೇ ಇರಬೇಕೇ ಹೊರತು, ಅಲಂಕಾರಾನ್ವೇಷಣ ದೃಷ್ಟಿಯಿರಬಾರದು. ರಸೋಚಿತವಾದ ಅಲಂಕಾರಗಳು ಬಂದರೂ ಸಂತೋಷ, ಬರದಿದ್ದರೆ ಬಾಧಕವೇನೂ ಇಲ್ಲ—ಎಂಬ ತತ್ವವನ್ನು ಒಪ್ಪಿಕೊಳ್ಳಬೇಕು. ಇದನ್ನು ಒಪ್ಪಿಕೊಂಡರೆ ರಸಧ್ವನಿಯ ಮಹತ್ವವು ಸ್ಪಷ್ಟವಾಗುವುದಲ್ಲದೆ ಅದಕ್ಕೆ ಉಪಕಾರಕಗಳಾದ ಸಾಮಗ್ರಿಗಳ ಪರಿಶೀಲನೆ ಮಾಡುವ ಸ್ವಭಾವವೂ ವಿಮರ್ಶಕನಲ್ಲಿ ಬೆಳೆಯಲವಕಾಶವಾಗುತ್ತದೆ.

ಆದುದರಿಂದ ಮಹಾಕಾವ್ಯದಲ್ಲಿ ಕಥಾನಿರೂಪಣೆಗಿಂತಲೂ ರಸಪರಿಪೋಷಕ್ಕೆ ಹೆಚ್ಚಿನ ಪ್ರಾಶಸ್ತ್ಯ. ಕಥೆಯಲ್ಲಿ ನೀರಸವಾದ ಅಂಶಗಳಿದ್ದರೆ ಅವುಗಳನ್ನು ವರ್ಣಿಸುವಾಗ ಕವಿಯು ರಸಧ್ವನಿಯ ಮಾರ್ಗವನ್ನು ಬಿಟ್ಟುಬಿಡಬೇಕಾದರೂ, ಪ್ರಕಾರಾಂತರ ದಿಂದ ಎಂದರೆ ಅಮುಖ್ಯರೀತಿಯಿಂದಲಾದರೂ ಧ್ವನಿಗೆ ಒಂದು ಸ್ಥಾನವಿರುವಂತೆ ನೋಡಿಕೊಳ್ಳಬಹುದು. ಇದನ್ನೇ 'ಗುಣೀಭೂತವ್ಯಂಗ್ಯ'ವೆನ್ನುತ್ತೇವೆ. ಕಥೆಗೆ ಮತ್ತು ಪಾತ್ರಗಳ ವ್ಯವಹಾರಕ್ಕೆ ಹಿನ್ನೆಲೆಯಾಗಿ ಚಿತ್ರಿಸಬೇಕಾಗುವ ಪ್ರಕೃತಿಯ ವರ್ಣನೆ ಯಲ್ಲೂ ರಸವನ್ನು ಆರೋಪಿಸಿ ವರ್ಣಿಸಬಹುದು. ಬೆಟ್ಟ, ಗುಡ್ಡ, ಊರು, ಕಾಡು, ನದಿ, ಕೆರೆ, ಸೂರ್ಯ, ಚಂದ್ರ, ಗಾಳಿ, ಮನೆ, ಹಣ್ಣು, ಹೂವು, ಮೃಗ, ಪಕ್ಷಿ; ಮೊದಲಾದುವುಗಳ ವರ್ಣನೆಯಲ್ಲಿಯೂ ರಸಭಾವಗಳನ್ನು ಆರೋಪಿಸಿ ವರ್ಣಿಸು ವುದರಿಂದ ಕಾವ್ಯಕ್ಕೆ ವಿಶೇಷ ಸೌಂದರ್ಯವು ಬರುತ್ತದೆ. ಇಂತಹ ವರ್ಣನೆಗಳು ರಸಧ್ವನಿಯ ವ್ಯಾಪ್ತಿಯಲ್ಲೇ ಸೇರುತ್ತವೆ. ಹಾಗೆ ರಸಧ್ವನಿಯನ್ನು ಬಿಟ್ಟರೆ ವ್ಯಂಗ್ಯಾಂಶವು ಅಪ್ರಧಾನವಾಗಿ ಬರುವ ಅಪ್ರಸ್ತುತಪ್ರಶಂಸೆ, ಸಮಾಸೋಕ್ತಿ, ಪರ್ಯಾಯೋಕ್ತ, ಮೊದಲಾದ ಅಲಂಕಾರಗಳು ಚಮತ್ಕಾರದಾಯಕವಾಗುತ್ತವೆ. ರಸಧ್ವನಿಯೂ ಇಲ್ಲದೆ, ಗುಣೀಭೂತವ್ಯಂಗ್ಯವೂ ಇಲ್ಲದೆ, ಇವುಗಳ ವರ್ಣನೆಯು ಚಮತ್ಕಾರಪೂರ್ಣವಾಗಬೇಕಾದರೆ ಅತಿಶಯೋಕ್ತಿಯೇ ಮೊದಲಾದ ಅಲಂಕಾರ ಗಳಾದರೂ ಇರಬೇಕು; ಇಲ್ಲವೆ ಸ್ವಭಾವೋಕ್ತಿಯೆನ್ನುವ ಅಲಂಕಾರವಾದರೂ ಇರಬೇಕು. ಆದುದರಿಂದ ಒಂದು ಮಹಾಕಾವ್ಯದಲ್ಲಿ (=*Epic*) ಧ್ವನಿ, ಗುಣೀಭೂತ ವ್ಯಂಗ್ಯ, ಸ್ವತಂತ್ರ ಅಲಂಕಾರಗಳು—ಎಲ್ಲವೂ ಬೆರೆತು ಸಹೃದಯನಿಗೆ ಆನಂದವನ್ನು ತರುತ್ತವೆ. ಕಥೆಗಿಂತಲೂ ಇಲ್ಲಿ ವರ್ಣನೆಗೇ ಪ್ರಾಶಸ್ತ್ಯ ಹೆಚ್ಚಾದರೂ, ಕಥೆ ಮತ್ತು ನೀತಿಗಳಿಗೂ ಒಂದು ಗೌಣಸ್ಥಾನಕ್ಕೆ ಅವಕಾಶವಿರುತ್ತದೆ. ಆದರೆ ಖಂಡಕಾವ್ಯ

ಅಥವಾ ಭಾವಗೀತೆಯಲ್ಲಾಗಲಿ, ನಾಟಕದಲ್ಲಾಗಲಿ, ಕಥೆ ನೀತಿಗಳಿಗೆ ಮಹಾಕಾವ್ಯದಲ್ಲಿರುವ ಮಹತ್ವವೂ ತಪ್ಪಿ ಇನ್ನೂ ಕಡಿಮೆಯ ಸ್ಥಾನವು ಬರುತ್ತದೆ. ರಸಭಾವಗಳಿಗೆ ಸರ್ವಾಂಗಪೂರ್ಣವಾದ ಪ್ರಾಧಾನ್ಯವೂ ಪರಿಪೋಷವೂ ದೊರೆಯುತ್ತವೆ. ಈ ದೃಷ್ಟಿಯಿಂದಲೇ ಕೆಲವರು ಪ್ರಾಚೀನರು 'ಕಾವ್ಯೇಷು ನಾಟಕಂ ರಮ್ಯಂ' ಎಂದು ಹೇಳಿರುವುದು. ಇಂದಿನವರ ದೃಷ್ಟಿಯಲ್ಲಿ ಭಾವಗೀತೆಗಳಿಗೆ ಅತ್ಯಂತ ಪುರಸ್ಕಾರವಿರುವುದಕ್ಕೂ ಇದೇ ಕಾರಣ. ಆನಂದವರ್ಧನನ ಕಾವ್ಯಮೀಮಾಂಸೆಯಲ್ಲಿ ಇವೆಲ್ಲ ರಸಧ್ವನಿಯ ಎಂದರೆ ಉತ್ತಮಕಾವ್ಯದ ಉದಾಹರಣೆಗಳಾಗುವುವು. ಇಲ್ಲಿ ಕವಿಯ ಕಲೆಯನ್ನು ಅಳೆಯಲು ರಸಧ್ವನಿಯ ತತ್ವವು ಸಹಾಯಕವಾದೀತೇ ಹೊರತು ಕೇವಲ ಅಲಂಕಾರಗಳ ಪರಿಗಣನೆಯು ಹೆಚ್ಚು ಉಪಯುಕ್ತವಾಗುವುದಿಲ್ಲ.

ಆದರೆ ಸಂಸ್ಕೃತ ಕವಿಗಳ ಮತ್ತು ಹಳೆಗನ್ನಡ ಕವಿಗಳ ಸಂಪ್ರದಾಯದಲ್ಲಿ ರಸದೃಷ್ಟಿಯಷ್ಟೇ ಪ್ರಧಾನವಾಗಿ ಅಲಂಕಾರಸಂಯೋಜನೆಯ ದೃಷ್ಟಿಯೂ ಬೆಳೆದುದನ್ನು ಗಮನಿಸಬಹುದು. ಇದರ ಫಲವಾಗಿ ಕವಿಗಳಲ್ಲಿ ಮಹಾಕಾವ್ಯಗಳನ್ನು ಬರೆಯುವ ಅಭಿರುಚಿಯು ನಾಟಕ ಮತ್ತು ಭಾವಗೀತೆಗಳನ್ನು ಬರೆಯುವ ಅಭಿರುಚಿಗಿಂತಲೂ ಹೆಚ್ಚಾದುದು ಸಹಜವಾಗಿಯೇ ಇದೆ. ಹಳೆಗನ್ನಡದಲ್ಲಿ ನಾಟಕಗಳೇ ಇಲ್ಲ; ಸಂಸ್ಕೃತದಲ್ಲೂ ಕಡೆಕಡೆಗೆ ಬರೆದ ನಾಟಕಗಳನ್ನು ರಂಗಸ್ಥಳದಲ್ಲಿ ಆಡಬಹುದಾದ ಕೃತಿಗಳೆನ್ನುವುದಕ್ಕಿಂತಲೂ ಮನೆಯಲ್ಲಿ ಕುಳಿತು ಓದಬೇಕಾದ, ಕಷ್ಟಪಟ್ಟು ಅರ್ಥಮಾಡಿಕೊಳ್ಳಬೇಕಾದ, ಚಂಪೂಕಾವ್ಯಗಳೆಂದೇ ಹೇಳಬಹುದು. ಕಾಳಿದಾಸನ ಮೇಘದೂತದಂತಹ ಸ್ವತಂತ್ರ ಖಂಡಕಾವ್ಯಗಳು ಸಂಸ್ಕೃತದಲ್ಲೇ ಹೆಚ್ಚಾಗಿ ಬೆಳೆಯಲಿಲ್ಲ. ಶೃಂಗಾರ ಶತಕಗಳಲ್ಲೂ, ಸುಭಾಷಿತ ಕೋಶಗಳಲ್ಲೂ ನಮ್ಮ ಹಿಂದಿನ ಭಾವಗೀತೆಗಳನ್ನು ಇಂದು ಹುಡುಕಬೇಕಾಗುತ್ತದೆ. ಅಮರು, ಭರ್ತೃಹರಿ ಇವರ ಶತಕಗಳಿಗೆ ಸಮಾನವಾದ, ಸ್ವತಂತ್ರವಾದ, ಶೃಂಗಾರ ಶತಕಗಳೂ ಕೂಡ ಕನ್ನಡದಲ್ಲಿ ಬರಲಿಲ್ಲ. ಚಂಪೂಗ್ರಂಥಗಳಲ್ಲಿ ಬರುವ ಸುಭಾಷಿತಗಳಷ್ಟನ್ನು ಮಾತ್ರ ಕೆಲವರು ಒಟ್ಟುಗೂಡಿಸಿದ್ದಾರೆ, ಅಷ್ಟೆ. ಬಾಣನು ಬರೆದಂತಹ ಓಜೋಮಯ ಶೈಲಿಯ ಗದ್ಯ ರಚನೆಯೂ ಕನ್ನಡದಲ್ಲಿ ಹೆಚ್ಚಾಗಿ ಆಗಲಿಲ್ಲ. ಇದಕ್ಕೆಲ್ಲ ಮುಖ್ಯಕಾರಣವನ್ನು ತಿಳಿಯಬೇಕಾದರೆ ಆಗಿನ ಕವಿಗಳ ಅಭಿರುಚಿಯನ್ನು ಅರ್ಥಮಾಡಿಕೊಳ್ಳಬೇಕು. ಒಂದುಕಡೆ ರಾಜಾಶ್ರಯ, ಇನ್ನೊಂದುಕಡೆ ಅಲಂಕಾರಶಾಸ್ತ್ರದ ಬಾಹ್ಯಾಡಂಬರಗಳಲ್ಲಿ ಅಂಧವ್ಯಾಮೋಹ—ಇವೆರಡೂ ಸೇರಿ ಹಿಂದಿನವರ ಅಭಿರುಚಿಯನ್ನು ವಿರೂಪಿಸಿದುವು. ಹೀಗಿದ್ದರೂ ಪ್ರತಿಭಾಶಾಲಿಗಳಾದ ಕವಿಗಳು ರಸದೃಷ್ಟಿಯನ್ನೇ ಪ್ರಧಾನವಾಗಿಟ್ಟುಕೊಂಡು ಬರೆದಾಗ ಉತ್ತಮಕೃತಿಗಳು ಹುಟ್ಟಿದುವು. ಆ ದೃಷ್ಟಿಯು ಕಡಿಮೆಯಾಗಿ

ಅಲಂಕಾರದೃಷ್ಟಿಯು ಅತಿರೇಕವಾಗಿ ಬೆಳೆದು ಪಾಂಡಿತ್ಯದಿಂದ ಕಾವ್ಯವನ್ನು ಬರೆಯಲು ಅನೇಕರು ಮಾಡಿದ ಪ್ರಯತ್ನಗಳ ಫಲವಾಗಿ ಸಾಹಿತ್ಯವಾಹಿನಿಯ ನಿರ್ಮಲಸಲಿಲವು ಕದಡಿ ಅದು ಹರಿಯದೆ ನಿಂತ ಕೊಚ್ಚೆನೀರಾಯಿತು. ಹೀಗಾಗ ಬಾರದೆಂದು ಮೊತ್ತಮೊದಲು ಘಂಟಾಘೋಷವಾಗಿ—ನಮ್ಮ ದೇಶದಲ್ಲೇ, ಈಗ ಸಾವಿರಾರು ವರ್ಷಗಳ ಹಿಂದೆಯೇ—ವಿವೇಕವನ್ನು ಸಾರಿದ ಯಶಸ್ಸು ಆನಂದವರ್ಧ ನನಿಗೆ ಸಲ್ಲಬೇಕಾಗಿದೆ.

VII

ರಸಧ್ವನಿಯ ಪ್ರಾಧಾನ್ಯವನ್ನೂ ಇತರ ಧ್ವನಿಪ್ರಕಾರಗಳನ್ನೂ ಇದುವರೆಗೆ ಪರಿಶೀಲಿಸಲಾಯಿತು. ಆನಂದವರ್ಧನನ ಪ್ರಕಾರ ರಸ, ಅಲಂಕಾರ, ವಸ್ತು—ಈ ಮೂರು ಬಗೆಯ ಧ್ವನಿಗಳಿದ್ದರೆ ಮಾತ್ರ ಒಂದು ಕಾವ್ಯವು ಉತ್ತಮಕಾವ್ಯವೆನಿಸಿ ಕೊಳ್ಳಲು ಅರ್ಹತೆಯನ್ನು ಪಡೆಯುತ್ತದೆ. ಒಂದು ವೇಳೆ ಮುಖ್ಯವಾಗಿ ಅಲ್ಲದಿದ್ದರೆ ಗೌಣವಾಗಿಯಾದರೂ ವ್ಯಂಗ್ಯಾಂಶವು ಬಂದಲ್ಲದೆ ಕಾವ್ಯತ್ವವೇ ಅದಕ್ಕೆ ನ್ಯಾಯ ವಾಗಿ ಸಿದ್ಧಿಸುವುದಿಲ್ಲ. ಆದುದರಿಂದ 'ಧ್ವನಿಕಾವ್ಯ'ವನ್ನು ವಿವೇಚಿಸಿದೊಡನೆಯೇ 'ಗುಣೀಭೂತ ವ್ಯಂಗ್ಯ'ಕಾವ್ಯವನ್ನೂ ವಿಮರ್ಶಿಸುವುದು ಅಗತ್ಯ. 'ಗುಣೀಭೂತ ವ್ಯಂಗ್ಯ'ವು ಉತ್ತಮ ಕಾವ್ಯದ ಮಟ್ಟವನ್ನು ಮುಟ್ಟದಿದ್ದರೂ 'ಮಧ್ಯಮಕಾವ್ಯ' ವೆನಿಸಿಕೊಳ್ಳುವಷ್ಟು ಚಮತ್ಕಾರವನ್ನು ಪಡೆದಿರುತ್ತದೆ. 'ಅಧಮ'ದ ದರ್ಜೆಗೆ ಇಳಿಯುವುದಿಲ್ಲ.

ಪ್ರಾಸಂಗಿಕವಾಗಿ ಈಗಾಗಲೇ 'ಗುಣೀಭೂತವ್ಯಂಗ್ಯ'ದ ವಿಷಯದಲ್ಲಿ ಹೇಳಿದ ಅಂಶಗಳನ್ನು ಹೀಗೆ ಸಂಗ್ರಹಿಸಬಹುದು—

೧. ವ್ಯಂಗ್ಯವಾದ ವಸ್ತುವನ್ನೊಳಗೊಂಡರೂ ವಾಚ್ಯಾಂಶದಲ್ಲಿ ಚಮತ್ಕಾರ ವುಳ್ಳ 'ಪರ್ಯಾಯೋಕ್ತ,' 'ಸಮಾಸೋಕ್ತಿ' ಮೊದಲಾದ ಅಲಂಕಾರಗಳು.

೨. ವ್ಯಂಗ್ಯವಾದ ವಸ್ತುವನ್ನೇ ಮತ್ತೆ ಪ್ರಕಾರಾಂತರದಿಂದ ವಾಚ್ಯ ವಾಗಿಯೂ ಹೇಳಿಬಿಡುವುದು.

೩. ವ್ಯಂಗ್ಯವಾದ ರಸ-ಭಾವಗಳು ವಾಚ್ಯಾಂಶಕ್ಕೆ ಗೌಣವಾಗಿ 'ರಸವದ ಲಂಕಾರ'ವೆನಿಸಿಕೊಳ್ಳುವುದು.

೪. ವ್ಯಂಗ್ಯವಾದ 'ಉಪಮಾ' ಮೊದಲಾದ ಅಲಂಕಾರಗಳೂ ವಾಚ್ಯವಾದ 'ದೀಪಕ,' 'ತುಲ್ಯಯೋಗಿತಾ' ಮೊದಲಾದುವುಗಳ ಮೂಲಕ ಪ್ರತೀತವಾಗುವುದು.

ಇವುಗಳ ಜತೆಗೆ 'ಕಾಕು'ವಿನ ಮೂಲಕ ಬರುವ ವಸ್ತುಧ್ವನಿಯನ್ನೂ ಸೇರಿಸಿ ಕೊಂಡರೆ 'ಗುಣೀಭೂತವ್ಯಂಗ್ಯ' ಕಾವ್ಯದ ವ್ಯಾಪ್ತಿಯನ್ನು ಪೂರ್ಣವಾಗಿ ವಿವರಿಸಿ

ದಂತಾಗುತ್ತದೆ. ಇದನ್ನು ಮಧ್ಯಮಕಾವ್ಯವೆಂದು ಕರೆದಿದ್ದರೂ ಉತ್ತಮಕಾವ್ಯದ ಸೊಗಸನ್ನು ಹೆಚ್ಚಿಸಲು ಇದೂ ಸಾಧಕವಾಗುವುದೇ ಹೊರತು ಬಾಧಕವಾಗುವುದಿಲ್ಲವೆನ್ನುವುದೇ ಆನಂದವರ್ಧನನ ಮತ. ಧ್ವನಿಕಾವ್ಯವೇ ಆಗಲಿ, ಗುಣೀಭೂತವ್ಯಂಗ್ಯಕಾವ್ಯವೇ ಆಗಲಿ, ರಸಿಕನ ಆನಂದಕ್ಕೆ ಕಾರಣ ಮಾತ್ರ. ಪ್ರಧಾನ ಅಥವಾ ಅಪ್ರಧಾನವಾದ ವ್ಯಂಗ್ಯಾಂಶಪರಾಮರ್ಶವೇ ಎನ್ನುವುದನ್ನು ಮರೆಯಲಾಗದು. ಕೆಳಗೆ ಗುಣೀಭೂತವ್ಯಂಗ್ಯಕ್ಕೆ ಕೆಲವು ಉದಾಹರಣೆಗಳನ್ನು ಕೊಟ್ಟಿದೆ:—

೧. ಅಭಿಮನ್ಯುವು ಜಯದ್ರಥನಿಂದ ಹತನಾದುದನ್ನು ಕೇಳಿ ಅರ್ಜುನನು ಮಾಡುವ ಭೀಷಣಪ್ರತಿಜ್ಞೆಯನ್ನು ಕುಮಾರವ್ಯಾಸನು ಹೀಗೆ ವರ್ಣಿಸಿದ್ದಾನೆ:—

ನಾಳೆ ಖಚರೀಜನದ ತೊಡವಿನ
ತೋಳನವನಸು ನೆಮ್ಮದಿದ್ದರೆ
ಕಾಳಿಗದೊಳೆನ್ನೊಡಲ ಬಿಡುವೆನಗ್ನಿಕುಂಡದಲಿ[1]

ಇಲ್ಲಿ 'ನಾಳೆ ಜಯದ್ರಥನು ಸಾಯದಿದ್ದರೆ' ಎಂಬುದನ್ನು ವಾಚ್ಯವಾಗಿ ಹೇಳದೆ 'ಪರ್ಯಾಯೋಕ್ತಾಲಂಕಾರ'ದಿಂದ ವ್ಯಂಗ್ಯವಾಗಿ ಹೇಳಿರುವುದೇ ಸೊಗಸಾಗಿದೆ. ಇದೇ ರೀತಿ ರುದ್ರಭಟ್ಟನು ಜಲಕ್ರೀಡೆಯನ್ನು ವರ್ಣಿಸುವಾಗ, ಕೃಷ್ಣನು ಒಬ್ಬಳಿಗೆ ತೋರಿಸಿದ ಪಕ್ಷಪಾತವು ಇನ್ನೊಬ್ಬಳಿಗೆ ಕಣ್ಣೀರನ್ನು ಹೇಗೆ ತಂದಿತೆಂಬುದನ್ನು 'ಪರ್ಯಾಯೋಕ್ತ'ದಿಂದ ತೋರಿಸುತ್ತಾನೆ:

ವನರುಹಲೋಚನಂ ನಿಜಕರಾಂಜಲಿವಾರಿಯಿನೊರ್ವೆ ಪಾರ್ಶ್ವವ-
ರ್ತಿನಿಯ ಸಮುನ್ನತಸ್ತನಯುಗಕ್ಕಭಿಷೇಕಮನೀಯೆ ಕಂಡು ಮಾ-|
ನಿನಿ ತನಗೀರ್ಷ್ಯೆ ಪುಟ್ಟೆ ಮನದೊಳ್ ನಯನಾಂಜಲಿವಾರಿಯಿಂ ಪುನಃ-
ಪುನರಭಿಷೇಕಮಂ ನಿಜಸುವೃತ್ತಕುಚಕ್ಕೆ ಪೆಱಿಳ್ ನೆಗಟ್ಟಿದಳ್[2] ||

ಕೆಳಗಿನ ಚಂದ್ರೋದಯ ವರ್ಣನೆಯಲ್ಲಿ ಅಪ್ರಸ್ತುತವಾದ ನಾಯಿಕಾನಾಯಕ ವ್ಯವಹಾರವು ವ್ಯಂಗ್ಯವಾಗಿರುವುದರಿಂದ 'ಸಮಾಸೋಕ್ತಿ' ಅಲಂಕಾರವು ಹೃದ್ಯವಾಗಿದೆ:—

ಪರೆದಿರೆ ತಿಮಿರಕಚಂ ನೆರೆ
ದಿರೆ ಭಗಣಸ್ವೇದಜಲಕಣೌಘಂ ರಾಗಂ-|
ಬೊರೆದಿರೆ ಚಕೋರನಯನಂ
ಕರಮೊಸೆದೆಳ್ ನೆರೆದು ರಜನಿ ರಜನೀಪತಿಯೊಳ್[3] ||

---

[1] ದ್ರೋಣಪರ್ವಂ, VIII, 39.

[2] ಜಗನ್ನಾಥವಿಜಯಂ, XIV, 99.

[3] ಚಂದ್ರಪ್ರಭಪುರಾಣಂ, VIII, 32.

೨. ಪ್ರಾಚೀನರು ‘ಸೂಕ್ಷ್ಮ’ವೆಂದು ಹೇಳುವ ಅಲಂಕಾರವೇ ಎರಡನೆಯ ಬಗೆಯ ‘ಗುಣೀಭೂತವ್ಯಂಗ್ಯ’. ಉದಾಹರಣೆಗೆ—

ಏಗಳ್ ನಮಗಕ್ಕುಂ ಸಂ
ಯೋಗಮೆನಲ್ ಬಗೆವ ನಲ್ಲನಂ ಕುಱಿತು ಮನೋ-|
ರಾಗದಿನೊಡರಿಸಿದಳ್ ಚೆ-
ಲ್ವಾಗಿರೆ ಪೆಱಿಳೊರ್ವಳಬ್ಜದಳಮುಕುಳನಮಂ ||[1]

ಇಲ್ಲಿ ಸೂರ್ಯಾಸ್ತವೇ ಸಂಕೇತಕಾಲವೆಂಬ ವಸ್ತು ಕೊನೆಯ ಪಾದದಲ್ಲಿ ವ್ಯಂಗ್ಯ. ಆದರೆ ಮೊದಲನೆಯ ಮೂರು ಪಾದಗಳಲ್ಲಿ ಪ್ರಕರಣವನ್ನು ವಾಚ್ಯವಾಗಿ ಹೇಳಿರುವುದರಿಂದ ವ್ಯಂಗ್ಯಾಂಶವು ವಾಚ್ಯಕ್ಕೆ ಗುಣೀಭೂತವೇ ಆಗುತ್ತದೆ.

೩. ಆನಂದವರ್ಧನನು ಒಪ್ಪುವ ‘ರಸವದಲಂಕಾರ’ಗಳನ್ನು ರನ್ನನ ಗದಾಯುದ್ಧದಿಂದ ಆಗಲೇ ಉದಾಹರಿಸಲಾಗಿದೆ.[2]

೪. ‘ಪಿರಿಯಣ್ಣನ ಜರ್ವಿಂಗೋ-
ಸರಿಸಿದುದಲ್ಲದೊಡೆ ಶಾರ್ಙ್ಗಪಾಣಿಯ ಮುನಿಸುಂ |
ಹರನುರಿಗಣ್ಣುಂ ಲೋಕಮ-
ನರೆಗಳಿಗೆಗೆ ಬೂದಿಮಾಳ್ಪುದೊಂದಚ್ಚರಿಯೇ ||’[3]

ಎಂದು ನಾಗಚಂದ್ರನು ಹೇಳುವಾಗ, ದೀಪಕಾಲಂಕಾರವು ವ್ಯಂಗ್ಯವಾದ ಉಪಮಾಲಂಕಾರದ ಚಮತ್ಕಾರವನ್ನೂ ಗರ್ಭೀಕರಿಸಿದೆ. ಶಾರ್ಙ್ಗಪಾಣಿಯ ಮುನಿಸೂ ಹರನ ಉರಿಗಣ್ಣೂ ಲೋಕವನ್ನು ಅರೆಗಳಿಗೆಯಲ್ಲಿ ಬೂದಿಮಾಡಿಬಿಡುವ ವಿಷಯದಲ್ಲಿ ಒಂದಕ್ಕೊಂದು ಸಮಾನವೆಂಬುದೇ ವ್ಯಂಗ್ಯವಾದ ಉಪಮಾಲಂಕಾರ.

೫. ಕುಡುವೆಟ್ಟನ ಕುಡುವನ ಕುಡೆ
ಪಡೆವನ ಪೆಂಪೇಂ ನೆಗೞ್ತೆವಡೆಗುಮೊ?[4]

ಎಂದು ಕಡುಮುಳಿದ ಶಿಶುಪಾಲನು ಕೃಷ್ಣನ ನಿಂದೆಯನ್ನು ಮಾಡುವಾಗ, ‘ಅಪಕೀರ್ತಿಯು ಹೆಚ್ಚುವುದು’ ಎಂಬ ವ್ಯಂಗ್ಯಾರ್ಥವು ‘ಕಾಕು’ ಅಥವಾ ಹೇಳುವ ಸ್ವರಭಂಗಿಯಿಂದಲೇ ಸ್ಪಷ್ಟವಾಗುತ್ತದೆ.

ಹೀಗೆ ‘ಗುಣೀಭೂತವ್ಯಂಗ್ಯ’ದ ಸ್ವಾರಸ್ಯವನ್ನು ಗ್ರಹಿಸುವುದರಿಂದ ಕಾವ್ಯಕ್ಕೆ ನಿಜವಾಗಿಯೂ ಸೌಂದರ್ಯಾತಿಶಯವನ್ನು ತರುವ ಪ್ರಸಿದ್ಧವಾದ ಅಲಂಕಾರಗಳ

[1] ಕಾವ್ಯಾವಲೋಕನಂ, ೬೩೭.

[2] ಪ್ರಬುದ್ಧ ಕರ್ಣಾಟಕ, ಸಂಪುಟ ೩೧, ಸಂಚಿಕೆ ೩-೪, ಪುಟ ೪೦-೧.

[3] ಪಂಪರಾಮಾಯಣ ಸಂಗ್ರಹ, III, ೫೩.

[4] ಪಂಪಭಾರತಂ, VI, ೪೯.

ಗೆಲ್ಲ ಉಪಪತ್ತಿಯನ್ನು ಹೇಳಿದಂತಾಗುತ್ತದೆ. ತರ್ಕ ಅಥವಾ ಇತರ ಶಾಸ್ತ್ರಮೂಲವಾದ ಅಲಂಕಾರಗಳಿಗೆ ಉತ್ತಮಕಾವ್ಯದಲ್ಲಿ ಸ್ಥಾನವಿಲ್ಲವೆನ್ನುವುದೂ ಸ್ಪಷ್ಟವಾಗುತ್ತದೆ. ಇಂತಹ ನೀರಸ 'ಅಲಂಕಾರಾಭಾಸ'ಗಳಿಗೆ ಆನಂದವರ್ಧನನು 'ಚಿತ್ರ'ವೆನ್ನುತ್ತಾನೆ. ಅವುಗಳಿಗೆ ಉದಾಹರಣೆಗಳ ಅವಶ್ಯಕತೆಯೇ ಇಲ್ಲ. ಮಾದರಿಗೆ ಒಂದನ್ನು ಬರೆಯಲಾಗಿದೆ:—

ತಾರವೀವೀರತಾಸಾರ-
ನೀರಸಾಕಾರನಾರಕಾ |
ತಾರನಾನಾರತಾಕಾರ-
ಕಾರಕಾತಾರಕಾರತಾ ||[1]

ಇಂತಹ 'ಗತಪ್ರತ್ಯಾಗತ'ಗಳನ್ನು ಬರೆಯುವವನಿಗೂ ತಲೆಬೇನೆ; ಓದಿ ಅರ್ಥಮಾಡಿಕೊಳ್ಳುವವನಿಗೂ ತಲೆಬೇನೆ, ಕಾವ್ಯಾನಂದವು ಇಂತಹ ರಚನೆಗಳಿಗೆ ಬಹು ದೂರ. ತೋಂಟದಾರ್ಯನು

'ಸವಿಮಾತು ರೀತಿ ಜಾತಿ ವ್ಯಾಕರಣ ಭಾವ
ನವರಸಾಲಂಕಾರವಭಿಧಾನಗುಣವೆಂಬ
ವಿವರಗಳನರಿಯದಾಂ ಕವಿಯೆಂದು ಕಾಳ್ಕಬ್ಬವಂ ಸೊರಹುವವನೊರ್ವನು |
ತವೆಯದಕೆ ಮೆಚ್ಚಿ ಹಾ ಹಾ ಎಂದು ತಲೆಯ ತೂ-
ಗುವನೊರ್ವನವಿವೇಕದಿಂದವಗೆ ಧನವನೀ-
ವವನೊರ್ವನಿಂತಿವರ್ಮೂವರೆ ಸರಸ್ವತಿಗೆ ತಲೆಬೇನೆಯಾಗಿರ್ಪರು ||'

ಎಂದು ಬರೆಯುವಾಗ ಕ್ಷುದ್ರಕವಿಗಳನ್ನು ಸರಸ್ವತಿಗೆ ತಲೆಬೇನೆಯೆಂದಿರುವುದನ್ನು ನೋಡಿದರೆ ಇಂತಹ ಚಿತ್ರಕವಿತೆಗಳನ್ನು ಬರೆಯುವ ವಿದ್ವತ್ಕವಿಕುಂಜರರನ್ನು ಸರಸ್ವತಿಯ ತಲೆಗಡುಕರೆಂದರೂ ತಪ್ಪಾಗಲಾರದೆಂದೇ ತೋರುತ್ತದೆ.

VIII

ಆನಂದವರ್ಧನನ ಕಾವ್ಯಮೀಮಾಂಸೆಯು ಎಷ್ಟು ಸಾರಗ್ರಾಹಿಯೂ ಸರ್ವಸಮ್ಮತವೂ ಆಗಿರುವುದೆಂಬುದನ್ನು ಸುದೀರ್ಘವಾಗಿ ಇಲ್ಲಿಯವರೆಗೂ ವಿಮರ್ಶೆ ಮಾಡಲಾಯಿತು. ಸಂಸ್ಕೃತ ಅಲಂಕಾರಶಾಸ್ತ್ರದ ಇತಿಹಾಸದಲ್ಲಿ ಹೊಸ ದೃಷ್ಟಿಯನ್ನೂ ಹೊಸ ವಿಮರ್ಶೆಯನ್ನೂ ಕಾಣಬೇಕಾದರೆ ಮುಖ್ಯವಾಗಿ ಆನಂದವರ್ಧನನ ಧ್ವನ್ಯಾಲೋಕವನ್ನು ಅಭ್ಯಾಸಮಾಡಬೇಕು. ಆನಂದವರ್ಧನನ ತರುವಾಯ ಬಂದವರಲ್ಲಿ ಕೆಲವರು ಹೊಸ ಪ್ರಕ್ರಿಯೆಯನ್ನು ಸ್ಥಾಪಿಸಲು ಪ್ರಯತ್ನಪಟ್ಟರೂ ಮೂಲತಃ

[1] ಕಾವ್ಯಾವಲೋಕನಂ, ೫೯೩.

ಎಲ್ಲರೂ ಧ್ವನ್ಯಾಲೋಕಕ್ಕೆ ಋಣಿಗಳೇ. 'ವಕ್ರೋಕ್ತಿ'ವಾದವನ್ನು ಪ್ರಚಾರಮಾಡಿದ ಕುಂತಕನೇ ಆಗಲಿ, 'ಔಚಿತ್ಯ'ವಾದವನ್ನು ವಿವರಿಸಿದ ಕ್ಷೇಮೇಂದ್ರನೇ ಆಗಲಿ, ಎಲ್ಲವನ್ನೂ ಸೂಕ್ಷ್ಮವಾಗಿ ಪುನರ್ವಿಮರ್ಶಿಸಿದ ಜಗನ್ನಾಥನೇ ಆಗಲಿ—ಯಾರೂ ಧ್ವನಿವಾದದ ಮೂಲವನ್ನು ಅಂಗೀಕರಿಸದೆ ಹೋಗಿಲ್ಲ. 'ಧ್ವನಿ' ಎಂಬ ಹೆಸರಿಗೆ ಅವರು ಪುನರ್ನಾಮಕರಣ ಮಾಡುತ್ತಾರೆ, ಅಷ್ಟೆ. ಆದರೆ ಪ್ರಾಚೀನ ಪರಂಪರೆಯಲ್ಲಿ ಹೆಚ್ಚಿನ ಮಮತೆಯಿಂದಲೋ ಇಲ್ಲವೆ ಶಾಸ್ತ್ರಶೈಲಿಯಲ್ಲಿರುವ ನಿರತಿಶಯ ಪ್ರೇಮ ದಿಂದಲೋ ಮಹಿಮಭಟ್ಟನೇ ಆದಿಯಾಗಿ ಕೆಲವರು ಧ್ವನಿವಾದವನ್ನು ಖಂಡಿಸು ತ್ತೇವೆಂದು ಹೊರಟರು. ಇವರೂ ಕೂಡ ಕಾವ್ಯದಲ್ಲಿ ವಾಚ್ಯಾಂಶಕ್ಕಿಂತ ವ್ಯಂಗ್ಯಾಂಶ ದಲ್ಲಿ ಚಮತ್ಕಾರ ಹೆಚ್ಚೆಂಬ ಸಿದ್ಧಾಂತವನ್ನು ಅಲ್ಲಗಳೆದಿಲ್ಲ. ಇದರಿಂದಲೇ ಧ್ವನಿ ಸಿದ್ಧಾಂತವು ಎಷ್ಟು ನಿರ್ದುಷ್ಟವಾದುದೆಂಬುದು ವ್ಯಕ್ತವಾಗುತ್ತದೆ. ಧ್ವನ್ಯಾಲೋಕಕ್ಕೆ ಸೊಗಸಾದ ವ್ಯಾಖ್ಯಾನವನ್ನು ಬರೆದ ಅಭಿನವಗುಪ್ತರು ಈ ತತ್ವಕ್ಕೆ ಸಾಹಿತ್ಯದಲ್ಲಿ ಸಾಮ್ರಾಜ್ಯಪೀಠವನ್ನು ಸ್ಥಿರಮಾಡಿಕೊಟ್ಟರು. ಮುಂದೆ ಬಂದ ಮಮ್ಮಟನೇ ಮೊದಲಾದ ಗ್ರಂಥಕಾರರೆಲ್ಲರೂ ಧ್ವನಿಸಿದ್ಧಾಂತವನ್ನು ಸರ್ವಥಾ ಬಾಯಿಂದ ಒಪ್ಪಿ ಕೊಂಡರು. ಅಲಂಕಾರಶಾಸ್ತ್ರದಲ್ಲಿ ಧ್ವನಿವಾದದ ಖಂಡನ ಮಂಡನಗಳ ವಿವೇಚನೆಯು ಅತ್ಯಂತ ಆಕರ್ಷಕವಾಗಿದ್ದರೂ ಅದರ ಪ್ರಸ್ತಾಪಕ್ಕೆ ಇಲ್ಲಿ ಹೋಗಿಲ್ಲ. ಅವಕಾಶ ದೊರೆತರೆ ಮುಂದೆ ಈ ವಿವೇಚನೆಯನ್ನೂ ಮಾಡಬೇಕೆಂಬ ಅಪೇಕ್ಷೆಯಿದೆ. ಈಗ ಆನಂದವರ್ಧನನ ಕಾವ್ಯಮೀಮಾಂಸೆಯ ಈ ತತ್ವನಿರೂಪಣೆಯನ್ನು ರಾಜಶೇಖರನ ಪ್ರಶಂಸಾಶ್ಲೋಕದಿಂದ ಪರಿಸಮಾಪ್ತಿಗೊಳಿಸುತ್ತೇವೆ—

ಧ್ವನಿನಾತಿಗಭೀರೇಣ ಕಾವ್ಯತತ್ವನಿವೇಶಿನಾ।
ಆನಂದವರ್ಧನಃ ಕಸ್ಯ ನಾಸೀದಾನಂದವರ್ಧನಃ ॥

—ಡಾ॥ ಕೆ. ಕೃಷ್ಣಮೂರ್ತಿ

ಕನ್ನಡ ಮಹಾಭಾರತಗಳು[1]

೨

ಸಂಸ್ಕೃತಭಾಷೆಯಲ್ಲಿ ವ್ಯಾಸಮಹರ್ಷಿಗಳಿಂದ ರಚಿತವಾದ ಮಹಾಭಾರತವು ಭಾರತೀಯರಾದ ನಮಗೆ ಅತ್ಯಂತ ಪೂಜ್ಯವೂ ಪ್ರಿಯವೂ ಆದ ಗ್ರಂಥವಾಗಿದೆ. ಸಾವಿರಾರು ವರ್ಷಗಳಿಂದ ನಮ್ಮ ಜನರು ಅದನ್ನು ಧರ್ಮಗ್ರಂಥವೆಂದು, ಇತಿಹಾಸ ವೆಂದು, ಐದನೆಯ ವೇದವೆಂದು ಗೌರವಿಸಿದ್ದಾರೆ. ಮಾನವ ಹೃದಯವನ್ನು ಕಲಕ ತಕ್ಕ ಕಥೆ ಇಲ್ಲಿದೆ. ನೀತಿ, ಧರ್ಮಗಳ ದೊಡ್ಡ ಗಣಿ ಇದು. ಕಥೆಗಳ ಭಂಡಾರ ಭಾರತ. ಭಾಸ ಭಾರವಿಗಳಂತಹ ಮಹಾಕವಿಗಳು ತಮ್ಮ ಕಾವ್ಯನಾಟಕಗಳಿಗೆ ವಸ್ತುವನ್ನು ಭಾರತದಿಂದ ಆಯ್ದುಕೊಂಡಿದ್ದಾರೆ. ಮಹಾಭಾರತ ಕವಿಗಳ ಕಾಮಧೇನು ; ರಸಗಳ ಮಹಾರ್ಣವ. ಅದು 'ಮೂಕಂ ಕರೋತಿ ವಾಚಾಲಂ' ಈ ತೆರನಾದ ಮಹತ್ವವುಳ್ಳ ಈ ಗ್ರಂಥವನ್ನು ಭರತಖಂಡದ ನಾನಾ ಪ್ರಾಂತ್ಯದವರು ತಮ್ಮ ನುಡಿಯಲ್ಲಿ ಹಾಡಿ ಕೊಳ್ಳಲು ಮುಂದಾದುದು ಹೆಚ್ಚಲ್ಲ. ಈ ಉದ್ಯಮದಲ್ಲಿ ಕನ್ನಡಿಗರು ಹಿಂದಾಗಲಿಲ್ಲ.

ಈಗ ನಮಗೆ ತಿಳಿದಿರುವಮಟ್ಟಿಗೆ ಕನ್ನಡ ಸಾಹಿತ್ಯ ಮೊದಲಾಗಿರುವುದು ಭಾರತದ ರಚನೆಯಿಂದಲೇ. ಹತ್ತನೆಯ ಶತಮಾನದಲ್ಲಿ ಜೈನಕವಿಯಾದ ಪಂಪನು ತನ್ನ ರಾಜನಾದ ಅರಿಕೇಸರಿಯ ಹೆಸರನ್ನು ಶಾಶ್ವತಗೊಳಿಸಲು ವ್ಯಾಸಭಾರತದ ಮೊದಲ ಹತ್ತು ಪರ್ವಗಳನ್ನು ಸಂಗ್ರಹಿಸುವುದಕ್ಕೆ ಮೊದಲೇ ಅನೇಕ ಕವಿಗಳು ಭಾರತದ ಭಾಗಗಳನ್ನು ಬರೆದಿದ್ದರು. ಆದರೆ ಸಮಸ್ತ ಭಾರತವನ್ನು ಯಾರೂ ಬರೆದಿರ ಲಿಲ್ಲ. ಸೂರ್ಯೋದಯವಾಗುತ್ತಲೇ ನಕ್ಷತ್ರಗಳು ತೇಜೋವಿಹೀನವಾಗುವಂತೆ ಪಂಪನು ಕಾವ್ಯರಚನೆ ಮಾಡುತ್ತಲೇ ಅವು 'ಮುನ್ನಿನ ಕಬ್ಬಮನೆಲ್ಲಮನ್ ಇಕ್ಕಿ ಮೆಟ್ಟಿದುವು.' ಅದಿರಲಿ ; ಪಂಪನು ಜೈನಮತೀಯನಾದರೂ ಅವನ ರಕ್ತದಲ್ಲಿ ವೈದಿಕ ಸಂಸ್ಕಾರ ಹರಿಯುತ್ತಿತ್ತು. ಆದರೆ ತಾನು ಜೈನನೆಂಬುದನ್ನು ಸಂಪೂರ್ಣವಾಗಿ ಅವನು ಮರೆಯಲಾಗದುದರಿಂದಲೂ, ತನ್ನ ಸ್ವಾಮಿಯನ್ನು ಅರ್ಜುನನೊಡನೆ ಹೋಲಿಸಿ ಕಾವ್ಯರಚನೆ ಮಾಡಿದುದರಿಂದಲೂ, ಅವನು ತನ್ನ ಕಾವ್ಯರಚನೆಯಲ್ಲಿ ಸ್ವಲ್ಪ ಕಷ್ಟವನ್ನು ಅನುಭವಿಸಬೇಕಾಯಿತು. ವೈದಿಕ ಮತಾವಲಂಬಿಯಾದವನು ಭಾರತದ ಬೃಹದ್ದೇವತೆಯಾದ ಶ್ರೀಕೃಷ್ಣನನ್ನು ಯಾವ ದೃಷ್ಟಿಯಿಂದ ನೋಡಬಹುದಾಗಿತ್ತೋ ಆ ದೃಷ್ಟಿಯಿಂದ ಕೃಷ್ಣನನ್ನು ನೋಡಲು ಪಂಪನಿಗೆ ಸಾಧ್ಯವಾಗಲಿಲ್ಲ. ಭಾರತದ

---

[1] ೨೮-೩-೫೦ ರಲ್ಲಿ ಆಕಾಶವಾಣಿಯಲ್ಲಿ ಪ್ರಸಾರಿತವಾದ ಭಾಷಣ.

ಮಹಾಪುರುಷನಾದ ಅರ್ಜುನನನ್ನು ಅರಿಕೇಸರಿಯೊಡನೆ ಹೋಲಿಸಿ ದ್ರೌಪದಿಯನ್ನು ಅವನೊಬ್ಬನಿಗೇ ಮದುವೆಮಾಡಿಸಿ ತೊಡರಿಗೆ ಸಿಲುಕಿದನು. ಈ ಅನೌಚಿತ್ಯಗಳನ್ನು ಬಿಟ್ಟರೆ 'ಕತೆ ಪಿರಿದಾದೊಡಂ ಕತೆಯ ಮೆಯ್ ಕಿಡಲೀಯದೆ' ಪಂಡಿತರು ಮೆಚ್ಚು ವಂತೆ ಭಾರತವನ್ನು ಕೇವಲ ಆರು ತಿಂಗಳಲ್ಲಿಯೇ ರಚಿಸಿದ ಕೀರ್ತಿ ಪಂಪನಿಗೆ ಸಲ್ಲುತ್ತದೆ. ವ್ಯಾಸಭಾರತವನ್ನು ಜೀರ್ಣಿಸಿಕೊಂಡು, ಭಾಸ ಕಾಳಿದಾಸ ಭಾರವಿ ಮಾಘ ಶ್ರೀಹರ್ಷ ಭಟ್ಟನಾರಾಯಣರ ಕಾವ್ಯನಾಟಕಗಳನ್ನು ಮನನಮಾಡಿ, ಈ ಗ್ರಂಥಗಳ ಸಾರವನ್ನು ತನ್ನ ಕಾವ್ಯದಲ್ಲಿ ಭಟ್ಟಿಯಿಳಿಸಿ, ಭಾರತದ ವ್ಯಕ್ತಿಗಳ ಹಿರಿಮೆಯನ್ನು ಕಂಡುಕೊಂಡು, ಕರ್ಣ ದುರ್ಯೋಧನರ ಪಾತ್ರಗಳನ್ನು ಹೊಸ ದೃಷ್ಟಿಯಿಂದ ನೋಡಿದನು. ಆದರೂ ಪಂಪಭಾರತ ಪಂಡಿತರಿಂದ ಮಾತ್ರ ಅರ್ಥಮಾಡಿಕೊಳ್ಳ ಬಹುದಾದ ಚಂಪೂಕಾವ್ಯ.

ಪಂಪನು ತನ್ನ ಕಾವ್ಯಗಳನ್ನು ರಚಿಸಿ ಚಂಪೂ ಲೇಖಕರಿಗೆ ಮಾರ್ಗದರ್ಶಕ ನಾದನು. ಇವನಾದ ಸುಮಾರು ಐನೂರು ವರ್ಷಗಳ ಮೇಲೆ ಕುಮಾರವ್ಯಾಸನೆಂಬ ಬ್ರಾಹ್ಮಣ ಕವಿ ವ್ಯಾಸಭಾರತದ ಮೊದಲ ಹತ್ತು ಪರ್ವಗಳನ್ನು ಷಟ್ಪದಿಯ ರೂಪ ವಾಗಿ ಕನ್ನಡಿಸಿದನು. ಗದುಗಿನ ವೀರನಾರಾಯಣಸ್ವಾಮಿಯ ಕರುಣೆಯಿಂದ ಆವೇಶ ಗೊಂಡ ಈ ಭಕ್ತಕವಿ ಶ್ರೀ ಕೃಷ್ಣನನ್ನು ತನ್ನ ಕಾವ್ಯಕ್ಕೆ ನಾಯಕನನ್ನಾಗಿ ಮಾಡಿ ಕೊಂಡು ಅವನ ಮಹಿಮೆಯನ್ನು ಕಾವ್ಯದ ಉದ್ದಕ್ಕೂ ಎತ್ತಿ ಹಿಡಿದಿದ್ದಾನೆ. ಸಂಸ್ಕೃತ ಮಹಾಭಾರತದ ಕಥೆಯನ್ನು ತುಂಬ ವಿವರಗಳೊಡನೆ ಮಹತ್ವ ಸ್ಫುರಿಸು ವಂತೆ, ರಸವುಕ್ಕುವಂತೆ ಕನ್ನಡನುಡಿಯನ್ನು ಕುಮಾರವ್ಯಾಸನು ಭಾಮಿನೀ ಷಟ್ಪದಿ ಯಲ್ಲಿ ಕುಣಿಸಿದ್ದಾನೆ. ವಿಷಯವಿಸ್ತಾರದಲ್ಲಿ, ಸನ್ನಿವೇಶಗಳನ್ನು ವಿವರ ವಿವರವಾಗಿ ವರ್ಣಿಸುವುದರಲ್ಲಿ ಮಾನವಹೃದಯದ ನಾನಾ ಭಾವಗಳಾದ ಆಶೆ, ತಿರಸ್ಕಾರ, ಕರುಣೆ, ಪ್ರೇಮ, ದ್ವೇಷ, ಮಾತ್ಸರ್ಯ, ನೀಚತನ, ಧೈರ್ಯ, ಗಾಂಭೀರ್ಯ, ನಿರಾಶೆ ಮತ್ತು ನಂಬಿಕೆಗಳನ್ನು ಪ್ರದರ್ಶಿಸಿ ಜೀವನದ ಉದಾತ್ತತೆಯನ್ನು ನಮ್ಮ ಮುಂದಿಟ್ಟು ನಮ್ಮಲ್ಲಿ ಧೈರ್ಯೋತ್ಸಾಹಗಳನ್ನು ತುಂಬುವ ವಿಷಯದಲ್ಲಿ ಈ ಕೃತಿಗೆ ಸಮನಾದ ಕಾವ್ಯ ಕನ್ನಡದಲ್ಲಿ ಮತ್ತೊಂದಿಲ್ಲ. ಕುಮಾರವ್ಯಾಸನ ಪ್ರತಿಭೆ ಅದ್ಭುತವಾದುದು, ಅವನ ಅನುಭವ ಆಳವಾದುದು. ಅವನದು ಸರಳವೂ ಸುಲಭವೂ ಸ್ಫೂರ್ತಿಯುತವೂ ಸುಂದರವೂ ಆದ ಶೈಲಿ, ತಡೆಯಿಲ್ಲದ ಓಟ, ಕುಗ್ಗದ ಶ್ರದ್ಧಾಭಕ್ತಿ, ಉತ್ಸಾಹ, ಹೊಸದಾದ ಮತ್ತು ಅನಿರೀಕ್ಷಿತವಾದ ಉಪಮೆ ರೂಪಕಗಳು, ಪಾತ್ರ, ಸನ್ನಿವೇಶ ಗಳನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸುವ ರೀತಿ—ಈ ಗುಣಗಳು ಅವನ ಕಾವ್ಯವನ್ನು ಅಮರವನ್ನಾಗಿ ಮಾಡಿವೆ. ಪಂಪನಿಗಿದ್ದ ತಡೆಗಳು ಕುಮಾರವ್ಯಾಸನಿಗಿರಲಿಲ್ಲ. ಆದರೆ

ಪಂಪನ ಸಂಗ್ರಹ ಸಾಮರ್ಥ್ಯ, ಉಕ್ತಿಗಾಂಭೀರ್ಯ ಇವು ಒಮ್ಮೊಮ್ಮೆ ನಾರಣಪ್ಪನಿಗೆ ಇಲ್ಲವೇನೋ ಎನ್ನಿಸುತ್ತದೆ. ಅದು ಏನೇ ಇರಲಿ ಕನ್ನಡ ಭಾರತ 'ಕಾವ್ಯಕೆ ಗುರು.' ಕುಮಾರವ್ಯಾಸನು ಬರೆಯದೆ ಬಿಟ್ಟ ಎಂಟು ಪರ್ವಗಳನ್ನು ವಿಜಯನಗರದ ದೊರೆಯಾದ ಕೃಷ್ಣದೇವರಾಯನ ಆಸ್ಥಾನಕವಿಯಾದ ತಿಮ್ಮಣ್ಣನು ರಚಿಸಿ ಕನ್ನಡ ಭಾರತವನ್ನು ಪೂರ್ತಿಗೊಳಿಸಿದನು. ಕುಮಾರವ್ಯಾಸನ ಚುರುಕು ಉಲ್ಲಾಸಗಳು ಅವನ ಕಾವ್ಯದಲ್ಲಿ ಕಂಡುಬಾರವು.

ಕುಮಾರವ್ಯಾಸ ಪಂಪರು ಸಮಸ್ತಭಾರತವನ್ನು ಬರೆದು ಖ್ಯಾತರಾದಂತೆ, ಭಾರತದ ಭಾಗಗಳನ್ನು ಬರೆದು ಕೆಲವು ಕವಿಗಳು ಪ್ರಖ್ಯಾತರಾಗಿದ್ದಾರೆ. ಇವರಲ್ಲಿ ರನ್ನನಿಗೆ ಅಗ್ರತಾಂಬೂಲವನ್ನು ಕೊಡಬೇಕು. ಭೀಮ ದುರ್ಯೋಧನರ ಗದಾಯುದ್ಧವೇ ರನ್ನನ ಈ ಲೌಕಿಕ ಕಾವ್ಯದ ವಸ್ತು. ಪಂಪನಂತೆ ರನ್ನನು ತನ್ನ ಪೋಷಕನನ್ನು ಸಾಹಸಭೀಮನಿಗೆ ಹೋಲಿಸಿದ್ದಾನೆ. ಭೀಮನೇ ಗದಾಯುದ್ಧದ ನಾಯಕನಾದರೂ, ದುರ್ಯೋಧನನ ಮಿತ್ರಪ್ರೇಮ, ಶೌರ್ಯ ಔದಾರ್ಯಗಳು ಅವನನ್ನು ಮಹಾನುಭಾವನನ್ನಾಗಿ ಮಾಡಿವೆ. ಆದರೂ ರನ್ನನು ಗದಾಯುದ್ಧದಲ್ಲಿ ಭಾರತ ಕಥೆಯನ್ನು ಸಿಂಹಾವಲೋಕನ ಕ್ರಮದಿಂದ ನಿರೂಪಿಸಿರುವ ಕಾರಣ, ದುರ್ಯೋಧನನು ಪಾಂಡವರಿಗೆ ಕೊಟ್ಟ ಕಿರುಕುಳ ಮೇಲಿಂದ ಮೇಲೆ ನೆನಪಿಗೆ ಬಂದು ಅವನಿಗೆ ಒದಗಿದ ಗತಿ ಸರಿಯಾದದ್ದು, ಅವನು ಮಹಾನುಭಾವನೇ ಎಂಬ ಸಂದೇಹ ಬರುತ್ತದೆ. ಅಲ್ಲದೆ ಉಕ್ತಿ ವಸ್ತುಗಳಿಗೆ ಅವನು ಸಂಪೂರ್ಣವಾಗಿ ಪಂಪ ಭಟ್ಟ ನಾರಾಯಣರಿಗೆ ಋಣಿ. ಆದರೂ ವೀರ ಕರುಣರಸಗಳನ್ನು ಪ್ರತಿಪಾದಿಸುವುದಕ್ಕೆ ರನ್ನನು ಎತ್ತಿದ ಕೈ. ದುರ್ಯೋಧನನ ಅಭಿಮನ್ಯು ಪ್ರಶಂಸೆ, ಅವನ ಕರ್ಣನ ಗುಣಗಾನ, ಭೀಮನ ವೀರಾಲಾಪಗಳು ಇವು ಇದಕ್ಕೆ ನಿದರ್ಶನಗಳು. ಎರಡನೆಯದಾಗಿ ಮಹಾಭಾರತದ ಅಶ್ವಮೇಧದ ಕಥೆಯನ್ನು ತಿಳಿಸುವ ಲಕ್ಷ್ಮೀಶನ ಜೈಮಿನಿಭಾರತ ಅತ್ಯಂತ ಜನಪ್ರಿಯವಾದ ಕಾವ್ಯ. ಪಂಡಿತ ಪಾಮರರಿಬ್ಬರೂ ಈ ಕಾವ್ಯವನ್ನು ಮೆಚ್ಚಿಕೊಂಡಿದ್ದಾರೆ. ಜೈಮಿನಿ ಭಾರತ ಸಣ್ಣ ಕಥೆಗಳ ಗೊಂಚಲು. ಅದು ಶ್ರೀಕೃಷ್ಣ ಚರಿತಾಮೃತ. ಯುದ್ಧದ ಅಲ್ಲಿನ ವರ್ಣನೆಗಳನ್ನು ಓದಿದಾಗ ಮೈ ರೋಮಾಂಚಗೊಳ್ಳುವುದು. ಪ್ರಕೃತಿ ಸೌಂದರ್ಯದ ವರ್ಣನೆಗಳು, ಸೊಗಸಾದ ಅಲಂಕಾರಗಳು ಇವುಗಳಿಂದ ಕೂಡಿ ಕಾವ್ಯ ಸರ್ವಜನಗ್ರಾಹ್ಯವಾಗಿದೆ. ಮೂರನೆಯದಾಗಿ ಕಿರಾತಾರ್ಜುನೀಯ ಪ್ರಸಂಗವನ್ನು ವರ್ಣಿಸುವ ಷಡಕ್ಷರಿಯ 'ಶಬರಶಂಕರ ವಿಲಾಸ'ವು ಚಿಕ್ಕದಾದ ಚಂಪೂಕಾವ್ಯ. ಪರಿಣತ ವಯಸ್ಸಿನಲ್ಲಿ ಕವಿ ಈ ಕಾವ್ಯವನ್ನು ಬರೆದಿರಬಹುದಾದರೂ ಆ ಪ್ರೌಢಿಮೆ, ಆ ಅಲಂಕಾರಗಳ ಗೊಂದಲ ಇವೆಲ್ಲ ಪಂಡಿತ

ರಾದವರಿಗೆ ಮಾತ್ರ ಗ್ರಾಹ್ಯವನ್ನಾಗಿ ಮಾಡಿವೆ. ವಾಚಕರನ್ನು ದಿಗ್ಭ್ರಾಂತರನ್ನಾಗಿ ಮಾಡುತ್ತವೆ. ಸಾಮಾನ್ಯನಿಗೆ ಆ ಕಾವ್ಯ 'ಕಬ್ಬಿಣದ ಕಡಲೆ.'

ಈ ಸಣ್ಣ ದೊಡ್ಡ ಕಾವ್ಯಗಳಲ್ಲದೆ ಕನ್ನಡದಲ್ಲಿ ಜೈನಸಂಪ್ರದಾಯವನ್ನು ಅನುಸರಿಸಿ ಬರೆದಿರುವ ಮಹಾಭಾರತಗಳ ವಿಷಯವನ್ನು ಪ್ರಸ್ತಾಪಮಾಡಲು ಇಲ್ಲಿ ಅವಕಾಶವಿಲ್ಲ.

ಹೀಗೆ ಕನ್ನಡ ಕವಿಗಳು ಸಂಸ್ಕೃತ ಮಹಾಭಾರತವನ್ನು ಪದ್ಯರೂಪದಲ್ಲಿ ಸಂಪೂರ್ಣವಾಗಿಯೊ, ಭಾಗಗಳಲ್ಲಿಯೊ ಕನ್ನಡನುಡಿಯಲ್ಲಿ ರಚಿಸಿದ್ದರೂ ಅದನ್ನು ಜನಸಾಮಾನ್ಯಕ್ಕೆ ಓದಿಕೊಳ್ಳಲು, ಓದಿಸಿ ಕೇಳಲು ಗದ್ಯದಲ್ಲಿ ತಿಳಿಸಲು ಪ್ರಯತ್ನಗಳು ನಡೆಯದೆ ಹೋಗಿಲ್ಲ. ಈ ತೆರನಾದ ಪ್ರಯತ್ನಗಳಲ್ಲಿ ಆಳಿದ ಮಹಾಸ್ವಾಮಿಯವರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು ರಚಿಸಿರುವ 'ಕೃಷ್ಣರಾಜ ವಾಣೀ ವಿಲಾಸವೆಂಬ ಮಹಾಭಾರತ ಕನ್ನಡ ಟೀಕು' ಎಂಬ ಗ್ರಂಥವೂ, ಪಂಡಿತ ದೇವ ಶಿಖಾಮಣಿ ಅಳಸಿಂಗರಾಚಾರ್ಯರ 'ಶ್ರೀ ಮಹಾಭಾರತವು—ಕರ್ಣಾಟಕ ವಚನವು' ಎಂಬ ಗ್ರಂಥಗಳು ಅತಿಮುಖ್ಯವಾದವು. ಸಂಸ್ಕೃತ ಮಹಾಭಾರತದ ಕಥೆಯನ್ನು ಮೊದಲಿಂದ ಕೊನೆಯವರೆಗೆ ವಿವರಗಳನ್ನು ಬಿಡದೆ ತಿಳಿಸುವ ಮಹಾಪ್ರಯತ್ನಗಳು ಇವು. ಕನ್ನಡಜನರಿಗೆ ಈ ಗದ್ಯಗ್ರಂಥಗಳು ತುಂಬ ಪ್ರಿಯವಾಗಿರುವುದೆಂಬ ಅಂಶವನ್ನು ಇಲ್ಲಿ ಮತ್ತೆ ಬೇರೆ ಹೇಳಬೇಕಾಗಿಲ್ಲ.

ಹಿಂದೆ ಹೇಳಿದ ಕಾವ್ಯಗಳು ಪ್ರೌಢವಾದವುಗಳು. ಪಂಪ, ರನ್ನ, ಲಕ್ಷ್ಮೀಶ, ಷಡಕ್ಷರಿಗಳ ಮಾತು ಹಾಗಿರಲಿ. ಕುಮಾರವ್ಯಾಸನ ಸರಳವೂ ಸುಲಭವೂ ಆದ ಭಾರತವನ್ನು ಅರ್ಥಮಾಡಿಕೊಂಡು ಅದರ ಸ್ವಾರಸ್ಯವನ್ನು ಗ್ರಹಿಸಲು ತಕ್ಕಮಟ್ಟಿನ ಭಾಷಾಪಾಂಡಿತ್ಯ ಆವಶ್ಯಕ. ಇದು ಸಾಮಾನ್ಯರ ಕೈಗೆ ಎಟುಕದ ಮಾತು. ಗದ್ಯ ಗ್ರಂಥಗಳು ಅನೇಕ ಸಂಪುಟಗಳಲ್ಲಿರುವ ಕಾರಣ ಇವುಗಳನ್ನು ಓದಿ ಮಹಾಭಾರತದ ಕಥೆಯ ಸ್ವರೂಪವನ್ನೂ ಸ್ವಾರಸ್ಯವನ್ನೂ ಗ್ರಹಿಸುವುದು ಕಷ್ಟವಾಗುತ್ತದೆ. ಉಪಕಥೆಗಳಿಂದ ಸುತ್ತುವರಿದ ಮುಖ್ಯ ಕಥೆಯಲ್ಲಿ ಐಕ್ಯತೆಯೇ ಇಲ್ಲವೆಂಬ ಭ್ರಮೆಯುಂಟಾಗುತ್ತದೆ. ಅನೇಕ ಕಡೆ ಈ ಸಂಪುಟಗಳನ್ನು ಓದುವಾಗ ಬೇಸರವುಂಟಾಗುತ್ತದೆ. ಈ ನಡುವೆ ಧರ್ಮನೀತಿಗಳ ಸುರಿಮಳೆ ಬೇರೆ. ಈ ಎಲ್ಲ ಪೊದೆಗಳನ್ನು ಕತ್ತರಿಸಿಕೊಂಡು ಮುಖ್ಯ ಕಥೆಯನ್ನು ಸಮೀಪಿಸುವ ವೇಳೆಗೆ ವಾಚಕನಿಗೆ ತುಂಬ ಕಷ್ಟವಾಗುತ್ತದೆ. ಕುರುಪಾಂಡವರ ಹೋರಾಟವೇ ಮಹಾಭಾರತದ ತಿರುಳು. ಮೂಲಕಥೆಯ ಐಕ್ಯತೆ (Unity)ಗೆ ಭಂಗ ಬರದಂತೆ, ಒಂದೇ ನೋಟಕ್ಕೆ ಅದು ಸಿಕ್ಕುವಂತೆ, ಕಥೆಯ ಸ್ವಾರಸ್ಯ ಕೆಡದಂತೆ, ಹಿಂದಿನ ಕವಿಗಳು ತಮ್ಮ ಕಲ್ಪನಾವಿಲಾಸವನ್ನು ಹರಿಯಬಿಟ್ಟು

ಕಥೆಯನ್ನು ಬದಲಾಯಿಸಿಕೊಂಡಂತೆ ಬದಲಾಯಿಸಿಕೊಳ್ಳದೆ ಮೂಲವನ್ನು ಹಾಗೆಯೇ ಪ್ರತಿಬಿಂಬಿಸಿ, ಜನರಲ್ಲಿ ಸಂಸ್ಕಾರವನ್ನುಂಟುಮಾಡತಕ್ಕ ಒಂದು ಅಡಕವಾದ ಗದ್ಯಗ್ರಂಥ ಆವಶ್ಯಕವಾಗಿತ್ತು. ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು ಪ್ರಕಟಿಸಿರುವ **'ವಚನ ಭಾರತ'** ಈ ಕೆಲಸವನ್ನು ಮಾಡಿದೆ.

ಸಾವಿರ ವರ್ಷಗಳ ಕೆಳಗೆ ರಾಜಾಶ್ರಯದಲ್ಲಿ, ಪಂಡಿತರು ಮೆಚ್ಚುವಂತೆ, ತನ್ನ ಆಶ್ರಯದಾತನ ಹೆಸರನ್ನು ಸ್ಥಿರಗೊಳಿಸಲು, ಚಂಪೂರೀತಿಯಲ್ಲಿ, ಸಂಸ್ಕೃತ ಮಹಾಭಾರತದ ಮೊದಲ ಹತ್ತು ಪರ್ವಗಳನ್ನು 'ಕತೆಯ ಮೆಯ್ ಕಿಡಲೀಯದೆ' ಕೇವಲ ಆರು ತಿಂಗಳ ಅವಧಿಯಲ್ಲಿ ಪಂಪನು ಅಪೂರ್ವವಾದ ರೀತಿಯಲ್ಲಿ ಸಂಗ್ರಹಿಸಿದನೆಂದು ಹೇಳಿತಷ್ಟೆ. ಈಗ ಶ್ರೀಮಾನ್ ಕೃಷ್ಣಶಾಸ್ತ್ರಿಗಳು ಕೇವಲ ಲೋಕಕಾರುಣ್ಯದೃಷ್ಟಿಯಿಂದಲೇ ಪ್ರೇರಿತರಾಗಿ ವ್ಯಾಸಭಾರತದ ಹದಿನೆಂಟು ಪರ್ವಗಳ ಕಥೆಯನ್ನು ತಿಳಿಯಾದ ಆದರೆ ಬಿಗಿಯಾದ ಕನ್ನಡದಲ್ಲಿ ಗೆರೆಕೊಯ್ದಂತೆ ಆರು ತಿಂಗಳಲ್ಲಿಯೇ ಅಪೂರ್ವವಾಗಿಯೇ ಸಂಗ್ರಹಿಸಿರುವರೆಂಬುದನ್ನು ನೆನೆದಾಗ ಆಶ್ಚರ್ಯವೆನಿಸುತ್ತದೆ. ಇದು ಆಶ್ಚರ್ಯದ ವಿಷಯವಲ್ಲದೆ ಮತ್ತೇನು? ಲಕ್ಷಶ್ಲೋಕಗಳನ್ನುಳ್ಳ ಸಂಸ್ಕೃತ ಮಹಾಭಾರತವನ್ನು ಉತ್ತರ ದಕ್ಷಿಣ ಪಾಠಗಳೊಡನೆ ಜೀರ್ಣಿಸಿಕೊಂಡು, ಕ್ಷೇಮೇಂದ್ರನ ಭಾರತ ಮಂಜರಿ ಕನ್ನಡ ಭಾರತಗಳು ಇವುಗಳನ್ನು ಮನನಮಾಡಿ, ಈ ಸಾಹಿತ್ಯಕ್ಕೆ ಸಂಬಂಧಿಸಿದ ನಾನಾ ಗ್ರಂಥಗಳನ್ನು ಓದಿ ಸಂಸ್ಕೃತ ಭಾರತದ ಸ್ವರೂಪ ಅದರ ಕಾವ್ಯಗುಣ ದರ್ಶನಬೋಧೆ ಇವೇ ಮೊದಲಾದ ಬಹು ವಿಷಯಗಳನ್ನೊಳಗೊಂಡ ವಿದ್ವತ್ ಪೂರ್ಣವಾದ ಮುನ್ನುಡಿಯಿಂದ ಕೂಡಿದ ಗ್ರಂಥವನ್ನು ಆರು ತಿಂಗಳಲ್ಲೇ ಬರೆದುದು ಆಶ್ಚರ್ಯಕರವಾದ ವಿಷಯವೂ ಹೌದು; ಪ್ರಶಂಸನೀಯವಾದ ವಿಷಯವೂ ಹೌದು. ಲೇಖಕರ ಅರವತ್ತು ವರ್ಷಗಳ ಸಾರಸ್ವತ ತಪಸ್ಸು ಆರು ತಿಂಗಳಲ್ಲಿ ವಚನ ಭಾರತದಲ್ಲಿ ಫಲಿಸಿಬಂದಿದೆ. ಹೊಸಗನ್ನಡ ಗದ್ಯಕ್ಕೆ ಮಕುಟಪ್ರಾಯವಾಗಿ, ಈಗಿನ ಮತ್ತು ಮುಂದಿನ ಲೇಖಕವರ್ಗಕ್ಕೆ ಆದರ್ಶಪ್ರಾಯವಾಗಿ, ಈ ಗ್ರಂಥ ಸಿಲ್ಲುತ್ತದೆ. ಈ ಹೇಳಿಕೆಗೆ ಅತ್ಯುಕ್ತಿಯ ಹೆದರಿಕೆ ಇಲ್ಲ. ಸ್ವಭಾವೋಕ್ತಿ ಇದು.

ಹಾಗಾದರೆ ವಚನ ಭಾರತದ ಹಿರಿಮೆ ಏನು? ಅದು ಎಲ್ಲಿ ಅಡಗಿದೆ? ಈ ಪ್ರಶ್ನೆಯನ್ನು ಬಿಡಿಸಲು ಒಂದೆರಡು ಮಾತುಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಆಬಾಲವೃದ್ಧರಿಗೆ ತಿಳಿಯುವಂತೆ ತಿಳಿಯಾದ ಆದರೆ ಬಿಗಿಯಾದ ಭಾಷೆಯಲ್ಲಿ ಒಂದೇ ನೋಟದಲ್ಲಿ ಮಹಾಭಾರತದ ಕಥೆ ನಮಗೆ ನಿಲುಕುವಂತೆ ಆ ಗ್ರಂಥವನ್ನು ಇಲ್ಲಿ ಸಂಗ್ರಹವಾಗಿ ಸಾರವತ್ತಾಗಿ ಗದ್ಯದಲ್ಲಿ ಬರೆದಿದೆ. ಕಥೆ, ಕಾದಂಬರಿಯಂತಿದ್ದು ಒಮ್ಮೆ ಅದನ್ನು ಓದಲು ಮೊದಲುಮಾಡಿದರೆ ಅದನ್ನು ಓದಿ ಮುಗಿಸುವವರೆಗೂ

ಗ್ರಂಥವನ್ನು ಕೆಳಗಿಡಲು ಮನಸ್ಸೇ ಬರುವುದಿಲ್ಲ. ಮಳೆಹೊಯ್ದು ಪ್ರವಾಹ ಉಕ್ಕಿ ಹರಿದು ದಡವನ್ನು ಕೊರೆದು ಕಸಕಡ್ಡಿಗಳನ್ನು ಕೊಚ್ಚಿಹಾಕಿ ಆಮೇಲೆ ನೀರು ತಿಳಿದು ನದಿ ತುಂಬ ಪ್ರವಾಹದಿಂದ ಗಂಭೀರವಾಗಿ ಶುಭ್ರವಾಗಿ ರಮಣೀಯವಾಗಿ ಹರಿಯುವಂತೆ ಈ ಗ್ರಂಥದ ಶೈಲಿ ವಿಷಯದ ಮಹತ್ವಕ್ಕೆ ತಕ್ಕಂತೆ ಗಂಭೀರವಾಗಿದೆ.

ಮಹಾಭಾರತವು ಒಂದು ದೊಡ್ಡ ಕಾಡು. ಅದರ ಮುಖ್ಯ ಕಥೆ ಕುರುಪಾಂಡವರ ಹೋರಾಟದ ಕಥೆಯಾದರೂ ಅದರಲ್ಲಿ ನೂರಾರು ಸಣ್ಣ ಪುಟ್ಟ ಕಥೆಗಳೂ, ಅನೇಕ ಉಪಾಖ್ಯಾನಗಳೂ, ನೀತಿ ಧರ್ಮಬೋಧೆಗಳೂ ಕಥೆಯ ಸುತ್ತಲೂ ಸೀಗೆ ಬೇಲಿಯಂತೆ ಹೆಣೆದುಕೊಂಡಿವೆ. ವಾಚಕರಿಗೆ ಈ ಗ್ರಂಥ ದಿಗ್ಭ್ರಮೆ ಹಿಡಿಸುವುದು ಸಹಜವಾಗಿದೆ. ತಮ್ಮ ಗುರಿಸಾಧನೆಗಾಗಿ ಲೇಖಕರು ಅನವಶ್ಯವಾದ ಭಾಗಗಳನ್ನು ಕತ್ತರಿಸಿಹಾಕಿದ್ದಾರೆ. ಕಥೆ ಭೀಷ್ಮನ ತಂದೆಯಾದ ಶಂತನುವಿನಿಂದ ಮೊದಲಾಗುತ್ತದೆ. ಪಾಂಡವರು ಸ್ವರ್ಗವನ್ನು ಸೇರಿದುದರಲ್ಲಿ ಮುಗಿಯುತ್ತದೆ. ಮಹಾಭಾರತದ ಕಥೆ ಮುಖ್ಯವಾಗಿ ಮಾನವರ ಆದರ್ಶ, ಏಳುಬೀಳು ಇವುಗಳನ್ನು ಚಿತ್ರಿಸುವ ಕಥೆ (Human Story) ಎಂಬುದನ್ನು ತೋರಿಸಲು, ಮೇಲಿಂದ ಮೇಲೆ ಒತ್ತಿ ಹೇಳಲು ಭಾರತದಲ್ಲಿ ಬರುವ ಅದ್ಭುತಗಳನ್ನೂ ಪವಾಡಗಳನ್ನೂ ಇಲ್ಲಿ ಕೈಬಿಟ್ಟಿದೆ. ಆದ್ದರಿಂದಲೇ ಜನರಲ್ಲಿ ಪ್ರಚಾರದಲ್ಲಿರುವ ಅನೇಕ ಕಥೆಗಳಿಗೆ ಇಲ್ಲಿ ಸ್ಥಾನವಿಲ್ಲ. ಹಿಂದಿನ ಜನ್ಮದಲ್ಲಿ ದ್ರೌಪದಿ ಐದು ಜನ ಗಂಡಂದಿರನ್ನು ಬೇಡಿದ ಕಥೆ, ವಸ್ತ್ರಾಪಹರಣ ಸಮಯದಲ್ಲಿ ಶ್ರೀಕೃಷ್ಣನ ಮಹಾತ್ಮ್ಯೆ, ಅಕ್ಷಯಪಾತ್ರೆಯ ಕಥೆ, ಊರ್ವಶಿ ಅರ್ಜುನನಿಗೆ ಕೊಟ್ಟ ಶಾಪ ಇವೇ ಮೊದಲಾದ ಕಥೆಗಳನ್ನು ಇಲ್ಲಿ ಹೇಳಿಲ್ಲ. ಭಾರತದಲ್ಲಿ ಬಂದ ಸಂದೇಹ, ಸಮಸ್ಯೆಗಳನ್ನು ಪರಿಹಾರಮಾಡಿಕೊಳ್ಳಲು ಆಮೇಲೆ ಹುಟ್ಟಿದ ಕಥೆಗಳು ಅವು. ಮನುಷ್ಯನಿಗೆ ಹಿರಿಯತನ ಬರುವುದು ಅವನ ನಡತೆಯಿಂದ; ಅವನು ನಡೆಸಿದ ಪವಾಡಗಳಿಂದಲ್ಲ. ಭೀಷ್ಮದ್ರೋಣರ ನಡತೆ ಭಾರತದಲ್ಲಿ ಎಷ್ಟು ಲೋಕೋತ್ತರವಾಗಿ ಗಂಭೀರವಾಗಿದೆ! ಮಹಾತ್ಮನಾದ ಭೀಷ್ಮನು ತಂದೆಯೊಡನೆ ನಡೆದುಕೊಂಡ ರೀತಿ ವಚನ ಭಾರತದಲ್ಲಿ ಹೀಗೆ ಬಂದಿದೆ. ಸತ್ಯವತಿಯನ್ನೇ ಕುರಿತು ಚಿಂತಿಸುತ್ತಿದ್ದ ಶಂತನು ಭೀಷ್ಮನನ್ನು ನೋಡಿ ಹೀಗೆ ಹೇಳಿದನು :—

"ಮಗು, ನಾನು ಚಿಂತಾಮಗ್ನನಾಗಿದ್ದೇನೆಂದು ನೀನು ಹೇಳಿದ್ದು ನಿಜ; ನಮ್ಮ ಈ ಹಿರಿಯ ಮನೆತನಕ್ಕೆ ನೀನು ಒಬ್ಬನೇ ಮಗ; ಮನುಷ್ಯರು ಮರ್ತ್ಯರು, ನಿತ್ಯರಲ್ಲ. ನಿನಗೇನಾದರೂ ವಿಪತ್ತು ಸಂಭವಿಸಿದರೆ, ನಮ್ಮ ಕುಲವು ನಿಂತುಹೋಗುತ್ತದೆ; ನೀನೇನೋ ಒಬ್ಬನಾದರೂ ನೂರು ಮಕ್ಕಳಿಗಿಂತ ಹೆಚ್ಚಾದವನೆಯೇ; ನನಗೂ ಸುಮ್ಮಸುಮ್ಮನೆ ಮತ್ತೆ ಹೆಂಡತಿಯನ್ನು ಕಟ್ಟಿಕೊಳ್ಳಲು ಇಷ್ಟವಿಲ್ಲ; ಸಂತತಿ ನಷ್ಟ

ವಾಗಬಾರದೆಂಬುದಿಷ್ಟೇ ನನ್ನ ಕೋರಿಕೆ; ನೀನು ಎಲ್ಲಾದರೂ ಕ್ಷೇಮವಾಗಿರು ಮಗು! ಆದರೆ 'ಒಬ್ಬ ಮಗ ಮಗನಲ್ಲ' ಎಂದು ಧರ್ಮಬಲ್ಲವರು ಹೇಳುತ್ತಾರೆ. ನೀನೋ ಶೂರ; ಅವಮರ್ಯಾದೆಯನ್ನು ಸಹಿಸದವನು; ಮೂರು ಹೊತ್ತು ಶಸ್ತ್ರಗಳಲ್ಲಿಯೇ ಕೈ ಇಟ್ಟುಕೊಂಡಿರುವವನು. ಇಂಥವನಿಗೆ ಶಸ್ತ್ರದಿಂದಲೇ ಕೊನೆ. ಆದ್ದರಿಂದ ನೀನೇನಾದರೂ ಶಾಂತನಾಗಿಬಿಟ್ಟರೆ ಏನುಗತಿ ಎಂದು ಕಳವಳಕ್ಕೆ ಸಿಕ್ಕಿದ್ದೇನೆ. ಇದೇ ಮಗು ನನ್ನ ಚಿಂತೆಗೆ ಕಾರಣ!"

ಈ ಸಂಭಾಷಣೆ ಎಷ್ಟು ಗಂಭೀರವಾಗಿದೆ! ತಂದೆ ತನ್ನ ಆಶೆಯನ್ನು ಮಗನಿಗೆ ಎಷ್ಟು ಧ್ವನಿಪೂರ್ಣವಾಗಿ ತಿಳಿಸುತ್ತಾನೆ! ತಂದೆಯ ಎದುರಿಗೆ ಮಾತನಾಡದೆ ವೃದ್ಧ ಮಂತ್ರಿಗಳಿಂದ ನಡೆದ ವಿಷಯವನ್ನು ವಿಚಾರಿಸಿಕೊಂಡು ದೇವವ್ರತನು ಶಂತನುವಿನ ಅಭೀಷ್ಟವನ್ನು ನೆರವೇರಿಸಿ ಭೀಷ್ಮ ನೆನಿಸಿಕೊಂಡನು! ಶಿಷ್ಯರು ಹಿಡಿದುತಂದ ದ್ರುಪದನನ್ನು ದ್ರೋಣನು (ವಚನ ಭಾರತದಂತೆ) ಎಡಗಾಲಿನಿಂದ ಒದೆಯಲಿಲ್ಲ. ತನ್ನ ಮಹಿಮೆಯನ್ನು ತೋರಿಸಿ ಅವನಿಂದ ಅರ್ಧರಾಜ್ಯವನ್ನು ಕಿತ್ತುಕೊಂಡು ಅವನ ದರ್ಪವನ್ನಡಗಿಸಿದನು. ಈ ಮಹಾಮಹಿಮರು ಯುದ್ಧಭೂಮಿಯಲ್ಲಿ ನೆಲಕ್ಕುರಳಿದಾಗ ಇಳೆಯ ಮಾದರಿಗಳು ಮುರಿದುಹೋಗಿ ಅವರು ತುಂಬಲಾಗದ ಸ್ಥಾನವನ್ನು ಬಿಟ್ಟು ಹೋಗಿರುವರೆಂಬ ಭಾವವುಂಟಾಗುತ್ತದೆ. ಈ ಮಹಿಮರನ್ನು ನೆನೆದು ನಮ್ಮ ಜನ ತಮ್ಮ ಕಷ್ಟ ಕಾಲದಲ್ಲಿ "ಚಿಂತೆಮಾಡಲಿ ಬ್ಯಾಡ, ಛಿ, ಹುಚ್ಚಿ ಹಡದವ್ವ| ಚಿಂತ್ಯಾಗ ಕಾಯ ಇಳಿತರ ಪಾಂಡವರು| ಅಂಥವರಿಗುಂಟು ವನವಾಸ||" ಎಂದು ಹಾಡಿಕೊಂಡು ಸಮಾಧಾನ ಮಾಡಿಕೊಂಡರು!

ಮೇಲೆ ಹೇಳಿದ ಕೆಲವು ಕಥೆಗಳಿಗೆ ಇಲ್ಲಿ ಸ್ಥಾನವಿಲ್ಲದಿದ್ದರೂ ಕೆಲವು ಮುಖ್ಯ ಕಥೆಗಳಿಗೆ ಇಲ್ಲಿ ಸ್ಥಾನಕೊಟ್ಟಿದೆ. ಕರುಣರಸಪೂರಿತವಾದ ಸಾವಿತ್ರಿ, ನಳದಮಯಂತಿಯರ ಕಥೆಗಳು ಪುರಾತನವೂ ಪ್ರಸಿದ್ಧವೂ ಆಗಿವೆ. ಆದ್ದರಿಂದ ಲೇಖಕರು ಅವುಗಳನ್ನು ತುಂಬುವಿವರಗಳೊಡನೆ ಇಲ್ಲಿ ನಿರೂಪಿಸಿದ್ದಾರೆ. ಹಾಗೆಯೇ ಯಯಾತಿ, ಶಕುಂತಳೆ, ಶ್ರೀರಾಮರ ಕಥೆಗಳೂ ಸಹ. ಅಷ್ಟೇ ಅಲ್ಲ; ಕನ್ನಡಿ ಆನೆಯನ್ನು ಉಚಿತ ಪ್ರಮಾಣದಲ್ಲಿ ಯಥಾವತ್ತಾಗಿ ಪ್ರತಿಬಿಂಬಿಸುವಂತೆ, ಇನ್ನೂ ಅನೇಕ ಕಥೆಗಳು ಒಂದು ವಾಕ್ಯದಲ್ಲೊ, ಒಂದು ಮಹಾವಾಕ್ಯದಲ್ಲೊ ಇಲ್ಲವೆ ಒಂದು ಪುಟದಲ್ಲೊ ಅಡಕವಾಗಿ ಬಂದಿವೆ. ನೀತಿ ಧರ್ಮ ಉಪದೇಶಗಳು ಬೇಕೆನ್ನುವವರಿಗೆ ಅವು ಶಾಂತಿ ಅನುಶಾಸನಪರ್ವಗಳಲ್ಲಿ ವಿಸ್ತಾರವಾಗಿಯೂ, ಕಥೆ ನಡುವೆ ಅಲ್ಲಲ್ಲೆ ಸಂಗ್ರಹವಾಗಿಯೂ ಬಂದಿವೆ. ಉತ್ತಮವಾದ ಸಂಸ್ಕಾರಪಡೆಯಲು ಇಷ್ಟು ಬೋಧೆ ಸಾಕೆಂದು ಧೈರ್ಯವಾಗಿ ಹೇಳಬಹುದು.

ಸಂಸ್ಕೃತ ಮಹಾಭಾರತ ಕೇವಲ ನೀತಿಧರ್ಮಗಳನ್ನು ಬೋಧಿಸುವ ಗ್ರಂಥ ವಷ್ಟೇ ಅಲ್ಲ; ಇದು ಪರಮಪೂಜ್ಯವಾದ ಕಾವ್ಯವೂ ಹೌದು. ಇಲ್ಲಿನ ಧಾರ್ಮಿಕ ವಿವರಗಳನ್ನು ತೆಗೆದುಹಾಕಿದಾಗ ಅದು ಎಂಥ ಕಾವ್ಯರಸಾಯನವಾಗುವುದೆಂಬುದಕ್ಕೆ 'ವಚನ ಭಾರತ'ವೇ ಉತ್ತಮವಾದ ಉದಾಹರಣೆ. ಮಹಾಭಾರತದ ವಸ್ತು ವೈಚಿತ್ರ್ಯ, ಅದರ ರಸಪ್ರವಾಹ, ಪಾತ್ರಸೃಷ್ಟಿ, ಅಲಂಕಾರಸಂಪತ್ತು ಇವೆಲ್ಲ ಎಲ್ಲಿ ದೊರಕುತ್ತವೆ? ಸಂಭಾಷಣೆಯ ಸೊಗಸಿಗೂ ವ್ಯಕ್ತಿಸ್ವಭಾವ ಕ್ರಮಕ್ರಮವಾಗಿ ತಿಳಿದು ಬರುವುದಕ್ಕೂ ಮೇಲೆ ಒಂದು ಉದಾಹರಣೆಯನ್ನು ಕೊಟ್ಟಿತಷ್ಟೆ. ಇನ್ನೊಂದು ಉದಾಹರಣೆಯಿಂದ ಕವಿ ಪಾತ್ರ ಸನ್ನಿವೇಶಗಳನ್ನು ಹೇಗೆ ನೋಡುವನೆಂಬುದನ್ನು ಸ್ಪಷ್ಟ ಪಡಿಸಬಹುದು. ಬಕನಿಂದ ಉಂಟಾದ ಭಯವನ್ನು ನಿವಾರಿಸಿಕೊಳ್ಳಲು ಒಬ್ಬೊಬ್ಬರೂ ತಾವು ಬಕನಿಗೆ ಬಲಿಯಾಗುವುವೆಂದು ಬ್ರಾಹ್ಮಣ, ಅವನ ಹೆಂಡತಿ, ಮಗಳು ತಮ್ಮ ದೃಷ್ಟಿಕೋಣದಿಂದ ವಾದಿಸುತ್ತಾರೆ. ಅಂತು ಮೃತ್ಯುಛಾಯೆ ಕವಿದಿರುವ ಬಹಳ ಭಯಂಕರವಾದ ದುಃಖಸಮಯ ಅದು. ಆ ಸಮಯದಲ್ಲಿ ಮನೆಯವರ ಗೋಳನ್ನು ನೋಡುತ್ತಿದ್ದ ಗಂಡುಮಗು ಆಗ ಮುಂದೆ ಬಂದು ನಗುಮುಖದಿಂದ ಮುದ್ದು ಮುದ್ದಾಗಿ 'ಅಪ್ಪ, ಅಳಬೇಡ!' 'ಅಮ್ಮ, ಅಳಬೇಡ!' 'ಅಕ್ಕಾ ಅಳಬೇಡ!' ಎಂದು ಸಮಾಧಾನಮಾಡುತ್ತ ಒಂದು ಕಡ್ಡಿಯನ್ನು ಹಿಡಿದುಕೊಂಡು ಬಂದು ಉಲ್ಲಾಸದಿಂದ 'ಮನುಷ್ಯನನ್ನು ತಿನ್ನುವ ಆ ರಾಕ್ಷಸನನ್ನು ನಾನು ಇದರಿಂದ ಹೊಡೆದು ಕೊಂದುಹಾಕುತ್ತೇನೆ! ಅಳಬೇಡಿ!' ಎಂದಿತು. ದುಃಖದಲ್ಲಿ ಮುಳುಗಿ ಹೋಗಿದ್ದರೂ ಮಗುವಿನ ಆ ಮುದ್ದು ಮಾತನ್ನು ಕೇಳಿ ಎಲ್ಲರಿಗೂ ತುಂಬ ಸಂತೋಷ ವಾಯಿತು. (ದುಃಖಸಮಯದಲ್ಲಿ ಮಕ್ಕಳ ಮುದ್ದುಮಾತನ್ನು ಕೇಳಿ ಉಲ್ಲಾಸ ಗೊಂಡವರಿಗೆ ಮಾತ್ರ ಈ ಸನ್ನಿವೇಶದ ಸೊಗಸು ಗೊತ್ತಾಗುತ್ತದೆ.) ಇದೇ ಸರಿಯಾದ ಸಮಯವೆಂದು ತಿಳಿದು ಕುಂತಿಯು ಅವರ ಹತ್ತಿರಕ್ಕೆ ಬಂದಳು; ಸತ್ತವರ ಹತ್ತಿರಕ್ಕೆ ಅಮೃತ ಬಂದಂತಾಯಿತು.

ಇಂತಹ ಸನ್ನಿವೇಶಗಳೂ ಸಂಭಾಷಣೆಗಳೂ ವರ್ಣನೆಗಳೂ ಉಪಮೆಗಳೂ ವಚನ ಭಾರತದಲ್ಲಿ ನೂರಾರು. ಉಪಮೆಗಳು ಸಹಜ ಸುಂದರವಾದವುಗಳೆಂಬುದನ್ನು ತೋರಿಸಲು ನೆನಪಿಗೆ ಬಂದ ಕೆಲವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಗಂಡನಿಲ್ಲದ ಹೆಂಗಸು ಬೀದಿಯಲ್ಲಿ ಬಿಸುಡಿದ ಮಾಂಸದ ಹಾಗೆ; ಹಕ್ಕಿಪಕ್ಷಿಗಳು ಅದನ್ನು ಕಿತ್ತು ತಿನ್ನುವಂತೆ ಎಲ್ಲರೂ ಅವಳನ್ನು ಪೀಡಿಸುವವರೆಯೇ; ಕಣ್ಣು ಹಾಕುವವರೆಯೇ? ಇಂದ್ರಪ್ರಸ್ಥದ ಕೋಟೆ 'ಗರುಡನು ರೆಕ್ಕೆ ಬಿಚ್ಚಿಕೊಂಡಂತಿದ್ದಿ'ತಂತೆ! ಗಂಧಮಾದನ ಪರ್ವತದಲ್ಲಿ ಗಿರಿನಿರ್ಝರಗಳು ಮುತ್ತಿನ ಹಾರಗಳಂತೆ ಬೀಳುತ್ತಿದ್ದುವಂತೆ! ಅಲ್ಲಿ ಬಿಚ್ಚಿ

ಎಸೆದ ಬಟ್ಟೆಗಳಂತೆ ಹೊಳೆಗಳು ಹಳ್ಳದಲ್ಲಿ ಹರಿಯುತ್ತಿದ್ದವು. ಐದುಜನ ಗಂಡಂದಿರನ್ನು ಆಳಿದ ವೀರರಮಣಿಯಾದ ದ್ರೌಪದಿ ಸುದೇಷ್ಣೆಗೆ ಒಳ್ಳೆಯ ಕಾಶ್ಮೀರಿ ಕುದುರೆಯಂತೆ ಕಾಣಿಸಿದುದು ಏನು ಆಶ್ಚರ್ಯ ! ಮಕ್ಕಳು ಕಲ್ಲುಸಕ್ಕರೆಯನ್ನು ಬಾಯಲ್ಲಿಟ್ಟುಕೊಂಡು ಅದರ ಸವಿಯನ್ನು ಸವಿಯುವಂತೆ, ಆಯಾ ಸನ್ನಿವೇಶಗಳಲ್ಲಿ ಈ ಹೋಲಿಕೆಗಳ ಸೊಗಸನ್ನು ಪರಿಭಾವಿಸಿದರೆ, ಇವುಗಳ ರಮಣೀಯತೆ ನಮಗೆ ವೇದ್ಯವಾಗುತ್ತವೆ. ಇಲ್ಲಿನ ವರ್ಣನೆಗಳೂ ಹಾಗೆ. ಅವು ಚಿಕ್ಕವು ; ಹಾಗೂ ವರ್ಣಿತವಾಗುವ ಸನ್ನಿವೇಶಗಳಿಗೆ ಹಿನ್ನೆಲೆಯಾಗಿ ರಮ್ಯವಾಗಿ ಬೆಳಗುತ್ತವೆ. ಇದಕ್ಕೆ ಒಂದೆರಡು ಉದಾಹರಣೆಗಳು. ಪಾಂಡುವು ಮಕ್ಕಳೊಡನೆ ಶತಶೃಂಗ ಪರ್ವತದಲ್ಲಿರಲು 'ಒಂದು ಸಾರಿ ವಸಂತಋತು ಬಂತು. ಮುತ್ತುಗ ತಿಲಕ ಮಾವು ಸಂಪಗೆ ಪಗಡೆ ಮುಂತಾದ ಬಗೆಬಗೆಯ ಮರಗಳು ಫಲಪುಷ್ಪಗಳಿಂದ ಶೋಭಿಸುತ್ತಿದ್ದುವು. ಕೆರೆಕಟ್ಟೆಗಳು ತಾವರೆಗಳಿಂದ ಕೂಡಿ ಬೆಳಗುತ್ತಿದ್ದುವು.' ನರನಾರಾಯಣಾಶ್ರಮದ ಬಳಿ 'ಮಂಗಳವಾದ ಭಾಗೀರಥಿಯು ತಿಳಿಯಾಗಿಯೂ ತಂಪಾಗಿಯೂ ಹರಿಯುತ್ತಿತ್ತು ; ದಿವ್ಯವಾದ ಹೂವುಗಳೂ ರಸತೊಟ್ಟಿಕ್ಕುವ ಹಣ್ಣುಗಳೂ ಇದ್ದುವು.' ಧೃತರಾಷ್ಟ್ರನಿದ್ದ ಆಶ್ರಮದಲ್ಲಿ ಜನಸಂಚಾರವಿಲ್ಲ ; ಎಲ್ಲವೂ ಶಾಂತವಾಗಿದೆ. ಜಿಂಕೆಗಳು ಹಿಂಡುಹಿಂಡಾಗಿ ಓಡಿಯಾಡುತ್ತಿವೆ ; ಹಸುರಾಗಿ ಬಾಳೆಗಳು ಬೆಳೆದಿವೆ.' ಈ ಸೊಗಸೆಲ್ಲ ಮೂಲಕ್ಕೆ ಸೇರಿದುದೆಂದು ಶಾಸ್ತ್ರಿಗಳು ಹೇಳಿದ್ದರೂ ಮೂಲದಲ್ಲಿ ಸಾರವತ್ತಾದುದನ್ನು ತಂದ ಕೀರ್ತಿ ಅವರಿಗೇ ಸಲ್ಲಬೇಕು. ಹಾಗೆಯೇ ಈ ಗ್ರಂಥದಲ್ಲಿ ಪಾಂಡವರು ಕಾಡಿಗೆ ಹೊರಡಲು ಸಿದ್ಧರಾದುದು ; ಭೀಷ್ಮರು ಸ್ವರ್ಗವನ್ನೇರಿದುದು ಇವೇ ಮೊದಲಾದ ಭಾಗಗಳನ್ನು ಓದಿದಾಗ ಕಣ್ಣು ಒದ್ದೆಯಾಗುತ್ತದೆ.

ಮಹಾಭಾರತ ಹಳೆಯಕಥೆ, ಪುರಾಣ, ಆಧುನಿಕ ಪ್ರಪಂಚದಲ್ಲಿ ಇದಕ್ಕೇನು ಸ್ಥಾನ ? ಬಾಳನ್ನು ಬೆಳಗಲು ಇದು ಸಾಕೇ ? ಎಂಬ ಇವೇ ಮೊದಲಾದ ಪ್ರಶ್ನೆಗಳನ್ನು ಕೇಳಬಹುದು. ಇವಕ್ಕೆ ಉತ್ತರ ಕೊಡುವುದೂ ಅಷ್ಟೇನೂ ಕಷ್ಟವಲ್ಲ. ಲೋಕದಲ್ಲಿ ದಾಯಾದಿ ಮತ್ಸರವಿರುವವರೆಗೆ, ದುರ್ಯೋಧನನಂತಹ ಹಟಮಾರಿಗಳು ಇರುವವರೆಗೆ, ಕೀಚಕ ಶಕುನಿಗಳಂತಹ ದುಷ್ಟರೂ ಕುಟಿಲರೂ ಇರುವವರೆಗೆ ಮಹಾಭಾರತದ ಸ್ವಾರಸ್ಯ ಹೇಗೆತಾನೆ ಮಂಕಾದೀತು ? ಭೀಷ್ಮನ ಮಹಾತ್ಯಾಗ ಮತ್ತು ಹಿಮಾಲಯದಷ್ಟೇ ಎತ್ತರವಾದ ಬ್ರಹ್ಮಚರ್ಯೆ, ಧರ್ಮರಾಯನ ತಾಳ್ಮೆ, ಭೀಮನ ಸಾಹಸ, ಅಭಿಮನ್ಯುವಿನ ಪರಾಕ್ರಮ, ಶ್ರೀಕೃಷ್ಣನ ಸಮದರ್ಶಿತ್ವ, ತನಗಿಂತಲೂ ಕಿರಿಯನಾದ ಶ್ರೀಕೃಷ್ಣನಲ್ಲಿ ಬಲರಾಮನಿಗಿದ್ದ ಪ್ರೀತಿಗೌರವ, ಇವೆಲ್ಲ ಭಾರತೀಯರಾದ ನಮಗೆ ಸಾವಿರಾರು ವರ್ಷಗಳಿಂದ ಮನೆಯ ಮಾತಾಗಿ ನಿಂತಿವೆ.

ಈ ವ್ಯಕ್ತಿಗಳು ಭಾರತೀಯರಾದ ನಮಗೆ ಮನೆಯ ಜನರಿಗಿಂತಲೂ ನಿಜವಾದವರು. ಕೊನೆಯ ಮಾತಾಗಿ ಇನ್ನೊಂದು ವಿಷಯ. ವಚನ ಭಾರತವನ್ನು ಓದುತ್ತಿದ್ದರೆ ಎಲ್ಲರ ಬಾಯಲ್ಲೂ ಎಲ್ಲ ಸಂದರ್ಭಗಳಲ್ಲೂ ವಿಧಿಯಮಾತು ಕೇಳಿಬರುತ್ತದೆ. ಹೌದು; ವಿಧಿ ಬಲವತ್ತರವಾದದ್ದು. ಪುರುಷಪ್ರಯತ್ನದ ಮೇಲೆ ಅದರ ಕೈ. ರಾಜಕುಮಾರಿಯಾಗಿ ಹುಟ್ಟಿ ಒಳ್ಳೆಯ ಮನೆಯನ್ನು ಸೇರಿ ಶೂರರೂ ಲೋಕೋತ್ತರವಾದ ನಡತೆಯುಳ್ಳ ಮಕ್ಕಳನ್ನು ಪಡೆದ ಕುಂತಿಪಟ್ಟ ಸುಖವೇನು? ಕಾಡು, ವೈಧವ್ಯ, ದಾಯಾದಿಗಳ ಮನೆಯ ವಾಸ, ಕೊನೆಗೆ ಕಾಡುಕಿಚ್ಚು, ಧೃತರಾಷ್ಟ್ರ ಗಾಂಧಾರಿಯರು ದಿಕ್ಕಿಲ್ಲದವರಾಗಿ ಕಾಡುಪಾಲಾದರು. ಮೂರ್ಧಾಭಿಷಿಕ್ತನೂ ಹದಿನೆಂಟು ಅಕ್ಷೋಹಿಣಿಯ ಸೈನ್ಯಕ್ಕೆ ಒಡೆಯನೂ ಆದ ಕೌರವನ ಬಳಿ ಪಾಂಡವರ ಸೈನ್ಯವನ್ನು ಕೊಂದು ಅಶ್ವತ್ಥಾಮ ಕೃತವರ್ಮರು ಬಂದಾಗ 'ದುರ್ಯೋಧನನಿಗೆ ಇನ್ನೂ ಕುಟುಕುಜೀವ ಅಂಟಿಕೊಂಡಿತ್ತು; ಉಸಿರಾಡುವುದೇ ಕಷ್ಟವಾಗಿ ಸಂಕಟಪಡುತ್ತಿದ್ದನು. ಬಾಯಿಂದ ರಕ್ತಸುರಿದು ನೆಲದಮೇಲೆ ಹರಿಯುತ್ತಿತ್ತು. ಸುತ್ತಲೂ ತೋಳ ನರಿ ಮುಂತಾದ ಕ್ರೂರಮೃಗಗಳು ಅವನನ್ನು ಕಿತ್ತುತಿನ್ನಲು ಹೊಂಚುತ್ತಿದ್ದವು. ಅವುಗಳನ್ನು ಅವನೇ ತುಂಬ ಕಷ್ಟದಿಂದ ಓಡಿಸುತ್ತಿದ್ದನು.' ಎಂತಹವನಿಗೆ ಎಂತಹಸ್ಥಿತಿ! ಹೇಗಿದ್ದವನು ಹೇಗಾದ! ಕೃಷ್ಣನ ಮಾತನ್ನು ಕೇಳದೆ ಜಂಡಿಸಿದ ಅಶ್ವತ್ಥಾಮನನ್ನು ಕುರಿತು ಕೃಷ್ಣನು 'ನೀನು ಈ ಶಿಶುಹತ್ಯೆ ಮಾಡಿದ ಪಾಪಕ್ಕಾಗಿ ಮೂರು ಸಾವಿರ ವರ್ಷಕಾಲ, ನಿರ್ಜನವಾದ ಕಾಡುಮೇಡುಗಳಲ್ಲಿ ಯಾರೊಡನೆಯೂ ಮಾತುಕಥೆಯಿಲ್ಲದೆ ಅಲೆಯುತ್ತಿರು' ಎಂದು ನುಡಿದ ಶಾಪವನ್ನು ನೆನೆಯಲು ಬಲುಘೋರ. ಯೋಗೀಶ್ವರನಾದ ಕೃಷ್ಣನು ಬೇಡನೊಬ್ಬನಿಂದ ಹತನಾದನು. ಹದಿನೆಂಟು ದಿನಗಳಲ್ಲಿ ಹದಿನೆಂಟು ಅಕ್ಷೋಹಿಣೀ ಸೇನೆ ಹೇಳ ಹೆಸರಿಲ್ಲದಾಯಿತು. ಇದನ್ನೆಲ್ಲ ನೆನೆದು ಮನುಷ್ಯನು ಶಾಂತಿ ವೈರಾಗ್ಯಗಳನ್ನು ಪಡೆಯಬೇಕು. ವಚನ ಭಾತರದ ಕೊನೆಯನ್ನು ಮುಟ್ಟಿದಾಗ ಬಿರುಗಾಳಿಯಿಂದ ಹುಚ್ಚೆದ್ದ ಸಮುದ್ರ ಕ್ರಮಕ್ರಮವಾಗಿ ಶಾಂತವಾಗುವ ಹಾಗೆ ಕಲಕಿಹೋದ ಮನಸ್ಸು ಶಾಂತವಾಗುತ್ತದೆ. ಮಹಾಭಾರತವನ್ನು ಓದಿ ಶಾಂತಿಯನ್ನು ಪಡೆಯಬೇಕೆಂಬ ಕ್ಷೇಮೇಂದ್ರನ ಮಾತಿನಿಂದ ನನ್ನ ಮಾತನ್ನು ಮುಗಿಸುತ್ತೇನೆ.

ರತ್ನೋದಾರ ಚತುಸ್ಸಮುದ್ರರಶನಾಂ ಭುಕ್ತ್ವಾ ಭುವಂ ಕೌರವೋ
ಭಗ್ನೋರುಃ ಪತಿತಃ ಸನಿಷ್ಪರಿಜನೋ ಜೀವನ್ ವೃಕೈರ್ಭಕ್ಷಿತಃ |
ಗೋಪೈರ್ವಿಶ್ವಜಯೀ ಜಿತಃ ಸ ವಿಜಯಃ ಕಕ್ಷೈಃ ಕ್ಷಿತಾ ವೃಷ್ಣಯಃ
ತಸ್ಮಾತ್ ಸರ್ವಮಿದಂ ವಿಚಾರ್ಯ ಸುಚಿರಂ ಶಾಂತ್ಯೈರ್ಮನೋದೀಯತಾಂ ||

(ಕೌರವನು ನಾಲ್ಕು ಸಮುದ್ರಗಳವರೆಗೂ ಹಬ್ಬಿದ್ದ ಭೂಮಿಯನ್ನು ಆಳಿ ತೊಡೆ ಮುರಿಸಿಕೊಂಡು ಬಿದ್ದನು; ಹತ್ತಿರ ಒಬ್ಬರೂ ಇಲ್ಲದೆ, ಬದುಕಿದ್ದಾಗಲೇ ಅವನನ್ನು ತೋಳಗಳು ಕಿತ್ತು ತಿಂದುವು. ವಿಶ್ವವನ್ನೇ ಗೆದ್ದ ಅರ್ಜುನನು ದನಕಾಯುವವರಿಗೆ ಸೋತನು. ಯಾದವರು ಸ್ವಪಕ್ಷದವರಿಂದಲೇ ಹಾಳಾದರು. ಆದ್ದರಿಂದ ಇದೆಲ್ಲವನ್ನು ವಿಚಾರಮಾಡಿ ಶಾಂತಿಯ ಕಡೆಗೆ ಮನಸ್ಸುಕೊಡಿ).

ಎಚ್. ಎಂ. ಶಂಕರನಾರಾಯಣರಾವ್

ಕಾವ್ಯಾವಲೋಕನ

ಪರಿವರ್ತನೆ ಅಥವಾ ಪ್ರವಾಹ: (ಲಲಿತ ಸಾಹಿತ್ಯಮಾಲೆಯ ೫ ನೆಯ ವರ್ಷದ ೨ ನೆಯ ಕುಡಿ)—ನಿಶಾಕಾಂತ, ಪ್ರಕಾಶಕರು: ಮನೋಹರಗ್ರಂಥ ಭಾಂಡಾರ, ಧಾರವಾಡ; ಆಕಾರ: ಕ್ರೌ. ಅ. ಪು. ೧೯೪ ; ಬೆಲೆ, ೨-೮-೦.

ಇದೊಂದು ಸಾಮಾಜಿಕ ಕಾದಂಬರಿ, ನಿಶಾಕಾಂತರ ಪ್ರಥಮಪ್ರಯತ್ನ. ಇಲ್ಲಿನ ವಸ್ತು ನಮ್ಮ ಸಮಾಜದ ಸಾಮಾನ್ಯ ಸಂಸಾರದ ಒಂದು ನಿರಾಡಂಬರ ಚಿತ್ರ. ಪಿತೃವಿಹೀನನಾಗಿ ಮಾತೃವಿಶ್ವಾಸದಲ್ಲಿ ಬೆಳೆದ ವಿದ್ಯಾರ್ಥಿ ನಾಗರಾಜನ—ಅನಂತರ ರಾಜನ—ವಿದ್ಯಾರ್ಥಿ ಜೀವನದ ಹೋರಾಟವನ್ನೂ ಅವನು ಸಂಸಾರ ಹೂಡಿ ಅಲ್ಲಿನ ಘಟನೆಯೊಂದರಿಂದ ಸ್ವಲ್ಪ ಕಾಲುಜಾರಿ ಮತ್ತೆ ಎಚ್ಚೆತ್ತುಕೊಂಡು ತನ್ನನ್ನು ನಂಬಿದವರಿಗೆ ಸಂತೋಷವನ್ನೂ ಸುಖವನ್ನೂ ಉಂಟುಮಾಡಿದ ಕಥನವನ್ನೂ ಇಲ್ಲಿ ಚಿತ್ರಿಸಿದೆ. ವಿಷಯ ಹೆಚ್ಚು ಕಡಮೆ ಎಲ್ಲ ಸಂಸಾರದಲ್ಲೂ ಸಿಕ್ಕುವ ವಿಷಯವೇ ಆಗಿದೆ. ಕಥೆಯಲ್ಲಿ ಅದ್ಭುತವಾದ ಘಟನೆಗಳಿಲ್ಲ. ಸಂಸಾರಸಾಗರವನ್ನು ಅಲ್ಲೋಲ ಕಲ್ಲೋಲ ಮಾಡುವ ಚಂಡಮಾರುತಗಳಿಲ್ಲ. ಸಾಗರವನ್ನು ಕ್ಷೋಭೆಗೊಳಿಸುವ ಅಮಾವಾಸ್ಯೆ, ಪೋರ್ಣಿಮೆಯಂಥ ಸಂಧಿಕಾಲಗಳು ಕರ್ತೃಗಳ ಕೈಲಿ ಹಗುರುವಾಗಿ ಪರಿವರ್ತಿತವಾಗಿಬಿಡುತ್ತವೆ. ಗೌರಿಯ ಗಂಡನ ಸಾವಿನ ಭೀಕರತೆ ಕಮಲಮ್ಮನ ಬಾಳಿನ ಪರಿಸ್ಥಿತಿಯ ದರ್ಶನದಿಂದ ಶಾಂತವಾಗುತ್ತದೆ; ರೋಹಿಣಿಯ ಕಾಮ ಲಾಲಸೆ, ರಾಜನ ಸೌಂದರ್ಯಮದ್ಯದ ತೃಷೆ ಸಿಡುಬೆದ್ದು ಕುರೂಪವಾದ ರತ್ನಳ ಮುಖದರ್ಶನಕ್ಕೆ ಗೌರಿಯ ಎರಡು ನಿಷ್ಠುರ ವಚನಕ್ಕೆ ಇಂಗಿಹೋಗುತ್ತವೆ. ಅಲ್ಲಲ್ಲಿ ವರ್ಣಿತವಾಗಿರುವ ಸಣ್ಣಪುಟ್ಟ ಘಟನೆಗಳಲ್ಲಿಯೂ ಕೂಡ ನಾಟಕೀಯತೆಯಾಗಲಿ ಅಸಹಜತೆಯಾಗಲಿ ಇಲ್ಲ. ಕುತೂಹಲಕೆರಳಿಸುವ ಮೈಮರೆಸುವ, ರೋಮಾಂಚನ ಗೊಳಿಸುವ ಸನ್ನಿವೇಶಗಳನ್ನು ಬಯಸುವವರಿಗೆ ಈ ಕಾದಂಬರಿಯಲ್ಲಿ ಅವಕಾಶವಿಲ್ಲ. ಕನ್ಯಾಪರೀಕ್ಷೆಯ ಕಾಲದಲ್ಲಿ ಆದ ಅಪಶಕುನ, ರೋಹಿಣಿಯ ಪ್ರೇಮಭಂಗ ಕನ್ಯಾನ್ವೇಷಣೆಗಳಿಗಾಗಲಿ ವರಾರ್ಥಿಗಳಿಗಾಗಲಿ ಅಪಘಾತದ ಸನ್ನಿವೇಶಗಳೇನಲ್ಲ.

ಕಥೆಯ ಬೆಳವಣಿಗೆ ಉದ್ದಕ್ಕೂ ಸಹಜವಾಗಿ ಸರಳವಾಗಿ ಬೆಳೆದಿದೆ. ಸಾಮಾನ್ಯ ವಸ್ತುವನ್ನೇ ವರ್ಣಿಸಿದರೂ, ಅದು ನೈಸರ್ಗಿಕವಾಗಿದ್ದರೂ ರಚನೆ ಕೌಶಲ್ಯದಿಂದ ಕೂಡಿದೆ. ಪ್ರೇಮ ಬಾಹ್ಯಸೌಂದರ್ಯದಿಂದಲ್ಲ, ಹೃದಯದ ನಿಷ್ಕಲ್ಮಷತೆ ಮತ್ತು

ತ್ಯಾಗದಿಂದ ಎಂಬ ಭಾವನೆಯನ್ನು ಸಿದ್ಧಪಡಿಸುವುದಕ್ಕೆ ರೋಹಿಣಿ ಮತ್ತು ರಾಜರ ಜೀವನದಲ್ಲಿ ತಂದಿರುವ ಘಟನೆಗಳೂ ಸ್ವಾಭಾವಿಕವಾಗಿವೆ. ಕಮಲಮ್ಮ ಪತಿವಿಹೀನ ಳಾಗಿ ಮಕ್ಕಳ, ಹೆಚ್ಚಾಗಿ ಮಗನ ಅಭ್ಯುದಯಕ್ಕಾಗಿ ಹೇಗೆ ದುಡಿದಳೆಂಬುದನ್ನು ಊಹಿಸಿಕೊಳ್ಳುವುದಕ್ಕೆ ಗೌರಿಯ ಬಾಳಿನ ಪ್ರತ್ಯಕ್ಷ ಚಿತ್ರ ಹೋಲಿಕೆಯಾಗಿ ಸಾಕ್ಷಿ ಯಾಗಿದೆ. ರೋಹಿಣಿಗೆ ತಾನು ಪ್ರೀತಿಸಿದ ರಾಜ ದೊರಕದೆ ಸರ್ವಾಂಗ ಸುಂದರ ನಲ್ಲದ ಕುರೂಪಿಯೇ ಆದ ವಿಶ್ವನಾಥ ದೊರಕಿದ್ದೂ ಅವನ ದುಶ್ಶೀಲವಾದ ನಡತೆಯೂ ರೋಹಿಣಿಯ ಕಾಮ ಚಾಪಲ್ಯವನ್ನು ಹೆಚ್ಚಿಸುವುದೇ ಹೊರತು ಕಡಮೆಮಾಡುವು ದಿಲ್ಲ. ಹಾಗೆಯೇ ರಾಜನಿಗೆ ರೋಹಿಣಿಗಿಂತ ಚೆಲುವೆಯೂ ಗುಣವಂತಳೂ ಪತಿ ಹಿತಳೂ ಆದ ರತ್ನ ದೊರಕಿದರೂ ಅದೃಷ್ಟಹೀನತೆಯಿಂದ ಅವಳು ಕುರೂಪಿಯಾಗಿ ಅವನ ಮನಸ್ಸು ಆಗ್ಗೆ ರತ್ನಳಿಗಿಂತ ರೂಪವಂತಳಾದ ರೋಹಿಣಿಯ ಕಡೆ ಎಳೆಯುತ್ತದೆ. ಅವಳೂ ಸುಲಭವಾಗಿ ದೊರಕುತ್ತಾಳೆ. ಮನುಷ್ಯನ ಕಾಮೇಚ್ಛೆ, ರೂಪಪಿಪಾಸೆ ದಮನವಾಗಬೇಕಾದರೆ ಕಾಲ ಬೇಕು ಎನ್ನುವುದು ಈ ದೃಷ್ಟಾಂತಗಳಿಂದ ವೇದ್ಯ ವಾಗುತ್ತದೆ. ರತ್ನಳ ರೋಗವನ್ನೂ ರೋಹಿಣಿಯ ಕಷ್ಟವನ್ನೂ ರೋಹಿಣಿಯಲ್ಲೂ ರಾಜನಲ್ಲೂ ಪರಿವರ್ತನೆಯನ್ನುಂಟುಮಾಡಲು ಬಳಸಿಕೊಂಡಿದೆ. ಅವೂ ಸಹಜವಾಗಿ ಬೆಳೆದಿವೆ. ಸುಬ್ಬಣ್ಣನವರ ಪಾತ್ರ ಕಥೆಯ ಬೆಳವಣಿಗೆಯ ದೃಷ್ಟಿಯಿಂದ ವಿಫಲ. ಅವರು ಕಥೆಯ ಪ್ರಾರಂಭದಲ್ಲಿ ಕಾಣಿಸಿಕೊಂಡು ಮಧ್ಯದಲ್ಲಿ ಏಕೆ ಮರೆಯಾಗುವರೋ ಮುಂದೆ ಅವರ ವಿಷಯ ಏನಾಯಿತೋ ತಿಳಿಯುವುದಿಲ್ಲ. ಕಷ್ಟಕ್ಕೆ ನಿಂತವರು, ರಾಜನ ವಿವಾಹಕ್ಕೆ ನಿಂತವರು ಇದ್ದಕ್ಕಿದ್ದಂತೆ ಕಣ್ಮರೆಯಾಗುವುದು ಕಥೆಗೂ ಅವರ ಪಾತ್ರಕ್ಕೂ ಪುಷ್ಟಿಕೊಡುವುದಿಲ್ಲ.

ಕಥೆ ಗೌರಿಯ ದುಃಖದಿಂದ ಆರಂಭವಾಗಿ ರಾಜನ ಸಂಸಾರ ಕೂಡಿ ಸುಖವಾಗಿ ಬಾಳುವ ವರ್ಣನೆಯಿಂದ ಸುಖಾಂತವಾಗಿ ಕೊನೆಗೊಳ್ಳುತ್ತದೆ. ಕಥೆಯ ಪುಷ್ಟಿಗಾಗಿ ಬಳಸಿಕೊಂಡಿರುವ ಸನ್ನಿವೇಶಗಳಲ್ಲಿ ಕೆಲವುಕಡೆ ಅಸಹಜತೆ ಕಂಡುಬರುತ್ತದೆ. ರಾಜ ದೇಹಲಿಗೆ ಹೋಗುವುದು ಸ್ವಾಭಾವಿಕವಾದರೂ ರೋಹಿಣಿ ಅಲ್ಲಿಗೆ ಬಂದು ಹೋಟಲಿ ನಲ್ಲಿರುವುದೂ ಸಿನಿಮಾಕ್ಕೆ ಬಂದು ಅಲ್ಲಿ ತನ್ನ ಕೈಚೀಲವನ್ನು ಬಿಟ್ಟುಹೋಗುವುದೂ ಅಸಹಜ. ರೋಹಿಣಿ ಮೈಸೂರಿಗೆ ಬಂದು ನೆಲಸುವುದರಲ್ಲಿ ಅವಳ ಮನಸ್ಸಿನ ಪ್ರವೃತ್ತಿ ಯನ್ನು ಸುಲಭವಾಗಿ ಊಹಿಸಬಹುದು. ಅವಳ ಅದಮ್ಯವಾದ, ಹಳೆಯ ಸ್ನೇಹದಿಂದ ಬೇರುಬಿಟ್ಟ ರಾಜನ ಮಿಳನದ ಆಸೆಗೆ ದೆಹಲಿಯ ಪ್ರಸಂಗ ಉತ್ತೇಜನ ಕೊಟ್ಟಿತ್ತು. ಸಂಸಾರದಲ್ಲಿ ಕಿರುಕುಳಕ್ಕೆ ಸಿಕ್ಕಿದ, ದೆಹಲಿಯ ಪ್ರಯತ್ನ ವಿಫಲವಾದ ರಾಜನ ಮನಸ್ಸಿಗೆ ರೋಹಿಣಿಯ ಸಂಗ ಅಗತ್ಯವಾಗಿತ್ತು. ಅವನ ಅಳುಕಿದ ಮನಸ್ಸಿಗೆ ಅಲ್ಲಿ

ಸ್ವಾಗತವಿತ್ತು. ಈ ಒಂದು ಸಂದರ್ಭವನ್ನು ಕರ್ತೃಗಳು ಬಹಳ ಚೆನ್ನಾಗಿ ಯಾವ ಚಮತ್ಕಾರವೂ ಇಲ್ಲದೆ ಸ್ವಾಭಾವಿಕವಾಗಿ ತಂದಿದ್ದಾರೆ.

ಇವರ ಕಾದಂಬರಿಯಲ್ಲಿ ಚಲಚ್ಚಿತ್ರದ ಹಲವಾರು ಸನ್ನಿವೇಶಗಳ ಪ್ರಭಾವ ಗೋಚರವಾಗದೆ ಇರದು. ರೋಹಿಣಿ ತನ್ನ ಮನೋಭಂಗವಾದಾಗ ಪರಮಹಂಸರ, ವಿವೇಕಾನಂದರ ಪಟದ ಮುಂದೆ ನಿಂತು ಬೇಡಿಕೊಳ್ಳುವುದು; ಕಮಲಮ್ಮ ರಾಜನಿಗೆ ತೇರ್ಗಡೆಯಾದಾಗ ಮೂರೇ ಚಿತ್ರಗಳಿದ್ದ ನಿರಾಡಂಬರವಾದ ದೇವರ ಮನೆಯಲ್ಲಿ ಪತಿಯ ಚಿತ್ರದ ಎದುರಿಗೆ ನಿಂತು ಕೈಮುಗಿದು ತನ್ನ ಕರ್ತವ್ಯವನ್ನು ನೆರವೇರಿಸಿದೆನೆಂದು ನಿರೂಪಿಸುವುದು; ರತ್ನಳನ್ನು ಜೊತೆಮಾಡಿಕೊಂಡು ರೋಹಿಣಿಯ ಮನೆಗೆ ಹೋಗಿ ರಾಜನ ಭಿಕ್ಷೆ ಬೇಡುವುದು; ಕಾಲುಮುರಿದುಕೊಂಡ ವಿಶ್ವನಾಥನನ್ನು ರೋಹಿಣಿ ಚಕ್ರದ ಕುರ್ಚಿಯಲ್ಲಿ ಕೂಡಿಸಿ ಉದ್ಯಾನದಲ್ಲಿ ತಿರುಗಾಡಿಸುವುದು; ಇತ್ಯಾದಿ.

ಪಾತ್ರಗಳಲ್ಲಿ ಅಭೂತಪೂರ್ವವಾದ ವೈಶಿಷ್ಟ್ಯಗಳನ್ನು ನಾವು ಕಾಣದಿದ್ದರೂ ಆ ವ್ಯಕ್ತಿಗಳು ನಮ್ಮಿಂದ ದೂರವಾದವರೇನಲ್ಲ. ರಾಜ ಮೇಧಾವಿಯಿರಬಹುದು. ರ‍್ಯಾಂಕ್ ತೆಗೆದುಕೊಂಡು ಪರೀಕ್ಷೆಯಲ್ಲಿ ತೇರ್ಗಡೆಯಾಗಬಹುದು. ತಾಯಿ ಅಕ್ಕಂದಿರ ಜೀವನವನ್ನು ಸುಖಮಯವಾಗಿಡಲು ಆಜೀವ ದುಡಿಯಲು ಪ್ರತಿಜ್ಞೆ ಮಾಡಬಹುದು. ಆದರೆ ಎಲ್ಲರಂತೆ ಅವನೂ ಬಾಳಿನ ಗಾಳಿಗೆ ಸಿಕ್ಕಲೇಬೇಕು. ಸನ್ನಿವೇಶದ ಕೈಗೊಂಬೆಯಾಗಲೇಬೇಕು. ನಾಲ್ಕು ಜನರ ಮಧ್ಯೆ ಹೊಂದಿಕೊಂಡು ಬಾಳುವ ಶಕ್ತಿ ಅವನಿಗಿದೆ. ತಪ್ಪನ್ನೂ ತಿದ್ದಿಕೊಳ್ಳುವ ವಿವೇಚನೆ ಬುದ್ಧಿ ಇದೆ. ತಾಯಿಯಲ್ಲಿ ಗೌರವವಿದೆ. ಅಕ್ಕನಲ್ಲಿ ವಿಶ್ವಾಸ ಭಕ್ತಿಗಳಿವೆ. ರತ್ನಳಲ್ಲಿ ಪ್ರೇಮವಿದೆ. ರೋಹಿಣಿಯಲ್ಲಿ ಸ್ನೇಹವಿದೆ. ಅವನೂ ಎಲ್ಲರಂತೆ ತನ್ನ ಕೈಲಾದ್ದನ್ನು ಮಾತ್ರ ಮಾಡಬಲ್ಲ; ನಾಯಕನಂತೆ ಉತ್ಸಾಹವಾಗಲಿ ಗಾಂಭೀರ್ಯವಾಗಲಿ ಅವನಲ್ಲಿಲ್ಲ. ಅವನೂ ಎಲ್ಲರಂತೆ ಒಬ್ಬ.

ರೋಹಿಣಿ, ರತ್ನ, ಕಮಲಮ್ಮ ಮನೆಮನೆಯಲ್ಲೂ ಇರುವ ಹೆಣ್ಣುಮಕ್ಕಳು. ರೋಹಿಣಿ ಕಾಲೇಜಿನಲ್ಲಿ ವ್ಯಾಸಂಗಮಾಡಿದ್ದರಿಂದ ತನ್ನ ಅಭಿಪ್ರಾಯಗಳನ್ನು ಜಾರಿಗೆ ತರಲು ಯತ್ನಿಸುತ್ತಾಳೆ. ರತ್ನ ಹಾಗೇನೂ ಅಲ್ಲ. ರೋಹಿಣಿಯ ಮನಸ್ಸಿನಲ್ಲಿ ಯಾವ ವಿಷಯಕ್ಕಾದರೂ ಹೋರಾಟ ನಡೆಯುತ್ತದೆ. ರತ್ನಳಿಗೆ ಹೋರಾಟದ ವಿಷಯವೇ ತಿಳಿಯದು. ಇವರಲ್ಲಿ ಉತ್ತಮಳೆಂದರೆ ಗೌರಿ. ಬಾಳಿನ ಬಿಸಿ ತಟ್ಟಿದೆ. ಮನಸ್ಸು ಪಕ್ವವಾಗಿದೆ; ಕರ್ತವ್ಯನಿಷ್ಠಳಾಗಿದ್ದಾಳೆ. ರೋಹಿಣಿಯೊಡನೆ ರಾಜನ ವಿವಾಹವನ್ನು ತಪ್ಪಿಸುವುದಕ್ಕೂ ಅವಳೇ ಕಾರಣ. ರಾಜ ರೋಹಿಣಿಯರ ದುಷ್ಟ ಸಂಗವನ್ನು ಮುರಿಯುವುದಕ್ಕೂ ಅವಳೇ ಕಾರಣ. ರತ್ನಳಿಗೆ ಗಂಡನನ್ನು ಉಳಿಸಿ

ಕೊಡುವುದಕ್ಕೂ ಮನೆಯನ್ನು ಮತ್ತೆ ಒಂದಿಸಂತೆ ರೂಢಿಸುವುದಕ್ಕೂ ರೋಹಿಣಿಗೆ ಜ್ಞಾನೋದಯವನ್ನುಂಟುಮಾಡುವುದಕ್ಕೂ ಅವಳೇ ಕಾರಣ.

ಕಾದಂಬರಿಯ ಶೈಲಿಯನ್ನು ಕುರಿತು ಒಂದೆರಡು ಮಾತನ್ನು ಹೇಳಬಹುದು. ಬರವಣಿಗೆ ಅಲಂಕಾರವಿಲ್ಲ. ಕುತೂಹಲವನ್ನು ಕೆರಳಿಸುವ ಶಕ್ತಿಯಿಲ್ಲ; ಸಂಭಾಷಣೆಗಳಿಲ್ಲ, ವೈಖರಿ ಕಡಮೆ. ಆದರೂ ಕಥೆ ತೊಡಕುಗಳಿಲ್ಲದೆ ಸಹಜವಾಗಿ ಮುಂದುವರಿಯಲು ಸಹಾಯಕವಾಗಿದೆ. ನಾನಾ ಭಾವಗಳನ್ನು ಸನ್ನಿವೇಶಗಳಿಗೆ ತಕ್ಕಂತೆ ನಿರೂಪಿಸುವ ಶಕ್ತಿ ಈ ಶೈಲಿಯಲ್ಲಿ ಕಂಡುಬರುವುದಿಲ್ಲ. ಆದರೆ ಎಲ್ಲವನ್ನೂ ಸರಳವಾಗಿ ಹೇಳುವ ಸಾಮರ್ಥ್ಯವಿದೆ. ಅಷ್ಟು ಸಾಕು.

'ಪರಿವರ್ತನೆ' ಎನ್ನುವುದು ಕಾದಂಬರಿಯ ಒಟ್ಟು ಕಥೆಗೆ ಅನ್ವಯಿಸುವುದಿಲ್ಲ. ರಾಜನ ಮನಸ್ಸು ಕೆಡುವುದು ರತ್ನಳು ಕುರೂಪಿಯಾದಾಗ. ದೆಹಲಿಯಲ್ಲಿ ರೋಹಿಣಿಯನ್ನು ಸಂದರ್ಶಿಸಿದಾಗ. ಅದರಿಂದಾಚೆಗೆ ಪರಿವರ್ತನೆ ಕಾರ್ಯಾರಂಭ. ಅಥವಾ ರೋಹಿಣಿಯ ಮನಸ್ಸಿನ ಪರಿವರ್ತನೆಯನ್ನು ಆಧಾರವಾಗಿಟ್ಟುಕೊಂಡರೂ ಅದರ ಬೆಳವಣಿಗೆ ಅಷ್ಟಾಗಿ ವಿವರವಾಗಿ ವರ್ಣಿತವಾಗಿಲ್ಲ. ಅಲ್ಲದೆ ಕಾದಂಬರೀಕಾರರೇ ಕಥೆಗೆ ಎರಡು ಹೆಸರು ಇಟ್ಟಿರುವುದು ಒಟ್ಟು ಕಥೆಯ ಹಿಡಿತವೇ ಅವರಿಗೆ ಸಿಕ್ಕಿಲ್ಲ ಎನ್ನಬೇಕಾಗುತ್ತದೆ.

ಇದು ಅವರ ಮೊದಲ ಯತ್ನ. ಕಾದಂಬರಿಯನ್ನು ರಚಿಸುವ ಸಾಮರ್ಥ್ಯ ಅವರಿಗಿದೆ. ಅದನ್ನು ಬೆಳಸಿಕೊಳ್ಳಲಿ. ಇನ್ನೂ ಉತ್ತಮ ಕೃತಿಗಳನ್ನು ನಮಗೆ, ಕನ್ನಡ ಸಾಹಿತ್ಯಕ್ಕೆ ನೀಡಲಿ. ಇದೇ ನಮ್ಮ ಹಾರೈಕೆ.

ಆರ್. ಎಸ್. ರಾಮರಾವ್.

ಸಂಪಾದಕೀಯ

ಅರಿಕೆ

ಹಿಂದಿನ ವರ್ಷದ ಸಂಚಿಕೆಗಳೆರಡು ಈಗ ಒಂದು ಪಕ್ಷದ ಕೆಳಗೆ ಗ್ರಾಹಕರ ಕೈಸೇರಿರುವುದು ವಿದಿತವಾಗಿದೆ. ಈ ಹೊಸ ಬದಲಾವಣೆಯಪ್ರಕಾರ ಚೈತ್ರ ಸಂಚಿಕೆಯು ಬಹು ಅಭ್ಯಗ್ರದಲ್ಲಿ ಹೊರಡಬೇಕಾಗಿ ಇವೆರಡರ ಮಧ್ಯದ ಕಾಲಾವಕಾಶವು ಅತ್ಯಲ್ಪವಾಗಿದ್ದುದರಿಂದ ಈ ಸಂಚಿಕೆಯೂ ಸ್ವಲ್ಪ ತಡವಾದುದಲ್ಲದೆ ಕಾವ್ಯಾವಲೋಕನವೇ ಮೊದಲಾದ ಕೆಲವು ಸಿದ್ಧವಾದ ವಿಷಯಗಳನ್ನು ಒಳಗೊಳ್ಳಲು ಸಾಧ್ಯವಾಗಲಿಲ್ಲ. ಮುಂದಿನ ಸಂಚಿಕೆಯಿಂದ ಎಲ್ಲವೂ ಕ್ರಮಪಡುವುದು. ಗ್ರಂಥಕರ್ತರೂ ಗ್ರಾಹಕರೂ ಹಿತೈಷಿಗಳೂ ಸಹಕರಿಸಿ ಸಹಾಯಮಾಡಬೇಕಾಗಿ ಪ್ರಾರ್ಥನೆ.

ಸಾದರ ಸ್ವೀಕಾರ

೧. **ಜೀವನ ಪಾಠಗಳು**—ಬರೆದವರು: ಶ್ರೀ ಪ್ರಿ. ವಿ. ಕೃ. ಗೋಕಾಕ, ಬಿ.ಎ. (ಆಕ್ಸಫರ್ಡ); ಪ್ರಕಾಶಕರು: ಲಲಿತಸಾಹಿತ್ಯಮಾಲಾ, ಧಾರವಾಡ; ಮಾರಾಟಗಾರರು: ಮನೋಹರ ಗ್ರಂಥಭಾಂಡಾರ, ಧಾರವಾಡ; ಕ್ರೌ೯. ಅ. ಪು. ೯೨; ಬೆಲೆ, ರೂ. ೧-೪-೦.

೨. **ಕಾರಾಗೃಹದ ನೆನೆಪುಗಳು**—ಬರೆದವರು: ಶ್ರೀ ನಾರಾಯಣ; ಮಾರಾಟಗಾರರು: ಹಿಂದ್ ಕಿತಾಬ್ಸ್ ಲಿಮಿಟೆಡ್ (ಬೊಂಬಾಯಿ), ಬೆಂಗಳೂರು ೩; ಕ್ರೌ ಅ. ಪು. ೧೪೨; ಬೆಲೆ, ರೂ. ೨-೦-೦.

೩. **ಗಂಗಾಸಾನಿ**—ಬರೆದವರು: ಶ್ರೀ ವರಗಿರಿ; ಪ್ರಕಾಶಕರು: ಜ. ಬಿ. ಜೋಶಿ; ಮನೋಹರಗ್ರಂಥಮಾಲಾ, ಧಾರವಾಡ; ಕ್ರೌ. ಅ. ಪು. ೧೬೨; ಬೆಲೆ, ರೂ. ೧-೧೪-೦.

೪. **ಮಗು**—ಬರೆದವರು: ಶ್ರೀ ಕೆ. ಎ. ಎನ್. ರಾವ್; ಪ್ರಕಾಶಕರು: ಜ. ಬಿ. ಜೋಶಿ; ಮನೋಹರಗ್ರಂಥಮಾಲಾ, ಧಾರವಾಡ. ಕ್ರೌ೯. ಅ. ಪು. ೧೦೫; ಬೆಲೆ, ರೂ. ೧-೮-೦;

೫. ಅಭಿನವಕಾಳಿದಾಸ ಬಸವಪ್ಪಶಾಸ್ತ್ರಿ ವಿರಚಿತ **ಸಂಸ್ಕೃತ ಸ್ತವನಮಂಜರೀ.** ಸಂಪಾದಕ: ಆಸ್ಥಾನವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯ; ಪ್ರಕಾಶಕರು: ಪ್ರಬೋಧ ಪುಸ್ತಕಮಾಲೆ, ಬೆಂಗಳೂರು ಸಿಟಿ; ಡೆಮ್ಮಿ ಅ. ಪು. ೮೮; ಬೆಲೆ, ರೂ. ೧-೦-೦.

೬. **ಜಪಾನ್ ಬೆಳಕು ಮತ್ತು ಇತರ ಕಥೆಗಳು**—ಬರೆದವರು: ಶ್ರೀ ಕುಡ್ಪಿ ವಾಸುದೇವ ಶೆಣೈ; ಪ್ರಕಾಶಕರು: ಪ್ರಭಾತ್ ಪ್ರಿಂಟರ್ಸ್ ಲಿಮಿಟೆಡ್, ಮಂಗಳೂರು; ಕ್ರೌ೯. ಅ. ಪು. ೧೨೧; ಬೆಲೆ, ರೂ. ೧-೦-೦.

೭. **ಮೀರೆ ಮತ್ತು ನಾನು**—ಬರೆದವರು: ಶ್ರೀ ಕುಡ್ಪಿ ವಾಸುದೇವ ಶೆಣೈ; ಪ್ರಕಾಶಕರು: ಪ್ರಭಾತ್ ಪ್ರಿಂಟರ್ಸ್ ಲಿಮಿಟೆಡ್, ಮಂಗಳೂರು; ಕ್ರೌ೯ ಅ. ಪು. ೧೧೦; ಬೆಲೆ, ರೂ. ೧-೦-೦.

೮. **ಜೀವನ ಗೀತಾಂಜಲಿ**—ರಚಯಿತ: ಶ್ರೀ ಮಾರನಾಡು ವರ್ಧಮಾನ ಹೆಗ್ಗಡೆ; ಪ್ರಕಾಶಕರು: ಶ್ರೀ ವೀರಸೇವಾಸಂಘ, ಧರ್ಮಸ್ಥಳ, ದ.ಕ.; ಕ್ರೌ೯. ಅ. ಪು. ೧೧೮; ಬೆಲೆ, ರೂ. ೧-೮-೦.

೯. **ಭಾವಜೀವಿ**—ಬರೆದವರು: ಶ್ರೀ ಚೆನ್ನವೀರಕಣವಿ; ಪ್ರಕಾಶಕರು: ಪ್ರಗತಿಶೀಲ ಸಾಹಿತ್ಯಮಾಲೆ ಧಾರವಾಡ.

೧೦. **ವಚನಾಂಜಲಿ**—ವಚನಕಾರರು: ಶ್ರೀ ಜ. ಪ. ಚನ್ನಬಸವರಾಜ ದೇಶಿಕೇಂದ್ರ ಸ್ವಾಮಿಗಳು; ಪ್ರಕಾಶಕರು: ಜ.ನಿ. ಪ್ರಭೋದ ಪುಸ್ತಕಮಾಲೆ, ಬೆಂಗಳೂರು ಸಿಟಿ; ಕ್ರೌ.ಅ. ಪು. ೮೨; ಬೆಲೆ, ರೂ. ೧-೦-೦

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧.*ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩.*ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪.*ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫.*ನಮ್ಮ ಹಳ್ಳಿಗಳು—ಜಿ. ಎಸ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮.*ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯.*ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎಸ್. ಶ್ರೀಕಂಠಯ್ಯ, ಎಂ.ಎ.
೧೧.*ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨.*ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪.*ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦.*ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧.*ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨.*ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫.*ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬.*ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭.*ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦.*ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೩೪.*ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬.*ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧.*ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨.*ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.
೪೩.*ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫.*ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬.*ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭.*ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮.*ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯.*ಮುದ್ದಣ—ತ. ಸು. ಶಾಮರಾವ್, ಬಿ.ಎ. (ಆನರ್ಸ್).
೫೦.*ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧.*ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨.*ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ
೫೩.*ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪.*ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫.*ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

ಸಾಧಾರಣ ಪ್ರತಿ ೩ ಆಣೆ.
ಉತ್ತಮ ಪ್ರತಿ ೪ ಆಣೆ

ಕಾರ್ಯದರ್ಶಿ,
ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦, ಸಾದಾ ೧೨ ಆಣೆ.

ಪ್ರಧಾನಸಂಪಾದಕರು : ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೩ ರ ವರೆಗೆ
ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೩ ರಿಂದ ೧೯೪೭ ರ ವರೆಗೆ
ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. ***ಹರಿಶ್ಚಂದ್ರಕಾವ್ಯ ಸಂಗ್ರಹ** (ತೃತೀಯ ಮುದ್ರಣ)—ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. ***ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು: ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು: ಕೆ. ವಿ. ಪುಟ್ಟಪ್ಪ, ಎಂ.ಎ.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು: ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು: ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು: ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣ ಪ್ರಪಂಚ**—ಲೇಖಕರು: ವಿ. ಸೀತಾರಾಮಯ್ಯ, ಎಂ.ಎ.

೧೦. ***ಸಂಸ್ಕೃತ ನಾಟಕ**—ಲೇಖಕರು: ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು: ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು: ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು: ಎಚ್. ಕೃಷ್ಣರಾವ್, ಎಂ.ಎ.

೧೪. ಹದಿಬದೆಯ ಧರ್ಮ—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. *ಪುರಾಣನಾಮಚೂಡಾಮಣಿ—ಲೇಖಕರು: ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ., ಮತ್ತು ಪಾನ್ಯಂ ಸುಂದರಶಾಸ್ತ್ರಿ; ಬೆಲೆ, ರೂ.೩-೪-೦

೧೬. ಯಶೋಧರ ಚರಿತೆಯ ಸಂಗ್ರಹ—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. *ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೧೮. ಹಿಂದೂ ದೇಶದ ಭೂಚರಿತ್ರೆ—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. ವಚನಧರ್ಮಸಾರ—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. ಪ್ರಾಣಿಶಾಸ್ತ್ರ—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧. *ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು—ಜಿ. ಹನುಮಂತರಾವ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೨೨. ಕನ್ನಡ ಕೈಪಿಡಿ (ಭಾಗ ೫, ಸಾಹಿತ್ಯ ಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. ಇಸ್ಲಾಂ ಸಂಸ್ಕೃತಿ—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

ಸೂಪರಿಂಟೆಂಡೆಂಟ್,
ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು.

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪ್ರದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್.ಎಲ್.ಬಿ.

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎಲ್. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಬಿ.ಎಡ್.

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ.ಬಿ.ಎಸ್., ಎಂ.ಪಿ.ಎಚ್.

೯. ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ.ಬಿ.ಎಸ್., ಡಿ.ಪಿ.ಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರಿ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. ವಿದ್ಯುಚ್ಛಕ್ತಿಯ ಉಪಯೋಗ—ಮ. ಭೀ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್) ಸಿ.ಪಿ., ಇ.ಟಿ. (ಐ.ಐ.ಎಸ್.)

೧೨. ಮಕ್ಕಳ ಬೆಳವಣಿಗೆ—ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,
ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

ಇನ್ನುಮುಂದೆ 'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಡ, ಆಶ್ವಯುಜ, ಪುಷ್ಯ ಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

೧೯೫೦–೫೧ ನೆಯ ಸಾಲಿನ ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಚಂದಾದಾರರಿಗೆ	ರೂ.	೩	೦	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೦	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೦	೦

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳಿಹಿಸಬಹುದು.)

ಪ್ರಬುದ್ಧ ಕರ್ಣಾಟಕಕ್ಕೆ ಚಂದಾದಾರರನ್ನು ಒದಗಿಸಿಕೊಡುವ ಪುಸ್ತಕ ವ್ಯಾಪಾರಿಗಳಿಗೂ ವೃತ್ತಪತ್ರಿಕೆಗಳ ಮಾರಾಟಗಾರರಿಗೂ ಶೇಕಡ ೧೨ತ್ತಿ ಯಂತೆ ಕಮಿಷನ್ ಕೊಡಲಾಗುವುದು. ಪಾಠಶಾಲಾ ಸಂಸ್ಥೆಗಳಿಗೆ ಪ್ರಚಾರ ಶಾಖೆಯ ಕಾರ್ಯದರ್ಶಿಗಳೇ ನೇರವಾಗಿ ಗಮನಕೊಡುವರು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಫಸ್ಟ್‌ಗ್ರೇಡ್ ಕಾಲೇಜು, ಮೈಸೂರು) ರಿಗೆ ಕಳಿಸಬೇಕು.

ಕಾರ್ಯದರ್ಶಿ
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕನ್ನಡ ನುಡಿ', ಬೆಂಗಳೂರು; 'ಕಂಠೀರವ', ಮಂಗಳೂರು; 'ತಾಯಿನಾಡು', ಬೆಂಗಳೂರು; 'ನವಸಂದೇಶ', ಬಳ್ಳಾರಿ; 'ವಿಶ್ವಕರ್ಣಾಟಕ' ಬೆಂಗಳೂರು; 'ಸ್ವದೇಶಾಭಿಮಾನಿ' ಮಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಜನಶಕ್ತಿ', ಹುಬ್ಬಳ್ಳಿ; 'ವಾಹಿನಿ', ಬೆಂಗಳೂರು; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ' ಧಾರವಾಡ; 'ಜಯಂತಿ', ಧಾರವಾಡ; 'ಭಾರತಿ' (ತೆಲುಗು), ಮದರಾಸು; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿಮಾ ವಾಣಿಜ್ಯ', ಬೆಂಗಳೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; ಕಥಾವಳಿ', ಬೆಂಗಳೂರು; 'ತರಂಗರಂಗ', ಮೈಸೂರು; 'ಪುಸ್ತಕ ಪ್ರಪಂಚ', ಮೈಸೂರು; 'ವಾಣಿ', ಬೆಂಗಳೂರು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ; 'ಶ್ರೀಮನ್ ಮಹಾರಾಜರವರ ಸಂಸ್ಕೃತ ಮಹಾಪಾಠಶಾಲಾ ಪತ್ರಿಕಾ,' ಮೈಸೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ', ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ

ಮೈಸೂರು ಮಹಾರಾಜರವರ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟನೆಗಳು

ನಾಗಾನಂದನಾಟಕ (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)— ಬೆಲೆ ರೂ. ೧-೦-೦

ಕಿರಿಯಕಾಣಿಕೆ (ಎರಡನೆಯ ಮುದ್ರಣ)— ಕ್ಯಾಲಿಕೊ ಪ್ರತಿ ರೂ. ೧-೮-೦

ಮಾರಾಟಗಾರರು :

ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

ಆಷಾಢಭೂತಿ (ಶ್ರೀ ಎ. ಎನ್. ಮೂರ್ತಿರಾವ್, ಎಂ.ಎ. ಅವರಿಂದ)— ಕ್ಯಾಲಿಕೊ ಪ್ರತಿ ರೂ. ೧-೮-೦

ಸಾವಿನ ಸಮಸ್ಯೆ (ಶ್ರೀ ವೆಂಬಾರ್ ವೆಂಕಟಾಚಾರ್ಯ, ಎಂ.ಎ., ಬಿ.ಕಾಮ್., ಎಲ್‌ಎಲ್.ಬಿ. ಅವರಿಂದ)— ಸಾದಾ ಪ್ರತಿ ರೂ. ೦-೧೨-೦

ಮಾರಾಟಗಾರರು :

ಕೃಷ್ಣ ಮತ್ತು ಕಂಪನಿ, ಮೈಸೂರು

ಕರ್ಣಾಟಕ ಮೃಚ್ಛಕಟಿಕಪ್ರಕರಣಂ (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦

ಮಾರಾಟಗಾರರು :

ಶ್ರೀ ರಾಮಚಂದ್ರ ಬುಕ್ ಡಿಪೊ,
ದೇವರಾಜ ಮಾರ್ಕೆಟ್, ಮೈಸೂರು

Edited by N. Anantharangachar, M.A., B.T. and T. S. Shama Rao, B.A. (Hon.)
Published by The University of Mysore, Mysore. Printed by Hugh Warren
at the Wesley Press and Publishing House, Mysore City

ಪ್ರಬುದ್ಧ ಕರ್ಣಾಟಕ

ಸಂಪುಟ ೩೨—ಸಂಚಿಕೆ ೨

೧೨೪

ವಿಕೃತಿ ಸಂವತ್ಸರ

ಆಷಾಢ ಸಂಚಿಕೆ

•

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೦

ವಿಷಯ ಸೂಚಿಕೆ

ವಿಷಯ	ಲೇಖಕರು	ಪುಟ
	ಶ್ರೀಯುತರಾದ	
೧. ಮನೆಮನೆಯ ತಪಸ್ವಿನಿಗೆ	ಕುವೆಂಪು	೧
೨. ಶ್ರೀ ರಾಮಾಯಣ ದಿವ್ಯಶಿಲ್ಪಿ	ಕುವೆಂಪು	೫
೩. ಕವಿಕೃತಿಯ ಮೇಲೆ ಬ್ರಹ್ಮಮುದ್ರೆ		೧೬
೪. ಕನ್ನಡ ಧ್ವನ್ಯಾಲೋಕ	ಡಾ|| ಕೆ. ಕೃಷ್ಣಮೂರ್ತಿ	೧೭
೫. ಜಗತ್ತುಗಳ ಹುಟ್ಟು ಸಾವು	ಆರ್. ಎಲ್. ನರಸಿಂಹಯ್ಯ	೬೫
೬. ಕಾವ್ಯಾವಲೋಕನ		೮೦
೭. ಸಂಪಾದಕೀಯ		೯೧
೮. ಸಾದರ ಸ್ವೀಕಾರ		೯೩

ಪ್ರಬುದ್ಧ ಕರ್ಣಾಟಕ

ವಿಕೃತಿ ಸಂವತ್ಸರ | ೧೨೪ | ಆಷಾಢ ಸಂಚಿಕೆ

ಮನೆಮನೆಯ ತಪಸ್ವಿನಿಗೆ

ಮನೆಮನೆಯಲಿ ನೀನಾಗಿಹೆ ಗೃಹಶ್ರೀ :
ಹೆಸರಿಲ್ಲದ ಹೆಸರು ನಿನಗೆ 'ಗೃಹಸ್ತ್ರೀ'!
ಹೇ ದಿವ್ಯಸಾಮಾನ್ಯೆ,
ಹೇ ಭವ್ಯೆ ದೇವಮಾನ್ಯೆ,
ಚಿರಂತನ ಅಕೀರ್ತಿಕನ್ಯೆ,
ಅನ್ನಪೂರ್ಣೆ, ಅಹಂಶೂನ್ಯೆ,
ನಮೋ ನಿನಗೆ ನಿತ್ಯಧನ್ಯೆ !

ರಾಷ್ಟ್ರಸಭಾ ಅಧ್ಯಕ್ಷಿಣಿ
ಶ್ರೀಮತಿ ಆ ಸರೋಜಿನಿ,
ಝಾನ್ಸಿರಾಣಿ ಲಕ್ಷ್ಮಿಬಾಯಿ
ಅವರಿಗೆಲ್ಲ ಮಹಾತಾಯಿ
ನೀನೆ ಬಸಿರು, ನೀನೆ ಉಸಿರು,
ನೀನಿದ್ದರೆ ಅವರ ಹೆಸರು !
ಭದ್ರತಾಸಮಿತಿಯಲ್ಲಿ
ವಿಜಯಲಕ್ಷ್ಮಿವಾಗ್ಮಿತೆ
ಆಧ್ಯಾತ್ಮಿಕಸಂಪತ್ತಿನ

ನಿನ್ನ ಭೂಮದಿದಿರಿನಲ್ಲಿ
ರಾಜಕೀಯದಲ್ಪತೆ!

ಅಡುಗೆ ಮನೆಯೆ ಪರ್ಣಶಾಲೆ;
ಒಲೆಯ ಅಗ್ನಿ ಮಖಜ್ವಾಲೆ!
ಬಿಡುವಿಲ್ಲದ ಕಟುತಪಸ್ಯೆ:
ಹುಣ್ಣಿಮೆಯೂ ಅಮಾವಾಸ್ಯೆ!
ಆದರೂ ಅದೀನಾಸ್ಯೆ
ನೀನೆ ನಮಗೆ ಧೈರ್‍ಯ, ಆಶೆ!
ನಿನ್ನ ಪಾದಕಿದೋ ಪೂಜೆ:
ಪೂತ ಕವನ ಧವಳ ಲಾಜೆ!

ಬೆಂಕಿ, ಹೊಗೆ; ಹೊಗೆ, ಬೆಂಕಿ!
ಮಸಿ, ಮುಸುರೆ; ಮುಸುರೆ, ಮಸಿ!
ಆದರೇನು? ನಿಶ್ಯಂಕಿ
ಚೌಧುರಾಣಿ ಮಹೀಯಸಿ!
ನೀನೆ ಗರತಿ, ನೀನೆಯೆ ರತಿ,
ಎದೆ ಎದೆಗೂ ಹೂವಾರತಿ:
ನೀನಿರದಿರೆ ಲೋಕದ ಗತಿ
ದುರ್ಗತಿ, ಮೃತಿ, ದೇವರೆ ಗತಿ!
ರಕ್ಷಿಸು, ಓ ದೈನಂದಿನ
ಸಂಸಾರದ ರಸರೂಪದ
ಚಿರತಾಪಸಿ, ಸುರರೂಪಸಿ,
ಯತಿಸತಿ ಶಿವೆ, ಓ ಪಾರ್ವತಿ!

ಹಿಡಿಯದಿರಲಿ ನಿನಗಾದರು
ಗಂಡಸರಾ ಕುತ್ತು:
ಪ್ರಖ್ಯಾತಿಯ ಪಡೆಯುವೊಂದು
ಪ್ರಾಪಂಚಿಕ ಪಿತ್ತ!
ಹೊಸಲಾಚೆಗೆ ನೀನೋತರೆ
ಹೊಸಲೀಚೆಗೆ ಬೆಳಕಿಲ್ಲ:

ಹೆಸರಾಸೆಗೆ ನೀ ಸೋತರೆ
ಉಸಿರಾಸೆಯೆ ನಮಗಿಲ್ಲ!

ನಿನ್ನಿಂದಲೆ ಹಿಮ್ಮೆಟ್ಟಿದೆ
ಜನ ಜನದಾ ಕುಸಂಸ್ಕೃತಿ;
ನಿನ್ನಿಂದಲೆ ಸೆಡೆತಡಗಿದೆ
ಮನಮನದಾ ಅಸಂಸ್ಕೃತಿ.
ರಾಮಾಯಣ ಮಾಭಾರತ
ಶಾಕುಂತಲ ಕಾದಂಬರಿ
ಬಹುಕವಿಗಳ ರಸಸೃಷ್ಟಿಯು
ಬಹುಕಲೆಗಳ ರಸದೃಷ್ಟಿಯು
ತುಷ್ಟಿಗೆ ಮೇಣ್ ಪುಷ್ಟಿಗೆ ನೀನ್
ದೇವತೆಯಾಗಿರುವೆ;
ಆ ಸೀತೆಯೊ ಮಾಶ್ವೇತೆಯೊ
ಸಾವಿತ್ರಿಯೊ ದಮಯಂತಿಯೊ
ಆರಾದರು ಸರಿಯೆ
ಹೆಗಲೆಣೆ ನಿನಗಾ ಪೆರ್ಮೆಗೆ
ಪಿರಿದನು ನಾನರಿಯೆ!

ತಾಳುತ್ತಿದೆ ಬಾಳುತ್ತಿದೆ
ನಿನ್ನಿಂದೆಮ್ಮ ಇಳೆ.
ಹೇ ದಿವ್ಯೆ, ಸಾಮಾನ್ಯೆ,
ಮನೆಮನೆಯಾ ಊರ್ಮಿಳೆ,
ಗೃಹಿಣಿ, ಗರತಿ, ದೇವಿ, ತಾಯಿ,
ಹೆಸರಿಲ್ಲದ ಮಹಿಳೆ,
ಮಣಿವೆನು ಇದೊ ನಿನ್ನಡಿಗೇ
ಹುಸಿವೆಸರಿಗೆ ಮರುಳಾಗದ
ಹೆಸರೊಲ್ಲದ ಹಸುಳೆ!

ಸೌಖ್ಯದ ನೆಲೆ, ಶಾಂತಿಯ ಮನೆ,
ಸೌಂದರ್ಯದ ಶಿವಮಂದಿರೆ,

ಸಾಮಾನ್ಯದ ಸಿರಿತವರೆ,
ಹಿಡಿಯದಿರಲಿ ನಿನಗವರಾ
ಹೊಗಳಿಕೆಯಾ ಕೀರ್ತಿಯ ಶನಿ,
ಗೃಹ ಗೃಹ ಗೃಹೆ ತಪಸ್ವಿನೀ !
ಪತ್ರಿಕೆಗಳ ದಪ್ಪಕ್ಷರ
ಮೇಣ್ ಚಿತ್ರದ ಕ್ಷಣಿಕಕೆ ನೀ
ಬೆಪ್ಪಾಗದೆ, ಹೇ ಜನನೀ,
ಒಪ್ಪಾಗಿರು, ಒಲವಾಗಿರು ;
ನಿಜಮತದಲಿ ಋಜುಪಥದಲಿ
ನಡಸೆಮ್ಮನು, ಋತದರ್ಶಿನಿ
ಹೇ ಮನುಕುಲ ಕಲ್ಯಾಣೀ !

ಕುವೆಂಪು

ಶ್ರೀ ರಾಮಾಯಣ ದಿವ್ಯಶಿಲ್ಪಿ*

ವಯಸ್ಕರಿಗೆ ಅಕ್ಷರ ಕಲಿಸುವುದೆಂದರೆ ಅವರು ಇದುವರೆಗೂ ಪ್ರಕೃತಿಸಹಜವಾಗಿಯೆ ಪಡೆದಿದ್ದ ಕೈ ಕಾಲು ಮೂಗು ಬಾಯಿ ಕಣ್ಣು ಕಿವಿ ಮೊದಲಾದ ಇಂದ್ರಿಯಗಳ ಜತೆಗೆ, ಅವೆಲ್ಲವನ್ನೂ ಮೀರಿದ ಒಂದು ಅಂತರಿಂದ್ರಿಯದ ಸಂಪಾದನೆಗೆ ಅವರಿಂದ ಗುದ್ದಲಿಪೂಜೆ ಮಾಡಿಸಿದಂತೆ. ವಿದ್ಯಾದಾನದಿಂದ ಮನುಷ್ಯಚೇತನಕ್ಕೆ ಒಂದು ಹೊಸ ನಾಲಗೆ ಸೃಷ್ಟಿಯಾಗುತ್ತದೆ; ಅವನ ಬಾಳಿಗೊಂದು ಹೊಸ ಹಸಿವೆ ಹುಟ್ಟುತ್ತದೆ. ಆ ಹೊಸ ನಾಲಗೆಯಿಂದ ಅವನು ಅದುವರೆಗೂ ಕಾಣದಿದ್ದ, ಕಾಣಲಾರದಿದ್ದ, ಒಂದು ಹೊಸ ರುಚಿಯನ್ನು ಅನುಭವಿಸಲು ಸಮರ್ಥನಾಗುತ್ತಾನೆ. ಮನಸ್ಸಿನ ಆ ಹೊಸ ಹಸಿವೆ ಒಂದು ಹೊಸ ಆಹಾರವನ್ನು ಅಪೇಕ್ಷಿಸುತ್ತದೆ. ಅನ್ನಮಯದ ಹೊಟ್ಟೆ ಅನ್ನವನ್ನು ಬಯಸುವಂತೆ ಮನಸ್ಸಿನ ಹಸಿವು ಮನೋಮಯದ ಆಹಾರವನ್ನು ಹುಡುಕುತ್ತದೆ. ಹೊಸ ರುಚಿಯನ್ನೂ ಹೊಸ ಹಸಿವನ್ನೂ ಹುಟ್ಟಿಸುವಾತನು ಅದಕ್ಕೆ ಅರ್ಹವಾದ ರಸವನ್ನೂ ಅನ್ನವನ್ನೂ ಒದಗಿಸದಿದ್ದರೆ ಲೇಸನೆಸಗಲು ಹೋಗಿ ಕೇಡುಮಾಡಿದಂತಾಗುತ್ತದೆ. ಏಕೆಂದರೆ ಸವಿಯಬಾರದುದನ್ನು ಸವಿದು, ತಿನ್ನಬಾರದುದನ್ನು ತಿಂದು, ಹೊಸದಾಗಿ ಸಾಕ್ಷರನಾದವನ ಚೇತನ ಮೇಲಕ್ಕೇರುವ ಬದಲು ಕೆಳಕ್ಕಿಳಿದು, ನಾಶವಾಗುವುದರ ಜತೆಗೆ ವಿನಾಶಕರವೂ ಆಗಿ, ರಾಕ್ಷಸವಾಗುವ ಸಂಭವವುಂಟು. ಆದ್ದರಿಂದ ಅಕ್ಷರಪ್ರಚಾರದಷ್ಟೇ ಮುಖ್ಯವಾಗುತ್ತದೆ ಅದಕ್ಕೆ ಆವಶ್ಯಕವೂ ಅರ್ಹವೂ ಅನ್ವಿತವೂ ಆರೋಗ್ಯಕರವೂ ಆಗಿರುವ ಸಾಹಿತ್ಯಸೃಷ್ಟಿ.

ಹೊಸದಾಗಿ ಓದು ಕಲಿತ ನಮ್ಮ ಜನ "ಸ್ವಾಮಿ, ಓದುವುದನ್ನೇನೋ ಕಲಿಸಿಕೊಟ್ಟಿರಿ. ಏನೇನೋ ಪುಸ್ತಕಗಳನ್ನೂ ಓದುವುದಕ್ಕೆ ಕೊಡುತ್ತಿದ್ದೀರಿ. ಆದರೆ ರಾಮಾಯಣ ಮಹಾಭಾರತಗಳನ್ನು ಓದದಿದ್ದ ಮೇಲೆ ಓದನ್ನೇಕೆ ಕಲಿಯಬೇಕು. ಸಂತೋಷದ ಜತೆಗೆ ಪುಣ್ಯವೂ ಬರುತ್ತಿತ್ತು ನಮಗೆ. ಓದು ಕಲಿತುದಕ್ಕೆ ನಮ್ಮ ಜನ್ಮ ಸಾರ್ಥಕವಾಗುತ್ತಿತ್ತು" ಎಂದು ಹೇಳಿದರೆಂದು ಅಕ್ಷರ ಪ್ರಚಾರ ಸಂಸ್ಥೆಯವರಿಂದ ಕೇಳಿದಾಗ ನಾನು ತುಂಬಾ ಹಿಗ್ಗಿದೆ. 'ಧನ್ಯ ನಮ್ಮ ಜನ; ಸಾರ್ಥಕ ಅವರ ಬಾಳು!' ಎಂದುಕೊಂಡು, ಜನಪ್ರಿಯವಾಗುವಂತೆಯೂ ವಾಲ್ಮೀಕಿ ರಾಮಾಯಣದ ಕಥೆಯ ಮೈ ಒಂದಿನಿತೂ ಅತ್ತ ಇತ್ತ ಆಗಿ ಕೆಡದಂತೆಯೂ ಸಾಧ್ಯವಾದಮಟ್ಟಿಗೆ ಸುಲಭ

* 'ಜನಪ್ರಿಯ ರಾಮಾಯಣ'ದ ಮುನ್ನುಡಿಯಿಂದ.

ಗದ್ಯದಲ್ಲಿ ರಾಮಾಯಣವನ್ನು ಬರೆಯಲೊಪ್ಪಿದೆ. ಹಲವು ಗೆಳೆಯರ ಹಲವು ತೆರನಾದ ನೆರವಿನಿಂದಾಗಿ ಅದು 'ಜನಪ್ರಿಯ ವಾಲ್ಮೀಕಿ ರಾಮಾಯಣ'ವಾಗಿ ಈಗ ಸಿದ್ಧವಾಗಿದೆ. ಹೆಸರು ನನ್ನೊಬ್ಬನದೇ ಇದ್ದರೂ ಅವರೆಲ್ಲರ ಉಸಿರೂ ನನ್ನ ಸಿರಿಗೆ ಬೆಂಬಲವಾಗಿರುವುದನ್ನು ನಾನು ಮರೆಯಲಾರೆ. ಆ ಕೃತಜ್ಞತೆಯ ಸಂಕೇತವಾಗಿ ಇದರಿಂದ ಒದಗುವ ಎಲ್ಲ ಶ್ರೇಯಸ್ಸನ್ನೂ ಅವರೆಲ್ಲರ ಶ್ರೇಯಸ್ಸಿಗಾಗಿ ಸಮರ್ಪಿಸುತ್ತೇನೆ.

ನಮ್ಮ ಜನರ ಬಾಳು ಮೇಲೆ ಮೇಲೆ ಎಷ್ಟು ಕೆಟ್ಟಂತೆ ಕಾಣುತ್ತಿದ್ದರೂ ಅದರ ಅಂತರಾಳದಲ್ಲಿ ಪೂರ್ವಿಕರ ಪುಣ್ಯದ ತಪಃಪ್ರಭಾವದ ನಂದಾದೀಪ ನಂದದೆ ಮಿನುಗುತ್ತಿದೆಯೆಂದು ತೋರುತ್ತದೆ. ಇಲ್ಲದಿದ್ದರೆ ಅಕ್ಷರ ಕಲಿತವರು ಕಾಸಿನ ಕಾದಂಬರಿಗಳನ್ನೂ ರೋಮಾಂಚಕರವಾದ ನವೀನ ಚಲಚ್ಚಿತ್ರ ಶೃಂಗಾರ ಕಥಾನಕಗಳನ್ನೂ ಅಪೇಕ್ಷಿಸುವ ಬದಲು—ಅಥವಾ ಅಪೇಕ್ಷಿಸುವುದರ ಜತೆಗೆ ಎಂದಾದರೂ ಚಿಂತೆಯಿಲ್ಲ—ರಾಮಾಯಣ ಮಹಾಭಾರತಗಳಂತಹ 'ಕಗ್ಗದ ಪುರಾಣಗಳನ್ನು' ಬಯಸುತ್ತಿದ್ದರೆ? ಏನಾದರಾಗಲಿ ಪಟ್ಟಣಿಗ ನಾಗರಿಕರನ್ನು ಮೆಚ್ಚಿ, ಅವರನ್ನು ಎಲ್ಲದರಲ್ಲಿಯೂ ಅನುಕರಿಸಿ ಶ್ರೇಷ್ಠತೆಗೇರಬೇಕೆಂಬ ಗೀಳು ಈ ಒಂದು ವಿಚಾರದಲ್ಲಿ ಹಳ್ಳಿಯವರಿಗಿನ್ನೂ ಸಂಪೂರ್ಣವಾಗಿ ಸೋಂಕಿಲ್ಲ ಎಂದು ಸಮಾಧಾನವಾಗುತ್ತದೆ. ಅದೂ ಸೋಂಕಾಗಿಬಿಡುವ ಮೊದಲೇ ಅವರು ಹೊಸದಾಗಿ ಪಡೆದ ಓದಿನ ರುಚಿ ಕೆಸರುಹಾದಿಗೆ ಜೀಳದಂತೆ ನೋಡಿಕೊಳ್ಳುವುದು ನಾಡಿನ ಒಳ್ಳಿಗೆ ಅತ್ಯಂತ ಆವಶ್ಯಕ ಕರ್ತವ್ಯ.

ಅಂತಹ ಉತ್ಥಾನದ ಮತ್ತು ಉದ್ಧಾರದ ಕಾರ್ಯಕ್ಕೆ ಆಶೀರ್ವಾದವೂ ಶಕ್ತಿಯೂ ಆಗಿ ನಮಗೆ ನೆರವಾಗುವ ದಿವ್ಯಗ್ರಂಥಗಳಲ್ಲಿ ರಾಮಾಯಣ ಮಹಾಭಾರತಗಳಿಗಿಂತಲೂ ಉತ್ತಮವೂ ಜನಪ್ರಿಯವೂ ಆಗಿರುವ ಚಿರಕೃತಿಗಳು ಮತ್ತಾವಿವೆ!

ರಾಮಾಯಣ ಆದಿಕಾವ್ಯ; ಅದರ ಕವಿ ಆದಿಕವಿ. ಆತನು ಮಹರ್ಷಿಯೂ ಆಗಿರುವುದರಿಂದ ದ್ರಷ್ಟಾರನೂ ಅಹುದು. ಆತನ ಪೂರ್ಣದೃಷ್ಟಿ ಲೋಕಾತಿಕ್ರಾಂತಗೋಚರವೂ ಆಗಿರುವುದರಿಂದ ಆತನು ಕ್ರಾಂತದರ್ಶಿ. ಮತ್ತು ಅವನಾ ಪ್ರತಿಭೆ ನಿತ್ಯಸತ್ಯಸಂಸ್ಪರ್ಶಿ. ಆ ಋಷಿಕವಿ ವಾಲ್ಮೀಕಿಯ ಸಮುದ್ರೋಪಮವಾದ ಮಹಾಗಾನಕ್ಕೆ ಜಗತ್ತು ಮಹಾಕಾವ್ಯದ ಪಟ್ಟಕಟ್ಟಿದೆ. ಏಕೆಂದರೆ ರಾಮಾಯಣವು ಪುರಾಣವಾದರೂ ಅದೊಂದು ಬೃಹದ್ ಭಾವಗೀತೆಯಂತಿದೆ. ಅದು ಏಕಕವಿ ಕೃತಿಯೂ ಆಗಿದೆ; ಬಹುಕಾಲದ ಸಂಸ್ಕೃತಿಯ ಬಹು ದೊಡ್ಡ ಜನಾಂಗದ ಮನಃಕೃತಿಯೂ ಆಗಿದೆ. ಮೊದಲನೆಯ ಕಾರಣಕ್ಕಾಗಿ ಅದು ಭಾವಗೀತೆಯಂತಿದ್ದರೆ ಎರಡನೆಯ ಕಾರಣಕ್ಕಾಗಿ ಪುರಾಣದಂತಿದೆ. ಆದ್ದರಿಂದಲೆ ಅದಕ್ಕೆ ಮಹಾಕಾವ್ಯ ಎಂಬ ಬಿರುದು ಸರ್ವಾಂಗ

ಸುಂದರವಾಗಿ ಒಪ್ಪುತ್ತದೆ. ಏಕಾಗ್ರತೆ, ಏಕಮುಖತೆ, ಐಕ್ಯತೆ, ರಾಗತೀಕ್ಷ್ಣತೆ, ಆದರ್ಶಪ್ರಿಯತೆ, ರಸಾವೇಶ ಇವುಗಳ ದೃಷ್ಟಿಯಿಂದ ಅದೊಂದು ಭಾವಗೀತೆ. ವಿಪುಲತೆ, ಬಹುಳತೆ, ವಿವಿಧತೆ, ದೇವತ್ವ, ದೈತ್ಯತ್ವ, ಮಹತ್ವ ಇವುಗಳ ದೃಷ್ಟಿಯಿಂದ ಅದೊಂದು ಪುರಾಣ. ಅದರ ಸೂತ್ರ ಭಾವಗೀತೆಯದು; ಗಾತ್ರ ಪುರಾಣದ್ದು. ಕವಿಕೋಕಿಲವಾಲ್ಮೀಕಿಯ ಹೈಮಾಚಲ ಸಂಗೀತದಲ್ಲಿ ಸರೋವರದ ಸೌಂದರ್ಯವಿದೆ; ಸರಿತ್ಪತಿಯ ಗಾಂಭೀರ್ಯವಿದೆ. ಚಾರುಲಾಲಿತ್ಯ ಮತ್ತು ರುಂದ್ರಭವ್ಯತೆ ಎರಡೂ ಸಮನ್ವಯಗೊಂಡಿರುವ ಆ ಮಹತ್ಕೃತಿ ಲೋಕಪೂಜಾಭಾಜನವಾಗಿರುವುದರಲ್ಲಿ ಏನಾಶ್ಚರ್ಯ?

ಅಂತಹ ಕವಿಯೂ ಅಂತಹ ಕೃತಿಯೂ ನಮಗೆ ಲಭಿಸಿರುವುದು ನಮ್ಮ ಹೆಮ್ಮೆ, ನಮ್ಮ ಪುಣ್ಯ. ಮತ್ತೆ ಭುವನದ ಭಾಗ್ಯ! ಕವಿಯೂ ಕೃತಿಯೂ ಎಂದು ಬೇರೆ ಬೇರೆಯಾಗಿ ಹೇಳಿದರೂ ನಮ್ಮ ಪಾಲಿಗೆ ಅವೆರಡಕ್ಕೂ ಭೇದವಿಲ್ಲ. ಕವಿ ತನ್ನ ಕೃತಿಯಲ್ಲಿ ಲೀನವಾಗಿಹೋಗಿದ್ದಾನೆ, ಭಗವಂತನು ತನ್ನ ಸೃಷ್ಟಿಯಲ್ಲಿ ಒಂದಾಗಿರುವಂತೆ. ಲೋಕಸಂಗ್ರಹಕ್ಕಾಗಿ ಕವಿಯೇ ಕೃತಿಯಾಗಿ ಅವತರಿಸಿದ್ದಾನೆ. ಕವಿಯ ಜೀವನಕಥೆಯೂ ರಾಮಾಯಣದಲ್ಲಿ ಒಂದಂಶವಾಗಿಬಿಟ್ಟಿದೆ. ಅವನ ಜೀವಿತಕ್ಷೇತ್ರದಿಂದಲೆ ಅದು ಹೊಮ್ಮಿ ಬೆಳೆಯುತ್ತದೆ. ಅವನ ಬಾಳಿನ ಸರ್ವಸ್ವದ ಸಾರಸ್ವರೂಪವಾಗಿ ಅದು ಮೈವೆತ್ತು ನಿಂತಿದೆ. ನಿಷಾದನಾಗಿದ್ದ ಆತನನ್ನು ಮಹರ್ಷಿತ್ವಕ್ಕೆ ಏರಿಸಿದೆ. ವ್ಯಾಧನನ್ನು ಆದಿಕವಿಯನ್ನಾಗಿ ಪರಿವರ್ತಿಸಿದೆ. ವಾಲ್ಮೀಕಿ ರಾಮಾಯಣವನ್ನು ರಚಿಸುತ್ತಿದ್ದಾಗಲೆ ರಾಮಾಯಣವೂ ವಾಲ್ಮೀಕಿಯನ್ನು ಸೃಜಿಸುತ್ತಿತ್ತು, ಕಡೆಯುತ್ತಿತ್ತು, ಪಡೆಯುತ್ತಿತ್ತು. ಗುರುವಿನ ಅನುಗ್ರಹವೂ ಭಗವಂತನ ಕೃಪೆಯೂ ದೊರೆತರೆ ಬೇಡನಂತಹ ಸಾಮಾನ್ಯನೂ ಮಹರ್ಷಿಯಂತಹ ಮಹೋನ್ನತಿಗೆ ಬರಬಹುದು ಎಂಬುದಕ್ಕೆ ವಾಲ್ಮೀಕಿಯ ಜೀವನಕಥೆಯೆ ಒಂದು ಆಶಾದಾಯಕ ಅಗ್ನಿಸಾಕ್ಷಿಯಾಗಿದೆ.

ವಾಲ್ಮೀಕಿಯ ಕೃತಿ ಹುಟ್ಟಿದಂದು 'ಕವಿಕೃತಿ'ಯಾಗಿತ್ತು; ಇಂದು 'ಪ್ರಕೃತಿ'ಯಾಗಿದೆ. ಭಾರತೀಯರ ಬಾಳುವೆಯ ಲೋಕದಲ್ಲಿ ಪರ್ವತ, ಅರಣ್ಯ, ಸಮುದ್ರ, ಆಕಾಶಗಳಿರುವಂತೆ ರಾಮಾಯಣವೂ 'ಇದೆ'. ಬಹುಶಃ ಅವುಗಳಿಗಿಂತಲೂ ಸುಸ್ಥಿರವಾಗಿ, ಸಮಧಿಕವಾಗಿ, ಸತ್ಯತರವಾಗಿ, ಬಾಹ್ಯಾಭ್ಯಂತರಗಳನ್ನೂ ಲೋಕಾಲೋಕಗಳನ್ನೂ ಆಕ್ರಮಿಸಿ, ವ್ಯಾಪಿಸಿ, ಸೃಷ್ಟಿಯ ವಿಕಾಸರೂಪವಾದ ಪರಿಣಾಮ ಪಥದಲ್ಲಿ ಒಂದು ಪರಿವರ್ತನಾ ಸಮರ್ಥವಾದ ಸಾರಥಿಶಕ್ತಿಯಾಗಿದೆ.* ಪ್ರಕೃತಿಯ ಪರ್ವತಾರಣ್ಯ

* ಪುಟ ೧೬ ನೋಡಿ.

ಗಳನ್ನು ಯಥಾಶಕ್ತಿಯಾಗಿ ಉಪಯೋಗಿಸಿಕೊಳ್ಳುವಂತೆ ರಾಮಾಯಣವನ್ನೂ ಉಪಯೋಗಿಸಿಕೊಳ್ಳಬಹುದು. ಆ ಪರ್ವತದ ಬಂಡೆಗಳಲ್ಲಿ ಸಾಮರ್ಥ್ಯವಿರುವವರು ಯಾರು ಬೇಕಾದರೂ ತಮ್ಮ ತಮ್ಮ ಪ್ರತಿಭೆಯ ಕಲ್ಪನಾಕೃತಿಗಳನ್ನು ಕಾಣಬಹುದು, ಶಿಲ್ಪಕೃತಿಗಳನ್ನು ಕಡೆಯಬಹುದು. ಆ ಅರಣ್ಯದ ಅಂಶದಿಂದ ತಮ್ಮ ತಮ್ಮ ದರ್ಶನಕ್ಕೆ ಅನುರೂಪವಾಗಿ ಎಂಥಹ ನಂದನೋದ್ಯಾನಗಳನ್ನು ಬೇಕಾದರೂ ರಚಿಸಿಕೊಳ್ಳಬಹುದು. ವಾಲ್ಮೀಕಿಯ ದಿವ್ಯಕೃತಿ ಪ್ರಕೃತಿಯ ಮೂಲಭೂತವಸ್ತುಗಳಂತೆ, ಶಕ್ತಿಗಳಂತೆ, ಅಪೌರುಷೇಯವಾಗಿ ಹೋಗಿದೆ. ಆದ್ದರಿಂದಲೆ ಅದು ವೇದವಟ್ಟಕ್ಕೂ ಏರಿದೆ.

ಕವಿಮಹರ್ಷಿ ಅಂದು ಹಾಡಿದ ರಾಮಾಯಣ ಇಂದು ಮತ್ತೊಮ್ಮೆ ನಮ್ಮಲ್ಲಿ ಮೂಡಿದ ಹೊರತು ಸಾರ್ಥಕವಾಗುವುದಿಲ್ಲ. ಏಕೆಂದರೆ ಕೃತಿಯ ರಸಾಸ್ವಾದನೆಯೂ ಕೃತಿರಚನೆಯಂತೆ ಒಂದು ಸೃಷ್ಟಿಕಾರ್ಯ. ಓದುವ ಅಥವಾ ಆಲಿಸುವ ನಮ್ಮ ಒಬ್ಬೊಬ್ಬರ ಹೃದಯದಲ್ಲಿಯೂ ರಾಮಾಯಣದ ಪುನಃಸೃಷ್ಟಿಯಾಗಬೇಕು. ಹಾಗೆ ಒಂದೊಂದು ಚೇತನದಲ್ಲಿಯೂ ರಾಮಾಯಣಾವತಾರವಾಗುವುದರಲ್ಲಿಯೆ ವಾಲ್ಮೀಕಿಯ ಕೃತಿ ಸಾರ್ಥಕತೆ ಪಡೆಯುತ್ತದೆ; ನಮ್ಮ ಬಾಳುವೆಗೂ ಪುರುಷಾರ್ಥಸಿದ್ಧಿಯಾಗುತ್ತದೆ.

ಅಂತಹ ರಸಸಾಧನೆಗೆ ನಮಗೆ ಬೇಕಾದುದು ಲೌಕಿಕವಾದ ಪ್ರತಿಕೃತಿ ದೃಷ್ಟಿಯಲ್ಲ, ಸರ್ವಗ್ರಾಹಿಯಾದ ಪ್ರತಿಮಾದೃಷ್ಟಿ[1]; ಏಕೆಂದರೆ ರಾಮಾಯಣವು ಬರಿಯ ಲೌಕಿಕ ಚರಿತ್ರೆಯಲ್ಲ. ಲೀಲಾಸತ್ಯಗಳ ಹಿಂದಿರುವ ನಿತ್ಯಸತ್ಯಗಳನ್ನು ಪ್ರತಿಮಿಸುವ ಅದು ಒಂದು ದರ್ಶನಕೃತಿ.[2]

ಒಮ್ಮೆ ಆಗಿಹೋದ ಚರಿತ್ರೆ ಮತ್ತೆ ನಡೆಯಲಾರದು; ಆದರೆ ವಾಲ್ಮೀಕಿಯ ಮಹಾಕೃತಿ ಚರಿತ್ರೆಯಲ್ಲ, ಕಾವ್ಯ; ಆ ಚರಿತ್ರೆ ವಾಲ್ಮೀಕಿಯ ಚಿದ್ರಂಗದಲ್ಲಿ ನಡೆದದ್ದು. ಕಾಲದೇಶಾತೀತವಾಗಿರುವುದರಿಂದ ನಿರಂತರವಾಗಿ ನಡೆಯುತ್ತಿರುವ ಆ ಶಾಶ್ವತ ಘಟನಾಪರಂಪರೆ ಮತ್ತೆ ಇನ್ನಾವ ಸಹೃದಯನ ಚಿದ್‌ರಂಗದಲ್ಲಿಯಾದರೂ ಮತ್ತೆಮತ್ತೆ ನಡೆಯಬಹುದು.

ಅಕ್ಬರನ ಆಳ್ವಿಕೆಯೊಡನೆ ಆಂಜನೇಯನ ಸಮುದ್ರಲಂಘನವನ್ನು ಚಾರಿತ್ರಕವಾಗಿ ಹೋಲಿಸಿದರೆ ಎಂತಹ ಅವಿವೇಕವಾಗುತ್ತದೆ. ಒಂದು ಚರಿತ್ರೆ, ಮತ್ತೊಂದು

---

1 'ಕುವೆಂಪು' ಅವರ 'ತಪೋನಂದನ' ಗ್ರಂಥದಲ್ಲಿ 'ಪ್ರತಿಮಾ ಮತ್ತು ಪ್ರತಿಕೃತಿ' ಎಂಬ ಪ್ರಬಂಧವನ್ನು ನೋಡಿ.

2 'ಕುವೆಂಪು' ಅವರ 'ತಪೋನಂದನ' ಗ್ರಂಥದಲ್ಲಿಯ 'ಋಷಿ ವಾಲ್ಮೀಕಿಯ ಕಾವ್ಯಜಾಹ್ನವಿ' ಎಂಬ ಪ್ರಬಂಧವನ್ನು ನೋಡಿ.

ಕಾವ್ಯ. ಚರಿತ್ರೆ ಒಂದುವೇಳೆ ಕವಿಯ ಅನುಭವವಾಗಿ ಕಾವ್ಯವಾಗಬಹುದು. ಆದರೆ ಕಾವ್ಯ ನಡೆದ ಚರಿತ್ರೆಯಾಗಲಾರದು. ಅದನ್ನು ಚರಿತ್ರೆ ಓದುವ ದೃಷ್ಟಿಯಿಂದ ಓದ ಬಾರದು. ಹಾಗೆ ಮಾಡಿದರೆ ಚರಿತ್ರೆಯ ಅಧ್ಯಯನದಿಂದ ಒದಗಬಹುದಾಗ ಅಭ್ಯು ದಯದಿಂದಲೂ ದೂರವಾಗಿ ಕಾವ್ಯಪಾರಾಯಣದಿಂದ ಲಭಿಸುವ ನಿಃಶ್ರೇಯಸ ದಿಂದಲೂ ವಂಚಿತರಾಗುವ ಉಭಯ ನಷ್ಟಕ್ಕೆ ಪಕ್ಕಾಗುತ್ತೇವೆ.

ವಾಲ್ಮೀಕಿಯ ರಾಮಾಯಣದಲ್ಲಿ ಲೋಕಚರಿತ್ರೆಯನ್ನು ಅರಸಿ ಕಾಣಲೆಳಸುವ ಸಂಶೋಧನೆಯ ವಿದ್ವತ್ತು, ಕಬ್ಬಿನಲ್ಲಿ ದೊಣ್ಣೆಯನ್ನು ಮಾತ್ರ ಕಾಣುವ ಗಾಂಪ ನಂತೆ, ಮುಖ್ಯ ಪ್ರಯೋಜನದಿಂದ ಸಂಪೂರ್ಣವಾಗಿ ವಂಚಿತವಾಗಿ, ತಾನೂ ದಾರಿ ತಪ್ಪಿ ದಿಕ್ಕುಗೆಡುವುದಲ್ಲದೆ ಇತರರನ್ನೂ ಕಂಗೆಡಿಸಿ ಹಾನಿಗೀಡುಮಾಡುತ್ತದೆ. ಕಬ್ಬಿನ ಕೋಲಿನಲ್ಲಿ ದೊಣ್ಣೆಯತನ ಇಲ್ಲ ಎಂದಲ್ಲ. ಅದನ್ನು ಎಮ್ಮೆ ಹೊಡೆಯುವುದಕ್ಕೆ ಉಪಯೋಗಿಸಲು ಸಾಧ್ಯವಲ್ಲ ಎಂದೂ ಅಲ್ಲ. ಆದರೆ ಕಬ್ಬಿನ ಪ್ರಧಾನೋದ್ದೇಶ ರಸಮಾಧುರ್ಯ. ಅದರ ಮುಖ್ಯ ಸತ್ಯವೂ ಅದರ ಸಿಹಿಯಲ್ಲಿಯೆ ನಿಹಿತ. ಬೆಲ್ಲವೆ ಅದರ ಸತ್ಯಸ್ಯ ಸತ್ಯ. ಉಳಿದುದೆಲ್ಲ ಮುಖ್ಯೋದ್ದೇಶ ಮತ್ತು ಪರಮ ಪ್ರಯೋಜನದ ದೃಷ್ಟಿಯಿಂದ ಅಪ್ರಕೃತ; ಹೊರಗೆಸೆಯಬೇಕಾದ ಹಿಪ್ಪೆ; ನೀರು ಕಾಯಿಸಲು ಒಚ್ಚ ಲೊಲೆಗೆ ಹಾಕಬಹುದಾದ ಅಳ್ಳಟ್ಟೆ. ಕಬ್ಬಿನಲ್ಲಿ ಅಳ್ಳಟ್ಟೆ ಇಲ್ಲವೆಂದಲ್ಲ; ಆ ಅಳ್ಳಟ್ಟೆ ಉಪಯೋಗಕ್ಕೆ ಬಾರದು ಎಂದೂ ಅಲ್ಲ. ಅದನ್ನೂ ಶೇಖರಿಸಿ ಕಟ್ಟಿಗೆ ಮಾಡಿ ಮಾರು ವವರು ಮಾರಲಿ; ಅದಕ್ಕೂ ಬೆಲೆ ಇದೆ. ಆದರೆ ಅಂತಹರು ತಮ್ಮ ಅಳ್ಳಟ್ಟೆಯ ಸತ್ಯದಿಂದ ಬೆಲ್ಲವನ್ನು ಮಿಥ್ಯಗೊಳಿಸುವ ಆತ್ಮಹಾನಿಕರವಾದ ನಷ್ಟಕಾರ್ಯಕ್ಕೆ ಕೈ ಹಾಕ ಬಾರದು. ರಾಮಾಯಣದಲ್ಲಿ ಉತ್ತರ ದಕ್ಷಿಣ ಸಂಸ್ಕೃತಿಗಳ ಸಂಘಟ್ಟಣೆಯನ್ನಾಗಲಿ, ಆರ್ಯದ್ರಾವಿಡ ನಾಗರಿಕತೆಗಳಿಗೆ ಒದಗಿದ ಹೋರಾಟವನ್ನಾಗಲಿ ಕೆದಕುವುದು ವಾಲ್ಮೀಕಿಯ ಕಾವ್ಯೋದ್ದೇಶಕ್ಕೆ ಅನ್ಯ. ಕೈಕೆಯಂತಹರ ವರ್ತನೆಯನ್ನು ನಿರ್ಲಕ್ಷಿಸಿ ಅಯೋಧ್ಯೆಯ ಆರ್ಯರ ಸಾಮಾಜಿಕ ಸಂಸ್ಕೃತಿಯನ್ನು ರಾಮನ ಚಾರಿತ್ರದಿಂದ ಮಾತ್ರವೆ ಅಳೆಯುವುದೂ ಆಂಜನೇಯನಂತಹರ ಮಹದ್ವ್ಯಕ್ತಿತ್ವವನ್ನು ಗಮನಿಸದೆ ಕಿಷ್ಕಿಂಧೆಯ ವಾನರರ ಸಾಮಾಜಿಕ ಸಂಸ್ಕೃತಿಯನ್ನು ವಾಲಿತಾರೆಯರ ಚಾರಿತ್ರ ದಿಂದ ಮಾತ್ರವೆ ನಿರ್ಧರಿಸಲೆಳಸುವುದೂ, ವಿಭೀಷಣನಂತಹರ ಸಾತ್ವಿಕಶ್ರೀಯನ್ನು ಬೆನ್ನರೆಗೆ ತಳ್ಳಿ ಲಂಕೆಯ ಸಂಸ್ಕೃತಿಯನ್ನು ರಾವಣನ ನಡತೆಯಿಂದ ಮಾತ್ರವೆ ನಿರ್ಣಯಿಸುವುದೂ ಲೌಕಿಕವಾದ ಐತಿಹಾಸಿಕ ಸಂಶೋಧನೆಗೂ ಮಾನ ತರುವ ರೀತಿಯಲ್ಲ!

ಒಮ್ಮೆ ದಕ್ಷಿಣೇಶ್ವರದ ಭವತಾರಿಣಿಯ ವಿಗ್ರಹವನ್ನು ಕುರಿತು ಮಾತನಾಡುತ್ತಾ

ಅದರ ಅಂದ ಚೆಂದ ಕಲೆಗಳನ್ನು ಪ್ರಶಂಸಿಸುತ್ತಾ ನೆರೆದಿದ್ದ ಭಕ್ತರಲ್ಲೊಬ್ಬರು ಅದನ್ನು ಇಂತಹ ಶಿಲ್ಪಿ ಮಾಡಿದನೆಂದೂ ಆ ಕಲ್ಲು ಇಂತಹ ಕಡೆಯಲ್ಲಿ ದೊರೆಯಿತೆಂದೂ ಅದು ಇಂತಹ ಜಾತಿಗೆ ಸೇರಿದ ಶಿಲೆಯೆಂದೂ ಆ ವಿಗ್ರಹದ ಚರಿತ್ರೆಯನ್ನು ವಿವರಿಸಿದರಂತೆ. ಆಲಿಸುತ್ತಾ ಕುಳಿತಿದ್ದ ಪರಮಹಂಸರು "ನನಗದೊಂದೂ ಗೊತ್ತಿಲ್ಲ. ನನಗವಳು ತಾಯಿ, ಜಗನ್ಮಾತೆ, ಚಿನ್ಮಯೀಭಗವತಿ!" ಎಂದು ಭಾವದಿಂದ ಕುಳಿತಲ್ಲಿಂದಲೆ ನಮಿಸಿದರಂತೆ. ಪರಮಹಂಸರಿಗೆ ಆ ವಿಗ್ರಹದ ಚಿನ್ಮಯತೆ ಪ್ರತ್ಯಕ್ಷಾನುಭೂತಿ. ಆದರೆ ಇತರರ ಭಾಗಕ್ಕೆ ಅದು ಅತಿಕ್ರಾಂತಗೋಚರ; ಅವರಿಗೆ ಅದು ಮೃಣ್ಮಯ. ಇತರ ವಸ್ತುಗಳಂತೆ ಅದೂ ಒಂದು ಮೃದ್ವಸ್ತು. ಅದಕ್ಕೊಂದು ಲೋಕಚರಿತ್ರೆಯಿದೆ. ಅದನ್ನೆ ಆ ಭಕ್ತರು ವಿವರಿಸಿದ್ದು. ಆ ವಿವರಣೆ ಅಸತ್ಯವಲ್ಲ. ಆ ಸ್ಥಾನದಲ್ಲಿ, ದೇವಸ್ಥಾನದಲ್ಲಿ ಅಪ್ರಕೃತ, ಅಷ್ಟೆ. ಆ ವಿಗ್ರಹ ಮ್ಯೂಸಿಯಂ ರೀತಿಯ ವಸ್ತುಸಂಗ್ರಹಶಾಲೆಯಲ್ಲಾಗಲಿ ಅಥವಾ ಕಲಾಪ್ರದರ್ಶನ ಮಂದಿರದಲ್ಲಾಗಲಿ ಇದ್ದಿದ್ದರೆ ಆ ವಿವರಣೆ ಪರಮಸತ್ಯವೂ ಆಗಬಹುದಿತ್ತು. ಏಕೆಂದರೆ ಅಲ್ಲಿ ಆ ವಿಗ್ರಹದ ಉದ್ದೇಶ ಮತ್ತು ಪ್ರಯೋಜನ ಅಷ್ಟರಲ್ಲಿಯೆ ಪರ್ಯವಸಾನವಾಗಿ, ಅಷ್ಟರಿಂದಲೆ ಪರಿಸಮಾಪ್ತಿಗೊಳ್ಳುತ್ತಿತ್ತು. ಆದರೆ ಇಲ್ಲಿ ಹಾಗಲ್ಲ. ಆ ವಿಗ್ರಹ ದೇವಸ್ಥಾನದಲ್ಲಿ ಪ್ರತಿಷ್ಠಿತವಾದಂದಿನಿಂದ ಅದರ ಉದ್ದೇಶ ಬೇರೆ, ಪ್ರಯೋಜನ ಬೇರೆ. ಅದು, ಅಲ್ಲ, ಆಕೆ ಚಿನ್ಮಯೀಭಗವತಿ. ಪೂಜೆ ಸಲ್ಲುವುದೂ ಕಲ್ಲಿನ ವಿಗ್ರಹಕಲ್ಲ; ಚಿನ್ಮಯೀಭಗವತಿಗೆ. ಭಕ್ತನು ಕಾಣಬೇಕಾದುದೂ ಕಲ್ಲಿನ ಪ್ರತಿಮೆಯನ್ನಲ್ಲ, ಚಿನ್ಮಯೀಮಾತೆಯನ್ನು. ಎಲ್ಲರಿಗೂ ಹಾಗೆ ಕಾಣದಿರಬಹುದು. ಕಾಣಿಸದಿದ್ದ ಮಾತ್ರಕ್ಕೆ ಅವರು ಕಂಡದ್ದೇ, ಎಂದರೆ ಇಲ್ಲಿ ಕಲ್ಲಿನ ಪ್ರತಿಮೆಯೇ ಪರಮಸತ್ಯವಾಗುವುದಿಲ್ಲ. ಚಿನ್ಮಯೀಭಗವತಿಯನ್ನು ಕಾಣುವವರೆಗೂ ಬೆಳೆಯಬೇಕಾದ್ದು ಭಕ್ತನ ಕರ್ತವ್ಯ. ಕಲ್ಲಿನಲ್ಲಿ ಚಿನ್ಮಯೀ ಭಗವತಿಯನ್ನು ಕಾಣುವುದು ಎಂಬರ್ಥದಲ್ಲಿ ಅಲ್ಲ. ಕಲ್ಲು ಕಾಣಲೇಬಾರದು. ಕಲ್ಲು ಕಾಣಿಸುವುದೇ ಇಲ್ಲ. ಚಿನ್ಮಯೀಭಗವತಿಯೆ ಹೊರತು ಇನ್ನೇನೂ ಇರುವುದೂ ಇಲ್ಲ, ಕಾಣಿಸುವುದೂ ಇಲ್ಲ. ಆ ಅನುಭೂತಿಯ ಸಿದ್ಧಿಯೆ ದೇವಸ್ಥಾನದಲ್ಲಿ ಭಗವತಿಯ ವಿಗ್ರಹವನ್ನು ಪ್ರತಿಷ್ಠಿಸಿದುದರ ಮುಖ್ಯೋದ್ದೇಶ. ಅದೇ ಪರಮ ಪ್ರಯೋಜನ. ಉಳಿದುದೆಲ್ಲ ಅನ್ಯ, ಅಪ್ರಕೃತ, ಅನರ್ಥ, ವ್ಯರ್ಥ.

ರಾಮಾಯಣದ ಮೂಲವಸ್ತುವಿನಲ್ಲಿ ಲೌಕಿಕವಾದ ಚರಿತ್ರೆ ಭೂಗೋಳಗಳೇನಾದರೂ ಇರಲಿ, ಭವತಾರಿಣಿಯ ವಿಗ್ರಹದ ಕಲ್ಲು ಅದಾವುದೊ ಬೆಟ್ಟದಲ್ಲಿ ಅದಾವುದೊ ಕರೆಯ ಪಕ್ಕದಲ್ಲಿ ಅದಾವುದೊ ಮರದ ಬುಡದಲ್ಲಿ ಸಿಕ್ಕಿದಂತೆ. ಆದರೆ ಸಹೃದಯರಾದ ನಮಗೆ ಅದೆಲ್ಲ ಸಂಪೂರ್ಣವಾಗಿ ಅಪ್ರಕೃತ, ಅನಾವಶ್ಯಕ;

ರಸಾಸ್ವಾದನೆಯ ದೃಷ್ಟಿಯಿಂದಂತೂ ಅತ್ಯಂತ ತಿರಸ್ಕೃತ; ಮಾತ್ರವಲ್ಲ, ಶ್ರದ್ಧೆಯ ಏಕಾಗ್ರತೆಗೆ ಭಂಗ ತರುವುದರಿಂದ ಹಾನಿಕರ. ಏಕೆಂದರೆ ಲೋಕಧರ್ಮಿಯಾದ ಚರಿತ್ರೆಯ ಒರೆಗಲ್ಲಿಗೆ ಹಚ್ಚಿದರೆ ರಾಮಾಯಣದ ಮುಕ್ಕಾಲುಪಾಲು ಕಥೆ ಮಕ್ಕಳ ಮನೋರಂಜನೆಯ ಕಟ್ಟುಕಥೆಯಾಗುತ್ತದೆ. ಮಾಡಲು ಕೆಲಸವಿರುವ ಬೆಳೆದ ಮನಸ್ಸಿನ ಗೌರವಕ್ಕೂ ಆಸಕ್ತಿಗೂ ಪಾತ್ರವಾಗಲು ಅನರ್ಹವಾಗಲೂಬಹುದು. ಪುತ್ರಕಾಮೇಷ್ಟಿಯಲ್ಲಿ ಅಗ್ನಿಪುರುಷನು ಮೈದೋರಿದುದಾಗಲಿ, ದಿವ್ಯಪಾಯಸಸೇವನೆಯಿಂದ ಕೌಸಲ್ಯಾದಿ ಸತಿಯರು ಗರ್ಭಧಾರಣೆಮಾಡಿದುದಾಗಲಿ, ಸೀತೆ ಅಯೋನಿಜೆಯಾದ ಭೂಮಿಸಂಭವೆಯೆಂಬುದಾಗಲಿ, ವಿರಾಧಾದಿ ರಾಕ್ಷಸರ ಚಿತ್ರವಾಗಲಿ, ಕಪಿಗಳೂ ಹದ್ದುಗಳೂ ಕರಡಿಗಳೂ ಮಾತನಾಡಿ ಮನುಷ್ಯರಂತೆ ವ್ಯವಹರಿಸಿದುವು ಎಂಬುದಾಗಲಿ, ಕೋತಿಯೊಂದು ಆಕಾಶಕ್ಕೆ ಬೆಳೆದು ಸಮುದ್ರವನ್ನು ನೆಗೆಯಿತು ಎಂಬುದಾಗಲಿ, ಹತ್ತು ತಲೆಯ ರಕ್ಕಸನಿದ್ದನೆಂಬುದಾಗಲಿ, ಒಂದಲ್ಲ ಎರಡಲ್ಲ ಇಂತಹ ನೂರಾರು ಸಂಗತಿಗಳು ಬರಿಯ ಕಲ್ಪನಾ ವಿನೋದದ ಸ್ವಾರಸ್ಯ ಸೃಷ್ಟಿಗಳಾಗುತ್ತವೆಯೆ ಹೊರತು ನಮ್ಮ ಗಂಭೀರಪ್ರಜ್ಞೆಗೆ ಧ್ಯಾನವಿಷಯಗಳಾಗುವಷ್ಟು ಗೌರವಾಸ್ಪದವಾಗಲಾರವು. ನಮ್ಮ ಹೃತ್ಪೂರ್ವಕವಾದ ಪೂಜೆಗಂತೂ ಬಹು ದೂರವಾಗಿಯೆ ಉಳಿಯುತ್ತವೆ. ಆದ್ದರಿಂದ ವಾಲ್ಮೀಕಿಯ ಶ್ರೀಮದ್ರಾಮಾಯಣವನ್ನು ಲೌಕಿಕವಾದ ಪ್ರತಿಕೃತಿಯ ದೃಷ್ಟಿಯಿಂದ ನೋಡುವ ವಿಚಿಕಿತ್ಸೆಗೆ ಹೋಗದೆ 'ದರ್ಶನ ಧ್ವನಿ'ಯ ಪ್ರತಿಮಾದೃಷ್ಟಿಯಿಂದ ಮಾತ್ರ ನೋಡಬೇಕಾಗುತ್ತದೆ.[1]

ನಮ್ಮ ದೇಶಕ್ಕೆ ರಾಜಕೀಯರೂಪವಾದ ಸ್ವಾತಂತ್ರ್ಯಸಿದ್ಧಿಯಾದ ಈ ಸಂಧಿ ಸಮಯದಲ್ಲಿ, ಎಲ್ಲ ವಲಯಗಳಲ್ಲಿಯೂ ಜನರ ಸತ್ಯ ಸೌಜನ್ಯ ಸಿಷ್ಠಾಭಕ್ತಿಗಳು ಶಿಥಿಲವಾಗುತ್ತಿವೆ ಎಂಬ ಶಂಕೆಗೆ ಆಸ್ಪದವಾಗುತ್ತಿರುವಲ್ಲಿ, ದೇವರು ಸತ್ಯ ಧರ್ಮ ಆತ್ಮ ಕರ್ಮ ಜನ್ಮಾಂತರ ಪುಣ್ಯ ಮೊದಲಾದ ತತ್ವ ಮತ್ತು ಪುರುಷಾರ್ಥಗಳಲ್ಲಿ ನಂಬುಗೆಯೂ ಭರವಸೆಯೂ ಕುಗ್ಗುತ್ತಿರುವ ಈ ದುರಂತ ಸನ್ನಿವೇಶದಲ್ಲಿ, ಸ್ವಪ್ರತಿಷ್ಠೆ ಸ್ವಾರ್ಥಗಳೇ ತಮ್ಮ ಸರ್ವಸ್ವವೋ ಎಂಬಂತೆ ಮುಂದಾಳುಗಳಾಗಿರುವ ಶ್ರೇಷ್ಠರೆಂಬುವರು ಕೂಡ ವರ್ತಿಸುತ್ತಿರುವ ಈ ದುರ್ಮುಹೂರ್ತದಲ್ಲಿ ರಾಮಾಯಣದ ದಿವ್ಯ ಹಸ್ತ ನಮ್ಮನ್ನು ನಿಜವಾಗಿಯೂ ಮೇಲೆತ್ತಬಲ್ಲದು; ಅದರ ಅಮರಸಂಗೀತ ನಮ್ಮ ಶುಷ್ಕಜೀವನದಲ್ಲಿ ಅಮೃತರಸಸಂಚಾರವಾಗುವಂತೆ ಮಾಡಬಲ್ಲದು; ಶಾಪಗ್ರಸ್ತೆಯಾದ ನಮ್ಮ ಹೃದಯದ ಅಹಲ್ಯೆಯನ್ನು ತನ್ನ ಪಾವನ ಪಾದಸ್ಪರ್ಶನದಿಂದ

[1] 'ತಪೋನಂದನ'ದಲ್ಲಿರುವ ಹಿಂದೆ ಹೇಳಿದ ಎರಡು ಪ್ರಬಂಧಗಳ ಜತೆಗೆ 'ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ' ಎಂಬ ಪ್ರಬಂಧವನ್ನೂ ನೋಡಿ.

ಉದ್ಧಾರಮಾಡಬಲ್ಲದು; ನಮ್ಮ ಸ್ವಾರ್ಥದ ದುಷ್ಟವಿರಾಧನನ್ನು ಸಂಹರಿಸಿ ಅವನಿಂದಲೆ ನಮಗೆ ದಾರಿತೋರುವ ಪರಾರ್ಥತೆಯ ಬೃಂದಾರಕನನ್ನು ಮೂಡಿಸಬಲ್ಲದು; ನಮ್ಮಲ್ಲಿ ಹುದುಗಿರುವ ಆಂಜನೇಯಶಕ್ತಿಯನ್ನು ಎಚ್ಚರಿಸಿ, ಉಬ್ಬಿಸಿ, ಸಾಗರೋಲ್ಲಂಘನದ ಸಾಹಸಕ್ಕೆ ಅದನ್ನು ಪ್ರಚೋದಿಸಿ, ಹತ್ತಲ್ಲ ಸಾವಿರ ತಲೆಯ ನಮ್ಮ ಅವಿದ್ಯಾಹಂಕಾರ ರಾವಣನನ್ನು ಕತ್ತರಿಸಿ, ಸೆರೆಸಿಕ್ಕಿ ತತ್ತರಿಸುತ್ತಿರುವ ನಮ್ಮ ಜೀವನದೇವತಾ ಸೀತೆ ತನ್ನ ಶ್ರೀರಾಮನನ್ನು ಮತ್ತೆ ಸೇರುವಂತೆ ಬದುಕನ್ನು ಆಸುರೀಶಕ್ತಿಗಳಿಂದ ಬಿಡಿಸಿ ದೈವೀಶಕ್ತಿಗಳ ಕಡೆಗೆ ಕೊಂಡೊಯ್ಯಬಲ್ಲದು. ಕೊನೆಯದಾಗಿ ವ್ಯಕ್ತಿವ್ಯಕ್ತಿಯಲ್ಲಿಯೂ ಶ್ರೀರಾಮಪಟ್ಟಾಭಿಷೇಕವಾಗುವಂತೆ ಮಾಡಿ, ಸದ್ಯಕ್ಕೆ ನಿತ್ಯಸ್ಥಿತಿಯಲ್ಲಿ ಅತೀತವಾಗಿರುವ ರಾಮರಾಜ್ಯವು ಕ್ರಮಕ್ರಮೇಣ ಈ ಲೀಲಾಲೋಕಕ್ಕೂ ಅವತರಿಸಿ ಇಲ್ಲಿಯ ಉಪಾಧಿಗಳಲ್ಲಿಯೆ ಆ ಋತಶಕ್ತಿ ನಿರುಪಾಧಿಕವಾಗಿ ಆವಿರ್ಭವಿಸಿ, ಮರ್ತ್ಯವನ್ನೆ ಅಮರ್ತ್ಯವನ್ನಾಗಿಯೂ ಭೂಮಿಯನ್ನೆ ವೈಕುಂಠವನ್ನಾಗಿಯೂ ಪರಿವರ್ತಿಸುವ ದೇವಕಾರ್ಯದಲ್ಲಿ ದಿವ್ಯಶಿಲ್ಪಿಯಾಗಬಲ್ಲದು.*

ಹಿಂದೆ ಊಹೆಗೂ ಮೀರಿ ವಿಸ್ತಾರವಾದಂತಿದ್ದ ಭೂಮಂಡಲವು ವೈಜ್ಞಾನಿಕವಾದ ಪ್ರಗತಿಯಿಂದ ಇಂದು ಮುದುರಿ ಕುಗ್ಗಿ ಕಿರಿದಾಗಿದೆ. ಪ್ರಪಂಚ ನಿಜವಾಗಿಯೂ ಒಂದು ಎಂಬುದು ಹೆಚ್ಚು ಹೆಚ್ಚು ಅನುಭವಕ್ಕೆ ಬರುತ್ತಿದೆ. ವಿಮಾನ ರೇಡಿಯೊ ಪತ್ರಿಕೆ ಸಿನಿಮಾ ಮೊದಲಾದ ವೇಗಯಂತ್ರಗಳೂ ಸಲಕರಣೆಗಳೂ ಲೋಕದ ಸುದ್ದಿಯನ್ನೆಲ್ಲ ದಿನಬೆಳಗಾದರೆ ನಮ್ಮ ಮನೆಯ ಬಾಗಿಲಿಗೆ ತಂದು ಹಾಕುತ್ತವೆ. ಜಗತ್ತಿನ ತಾಪತ್ರಯವೆಲ್ಲ ನಮ್ಮ ಸ್ವಂತ ತಾಪತ್ರಯವಾಗತೊಡಗಿದೆ. ಹಿಂದೆ ಒಂದು ಮನೆಯಲ್ಲಿಯೊ, ಒಂದು ಹಳ್ಳಿಯಲ್ಲಿಯೊ, ಒಂದು ಹೋಬಳಿಯಲ್ಲಿಯೊ, ಹೆಚ್ಚು ಎಂದರೆ ಒಂದು ಸಂಸ್ಥಾನದಲ್ಲಿಯೊ ಸುಳಿದು ಸುತ್ತಿ ತೃಪ್ತಿಪಟ್ಟುಕೊಳ್ಳುತ್ತಿದ್ದ ನಮ್ಮ ಕುತೂಹಲ ಇಂದು ದೇಶವಿದೇಶಗಳಲ್ಲಿ ಖಂಡಖಂಡಗಳಲ್ಲಿ ಕಡಲಾಚೆಯ ಬಹು ದೂರದ ಭೂಭಾಗಗಳಲ್ಲಿ ಬಹುಸುಲಭವಾಗಿ ನಿರಪಾಯವಾಗಿ ಸುಳಿದು ಸುತ್ತಿದರೂ ಸಂತೃಪ್ತಿ ಹೊಂದಲಾರದಷ್ಟು ಕೆರಳಿ ನಿಂತಿದೆ. ಹಿಂದೆ ನಮ್ಮ ಮನಃಶಕ್ತಿ ಒಂದೊ ಎರಡೊ ಮೂರೊ ವಿಷಯಗಳಲ್ಲಿ ನಿಂತು ಅವುಗಳಲ್ಲಿಯೆ ಆಳವಾಗಿ ಪ್ರವೇಶಿಸುತ್ತಿತ್ತು. ಈಗಲಾದರೊ ತಿಳಿಯಬೇಕಾದ ವಿಷಯಗಳ ಸಂಖ್ಯೆಗೆ ಪರಿಮಿತಿಯೆ ಇಲ್ಲ ಎಂಬಂತೆ

---

* ಅದೆಂತಹ ಸೈನ್ಯವಾಗಲಿ ಅದೆಂತಹ ರಾಜಕಾರಣನೈಪುಣ್ಯವಾಗಲಿ ಹಿಂದೆಂದೂ ಸಾಧಿಸಿ ರಕ್ಷಿಸಲಾರದಿದ್ದ ಭರತವರ್ಷದ ಅಖಂಡತೆಯನ್ನೂ ಐಕ್ಯತೆಯನ್ನೂ ಶತಶತಮಾನಗಳಿಂದಲೂ ಸಾಧಿಸಿ ರಕ್ಷಿಸಿಕೊಂಡು ಬಂದಿರುವಂತೆಯೆ ಇಂದೂ ಮುಂದೂ ಸಾಧಿಸಿ ರಕ್ಷಿಸಿಕೊಂಡು ಬರುವುದರಲ್ಲಿ ಸಂದೇಹವಿಲ್ಲ ಅಲೋಕ ಸಾಮಾನ್ಯವಾದ ಈ ಶ್ರೀ ರಾಮಾಯಣ ದಿವ್ಯಶಿಲ್ಪಿ.

ತೋರುತ್ತಿದೆ. ಪರಿಣಾಮವಾಗಿ ಯಾವವಿಷಯದಲ್ಲಿಯೂ ಆಳವಾಗಿ ಪ್ರವೇಶಿಸಲು ಸಮಯವಾಗಲಿ ಶಕ್ತಿಯಾಗಲಿ ಆಸಕ್ತಿಯಾಗಲಿ ಬಹುಜನರ ಪಾಲಿಗೆ ಇಲ್ಲದಂತಾಗಿದೆ, ನಶಿಸಿಹೋಗಿದೆ. ನಮ್ಮ ಆಸಕ್ತಿ ಶಾಖೋಪಶಾಖೆಗಳಾಗಿ ಕವಲೊಡೆದು ಬರಲುಬರಲಾಗಿ ನಿಂತಿದೆ. ಯಾವ ಕೊಂಬೆಗೂ ಬಲ್ಪಿಲ್ಲ. ತೊಲೆಯಾಗುವ ತೋರವಿಲ್ಲ; ಕಂಭವಾಗುವ ಭಾರವಿಲ್ಲ; ಹೊರೆಹೊರುವ ಚೈತನ್ಯವಿಲ್ಲ. ಇನ್ನು ಪೊರಕೆಯಾಗಲು ಮಾತ್ರ ಅರ್ಹವಾಗಿರುವ ಆ ಬರಲುಕಡ್ಡಿಗಳಿಂದ ಬದುಕಿಗೆ ಉಪಯೋಗವಾಗುವಂತೆ ನಾಲ್ಕಾರು ಕಾಲ ಬಾಳುವ ಮನೆಯನ್ನಾಗಲಿ ಗುಡಿಯನ್ನಾಗಲಿ ಕಟ್ಟುವುದೆಂತು? ಆ ಬಡಕಲು ಆಸಕ್ತಿಗೂ ತನ್ನ ಸುತ್ತಮುತ್ತಣದಲ್ಲಿ ತಾತ್ಸಾರ, ತಿರಸ್ಕಾರ. ವೇಗ ಸೌಕರ್ಯ ದೊರಕಿರುವುದರಿಂದ ಅದು ಆರ್ಜೆಂಟೈನ ಭೂಕಂಪದ ವಿಚಾರದಲ್ಲಿ ಅನುಕಂಪ ತಾಳುವ ಹೊರೆಹೊಣೆಯಿಲ್ಲದ ಕರುಣರಸಾನುಭವದ ಸೊಗಸಿಗೆ ಶರಣಾಗಲು ಇಷ್ಟಪಡುತ್ತದೆಯೆ ಹೊರತು ಪತ್ರಿಕೆಗಳಿಗೆ ವಿಷಯವಾಗದ ಅನಾಮಧೇಯರಾದ ನೆರೆಹೊರೆಯವರ ಹತ್ತಿರದವರ ಕಷ್ಟಸಂಕಟಗಳನ್ನು ಅಲಕ್ಷಿಸುತ್ತದೆ. ಮನೆಯ ಹಿಂಭಾಗದ ಗಿರಿನೆತ್ತಿಯಿಂದ ಸೂರ್ಯೋದಯವನ್ನು ಈಕ್ಷಿಸಲಾರದ ಅದು ಯಾವುದೊ ನೂರಾರು ಮೈಲಿ ದೂರವಿರುವ ಬೆಟ್ಟದಮೇಲಿಂದ ಸೂರ್ಯಾಸ್ತ ನೋಡಲು ಕೃತಕ ರಸಾವೇಶದಿಂದ ಧಾವಿಸುತ್ತದೆ: ಕಾರಣ—ಮೋಟಾರು ಕಾರಿದೆ, ಪೆಟ್ರೋಲಿದೆ! ಸಾಮಾನ್ಯದಲ್ಲಿ ಸಮೀಪದಲ್ಲಿ ಪರಿಚಿತವಾದುದರಲ್ಲಿ ದೈನಂದಿನ ಜೀವನದ ದೃಶ್ಯ ಘಟನೆ ವ್ಯಕ್ತಿ ವ್ಯಾಪಾರಗಳಲ್ಲಿ ನಮ್ಮ ಆಸಕ್ತಿಗೆ ಅರುಚಿಯಾಗಿದೆ. ಇದನ್ನೆಲ್ಲ ಗಮನಿಸಿದರೆ ನಮಗೇನೊ ಒಂದು ಅತೃಪ್ತಿಯ ಅಸ್ವಸ್ಥತೆಯ ಅಶಾಂತಿಯ ಸಾಂಕ್ರಾಮಿಕ ರುಜೆ ತಗುಲಿರುವಂತೆ ಭಾಸವಾಗುತ್ತದೆ.

ಭ್ರಮಾಶೀಲವಾಗಿ ಪರಿಭ್ರಮಿಸುತ್ತಿರುವ ಇಂತಹ ನಮ್ಮ ಚಿತ್ತಕ್ಕೆ ಒಂದು ಸ್ಥೈರ್ಯ, ಒಂದು ಶಮ, ಒಂದು ತುಷ್ಟಿ, ಒಂದು ಪ್ರಸನ್ನತೆ, ಮತಿಗೌರವ, ಆತ್ಮಪ್ರತ್ಯಯ ಇವುಗಳನ್ನು ಸಂಪಾದಿಸಬೇಕಾದರೆ ರಾಮಾಯಣದಂತಹ ಋಷಿಕೃತಿಗಳನ್ನು ನಾವು ಆಶ್ರಯಿಸಬೇಕಾಗುತ್ತದೆ. ಋಷಿದರ್ಶನ ನಮ್ಮ ಚೈತನ್ಯವನ್ನು ದೀಪ್ತಗೊಳಿಸುತ್ತದೆ; ಬರಿಯ ದೂರವಾದುದಕ್ಕೆ ಬೆಪ್ಪುಬೆಪ್ಪಾಗಿ ಮಾರುಹೋಗಿ ಬೆರಗಾಗುವ ಲಘುಚೇತನಕ್ಕೆ ತನ್ನ ದಿವ್ಯ ಗುರುತ್ವವನ್ನು ಅನುಗ್ರಹಿಸುತ್ತದೆ. ಬರಿಯ ರಾಜಕೀಯವಾದ ಪ್ರಖ್ಯಾತಿಗಾಗಲಿ ವೈಭವಕ್ಕಾಗಲಿ ದೀನವೃತ್ತಿಯಿಂದ ಸಾಷ್ಟಾಂಗ ನಮಸ್ಕಾರಮಾಡುವ ಗ್ರಾಮೀಣತೆಯಿಂದ ನಮ್ಮನ್ನು ಪಾರುಮಾಡುತ್ತದೆ. ನಮ್ಮ ಆಸಕ್ತಿಯನ್ನು ಸರ್ವತೋಮುಖವನ್ನಾಗಿಯೂ ವಿಶ್ವವ್ಯಾಪಕವನ್ನಾಗಿಯೂ ಮಾಡಿದರೂ ಅಸ್ಥಿರತೆಗೂ ಅನಾವಶ್ಯಕವಾದ ಅಲಸಕುತೂಹಲಕ್ಕೂ ಅವಕಾಶವೀಯು

ವುದಿಲ್ಲ. ಅದನ್ನು ಔಚಿತ್ಯದ ಅಂಕೆಯಲ್ಲಿಟ್ಟು ಆತ್ಮೋದ್ಧಾರಕ್ಕೆ ಆತ್ಮವಿಕಾಸಕ್ಕೆ ಆತ್ಮಸಾಕ್ಷಾತ್ಕಾರಕ್ಕೆ ಆತಂಕ ಒದಗದ ರೀತಿಯಲ್ಲಿ ನಮ್ಮನ್ನು ಮುನ್ನಡೆಸುತ್ತದೆ. ನಿಃಶ್ರೇಯಸಕರವಾದ ಆತ್ಮಶ್ರೀಗೆ ಮೊದಲನೆಯ ಸ್ಥಾನವನ್ನೂ, ರಸಪೂರ್ಣವಾದ ಸಂಸ್ಕೃತಿಗೆ ಎರಡನೆಯ ಸ್ಥಾನವನ್ನೂ, ಅಭ್ಯುದಯಕರವಾದ ಸಾಮಾಜಿಕ ನಾಗರಿಕತೆಗೆ ಮೂರನೆಯ ಸ್ಥಾನವನ್ನೂ, ಇವು ಮೂರಕ್ಕೂ ಆಧಾರವೂ ನಿವಾಸವೂ ಆಗಿ ಅತ್ಯಂತ ಆವಶ್ಯಕವಾದರೂ ಭಿತ್ತಿಸದೃಶ ಮತ್ತು ಸಾಧನರೂಪಮಾತ್ರವಾಗಿರುವ ರಾಜಕೀಯಕ್ಕೆ ಕೊನೆಯ ನಾಲ್ಕನೆಯ ಸ್ಥಾನವನ್ನೂ ನಿರ್ಣಯಿಸುವ ಪೂರ್ಣದೃಷ್ಟಿಯನ್ನು ಅನುಗ್ರಹಿಸಿ, ನಮ್ಮನ್ನು ಪೂರ್ಣಸಿದ್ಧಿಯ ಕಡೆಗೆ ತಪ್ಪದೆ ಕರೆದೊಯ್ಯುತ್ತದೆ.[1]

ಮೇಲೆ ವರ್ಣಿಸಿದ ಧ್ಯೇಯಸಾಧನೆಯೆ ಎಲ್ಲ ವಿದ್ಯೆಯ ಪರಮೋದ್ದೇಶ. ಅಕ್ಷರ ಪ್ರಚಾರ ಮತ್ತು ವಯಸ್ಕರ ಶಿಕ್ಷಣಗಳೂ ಅದಕ್ಕಾಗಿಯೆ ಸರ್ವಾದರಣೀಯ. ಉಳಿದ ಉಪಯೋಗಗಳೆಲ್ಲ ಅವು ಎಷ್ಟೆ ಆವಶ್ಯಕವಾಗಿರಲಿ ಎಷ್ಟೆ ಅನಿವಾರ್ಯವಾಗಿರಲಿ ಗೌಣ, ಎರಡನೆಯ ಸ್ಥಾನಕ್ಕೆ ಸೇರುತ್ತವೆ. ಬಂದ ನೋಟೀಸನ್ನು ಓದುವುದಾಗಲಿ, ಪತ್ರಿಕೆ ನೋಡುವುದಾಗಲಿ, ಅರ್ಜಿ ಬರೆಯುವುದಾಗಲಿ ಅಥವಾ ಇನ್ನಾವ ವ್ಯಾವಹಾರಿಕವಾದ ಉಪಯೋಗವಾಗಲಿ ಮೊದಮೊದಲ ಪ್ರಯೋಜನವಾಗಬಹುದೆ ಹೊರತು ಮುಖ್ಯ ಪ್ರಯೋಜನವಾಗಲಾರದು. ಮುಖ್ಯಪ್ರಯೋಜನ ಹೃದಯವಿಕಾಸಕ್ಕೆ ಸಂಬಂಧಪಟ್ಟುದು, ಅಂತಃಸಂಸ್ಕೃತಿಗೆ ಸೇರಿದುದು; ವಿನಯಕ್ಕೆ ಸೌಜನ್ಯಕ್ಕೆ ಶುಚಿಗೆ ಕರುಣೆಗೆ ಭಕ್ತಿಗೆ ನಿಷ್ಠೆಗ ಸತ್ಯಕ್ಕೆ ಧರ್ಮಕ್ಕೆ ಆತ್ಮಕಲ್ಯಾಣಕ್ಕೆ. ಅಂತಹ ಪ್ರಜ್ಞೆಯ ಪರಿಪಕ್ವತೆಗೆ, ಅಂತಹ ಕೃತಕೃತ್ಯತೆಯ ದಿವ್ಯಸ್ಥಿತಿಗೆ, ಅಂತಹ ಸಂಪೂರ್ಣ ವ್ಯಕ್ತಿತ್ವದ ಪೂರ್ಣ ಸರ್ವೋದಯಕ್ಕೆ ನಮ್ಮೆಲ್ಲರನ್ನೂ ಏರಿಸಲಿ ಈ ಜನಪ್ರಿಯ ವಾಲ್ಮೀಕಿ ರಾಮಾಯಣ. ಎಲ್ಲ ಕನ್ನಡಿಗರೂ ಅಕ್ಷರಜ್ಞರಾಗಿ ಸುಶಿಕ್ಷಿತರಾಗಿ, ಕರ್ಣಾಟಕದ ಮೊದಲ ಚಕ್ರವರ್ತಿ ಸಾಹಿತಿ ನೃಪತುಂಗನು ಸಾವಿರ ವರ್ಷಗಳ ಹಿಂದೆ ಅಂದಿನವರನ್ನು ಕುರಿತು ಹಾಡಿದುದು ಇಂದಿನವರಿಗೂ ಅನ್ವಯಿಸುವಂತಾಗಲಿ:

"ಪದನ್ ಅಱಿದು ನುಡಿಯಲುಂ, ನುಡಿದುದನ್ ಅಱಿದು ಆರಯಲುಂ ಆರ್ಪರ್ ಆ ನಾಡವರ್ಗಳ್. ಚದುರರ್ ನಿಜದಿಂ. ಕುಱಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್. ಕುಱಿತವರಲ್ಲದೆ ಮತ್ತಂ ಪೆಱರುಂ ತಂತಮ್ಮ ನುಡಿಯೊಳ್ ಎಲ್ಲರ್ ಜಾಣರ್. ಕಿಱುವಕ್ಕಳುಂ ಆ ಮೂಗರುಂ ಅಱಿಪಲ್ಕಱಿವರ್ ವಿವೇಕಮುಂ ಮಾತುಗಳಂ."

---

[1] ಆ ದರ್ಶನವನ್ನು ಕಂಡುಂಡು ಬೆಳೆಯಬೇಕೆಂಬಾಶೆ ಬಲಿತವರು ಮಹಾಛಂದಸ್ಸಿನ 'ಶ್ರೀ ರಾಮಾಯಣದರ್ಶನಂ' ಎಂಬ ಮಹಾಕಾವ್ಯವನ್ನು ಓದಲಿ.

ಆ ಕನ್ನಡ ನಾಡಿನವರು ಪದವನ್ನು ಅರಿತು ನುಡಿಯಲೂ ನುಡಿದುದನ್ನು ಅರಿತು ವಿಚಾರಮಾಡಲೂ ಸಮರ್ಥರು. ಹುಟ್ಟಿನಿಂದಲೆ ಬುದ್ಧಿವಂತರು. ಶಾಸ್ತ್ರೀಯವಾಗಿ ಪಂಡಿತ ಪ್ರವೀಣರಂತೆ ಸಾಹಿತ್ಯಾಭ್ಯಾಸ ಮಾಡದಿದ್ದರೂ ಅವರ ಹೃದಯ ಉತ್ತಮವಾದ ಕಾವ್ಯಗಳನ್ನು ಓದಿ ರಸಾಸ್ವಾದನೆ ಮಾಡಬಲ್ಲುದಾಗಿತ್ತು. ಶಾಸ್ತ್ರಜ್ಞರಾದ ವಿದ್ವಾಂಸರ ಮಾತಂತಿರಲಿ, ಉಳಿದ ಸಾಮಾನ್ಯರನ್ನು ಪರಿಗಣಿಸಿದರೂ ಸ್ವಭಾಷಾಜ್ಞಾನದಲ್ಲಿ ಜಾಣರಲ್ಲದವರು ಯಾರೊಬ್ಬರೂ ಇಲ್ಲ. ಕಿರಿಮಕ್ಕಳೂ ಕಡೆಗೆ ಮೂಗರು ಕೂಡ ವಿವೇಕದ ಮಾತುಗಳನ್ನು ಬೋಧಿಸಬಲ್ಲವರು—ಆಃ! ನೃಪತುಂಗನ ಈ ವರ್ಣನೆಗೆ ಕನ್ನಡಮ್ಮನ ಮಕ್ಕಳು ಮತ್ತೊಮ್ಮೆ ಪಾತ್ರರಾಗುವ ಪುಣ್ಯಸಮಯ ಬಹು ಬೇಗನೆ ಸಮೀಪಿಸಲಿ! ಕನ್ನಡ ನುಡಿ ನಮ್ಮೆದೆಯ ನುಡಿಯಾಗಿ, ನಮ್ಮರಸುಮುಡಿಯಾಗಿ, ನಮ್ಮ ಬಾಳ್ಗುಡಿಯಾಗಿ, ಕನ್ನಡಿಗರ ಹೃದಯ ಭಿನ್ನಭಾವನೆಗಳನ್ನು ತೊರೆದು ಒಂದುಗೂಡಿ, ಕನ್ನಡನಾಡು ಒಂದಾಗಿ, ಕರ್ಣಾಟಕಮಾತೆ ತನ್ನಮ್ಮ ಭರತಮಾತೆಗೆ ಸಂತೋಷದಿಂದ ಹೆಮ್ಮೆಯಿಂದ ಸೇವೆ ಸಲ್ಲಿಸುವ ಭಾಗ್ಯದ ಕಾಲ ಬೇಗನೆ ಬರುವಂತಾಗಲಿ.

"ಜೈ ಭಾರತಜನನಿಯ ತನುಜಾತೆ,
ಜಯ ಹೇ ಕರ್ಣಾಟಕಮಾತೆ!"

ಕುವೆಂಪು

ಕವಿಕೃತಿಯ ಮೇಲೆ ಬ್ರಹ್ಮಮುದ್ರೆ

ಶ್ಲೋಕ ಏವ ತ್ವಯಾ ಬದ್ಧೋ ನಾತ್ರಕಾರ್ಯಾ ವಿಚಾರಣಾ ;
ಮಚ್ಛಂದಾದೇವ ತೇ ಬ್ರಹ್ಮನ್ ಪ್ರವೃತ್ತೇಯಂ ಸರಸ್ವತೀ.
ರಾಮಸ್ಯ ಚರಿತಂ ಕೃತ್ಸ್ನಂ ಕುರು ತ್ವಮೃಷಿಸತ್ತಮ :
ಧರ್ಮಾತ್ಮನೋ ಗುಣವತೋ ಲೋಕೇ ರಾಮಸ್ಯ ಧೀಮತಃ
ವೃತ್ತಂ ಕಥಯ ವೀರಸ್ಯ ಯಥಾ ತೇ ನಾರದಾಚ್ಛ್ರುತಂ.
ರಹಸ್ಯಂ ಚ ಪ್ರಕಾಶಂ ಚ ಯದ್ವೃತ್ತಂ ತಸ್ಯ ಧೀಮತಃ
ರಾಮಸ್ಯ ಸಹಸೌಮಿತ್ರೇ ರಾಕ್ಷಸಾನಾಂ ಚ ಸರ್ವಶಃ
ವೈದೇಹ್ಯಾಶ್ಚೈವ ಯದ್ವೃತ್ತಂ ಪ್ರಕಾಶಂ ಯದಿ ವಾ ರಹಃ
ಯಚ್ಚಾಪ್ಯವಿದಿತಂ ಸರ್ವಂ ವಿದಿತಂ ತೇ ಭವಿಷ್ಯತಿ !
ನ ತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ :
ಕುರು ರಾಮಕಥಾಂ ಪುಣ್ಯಾಂ ಶ್ಲೋಕಬದ್ಧಾಂ ಮನೋರಮಾಂ.
ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ
ತಾವದ್ ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ ;
ಯಾವದ್ ರಾಮಾಯಣಕಥಾ ತ್ವತ್ಕೃತಾ ಪ್ರಚರಿಷ್ಯತಿ
ತಾವದೂರ್ಧ್ವಮಧಶ್ಚ ತ್ವಂ ಮಲ್ಲೋಕೇಷು ನಿವತ್ಸ್ಯಸಿ !

ಕನ್ನಡ ಧ್ವನ್ಯಾಲೋಕ

ಮೊದಲನೆಯ ಉದ್ದ್ಯೋತ[1]

ಸ್ವೇಚ್ಛಾಕೇಸರಿಣಃ ಸ್ವಚ್ಛಸ್ವಚ್ಛಾಯಾಯಾಸಿತೇನ್ದವಃ ।
ತ್ರಾಯನ್ತಾಂ ವೋ ಮಧುರಿಪೋಃ ಪ್ರಪನ್ನಾರ್ತಿಚ್ಛಿದೋ ನಖಾಃ ॥

ತೊಳಗುವ ತಿಳಿವೆಳಗಿಂ ಶಶಿ-
ಕಳೆಯನಿಟಿಕೆಗೈದು ಭಕ್ತರೆಲ್ಲರ ಮಿಡುಕಂ ।
ಕಳೆಯಲ್ ಸೆಲೆ ನೆಱೆವ ನಖಾ-
ವಳಿಯೆಮ್ಮಂ ಪೊರೆಗುದಾತ್ತನರಕೇಸರಿಯಾ ॥

ಕಾರಿಕೆ

ಕಾವ್ಯಸ್ಯಾತ್ಮಾ ಧ್ವನಿರಿತಿ ಬುಧೈರ್ಯಸ್ಸಮಾಮ್ನಾತಪೂರ್ವ-
ಸ್ತಸ್ಯಾಭಾವಂ ಜಗದುರಪರೇ ಭಾಕ್ತಮಾಹುಸ್ತಮನ್ಯೇ ।
ಕೇಚಿದ್ವಾಚಾಂ ಸ್ಥಿತಮವಿಷಯೇ ತತ್ತ್ವಮೂಚುಸ್ತದೀಯಂ
ತೇನ ಬ್ರೂಮಃ ಸಹೃದಯಮನಃಪ್ರೀತಯೇ ತತ್ಸ್ವರೂಪಮ್ ॥ ೧ ॥

'ಕಾವ್ಯದ ಆತ್ಮವು ಧ್ವನಿ'ಯೆಂದು ವಿದ್ವಾಂಸರು ಹಿಂದೆಯೇ ಹೇಳಿದ್ದರು; ಕೆಲವರು ಆ ಧ್ವನಿಯನ್ನು ಇಲ್ಲವೆಂದರು; ಮತ್ತೆ ಕೆಲವರು ಅದನ್ನು 'ಭಾಕ್ತ' (=ಲಾಕ್ಷಣಿಕ)ವೆಂದರು; ಇನ್ನೂ ಕೆಲವರು ಅದರ ತತ್ತ್ವವು ಮಾತುಗಳಿಗೆ ಮೀರಿದ್ದೆಂದರು; ಆದ್ದರಿಂದ ಸಹೃದಯರ ಮನಸ್ಸಿಗೆ ಸಂತೋಷವಾಗಲೆಂದು 'ಧ್ವನಿ'ಯ ಸ್ವರೂಪವನ್ನು ವಿವರಿಸುತ್ತೇವೆ.

ವೃತ್ತಿ

'ವಿದ್ವಾಂಸರು' ಎಂದರೆ ಇಲ್ಲಿ 'ಕಾವ್ಯತತ್ತ್ವವನ್ನು ತಿಳಿದವರು' ಎಂದರ್ಥ. ಅವಿಚ್ಛಿನ್ನವಾದ ಸಂಪ್ರದಾಯಪರಂಪರೆಯ ಮೂಲಕ, ಇವರು 'ಧ್ವನಿ'ಯೆಂಬ

[1] ಈ ಉದ್ದ್ಯೋತದ ಅನುವಾದದಲ್ಲಿ ಮದರಾಸಿನ ಕುಪ್ಪುಸ್ವಾಮಿಶಾಸ್ತ್ರಿ ರಿಸರ್ಚ್ ಇನ್‌ಸ್ಟಿಟ್ಯೂಟಿನಿಂದ ೧೯೪೪ ನೆ ಇಸವಿಯಲ್ಲಿ ಪ್ರಕಾಶಿತವಾಗಿರುವ ಧ್ವನ್ಯಾಲೋಕದ ಪಾಠವನ್ನು ಅನುಸರಿಸಲಾಗಿದೆ.

ಹೆಸರಿನ ಕಾವ್ಯಾತ್ಮವನ್ನು ಸಮಗ್ರವಾಗಿ ಪ್ರತಿಪಾದಿಸಿರುವರು. ಸಹೃದಯರಾದವರ ಮನಸ್ಸಿನಲ್ಲಿ ಇಂದಿಗೂ ಅದು ಪ್ರಕಾಶಿಸುತ್ತಲೇ ಇದೆ.

I. ಹೀಗಿದ್ದರೂ ಕೂಡ ಅದನ್ನು ಕೆಲವರು ಇಲ್ಲವೆಂದಿರುವರು. ಹೀಗೆ ಇಲ್ಲವೆನ್ನುವವರ ವಾದದಲ್ಲಿ ಊಹಿಸಬಹುದಾದ ಪ್ರಕಾರಗಳು ಇವು :—

೧. ಕೆಲವರು ಹೀಗೆ ಹೇಳಬಹುದು :—ಕಾವ್ಯವೆಂದರೆ ಶಬ್ದ, ಅರ್ಥ—ಇವೇ ಶರೀರವಾಗುಳ್ಳುದೆಂದು ಅರ್ಥ. 'ಶಬ್ದ'ದಲ್ಲಿದ್ದುಕೊಂಡು ಕಾವ್ಯಕ್ಕೆ ಸೊಗಸನ್ನು ತರುವ 'ಅನುಪ್ರಾಸ' ವೇ ಮೊದಲಾದ ಅಲಂಕಾರಗಳೂ, 'ಅರ್ಥ'ದಲ್ಲಿದ್ದುಕೊಂಡು ಕಾವ್ಯದ ಸೌಂದರ್ಯಕ್ಕೆ ಕಾರಣಗಳಾಗುವ 'ಉಪಮೆ'ಯೇ ಮೊದಲಾದ ಅಲಂಕಾರಗಳೂ ಪ್ರಸಿದ್ಧವಾಗಿಯೇ ಇವೆ. ಇವಲ್ಲದೆ 'ಸಂಘಟನೆ'ಯ ಧರ್ಮಗಳಾದ 'ಮಾಧುರ್ಯ'ವೇ ಮೊದಲಾದ ಗುಣಗಳೂ ನಮಗೆ ಗೊತ್ತುಂಟು. ವಸ್ತುತಃ 'ವೃತ್ತಿ'ಗಳು ಇವುಗಳಿಗಿಂತ ಬೇರೆಯಲ್ಲ. ಆದರೂ 'ಉಪನಾಗರಿಕಾ' ಮೊದಲಾದ ಹೆಸರುಗಳಿಂದ ಕೆಲವರು ನಿರೂಪಿಸಿರುವ ವೃತ್ತಿಗಳು ನಮ್ಮ ಕಿವಿಗೆ ಬಿದ್ದಿವೆ. ಇವೆಲ್ಲಕ್ಕಿಂತಲೂ ಬೇರೆಯಾದ ಈ 'ಧ್ವನಿ'ಯೆಂಬುದು ಯಾವುದು? ಎಂದು.

೨. ಇತರರು ಹೀಗೆನ್ನಬಹುದು :—'ಧ್ವನಿ'ಯು ಇಲ್ಲವೇ ಇಲ್ಲ. ಸುಪ್ರಸಿದ್ಧವಾದ ಸಿದ್ಧಾಂತಗಳಿಗೆಲ್ಲ ವಿರುದ್ಧವಾದ ಒಂದು ಕಾವ್ಯಪ್ರಕಾರಕ್ಕೆ ಕಾವ್ಯತ್ವವೇ ಇಲ್ಲವಾಗುತ್ತದೆ. ಏಕೆಂದರೆ, ಸಹೃದಯರ ಮನಸ್ಸಿಗೆ ಆನಂದವನ್ನು ತರಬಲ್ಲ ಶಬ್ದಾರ್ಥಗಳನ್ನುಳ್ಳುದೇ ಕಾವ್ಯವೆಂಬುದು ಕಾವ್ಯಕ್ಕೆ ಸರಿಯಾದ ಲಕ್ಷಣ. ಪ್ರಸಿದ್ಧವಾದ ಕಾವ್ಯಮಾರ್ಗಗಳಿಗೆಲ್ಲ ವಿರುದ್ಧವಾದ ಮಾರ್ಗವು ಈ ಲಕ್ಷಣಕ್ಕೆ ಒಳಪಡುವುದು ಸಾಧ್ಯವಿಲ್ಲ. ಅಥವಾ ಯಾರಾದರೂ ತಮ್ಮ ತಮ್ಮೊಳಗೆ ಯಾವುದೋ ಸಂಕೇತ ಮಾಡಿಕೊಂಡು, ತಾವೇ ಸಹೃದಯರೆಂದುಕೊಳ್ಳುತ್ತಾ, ತಮ್ಮಲ್ಲಿ ಪ್ರಸಿದ್ಧವಾಗಿರುವುದೆಂಬ ಬಲದ ಮೇಲೆ 'ಧ್ವನಿ'ಗೆ ಕಾವ್ಯವೆಂಬ ನಾಮಕರಣ ಮಾಡಿದರೂ ಕೂಡ, ಅದು ಎಲ್ಲ ವಿದ್ವಾಂಸರ ಮೆಚ್ಚುಗೆಯನ್ನು ಎಂದಿಗೂ ಪಡೆಯಲಾರದು.

೩. ಮತ್ತೆ ಕೆಲವರು ಧ್ವನಿಯ ಅಭಾವವನ್ನು ಬೇರೆ ರೀತಿಯಿಂದಲೂ ಹೇಳಬಹುದು :—'ಧ್ವನಿ'ಯೆಂಬ ಅಪೂರ್ವವಾದ ವಸ್ತುವೇ ಅಸಂಭವ. ಏಕೆಂದರೆ ಕಾವ್ಯದಲ್ಲಿ ಸೌಂದರ್ಯಕಾರಣವೆಂದು ಅದನ್ನು ಒಪ್ಪಿದೊಡನೆಯೇ, ನಾವು ಮೊದಲೇ ಸೂಚಿಸಿದ ಕಾವ್ಯಸೌಂದರ್ಯಕಾರಕಗಳಲ್ಲಿ ಅದು ಅಂತರ್ಭಾವ ಹೊಂದಿಬಿಡುತ್ತದೆ. ಅವುಗಳಲ್ಲೇ ಯಾವುದಾದರೊಂದಕ್ಕೆ ಹೊಸದಾಗಿ ಅಪೂರ್ವ ನಾಮಕರಣ ಮಾಡುವುದರಿಂದ ಏನೋ ಒಂದು ಹೇಳಿದಂತಾಗುತ್ತದೆ, ಅಷ್ಟೆ. ಅದೂ ಅಲ್ಲದೆ, ಮಾತಿನ ಬಗೆಗಳು ಅನಂತವಾಗಿರುವುದರಿಂದ, ಕದಾಚಿತ್ ಹಿಂದಿನ ಕಾವ್ಯಲಕ್ಷಣಕಾರರು

ತೋರಿಸದೆ ಬಿಟ್ಟಿರುವ ಯಾವುದೋ ಒಂದು ಕಾವ್ಯದ ಪ್ರಕಾರ-ಲೇಶವು ಸಿಕ್ಕಿದರೂ ಸಿಕ್ಕಬಹುದಾದರೂ, ಅದನ್ನು 'ಧ್ವನಿ', 'ಧ್ವನಿ' ಯೆನ್ನುತ್ತಾ, ತಾವೇ ಸಹೃದಯರೆಂಬ ಭ್ರಾಂತಿಯಿಂದ ಕಣ್ಣು ಮುಚ್ಚಿಕೊಂಡು ಏಕೆ ಕುಣಿಯಬೇಕೋ ನಮಗೆ ಗೊತ್ತಿಲ್ಲ. ಕಾವ್ಯದಲ್ಲಿ ಹೊಸ ಸೊಗಸನ್ನು ಕಂಡವರು ಇವರೊಬ್ಬರೇ ಅಲ್ಲ. ಇನ್ನೂ ಮಹಾತ್ಮರನೇಕರು ಇಂತಹ ಸಾವಿರಗಟ್ಟಲೆ ಹೊಸ ಹೊಸ ಅಲಂಕಾರ-ಪ್ರಕಾರಗಳನ್ನು ಹಿಂದೆ ತೋರಿಸಿದ್ದಾರೆ; ಈಗಲೂ ತೋರಿಸುತ್ತಿದ್ದಾರೆ; ಆದರೆ ಅವರು ಯಾರೂ ಹೀಗೆ ಆಡಿದುದನ್ನು ಕೇಳಿಲ್ಲ. ಕೂಲಂಕಷವಾದ ವಿಮರ್ಶೆಯನ್ನು ಸಹಿಸುವಂತಹ ಯಾವುದೇ ತತ್ತ್ವವನ್ನೂ 'ಧ್ವನಿ'ಯಲ್ಲಿ ತೋರಿಸುವುದು ಅಶಕ್ಯ. ಇದನ್ನು ಈಗಾಗಲೇ ಒಬ್ಬನು[1] ಶ್ಲೋಕರೂಪದಿಂದಲೇ ಹೇಳಿರುವನು:—

ಮನಕಾಹ್ಲಾದನಕಾರಿಯಪ್ಪ ವಿಷಯಂ ತಾನೊಂದುಮಲ್ಲಿಲ್ಲ ಮೇಣ್
ವಿನುತಾಲಂಕೃತಿಗಳ್ ಸುಶಬ್ದತತಿಗಳ್ ವಕ್ರೋಕ್ತಿ ತಾಮಿಲ್ಲಮೆಂ-|
ದೆನೆ ಕಾವ್ಯಂ ಧ್ವನಿಯುಕ್ತಮೆಂದು ಮುದದಿಂ ಕೊಂಡಾಡುತಿರ್ಪಾ ಜಡಂ
'ಧ್ವನಿ' ಶಬ್ದಾರ್ಥಮ ಪೇಳ್ವುದೆಂದು ವಿಬುಧಂ ಕೇಳ್ದಾಗಳೇವೇಳ್ವನೋ ||

II. ಬೇರೆ ಜನರು 'ಧ್ವನಿ'ಯೆಂಬ ಕಾವ್ಯಾತ್ಮವನ್ನು 'ಗುಣವೃತ್ತಿ'ಯೆಂದರು. ಯದ್ಯಪಿ ಕಾವ್ಯಲಕ್ಷಣಕಾರರು ಯಾರೂ 'ಧ್ವನಿ'ಯೆಂಬ ಹೆಸರನ್ನು ಕಂಠೋಕ್ತವಾಗಿ ಹೇಳಿ 'ಗುಣವೃತ್ತಿ' ಇಲ್ಲವೆ ಬೇರೆ ಪ್ರಕಾರಗಳಾವುವನ್ನೂ ನಿರೂಪಿಸಿಲ್ಲ; ಆದರೂ ಅವರು ಗುಣವೃತ್ತಿಯ ವ್ಯವಹಾರವನ್ನು ಕಾವ್ಯದಲ್ಲಿ ಪ್ರದರ್ಶಿಸಿರುವುದರಿಂದಲೇ ಧ್ವನಿಮಾರ್ಗವನ್ನು ಕೊಂಚಮಟ್ಟಿಗೆ ಮುಟ್ಟಿದಂತಾಯಿತೆಂದು ಕಲ್ಪಿಸಿಕೊಂಡು ಕಾರಿಕೆಯಲ್ಲಿ—"ಮತ್ತೆ ಕೆಲವರು ಅದನ್ನು 'ಭಾಕ್ತ'ವೆಂದರು" ಎಂದಿದೆ.

III. ಲಕ್ಷಣಪ್ರಯಾಸಕ್ಕೆ ಅಂಜಿ ಹಿಂತೆಗೆದ ಅಲ್ಪಮತಿಗಳು ಕೆಲವರು ಧ್ವನಿಯ ತತ್ತ್ವವು ಮಾತುಗಳಿಗೆ ನಿಲುಕುವಂತಹುದಲ್ಲವೆಂದೂ, ಕೇವಲ ಸಹೃದಯರ ಹೃದಯಕ್ಕೆ ಮಾತ್ರ ವೇದ್ಯವೆಂದೂ ನುಡಿದರು.

ಹೀಗೆ ವಿಧವಿಧವಾದ ಭಿನ್ನಾಭಿಪ್ರಾಯಗಳಿರುವ ಕಾರಣ, ಸಹೃದಯರ ಮನಸ್ಸಿಗೆ ಆನಂದವಾಗಲೆಂದು ಧ್ವನಿಯ ಸ್ವರೂಪವನ್ನು ವಿವರಿಸುವುದೇ ನಮ್ಮ ಉದ್ದೇಶ. ಆ ಧ್ವನಿಯ ಸ್ವರೂಪವು ಎಲ್ಲ ಸತ್ಕವಿಗಳ ಕಾವ್ಯದಲ್ಲೂ ಉಪನಿಷತ್ಪ್ರಾಯವಾದುದು (ಅಥವಾ ಅತ್ಯಂತ ಮಹತ್ವಪೂರ್ಣವಾದುದು); ಅಷ್ಟೇ ಅಲ್ಲ, ಅತೀವ ರಮಣೀಯವೂ ಆದುದು; ಪ್ರಾಚೀನ ಲಕ್ಷಣಕಾರರ ಸೂಕ್ಷ್ಮತಮ ಬುದ್ಧಿಗಳಿಗೂ ಅದು ಹೊಳೆಯದೆ ಹೋದುದರಿಂದ, **ರಾಮಾಯಣ, ಮಹಾಭಾರತ,**

[1] ಮನೋರಥನೆಂಬ ಸಮಕಾಲೀನನಾದ ಕವಿ.

ಇವೇ ಮೊದಲಾದ ಲಕ್ಷ್ಯಗಳಲ್ಲಿ ಎಲ್ಲೆಲ್ಲೂ ಅದರ ವಿಲಾಸವನ್ನು ಕಾಣುವ ಸಹೃದಯರ ಮನಸ್ಸಿನಲ್ಲಿ ಆನಂದವು ಸ್ಥಿರವಾಗಿ ನೆಲೆಸಲಿ, ಎಂದು ಧ್ವನಿಸ್ವರೂಪವನ್ನು ಪ್ರತಿಪಾದಿಸುತ್ತೇವೆ.

ಹೀಗೆ ಧ್ವನಿಯ ಲಕ್ಷಣವನ್ನು ಹೇಳಬೇಕೆಂದೇ ಹೊರಟಿರುವುದರಿಂದ, ಮೊದಲು ಅದಕ್ಕೆ ಪೀಠಿಕಾರೂಪವಾಗಿ ಕೆಳಗಿನ ಕಾರಿಕೆಯನ್ನು ಹೇಳಿದೆ:—

ಕಾರಿಕೆ

ಅರ್ಥಃ ಸಹೃದಯಶ್ಲಾಘ್ಯಃ ಕಾವ್ಯಾತ್ಮಾ ಯೋ ವ್ಯವಸ್ಥಿತಃ।
ವಾಚ್ಯಪ್ರತೀಯಮಾನಾಖ್ಯೌ ತಸ್ಯ ಭೇದಾವುಭೌ ಸ್ಮೃತೌ ॥ ೨ ॥

ಸಹೃದಯರು ಶ್ಲಾಘಿಸುವ ಯಾವ ಅರ್ಥವನ್ನು ಕಾವ್ಯದ ಆತ್ಮವೆಂದು ನಿಶ್ಚಯಿಸಲಾಗಿದೆಯೋ, ಅದರ ಎರಡು ಭೇದಗಳೇ 'ವಾಚ್ಯ' (= ನೇರವಾದ ಮುಖ್ಯಾರ್ಥ) ಮತ್ತು 'ಪ್ರತೀಯಮಾನ' (= ವಿಮರ್ಶೆ ಮಾಡುವಾಗ ಸ್ಫುರಿಸುವ ಗಮ್ಯಾರ್ಥ) ಎಂಬುವು.

ವೃತ್ತಿ

ಲಲಿತವೂ ಉಚಿತವೂ ಆದ ಅವಯವಗಳ ಜೋಡಣೆಯಿಂದ ಮನೋಹರವೆನಿಸುವ ಕಾವ್ಯದಲ್ಲಿ—ಶರೀರದಲ್ಲಿ ಆತ್ಮವು ಹೇಗೋ ಹಾಗೆ—ಸಾರರೂಪವಾಗಿದ್ದುಕೊಂಡು ಸಹೃದಯರೆಲ್ಲರ ಪ್ರಶಂಸೆಗೆ ಪಾತ್ರವಾಗತಕ್ಕ ಯಾವ ಅರ್ಥವುಂಟೋ, ಅದರ ಎರಡು ಭೇದಗಳನ್ನೇ ಇಲ್ಲಿ 'ವಾಚ್ಯ' ಮತ್ತು 'ಪ್ರತೀಯಮಾನ' ಎಂಬ ಹೆಸರುಗಳಿಂದ ಕರೆಯಲಾಗಿದೆ.

ಕಾರಿಕೆ

ತತ್ರ ವಾಚ್ಯಃ ಪ್ರಸಿದ್ಧೋ ಯಃ ಪ್ರಕಾರೈರುಪಮಾದಿಭಿಃ।
ಬಹುಧಾ ವ್ಯಾಕೃತಃ ಸೋಽನ್ಯೈಃ ತತೋ ನೇಹ ಪ್ರತನ್ಯತೇ ॥ ೩ ॥

ಅವುಗಳಲ್ಲಿ 'ವಾಚ್ಯ'ವೆನಿಸುವ ಅಂಶವು ಸುಪ್ರಸಿದ್ಧ; ಈಗಾಗಲೇ ಅನೇಕರು 'ಉಪಮಾ' ಮೊದಲಾದ ನಾನಾ ಪ್ರಕಾರಗಳಿಂದ ಅದನ್ನು ವಿವಿಧವಾಗಿ ವರ್ಣಿಸಿದ್ದಾರೆ. ಆದ್ದರಿಂದ ಇಲ್ಲಿ ಅದನ್ನು ವಿಸ್ತರಿಸುವುದಿಲ್ಲ.

ವೃತ್ತಿ

ಇಲ್ಲಿ 'ಅನೇಕರು' ಎಂದರೆ ಉದ್ಭಟಭಟ್ಟನೇ ಮೊದಲಾದ ಕಾವ್ಯಲಕ್ಷಣಕಾರರೆಂದರ್ಥ. 'ಅದನ್ನು ವಿಸ್ತರಿಸುವುದಿಲ್ಲ' ಎಂದರೆ ಸಂದರ್ಭೋಚಿತವಾಗಿ ಬೇಕಾದಷ್ಟನ್ನು ಮಾತ್ರ ಅನುವಾದಮಾಡಿಕೊಳ್ಳುತ್ತೇವೆಂದರ್ಥ.

ಕಾರಿಕೆ

ಪ್ರತೀಯಮಾನಂ ಪುನರನ್ಯದೇವ
ವಸ್ತ್ವಸ್ತಿ ವಾಣೀಷು ಮಹಾಕವೀನಾಮ್ ।
ಯತ್ತತ್ಪ್ರಸಿದ್ಧಾವಯವಾತಿರಿಕ್ತಂ
ವಿಭಾತಿ ಲಾವಣ್ಯಮಿವಾಙ್ಗನಾಸು ॥ ೪ ॥

ಕೇವಲ ಪ್ರತೀಯಮಾನವೇ ಆದ ಮತ್ತೊಂದು ವಸ್ತುವು ಮಹಾಕವಿಗಳ ವಾಣಿಗಳಲ್ಲಿರುತ್ತದೆ; ಅದು ಅಂಗನೆಯರ ಲಾವಣ್ಯದಂತೆ ಪ್ರಸಿದ್ಧವಾದ ಅವಯವಗಳ ಚೆಲುವಿಗಿಂತ ಬೇರೆಯಾಗಿಯೇ ಪ್ರಕಾಶಿಸುತ್ತದೆ.

ವೃತ್ತಿ

'ಮತ್ತೊಂದು' ಎಂದರೆ 'ವಾಚ್ಯ'ವಾದುದಕ್ಕಿಂತಲೂ ಬೇರೆಯಾದ 'ಪ್ರತೀಯಮಾನ'ವೆನಿಸುವ ವಸ್ತುವು ಮಹಾಕವಿಗಳ ವಾಣಿಗಳಲ್ಲಿ ಉಂಟು. ಅದು ಸಹೃದಯರ ಹೃದಯಗಳಿಗೆ ಸುಪ್ರಸಿದ್ಧವಾದುದು. 'ಪ್ರಸಿದ್ಧವಾದ' ಎಂದರೆ 'ಅಲಂಕಾರಗಳಿಂದ ಕೂಡಿದ' ಮತ್ತು 'ಪ್ರತ್ಯಕ್ಷಗೋಚರವಾದ' ಎಂಬ ಎರಡರ್ಥಗಳನ್ನೂ ಮಾಡಿಕೊಳ್ಳಬಹುದು. ಇಂತಹ ಅವಯವಗಳಿಗಿಂತಲೂ ವ್ಯತಿರಿಕ್ತವಾಗಿ ಎದ್ದು ಕಾಣುತ್ತದೆ ಎಂದರ್ಥ. 'ಅಂಗನೆಯರಲ್ಲಿರುವ ಲಾವಣ್ಯದಂತೆ' ಎಂಬುದು ಉಪಮಾನ, ಅಂಗನೆಯರಲ್ಲಿ ಲಾವಣ್ಯವೆಂದರೆ, ಬೇರೆ ಬೇರೆಯಾಗಿ ಕಾಣಬಹುದಾದ ಎಲ್ಲ ಅವಯವಗಳ ಸೌಷ್ಠವಕ್ಕಿಂತಲೂ ಬೇರೆಯಾಗಿ ಸಹೃದಯರ ಲೋಚನಾಮೃತವೆನಿಸುವ ಹೊಸದೊಂದು ಸೊಬಗಿರುವಂತೆಯೇ, 'ಪ್ರತೀಯಮಾನ' ವಾದ ವಿಷಯದಲ್ಲಿಯೂ, ಅದು ವಾಚ್ಯಸಾಮರ್ಥ್ಯದಿಂದ ವ್ಯಂಗ್ಯವಾದ 'ವಸ್ತು,' 'ಅಲಂಕಾರಗಳು' ಮತ್ತು 'ರಸಾದಿಗಳು' ಎಂಬಿವೇ ಮೊದಲಾದ ಅನೇಕ ಪ್ರಭೇದಗಳನ್ನೊಳಗೊಂಡಿರುವುದೆಂಬುದನ್ನು ಮುಂದೆ ತೋರಿಸಲಾಗುತ್ತದೆ. ಆ ಎಲ್ಲ ಪ್ರಕಾರಗಳಲ್ಲಿಯೂ ಅದು ವಾಚ್ಯಕ್ಕಿಂತ ಬೇರೆಯಾಗಿಯೇ ಇರುತ್ತದೆ. ಹೇಗೆಂದರೆ—ಮೊದಲನೆಯ ಪ್ರಭೇದವೇ ವಾಚ್ಯಕ್ಕಿಂತ ಬಹಳ ಹೆಚ್ಚು ಅಂತರವುಳ್ಳುದು. 'ವಾಚ್ಯ'ವು ವಿಧಿಯನ್ನು ಹೇಳುತ್ತಿದ್ದರೆ 'ಪ್ರತೀಯಮಾನ'ವಾದ ವಸ್ತುವು ಪ್ರತಿಷೇಧವನ್ನು ಸೂಚಿಸುತ್ತದೆ. ಉದಾಹರಣೆ:—

"ಭಮ ಧಮ್ಮಿಅ ವೀಸತ್ಥೋ ಸೋ ಸುಣಓ ಅಜ್ಜ ಮಾರಿಓ ದೇಣ ।
ಗೋಲಾಣಈಕಚ್ಛಕುಡಙ್ಗವಾಸಿಣಾ ದರಿಅಸೀಹೇಣ ॥"

ನಡೆದಾಡು ಧಾರ್ಮಿಕನೆ ನಿಶ್ಶಂಕೆಯಿಂದಿನ್ನು,
ಹತಮಾದುದಾ ನೀಚ ಶುನಕ ತಾನಿಂದು ।

ಗೋದಾವರೀನದಿಯ ತಡಿಯೆಡೆಯಲಿಡಿಕಿರಿದ
ಹೊದರೊಳಿಹ ದೃಪ್ತಕೇಸರಿಯ ಕೈಯಿಂದ ||

ಕೆಲವೆಡೆಗಳಲ್ಲಿ 'ವಾಚ್ಯವು' ನಿಷೇಧರೂಪವಾಗಿದ್ದರೂ 'ಪ್ರತೀಯಮಾನ' ವಸ್ತುವು ವಿಧಿರೂಪವಾಗಿರುತ್ತದೆ. ಉದಾಹರಣೆ :—

"ಅತ್ತಾ ಏತ್ಥ ಣಿಮಜ್ಜಇ ಏತ್ಥ ಅಹಂ ದಿಅಸಅಂ ಪಲೋಏಹಿ |
ಮಾ ಪಹಿಅ ರತ್ತಿಅಂಧಅ ಸೆಜ್ಜಾಏ ಮಹಣ ಮಜ್ಜಹಿಸಿ ||"

ಅತ್ತೆಯಿಲ್ಲಿ ನಿದ್ದೆಗೈವಳಿಲ್ಲಿ ನಾನು ಎಂಬುದನ್ನು
ಹಗಲಿನಲ್ಲೆ ಕಣ್ಣು ತುಂಬ ಪಾಂಥ! ನೋಡಿರು |
ಕತ್ತಲಲ್ಲಿ ಕುರುಡ ನೀನು, ನಮ್ಮ ಸೆಜ್ಜೆಗಳಲಿ ಬಂದು
ಬಿದ್ದುಬಿಡುವ ಭಂಗ ನಿನಗೆ ಬಾರದಂತಿರು ||

ಕೆಲವೆಡೆಗಳಲ್ಲಿ 'ವಾಚ್ಯ'ವು ಸ್ಪಷ್ಟವಾಗಿ ವಿಧಿಯನ್ನು ಹೇಳುತ್ತಿದ್ದರೂ 'ಪ್ರತೀಯಮಾನ'ವು ವಿಧಿ-ನಿಷೇಧಗಳಲ್ಲೊಂದನ್ನೂ ಹೇಳುವುದಿಲ್ಲ. ಉದಾಹರಣೆ :—

"ವಚ್ಚ ಮಹ ವ್ವಿಅ ಏಕ್ಕೇಇ ಹೋನ್ತು ಣೀಸಾಸರೋಇಅವ್ವಾಇಂ |
ಮಾ ತುಜ್ಝ ವಿ ತೀಅ ವಿಣಾ ದಕ್ಖಿಣ್ಣಹಅಸ್ಸ ಜಾಅನ್ತು ||"

ಹೋಗು! ನನಗೊಬ್ಬಳಿಗೆ ನಿಟ್ಟುಸಿರು ಕಣ್ಣೀರು
ಸಾಕು ; ಬೇಡವು, ಬೇಡ! ನಿನಗವಳನಗಲಿ |
ದಾಕ್ಷಿಣ್ಯಬಂಧನಕೆ ಮೈಯೊಡ್ಡಿ ಸುಮ್ಮನೆಯೆ
ವಿರಹವೇದನೆ ಮತ್ತೆ ನಿನಗಾಗದಿರಲಿ ||

ಇನ್ನೂ ಕೆಲವು ವೇಳೆ 'ವಾಚ್ಯ'ವು ಪ್ರತಿಷೇಧಬೋಧಕವಾಗಿದ್ದರೂ 'ಪ್ರತೀಯಮಾನ'ವು ವಿಧಿ-ನಿಷೇಧಗಳಲ್ಲೊಂದನ್ನೂ ಹೇಳುವುದಿಲ್ಲ. ಉದಾಹರಣೆ :—

"ದೇ ಆ ಪಸಿಅ ಣಿವತ್ತಸು ಮುಹಸಸಿಜೋಹ್ಣಾವಿಲುತ್ತತಮಣಿವಹೇ |
ಅಹಿಸಾರಿಆಣಁ ವಿಗ್ಘಂ ಕರೋಸಿ ಅಣ್ಣಾಣಁ ವಿ ಹಆಸೇ ||"

ಬೇಡುವೆನು, ಮುಳಿಸ ಬಿಡು, ನೀನೊಡನೆ ಹಿಂದಿರುಗು,
ಮುಖಶಶಿಯ ಜೊನ್ನದಿಂ ಸಂತಮಸನಾಶಿನಿಯೆ!
ವಿಘ್ನವನೆ ಮಾಡುತಿಹೆ ನಿನ್ನಂತೆ ಹೊರಟಿರುವ
ಅಭಿಸಾರಿಕಾಜನಕೆ ಭಗ್ನಾಶೆ! ಯರಿಯದೆಯೆ ||

ಮತ್ತೂ ಕೆಲವೆಡೆಗಳಲ್ಲಿ 'ವಾಚ್ಯ'ಕ್ಕಿಂತಲೂ ಅತ್ಯಂತ ಭಿನ್ನವಾದ ವಿಷಯ ವ್ಯಾಪ್ತಿಯೇ 'ಪ್ರತೀಯಮಾನ'ಕ್ಕಿರುತ್ತದೆ. ಉದಾಹರಣೆ:—

"ಕಸ್ಸ ವಾ ಣ ಹೋಇ ರೋಸೋ ದಠ್ಠೂಣ ಪಿಆಏ ಸವ್ವಣಂ ಅಹರಂ |
ಸಭಮರಪಉಮಗ್ಘಾಇಣಿ ವಾರಿಅವಾಮೇ ಸಹಸ್ಸು ಏಹ್ಣಿಂ ||"

ನಲ್ಲೆಯ ಚೆಂದುಟಿ ಗಾಸಿಯದಾಗಿರೆ
ನೋಡುವ ಕಾಂತಗೆ ಕಡುಮುಳಿಸು
ಬಾರದೆ ಪೋಪುದೆ? ಯಾರೇನೆನ್ನಲಿ
ಒಂದನು ಒಮ್ಮೆಯು ಕೇಳದೆಯೆ,
ದುಂಬಿಯು ಕೂಡಿದ ಪೂವನೆ ಮೂಸಿದೆ;
ಫಲವನ್ನೀಗಲೆ ನೀ ಸಹಿಸು.

'ವಾಚ್ಯ'ಕ್ಕಿಂತಲೂ ಬೇರೆಯಾದ ಇಂತಹ 'ಪ್ರತೀಯಮಾನ ವಸ್ತು'ವಿನ ಪ್ರಕಾರಗಳು ಇನ್ನೂ ಎಷ್ಟೋ ಇವೆ. ನಾವು ಮೇಲೆ ತೋರಿಸಿರುವುದು ಕೇವಲ ಅವುಗಳ ದಿಕ್ಸೂಚನೆ.

ಹೀಗೆಯೇ 'ಪ್ರತೀಯಮಾನ'ದ ಎರಡನೆಯ ಪ್ರಭೇದವಾದ 'ಅಲಂಕಾರ'ಗಳೂ 'ವಾಚ್ಯ'ಕ್ಕಿಂತ ಭಿನ್ನವೆಂಬುದನ್ನು ಮುಂದೆ ವಿಸ್ತಾರವಾಗಿ ತೋರಿಸಲಾಗುತ್ತದೆ.

ಮೂರನೆಯ ಪ್ರಭೇದವಾದ ರಸಾದಿಗಳೂ ಕೂಡ 'ವಾಚ್ಯ'-ಸಾಮರ್ಥ್ಯದ ಫಲವಾಗಿ ಗಮ್ಯವಾಗುವುವೇ ಹೊರತು, ನೇರವಾಗಿ ಶಬ್ದವ್ಯಾಪಾರಕ್ಕೆ ವಿಷಯಗಳೇ ಅಲ್ಲವಾದ ಕಾರಣ, ಅವು 'ವಾಚ್ಯ'ಕ್ಕಿಂತ ಸರ್ವಥಾ ಬೇರೆಯೇ. ಒಂದುವೇಳೆ ರಸಾದಿಗಳು 'ವಾಚ್ಯ'ವೆಂದು ಯಾರಾದರೂ ಹೇಳಬೇಕಾದರೆ, ಅವು (ಬೇರೆ ಬೇರೆ ರಸಗಳನ್ನು ಬೋಧಿಸುವ) 'ಶೃಂಗಾರ' ಮುಂತಾದ ಹೆಸರುಗಳಿಂದ ವಾಚ್ಯವೆನ್ನಬೇಕು; ಇಲ್ಲವೆ 'ವಿಭಾವ'—ಮೊದಲಾದ ರಸಸಾಮಗ್ರಿಗಳ ಪ್ರತಿಪಾದನೆಯಿಂದ ಮಾತ್ರ ರಸಪ್ರತೀತಿಯುಂಟಾಗುವುದೆಂದೊಪ್ಪಬೇಕು. ಮೊದಲನೆಯ ಪಕ್ಷದ ಪ್ರಕಾರ ಎಲ್ಲೆಲ್ಲಿ ರಸದ ಹೆಸರುಗಳು ಇರುವುದಿಲ್ಲವೋ, ಅಲ್ಲೆಲ್ಲ ರಸಪ್ರತೀತಿಯಿಲ್ಲದೆಯೇ ಹೋಗಬೇಕಾದೀತು. ವಸ್ತುತಃ ಎಲ್ಲೆಡೆಗಳಲ್ಲಿಯೂ ರಸಗಳು ಸ್ವಶಬ್ದಗಳಿಂದಲೇ ಪ್ರತೀತವಾಗುವುದಿಲ್ಲ. ಸ್ವಶಬ್ದಗಳ ಪ್ರಯೋಗವು ಕಂಡುಬರುವಂತಹ ವಿರಲ ಸಂದರ್ಭಗಳಲ್ಲಿಯೂ ಕೂಡ, ರಸಾದಿಗಳ ಪ್ರತೀತಿಯು ಕೆಲವು ನಿರ್ದಿಷ್ಟ ವಿಭಾವಾದಿಗಳ ಪ್ರತಿಪಾದನದ ಮೂಲಕ ಉಂಟಾಗುತ್ತಿರುವುದೇ ಹೊರತು, ಸ್ವಶಬ್ದಗಳ ಮಹಿಮೆಯಿಂದಲ್ಲ. ಬೇರೆ ರೀತಿಯಾಗಿ ಆಗಲೇ ನಿಷ್ಪನ್ನವಾಗಿರುವ ರಸವನ್ನು ಆ ಶಬ್ದಗಳು ಹೆಸರಿಸುತ್ತವೆಯೇ

ಹೊರತು, ರಸಪ್ರತೀತಿಯೇ ಆ ಶಬ್ದಗಳಿಂದ ಹುಟ್ಟಿತೆನ್ನಲಾಗದು. ಮಿಕ್ಕ ಸ್ಥಳಗಳಲ್ಲಿಯೂ ಸಹ ವಿಭಾವಾದಿಪ್ರತಿಪಾದನೆಯಿಲ್ಲದಿರುವಾಗ, ಸ್ವಶಬ್ದಗಳ ಪ್ರಯೋಗವಿದ್ದರೂ ಕೂಡ ರಸಪ್ರತೀತಿಯುಂಟಾಗುವುದಿಲ್ಲ. 'ಶೃಂಗಾರ' ಮೊದಲಾದ ಶಬ್ದಗಳು ಇರುವ ಮಾತ್ರದಿಂದಲೇ, ವಿಭಾವಾದಿವರ್ಣನೆಯಿಲ್ಲದ ಕಾವ್ಯದಲ್ಲಿ, ರಸವಿದೆಯೆಂಬ ಅನುಭವ ಸ್ವಲ್ಪವೂ ಬರುವುದಿಲ್ಲ. ಹೀಗೆ ತಮ್ಮ ಹೆಸರುಗಳನ್ನು ಸಾಕ್ಷಾತ್ತಾಗಿ ಹೇಳಿರಲಿ, ಹೇಳದೆ ಇರಲಿ, ವಿಶಿಷ್ಟವಾದ ವಿಭಾವಾದಿಗಳ ಮೂಲಕವೇ ರಸಾದಿಗಳ ಪ್ರತೀತಿಯುಂಟಾಗುವುದರಿಂದಲೂ, ಕೇವಲ ಹೆಸರು ಹೇಳಿದ ಮಾತ್ರದಿಂದಲೇ ರಸಾದಿಗಳು ಪ್ರತೀತವಾಗದೆ ಇರುವುದರಿಂದಲೂ—ಅನ್ವಯವ್ಯತಿರೇಕಗಳೆರಡರಿಂದಲೂ ಎಂದಭಿಪ್ರಾಯ—ರಸಾದಿಗಳು ವಾಚ್ಯಸಾಮರ್ಥ್ಯದ ಫಲವಾಗಿ ಪ್ರಕಟವಾಗುವುವೇ ಹೊರತು ಹೇಗೂ ವಾಚ್ಯವಾಗಲಾರವು. ಆದುದರಿಂದಲೇ 'ಪ್ರತೀಯಮಾನ'ದ ಮೂರನೆಯ ಪ್ರಭೇದವೂ 'ವಾಚ್ಯ'ಕ್ಕಿಂತ ಬೇರೆಯೆಂಬುದು ಸ್ಥಿರಪಟ್ಟಂತಾಯಿತು.

'ವಾಚ್ಯ'ದ ಜತೆಯಲ್ಲಿಯೇ ರಸಾದಿಗಳ ಪ್ರತೀತಿಯು ಉಂಟಾಗುವುದೆಂದು ಮುಂದೆ ವಿವರಿಸಿದೆ—

ಕಾರಿಕೆ

ಕಾವ್ಯಸ್ಯಾತ್ಮಾ ಸ ಏವಾರ್ಥಸ್ತಥಾ ಚಾದಿಕವೇಃ ಪುರಾ ॥
ಕ್ರೌಂಚದ್ವಂದ್ವವಿಯೋಗೋತ್ಥಃ ಶೋಕಃ ಶ್ಲೋಕತ್ವಮಾಗತಃ ॥ ೫ ॥

ಆ ಅರ್ಥವೇ ಕಾವ್ಯದ ಆತ್ಮ. ಆದ್ದರಿಂದಲೇ ಹಿಂದೆ ಕ್ರೌಂಚಮಿಥುನದ ವಿಯೋಗವನ್ನು ನೋಡಿ ಆದಿಕವಿಯಲ್ಲಿ ಜನಿಸಿದ ಶೋಕವು ಶ್ಲೋಕತ್ವವನ್ನು ಪಡೆಯಿತು.

ವೃತ್ತಿ

ಇಲ್ಲಿ 'ಕಾವ್ಯ'ವೆಂದರೆ ವಿವಿಧ ಮತ್ತು ವಿಶಿಷ್ಟವಾದ ಅರ್ಥ, ರಚನೆ—ಇವುಗಳಿಂದ ಸುಂದರವಾದ ಕವಿಕರ್ಮವೆಂದರ್ಥ. ಅಂತಹ ಕಾವ್ಯದಲ್ಲಿ ಆ ಅಂಶವೇ ಸಾರಭೂತವಾದುದು, ಬೇಡನಿಂದ ಸಹಚರಿಯು ಹತಳಾಗಲು, ವಿರಹವ್ಯಥೆಯನ್ನು ತಾಳಲಾರದೆ ಕೂಗಿಡುತ್ತಿದ್ದ ಕ್ರೌಂಚಪಕ್ಷಿಯ ಆಕ್ರಂದವನ್ನು ಕೇಳಿ, ಆದಿಕವಿಗುಂಟಾದ ಶೋಕವೇ ಹೀಗೆ ಶ್ಲೋಕರೂಪವಾಗಿ ಪರಿಣಾಮಗೊಂಡಿತು.

'ಶೋಕ'ವು 'ಕರುಣ'ರಸಕ್ಕೆ 'ಸ್ಥಾಯಿಭಾವ.' ಅದು ವ್ಯಂಗ್ಯವೇ ಹೊರತು 'ವಾಚ್ಯ'ವಲ್ಲವೆಂದು ಈ ಮೊದಲೇ ಹೇಳಿದೆ.

'ಪ್ರತೀಯಮಾನ'ದ ಪ್ರಭೇದಗಳು ಇನ್ನೂ ಬೇರೆ ಇರುವುವಾದರೂ ರಸ, ಭಾವಗಳೇ ಅತ್ಯಂತ ಪ್ರಧಾನವಾದುದರಿಂದ, ಮಿಕ್ಕ ಪ್ರಭೇದಗಳಿಗೂ ಇವೇ 'ಉಪಲಕ್ಷಣ' ಅಥವಾ ಸೂಚಕವೆಂದು ತಿಳಿಯಬೇಕು.

ಕಾರಿಕೆ

ಸರಸ್ವತೀ ಸ್ವಾದು ತದರ್ಥವಸ್ತು
ನಿಃಷ್ಯನ್ದಮಾನಾ ಮಹತಾಂ ಕವೀನಾಮ್ ।
ಅಲೋಕಸಾಮಾನ್ಯಮಭಿವ್ಯನಕ್ತಿ
ಪರಿಸ್ಫುರನ್ತಂ ಪ್ರತಿಭಾವಿಶೇಷಮ್ ॥ ೬ ॥

ಆ ಮಧುರವಾದ ಅರ್ಥವಸ್ತುವನ್ನು ಸ್ರವಿಸುವ ಮಹಾಕವಿಗಳ ವಾಣಿಯೇ ಅವರ ಲೋಕೋತ್ತರ ಮತ್ತು ಉಜ್ವಲವಾದ ಪ್ರತಿಭಾವಿಶೇಷವನ್ನು ತಿಳಿಯಪಡಿಸುತ್ತದೆ.

ವೃತ್ತಿ

ಆ ಅರ್ಥವಸ್ತು ಎಂದರೆ ವಸ್ತುತತ್ವವನ್ನು ಸೂಸುವ ಮಹಾಕವಿಗಳ ವಾಣಿಯೇ ಲೋಕಾತೀತವಾದ ಮತ್ತು ಸಂತತವೂ ಸ್ಫುರಿಸುತ್ತಿರುವ ಅವರ ಪ್ರತಿಭೆಯ ವೈಶಿಷ್ಟ್ಯದ ಕುರುಹಾಗಿರುವುದು. ಆದುದರಿಂದಲೇ ಈ ಪ್ರಪಂಚದಲ್ಲಿ ಎಷ್ಟೋ ಬಗೆಯ ಕವಿಗಳ ಪರಂಪರೆಯು ಬಂದು ಹೋಗುತ್ತಿರುವುದಾದರೂ ಕಾಳಿದಾಸನೇ ಮೊದಲಾದ ಮಹಾಕವಿಗಳನ್ನು ಮಾತ್ರ ಎರಡುಮೂರು ಅಥವಾ ಐದಾರೆಂದು ಎಣಿಸುತ್ತೇವೆ.

ಪ್ರತೀಯಮಾನಾರ್ಥದ ಅಸ್ತಿತ್ವವನ್ನು ಸಾಧಿಸಲು ಇನ್ನೂ ಒಂದು ಆಧಾರವುಂಟು. ಅದೇನೆಂದರೆ :—

ಕಾರಿಕೆ

ಶಬ್ದಾರ್ಥಶಾಸನಜ್ಞಾನಮಾತ್ರೇಣೈವ ನ ವೇದ್ಯತೇ ।
ವೇದ್ಯತೇ ಸ ತು ಕಾವ್ಯಾರ್ಥತತ್ವಜ್ಞೈರೇವ ಕೇವಲಮ್ ॥ ೭ ॥

ಕೇವಲ ವ್ಯಾಕರಣಗಳ ಮತ್ತು ನಿಘಂಟುಗಳ ಸಹಾಯದಿಂದಲೇ ಅದು ಯಾರಿಗೂ ತಿಳಿಯುವುದಿಲ್ಲ ; ಕಾವ್ಯಾರ್ಥದ ತತ್ವಜ್ಞರಿಗೆ ಮಾತ್ರ ಅದರ ಅರಿವಾಗುತ್ತದೆ.

ವೃತ್ತಿ

ಕೇವಲ ವ್ಯಾಕರಣಗಳ ಮತ್ತು ಕೋಶಗಳ ಜ್ಞಾನಮಾತ್ರದಿಂದಲೇ ಆ ಅರ್ಥವು ಪೂರ್ಣವಾಗಿ ತಿಳಿಯುವುದಿಲ್ಲ ; ಕಾವ್ಯಾರ್ಥದ ತತ್ವವನ್ನು ಬಲ್ಲವರು

ಮಾತ್ರ ಅದನ್ನು ಗ್ರಹಿಸಲು ಸಮರ್ಥರೆಂಬುದೇ ಕಾರಣ. ಒಂದುವೇಳೆ ಆ ಅರ್ಥವು 'ವಾಚ್ಯ'ವೇ ಆಗಿದ್ದಪಕ್ಷಕ್ಕೆ ವಾಚ್ಯವಾದ 'ಅರ್ಥ'ದ ಮತ್ತು ವಾಚಕವಾದ 'ಶಬ್ದ'ದ ಪರಿಜ್ಞಾನದಿಂದಲೇ ಅದರ ಗ್ರಹಣವೂ ಸಾಧ್ಯವಾಗಬೇಕಾಗಿದ್ದಿತು. ಆದರೆ ಶಬ್ದಾರ್ಥಗಳ ಸ್ವರೂಪವನ್ನು ವಿವರಿಸುವ ಶಾಸ್ತ್ರಗಳಲ್ಲಿ ಮಾತ್ರ ಅನುಭವವುಳ್ಳವರಿಗೆ, ಕಾವ್ಯದ ತತ್ತ್ವಾರ್ಥವನ್ನು ಆಸ್ವಾದಿಸುವ ಪ್ರವೃತ್ತಿಯಿಲ್ಲದೆ ಹೋದಾಗ, ಆ ಅರ್ಥವು ಅಗೋಚರವಾಗಿಯೇ ಉಳಿಯುತ್ತದೆ. 'ಸ್ವರ', 'ಶ್ರುತಿ' ಮುಂತಾದ ಸಂಗೀತಶಾಸ್ತ್ರದ ಪ್ರಕ್ರಿಯೆಗಳನ್ನು ಮಾತ್ರ ಓದಿಕೊಂಡವರಿಗೆ ಹಾಡುಗಳ ವ್ಯಂಗ್ಯಾಂಶವು ತಿಳಿಯದೆಯೇ ಹೋಗುವಂತೆ (ಕಾವ್ಯದಲ್ಲಾದರೂ ಪ್ರತೀಯಮಾನಾಂಶವು ವಿಶಿಷ್ಟವಾದ ರಸಿಕತೆಯಿಲ್ಲದೆ ತಿಳಿಯಲಾರದು).

'ವಾಚ್ಯ'ಕ್ಕಿಂತಲೂ ಬೇರೆಯಾದ 'ವ್ಯಂಗ್ಯ'ದ ಅಸ್ತಿತ್ವವನ್ನು ಇಲ್ಲಿಯವರೆಗೆ ನಿರೂಪಿಸಲಾಯಿತು. ಮುಂದಿನ ಕಾರಿಕೆಯಲ್ಲಿ ಅದಕ್ಕೇ ಪ್ರಾಧಾನ್ಯ ಎಂದು ಪ್ರತಿಪಾದಿಸಲಾಗುತ್ತದೆ:—

ಕಾರಿಕೆ

ಸೋಽರ್ಥಸ್ತದ್ವ್ಯಕ್ತಿಸಾಮರ್ಥ್ಯಯೋಗೀ ಶಬ್ದಶ್ಚ ಕಶ್ಚನ।
ಯತ್ನತಃ ಪ್ರತ್ಯಭಿಜ್ಞೇಯೌ ತೌ ಶಬ್ದಾರ್ಥೌ ಮಹಾಕವೇಃ ॥ ೮ ॥

ಆ ಅರ್ಥ ಮತ್ತು ಅದನ್ನು ವ್ಯಕ್ತಗೊಳಿಸಬಲ್ಲ ಅಪೂರ್ವ ಶಬ್ದ—ಈ ಶಬ್ದಾರ್ಥಗಳನ್ನು ಮಹಾಕವಿಯು ಪ್ರಯತ್ನಪಟ್ಟು ಗುರುತಿಸಬೇಕು.

ವೃತ್ತಿ

ಆ ವ್ಯಂಗ್ಯಾರ್ಥ ಮತ್ತು ಅದನ್ನು ಪ್ರಕಾಶಿಸಲು ಸಾಮರ್ಥ್ಯವನ್ನುಳ್ಳ ಎಲ್ಲೋ ಒಂದೊಂದು ಶಬ್ದ—ಎಂದರೆ ಎಲ್ಲ ಶಬ್ದಗಳೂ ಅಲ್ಲ—ಇವು ಮಾತ್ರ ಮಹಾಕವಿಯ ಪ್ರಯತ್ನಪೂರ್ವಕವಾದ ಅನುಸಂಧಾನಕ್ಕೆ ಯೋಗ್ಯವಾದ ಶಬ್ದಾರ್ಥಗಳು. ಸರಿಯಾಗಿ ಪ್ರಯೋಗಿಸಿದ ವ್ಯಂಗ್ಯಾರ್ಥ, ವ್ಯಂಜಕಶಬ್ದಗಳಿಂದಲೇ ಮಹಾಕವಿಗಳಿಗೆ ಮಹಾಕವಿತ್ವವು ಸಿದ್ಧಿಸುವುದೇ ಹೊರತು, ಶಬ್ದ, ಅರ್ಥ, ಸಂಘಟನೆಗಳಿಂದ ಅದು ಸಿದ್ಧಿಸಲಾರದು.

ಹೀಗೆ ವ್ಯಂಗ್ಯವ್ಯಂಜಕಗಳು ಪ್ರಾಧಾನ್ಯವನ್ನು ಪಡೆದರೂ, ಕವಿಗಳು ವಾಚ್ಯವಾಚಕಗಳನ್ನೇ ಮುಂಚೆ ಪರಿಗ್ರಹಿಸುವುದು ಯುಕ್ತವೇ ಆಗಿದೆಯೆಂದು ಹೇಳುತ್ತಾನೆ:—

ಕಾರಿಕೆ

ಆಲೋಕಾರ್ಥೀ ಯಥಾ ದೀಪಶಿಖಾಯಾಂ ಯತ್ನವಾನ್ ಜನಃ।
ತದುಪಾಯತಯಾ ತದ್ವದರ್ಥೇ ವಾಚ್ಯೇ ತದಾದೃತಃ ॥ ೯ ॥

ನೋಡಬಯಸುವವನು (ಬೆಳಕು ಬೇಕಾದವನು?) ಅದಕ್ಕೆ ಸಾಧಕವಾದ ದೀವಿಗೆಯನ್ನು ದೊರಕಿಸಲು ಪ್ರಯತ್ನಪಡುವಂತೆಯೇ, ವ್ಯಂಗ್ಯಾರ್ಥದಲ್ಲಿ ಆದರವುಳ್ಳವನಾದರೂ ವಾಚ್ಯಾರ್ಥವನ್ನು ಸಂಪಾದಿಸಲು (ಮೊದಲು) ಪ್ರಯತ್ನಿಸುತ್ತಾನೆ.

ವೃತ್ತಿ

ಒಬ್ಬನ ಮುಖ್ಯ ಉದ್ದೇಶವು ಪದಾರ್ಥಗಳನ್ನು ನೋಡಬೇಕೆಂಬುದೇ ಆಗಿದ್ದರೂ ಅವನ ಮೊದಲ ಪ್ರಯತ್ನವು ತನ್ನ ಉದ್ದೇಶಕ್ಕೆ ಸಾಧಕವಾದ ದೀವಿಗೆಯೊಂದನ್ನು ದೊರಕಿಸಿಕೊಳ್ಳುವುದರ ಕಡೆಗೇ ಇರುವಂತೆ—ಏಕೆಂದರೆ ದೀವಿಗೆ ದೊರೆತಲ್ಲದೆ ನೋಡುವುದೇ ಅಸಂಭವ—ವ್ಯಂಗ್ಯಾರ್ಥದಲ್ಲಿ ಆದರವುಳ್ಳವನಾದರೂ ವಾಚ್ಯಾರ್ಥದ ಸಂಪಾದನೆಗೇ ಮೊದಲು ಪ್ರಯತ್ನಿಸುತ್ತಾನೆ. ಹೀಗೆ ಹೇಳಿದುದರಿಂದ ಕಾವ್ಯರಚನೆಗೆ ಹೊರಟ ಕವಿಯ 'ವ್ಯಾಪಾರ' ಅಥವಾ ಪ್ರಯತ್ನವೆಲ್ಲ ವ್ಯಂಗ್ಯಾರ್ಥ ಸಾಧನೆಯ ಕಡೆಗೇ ಇರುವುದೆಂದು ತೋರಿಸಿದಂತಾಯಿತು.

ಸಹೃದಯನಿಗೂ ಇದೇ ಬಗೆಯ ಪ್ರಯತ್ನವಿರುವುದನ್ನು ತೋರಿಸಲು ಹೇಳುತ್ತಾನೆ :—

ಕಾರಿಕೆ

ಯಥಾ ಪದಾರ್ಥದ್ವಾರೇಣ ವಾಕ್ಯಾರ್ಥಃ ಸಂಪ್ರತೀಯತೇ।
ವಾಚ್ಯಾರ್ಥಪೂರ್ವಿಕಾ ತದ್ವತ್ ಪ್ರತಿಪತ್ತಸ್ಯ ವಸ್ತುನಃ ॥ ೧೦ ॥

ಪದಗಳ ಅರ್ಥದ ಮುಖಾಂತರವಾಗಿಯೇ ವಾಕ್ಯದ ಅರ್ಥವು ಹೇಗೆ ಗೊತ್ತಾಗುವುದೋ ಹಾಗೆ, ವಾಚ್ಯಾರ್ಥದ ಮೂಲಕವಾಗಿಯೇ ಆ ವ್ಯಂಗ್ಯಾರ್ಥವು ಗೊತ್ತಾಗುತ್ತದೆ.

ವೃತ್ತಿ

ಪದಗಳ ಅರ್ಥಜ್ಞಾನದ ಮೂಲಕವೇ ವಾಕ್ಯದ ತಾತ್ಪರ್ಯವು ಹೇಗೆ ತಿಳಿಯುವುದೋ, ಹಾಗೆಯೇ ವಾಚ್ಯವಾದ ಅರ್ಥದ ಅನುಸಂಧಾನಪೂರ್ವಕವಾಗಿಯೇ ವ್ಯಂಗ್ಯಾರ್ಥವು ಪ್ರತೀತವಾಗುವುದೆಂದು ಅಭಿಪ್ರಾಯ.

ಹೀಗೆ ವ್ಯಂಗ್ಯಾರ್ಥದ ಪ್ರತೀತಿಯು ವಾಚ್ಯಾರ್ಥಪ್ರತೀತಿಪೂರ್ವಕವೇ ಆಗಿದ್ದರೂ ಕೂಡ ವ್ಯಂಗ್ಯಾರ್ಥದ ಪ್ರಾಧಾನ್ಯವು ಸ್ವಲ್ಪವೂ ಕಡಿಮೆಯಾಗುವುದಿಲ್ಲ ವೆಂದು ಕೆಳಗಿನ ಕಾರಿಕೆಯಲ್ಲಿ ತೋರಿಸುತ್ತಾನೆ:—

ಕಾರಿಕೆ

ಸ್ವಸಾಮರ್ಥ್ಯವಶೇನೈವ ವಾಕ್ಯಾರ್ಥಂ ಪ್ರತಿಪಾದಯನ್ ।
ಯಥಾ ವ್ಯಾಪಾರನಿಷ್ಪತ್ತೌ ಪದಾರ್ಥೋ ನ ವಿಭಾವ್ಯತೇ ॥ ೧೧ ॥

ಪದಗಳ ಅರ್ಥವು ತನ್ನ ಸಾಮರ್ಥ್ಯದ ಪ್ರಭಾವದಿಂದಲೇ ವಾಕ್ಯಾರ್ಥವನ್ನು ಬೋಧಿಸುತ್ತಿದ್ದರೂ, (ವಾಕ್ಯಾರ್ಥಬೋಧನವೆಂಬ) ತನ್ನ ಕೆಲಸವು ನೆರವೇರಿದ ಕಾಲದಲ್ಲಿ ಹೇಗೆ ತಾನು ಬೇರೆಯಾಗಿ ಗೋಚರವಾಗುವುದಿಲ್ಲವೋ—

ವೃತ್ತಿ

ತನ್ನ ಸಾಮರ್ಥ್ಯಬಲದಿಂದಲೇ ಪದಗಳ ಅರ್ಥವು ವಾಕ್ಯದ ಅರ್ಥವನ್ನು ಪ್ರಕಾಶಿಸುವುದಾದರೂ ವಾಕ್ಯದ ತಾತ್ಪರ್ಯವು ಪ್ರತೀತವಾಗುವ ಕಾಲದಲ್ಲಿ ಪದಗಳ ಅರ್ಥವು ಹೇಗೆ ಬೇರೆಯಾಗಿ ಲಕ್ಷ್ಯಕ್ಕೆ ಬರುವುದಿಲ್ಲವೋ—

ಕಾರಿಕೆ

ತದ್ವತ್ ಸಚೇತಸಾಂ ಸೋಽರ್ಥೋ ವಾಚ್ಯಾರ್ಥವಿಮುಖಾತ್ಮನಾಮ್ ।
ಬುದ್ಧೌ ತತ್ತ್ವಾರ್ಥದರ್ಶಿನ್ಯಾಂ ಝಟಿತ್ಯೇವಾವಭಾಸತೇ ॥ ೧೨ ॥

ಹಾಗೆಯೇ ವಾಚ್ಯಾರ್ಥದಲ್ಲಿ ವಿಮುಖರಾದ ಸಹೃದಯರ ತತ್ತ್ವಾರ್ಥದರ್ಶಿಯಾದ ಬುದ್ಧಿಯಲ್ಲಿ, ಆ ವ್ಯಂಗ್ಯಾರ್ಥವು ಥಟ್ಟನೆ ಹೊಳೆಯುತ್ತದೆ.

ವೃತ್ತಿ

ಈ ರೀತಿ ವಾಚ್ಯಕ್ಕಿಂತ ಬೇರೆಯಾದ ವ್ಯಂಗ್ಯಾರ್ಥದ ಅಸ್ತಿತ್ವವನ್ನು ಇಲ್ಲಿಯ ವರೆಗೂ ಸಾಧಿಸಲಾಯಿತು; ಈಗ ಪ್ರಕೃತಕ್ಕೆ ಅದನ್ನು ಉಪಯೋಗಿಸಿಕೊಂಡು ಮುಂದಿನ ಕಾರಿಕೆಯನ್ನು ಹೇಳುತ್ತಾನೆ:—

ಕಾರಿಕೆ

ಯತ್ರಾರ್ಥಃ ಶಬ್ದೋ ವಾ
ತಮರ್ಥಮುಪಸರ್ಜನೀಕೃತಸ್ವಾರ್ಥೌ ।
ವ್ಯಙ್ಕ್ತಃ ಕಾವ್ಯವಿಶೇಷಃ
ಸ ಧ್ವನಿರಿತಿ ಸೂರಿಭಿಃ ಕಥಿತಃ ॥ ೧೩ ॥

ಎಲ್ಲಿ 'ಅರ್ಥ'ವಾಗಲಿ ಅಥವಾ 'ಶಬ್ದ'ವಾಗಲಿ, (ಅನುಕ್ರಮವಾಗಿ) ತನ್ನನ್ನು ಅಥವಾ ತನ್ನ ಅರ್ಥವನ್ನು ಅಪ್ರಧಾನವಾಗಿಸಿಕೊಂಡು, ಆ ವ್ಯಂಗ್ಯಾರ್ಥವನ್ನು ಸೂಚಿಸುವುವೋ—ಆ ಕಾವ್ಯವಿಶೇಷವನ್ನು ಪಂಡಿತರು 'ಧ್ವನಿ'ಯೆಂದು ಕರೆದಿದ್ದಾರೆ.

ವೃತ್ತಿ

ಎಲ್ಲಿ 'ಅರ್ಥ' ಎಂದರೆ ವಿಶಿಷ್ಟವಾದ ವಾಚ್ಯವೂ 'ಶಬ್ದ' ಎಂದರೆ ವಿಶಿಷ್ಟವಾದ ವಾಚಕವೂ ಆ ವ್ಯಂಗ್ಯಾರ್ಥವನ್ನು ಸೂಚಿಸುತ್ತಿರುವುವೋ ಆ ಕಾವ್ಯವಿಶೇಷವೇ ಧ್ವನಿಯೆಂದರ್ಥ. ಇದರಿಂದ ವಾಚ್ಯಾಂಶದ ಸೌಂದರ್ಯಕ್ಕೆ ಕಾರಣಗಳಾದ 'ಉಪಮಾ'ದಿಗಳಿಗೂ, ವಾಚಕಾಂಶದ ಸೌಂದರ್ಯಕ್ಕೆ ಕಾರಣಗಳಾದ 'ಅನುಪ್ರಾಸಾ'ದಿಗಳಿಗೂ, 'ಧ್ವನಿ'ಗೂ, ಸ್ಪಷ್ಟವಾದ ವಿಷಯಭೇದವಿದೆಯೆಂದು ತೋರಿಸಿದಂತಾಯಿತು.

"ಧ್ವನಿಯು ಇಲ್ಲವೇ ಇಲ್ಲ; ಸುಪ್ರಸಿದ್ಧವಾದ ಸಿದ್ಧಾಂತಗಳಿಗೆಲ್ಲ ವಿರುದ್ಧವಾದ ಒಂದು ಕಾವ್ಯಪ್ರಕಾರಕ್ಕೆ ಕಾವ್ಯತ್ವವೇ ಇಲ್ಲವಾಗುತ್ತದೆ,"[1] ಎಂದು ಹಿಂದೆ ಪೂರ್ವಪಕ್ಷದವರು ಹೇಳಿರುವುದು ಅಯುಕ್ತ. ಏಕೆಂದರೆ, 'ಧ್ವನಿ'ಯು ಲಕ್ಷಣಕಾರರಿಗೆ ಮಾತ್ರ ಅಪರಿಚಿತವೆನ್ನಬಹುದೇ ಹೊರತು, ಲಕ್ಷ್ಯವನ್ನು ಪರೀಕ್ಷೆಮಾಡಿದರೆ ಅದೊಂದೇ ಸಹೃದಯರ ಹೃದಯಾಹ್ಲಾದಕಾರಿಯಾದ ಕಾವ್ಯತತ್ವವೆನ್ನುವುದು ಸ್ಪಷ್ಟವಾಗುತ್ತದೆ. ಮಿಕ್ಕುದೆಲ್ಲವೂ 'ಚಿತ್ರ'ವೆಂದೇ ಮುಂದೆ ಪ್ರತಿಪಾದಿಸಲಾಗುತ್ತದೆ.

"ಕಾವ್ಯದಲ್ಲಿ ಸೌಂದರ್ಯಕಾರಣವೆಂದು ಅದನ್ನು (='ಧ್ವನಿ'ಯನ್ನು) ಒಪ್ಪಿದೊಡನೆಯೇ, ಎಂದಿನಿಂದಲೂ ಪ್ರಸಿದ್ಧವಾಗಿರುವ ಅಲಂಕಾರವೇ ಮೊದಲಾದ ಪ್ರಕಾರಗಳಲ್ಲಿ ಅದು ಅಂತರ್ಭಾವ ಹೊಂದಿಬಿಡುತ್ತದೆ"[2] ಎಂಬ ಪೂರ್ವಪಕ್ಷವೂ ಕೂಡ ಸರಿಯಾದುದಲ್ಲ. ಏಕೆಂದರೆ, ವಾಚ್ಯ-ವಾಚಕಗಳ ಸ್ವರೂಪವನ್ನು ಮಾತ್ರ ಕುರಿತು ಹೊರಟ ಪ್ರಸ್ಥಾನದಲ್ಲಿ, ವ್ಯಂಗ್ಯ-ವ್ಯಂಜಕಗಳನ್ನು ಆಶ್ರಯಿಸಿ ವ್ಯವಸ್ಥೆ ಮಾಡಲ್ಪಟ್ಟ 'ಧ್ವನಿ'ಯ ಅಂತರ್ಭಾವವನ್ನು ಹೇಳುವುದೆಂತು? ವಾಚ್ಯ-ವಾಚಕಗಳ ಸೌಂದರ್ಯಕ್ಕೆ ಕಾರಣವಾದುವುಗಳೆಲ್ಲವೂ ಆ 'ಧ್ವನಿ'ಗೆ ಅಂಗಗಳೆಂದು ಭಾವಿಸಬೇಕು; ಅವು ಮತ್ತು 'ಧ್ವನಿ'ಯು ಎಂದಿಗೂ ಒಂದೇ ಆಗಲಾರವು. ಈ ಅಂಶವನ್ನು ಮುಂದೆಯೂ ವಿವರಿಸಲಾಗುತ್ತದೆ.

---

[1] ಮೊದಲನೆಯ ಕಾರಿಕೆಯ ವೃತ್ತಿಭಾಗ ೨ನ್ನು ನೋಡಿ. ಪುಟ, ೧೮

[2] ಮೊದಲನೆಯ ಕಾರಿಕೆಯ ವೃತ್ತಿಭಾಗ ೩ನ್ನು ನೋಡಿ. ಪುಟ, ೧೮

ಇದನ್ನು ಸಂಗ್ರಹಿಸುವ ಪರಿಕರಶ್ಲೋಕವೇ ಕೆಳಗಿನದು :—

ವ್ಯಂಗ್ಯವ್ಯಂಜಕಸಂಬಂಧನಿಬಂಧನತಯಾ ಧ್ವನೇಃ ।
ವಾಚ್ಯವಾಚಕಚಾರುತ್ವಹೇತ್ವನ್ತಃಪಾತಿತಾ ಕುತಃ ॥

ವ್ಯಂಗ್ಯ-ವ್ಯಂಜಕವೆಂಬ ಸಂಬಂಧವೊಂದನ್ನೇ ಆಧಾರವಾಗಿಟ್ಟುಕೊಂಡು ಹೊರಡುವ ಧ್ವನಿಗೆ ವಾಚ್ಯ-ವಾಚಕಗಳ ಸೌಂದರ್ಯಕಾರಣಗಳಲ್ಲಿ ಅಂತರ್ಭಾವ ವೆಲ್ಲಿಂದ ಬಂದೀತು ?

ಪೂರ್ವಪಕ್ಷಕಾರನು ಹೀಗೂ ವಾದಿಸಬಹುದು :—'ಎಲ್ಲಿ ಪ್ರತೀಯಮಾನ ವಾದ ಅರ್ಥವು ವಿಶದವಾಗಿ ಪ್ರತೀತವಾಗುವುದಿಲ್ಲವೋ, ಆ ಲಕ್ಷ್ಯಗಳು ಮಾತ್ರ 'ಧ್ವನಿ'ಗೆ ವಿಷಯಗಳಲ್ಲವೆಂದು ಬೇಕಾದರೆ ಒಪ್ಪೋಣ. ಆದರೆ ಎಲ್ಲಿ ಪ್ರತೀಯ ಮಾನಾರ್ಥದ ಪ್ರತೀತಿಯಿದೆಯೋ—ಉದಾಹರಣೆಗೆ 'ಸಮಾಸೋಕ್ತಿ', 'ಆಕ್ಷೇಪ', 'ಅನುಕ್ತ-ನಿಮಿತ್ತ-ವಿಶೇಷೋಕ್ತಿ', 'ಪರ್ಯಾಯೋಕ್ತ', 'ಅಪಹ್ನುತಿ', 'ದೀಪಕ', 'ಸಂಕರ',—ಮೊದಲಾದ ಅಲಂಕಾರಗಳು—ಅಲ್ಲೆಲ್ಲ 'ಧ್ವನಿ'ಯು ಅಂತರ್ಭಾವ ಹೊಂದಿಯೇ ಹೊಂದುವುದು' ಎಂದು. ಇಂತಹ ಪೂರ್ವಪಕ್ಷಗಳನ್ನು ನಿರಾಕರಿಸು ವುದಕ್ಕಾಗಿಯೇ ಕಾರಿಕೆಯಲ್ಲಿ 'ತನ್ನನ್ನು ಅಥವಾ ತನ್ನ ಅರ್ಥವನ್ನು ಅಪ್ರಧಾನ ವಾಗಿಸಿಕೊಂಡು' ಎಂಬ ವಿಶೇಷಣವನ್ನು ಸೇರಿಸಿದೆ. ವಾಚ್ಯಾರ್ಥವು ತನ್ನನ್ನೇ ಅಪ್ರಧಾನ ಮಾಡಿಕೊಳ್ಳುತ್ತದೆ; ಶಬ್ದವು ತನ್ನ ವಾಚ್ಯಾರ್ಥವನ್ನು ಅಪ್ರಧಾನ ಮಾಡಿಕೊಳ್ಳುತ್ತದೆ. ಇಂತಹ ಶಬ್ದವಾಗಲಿ ಅಥವಾ ಅರ್ಥವಾಗಲಿ ಎಲ್ಲಿ ಹೊಸ ದೊಂದರ್ಥವನ್ನು ಅಭಿವ್ಯಕ್ತಗೊಳಿಸುವುವೋ ಅದು 'ಧ್ವನಿ'ಯೆಂದು ಅಭಿಪ್ರಾಯ. ಹೀಗಿರುವ 'ಧ್ವನಿ'ಯು ಮೇಲೆ ಹೇಳಲಾದ ಅಲಂಕಾರಗಳಲ್ಲಿ ಅಂತರ್ಭಾವ ಹೊಂದುವುದೆಂತು? ವ್ಯಂಗ್ಯವು ಪ್ರಧಾನವಾಗಿದ್ದರಲ್ಲವೆ ನಾವು 'ಧ್ವನಿ'ಯೆನ್ನುವುದು? 'ಸಮಾಸೋಕ್ತಿ' ಮೊದಲಾದುವುಗಳಲ್ಲಿ ಹೀಗಿಲ್ಲ (ಎಂದರೆ ವ್ಯಂಗ್ಯವು ಪ್ರಧಾನ ವಾಗಿಲ್ಲ). 'ಸಮಾಸೋಕ್ತಿ'ಯಲ್ಲಾದರೋ—

"ಉಪೋಢರಾಗೇಣ ವಿಲೋಲತಾರಕಂ
ತಥಾ ಗೃಹೀತಂ ಶಶಿನಾ ನಿಶಾಮುಖಂ ।
ಯಥಾ ಸಮಸ್ತಂ ತಿಮಿರಾಂಶುಕಂ ತಯಾ
ಪುರೋಽಪಿ ರಾಗಾದ್ಗಲಿತಂ ನ ಲಕ್ಷಿತಂ ॥"

ರಜನೀ ಮುಖಮಂ ಚಂದ್ರಂ
ನಿಜರಾಗಂ ಪೆರ್ಚೆ ಪಿಡಿಯೆ ಚಲತಾರಕಮಂ ।

ಭುಜದಿಂ ತಿಮಿರಾಂಶುಕಮದು
ಜಗುಳ್ದಿರೆಯುಂ ಮುಂದೆ, ರಜನಿ ಕಾಣದೆವೋದಳ್ ||

ಎಂಬಿವೇ ಮೊದಲಾದ ಲಕ್ಷ್ಯಗಳನ್ನು ನೋಡಿದರೆ ವ್ಯಂಗ್ಯದಿಂದ ಪೋಷಿತವಾದ ವಾಚ್ಯವೇ ಪ್ರಾಧಾನ್ಯವನ್ನು ಹೊಂದಿರುವುದು ಗೊತ್ತಾಗುತ್ತದೆ. ನಾಯಿಕಾ-ನಾಯಕರ ವ್ಯವಹಾರವನ್ನು ಆರೋಪಿಸಲಾಗಿರುವ ರಜನೀ-ಚಂದ್ರರು ಇಲ್ಲಿ ಕವಿಯ ವರ್ಣನೆಗೆ ಪ್ರಸ್ತುತರಾಗಿರುವುದೇ ಆದಕ್ಕೆ ಕಾರಣ.

'ಆಕ್ಷೇಪ' ವೆಂಬ ಅಲಂಕಾರದಲ್ಲಿಯೂ ಕೂಡ ವ್ಯಂಗ್ಯವಿಶೇಷವನ್ನು ಸೂಚಿಸುವಂತಹ 'ವಾಚ್ಯ'ವೇ ರಮಣೀಯವಾದುದು. ನಿಷೇಧಾಭಾಸದ ವಾಚ್ಯವಾದ ಸಾಮರ್ಥ್ಯದಿಂದ ಪ್ರತೀತವಾಗುವ ವಾಕ್ಯಾರ್ಥವೇ ಪ್ರಧಾನವಾದುದು. ಅಲ್ಲಿ ವಿಶೇಷವನ್ನು ಸೂಚಿಸುವ ಇಚ್ಛೆಯಿಂದಲೇ ನಿಷೇಧರೂಪವಾದ ಅಂಶವು ಶಬ್ದತಃ ಹೇಳಲ್ಪಟ್ಟಿರುತ್ತದೆ; ಮತ್ತು ಅದೇ ಮುಖ್ಯವಾದ ಕಾವ್ಯಶರೀರ. ಗೌಣವಾಗಿ ವ್ಯಂಗ್ಯವಿಶೇಷವು ಸೂಚಿತವಾಗುತ್ತದೆ, ಅಷ್ಟೆ. ವಾಚ್ಯ-ವ್ಯಂಗ್ಯಗಳಲ್ಲಿ ಯಾವುದು ಪ್ರಧಾನ, ಯಾವುದು ಅಪ್ರಧಾನ ಎಂದು ನಿರ್ಣಯಿಸಬೇಕಾದರೆ ಯಾವುದರಲ್ಲಿ ರಮಣೀಯತೆಯ ಉತ್ಕರ್ಷವು ಹೆಚ್ಚಾಗಿದೆ ಎಂಬುದನ್ನೇ ಮೊದಲು ನಿರ್ಧರಿಸಬೇಕು. ಉದಾಹರಣೆ :—

"ಅನುರಾಗವತೀ ಸಂಧ್ಯಾ ದಿವಸಸ್ತತ್ಪುರಸ್ಸರಃ |
ಅಹೋ ದೈವಗತಿಃ ಕೀದೃಕ್ತಥಾಪಿ ನ ಸಮಾಗಮಃ ||"

ಸಂಧ್ಯೆಯನುರಾಗವತಿ ದಿವಸ ತಾ ಮುಂಬರಿವ |
ದೈವಗತಿಯೆಂತಿಹುದು ! ಸಂಗಮವೆ ಅವರ್ಗಿಲ್ಲ ||

ಇಲ್ಲಿ ವ್ಯಂಗ್ಯಪ್ರತೀತಿಯಿರುವುದಾದರೂ ರಮಣೀಯತೆಯ ಉತ್ಕರ್ಷವು ವಾಚ್ಯದಲ್ಲೇ ಆದಕಾರಣ, ವಾಚ್ಯವೇ ಪ್ರಧಾನವೆಂಬುದು ಕವಿಯ ವಿವಕ್ಷೆ. 'ದೀಪಕ', 'ಅಪಹ್ನುತಿ' ಮೊದಲಾದ ಅಲಂಕಾರಗಳಲ್ಲಿ 'ಉಪಮೆ'ಯು ವ್ಯಂಗ್ಯವಾಗಿ ಪ್ರತೀತವಾಗುತ್ತಿದ್ದರೂ ಸಹ, ದೀಪಕಾದಿಗಳಿಗೇ ಪ್ರಾಧಾನ್ಯ-ವಿವಕ್ಷೆಯಿರುವುದರಿಂದ 'ಉಪಮೆ'ಯೆಂಬ ಹೆಸರು ಹೇಗೆ ಸಲ್ಲುವುದಿಲ್ಲವೋ, ಹಾಗೆಯೇ ಇಲ್ಲಿಯೂ ಎಂದರಿಯಬೇಕು.

'ಅನುಕ್ತ-ನಿಮಿತ್ತ-ವಿಶೇಷೋಕ್ತಿ' ಯಲ್ಲಿಯೂ—

"ಆಹೂತೋಽಪಿ ಸಹಾಯೈರೇಮೀತ್ಯುಕ್ತ್ವಾ ವಿಮುಕ್ತನಿದ್ರೋಽಪಿ |
ಗಂತುಮನಾ ಅಪಿ ಪಥಿಕಃ ಸಂಕೋಚಂ ನೈವ ಶಿಥಿಲಯತಿ ||"

ಜತೆಯವರು ಕರೆದರೂ, 'ಇದೊ ಬಂದೆ' ಯೆಂದರೂ,
ನಿದ್ದೆಯಿಂದೆಚ್ಚರಿಕೆಯಾಗಿದ್ದರೂ।
ಹೋಗಬೇಕೆಂಬಿಚ್ಛೆಯಿದ್ದರೂ ಪಯಣಿಗನು
ಸಂಕೋಚವನು ಮಾತ್ರ ಶಿಥಿಲಗೊಳಿಸ॥

ಮುಂತಾದ ಲಕ್ಷ್ಯಗಳಲ್ಲಿ ಪ್ರಕರಣದ ಸಾಮರ್ಥ್ಯದಿಂದ ವ್ಯಂಗ್ಯದ ಪ್ರತೀತಿ ಮಾತ್ರ ಉಂಟಾಗುತ್ತದೆಯೇ ಹೊರತು ಅದರಿಂದ ಯಾವ ರಮಣೀಯತಾತಿಶಯವೂ ತೋರುವುದಿಲ್ಲವಾದುದರಿಂದ ಅದಕ್ಕೆ ಪ್ರಾಧಾನ್ಯವಿಲ್ಲ.

'ಪರ್ಯಾಯೋಕ್ತ'ದಲ್ಲಿಯೂ ವ್ಯಂಗ್ಯವೇ ಪ್ರಧಾನವಾಗಿರುವ ಪಕ್ಷಕ್ಕೆ ಅದೇ (ಬೇಕಾದರೆ) 'ಧ್ವನಿ'ಯಲ್ಲಿ ಅಂತರ್ಭಾವವನ್ನು ಹೊಂದಲಿ; ಆದರೆ 'ಧ್ವನಿ'ಯು ಮಾತ್ರ 'ಪರ್ಯಾಯೋಕ್ತ'ದಲ್ಲಿ ಅಂತರ್ಭಾವ ಹೊಂದಲಾರದು. ಏಕೆಂದರೆ ಧ್ವನಿಯ ವ್ಯಾಪ್ತಿಯು ಬಹಳ ವಿಶಾಲವಾದುದೆಂದೂ ಅದರ ಸ್ಥಾನವು ಬಹಳ ಮುಖ್ಯವಾದು ದೆಂದೂ ಮುಂದೆ ವಿವರಿಸುತ್ತೇವೆ. ವಸ್ತುತಃ **ಭಾಮಹನು** ಉದಾಹರಿಸುವಂತಹ 'ಪರ್ಯಾಯೋಕ್ತ'ಗಳಲ್ಲಿ ವ್ಯಂಗ್ಯಕ್ಕೆ ಮಾತ್ರವೇ ಪ್ರಾಧಾನ್ಯವಿಲ್ಲ; ವಾಚ್ಯವನ್ನು ಅಪ್ರಧಾನವೆಂದು ಅಲ್ಲಿ ಪರಿಗಣಿಸದಿರುವುದೇ ಇದಕ್ಕೆ ಕಾರಣ.

'ಅಪಹ್ನುತಿ', 'ದೀಪಕ'—ಇವೆರಡು ಅಲಂಕಾರಗಳಲ್ಲಾದರೋ ವಾಚ್ಯವೇ ಪ್ರಧಾನವಾದುದು. ವ್ಯಂಗ್ಯವು ಅನುಯಾಯಿ ಮಾತ್ರ, ಎಂಬ ವಿಷಯವು ಪ್ರಸಿದ್ಧ ವಾಗಿಯೇ ಇದೆ.

ಸಂಕರಾಲಂಕಾರದಲ್ಲಿ ಕೂಡ ಒಂದು ಅಲಂಕಾರವು ಇನ್ನೊಂದು ಅಲಂಕಾರದ ಛಾಯೆಗೆ ಕಾರಣವಾಗಿರುವ ಕಾಲದಲ್ಲಿ, ವ್ಯಂಗ್ಯವೇ ಪ್ರಧಾನವೆಂದು ವಿವಕ್ಷಿತವಾಗಿಲ್ಲದ ಕಾರಣ 'ಧ್ವನಿ'ಯಿರುವ ಸಂಭವವಿಲ್ಲ. ಒಟ್ಟಿಗೆ ಎರಡು ಅಲಂಕಾರಗಳು ಬರುವ ಕಡೆಗಳಲ್ಲಾದರೋ ವಾಚ್ಯ-ವ್ಯಂಗ್ಯಗಳಿಗೆ ಸಮಪ್ರಾಧಾ ನ್ಯವನ್ನೊಪ್ಪಬೇಕು. ಒಂದು ಪಕ್ಷ ವಾಚ್ಯವು ಅಪ್ರಧಾನವೇ ಆಗಿಬಿಟ್ಟು, ವ್ಯಂಗ್ಯವೇ ಅಲ್ಲಿ ಪ್ರಧಾನವಾಗಿರುವುದಾದರೆ, ಆಗ ಅದೂ ಧ್ವನಿಯೊಳಗೆ ಬೇಕಾದರೆ ಸೇರಲಿ. ಆದರೆ ಅದನ್ನೇ ಧ್ವನಿಯೆಂದು ಹೇಳುವುದು ಶಕ್ಯವಿಲ್ಲ. 'ಪರ್ಯಾಯೋಕ್ತ'ವನ್ನು ವಿವೇಚಿಸಿದಾಗ ಹೇಳಲಾದ ಯುಕ್ತಿಯನ್ನೇ ಇಲ್ಲಿಯೂ ಅಂಗೀಕರಿಸಬೇಕು. ಅಷ್ಟೇ ಅಲ್ಲದೆ 'ಸಂಕರಾಲಂಕಾರ' ಎನ್ನುವಾಗ 'ಅಲಂಕಾರಗಳು ಒಂದರೊಡನೊಂದು ಬೆರೆತು ಹೋಗುವಿಕೆ' ಎಂದು ನಾವು ಹೇಳುವ ಸಂಕರವೆಂಬ ಮಾತೇ 'ಧ್ವನಿ'ಯ ಕಲ್ಪನೆಯನ್ನು ಕೂಡ ತಪ್ಪಾಗಿಸುತ್ತದೆ.

'ಅಪ್ರಸ್ತುತ ಪ್ರಶಂಸೆ'ಯಲ್ಲಿ 'ಸಾಮಾನ್ಯವಿಶೇಷ ಭಾವ'ದಿಂದಲೋ ಇಲ್ಲವೆ 'ಕಾರ್ಯಕಾರಣಭಾವ'ದಿಂದಲೋ ವಾಚ್ಯವಾದ ಅಪ್ರಸ್ತುತವಿಷಯಕ್ಕೂ ಪ್ರತೀಯಮಾನವಾದ ಪ್ರಸ್ತುತವಿಷಯಕ್ಕೂ ಎಲ್ಲಿ ಸಂಬಂಧವಿರುವುದೋ ಅಲ್ಲಿ ವಾಚ್ಯವ್ಯಂಗ್ಯಗಳಿಗೆ ಸಮವಾದ ಪ್ರಾಧಾನ್ಯವನ್ನೇ ಒಪ್ಪಬೇಕು. ಹೇಗೆಂದರೆ—ವಾಚ್ಯವಾದ ಸಾಮಾನ್ಯವು ಅಪ್ರಸ್ತುತವಾಗಿದ್ದು, ಅದು ವ್ಯಂಗ್ಯವಾದ ಮತ್ತು ಪ್ರಸ್ತುತವಾದ ವಿಶೇಷದೊಡನೆ ಸಂಬಂಧ ಹೊಂದಿದ್ದರೆ, ವಿಶೇಷದ ಪ್ರತೀತಿಗೇ ಪ್ರಾಧಾನ್ಯ ಬಂದರೂ ಕೂಡ, ಸಾಮಾನ್ಯಕ್ಕೂ ವಿಶೇಷಕ್ಕೂ 'ಅವಿನಾಭಾವ' ಅಥವಾ ಅತ್ಯಂತ ಸನ್ನಿಕೃಷ್ಟವಾದ ಸಂಬಂಧವಿರುವುದರಿಂದ, ವಿಶೇಷದ ಪ್ರಾಧಾನ್ಯವೇ ಸಾಮಾನ್ಯಕ್ಕೂ ಬರುತ್ತದೆ. ಹಾಗೆಯೇ ಸಾಮಾನ್ಯವೇ ಪ್ರಸ್ತುತವಾಗಿ ಮುಖ್ಯತಃ ಪ್ರಧಾನವೆನಿಸುತ್ತಿರುವಾಗಲೂ, ಅಪ್ರಸ್ತುತವಾದ ವಿಶೇಷವು ಸಹ ಸಾಮಾನ್ಯನಿಷ್ಠವೇ ಆದುದರಿಂದ—ಏಕೆಂದರೆ ಸಕಲ ವಿಶೇಷಗಳೂ ಮೂಲತಃ ಸಾಮಾನ್ಯದಲ್ಲಿ ಅಂತರ್ಭಾವ ಹೊಂದುತ್ತವೆ—ಅದಕ್ಕೂ ಪ್ರಾಧಾನ್ಯವು ಉಂಟೇ ಉಂಟು. ಕಾರ್ಯಕಾರಣ ಭಾವವನ್ನೊಳಗೊಂಡ ಅಪ್ರಸ್ತುತ ಪ್ರಶಂಸೆಯಲ್ಲಿಯೂ ಇದೇ ನ್ಯಾಯವೇ ಅನ್ವಯಿಸುತ್ತದೆ. ಪ್ರಸ್ತುತ, ಅಪ್ರಸ್ತುತ, ಇವುಗಳ ಸಂಬಂಧವು ಕೇವಲ 'ಸಾರೂಪ್ಯ' ವಾಗಿರುವಂತಹ ಅಪ್ರಸ್ತುತ ಪ್ರಶಂಸೆಯಲ್ಲಿಯೂ ಸಹ ಅಪ್ರಸ್ತುತವಾದ ಸರೂಪ ವಾಚ್ಯಾರ್ಥಕ್ಕೆ ಎಲ್ಲಿ ಪ್ರಾಧಾನ್ಯದ ವಿವಕ್ಷೆಯಿಲ್ಲವೋ ಅವುಗಳಿಗೆಲ್ಲ ಧ್ವನಿಯಲ್ಲೇ ಅಂತರ್ಭಾವವನ್ನು ಹೇಳುತ್ತೇವೆ. ಹಾಗಿಲ್ಲದೆ ಪ್ರಾಧಾನ್ಯದ ವಿವಕ್ಷೆಯಿದ್ದರೆ ಅವು ಅಲಂಕಾರದ ವರ್ಗದಲ್ಲೇ ಸೇರುತ್ತವೆ. ಈ ಅಂಶಗಳನ್ನೆಲ್ಲ ಮುಂದಿನ ಕಾರಿಕೆಗಳಲ್ಲಿ ಸಂಗ್ರಹಿಸಿದೆ.

ಕಾರಿಕೆ

ವ್ಯಂಗ್ಯಸ್ಯ ಯತ್ರಾಪ್ರಾಧಾನ್ಯಂ ವಾಚ್ಯಮಾತ್ರಾನುಯಾಯಿನಃ।
ಸಮಾಸೋಕ್ತ್ಯಾದಯಸ್ತತ್ರ ವಾಚ್ಯಾಲಂಕೃತಯಃ ಸ್ಫುಟಾಃ ॥ ೧೪ ॥ *

ಕೇವಲ 'ವಾಚ್ಯ'ವನ್ನೇ ಹಿಂಬಾಲಿಸುತ್ತಾ ಎಲ್ಲಿ 'ವ್ಯಂಗ್ಯವು ಅಪ್ರಧಾನ ವಾಗಿರುವುದೋ, ಅಲ್ಲೆಲ್ಲ 'ಸಮಾಸೋಕ್ತಿ'ಯೇ ಮೊದಲಾದ ಅರ್ಥಾಲಂಕಾರಗಳು ಸ್ಫುಟವಾಗಿರುತ್ತವೆ.

---

* ಮುದ್ರಿತ ಪುಸ್ತಕಗಳನ್ನನುಸರಿಸಿ ಇದು ಮತ್ತು ಮುಂದಿನ ಎರಡು ಶ್ಲೋಕಗಳನ್ನು 'ಕಾರಿಕೆ'ಗಳೆಂದಿದ್ದೇವೆ. ಇವು 'ವೃತ್ತಿ'ಯಲ್ಲಿ ಬಂದ ಚರ್ಚೆಯನ್ನು ಸಂಗ್ರಹಿಸಿ ಹೇಳುವ 'ಪರಿಕರ ಶ್ಲೋಕ'ಗಳು ಮಾತ್ರ ಎಂದು ನಮ್ಮ ಅಭಿಪ್ರಾಯ.

ಕಾರಿಕೆ

ವ್ಯಂಗ್ಯಸ್ಯ ಪ್ರತಿಭಾಮಾತ್ರೇ ವಾಚ್ಯಾರ್ಥಾನುಗಮೇಽಪಿ ವಾ।
ನ ಧ್ವನಿರ್ಯತ್ರ ವಾ ತಸ್ಯ ಪ್ರಾಧಾನ್ಯಂ ನ ಪ್ರತೀಯತೇ ॥ ೧೫ ॥

ವ್ಯಂಗ್ಯವು ಹಾಗೂ ಹೀಗೂ ಅಲ್ಪ ಸ್ವಲ್ಪ ಭಾಸವಾಗುತ್ತಿರುವ ಅಥವಾ ವ್ಯಂಗ್ಯವು ವಾಚ್ಯವನ್ನೇ ಅನುಸರಿಸುತ್ತಿರುವ ಸ್ಥಲದಲ್ಲೆಲ್ಲ 'ಧ್ವನಿ'ಯಿರುವುದಿಲ್ಲ; ಮತ್ತು ವ್ಯಂಗ್ಯದ ಪ್ರಾಧಾನ್ಯವು ಎಲ್ಲೆಲ್ಲಿ ಸ್ಪಷ್ಟವಾಗಿರುವುದಿಲ್ಲವೋ ಅಲ್ಲಿಯೂ 'ಧ್ವನಿ'ಯಿರುವುದಿಲ್ಲ.

ಕಾರಿಕೆ

ತತ್ಪರಾವೇವ ಶಬ್ದಾರ್ಥೌ ಯತ್ರ ವ್ಯಂಗ್ಯಂ ಪ್ರತಿ ಸ್ಥಿತೌ।
ಧ್ವನೇಃ ಸ ಏವ ವಿಷಯೋ ಮಂತವ್ಯಃ ಸಂಕರೋಜ್ಝಿತಃ ॥ ೧೬ ॥

ಎಲ್ಲಿ ಶಬ್ದಾರ್ಥಗಳೆರಡೂ ವ್ಯಂಗ್ಯದ ಸಾಧನೆಯೊಂದಕ್ಕಾಗಿಯೇ ನಿಂತಿರುವುವೋ, ಅದನ್ನು ಮಾತ್ರ, ಧ್ವನಿಗೆ ವಿಷಯವೆಂದು ತಿಳಿಯಬೇಕು. ಉಳಿದ ಅಲಂಕಾರಗಳೊಡನೆ ಅದನ್ನು ಕಲಸಿಕೊಳ್ಳುವ ಹಾಗೆಯೇ ಇಲ್ಲ.

ವೃತ್ತಿ

ಆದುದರಿಂದ ಧ್ವನಿಯು ಹೇಗೂ ಅನ್ಯತ್ರ ಅಂತರ್ಭಾವ ಹೊಂದುವುದಿಲ್ಲ. ಇದಲ್ಲದೆ "**ಅಂಗಿ**[1]"ಯಾದ 'ಕಾವ್ಯವಿಶೇಷ'ವೇ ಧ್ವನಿಯೆಂದು ಹೇಳಿರುವುದೂ ಕೂಡ ಅದು ಹಾಗೆ ಅಂತರ್ಭಾವ ಹೊಂದುವುದಿಲ್ಲವೆನ್ನುವುದಕ್ಕೆ ಇನ್ನೊಂದು ಕಾರಣ. 'ಅಲಂಕಾರ'ಗಳು, 'ಗುಣ'ಗಳು, ಮತ್ತು 'ವೃತ್ತಿ'ಗಳು—ಎಲ್ಲವೂ ಅದರ 'ಅಂಗ'ಗಳೆಂದು ಮುಂದೆ ಪ್ರತಿಪಾದಿಸಲಾಗುತ್ತದೆ. ಯಾರೂ ಪ್ರತ್ಯೇಕವಾಗಿ ಒಂದು ಅವಯವವನ್ನು ತೆಗೆದುಕೊಂಡು 'ಇದೇ ಅವಯವಿ' (ಅಥವಾ ಪೂರ್ಣ ವಸ್ತು)ಯೆಂದು ಹೇಳುವುದಿಲ್ಲ. (ಪ್ರತ್ಯೇಕವಾಗಿ ತೆಗೆದುಕೊಳ್ಳುವುದರ ಬದಲು) ಅವಯವಗಳ ಸಮುದಾಯವನ್ನೇ ಪರಿಗಣಿಸಿದರೂ, ಅವಯವವು ಅವಯವಿಯ ಅಂಗವೆನಿಸೀತೇ ಹೊರತು ಎಂದಿಗೂ ಅವಯವಿಯೇ ಆಗಿಬಿಡಲಾರದು. ಒಂದು ವೇಳೆ ಹಾಗೆ ಆಗುವುದಾದರೂ, ಧ್ವನಿಯ ಮಟ್ಟಿಗೆ ಹೇಳುವುದಾದರೆ, ಅದರ ವ್ಯಾಪ್ತಿಯು ಬಹಳ ದೊಡ್ಡದಾದುದರಿಂದ, ಅವಯವಗಳಾದ ಅಲಂಕಾರವೇ ಮೊದಲಾದುವುಗಳಲ್ಲಿ ಮಾತ್ರ ಅದು ಎಂದೂ ಅಡಕವಾಗಲಾರದು.

[1] **ಅಂಗಿ**='ಅಂಗ ಅಥವಾ ಅವಯವಗಳನ್ನುಳ್ಳುದು', 'ಪ್ರಧಾನ'ವೆಂದು ಭಾವ.

"ಪಂಡಿತರು . . . ಕರೆದಿದ್ದಾರೆ" ಎಂದು ಕಾರಿಕೆ[1]ಯಲ್ಲಿ ಹೇಳಿರುವುದರಿಂದ 'ವಿದ್ವಾಂಸರು ಮೊದಲು ಕೊಟ್ಟ ಹೆಸರೇ ಇದು (='ಧ್ವನಿ'), ಹೇಗೋ ಬಂದುದಲ್ಲ' ಎಂಬಂಶವು ಸ್ಪಷ್ಟವಾಗುತ್ತದೆ. ವಿದ್ವಾಂಸರಲ್ಲಿ ಮೊದಲು ಬರತಕ್ಕವರೆಂದರೆ ವೈಯಾಕರಣರೇ; ಏಕೆಂದರೆ ಸಕಲ ವಿದ್ಯೆಗಳಿಗೂ ವ್ಯಾಕರಣವೇ ಮೂಲವಾದುದು. ಕಿವಿಗೆ ಕೇಳಬರುವ ವರ್ಣಗಳನ್ನು ಅವರು 'ಧ್ವನಿ'ಯೆಂದು ವ್ಯವಹರಿಸುತ್ತಾರೆ. ಹಾಗೆಯೇ ಅವರ ಸಿದ್ಧಾಂತದ ಅನುಯಾಯಿಗಳಾದ ಮಿಕ್ಕ ವಿದ್ವಾಂಸರು ಎಂದರೆ ಕಾವ್ಯತತ್ವಜ್ಞರು—ವ್ಯಂಜಕತ್ವವು ಇಲ್ಲಿಯೂ ಸಮಾನವಾಗಿದ್ದುದರಿಂದ—ವಾಚ್ಯ-ವಾಚಕಗಳ ಸಾಹಿತ್ಯವಿದ್ದು ಕಾವ್ಯವೆಂಬ ಹೆಸರಿಗೆ ಪಾತ್ರವಾಗುವ ಶಬ್ದಾತ್ಮವನ್ನು ಕೂಡ 'ಧ್ವನಿ'ಯೆಂದು ಹೇಳಿರುವರು. ಹಾಗೆಯೇ ಮುಂದೆ ಇನ್ನೂ ಹೇಳಲಿರುವ ಧ್ವನಿಯ ಎಲ್ಲ ಭೇದ-ಪ್ರಭೇದಗಳನ್ನೂ ಒಟ್ಟುಗೂಡಿಸಿದರೆ, ಅದರ ವಿಷಯ-ವ್ಯಾಪ್ತಿಯು ಎಷ್ಟು ವಿಶಾಲವಾದುದೆಂಬುದೂ, ಅದರ ನಿರೂಪಣೆಯು ಕೆಲವು ಪ್ರಸಿದ್ಧವಾದ ಅಲಂಕಾರ-ವಿಶೇಷಗಳ ಪ್ರತಿಪಾದನೆಗೆ ಯಾವ ಬಗೆಯಿಂದಲೂ ಸಮಾನವಲ್ಲವೆಂಬುದೂ, ಮನದಟ್ಟಾಗುವುದು. ಆದುದರಿಂದ 'ಧ್ವನಿ'ಯಲ್ಲಿಯೇ ಮಗ್ನವಾದ ಮನಸ್ಸುಳ್ಳವರು ಅದರ ವಿಷಯದಲ್ಲಿ ಸಡಗರವನ್ನು ತೋರಿಸುವುದು ಯುಕ್ತವೇ ಆಗಿದೆ. ಅಸೂಯೆಯಿಂದ ಯಾರೂ ಅವರ ಬುದ್ಧಿ ಕೆಟ್ಟಿರುವುದೆಂದು ಹೇಳಬೇಕಾಗಿಲ್ಲ.

ಹೀಗೆ ಇಲ್ಲಿಯವರೆಗೂ ಧ್ವನಿಯ ಅಭಾವವಾದಿಗಳಿಗೆ ಉತ್ತರ ಕೊಟ್ಟಂತಾಯಿತು.

'ಧ್ವನಿ'ಯು ಇದ್ದೇ ಇದೆ. ಸ್ಥೂಲವಾಗಿ ಅದನ್ನು ವಿಂಗಡಿಸಿದರೆ 'ಅವಿವಕ್ಷಿತ-ವಾಚ್ಯ' ಮತ್ತು 'ವಿವಕ್ಷಿತಾನ್ಯಪರ-ವಾಚ್ಯ' ಎಂಬ ಎರಡು ವಿಧಗಳಾಗುತ್ತವೆ. ಅವುಗಳಲ್ಲಿ ಮೊದಲನೆಯದಕ್ಕೆ ಉದಾಹರಣೆ:—

"ಸುವರ್ಣಪುಷ್ಪಾಂ ಪೃಥಿವೀಂ ಚಿನ್ವಂತಿ ಪುರುಷಾಸ್ತ್ರಯಃ |
ಶೂರಶ್ಚ ಕೃತವಿದ್ಯಶ್ಚ ಯಶ್ಚ ಜಾನಾತಿ ಸೇವಿತುಂ ||"

ಕಾಂಚನವ ಕುಸುಮಿಸುವ ಧರೆಯನ್ನೆ ಪಡೆಯುವರು
ಬುವಿಯೊಳಗೆ ಮೂದೆರನ ಪುರುಷರವರು |
ಶೂರತನವುಳ್ಳವನು, ವಿದ್ಯೆ ಸಾಧಿಸಿದವನು,
ಸೇವೆಮಾಡುವ ಹದನನರಿತಾತನು ||

---

[1] ಕಾರಿಕೆ—೧೩.

ಎರಡನೆಯದಕ್ಕೆ ಉದಾಹರಣೆ :—

"ಶಿಖರಿಣಿ ಕ್ವನು ನಾಮ ಕಿಯಚ್ಚಿರಂ
ಕಿಮಭಿಧಾನಮಸಾವಕರೋತ್ತಪಃ |
ತರುಣಿ ಯೇನ ತವಾಧರಪಾಟಲಂ
ದಶತಿ ಬಿಂಬಫಲಂ ಶುಕಶಾವಕಃ ||"

ಆವ ಬೆಟ್ಟದ ಮೇಲೆ, ಎನಿತು ಕಾಲದವರೆಗೆ,
ಆವ ಹೆಸರಿನ ತಪವನಾಚರಿಸಿತೋ |
ಅಲ್ಲದಿರೆ ಗಿಳಿಮರಿಯು ತರುಣಿ! ನಿನ್ನಯ ತುಟಿಯ
ಕೆಂಪಿಡಿದ ತೊಂಡೆಯನು ಕಡಿವುದೆಂತು? ||

II. 'ಭಕ್ತಿ'ಯೇ ಧ್ವನಿಯೆಂದು ಹೇಳಲಾದ ಪೂರ್ವಪಕ್ಷಕ್ಕೆ ಕೆಳಗಿನ ಕಾರಿಕೆಯಲ್ಲಿ ಸಮಾಧಾನ ಹೇಳುತ್ತಾನೆ :—

ಕಾರಿಕೆ

ಭಕ್ತ್ಯಾ ಬಿಭರ್ತಿ ನೈಕತ್ವಂ ರೂಪಭೇದಾದಯಂ ಧ್ವನಿಃ |

'ಧ್ವನಿ'ಯ ಸ್ವರೂಪಕ್ಕೂ 'ಭಕ್ತಿ'ಯ ಸ್ವರೂಪಕ್ಕೂ ಎಷ್ಟೋ ವ್ಯತ್ಯಾಸವಿರುವುದರಿಂದ 'ಧ್ವನಿ'ಯೂ 'ಭಕ್ತಿ'ಯೂ ಒಂದೇ ಆಗುವುದಿಲ್ಲ.

ವೃತ್ತಿ

ಎರಡರ ಸ್ವರೂಪವೂ ಬೇರೆ ಬೇರೆಯಾದುದರಿಂದ ಇಲ್ಲಿಯವರೆಗೂ ವಿವರಿಸಲಾದ 'ಧ್ವನಿ'ಯು 'ಭಕ್ತಿ'ಯೊಡನೆ ತಾದಾತ್ಮ್ಯವನ್ನು ಪಡೆಯುವುದಿಲ್ಲ. 'ವಾಚ್ಯ' 'ವಾಚಕ'ಗಳೆರಡೂ ಎಲ್ಲಿ ವಾಚ್ಯ-ವ್ಯತಿರಿಕ್ತವಾದ ವ್ಯಂಗ್ಯಾರ್ಥವನ್ನೇ ತಾತ್ಪರ್ಯ-ರೂಪದಿಂದ ಪ್ರಕಾಶಗೊಳಿಸುವುವೋ, ಅಲ್ಲಿ ಆ ವ್ಯಂಗ್ಯಾರ್ಥಕ್ಕೇ ಪ್ರಾಧಾನ್ಯವಿರುವ ಪಕ್ಷಕ್ಕೆ, ಅದು 'ಧ್ವನಿ'ಯೆನಿಸುತ್ತದೆ. ಆದರೆ 'ಭಕ್ತಿ'ಯೆಂದರೆ ಕೇವಲ 'ಉಪಚಾರ' (ಅಥವಾ ಗೌಣ ಮತ್ತು ಲಾಕ್ಷಣಿಕ ಪದಪ್ರಯೋಗ).

ಈ 'ಭಕ್ತಿ'ಯು 'ಧ್ವನಿ'ಯ ಲಕ್ಷಣವಾಗಲಾರದೆಂದು ಕಾರಿಕೆಯ ಉತ್ತರಾರ್ಧವನ್ನು ಹೇಳುತ್ತಾನೆ :—

ಕಾರಿಕೆ

ಅತಿವ್ಯಾಪ್ತೇರಥಾವ್ಯಾಪ್ತೇರ್ನ ಚಾಸೌ ಲಕ್ಷ್ಯತೇ ತಯಾ ||೧೭||

'ಅತಿವ್ಯಾಪ್ತಿ' ಮತ್ತು 'ಅವ್ಯಾಪ್ತಿ'—ಈ ಎರಡು ದೋಷಗಳೂ ಬಂದೊದಗುವ ಕಾರಣ 'ಧ್ವನಿ'ಗೆ 'ಭಕ್ತಿ'ಯು ಲಕ್ಷಣವಾಗುವುದಿಲ್ಲ.

ವೃತ್ತಿ

ಎಂದಿಗೂ 'ಭಕ್ತಿ'ಯೇ ಧ್ವನಿಗೆ ಲಕ್ಷಣ (*Definition*) ವಾಗಲಾರದು. ಏಕೆಂದರೆ ಹಾಗೆ ಒಪ್ಪಿದೊಡನೆಯೇ, 'ಅತಿವ್ಯಾಪ್ತಿ' ಮತ್ತು 'ಅವ್ಯಾಪ್ತಿ' ಎಂಬ ಎರಡು ದೋಷಗಳೂ ಸಂಭವಿಸುತ್ತವೆ. 'ಧ್ವನಿ'ಗಿಂತಲೂ ಬೇರೆಯಾದ ವಿಷಯಗಳಲ್ಲಿ ಸಹ 'ಭಕ್ತಿ'ಯು ಬರುವ ಸಂಭವವಿರುವ ಪ್ರಯುಕ್ತ 'ಅತಿವ್ಯಾಪ್ತಿ' ದೋಷ: ಎಲ್ಲಿ ವ್ಯಂಜಕತ್ವದಿಂದುಂಟಾದ ರಮಣೀಯತೆಯ ಉತ್ಕರ್ಷವೇನೂ ಇಲ್ಲವೋ ಅಂತಹ ಕಡೆಗಳಲ್ಲಿಯೂ ಕವಿಗಳು ಲೋಕರೂಢಿಯನ್ನನುಸರಿಸಿ 'ಭಕ್ತಿ' ಅಥವಾ 'ಉಪಚರಿತ-ಶಬ್ದ-ವೃತ್ತಿ'ಯನ್ನು ಯಥೇಚ್ಛವಾಗಿ ಪ್ರಯೋಗಿಸುವುದನ್ನು ನೋಡಬಹುದು. ಉದಾಹರಣೆ:—

"ಪರಿಮ್ಲಾನಂ ಪೀನಸ್ತನಜಘನಸಂಗಾದುಭಯತ-
ಸ್ತನೋರ್ಮಧ್ಯಸ್ಯಾನ್ತಃ ಪರಿಮಿಲನಮಪ್ರಾಪ್ಯ ಹರಿತಂ |
ಇದಂ ವ್ಯಸ್ತನ್ಯಾಸಂ ಪ್ರಶಿಥಿಲಭುಜಾಕ್ಷೇಪವಲನೈಃ
ಕೃಶಾಂಗ್ಯಾಃ ಸಂತಾಪಂ ವದತಿ ಬಿಸಿನೀಪತ್ರಶಯನಂ ||"*

ಉರುವಕ್ಷೋಜನಿತಂಬಸಂಗದಿನೆರಳ್ಪಕ್ಕಂಗಳೊಳ್ ಮಾಸಿದಾ
ವರದೇಹಸ್ಥ ಸುಮಧ್ಯಭಾಗಮದು ಮೇಣ್ ಸಂಪರ್ಕಮಂ ಬಿಟ್ಟಿರಲ್ |
ಹರಿತಂ ತಾನೆನೆ, ಮತ್ತೆ ತೋಳಲತೆಯಂ ಬೀಸಲ್ಕೆ ತಾಂ ಗೋಜಿದಾ
ಬಿಸಿನೀಪತ್ರದ ಶಯ್ಯೆ ತಾನೆ ತರುಣೀಸಂತಾಪಮಂ ಪೇಳುಗುಂ ||

ಮತ್ತು—

"ಚುಂಬಿಜ್ಜಇ ಸಅಹುತ್ತಂ ಅವರುಂಧಿಜ್ಜಇ ಸಹಸ್ಸಹುತ್ತಮ್ಮಿ |
ವಿರಮಿಅ ಪುಣೋ ರಮಿಜ್ಜಇ ಪಿಓ ಜಣೋ ಣತ್ಥಿ ಪುನರುತ್ತಂ ||"

ನೂರುಸಲ ಚುಂಬನವು, ಸಾವಿರಾಲಿಂಗನವು |
ಬಿಟ್ಟರೂ ಮತ್ತೆ ಸಂಭೋಗ ಪ್ರಿಯಜನಕೆ |
ಪುನರುಕ್ತಿ ಮಾತ್ರ ತಾನಿಲ್ಲ ||

ಮತ್ತು—

"ಕುವಿಅಓ ಪಸನ್ನಾಓ ಓರಣ್ಣಮುಹೀಓ ವಿಹಸಮಾಣಾಓ |
ಜಹ ಗಹಿಓ ತಹ ಹಿಅಅಂ ಹರಂತಿ ಉಚ್ಛಿಂತಮಹಿಲಾಓ ||"

---

* ರತ್ನಾವಳೀ ನಾಟಕ.

ಮುಳಿಯಲೊಲಿದಿರಲವರು,
ರೋದಿಸಲಿ ನಗುತಿರಲಿ,
ಹೇಗೆ ಹಿಡಿದರೆ ಹಾಗೆ ಹೃದಯವನೆ ಜನರು|
ಸೂರೆಗೊಳ್ಳದೆ ಬಿಡರು,
ಸ್ವೈರಿಣೀ ಮಹಿಳೆಯರು ||

ಮತ್ತು—

"ಅಜ್ಜಾಏ ಪಹಾರೋ ಣವಲದಾಏ ದಿಣ್ಣೋ ಪಿಏಣ ಥಣವಟ್ಟೇ |
ಮಿಉಓ ವಿ ದೂಸಹೋ ವ್ವಿಅ ಜಾಅ ಹಿಅಏ ಸವತ್ತೀಣಂ ||"

ಚಿಕ್ಕಹೆಂಡತಿಯೆದೆಯ ಮೇಲೆ ಸಲ್ಲಸು ಕೊಟ್ಟ
ಬಳ್ಳಿಪೆಟ್ಟದು ಪುಟ್ಟದಾಗಿದ್ದರೂ|
'ಸಹಿಸಲಾರದ ಪೆಟ್ಟು!' ಎಂದೆನಿಸಿತದು ಸವತಿ-
ಪೆಣ್ಗಳೆಲ್ಲರ ಹೃದಯರಂಗದಲ್ಲಿ ||

ಮತ್ತು—

"ಪರಾರ್ಥೇ ಯಃ ಪೀಡಾಮನುಭವತಿ ಭಂಗೇಽಪಿ ಮಧುರೋ
ಯದೀಯಃ ಸರ್ವೇಷಾಮಿಹ ಖಲು ವಿಕಾರೋಽಪ್ಯಭಿಮತಃ |
ನ ಸಂಪ್ರಾಪ್ತೋ ವೃದ್ಧಿಂ ಯದಿ ಸ ಭೃಶಮಕ್ಷೇತ್ರಪತಿತಃ
ಕಿಮಿಕ್ಷೋರ್ದೋಷೋಽಸೌ ನ ಪುನರಗುಣಾಯಾ ಮರುಭುವಃ ||"

ಅನುಭವಿಸಿ ಪೀಡೆಯನು ಪರರ ಸಲುವಾಗಿ,
ಮುರಿದರೂ, ಮಧುರತೆಯು ಮಾತ್ರ ಸೂಸಿ|
ಎಲ್ಲಾ ವಿಕಾರದಲು ಜನಕೆ ಬೇಕಾಗಿ,
ಊಷರಕ್ಷೇತ್ರದಲಿ ಬಿದ್ದು ಹೇಸಿ|
ವೃದ್ಧಿಯನು ಹೊಂದದಿರೆ ಕಬ್ಬಿನದು ತಪ್ಪೋ?
ಗುಣಹೀನವಾದ ಮರುಭೂಮಿಯದೆ ತಪ್ಪೋ? ||

ಇಲ್ಲಿ ಕಬ್ಬಿನ ಪರವಾದ ಅರ್ಥಮಾಡಿಕೊಂಡಾಗ 'ಅನುಭವಿಸಿ' ಎಂಬ ಶಬ್ದವು 'ಭಕ್ತಿ'ಗೆ ಉದಾಹರಣೆ. ಈ ವಿಧವಾದ ಪ್ರಯೋಗಗಳು 'ಧ್ವನಿ'ಯ ವಿಷಯವೆಂದು ಎಂದಿಗೂ ನಾವು ಒಪ್ಪುವುದಿಲ್ಲ. ಏಕೆಂದರೆ—

ಕಾರಿಕೆ

ಉಕ್ತ್ಯನ್ತರೇಣಾಶಕ್ಯಂ ಯತ್ತಚ್ಚಾರುತ್ವಂ ಪ್ರಕಾಶಯನ್ ।
ಶಬ್ದೋ ವ್ಯಂಜಕತಾಂ ಬಿಭ್ರದ್ ಧ್ವನ್ಯುಕ್ತೇರ್ವಿಷಯೀಭವೇತ್ ॥ ೧೮ ॥

ಮಿಕ್ಕ ಯಾವ ವಿಧವಾದ ಶಬ್ದವ್ಯಾಪಾರದಿಂದಲೂ ಅಸಾಧ್ಯವಾದಂತಹ ರಮಣೀಯತೆಯನ್ನು ಪ್ರಕಾಶಗೊಳಿಸುತ್ತ, ವ್ಯಂಜಕತ್ವವನ್ನು ಹೊಂದಿರುವ ಶಬ್ದವು ಮಾತ್ರ 'ಧ್ವನಿ'ಯೆಂಬ ಹೆಸರಿಗೆ ಪಾತ್ರವಾಗುತ್ತದೆ.

ವೃತ್ತಿ

ಹಿಂದೆ ಉದಾಹರಿಸಿದ ಲಕ್ಷ್ಯಗಳಲ್ಲಿ, ಶಬ್ದವು ಪ್ರಕಾರಾಂತರದಿಂದ ಸಾಧಿಸಲು ಅಶಕ್ಯವಾದಂತಹ ರಮಣೀಯತೆಗೇನೂ ಕಾರಣವಾಗಿಲ್ಲ. ಅದೂ ಅಲ್ಲದೆ—

ಕಾರಿಕೆ

ರೂಢಾ ಯೇ ವಿಷಯೇಽನ್ಯತ್ರ ಶಬ್ದಾಃ ಸ್ವವಿಷಯಾದಪಿ ।
ಲಾವಣ್ಯಾದ್ಯಾಃ ಪ್ರಯುಕ್ತಾಸ್ತೇ ನ ಭವನ್ತಿ ಪದಂ ಧ್ವನೇಃ ॥ ೧೯ ॥

ತಮ್ಮ ಮುಖ್ಯವಾದ ಅರ್ಥದ ಬದಲು ಬೇರೆ ಅರ್ಥಾಂತರದಲ್ಲಿ ರೂಢಿಯಾಗಿ ಬಳಕೆಯಲ್ಲಿರುವ ಶಬ್ದಗಳು—ಉದಾಹರಣೆಗೆ 'ಲಾವಣ್ಯ' ಇವೇ ಮೊದಲಾದುವು—ಪ್ರಯುಕ್ತವಾದಾಗಲೂ ಅವು 'ಧ್ವನಿ'ಗೆ ಆಸ್ಪದವನ್ನು ಕೊಡಲಾರವು.

ವೃತ್ತಿ

ಅಂತಹ ಶಬ್ದಗಳಲ್ಲಿ 'ಭಕ್ತಿ' ಅಥವಾ 'ಉಪಚರಿತ-ಶಬ್ದ-ವೃತ್ತಿ'ಯೇನೋ ಉಂಟು; ಆದರೆ ನಿಯಮದಿಂದ 'ಧ್ವನಿ'ಯಿದ್ದೇ ಇರುವುದಿಲ್ಲ. ಎಲ್ಲಾದರೂ ಒಂದು ಕಡೆ 'ಧ್ವನಿ'ಯು ಬಂದರೂ ಆ 'ಧ್ವನಿ'ಯು ಪ್ರಕಾರಾಂತರದಿಂದ ಬರುವುದೇ ಹೊರತು, ಎಂದಿಗೂ ಆ ಭಾಕ್ತ-ಶಬ್ದಗಳ ಮೂಲಕವೇ ಬರುವುದಿಲ್ಲ. ಮತ್ತೂ ಏನೆಂದರೆ—

ಕಾರಿಕೆ

ಮುಖ್ಯಾಂ ವೃತ್ತಿಂ ಪರಿತ್ಯಜ್ಯ ಗುಣವೃತ್ತ್ಯಾರ್ಥದರ್ಶನಮ್ ।
ಯದುದ್ದಿಶ್ಯ ಫಲಂ ತತ್ರ ಶಬ್ದೋ ನೈವ ಸ್ಖಲದ್ಗತಿಃ ॥ ೨೦ ॥

ಶಬ್ದವು ಮುಖ್ಯವಾದ ವೃತ್ತಿಯನ್ನು (=ಅಭಿಧಾ ವ್ಯಾಪಾರವನ್ನು) ಬಿಟ್ಟು ಗುಣವೃತ್ತಿಯಿಂದ (=ಲಕ್ಷಣಾ ವ್ಯಾಪಾರದಿಂದ) ಅರ್ಥವನ್ನು ಬೋಧಿಸುವುದಕ್ಕೆ ಒಂದು ಪ್ರಯೋಜನವೇ ಕಾರಣವಾಗಿರುವುದಷ್ಟೆ; ಆ ಪ್ರಯೋಜನವನ್ನು ಸಹ

ಶಬ್ದವು ಗುಣವೃತ್ತಿಯಿಂದಲೇ ಬೋಧಿಸಲಾರದು ; ಏಕೆಂದರೆ ಆ ಕಾಲದಲ್ಲಿ ಶಬ್ದದ ಗಮನವೇನೂ ಕುಂಟುತ್ತಿರುವುದಿಲ್ಲ (=ಶಬ್ದದ ಮುಖ್ಯಾರ್ಥಕ್ಕೆ ಬಾಧೆಯಿರುವುದಿಲ್ಲ).

ವೃತ್ತಿ

ಸೌಂದರ್ಯಾತಿಶಯದಿಂದ ಕೂಡಿರುವ ಒಂದು ವಿಶಿಷ್ಟಾರ್ಥವೇ ಗುಣವೃತ್ತಿಯ ಪ್ರಯೋಗಕ್ಕೆ ಪ್ರಯೋಜನವೆಂದು ನಾವು ಅರ್ಥಮಾಡಿಕೊಳ್ಳುವಾಗ, ಆಗಲೂ (=ಆ ಪ್ರಯೋಜನಾಂಶದಲ್ಲಿಯೂ) ಶಬ್ದವು ಅಮುಖ್ಯವೇ ಎಂದುಬಿಟ್ಟರೆ (=ಆಗಲೂ ಮುಖ್ಯಾರ್ಥಕ್ಕೆ ಬಾಧೆಯಿದ್ದೇ ಇರುವುದೆಂದರೆ) ಅಂತಹ ಶಬ್ದಪ್ರಯೋಗವೇ ದೋಷವೆನಿಸೀತು (ಪ್ರಯೋಜನಾಂತರವು ಇಲ್ಲದೆ ಇರೋಣದರಿಂದ). ಆದರೆ ವಸ್ತುತಃ ಹೀಗಿಲ್ಲ.

ಆದಕಾರಣ—

ಕಾರಿಕೆ

ವಾಚಕತ್ವಾಶ್ರಯೇಣೈವ ಗುಣವೃತ್ತಿರ್ವ್ಯವಸ್ಥಿತಾ ।
ವ್ಯಂಜ್ಯಕತ್ವೈಕಮೂಲಸ್ಯ ಧ್ವನೇಃ ಸ್ಯಾಲ್ಲಕ್ಷಣಂ ಕಥಮ್ ॥ ೨೧ ॥

ವಾಚಕತ್ವದ ಆಧಾರದ ಮೇಲೆಯೇ ವ್ಯವಸ್ಥಿತವಾಗಿರುವ 'ಗುಣವೃತ್ತಿ'ಯು ವ್ಯಂಜಕತ್ವವೊಂದನ್ನೇ ಆಧಾರವಾಗಿ ಉಳ್ಳ 'ಧ್ವನಿ'ಗೆ ಹೇಗೆ ತಾನೆ ಲಕ್ಷಣವೆನಿಸೀತು ?

ವೃತ್ತಿ

ಆದುದರಿಂದ 'ಧ್ವನಿ'ಯೇ ಬೇರೆ; 'ಗುಣವೃತ್ತಿ'ಯೇ ಬೇರೆ. ಇದರ ಜತೆಗೆ ಗುಣವೃತ್ತಿಯೇ 'ಧ್ವನಿ'ಯೆಂಬ ಲಕ್ಷಣವನ್ನು ಹೇಳಿದರೆ 'ಅವ್ಯಾಪ್ತಿ'ದೋಷವೂ ಸಂಘಟಿಸುತ್ತದೆ. ಏಕೆಂದರೆ 'ಧ್ವನಿ'ಯ ಪ್ರಭೇದವಾದ 'ವಿವಕ್ಷಿತಾನ್ಯಪರವಾಚ್ಯ'ವಾಗಲಿ, ಮಿಕ್ಕ ಇನ್ನೂ ಅನೇಕ ಧ್ವನಿ-ಪ್ರಕಾರಗಳಾಗಲಿ 'ಭಕ್ತಿ'ಯೊಳಗೆ ಸೇರುವುದಿಲ್ಲ. ಆದುದರಿಂದ 'ಭಕ್ತಿ'ಯು ಧ್ವನಿಗೆ ಲಕ್ಷಣವಲ್ಲ.

ಕಾರಿಕೆ

ಕಸ್ಯಚಿದ್ ಧ್ವನಿಭೇದಸ್ಯ ಸಾ ತು ಸ್ಯಾದುಪಲಕ್ಷಣಮ್ ।

ಧ್ವನಿಯ ಯಾವುದಾದರೂ ಒಂದು ಭೇದಕ್ಕೆ ಮಾತ್ರ ಅದು ಒಂದು ವೇಳೆ 'ಉಪಲಕ್ಷಣ' (=ನಿರ್ದೇಶಕ)ವಾದರೂ ಆಗಬಹುದು.

ವೃತ್ತಿ

'ಅದು'=ಆ 'ಭಕ್ತಿ'ಯಾದರೋ ಮುಂದೆ ಹೇಳಲಿರುವ ಅನೇಕ 'ಧ್ವನಿ'-ಪ್ರಭೇದಗಳ ಮಧ್ಯೆ ಯಾವುದೋ ಒಂದು ಭೇದಕ್ಕೆ ಮಾತ್ರ ಒಂದುವೇಳೆ ಉಪ

ಲಕ್ಷಣವಾಗಬಹುದೆಂದು ಇಷ್ಟನ್ನು ಮಾತ್ರ ಊಹಿಸಬಹುದು. ಹಾಗಲ್ಲದೆ ಗುಣ ವೃತ್ತಿಯೇ ಧ್ವನಿಯ ಸಂಪೂರ್ಣ ಲಕ್ಷಣವನ್ನು ಹೇಳುತ್ತದೆನ್ನುವ ಪಕ್ಷದಲ್ಲಿ, ಅಭಿಧಾ ವ್ಯಾಪಾರವೊಂದರಿಂದಲೇ ಉಳಿದ ಅಲಂಕಾರವರ್ಗದ ಸಮಗ್ರ ಲಕ್ಷಣ ವನ್ನೂ ಹೇಳಿದಂತಾಗುವುದರಿಂದ, ಪ್ರತ್ಯೇಕವಾಗಿ ಅಲಂಕಾರಗಳ ಲಕ್ಷಣವನ್ನು ಬರೆಯುವುದೆಲ್ಲವೂ ವ್ಯರ್ಥವೆನ್ನಬೇಕಾಗಿ ಬಂದೀತೆಂದು ಪ್ರತಿಯಾಗಿ ವಾದಿಸ ಬಹುದು. ಅಷ್ಟೇ ಅಲ್ಲದೆ—

ಕಾರಿಕೆ

ಲಕ್ಷಣೇಽನ್ಯೈಃ ಕೃತೇ ಚಾಸ್ಯ ಪಕ್ಷಸಂಸಿದ್ಧಿರೇವ ನಃ ‖ ೨೨ ‖

ಇತರರು ಮೊದಲೇ ಇದರ (=ಧ್ವನಿಯ) ಲಕ್ಷಣವನ್ನು ರಚಿಸಿಬಿಟ್ಟಿರುವರೆಂದರೆ, ಅದರಿಂದ ನಮ್ಮ ಪಕ್ಷವು ಸಿದ್ಧವಾದ ಹಾಗೆಯೇ ಆಯಿತು.

ವೃತ್ತಿ

ಹಿಂದೆಯೇ ಬೇರೆಯವರಿಂದ ಧ್ವನಿಯ ಲಕ್ಷಣವು ಪ್ರತಿಪಾದಿತವಾಗಿಬಿಟ್ಟಿರುವು ದೆಂದರೆ ಅದು ನಮಗೆ ಇಷ್ಟಸಾಧನೆಯೆಂದೇ ಭಾವಿಸುತ್ತೇವೆ; ಏಕೆಂದರೆ ಧ್ವನಿ ಯುಂಟೆಂಬುದೇ ನಮ್ಮ ವಾದ. ಅದು ಮೊದಲೆ ಸಿದ್ಧಾಂತವಾಗಿಬಿಟ್ಟಿದೆಯೆನ್ನುವು ದಾದರೆ, ನಮ್ಮ ಪ್ರಯತ್ನವೇನೂ ಇಲ್ಲದೆಯೇ ನಮ್ಮ ಇಷ್ಟಾರ್ಥವು ಕೈಗೂಡಿದವ ರಾಗುತ್ತೇವೆ.

III. ಧ್ವನಿಯ ತತ್ವವು ಸಹೃದಯರ ಹೃದಯಗಳಿಗೆ ಮಾತ್ರ ಸಂವೇದ್ಯವೆಂದೂ ಅದರ ಸ್ವರೂಪವು ಮಾತುಗಳಿಗೆ ನಿಲುಕುವಂತಹುದಲ್ಲವೆಂದೂ ಹೇಳಿದ ಪೂರ್ವಪಕ್ಷ ಕಾರರಾದರೂ ವಿಚಾರಮಾಡಿ ವಾದಿಸುವವರಲ್ಲ. ಏಕೆಂದರೆ ಈಗಾಗಲೇ ನಾವು ಹೇಳಿರುವ ಅಂಶಗಳ ಜತೆಗೆ ಮುಂದೆ ಇನ್ನೂ ಹೇಳುವ ಧ್ವನಿಯ ಸಾಮಾನ್ಯ-ವಿಶೇಷ ಲಕ್ಷಣಗಳೆಲ್ಲವನ್ನೂ ಪರಿಶೀಲಿಸಿದ ಮೇಲೆಯೂ ಅದು "ಅನಿರ್ವಾಚ್ಯ" ಅಥವಾ 'ಅನಾಖ್ಯೇಯ'ವೇ ಆಗುವುದಾದರೆ, ಈ ಅನಿರ್ವಚನೀಯತೆಯು ಪ್ರಪಂಚದ ವಸ್ತು ಗಳೆಲ್ಲಕ್ಕೂ ಅನ್ವಯಿಸಬೇಕಾಗುತ್ತದೆ. ಹಾಗಲ್ಲದೆ ಈ ಅತಿಶಯೋಕ್ತಿಯಿಂದ ಮಿಕ್ಕ ಕಾವ್ಯಗಳನ್ನು ಮೀರಿಸುವಂತಹ ಧ್ವನಿಯ ಸ್ವರೂಪವೇ ಹೇಳಲ್ಪಡುತ್ತದೆನ್ನುವ ಪಕ್ಷಕ್ಕೆ ಅವರು ಹೇಳುವದೂ ಯುಕ್ತವೇ!

ಇಲ್ಲಿಗೆ ಶ್ರೀ ರಾಜಾನಕ-ಆನಂದವರ್ಧನಾಚಾರ್ಯ-ವಿರಚಿತವಾದ
'ಧ್ವನ್ಯಾಲೋಕ'ದಲ್ಲಿ ಮೊದಲನೆಯ ಉದ್ದ್ಯೋತದ ಕನ್ನಡ ಅನುವಾದವು ಮುಗಿದುದು.

ಎರಡನೆಯ ಉದ್ದ್ಯೋತ*

ವೃತ್ತಿ

ಹೀಗೆ ಧ್ವನಿಯು 'ಅವಿವಕ್ಷಿತವಾಚ್ಯ' ಮತ್ತು 'ವಿವಕ್ಷಿತಾನ್ಯಪರವಾಚ್ಯ' ಎಂದು ಎರಡು ಬಗೆಯಾಗಿರುವುದನ್ನು ಹೇಳಲಾಯಿತು. ಅವುಗಳಲ್ಲಿ 'ಅವಿವಕ್ಷಿತವಾಚ್ಯ'ವೆಂಬ ಧ್ವನಿಯ ಪ್ರಭೇದಗಳನ್ನು ತೋರ್ಪಡಿಸುವ ಸಲುವಾಗಿ ಮುಂದಿನ ಕಾರಿಕೆಯನ್ನು ಹೇಳಿದೆ:

ಕಾರಿಕೆ

ಅರ್ಥಾನ್ತರೇ ಸಂಕ್ರಮಿತಮತ್ಯನ್ತಂ ವಾ ತಿರಸ್ಕೃತಮ್ ।
ಅವಿವಕ್ಷಿತವಾಚ್ಯಸ್ಯ ಧ್ವನೇರ್ವಾಚ್ಯಂ ದ್ವಿಧಾ ಮತಮ್ ‖ ೧ ‖

'ಬೇರೊಂದು ಅರ್ಥದಲ್ಲಿ ಸೇರಿಹೋಗಿರುವುದು' (='ಅರ್ಥಾಂತರಸಂಕ್ರಮಿತ') ಮತ್ತು 'ಸಂಪೂರ್ಣವಾಗಿ ಲುಪ್ತವಾದುದು' (='ಅತ್ಯಂತ ತಿರಸ್ಕೃತ')—ಎಂಬುದಾಗಿ 'ಅವಕ್ಷಿತವಾಚ್ಯ-ಧ್ವನಿ'ಯ ವಾಚ್ಯ (=ಮುಖ್ಯಾರ್ಥ)ವು ಎರಡು ವಿಧವಾಗಿರುತ್ತದೆ.

ವೃತ್ತಿ

'ವಾಚ್ಯ'ವು ಹೀಗೆ ಎರಡು ವಿಧವಾಗಿರುವುದರಿಂದ ಉಂಟಾಗತಕ್ಕ ವಿಶೇಷವೆಲ್ಲವೂ 'ವ್ಯಂಗ್ಯ'ಕ್ಕೇ ಸಂಬಂಧಪಟ್ಟುದಾದ ಕಾರಣ, ವ್ಯಂಗ್ಯದ ಪ್ರಕಟನೆಗೆಂದು ಹೊರಟಿರುವ 'ಧ್ವನಿ'ಯ ಪ್ರಭೇದವೆಂದೇ ಅವನ್ನು ಪರಿಗಣಿಸಬೇಕು.

ಇದು **'ಅರ್ಥಾಂತರ-ಸಂಕ್ರಮಿತವಾಚ್ಯ'**ಕ್ಕೆ ಉದಾಹರಣೆ:—

"ಸ್ನಿಗ್ಧಶ್ಯಾಮಲಕಾಂತಿಲಿಪ್ತವಿಯತೋ ವೇಲ್ಲದ್ಬಲಾಕಾ ಘನಾ
ವಾತಾಃ ಶೀಕರಿಣಃ ಪಯೋದಸುಹೃದಾಮಾನಂದಕೇಕಾಃ ಕಲಾಃ।
ಕಾಮಂ ಸಂತು ದೃಢಂ ಕಠೋರಹೃದಯೋ **ರಾಮೋಽಸ್ಮಿ** ಸರ್ವಂ ಸಹೇ
ವೈದೇಹೀ ತು ಕಥಂ ಭವಿಷ್ಯತಿ ಹಹಾ ಹಾ ದೇವಿ! ಧೀರಾ ಭವ॥

ದೆಸೆಯಂ ತಮ್ಮೆಣ್ಗಪ್ಪಿಂ ಬಳಿದು ತವೆ ಬಲಾಕಾಗಣೋದ್ರೇಕಮಂ ಮಾ-
ಡಿಸಿ ನಿಂದಾ ಮೇಘಗಳ್, ಶೀತಲಪವನಚಯಂ. ಸಂತಸಂ ಪೆರ್ಚಲಿಂಪಿಂ-।
ದೆಸೆವಾ ಬರ್ಹಿಸ್ವಸಂ ತಾಮಿರಲಿರಲೆನಿಸುಂ ಸರ್ವಮಂ ತಾಳ್ದಪೆಂ ಕೂ-
ರಸಿವೋಲ್ ಕಲ್ಲೆರ್ದೆಯಾ ರಾಮನೆ ನಲಬಲೆಯಾ ಸೀತೆಯೆಂತಿರ್ಪಳೋ ಮೇಣ್॥

---

* ಈ ಉದ್ದ್ಯೋತದ ಅನುವಾದದಲ್ಲಿ ಕಾಶೀ-ಸಂಸ್ಕೃತ-ಸೀರೀಸ್ ಗ್ರಂಥಮಾಲೆಯಲ್ಲಿ ಅಚ್ಚಾಗಿರುವ (೧೯೪೦) ಧ್ವನ್ಯಾಲೋಕದ ಮೂಲಪಾಠಗಳನ್ನನುಸರಿಸಿದೆ.

ಈ ಶ್ಲೋಕದಲ್ಲಿ 'ರಾಮ' ಎಂಬ ಶಬ್ದದ ಪ್ರಯೋಗವು ಧ್ವನಿಗೆ ಲಕ್ಷ್ಯ. ಈ ಶಬ್ದದಿಂದ ಬರುವ ಅರ್ಥವು ಕೇವಲ ಒಂದು ಸಂಜ್ಞೆ ಅಥವಾ ಹೆಸರು (=Proper Name) ಮಾತ್ರವಲ್ಲ; ವ್ಯಂಗ್ಯವಾಗಿರುವ ಅನೇಕ ಸ್ವಭಾವ-ವಿಶೇಷಗಳಿಂದ ವಿಶಿಷ್ಟನಾದ ವ್ಯಕ್ತಿ ಎಂಬರ್ಥವೇ ಪ್ರತೀತವಾಗುತ್ತದೆ.

ಇದಕ್ಕೆ ಇನ್ನೊಂದು ಉದಾಹರಣೆಯನ್ನು ನನ್ನ* ಕೃತಿಯಾದ '**ವಿಷಮಬಾಣಲೀಲೆ**' ಯಿಂದಲೇ ಕೊಡಬಹುದು :—

"ತಾಲಾ ಜಾಅನ್ತಿ ಗುಣಾ ಜಾಲಾ ದೇ ಸಹಿಅಏಹಿ ಘೇಪ್ಪನ್ತಿ |
ರಇಕಿರಣಾನುಗ್ಗಹಿಆಇ ಹೋನ್ತಿ ಕಮಲಾಇ ಕಮಲಾಇ ||"

ಗುಣವು ಗುಣವೆನಿಸುವುದು ಸಹೃದಯರು ಕೊಂಡಾಗ |
ರವಿಕಿರಣ ಬಿದ್ದೊಡನೆ ಕಮಲಗಳು **ಕಮಲಗಳು** ||

ಇಲ್ಲಿ ಎರಡನೆಯ 'ಕಮಲ' ಶಬ್ದವು ಧ್ವನಿಗೆ ಲಕ್ಷ್ಯ.

'**ಅತ್ಯಂತ-ತಿರಸ್ಕೃತವಾಚ್ಯ**'ಕ್ಕೆ ಆದಿಕವಿಯಾದ ವಾಲ್ಮೀಕಿಯಲ್ಲೇ ಉದಾಹರಣೆ ಸಿಕ್ಕುತ್ತದೆ :—

"ರವಿಸಂಕ್ರಾಂತಸೌಭಾಗ್ಯಸ್ತುಷಾರಾವೃತಮಂಡಲಃ |
ನಿಃಶ್ವಾಸಾಂಧ ಇವಾದರ್ಶಶ್ಚಂದ್ರಮಾ ನ ಪ್ರಕಾಶತೇ ||"

ಸೌಭಾಗ್ಯವೆಲ್ಲವನು ಸೂರ್ಯನಿಗೆ ತಾ ಕೊಟ್ಟು,
ಹಿಮಕಣದ ಹೊದಿಕೆಯಲಿ ಮಂಡಲವ ಮುಚ್ಚಿ |
ಉಸಿರಿಂದ **ಕುರುಡಾದ** ದರ್ಪಣದ ರೀತಿಯಲಿ
ಚಂದಿರನು ಬೆಳಕನ್ನು ಬೀರದಿರುತಿಹನು ||

ಇಲ್ಲಿ 'ಕುರುಡು' ಎಂಬ ಶಬ್ದವು ಧ್ವನಿಗೆ ಲಕ್ಷ್ಯ.

ಹಾಗೆಯೇ

"ಗಅಣಂ ಚ ಮತ್ತಮೇಹಂ ಧಾರಾಲುಲಿಅಜ್ಜುಣಾಇ ಅ ವಣಾಇಂ |
ಣಿರಹಂಕಾರಮಿಅಂಕಾ ಹರನ್ತಿ ಣೀಲಾಓ ವಿ ಣಿಸಾಓ ||"

ಮತ್ತ ಮೇಘದ ಗಗನ; ಮಳೆಯಲಿ
ತೊಯ್ದು ಮತ್ತಿಯ ಮರಗಳ
ಕಾಡ ಗಡಣವು, **ಗರ್ವವಿಲ್ಲದ**
ಚಂದ್ರರಿರುವಾ ನಿಶಿಗಳು—

* ನನ್ನ = ಆನಂದವರ್ಧನನ.

ಸೀಲವೆನಿಸಿಯು ಜನರ ಮನಗಳ
ಬಿಡದೆ ತಾವೇ ಸೆಳೆವುವು ‖

ಇಲ್ಲಿ 'ಮತ್ತು,' 'ಗರ್ವವಿಲ್ಲದ' ಈ ಎರಡು ಶಬ್ದಗಳೂ ಧ್ವನಿಗೆ ಲಕ್ಷ್ಯಗಳು.

ಕಾರಿಕೆ

ಅಸಂಲಕ್ಷ್ಯಕ್ರಮೋದ್ದ್ಯೋತಃ ಕ್ರಮೇಣ ದ್ಯೋತಿತಃ ಪರಃ ।
ವಿವಕ್ಷಿತಾಭಿಧೇಯಸ್ಯ ಧ್ವನೇರಾತ್ಮಾ ದ್ವಿಧಾ ಮತಃ ‖ ೨ ‖

'ವಿವಕ್ಷಿತವಾಚ್ಯ'ವೆಂಬ ಧ್ವನಿಯ ಆತ್ಮವೂ ಕೂಡ 'ಕ್ರಮವು ಅರಿವಾಗದಂತೆ ಭಾಸವಾದುದು' (='ಅಸಂಲಕ್ಷ್ಯಕ್ರಮ') ಮತ್ತು 'ಕ್ರಮವು ಕಾಣುವಂತೆ ಭಾಸವಾದುದು' (='ಸಂಲಕ್ಷ್ಯಕ್ರಮ') ಎಂದು ಎರಡು ಬಗೆಯಾಗಿರುವುದು.

ವೃತ್ತಿ

ಮುಖ್ಯವಾಗಿ ಹೊಳೆಯುವ ವ್ಯಂಗ್ಯಾರ್ಥವೇ ಧ್ವನಿಯ ಆತ್ಮ. ಅದು ಕೆಲವು ವೇಳೆ ಕ್ರಮಭೇದವು ತಿಳಿಯದಂತೆ ವಾಚ್ಯಾರ್ಥದ ಜತೆಯಲ್ಲಿಯೇ ಭಾಸವಾಗುತ್ತದೆ; ಕೆಲವು ವೇಳೆ ಕ್ರಮ ತಿಳಿಯುವಂತೆ ವಾಚ್ಯಾರ್ಥದ ಅನಂತರ ಭಾಸವಾಗುತ್ತದೆ.

ಅವುಗಳಲ್ಲಿ—

ಕಾರಿಕೆ

ರಸಭಾವತದಾಭಾಸತತ್ಪ್ರಶಾನ್ತ್ಯಾದಿರಕ್ರಮಃ ।
ಧ್ವನೇರಾತ್ಮಾಙ್ಗಿಭಾವೇನ ಭಾಸಮಾನೋ ವ್ಯವಸ್ಥಿತಃ ‖ ೩ ‖

ರಸ, ಭಾವ, ರಸಾಭಾಸ, ಭಾವಾಭಾಸ, ರಸಪ್ರಶಮನ, ಭಾವಪ್ರಶಮನ—ಇವೇ ಮೊದಲಾದುವು 'ಅಸಂಲಕ್ಷ್ಯಕ್ರಮ'ಗಳು. ಮುಖ್ಯವಾಗಿ ಇವುಗಳು ಪ್ರಕಾಶಿಸುವುದೇ 'ಧ್ವನಿ'ಯ ಆತ್ಮವೆಂದು ತೀರ್ಮಾನಿಸಿದೆ.

ವೃತ್ತಿ

ರಸವೇ ಮೊದಲಾದ ಸಾರಾರ್ಥವು ವಾಚ್ಯಾರ್ಥದ ಜತೆಯಲ್ಲಿಯೇ ಪ್ರಕಾಶಿಸುತ್ತದೆ. ಅದು ಮುಖ್ಯವಾಗಿ ಭಾಸವಾಗುತ್ತಿದ್ದರೆ ಧ್ವನಿಯ ಆತ್ಮವೆನಿಸುತ್ತದೆ.

ಈಗ ಮುಂದೆ 'ರಸವದಲಂಕಾರ'ಕ್ಕೂ 'ಅಲಕ್ಷ್ಯಕ್ರಮ' ಧ್ವನಿಗೂ ವಿಷಯ ವ್ಯಾಪ್ತಿಯಲ್ಲಿ ಎಷ್ಟೋ ವ್ಯತ್ಯಾಸವುಂಟೆಂಬುದನ್ನು ಪ್ರದರ್ಶಿಸಲಾಗುತ್ತದೆ:—

ಕಾರಿಕೆ

ವಾಚ್ಯವಾಚಕಚಾರುತ್ವಹೇತೂನಾಂ ವಿವಿಧಾತ್ಮನಾಮ್ ।
ರಸಾದಿಪರತಾ ಯತ್ರ ಸ ಧ್ವನೇರ್ವಿಷಯೋ ಮತಃ ॥ ೪ ॥

ಶಬ್ದಾರ್ಥಗಳ ಸೌಂದರ್ಯಕ್ಕೆ ಕಾರಣಗಳಾಗುವ ಬಗೆಬಗೆಯ ಸಾಮಗ್ರಿಗಳೆಲ್ಲವೂ ಎಲ್ಲಿ ರಸಾದಿಗಳ ಪ್ರಕಾಶನದಲ್ಲಿಯೇ ತತ್ಪರವಾಗಿರುವುವೋ ಅದನ್ನು (ಮಾತ್ರ) 'ಧ್ವನಿ'ಯ ಲಕ್ಷ್ಯವೆನ್ನುತ್ತೇವೆ.

ವೃತ್ತಿ

ರಸ, ಭಾವ, ಇವುಗಳ ಆಭಾಸ ಮತ್ತು ಪ್ರಶಮನಗಳು—ಈ ಪ್ರಕಾರವಾದ ಮುಖ್ಯಾರ್ಥವನ್ನೇ ಹಿಂಬಾಲಿಸುತ್ತಾ ಎಲ್ಲಿ 'ಶಬ್ದಾಲಂಕಾರ'ಗಳು, 'ಅರ್ಥಾಲಂಕಾರ'ಗಳು ಮತ್ತು 'ಗುಣ'ಗಳು, ಪರಸ್ಪರ ಭಿನ್ನವಾಗಿರುವಂತೆಯೇ ಧ್ವನಿಗಿಂತಲೂ ಭಿನ್ನವಾಗಿರುವುವೆಂದು ತೀರ್ಮಾನಿಸಬಹುದೋ, ಅಂತಹ ಕಾವ್ಯಕ್ಕೆ 'ಧ್ವನಿ'ಯೆಂಬ ಹೆಸರು ಸಲ್ಲುತ್ತದೆ.

ಕಾರಿಕೆ

ಪ್ರಧಾನೇऽನ್ಯತ್ರ ವಾಕ್ಯಾರ್ಥೇ ಯತ್ರಾಙ್ಗಂ ತು ರಸಾದಯಃ ।
ಕಾವ್ಯೇ ತಸ್ಮಿನ್ನಲಂಕಾರೋ ರಸಾದಿರಿತಿ ಮೇ ಮತಿಃ ॥ ೫ ॥

ವಾಕ್ಯದ ತಾತ್ಪರ್ಯವು ಬೇರೊಂದರಲ್ಲಿ ಪ್ರಧಾನವಾಗಿರುವಾಗ, ರಸಾದಿಗಳು ಅಂಗಭೂತವಾಗಿ ಎಲ್ಲಿ ಬರುವುವೋ ಆ ಕಾವ್ಯದಲ್ಲಿ ರಸಾದಿಗಳು ಅಲಂಕಾರವೆಂದೇ ನನ್ನ ಭಾವನೆ.

ವೃತ್ತಿ

ಇತರರು ರಸವದಲಂಕಾರಕ್ಕೆ ಬೇರೆ ವಿಧವಾದ ವ್ಯಾಪ್ತಿಯನ್ನು ಪ್ರದರ್ಶಿಸಿರುವರಾದರೂ, 'ಯಾವ ಕಾವ್ಯದಲ್ಲಿ ಬೇರೊಂದು ಮುಖ್ಯವಾದ ವಾಕ್ಯಾರ್ಥವಾಗಿದ್ದು, ರಸಾದಿಗಳು ಅದಕ್ಕೆ ಅಂಗವಾಗಿ' ಮಾತ್ರ ಬರುವುವೋ, ಅಂತಹ ರಸಾದಿಗಳೇ 'ರಸವದಲಂಕಾರ'ಕ್ಕೆ ವಿಷಯಗಳು—ಎಂಬುದೇ ನನ್ನ ಸಿದ್ಧಾಂತ. ಉದಾಹರಣೆಗೆ 'ಚಾಟು' ಶ್ಲೋಕಗಳಲ್ಲೆಲ್ಲ 'ಪ್ರೇಯೋಽಲಂಕಾರವೇ ಮುಖ್ಯವಾದ ವಾಕ್ಯಾರ್ಥವಾಗಿದ್ದರೂ ರಸಾದಿಗಳು ಅದಕ್ಕೆ ಅಂಗಭೂತವಾಗಿ ಬರುವುದನ್ನು ನೋಡಬಹುದು.

ಹೀಗೆ 'ಅಲಂಕಾರ'ವೆನಿಸುವ ರಸಾದಿಗಳು 'ಶುದ್ಧ'ವಾಗಿರಬಹುದು ಇಲ್ಲವೆ 'ಸಂಕೀರ್ಣ' (=ಮಿಶ್ರ)ವಾಗಿರಬಹುದು. ಮೊದಲನೆಯದಕ್ಕೆ ಉದಾಹರಣೆ :—

“ಕಿಂ ಹಾಸ್ಯೇನ ನ ಮೇ ಪ್ರಯಾಸ್ಯಸಿ ಪುನಃ ಪ್ರಾಪ್ತಶ್ಚಿರಾದ್ದರ್ಶನಂ
ಕೇಯಂ ನಿಷ್ಕರುಣ! ಪ್ರವಾಸರುಚಿತಾ ಕೇನಾಸಿ ದೂರೀಕೃತಃ|
ಸ್ವಪ್ನಾನ್ತೇಷ್ವಿತಿ ತೇ ವದನ್ ಪ್ರಿಯತಮವ್ಯಾಸಕ್ತಕಂಠಗ್ರಹೋ
ಬುದ್ಧ್ವಾ ರೋದಿತಿ ರಿಕ್ತಬಾಹುವಲಯಸ್ತಾರಂ ರಿಪುಸ್ತ್ರೀಜನಃ’ ||

ಹಾಸ್ಯದಿಂದೆನಗೇನು? ಹೋಗಲಾಗದು ಮತ್ತೆ,
ಚಿರಕಾಲ ಕಳೆದಿರಲು ದೊರೆತಿರುವ ನೀನು!
ಅಲೆತದಲಿ ಈ ಹುಚ್ಚು ನಿನಗೆ ಬಂದುದದೆಂತು?
ನಿಷ್ಕರುಣ! ಹೇಳೇಕೆ ಬಹುದೂರನಾದೆ?|
ಕನಸ ಕಡೆಯಲಿ ಹೀಗೆ ಹೇಳುತ್ತ ನಲ್ಲನಾ
ಕಂಠವನು ತಬ್ಬಿರುವ ನಳಿತೋಳ್ಗಳಿಂದೆ,
ಎದ್ದು ನೋಡಲು ತೋಳ ತೆಕ್ಕೆ ಬರಿದಾಗಿರಲು,
ಆರ್ತರೋದನ ಗೈವುದರಿಯುವತಿಜನವು ||

ಈ ಶ್ಲೋಕದಲ್ಲಿ ಶುದ್ಧವಾದ ಕರುಣರಸವು (ರಾಜಸ್ತುತಿಗೆ) ಅಂಗವಾಗಿರುವ್ದ ದರಿಂದ ಅದು ‘ರಸವದಲಂಕಾರ’ವೆನಿಸುವುದು ಸ್ಪಷ್ಟವಾಗಿದೆ. ಹೀಗೆಯೇ ಇದೇ ವಿಧವಾದ ಬೇರೆಕಡೆಗಳಲ್ಲಿಯೂ ಉಳಿದ ರಸಗಳು ಅಂಗಭಾವವನ್ನು ಪಡೆಯುವುವು.

ಇನ್ನು ‘ಸಂಕೀರ್ಣ’ವಾದ ರಸಾದಿಗಳು ಅಂಗಭೂತವಾಗುವುದಕ್ಕೆ ಉದಾಹರಣೆ—

ಕ್ಷಿಪ್ತೋ ಹಸ್ತಾವಲಗ್ನಃ ಪ್ರಸಭಮಭಿಹತೋಽಪ್ಯಾದದಾನೋಂಶುಕಾನ್ತಂ
ಗೃಹ್ಣನ್ ಕೇಶೇಷ್ವಪಾಸ್ತಶ್ಚರಣನಿಪತಿತೋ ನೇಕ್ಷಿತಃ ಸಂಭ್ರಮೇಣ|
ಆಲಿಂಗನ್ ಯೋಽವಧೂತಸ್ತ್ರಿಪುರಯುವತಿಭಿಃ ಸಾಶ್ರುನೇತ್ರೋತ್ಪಲಾಭಿಃ
ಕಾಮೀವಾರ್ದ್ರಾಪರಾಧಃ ಸ ದಹತು ದುರಿತಂ ಶಾಂಭವೋ ವಃ ಶರಾಗ್ನಿಃ ||”

ತಳ್ಳಿದರು ಕೈಬಿಡದೆ, ಪೊಯ್ದರೂ ರೋಷದಲಿ
ಸೆರಗ ತುದಿಯನೆ ಮತ್ತೆ ಸಾರಿ ಪಿಡಿಯುತಲಿ,
ನೂಕಿದರು ಕೂದಲನೆ ಸವರತೊಡಗುತ ಮತ್ತೆ,
ಕಾಲ್ವಿಡಿದರೂ ದುಗುಡದಿಂದದನು ಮರೆತು,
ಅಪ್ಪಲೆಳಸಲು ಮೊದಲೆ ತಪ್ಪಿಸುತ ವೇಗದಲಿ,
ನೇತ್ರಪದ್ಮಗಳಿಂದ ಕಣ್ಣೀರ ಮಿಡಿವ,
ತ್ರಿಪುರಯುವತಿಯರಿಂತು ಧೂರ್ತಕಾಮಿಯ ಪೋಲು
ಕಂಡ ಶ್ರೀಶಂಭುವಿನ ಬಾಣಾಗ್ನಿಯು|
ನಮ್ಮ ಪಾಪವನೆಲ್ಲ ದಹಿಸಿಬಿಡಲಿ ||

ಮೇಲಿನ ಉದಾಹರಣೆಯಲ್ಲಿ ತ್ರಿಪುರಾರಿಯ ಪ್ರಭಾವಾತಿಶಯವೇ ವಾಕ್ಯದ ಮುಖ್ಯ ತಾತ್ಪರ್ಯ. ಶ್ಲೇಷದಿಂದ ಪೋಷಿತವಾದ ಈರ್ಷ್ಯಾ-ವಿಪ್ರಲಂಭ-ಶೃಂಗಾರ-ರಸವು ಅದಕ್ಕೆ ಅಂಗಭೂತವಾಗಿದೆ. ಈ ವಿಧವಾದ ಉದಾಹರಣೆಗಳು ಮಾತ್ರ ರಸವದಾದಿ ಅಲಂಕಾರಗಳಿಗೆ ನ್ಯಾಯವಾದ ಲಕ್ಷ್ಯಗಳು. ಆದುದರಿಂದಲೇ ಈರ್ಷ್ಯಾ-ವಿಪ್ರಲಂಭ-ಶೃಂಗಾರ-ರಸವೂ ಕರುಣರಸವೂ ಪರಸ್ಪರ ವಿರುದ್ಧವಾದರೂ ಕೂಡ, ಇಲ್ಲಿ ಎರಡೂ ಮುಖ್ಯತಾತ್ಪರ್ಯಕ್ಕೆ ಅಂಗವೆಂದು ತೀರ್ಮಾನಿಸಿದ ಕಾರಣ, ಅವುಗಳನ್ನು ಒಂದೇ ಎಡೆಯಲ್ಲಿ ಸಮಾವೇಶಗೊಳಿಸಿದುದೂ ದೋಷವಾಗುವುದಿಲ್ಲ. ಎಲ್ಲಿ ರಸಕ್ಕೇ ವಾಕ್ಯದಲ್ಲಿ ಮುಖ್ಯತಾತ್ಪರ್ಯವಿರುವುದೋ ಅಲ್ಲಿ ಅದಕ್ಕೆ ಅಲಂಕಾರತ್ವವು ಬರುವು ದೆಂತು? ಅಲಂಕಾರವೆಂದರೆ ಸೌಂದರ್ಯಕಾರಣವೆಂಬುದು ಪ್ರಸಿದ್ಧವಾಗಿಯೇ ಇದೆ. ತಾನೇ ತನ್ನ ಸೌಂದರ್ಯಕ್ಕೆ ಕಾರಣವಾಗುವುದು ಅತ್ಯಂತ ಅಸಂಭವ.

ಈ ಎಲ್ಲ ಅಂಶಗಳ ಸಂಗ್ರಹವೇ ಮುಂದಿನ ಶ್ಲೋಕ:—

ರಸಭಾವಾದಿತಾತ್ಪರ್ಯಮಾಶ್ರಿತ್ಯ ವಿನಿವೇಶನಮ್ ।
ಅಲಂಕೃತೀನಾಂ ಸರ್ವಾಸಾಮಲಂಕಾರತ್ವಸಾಧನಮ್ ॥

'ರಸಭಾವಾದಿಗಳ ತಾತ್ಪರ್ಯವನ್ನು ಮಾತ್ರ ಮನಸ್ಸಿನಲ್ಲಿಟ್ಟು ಮಾಡುವಂತಹ ಅಲಂಕಾರಗಳ ಸಂಯೋಜನೆಯೇ ಎಲ್ಲ ಅಲಂಕಾರಗಳಿಗೂ ಅಲಂಕಾರತ್ವವನ್ನು ಸಾಧಿಸಿಕೊಡುತ್ತದೆ.'

ಆದುದರಿಂದ ಎಲ್ಲಿ ರಸಾದಿಗಳು ವಾಕ್ಯದ ಮುಖ್ಯತಾತ್ಪರ್ಯವಾಗಿರುವುವೋ, ಅವೊಂದೂ ರಸವದಲಂಕಾರಕ್ಕೆ ವಿಷಯಗಳಲ್ಲ; ಅದಕ್ಕೆ ಬದಲಾಗಿ 'ಧ್ವನಿ'ಯ ಪ್ರಭೇದವೆಂದೇ ಎನಿಸುತ್ತವೆ. ಉಪಮೆಯೇ ಮೊದಲಾದುವೆಲ್ಲವೂ ಆ ರಸ-ಧ್ವನಿಗೇ ಅಲಂಕಾರಗಳು. ಆದರೆ ಎಲ್ಲಿ ಬೇರೊಂದು ಪ್ರಧಾನವಾದ ವಾಕ್ಯಾರ್ಥವಿರುವುದೋ ಮತ್ತು ಅದಕ್ಕೆ ರಸಾದಿಗಳಿಂದ ಸೌಂದರ್ಯವು ಉಂಟಾಗುತ್ತಿರುವುದೋ ಅದು ಮಾತ್ರ ರಸವದಲಂಕಾರಕ್ಕೆ ಲಕ್ಷ್ಯ.

ಹೀಗೆ ತಿಳಿಯುವುದರಿಂದ 'ಧ್ವನಿ', 'ಉಪಮೆ'ಯೇ ಮೊದಲಾದುವು, ಮತ್ತು ರಸವದಲಂಕಾರ—ಇವುಗಳಿಗಿರುವ ಪರಸ್ಪರ ವ್ಯತ್ಯಾಸಗಳು ಸ್ಫುಟವಾಗುತ್ತವೆ. ಒಂದು ಪಕ್ಷ ಯಾರಾದರೂ ಸಚೇತನರ ಮನೋಭಾವಗಳನ್ನು ಮುಖ್ಯ ತಾತ್ಪರ್ಯ ವಾಗಿ ವರ್ಣಿಸುವುದೇ ರಸವದಲಂಕಾರದ ಲಕ್ಷ್ಯವೆಂದು ಹೇಳಿದರೆ, ಆಗ ಉಪಮೆಯೇ ಮೊದಲಾದ ಅಲಂಕಾರಗಳಿಗೆಲ್ಲ ಅತ್ಯಂತ ಸಂಕುಚಿತವಾದ ಕ್ಷೇತ್ರವುಳಿಯುತ್ತದೆ; ಅಥವಾ ಯಾವ ಸ್ವತಂತ್ರ ಕ್ಷೇತ್ರವೂ ಉಳಿಯುವುದೇ ಇಲ್ಲವೆಂದಂತಾಗುತ್ತದೆ. ಏಕೆಂದರೆ ಅಚೇತನ-ವಸ್ತುವೃತ್ತಾಂತವೇ ಮುಖ್ಯವಾಕ್ಯಾರ್ಥವಾಗಿರುವ ಲಕ್ಷ್ಯ

ದಲ್ಲಿಯೂ ಸಹ ಕವಿಯು ಒಂದಿಲ್ಲೊಂದು ರೀತಿಯಿಂದ ಚೇತನವಸ್ತುವೃತ್ತಾಂತವನ್ನು ಯೋಜಿಸಲೇಬೇಕಾಗುತ್ತದೆ. ಮತ್ತು ಚೇತನವಸ್ತುವೃತ್ತಾಂತವು ಇರುವಾಗಲೂ ಕೂಡ, ಅಲ್ಲಿ ಅಚೇತನವೃತ್ತಾಂತವೇ ಮುಖ್ಯ ತಾತ್ಪರ್ಯವಾಗಿರುವ ಪಕ್ಷಕ್ಕೆ ಅದು ರಸವದಲಂಕಾರಕ್ಕೆ ವಿಷಯವಲ್ಲವೆನ್ನಬೇಕಾಗುತ್ತದೆ. ಹೀಗೆ ನಾವು ಒಪ್ಪುವುದೇ ಆದರೆ ರಸಕ್ಕೆ ಆಗರವಾಗಿರುವ ಮಹಾ ಕಾವ್ಯ-ರಾಶಿಯನ್ನೇ ನೀರಸವೆಂದು ಕರೆದಂತಾಗುತ್ತದೆ. ಉದಾಹರಣೆಗೆ—

"ತರಂಗಭ್ರೂಭಂಗಾ ಕ್ಷುಭಿತವಿಹಗಶ್ರೇಣಿರಶನಾ
ವಿಕರ್ಷನ್ತೀ ಫೇನಂ ವಸನಮಿವ ಸಂರಂಭಶಿಥಿಲಮ್ |
ಯಥಾವಿದ್ಧಂ ಯಾತಿ ಸ್ಖಲಿತಮಭಿಸಂಧಾಯ ಬಹುಶೋ
ನದೀರೂಪೇಣೇಯಂ ಧ್ರುವಮಸಹನಾ ಸಾ ಪರಿಣತಾ ||"*

ಅಲೆಗಳ್ ಪುರ್ವಿನ ಗಂಟು ಸಂಕ್ಷುಭಿತಪಕ್ಷಿಶ್ರೇಣಿಯೇ ಡಾಬು ಮೇಣ್
ಬಲವದ್ರೋಷವಿಚಾಲಿತಾತ್ಮವಸನಂಬೋಲಿರ್ಪ ಫೇನಾಳಿಯುಂ |
ಸೆಳೆಯುತ್ತುಂ, ಬಗೆಗಾಣದಂತೆಡಹುತುಂ ತಾನೆತ್ತಲುಂ ಪೋಪ ಪೆ-
ರ್ದೊರೆಯಾ ರೂಪಮನಪ್ಪುಕಯ್ದುಳಿವಳಕ್ಕುಂ ಮತ್ಕೋಪಿನೀ-ಕಾಂತೆಯೇ ||

ಅಥವಾ—

"ತನ್ವೀ ಮೇಘಜಲಾರ್ದ್ರಪಲ್ಲವತಯಾ ಧೌತಾಧರೇವಾಶ್ರುಭಿಃ
ಶೂನ್ಯೇವಾಭರಣೈಃ ಸ್ವಕಾಲವಿರಹಾದ್ವಿಶ್ರಾಂತಪುಷ್ಪೋದ್ಗಮಾ |
ಚಿಂತಾಮೌನಮಿವಾಶ್ರಿತಾ ಮಧುಕೃತಾಂ ಶಬ್ದೈರ್ವಿನಾ ಲಕ್ಷ್ಯತೇ
ಚಂಡೀ ಮಾಮವಧೂಯ ಪಾದಪತಿತಂ ಜಾತಾನುತಾಪೇವ ಸಾ ||"*

ಕೃಶಕಾಯೆ ; ಮೇಘಜಲ ತೊಯ್ಯಿಸಿರೆ ತಳಿರುಗಳ
ಕಣ್ಣೀರಿನಿಂ ತುಟಿಯ ತೊಳೆವಂತೆ ಇಹಳು ;
ಪುಷ್ಪಮಾಸವು ಕಳೆಯೆ ಪುಷ್ಪವಿರಹಿತೆಯೀಗ
ಭೂಷಣವ ಕಳೆದಿಟ್ಟ ಕಾಂತೆಯಂತಿಹಳು ;
ಮಧುಪಗಳ ಝೇಂಕೃತಿಯು ಇಲ್ಲದಿಹುದದರಿಂದ
ಚಿಂತೆಯಲಿ ಮೌನವನು ತಾಳಿದಂತಿಹಳು ;
ಚರಣತಲದಲಿ ತನ್ನ ಬಿದ್ದಿರುವ ನನ್ನನ್ನು
ಕಡೆಗಣಿಸಿ ಕೋಪದಲಿ ಕೊರಗುವಂತಿಹಳು |

ಅಥವಾ—

* ಎರಡು ಶ್ಲೋಕಗಳೂ ವಿಕ್ರಮೋರ್ವಶೀಯ ನಾಟಕದಿಂದ ಉದಾಹೃತವಾಗಿವೆ.

ತೇಷಾಂ ಗೋಪವಧೂವಿಲಾಸಸುಹೃದಾಂ ರಾಧಾರಹಃ ಸಾಕ್ಷಿಣಾಂ
ಕ್ಷೇಮಂ ಭದ್ರ ಕಲಿಂದಶೈಲತನಯಾತೀರೇ ಲತಾವೇಶ್ಮನಾಮ್ |
ವಿಚ್ಛಿನ್ನೇ ಸ್ಮರತಲ್ಪಕಲ್ಪನಮೃದುಚ್ಛೇದೋಪಯೋಗೇಽಧುನಾ
ತೇ ಜಾನೇ ಜರಠೀಭವನ್ತಿ ವಿಗಲನ್ನೀಲತ್ವಿಷಃ ಪಲ್ಲವಾಃ ||

ಕ್ಷೇಮವೇ ಸಜ್ಜನನೆ! ಯಮುನೆಯಾ ತೀರದಲಿ
ತಾವಿರುವ ಬಳ್ಳಿವನೆ ಗುಂಪುಗಳಿಗೆ?
ಗೋಪವಧುಗಳ ಹಾವ-ಭಾವಗಳ ಮಿತ್ರರಿಗೆ,
ರಾಧಾರಹಃಕ್ರೀಡೆ ಸಾಕ್ಷಿಗಳಿಗೆ?
ಸ್ಮರತಲ್ಪಕಲ್ಪನಕೆ ಮೃದುವಾಗಿ ಕೊಯ್ಯುವಾ
ಉಪಯೋಗ ತಪ್ಪಿರಲು ಪಂದಳಿರಿಗೆ,
ಮುದಿಯಾಗಿ ಹಸಿರೆಲ್ಲ ಹಾಳಾಗಿ ಹೋಗಿಹುದು
ಎಂದು ನಾ ಸಂಬುವೆನು ಮನಸಿನಲ್ಲೆ |

ಇವೇ ಮೊದಲಾದ ಲಕ್ಷ್ಯಗಳಲ್ಲಿ ಅಚೇತನಗಳೇ ಮುಖ್ಯ ತಾತ್ಪರ್ಯ ವಿಷಯವಾಗಿದ್ದರೂ ಚೇತನವಸ್ತುವೃತ್ತಾಂತದ ಯೋಜನೆಯಿದ್ದೇ ಇರುವುದು. ಹೀಗೆ ಚೇತನವಸ್ತುವೃತ್ತಾಂತದ ಯೋಜನೆಯಿದ್ದೆಡೆಯಲ್ಲಿ 'ರಸವದಲಂಕಾರ'ವು ಉಂಟೆಂದೇ ಒಪ್ಪುತ್ತೇನೆಂದು ಒಂದು ವೇಳೆ ವಾದಿಸಬಹುದು. ಹಾಗೆಂದರೆ ಉಪಮಾದಿಗಳಿಗೆ ಸ್ವತಂತ್ರವಾದ ಕ್ಷೇತ್ರವೇ ಉಳಿಯುವುದಿಲ್ಲ ಅಥವಾ ಉಳಿದರೂ ಅತ್ಯಂತ ಸಣ್ಣದಾದ ಕ್ಷೇತ್ರ ಮಾತ್ರ ಉಳಿಯುತ್ತದೆ. ಏಕೆಂದರೆ ಯಾವುದಾದರೂ ಒಂದು ಪ್ರಕಾರದಿಂದ, ಕೊನೆಗೆ 'ವಿಭಾವ'ದ ರೂಪದಿಂದಲಾದರೂ, ಚೇತನವಸ್ತುವೃತ್ತಾಂತದ ಯೋಜನೆಯು ಇಲ್ಲದೆಯೇ ಹೋಗುವಂತಹ ಅಚೇತನವಸ್ತುವೃತ್ತಾಂತವು ಕಾವ್ಯದಲ್ಲಿಲ್ಲವೇ ಇಲ್ಲ. ಆದುದರಿಂದ ಅಂಗಭೂತವಾದ ರಸಾದಿಗಳಿಗೆ ಮಾತ್ರ ಅಲಂಕಾರತ್ವವನ್ನೊಪ್ಪಬೇಕು. ಆದರೆ ಮುಖ್ಯವಾಗಿರುವ ರಸವೇ ಆಗಲಿ, ಭಾವವೇ ಆಗಲಿ, ಸರ್ವಥಾ 'ಅಲಂಕಾರ್ಯ' (=ಅಲಂಕಾರಗಳಿಂದ ಭೂಷಿಸಲ್ಪಡತಕ್ಕದು)ವೇ ಹೊರತು ಎಂದಿಗೂ ಅಲಂಕಾರವಲ್ಲ. ಅದೇ 'ಧ್ವನಿ'ಯ ಆತ್ಮ.

ಮತ್ತೇನೆಂದರೆ—

ಕಾರಿಕೆ

ತಮರ್ಥಮವಲಮ್ಬನ್ತೇ ಯೇಽಙ್ಗಿನಂ ತೇ ಗುಣಾಃ ಸ್ಮೃತಾಃ |
ಅಙ್ಗಾಶ್ರಿತಾಸ್ತ್ವಲಂಕಾರಾ ಮನ್ತವ್ಯಾಃ ಕಟಕಾದಿವತ್ ‖ ೬ ‖

ಆ ಮುಖ್ಯವಾದ ಸಾರಾರ್ಥವನ್ನು ಯಾವುವು ಅವಲಂಬಿಸಿಕೊಂಡಿರುವುವೋ ಅವೇ 'ಗುಣ'ಗಳೆಂದು ನಾವು ಭಾವಿಸುತ್ತೇವೆ. ಮಿಕ್ಕ ಅಂಗಗಳನ್ನು ಮಾತ್ರ ಆಶ್ರಯಿಸಿಕೊಂಡಿರುವುವನ್ನು ಕಡಗವೇ ಮೊದಲಾದ ಆಭರಣಗಳಂತೆ, 'ಅಲಂಕಾರ' ಗಳೆಂದು ತಿಳಿಯಬೇಕು.

ವೃತ್ತಿ

ಯಾವುವು ರಸವೇ ಮೊದಲಾದ ಮುಖ್ಯ ಸಾರಾರ್ಥವನ್ನು ಆಶ್ರಯಿಸಿ ಕೊಂಡಿರುವುವೋ ಅವು, ಶೌರ್ಯವೇ ಮೊದಲಾದ ಗುಣಗಳಂತೆ, ಕಾವ್ಯದಲ್ಲಿ 'ಗುಣ'ವೆನಿಸುವುವು. ಅರ್ಥ, ಶಬ್ದ, ಮೊದಲಾದ ಅಂಶಗಳನ್ನು ಆಶ್ರಯಿಸುವವನ್ನು ಕಡಗವೇ ಮೊದಲಾದ ಆಭರಣಗಳಂತೆಯೇ ಕಾವ್ಯದ 'ಅಲಂಕಾರ'ಗಳೆಂದು ತಿಳಿಯಬೇಕು.

ಅಲ್ಲದೆ—

ಕಾರಿಕೆ

ಶೃಂಗಾರ ಏವ ಮಧುರಃ ಪರಃ ಪ್ರಹ್ಲಾದನೋ ರಸಃ।
ತನ್ಮಯಂ ಕಾವ್ಯಮಾಶ್ರಿತ್ಯ ಮಾಧುರ್ಯಂ ಪ್ರತಿತಿಷ್ಠತಿ ॥ ೭ ॥

ರಸಗಳಲ್ಲೆಲ್ಲ ಶೃಂಗಾರವೇ ಅತ್ಯಂತ ಮಧುರವೂ ಆಹ್ಲಾದಕಾರಿಯೂ ಆದುದು. ಶೃಂಗಾರಪೂರ್ಣವಾದ ಕಾವ್ಯವನ್ನು ಆಶ್ರಯಿಸಿಕೊಂಡೇ 'ಮಾಧುರ್ಯ' ಗುಣವು ಪ್ರತಿಷ್ಠಿತವಾಗಿರುತ್ತದೆ.

ವೃತ್ತಿ

ಮಿಕ್ಕ ಎಲ್ಲ ರಸಗಳಿಗಿಂತಲೂ ಶೃಂಗಾರವೇ ಮಧುರವಾದುದು ಮತ್ತು ಆಹ್ಲಾದಕ್ಕೆ ಕಾರಣವಾಗಿ ಪ್ರಕಾಶಿಸುವುದು. ಕಾವ್ಯದ ಶಬ್ದಾರ್ಥಗಳಲ್ಲಿ ಭಾಸವಾಗುವ ಈ ಗುಣವನ್ನೇ 'ಮಾಧುರ್ಯ'ವೆಂಬ ಹೆಸರಿನಿಂದ ಕರೆಯಬೇಕು; 'ಶ್ರವ್ಯತ್ವ' (=ಕಿವಿಗೆ ಇಂಪಾಗಿರುವಿಕೆ)ವನ್ನಲ್ಲ; ಏಕೆಂದರೆ ಶ್ರವ್ಯತ್ವವು 'ಓಜಸ್ಸಿ'ಗೂ ಸಮಾನವಾದ ಅಂಶ; (ಮಾಧುರ್ಯದ ವೈಶಿಷ್ಟ್ಯವೇನೂ ಅಲ್ಲ).

ಕಾರಿಕೆ

ಶೃಂಗಾರೇ ವಿಪ್ರಲಂಭಾಖ್ಯೇ ಕರುಣೇ ಚ ಪ್ರಕರ್ಷವತ್।
ಮಾಧುರ್ಯಮಾರ್ದ್ರತಾಂ ಯಾತಿ ಯತಸ್ತತ್ರಾಧಿಕಂ ಮನಃ ॥ ೮ ॥

ವಿಪ್ರಲಂಭಶೃಂಗಾರದಲ್ಲಿಯೂ ಕರುಣರಸದಲ್ಲಿಯೂ ಮಾಧುರ್ಯಕ್ಕೆ ಪ್ರಕರ್ಷವಿರುತ್ತದೆ. ಅಲ್ಲಿ ಮನಸ್ಸು ಹೆಚ್ಚುಹೆಚ್ಚಾಗಿ ಕರಗುವುದೇ ಅದಕ್ಕೆ ಕಾರಣ.

ವೃತ್ತಿ

ಸಹೃದಯರ ಹೃದಯಗಳನ್ನು ಅತಿಶಯವಾಗಿ ಕರಗಿಸುವ ಕಾರಣ, ವಿಪ್ರಲಂಭಶೃಂಗಾರದಲ್ಲಿಯೂ 'ಕರುಣ'ದಲ್ಲಿಯೂ ಮಾಧುರ್ಯಗುಣದ ಪ್ರಭಾವವು ಹೆಚ್ಚು.

ಕಾರಿಕೆ

ರೌದ್ರಾದಯೋ ರಸಾ ದೀಪ್ತ್ಯಾ ಲಕ್ಷ್ಯನ್ತೇ ಕಾವ್ಯವರ್ತಿನಃ।
ತದ್ವ್ಯಕ್ತಿಹೇತೂ ಶಬ್ದಾರ್ಥಾವಾಶ್ರಿತ್ಯೋಜೋ ವ್ಯವಸ್ಥಿತಮ್ ॥ ೯ ॥

ಕಾವ್ಯದಲ್ಲಿರುವ 'ರೌದ್ರ' ಮೊದಲಾದ ರಸಗಳು ದೀಪ್ತಿಯನ್ನು ಹೆಚ್ಚಾಗಿ ಉಂಟುಮಾಡುತ್ತವೆ. ಅವನ್ನು ವ್ಯಕ್ತಗೊಳಿಸಲು ಸಾಧಕವಾದ ಶಬ್ದಾರ್ಥಗಳನ್ನು ಆಶ್ರಯಿಸಿ 'ಓಜಸ್ಸು' ಎಂಬ ಗುಣವು ಬರುತ್ತದೆ.

ವೃತ್ತಿ

'ರೌದ್ರ'ವೇ ಮೊದಲಾದ ರಸಗಳು ಅತಿಶಯವಾದ ದೀಪ್ತಿ ಅಥವಾ ಉಜ್ಜ್ವಲತೆಯನ್ನು ಉಂಟುಮಾಡುತ್ತವೆ. ಆದಕಾರಣ ಲಕ್ಷಣೆಯಿಂದ ಅವುಗಳನ್ನೇ 'ದೀಪ್ತಿ' ಯೆಂದು ಹೇಳಬಹುದು—('ಓಜಸ್ಸು' ಎಂಬುದೂ 'ದೀಪ್ತಿ'ಗೇ ಪರ್ಯಾಯವಾದ ಪದ). ಅದನ್ನು ವ್ಯಕ್ತಗೊಳಿಸುವ '**ಶಬ್ದ**'ವೆಂದರೆ ದೀರ್ಘ-ಸಮಾಸರಚನೆಯಿಂದ ಅಲಂಕೃತವಾದ ವಾಕ್ಯವೆಂದರ್ಥ. ಉದಾಹರಣೆ:—

"ಚಂಚದ್ಭುಜಭ್ರಮಿತಚಣ್ಡಗದಾಭಿಘಾತ-
ಸಂಚೂರ್ಣಿತೋರುಯುಗಲಸ್ಯ ಸುಯೋಧನಸ್ಯ।
ಸ್ತ್ಯಾನಾವನದ್ಧಘನಶೋಣಿತಶೋಣಪಾಣಿ-
ರುತ್ತಂಸಯಿಷ್ಯತಿ ಕಚಾಂಸ್ತವ ದೇವಿ ಭೀಮಃ" ॥

ಚಲಭುಜದಿಂ ತಿರುಂಗಿಸಿದ ಚಂಡಗದಾಯುಧದುಗ್ರಘಾತದಿಂ
ದಲಘುಸುಯೋಧನೋರುಯುಗವಂ ಸದೆದಾತನ ಸಾಂದ್ರರಕ್ತಸಂ-।
ಕುಲದೆ ಮುಳುಂಗಿಸಲ್ಕೆ ಕಿಸುವಣ್ಣವ ತಾಳ್ದಿದ ನೀಳ್ದ ಪಾಣಿಯಿಂ
ಕಲಿಯಹ ಭೀಮಸೇನನಿವನೇ ನಿನತೀ ಮುಡಿಕಟ್ಟಿ ಭೂಷಿಪಂ* ॥

---

* ಪಂಡಿತ ಜಯರಾಯಾಚಾರ್ಯರ ಭಾಷಾಂತರ (ವೇಣೀಸಂಹಾರನಾಟಕ). ಭಾಷಾಂತರದಲ್ಲಿ ಪ್ರಕೃತೋಪಯೋಗಿಯಾದ ಓಜೋಗುಣವು ಮೂಲದಲ್ಲಿರುವಷ್ಟು ಚೆನ್ನಾಗಿ ಬಂದಿಲ್ಲ.

ಓಜೋಗುಣವನ್ನು ಪ್ರಕಾಶಗೊಳಿಸುವ 'ಅರ್ಥ'ಕ್ಕೆ ದೀರ್ಘ ಸಮಾಸ ರಚನೆಯ ಅಪೇಕ್ಷೆಯೇ ಇಲ್ಲ. ಪ್ರಸನ್ನ (=ಮೃದು)ವಾದ ಶಬ್ದಗಳಿಂದಲೇ ಈ ಅರ್ಥದ ಓಜಸ್ಸನ್ನು ಸಾಧಿಸಬಹುದು. ಉದಾಹರಣೆ:—

"ಯೋ ಯಶ್ಶಸ್ತ್ರಂ ಬಿಭರ್ತಿ ಸ್ವಭುಜಗುರುಮದಃ ಪಾಣ್ಡವೀನಾಂ ಚಮೂನಾಂ
ಯೋ ಯಃ ಪಾಂಚಾಲಗೋತ್ರೇ ಶಿಶುರಧಿಕವಯಾ ಗರ್ಭಶಯ್ಯಾಂ ಗತೋ ವಾ |
ಯೋ ಯಸ್ತತ್ಕರ್ಮಸಾಕ್ಷೀ ಚರತಿ ಮಯಿ ರಣೇ ಯಶ್ಚ ಯಶ್ಚ ಪ್ರತೀಪಃ
ಕ್ರೋಧಾಂಧಸ್ತಸ್ಯ ತಸ್ಯ ಸ್ವಯಮಪಿ ಜಗತಾಮಂತಕಸ್ಯಾಂತಕೋಽಹಮ್ ||"

ಆರಾರಾಪಾಂಡುಸೇನಾಂತದೊಳೆ ಭುಜದ ಬಲ್ಪಿಂದೆ ಕೈದಾಂತರೋ ಮೇ
ಣಾರಾ ಪಾಂಚಾಲವಂಶಂಗಳೊಳೆ ಮಗುವವಂ ಗರ್ಭಗಂ ಮುಪ್ಪನಾಂತಂ |
ಆರಾರಾ ಕಜ್ಜಮಂ ನೋಡಿದರೆನಗೆದುರಾರಾಜಿಯೊಳ್ ವರ್ಪರಾರಾರ್
ಕ್ರೂರರ್ಗೆಲ್ಲರ್ಗವರ್ಗಂ ಜಗತಿಗೆ ನಿಜನಾದಂತಕಂಗಂತಕಂ ತಾಮ್ ||[1]

ಹೀಗೆ ಶಬ್ದಾರ್ಥಗಳೆರಡೂ ಓಜೋಗುಣಕ್ಕೆ ಆಶ್ರಯಗಳು.

ಕಾರಿಕೆ

ಸಮರ್ಪಕತ್ವಂ ಕಾವ್ಯಸ್ಯ ಯತ್ತು ಸರ್ವರಸಾನ್ ಪ್ರತಿ |
ಸ ಪ್ರಸಾದೋ ಗುಣೋ ಜ್ಞೇಯಃ ಸರ್ವಸಾಧಾರಣಕ್ರಿಯಃ || ೧೧ ||

ಸಕಲ ರಸಗಳಿಗೂ ಕಾವ್ಯವನ್ನು ಸಮರ್ಪಿಸಬಲ್ಲ ಗುಣವೇ 'ಪ್ರಸಾದ'ವೆಂದು ತಿಳಿಯಬೇಕು. ಈ ಗುಣದ ಪ್ರಭಾವವು ಎಲ್ಲಕ್ಕೂ ಒಂದೇ ಸಮನಾಗಿ ಅನ್ವಯಿಸುವುದು.

ವೃತ್ತಿ

'ಪ್ರಸಾದ'ವೆಂದರೆ 'ಶಬ್ದ' ಮತ್ತು 'ಅರ್ಥ'ಗಳು ತಿಳಿಯಾಗಿರುವುದು. ಈ ಗುಣವು "ಎಲ್ಲಕ್ಕೂ" ಎಂದರೆ ಎಲ್ಲ ರಸಗಳಿಗೂ ಮತ್ತು ಎಲ್ಲ ರಚನೆಗಳಿಗೂ ಒಂದೇ ಸಮನಾಗಿ ಅನ್ವಯಿಸುವುದು. ಆದುದರಿಂದ ಈ ಗುಣವು ಮುಖ್ಯವಾಗಿ ವ್ಯಂಗ್ಯಾರ್ಥಕ್ಕೆ ಸಂಬಂಧಿಸುವುದೆಂದೇ ವ್ಯವಸ್ಥೆಮಾಡಿಕೊಳ್ಳಬೇಕು.

ಕಾರಿಕೆ

ಶ್ರುತಿದುಷ್ಟಾದಯೋ ದೋಷಾ ಅನಿತ್ಯಾ ಯೇ ಚ ದರ್ಶಿತಾಃ |
ಧ್ವನ್ಯಾತ್ಮನ್ಯೇವ ಶೃಂಗಾರೇ ತೇ ಹೇಯಾ ಇತ್ಯುದಾಹೃತಾಃ || ೧೧ ||

[1] ಪಂಡಿತ ಜಯರಾಯಾಚಾರ್ಯರ ಭಾಷಾಂತರ (ವೇಣೀಸಂಹಾರನಾಟಕ).

'ಶ್ರುತಿದುಷ್ಟ'ವೇ ಮೊದಲಾದ ದೋಷಗಳು 'ಅನಿತ್ಯ'ಗಳೆಂದು ಹಿಂದಿನವರು ತೋರಿಸಿರುವುದು ಸರಿಯಷ್ಟೆ; ಅವು ಧ್ವನಿಯ ಆತ್ಮವಾದ ಶೃಂಗಾರದಲ್ಲಿ ಮಾತ್ರ ಹೇಯಗಳೆಂದು ಉದಾಹರಿಸಲ್ಪಟ್ಟಿವೆ.

ವೃತ್ತಿ

ಅನಿತ್ಯಗಳೆಂದು ಪ್ರಾಚೀನರು ಸೂಚಿಸಿರುವ 'ಶ್ರುತಿದುಷ್ಟ'ವೇ ಮೊದಲಾದ ದೋಷಗಳು ಕೇವಲ ವಾಚ್ಯಾರ್ಥದಲ್ಲಾಗಲಿ, ಅಥವಾ ವ್ಯಂಗ್ಯವಾಗಿದ್ದರೂ ಧ್ವನಿಯ ಆತ್ಮವಲ್ಲದ ಶೃಂಗಾರದಲ್ಲಾಗಲಿ, ಮಿಕ್ಕ ರಸಗಳಲ್ಲಾಗಲಿ, ಎಂದಿಗೂ ಹೇಯವಾದ ದೋಷಗಳಾಗುವುದೇ ಇಲ್ಲ. ನಿಜವಾಗಿಯೂ ಅವು ನಿತ್ಯ ದೋಷಗಳಾಗುವುದು, ಧ್ವನಿಯ ಆತ್ಮಭೂತವಾದ ಶೃಂಗಾರವು ಪ್ರಧಾನವಾಗಿ ವ್ಯಂಗ್ಯವಾಗುತ್ತಿರುವೆಡೆಯಲ್ಲಿ ಮಾತ್ರವೇ. ಹೀಗಿಲ್ಲದೆ ಹೋಗಿದ್ದರೆ ಆ ದೋಷಗಳ ಅನಿತ್ಯತೆಯೇ ಸ್ಫುಟವಾಗಿ ಸಿದ್ಧಿಸುತ್ತಿರಲಿಲ್ಲ.

ಹೀಗೆ ಇಲ್ಲಿಯವರೆಗೂ ಸಾಮಾನ್ಯವಾಗಿ ಅಸಂಲಕ್ಷ್ಯಕ್ರಮಧ್ವನಿಯ ಸ್ವರೂಪವನ್ನು ಪ್ರದರ್ಶಿಸಿದಂತಾಯಿತು.

ಕಾರಿಕೆ

ತಸ್ಯಾಙ್ಗಾನಾಂ ಪ್ರಭೇದಾ ಯೇ ಪ್ರಭೇದಾಃ ಸ್ವಗತಾಶ್ಚ ಯೇ ।
ತೇಷಾಮಾನನ್ತ್ಯಮನ್ಯೋನ್ಯಸಮ್ಬನ್ಧಪರಿಕಲ್ಪನೇ ॥ ೧೨ ॥

ಅದರ ಅಂಗಗಳೆಲ್ಲವುಗಳ ಪ್ರಭೇದಗಳಿಗೂ ಮತ್ತು ಸ್ವಗತವಾದ ಪ್ರಭೇದಗಳಿಗೂ ಅವುಗಳ ಪರಸ್ಪರ ಸಂಬಂಧಗಳನ್ನು ಲೆಕ್ಕಹಾಕುತ್ತಾ ಹೊರಟರೆ—ಆನಂತ್ಯವೇ ಬಂದು ಹೋಗುತ್ತದೆ.

ವೃತ್ತಿ

ಮುಖ್ಯವಾಗಿ ರಸಾದಿಗಳು ವ್ಯಂಗ್ಯವಾಗುತ್ತಿರುವ ವಿವಕ್ಷಿತಾನ್ಯಪರವಾಚ್ಯ ಧ್ವನಿಗೆ ಯಾವುದನ್ನು ಆತ್ಮವೆಂದು ನಾವು ಹೇಳಿದೆವೋ ಅದರ ಅಂಗಗಳಾದ ಅರ್ಥ, ಮತ್ತು ಶಬ್ದಗಳನ್ನಾಶ್ರಯಿಸಿರುವ ಅಲಂಕಾರಗಳ ಅನಂತ ಪ್ರಭೇದಗಳು, ಮತ್ತು ಆ ಮುಖ್ಯವಾದ ಸಾರಾರ್ಥಕ್ಕೇ ಸ್ವತಃ ಇರತಕ್ಕ ರಸ, ಭಾವ, ರಸಾಭಾಸ, ಭಾವಾಭಾಸ, ರಸಪ್ರಶಮ, ಭಾವಪ್ರಶಮ, ಮೊದಲಾದ ಅನಂತ ಪ್ರಭೇದವಿಶೇಷಗಳು—ಇವೂ ಕೂಡ ವಿಶಿಷ್ಟ ವಿಭಾವ, ಅನುಭಾವ, ವ್ಯಭಿಚಾರಿಭಾವಗಳ ಪ್ರತಿಪಾದನದಿಂದ ವಿವಿಧವಾಗುತ್ತವೆ—ಇವೆಲ್ಲವುಗಳ ಅನ್ಯೋನ್ಯಸಂಬಂಧವನ್ನು ಲೆಕ್ಕಮಾಡಿದ್ದೇ ಆದರೆ, ಯಾವುದೋ ಒಂದೇ ಒಂದು ರಸದ ಸಕಲ ಪ್ರಕಾರಗಳನ್ನು ಕೂಡ ಸಂಪೂರ್ಣವಾಗಿ

ಎಣಿಸುವುದಕ್ಕೆ ಶಕ್ಯವಾಗುವುದಿಲ್ಲ; ಎಂದಮೇಲೆ ಎಲ್ಲವನ್ನೂ ಲೆಕ್ಕಮಾಡಿ ಮುಗಿಸುವ ಕೆಲಸಕ್ಕೆ ಹೇಳುವುದೇನಿದೆ? ಉದಾಹರಣೆಗೆ ಮುಖ್ಯವಾದ ಶೃಂಗಾರರಸವನ್ನೇ ನೋಡೋಣ. ಅದು ಮೊತ್ತಮೊದಲು 'ಸಂಭೋಗ,' 'ವಿಪ್ರಲಂಭ' ಎಂಬ ಎರಡು ಬಗೆಗಳಾಗುತ್ತದೆ. ಸಂಭೋಗ ಶೃಂಗಾರವೊಂದೇ ಪರಸ್ಪರ ಪ್ರೇಮ, ದರ್ಶನ, ಸುರತ, ವಿಹಾರ—ಇವೇ ಮೊದಲಾದ ಅನೇಕ ಪ್ರಕಾರಗಳನ್ನೊಳಗೊಂಡಿರುತ್ತದೆ. ಹಾಗೆಯೇ ವಿಪ್ರಲಂಭಶೃಂಗಾರವೂ ಅಭಿಲಾಷೆ, ಈರ್ಷ್ಯೆ, ವಿರಹ, ಪ್ರವಾಸ ಮೊದಲಾದ ಭಿನ್ನ ಭಿನ್ನ ವಿಪ್ರಲಂಭಪ್ರಕಾರಗಳನ್ನು ಹೊಂದಿರುತ್ತದೆ. ಈ ಪ್ರಕಾರಗಳಲ್ಲಿ ಮತ್ತೆ ಪ್ರತಿಯೊಂದಕ್ಕೂ ಭಿನ್ನ ಭಿನ್ನವಾದ ವಿಭಾವ, ಅನುಭಾವ, ವ್ಯಭಿಚಾರಿಭಾವಗಳ ಯೋಗವಿರುತ್ತದೆ. ಅವುಗಳಿಗೂ ಸಹ ದೇಶ, ಕಾಲ, ಮೊದಲಾದುವನ್ನಾಶ್ರಯಿಸಿದ ಅವಸ್ಥಾಭೇದವುಂಟು. ಹೀಗಿರುವುದರಿಂದ ರಸಾದಿಗಳ ಕೇವಲ ಸ್ವಗತ ಭೇದಗಳನ್ನು ಲೆಕ್ಕಹಾಕಿದರೇ ಗಣನಾತೀತತ್ವವು ವ್ಯಕ್ತವಾಗುತ್ತಿರುವಾಗ, ಇನ್ನು ಎಲ್ಲ ಅಂಗಗಳ ಪ್ರಭೇದಗಳನ್ನೂ ಸೇರಿಸಿಕೊಂಡರೆ ಕೇಳಬೇಕೆ? ಮತ್ತೆ ಆ ಅಂಗದ ಪ್ರಭೇದಗಳಲ್ಲಿ ಒಂದೊಂದಕ್ಕೂ 'ಅಂಗಿ' (=ಮುಖ್ಯ ರಸಾದಿಗಳು) ಪ್ರಭೇದಗಳೊಡನೆ ಸಂಬಂಧ ವನ್ನು ಕಲ್ಪಿಸುತ್ತಾ ಹೊರಟರಂತೂ ತೀರಿಯೇ ಹೋಯಿತು—ಆನಂತ್ಯವೇ ಬಂದೊದಗುವುದರಲ್ಲಿ ಸಂದೇಹವಿಲ್ಲ.

ಕಾರಿಕೆ

ದಿಙ್ಮಾತ್ರಂ ತೂಚ್ಯತೇ ಯೇನ ವ್ಯುತ್ಪನ್ನಾನಾಂ ಸಚೇತಸಾಮ್ ।
ಬುದ್ಧಿರಾಸಾದಿತಾಲೋಕಾ ಸರ್ವತ್ರೈವ ಭವಿಷ್ಯತಿ ॥ ೧೩ ॥

ಆದುದರಿಂದ ಇಲ್ಲಿ ಅದರ ದಿಕ್ಪ್ರದರ್ಶನವನ್ನು ಮಾತ್ರ ಮಾಡುತ್ತೇವೆ. ಇಷ್ಟ ರಿಂದಲೇ ವ್ಯುತ್ಪನ್ನರಾದ ಸಹೃದಯರ ಬುದ್ಧಿಗೆ ಪ್ರಕಾಶವು ದೊರೆತು ಉಳಿದ ಕಡೆಗಳಲ್ಲಿಯೂ ತಾವೇ ಸರಿಯಾಗಿ ಊಹಿಸಿಕೊಳ್ಳಬಹುದು.

ವೃತ್ತಿ

ದಿಗ್ದರ್ಶನಮಾತ್ರದಿಂದಲೇ ಎಂದರೆ ಒಂದೇ ಒಂದು ರಸ-ಭೇದದಲ್ಲಿಯೇ ಆಗಲಿ ಅಲಂಕಾರಗಳನ್ನು ಯೋಚಿಸುವ ಸಂದರ್ಭವೊದಗಿದಾಗ 'ಅಂಗ'ವಾವುದು, ಪ್ರಧಾನ ವಾವುದು ಎಂಬ ಪರಿಜ್ಞಾನವನ್ನುಂಟುಮಾಡಿಕೊಡುವುದರಿಂದಲೇ, ವ್ಯುತ್ಪನ್ನರಾದ ಸಹೃದಯರ ಬುದ್ಧಿಗೆ ಪ್ರಕಾಶ ಸಿಕ್ಕದಂತಾಗಿ, ಮಿಕ್ಕ ಕಡೆಗಳಲ್ಲಿಯೂ ಅವರಿಗೆ ಸಂದೇಹಕ್ಕೆಡೆಯಿರುವುದಿಲ್ಲ.

ಅದೇನೆಂದರೆ—

ಕಾರಿಕೆ

ಶೃಂಗಾರಸ್ಯಾಙ್ಗಿನೋ ಯತ್ನಾದೇಕರೂಪಾನುಬಂಧನಾತ್ ।
ಸರ್ವೇಷ್ವೇವ ಪ್ರಭೇದೇಷು ನಾನುಪ್ರಾಸಃ ಪ್ರಕಾಶಕಃ ॥ ೧೪ ॥

ಪ್ರಧಾನವಾದ ಶೃಂಗಾರರಸದ ಎಲ್ಲ ಪ್ರಭೇದಗಳಲ್ಲಿಯೂ ಅನುಪ್ರಾಸವು ರಸಪ್ರಕಾಶಕವಾಗುವುದಿಲ್ಲ; ಒಂದೇ ಜಾತಿಯ ವರ್ಣಗಳನ್ನು ಪ್ರಯೋಗಿಸುವುದರಲ್ಲಿ ಅತ್ಯಂತ ಪ್ರಯತ್ನವು ಆವಶ್ಯಕವಾಗುವುದೇ ಅದಕ್ಕೆ ಕಾರಣ.

ವೃತ್ತಿ

ಪ್ರಧಾನವಾದ ಶೃಂಗಾರರಸಕ್ಕೆ ಮೇಲೆ ಹೇಳಲಾದ ಎಲ್ಲ ಭೇದಗಳಲ್ಲಿಯೂ, ಒಂದೇ ಪ್ರಕಾರದ ವರ್ಣಸಂಯೋಜನೆಯ ನಿರ್ಬಂಧದಿಂದ ಹೊರಟ ಅನುಪ್ರಾಸವು ರಸಪೋಷಕವಾಗುವುದಿಲ್ಲ, 'ಪ್ರಧಾನವಾದ' ಎಂಬ ವಿಶೇಷಣವನ್ನು ಹೇಳಿರುವುದರಿಂದ ಅಂಗಭೂತವಾದ ಶೃಂಗಾರದಲ್ಲಿ ಇಂತಹ (ಏಕರೂಪಾನುಬಂಧಿಯಾದ) ಅನುಪ್ರಾಸವು ಬಂದರೂ ದೋಷವಿಲ್ಲವೆಂದು ಹೇಳಿದಂತಾಯಿತು.

ಕಾರಿಕೆ

ಧ್ವನ್ಯಾತ್ಮಭೂತೇ ಶೃಂಗಾರೇ ಯಮಕಾದಿನಿಬಂಧನಮ್ ।
ಶಕ್ತಾವಪಿ ಪ್ರಮಾದಿತ್ವಂ ವಿಪ್ರಲಮ್ಭೇ ವಿಶೇಷತಃ ॥ ೧೫ ॥

ಕವಿಗೆ ಶಕ್ತಿಯಿದ್ದರೂ ಕೂಡ 'ಧ್ವನಿ'ಗೆ ಆತ್ಮಪ್ರಾಯವಾದ ಶೃಂಗಾರದಲ್ಲಿ, ವಿಶೇಷತಃ ವಿಪ್ರಲಂಭಶೃಂಗಾರದಲ್ಲಿ, 'ಯಮಕ'ವೇ ಮೊದಲಾದುವುಗಳ ಜೋಡಣೆಯು ಅವನ ಪ್ರಮಾದವನ್ನೇ ತೋರಿಸುತ್ತದೆ.

ವೃತ್ತಿ

ಧ್ವನಿಗೆ ಆತ್ಮಪ್ರಾಯವಾದ ಶೃಂಗಾರ ರಸವು ಎಲ್ಲಿ ಶಬ್ದ, ಅರ್ಥಗಳೆರಡರಿಂದಲೂ ಮುಖ್ಯ ತಾತ್ಪರ್ಯವಾಗಿ ಶೋಭಿಸುತ್ತಿರುವುದೋ ಅಲ್ಲಿ "ಯಮಕವೇ ಮೊದಲಾದ" ಎಂದರೆ ವಿಧವಿಧವಾದ ಯಮಕಪ್ರಕಾರಗಳ, ಮತ್ತು ದುಷ್ಕರವಾದ ಸಭಂಗ ಶಬ್ದಶ್ಲೇಷಗಳ ಪ್ರಯೋಗವು, ಕವಿಗೆ ಪ್ರತಿಭೆಯಿದ್ದರೂ ಕೂಡ ಅವನ ಪ್ರಮಾದವನ್ನೇ ಎತ್ತಿ ತೋರಿಸುತ್ತದೆ. "ಪ್ರಮಾದವನ್ನೇ ತೋರಿಸುತ್ತದೆ" ಎಂಬುದಕ್ಕೆ ಹೀಗೆ ಅಭಿಪ್ರಾಯ—ಕಾಕತಾಲೀಯನ್ಯಾಯದಿಂದ ಎಲ್ಲೋ ಒಂದೊಂದು ಕಡೆ ಯಮಕಾದಿಗಳು ಬಂದುಕೊಳ್ಳಬಹುದು; ಆದರೆ ಇತರ ಅಲಂಕಾರಗಳನ್ನು ಹೆಚ್ಚು

ಹೆಚ್ಚಾಗಿ ಅಭಿಮತರಸಕ್ಕೆ ಅಂಗವಾಗಿ ಮಾಡಿಕೊಳ್ಳುವಂತೆ ಯಮಕವೇ ಮೊದಲಾದ ಶಬ್ದಾಲಂಕಾರಗಳನ್ನು ಮಾಡಬಾರದು—ಎಂದು. "ವಿಶೇಷತಃ ವಿಪ್ರಲಂಭಶೃಂಗಾರದಲ್ಲಿ" ಎನ್ನುವುದರಿಂದ ಅದರ ಸೌಕುಮಾರ್ಯಾತಿಶಯವು ಸೂಚಿತವಾಗುತ್ತದೆ. ಅದು ಪ್ರಕಾಶಿತವಾಗಬೇಕಾಗಿರುವಾಗ ಯಮಕವೇ ಮೊದಲಾದ ಅಂಗಗಳನ್ನು ಸರ್ವಥಾ ಉಪಯೋಗಿಸಲೇಬಾರದೆಂಬ ನಿಯಮವನ್ನು ಗ್ರಹಿಸಬೇಕು.

ಇದಕ್ಕೆ ಯುಕ್ತಿಯನ್ನು ಮುಂದಿನ ಕಾರಿಕೆಯಲ್ಲಿ ಹೇಳಿದೆ:—

ಕಾರಿಕೆ

ರಸಾಕ್ಷಿಪ್ತತಯಾ ಯಸ್ಯ ಬನ್ಧಃ ಶಕ್ಯಕ್ರಿಯೋ ಭವೇತ್ ।
ಅಪೃಥಗ್ಯತ್ನನಿರ್ವರ್ತ್ಯಃ ಸೋಽಲಂಕಾರೋ ಧ್ವನೌ ಮತಃ ॥ ೧೬ ॥

ರಸಾವೇಶದ ಪ್ರಭಾವ ಮಾತ್ರದಿಂದಲೇ, ಬೇರೆ ಅದಕ್ಕೋಸ್ಕರ ಪ್ರಯತ್ನ ಮಾಡದೆ ಇದ್ದರೂ ಕೂಡ, ಯಾವುದರ ಜೋಡಣೆಯು ಶಕ್ಯವೋ ಅದನ್ನು ಮಾತ್ರ 'ಧ್ವನಿ'ಯಲ್ಲಿ 'ಅಲಂಕಾರ'ವೆನ್ನುತ್ತೇವೆ.

ವೃತ್ತಿ

ಪರಿಣಾಮದಲ್ಲಿ ಆಶ್ಚರ್ಯಕರವಾಗಿದ್ದರೂ, ಯಾವ ಅಲಂಕಾರದ ಸಂಯೋಜನೆಯು ಕವಿಯ ರಸಾವೇಶದ ಪ್ರಭಾವ ಮಾತ್ರದಿಂದಲೇ ಸಾಧ್ಯವಾಗಿರುವುದೋ, ಅದನ್ನು ಮಾತ್ರ ಈ 'ಅಲಕ್ಷ್ಯಕ್ರಮವ್ಯಂಗ್ಯ' ಧ್ವನಿಯಲ್ಲಿ 'ಅಲಂಕಾರ'ವೆನ್ನುತ್ತೇವೆ. ಎಂದರೆ ಅದಕ್ಕೆ ಮಾತ್ರ ಮುಖ್ಯವಾದ ರಸಾಂಗತ್ವವಿರುವುದೆಂದಭಿಪ್ರಾಯ.

ಉದಾಹರಣೆ:—

"ಕಪೋಲೇ ಪತ್ರಾಲೀ ಕರತಲನಿರೋಧೇನ ಮೃದಿತಾ
ನಿಪೀತೋ ನಿಃಶ್ವಾಸೈರಯಮಮೃತಹೃದ್ಯೋಽಧರರಸಃ ।
ಮುಹುಃ ಕಂಠೇ ಲಗ್ನಸ್ತರಲಯತಿ ಬಾಷ್ಪಃ ಸ್ತನತಟಂ
ಪ್ರಿಯೋ ಮನ್ಯುರ್ಜಾತಸ್ತವ ನಿರನುರೋಧೇ ನ ತು ವಯಮ್ ॥"

ಕೆನ್ನೆ ಮೇಲಿನ ಪತ್ರರಚನೆಯು ಕೈಯ ಹಿಡಿತದಲೊತ್ತಿತು,
ನಿನ್ನ ನಿಟ್ಟುಸಿರಮೃತಮಧುರವನಧರರಸವನೆ ಹೀರಿತು ।
ಕೊರಳಿನೆಡೆಯಲಿ ನಿಂದ ಬಾಷ್ಪವು ಕುಚತಟವ ತಾ ಕುಣಿಸಿತು,
ಕೋಪವಾಗಿರೆ ನಿನ್ನ ಕಾಂತನು, ನಾನು ಕಠಿಣಳೆ! ಅಲ್ಲವು ॥

ರಸಕ್ಕೆ ನಿಜವಾಗಿಯೂ ಅಂಗವಾಗುವಂತಹ ಅಲಂಕಾರವು ರಸವನ್ನು ಬಿಟ್ಟು ಬೇರೆ ಪ್ರಯತ್ನದ ಅಗತ್ಯವಿಲ್ಲದೆಯೇ ಸರ್ವಲಕ್ಷಣಸಂಪನ್ನವಾಗಿ ಹೊರಹೊಮ್ಮುತ್ತದೆ. ಆದುದರಿಂದ ರಸವನ್ನು ಪ್ರಕಟಿಸುವ ಉದ್ದೇಶದಿಂದ ಹೊರಟ ಕವಿಯ ರಸಾಭಿನಿವೇಶಕ್ಕಿಂತ ಹೆಚ್ಚಾಗಿ ಬೇರೆ ಪ್ರಯತ್ನವೇ ಎದ್ದು ಕಾಣುವಂತೆ ಅಲಂಕಾರವಿರುವುದಾದರೆ ಆಗ ಅದು ರಸಕ್ಕೆ ಅಂಗವೆನಿಸಲಾರದು. ಉದ್ದೇಶಪೂರ್ವಕವಾಗಿ, ಮತ್ತು ನಿರ್ಬಂಧದಿಂದ, ಯಮಕವನ್ನು ಪ್ರಯೋಗಿಸುವ ಕಾಲದಲ್ಲಿ ವಿಶಿಷ್ಟ ಶಬ್ದಗಳ ಅನ್ವೇಷಣವೆಂಬ ಪ್ರಯತ್ನಾಂತರವು ಕವಿಯಲ್ಲಿ ಕಂಡೇ ಕಾಣುತ್ತದೆ. ಮಿಕ್ಕ ಅಲಂಕಾರಗಳ ಯೋಜನೆಯಲ್ಲಿಯೂ ಹೀಗೆ ಪ್ರಯತ್ನಾತಿಶಯವಿರುವುದು ಸಮಾನವೆಂದು ಹೇಳುವುದು ಸರಿಯಲ್ಲ. ವಸ್ತುತಃ ಮಿಕ್ಕ ಅಲಂಕಾರಗಳು ಮೇಲ್ನೋಟಕ್ಕೆ ದುಸ್ಸಾಧ್ಯಗಳಾಗಿ ಕಂಡರೂ, ರಸಸಮಾಧಿಯಲ್ಲಿ ತನ್ಮಯಚಿತ್ತನಾದ ಪ್ರತಿಭಾಶಾಲಿಯಾದ ಕವಿಗೆ 'ನಾನು ಮುಂದು, ತಾನು ಮುಂದು' ಎಂಬಂತೆ ಸಹಜವಾಗಿಯೇ ಸ್ಫುರಿಸುತ್ತವೆ. ಉದಾಹರಣೆಗೆ **ಕಾದಂಬರಿ**ಯಲ್ಲಿ ಕಾದಂಬರೀದರ್ಶನ-ಪ್ರಸಂಗವನ್ನೂ, **ಸೇತುಬಂಧ ಕಾವ್ಯ**ದಲ್ಲಿ ಮಾಯಾರಾಮನ ತಲೆಯನ್ನು ಕಂಡು ವಿಹ್ವಲಳಾಗುವ ಸೀತಾದೇವಿಯ ವರ್ಣನೆಯನ್ನೂ ಹೇಳಬಹುದು. ಹೀಗಿರುವುದು ನ್ಯಾಯವೇ ಆಗಿದೆ. ಏಕೆಂದರೆ ರಸಗಳು ವಾಚ್ಯಾರ್ಥ ವಿಶೇಷಗಳಿಂದಲೇ ವ್ಯಂಗ್ಯವಾಗಬೇಕು. ಸ್ವಬೋಧಕ-ಸಾಮರ್ಥ್ಯವಿರುವ ಶಬ್ದಗಳಿಂದ ಪ್ರತೀತವಾಗುತ್ತಾ ರಸಗಳನ್ನು ಪ್ರಕಾಶಿಸುತ್ತಿರುವ ವಾಚ್ಯಾರ್ಥಗಳೇ 'ರೂಪಕ' ಮುಂತಾದ ಅರ್ಥಾಲಂಕಾರಗಳು. ಆದುದರಿಂದ ರಸಾಭಿವ್ಯಕ್ತಿಯಲ್ಲಿ ಅವುಗಳಿಗೆ ಬಾಹ್ಯತ್ವವಿಲ್ಲ. ಯಮಕವೇ ಮುಂತಾದ ದುಷ್ಕರ ಮಾರ್ಗಗಳಲ್ಲಿ ಮಾತ್ರ ಬಾಹ್ಯತ್ವವುಂಟೇ ಉಂಟು. ರಸವತ್ತಾದ ಯಮಕಗಳೂ ಅಲ್ಲಲ್ಲಿ ಇರುವುವಲ್ಲಾ ಎಂದರೆ ಅಲ್ಲಿಯೂ ಕೂಡ ರಸಾದಿಗಳಿಗೆ ಅಪ್ರಾಧಾನ್ಯವಿರುವುದೇ ಹೊರತು ಪ್ರಾಧಾನ್ಯವಿರುವುದಿಲ್ಲ; ಪ್ರಾಧಾನ್ಯವೆಲ್ಲವೂ ಯಮಕಾದಿಗಳಿಗೇಯೆ. ರಸಾಭಾಸದಲ್ಲಿ ಯಮಕಾದಿಗಳು ಅಂಗವಾದರೂ ತಪ್ಪಿಲ್ಲ. ರಸವು ವ್ಯಂಗ್ಯವಾಗುತ್ತಿರುವಾಗ ಯಮಕಾದಿಗಳಿಗೆ ಪ್ರಾಧಾನ್ಯ ಬರುವುದೇ ಹೊರತು ಅಪ್ರಾಧಾನ್ಯ ಬರುವುದಿಲ್ಲ; ಏಕೆಂದರೆ ಅವುಗಳನ್ನು ಪ್ರಯೋಗಿಸಲು ಪ್ರತ್ಯೇಕ ಪ್ರಯತ್ನವು ಅನಿವಾರ್ಯವೇ ಆಗುತ್ತದೆ:—

ಈ ವಿಷಯವನ್ನೇ ಸಂಗ್ರಹವಾಗಿ ಹೇಳುವ ಶ್ಲೋಕಗಳಿವು :—

ರಸವನ್ತಿ ಹಿ ವಸ್ತೂನಿ ಸಾಲಂಕಾರಾಣಿ ಕಾನಿಚಿತ್ ।
ಏಕೇನೈವ ಪ್ರಯತ್ನೇನ ನಿರ್ವರ್ತ್ಯನ್ತೇ ಮಹಾಕವೇಃ ॥

ಯಮಕಾದಿನಿಬನ್ಧೇ ತು ಪೃಥಗ್ಯತ್ನೋಽಸ್ಯ ಜಾಯತೇ।
ಶಕ್ತಸ್ಯಾಪಿ ರಸೇಽಙ್ಗತ್ವಂ ತಸ್ಮಾದೇಷಾಂ ನ ವಿದ್ಯತೇ ॥
ರಸಾಭಾಸಾಙ್ಗಭಾವಸ್ತು ಯಮಕಾದೇರ್ನ ವಾರ್ಯತೇ।
ಧ್ವನ್ಯಾತ್ಮಭೂತೇ ಶೃಂಗಾರೇ ತ್ವಙ್ಗತಾ ನೋಪಪದ್ಯತೇ ॥

ಕೆಲವು ರಸವತ್ತಾದ ವಸ್ತುಗಳು ಮಹಾಕವಿಯಾದವನ ಒಂದೇ ಪ್ರಯತ್ನದಿಂದಲೇ ಅಲಂಕಾರಸಹಿತಗಳಾಗಿ ಆವಿರ್ಭವಿಸುತ್ತವೆ.

ಯಮಕವೇ ಮೊದಲಾದ ಅಲಂಕಾರಗಳ ಪ್ರಯೋಗದಲ್ಲಿ, ತಾನು ಎಷ್ಟೇ ಪ್ರತಿಭಾಶಾಲಿಯಾಗಿರಲಿ, ಕವಿಗೆ ಪ್ರತ್ಯೇಕ ಪ್ರಯತ್ನವು ಬೇಕಾಗುತ್ತದೆ. ಆದುದರಿಂದ ಇವುಗಳಿಗೆ ರಸಾಂಗತ್ವವಿರುವುದಿಲ್ಲ.

ಯಮಕಾದಿಗಳು ರಸಾಭಾಸಕ್ಕೆ ಧಾರಾಳವಾಗಿ ಅಂಗವಾಗಬಹುದು; ಆದರೆ ಧ್ವನಿಗೆ ಆತ್ಮಪ್ರಾಯವಾದ ಶೃಂಗಾರದಲ್ಲಿ ಅವಕ್ಕೆ ಅಂಗತ್ವವು ಅಸಾಧ್ಯ.

ಈಗ ಧ್ವನಿಗೆ ಆತ್ಮವಾದ ಶೃಂಗಾರಕ್ಕೆ ಪೋಷಕವಾಗುವ ಅಲಂಕಾರವರ್ಗವನ್ನು ಹೇಳುತ್ತಾನೆ—

ಕಾರಿಕೆ

ಧ್ವನ್ಯಾತ್ಮಭೂತೇ ಶೃಂಗಾರೇ ಸಮೀಕ್ಷ್ಯ ವಿನಿವೇಶಿತಃ।
ರೂಪಕಾದಿರಲಂಕಾರವರ್ಗ ಏತಿ ಯಥಾರ್ಥತಾಮ್ ॥ ೧೭ ॥

ಸರಿಯಾದ ವಿವೇಚನೆಯಿಂದ ಪ್ರಯೋಗಿಸಿದಂತಹ 'ರೂಪಕ'ವೇ ಮೊದಲಾದ ಅಲಂಕಾರವರ್ಗವು ಧ್ವನಿಗೆ ಆತ್ಮಭೂತವಾದ ಶೃಂಗಾರದಲ್ಲಿ ಸಾರ್ಥಕ್ಯವನ್ನು ಪಡೆಯುತ್ತದೆ.

ವೃತ್ತಿ

ಮನುಷ್ಯನ ಬಾಹ್ಯಭೂಷಣಗಳ ಸಾಮ್ಯವನ್ನು ಮನಸ್ಸಿನಲ್ಲಿಟ್ಟು ಕಾವ್ಯದಲ್ಲಿಯೂ ಸಹ 'ಅಲಂಕಾರ' ವೆಂದರೆ ಪ್ರಧಾನವಾದ ರಸಾದಿಗಳ ಸೌಂದರ್ಯಕಾರಣಗಳೆನ್ನಬಹುದು. ಈಗಾಗಲೇ ಕೆಲವರು ಹೇಳಿರುವ, ಮತ್ತು ಅಲಂಕಾರಗಳು ಅನಂತವಾದುದರಿಂದ ಮುಂದಿನವರು ಇನ್ನೂ ಹೇಳಬಹುದಾದ, 'ರೂಪಕ'ವೇ ಮೊದಲಾದ ಅರ್ಥಾಲಂಕಾರವರ್ಗವೆಲ್ಲವೂ ಕವಿಯು ವಿವೇಕದಿಂದ ಉಪಯೋಗಿಸಿದುದೇ ಆದರೆ 'ಅಲಕ್ಷ್ಯಕ್ರಮವ್ಯಂಗ್ಯ' ಧ್ವನಿಯ ಪ್ರಧಾನಾಂಶದ ರಮಣೀಯತೆಯನ್ನು ಹೆಚ್ಚಿಸಲು ಸಹಕಾರಿಗಳಾಗಿ ಪರಿಣಮಿಸುತ್ತವೆ.

ಈ ಅರ್ಥಾಲಂಕಾರಗಳನ್ನು ಜೋಡಿಸುವ ಕಾಲದಲ್ಲಿ ನೆನಪಿರಬೇಕಾದ ವಿವೇಕ ವೆಂದರೆ ಇದು :—

ಕಾರಿಕೆ

ವಿವಕ್ಷಾ ತತ್ಪರತ್ವೇನ ನಾಙ್ಗಿತ್ವೇನ ಕದಾಚನ ।
ಕಾಲೇ ಚ ಗ್ರಹಣತ್ಯಾಗೌ ನಾತಿನಿರ್ವಹಣೈಷಿತಾ ॥ ೧೮ ॥

ನಿರ್ವ್ಯೂಢಾವಪಿ ಚಾಙ್ಗತ್ವೇ ಯತ್ನೇನ ಪ್ರತ್ಯವೇಕ್ಷಣಮ್ ।
ರೂಪಕಾದಿರಲಂಕಾರವರ್ಗಸ್ಯಾಙ್ಗತ್ವಸಾಧನಮ್ ॥ ೧೯ ॥

ಸರ್ವದಾ ರಸಪರವಾದ ವಿವಕ್ಷೆಯೇ ಹೊರತು ತಾನೇ ಪ್ರಧಾನವೆಂಬ ಭಾವನೆಯು ಸರ್ವಥಾ ಇಲ್ಲದಿರುವುದು; ಕಾಲೋಚಿತವಾಗಿ ಅದರ ಸ್ವೀಕಾರ, ಪರಿತ್ಯಾಗಗಳೆರಡಕ್ಕೂ ಸಿದ್ಧನಾಗಿರುವುದು; ಅತಿಯಾಗಿ ಬೆಳೆಸುವ ಆಸಕ್ತಿಯಿಲ್ಲ ದಿರುವುದು; ಪ್ರಯೋಗಿಸಿದಮೇಲೂ ಅದು ರಸಕ್ಕೆ ಅಂಗವಾಗಿಯೇ ಇರುವುದೆಂದು ಮತ್ತೆ ಪ್ರಯತ್ನಪೂರ್ವಕವಾಗಿ ನೋಡಿಕೊಳ್ಳುವುದು—ಇವೆಲ್ಲವೂ 'ರೂಪಕ'ವೇ ಮೊದಲಾದ ಅಲಂಕಾರವರ್ಗವನ್ನು ರಸಕ್ಕೆ ಅಂಗವಾಗಿಸುವ ಸಾಧನಗಳು.

ವೃತ್ತಿ

ರಸಾಭಿವ್ಯಕ್ತಿಯಲ್ಲಿಯೇ ಅತ್ಯುತ್ಕಟ ಮನಸ್ಸುಳ್ಳ ಕವಿಯು ಅದಕ್ಕೆ ಅಂಗವಾಗು ವಂತಹ ಅಲಂಕಾರವನ್ನೇ ಬಳಸುವುದಕ್ಕೆ ಉದಾಹರಣೆ :—

"ಚಲಾಪಾಂಗಾಂ ದೃಷ್ಟಿಂ ಸ್ಪೃಶಸಿ ಬಹುಶೋ ವೇಪಥುಮತೀಂ
ರಹಸ್ಯಾಖ್ಯಾಯೀವ ಸ್ವನಸಿ ಮೃದು ಕರ್ಣಾಂತಿಕಚರಃ |
ಕರಂ ವ್ಯಾಧುನ್ವತ್ಯಾಃ ಪಿಬಸಿ ರತಿಸರ್ವಸ್ವಮಧರಂ
ವಯಂ ತತ್ವಾನ್ವೇಷಾನ್ಮಧುಕರ ಹತಾಸ್ತ್ವಂ ಖಲು ಕೃತೀ ||"

'ನಡುಕಂಬೆತ್ತಿರ್ಪಳಂ ಸೋಂಕುವೆಯಡಿಗಡಿಗಂ ಚೆಲ್ಲವೆತ್ತೋರೆನೋಟ-
ಕ್ಕೆಡೆಯಾಗೇಂಕಾಂತಮಂ ಪೇಳ್ವವೊಲೆ ಜಿನುಗುತಿರ್ದಪ್ಪೆ ಕರ್ಣಾಂತದೊಳ್ ಕೈ-|
ಗೊಡಹುತ್ತಿರ್ಪಬ್ಜಪತ್ರಾಕ್ಷಿಯ ನವರತಿಸರ್ವಸ್ವಬಿಂಬೋಷ್ಠಮಂ ಮು-
ದ್ದಿಡುವೈ ರೋಲಂಬ ನೀನೇ ಕೃತಿ ನಿಜವರಸುತ್ತಾವಣಂ ಕೆಟ್ಟೆವಲ್ತೇ'|| *

ಇಲ್ಲಿ ಭ್ರಮರದ ಸ್ವಭಾವವರ್ಣನೆಯಲ್ಲಿರುವ 'ಸ್ವಭಾವೋಕ್ತಿ' ಅಲಂಕಾರವು ರಸಾನು ಗುಣವಾಗಿದೆ. "ತಾನೇ ಪ್ರಧಾನವೆಂಬ ಭಾವನೆಯು ಸರ್ವಥಾ ಇಲ್ಲದಿರುವುದು"

* ಅಭಿಜ್ಞಾನಶಾಕುಂತಲ, I, ೨೪ (ಬಸವಪ್ಪ ಶಾಸ್ತ್ರಿಗಳ ಭಾಷಾಂತರ).

ಎನ್ನುವುದರಿಂದ ಒಂದುವೇಳೆ ರಸಾದಿ ತಾತ್ಪರ್ಯವನ್ನು ಸುಲಕ್ಷಿಸಿ ಅಲಂಕಾರವನ್ನು ಪ್ರಯೋಗಿಸಿದರೂ ಅಲಂಕಾರವೇ ಪ್ರಧಾನವೆಂಬ ವಿವಕ್ಷೆಯೂ ಜತೆಯಲ್ಲಿರಬಾರದೆಂದಾಯಿತು. ಉದಾಹರಣೆಗೆ—

" ಚಕ್ರಾಭಿಘಾತಪ್ರಸಭಾಜ್ಞಯೈವ
ಚಕಾರ ಯೋ ರಾಹುವಧೂಜನಸ್ಯ |
ಆಲಿಂಗನೋದ್ದಾಮವಿಲಾಸವಂಧ್ಯಂ
ರತೋತ್ಸವಂ ಚುಂಬನಮಾತ್ರಶೇಷಮ್ ||"

ಹರಿಯ ಚಕ್ರಾಯುಧದ ಹತಿಯೆಂಬ ವೀರಾಜ್ಞೆ
ಮಾಡಿದುದು ಸುರತವನು ರಾಹುವನಿತೆಯರ |
ಆಲಿಂಗನೋದ್ದಾಮಲೀಲೆ ತಾನಿಲ್ಲದೊಲು
ಚುಂಬನವು ತಾನೊಂದೆ ಬರಿದೆ ನಿಲ್ಲುವೊಲು ||

ಇಲ್ಲಿ ರಸತಾತ್ಪರ್ಯವಿದ್ದರೂ 'ಪರ್ಯಾಯೋಕ್ತ'ವೇ ಪ್ರಧಾನವೆಂಬ ವಿವಕ್ಷೆಯೂ ಇದೆ.

ಪ್ರಧಾನವೆಂಬ ವಿವಕ್ಷೆಯಿಲ್ಲದಿದ್ದರೂ ಸಹ ಕಾಲೋಚಿತವಾಗಿ ಮಾತ್ರ—ಅಕಾಲದಲ್ಲಲ್ಲ—ಪ್ರಯೋಗಿಸಿರುವ ಅಲಂಕಾರಕ್ಕೆ ಉದಾಹರಣೆ :—

" ಉದ್ದಾಮೋತ್ಕಲಿಕಾಂ ವಿಪಾಂಡುರರುಚಂ ಪ್ರಾರಬ್ಧಜೃಂಭಾಂ ಕ್ಷಣಾ-
ದಾಯಾಸಂ ಶ್ವಸನೋದ್ಗಮೈರವಿರಲೈರಾತನ್ವತೀಮಾತ್ಮನಃ |
ಅದ್ಯೋದ್ಯಾನಲತಾಮಿಮಾಂ ಸಮದನಾಂ ನಾರೀಮಿವಾನ್ಯಾಂ ಧ್ರುವಂ
ಪಶ್ಯನ್ ಕೋಪವಿಪಾಟಲದ್ಯುತಿ ಮುಖಂ ದೇವ್ಯಾಃ ಕರಿಷ್ಯಾಮ್ಯಹಂ ||"

'ತಳೆದುತ್ಕಲಿಕೆಯನಾದಂ
ಬೆಳರ್ತು ಕಡುಬೇಟಗೊಂಡಳಂತೆಸೆವುದ್ಯಾ- |
ನಲತೆಯನೀಕ್ಷಿಸಿ ನಾಂ ಪಾ-
ಟಳವರ್ಣಂಗೈವೆನಿಂದು ದೇವಿಯ ಮೊಗಮಂ' ||*

ಇಲ್ಲಿ ಶ್ಲೇಷಾಲಂಕಾರವು ಸಂದರ್ಭೋಚಿತವಾಗಿ ಬಂದಿದೆ.

ಪ್ರಾರಂಭಿಸಿರುವ ಅಲಂಕಾರವನ್ನಾದರೂ ಕಾಲೋಚಿತವಾಗಿ ರಸಾನುಗುಣವಾದ ಇತರ ಅಲಂಕಾರಗಳು ಬರಲೆಂದು ಅಷ್ಟಕ್ಕೇ ಬಿಟ್ಟುಬಿಡುವುದಕ್ಕೆ ಉದಾಹರಣೆ :—

* ಬಸವಪ್ಪಶಾಸ್ತ್ರಿಗಳ ಭಾಷಾಂತರ (ರತ್ನಾವಳೀ ನಾಟಕ, II, ೩)

"ರಕ್ತಸ್ತ್ವಂ ನವಪಲ್ಲವೈರಹಮಪಿ ಶ್ಲಾಘ್ಯೈಃ ಪ್ರಿಯಾಯಾ ಗುಣೈ-
ಸ್ತ್ವಾಮಾಯಾನ್ತಿ ಶಿಲೀಮುಖಾಃ ಸ್ಮರಧನುರ್ಮುಕ್ತಾಸ್ತಥಾ ಮಾಮಪಿ |
ಕಾಂತಾಪಾದತಲಾಹತಿಸ್ತವ ಮುದೇ ತದ್ವನ್ಮಮಾಪ್ಯಾವಯೋಃ
ಸರ್ವಂ ತುಲ್ಯಮಶೋಕ ಕೇವಲಮಹಂ ಧಾತ್ರಾ ಸಶೋಕಃ ಕೃತಃ ||

ರಕ್ತನಾಗಿಹೆ ನೀನು ಹೊಸತಳಿರ ತೊಂಗಲಲಿ,
ಅಂತೆ ನಾನೂ ಪ್ರಿಯೆಯ ಸುಗುಣಗಳಲಿ;
ವರಶಿಲೀಮುಖ ನಿನ್ನ ಮುತ್ತುವುವು, ನನಗಂತೆ
ಮದನಕೋದಂಡದಿಂ ಪೊರಮಟ್ಟವು;
ಪ್ರಿಯೆಯ ಚರಣಾಹತಿಯು ನಿನಗೆ ಮೋದವ ತಹುದು,
ನನಗು ಅಂತೆಯೆ ನೋಡು, ಎಲೆ ಮಿತ್ರನೆ!
ನಮ್ಮಿಬ್ಬರಾ ಸಾಮ್ಯವಿಹುದೆಲ್ಲ ವಿಷಯದೊಳು
ನೋಡಶೋಕನೆ ವಿಧಿಯ—ನಾ ಸಶೋಕ!

ಇಲ್ಲಿ ಮೊದಲು ಪ್ರಾರಂಭವಾದ ಶ್ಲೇಷಾಲಂಕಾರವನ್ನು ಕೊನೆಯವರೆಗೂ ವಿಸ್ತರಿಸದೆ, ವ್ಯತಿರೇಕಾಲಂಕಾರಕ್ಕೆಡೆಮಾಡಿಕೊಡುವ ದೃಷ್ಟಿಯಿಂದ ಮಧ್ಯದಲ್ಲೇ ಬಿಟ್ಟಿರುವುದು ರಸವಿಶೇಷಕ್ಕೆ ಪೋಷಕವಾಗುತ್ತದೆ. ಇಲ್ಲಿ ಎರಡು ಅಲಂಕಾರಗಳೂ ಒಟ್ಟಿಗೆ ಸಂಕರವಾಗಿಲ್ಲ. ಇದಕ್ಕೆ ಇತರರು ಹೀಗೆ ಕಾರಣ ಹೇಳಬಹುದು—ಎರಡು ಶರೀರಗಳಿಂದ ಕೂಡಿದ್ದರೂ ಒಂದೇ ವ್ಯಕ್ತಿಯಾಗಿರುವ ನರಸಿಂಹನಂತೆ ಶ್ಲೇಷ-ವ್ಯತಿರೇಕವೆಂಬ ಸ್ವತಂತ್ರಾಲಂಕಾರವೇ ಈ ಸಂಕರವೆಂಬುದು ಎಂದು. ಆದರೆ ಅದು ಸರಿಯಲ್ಲ. ಏಕೆಂದರೆ ಅದರ ಲಕ್ಷಣವನ್ನು ಬೇರೆ ವಿಧವಾಗಿ ವ್ಯವಸ್ಥೆಮಾಡಲಾಗಿದೆ. ಶ್ಲೇಷಾಲಂಕಾರಕ್ಕೆ ಯಾವ ಶಬ್ದವು ವಿಷಯವೋ ಆ ಶಬ್ದದಲ್ಲಿಯೇ ಪ್ರಕಾರಾಂತರದಿಂದ ವ್ಯತೀರೇಕಾಲಂಕಾರದ ಪ್ರತೀತಿಯೂ ಆಗುತ್ತಿದ್ದರೆ ಆಗ ಮಾತ್ರ ಅದು ಸಂಕರಾಲಂಕಾರಕ್ಕೆ ಲಕ್ಷ್ಯವಾಗುತ್ತದೆ. "ಸ ಹರಿರ್ನಾಮ್ನಾ ದೇವಃ, ಸಹರಿರ್ವರತುರಗನಿವಹೇನ"—[ಆ ವಿಷ್ಣುವು ಹೆಸರಿನಿಂದ ಮಾತ್ರ 'ಹರಿ'; ಈ ರಾಜನು ('ಸಹರಿ'=ಹರಿಸದೃಶ=ವಿಷ್ಣುಸದೃಶ (ಮತ್ತು 'ಸಹರಿ'=ಹರಿಯುಕ್ತ=ಅಶ್ವಯುಕ್ತ) ವಿಷ್ಣುಸದೃಶನೂ ವರತುರಗಸಹಿತನೂ ಆಗಿರುವುದರಿಂದ 'ಸಹರಿ'ಯೆಂಬ ಹೆಸರಿಗೆ ಸಾರ್ಥಕ್ಯವನ್ನು ವಿಷ್ಣುವಿಗಿಂತಲೂ ಅತಿಶಯವಾಗಿ ಕಲ್ಪಿಸಿರುವನು.] ಮೊದಲಾದುವು ಉದಾಹರಣೆಗಳು. ಆದರೆ ಪ್ರಕೃತದಲ್ಲಿ ಶ್ಲೇಷದ ವಿಷಯವೇ ಬೇರೆ; ವ್ಯತಿರೇಕದ ವಿಷಯವೇ ಬೇರೆ. ಇಂತಹ ಲಕ್ಷ್ಯಗಳಲ್ಲಿಯೂ 'ಸಂಕರ'ವೆಂಬ ಅಲಂಕಾರವನ್ನೇ ಹೇಳಿಬಿಡುವುದಾದರೆ ಇನ್ನು ಸಂಸೃಷ್ಟಿಗೆ ಬೇರೆ ವಿಷಯವೇ

ಉಳಿಯದೆ ಹೋಗುವುದರಿಂದ ಅದರ ಕ್ಷೇತ್ರವನ್ನೆಲ್ಲ ಅಪಹರಿಸಿದಂತಾಗುತ್ತದೆ. ಶ್ಲೇಷಮೂಲಕವಾಗಿಯೇ ಇಲ್ಲಿ ವ್ಯತಿರೇಕದ ಸ್ವಸ್ವರೂಪವು ಸಿದ್ಧವಾಗುವುದೆಂದೂ, ಆದಕಾರಣ ಇದು ಸಂಸೃಷ್ಟಿಯ ಲಕ್ಷ್ಯವಾಗಲಾರದೆಂದೂ ಹೇಳಿದರೆ, ಅದು ಮೊದಲೇ ಸರಿಯಲ್ಲ. ಏಕೆಂದರೆ ಬೇರೆ ವಿಧವಾಗಿಯೂ (=ಶ್ಲೇಷವಿಲ್ಲದೆಡೆಯಲ್ಲಿಯೂ) ವ್ಯತಿರೇಕವು ಬರಬಹುದು. ಅದಕ್ಕೆ ಉದಾಹರಣೆ:—

> ನೋ ಕಲ್ಪಾಪಾಯವಾಯೋರದಯರಯದಲತ್‌ಕ್ಷ್ಮಾಧರಸ್ಯಾಪಿ ಶಮ್ಯಾ
> ಗಾಢೋದ್ಗೀರ್ಣೋಜ್ಜ್ವಲಶ್ರೀರಹನಿ ನ ರಹಿತಾ ನೋ ತಮಃಕಜ್ಜಲೇನ |
> ಪ್ರಾಪ್ತೋತ್ಪತ್ತಿಃ ಪತಂಗಾನ್ನ ಪುನರುಪಗತಾ ಮೋಷಮುಷ್ಣತ್ವಿಷೋ ವೋ
> ವರ್ತಿಃ ಸೈವಾನ್ಯರೂಪಾ ಸುಖಯತು ನಿಖಿಲದ್ವೀಪದೀಪಸ್ಯ ದೀಪ್ತಿಃ ||

> ಚಂಡರಭಸದೆ ದೊಡ್ಡ ಬೆಟ್ಟಗಳನ್ನೆ ಭೇದಿಪ ಕಲ್ಪದ—
> ವಿಲಯಕಾಲದ ಗಾಳಿಯಿಂದಲು ಸ್ವಲ್ಪವಾದರು ಸಗ್ಗದ;
> ಹಗಲಿನಲ್ಲಿಯೆ ಗಾಢದೀಪ್ತಿಯ ಸೊಬಗನೆಲ್ಲೆಡೆ ಹರಡುವ,
> ಎಣ್ಣೆಗಪ್ಪಿನ ಸೋಂಕು ಕೊಂಚವು ಎಂದಿಗೂ ತಾಸಿಲ್ಲದ,
> ತವೆ ಪತಂಗದ ಕಾರ್ಯರೂಪದೆ ಪುಟ್ಟಿ ಬೆಳಕನು ಬೀರುವ,
> ಬೇರೆ ಸೂರ್ಯನ ಕಾಂತಿಯಿಂದಲಿ ಎಂದಿಗೂ ಕಳೆಗುಂದದ,
> ನಿಖಿಲಭೂಮಿಯ ಖಂಡವೆಲ್ಲಕು ಒಂದೆ ದೀಪವದಾಗಿಹ,
> ಬೇರೆ ರೂಪದ ರವಿಯು ದೀವಿಗೆಯೆಮಗೆ ಸುಖವನು ತೋರಲಿ ||

ಇಲ್ಲಿ ಸಾಮ್ಯಗಳ ವರ್ಣನೆಯನ್ನು ಮಾಡದೆಯೇ 'ವ್ಯತಿರೇಕ'ವನ್ನು ಮಾತ್ರ ತೋರಿಸಿದೆ.

'ಮೊದಲಿನ ಉದಾಹರಣೆಯಲ್ಲಿ ('ರಕ್ತನಾಗಿಹೆ' . . . ಇತ್ಯಾದಿ) ಶ್ಲೇಷಮಾತ್ರದಿಂದಲೇ ಸೌಂದರ್ಯಪ್ರತೀತಿಯಿಲ್ಲದಿರುವ ಕಾರಣ, ಶ್ಲೇಷವು ವ್ಯತಿರೇಕಕ್ಕೆ ಅಂಗವೆಂಬ ವಿವಕ್ಷೆಯುಂಟೇ ಹೊರತು, ಅದಕ್ಕೆ ಸ್ವತಃ ಮುಖ್ಯವಾದ ಅಲಂಕಾರತ್ವವಿಲ್ಲ' ಎಂದು ಹೇಳುವುದು ಕೂಡ ಯುಕ್ತವಲ್ಲ. ಏಕೆಂದರೆ ವ್ಯತಿರೇಕಾಲಂಕಾರದ ರಮಣೀಯತೆಗೆ ಶ್ಲೇಷಮೂಲಕವಾಗಿ ತೋರುವ ಸಾಮ್ಯವೇ ಕಾರಣವಾಗಬೇಕೆಂಬ ನಿಯಮವೇನೂ ಇಲ್ಲ; ಶ್ಲೇಷವಿಲ್ಲದೆ ಚೆನ್ನಾಗಿ ಪ್ರತಿಪಾದಿಸಿದ ಸಾಮ್ಯವೂ ಕಾರಣವಾಗಬಹುದು. ಅದಕ್ಕೆ ಉದಾಹರಣೆ:—

> "ಆಕ್ರನ್ದಾಃ ಸ್ತನಿತೈರ್ವಿಲೋಚನಜಲಾನ್ಯಶ್ರಾನ್ತಧಾರಾಮ್ಬುಭಿ-
> ಸ್ತದ್ವಿಚ್ಛೇದಭುವಶ್ಚ ಶೋಕಶಿಖಿನಸ್ತುಲ್ಯಾಸ್ತಡಿದ್ವಿಭ್ರಮೈಃ |
> ಅನ್ತರ್ಮೇ ದಯಿತಾಮುಖಂ ತವ ಶಶೀ ವೃತ್ತಿಃ ಸಮೈವಾವಯೋ—
> ಸ್ತತ್ಕಿಂ ಮಾಮನಿಶಂ ಸಖೇ ಜಲಧರ ತ್ವಂ ದಗ್ಧುಮೇವೋದ್ಯತಃ ||"

ಗೋಳಾಟ ಗುಡುಗಿಂಗೆ, ಕಣ್ಣೀರು ಸಂತತವು—
ಧಾರೆಯಲಿ ಸುರಿಯುತಿಹ ಮಳೆಯ ಜಲಕೆ,
ವಿರಹಕಾರಣದಿಂದ ಹುಟ್ಟಿರುವ ಶೋಕಶಿಖಿ
ಮಿಂಚುಗಳ ವಿಭ್ರಮಕೆ ತಾನೆ ಸಮವು ;
ಪ್ರಿಯೆಯ ಮುಖವೆನ್ನೊಳಗೆ, ನಿನ್ನೊಳಗೆ ಚಂದಿರನು,
ನಮ್ಮಿಬ್ಬರಾ ಮೋಡಿಯಿನಿತು ಸಮವು.
ಮತ್ತೇಕೆ ಜಲಧರನೆ ! ನನ್ನನ್ನು ಸಂತತವು
ಸುಡಲೆಂದೆ ಹೊರಟಿರುವೆ ನೀನು ಬಿಡದೆ ?

ಇವೇ ಮೊದಲಾದುವುಗಳು.

ರಸಪ್ರತಿಪಾದನೆಯಲ್ಲಿ ಏಕತಾನಹೃದಯನಾದ ಕವಿಗೆ ಅಲಂಕಾರವನ್ನು ಅತಿಯಾಗಿ ವಿಸ್ತರಿಸಲಿಷ್ಟವಿಲ್ಲದಿರುವುದಕ್ಕೆ ಉದಾಹರಣೆ :—

“ ಕೋಪಾತ್ಕೋಮಲಲೋಲಬಾಹುಲತಿಕಾಪಾಶೇನ ಬದ್ಧ್ವಾ ದೃಢಂ
ನೀತ್ವಾ ವಾಸನಿಕೇತನಂ ದಯಿತಯಾ ಸಾಯಂ ಸಖೀನಾಂ ಪುರಃ |
ಭೂಯೋ ನೈವಮಿತಿ ಸ್ಖಲತ್ಕಲಗಿರಾ ಸಂಸೂಚ್ಯ ದುಶ್ಚೇಷ್ಟಿತಂ
ಧನ್ಯೋ ಹನ್ಯತ ಏವ ನಿಹ್ನುತಿಪರಃ ಪ್ರೇಯಾನ್ ರುದತ್ಯಾ ಹಸನ್ || ”

ಮುಳಿದು ಕೋಮಲಲೋಲವಾಗಿಹ ಬಾಹುಲತಿಕೆಯ ಪಾಶದಿ
ಗಟ್ಟಿಯಾಗಿಯೆ ಕಟ್ಟಿ ಕಾಂತನ ವಾಸಸದನಕೆ ಭರದಲಿ,
ಸಖಿಯರೆಲ್ಲರ ಮುಂದೆ ಮಾನಿನಿ ಸಂಜೆ ಸಮಯದೊಳೊಯ್ಯುತ—
‘ ಮತ್ತೆ ಹೀಗೆಯೆ ಮಾಡಲಾಗದು ’ ಎಂಬ ಗದ್ಗದ ನುಡಿಯಲಿ
ಅವನ ದುಶ್ಚೇಷ್ಟಿತವ ಸೂಚಿಸಿ, ನಗುತ ತಪ್ಪನು ಮರೆಸಲು
ಹವಣಿಸುತ್ತಿಹ ಧನ್ಯ ಕಾಂತನ ಹೊಡೆವಳಳುವಾ ಕಾಂತೆಯು ||

ಇಲ್ಲಿ ಪ್ರಾರಂಭದಲ್ಲಿಯೇ ಬರುವ ರೂಪಕವನ್ನು ಮುಂದಿನ ಸಾಲುಗಳಲ್ಲಿ ವಿಸ್ತರಿಸಿಲ್ಲ.

ಅಲಂಕಾರವನ್ನು ಸಮಗ್ರವಾಗಿ ಪ್ರಯೋಗಿಸುವ ಅಭಿಲಾಷೆಯಿರುವಾಗಲೂ ರಸಪುಷ್ಟಿಯ ದೃಷ್ಟಿಯಿಂದ ಅದಕ್ಕೆ ಅಂಗತ್ವವು ತಪ್ಪದಂತೆ ನೋಡಿಕೊಳ್ಳುವುದಕ್ಕೆ ಉದಾಹರಣೆ :—

“ ಶ್ಯಾಮಾಸ್ವಙ್ಗಂ ಚಕಿತಹರಿಣೀಪ್ರೇಕ್ಷಣೇ ದೃಷ್ಟಿಪಾತಂ
ವಕ್ತ್ರಚ್ಛಾಯಾಂ ಶಶಿನಿ ಶಿಖಿನಾಂ ಬರ್ಹಭಾರೇಷು ಕೇಶಾನ್ |
ಉತ್ಪಶ್ಯಾಮಿ ಪ್ರತನುಷು ನದೀವೀಚಿಷು ಭ್ರೂವಿಲಾಸಾನ್
ಹನ್ತೈಕಸ್ಥಂ ಕ್ವಚಿದಪಿ ನ ತೇ ಚಂಡಿ ಸಾದೃಶ್ಯಮಸ್ತಿ || ”

'ಎಳಲತೆಯೊಳಂಗಮಂ, ಪೊಳೆವ ಶಶಿಯೊಳು ಮೊಗವ
ಸೆಳೆವೀಚಿಯೊಳು ಪುರ್ಬಿನೊಲೆದಾಟಮಂ।
ಅಳಿಗಳೊಳು ಸುಳಿಗುರುಳನೆಳಚಿಗರಿಯೊಳು ಕಣ್ಣ-
ನೆಳಸಿದರು ನಿನ್ನಂಗಸಾಮ್ಯವಿರದು' ‖[1]

ಇದೇ ಮೊದಲಾದುವುಗಳಲ್ಲಿ ಕವಿಯಿಂದ ಪ್ರಯುಕ್ತವಾದ ಅಲಂಕಾರವು ರಸಾಭಿವ್ಯಕ್ತಿಗೆ ಕಾರಣವಾಗುತ್ತದೆ. ಇದುವರೆಗೂ ಹೇಳಿದ ಮಾರ್ಗವನ್ನುಲ್ಲಂಘಿಸಿದರೆ ಖಂಡಿತವಾಗಿಯೂ ಅದು ರಸಭಂಗಕ್ಕೆ ಕಾರಣವೇ ಆಗುತ್ತದೆ. ಇಂತಹ ರಸಭಂಗಹೇತುಗಳಾದ ಅಲಂಕಾರಗಳಿಗೂ ಮಹಾಕವಿಗಳ ಪ್ರಬಂಧಗಳಲ್ಲೇ ಯಥೇಚ್ಛವಾಗಿ ಲಕ್ಷ್ಯಗಳು ಸಿಕ್ಕುತ್ತವೆ. ಆದರೆ ಸೂಕ್ತಿಸಹಸ್ರಗಳಿಂದ ದ್ಯೋತಿತಾತ್ಮರಾದ ಮಹಾತ್ಮರ ದೋಷಗಳನ್ನುದ್ಘೋಷಿಸುವುದು ವಿಮರ್ಶಕನ ದೋಷವೇ ಆಗುವುದೆಂದು ಭಾವಿಸಿ ಅವುಗಳನ್ನಿಲ್ಲಿ ಬಿಡಿಸಿ ತೋರಿಸಲಿಲ್ಲ. ಹೇಗಾದರೂ ರೂಪಕವೇ ಮೊದಲಾದ ಅಲಂಕಾರವರ್ಗವು ರಸಾದಿಗಳಿಗೆ ವ್ಯಂಜಕವಾಗುವಂತೆ ಮಾತ್ರ ಇರಬೇಕಾದರೆ ಯಾವ ವಿವೇಕವು ಆವಶ್ಯಕವೆಂದು ಇಲ್ಲಿಯವರೆಗೆ ದಿಕ್ಪ್ರದರ್ಶನ ಮಾಡಲಾಯಿತೋ, ಅದನ್ನು ಸರಿಯಾಗಿ ಅನುಸರಿಸಿದರೆ, ಮತ್ತು ನಾವು ಬಿಟ್ಟಿರುವ ಇತರ ಅಂಶಗಳನ್ನೂ ತಾನೇ ಊಹಿಸಿ ತಿಳಿದುಕೊಂಡು, ರಸಸಮಾಹಿತಚಿತ್ತನಾದ ಸುಕವಿಯು ಅಲಕ್ಷ್ಯಕ್ರಮಧ್ವನಿಯ ಆತ್ಮವನ್ನು ತನ್ನ ಕಾವ್ಯದಲ್ಲಿ ಸಂಯೋಜಿಸಿಕೊಂಡರೆ, ಆಗ ಅವನ ಕಾರ್ಯಕ್ಕೆ ಅಪಾರವಾದ ಸಾರ್ಥಕ್ಯ ಬರುವುದೆಂದು ಹೇಳುತ್ತೇವೆ.

—ಡಾ|| ಕೆ. ಕೃಷ್ಣಮೂರ್ತಿ,

(ಸಶೇಷ)

1 ಮೇಘದೂತ, II, ೫೪ (ಪಂಡಿತ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳ ಭಾಷಾಂತರ).

ಜಗತ್ತುಗಳ ಹುಟ್ಟು ಸಾವು

೧. ಭೂಮಿಯ ವಯಸ್ಸು

೧. ಪೀಠಿಕೆ

ಪ್ರತಿಯೊಬ್ಬ ಮನುಷ್ಯನನ್ನೂ ಅವನ ಜೀವಮಾನದಲ್ಲಿ ಒಂದೆರಡು ಸಲವಾದರೂ ತಾನು ಎಲ್ಲಿಂದ ಹೇಗೆ ಇಲ್ಲಿಗೆ ಬಂದಿದ್ದೇನೆ, ಮುಂದೆ ಹೋಗುವುದೆಲ್ಲಿಗೆ, ಜೀವನದ ಉದ್ದೇಶವೇನು ಎಂಬ ಪ್ರಶ್ನೆಗಳೂ ಹಾಗೆಯೇ ತನಗೆ ಜೀವನಾಧಾರವಾದ ಈ ಜಗತ್ತಿಗೂ ತನ್ನಂತೆಯೇ ಜನನ ಮರಣಗಳಿವೆಯೇ, ಈ ಜಗತ್ತಿನ ಸ್ವರೂಪವೇನು ಎಂಬ ಪ್ರಶ್ನೆಗಳೂ ಬಾಧಿಸದಿರುವುದಿಲ್ಲ. ಇವುಗಳಲ್ಲಿ ಮೊದಲನೆಯ ಭಾಗದ ಪ್ರಶ್ನೆಗಳು ವಿಜ್ಞಾನಾನ್ವೇಷಣೆಗಳಿಗೆ ಅತೀತವಾದ ಕಾರಣ ಇಲ್ಲಿ ಅವುಗಳ ಗೊಡವೆಗೆ ಹೋಗುವುದಿಲ್ಲ. ಅವುಗಳಿಗೆ ಉತ್ತರ ಕೊಡುವ ಭಾರವನ್ನು ಜಗತ್ತಿನ ಧರ್ಮವೀರರೂ ದಾರ್ಶನಿಕರೂ ಹೊತ್ತಿದಾರೆ. ಎರಡನೆಯ ಭಾಗದ ಸಮಸ್ಯೆಗಳು ವಿಜ್ಞಾನ ಕ್ಷೇತ್ರಕ್ಕೆ ಸೇರಿದ್ದರೂ ಇದುವರೆಗೆ ಅವನ್ನು ಸಮರ್ಪಕವಾಗಿ ಬಿಡಿಸಲು ವಿಜ್ಞಾನಿಗಳಿಗೆ ಸಾಧ್ಯವಾಗಿಲ್ಲ. ಆದರೂ ಇವು ಮೂಲಕಾರಣಗಳನ್ನು ಶೋಧಿಸುವ ಸಮಸ್ಯೆಗಳಾದುದರಿಂದ ಈ ದಿಕ್ಕಿನಲ್ಲಿ ವಿಜ್ಞಾನಿಯು ಮಾಡಿರುವ ಪ್ರಯತ್ನಗಳ ಸ್ವಭಾವ, ಆ ಪ್ರಯತ್ನಗಳಿಂದ ಅವನಿಗೆ ದೊರಕಿರುವ ಫಲಗಳ ಸ್ವರೂಪ ಇವುಗಳನ್ನು ತಿಳಿದುಕೊಳ್ಳುವ ಕುತೂಹಲವು ನಮಗಿರಬೇಕಾದುದು ಸಹಜ. ಇಂತಹ ಕುತೂಹಲವನ್ನು ವಿಚಾರಪೂರ್ವಕವಾಗಿ ಶಮನಮಾಡುವ ಪ್ರಯತ್ನವು ಈ ಲೇಖನದಲ್ಲಿ ನಡೆದಿದೆ.

೨. ವಿಶ್ವದ ಸ್ಥೂಲ ಪರಿಚಯ

ಜಗತ್ತಿನ ಜನನ ಮರಣಗಳ ವಿಚಾರಮಾಡುವ ಮುನ್ನ ಜಗತ್ತು ಎನ್ನುವ ಪದಕ್ಕೆ ನಾವು ಕೊಡುವ ಅರ್ಥವನ್ನು ತಿಳಿದಿರಬೇಕು. ನಮ್ಮಲ್ಲಿ ತೀರ ಸಂಕುಚಿತ ದೃಷ್ಟಿಯುಳ್ಳವರು ತಾನುಂಟೋ ಮೂರು ಲೋಕವುಂಟೋ ಎಂಬ ಗಾದೆಯನ್ನನುಸರಿಸಿ ಜಗತ್ತೆಂದರೆ ನಾನೇ ಎಂಬರ್ಥವನ್ನು ಕಲ್ಪಿಸಿ, ನಾನು ಹುಟ್ಟಿದಾಗ ಜಗತ್ತು ಸೃಷ್ಟಿಯಾಯಿತು ನಾನು ಸತ್ತಾಗ ಜಗತ್ತಿನ ಮರಣವಾಗುವುದು ಎಂದು ಹೇಳಬಹುದು. ನಮ್ಮ ದೃಷ್ಟಿಯು ಇನ್ನು ಸ್ವಲ್ಪ ವಿಶಾಲವಾದರೆ ಜಗತ್ತೆಂದರೆ ಈ ಭೂಮಿ ಎಂದಾದರೂ ಅರ್ಥಮಾಡಬೇಕಾಗುತ್ತದೆ. ಆದರೆ ಇಷ್ಟೇ ನಿಖಿಲ ದೃಷ್ಟಿಯು ಸಾಲದು. ಏಕೆಂದರೆ ಭೂಮಿಯ ಸಕಲ ಚಟುವಟಿಕೆಗಳಿಗೂ ಸೂರ್ಯನೇ ಮೂಲಾಧಾರ

ನಾದುದರಿಂದ ನಮ್ಮ ಜಗತ್ತಿಗೆ ಸೂರ್ಯನನ್ನು ಸೇರಿಸಿಕೊಳ್ಳಲೇಬೇಕು. ಸೂರ್ಯನ ಸಂಸಾರಕ್ಕೆ ನಮ್ಮ ಭೂಮಿಯು ಹೇಗೆ ಸೇರಿದೆಯೋ ಹಾಗೆಯೇ ಬುಧ, ಶುಕ್ರ, ಮಂಗಳ, ಗುರು, ಶನಿ, ಯುರಾನಸ್, ನೆಪ್ಚೂನ್ ಮತ್ತು ಪ್ಲುಟೋ ಎಂಬ ಇತರ ಗ್ರಹಗಳೂ, ಇವುಗಳ ಉಪಗ್ರಹಗಳೂ —ಇವುಗಳಲ್ಲಿ ಭೂಗ್ರಹದ ಉಪಗ್ರಹವಾದ ಚಂದ್ರನೂ ಸೇರಿ ಕೊಂಡಿದೆ—ಹಲವು ಲಕ್ಷ ಕ್ಷುದ್ರಗ್ರಹಗಳೂ, ಕೆಲವು ಧೂಮಕೇತು[1] ಗಳೂ ಸೇರಿವೆ. ಆದಕಾರಣ ನಮ್ಮ ಜಗತ್ತನ್ನು ಸೂರ್ಯನವರೆಗೆ ವಿಸ್ತರಿಸಿದರೆ ಈ ಸೌರವ್ಯೂಹವನ್ನೂ ಒಳಕೊಂಡಂತೆಯೇ ಆಯಿತು.

ಆಕಾಶದಲ್ಲಿ ಸೂರ್ಯ ಚಂದ್ರರೇ ಅಲ್ಲದೆ ಸಾವಿರಾರು ನಕ್ಷತ್ರಗಳೂ ನಮಗೆ ಗೋಚರವಾಗುತ್ತವೆ. ಸೂರ್ಯ ಚಂದ್ರರಿಗೆ ಹೋಲಿಸಿದರೆ ನಕ್ಷತ್ರಗಳು ನಮ್ಮ ಕಣ್ಣಿಗೆ ನಿಕೃಷ್ಟವಾಗಿ ಕಂಡರೂ, ಒಂದೊಂದು ನಕ್ಷತ್ರವೂ ನಮ್ಮ ಸೂರ್ಯ ನಂತೆಯೇ ತೇಜೋಮಯವಾದ ಕಾಯ. ಕೆಲವು ಸೂರ್ಯನಿಗಿಂತ ದೊಡ್ಡವು, ಕೆಲವು ಸಣ್ಣವು. ನಮ್ಮಿಂದ ಬಹಳ ದೂರವಿರುವುದರಿಂದ ಅವು ಕಾಂತಿಬಿಂದು ಗಳಂತೆ ಮಾತ್ರ ನಮಗೆ ತೋರುತ್ತವೆ. ಭೂಮಿಯಿಂದ ಸೂರ್ಯನಿರುವ ದೂರವು ೯,೩೦,೦೦,೦೦೦ ಮೈಲಿಗಳು. ಇದೇ ಅಗಾಧವಾದ ದೂರ. ನಮಗೆ ಅತ್ಯಂತ ಸಮೀಪದಲ್ಲಿರುವ ನಕ್ಷತ್ರದ ದೂರವು ಇದರ ಮೂರು ಲಕ್ಷದಷ್ಟು! ನಕ್ಷತ್ರಗಳಿ ಗಿರುವ ಪರಸ್ಪರ ದೂರವೂ ಹೆಚ್ಚು ಕಡಮೆ ಇಷ್ಟೇ. ಹೀಗೆ ವಿರಳ ವಿರಳವಾಗಿ ಆಕಾಶದಲ್ಲಿ ಕೋಟ್ಯನುಕೋಟಿ ನಕ್ಷತ್ರಗಳಿವೆ. ಈ ನಕ್ಷತ್ರಗಳೆಲ್ಲವೂ, ನಮ್ಮ ಕಣ್ಣಿಗೆ ಕಾಣಿಸು ವುವುಗಳ ಜೊತೆಗೆ ದೂರದರ್ಶಿನಿ[2]ಯಲ್ಲಿ ಗೋಚರವಾಗುವುವೂ ಸೇರಿ, ಆಕಾಶದಲ್ಲಿ ಹಾಲು ಹರಿದಿರುವಂತೆ ತೋರುವ ಆಕಾಶಗಂಗೆ[3]ಯ ವ್ಯವಸ್ಥೆಗೆ ಸೇರಿವೆ. ಈ ಅದ್ಭುತ ವಿಸ್ತಾರದ ಜಗತ್ತು ನಮ್ಮ ಸ್ಥಳೀಯ ಬ್ರಹ್ಮಾಂಡ[4].

ವಿಶ್ವದ ವ್ಯಾಪ್ತಿಯು ಇಷ್ಟಕ್ಕೇ ಮುಗಿದಿಲ್ಲ. ಸ್ಥಳೀಯ ಬ್ರಹ್ಮಾಂಡವೆಂಬ ಹೆಸರೇ ಇದನ್ನು ಸೂಚಿಸುತ್ತದೆ. ಈ ಆಕಾಶಗಂಗೆ ಅಥವಾ ಕ್ಷೀರಪಥ[3]ದಿಂದಾಚೆ ಶೂನ್ಯಾಕಾಶದಲ್ಲಿ ಬಹುದೂರ ದಾಟಿದಮೇಲೆ ಹೀಗೆಯೇ ಕೋಟ್ಯನುಕೋಟಿ ನಕ್ಷತ್ರಗಳನ್ನೊಳಗೊಂಡ ಇತರ ಬ್ರಹ್ಮಾಂಡಗಳು ಅಲ್ಲೊಂದು ಇಲ್ಲೊಂದರಂತೆ ಇದ್ದರೂ ಒಟ್ಟು ಹಲವು ಕೋಟಿಗಳು ಹರಡಿವೆ. ನಮಗೆ ಇದುವರೆಗೆ ತಿಳಿದಿರುವ ಮಟ್ಟಿಗೆ ಇದೇ ನಮ್ಮ ಭೌತವಿಶ್ವ. ನಮ್ಮ ಕಲ್ಪನಾತೀತವಾಗಿರುವಷ್ಟು, ನಮ್ಮನ್ನು ದಿಗ್ಭ್ರಾಂತರನ್ನಾಗಿ ಮಾಡುವಷ್ಟು ವಿಶಾಲವಾದ ಈ ವಿಶ್ವದಲ್ಲಿ ಎಲ್ಲೋ ಒಂದು ಕಡೆ ಕೆಲಸಕ್ಕೆಬಾರದ ಒಂದು ರೇಣುವಿನಂತಿರುವ ಸೌರವ್ಯೂಹದ ಸಾಮಾನ್ಯ

---

[1] Comets. [2] Telescope. [3] Milky way. [4] Local galaxy.

ವಾದೊಂದು ಗ್ರಹದಲ್ಲಿ ವಾಸಮಾಡುವ ಅಲ್ಪ ಮಾನವನು ವಿಶ್ವದ ಜನನವು ಎಂದು ಹೇಗಾಯಿತು, ಇದರ ಮುಂದಿನ ಗತಿಯೇನು ಎಂಬ ಪ್ರಶ್ನೆಗಳನ್ನು ಕೇಳುವುದೇ ಅವನ ಔದ್ಧತ್ಯವನ್ನು ಸೂಚಿಸುವುದಿಲ್ಲವೇ? ಹೀಗಿರುವಲ್ಲಿ ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳು ದೊರಕದಿರುವುದು ಆಶ್ಚರ್ಯವಲ್ಲ, ಎಂಥದಾದರೂ ಉತ್ತರವು ದೊರಕಿದೆ ಎಂಬುದೇ ಮಹಾಶ್ಚರ್ಯ. ವಿಶ್ವದ ಈ ಸ್ಥೂಲ ಪರಿಚಯದಲ್ಲಿ ವಿಶ್ವದ ವಿವಿಧ ಅಂಗಗಳಿಗಿರುವ ದೂರ, ಅವುಗಳ ಗಾತ್ರದ ವಿಚಾರ ಸಪರಿಮಾಣವಾಗಿ ಏನೂ ಹೇಳಿಲ್ಲ. ನಮ್ಮ ಅನ್ವೇಷಣೆಯು ಮುಂದುವರಿದಂತೆ ಈ ವಿಷಯಗಳು ಹೊರಬೀಳುತ್ತವೆ.

೩. ಪುರಾತನ ಗ್ರಂಥಗಳಲ್ಲಿ ಉಕ್ತವಾಗಿರುವಂತೆ ಸೃಷ್ಟಿ ಕಾಲ ನಿರ್ಣಯ

ವಿಶ್ವದ ರಚನೆಯು ಇಷ್ಟು ಅದ್ಭುತವೂ ತೊಡಕಾದುದೂ ಆಗಿರುವುದರಿಂದ ಅದರ ವಯಸ್ಸಿನ ನಿರ್ಣಯಕ್ಕೆ ಒಂದೊಂದು ಸಲ ಒಂದೊಂದು ಹೆಜ್ಜೆಯಂತೆ ಕ್ರಮವನ್ನನುಸರಿಸಿ ಮುಂದುವರಿಯುವುದೇ ಸರಿಯಾದ ಮತ್ತು ಫಲದಾಯಕವಾದ ಮಾರ್ಗ. ಅದರಂತೆ ಮೊದಲು ಭೂಮಿಯ ವಯಸ್ಸನ್ನು ನಿರ್ಧರಿಸಲು ಯತ್ನಿಸೋಣ. ಕ್ರೈಸ್ತರ ಮತಗ್ರಂಥವಾದ ಬೈಬಲಿನ ಪುರಾತನ ಭಾಗವನ್ನು ಮೊದಲಿಂದ ಕಡೆಯವರೆಗೂ ಶೋಧಿಸಿ ೧೭ ನೆಯ ಶತಮಾನದಲ್ಲಿ ಇಂಗ್ಲೆಂಡಿನ ಆರ್ಚ್‌ಬಿಷಪ್ ಅಷ್ಷರ್ ಎಂಬಾತನು ಕ್ರಿ. ಪೂ. ೪೦೦೪ ರ ಅಕ್ಟೋಬರ್ ೨೬ ರ ಬೆಳಿಗ್ಗೆ ೯ ಘಂಟೆಗೆ (ಗ್ರೀನಿಚ್ಚಿನ ಮಧ್ಯಮ ಕಾಲ?) ಸರಿಯಾಗಿ ಭೂಮಿಯು ಜನನವಾಯಿತೆಂದು ತೀರ್ಮಾನಿಸಿದ್ದಾನೆ. ಭಾರತೀಯ ಪಂಚಾಂಗ ಗಣನೆಯಂತೆ ಬ್ರಹ್ಮಕಲ್ಪದಾದಿಯಿಂದ ಸರ್ವಜಿನ್ನಾಮ ಸಂವತ್ಸರದ ಚೈತ್ರ ಶುದ್ಧ ಪಾಡ್ಯಮಿಯ (೧೯೪೭ ನೆಯ ಮಾರ್ಚಿ ೨೩) ಸೂರ್ಯೋದಯದ ವರೆಗೆ ೧೯೭ ಕೋಟಿ ೨೬ ಲಕ್ಷ ೪೯ ಸಾವಿರದ ೪೮ ವರ್ಷಗಳೂ, ಸೃಷ್ಟ್ಯಾದಿಯಿಂದ ೧೯೫ ಕೋಟಿ ೫೮ ಲಕ್ಷ ೮೫ ಸಾವಿರದ ೪೮ ವರ್ಷಗಳೂ ಕಳೆದಿವೆ. ಇವೆರಡೂ ಅಧಿಕಾರವಾಣಿಗಳು. ಇಷ್ಟು ನಿಷ್ಕೃಷ್ಟವಾಗಿ ಭೂಮಿಯ ವಯಸ್ಸನ್ನು ಹೇಳುವ ಧೈರ್ಯ ವಿಜ್ಞಾನಿಗಿಲ್ಲ. ಅವನ ಅಂದಾಜು ಅಧಿಕಾರವಾಣಿಯೂ ಅಲ್ಲ.

೪. ಪರಮಾಣು ರಚನೆ

'ಅಣೋರಣೀಯಾನ್ ಮಹತೋ ಮಹೀಯಾನ್' ಎಂಬ ವಾಕ್ಯವು ಹೇಳುವಂತೆ, ಭೂಮಿ, ಸೂರ್ಯ, ನೀಹಾರಕ[1] ಮುಂತಾದ ಬೃಹತ್ಕಾಯಗಳ ರಚನೆ ಮತ್ತು ವಯಸ್ಸಿನ ನಿರ್ಣಯಕ್ಕೆ ಅಣು,[2] ಪರಮಾಣು,[3] ಪರಮಾಣು ಬೀಜ[4]

[1] Nebula. [2] Molecule. [3] Atom. [4] Nucleus.

ಗಳ ರಚನೆಗಳ ಜ್ಞಾನವು ಅವಶ್ಯ. ಸಮಸ್ತ ಪದಾರ್ಥಗಳೂ ಆಯಾ ಪದಾರ್ಥಗಳ ಅಣುಗಳ ಸಮೂಹ. ಉದಾಹರಣೆಗೆ ಸರೋವರದ ನೀರು ನೀರಿನ ಅಣುಗಳ ಸಮೂಹ, ಹತ್ತಿಯ ಹೊರೆಯು ಹತ್ತಿಯ ಅಣುಗಳ ಸಮೂಹ. ನೀರಿನ ಅಣುವಿನ ರಚನೆ ಇದ್ದುದರಲ್ಲಿ ಸರಳವಾದುದು, ಹತ್ತಿಯ ಅಣುರಚನೆ ಬಹಳ ತೊಡಕಾದುದು. ಅಲ್ಲಿಗೆ ಜಗತ್ತಿನ ಕೋಟ್ಯಂತರ ಪದಾರ್ಥಗಳೂ ಕೋಟ್ಯಂತರ ಪ್ರತ್ಯೇಕ ಅಣುಗಳ ಸಮೂಹವೆಂದಹಾಗಾಯಿತು. ಈ ವಿವಿಧ ಅಣುಗಳ ರಚನೆಯಲ್ಲಿ ಸಾಮಾನ್ಯವಾದ ಅಂಗಗಳಿಲ್ಲವೇ ? ಈ ಪ್ರಶ್ನೆಗೆ ವಿಜ್ಞಾನಿಯು ಎಲ್ಲ ಅಣುಗಳೂ ತೊಂಬತ್ತೆರಡು ಜಾತಿಯ ಪರಮಾಣುಗಳಲ್ಲಿ ಒಂದು, ಎರಡು ಅಥವಾ ಹಲವು ಪರಮಾಣುಗಳ ಸಂಯೋಜನೆಯಿಂದ ರಚಿತವಾಗಿವೆ ಎಂದು ಉತ್ತರ ಕೊಡುತ್ತಾನೆ.

ಈ ಶತಮಾನವು ಆರಂಭವಾಗುವವರೆಗೂ ಪರಮಾಣುವು ಅಭೇದ್ಯವೆಂದು ಗಣಿಸಲ್ಪಟ್ಟಿತ್ತು. ಆದರೆ ಈಗ ಎಲ್ಲ ಪರಮಾಣುಗಳೂ ಮೂರು ಮೂಲಕಣಗಳಿಂದ[1] ರಚಿತವಾಗಿವೆ ಎಂಬ ಅಭಿಪ್ರಾಯಕ್ಕೆ ಸಮರ್ಥನೆ ದೊರೆತಿದೆ. ರಚನೆಯಲ್ಲಿ ಪರಮಾಣುವು ಸೂಕ್ಷ್ಮ ಸೌರವ್ಯೂಹದಂತಿದೆ ಎಂದು ಕಲ್ಪಿಸಿಕೊಳ್ಳಬಹುದು. ಪರಮಾಣುವಿನ ಕೇಂದ್ರದಲ್ಲಿ ಸೂರ್ಯನಂತೆ ಪರಮಾಣು ಬೀಜವಿದೆ. ಬೀಜವು ಪ್ರೋಟಾನ್ ಮತ್ತು ನ್ಯೂಟ್ರಾನ್ ಎಂಬ ಎರಡು ಜಾತಿಯ ಕಣಗಳ ವ್ಯೂಹ. ಈ ಎರಡು ಕಣಗಳ ಭಾರವೂ ಹೆಚ್ಚು ಕಡಿಮೆ ಒಂದೇ ; ಆದರೆ ಪ್ರೋಟಾನಿನಲ್ಲಿ ಧನ[2]ವಿದ್ಯುತ್ತಿದೆ, ನ್ಯೂಟ್ರಾನಿನಲ್ಲಿ ವಿದ್ಯುತ್ತಿಲ್ಲ. ಒಂದು ಧಾತುವಿನ ಪರಮಾಣು ಬೀಜಕ್ಕೂ ಮತ್ತೊಂದರ ಬೀಜಕ್ಕೂ ಇರುವ ವ್ಯತ್ಯಾಸವು ಈ ಪ್ರೋಟಾನ್ ನ್ಯೂಟ್ರಾನ್‌ಗಳ ಸಂಖ್ಯೆಯಲ್ಲಿಯೇ. ಬೀಜದ ಸುತ್ತಲೂ ಗ್ರಹಗಳಂತೆ ಬೀಜದಲ್ಲಿ ಎಷ್ಟು ಪ್ರೋಟಾನ್‌ಗಳಿವೆಯೋ ಅಷ್ಟೇ ಸಂಖ್ಯೆಯ ಎಲೆಕ್ಟ್ರಾನ್ ಎಂಬ ಸೂಕ್ಷ್ಮ ಕಣಗಳು ಸುತ್ತುತ್ತಿವೆ. ಎಲೆಕ್ಟ್ರಾನ್ ಬಹಳ ಹಗುರ ಕಣ, ಅದರ ಭಾರವು ಪ್ರೋಟಾನಿನ ಭಾರದ ೧೮೪೦ ರಲ್ಲೊಂದಂಶ. ಅದರ ಋಣ[3] ವಿದ್ಯುತ್ತಿನ ಪರಿಮಾಣ ಪ್ರೋಟಾನಿನ ಧನ ವಿದ್ಯುತ್ತಿನದಕ್ಕೆ ಸಮ. ಆದಕಾರಣ ಪ್ರತಿಯೊಂದು ಪರಮಾಣುವಿನ ಸಾಮಾನ್ಯ ಸ್ಥಿತಿಯೂ ಅವಿದ್ಯುತ್‌ಸ್ಥಿತಿ, ವಿದ್ಯುತ್ತಿನ ಸಮಸ್ಥಿತಿ.

ಈಗ ಪರಮಾಣು ರಚನೆಯನ್ನು ಉದಹರಿಸಲು ಒಂದೆರಡು ಪರಮಾಣುಗಳನ್ನು ಪರಿಶೀಲಿಸೋಣ. ಜಲಜನಕ ಪರಮಾಣುವಿನ ರಚನೆಯು ಅತ್ಯಂತ ಸರಳ ರಚನೆ. ಅದರ ಬೀಜದಲ್ಲಿ ಒಂದೇ ಪ್ರೋಟಾನಿರುತ್ತದೆ. ಸುತ್ತಲೂ ಒಂದು ಎಲೆಕ್ಟ್ರಾನ್ ಪ್ರದಕ್ಷಿಣೆ ಮಾಡುತ್ತಿರುತ್ತದೆ. ಹೀಲಿಯಂ ಅನಿಲದ ಪರಮಾಣು ಬೀಜದಲ್ಲಿ ಎರಡು

---

[1] Fundamental Particles. [2] Positive. [3] Negative.

ಪ್ರೋಟಾನ್, ಎರಡು ನ್ಯೂಟ್ರಾನ್‌ಗಳಿವೆ. ಆದಕಾರಣ ಬೀಜವನ್ನು ಪ್ರದಕ್ಷಿಣೆ ಮಾಡುವ ಎಲೆಕ್ಟ್ರಾನ್‌ಗಳೂ ಎರಡು. ನಾವು ಬಹಳ ಆಸಡ್ಡೆಯಿಂದ ಕಾಣುವ, ಆದರೆ ಎಲ್ಲ ತರದ ಜೀವಾಣುಗಳ ಅನಿವಾರ್ಯ ಅಂಗವಾದ ಇಂಗಾಲ (ಇದ್ದಿಲು)ದ ಬೀಜದಲ್ಲಿ ಆರು ಪ್ರೋಟಾನ್ ಮತ್ತು ಆರು ನ್ಯೂಟ್ರಾನ್‌ಗಳಿವೆ. ಬೀಜವನ್ನು ಆರು ಎಲೆಕ್ಟ್ರಾನ್‌ಗಳು ಬೇರೆಬೇರೆ ಪಥಗಳಲ್ಲಿ ಸುತ್ತುತ್ತವೆ. ಬೀಜದಲ್ಲಿರುವ ಕಣಗಳ ಒಟ್ಟು ಸಂಖ್ಯೆಯನ್ನು ಪರಮಾಣುವಿನ ಭಾರಾಂಕ[1]ವೆಂದೂ, ಪ್ರೋಟಾನ್‌ಗಳ ಸಂಖ್ಯೆಯನ್ನು ಪರಮಾಣ್ವಂಕ[2]ವೆಂದೂ ಅಥವಾ ಕ್ರಮಾಂಕ[2]ವೆಂದೂ ಕರೆಯುತ್ತಾರೆ. ಜಲಜನಕದ ಭಾರಾಂಕ ಪರಮಾಣ್ವಂಕಗಳು ೧, ೧, ಹೀಲಿಯಮ್ಮಿನದು ೪, ೨, ಇಂಗಾಲದ್ದು ೧೨, ೬ ಇತ್ಯಾದಿ. ಪರಮಾಣುಗಳಲ್ಲಿ ಒಂದರಿಂದ ಮತ್ತೊಂದನ್ನು ಪ್ರತ್ಯೇಕಿಸುವ ಈ ಭಾರಾಂಕ ಪರಮಾಣ್ವಂಕಗಳಲ್ಲಿ ನಾವು ಪರಮಾಣುವನ್ನು ಗುರುತಿಸುವುದು, ಅದಕ್ಕೆ ಹೆಸರಿಟ್ಟಿರುವುದು ಪರಮಾಣ್ವಂಕವನ್ನು ನೋಡಿಯೇ ಅಲ್ಲದೆ ಭಾರಾಂಕವನ್ನು ನೋಡಿ ಅಲ್ಲ. ಪರಮಾಣ್ವಂಕದಲ್ಲಿಯೂ ನಮ್ಮ ಗಮನವನ್ನು ಸೆಳೆಯುವುದು ಬೀಜದಲ್ಲಿರುವ ಪ್ರೋಟಾನ್‌ಗಳ ಸಂಖ್ಯೆಯಲ್ಲ, ಪರಮಾಣುವಿನ ಹೊದಿಕೆ ಅಥವಾ ಉಡುಪಿನಂತಿರುವ ಬೀಜದ ಹೊರಗಣ ಎಲೆಕ್ಟ್ರಾನ್‌ಗಳ ಸಂಖ್ಯೆ. ಉದಾಹರಣೆಗೆ ೪೭ ಪ್ರೋಟಾನ್ ಮತ್ತು ೬೦ ನ್ಯೂಟ್ರಾನ್‌ಗಳ ಪರಮಾಣು ಬೀಜವೂ ಇದೆ, ೪೭ ಪ್ರೋಟಾನ್ ಮತ್ತು ೬೨ ನ್ಯೂಟ್ರಾನ್‌ಗಳ ಬೀಜವೂ ಇದೆ. ಈ ಎರಡು ಬೀಜಗಳನ್ನೂ ೪೭ ಎಲೆಕ್ಟ್ರಾನ್‌ಗಳೇ ಸುತ್ತುತ್ತಿರುವುದರಿಂದ ನಮಗೆ ಇವೆರಡೂ ಬೆಳ್ಳಿಯ ಪರಮಾಣುಗಳಾಗಿಯೇ ತೋರುತ್ತವೆ. ವೈಜ್ಞಾನಿಕ ಭಾಷೆಯಲ್ಲಿ ಇವನ್ನು ೧೦೭ ಮತ್ತು ೧೦೯ ಭಾರಾಂಕಗಳ ಬೆಳ್ಳಿಯ ಸಮಸ್ಥಾನೀಯ[3] ಪರಮಾಣುಗಳೆಂದು ಕರೆಯುತ್ತಾರೆ. ಇವೆರಡು ಪರಮಾಣುಗಳಿಗಿರುವ ವ್ಯತ್ಯಾಸವನ್ನು ಯಾವ ರಾಸಾಯನಿಕ ಕ್ರಿಯೆಯಿಂದಲೂ ಪತ್ತೆಮಾಡುವುದು ಅಸಾಧ್ಯ. ಕೆಲವು ಸೂಕ್ಷ್ಮ ಭೌತ ಪ್ರಯೋಗಗಳಿಂದ (ಉದಾ : ಸಾಂದ್ರತೆಯಲ್ಲಿರುವ ಸೂಕ್ಷ್ಮ ವ್ಯತ್ಯಾಸ) ಇವುಗಳನ್ನು ಪ್ರತ್ಯೇಕಿಸುವುದು ಸಾಧ್ಯ, ಅದೂ ಶ್ರಮಸಾಧ್ಯ. ನೈಸರ್ಗಿಕವಾದ ಬೆಳ್ಳಿಯ ಪ್ರತಿಯೊಂದು ಸಾವಿರ ಪರಮಾಣುಗಳಲ್ಲಿ ೫೨೫ ಪರಮಾಣುಗಳು ೧೦೭ ರ ಭಾರಾಂಕದವು ಉಳಿದವು ೧೦೯ ರ ಭಾರಾಂಕದವು. ಭೂಮಿಯಲ್ಲಿ ೧ ರಿಂದ ಕ್ರಮವಾಗಿ ೯೨ ರ ವರೆಗಿನ ಪರಮಾಣ್ವಂಕಗಳ ಧಾತುಗಳೆಲ್ಲ ದೊರಕಿವೆ. ಇವುಗಳಲ್ಲಿ ಕೆಲವು ಹೇರಳ, ಕೆಲವು ಅಪೂರ್ವ, ಒಂದೆರಡು ಕೃತಕ. ಇತ್ತೀಚೆಗೆ ಪರಮಾಣು ಬಾಂಬಿನ ಸಂಶೋಧನೆಗಳ ಕಾರಣವಾಗಿ ೯೩, ೯೪, ೯೫ ಮತ್ತು ೯೬ ನೆಯ ಧಾತುಗಳೂ

[1] Mass number. [2] Atomic number. [3] Isotope.

ಸೃಷ್ಟಿಯಾಗಿವೆ. ಆದರೆ ಇವು ಅಭದ್ರ[1] ಪರಮಾಣುಗಳು. ಇವುಗಳ ಹೆಸರುಗಳು ಕ್ರಮವಾಗಿ ನೆಪ್ಚೂನಿಯಂ ಪ್ಲುಟೋನಿಯಂ ಅಮೆರಿಕಿಯಂ ಮತ್ತು ಕೂರಿಯಂ ಎಂದು.

ಪರಮಾಣುವಿನ ಗಾತ್ರವು ಬಹಳ ಸಣ್ಣದು. ಅದರ ವ್ಯಾಸವು ಒಂದಂಗುಲದ ದಶಕೋಟ್ಯಂಶಕ್ಕಿಂತ ಸ್ವಲ್ಪ ಕಡಿಮೆ. ಇಲ್ಲಿ ಪರಮಾಣುವಿನ ವ್ಯಾಸವೆಂದರೆ ಬೀಜ ಮತ್ತು ಎಲೆಕ್ಟ್ರಾನ್‌ಗಳ ಒಟ್ಟು ವ್ಯವಸ್ಥೆಯ ವ್ಯಾಸ. ಇನ್ನು ಬೀಜದ ವ್ಯಾಸವು ಒಂದಂಗುಲದ ಕೋಟ್ಯಂಶದ ಹತ್ತು ಲಕ್ಷಾಂಶದಷ್ಟು! ಈ ಸೂಕ್ಷ್ಮಾಂಕಗಳು ನಮ್ಮ ಮನಸ್ಸಿಗೆ ಹಿಡಿಯುವುದು ಕಷ್ಟ. ಪರಮಾಣು ಬೀಜವನ್ನು ಒಂದು ನಿಂಬೆಯ ಹಣ್ಣಿನ ಗಾತ್ರದಷ್ಟಾಗಿ ತೋರಿಸುವಂತಹ ಸೂಕ್ಷ್ಮದರ್ಶಿನಿ[2]ಯಿಂದ ಪರೀಕ್ಷಿಸಿದರೆ ಅದನ್ನು ಸುತ್ತುವ ಎಲೆಕ್ಟ್ರಾನ್ ಹಣ್ಣಿನಿಂದ ಸುಮಾರು ಒಂದು ಫರ್ಲಾಂಗು ದೂರದಲ್ಲಿರುತ್ತದೆ! ಆದರೆ ವಾಸ್ತವವಾಗಿ ಅಂತಹ ಸೂಕ್ಷ್ಮದರ್ಶಿನಿಯು ಜಗತ್ತಿನಲ್ಲೆಲ್ಲಿಯೂ ಇಲ್ಲ, ಇದ್ದರೂ ಪ್ರೋಟಾನ್ ಒಂದು ಗುಂಡಿನಂತೆ ತೋರ್ಪಡಿಸಿಕೊಳ್ಳುವ ಸಂಭವವೂ ಇಲ್ಲ. ಪರಮಾಣುವಿನ ಒಳಗಡೆಯೆಲ್ಲಾ ಬಹುಮಟ್ಟಿಗೆ ಶೂನ್ಯಪ್ರದೇಶವೇ ಎಂಬುದನ್ನು ತಿಳಿಸಲಿಕ್ಕಾಗಿ ಈ ಉಪಮೆಯನ್ನು ಹೇಳಿದೆ. ಉಕ್ಕು ಬಂಗಾರಗಳಂತಹ ಗಡಸಾದ, ಭಾರವಾದ ಪದಾರ್ಥಗಳೂ ಕೂಡ ಇಂತಹ ಪರಮಾಣುಗಳ ವಿರಳವಾದ ಅಥವಾ ದಟ್ಟವಾದ ಸಮೂಹಗಳಾದಕಾರಣ ಎಲ್ಲ ಪದಾರ್ಥಗಳು ಆಕ್ರಮಿಸಿರುವ ಅವಕಾಶದ ಬಹುಭಾಗ, ಅಂದರೆ ಹತ್ತು ಸಹಸ್ರಕೋಟಿ ಭಾಗಗಳಲ್ಲಿ ಒಂದು ಭಾಗ ಬಿಟ್ಟು ಉಳಿದುದೆಲ್ಲವೂ, ಶೂನ್ಯಪ್ರದೇಶವೇ.

ಇನ್ನು ಪ್ರೋಟಾನ್ ಎಲೆಕ್ಟ್ರಾನ್‌ಗಳ ಭಾರದ ವಿಚಾರ ಮಾಡೋಣ. ಪ್ರೋಟಾನಿನ ಭಾರವು[3] ಅಥವಾ ನಿಷ್ಕೃಷ್ಟವಾಗಿ ಹೇಳಿದರೆ ಅದರ ಜಡತ್ವ[3]ವು ಒಂದು ಗ್ರಾಂನ ಕೋಟ್ಯಂಶದ ಕೋಟ್ಯಂಶದ ಕೋಟ್ಯಂಶದ ಸಹಸ್ರಾಂಶಕ್ಕಿಂತ ಸ್ವಲ್ಪ ಹೆಚ್ಚು (೧.೬೬×೧೦—೨೪ ಗ್ರಾಂ). ಒಂದು ಗ್ರಾಂ ಎಂದರೆ ಒಂದು ಪೌಂಡಿನ ೪೫೩ ರಲ್ಲೊಂದು ಭಾಗ ಅಥವಾ ಒಂದು ತೊಲದ ಸುಮಾರು ಹತ್ತರಲ್ಲೊಂದಂಶ. ಎಲೆಕ್ಟ್ರಾನಿನ ಜಡತ್ವ ಪ್ರೋಟಾನಿನದರ ೧೮೪೦ ರಲ್ಲೊಂದು ಭಾಗವೆಂದು ಆಗಲೇ ತಿಳಿಸಿದೆ. ವಿಜ್ಞಾನಿಯು ಮೂಲಕಣಗಳ ಭಾರ ಹಾಗೂ ವಿದ್ಯುತ್ತುಗಳನ್ನು ಸಾಕಷ್ಟು ನಿಷ್ಕೃಷ್ಟವಾಗಿ ನಿರ್ಣಯಿಸಿದ್ದಾನೆ; ಆದರೆ ಅವುಗಳ ಗಾತ್ರದ ವಿಚಾರದಲ್ಲಿ ಅವನಿಗೆ ಅಷ್ಟು ನಿಷ್ಕೃಷ್ಟವಾದ ಜ್ಞಾನ ಇಲ್ಲ, ಸಾಲದುದಕ್ಕೆ ಗಾತ್ರಪದವನ್ನು ಮೂಲ ಕಣಗಳಿಗೆ ಅನ್ವಯಿಸಿದಾಗ ಗಾತ್ರದ ಸ್ಪಷ್ಟ ಭಾವಾರ್ಥವೇನೆಂಬುದನ್ನು ತಿಳಿಸಲೂ ಅವನಿಗೆ ಸಾಧ್ಯವಾಗಿಲ್ಲ.

---

[1] Unstable. [2] Microscope. [3] Masst.

೫ ಸಹಜ ವಿಕಿರಣ ಕ್ರಿಯೆ[1]

ತೊಂಬತ್ತೆರಡು ಪರಮಾಣುಗಳಲ್ಲಿ ೮೧ ರಿಂದ ಆಚೆಯ ಅನೇಕ ಧಾತುಗಳು ಇತರ ಧಾತುಗಳಿಗಿಂತ ವಿಚಿತ್ರವಾಗಿ ವರ್ತಿಸುತ್ತವೆ. ಈ ಪರಮಾಣುಗಳ ಬೀಜಗಳು ಕೆಲವು ತಾವಾಗಿಯೇ ಇದ್ದಕ್ಕಿದ್ದಂತೆಯೇ ಸಿಡಿದು ಕಣಗಳನ್ನು ಚಿಮ್ಮುತ್ತವೆ. ಇಂತಹ ಪರಮಾಣುಗಳಿಗೆ ಸ್ವಯಂಸ್ಫೋಟಕ ಅಥವಾ ಸಹಜ ವಿಕಿರಣ ಕ್ರಿಯಾ ಪರಮಾಣುಗಳೆಂದು ಹೆಸರು. ಭಾರತಮ ಪರಮಾಣುವಾದ ಯುರೇನಿಯಮನ್ನೇ (ಪರಮಾಣ್ವಂಕ ೯೨, ಭಾರಾಂಕ ೨೩೮) ಸ್ವಯಂಸ್ಫೋಟಕ ಪರಮಾಣುಗಳಿಗೆ ಉದಾಹರಣೆಯನ್ನಾಗಿ ತೆಗೆದುಕೊಳ್ಳಬಹುದು. ಈ ಪರಮಾಣುವು ಸಿಡಿದಾಗ ಒಂದು ಆಲ್ಫ ಕಣವನ್ನು ತನ್ನ ಬೀಜದಿಂದ ಹೊರದೂಡುತ್ತದೆ. ಆಲ್ಫ ಕಣವೆಂದರೆ ಹೀಲಿಯಂ ಪರಮಾಣು ಬೀಜ, ಎಂದರೆ ಎರಡು ಪ್ರೋಟಾನ್ ಮತ್ತು ಎರಡು ನ್ಯೂಟ್ರಾನ್‌ಗಳ ಒಂದು ತುಂಡು. ಆದಕಾರಣ ಇಂತಹ ಕಣವನ್ನು ಕಳೆದುಕೊಂಡಮೇಲೆ ಯುರೇನಿಯಂ ಬೀಜದ ಭಾರಾಂಕ ೨೩೪ ಪರಮಾಣ್ವಂಕ ೯೦ ಆಗುತ್ತದೆ. ಪರಮಾಣ್ವಂಕ ಬೇರೆಯಾದುದರಿಂದ ಧಾತುವೇ ಬೇರೆಯಾದಂತಾಯಿತು. ಯುರೇನಿಯಂನಿಂದ ಹುಟ್ಟಿದ ಈ ಹೊಸಧಾತುವಿಗೆ ಯುರೇನಿಯಂ X_1 ಎಂದು ಹೆಸರು. ಇದು ಥೋರಿಯಂ ಧಾತುವಿನ ಸಮಸ್ಥಾನೀಯ. ಈ ಯುರೇನಿಯಂ X_1 ಕೂಡ ಸ್ವಯಂ ಸ್ಫೋಟಕ ಪರಮಾಣು. ಇದರ ಬೀಜದಲ್ಲಿರುವ ನ್ಯೂಟ್ರಾನೊಂದು ಪ್ರೋಟಾನಿಗೆ ಪರಿವರ್ತಿತವಾಗಿ ಎಲೆಕ್ಟ್ರಾನ್ ಕಣವನ್ನು ಬಿಸುಡುತ್ತದೆ. ಅಲ್ಲಿಗೆ ಯುರೇನಿಯಂನ ಈ ಎರಡನೆಯ ಸಂತತಿಯ ಧಾತುವಿನ ಪರಮಾಣ್ವಂಕ ೯೧ ಆಗುತ್ತದೆ. ಇದು ಪ್ರೊಟಾಕ್ಟಿನಿಯಂನ ಸಮಸ್ಥಾನೀಯ. ಇದೂ ಸಹಜ ವಿಕಿರಣ ಕ್ರಿಯಾಧಾತು. ಹೀಗೆಯೇ ಕಣಗಳನ್ನು ಕಳೆದುಕೊಂಡು ಧಾತು ಪರಿವರ್ತನೆಯಾಗುತ್ತಾ ಐದನೆಯ ಸಂತತಿಯಲ್ಲಿ ರೇಡಿಯಂ ಆಗಿ ಹದಿನಾಲ್ಕನೆಯ ಸಂತತಿಯಲ್ಲಿ ಸೀಸವಾಗುತ್ತದೆ. ಈ ಸೀಸವು (ಭಾರಾಂಕ ೨೦೬, ಪರಮಾಣ್ವಂಕ ೮೨)ಭದ್ರ[2] ಪರಮಾಣು, ಇದು ಸಿಡಿಯುವುದಿಲ್ಲ.

ಯುರೇನಿಯಂನಂತೆಯೇ ಥೋರಿಯಂ ಮತ್ತು ಆಕ್ಟಿನಿಯಂ ಪರಮಾಣುಗಳೂ ಬೇರೆ ಎರಡು ವಿಕಿರಣಕ್ರಿಯಾವಂಶಗಳ ಮೂಲಪುರುಷರು. ಈ ಶ್ರೇಣಿಗಳ ಧಾತುಗಳೂ ಕೆಲವು ಆಲ್ಫ ಕಣಗಳನ್ನೂ ಮತ್ತೆ ಕೆಲವು ಎಲೆಕ್ಟ್ರಾನ್‌ಗಳನ್ನೂ ಹೊರಗೆ ಬಿಸುಟು ಕೊನೆಗೆ ಸೀಸದ ಭದ್ರಪರಮಾಣುಗಳಾಗಿ ಉಳಿಯುತ್ತವೆ. ಆಕ್ಟಿನಿಯಂ ಶ್ರೇಣಿಯ ಕಡೆಯ ಸಂತತಿ ೨೦೭ ಭಾರಾಂಕದ ಸೀಸ, ಥೋರಿಯಂದರ ಕಡೆಯ ಸಂತತಿ ೨೦೮ರ ಸೀಸ.

---

[1] Natural Radio-activity. [2] Stable.

ಸಹಜ ವಿಕಿರಣಕ್ರಿಯಾಧಾತುಗಳ ಪರಮಾಣುಗಳು ಇದ್ದಕ್ಕಿದ್ದಂತೆಯೇ ಕೆಲವು ಸಿಡಿಯುತ್ತವೆಂದು ಹೇಳಿದೆಯಷ್ಟೆ, ಹೀಗೆ ನಮಗೆ ತಿಳಿದಮಟ್ಟಿಗೆ ಇವು ನಿಷ್ಕಾರಣವಾಗಿ ಸಿಡಿದರೂ ಇವುಗಳ ಸ್ಫೋಟನದಲ್ಲಿ ಒಂದು ನಿಯಮವಿದೆ. ಗೊತ್ತಾದ ಕಾಲದಲ್ಲಿ ಒಟ್ಟು ಪರಮಾಣುಗಳ ಗೊತ್ತಾದ ಪ್ರಮಾಣ ಸಂಖ್ಯೆಯ ಪರಮಾಣುಗಳು ಮಾತ್ರ ಸಿಡಿಯುತ್ತವೆ. ಉದಾಹರಣೆಗೆ ರೇಡಿಯಂ ಲೋಹದ ಪ್ರತಿ ಎರಡು ಸಾವಿರ ಪರಮಾಣುಗಳಲ್ಲಿ ವರ್ಷ ಒಂದಕ್ಕೆ ಒಂದು ಪರಮಾಣುವಿನಂತೆ ಸ್ಫೋಟನ ಕ್ರಿಯೆಯಾಗುತ್ತದೆ. ಇದನ್ನೇ ವೈಜ್ಞಾನಿಕ ಭಾಷೆಯಲ್ಲಿ ರೇಡಿಯಂನ ಅರ್ಧಾಯು[1] ೧೫೯೦ ವರ್ಷಗಳು ಎಂದು ಹೇಳುತ್ತಾರೆ. ಇದರ ಅರ್ಥ ರೇಡಿಯಂನ ಪೂರ್ಣಾಯುಸ್ಸು ೩೧೮೦ ವರ್ಷಗಳೆಂದಲ್ಲ. ಏಕೆಂದರೆ ಈಗ ನಮ್ಮಲ್ಲಿ ೧೦ ತೊಲ ರೇಡಿಯಂ ಇದ್ದರೆ, ೧೫೯೦, ೩೧೮೦, ೬೩೬೦, ೧೨,೭೨೦, ೨೫,೪೪೦ . . . ವರ್ಷಗಳು ಕಳೆದಮೇಲೆ ೫, ೨ ೧/೨, ೧ ೧/೪, ೫/೮, ೫/೧೬ . . . ತೊಲಗಳು ಮಾತ್ರ ರೇಡಿಯಂ ರೂಪದಲ್ಲಿಯೇ ಉಳಿದಿರುತ್ತದೆ. ಮಿಕ್ಕ ರೇಡಿಯಂ ಎಲ್ಲಾ ಪರಿವರ್ತಿತವಾಗಿರುತ್ತದೆ. ಇದರಿಂದ ರೇಡಿಯಂ ಸಂಪೂರ್ಣವಾಗಿ ಪರಿವರ್ತಿತವಾಗಲು ಅನಂತ ಕಾಲವು ಬೇಕಾಗುತ್ತದೆಂಬುದು ಸ್ಪಷ್ಟಪಡುತ್ತದೆ. ಬೇರೆ ಬೇರೆ ವಿಕಿರಣ ಧಾತುಗಳ ಅರ್ಧಾಯುಗಳು ಬೇರೆ ಬೇರೆ, ಆದರೆ ಅವುಗಳ ಕಾಲ ನಿರ್ದಿಷ್ಟವಾದುದು.

ಇತರ ಯಾವ ಭೌತ, ರಾಸಾಯನಿಕ ಪರಿವರ್ತನೆಗಳಲ್ಲಿಲ್ಲದ ಒಂದು ವೈಶಿಷ್ಟ್ಯವು ಸಹಜ ವಿಕಿರಣ ಕ್ರಿಯೆಯಲ್ಲಿ ಕಂಡುಬಂದಿದೆ. ಅದು ಇದು—ಸ್ವಯಂ ಸ್ಫೋಟಕ ಧಾತುವಿನ ಅರ್ಧಾಯುವು ಅಂದರೆ ಸ್ಫೋಟನ ಕ್ರಿಯಾವೇಗವು ಸ್ಥಿರವಾದುದು. ಉಷ್ಣಾಂಶ[2], ಒತ್ತಡ[3], ವಿದ್ಯುತ್‌ಕ್ಷೇತ್ರ, ಕಾಂತಕ್ಷೇತ್ರ[4], ರಾಸಾಯನಿಕ ವಾತಾವರಣ ಮೊದಲಾದ ಯಾವ ಸನ್ನಿವೇಶಗಳಲ್ಲಿ ಎಷ್ಟು ಉಗ್ರ ಪರಿಮಾಣದ ವ್ಯತ್ಯಾಸವಾದರೂ ಇವುಗಳ ಸ್ಫೋಟನ ವೇಗದಲ್ಲಿ ಎಳ್ಳಷ್ಟು ವ್ಯತ್ಯಾಸ ಕಂಡುಬರುವುದಿಲ್ಲ. ಈ ತತ್ತ್ವಕ್ಕೆ ಪ್ರಬಲವಾದ ಪ್ರಾಯೋಗಿಕ ಸಮರ್ಥನೆ ದೊರೆತಿದೆ. ಅದು ಕೆಳಗೆ ಕಾಣುವಂತೆ.

ವಿಕಿರಣ ಬೀಜಗಳಿಂದ ಚಿಗಿದು ಬರುವ ಕಣಗಳಿಗೆ ಪದಾರ್ಥಗಳನ್ನು ತೂರಿಕೊಂಡು ಹೋಗುವ ಸಾಮರ್ಥ್ಯವಿದೆ. ಹೀಗೆ ತೂರಿ ಹೋದ ದೂರ ಹೆಚ್ಚಿದಂತೆಲ್ಲ ಕಣದ ವೇಗ ಕಡಿಮೆಯಾಗುತ್ತ ಒಂದು ನಿರ್ದಿಷ್ಟವಾದ ದೂರ ಚಲಿಸಿದನಂತರ ಕಣವು ಪದಾರ್ಥದಲ್ಲಿ ಲೀನವಾಗುತ್ತದೆ. ಈ ದೂರಕ್ಕೆ ಕಣದ ಭೇದನ ದೂರ[5]ವೆಂದು

---

[1] Half-period, Half-life. [2] Temperature. [3] Pressure.
[4] Magnetic field. [5] Range of penetration.

ಹೆಸರು. ಭೇದನ ದೂರವು ವಿಕಿರಣ ಕ್ರಿಯಾ ಧಾತುವಿನ ಅರ್ಧಾಯುವನ್ನು ಅವಲಂಬಿಸುತ್ತದೆ. ಈ ದೂರದ ನಿರ್ಣಯದಿಂದ ಅರ್ಧಾಯುವನ್ನು ಗುಣಿಸಬಹುದು. ಭೂಮಿಯ ಕೆಲವು ಪುರಾತನ ಬಂಡೆಗಳಲ್ಲಿ ಯುರೇನಿಯಂ ಮುಂತಾದ ವಿಕಿರಣ ಧಾತುಗಳು ಬೆರೆತುಕೊಂಡಿವೆ. ಬಂಡೆಗಳ ಪದರಗಳ ಮಧ್ಯೆ ಸಿಕ್ಕಿಕೊಂಡ ಇಂತಹ ಧಾತುಗಳಿಂದ ಸಿಡಿದ ಕಣಗಳು ಆ ಬಂಡೆಗಳನ್ನೇ ಸ್ವಲ್ಪ ದೂರ ಭೇದಿಸಿ ಲೀನವಾಗುತ್ತವೆ. ಇದರ ಕಾರಣವಾಗಿ ಧಾತುವಿನ ಸುತ್ತಲೂ ವೃತ್ತಾಕಾರದ ಗುರುತು ಬೀಳುತ್ತದೆ. ಇದಕ್ಕೆ ವಿಕಿರಣ ಕ್ರಿಯಾ ಪರಿವೇಷ[1]ವೆಂದು ಹೆಸರು. ಈ ವೃತ್ತದ ತ್ರಿಜ್ಯ[2]ವೇ ಧಾತುವಿನಿಂದ ಹೊರಟ ಕಣಗಳ ಭೇದನ ದೂರ. ಅನೇಕ ಕೋಟಿ ವರ್ಷಗಳ ಕೆಳಗೆ ಬಂಡೆಗಳ ಪದರಗಳಲ್ಲಿ ಚಿತ್ರಿತವಾದ ಈ ಭೇದನ ದೂರವು ಈಗ ಪ್ರಾಯೋಗಿಕವಾಗಿ ನಿರ್ಣಯಿಸಿರುವ ದೂರಕ್ಕೆ ಸಮವಾಗಿ ಕಂಡು ಬಂದಿದೆ. ಇದರ ಅರ್ಥ ಅಂದಿನಿಂದ ಇಂದಿನವರೆಗೂ ಸ್ಫೋಟನ ವೇಗವು ಏಕರೀತಿಯಾಗಿಯೇ ಇದೆ ಎಂದಾಯಿತು. ಈ ಧಾತುವಿಕಿರಣವಿಜ್ಞಾನದಿಂದ ನಾವು ಭೂಮಿಯ ವಯಸ್ಸನ್ನು ಗುಣಿಸಬಹುದು.

೬. ಭೂಮಿಯ ವಯಸ್ಸು

ಭೂಮಿಯ ಗಣಿಗಳಿಂದ ತೆಗೆದ ಯುರೇನಿಯಂ ಅದುರಿನ ಜೊತೆಗೆ ಯಾವಾಗಲೂ ಸೀಸವು ಬೆರೆತಿರುತ್ತದೆ. ಈ ಸೀಸವು ಯುರೇನಿಯಂ ಪರಿವರ್ತಿತ ಸೀಸವೆಂದು ಅನುಮಾನಿಸುವುದು ಸಹಜ. ಆದರೆ ಸಾಮಾನ್ಯ ಸೀಸವೂ ಏಕೆ ಮಿಶ್ರವಾಗಿರಬಾರದೆಂಬ ಪ್ರಶ್ನೆಯೂ ಹುಟ್ಟುತ್ತದೆ. ಭಾರಾಂಕಗಳಲ್ಲಿ ಎರಡು ಸೀಸಗಳಿಗೂ ಸ್ವಲ್ಪ ವ್ಯತ್ಯಾಸವಿರುವುದರಿಂದ ಪ್ರಾಯೋಗಿಕವಾಗಿ ಯುರೇನಿಯಂ ವಂಶಸ್ಥ ಸೀಸವೆಷ್ಟೆಂದು ನಿರ್ಣಯಿಸಬಹುದು. ಹೀಗೆ ಅದುರಿನಲ್ಲಿ ಯುರೇನಿಯಂ ಮತ್ತು ಯುರೇನಿಯಂ ಜನ್ಯ ಸೀಸಗಳ ಪ್ರಮಾಣವು ನಿರ್ಣಯವಾದ ಮೇಲೆ, ಯುರೇನಿಯಂ ಮತ್ತು ಅದರ ಶ್ರೇಣಿಯ ಧಾತುಗಳ ಅರ್ಧಾಯುಗಳು ತಿಳಿದಿರುವುದರಿಂದ, ಎಷ್ಟು ವರ್ಷಗಳಿಂದ ಯುರೇನಿಯಂ ಬಂಡೆಯಲ್ಲಿ ಹುದುಗಿಕೊಂಡಿದೆ ಎಂದು ಗುಣಿಸಬಹುದು. ಭೂಮಿಯ ಅನೇಕ ಸ್ಥಳಗಳಲ್ಲಿ ಆಳವಾದ ಗಣಿಗಳಲ್ಲಿ ದೊರಕಿರುವ ಯುರೇನಿಯಂ ಅದುರುಗಳ ಪರಿಶೀಲನೆಯಿಂದ ಈ ಕಾಲವು ೧೬೦ ಕೋಟಿ ವರ್ಷಗಳೆಂದು ತೀರ್ಮಾನಿಸಲಾಗಿದೆ. ಇದರಂತೆಯೇ ಆಕ್ಟಿನಿಯಂ ಮತ್ತು ಥೋರಿಯಂ ಅದುರುಗಳೊಂದಿಗೆ ಬೆರೆತಿರುವ ಸೀಸಗಳ ಪ್ರಮಾಣದಿಂದ ಭೂಮಿಯ ಅತಿ ಪುರಾತನ

[1] Radio-active halo. [2] Radius.

ಬಂಡೆಗಳು ನಿರ್ಮಾಣವಾಗಿ ಕ್ರಮವಾಗಿ ೧೯೦ ಕೋಟಿ ವರ್ಷಗಳಾಗಿರಬೇಕೆಂದು ಗುಣಿಸಲಾಗಿದೆ. ಆದುದರಿಂದ ಭೂಮಿಯು ಹೊರಮೈ ಘನೀಭವಿಸಲು ಪ್ರಾರಂಭ ವಾದಂದಿನಿಂದ ೧೯೦ ಕೋಟಿ ವರ್ಷಗಳಾದರೂ ಕಳೆದಿರಬೇಕೆಂದು ದೃಢಪಡುತ್ತದೆ. ಭೂಮಿಯು ಜನನವಾದ ಮೇಲೆ ಅದರ ಹೊರ ಮೈಯು ಘನರೂಪ ತಾಳಲು ಎರಡು ಮೂರು ಕೋಟಿ ವರ್ಷಗಳು ಸಾಕೆಂದು ಜಲಚಲನ ವಿಜ್ಞಾನ[1]ನಿಯಮಗಳಿಂದ ಗುಣಿಸಬಹುದು. ಇಲ್ಲಿ ಭೂಮಿಯು ಪ್ರತ್ಯೇಕ ಗ್ರಹವಾಗಿ ಸೂರ್ಯನನ್ನು ಸುತ್ತಲು ಆರಂಭಿಸಿದ ಕಾಲವನ್ನು ಭೂಮಿಯ ಜನನವೆಂದು ಕರೆದಿದೆ. ಈ ಅರ್ಥದಂತೆ ಭೂಮಿಯು ಹುಟ್ಟಿ ಸುಮಾರು ೨೦೦ ಕೋಟಿ ವರ್ಷಗಳಾಗಿರಬೇಕು. ಅದಕ್ಕೆ ಮುಂಚೆ ಭೂಮಿಯ ವಸ್ತು ಸಾಮಗ್ರಿಯು ಎಲ್ಲಿ ಯಾವರೂಪದಲ್ಲಿತ್ತೆಂಬುದನ್ನು ಮುಂದೆ ವಿವೇಚಿಸಲಾಗುತ್ತದೆ.

ಭೂಮಿಯ ವಯಸ್ಸಿನ ಈ ಗಣತಿಯ ಆಧಾರದ ಮೇಲೆ ಭೂಗರ್ಭವಿಜ್ಞಾನಿ[2]ಗಳು ಭೂಮಿಯಲ್ಲಿ ಜೀವಿಗಳ ಸೃಷ್ಟಿಯಾಗಿ ಸುಮಾರು ೫೦ ಕೋಟಿ ವರ್ಷಗಳಾಗಿರ ಬೇಕೆಂದೂ, ಮಾನವ ಕುಲದ ಸೃಷ್ಟಿಯಾಗಿ ೨೦ ಲಕ್ಷ ವರ್ಷಗಳಾಗಿರಬೇಕೆಂದೂ ಅಭಿಪ್ರಾಯಪಡುತ್ತಾರೆ. ಸಭ್ಯ ಮಾನವನು ಹುಟ್ಟಿ ಎಂಟು-ಹತ್ತು ಸಾವಿರ ವರ್ಷ ಗಳಾಗಿದ್ದರೆ ಹೆಚ್ಚು.

ಗಣಿಗಳಲ್ಲಿ ದೊರಕುವ ಸಾಮಾನ್ಯ ಸೀಸವು ೨೦೪, ೨೦೬, ೨೦೭ ಮತ್ತು ೨೦೮ ಭಾರಾಂಕಗಳ ಸಮಸ್ಥಾನೀಯ (೮೨)ಗಳ ಬೆರಕೆ. ಈ ಎಲ್ಲ ಸೀಸವೂ ವಿಕಿರಣಕ್ರಿಯಾಮೂಲದ ಸೀಸವೆಂದು ಎಣಿಸಿದರೆ ಭೂಮಿಯ ವಯಸ್ಸು ೩೫೦ ಕೋಟಿ ವರ್ಷಗಳಾಗುತ್ತದೆ. ಇದು ಅಧಿಕತಮ[3] ಸಾಧ್ಯ ವಯಸ್ಸು. ಅಲ್ಲಿಗೆ ಭೂಮಿಯ ವಯಸ್ಸು ೨೦೦ ಕೋಟಿ ವರ್ಷಗಳಿಗೆ ಕಡಿಮೆಯಿಲ್ಲ, ೩೫೦ ಕೋಟಿ ವರ್ಷಗಳಿಗಿಂತ ಹೆಚ್ಚಿರಲಾರದು ಎಂದಹಾಗಾಯಿತು.

ಭೂಮಿಯ ಮೇಲೆ ಆಗಾಗ್ಗೆ ಬೀಳುವ ಉಲ್ಕಾಪಾತ[4]ಗಳಲ್ಲಿಯೂ ಸೀಸ ಮಿಶ್ರಿತ ರೇಡಿಯಂ ದೊರಕುತ್ತದೆ. ಉಲ್ಕಾಪಾತಗಳು ಧೂಮಕೇತುಗಳ ಛಿದ್ರ ಭಾಗಗಳು. ಅಪರೂಪವಾಗಿ ಮಂಗಳ ಮತ್ತು ಗುರುಗ್ರಹ ಪಥಗಳ ನಡುವೆ ಚಲಿಸುತ್ತಿರುವ ಕ್ಷುದ್ರಗ್ರಹಗಳ[5] ಗುಂಪಿಗೆ ಸೇರಿದ ಆಕಾಶ ಕಾಯಗಳು. ಬಹಳ ಅಪರೂಪವಾಗಿ ಒಂದೆರಡು ಉಲ್ಕಾಪಾತಗಳು ಸೌರವ್ಯೂಹದ ಹೊರಗಿನಿಂದ ಬರುವುದೂ ಉಂಟು. ಆದರೆ ಇವು ಸೌರವ್ಯೂಹಕ್ಕೆ ಸೇರಿರಲಿ, ಸೌರವ್ಯೂಹದಾಚೆಯಿಂದ ಬಂದಿರಲಿ, ಸೀಸ ಮತ್ತು ರೇಡಿಯಂಗಳ ಪ್ರಮಾಣಗಳಿಂದ ಗುಣಿಸಿದ ಇವುಗಳ ವಯಸ್ಸು ೨೮೦

---

[1] Hydro-dynamics. [2] Geologist. [3] Maximum. [4] Meteorite. [5] Asteroids.

ಕೋಟಿ ವರ್ಷಗಳೊಳಗೇ ಇರಬೇಕೆಂದು ಕಂಡುಬಂದಿದೆ. ಅಲ್ಲಿಗೆ ಭೂಮಿ, ಸೌರ ವ್ಯೂಹದ ಇತರ ಗ್ರಹಗಳು, ಸೌರವ್ಯೂಹದ ಹೊರಗಿನ ಕೆಲವು ಆಕಾಶಕಾಯಗಳು ಇವುಗಳ ಜನನವು ೨೦೦ ರಿಂದ ೩೦೦ ಕೋಟಿ ವರ್ಷಗಳ ಹಿಂದೆ ಆಗಿರಬೇಕೆಂದು ತೋರುತ್ತದೆ.

ಭೂಮಿಯ ವಯಸ್ಸನ್ನು ನಿರ್ಣಯಿಸುವ ಇತರ ವಿಧಾನಗಳೂ ಉಂಟು. ಆದರೆ ಅವು ಯಾವುವೂ ಇಷ್ಟು ನಿಷ್ಕೃಷ್ಟವೂ ಅಲ್ಲ, ಇಷ್ಟು ವಿಶ್ವಾಸಾರ್ಹವೂ ಅಲ್ಲ. ಉದಾಹರಣೆಗೆ ಸಾಗರದ ಲವಣತ್ವವನ್ನು ಪರಿಶೀಲಿಸೋಣ. ಸಾಗರಗಳು ನಿರ್ಮಾಣವಾದಾಗ ಅವುಗಳು ಶುದ್ಧೋದಕ ಜಲಾಶಯಗಳಾಗಿದ್ದರೆ, ಅವುಗಳಲ್ಲಿ ಕರಗಿರುವ ಉಪ್ಪನ್ನೆಲ್ಲಾ ನದಿಗಳು ತಂದೊಯ್ದಿರಬೇಕು. ಈಗ ಯಾವ ದರದಲ್ಲಿ ನದಿಗಳು ತಮ್ಮ ಪ್ರವಾಹದಿಂದ ಸಮುದ್ರಗಳಿಗೆ ಉಪ್ಪನ್ನು ಸುರಿಯುತ್ತಿವೆಯೋ ಅದೇ ದರದಲ್ಲಿ ಮೊದಲಿನಿಂದಲೂ ಸುರಿಯುತ್ತ ಬಂದಿದ್ದರೆ ಸಾಗರದ ವಯಸ್ಸು ೯ ರಿಂದ ೬೦ ಕೋಟಿ ವರ್ಷಗಳೊಳಗಿರಬೇಕು. ಆದರೆ ವಿಕಿರಣಕ್ರಿಯಾ ವೇಗವು ಹೇಗೆ ಅಚಲವೆಂದು ಸಿದ್ಧವಾಗಿದೆಯೋ ಹಾಗೆಯೇ ನದಿಗಳ ಪ್ರವಾಹ ವೇಗವೂ ಮತ್ತು ಅವುಗಳಲ್ಲಿ ಕರಗಿರುವ ಲವಣಗಳ ಪ್ರಮಾಣವೂ ಸೃಷ್ಟ್ಯಾದಿಯಿಂದ ಏಕ ರೀತಿಯಾಗಿಯೇ ಇವೆ ಎಂದು ಹೇಳಲಿಕ್ಕಾಗುವುದಿಲ್ಲ. ಇದೇ ರೀತಿಯಲ್ಲಿಯೇ ಗಾಳಿ ಮಳೆಗಳು ಭೂಮಿಯ ಬಂಡೆಗಳನ್ನು ಸವೆಯಿಸಿರುವ ವೇಗದಿಂದ ಬಂಡೆಗಳ ವಯಸ್ಸು ೯೦ ಲಕ್ಷ ವರ್ಷಗಳೆಂದೂ; ಗಸಿ ಇಳಿದು ಪದರ ಪದರವಾಗಿ ನಿರ್ಮಾಣವಾಗಿರುವ ಬಂಡೆಗಳ ದಪ್ಪ ಮತ್ತು ಬಂಡೆಗಳ ನಿರ್ಮಾಣವೇಗಗಳಿಂದ ಅವುಗಳ ವಯಸ್ಸು ೧೨೦ ಲಕ್ಷ ವರ್ಷಗಳೆಂದೂ ಗುಣಿಸಿದ್ದಾರೆ. ಈ ಅಂದಾಜುಗಳೂ ವಿಶ್ವಾಸಾರ್ಹ ಗಳಲ್ಲ. ಅಲ್ಲದೆ ಇವು ಭೂಮಿಯ ವಯಸ್ಸು ಮೇಲ್ಕಂಡ ಮಿತಿಗಳಿಗಿಂತ ಹೆಚ್ಚಾಗಿರ ಬೇಕೆಂದು ಮಾತ್ರ ತಿಳಿಸುತ್ತವೆಯಲ್ಲದೆ ಎಷ್ಟು ಹೆಚ್ಚಾಗಿರಬಹುದೆಂದು ತಿಳಿಸುವುದಿಲ್ಲ.

೩. ಸೂರ್ಯನ ವಯಸ್ಸು

೧. ಸೂರ್ಯನ ವಿಸರಣ ಸಾಮರ್ಥ್ಯ

ಭೂಮಿಯ ಮತ್ತು ಇತರ ಗ್ರಹಗಳ ವಯಸ್ಸಿನ ನಿರ್ಣಯವಾದ ಮೇಲೆ ಎಲ್ಲ ಗ್ರಹಗಳನ್ನೂ ತನ್ನ ಗುರುತ್ವಾಕರ್ಷಣ ಬಲಕ್ಕೆ[1] ವಶಪಡಿಸಿಕೊಂಡಿರುವ ಸೂರ್ಯನ ಕಡೆಗೆ ನಮ್ಮ ಗಮನವನ್ನು ತಿರುಗಿಸಬೇಕಾಗಿದೆ. ಸೂರ್ಯನು ಎಲ್ಲ ದಿಕ್ಕುಗಳಿಗೂ ನಿರಂತರವಾಗಿ ಚೆಲ್ಲುತ್ತಿರುವ ಶಕ್ತಿಯ ಉತ್ಪತ್ತಿರಹಸ್ಯವನ್ನು ಭೇದಿಸಿದರೆ ಸೂರ್ಯನ ವಯಸ್ಸನ್ನು ನಿರ್ಣಯಿಸಲು ಸಾಧ್ಯವಾದೀತು. ಈ ಶಕ್ತಿಯು ಎಷ್ಟು ಅಗಾಧವಾದು

[1] Force of Gravitation.

ದೆಂಬುದನ್ನು ಬರಿಯ ಸಂಖ್ಯೆಗಳಿಂದ ಗ್ರಹಿಸುವುದು ಕಷ್ಟವಾದರೂ, ಅದಕ್ಕಿಂತ ಉತ್ಕೃಷ್ಟವಾದ ಮಾರ್ಗವು ಬೇರೊಂದಿಲ್ಲ. ಉಷ್ಣ, ಬೆಳಕುಗಳ ರೂಪದಲ್ಲಿ ಸೂರ್ಯನು ಬೀರುತ್ತಿರುವ ವಿಸರಣ ಶಕ್ತಿಯು ಸುಮಾರು ೫೦೦ ಕೋಟಿ ಕೋಟಿ ಕೋಟಿ (೫×೧೦^{೨೩}) ಅಶ್ವಸಾಮರ್ಥ್ಯಗಳಷ್ಟು! ಈ ಪ್ರಚಂಡ ಶಕ್ತಿಯು ಎಷ್ಟೆಂದರೆ, ಒಂದುವೇಳೆ ಸಮಗ್ರ ಸೂರ್ಯನ ಮೈಯನ್ನು ೧೨ ಗಜಗಳಷ್ಟು ಆಳವಾಗಿ ಮಂಜುಗಡ್ಡೆ ಕವಿದರೆ ಆ ಹಿಮರಾಶಿಯನ್ನು ಕೇವಲ ಒಂದೇ ನಿಮಿಷದಲ್ಲಿ ಕರಗಿಸಿ ನೀರುಮಾಡಬಲ್ಲಂಥದು. ಸೂರ್ಯನ ಮೈಯ ವಿಸ್ತೀರ್ಣವು ಎರಡೂಕಾಲು ಲಕ್ಷ ಕೋಟಿ (೨.೩×೧೦^{೧೨}) ಚದರ ಮೈಲಿಗಳೆಂಬುದನ್ನು ನಾವು ಇಲ್ಲಿ ಮನಸ್ಸಿಗೆ ತಂದುಕೊಳ್ಳಬೇಕು.

೨. ಸೂರ್ಯನು ಉರಿಯುತ್ತಿಲ್ಲ

'ನಮ್ಮ ಮನೆಗಳಲ್ಲಿ ಸೌದೆ ಅಥವಾ ಇದ್ದಿಲು ಉರಿದಂತೆ ಸೂರ್ಯನು ಉರಿಯುತ್ತಿದ್ದಾನೆ; ಸೂರ್ಯನ ಗಾತ್ರವು ಅಗಾಧವಾದುದರಿಂದ ಅವನು ಪ್ರಸರಿಸುತ್ತಿರುವ ಶಕ್ತಿಯೂ ಪ್ರಚಂಡವಾಗಿದೆ; ಸೂರ್ಯನ ಶಕ್ತ್ಯುತ್ಪತ್ತಿಯಲ್ಲಿ ಇದಕ್ಕೂ ಹೆಚ್ಚಿನ ರಹಸ್ಯಕ್ಕೆಡೆ ಎಲ್ಲಿದೆ?' ಎಂದು ನಮಗೆ ಹೊಳೆಯಬಹುದು. ಆದರೆ ಈ ವಿವರಣೆಯು ಅಸಂಗತವೆನ್ನಲಿಕ್ಕೆ ಎರಡು ಮುಖ್ಯ ಕಾರಣಗಳಿವೆ. ಸೂರ್ಯನು ಶುದ್ಧ ಇದ್ದಿಲಿನ ಗೋಳವಾಗಿದ್ದರೂ ಮೇಲಿನ ದರದಂತೆ ಶಕ್ತಿಯನ್ನು ಬೀರುತ್ತಿದ್ದರೆ ೮,೦೦೦ ವರ್ಷಗಳೊಳಗಾಗಿ ಅವನು ಪೂರ್ತಿಯಾಗಿ ಉರಿದು ಇಂಗಾಲಾಮ್ಲವಾಗಿಬಿಡುತ್ತಿದ್ದನು. ಆದರೆ ಸೂರ್ಯನು ಕನಿಷ್ಠ ಪಕ್ಷ ೨೦೦ ಕೋಟಿ ವರ್ಷಗಳಿಂದಲಾದರೂ ಉಷ್ಣ ಬೆಳಕುಗಳನ್ನು ಹೆಚ್ಚು ಕಡಿಮೆ ಇದೇ ದರದಲ್ಲಿ ಬಿಸುಡುತ್ತಾ ಬಂದಿದ್ದಾನೆ. ಇದು ಮೊದಲನೆಯ ಕಾರಣ. ಸೂರ್ಯನ ಮೇಲ್ಮೈಯ ಉಷ್ಣಾಂಶವು ೬೦೦೦ ಸೆಂಟಿಗ್ರೇಡ್ ಡಿಗ್ರಿಗಳು, ಒಳಗೆ ಹೋದಂತೆ ಈ ಉಷ್ಣಾಂಶವು ಹೆಚ್ಚುತ್ತದೆ. ಉರಿಯುವುದೇ ಮುಂತಾದ ರಾಸಾಯನಿಕ ಕ್ರಿಯೆಗಳು ಇಷ್ಟು ಉಷ್ಣವಾತಾವರಣದಲ್ಲಿ ಅಸಾಧ್ಯ. ಈ ಶಾಖಕ್ಕೆ ಪರಮಾಣುಗಳು ಸಂಯೋಜಿಸಿ ಅಣುಗಳಾಗುವುದರ ಬದಲು, ಅಣುಗಳೇನಾದರೂ ಆಕಸ್ಮಿಕವಾಗಿ ಅಲ್ಲಿ ಸೇರಿದ್ದರೂ ಅವು ಕೂಡಲೆ ಒಡೆದು ಪರಮಾಣುಗಳಾಗಿ ಬೇರೆಯಾಗುತ್ತವೆ. ಅಷ್ಟೇ ಅಲ್ಲ, ಕೆಲವು ಪರಮಾಣುಗಳೂ ಸಹ ಈ ಶಾಖ ತಡೆಯಲಾರದೆ ತಮ್ಮ ಹೊರ ಹೊದಿಕೆಯ ಎಲೆಕ್ಟ್ರಾನ್‌ಗಳನ್ನೂ ಕಳಚಿಹಾಕಿ ಓಡಾಡುತ್ತಿವೆ. ಇದು ಎರಡನೆಯ ಕಾರಣ.

೩. ಸೂರ‍್ಯ ಸಂಕೋಚವಾದ[1]

ಸೂರ‍್ಯನು ಉರಿಯುತ್ತಿಲ್ಲದಿದ್ದರೆ ಶಾಖ ಬೆಳಕುಗಳು ಹೇಗೆ ಉತ್ಪತ್ತಿಯಾಗುತ್ತಿವೆ? ಸೂರ‍್ಯನ ಗಾತ್ರವು ಅಗಾಧವಾದುದು. ಆದುದರಿಂದ ಅವನ ಒಳಭಾಗವು ಪ್ರಚಂಡ ಒತ್ತಡಕ್ಕೆ ಗುರಿಯಾಗಿದೆ. ಈ ಒತ್ತಡಕ್ಕೆ ಸಿಲುಕಿ ಸೂರ‍್ಯನು ಕುಗ್ಗುತ್ತಿದಾನೆ. ಪದಾರ್ಥವು ಕುಗ್ಗಿದರೆ ಶಾಖ ಉತ್ಪತ್ತಿಯಾಗುತ್ತದೆ. ಸೈಕಲ್ ಚಕ್ರಕ್ಕೆ ಗಾಳಿ ತುಂಬುವಾಗ ಗಾಳಿಯು ಸಂಕುಚಿತವಾಗಿ ಕಾವು ಹುಟ್ಟುತ್ತದೆಂಬುದು ನಮ್ಮೆಲ್ಲರ ಅನುಭವದ ವಿಷಯ. ಸೂರ‍್ಯಸಂಕೋಚವಾದದಂತೆ ಸೂರ‍್ಯನ ಶಾಖವೂ ಇದೇ ರೀತಿಯಲ್ಲಿ ಉತ್ಪತ್ತಿಯಾಗುತ್ತಿದೆ. ಇದು ಸರಿಯಾಗಿದ್ದಲ್ಲಿ ಸೂರ‍್ಯನ ವಯಸ್ಸು ಹಲವು ಲಕ್ಷ ವರ್ಷಗಳಿಗಿಂತ ಹೆಚ್ಚಿರಲಾರದೆಂದು ಗಣಿತದ ನಿರ್ಣಯ. ಅಲ್ಲದೆ ಇನ್ನು ಕೆಲವು ಲಕ್ಷ ವರ್ಷಗಳೊಳಗಾಗಿಯೇ ಸೂರ‍್ಯನು ಆರಿ ತಣ್ಣಗಾಗಬೇಕಾಗುತ್ತದೆ. ಸೂರ‍್ಯನು ಇಷ್ಟು ಅಲ್ಪಾಯುಸ್ಸಿನವನಲ್ಲವೆನ್ನುವುದಕ್ಕೆ ಇತರ ಆಧಾರಗಳಿವೆ. ಆದಕಾರಣ ಈ ವಾದವೂ ಸಮರ್ಪಕವಲ್ಲ. ಆದರೂ ಇದಕ್ಕಿಂತ ತೃಪ್ತಿಕರವಾದ ವಾದಗಳ ಅಭಾವದಿಂದ ಮೊನ್ನೆ ಮೊನ್ನೆನವರೆಗೂ ಇದೇ ಪ್ರಚಾರದಲ್ಲಿತ್ತು.

೪. ಸೂರ‍್ಯನ ಆಹಾರ ಮತ್ತು ಅವನ ಜೀರಕ ಕ್ರಿಯೆ

ಪರಮಾಣು ಬೀಜಕ್ರಿಯೆಗಳ ಪರಿಚಯವಾದಮೇಲೆ ವಿಜ್ಞಾನಿಗೆ ಸೂರ‍್ಯನ ಶಾಖೋತ್ಪತ್ತಿಯನ್ನು ಸಮರ್ಪಕವಾಗಿ ವಿಶದಪಡಿಸುವುದು ಸಾಧ್ಯವಾಯಿತು; ತನ್ಮೂಲಕ ಅವನ ವಯಸ್ಸನ್ನೂ ಊಹಿಸಬಹುದಾಯಿತು. ಮೇಲೆ ತಿಳಿಸಿರುವಂತೆ ಸೂರ‍್ಯನ ಒಳಗೆ ಹೋದಂತೆ ಒತ್ತಡವೂ ಉಷ್ಣಾಂಶವು ಏರುತ್ತವೆ. ಹೊರಮೈಯ ಉಷ್ಣಾಂಶವು ೬೦೦೦ ಡಿಗ್ರಿಗಳೇ ಇದ್ದರೂ, ಮಧ್ಯಭಾಗದ ಉಷ್ಣಾಂಶವು ನಾಲ್ಕೈದು ಕೋಟಿ ಡಿಗ್ರಿಗಳಿರಬೇಕೆಂದು ಅನುಮಾನಿಸಲಾಗಿದೆ. ಕಲ್ಪನಾತೀತವಾದ ಈ ಉಷ್ಣವಾತಾವರಣದಲ್ಲಿ ಪರಮಾಣುಗಳು ತಮ್ಮ ಎಲೆಕ್ಟ್ರಾನ್‌ಗಳನ್ನೆಲ್ಲಾ ಸಂಪೂರ್ಣವಾಗಿ ಕಳಚಿಹಾಕಿ ಬೆತ್ತಲೆ ಬೀಜಗಳಾಗಿ ತಾಂಡವವಾಡುತ್ತಿರುತ್ತವೆ. ಭೂಮಿಯ ಮೇಲೆ ಸುಣ್ಣಕಲ್ಲು, ನೀರು ಸಂಧಿಸಿದರೆ ಹೇಗೆ ತಾನಾಗಿಯೇ ರಾಸಾಯನಿಕ ಕ್ರಿಯೆಯು ಜರುಗುತ್ತದೆಯೋ ಹಾಗೆ ಸೂರ‍್ಯನ ಅಂತರಾಳದಲ್ಲಿ ಪರಮಾಣು ಬೀಜಕ್ರಿಯೆಗಳು ನಡೆಯುತ್ತಿವೆ. ಈ ಬೀಜಕ್ರಿಯಾವ್ಯಾಪಾರವು ಕೆಳಗೆ ಕಂಡಂತೆ ಎಂದು ನಂಬಲಾಗಿದೆ.

ಸೂರ‍್ಯನಲ್ಲಿರುವ ಧಾತುಸಂಚಯದಲ್ಲಿ ಜಲಜನಕ, ಹೀಲಿಯಂ (ಸೌರೇಯ ?), ಇಂಗಾಲ, ಸಾರಜನಕ ಮತ್ತು ಆಮ್ಲಜನಕಗಳು ಹೇರಳವಾಗಿವೆ. ಹೀಲಿಯಂ

[1] Contractile hypothesis.

ಹೊರತು ಇತರ ಪರಮಾಣುಗಳು ಭೂಮಿಯಲ್ಲಿಯೂ ಹೇರಳವೇ. ಹೀಲಿಯಂ ಸೂರ್ಯನಲ್ಲಿ ಮಾತ್ರ ವಿಪುಲವಾಗಿರುವುದಕ್ಕೆ ಕಾರಣವೂ ಈಗ ವ್ಯಕ್ತವಾಗುತ್ತದೆ. ಸೂರ್ಯನೊಳಗಡೆ ನಾಲ್ಕು ಜಲಜನಕ ಬೀಜಗಳು ಒಟ್ಟುಗೂಡಿ ಹೀಲಿಯಂ ಬೀಜವಾಗುತ್ತವೆ. ಆದರೆ ಈ ಸಂಯೋಜನೆಯು ನೇರವಾಗಿ ಆಗುವುದಿಲ್ಲ. ಇದಕ್ಕೆ ಇಂಗಾಲದ ಬೀಜಗಳ ಸಹಕಾರವು ಅವಶ್ಯ. ಇಂಗಾಲದ ಬೀಜವು ಮೊದಲು ಒಂದು ಜಲಜನಕದ ಬೀಜವನ್ನು ಹೀರಿ ೧೩ ಭಾರಾಂಕದ ಸಾರಜನಕ (ಪರಮಾಣ್ವಂಕ-೭) ವಾಗಿ ರೂಪಾಂತರ ಹೊಂದುತ್ತದೆ. ಈ ಸಾರಜನಕವು ತಾನಾಗಿಯೇ ಸಿಡಿದು ಅದೇ ಭಾರಾಂಕದ ಇಂಗಾಲ (೬)ವಾಗುತ್ತದೆ. ಈ ಹೊಸ ಇಂಗಾಲದ ಬೀಜವು ಮತ್ತೊಂದು ಜಲಜನಕ ಬೀಜವನ್ನು ಹೀರಿ ಪುನಃ ೧೪ ಭಾರಾಂಕದ ಸಾರಜನಕದ ರೂಪ ತಾಳುತ್ತದೆ. ಇದು ಮೂರನೆಯ ಜಲಜನಕ ಬೀಜದೊಂದಿಗೆ ಸಂಧಿಸಿ ೧೫ ಭಾರಾಂಕದ ಆಮ್ಲಜನಕವಾಗುತ್ತದೆ. ಈ ಆಮ್ಲಜನಕ ಬೀಜವು ತಾನಾಗಿಯೇ ಸಿಡಿದು ಅದೇ ಭಾರಾಂಕದ ಸಾರಜನಕವಾಗುತ್ತದೆ. ಸಾರಜನಕ ಬೀಜವು ನಾಲ್ಕನೆಯ ಜಲಜನಕ ಬೀಜವನ್ನು ಸಂಘಟಿಸಿ ತನ್ನ ಆದಿರೂಪವಾದ ಇಂಗಾಲ (ಭಾರಾಂಕ ೧೨, ಪರಮಾಣ್ವಂಕ ೬) ಮತ್ತು ಹೀಲಿಯಂ ಬೀಜಗಳಾಗಿ ಹೋಳಾಗುತ್ತದೆ. ಈ ಆರು ಕ್ರಿಯೆಗಳ ಶ್ರೇಣಿಯನ್ನು ಇಂಗಾಲ-ಸಾರಜನಕ ಬೀಜಕ್ರಿಯಾಚಕ್ರ[1]ವೆಂದು ಕರೆಯುತ್ತಾರೆ. ಇದನ್ನು ಚಿತ್ರರೂಪದಲ್ಲಿ ಕೆಳಗೆ ತೋರಿಸಿದೆ.

ಬೀಜಕ್ರಿಯಾಚಕ್ರದಲ್ಲಿ ಇಂಗಾಲದ ಬೀಜವು ಆರುಸಲ ಸತ್ತು ಹುಟ್ಟಿ, ಆರನೆಯ ಜನ್ಮದಲ್ಲಿ ಪುನಃ ಇಂಗಾಲವೇ ಆಗುತ್ತದೆ. ಹೀಗೆ ತಾನೇನೋ ತನ್ನ ಸ್ವರೂಪವನ್ನೇ ಕಡೆಗೆ ಪಡೆದರೂ ಇಂಗಾಲವು ಆರು ಜನ್ಮಗಳನ್ನೆತ್ತಿದ್ದರ ಫಲವಾಗಿ ಜಲಜನಕ—ಹೀಲಿಯಂ ಪರಿವರ್ತನೆಯ ಕಾರ್ಯವನ್ನು ಸಾಧಿಸುತ್ತದೆ. ಈ ಪರಿವರ್ತನಕ್ರಿಯೆ ಸೂರ್ಯನಿಗೆ ಬೇಕಾದ ವಿಸರಣ ಶಕ್ತಿಯನ್ನು ಒದಗಿಸುತ್ತದೆ. ಅದರ ರೀತಿಯು ಹೀಗೆ.

ನಾಲ್ಕು ಜಲಜನಕ ಬೀಜಗಳು ಸೇರಿ ನಾಲ್ಕು ಭಾರಾಂಕದ ಹೀಲಿಯಂ ಬೀಜವಾದರೂ, ಹೀಲಿಯಂ ಬೀಜದ ಭಾರವು ನಾಲ್ಕು ಜಲಜನಕ ಬೀಜಗಳಿಗಿಂತ ಕಡಿಮೆ. ನಾನೂರು ಟನ್ ಜಲಜನಕದ ಪರಿವರ್ತನೆಯಿಂದ ಮುನ್ನೂರ ತೊಂಬತ್ತೇಳೂ ಕಾಲು ಟನ್ ಹೀಲಿಯಂ ಫಲಿಸುತ್ತದೆ. ಉಳಿದ ಎರಡೂ ಮುಕ್ಕಾಲು ಟನ್‌ಗಳು ನಾಶವಾಗುತ್ತದೆ. ನಾಶವಾದ ಈ ವಸ್ತುಸಾಮಗ್ರಿಯು ಶಕ್ತಿಯಾಗಿ ರೂಪಾಂತರ ಹೊಂದುತ್ತದೆ. ಐನ್‌ಸ್ಟೈನನ ಸಾಪೇಕ್ಷ ತತ್ವ[2] ಪ್ರಕಾರ ಒಂದು ಟನ್ ವಸ್ತುವಿನ

[1] Carbon-nitrogen nuclear cycle. [2] Relativity Principle.

ನಾಶದಿಂದ ನಾನೂರು ಕೋಟಿ ಅಶ್ವಸಾಮರ್ಥ್ಯಗಳಂತೆ ಒಂದು ವರ್ಷಕಾಲ ಶಕ್ತಿಯನ್ನು ಉತ್ಪತ್ತಿಮಾಡಬಹುದು. ಈ ವಸ್ತು ಪರಿವರ್ತಿತ ಶಕ್ತಿಯೇ ಸೂರ್ಯನ ವಿಸರಣಾ ಶಕ್ತಿ.[1]

೫. ಸೂರ್ಯನ ವಯಸ್ಸು

ಈಗ ನಾವು ಸೂರ್ಯನ ವಯಸ್ಸಿನ ನಿರ್ಣಯಕ್ಕೆ ಕೈಹಾಕುವ ಸ್ಥಿತಿಯಲ್ಲಿದ್ದೇವೆ. ಬೀಜಕ್ರಿಯಾಚಕ್ರದ ಕಾರಣವಾಗಿ ಕಾಲ ಕಳೆದಂತೆ ಸೂರ್ಯನಲ್ಲಿರುವ ಜಲಜನಕದ ಸಂಗ್ರಹವು ಕಡಿಮೆಯಾಗುತ್ತ ಬಂದಿದೆ. ಸದ್ಯಕ್ಕೆ ಸೂರ್ಯನ ಭಾರದ ಶೇಕಡ ೩೬ ರಷ್ಟು ಜಲಜನಕವಾಗಿದೆ. ಆದಿಯಲ್ಲಿ ಸೂರ್ಯನು ಜಲಜನಕ ಮಾತ್ರದ ಗೋಳವಾಗಿದ್ದರೆ ಜಲಜನಕದ ಪ್ರಮಾಣವು ಈಗಿರುವಷ್ಟಕ್ಕೆ ಇಳಿಯಲು ಒಂದು ಸಹಸ್ರ ಕೋಟಿಯಿಂದ ಹತ್ತು ಸಹಸ್ರ ಕೋಟಿ ವರ್ಷಗಳು ಬೇಕೆಂದು ಗುಣಿಸಿದಾರೆ. ಹಾಗೆಯೇ ಇನ್ನೂ ಹತ್ತಿಪ್ಪತ್ತು ಸಹಸ್ರ ಕೋಟಿ ವರ್ಷಗಳು ಬೆಳಗಿ ಅನಂತರ ಆರಿಹೋಗುತ್ತಾನೆ. ಆದರೆ ಸೂರ್ಯನ ಭವಿಷ್ಯ ಸ್ಥಿತಿಗಳ ವಿವರವಾದ ಪರಿಶೀಲನೆಯನ್ನೂ, ಸೂರ್ಯನ ವಯೋನಿರ್ಣಯದ ಇತರ ವಿಧಾನಗಳನ್ನೂ, ಇನ್ನೊಂದು ಅಧ್ಯಾಯದಲ್ಲಿ ತೆಗೆದು ಕೊಳ್ಳಲಾಗುತ್ತದೆ.

ಜಲಜನಕ—ಹೀಲಿಯಂ ಪರಿವರ್ತನೆಯಿಂದ ಸೂರ್ಯನಿಗೆ ಸೆಕೆಂಡೊಂದಕ್ಕೆ ಹತ್ತು ಲಕ್ಷ ಟನ್‌ಗಳಂತೆ ವಸ್ತು ನಷ್ಟವಾಗುತ್ತಿದೆ. ಇದನ್ನು ನಮ್ಮ ಸಾಮಾನ್ಯ ವ್ಯವಹಾರಗಳಿಗೆ ಹೋಲಿಸಿದರೆ ತಟ್ಟಿಕೊಳ್ಳಲಾಗದಷ್ಟು ನಷ್ಟವಾಗಿ ತೋರುತ್ತದೆ. ಆದರೆ ನಾವು ಸೂರ್ಯನ ಬೃಹದ್ಗಾತ್ರವನ್ನು ಮರೆಯಬಾರದು. ಮೇಲಿನ ದರದಂತೆ ನಾಶವಾಗುತ್ತಿರುವ ಸಾಮಗ್ರಿಯು ಒಂದು ಸಾವಿರ ವರ್ಷಗಳಲ್ಲಿ ಸೂರ್ಯನ ವಸ್ತು ಸಂಗ್ರಹದ ಆರು ಸಾವಿರ ಕೋಟ್ಯಂಶಗಳಲ್ಲಿ ಒಂದಂಶ ಮಾತ್ರವಾಗುತ್ತದೆ! ಇಷ್ಟಾದರೂ ಸೂರ್ಯನ ವಸ್ತು ನಷ್ಟವು ಪರಿಣಾಮರಹಿತವಾದುದಲ್ಲ. ಇದರ ಕಾರಣವಾಗಿ ಅವನ ಆಕರ್ಷಣ ಬಲವು ಕಡಿಮೆಯಾಗುತ್ತಿರುವುದರಿಂದ ಭೂಮಿಗೂ ಅವನಿಗೂ ಇರುವ ಸರಾಸರಿ ದೂರವು ಒಂದು ಶತಮಾನಕ್ಕೆ ೪೧ ಅಂಗುಲಗಳಂತೆ ಹೆಚ್ಚಾಗುತ್ತಿದೆ. ಇದರಿಂದ ವರ್ಷವು ಕಾಲಕ್ರಮೇಣ ಅತಿ ಮಂದವೇಗದಲ್ಲಿ ದೊಡ್ಡದಾಗುತ್ತಿದೆ.

ಆರ್. ಎಲ್. ನರಸಿಂಹಯ್ಯ.

(ಸಶೇಷ)

---

[1] Radiant energy.

ಕಾವ್ಯಾವಲೋಕನ

ಅನ್ನ—ಲೇಖಕರು: ಶ್ರೀ. ರಂ. ಶ್ರೀ. ಮುಗಳಿ; ಪ್ರಕಾಶಕರು: ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ; ४०೬ ಪುಟಗಳು; ಬೆಲೆ, ರೂ. ४-೦-೦.

"ಅನ್ನ" ಎಂಬ ಹೆಸರಿನಲ್ಲಿ ಬರೆದ ಕ್ಷಾಮದ ಕಥೆ ಈ ಕಾದಂಬರಿ. ಬಂಗಾಲದಲ್ಲಿ ಬಿಜಾಪುರದಲ್ಲಿ, ವಿಶೇಷವಾಗಿ ಜನ, ಅನ್ನಾಭವದ ದೆಸೆಯಿಂದ ಅನರ್ಥ ಪರಂಪರೆಗೆ ಗುರಿಯಾದ ವೃತ್ತಾಂತವನ್ನು ಕಾದಂಬರಿಕಾರರು ಈ ವಿಸ್ತಾರವಾದ ಗ್ರಂಥದಲ್ಲಿ ವಿಪುಲವಾಗಿ, ಚಿತ್ತವೇಧಕವಾದ ರೀತಿಯಲ್ಲಿ ಬಣ್ಣಿಸಿದ್ದಾರೆ. ಅನಾವೃಷ್ಟಿ ಅತಿವೃಷ್ಟಿ ಮುಂತಾದ ಹಲವಾರು ದೈವಿಕ ನಿಮಿತ್ತಗಳಿಂದ ರಾಷ್ಟ್ರಗಳಲ್ಲಿ ಕ್ಷಾಮ ತಲೆದೋರಿ ಪ್ರಜಾವರ್ಗವನ್ನು ಆಗಾಗ ಪೀಡಿಸುತ್ತಲೇ ಇರುತ್ತವೆ. ಅಂಥಾ ಕಠಿಣ ಸಮಯಗಳಲ್ಲಿ ನಾಡಿನ ಪ್ರಜೆಗಳಾದರೂ ಪರಸ್ಪರ ಮಮತೆಯುಳ್ಳವರಾಗಿದ್ದರೆ, ಅನ್ನಕ್ಕಾಗಿ ಬಾಯಿಬಿಡುತ್ತಾ ಬಡವರು ಬಗ್ಗರು ದೇಶಭ್ರಷ್ಟರಾಗಿ ಅಲೆದು ಕ್ಲೇಶಪಡುವುದು ತಪ್ಪೀತು. ಭಾಗ್ಯಶಾಲಿಗಳು ಅಂಥಾ ಸಂಕಟದ ವೇಳೆಯಲ್ಲಿ ಕರುಣೆ ತಾಳಿ ನೆರೆಯವರ ಕಷ್ಟಕ್ಕೆ ಕರಗಿ ಧಾರಾಳ ತೋರುವಂತಿದ್ದರೆ ಕ್ಷಾಮದ ಕ್ರೌರ್ಯ ಕೊಂಚ ಕುಗ್ಗಬಹುದು. ಆದರೆ ದೇವರ ಮುನಿಸಿಗಿಂತ ಮನುಷ್ಯನ ಮುನಿಸು ಹೆಚ್ಚು ಕ್ರೂರವಾದದ್ದು. "ಕುರುಡು ಕಾಂಚಾಣ"ಕ್ಕೆ ಮನಸೋತ ಜನ ಅವರವರ ಕಷ್ಟನಷ್ಟಗಳನ್ನು ಗಮನಿಸುವುದು ಶಕ್ಯವೆ? ಮಾನವನಿರ್ಮಿತ ಕ್ಷಾಮಕ್ಕೆ ಪರಿಹಾರವೇ ಇಲ್ಲ! ಜನ ಉಪವಾಸ ಪೀಡಿತರಾಗಿ ಊರುಗಳನ್ನು ಬಿಟ್ಟು ಹೊರಟು ಗ್ರಾಮಗಳೇ "ಬೇಚರಾಕ್" ಆದರೂ ಶ್ರೀಮಂತರಿಗೆ ವ್ಯಥೆಯಿಲ್ಲ. ತಮ್ಮ ಸಿರಿವಂತಿಕೆಯ ವೈಭವವನ್ನು ಮೆರೆಯಲು ಮೇಜವಾನಿ ನಡೆಸಿ ಎಂಜಲು ಭಕ್ಷ್ಯ ಭೋಜ್ಯಗಳನ್ನು ತಿಪ್ಪೆಗೆಸೆದಾರೇ ಹೊರತು ಹಸಿವಿನಿಂದ ನೊಂದು, ಅಭಿಮಾನ ತೊರೆದು ಭಿಕ್ಷುಕರಾಗಿ ಬಂದವರಿಗೆ ಒಂದು ತುತ್ತು ಅನ್ನಹಾಕಲು ಅವರಿಗೆ ಕೈಬರದು. ನಾಯಿ ಹಂದಿಗಳಂತೆ ಮನುಷ್ಯರು ಎಂಜಲೆಲೆಗೆ ಕೈಹಾಕಿ ಅದರಲ್ಲಿ ಅನ್ನ ತಿಂದದ್ದನ್ನು ನೋಡಿದರೂ ಹಣಗಾರರ ಕಲ್ಲೆದೆ ಕರಗದು. ಕಾಳಿನ ಕಾಳಸಂತೆ ನಡೆಯುತ್ತಲೇ ಇರುತ್ತದೆ. ಇದೇ ಈ ಕಾದಂಬರಿಯ ತಿರುಳು.

ಲೇಖಕರು, ಬಂಗಾಲದಲ್ಲಿ, ಬಿಜಾಪುರದಲ್ಲಿ ಈಚೆಗೆ ಸಂಭವಿಸಿದ ಮಹೋಗ್ರವಾದ ಬರದ ಕಥೆಯನ್ನೇ ಆಧಾರವಾಗಿಟ್ಟುಕೊಂಡು, ಮನುಷ್ಯನ ದುರಾಸೆಯ ಪರಮಾ

ವಧಿಯನ್ನು ಇಲ್ಲಿ ಚಿತ್ರಿಸಿದ್ದಾರೆ. ಈ ಕಾದಂಬರಿಯ ಕಥಾನಾಯಕನಾದ ಅಮೃತನೆಂಬ ಕನ್ನಡನಾಡಿನ ಯುವಕ, ಸಾಧಾರಣ ಸ್ಥಿತಿಯವನು. ಅವನ ತಂದೆ ಬಹಳ ಕಷ್ಟದಿಂದ ಹಣ ಕೂಡಿಸಿ ಅವನನ್ನು ಡಾಕ್ಟರಿ ಕಲಿಯುವುದಕ್ಕೆ ಮುಂಬೈಗೆ ಕಳುಹಿಸಿರುತ್ತಾನೆ. ಆದರ್ಶವಾದಿಯಾದ ಅಮೃತ ಬಂಗಾಲದಲ್ಲಿ ಪ್ರವಾಹದಿಂದ ಉಂಟಾದ ಹಾವಳಿಯನ್ನು ಪತ್ರಿಕೆಗಳಲ್ಲಿ ಓದಿ ಮರುಗಿದನು. ಪ್ರವಾಹದಿಂದ ಕ್ಷಾಮ, ಕ್ಷಾಮದ ಬೆನ್ನುಹತ್ತಿ ಹಲವಾರು ಸಾಂಕ್ರಮಿಕ ವ್ಯಾಧಿಗಳು ಬಂಗಾಲದಲ್ಲಿ ವ್ಯಾಪಿಸಿ ಜನರನ್ನು ಕಾಡುತ್ತಿರುವುದನ್ನು ತಿಳಿದು ಭಾರತದ ಆ ಪ್ರಜೆಗಳ ಕಷ್ಟಪರಿಹಾರಕ್ಕೆ ತನ್ನ ಕೈಮುಟ್ಟಿ ದುಡಿಯಬೇಕೆಂದು ಸಂಕಲ್ಪಿಸಿ ಸ್ವಯಂಸೇವಕನಾಗಿ ಸೇರಿ ತನ್ನ ವಿದ್ಯಾಭ್ಯಾಸವನ್ನು ಬದಿಗೊತ್ತಿಬಿಡುತ್ತಾನೆ. ಇದರಿಂದ ತನ್ನ ತಂದೆತಾಯಿಯರಿಗೆ ಉಂಟಾಗುವ ತ್ರಾಸ, ತನಗೆ ಆಗುವ ಹಾನಿ, ಇವನ್ನೆಲ್ಲ ಮನಗಂಡಿದ್ದನಾದರೂ ಅಮೃತನು ಯಾವುದನ್ನೂ ಲಕ್ಷ್ಯಮಾಡದೆ ದೂರದ ಬಂಗಾಲದ ಜನರ ಕ್ಲೇಶ ಪರಿಹಾರಕ್ಕೆ ನೆರವಾಗಬೇಕೆಂಬ ಆದರ್ಶವನ್ನೇ ಎತ್ತಿ ಹಿಡಿದನು.

ಇತ್ತ ಬಿಜಾಪುರದಲ್ಲಿ ಅಮೃತನ ಹುಟ್ಟೂರಿನ ಜಿಲ್ಲೆಯಲ್ಲಿ ಕ್ಷಾಮ ಬಂತು. ಅಮೃತನ ತಂದೆ ವೃದ್ಧಾಪ್ಯದಲ್ಲಿ ಬಹಳ ಕಷ್ಟಕ್ಕೀಡಾದನು. ದುಡಿದು ಕಾಪಾಡಬೇಕಾದ ಮಗ ಹೀಗೆ ತನ್ನ ಮನಸ್ಸಿಗೆ ತೋರಿದ ಆದರ್ಶದ ಸಾಧನೆಗೆ ತೊಡಗಿ ಅರ್ಥೋಪಾರ್ಜನೆಯನ್ನು ಅಲಕ್ಷ್ಯಮಾಡಿದ. ಯುದ್ಧಕಾಲದ ಹಲವು ಬಗೆಯ ಆರ್ಥಿಕ ಸಂಕಟಗಳನ್ನು ಸಹಿಸಿ ಸಾಕಾಗಿದ್ದ ವೃದ್ಧನು ಈ ಕ್ಷಾಮಬಾಧೆಯಿಂದ ಬಹಳ ಹೀನಸ್ಥಿತಿಗೆ ಬಂದು ಮನೋವ್ಯಥೆಯಿಂದ ಕೊರಗಿ ರೋಗಗ್ರಸ್ತನಾದನು. ಆತನ ಕಷ್ಟವನ್ನು ಕೇಳಿ ಅಮೃತ ಬಂಗಾಲದಿಂದ ಓಡಿಬಂದು ತಂದೆಯ ಪರಿಚರ್ಯೆ ಮಾಡಿದ. ತಂದೆ ಇಷ್ಟಪಟ್ಟಂತೆ ಅಮೃತನು ಮದುವೆಯಾಗಿ ಮಾವನ ಸಹಾಯದಿಂದ ಮತ್ತೆ ಡಾಕ್ಟರಿ ಕಲಿಯಲು ಹೊರಟ. ಆದರೆ ಮತ್ತೆ ಕರೆಬಂದಾಗ ಈ ಎಲ್ಲ ಕಥೆಯನ್ನೂ ಮರೆತು ಅಮೃತನು ತಂದೆಯ ಕಷ್ಟಪರಿಹಾರದ ಯೋಜನೆ ಕೈಬಿಟ್ಟು ಲೋಕಸೇವೆಗೆ ಹೊರಟುಬಿಟ್ಟ. ಕೊನೆಗೆ ಅವನು ಸೇವಾದೀಕ್ಷೆಯಲ್ಲಿರುವಾಗಲೇ ರೋಗಪೀಡಿತನಾಗಿ ದೇಹತ್ಯಾಗಮಾಡಿದ. ಇದು ಕಥೆ. ಇದಕ್ಕೆ ಹೊಂದಿಕೊಂಡ ಹಾಗೆ ಬಿಜಾಪುರ ಜಿಲ್ಲೆಯ ಜನಜೀವನದ ಚಿತ್ರ ಈ ಕಾದಂಬರಿಯಲ್ಲಿ ರಂಗುರಂಗಾಗಿ ಚಿತ್ರಿತವಾಗಿದೆ. ಕಾಳಸಂತೆ, ಕಟುಕತನಗಳು ಮಾನವರನ್ನು ರಕ್ಕಸರನ್ನಾಗಿ ಮಾರ್ಪಡಿಸುವ ರೀತಿ ಬಂಗಾಲದಲ್ಲಾಗಲಿ, ಬಿಜಾಪುರದಲ್ಲಾಗಲಿ ಎಲ್ಲ ಒಂದೇ ಆದರ್ಶವಾದಿಯು ಸ್ವಾರ್ಥವನ್ನು ಕಳೆದುಕೊಂಡು ಪರಹಿತವನ್ನು ಸಾಧಿಸಲು ಅಸಮರ್ಥನಾಗಿ ತನ್ನವರ ಬದುಕನ್ನು ಭಂಗಗೊಳಿಸಬಹುದು. ಸ್ವಾರ್ಥಿಗಳಿಗೆ

ಸ್ವಹಿತಸಾಧನೆಯೇ ಆದರ್ಶವಾದ್ದರಿಂದ ಅವರಿಗೆ ಯಾವ ವ್ಯಥೆಯೂ ಇಲ್ಲ! ಅವರು ನಿಶ್ಚಿಂತರಾಗಿ ಶ್ರೀಮಂತರಾಗಿದ್ದುಬಿಡುತ್ತಾರೆ. ಅವರಿಗೆ ಇತರರ ಕಷ್ಟವೇ ಅರ್ಥವಾಗುವುದಿಲ್ಲ; ಅರ್ಥವಾಗಬೇಕಾಗಿಲ್ಲ. ಅಂಥ ಜನರ ಚಿತ್ರಗಳು ಈ ಕಾದಂಬರಿಯಲ್ಲಿ ಬೇಕಾದಹಾಗಿವೆ. ಸ್ವಾರ್ಥ ಪರಾರ್ಥಗಳೆರಡನ್ನೂ ತಕ್ಕಮಟ್ಟಿಗೆ ಸಾಧಿಸಿ ಕೃತಾರ್ಥರಾಗುವ ಪುಣ್ಯ ಡಾ॥ ದಾತಾರರಂಥ ಭಾಗ್ಯಶಾಲಿಗಳಿಗೆ ಮಾತ್ರ ಲಭಿಸಿತು! ಅವರು ಆದರ್ಶವಾದಿಗಳಾದರೂ ಲೋಕದ ಸ್ವಭಾವವನ್ನರಿತ ವಿವೇಕಿಗಳು. ಆದರ್ಶದ ಗಾಳಿಪಟವನ್ನೇ ನೋಡುತ್ತಾ ದಾರಿತಪ್ಪಿ ಬಾವಿಗೆ ಬೀಳುವ ದಡ್ಡರಲ್ಲ ಡಾ॥ ದಾತಾರರು. ಅಮೃತನು ಆದರ್ಶವನ್ನು ಮನ್ನಿಸಿದನಾದರೂ ದೈವ ಅವನಿಗೆ ಒಲಿಯಲಿಲ್ಲ. ಸಾಕಷ್ಟು ಪ್ರಪಂಚಾನುಭವವಿಲ್ಲದೆ ಏನೋ ಮಹತ್ಸಾಧನೆ ಮಾಡುವೆವೆಂದು ಹೊರಟು ಎತ್ತಲೂ ಮುಟ್ಟದಂತೆ ಆಗುವ ಯುವಕರೇ ಬಹಳ. ಅಂಥವರಲ್ಲಿ ಈ ಕಾದಂಬರಿಯ ಕಥಾನಾಯಕನಾದ ಅಮೃತನೂ ಒಬ್ಬ.

ಶ್ರೀ ಮುಗಳಿಯವರ ಈ ಕಾದಂಬರಿಯಲ್ಲಿ, ಆದರ್ಶ ಮತ್ತು ವಾಸ್ತವಿಕತೆಗಳಿಗೆ ನಡೆಯುವ ಹೋರಾಟ ಬಹಳ ಸುಂದರವಾಗಿ ಚಿತ್ರಿತವಾಗಿದೆ. ಕ್ಷಾಮಡಾಮರಗಳನ್ನೆಂದೂ ಕೇಳಿ ಅರಿಯದ ಪುಣ್ಯಶಾಲಿಗಳಿಗೂ ಚೆನ್ನಾಗಿ ಅರ್ಥವಾಗುವ ರೀತಿಯಲ್ಲಿ ಅವರು ಈ ಕಾದಂಬರಿಯಲ್ಲಿ ಅವುಗಳನ್ನು ಚಿತ್ರಿಸಿದ್ದಾರೆ. ಕಾದಂಬರಿಯ ಉದ್ದಕ್ಕೂ ವಾಸ್ತವಿಕತೆ ಎದ್ದು ಕಾಣುತ್ತದೆ!

ಕೆ. ವೆಂಕಟರಾಮಪ್ಪ.

***

ಕೈಲಾಸಂ—ದರ್ಶನ (ಲೇಖನ ಸಂಕಲನ)—ಸಂಪಾದಕರು: ಕೆ. ವಿ. ಸುಬ್ಬಣ್ಣ, ಪ್ರಕಾಶಕರು: ಶ್ರೀ ನೀಲಕಂಠೇಶ್ವರ ನಾಟ್ಯಸೇವಾಸಂಘ, ಹೆಗ್ಗೋಡು (ಸಾಗರ); ಪುಟಗಳು, ii+೧೨೫; ಬೆಲೆ, ರೂ. ೨-೦-೦.

ಕನ್ನಡದಲ್ಲಿ ವಿಮರ್ಶಾಗ್ರಂಥಗಳ ಮತ್ತು ಲೇಖಕರ ಜೀವನ ಚರಿತ್ರೆಗಳ ಅಭಾವವನ್ನು ಕುರಿತು ಸಂಪಾದಕರು ಎಂದಿರುವ ಮೊದಲ ಮಾತು ಮನನೀಯವಾದುದು. "ಕೃತಿಯ ರಸಾಸ್ವಾದನೆ ಮಾಡಲು ಸಾಮಾನ್ಯ ಓದುಗರಿಗೆ ವಿಮರ್ಶಾಗ್ರಂಥಗಳು ಸಹಕಾರಿಯಾಗುತ್ತವೆ. ಕನ್ನಡದಲ್ಲಿ ಈ ಕೊರತೆ ಬಹಳವಿದೆ. ಅಲ್ಲದೆ ಬರಿಯ ಕೃತಿ ಪರಿಚಯದಿಂದ ಓದುಗರ ಕುತೂಹಲ ನಿವಾರಣೆಯಾಗದು. ಕೃತಿಕಾರನ ಪರಿಚಯವೂ ಅಗತ್ಯ." ಈ ಬಗೆಯ ಸಾಹಿತ್ಯದ ಮಹತ್ವವು ಕವಿಯ ಸಮಕಾಲೀನರಿಗೆ ಎಷ್ಟಿರುವುದೋ ಅದಕ್ಕೆ ನೂರು ಪಾಲು ಮೇಲಾಗಿ ಉತ್ತರೋತ್ತರ ಕಾಲದವರಿಗೆ ಇರುತ್ತದೆ.

ದಿವಂಗತ ಟಿ. ಪಿ. ಕೈಲಾಸಂ ಅವರ ಹೆಸರು ಇಂದಿನವರಿಗೆ ಮನೆಮಾತಾಗಿರುವುದರಿಂದಲೂ ಅವರೊಡನೆ ಮಾತಾಡಿ ಅಥವಾ ಅವರನ್ನು ಯಥೇಚ್ಛವಾಗಿ ನೋಡಿದ ಜನ ಕಡಿಮೆಯಲ್ಲದಿರುವುದರಿಂದಲೂ ಒಂದುವೇಳೆ ಈಗ ಇಂತಹ ಪುಸ್ತಕಗಳು ಆವಶ್ಯವಿಲ್ಲವೆಂದು ಯಾರಾದರೂ ಹೇಳಿದರೆ ಅದೂ ಒಂದು ದೊಡ್ಡ ತಪ್ಪಾಗುತ್ತದೆ. ಏಕೆಂದರೆ ಸಮಕಾಲೀನರ ದೃಷ್ಟಿಕೋನವು ಅಷ್ಟಿಷ್ಟಾದರೂ ಪಕ್ಷಪಾತದಿಂದ ಕಲುಷಿತವಾಗದೆ ನಿರ್ಮಲವಾಗಿ ನಿಲ್ಲುವುದು ಅಶಕ್ಯ. ಕೇವಲ ಕರ್ಣಾಕರ್ಣಿಯಾಗಿ ಬರುವ ಕಥೆಗಳಿಗೆ ಕಿವಿಗೊಡುವ ಪ್ರವೃತ್ತಿಯು ಜನರಲ್ಲಿ ಸ್ವಾಭಾವಿಕವಾದುದರಿಂದ ಅವರು ಸಾಹಿತ್ಯವನ್ನೆಲ್ಲ ಸೂಕ್ಷ್ಮವಾಗಿ ಪರಿಶೀಲಿಸಿ ನಿಜವನ್ನು ನಿರ್ಣಯಿಸುವ ವಿಶೇಷ ಶ್ರಮಕ್ಕೆ ಸಾಮಾನ್ಯವಾಗಿ ಹೋಗುವುದಿಲ್ಲ. ಹೀಗೆ ಸಮಕಾಲೀನರಾದವರ ಪೂರ್ವಾಗ್ರಹ ದೋಷಗಳು ದೂರವಾಗಬೇಕಾದರೆ ಇಂತಹ ಗ್ರಂಥಗಳು ಅಗತ್ಯವಾದರೆ ಉತ್ತರಕಾಲೀನರ ತಿಳಿವಳಿಕೆಯ ದೃಷ್ಟಿಯಿಂದ ಅಮೂಲ್ಯವಾಗುತ್ತವೆ. ಒಬ್ಬ ಕವಿಯ ಅಥವಾ ಕಲೆಗಾರನ ಯೋಗ್ಯತೆಯನ್ನಳೆಯಲು ಅವನ ಪ್ರಕಾಶಿತವಾದ ಕೃತಿಗಳು ಎಷ್ಟು ಸಹಕಾರಿಗಳೋ ಅವನ ಅಪ್ರಕಾಶಿತವಾದ ಕೃತಿಗಳೂ ಆಲೋಚನೆಗಳೂ ಅಷ್ಟೇ ಉಪಯುಕ್ತವಾದುವು. ಇದನ್ನರಿತ ಪಾಶ್ಚಾತ್ಯರು ಬಹಳ ಎಚ್ಚರಿಕೆಯಿಂದ ಪ್ರತಿಯೊಬ್ಬ ಕವಿ ಅಥವಾ ಕಲೆಗಾರನ ಒಂದೊಂದು ವ್ಯಕ್ತಿಯನ್ನೂ—ಅದು ದಿನಚರಿಯಲ್ಲಿರಲಿ, ಮಿತ್ರರಿಗೆ ಅಥವಾ ಪ್ರೇಯಸಿಗೆ ಬರೆದ ಪತ್ರದಲ್ಲಿರಲಿ—ಒಂದೂ ಹಾಳಾಗದಂತೆ ಅವನು ಬದುಕಿರುವವರೆಗೂ ಕಾಪಾಡಿಕೊಂಡಿದ್ದು ಅವನು ಕಾಲವಾದ ಮೇಲೆ ಪ್ರಕಟಿಸುವ ಸಂಪ್ರದಾಯವನ್ನು ಇಟ್ಟುಕೊಂಡಿದ್ದಾರೆ. ಇಂತಹ ಒಳ್ಳೆಯ ಸಂಪ್ರದಾಯವು ನಮ್ಮಲ್ಲಿ ಇನ್ನೂ ಬೆಳೆಯಬೇಕಾಗಿದೆ. ಇದರ ಅರಿವನ್ನು ನಮ್ಮ ಜನತೆಗೆ ಉಂಟುಮಾಡಿಕೊಡಲು ಪ್ರಕೃತ ಪುಸ್ತಕವು ಅತ್ಯಂತ ಉಪಕಾರಿಯಾಗಿದೆ.

ಇಂತಹ ಪ್ರಯತ್ನಗಳು ಯಶಸ್ವಿಯಾಗಬೇಕಾದರೆ ಅನೇಕ ಜನರ ಸಹಾಯ ಸಹಕಾರಗಳು ಆವಶ್ಯಕ. ಯಾವನೇ ಒಬ್ಬ ವ್ಯಕ್ತಿಯ ಒಂದು ಸಂಪೂರ್ಣ ಚಿತ್ರವು ನಮಗೆ ಬರಬೇಕಾದರೂ ಅವನೊಡನೆ ಸಂಪರ್ಕವಿದ್ದ ನಾನಾ ಜನರ ಸಹಾಯವಿಲ್ಲದೆ ಸಾಧ್ಯವಾಗುವುದಿಲ್ಲ. ಅದರಲ್ಲಿಯೂ ಟಿ. ಪಿ. ಕೈಲಾಸಂರವರಂತಹ ಬೃಹದ್ವ್ಯಕ್ತಿತ್ವದ ಒಂದು ಸರಿಯಾದ ಪರಿಚಯವು ದೊರೆಯಬೇಕಾದರೆ ಹೇಳುವುದೇನಿದೆ? ಮಹಾತ್ಮರಾದವರ ಬಹಿರಂಗಕ್ಕೂ ಅಂತರಂಗಕ್ಕೂ ಇರುವ ಅಂತರವು ಕಲ್ಪನಾತೀತವಾದುದು. ಇಂದಿನ ಜೀವನದ ಕೃತ್ರಿಮತೆಯುನ್ನು ಕುಳಿತಾಗ, ನಿಂತಾಗ, ನಡೆದಾಗ, ಹೋದಲ್ಲೆಲ್ಲ, ಭೇದಿಸಿ ಅದರ ನಿಸ್ಸಾರತೆಯುನ್ನು ಕಂಡು ಮಲ್ಮಲ ಮರುಗುವಂತಹ ಜೀವ ಒಂದಿರ

ಬೇಕಾದರೆ ಆ ಪ್ರತಿಭೆಯ ಹಂತವು ಎಷ್ಟು ತೀಕ್ಷ್ಣವಾಗಿದ್ದಿರಬೇಕು! ಆ ಹೃದಯದ ಕರುಣೆಯು ಎಷ್ಟು ಆಳವಾಗಿದ್ದಿರಬೇಕು! 'ಮಂಡೆ ಬೋಳಿಸಿಕೊಂಡು ತುಂಡು ಕಂಬಳಿ ಹೊದೆದು' ಇರುವಂತಹ ಸರ್ವಜ್ಞರು ನಮ್ಮಲ್ಲಿ ಎಷ್ಟು ಮಂದಿ? ಆಚಾರ-ವಿಚಾರಗಳಿಗೆ ನಡುವೆ ಸಪ್ತಸಾಗರಗಳ ಅಂತರವಿರುವ ಸಾಮಾನ್ಯಜನರೆಲ್ಲಿ? ಒಂದು ಮಹಾಕವಿಯ ಪಂಕ್ತಿಯಿಂದ ಅವನ ಮಹಾದರ್ಶನವನ್ನೇ ತಮ್ಮ ಪ್ರತಿಭೆಯಲ್ಲಿ ಪ್ರತಿಬಿಂಬಿಸಿಕೊಂಡು ಆ ಆನಂದದಲ್ಲಿ ಇಹ-ಪರಗಳೆಲ್ಲವನ್ನೂ ಮರೆಯುತ್ತಿದ್ದ ಕೈಲಾಸಂರವರೆಲ್ಲಿ? ಸಾವಿರ ಸಾರಿ ಹೇಳಿಸಿಕೊಂಡರೂ ತಮ್ಮ ಕಣ್ಣಮುಂದಿರುವ ನ್ಯೂನತೆಯನ್ನು ಸಹ ಕಾಣದಿರುವ, ಕೊನೆಗೊಮ್ಮೆ ಕಂಡರೂ ಕಂಡೊಡನೆ ಉದ್ವಿಗ್ನವಾಗುವ ಸಾಮಾನ್ಯರ ಸ್ವಭಾವಕ್ಕೂ ಲೋಕದ ನ್ಯೂನತೆಯನ್ನೆಲ್ಲ ಪ್ರತಿಕ್ಷಣವೂ ಕಾಣುತ್ತಿದ್ದರೂ ಚಿತ್ತೈಕಾಗ್ರತೆಯನ್ನು ಕಳೆದುಕೊಳ್ಳದ ಕೈಲಾಸಂರವರ ವ್ಯಕ್ತಿತ್ವಕ್ಕೂ ತಾಳ-ಮೇಳವಿಲ್ಲ. ಅವರ ಅಪ್ರತಿಹತವಾದ ಪ್ರಾತಿಭದರ್ಶನವನ್ನೂ, ಅದು ಪ್ರಸೃತವಾದ ವಿವಿಧ ಮಾರ್ಗಗಳನ್ನೂ, ಅವರ ಅನ್ಯಾದೃಶವಾದ ಹೃದಯ ಮಾರ್ದವವನ್ನೂ, ಅವರ ಕಾವ್ಯಸೃಷ್ಟಿಯ ವೈಶಿಷ್ಟ್ಯಗಳನ್ನೂ—ಎಲ್ಲವನ್ನೂ ಸರಿಯಾಗಿ ಅರ್ಥಮಾಡಿಕೊಂಡು ಇತರರಿಗೆ ಹೇಳುವ ಹೊಣೆಗಾರಿಕೆಯು ಸಣ್ಣದಲ್ಲ. ಅದಕ್ಕೆ ತಕ್ಕ 'ಸಹೃದಯತೆ'ಯು ಎಲ್ಲರ ಪಾಲಿಗೂ ಇರುವಂಥದಲ್ಲ.

ಈ ದೊಡ್ಡ ಜವಾಬ್ದಾರಿಯನ್ನು ಹೊರಬಲ್ಲ ದೊಡ್ಡ ವ್ಯಕ್ತಿಗಳನ್ನೇ ಈ ಕೆಲಸಕ್ಕೆ ಹಚ್ಚಿ ಸಂಪಾದಕರು ತಮ್ಮ ಜಾಣ್ಮೆಯನ್ನು ಪ್ರಕಟಿಸಿದ್ದಾರೆ (ಅವರ "ಕಾಣಿಕೆ"ಯು ಮಾತ್ರ ಬರಡಾಗಿದೆ. ಯಾವ ಸಾಲನ್ನೂ ಕವಿಯಾದವನು ಬರೆದಂತೆ ಕಾಣುವುದಿಲ್ಲ); "ಕೈಲಾಸಫಿ" ಎಂಬ ಮೊದಲನೆಯ ಲೇಖನವನ್ನು ಬರೆದಿರುವ ಡಾ॥ ಶಿವರಾಂ ಅವರು ಉತ್ತಮವಾದ ವ್ಯಕ್ತಿಪರಿಚಯವನ್ನಿತ್ತಿದ್ದಾರೆ. ಎರಡನೆಯ ಲೇಖನವು ('ಕೈಲಾಸಂ ಪರಿಚಯ') ಶ್ರೀ ಡಿ. ಕೆ. ಭಾರದ್ವಾಜರ ಲೇಖನಿಯಿಂದ ಬಂದುದು. ಅದೂ ಸರಸವಾದ ಬರೆವಣಿಗೆ. ಶ್ರೀ ಬಿ. ಎಸ್. ರಾಮರಾಯರೂ ಶ್ರೀ ಅ. ನ. ಕೃಷ್ಣರಾಯರೂ ಕೈಲಾಸಂರವರಿಗೆ ಮಹಾಭಾರತದ ವ್ಯಕ್ತಿಗಳಲ್ಲಿದ್ದ ಉತ್ಸಾಹಪೂರ್ಣ ಮನೋಭಾವವನ್ನು ತಿಳಿಯಾದ ಶೈಲಿಯಲ್ಲಿ ಪ್ರತಿಬಿಂಬಿಸಿದ್ದಾರೆ ('ಕೈಲಾಸಂ ಕಂಡ ಭಾರತ' ಮತ್ತು 'ಕೈಲಾಸಂ ಚಿತ್ರಿಸಬೇಕೆಂದಿದ್ದ ತ್ರಿಶಂಕು') "ಪ್ರತಿಭಾವಂತ ಕಲಾವಂತ" ಎಂಬ ಶ್ರೀರಂಗರ ಪ್ರಬಂಧವು ಸಣ್ಣದಾಗಿದ್ದರೂ ಸ್ವಾರಸ್ಯದಿಂದ ತುಂಬಿದೆ. 'ಪರಿವಿಡಿ'ಯಲ್ಲಿ ಶ್ರೀನಿವಾಸರ 'ಕೈಲಾಸಂ' ಎಂಬ ಉತ್ಕೃಷ್ಟ ಲೇಖನದ ಪ್ರಸ್ತಾಪವನ್ನೇ ಬಿಟ್ಟಿರುವುದು ಬಹಳ ದೊಡ್ಡ ಪ್ರಮಾದ. ಕೈಲಾಸಂ ಅವರ ವ್ಯಕ್ತಿತ್ವದ ಬಗೆಗೆ ಇಲ್ಲಿ ಬಂದಿರುವ ಲೇಖನಗಳಲ್ಲಿ ಅದರ ಸ್ಥಾನ ಎಲ್ಲಕ್ಕೂ

ದೊಡ್ಡದೆಂದರೂ ಎನ್ನಬಹುದು. ಸುರಿತ ವಿಮರ್ಶಕರ ತೂಕವಾದ ಮಾತಿನ ಸರಣಿಯನ್ನಲ್ಲಿ ನೋಡಬಹುದು. ಇವೆಲ್ಲವೂ ಮುಖ್ಯವಾಗಿ ಕೈಲಾಸಂ ಅವರ ವ್ಯಕ್ತಿತ್ವವನ್ನು ಕುರಿತುವಾದರೂ ಗ್ರಂಥವಿಮರ್ಶೆಯು ಪ್ರಾಸಂಗಿಕವಾಗಿ ಅಲ್ಲಲ್ಲಿ ಬರುತ್ತದೆ.

ಕೈಲಾಸಂ ಅವರ ಗ್ರಂಥವಿಮರ್ಶೆಗೆಂದೇ ಹೊರಟಿರುವ ಪ್ರಬಂಧಗಳು ಮೂರು—ಶ್ರೀ ತ. ಸು. ಶಾಮರಾಯರ "ಕೈಲಾಸಂ ಅವರ ಕನ್ನಡ ನಾಟಕಗಳು", ಶ್ರೀ ಈ. ಆರ್. ಸೇತುರಾಂ ಅವರ "ಕೈಲಾಸಂ ಅವರ ಹಾಸ್ಯ" ಮತ್ತು ಶ್ರೀ ಪು. ರಂ. ಎಕ್ಕುಂಡಿ ಅವರ "ಕೈಲಾಸಂ ಅವರ ಕೊಳ" ಇವುಗಳಲ್ಲೂ ವ್ಯಕ್ತಿಪರಿಚಯವು ಬರದೆ ಹೋಗಿಲ್ಲ. ಶ್ರೀ ಶಾಮರಾಯರ ವಿಮರ್ಶೆಯು ಅವರ ರಸಿಕತೆಗೂ ನಿಷ್ಪಕ್ಷಪಾತದೃಷ್ಟಿಗೂ ಕೈಗನ್ನಡಿಯಾಗಿದೆ. ಶ್ರೀಯುತರು ಕೈಲಾಸಂ ಅವರ ನಾಟಕಗಳನ್ನೆಲ್ಲ ತೂಗಿ ನೋಡಿ ತಮ್ಮ ಪರಿಪಕ್ವವಾದ ಅಭಿರುಚಿಗೆ ಒರೆಹಚ್ಚಿ ಸರಸ ವಿಮರ್ಶೆಯ ಶೈಲಿಗೆ ಮಾದರಿಯನ್ನಿತ್ತಿದ್ದಾರೆ. ಶ್ರಿ ಸೇತೂರಾಂ ಅವರ ಬರೆವಣಿಗೆಯು ಕೈಲಾಸಂ ಅವರ ನಾಟಕಗಳ ಜೀವಾಳದಂತಿರುವ ಹಾಸ್ಯದ ಪರಿಯನ್ನು ಸೂಕ್ಷ್ಮವಾಗಿ ವಿವೇಚಿಸುತ್ತದೆ. ಎಕ್ಕುಂಡಿಯವರು 'ಕೊಳ' ಎಂಬ ಕವನದ ತಮ್ಮ ಮೆಚ್ಚುಗೆಯನ್ನು ಬಣ್ಣಿಸಿದ್ದಾರೆ. ಪುಸ್ತಕದ ಕಡೆಗೆ ಬಂದಿರುವ "ಆ ದುಃಖ" ಎಂಬ ಲೇಖನದಲ್ಲಿ ಉತ್ಸಾಹವಿದೆಯೇ ಹೊರತು ಸತ್ವವಿಲ್ಲ.

ಶ್ರೀ ವಿನಾಯಕರ "ಸಾಕ್ಷಿಕ" ಎಂಬ ಕವನವು ತನ್ನ ಸರಳತೆಯಿಂದಲೂ ಭಾವದೀಪ್ತಿಯಿಂದಲೂ ಯಾರನ್ನಾದರೂ ಪರವಶಗೊಳಿಸುವುದರಲ್ಲಿ ಸಂದೇಹವಿಲ್ಲ. "ಕವಿಗೆ ಕವಿ ಮಣಿವಂ" ಎಂಬ ಉಕ್ತಿಯು ಇಲ್ಲಿ ಸಾರ್ಥಕವಾಗಿದೆ.

ಒಟ್ಟಿನಲ್ಲಿ ನೋಡಿದರೆ ಪುಸ್ತಕದಲ್ಲಿ ಪುನರುಕ್ತಿಗಳು ಅನಿವಾರ್ಯವಾಗಿ ಬಂದಿದ್ದರೂ ಈಗಾಗಲೇ ಕೈಲಾಸಂರವರ ಬಗೆಗೆ ಒಂದೆರಡು ಪುಸ್ತಕಗಳು ಪ್ರಕಟವಾಗಿದ್ದರೂ ಇದನ್ನು ಸಾಹಿತ್ಯಪ್ರೇಮಿಗಳು ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ. ಆದರೆ ಇದರಲ್ಲಿಯೂ ಈಗಾಗಲೇ ಪತ್ರಿಕೆಗಳಲ್ಲಿ ಹಿಂದೆಯೇ ಪ್ರಕಟವಾಗಿರುವ ಲೇಖನಗಳೇ ಕೆಲವು ಸೇರಿಕೊಂಡಿರುವುದನ್ನು ನೋಡಿದರೆ ಸಂಪಾದಕರು ಪುಸ್ತಕ ಪ್ರಕಟನೆಗೆ ಇಷ್ಟು ಆತುರಪಡದೆ ಹೊಸ ಲೇಖನಗಳೇ ಎಲ್ಲವೂ ದೊರೆಯುವ ವರೆಗೂ ಕಾಯಬಹುದಾಗಿತ್ತು ಎಂದು ಹೇಳೋಣವೆನ್ನಿಸುತ್ತದೆ. ಅನೇಕ ಮುದ್ರಣಲೋಪಗಳಿಗೂ ಈ ಆತುರವೇ ಕಾರಣವಾಗಿದೆ. ಇವುಗಳಿಗೆ ಅವಕಾಶವನ್ನೀಯುವುದು ಲೇಖಕರಿಗೆ ಅವಮಾನಮಾಡಿದಂತೆ ಎಂದು ಪ್ರಕಾಶಕರು ಅರಿಯುವುದು ಲೇಸು.

—ಡಾ|| ಕೆ. ಕೃಷ್ಣಮೂರ್ತಿ.

*
* *

ಅಮೃತಬಿಂದು—ಬ. ಹೆ. ಶ್ರೀಧರರ ಕವನಸಂಗ್ರಹ (ಶ್ರೀ ವೆಂ. ಭೀ. ನಾಯಕ, ಎಂ.ಎ., ಎಲಿಲ್.ಬಿ. ಅವರ ಮುನ್ನುಡಿಯೊಡನೆ); ಪ್ರಕಾಶಕರು : ಸಂಯುಕ್ತ ಕರ್ನಾಟಕ ಕಾರ್ಯಾಲಯ, ಹುಬ್ಬಳ್ಳಿ; ಪುಟಗಳು, ii+೮೦; ಬೆಲೆ, ರೂ. ೧-೪-೦.

ಹೊಸಗನ್ನಡ ಸಾಹಿತ್ಯ ಚೂತವನದಲ್ಲಿ ಚೈತ್ರೋದಯವಾದುದು ಈ ಶತಮಾನದಿಂದ. ಒಂದು ಕಡೆ ಪಾಶ್ಚಾತ್ಯ ಸಾಹಿತ್ಯಗಳ ಪ್ರಭಾವವೆಂಬ ಮಂದ ಮಾರುತವು ಬೀಸತೊಡಗಿದರೆ ಇನ್ನೊಂದು ಕಡೆ ಪ್ರಾಚೀನ ಸಾಹಿತ್ಯದ ತುಲನಾತ್ಮಕ ಅಭ್ಯಾಸವೆಂಬ ಹೊಂಬೆಳಗು ನಾಡಿನಲ್ಲೆಲ್ಲ ಹರಡಿತು. ಹಿಂದೆಲ್ಲ ಪಂಡಿತರ ತಿರಸ್ಕಾರಕ್ಕೆ ಪಾತ್ರವಾಗಿದ್ದ ಜನಪದ—ಸಾಹಿತ್ಯದಲ್ಲಿ ಒಂದು ಹೊಸ ಆದರವು ಉತ್ಪನ್ನ ವಾಯಿತು. ಅದುವರೆಗೂ ಕೇಳಿ ಸವಿಯದಿದ್ದ ಹೊಸ ಇಂಚರವು ಹಳ್ಳಿಯುವರ ಹಾಡುಗಳಲ್ಲಿರುವುದೆಂದು ಮೇಧಾವಿಗಳು ಒಪ್ಪಲಾರಂಭಿಸಿದರು. ಈ ಮೂರು ಪ್ರಭಾವಗಳ ತ್ರಿವೇಣಿ ಸಂಗಮದಿಂದ ಹೊಸದಾದ ಕಾವ್ಯಸೃಷ್ಟಿಯು ಪ್ರಾರಂಭವಾಗಿ ಪಾತ್ರ ವಿಸ್ತಾರವನ್ನು ಪಡೆಯುತ್ತಿದೆಯೆನ್ನಬಹುದು. ಈ ನಡುವೆ ಎಂದಿನಿಂದಲೂ ನಮ್ಮಲ್ಲಿ ರೂಢಮೂಲವಾದ ಕಾವ್ಯಸಂಪ್ರದಾಯವು ಕೇವಲ ನಿರ್ಜೀವವಾಗಿ ಹೋಗಿರುವುದೆಂಬ ಅತಿರೇಕವಾದವೂ ಹುಟ್ಟಿಕೊಂಡಿತು. ಆದರಲ್ಲಿ ನಿರ್ಜೀವಾಂಶವಿರುವಂತೆಯೇ ಸಜೀವಾಂಶವೂ ಒಂದುಂಟೆಂದು ಕೆಲವರು ತಮ್ಮ ಹೊಸ ದೃಷ್ಟಿಯಿಂದ ಹಳೆಯದನ್ನು ವೀಕ್ಷಿಸಲಾರಂಭಿಸಿದರು. ಈ ನಾನಾ ಮನೋಭಾವಗಳ ಪರಸ್ಪರ ಸಂಸೃಷ್ಟಿಯಿಂದ ಹೊಸಗನ್ನಡ ಕಾವ್ಯರಚನೆಯಲ್ಲಿ ವೈವಿಧ್ಯ ವೈಶಾಲ್ಯಗಳು ಹೆಚ್ಚಿವೆ. ಇವನ್ನು ವಿಮರ್ಶೆಯ ಮಾನದಂಡದಿಂದ ಪರೀಕ್ಷಿಸಿ 'ಇದು ಸರಿ' 'ಇದು ತಪ್ಪು' ಎಂದು ಹೇಳಲು ಇನ್ನೂ ಕಾಲ ಬಂದಿಲ್ಲ. ಆದರೆ ಇಷ್ಟನ್ನು ಮಾತ್ರ ಹೇಳಬಹುದು—ಕಾವ್ಯಕ್ಷೇತ್ರವನ್ನು ವಿಶಾಲಗೊಳಿಸಿರುವವರಲ್ಲಿ ಇತ್ತಕಡೆ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರೂ ಉತ್ತರದಲ್ಲಿ ಶ್ರೀಮಾನ್ ದ. ರಾ. ಬೇಂದ್ರೆಯವರೂ ತಮ್ಮ ವ್ಯಕ್ತಿತ್ವದ ಒಂದು ಮುದ್ರೆಯನ್ನು ಈಗಾಗಲೇ ಅಚ್ಚಳಿಯದಂತೆ ಸಾಹಿತ್ಯದ ಮೇಲೆ ಮಂಡಿಸಿದ್ದಾರೆ—ಇವರ ಪ್ರಭಾವವು ಒಂದಿಲ್ಲೊಂದು ರೀತಿಯಿಂದ ತರುಣ ಕವಿಗಳ ಮೇಲೆ ಬೀಳದಿರುವುದೇ ಅಸಾಧ್ಯ ಎನ್ನುವ ಮಟ್ಟಿಗೆ. ಕಾವ್ಯದ ಸಾಮಾಗ್ರಿಗೆ ಯಾವ ಎಲ್ಲೆಯೂ ಇಲ್ಲವೆಂಬುದನ್ನೂ ಪ್ರತಿಭೆಯ ಪ್ರಭಾವದಿಂದ ಎಂತಹ ಕ್ಷುಲ್ಲಕ ವಸ್ತುವಿಗೂ ಹೇಗೆ ಕಾವ್ಯದ ಕಳೆಯೇರಬಹುದೆಂಬುದನ್ನೂ ತಮ್ಮ ಕೃತಿಗಳ ಮೂಲಕ ತೋರಿಸಿದ್ದಾರೆ. ಛಂದೋವೈವಿಧ್ಯಕ್ಕೆ ಪಥಪ್ರದರ್ಶಕರಾಗಿರುವಂತೆಯೇ ಭಾಷಾ ಸಂಪತ್ತನ್ನು ಹೆಚ್ಚಿಸುವುದಕ್ಕೂ ವಿಶ್ವದ ತತ್ವರಹಸ್ಯವನ್ನು ಸೂಚಿಸುವುದಕ್ಕೂ ಕಾರಣವಾಗಿದ್ದಾರೆ.

ಪ್ರಸ್ತುತ ಕವಿತಾಸಂಗ್ರಹದ ಲೇಖಕರು ಕನ್ನಡ ರಸಿಕರಿಗೇನೂ ಹೊಸಬರಲ್ಲ. ಈಗಾಗಲೇ ಅವರ ಕೃತಿಗಳ ಪ್ರಥಮ ಸಂಕಲನವಾದ 'ಮೇಘನಾದ'ವು ಅವರ ಪ್ರತಿಭೆಯ ಔನ್ನತ್ಯವನ್ನು ಅವರಿಗೆ ತೋರಿಸಿದೆ. ಆಳವಾದ—ಅಷ್ಟೇ ಅಲ್ಲ, ಅರ್ಥ ಪೂರ್ಣವಾದ—ಸಂಸ್ಕೃತ ಸಾಹಿತ್ಯದ ಪರಿಚಯ, ಪೂರ್ವದ ಕನ್ನಡಸಾಹಿತ್ಯದಲ್ಲಿ ಒಂದು ಅತಿಶಯವಾದ ಅಭಿರುಚಿ, ಬೇಂದ್ರೆಯವರ ಸಾಹಿತ್ಯ ಸಂಪ್ರದಾಯದಲ್ಲಿ ಒಂದು ಬಗೆಯ ಭಕ್ತ್ಯುತ್ಸಾಹ, ಯಕ್ಷಗಾನದ ಹಾಡುಗಳು, ಲಾವಣಿಗಳು ಮೊದಲಾದ ಜನಪದ ಗೀತಗಳಲ್ಲಿರುವ ಒಂದು ಧಾಟಿಯ ಗುಣಗ್ರಹಣ, ಎಲ್ಲಕ್ಕೂ ಹೆಚ್ಚಾಗಿ ವಿದೇಶೀಯ ಮಹಾಕವಿಗಳ ಕಾವ್ಯಕಲಾಪ್ರತೀತಿ—ಈ ಎಲ್ಲ ಅಂಶಗಳೂ ಹದವಾದ ಒಂದು ಪಾಕದಲ್ಲಿ ಸಮ್ಮಿಳಿತವಾಗಿ ಶ್ರೀ ಬ. ಹೆ. ಶ್ರೀಧರರ ನಿಸರ್ಗಸಿದ್ಧವಾದ ಕವಿ ಪ್ರತಿಭೆಗೆ ಒಂದು ಅಪೂರ್ವವಾದ ಮೆರುಗನ್ನು ತಂದುಕೊಟ್ಟಿವೆ. ಮೇಘನಾದದ ತರುವಾಯ ಬಿಂದುವರ್ಷವು ಬರುವುದು ಸಹಜವಾಗಿಯೇ ಇದೆ. ಅದರಲ್ಲಿ ಅಮೃತತ್ವವುಂಟೇ ಇಲ್ಲವೇ ಎಂಬುದನ್ನು ಕಾಲಾಂತರದಲ್ಲಿ ಬರಲಿರುವ ವಿಮರ್ಶಕರು ನಿರ್ಣಯಿಸಬೇಕು. ಇಂದಿನವರು ಈ ಕವಿತೆಗಳನ್ನೋದುವಾಗ ಆನಂದಿತರಾಗುವು ದರಲ್ಲಿ ಸಂದೇಹವಿಲ್ಲವೆಂದಿಷ್ಟನ್ನು ಮಾತ್ರ ಈಗ ಹೇಳಬಹುದು.

ಈ ಸಂಗ್ರಹದಲ್ಲಿ ಐವತ್ತೊಂದು ಕವನಗಳಿವೆ; ಎಲ್ಲವೂ ಭಾವಗೀತೆಗಳು. ರಾಜಕೀಯ ಪ್ರಣಯ, ಜೀವನ ಸಮಸ್ಯೆ, ಸುಖ—ದುಃಖ, ಜೀವನತತ್ವ, ದೇವರು, ಪ್ರಕೃತಿ-ಎಲ್ಲ ಕಾವ್ಯದ ಸೆಲೆಗಳಿಗೂ ಇಲ್ಲಿ ಪ್ರವೇಶವುಂಟು. ನಿಷ್ಠುರ ಸತ್ಯವನ್ನು ಬಿಚ್ಚುನುಡಿಗಳಿಂದ ಹೇಳಲು ಕವಿಗಳು ಹೆದರುವವರಲ್ಲವೆಂಬುದು "ಭಾರತ ಸ್ವಾತಂತ್ರ್ಯ"ವೆಂಬ ಮೊದಲನೆಯ ಕವನದಲ್ಲೇ ವ್ಯಕ್ತವಾಗುತ್ತದೆ:

'ಮಂಕು ಕವಿಗಳು, ಮಂಕು ಹಿಡಿಯಿಸುವ ವಾಗ್ಮಿಗಳು
ಶಂಖವಾದ್ಯವ ಮಾಡಿ ಸ್ವಾತಂತ್ರ್ಯದ;
ಕಂಕಾಲದೇಹಿಗಳ ಕಣ್ಗೆ ಧೂಳೆರಚುವುದು
ಮಂಕಾಗಿಸಿತು ಮತಿಯ ಮೂರ್ಛೆಗೊಳಿಸಿ!' (ಪುಟ ೨)

ದೇವರನ್ನು ಕವಿಯೆಂದು ರೂಪಿಸಿ ವರ್ಣಿಸುವಾಗ ಅವರ ಕಲ್ಪನೆಯು ಏರುವ ಎತ್ತರ ವನ್ನು ಗಮನಿಸಬಹುದು:

ಹೆಜ್ಜೆಡೆಯ ಚಂದ್ರಮನ ಬೆಳ್ಳಿಬೆಳಕ ನಡು-
ವೆದ್ದು ಚಿಮ್ಮಿ ಹರಿವ
ಸುಜ್ಞಾನಗಂಗೆಯನು ಹೊತ್ತು ತಿರಕೆ ಮನ-
ಸೋತೆ ಚೆಲುವ ಸುರಿವ!

ಅಥವಾ 'ಜಂಗಮ' ಎಂಬ ಕವನದ ಈ ಸಾಲುಗಳನ್ನು ನೋಡಿ:

ಕಣ್ಕಿವಿಗಳಿಂದ ಬಹಿರಂಗದಲ್ಲಿ
ಆಸ್ವಾದ್ಯನಾದ ಪುರುಷ,
ಬರಿಬೆಳಕು ಕಣ್ಣ ಚುಚ್ಚೀತು ಎಂದು
ಕರೆದಿರ್ಪೆ ತಮದ ವರುಷ!

'ಪುರುಷ', 'ತಮ' ಮೊದಲಾದ ಶಬ್ದಗಳೆಲ್ಲಾ ಇಲ್ಲಿ ಬಹಳ ಸಾರ್ಥಕವಾಗಿ ಪ್ರಯುಕ್ತವಾಗಿರುವುದನ್ನು ನೋಡಬಹುದು. ಇದನ್ನೇ 'ಪರಿವೃತ್ತ್ಯಸಹತ್ವ' ಎಂಬ ಗುಣವೆಂದು ಅಲಂಕಾರಶಾಸ್ತ್ರದಲ್ಲಿ ಹೇಳಿರುವುದು. ಈ ಮಾತುಗಳನ್ನು ಬದಲಿಸಿ ಆ ಸ್ವಾರಸ್ಯ ಕೆಡದಂತೆ ಇಡುವುದಸಾಧ್ಯ. ಈ ಗುಣಕ್ಕೆ ಇನ್ನೊಂದು ಉತ್ತಮವಾದ ಉದಾಹರಣೆ:—

ಬೆಳ್‌ಬೆಳಕಿನಲ್ಲಿ ಏಳ್‌ಬಣ್ಣ ಚೆಲ್ಲಿ
ಬಂದಂತೆ ಚಿತ್ರಭಾನು
ಆನಂದದಲ್ಲಿ ಸುಖದುಃಖ ಚೆಲ್ಲಿ
ಅವತರಿಸಿ ಬಂದೆ ನೀನು! (ಅದೇ ಕವನದಲ್ಲಿ)

ಇಲ್ಲಿ ಉಪಮಾನವು ಎಷ್ಟು ಭವ್ಯವಾಗಿದೆಯೋ 'ಸೂರ್ಯ' ಎನ್ನುವುದಕ್ಕೆ 'ಚಿತ್ರಭಾನು' ಎಂಬ ಪದಪ್ರಯೋಗವೂ ಅಷ್ಟೇ ಔಚಿತ್ಯವುಳ್ಳದಾಗಿದೆ. 'ಚಿತ್ರ' ಎಂದರೆ ಬೇರೆ ಬೇರೆ ಬಣ್ಣಗಳ 'ಭಾನು' ಎಂದರೆ ಕಿರಣಗಳುಳ್ಳವನೆಂಬ ವಿಶೇಷಣವು ಇಲ್ಲಿ ಸೂರ್ಯನಿಗೆ ಎಷ್ಟು ಸಾರ್ಥಕವಾಗಿದೆ! ಇದನ್ನು ಹಿಂದಿನವರು 'ಪರಿಕರ'ವೆಂಬ ಅಲಂಕಾರವೆಂದಿದ್ದಾರೆ. ಈ ಅಲಂಕಾರವನ್ನು ಉಪಯೋಗಿಸುವುದರಲ್ಲಿ ಶ್ರೀಧರರು ಸಿದ್ಧಹಸ್ತರು.

ಪ್ರಣಯ ಗೀತಗಳಲ್ಲಿ ಶ್ರೀಧರರ ರಸಾವೇಶವು ಹೃದ್ಯವಾಗಿದೆ. ಅಲ್ಲಿ ಪ್ರಣಯವೇ 'ಪ್ರಣವ', 'ಹೃದ್ಯೋಗ ಸಾಧನ ಮಂತ್ರ' ಎಲ್ಲವೂ ಆಗಿ ರೂಪಾಂತರಗೊಳ್ಳುತ್ತದೆ. ಮರ್ತ್ಯತೆಯ ಸೊಂಕನ್ನು ಕಳೆದುಕೊಂಡು ಸ್ವರ್ಗೀಯವಾಗುತ್ತದೆ:

ಬಿಗುವಿಲ್ಲ, ಲಗುವೆಲ್ಲ, ಹಗರಣವಿಲ್ಲಿಲ್ಲ,
ಸೊಗಯಿಸುವೊಲುಮೆಯ ಮಂಟಪದಿ—
ಹೊಗಬಾರೆ ವೈದೋರೆ, ಮಮತೆಯ ಮಾಸತಿ,
ಜಗ ಕಾಣದಿರುವಂಥ ಜಯರಂಗದಿ! ('ಹಚ್ಚು ತಾ ನಿನ್ನ ಹಣತಿಯ')

ಪ್ರಣಯವು ಉಂಟುಮಾಡುವ ವಿವಿಧ ನಿರಾಶೆಗಳೂ ಎಷ್ಟೋ ಕವನಗಳಿಗೆ ಸಾಮಗ್ರಿಯನ್ನೊದಗಿಸಿವೆ; 'ಪ್ರೇಮ ವ್ರತ', 'ಇರಿತವೋ ದುರಿತವೋ' 'ದುಂಬಿ ಮಲ್ಲಿಗೆಗೆ', ಮೊದಲಾದ ಕವನಗಳು ಈ ಗುಂಪಿಗೆ ಸೇರತಕ್ಕವು.

ಹಿಂದಿನ ಕಾವ್ಯಗಳಲ್ಲಿ ಕಾಣಬಹುದಾದಂತಹ ಒಂದು ವರ್ಣನಾಲಹರಿಯನ್ನು 'ಉದಯ ರಾಗ', 'ಉತ್ತರ ರಾಗ', 'ದುಃಖಾಷ್ಟಕ' ಮೊದಲಾದ ಗೀತೆಗಳಲ್ಲಿ ನೋಡಬಹುದು. ಇಲ್ಲಿ ಅಲಂಕಾರಗಳು ನಿರ್ಗಳವಾಗಿ ಕುಣಿಯುತ್ತ ಬರುವುವು :

ನನ್ನ ಪಂಚಬಾಣ, ಮುಲಗು
ನನ್ನ ಹೃದಯಸುಂದರ—
ನನ್ನ ಚಿತ್ತರಂಗನಟ, ಸ
ಮುಲ್ಲಸತ್ಸುಧಾಧರ! ('ಉತ್ತರ ರಾಗ')

ಆದರೆ ಕವಿಯ ಪ್ರತಿಭಾ ಪಕ್ಷಿಯು ಮುಗಿಲಿನೆತ್ತರ ಹಾರುವುದು ಭಕ್ತಿರಸದ ಪ್ರಭಾವದಲ್ಲಿ; ಆಗ ಭಾಷೆಯ ಗಾಂಭೀರ್ಯವೂ ಸಹಜಪ್ರಾಸಗಳ ಮೋಹಕತೆಯೂ ಸಂಸ್ಕೃತ ಪ್ರಾಚುರ್ಯವೂ ಬಹಳ ಹೃದಯಂಗಮವಾಗಿರುತ್ತವೆ :

ಅಂಬರದಿ ವಿಜೃಂಭಿಸಿರುವ
ರಂಭೆ ಬೆಳಕಿನಿಂದಿರೇ,
ನಂಬಿದೆಡೆಯು ತುಂಬಿ ಬಾರ
ಚಿತ್ಕಲೈಕಮಂದಿರೇ! ('ತುಂಬಿ ಬಾರ')

ಹಲವ ಮರೆದೊಂದ ನೆನೆ-ಮನವೆ ಸುಮನೋಘನವೆ,
ಆನಂದನಂದನೋನ್ಮಾದಧುನಿಯು—
ಆ ಲಾಸ್ಯಮೋಹನಿಯನಮರ ಸಂಜೀವನಿಯ-
ನಾ ಜೀವನೈಕಮಾಧುರ್ಯಖನಿಯ! ('ಒಂದ ನೆನೆ')

ಈ ಭಕ್ತಿ ಗೀತೆಗಳಲ್ಲೂ ಅಧ್ಯಾತ್ಮ ತತ್ವವನ್ನು ಕುರಿತ ಗೀತೆಗಳಲ್ಲೂ ('ತೀರ್ಪು', 'ನಾಕ', 'ನನಗೆ ನಾನೇ', 'ನೀನಿಲ್ಲ ಅಲ್ಲಿ', 'ಮಧುರಾವಟಿ', 'ಜಂಗಮ ಏಕನಾದವೆ ಬರಲಿ', 'ಅಮೃತಬಿಂದು') ಶ್ರೀ ಅರೊಬಿಂದೊ ಅವರ ದರ್ಶನದ ಒಂದು ಪಡಿನೆಳಲನ್ನು ನೋಡಬಹುದು.

ಗಂಭೀರ ವಸ್ತುಗಳ ವರ್ಣನೆಯಲ್ಲಿ ಶ್ರೀಧರರು ಒಂದು ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿರುವಂತೆಯೇ ಕ್ಷುದ್ರವಾದುದನ್ನು ಬಹಳ ಮಾರ್ಮಿಕವಾಗಿ ಧ್ವನಿಪೂರ್ಣವಾಗಿ ವರ್ಣಿಸಿ ಹಾಸ್ಯದಲ್ಲಿ ತೇಲಿಸುವ ಕಲೆಯಲ್ಲಿಯೂ ನಿಪುಣರಾಗಿದ್ದಾರೆ. 'ಕವಿ ವಿಡಂಬನ', 'ಕುರುಡು ದೀಪ', 'ಸುಂದರಿಯ ಸಂಕಟ' ಮೊದಲಾದ ಕವನಗಳು ಉದಾಹರಣೆಗಳು. ಹಾಗೆಯೇ ಬಾಳಿನ ಕಹಿಯನ್ನು ಕೂಡ ಸಿಹಿಯಾಗಿ ತೋರುವಂತೆ ಅಲಂಕಾರಮಯವಾಗಿ ಕವಿಗಳು ಚಿತ್ರಿಸಬಲ್ಲರು. (ಉದಾ: 'ನರನಾದೆನೇಕೆ?')

ಇವಲ್ಲದೆ ಸಂಗ್ರಹದಲ್ಲಿ ವೇದದಿಂದ, ಟಾಗೋರರಿಂದ ಮತ್ತು ಪಾಶ್ಚಾತ್ಯ ಕವನಗಳಿಂದ ಅನುವಾದಿತವಾದ ಕೆಲವು ಕವನಗಳೂ ಸೇರಿವೆ.

ಕವನಸಂಗ್ರಹದ ಪದ್ಯಗಳೆಲ್ಲವೂ ಒಂದೇ ದರ್ಜೆಯ ಪರಿಪಾಕವನ್ನು ಪಡೆದಿವೆ ಯೆಂದು ಹೇಳುವುದು ಕಷ್ಟ. ಈ ಏರುಪೇರುಗಳಿಗೆ ಅವರು ಬೇರೆ ಬೇರೆ ಕಾಲಗಳಲ್ಲಿ ಯಾವುದೋ ದೃಷ್ಟಿಯಿಂದ ಬರೆದುದನ್ನೆಲ್ಲ ಒಂದೆಡೆ ಸೇರಿಸಿರುವುದೇ ಕಾರಣವಿರ ಬಹುದು. 'ಅಕ್ಕನ ನೆನಹು' ಸಂಗ್ರಹದಲ್ಲಿರುವುದರಿಂದ ಅದರ ಕಳೆ ಹೆಚ್ಚುವಂತೇನೂ ಕಾಣುವುದಿಲ್ಲ. ಆದರೆ ಗ್ರಂಥದ ಮೊದಲಿನಿಂದ ಕೊನೆಯವರೆಗೂ ಅನುಸ್ಯೂತವಾಗಿ ಬಂದಿರುವ ಗುಣವೆಂದರೆ ಭಾಷೆಯ ಅಸ್ಖಲಿತ ಓಟ ಮತ್ತು ಸಹಜ ಪ್ರಾಸಗಳ ಬೆಡಗು. 'ಶ್ಲೇಷ', 'ವಿರೋಧಾಭಾಸ' ಮೊದಲಾದ 'ಪಂಡಿತ ಪ್ರಿಯ' ಅಲಂಕಾರಗಳಿಗೂ ಅಲ್ಲಲ್ಲಿ ಎಡೆ ದೊರೆತಿದೆ. ಒಂದು ಕಡೆ ಈ ಗುಣಗಳು ದೋಷವಾಗುವುದೂ ಉಂಟು.

'ಅಸ್ಥಿರತೆಗೆ ಬೆದರಿ ನಿತ್ಯ **ಹತ್ತೆರಿಸುವೆವೋ**'

'ಆರತಿಯನೆತ್ತಲೊಯೆನಿಸಿತೆನ (ಪುಟ ೧೦)

ಗಾರತಿಯ ಮೊಗ ನೋಡಲು!' (ಪುಟ ೧೬) ಎಂಬಲ್ಲಿ ಶ್ಲೇಷಾಲಂಕಾರದ ನಿರ್ಬಂಧವು ಎರಡನೆಯ ಪಾದದಲ್ಲಿ ಯತಿಭಂಗವನ್ನು ತಂದು ಛಂದಸ್ಸಿನ ಓಟವನ್ನೇ ಕುಂಟಿಸಿದೆ.

ಒಟ್ಟಿನಲ್ಲಿ ಕಾವ್ಯಸಂಗ್ರಹವು ಶ್ರೀಯುತರಿಂದ ಇದಕ್ಕೂ ದೊಡ್ಡ ಕಾವ್ಯಗಳು ಬರಬಹುದೆಂಬ ನಿರೀಕ್ಷೆಯನ್ನು ಹುಟ್ಟಿಸುತ್ತವೆ. ಆ ನಿರೀಕ್ಷೆಯು ಸಫಲವಾಗಲಿ!

ಪುಸ್ತಕದ ಮುಖಪತ್ರವು ಅಂದವಾಗಿದೆ; ಇಷ್ಟು ಚೆನ್ನಾಗಿ ಸಂಗ್ರಹವನ್ನು ಪ್ರಕಟಿಸಿ ನೂತನ ಕಾವ್ಯನಿರ್ಮಾಣಕ್ಕೆ ಪ್ರೋತ್ಸಾಹ ಕೊಡುತ್ತಿರುವ ಸಂಯುಕ್ತ ಕರ್ನಾಟಕ ಕಾರ್ಯಾಲಯದವರು ಅಭಿನಂದನಾರ್ಹರು.

ಡಾ|| ಕೆ. ಕೃಷ್ಣಮೂರ್ತಿ

ಸಂಪಾದಕೀಯ

ಹೈಸ್ಕೂಲುಗಳಲ್ಲಿ ಭಾಷೆಗಳ ಸ್ಥಾನವೇನು ಎಂಬ ವಿಷಯದಲ್ಲಿ ಮದ್ರಾಸು ಪ್ರಾಂತದಲ್ಲಿ ಕೆಲಕಾಲದಿಂದ ವಿಶೇಷ ಚರ್ಚೆ ನಡೆಯುತ್ತಿತ್ತು. ಈಗ ಕೆಲವು ದಿಸಗಳ ಹಿಂದೆ ಮದ್ರಾಸ್ ಸರಕಾರವು ಶಾಲೆಗಳಲ್ಲಿ ಇಂಗ್ಲೀಷ್ ಮತ್ತು ಹಿಂದಿಯನ್ನು ಒತ್ತಾಯವಾದ ದ್ವಿತೀಯ ತೃತೀಯ ವಿಷಯಗಳನ್ನಾಗಿಯೂ ತಮಿಳನ್ನು ಸಂಸ್ಕೃತ ಮತ್ತು ಇತರ ಪ್ರಾಚೀನಭಾರತ ಭಾಷೆಗಳ ಜೊತೆಯಲ್ಲಿ ಐಚ್ಛಿಕ ಪ್ರಥಮ ಭಾಷೆಯನ್ನಾಗಿಯೂ ಏರ್ಪಡಿಸಿತು. ಇದು ಮಾತೃಭಾಷೆಯೂ ಪ್ರಾಂತಭಾಷೆಯೂ ಆದ ತಮಿಳಿಗೆ ಹಾನಿಕರವೆಂದೂ ತಮಿಳು ಭಾಷೆಗೆ ಇದುವರೆಗೆ ಕೊಟ್ಟಿದ್ದ ಪ್ರಾಮುಖ್ಯತೆಗೆ ಕುಠಾರಪ್ರಾಯವೆಂದೂ ತಮಿಳು ಸಮ್ಮೇಳನಗಳೂ ತಜ್ಞರಾದ ವಿದ್ವಾಂಸರೂ ಸರ್ಕಾರಕ್ಕೆ ಮನವಿಮಾಡಿಕೊಂಡರು. ಅಲ್ಲದೆ ಈಚೆಗೆ ಶ್ರೀ ಷಣ್ಮುಗಂಚೆಟ್ಟಿಯವರೇ ಮೊದಲಾದ ೨೪ ಜನ ಗಣ್ಯಮಾನ್ಯ ಮಹನೀಯರು ಈ ವಿಷಯದಲ್ಲಿ ದೀರ್ಘವಾದ ಒಂದು ಹೇಳಿಕೆಯನ್ನು ಕೊಟ್ಟು ತಮಿಳನ್ನೆ ಒತ್ತಾಯವಾದ ಪ್ರಥಮ ಭಾಷೆಯನ್ನಾಗಿ ಏರ್ಪಡಿಸಬೇಕೆಂದು ಸೂಚನೆ ಮಾಡಿದರು. ಇದೆಲ್ಲದರ ಫಲವಾಗಿ ಈಚೆಗೆ ಮದ್ರಾಸ್ ಸರಕಾರದ ವಿದ್ಯಾಮಂತ್ರಿಗಳು ಸೆಕೆಂಡರಿ ಶಾಲೆಗಳ ಮುಖ್ಯೋಪಾಧ್ಯಾಯರ ಸಮ್ಮೇಳನದ ಪ್ರಾರಂಭೋತ್ಸವ ಸಮಾರಂಭದಲ್ಲಿ ಸರ್ಕಾರದವರು ಅನುಸರಿಸಬೇಕೆಂದಿರುವ ಭಾಷಾಸಮಸ್ಯೆಯ ಪರಿಹಾರೋಪಾಯವನ್ನು ಕುರಿತು ವಿವರಣೆ ಮಾಡಿದರು. ಅದರ ವಿವರಣೆ ಈ ರೀತಿಯಿದೆ 'ಮೊದಲನೆಯ ಭಾಗದಲ್ಲಿ ಪ್ರಾಂತಭಾಷೆ ಮತ್ತು ಇಂಗ್ಲಿಷ್ ಒತ್ತಾಯದ ಭಾಷೆಗಳಾಗಿರುತ್ತವೆ. ಅದನ್ನು ಎಲ್ಲರೂ ವ್ಯಾಸಂಗ ಮಾಡಿಯೇ ತೀರಬೇಕು. ಎರಡನೆಯ ಭಾಗದಲ್ಲಿ ಮಾತೃಭಾಷೆ, ಪ್ರಾಂತಭಾಷೆ, ಭಾರತೀಯ ಪ್ರಾಚೀನಭಾಷೆ ಇವುಗಳಲ್ಲಿ ಒಂದನ್ನೂ ಹಿಂದೀ ಅಥವಾ ಯಾವುದಾದರೂ ಒಂದು ವೃತ್ತಿಯ ವ್ಯಾಸಂಗವನ್ನೂ ಆರಿಸಿಕೊಳ್ಳಬಹುದು. ಇದರಿಂದ ಈಗ ಪ್ರತಿಯೊಂದು ವಿದ್ಯಾರ್ಥಿಯೂ ನಾಲ್ಕು ಭಾಷೆಗಳನ್ನು ಅಭ್ಯಾಸಮಾಡಬಹುದು. ಎರಡನ್ನಂತೂ ಅಭ್ಯಾಸಮಾಡಿಯೇ ತೀರಬೇಕು. ಎರಡನೆಯ ಭಾಗದಲ್ಲಿ ಆರಿಸಿಕೊಳ್ಳುವುದಕ್ಕೆ ಅವಕಾಶವಿರುವುದರಿಂದ ಸಂಸ್ಕೃತವೇ ಮೊದಲಾದ ಪ್ರಾಚೀನ ಭಾರತೀಯ ಭಾಷೆಯನ್ನೋ ಅದಿಷ್ಟವಿಲ್ಲದಿದ್ದರೆ ಮಾತೃಭಾಷೆ ಅಥವಾ ಪ್ರಾಂತ ಭಾಷೆಯ ಪ್ರೌಢವ್ಯಾಸಂಗವನ್ನೋ ಆರಿಸಿಕೊಳ್ಳಬಹುದು. ಹಿಂದಿಗೆ ಬದಲಾಗಿ ವೃತ್ತಿಯೊಂದನ್ನು ಆರಿಸಿಕೊಳ್ಳಲು ಸೌಕರ್ಯವಿರುವುದರಿಂದ ಹಿಂದಿಯ ಪಕ್ಷಪ್ರತಿ

ಪಕ್ಷದವರಿಬ್ಬರಿಗೂ ತೃಪ್ತಿಯಾಗುವುದು. ಈ ವಿಧವಾದ ಏರ್ಪಾಡು ಬಹುಮಟ್ಟಿಗೆ ತೃಪ್ತಿಕರವಾಗಿದೆ.

ನಮ್ಮ ಮೈಸೂರು ದೇಶದಲ್ಲಿಯೂ ಸ್ವಲ್ಪ ಮಾರ್ಪಾಟಿನಿಂದ ಇದನ್ನು ಅನುಸರಿಸುವುದರಿಂದ ವಿಶೇಷ ಪ್ರಯೋಜನವುಂಟು. ಭಾರತಕ್ಕೆ ಸ್ವಾತಂತ್ರ್ಯ ದೊರೆತಂದಿನಿಂದ ಕನ್ನಡ ದೇಶದಲ್ಲಿ ಕನ್ನಡಕ್ಕೆ ನ್ಯಾಯಪ್ರಾಪ್ತವಾದ ಸ್ಥಾನವೆಂದಿಗೆ ದೊರಕೀತೆಂದು ಎಲ್ಲರೂ ಕುತೂಹಲದಿಂದ ಹಾತೊರೆಯುತ್ತಿದ್ದಾರೆ. ಸಂಬಂಧಪಟ್ಟವರು ಈ ವಿಷಯವನ್ನು ತಕ್ಷಣ ಗಮನಕ್ಕೆ ತಂದುಕೊಂಡು ಮೈಸೂರು ದೇಶದ ಎಲ್ಲ ಶಾಲೆಗಳಲ್ಲಿಯೂ ಕನ್ನಡವನ್ನು ಒತ್ತಾಯದ ಪ್ರಥಮ ಭಾಷೆಯನ್ನಾಗಿ ಏರ್ಪಡಿಸುತ್ತಾರೆಂದು ನಂಬುತ್ತೇವೆ.

ಕೃತಜ್ಞತೆ

ಪ್ರಬುದ್ಧ ಕರ್ಣಾಟಕದ ವಿರೋಧಿಸಂವತ್ಸರದ ೩೧ ನೆಯ ಸಂಪುಟದ ೩-೪ ನೆಯ ಸಂಚಿಕೆಗಳ ೧೮೯ ರಿಂದ ೨೨೦ ನೆಯ ಪುಟಗಳಲ್ಲಿ ಪ್ರಕಟವಾಗಿರುವ ಶ್ರೀಮಾನ್ ಡಿ. ವಿ. ಗುಂಡಪ್ಪನವರ ‘ಇಂಡಿಯದ ನೂತನ ರಾಜ್ಯನಿಬಂಧನೆ’ ಎಂಬ ಲೇಖನವನ್ನು ಲೇಖಕರ ಅನುಮತಿಯ ಮೇರೆ ಬೆಂಗಳೂರಿನಲ್ಲಿರುವ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಪತ್ರಿಕೆಯಾದ ‘ಸಾರ್ವಜನಿಕ’ ಪತ್ರಿಕೆಯಿಂದ ಆರಿಸಿಕೊಂಡಿದೆ. ಸೂಕ್ತ ಸ್ಥಳದಲ್ಲಿ ಈ ಕೃತಜ್ಞತೆಯ ಸೂಚನೆ ಪ್ರಮಾದದಿಂದ ಕೈಬಿಟ್ಟುಹೋದುದಕ್ಕಾಗಿ ವಿಷಾದಿಸುತ್ತೇವೆ.

‘ಸಂಪಾದಕ’

ಸಾದರ ಸ್ವೀಕಾರ

೧. **ತಾಯಿಯ ಕರುಳು** (ಕಾದಂಬರಿ)—ಬರೆದವರು : ಶ್ರೀ ಅ. ನ. ಕೃಷ್ಣರಾಯ ; ಪ್ರಕಾಶಕರು : ಆನಂದ ಬ್ರದರ್ಸ್, ಬೆಂಗಳೂರು ೨ ; ಬೆಲೆ, ರೂ. ೪-೧೨-೦; ಕ್ರೌನ್ ಅ. ಪು. ೩೬೦

೨. **ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ**—ಬರೆದವರು : ಶ್ರೀ ಅ. ನ. ಕೃಷ್ಣ ರಾಯ ; ಪ್ರಕಾಶಕರು : ಆನಂದ ಬ್ರದರ್ಸ್, ಬೆಂಗಳೂರು ೨ ; ಬೆಲೆ, ರೂ. ೧-೮-೦ ; ಕ್ರೌನ್ ಅ. ಪು. ೧೩೦.

೩. **ಸರಸ-ವಿರಸ** (ಕತಾಸಂಗ್ರಹ)—ಸಂಪಾದಕರು ; ಶ್ರೀ ಹುಬ್ಬಳ್ಳಿ ಹೂಗಾರ ; ಪ್ರಕಾಶಕರು : ಶ್ರೀ ಎಸ್. ಬಿ. ಪಾವಟೆ, ಸುವಿಕಾಸ ಸಾಹಿತ್ಯ ಸಮಿತಿ, ಹುಬ್ಬಳ್ಳಿ ; ಬೆಲೆ, ರೂ. ೧-೧೨-೦ ; ಕ್ರೌನ್ ಅ. ಪು. ೭೨.

೪. **ಹಳ್ಳಿಯ ಬಾವಿ** (ಕತಾಸಂಕಲನ)—ಬರೆದವರು : ಶ್ರೀ ಧನ್ವಂತ ; ಪ್ರಕಾಶಕರು : ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ; ಬೆಲೆ, ರೂ. ೧-೪-೦ ; ಕ್ರೌನ್ ಅ. ಪು. ೧೨೫.

೫. **ಗರ್ಭಿಣಿ ಮತ್ತು ಶಿಶು**—ಲೇಖಕರು : ಡಾ|| ಎಂ. ಎ. ಕಾಮತ್, ಎಂ.ಬಿ. ಸಿ.ಎಮ್ ; ಅನುವಾದಕರು : ಎಚ್. ವಿಠ್ಠಲಶೆಣೈ, ಬಿ.ಎ., ಎಲ್.ಟಿ.; ಪ್ರಕಾಶಕರು : ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಲಿಮಿಟೆಡ್, ಮಂಗಳೂರು ; ಬೆಲೆ, ರೂ. ೨-೦-೦ ; ಕ್ರೌನ್ ಅ. ಪು. ೨೦೯.

೬. **ಶ್ರೀ ಚಿಕ್ಕದೇವರಾಜ ಬಿನ್ನಪ**—ಅನುವಾದಕರು : ಶ್ರೀ ಜಿ. ಪಿ. ರಾಜರತ್ನ ; ಪ್ರಕಾಶಕರು : ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು ; ಬೆಲೆ, ರೂ. ೧-೮-೦ ; ಕ್ರೌನ್ ಅ. ಪು. ೧೧೨.

೭. **ಹೊನ್ನ ನಿಮಿಷ**—ಬರೆದವರು : ಶ್ರೀ ಭಟ್ಟ ಟಿ. ವಾಮನ್ ; ಪ್ರಕಾಶಕರು : ಶ್ರೀ ಪ್ರಕಟನಾಲಯ, ತೀರ್ಥಹಳ್ಳಿ ; ಬೆಲೆ, ರೂ. ೧-೦-೦ ; ಕ್ರೌನ್ ಅ. ಪು. ೭೭.

೮. **ಸ್ವರ್ಗದೋಲೆಗಳು**—ಬರೆದವರು : ಶ್ರೀ ಸಿಂಪಿ ಲಿಂಗಣ್ಣ ; ಪ್ರಕಾಶಕರು : ಬಿ. ಜಿ. ಅವಧಾನಿ, ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ; ಬೆಲೆ, ರೂ. ೧-೦-೦; ಕ್ರೌನ್ ಅ.ಪು.೧೨೭.

೯. **ಮಹಾಕವಿ ರಾಘವಾಂಕ**—ಬರೆದವರು : ಶ್ರೀ ಆರ್. ಸಿ. ಹಿರೇಮಠ ; ಪ್ರಕಾಶಕರು : ರುದ್ರಯ್ಯಸ್ವಾಮಿ, ಅ. ಹಿರೇಮಠ, ಚಂದ್ರೋದಯ ಮುದ್ರಣಾಲಯ, ಧಾರವಾಡ ; ಬೆಲೆ, ರೂ. ೨-೮-೦ ; ಕ್ರೌನ್ ಅ. ಪು. ೨೬೪.

೧೦. **ಗಂಡುಗೊಡಲಿ**—ಬರೆದವರು : ಶ್ರೀ ಜಿ. ಪಿ. ರಾಜರತ್ನಂ ; ಪ್ರಕಾಶಕರು : ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು ನಗರ ; ಬೆಲೆ, ರೂ. ೦-೬-೦ ; ಕ್ರೌನ್ ಅ. ಪು. ೩೨.

೧೧. **ಹೇಮರೆಡ್ಡಿ ಮಲ್ಲಮ್ಮ**—ರಾಜಯೋಗಿ ವೇಮಣ್ಣ—ಲೇಖಕರು: ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡರಾಧ್ಯರು; ಪ್ರಕಾಶಕರು: ಪ್ರಬೋಧ ಪುಸ್ತಕಮಾಲೆ, ನಂ. ೫, ೩ ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು ನಗರ; ಬೆಲೆ, ರೂ. ೦-೮-೦; ಕ್ರೌನ್ ಪು. ೪೦.

೧೨. **ಆಹಾರ ವಿಜ್ಞಾನ ಸಾರ**—ಬರೆದವರು: ಶ್ರೀ ಎನ್. ಬಿ. ನಾಡಗೀರ, ಬಿ.ಎ. (ಆನರ್ಸ್); ಪ್ರಕಾಶಕರು: ಬಿ. ಜಿ. ಅವಧಾನಿ, ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ; ಬೆಲೆ, ರೂ. ೧-೪-೦; ಕ್ರೌನ್ ಅ. ಪು. ೧೧೦.

೧೩. **ವೀರವಿಲಸಿತ**—ಬರೆದವರು: ತೆಕ್ಕುಂಜ ಗೋಪಾಲಕೃಷ್ಣ ಭಟ್ಟ; ಪ್ರಕಾಶಕರು: ಉದಯ ಪ್ರಿಂಟರಿ ಎಂಡ್ ಪಬ್ಲಿಕೇಶನ್ಸ್, ಲಿಮಿಟೆಡ್, ಮಂಗಳೂರು; ಬೆಲೆ, ರೂ. ೦-೬-೦; ಕ್ರೌನ್ ಅ. ಪು. ೧೨.

೧೪. **ಮಹಾತ್ಮ ಗಾಂಧಿ**—ಲೇಖಕರು ಮತ್ತು ಪ್ರಕಾಶಕರು: ಶ್ರೀ ಸ. ಮೀ. ಹಂಜಿ ಎಂ.ಎ., ಬಿ. ಟಿ ಡಿ. ಬಿ. ಇ., ಶ್ರೀ ಬಸವೇಶ್ವರ ಟ್ರೇನಿಂಗ್ ಕಾಲೇಜು, ಬಾಗಲಕೋಟೆ; ಬೆಲೆ, ರೂ. ೨-೦-೦; ಕ್ರೌನ್ ಅ. ಪು. ೨೦.

೧೫. **ಮಾಯಾ ಮಂದಿರ**—ಬರೆದವರು: ಭುಜೇಂದ್ರ ಮಹಿಷವಾಡಿ; ಪ್ರಕಾಶಕರು: ಶಾಂತಿಸೇವಾಸದನ, ಸೇಡಬಾಳ; ಬೆಲೆ, ಸಾದಾ ರೂ. ೧-೮-೦; ಸುಂದರ ಪ್ರತಿ ರೂ. ೨-೦-೦; ಕ್ರೌನ್ ಅ. ಪು. ೭೫;

೧೬. **ನಮ್ಮ ಕಾಗದಗಳು** (ಅಮೆರಿಕಾ—ಭಾರತಗಳ ಸಿಂಹಾವಲೋಕನ)—ಸಂಪಾದಕರು: ಶ್ರೀ ನಾಡಿಗ ಕೃಷ್ಣಮೂರ್ತಿ; ಪ್ರಕಾಶರು: ಗೀತಾ ಸಾಹಿತ್ಯಮಂದಿರ, ಮಲ್ಲೇಶ್ವರಂ, ಬೆಂಗಳೂರು ೩; ಬೆಲೆ, ರೂ. ೦-೧೨-೦; ಕ್ರೌನ್ ಅ. ಪು. ೯೫.

೧೮. **ಶ್ರೀ ವಿಜಯ ಮಹಾಂತೇಶ ಲಾವಣಿ**—ಕಟ್ಟಿದವರು: ಚಿ|| ಮಹಾಂತ ದೇವರು; ಪ್ರಕಾಶಕರು: ಮಹಾಂತಯ್ಯ, ಓತಗೇರಿ; ಬೆಲೆ, ೧ ಆಣೆ.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

ಇನ್ನುಮುಂದೆ 'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯ ಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

೧೯೫೦–೫೧ ನೆಯ ಸಾಲಿನ ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಚಂದಾದಾರರಿಗೆ	ರೂ. ೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ. ೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ. ೨	೮	೦

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳಿಹಿಸಬಹುದು.)

ಪ್ರಬುದ್ಧ ಕರ್ಣಾಟಕಕ್ಕೆ ಚಂದಾದಾರರನ್ನು ಒದಗಿಸಿಕೊಡುವ ಪುಸ್ತಕ ವ್ಯಾಪಾರಿಗಳಿಗೂ ವೃತ್ತಪತ್ರಿಕೆಗಳ ಮಾರಾಟಗಾರರಿಗೂ ಶೇಕಡ ೧೨½ ಯಂತೆ ಕಮಿಷನ್ ಕೊಡಲಾಗುವುದು. ಪಾಠಶಾಲಾ ಸಂಸ್ಥೆಗಳಿಗೆ ಪ್ರಚಾರ ಶಾಖೆಯ ಕಾರ್ಯದರ್ಶಿಗಳೇ ನೇರವಾಗಿ ಗಮನಕೊಡುವರು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಫಸ್ಟ್‌ಗ್ರೇಡ್ ಕಾಲೇಜು, ಮೈಸೂರು) ರಿಗೆ ಕಳಿಸಬೇಕು.

ಕಾರ್ಯದರ್ಶಿ
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. *ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. *ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. *ನಮ್ಮ ಹಳ್ಳಿಗಳು—ಜಿ. ಎಸ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. *ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. *ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. *ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. *ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. *ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. *ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. *ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. *ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. *ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. *ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. *ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. *ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೩೪.*ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬.*ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧.*ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨.*ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.
೪೩.*ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫.*ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬.*ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭.*ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮.*ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯.*ಮುದ್ದಣ—ತ. ಸು. ಶಾಮರಾವ್, ಬಿ.ಎ. (ಆನರ್ಸ್).
೫೦.*ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧.*ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨.*ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ
೫೩.*ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪.*ಆಹಾರ—ಜೆ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫.*ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

ಸಾಧಾರಣ ಪ್ರತಿ ೩ ಆಣೆ.
ಉತ್ತಮ ಪ್ರತಿ ೪ ಆಣೆ

ಕಾರ್ಯದರ್ಶಿ,
ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦, ಸಾದಾ ೧೨ ಆಣೆ.

ಪ್ರಧಾನಸಂಪಾದಕರು : { ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೩ ರ ವರೆಗೆ
ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೩ ರಿಂದ ೧೯೪೭ ರ ವರೆಗೆ
ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. ***ಹರಿಶ್ಚಂದ್ರಕಾವ್ಯ ಸಂಗ್ರಹ** (ತೃತೀಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. ***ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು: ಎ. ಎಸ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾ ವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣ ಪ್ರಪಂಚ**—ಲೇಖಕರು . ವಿ. ಸೀತಾರಾಮಯ್ಯ, ಎಂ.ಎ.

೧೦. ***ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತ ರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫.* **ಪುರಾಣನಾಮಚೂಡಾಮಣಿ**—ಲೇಖಕರು: ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ., ಮತ್ತು ಪಾನ್ಯಂ ಸುಂದರಶಾಸ್ತ್ರಿ; ಬೆಲೆ, ರೂ.೩-೪-೦

೧೬. **ಯಶೋಧರ ಚರಿತೆಯ ಸಂಗ್ರಹ**—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭.* **ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ**—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೧೮. **ಹಿಂದೂ ದೇಶದ ಭೂಚರಿತ್ರೆ**—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. **ವಚನಧರ್ಮಸಾರ**—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. **ಪ್ರಾಣಿಶಾಸ್ತ್ರ**—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧.* **ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು**—ಜಿ. ಹನುಮಂತರಾವ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೨೨. **ಕನ್ನಡ ಕೈಪಿಡಿ** (ಭಾಗ ೫, ಸಾಹಿತ್ಯ ಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. **ಇಸ್ಲಾಂ ಸಂಸ್ಕೃತಿ**—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

ಸೂಪರಿಂಟೆಂಡೆಂಟ್,
ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು.

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎಲ್. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ.ಬಿ.ಎಸ್., ಎಂ.ಪಿ.ಎಚ್.

೯. ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ.ಬಿ.ಎಸ್., ಡಿ.ಪಿ.ಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರಿ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. ವಿದ್ಯುಚ್ಛಕ್ತಿಯ ಉಪಯೋಗ—ಮ. ಭೀ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್) ಸಿ.ಪಿ., ಇ.ಟಿ. (ಐ.ಐ.ಎಸ್.)

೧೨. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,
ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕನ್ನಡ ನುಡಿ', ಬೆಂಗಳೂರು; 'ಕಂಠೀರವ', ಮಂಗಳೂರು; 'ತಾಯಿನಾಡು', ಬೆಂಗಳೂರು; 'ನವಸಂದೇಶ', ಬಳ್ಳಾರಿ; 'ವಿಶ್ವಕರ್ಣಾಟಕ' ಬೆಂಗಳೂರು; 'ಸ್ವದೇಶಾಭಿಮಾನಿ' ಮಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಜನಶಕ್ತಿ', ಹುಬ್ಬಳ್ಳಿ; 'ವಾಹಿನಿ', ಬೆಂಗಳೂರು; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ' ಧಾರವಾಡ; 'ಜಯಂತಿ', ಧಾರವಾಡ; 'ಭಾರತಿ' (ತೆಲುಗು), ಮದರಾಸು; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿಮಾ ವಾಣಿಜ್ಯ', ಬೆಂಗಳೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; ಕಥಾವಳಿ', ಬೆಂಗಳೂರು; 'ತರಂಗರಂಗ', ಮೈಸೂರು; 'ಪುಸ್ತಕ ಪ್ರಪಂಚ', ಮೈಸೂರು; 'ವಾಣಿ', ಬೆಂಗಳೂರು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ; 'ಶ್ರೀಮನ್ ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲಾ ಪತ್ರಿಕಾ,' ಮೈಸೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ', ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟನೆಗಳು

ನಾಗಾನಂದನಾಟಕ (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)—
ಬೆಲೆ ರೂ. ೧—೦—೦

ಕಿರಿಯಕಾಣಿಕೆ (ಎರಡನೆಯ ಮುದ್ರಣ)— ಕ್ಯಾಲಿಕೊ ಪ್ರತಿ ರೂ. ೧—೮—೦

ಮಾರಾಟಗಾರರು :

ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

ಆಷಾಢಭೂತಿ (ಶ್ರೀ ಎ. ಎನ್. ಮೂರ್ತಿರಾವ್, ಎಂ.ಎ. ಅವರಿಂದ)—
ಕ್ಯಾಲಿಕೊ ಪ್ರತಿ ರೂ. ೧—೮—೦

ಸಾವಿನ ಸಮಸ್ಯೆ (ಶ್ರೀ ವೆಂಬಾರ್ ವೆಂಕಟಾಚಾರ್ಯ, ಎಂ.ಎ., ಬಿ.ಕಾಮ್., ಎಲ್‌ಎಲ್.ಬಿ. ಅವರಿಂದ)— ಸಾದಾ ಪ್ರತಿ ರೂ. ೦—೧೨—೦

ಮಾರಾಟಗಾರರು :

ಕೃಷ್ಣ ಮತ್ತು ಕಂಪನಿ, ಮೈಸೂರು

ಕರ್ಣಾಟಕ ಮೃಚ್ಛಕಟಿಕಪ್ರಕರಣಂ (ಆಸ್ಥಾನ ಕವಿ ಸಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦

ಮಾರಾಟಗಾರರು :

ಶ್ರೀ ರಾಮಚಂದ್ರ ಬುಕ್ ಡಿಪೊ,
ದೇವರಾಜ ಮಾರ್ಕೆಟ್, ಮೈಸೂರು

Edited by N. Anantharangachar, M.A., B.T. and T. S. Shama Rao, B.A. (Hon.)
Published by The University of Mysore, Mysore. Printed by J. Brown
at the Wesley Press and Publishing House, Mysore City

ಪ್ರಬುದ್ಧ ಕರ್ಣಾಟಕ

ಸಂಪುಟ ೩೨—ಸಂಚಿಕೆ ೩

೧೨೫

ವಿಕೃತಿ ಸಂವತ್ಸರ

ಆಶ್ವಯುಜ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೦

ವಿಷಯ ಸೂಚಿಕೆ

ವಿಷಯ	ಲೇಖಕರು	ಪುಟ
	ಶ್ರೀಯುತರಾದ	
೧. ಕುಮಾರಸಂಭವ (ನಾಲ್ಕನೆಯ ಸರ್ಗ)	ಎಸ್. ವಿ. ಪರಮೇಶ್ವರ ಭಟ್ಟ	೧
೨. ಕನ್ನಡ ಧ್ವನ್ಯಾಲೋಕ	ಡಾ|| ಕೆ. ಕೃಷ್ಣಮೂರ್ತಿ	೯
೩. ಕಾವ್ಯಕೃಪೆ (ಕವಿತೆ)	ಜಿ. ಎಸ್. ಶಿವರುದ್ರಪ್ಪ	೪೮
೪. ಗಂಗು	'ಅಶ್ವತ್ಥ'	೪೯
೫. ಜಾಲಿಯ ಹೂವು (ಕವಿತೆ)	ಜಿ. ಗುಂಡಣ್ಣ	೭೬
೬. ಜಗತ್ತುಗಳ ಹುಟ್ಟು ಸಾವು	ಆರ್. ಎಲ್. ನರಸಿಂಹಯ್ಯ	೭೭
೭. ಕಾವ್ಯಾವಲೋಕನ		೧೦೫
೮. ವಸ್ತುಕೋಶ		೧೨೫
೯. ಸಾದರ ಸ್ವೀಕಾರ		೧೨೯
೧೦. ಪ್ರಾಚ್ಯಲೇಖನಮಾಲೆ		೧೩೨

ಪ್ರಬುದ್ಧ ಕರ್ಣಾಟಕ

ವಿಕೃತಿ ಸಂವತ್ಸರ ೧೨೫ ಆಶ್ವಯುಜ ಸಂಚಿಕೆ

ಕುಮಾರಸಂಭವ

ನಾಲ್ಕನೆಯ ಸರ್ಗ

ಬಳಿಕ ವಿಧಿಯೆಚ್ಚರಿಸಿತಾ ಮೋಹೈಕ ಶರಣೆಯ
ರತಿಯ ವಿವಶೆಯ ಕಾಮನಂಗನೆಯ
ತಿಳಿಯಿಸಲ್ಕೆಂದವಳಿಗನುಭವದಿಂದ ನವ ವೈ-
ಧವ್ಯದಳಲಿನಸಹ್ಯ ವೇದನೆಯ. ೧

ಮೂರ್ಛೆಯವಸಾನದೊಳು ತಾನರೆತೆರೆದ ಕಂಗಳ
ನಾಟಿಸಿರ್ದಳು ಹುಡುಕುನೋಟದೊಳು
ಅರಿಯದಾದಳು ಆ ಅತೃಪ್ತಿಯ ಕಣ್ಗಳವುಗಳಿ-
ಗಿನಿಯನನಿಶಂ ಕಾಣದಾದುದನು. ೨

"ಜೀವಿಸಿರುವೆಯ ಜೀವಿತೇಶ್ವರ" ಎಂದು ಕೂಗುತ
ಲೇಳುವಂದಾ ಕ್ಷಿತಿಯೊಳವಳೆದುರು
ಕಂಡಳವಳಾ ಪುರುಷ ರೂಪದೊಳಿರುವ ಹರನುರು
ಕೋಪದನಲನ ಭಸ್ಮ ಕೇವಲವ. ೩

ವಸುಧೆಯುಪ್ಪಿದ ಧೂಸರಸ್ತನಿ ಬಿಚ್ಚಿಕೆದರಿದ
ಮುಡಿಯ ಸತಿಯುವಳಂದು ಕಡುನೊಂದು
ಮತ್ತೆ ಹಲುಬಿದಳಾಕೆ ವಿಹ್ವಲೆ ತನ್ನ ಸಮ ದುಃ
ಖಿನಿಯ ಗೈವವೊಲಾ ವನಸ್ಥಲಿಯ. ೪

ತನ್ನ ಕಾಂತಿಯಿನಾವ ಕರಣ ವಿಲಾಸಿಗಳಿಗುಪ
ಮಾನವೆಂದೆನಿಸಿರ್ದು ರಂಜಿಸಿತೊ
ಅದುವೆ ತಾನೀದಶೆಯ ಪಡೆದುಂ ಬಿರಿಯದಿರುವೆನು ;
ಸ್ತ್ರೀಯರತಿ ಕಠಿಣೆಯರು ದಿಟವಹುದು. ೫

ಸೇತು ಬಂಧನ ಬಿರಿದ ಜಲಸಂಘಾತ ತಾನಿರ-
ದೋಡುವಂದದೊಳುಳಿದು ಪದ್ಮಿನಿಯ
ಎನ್ನನೀ ತ್ವದಧೀನ ಜೀವಿಯಸುಳಿದು ನೀ ಕ್ಷಣ-
ಭಿನ್ನ ಸೌಹೃದನೆತ್ತಲೈದಿದೆಯೊ ! ೬

ನನ್ನ ಕುರಿತಪ್ರಿಯವ ಗೈದವನಲ್ಲ, ನಾ ಪ್ರತಿ
ಕೂಲೆಯಾದವಳಲ್ಲ ನಿನಗೆಂದು.
ನೀನಕಾರಣವೇಕೆ ದರ್ಶನವೀಯದಿರುವೆಯೊ
ಮತ್ತೆ ವಿಲಪಿಸುತಿರುವ ರತಿಗಿಂದು. ೭

ಸ್ಮರನೆ ಮೇಖಲೆಯಿಂದ ಕಟ್ಟಿದೆನ್-ಅನ್ಯ ನಾಮ
ಸ್ಮರಣವಾದೊಡನದನು ಸ್ಮರಿಸುವೆಯ !
ಬಿಳ್ದ ಹುಡಿಯೊಳು ನೋಟಮುಸುಳ್ದವತಂಸದುತ್ಪಲ
ತಾಡನಂಗಳನದನು ಸ್ಮರಿಸುವೆಯ ! ೮

ಎನ್ನನೊಲಿಯಿಸಲಂದು ಹೃದಯದೊಳಿರುವೆಯೆಂದುದ
ನಿಂದು ಕೈತವವೆಂದು ಬಗೆಯುವೆನು.
ಔಪಚಾರಿಕವಲ್ಲದಿರಲಾಮಾತು ರತಿಯ-
ಕ್ಷತಳು ತಾನೆಂತತನು ನೀನೆಂತು ! ೯

ಪೊಸತು ಪಯಣದೊಳತ್ತ ಪರವನು ಕುರಿತ ನಿನ್ನನು
ನಾನು ಬಹೆನನುಸರಿಸಿ ಬಳಿವಿಡಿದು.
ದೈವವಂಚಿತವಾದುದೀ ಜನವಿಂದು ದೇಹಿಗ-
ಳೊಂದು ಸುಖ ದಲ್ ನಿನ್ನಧೀನದೊಳು ! ೧೦

ರಜನಿಯೊಳು ತಿಮಿರಾವಗುಂಠಿತ ಪೌರಮಾರ್ಗದೊ
ಳಿರದೆ ಘನರವಕಳುಕುವಬಲೆಯರ
ಕಾಮಿಜನರಾವಾಸಕೈದಿಸಲಿನಿಯ ನೀನಿರ
ದಿರಲದಿನ್ನಾರಾರ್ಪರಿಂದಿಹರು. ೧೧

ಕೆಂಪು ಕಣ್ಣಾಲಿಗಳನಡಿಗಡಿಗಿರದೆ ತಿರುಗಿಸಿ
ಮತ್ತೆ ತೊದಲುಲಿಗಳನು ನುಡಿನುಡಿದು
ಮೆರೆವ ಪ್ರಮದಾಜನರ ವಾರುಣಿಮದ ವಿಡಂಬನ
ವಹುದು ನೀನಿಂದಿಲ್ಲದಿರುವಂದು. ೧೨

ಲೋಕವೃತ್ತಾಂತಾವಶೇಷವಿದಾದುದೀ ಪ್ರಿಯ
ಬಂಧುವಿನ ತನುವೆಂದು ತಿಳಿದಂದು
ಬಹುಳ ಸಂದೊಡಮುಳಿವನತಿದುಃಖದೊಳು ತನುತೆಯ
ನಿಷ್ಫಲೋದಯನೀ ನಿಶಾಕರನು. ೧೩

ಗಂಡುಗೋಗಿಲೆಯುಲಿಯ ಕಲರವದಿಂದಲೆಸೆಯುವ
ಹಸುರುಗೆಂಪಿನ ಚಾರು ನನೆಕೊನೆಯ
ನವರಸಾಲಪ್ರಸವ ತಾನಿಂದಿರದೆ ಪೇಳೆ
ನಿನ್ನಿಯು ಪಡೆದಪುದಾರ ಶರಗತಿಯು. ೧೪

ಹಲವುಸಲ ಕಾರ್ಮುಕದ ಮೌರ್ವಿಯ ಕಾರ್ಯಭರದೊಳು
ತಾ ನಿಯೋಜತವಾಂತ ಅಳಿಪಂಕ್ತಿ
ತನ್ನ ಕರುಣಸ್ವನದ ವಿರುತಗಳಿಂದಲಳುವಂ
ತಿಹುದು ಗುರುತರ ಶೋಕವಿಕಳೆಯನು. ೧೫

ನೀ ಮನೋಹರ ವಪುವ ತಳೆದೆಳ್ಚರುತಲಿರದೈ
    ತಂದು ಪುನರಾದೇಶಿಸೆನ್ನಿನಿಯ
ಸುರತ ದೂತಿಯು ಪದದೊಳೀಕೋಗಿಲೆಯು ಮಧುರಾ
    ಲಾಪ ಚದುರೆಯು ಸಹಜಪಂಡಿತೆಯು. ೧೬

ಮುಡಿಯು ಬಾಗಿಸಿ ಬೇಡಿ ಪಡೆದನುಕಂಪ ಸಹಿತಾ-
    ಲಿಂಗನವನೇಕಾಂತ ಸುರತವನು
ಸ್ಮರನೆ ನಾ ಮಗುಳ್ದಿರದೆ ಸಂಸ್ಮರಿಸುತ್ತಲಿರಲದ
    ರಿಂದ ದೊರೆಯದು ಶಾಂತಿಯೆನಗಿಂದು. ೧೭

ನೀನೆ ನನ್ನಂಗಗಳಲಂದಿರದೋವೊ ರತಿ ಪಂ
    ಡಿತನೆ ರಚಿಯಿಸಿದಾ ಋತೋಚಿತದ
ಪುಷ್ಪದಾಭರಣಗಳಧರಿಸಿಹೆನಾದರೇನಾ
    ಚಾರು ವಪುವನು ಕಾಣದಿಹೆನಿಂದು. ೧೮

ಪಾದಪರಿಕರ್ಮವನು ಮುಗಿಸುವ ಮೊದಲೆ ವಿಬುಧರು
    ನಿನ್ನ ನೆನೆದರು ಪರಮ ದಾರುಣರು.
ಮತ್ತೆ ನನ್ನೀ ದಕ್ಷಿಣೇತರ ಚರಣವಿದನೀ
    ರಾಗ ನಿರ್ಮಿತವೆನಿಸಲೈತಾರ. ೧೯

ಪ್ರಿಯನೆ ಪುನರುತ್ಸಂಗವರ್ತಿನಿಯಾಗಲಿರುವೆನು
    ನಾ ಪತಂಗದ ದಾರಿವಿಡಿದಿಂದು
ನೀ ವಿಲೋಭನಗೊಳುವ ಮೊದಲಾ ಚತುರ ಸುರ
    ಕಾಮಿನಿಯರಿಂದಾ ನಾಕಲೋಕದೊಳು. ೨೦

ಮದನನಿಂದಗಲಿರುವ ರತಿ ಕ್ಷಣಮಾತ್ರವಾದರ
    ದೇನು ಬದುಕಿದಳೆನುವ ಪಳಿಯೊಂದು
ರಮಣ ನೆಲೆ ನಿಲ್ಲುವುದು ನನ್ನೊಳು ಮತ್ತೆ ನಾ ಬರ
    ಲಿರುವೆನಾದರು ನಿನ್ನ ಬಳಿವಿಡಿದು. ೨೧

ನೀನು ಪರದಿಂದಂತರಿತನಿರಲಿಂತು ನಾನೆಂ
ತಂತ್ಯ ಮಂಡನವಿದನು ರಚಿಯಿಸಲಿ
ಜೀವವೆಂತಂತಿಂದು ತನು ತಾನಿರದತಾರ್ಕಿಕ
ಗತಿಯ ಪಡೆದಿರಲೇಕ ಕಾಲದಲಿ. ೨೨

ಅಂಕಗತ ಕೋದಂಡನಾಗಿರ್ದಂಬನಾರ್ಜವ
ಗೊಳಿಸುತಾ ಮಧುವೊಡನೆ ನೀನುಡಿದ
ಸಸ್ಮಿತಾಲಾಪವನು ನೆನೆವೆನು ನೆನೆವೆ ಮೇಣಾ
ನಿನ್ನ ನಯನೋಪಾಂತ ಲೋಕನವ. ೨೩

ನಿನ್ನ ಬಿಲ್ಲನು ಹೂಗಳಿಂದಣಿಗೈವ ಸಖನವ
ನೆಲ್ಲಿ ಹೃದಯಂಗಮನು ಮಾಧವನು.
ಉಗ್ರರೋಷದ ಶೂಲಧರನಿಂದಾತನಾದರು
ಸುಹೃದನಾದುದನಾಗಲಿಲ್ಲ ಗಡ! ೨೪

ನಂಜಿಸಂಬುಗಳಿಂದಲೆಂತಂತವಳ ರೋದನ
ದುಲಿಯೊಳಾ ಮಧು ಘೂಸಿವಡೆದವನು
ರತಿಯನಾಪನ್ನೆಯನು ಕರುಣಿಸಿ ಸಂತವಿಡಲೆಂ
ದಂದು ಕಾಣಿಸಿಕೊಂಡನವಳೆದುರು. ೨೫

ಅವನ ಕಂಡೊಡನಳುತಲೆದೆಯನು ಮೋದಿಕೊಂಡಳು—
ರೋಜ ನೋಯುವ ತೆರದೊಳಂದವಳು
ತೆರೆದ ಬಾಗಿಲ ತೆರದೊಳುಣ್ಮುವುದಹುದು ದುಗುಡವು
ಬಂಧು ಜನರೈತಂದ ವೇಳೆಯೊಳು. ೨೬

ಅವನನಿಂತಾ ದುಃಖವತಿ ನುಡಿಸಿದಳು: "ಮಾಧವ
ನೋಡು ಸುಹೃದನೊಳುಳಿದುದೇನೆಂದು
ಪಾರಿವಾಳದ ಬೂದು ಬಣ್ಣದ ಭಸ್ಮ ಕಣಗಳ
ನೆರಚುತಿರುವುದು ಗಾಳಿ ಕಾಣ್ ಇಂದು." ೨೭

ನೀಡು ನೀ ದರ್ಶನವನಿಂದಿರದೋವೊ ಮನ್ಮಥ!
ದರ್ಶನೋತ್ಸುಕನಿವನು ಮಾಧವನು.
ಮತ್ತೆ ವಲ್ಲಭರೊಲುಮೆ ಸತಿಯರೊಳಚಿರವಾದೊಡ
ದೇನು ಸುಸ್ಥಿರವಷ್ಟೆ ಗೆಳೆಯರೊಳು. ೨೮

ನಿನ್ನ ಸಹಚರನೀವಸಂತನು ದೇವ ದಾನವ
ಸಹಿತವಾದೀ ಲೋಕ ಸರ್ವವನು
ಲಲಿತ ಸುಮ ಸಾಯಕದ ಬಿಸತಂತುವಿನ ಮೌರ್ವಿಯ
ಚಾಪದಾಜ್ಞಾಧೀನವೆನಿಸಿಹನು. ೨೯

ಹೋದನಾತನು ನಿನ್ನ ಗೆಳೆಯನು ಮರಳಿ ಬಾರನು
ಅನಿಲ ಆಹತ ದೀಪದಂದದೊಳು.
ನೋಡು ನಾನಿಂದದರ ದಶೆಯೊಲು ಸಹಿಸಲಸದಳ
ವೆನಿಸುವಳಲಿನ ಹೊಗೆಯೊಳುಳಿದಿಹೆನು. ೩೦

ನನ್ನನುಳಿಯಿಸಿ ಕೊಂದು ಕಾಮನನಿಂದು ವಿಧಿ ತಾ
ನರ್ಧ ವೈಶಸ ಕೃತ್ಯವೆಸಗಿಹುದು.
ಬಳ್ಳಿಯದು ಅನಪಾಯವೆಂದಡರಿರ್ದ ಮರವನು
ಆನೆ ಮುರಿದೊಡನಿರದೆ ಹರಿಯುವುದು. ೩೧

ಮಾಡು ನೀನದರಿಂದಲೆನ್ನನು ಕುರಿತ ಮೇಣೀ
ಬಂಧುಜನ ಕರ್ತವ್ಯ ಕರ್ಮವನು
ಬಳಿಕ ವಿಧುರೆಯನಗ್ನಿಗಾಹುತಿಯಿತ್ತು ಸೇರಿಸು
ಪತಿಯ ಸಾಮೀಪ್ಯವನು ನೀನಿಂದು. ೩೨

ಶಶಿಯನನುಸರಿಸುವುದು ಕೌಮುದಿ ಮೇಘವಳಿದೊಡ
ನಿರದೆ ಸೌದಾಮಿನಿಯುಮಳಿಯುವುದು
ಪ್ರಮದೆಯರು ಪತಿ ವರ್ತ್ಮಗಾಮಿಗಳೆನುವ ತತ್ವವ
ನಾ ವಿಚೇತನ ತಾನುಮರಿತಿಹುದು. ೩೩

ಸುಭಗವಾದೀ ಪ್ರಿಯನ ದೇಹದ ಭಸ್ಮದಿಂದ ಕ
    ಷಾಯಿತಸ್ತನಿಯಾಗಿ ನಾನಿಂದು
ಮತ್ತೆ ನವಪಲ್ಲವದ ತಲ್ಪದೊಳೆಂತು ಅಂತಿರ
    ದಗ್ನಿಯೊಳಗಿರಿಸುವೆನು ತನುವಿದನು. ೩೪

ಹಲವು ಸಲ ನೀನಲರ ಹಾಸನು ಹಾಸಿ ಸೌಮ್ಯನೆ
    ಅಂದು ನಮಗಿರ್ವರಿಗೆ ನೆರವಾದೆ
ವಂದನಾಂಜಲಿಯಿಂದಲೆರೆಯುವೆನಂತೆ ವಹಿಲದೊ
    ಳೆನಗೆ ಚಿತೆಯನು ರಚಿಸು ನೀನಿಂದೆ. ೩೫

ತ್ವರಿತಗೊಳಿಸೈ ತೆಂಕಣೆಲರಿನ ಪಂಕದಿಂದಾ
    ಬಳಿಕ ನನಗರ್ಪಿಸಿದ ವಹ್ನಿಯನು
ಕ್ಷಣವನಾದೊಡಮೆನ್ನನುಳಿದುತ್ಸಾಹಗೊಳ್ಳನ-
    ನಂಗನೆನುವುದನರಿವೆ ನೀನಲ್ತೆ! ೩೬

ಮತ್ತೆ ನೀನಿಂತೆಸಗಿದಾಬಳಿಕೀವುದಿರ್ವರಿ
    ಗೇಕ ಸಲಿಲಾಂಜಲಿಯ ದಾನವನು
ಪಾಲುಗೈಯದೆ ಅದನು ಪರದೊಳು ಅವನು ನಿನ್ನಾ
    ಸಖನು ನನ್ನೊಡಗೂಡಿ ಕುಡಿಯುವನು. ೩೭

ಸ್ಮರನ ಕುರಿತಿಂತೆಸಗುವಾ ಪರಲೋಕ ವಿಧಿಯಲಿ
    ಲೋಲ ಪಲ್ಲವದಾಮ್ರ ಮಂಜರಿಯ
ಓವೊ ಮಾಧವ ನೀಡು ನಿನ್ನಾ ಗೆಳೆಯನಾತನು
    ಚೂತ ಕುಸುಮ ಪ್ರೀತ ತಾನಲ್ತೆ! ೩೮

ಮೈಯ ತಾನಿಂತಳಿವ ಕೃತನಿಶ್ಚಯೆಯ ಕರುಣಿಸಿ
    ತಂದು ಬಾನಿಂದೊಗೆದ ದನಿಯೊಂದು
ಮೊದಲ ಮಳೆವನಿ ಕರುಣಿಪಂದದೊಳಂದು ಮಡುವೊಣ
    ಗಿರುವ ದುಗಡದೊಳಳಿವ ಶಫರಿಯನು. ೩೯

ಓವೊ ಕುಸುಮಾಯುಧನ ಪತ್ನಿಯೆ! ನಿನ್ನ ಭರ್ತನು
    ಮತ್ತೆ ಚಿರ ದುರ್ಲಭನು ತಾನಿರನು

ಕೇಳು ಆ ಹರ ಲೋಚನಾರ್ಚಿಯ ಶಲಭ ತಾನವ
ನಾವ ಕರ್ಮದೊಳಾದನೆನುವುದನು. ೪೦

ತನ್ನ ಕುವರಿಯೊಳಂದು ತಾನಭಿಲಾಷೆಗೊಂಡಿರ
ಲಾವಿಧಾತನುದೀರಿತೇಂದ್ರಿಯನು
ಬಳಿಕ ವಿಕ್ರಿಯುವದನು ನಿಗ್ರಹಿಸಿರ್ದನಿಂದಭಿ-
ಶಪ್ತನಾದಿವನಾಂತನೀ ಫಲವ. ೪೧

ತಪಕೆ ನಲಿದೊಲಿದಿರ್ದ ಹರನಿನ್ನೆಂದು ಪರಿಣಯ
ಕೆಂದು ಕೈವಿಡಿಯುವನೊ ಪಾರ್ವತಿಯು
ಅಂದು ತಾನುಪಲಬ್ಧ ಸುಖದವನೊಂದುಗೂಡಿಸ
ಲಿಹನನಂಗನನಂಗದೊಡನೊಲಿದು. ೪೨

ಧರ್ಮ ಕೇಳಿದನೆಂದು ಪೇಳಿದನಾ ವಿಧಾತನು
ಸ್ಮರನ ಶಾಪಾವಧಿಯ ವಚನವನು.
ಅಶನಿ ಅಮೃತದ್ವಯಕೆ ತಾವಾಧಾರರಾಗಿಹ
ರಂಬುಧರದಂತಾ ಜಿತೇಂದ್ರಿಯರು! ೪೩

ಮುಂದೆ ಪತಿಸಂಗಮವ ಪಡೆಯುವ ವಪುವನದರಿಂ
ದೋವೊ ಶೋಭನೆ! ನೀನು ರಕ್ಷಿಪುದು.
ತಪನು ನೀರನು ಕುಡಿದ ನದಿ ಬೇಸಗೆಯ ಕೊನೆಯೊಳು
ಮರಳಿ ಜಲದೋಘವನು ಸೇರುವುದು. ೪೪

ಆವುದೋ ಒಂದಗೋಚರಸತ್ವವಂದಿಂತು ಬಂದು
ಮಂದ್ಯೆಸಿತಾರತಿಯ ಮರಣಕುದ್ಯೋಗಿಸುವ ಮತಿಯ ತಾನಂದು.
ವಿಶ್ವಾಸವಿಟ್ಟದರೊಳಾಶ್ವಾಸಗೈದನಾ ಕುಸುಮಾಸ್ತ್ರ ಬಂಧು
ಮತ್ತಿನ ಸುಚರಿತಾರ್ಥಪದಗಳಿಂದೆಸೆವ ವಚನಂಗಳಂ ನುಡಿದು. ೪೫

ವ್ಯಸನ ಕೃಶೆಯನಂಗ ವಧು ನಿರೀಕ್ಷಿಸುತ್ತಲಿರ್ದಳಂದುಪಪ್ಲವಾಂತಮಮ್
ಕಿರಣಕಂದಿ ಮಲಿನಗೊಂಡು ದಿವದೊಳೊಗೆದ ಶಶಿಯ ಲೇಖೆ
ಪಾರುವೊಲ್ ಪ್ರದೋಷಮಮ್. ೪೬

ಎಸ್. ವಿ. ಪರಮೇಶ್ವರ ಭಟ್ಟ.

ಕನ್ನಡ ಧ್ವನ್ಯಾಲೋಕ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಕಾರಿಕೆ

ಕ್ರಮೇಣ ಪ್ರತಿಭಾತ್ಯಾತ್ಮಾ ಯೋಽಸ್ಯಾನುಸ್ವಾನಸನ್ನಿಭಃ।
ಶಬ್ದಾರ್ಥಶಕ್ತಿಮೂಲತ್ವಾತ್ಸೋಽಪಿ ದ್ವೇಧಾ ವ್ಯವಸ್ಥಿತಃ ॥ ೨೦ ॥

ಈ ಧ್ವನಿಯ ಆತ್ಮವು, ನಾದದ ಅನುರಣನದಂತೆ, ಕ್ರಮವು ಗೋಚರವಾಗುವ ರೀತಿಯಲ್ಲಿ ನಮ್ಮ ಅರಿವಿಗೆ ಬರುವುದು. ಮತ್ತೆ ಅದನ್ನು 'ಶಬ್ದಶಕ್ತಿಮೂಲ' ಮತ್ತು 'ಅರ್ಥಶಕ್ತಿಮೂಲ' ಎಂದು ಎರಡು ಪ್ರಕಾರವಾಗಿ ವ್ಯವಸ್ಥೆ ಮಾಡಲಾಗಿದೆ.

ವೃತ್ತಿ

ಈ 'ವಿವಕ್ಷಿತಾನ್ಯಪರವಾಚ್ಯ'ವೆಂಬ ಧ್ವನಿಯ ಸ್ವರೂಪವು ಸಂಲಕ್ಷ್ಯವಾದ ಕ್ರಮವುಳ್ಳ ವ್ಯಂಗ್ಯವಾದುದರಿಂದ, ಅದು (ನಾದದಿಂದ ಬರುವ) ಅನುರಣನವನ್ನು ಹೋಲುತ್ತದೆ. ಅದು ಮತ್ತೆ ಎರಡು ಬಗೆಯಾಗಿದೆ: 'ಶಬ್ದ'ದ ಶಕ್ತಿಯಿಂದುಂಟಾದುದು, 'ಅರ್ಥ'ದ ಶಕ್ತಿಯಿಂದುಂಟಾದುದು, ಎಂದು.

ಹೀಗೆ 'ಶಬ್ದ'ದ ಶಕ್ತಿಯಿಂದ ಎಲ್ಲಿ ಬೇರೆ ಅರ್ಥವು ಸ್ಫುರಿಸುತ್ತಿರುವುದೋ, ಅದನ್ನು 'ಧ್ವನಿ'ಯ ಪ್ರಕಾರವೆಂದು ಹೇಳುವುದಾದರೆ, ಆಗ 'ಶ್ಲೇಷ'ವೆಂಬ ಅಲಂಕಾರದ ಕ್ಷೇತ್ರವನ್ನೆಲ್ಲ ಅಪಹರಿಸಿದಂತಾಗುವುದಿಲ್ಲವೆ ಎಂದು ಯಾರಾದರೂ ಕೇಳಬಹುದು. 'ಆಗುವುದಿಲ್ಲ'ವೆಂದು ಮುಂದಿನ ಕಾರಿಕೆಯು ಹೇಳುತ್ತದೆ:

ಕಾರಿಕೆ

ಆಕ್ಷಿಪ್ತ ಏವಾಲಂಕಾರಃ ಶಬ್ದಶಕ್ತ್ಯಾ ಪ್ರಕಾಶತೇ।
ಯಸ್ಮಿನ್ನನುಕ್ತಃ ಶಬ್ದೇನ ಶಬ್ದಶಕ್ತ್ಯುದ್ಭವೋ ಹಿ ಸಃ ॥ ೨೧ ॥

ಯಾವ ಲಕ್ಷ್ಯದಲ್ಲಿ ಶಬ್ದದಿಂದ ನೇರವಾಗಿ ವಾಚ್ಯವಾಗಿರದ ಮತ್ತು ಕೇವಲ ಶಬ್ದಶಕ್ತಿಯಿಂದ ಧ್ವನಿತವಾಗುತ್ತಿರುವ, ಅಲಂಕಾರವಿರುವುದೋ, ಅದು ಮಾತ್ರ ಶಬ್ದಶಕ್ತಿ-ಮೂಲಧ್ವನಿ.

ವೃತ್ತಿ

ಏಕೆಂದರೆ, ಶಬ್ದಶಕ್ತಿಯಿಂದ ಸ್ಫುರಿಸುವ 'ಅಲಂಕಾರ'ವೆಲ್ಲಿರುವುದೋ ಅದು ಮಾತ್ರ ಶಬ್ದಶಕ್ತಿಮೂಲಧ್ವನಿಯೆಂದು ನಮ್ಮ ಅಭಿಪ್ರಾಯವೇ ಹೊರತು, ಶಬ್ದ ಶಕ್ತಿಯಿಂದ ಸ್ಫುರಿಸುವ 'ವಸ್ತು'ಗಳಿರುವೆಡೆಯಲ್ಲಿಯೂ ಈ ಧ್ವನಿಯಿದೆಯೆಂದಲ್ಲ. ಹಾಗೆ ಶಬ್ದಶಕ್ತಿಯಿಂದ ಎರಡು 'ವಸ್ತು'ಗಳು ಅರ್ಥವಾಗುತ್ತಿರುವ ಸ್ಥಳವು ಶ್ಲೇಷಾಲಂಕಾರಕ್ಕೆ ಲಕ್ಷ್ಯವೆಂದು ನಾವೂ ಒಪ್ಪುತ್ತೇವೆ. ಉದಾಹರಣೆ:

ಯೇನ ಧ್ವಸ್ತಮನೋಭವೇನ ಬಲಿಜಿತ್ಕಾಯಃ ಪುರಾಸ್ತ್ರೀಕೃತೋ
ಯಶ್ಚೋದ್ವೃತ್ತಭುಜಂಗಹಾರವಲಯೋ ಗಂಗಾಂ ಚ ಯೋऽಧಾರಯತ್ |
ಯಸ್ಯಾಹುಃ ಶಶಿಮಚ್ಛಿರೋ ಹರ ಇತಿ ಸ್ತುತ್ಯಂ ಚ ನಾಮಾಮರಾಃ
ಪಾಯಾತ್ಸಃ ಸ್ವಯಮನ್ಧಕಕ್ಷಯಕರಸ್ತ್ವಾಂ ಸರ್ವದೋಮಾಧವಃ ||

[ಹರನ ಪರವಾದ ಅರ್ಥ: ಯಾರಿಂದ ಮನ್ಮಥನ ವಿಧ್ವಂಸವಾಯಿತೋ, ಯಾರಿಂದ ಬಲಿಯನ್ನು ಗೆದ್ದ ವಿಷ್ಣುವಿನ ದೇಹವೇ ಹಿಂದೆ ಬಾಣವಾಗಿ ಮಾಡಿ ಕೊಳ್ಳಲ್ಪಟ್ಟಿತೋ, ದೊಡ್ಡ ಹಾವುಗಳೇ ಯಾರ ಹಾರ ಮತ್ತು ಬಳೆಗಳಾಗಿವೆಯೋ, ಮಂದಾಕಿನಿಯನ್ನು ಯಾರು (ತಲೆಯಲ್ಲಿ) ಧರಿಸಿದನೋ, ಯಾರನ್ನು ಚಂದ್ರಮೌಳಿ ಯೆಂದೂ ಹರನೆಂದೂ ಅಮರರು ಸ್ತುತಿಸಿರುವರೋ, ಆ ಅಂಧಕಾಸುರಸಂಹಾರಕನೂ ಪಾರ್ವತೀವಲ್ಲಭನೂ ಆದ ಭಗವಂತನು ನಿನ್ನನ್ನು ಸರ್ವದಾ ರಕ್ಷಿಸಲಿ!

ಹರಿಯ ಪರವಾದ ಅರ್ಥ: ಸ್ವಯಂ ಅಜಾತನೆನಿಸಿದ ಯಾರಿಂದ ಶಕಟಾಸುರನು ಹತನಾದನೋ, ಬಲಿಯನ್ನು ಗೆದ್ದಂತಹ ಯಾರ ಶರೀರವು ಹಿಂದೆ ಸ್ತ್ರೀರೂಪವನ್ನು ತಾಳಿತೋ, ಯಾರು ಕೊಬ್ಬಿದ ಕಾಳಿಂಗನನ್ನು ಸಂಹರಿಸಿದನೋ, ಯಾರು ಪರ್ವತ ವನ್ನೂ ಭೂಮಿಯನ್ನೂ ಉದ್ಧರಿಸಿದನೋ, ರಾಹುಶಿರಶ್ಛೇದಕನೆಂಬ ಯಾರ ಪವಿತ್ರನಾಮವನ್ನು ದೇವತೆಗಳೂ ಕೊಂಡಾಡುವರೋ, ಅಂಧಕರೆಂಬ ಯಾದವರಿಗೆ ಯಾರು ಸ್ವಂತವಾಗಿ ವಿನಾಶವನ್ನು (ವಸತಿಯನ್ನು?) ಕಲ್ಪಿಸಿಕೊಟ್ಟನೋ, ಆ ಸಕಲೇಷ್ಟಾರ್ಥಪ್ರದಾಯಕನಾದ ಮಾಧವನು ನಿನ್ನನ್ನು ಸಂರಕ್ಷಿಸಲಿ!]

ಒಂದು ಅಲಂಕಾರದಿಂದ ಇನ್ನೊಂದು ಅಲಂಕಾರದ ಪ್ರತೀತಿ ಬರುತ್ತಿರುವ ಕಡೆಗಳಲ್ಲಿಯೂ ಉದ್ಭಟಭಟ್ಟನು ಶ್ಲೇಷವೆಂಬ ಹೆಸರೇ ಅನ್ವಯಿಸುವುದೆಂದು ತೋರಿ ಸಿರುವನು. ಎಂದಮೇಲೆ ತಿರುಗಿಯೂ ಶಬ್ದಶಕ್ತಿಮೂಲಧ್ವನಿಗೆ ಅವಕಾಶವಿಲ್ಲವೆಂಬ ಆಶಂಕೆಯು ಬಂದೇ ಬರುವುದಿಲ್ಲವೆ? ಎಂಬ ಪ್ರಶ್ನೆಗೆ ಸಮಾಧಾನ ಹೇಳುವುದ ಕ್ಕಾಗಿಯೇ ಕಾರಿಕೆಯಲ್ಲಿ 'ಆಕ್ಷಿಪ್ತಃ' (=ಧ್ವನಿತವಾಗುತ್ತಿರುವ) ಎಂಬ ವಿಶೇಷಣ ವನ್ನು ಸೇರಿಸಿರುವುದು. ಆದುದರಿಂದ ತಾತ್ಪರ್ಯವಿಷ್ಟೆ:—ಎಲ್ಲಿ ಶಬ್ದದ ಶಕ್ತಿಯಿಂದ

ನೇರವಾಗಿ ವಾಚ್ಯವೇ ಆದ ಬೇರೊಂದು ಅಲಂಕಾರವು ಭಾಸವಾಗುವುದೋ ಅದೆಲ್ಲ ಶ್ಲೇಷಾಲಂಕಾರಕ್ಕೇ ಲಕ್ಷ್ಯ; ಆದರೆ ಎಲ್ಲಿ ಶಬ್ದದ ಶಕ್ತಿಯಿಂದ (ಎಂದರೆ ಶಬ್ದಗಳ ಸಾಮರ್ಥ್ಯದಿಂದ) ಕೇವಲ ಧ್ವನಿತವಾಗುತ್ತಿರುವ (ಎಂದರೆ ವಾಚ್ಯವಾದ ಅಲಂಕಾರಕ್ಕಿಂತ ಭಿನ್ನವಾದ) ಬೇರೊಂದು ಅಲಂಕಾರವು ಭಾಸವಾಗುವುದೋ, ಅದು ಈ ಧ್ವನಿಗೆ ಲಕ್ಷ್ಯ. ಶಬ್ದಶಕ್ತಿಯಿಂದ ನೇರವಾಗಿಯೇ ವಾಚ್ಯವಾದ ಬೇರೊಂದು ಅಲಂಕಾರವು ಭಾಸವಾಗುವುದಕ್ಕೆ ಉದಾಹರಣೆ :—

ತಸ್ಯಾ ವಿನಾಪಿ ಹಾರೇಣ ನಿಸರ್ಗಾದೇವ ಹಾರಿಣೌ |
ಜನಯಾಮಾಸತು: ಕಸ್ಯ ವಿಸ್ಮಯಂ ನ ಪಯೋಧರೌ ||

ಹಾರವೆ ಇಲ್ಲದೆ ಹುಟ್ಟಿನ ಗುಣದಿಂ
ಹಾರಿಗಳೆನಿಸುವುವು |
ಆಕೆಯ ಕುಚಗಳು ಎಂದೊಡದಾರಿಗೆ
ವಿಸ್ಮಯವುಕ್ಕಿಸವು ||

ಇಲ್ಲಿ ವರ್ಣಿತವಾಗಿರುವ ವಿಸ್ಮಯವು ಶೃಂಗಾರರಸದ ಸಂಚಾರಿಭಾವ. ಇದರೊಂದಿಗೆ ನೇರವಾಗಿ ವಿರೋಧಾಲಂಕಾರವೂ ಸ್ಫುರಿಸುತ್ತದೆ. ಆದುದರಿಂದ ಇದನ್ನು ವಿರೋಧಾಲಂಕಾರಕ್ಕೆ ಪುಷ್ಟಿಕೊಡುವ ಶ್ಲೇಷಾಲಂಕಾರದ ಲಕ್ಷ್ಯವೆನ್ನಬೇಕೇ ಹೊರತು ಅನುರಣನರೂಪವಾದ ವ್ಯಂಗ್ಯವುಳ್ಳ ಧ್ವನಿಗೆ, ಎಂದರೆ ಅಸಂಲಕ್ಷ್ಯಕ್ರಮ ಧ್ವನಿಗೆ, ಲಕ್ಷ್ಯವೆನ್ನಬಾರದು. ಆದರೂ ಇಲ್ಲಿ ವಾಚ್ಯವಾದ ಶ್ಲೇಷ ಅಥವಾ ವಿರೋಧಾಲಂಕಾರದಿಂದ ಧ್ವನಿತವಾಗುತ್ತಿರುವ ಶೃಂಗಾರರಸವು ಮಾತ್ರ ಸಂಲಕ್ಷ್ಯಕ್ರಮಧ್ವನಿಗೆ ಉದಾಹರಣೆಯಾಗಲು ಅಡ್ಡಿಯಿಲ್ಲ. ಇದಕ್ಕೇ ಇನ್ನೊಂದು ಉದಾಹರಣೆ[1] :—

ಶ್ಲಾಘ್ಯಾಶೇಷತನುಂ ಸುದರ್ಶನಕರ: ಸರ್ವಾಂಗಲೀಲಾಜಿತ-
ತ್ರೈಲೋಕ್ಯಾಂ ಚರಣಾರವಿಂದಲಲಿತೇನಾಕ್ರಾನ್ತಲೋಕೋ ಹರಿ: |
ಬಿಭ್ರಾಣಾಂ ಮುಖಮಿನ್ದುರೂಪಮಖಿಲಂ ಚನ್ದ್ರಾತ್ಮಚಕ್ಷುರ್ದಧತ್
ಸ್ಥಾನೇ ಯಾಂ ಸ್ವತನೋರಪಶ್ಯದಧಿಕಾಂ ಸಾ ರುಕ್ಮಿಣೀ ವೋऽವತಾತ್ ||

ನಿಶ್ಶೇಷ ತನುಕಾಂತಿಭರಿತಳಾ ರುಕ್ಮಿಣಿಯು
ತಾ ಸುದರ್ಶನಕರನು[2] ಹರಿಯು ನೋಡೆ|

---

[1] ಈ ಉದಾಹರಣಶ್ಲೋಕವು ಆನಂದವರ್ಧನನೇ ಬರೆದುದು.

[2] ಸುದರ್ಶನ ಚಕ್ರವನ್ನು ಕೈಯಲ್ಲುಳ್ಳವನು ಅಥವಾ ರಮಣೀಯವಾದ ಕೈಗಳುಳ್ಳವನು.

ಸರ್ವಾಂಗಲೀಲೆಯಿಂ ತ್ರೈಲೋಕ್ಯವಿಜಯವನು
ಸಾಧಿಸಿರುತಿರಲಾಕೆ ತಾನು ಮಾತ್ರ।
ಪಾದಾರವಿಂದದಾ ವಿಭ್ರಮದೆ ಲೋಕಗಳ-
ನಳೆದು ಜಗಕದ್ಭುತವ ತೋರಿರುವನು।
ಚಂದ್ರರೂಪವನವಳ ಮೊಗವೆಲ್ಲ ತಳೆದಿರಲು
ಚಂದ್ರನಾಗಿದೆ ತನ್ನ ಕಣ್ಣು ಮಾತ್ರ।
ಇಂತಾರ ಹರಿ ನೋಡಿ ಯುಕ್ತ್ಯಯೋಚನೆ ಮಾಡಿ
ತನ್ನೊಡಲಿಗಿಂತಧಿಕವೆಂದರಿತನೋ।
ಆ ದೇವಿ ರುಕ್ಮಿಣಿಯೆ ನಮ್ಮನಿಮ್ಮೆಲ್ಲರನು
ಪೊರೆಯುತಿರಲನವರತ ದಯೆಗೈಯುತ॥

ಇಲ್ಲಿ ವ್ಯತಿರೇಕಾಲಂಕಾರದ ಛಾಯೆಗೆ ಪುಷ್ಟಿಕೊಡುವ ಶ್ಲೇಷಾಲಂಕಾರವು ವಾಚ್ಯವೇ ಆಗಿದೆ. ಇನ್ನೂ ಒಂದು ಉದಾಹರಣೆ:—

ಭ್ರಮಿಮರತಿಮಲಸಹೃದಯತಾಂ
ಪ್ರಲಯಂ ಮೂರ್ಛಾಂ ತಮಃ ಶರೀರಸಾದಮ್।
ಮರಣಂ ಚ ಜಲದಭುಜಗಜಂ
ಪ್ರಸಹ್ಯ ಕುರುತೇ ವಿಷಂ ವಿಯೋಗಿನೀನಾಮ್॥

ಜಲದಭುಜಗಜವಿಷವು[1] ವಿರಹಿಣಿಗೆ ತಲೆಸುತ್ತ,
ಹೃದಯದಲಿ ಅರತಿ ಆಲಸ್ಯಗಳನು।
ಪ್ರಲಯಮೂರ್ಛೆಗಳನ್ನು ತಮವನ್ನು ಕೃಶತೆಯನು
ಮರಣವನು ತಾ ಕಡೆಗೆ ಬಿಡದೆ ತಹುದು॥

ಅಥವಾ ಮತ್ತೊಂದು ಉದಾಹರಣೆ—

ಚಮಹಿಅಮಾಣಸಕಞ್ಚಣಪಙ್ಕ ಅಣಿಮ್ಮಹಿಅಪರಿಮಲಾ ಜಸ್ಸ।
ಅಖಣ್ಡಿಅದಾಣಪಸಾರಾ ಬಾಹುಪ್ಪಲಿಹಾ ಚ್ವಿಅ ಗಇನ್ದಾ॥

ಮಾನಸದ[2] ಹೊಂದಾವರೆಯ ಸೆಳೆದು ಭಂಗಿಸುತದನು,
ಪೊರಮಟ್ಟ ಪರಿಮಳ[3]ವನೆಲ್ಲ ಪೊತ್ತು।

---

[1] ಮೇಘದಂತೆ ಕಪ್ಪಾಗಿರುವ ಸರ್ಪದ ವಿಷ ಅಥವಾ ಸರ್ಪಾಕೃತಿಯಾದ ಮೇಘದ ಜಲ.

[2] ಮಾನಸಸರೋವರ ಅಥವಾ ತಾವರೆಯಂತಿರುವ ಮನಸ್ಸು.

[3] ಸುಗಂಧ ಅಥವಾ ಪ್ರತಾಪದ ಯಶಸ್ಸು.

ದಾನರಾಜಿ[1]ಯನಂತೆ ಸಂತತವು ಮೆರೆಯುತಿಹ
ಬಾಹುದಂಡಗಳವನ ಗಜಪತಿಗಳು ||

ಇಲ್ಲಿ ರೂಪಕಾಲಂಕಾರದ ಛಾಯೆಗೆ ಪುಷ್ಟಿಯನ್ನು ಕೊಡುವ ಶ್ಲೇಷಾಲಂಕಾರವು ವಾಚ್ಯವಾಗಿಯೇ ಇದೆ.

'ಆಕ್ಷಿಪ್ತ' ಅಥವಾ ಪ್ರಕಾರಾಂತರದಿಂದ ಗಮ್ಯವಾಗುತ್ತಿರುವ ಅಲಂಕಾರವೂ ಸಹ ಮತ್ತೆ ಬೇರೆ ಪದಗಳಿಂದ ಅದು ವಾಚ್ಯವೂ ಆಗಿಹೋಗಿದ್ದರೆ, ಆಗ ಶಬ್ದಶಕ್ತಿಯಿಂದ ಉದ್ಭವಿಸುವ ಅನುರಣನರೂಪವ್ಯಂಗ್ಯವಾದ ಧ್ವನಿಗೆ ಲಕ್ಷ್ಯವಾಗಲಾರದು. ಅಂತಹ ಸಂದರ್ಭಗಳಲ್ಲಿ 'ವಕ್ರೋಕ್ತಿ'ಯೇ ಮೊದಲಾದ ಅರ್ಥಾಲಂಕಾರಗಳೇ ಇರುವುವೆಂದು ತೀರ್ಮಾನಿಸಬೇಕು. ಉದಾಹರಣೆ:—

ದೃಷ್ಟ್ಯಾ ಕೇಶವ ಗೋಪರಾಗಹೃತಯಾ ಕಿಂಚಿನ್ನ ದೃಷ್ಟಂ ಮಯಾ
ತೇನೈವ ಸ್ಖಲಿತಾಸ್ಮಿ ನಾಥ ಪತಿತಾಂ ಕಿಂ ನಾಮ ನಾಲಂಬಸೇ |
ಏಕಸ್ತ್ವಂ ವಿಷಮೇಷು ಖಿನ್ನಮನಸಾಂ ಸರ್ವಾಬಲಾನಾಂ ಗತಿ-
ರ್ಗೋಪ್ಯೈವಂ ಗದಿತಃ ಸಲೇಶಮವತಾದ್ ಗೋಷ್ಠೇ ಹರಿರ್ವಶ್ಚಿರಮ್ ||

ಗೋಪರಾಗ[2]ದಿ ಕಣ್ಣು ಕುರುಡಾಗಲೇನೊಂದು
ಕಾಣಿಸದೆ ಹೋದುದದರಿಂದಲೆ |
ಜಾರಿಹೆನು ನಾಥ! ಪತಿತೆಯನು[3] ನೀನೇಕೆ
ಕೈಗೊಳೆಯೊ? ತಿಳಿಯಲಾರೆನದನು |
ವಿಷಮೇಷುಖಿನ್ನೆಯರ[4] ಚೆನ್ನೆಯರ ರಕ್ಷಣೆಗೆ
ನೀನೊಬ್ಬನೇ ಗತಿಯಲ್ಲವೆ? |
ಇಂತೆಂದು ಸೂಕ್ಷ್ಮಾರ್ಥಸೂಚನೆಯು ತುಂಬಿದಾ
ಮಾತುಗಳ ಗೋಪಿ ಪೇಳುತಿರಲು |
ಗೊಟ್ಟಿಯೊಳು ರಾಜಿಸಿದ ಶ್ರೀಹರಿಯು ನಮ್ಮನ್ನು
ಸಂರಕ್ಷಿಸಲಿ ಸರ್ವಕಾಲ ||

---

[1] ಮದೋದಕ ಅಥವಾ ಇಷ್ಟಾರ್ಥಪ್ರದಾನ.

[2] ಗೋವುಗಳ ಕಾಲಿಂದೆದ್ದ ಧೂಳು ಅಥವಾ ಗೋಪನಲ್ಲಿ ಅನುರಾಗ.

[3] ಬಿದ್ದಿರುವ ನನ್ನನ್ನು ಅಥವಾ ಪತಿ ಎಂದರೆ ಗಂಡನ ಭಾವವನ್ನು.

[4] ಏರು ತಗ್ಗುಗಳಿರುವ ಭೂಮಿಯಲ್ಲಿ ತಲ್ಲಣಿಸುವ ಅಥವಾ ಮನ್ಮಥನ ಬಾಣಗಳಿಂದ ಪೀಡಿತರಾದ.

ಈ ಬಗೆಯ ಲಕ್ಷ್ಯಗಳೆಲ್ಲ ಧಾರಾಳವಾಗಿ ವಾಚ್ಯವಾದ ಶ್ಲೇಷಾಲಂಕಾರಕ್ಕೆ ಉದಾಹರಣೆಗಳಾಗಲಿ; (ಅದಕ್ಕೆ ನಮ್ಮ ಆಕ್ಷೇಪಣೆಯೇನೂ ಇಲ್ಲ). ಆದರೆ ಎಲ್ಲಿ ಅಲಂಕಾರಾಂತರವು ಶಬ್ದಶಕ್ತಿಯಿಂದ ನೇರವಾಗಿ ವಾಚ್ಯವಾಗುವ ಬದಲು, ಕೇವಲ ಅದರ ಒಂದು ಸಾಮರ್ಥ್ಯದಿಂದ ಅಭಿವ್ಯಕ್ತವಾಗುತ್ತಿರುವುದೋ, ಅದೆಲ್ಲವೂ ಶಬ್ದಶಕ್ತಿಮೂಲಧ್ವನಿಗೆ ಮಾತ್ರ ಲಕ್ಷ್ಯ. ಉದಾಹರಣೆ:

"ಅತ್ರಾನ್ತರೇ ಕುಸುಮಸಮಯಯುಗಮುಪಸಂಹರನ್ನಜೃಂಭತ ಗ್ರೀಷ್ಮಾಭಿಧಾನಃ ಫುಲ್ಲಮಲ್ಲಿಕಾಧವಲಾಟ್ಟಹಾಸೋ ಮಹಾಕಾಲಃ[1]"

[ಇಲ್ಲಿ ಋತುವರ್ಣನೆಯು ಪ್ರಸಕ್ತವಾದುದರಿಂದ ನೇರವಾಗಿ ವಾಚ್ಯವಾದ ಅರ್ಥವೊಂದೇ—'ಇಷ್ಟರಲ್ಲಿಯೇ ವಸಂತಋತುವಿನ ಮಾಸದ್ವಯಗಳನ್ನು ಕೊನೆಗಾಣಿಸುತ್ತ, ಅರಳಿದ ಮಲ್ಲಿಗೆಗಳಿಂದ ತುಂಬಿದ ಉಪ್ಪರಿಗೆಗಳೇ ತನ್ನ ನಗೆಯಾಗಿರಲು, ಗ್ರೀಷ್ಮವೆಂಬ ಮಹಾ ದೀರ್ಘವೂ ದಾರುಣವೂ ಆದ ಕಾಲವು ವಿಜೃಂಭಿಸಿತು,' ಎಂದು.

ಆದರೆ ಶಬ್ದಗಳ ಶಕ್ತಿಯಿಂದ ಧ್ವನಿತವಾಗುವ ಅಲಂಕಾರವು ಬೇರೊಂದು:— 'ಯುಗಗಳನ್ನೆಲ್ಲ ಸಂಹರಿಸುವ ಮತ್ತು ಅಟ್ಟಹಾಸಗೈಯುವ ಪ್ರಲಯಕಾಲದ ಕಾಲಭೈರವನಂತೆ' ಎಂದು.]

ಇನ್ನೊಂದು ಉದಾಹರಣೆ:—

ಉನ್ನತಃ ಪ್ರೋಲ್ಲಸದ್ಧಾರಃ ಕಾಲಾಗುರುಮಲೀಮಸಃ |
ಪಯೋಧರಭರಸ್ತನ್ವ್ಯಾಃ ಕಂ ನ ಚಕ್ರೇಽಭಿಲಾಷಿಣಮ್ ||

ಉನ್ನತ[2]ಮಂತೆಯೆ ವಿಲಸದ್ಧಾರಂ[3]
ಕಾಲಾಗುರುವಿನವೋಲ್ ಪರಿನೀಲಂ |
ತಾನೆನಲವಳ ಪಯೋಧರ[4]ಭಾರಂ
ಮಾಡದದಾವನ ಕಾಮಾನ್ವಿತನಂ ||

ಅಥವಾ—

ದತ್ತಾನನ್ದಾಃ ಪ್ರಜಾನಾಂ ಸಮುಚಿತಸಮಯಾಕೃಷ್ಟಸೃಷ್ಟೈಃ ಪಯೋಭಿಃ
ಪೂರ್ವಾಹ್ಣೇ ವಿಪ್ರಕೀರ್ಣಾ ದಿಶಿ ದಿಶಿ ವಿರಮತ್ಯಹ್ನಿ ಸಂಹಾರಭಾಜಃ |

---

[1] ಬಾಣಭಟ್ಟನ 'ಕಾದಂಬರೀ.'

[2] ಬಟ್ಟ ಮತ್ತು ಮೇಲೇರಿದ.

[3] ಹಾರದಿಂದ ಭೂಷಿತವಾದ ಮತ್ತು ಧಾರಾವರ್ಷವನ್ನು ಕರೆಯುತ್ತಿರುವ.

[4] ಮೇಘ ಮತ್ತು ಸ್ತನ.

ದೀಪ್ತಾಂಶೋರ್ದೀರ್ಘದುಃಖಪ್ರಭವಭವಭಯೋದನ್ವದುತ್ತಾರನಾವೋ
ಗಾವೋ ವಃ ಪಾವನಾನಾಂ ಪರಮಪರಿಮಿತಾಂ ಪ್ರೀತಿಮುತ್ಪಾದಯನ್ತು ||

ಉಚಿತವಹ ಸಮಯದಲನಾಯಾಸದಿಂ ಪಯವ[1]
ಸೃಜಿಸಿ ಜನರೆಲ್ಲರಿಗೆ ಹಂಚಿಕೊಟ್ಟು |
ಪೂರ್ವಾಹ್ಣದಲಿ ಪರಿದು ದಿಕ್ಕುದಿಕ್ಕಿಗೆ ಮತ್ತೆ
ದಿವಸಾವಸಾನದಲಿ ಪಿಂತಿರುಗುವ |
ದೀರ್ಘದುಃಖಪ್ರಭವಭಯಸಾಗರಕೆ ನೌಕೆ-
ಯೆನೆ ಪಾಟನಗಳಾದ ಚಂಡ ರವಿಯ |
ಗೋವುಗಳು[2] ನಮಗೆಲ್ಲ ನಿರವಧಿಯ ಹರುಷವನು
ಸಂತತವು ಕರುಣಿಸಲಿ ದಯೆದೋರುತ ||

ಈ ಮೇಲೆ ಹೇಳಿದ ಉದಾಹರಣೆಗಳಲ್ಲೆಲ್ಲ ಶಬ್ದಗಳು ಪ್ರಸ್ತುತವಾದ ಅರ್ಥವೊಂದನ್ನು ವಾಚ್ಯವಾಗಿ ಹೇಳುವುದರ ಜತೆಗೆ ಅಪ್ರಸ್ತುತವಾದ ಬೇರೊಂದು ಅರ್ಥವನ್ನೂ ತಮ್ಮ ಶಕ್ತಿಯ ಪ್ರಭಾವದಿಂದ ಸೂಚಿಸುತ್ತವೆ. ಈ ಎರಡು ಭಿನ್ನವಾದ ಅರ್ಥಗಳಿಗೆ ಅಸಂಬದ್ಧತೆಯು ತಪ್ಪಬೇಕಾದರೆ ಅವರೆಡಕ್ಕೂ ಎಂದರೆ ಆ ಪ್ರಸ್ತುತವಾದ ಮತ್ತು ಅಪ್ರಸ್ತುತವಾದ ಅರ್ಥಗಳಿಗೆ ಉಪಮಾನೋಪಮೇಯಭಾವವಿರುವುದೆಂದು ನಾವು ತಿಳಿದುಕೊಳ್ಳಬೇಕು. ಹೀಗೆ ಇಲ್ಲಿ ಬರುವ ಶ್ಲೇಷವು ವಾಚ್ಯಾಲಂಕಾರದಂತೆ ಕೇವಲ ಶಬ್ದಾರೂಢವಲ್ಲ; ಆದರೆ ಶಬ್ದದ ವಿಶೇಷಸಾಮರ್ಥ್ಯದಿಂದ ಧ್ವನಿತವಾಗುವ ಅಲಂಕಾರ.[3] ಆದುದರಿಂದ ಶ್ಲೇಷಾಲಂಕಾರದ ಲಕ್ಷ್ಯಗಳೂ ಅನುರಣನಪ್ರಾಯವಾದ ವ್ಯಂಗ್ಯವನ್ನುಳ್ಳ ಧ್ವನಿಯ ಲಕ್ಷ್ಯಗಳೂ ಬೇರೆಬೇರೆಯೇ.

---

[1] ನೀರು ಮತ್ತು ಹಾಲು.

[2] ಕಿರಣಗಳು ಮತ್ತು ಹಸುಗಳು.

[3] ವಾಚ್ಯವಾದ ಶ್ಲೇಷಾಲಂಕಾರದಲ್ಲಿ ಎರಡು ಅರ್ಥಗಳೂ ವಾಚ್ಯವೇ ಆಗಿರುವುದಲ್ಲದೆ ಅವುಗಳ ಪರಸ್ಪರ ಸಂಬಂಧವೂ ಕೂಡ ವಾಚ್ಯವೇ ಆಗಿರುತ್ತದೆ. ಎಂದರೆ ಎರಡರ್ಥಗಳೂ ಪ್ರಸ್ತುತಗಳೇ ಆಗಿರುವುದರಿಂದ ಸುಸಂಬದ್ಧವಾಗಿಯೇ ಇರುತ್ತವೆ. ಆದುದರಿಂದ ಆ ಎರಡು ಅರ್ಥಗಳಿಗಿಂತ ಮುಂದೆ ಹೋಗಬೇಕಾದ ಪ್ರಸಕ್ತಿಯೇ ಇಲ್ಲ. ಆದರೆ ಶಬ್ದಶಕ್ತಿಮೂಲವಾದ ಅಲಂಕಾರಧ್ವನಿಯಲ್ಲಿ ಹಾಗಲ್ಲ. ಇಲ್ಲಿ ಬರುವ ಎರಡರ್ಥಗಳಲ್ಲಿ ಒಂದು ಪ್ರಸ್ತುತ; ಇನ್ನೊಂದು ಅಪ್ರಸ್ತುತ. ಇವೆರಡಕ್ಕೂ ಅಸಂಬದ್ಧತೆಯು ತಪ್ಪಬೇಕಾದರೆ ಇನ್ನೊಂದು ಅಲಂಕಾರದ ಛಾಯೆಯನ್ನು ಕಾಣಬೇಕು. ಈ ಅಲಂಕಾರವು ಯಾವ ಶಬ್ದದಿಂದಲೂ ನೇರವಾಗಿ ವಾಚ್ಯವಲ್ಲದ ಕಾರಣ ಅದನ್ನು ಶಬ್ದಾರ್ಥಸಾಮರ್ಥ್ಯದಿಂದ ಆಕ್ಷಿಪ್ತ ಅಥವಾ ಧ್ವನಿತವಾದುದೆಂದೇ ತಿಳಿಯಬೇಕು.

ಉಪಮಾಲಂಕಾರದಂತೆಯೇ ಇತರ ಅಲಂಕಾರಗಳು ಕೂಡ ಈ ಶಬ್ದಶಕ್ತಿ ಮೂಲ-ಅನುರಣನರೂಪ-ವ್ಯಂಗ್ಯವೆನಿಸುವ ಧ್ವನಿಯಲ್ಲಿ ಪ್ರಕಾಶಗೊಳ್ಳಬಹುದು. ಈ ಬಗೆಯ ವಿರೋಧಾಲಂಕಾರಕ್ಕೆ ಬಾಣಭಟ್ಟನ ಸ್ಥಾಣ್ವೀಶ್ವರವೆಂಬ ದೇಶದ ವರ್ಣನೆಯಲ್ಲಿ ಬರುವ ಪ್ರಯೋಗವನ್ನು ನೋಡಿ :—

"ಯತ್ರ ಚ ಮಾತಂಗಗಾಮಿನ್ಯಃ ಶೀಲವತ್ಯಶ್ಚ, ಗೌರ್ಯೋ ವಿಭವರತಾಶ್ಚ, ಶ್ಯಾಮಾಃ ಪದ್ಮರಾಗಿಣ್ಯಶ್ಚ, ಧವಲದ್ವಿಜಶುಚಿವದನಾ ಮದಿರಾಮೋದಿಶ್ವಸನಾಶ್ಚ ಪ್ರಮದಾಃ."

[ಅಲ್ಲಿ ಪ್ರಮದೆಯರು ಮಾತಂಗ[1]ಗಾಮಿನಿಯರು ಮತ್ತು ಶೀಲವತಿಯರು; ಗೌರಿ[2]ಯರು ಮತ್ತು ವಿಭವಾ[3]ನುರಕ್ತೆಯರು; ಶ್ಯಾಮೆ[4]ಯರು ಮತ್ತು ಪದ್ಮರಾಗಿಣಿ[5]ಯರು; ಧವಲದ್ವಿಜ[6]ಶುಚಿವದನೆಯರು ಮತ್ತು ಮದಿರಾಮೋದನಿಃಶ್ವಾಸೆಯರು.]

ಇಲ್ಲಿರುವ ವಿರೋಧಾಲಂಕಾರವನ್ನಾಗಲಿ ಅದಕ್ಕೆ ಪುಷ್ಟಿಯನ್ನೀಯುವ ಶ್ಲೇಷಾಲಂಕಾರವನ್ನೇ ಆಗಲಿ ವಾಚ್ಯವೆಂದು ಹೇಳಲು ಶಕ್ಯವಿಲ್ಲ. ನೇರವಾಗಿ ಶಬ್ದಗಳಿಂದ ವಿರೋಧಾಲಂಕಾರವು ವಾಚ್ಯವಾಗದೆ ಹೋಗಿರುವುದೇ ಅದಕ್ಕೆ ಕಾರಣ. ಎಲ್ಲಿ ನೇರವಾಗಿ ಶಬ್ದತಃ ವಿರೋಧಾಲಂಕಾರವು ಭಾಸವಾಗುವುದೋ ಅಲ್ಲಿ ಮಾತ್ರ, ಶ್ಲೇಷವೂ ಇರುವ ಪಕ್ಷದಲ್ಲಿ, ವಾಚ್ಯವಾದ ವಿರೋಧಾಲಂಕಾರವೋ ಅಥವಾ ವಾಚ್ಯವಾದ ಶ್ಲೇಷಾಲಂಕಾರವೋ (ಎಂದರೆ ಅವೆರಡರ ಸಂಕರವು) ಸ್ಫುಟವಾಗಿರುವುದೆಂದೊಪ್ಪಬಹುದು. ಇದಕ್ಕೂ ಬಾಣಭಟ್ಟನ ಉದಾಹರಣೆಯನ್ನೇ ಕೊಡಬಹುದು :—

"ಸಮವಾಯ ಇವ ವಿರೋಧಿನಾಂ ಪದಾರ್ಥಾನಾಮ್; ತಥಾಹಿ-
ಸನ್ನಿಹಿತಬಾಲಾನ್ಧಕಾರಾಪಿ ಭಾಸ್ವನ್ಮೂರ್ತಿಃ . . ."

['ಅದು ವಿರುದ್ಧ ಪದಾರ್ಥಗಳ ಒಂದು ಸಮೂಹದಂತೆಯೇ ಇತ್ತು; ಹೇಗೆಂದರೆ—ಬಾಲಾಂಧಕಾರ[7]ವು ಸನ್ನಿಹಿತವಾಗಿದ್ದರೂ ಭಾಸ್ವನ್ಮೂರ್ತಿ[8]ಯಾಗಿಯೂ. . .']

---

[1] ಚಂಡಾಲ ಮತ್ತು ಮದ್ದಾನೆ.

[2] ಪಾರ್ವತಿ ಮತ್ತು ಬಿಳಿಯ ಬಣ್ಣದವರು.

[3] ಶಿವನನ್ನು ಬಿಟ್ಟು ಬೇರೆಡೆ ಅಥವಾ ಐಶ್ವರ್ಯದಲ್ಲಿ.

[4] ಕರಿಯ ಬಣ್ಣದವರು ಮತ್ತು ಸುಂದರಿಯರು.

[5] ಕೆಂಪುಬಣ್ಣದ ರತ್ನವುಳ್ಳವರು ಮತ್ತು ಪದ್ಮಸದೃಶವಾದ ಕೆಂಪುಕಾಂತಿಯುಳ್ಳವರು.

[6] ಶ್ರೇಷ್ಠವಿಪ್ರ ಮತ್ತು ಬಿಳಿಯ ಹಲ್ಲು.

[7] ಕತ್ತಲೆಯ ಆರಂಭ ಅಥವಾ ಕೂದಲಿನ ಕಪ್ಪು.

[8] ಸೂರ್ಯನ ಶರೀರ ಅಥವಾ ಹೊಳೆಯುವ ಆಕೃತಿ.

(ಇದು ವಾಚ್ಯವಾದ ವಿರೋಧಾಲಂಕಾರಕ್ಕೆ ಉದಾಹರಣೆಯಾಯಿತು). ಶಬ್ದಶಕ್ತಿಮೂಲ-ಅನುರಣನರೂಪ-ವ್ಯಂಗ್ಯ-ಧ್ವನಿಯೆನಿಸುವ ವಿರೋಧಾಲಂಕಾರಕ್ಕೆ ಇನ್ನೊಂದು ಉದಾಹರಣೆ[1] :—

ಸರ್ವೈಕಶರಣಮಕ್ಷಯಮಧೀಶಮೀಶಂ ಧಿಯಾಂ ಹರಿಂ ಕೃಷ್ಣಮ್ |
ಚತುರಾತ್ಮಾನಂ ನಿಷ್ಕ್ರಿಯಮರಿಮಥನಂ ನಮತ ಚಕ್ರಧರಮ್ ||

ಸರ್ವರಿಗೊಬ್ಬನೆ ಶರಣನು[2] ಅಕ್ಷಯ,[3]
ಅಧೀಶ[4]ನಂತೆಯೆ ಧೀಪತಿ[5]ಯು |
ಹರಿ[6]ಯೆಂಬಂತೆಯೆ ಕೃಷ್ಣ[7]ನದಾವನೊ
ಚತುರಾತ್ಮ[8]ನು ಸಲೆ ನಿಷ್ಕ್ರಿಯನು |
ಆ ಅರಿಮಥನ[9]ನ ಚಕ್ರವ ಪಿಡಿದನ
ನಮಿಸಿರಿ ಸರ್ವರು ಸಂಪದಕೆ ||

ಈ ಲಕ್ಷ್ಯದಲ್ಲಂತೂ ಶಬ್ದಶಕ್ತಿಮೂಲ-ಅನುರಣನರೂಪವಾದ ವಿರೋಧಾಲಂಕಾರವು ಬಹಳ ಸ್ಫುಟವಾಗಿದೆ.

ಇದೇ ವಿಧವಾದ ಎಂದರೆ ಶಬ್ದಶಕ್ತಿಮೂಲ-ಅನುರಣನರೂಪವಾದ ವ್ಯತಿರೇಕಾಲಂಕಾರಕ್ಕೂ ಎಷ್ಟೋ ಲಕ್ಷ್ಯಗಳಿವೆ. ಉದಾಹರಣೆ[10] :—

ಖಂ ಯೇಽತ್ಯುಜ್ಜ್ವಲಯನ್ತಿ ಲೂನತಮಸೋ ಯೇ ವಾ ನಖೋದ್ಭಾಸಿನೋ
ಯೇ ಪುಷ್ಣನ್ತಿ ಸರೋರುಹಶ್ರಿಯಮಪಿ ಕ್ಷಿಪ್ತಾಬ್ಜಭಾಸಶ್ಚ ಯೇ |
ಯೇ ಮೂರ್ಧಸ್ವವಭಾಸಿನಃ ಕ್ಷಿತಿಭೃತಾಂ ಯೇ ಚಾಮರಾಣಾಂ ಶಿರಾಂ-
ಸ್ಯಾಕ್ರಾಮನ್ತ್ಯುಭಯೇಽಪಿ ತೇ ದಿನಪತೇಃ ಪಾದಾಃ ಶ್ರಿಯೇ ಸನ್ತು ವಃ ||

ಆವುವು ಕತ್ತಲೆ[11]ವೊತ್ತವನೋಡಿಸಿ
ಖಭಾಗ[12]ಶೋಭೆಯ ಪಸರಿಸುತ |
ನಖಭಾಗ[13]ದಿ ಮೇಣೆತ್ತಲು ತೋರುತ
ಪದುಮದ ಸಿರಿಯನು ದೊರೆಕೊಳುತ |

---

[1] ಇದು ಆನಂದವರ್ಧನನೇ ಬರೆದಿರುವ ಶ್ಲೋಕ. [2] ಮನೆ ಅಥವಾ ರಕ್ಷಕ. [3] ಮನೆಯಿಲ್ಲದವನು ಅಥವಾ ನಾಶರಹಿತ. [4] ಜಗತ್ಪತಿ ಅಥವಾ ಬುದ್ಧಿಗೆ ಒಡೆಯನಲ್ಲದವನು. [5] ಬುದ್ಧಿಗೆ ಒಡೆಯ. [6] ಹಸಿರು ಬಣ್ಣ ಅಥವಾ ವಿಷ್ಣು. [7] ಕರಿಯ ಬಣ್ಣ ಅಥವಾ ಪಾಪವಿಮೋಚಕ. [8] ಕ್ರಿಯಾಕೌಶಲವುಳ್ಳವನು ಅಥವಾ ಸಂಕರ್ಷಣ—ಅನಿರುದ್ಧ—ಪ್ರದ್ಯುಮ್ನ—ವಾಸುದೇವ ರೂಪಿ. [9] ಚಕ್ರಭಂಜಕ ಅಥವಾ ರಿಪುನಾಶಕ. [10] ಇದು ಆನಂದವರ್ಧನನೇ ಬರೆದುದು. [11] ಅಂಧಕಾರ ಅಥವಾ ಪಾಪ. [12] ಆಕಾಶ. [13] ಉಗುರು ಅಥವಾ ಆಕಾಶವಲ್ಲದುದು.

ಮತ್ತದೆ ಸಿರಿಯನೆ ಸೋಲಿಸುತ|
ಭೂಭೃದ್ವರ[1]ರಾ ತಲೆಯಲಿ ಮೆರೆಯುತ
ಮೇಣಮರರ[2] ಶಿರಭಾಗದಲಿ|
ಆ ಎರಡೂ ದಿನಪನ ಪಾದ[3]ಗಳು
ಸೌಖ್ಯವ ತರಲೆಮಗನವರತ‖

ಹೀಗೆ ಶಬ್ದಶಕ್ತಿಮೂಲ-ಅನುರಣನರೂಪ-ವ್ಯಂಗ್ಯ-ಧ್ವನಿಯ ಪ್ರಕಾರಗಳು ಹಲವಿವೆ. ಅವುಗಳನ್ನು ಸಹೃದಯರು ತಾವೇ ಊಹಿಸಿಕೊಳ್ಳಬೇಕು. ಗ್ರಂಥವು ಅತಿಯಾಗಿ ಬೆಳೆದುಹೋಗುವುದೆಂಬ ಭಯದಿಂದ ಎಲ್ಲ ವಿವರಗಳನ್ನೂ ಇಲ್ಲಿ ನಿರೂಪಿಸಲಿಲ್ಲ.

ಕಾರಿಕೆ

ಅರ್ಥಶಕ್ತ್ಯುದ್ಭವಸ್ತ್ವನ್ಯೋ ಯತ್ರಾರ್ಥಃ ಸಂ ಪ್ರಕಾಶತೇ|
ಯಸ್ಮಾತ್ತಾತ್ಪರ್ಯೇಣ ವಸ್ತ್ವನ್ಯದ್ವ್ಯನಕ್ತ್ಯುಕ್ತಿಂ ವಿನಾ ಸ್ವತಃ ‖ ೨೨ ‖

ಎಲ್ಲಿ ನೇರವಾಗಿ ಶಬ್ದಗಳಿಂದ ಹೇಳದೆ ಒಂದು ಅರ್ಥವು ಇನ್ನೊಂದನ್ನು ತಾತ್ಪರ್ಯರೂಪವಾಗಿ ಧ್ವನಿಸುತ್ತಿರುವುದೋ ಅಲ್ಲಿ ಅರ್ಥಶಕ್ತಿ-ಮೂಲಧ್ವನಿಯಿರುವುದು.

ವೃತ್ತಿ

ಎಲ್ಲಿ ಶಬ್ದವ್ಯಾಪಾರದ ಸಹಾಯವಿಲ್ಲದೆ, ಕೇವಲ ತನ್ನ ಸಾಮರ್ಥ್ಯದಿಂದಲೇ, ಒಂದರ್ಥವು ಬೇರೊಂದರ್ಥವನ್ನು ಧ್ವನಿಸುವುದೋ ಅಲ್ಲಿ ಅರ್ಥಶಕ್ತಿಮೂಲವಾದ ಅನುರಣನರೂಪವ್ಯಂಗ್ಯವನ್ನುಳ್ಳ ಧ್ವನಿಯಿರುವುದು. ಉದಾಹರಣೆ:—

ಏವಂವಾದಿನಿ ದೇವರ್ಷೌ ಪಾರ್ಶ್ವೇ ಪಿತುರಧೋಮುಖೀ |
ಲೀಲಾಕಮಲಪತ್ರಾಣಿ ಗಣಯಾಮಾಸ ಪಾರ್ವತೀ[4] ||

ದೇವರ್ಷಿಯಿಂತು ಪೇಳುತ್ತಲಿರಲು
ತಂದೆಯಾ ಪಕ್ಕದಲಿ ತಲೆ ತಗ್ಗಿಸಿ|
ಕೈಲಿದ್ದ ತಾವರೆಯ ದಳಗಳನ್ನು
ಎಣಿಕೆಮಾಡಿದಳಾಗ ಪಾರ್ವತಿಯು ತಾನು ||

---

[1] ಬೆಟ್ಟ ಅಥವಾ ರಾಜ. [2] ಮೂಲಶ್ಲೋಕದಲ್ಲಿ ದೇವತೆಗಳ ಎಂಬರ್ಥದ ಜತೆಗೆ ಚಾಮರಗಳ ಎಂಬರ್ಥವೂ ಇದೆ. [3] ಕಾಲು ಅಥವಾ ಕಿರಣ. [4] ಕಾಳಿದಾಸನ ‘ಕುಮಾರಸಂಭವ’, vi, 84.

ಇಲ್ಲಿ ಲೀಲಾಕಮಲಪತ್ರಗಳ ಗಣನೆಯು ತನ್ನ ಅರ್ಥವನ್ನು ಅಮುಖ್ಯವಾಗಿಸಿಕೊಂಡು, ಬೇರೆ ಶಬ್ದವ್ಯಾಪಾರದ ಸಹಾಯವೇ ಇಲ್ಲದೆ, ಸಂಚಾರಿಭಾವವಾದ ಲಜ್ಜೆಯೆಂಬ ಬೇರೊಂದರ್ಥವನ್ನು ಧ್ವನಿಸುತ್ತದೆ. ಇದನ್ನು ಅಲಕ್ಷ್ಯಕ್ರಮವ್ಯಂಗ್ಯಧ್ವನಿಗೆ ಉದಾಹರಣೆಯೆನ್ನಬಾರದು. ಏಕೆಂದರೆ ಎಲ್ಲಿ ವಿಭಾವ, ಅನುಭಾವ, ಸಂಚಾರಿಭಾವಗಳು ಸಾಕ್ಷಾತ್ತಾಗಿ ಶಬ್ದಗಳಿಂದಲೇ ಉಕ್ತವಾಗುತ್ತಿದ್ದು, ತನ್ಮೂಲಕವಾಗಿ ರಸಾದಿಗಳ ಪ್ರತೀತಿಯುಂಟಾಗುತ್ತಿರುವುದೋ, ಅಂತಹ ಕಡೆಗಳು ಮಾತ್ರ ಅಲಕ್ಷ್ಯ-ಕ್ರಮವ್ಯಂಗ್ಯದ ಬಗೆಗಳು. ಉದಾಹರಣೆಗೆ, 'ಕುಮಾರಸಂಭವ'ದ ವಸಂತ ವರ್ಣನೆಯಲ್ಲಿ ವಸಂತಪುಷ್ಪಾಲಂಕೃತೆಯಾದ ದೇವಿಯ ಆಗಮನದಿಂದ ಹಿಡಿದು ಮನ್ಮಥನ ಶರಸಂಧಾನದವರೆಗಿನ ಭಾಗವೂ, ಧೈರ್ಯಗುಂದಿದ ಶಂಭುವಿನ ವಿಶಿಷ್ಟ ಕಾರ್ಯಗಳ ವರ್ಣನಾಭಾಗವೂ, ಸಾಕ್ಷಾತ್ ಶಬ್ದಗಳಿಂದಲೇ ನಿರೂಪಿತವಾಗಿವೆ. ಆದರೆ ಇಲ್ಲಿ ಹಾಗಿಲ್ಲ; ರಸಪ್ರತೀತಿಯು (ಸಾಕ್ಷಾತ್ ಶಬ್ದಗಳಿಂದ ನಿರೂಪಿತವಾದ ಸಂಚಾರಿಭಾವಗಳ ಮೂಲಕ ಬರುವುದಕ್ಕೆ ಪ್ರತಿಯಾಗಿ) ಅರ್ಥದ ಸಾಮರ್ಥ್ಯದಿಂದ ಧ್ವನಿತವಾದ ಸಂಚಾರಿಭಾವಗಳ ಮೂಲಕ ಬರುತ್ತದೆ. ಆದುದರಿಂದ ಇದು ಧ್ವನಿಯ ಬೇರೆ ಪ್ರಕಾರವೇ. ಎಲ್ಲಿ ಶಬ್ದವ್ಯಾಪಾರದ ಸಹಾಯವನ್ನು ಪಡೆದು ಅರ್ಥವು ಅರ್ಥಾಂತರವನ್ನು ಧ್ವನಿಸುವುದೋ, ಅದು ಈ ಧ್ವನಿಗೆ ಲಕ್ಷ್ಯವಲ್ಲ. ಉದಾಹರಣೆ :—

ಸಂಕೇತಕಾಲಮನಸಂ ವಿಟಂ ಜ್ಞಾತ್ವಾ ವಿದಗ್ಧಯಾ |
ಹಸನ್ನೇತ್ರಾರ್ಪಿತಾಕೂತಂ ಲೀಲಾಪದ್ಮಂ ನಿಮೀಲಿತಮ್ ||

ಸಂಕೇತಕಾಲವನು ತಿಳಿಯುವಾಸೆಯ ವಿಟನ-
ನರಿತ ಚದುರೆಯು ತನ್ನ ಕೈಯಲಿದ್ದ |
ಲೀಲೆಯಾ ಕಮಲವನು ಮುಚ್ಚಿದಳು ನಗುನಗುವ
ಕಣ್ಣಿನಿಂದಲೆ ತನ್ನ ಭಾವವನು ತಿಳಿಸಿ ||

ಇಲ್ಲಿ ಲೀಲಾಕಮಲನಿಮೀಲನವು ಯಾವ ಅಭಿಪ್ರಾಯಕ್ಕೆ ಸೂಚಕವೋ ಅದನ್ನು ನೇರವಾಗಿ ಶಬ್ದಗಳಿಂದಲೇ ಹೇಳಿಬಿಟ್ಟಿದೆ.

ಅದೂ ಅಲ್ಲದೆ—

ಕಾರಿಕೆ

ಶಬ್ದಾರ್ಥಶಕ್ತ್ಯಾಽಕ್ಷಿಪ್ತೋಽಪಿ ವ್ಯಂಗ್ಯೋಽರ್ಥಃ ಕವಿನಾ ಪುನಃ |
ಯತ್ರಾವಿಷ್ಕ್ರಿಯತೇ ಸ್ವೋಕ್ತ್ಯಾ ಸಾನ್ಯೈವಾಲಂಕೃತಿರ್ಧ್ವನೇಃ || ೨೩ ||

ಎಲ್ಲಿ ಶಬ್ದಾರ್ಥಶಕ್ತಿಗಳಿಂದ ಧ್ವನಿತವೇ ಆಗಿದ್ದರೂ ಆ ವ್ಯಂಗ್ಯಾರ್ಥವನ್ನು ಕವಿಯು ಮತ್ತೆ ಮಾತುಗಳಿಂದಲೂ ನೇರವಾಗಿ ಹೇಳಿಬಿಡುವನೋ, ಅಲ್ಲಿ ಅದು ಧ್ವನಿಯಿಂದ ಬೇರೆಯಾದ ಒಂದು ಅಲಂಕಾರವಾಗುವುದು.

ವೃತ್ತಿ

ಶಬ್ದಶಕ್ತಿಯಿಂದ, ಅರ್ಥಶಕ್ತಿಯಿಂದ, ಇಲ್ಲವೆ ಶಬ್ದಾರ್ಥಗಳೆರಡರ ಶಕ್ತಿಯಿಂದ ವ್ಯಂಗ್ಯವಾಗಿರುವ ಅರ್ಥವನ್ನೇ ಎಲ್ಲಿ ಮತ್ತೆ ಕವಿಯು ನೇರವಾದ ಮಾತುಗಳಿಂದಲೂ ಹೇಳಿಬಿಡುವನೋ ಆಗ ಅದು ಈ ಅನುರಣನರೂಪ-ವ್ಯಂಗ್ಯವಾದ ಧ್ವನಿಯಿಂದ ಬೇರೆಯಾದ ಒಂದು ಅಲಂಕಾರವೆನಿಸುವುದು. ಅಥವಾ ಅಲಕ್ಷ್ಯಕ್ರಮ-ವ್ಯಂಗ್ಯವಾದ ಧ್ವನಿಯಿರುವ ಸಂದರ್ಭಗಳಲ್ಲಿ ಅದು ಧ್ವನಿಗೆ ಒಂದು ಹೊಸಜಾತಿಯ ಅಲಂಕಾರ ವಾಗುವುದೆಂದು ಬೇಕಾದರೂ ಅರ್ಥಮಾಡಿಕೊಳ್ಳಬಹುದು.

ಶಬ್ದಶಕ್ತಿಯಿಂದ ವ್ಯಂಗ್ಯವಾದುದೇ ವಾಚ್ಯವೂ ಆಗಿರುವ ಉದಾಹರಣೆ :—

ವತ್ಸೇ ಮಾ ಗಾ ವಿಷಾದಂ ಶ್ವಸನಮುರುಜವಂ ಸಂತ್ಯಜೋರ್ಧ್ವಪ್ರವೃತ್ತಂ
ಕಂಪಃ ಕೋ ವಾ ಗುರುಸ್ತೇ ಭವತು ಬಲಭಿದಾ ಜೃಂಭಿತೇನಾತ್ರ ಯಾಹಿ |
ಪ್ರತ್ಯಾಖ್ಯಾನಂ ಸುರಾಣಾಮಿತಿ ಭಯಶಮನಚ್ಛದ್ಮನಾ ಕಾರಯಿತ್ವಾ
ಯಸ್ಮೈ ಲಕ್ಷ್ಮೀಮದಾದ್ವಃ ಸ ದಹತು ದುರಿತಂ ಮನ್ಥಮೂಢಾಂ ಪಯೋಧಿ : ||

'ಉಳಿ ಮಗಳೆ ವಿಷಾದ[1]ವನುಸಿರ[2]ವೇಗವನಂತೆ,
ಮೇಲೆ ಮುಂಬರಿವುದದು[3] ಬೇಡವಿನ್ನು |
ಗುರು[4]ಕಂಪ[5] ನಿನಗೇಕೆ; ಬಲಭೇದಿ[6] ಜೃಂಭಿತ[7]ವು ?
ಇಲ್ಲಿ ಬಾರೌ ವತ್ಸೆ ! ನನ್ನ ಜತೆಗೆ'|
ಎಂದು ಭಯಶಮನವನು ಮಾಳ್ಪ ನೋಗಿನಲಂದು
ದೂರಮಾಡುತೆ ಸುರರ, ಲಕ್ಷ್ಮಿಯನ್ನು |
ಆರಿಗಾ ಸಾಗರನು ಮಂಥಮೂಢೆಯನಂತು
ಒಲಿದಿತ್ತನೋ ಅವನೆ ಸಲಹಲೆಮ್ಮ ||

ಇನ್ನು ಅರ್ಥಶಕ್ತಿಯಿಂದ ವ್ಯಂಗ್ಯವಾದುದೇ ವಾಚ್ಯವೂ ಆಗಿರುವುದಕ್ಕೆ ಉದಾ ಹರಣೆ :—

---

[1] ದುಃಖ ಅಥವಾ ಶಿವ. [2] ಉಸಿರು ಅಥವಾ ವಾಯುದೇವ. [3] ಹೆಚ್ಚಾಗುವ ಅಥವಾ ಅಗ್ನಿದೇವ. [4] ಅತಿಯಾದ ಅಥವಾ ತಂದೆ. [5] ನಡುಕ ಅಥವಾ ವರುಣ. [6] ನಿಶ್ಶಕ್ತಿಗೆ ಕಾರಣ ಅಥವಾ ಇಂದ್ರ. [7] ಆಕಳಿಕೆ ಅಥವಾ ಐಶ್ವರ್ಯವುಳ್ಳ ಕುಬೇರ.

ಅಂಬಾ ಶೇತೇऽತ್ರ ವೃದ್ಧಾ ಪರಿಣತವಯಸಾಮಗ್ರಣೀರತ್ರ ತಾತೋ
ನಿಃಶೇಷಾಗಾರಕರ್ಮಶ್ರಮಶಿಥಿಲತನುಃ ಕುಂಭದಾಸೀ ತಥಾತ್ರ |
ಅಸ್ಮಿನ್ ಪಾಪಾಹಮೇಕಾ ಕತಿಪಯದಿವಸಪ್ರೋಷಿತಪ್ರಾಣನಾಥಾ
ಪಾನ್ಥಾಯೇತ್ಥಂ ತರುಣ್ಯಾ ಕಥಿತಮವಸರವ್ಯಾಹೃತಿವ್ಯಾಜಪೂರ್ವಮ್ ||

ಅಬ್ಬೆ ಮಲಗುವಳಿಲ್ಲಿ ಬಹುಮುದುಕಿ, ಮುದುಕರಲಿ
ಅಗ್ರಗಣ್ಯನೆ ಆದ ಅಪ್ಪನಿಲ್ಲಿ |
ಎಲ್ಲ ಮನೆಗೆಲಸದಲಿ ಬಳಲಿ ಬೆಂಡಾಗಿರುವ
ಮನೆಯಾಳು ಮಲಗುವುದು ಇಲ್ಲಿ ನೋಡು |
ಪಾಪಿ ನಾನೊಬ್ಬಳೇ ಇಹೆನಿಲ್ಲಿ, ನಾಥನವ-
ನೂರ ಬಿಟ್ಟನು ಕೆಲವು ದಿನದ ಕೆಳಗೆ |
ತರುಣಿಯೀ ರೀತಿಯಲಿ ಪೇಳಿದಳು ಪಾಂಥನಿಗೆ
ಮನೆಯನ್ನು ತೋರಿಸುವ ಸೋಗಿನಿಂದ ||

ಉಭಯಶಕ್ತಿಯಿಂದ ವ್ಯಂಗ್ಯ-ವಾಚ್ಯಗಳೆರಡೂ ಆದ ಉದಾಹರಣೆಯನ್ನು ಹಿಂದೆಯೇ ಕೊಡಲಾಗಿದೆ—'ದೃಷ್ಟ್ಯಾ ಕೇಶವ . . .' ಎಂಬ ಶ್ಲೋಕ[1].

ಕಾರಿಕೆ

ಪ್ರೌಢೋಕ್ತಿಮಾತ್ರನಿಷ್ಪನ್ನಶರೀರಃ ಸಮ್ಭವೀ ಸ್ವತಃ |
ಅರ್ಥೋऽಪಿ ದ್ವಿವಿಧೋ ಜ್ಞೇಯೋ ವಸ್ತುನೋऽನ್ಯಸ್ಯ ದೀಪಕಃ ‖ ೨೪ ‖

ಅರ್ಥಾಂತರವನ್ನು ಧ್ವನಿಸುವ ಅರ್ಥವು ಕೂಡ ಎರಡು ವಿಧವಾಗಿದೆ: 'ಮಾತಿನ ಚಮತ್ಕಾರದಿಂದ ಮಾತ್ರ ಸಿದ್ಧವಾದುದು' ಮತ್ತು 'ಸ್ವತಸ್ಸಿದ್ಧ'ವಾದುದು, ಎಂದು.

ವೃತ್ತಿ

ಅರ್ಥಶಕ್ತಿಮೂಲ-ಅನುರಣನರೂಪ-ವ್ಯಂಗ್ಯವಾದ ಧ್ವನಿಯಲ್ಲಿ ಇದುವರೆಗೂ ಯಾವ ವ್ಯಂಜಕವಾದ ಅರ್ಥವನ್ನು ನಿರೂಪಿಸಲಾಯಿತೋ, ಅದು ಎರಡು ಬಗೆಯಾಗಿದೆ—ಕವಿಯ ಅಥವಾ ಕವಿಸೃಷ್ಟಿಯಾದ ಪಾತ್ರದ ಮಾತಿನ ಚಮತ್ಕಾರದಿಂದ ಮಾತ್ರ ಹುಟ್ಟತಕ್ಕುದು ಮೊದಲನೆಯದು; ಸ್ವತಸ್ಸಿದ್ಧವಾದುದು ಎರಡನೆಯದು.

ಮೊದಲನೆಯದಕ್ಕೆ ಉದಾಹರಣೆ:—

ಸಜ್ಜೇಹಿ ಸುರಹಿಮಾಸೋ ಣ ದಾವ ಅಪ್ಪೇಇ ಜುಅಇಜಣಲಕ್ಖಮುಹೇ |
ಅಹಿಣವಸಹಆರಮುಹೇ ಣವಪಲ್ಲವಪತ್ತಲೇ ಅಣಂಗಸ್ಸ ಶರೇ ||

---

[1] ಹಿಂದೆ ಪುಟ ೧೩ನ್ನು ನೋಡಿ.

ನವಸಹಕಾರದ ಮುಖಗಳನಾಂತು
ಪೊಸ ತಳಿರೆಲೆಗಳ ಚಿಗುರಿಸುವ |
ಯುವತಿಸಮೂಹವೆ ಗುರಿಯಾಗಿರುವ
ಮನ್ಮಥದೇವನ ಬಾಣಗಳ |
ಸಜ್ಜಾಗಿರಿಸಿದೆ ವಸಂತಮಾಸವು
ಆದರೆ ಬಿಡಲೊಲ್ಲದು ಇನ್ನೂ ||

ಕವಿ-ನಿಬದ್ಧ-ಪ್ರೌಢೋಕ್ತಿಗೆ ಈಗಾಗಲೇ ಕೊಟ್ಟಿರುವ 'ಶಿಖರಿಣಿ . . .'[1] ಎಂಬ ಶ್ಲೋಕವೇ ಉದಾಹರಣೆ. ಅಥವಾ—

ಸಾಅರವಿಇಣ್ಣಜೊವ್ವಣಹತ್ಥಾಲಮ್ಬಂ ಸಮುಣ್ಣಮನ್ತೇಹಿಮ್ |
ಅಬ್ಭುಟ್ಠಾಣಂ ವಿಅ ಮಮ್ಮಹಸ್ಸ ದಿಣ್ಣಂ ತುಹ ಥಣೇಹಿಮ್ ||

ಸಾದರದೆ ಯೌವನವು ಕೈವಿಡಿದು ಸೇವಿಸಲು
ಮೇಲೇಳುತಿಹ ನಿನ್ನ ಕುಚಗಳಿಂದ |
ಅತಿಥಿಯಂದದಿ ಬಂದ ಮನ್ಮಥನ ಸ್ವಾಗತಿಸಿ
ಇದಿರ್ಗೊಳ್ಳಲೆದ್ದಂತೆ ತೋರುತಿಹುದು ||

'ಸ್ವತಃಸಂಭವಿ' ಎಂಬುದು ಬೇರೆಡೆಯಲ್ಲಿಯೂ ಯಥೋಚಿತವಾಗಿ ಇರಬಹುದೆಂದು ಊಹಿಸಬಹುದಾದಂತಹ ಅರ್ಥ ; ಅದು ಕೇವಲ ಕವಿಯ ಮಾತಿನ ಚಮತ್ಕಾರದಿಂದಲೇ ಸಾಧ್ಯವಾಗಿರುವುದಲ್ಲ. ಇದಕ್ಕೂ ಈಗಾಗಲೇ ಕೊಡಲಾದ 'ಏವಂವಾದಿನಿ . . .'[2] ಮೊದಲಾದ ಶ್ಲೋಕಗಳೇ ಉದಾಹರಣೆಗಳಾಗುತ್ತವೆ.

ಅಥವಾ—

ಸಿಹಿಪಿಂಛಕಣ್ಣಪೂರಾ ಜಾಆ ವಾಹಸ್ಸ ಗವ್ವಿರೀ ಭಮಇ |
ಮುತ್ತಾಫಲರಇಅಪಸಾಹಣಾಣँ ಮಜ್ಝೇ ಸವತ್ತೀಣಂ ||

ನವಿಲಿನ ಗರಿಯನು ಕಿವಿಯಲಿ ಧರಿಸಿ
ಬೇಡನ ಮಡದಿಯು ಗರ್ವದಲಿ |
ನಡೆವಳು ಮುಕ್ತಾಭರಣವ ಧರಿಸಿದ
ಸವತಿಯರೆಲ್ಲರ ಮಧ್ಯದಲಿ ||

---

[1] ಪುಟ ೩೬ ನ್ನು ನೋಡಿ (ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೨).

[2] ಹಿಂದೆ ಪುಟ ೧೪ ನ್ನು ನೋಡಿ.

ಕಾರಿಕೆ

ಅರ್ಥಶಕ್ತೇರಲಂಕಾರೋ ಯತ್ರಾಪ್ಯನ್ಯಃ ಪ್ರತೀಯತೇ।
ಅನುಸ್ವಾನೋಪಮವ್ಯಂಗ್ಯಃ ಸ ಪ್ರಕಾರೋಽಪರೋ ಧ್ವನೇಃ ॥ ೨೫ ॥

ಕೇವಲ ಅರ್ಥದ ಶಕ್ತಿಯಿಂದ ತೋರುವ ಅಲಂಕಾರಕ್ಕಿಂತ ಬೇರೆಯಾಗಿ, ಎಲ್ಲಿ ಇನ್ನೊಂದು ಅಲಂಕಾರವು ತೋರುತ್ತಿರುವುದೋ, ಅದು ಅನುರಣನರೂಪ-ವ್ಯಂಗ್ಯ ವೆಂಬ ಧ್ವನಿಯ ಇನ್ನೊಂದು ಪ್ರಕಾರವೇ.

ವೃತ್ತಿ

ವಾಚ್ಯವಾದ ಅರ್ಥಾಲಂಕಾರಕ್ಕಿಂತ ಬೇರೆಯಾಗಿ, ಮತ್ತೊಂದು ಅಲಂಕಾರವು ಆ ಅರ್ಥದ ವಿಶೇಷಸಾಮರ್ಥ್ಯದಿಂದ ಧ್ವನಿತವಾಗುತ್ತಿರುವುದು ಕಂಡರೆ, ಆಗ ಅದು ಅರ್ಥಶಕ್ತಿಮೂಲವಾದ ಅನುರಣನರೂಪವ್ಯಂಗ್ಯವೆಂಬ ಇನ್ನೊಂದು ಧ್ವನಿಭೇದವೇ ಆಗಿರುತ್ತದೆ.

ಈ ಬಗೆಯ ಅಲಂಕಾರಧ್ವನಿಯ ವ್ಯಾಪ್ತಿಯು ಬಹಳ ಸಣ್ಣದಲ್ಲವೆ? ಎಂಬ ಶಂಕೆಗೆ ಸಮಾಧಾನವನ್ನು ಮುಂದಿನ ಕಾರಿಕೆಯು ಹೇಳುತ್ತದೆ—

ಕಾರಿಕೆ

ರೂಪಕಾದಿರಲಂಕಾರವರ್ಗೋ ಯೋ ವಾಚ್ಯತಾಂ ಶ್ರಿತಃ।
ಸ ಸರ್ವೋ ಗಮ್ಯಮಾನತ್ವಂ ಬಿಭ್ರದ್ ಭೂಮ್ನಾ ಪ್ರದರ್ಶಿತಃ ॥ ೨೬ ॥

ವಾಚ್ಯತ್ವವನ್ನಾಶ್ರಯಿಸಿದ ರೂಪಕವೇ ಮೊದಲಾದ ಅಲಂಕಾರವರ್ಗವೆಲ್ಲವೂ ವ್ಯಂಗ್ಯತ್ವವನ್ನು ಸಹ ಎಷ್ಟೋ ವೇಳೆ ಪಡೆಯುವುದೆಂಬುದು (ಹಿಂದಿನವರಿಂದಲೇ) ಪ್ರತಿಪಾದಿತವಾಗಿದೆ.

ವೃತ್ತಿ

ಅನ್ಯತ್ರ ವಾಚ್ಯವೆಂಬುದಾಗಿ ಪ್ರಸಿದ್ಧವಾಗಿರುವ ರೂಪಕವೇ ಮೊದಲಾದ ಅಲಂಕಾರವರ್ಗವು, ಇತರತ್ರ ವ್ಯಂಗ್ಯವಾಗಿಯೂ ಹೆಚ್ಚಾಗಿರುವುದೆಂಬುದು ಪೂಜ್ಯರಾದ ಉದ್ಭಟಭಟ್ಟನೇ ಮೊದಲಾದವರಿಂದ ಆಗಲೇ ನಿರೂಪಿತವಾಗಿದೆ. ಉದಾಹರಣೆಗೆ 'ಸಸಂದೇಹ'ವೇ ಮೊದಲಾದ ಅಲಂಕಾರಗಳಲ್ಲಿ 'ಉಪಮೆ', 'ರೂಪಕ', 'ಅತಿಶಯೋಕ್ತಿ'—ಈ ಅಲಂಕಾರಗಳು ಗಮ್ಯವಾಗುವುವೆಂಬುದನ್ನು ಅವರೇ ವಿವರಿಸಿದಾರೆ. ಆದುದರಿಂದ ಒಂದು ಅಲಂಕಾರವು ಮತ್ತೊಂದು ಅಲಂಕಾರದಿಂದ ವ್ಯಂಗ್ಯವಾಗುವ ವಿಷಯವನ್ನು ಪ್ರತಿಪಾದಿಸಲು ವಿಶೇಷಪ್ರಯತ್ನದ ಆವಶ್ಯಕತೆಯೇ ಇಲ್ಲ.

ಆದರೂ ಇಷ್ಟನ್ನು ಮಾತ್ರ ಹೇಳಲಾಗುತ್ತದೆ:

ಕಾರಿಕೆ

ಅಲಂಕಾರಾನ್ತರಸ್ಯಾಪಿ ಪ್ರತೀತೌ ಯತ್ರ ಭಾಸತೇ।
ತತ್ಪರತ್ವಂ ನ ವಾಚ್ಯಸ್ಯ ನಾಸೌ ಮಾರ್ಗೋ ಧ್ವನೇರ್ಮತಃ ॥ ೨೭ ॥

ಬೇರೊಂದು ಅಲಂಕಾರವು ಧ್ವನಿತವಾಗುತ್ತಿದ್ದ ಮಾತ್ರಕ್ಕೆ, ಆ ವ್ಯಂಗ್ಯವೊಂದರಲ್ಲೇ ವಾಚ್ಯವು ಸಂಪೂರ್ಣವಾಗಿ ಮಗ್ನವಾಗಿಲ್ಲದಿರುವ ಪಕ್ಷದಲ್ಲಿ, ಅದು ಧ್ವನಿಯ ಮಾರ್ಗವಲ್ಲ.

ವೃತ್ತಿ

ವಾಚ್ಯವಾದ ಅಲಂಕಾರಗಳಲ್ಲಿ ಅನುರಣನರೂಪವಾದ ಅಲಂಕಾರಾಂತರದ ಧ್ವನಿಯು ಬರುತ್ತಿದ್ದರೂ, ಅಲ್ಲಿ ವಾಚ್ಯವು ವ್ಯಂಗ್ಯವನ್ನು ಪ್ರತಿಪಾದಿಸುವುದೊಂದರಲ್ಲೇ ನಿರತವಾಗಿರುವುದರಿಂದ ಯಾವ ಸೊಗಸು ಬರುವುದೋ ಅದಿಲ್ಲದಿದ್ದರೆ ಆಗ ಅದು ಧ್ವನಿಯಲ್ಲಿ ಸೇರುವುದಿಲ್ಲ. ಉದಾಹರಣೆಗೆ, 'ದೀಪಕ'ವೇ ಮೊದಲಾದ ಅಲಂಕಾರಗಳಲ್ಲಿ 'ಉಪಮೆ'ಯು ಧ್ವನಿತವಾಗುತ್ತಿರುವುದಾದರೂ, ಅದನ್ನೇ ಕುರಿತ ಸೊಗಸಿಲ್ಲದುದರಿಂದ, ಅದಕ್ಕೆ ಧ್ವನಿಯೆಂಬ ಹೆಸರು ಬರುವುದಿಲ್ಲ.

ಚನ್ದಮಊಏಹಿಁ ಣಿಸಾ ಣಲಿಣೀ ಕಮಲೇಹಿಁ ಕುಸುಮಗುಚ್ಛೇಹಿಁ ಲಆ।
ಹಂಸೇಹಿಁ ಸರಅಸೋಹಾ ಕವ್ವಕಹಾ ಸಜ್ಜಣೇಹಿಁ ಕರಇ ಗುರುಈ॥

ಚಂದ್ರಕಿರಣಗಳಿಂದ ರಜನಿಯು
ಚಾರುಕಮಲಗಳಿಂದ ನಳಿನಿಯು
ಕುಸುಮಗುಚ್ಛಗಳಿಂದ ಲತೆಗಳು ಮತ್ತೆ ಭಾವಿಪೊಡೆ।
ಶಾರದದ ಶೋಭೆಯದು ಹಂಸಗ-
ಳಿಂದ ಕಾವ್ಯದ ಕಥೆಗಳೆಲ್ಲವು
ಸಜ್ಜನರ ಕೈಯಿಂದ ಪೆರ್ಚುಗೆವಡೆದು ಸೊಗಯಿಪುವು॥

ಇಂತಹ ಉದಾಹರಣೆಗಳಲ್ಲಿ ಉಪಮಾಲಂಕಾರವು ಗಮ್ಯವಾಗಿದ್ದರೂ ವಾಚ್ಯವಾದ ದೀಪಕಾಲಂಕಾರದಲ್ಲಿ ಸೊಗಸಿರುವುದೇ ಹೊರತು, ವ್ಯಂಗ್ಯವಾದ ಅಲಂಕಾರ (=ಉಪಮಾ)ದಲ್ಲಿ ಮುಖ್ಯತಾತ್ಪರ್ಯವಿಲ್ಲ. ಆದುದರಿಂದ ಅಲ್ಲಿ ಕಾವ್ಯಕ್ಕೆ ವಾಚ್ಯವಾದ ದೀಪಕಾದಿಗಳನ್ನೇ ಅಲಂಕಾರವೆನ್ನುವುದು ನ್ಯಾಯ. ಆದರೆ ಎಲ್ಲಿ ವಾಚ್ಯವು ಕೇವಲ ವ್ಯಂಗ್ಯಪರವಾಗಿಯೇ ಇರುವುದೋ, ಅಲ್ಲಿ ಮಾತ್ರ ಆ ವ್ಯಂಗ್ಯ

ವನ್ನನುಲಕ್ಷಿಸಿಯೇ ಕಾವ್ಯದ ಸೊಗಸಿಗೆ ಹೆಸರು ಕೊಡುವುದು ಯುಕ್ತ (ಎಂದರೆ 'ಧ್ವನಿ 'ಯೆನ್ನಬೇಕು).

ಉದಾಹರಣೆ :—

ಪ್ರಾಪ್ತಶ್ರೀರೇವ ಕಸ್ಮಾತ್ ಪುನರಪಿ ಮಯಿ ತಂ ಮನ್ಥಖೇದಂ ವಿದಧ್ಯಾತ್
ನಿದ್ರಾಮಪ್ಯಸ್ಯ ಪೂರ್ವಾಮನಲಸಮನಸೋ ನೈವ ಸಂಭಾವಯಾಮಿ |
ಸೇತುಂ ಬಧ್ನಾತಿ ಭೂಯಃ ಕಿಮಿತಿ ಚ ಸಕಲದ್ವೀಪನಾಥಾನುಯಾತ-
ಸ್ತ್ವಯ್ಯಾಯಾತೇ ವಿತರ್ಕಾನಿತಿ ದಧತ ಇವಾಭಾತಿ ಕಂಪಃ ಪಯೋಧೇಃ ||

ಲಕ್ಷ್ಮಿಯನು ಪಡೆದಿಹನು ಈತನಾಗಲೆ, ಬರಿದೆ
ಮಂಥನದ ಪೀಡೆಯನು ಏಕೆ ಕೊಡುವ ? |
ಮನಕೆ ಆಲಸ್ಯವನು ಇವ ಕಾಣನದರಿಂದ
ಮೊದಲ ನಿದ್ರೆಯ ಕಾಂಕ್ಷೆಯಿವಗೆನ್ನಲಾರೆ |
ದ್ವೀಪವೆಲ್ಲಕು ಇವನೆ ನಾಥನಾಗಿರುತಿಹನು
ಮತ್ತೆನಗೆ ಸೇತುವೆಯ ಕಟ್ಟುವುದದೆಂತು ? |
ಬಳಿಗೆ ನೀ ಬರಲಿಂತು ಯೋಚನೆಯ ಮಾಡುವೊಲು
ಅಂಬುಧಿಯ ಕಂಪವದು ಕಂಗೊಳಿಸುತಿಹುದು ||

ಅಥವಾ—

ಲಾವಣ್ಯಕಾನ್ತಿಪರಿಪೂರಿತದಿಙ್ಮುಖೇಽಸ್ಮಿನ್
ಸ್ಮೇರೇಽಧುನಾ ತವ ಮುಖೇ ತರಲಾಯತಾಕ್ಷಿ |
ಕ್ಷೋಭಂ ಯದೇತಿ ನ ಮನಾಗಪಿ ತೇನ ಮನ್ಯೇ
ಸುವ್ಯಕ್ತಮೇವ ಜಲರಾಶಿರಯಂ ಪಯೋಧಿಃ[1] ||

ಲಾವಣ್ಯಕಾಂತಿಯಿಂ ದಿಕ್ತಟವ ಬೆಳಗುತ್ತ
ನಿನ್ನ ನಗೆಮುಖವಿರಲು ತರಲಾಯತಾಕ್ಷಿ |
ಕ್ಷೋಭವನೆ ಸ್ವಲ್ಪವೂ ತಾಳದಿದೆ ಸಾಗರವು
ಸುವ್ಯಕ್ತವೆಂಬೆನದು ಜಲರಾಶಿ[2]ಯೆಂದು ||

ಮೇಲೆ ಕೊಡಲಾದ ಈ ಉದಾಹರಣೆಗಳಲ್ಲಿ ಅನುರಣನರೂಪ-ವ್ಯಂಗ್ಯವಾದ ರೂಪಕಾಲಂಕಾರದಿಂದಲೇ ಕಾವ್ಯದ ಸೊಗಸು ಹೆಚ್ಚಾಗಿ ಕಾಣುವುದರಿಂದ, ಅಲ್ಲಿ 'ರೂಪಕ-ಧ್ವನಿ 'ಯಿದೆಯೆಂದೇ ಹೇಳುವುದು ನ್ಯಾಯ.

---

[1] ಈ ಶ್ಲೋಕವು ಆನಂದವರ್ಧನನೇ ಬರೆದುದು.

[2] ಜಲ = ಜಡ

'ಉಪಮಾ-ಧ್ವನಿ'ಗೆ ಉದಾಹರಣೆ :—

ವೀರಾಣಂ ರಮಇ ಘುಸಿಣರುಣಮ್ಮಿ ಣ ತಹಾ ಪಿಆಥಣುಚ್ಛಂಗೇ |
ದಿಟ್ಠೀ ರಿಉಗಅಕುಮ್ಭತ್ಥಲಮ್ಮಿ ಜಹ ಬಹಲಸಿನ್ದೂರೇ ||

ವೀರರ ಕಂಗಳು ರಮಿಸವು ಆ ಪರಿ
ಲೇಪಾರುಣವಹ ಕಾಂತಾಕುಚದಿ |
ಬಹುಸಿಂದೂರವಿರಾಜಿತ ರಿಪುಗಜ-
ಕುಂಭಸ್ಥಲದಲಿ ರಮಿಸುವ ತೆರದಿ ||[1]

ಅಥವಾ ಆನಂದವರ್ಧನನೇ ರಚಿಸಿರುವ 'ವಿಷಮಬಾಣಲೀಲೆ'ಯಲ್ಲಿ ಕಾಮದೇವನ ಅಸುರಪರಾಜಯದ ವರ್ಣನೆಯನ್ನು ಮಾಡುವಾಗ ಬರುವ ಈ ಶ್ಲೋಕವನ್ನು ನೋಡಿ :—

ತಂ ತಾಣ ಸಿರಿಸಹೋಅರರಅಣಾಹರಣಮ್ಮಿ ಹಿಅಅಮೆಕ್ಕರಸಮ್ |
ಬಿಂಬಾಹರೇ ಪಿಆಣಂ ಣಿವೇಸಿಅಂ ಕುಸುಮಬಾಣೇನ ||

ಶ್ರೀಸಹೋದರರತ್ನ ಹರಣದಲಿ ತಾನಾರ
ಮನಕೊಂದೆ ಹಿರಿಯಾಸೆ ಮೊದಲಿದ್ದಿತೋ |
ಇಂದದುವೆ ಮನವನ್ನೆ ನಲ್ಲೆಯರ ಚೆಂದುಟಿಯೊ-
ಳಿರಿಸಿಹನು ಕುಸುಮಗಳ ಬಾಣದಿಂದ[2] ||

ಆಕ್ಷೇಪಾಲಂಕಾರ-ಧ್ವನಿಗೆ ಉದಾಹರಣೆ :—

ಸ ವಕ್ತುಮಖಿಲಾನ್ ಶಕ್ತೋ ಹಯಗ್ರೀವಾಶ್ರಿತಾನ್ ಗುಣಾನ್ |
ಯೋಽಮ್ಬುಕುಮ್ಭೈಃ ಪರಿಚ್ಛೇದಂ ಜ್ಞಾತುಂ ಶಕ್ತೋ ಮಹೋದಧೇಃ ||

ಹಯಕಂಠನಲಿ ನಿಂದ ಸದ್ಗುಣಗಳೆಲ್ಲವನು
ಪೇಳಲಾಪನದಾರು ಸಾಗರವನೆ |
ಒಂದೊಂದು ಕೊಡವಾಗಿ ನೀರೆಲ್ಲ ಬಿಡದಳೆದು
ಅದರಳತೆಯಿನಿತೆಂದು ನಿರ್ಧರಿಪನೋ ||

ಇಲ್ಲಿ ವಾಚ್ಯವಾದ ಅತಿಶಯೋಕ್ತಿಯಿಂದ, ಹಯಗ್ರೀವನ ಗುಣಗಳು ಅವರ್ಣನೀಯವೆಂದು ಪ್ರತಿಪಾದಿಸುವ, ಮತ್ತು ಅವನ ಅಸಾಧಾರಣವಾದ ವೈಶಿಷ್ಟ್ಯವನ್ನು ಸೂಚಿಸುವ, ಆಕ್ಷೇಪಾಲಂಕಾರವು ಧ್ವನಿತವಾಗುತ್ತದೆ.

---

[1] ಇಲ್ಲಿ ವಾಚ್ಯವಾದುದು ವ್ಯತಿರೇಕಾಲಂಕಾರ.

[2] ಅತಿಶಯೋಕ್ತಿಯು ಇಲ್ಲಿ ವಾಚ್ಯವಾಗಿರುವ ಅಲಂಕಾರ.

ಅರ್ಥಾಂತರನ್ಯಾಸ-ಧ್ವನಿಯು ಶಬ್ದಶಕ್ತಿಮೂಲ-ಅನುರಣನರೂಪ-ವ್ಯಂಗ್ಯ ಮತ್ತು ಅರ್ಥಶಕ್ತಿಮೂಲ-ಅನುರಣನರೂಪ-ವ್ಯಂಗ್ಯ—ಈ ಎರಡು ಪ್ರಕಾರಗಳಲ್ಲಿಯೂ ಬರುತ್ತದೆ. ಮೊದಲನೆಯದಕ್ಕೆ ಉದಾಹರಣೆ :—

ದೆವ್ವಾಎತ್ತಮ್ಮಿ ಫಲೇ ಕಿಂ ಕೀರಇ ಎತ್ತಿಅಂ ಪುಣಾ ಭಣಿವೋ |
ಕಂಕಿಲ್ಲಪಲ್ಲವಾಃ ಪಲ್ಲವಾಣ ಅಣ್ಣಾಣಂ ಣ ಸರಿಚ್ಛಾ ||

ಫಲವು ದೈವಾಯತ್ತ ! ನಾವು ಮಾಡುವುದೇನು ?
ಆದರೂ ಪೇಳುವೆವು ಇನಿತೊಂದನು |
ಕೆಂಪಸುಗೆ ತಳಿರುಗಳು ಮಿಕ್ಕೆಲ್ಲ ತಳಿರ್ಗಳಿಗೆ
ತಾವೆಂದಿಗೂ ಸದೃಶವೆಂದೆನಿಸವು ||

ಇಲ್ಲಿ 'ಫಲ'[1]ವೆಂಬ ಪದದಲ್ಲಿ ಅರ್ಥಾಂತರನ್ಯಾಸಾಲಂಕಾರದ ಧ್ವನಿಯಿರುವುದರಿಂದ ಒಟ್ಟು ವಾಕ್ಯವು ಬೇರೊಂದನ್ನು (= ಅಪ್ರಸ್ತುತಪ್ರಶಂಸೆಯನ್ನು) ಬೋಧಿಸುತ್ತಿದ್ದರೂ ಪರಸ್ಪರ ವಿರೋಧವೇನೂ ಬರುವುದಿಲ್ಲ.

ಎರಡನೆಯದಕ್ಕೆ ಉದಾಹರಣೆ :—

ಹಿಅಅಟ್ಠಾವಿಅಮಣ್ಣುಂ ಅವರುಣ್ಣಮುಹಂ ಹಿ ಮಂ ಪಸಾಅನ್ತ |
ಅವರದ್ಧಸ್ಸ ವಿ ಣ ಹು ದೇ ವಹುಜಾಣಅ ರೋಸಿಉಂ ಸಕ್ಕಮ್ ||

ಮುಳಿಸನೆಲ್ಲವು ನುಂಗಿ ಮನದಲೆ ಮುಖದಿ ರೋಷವ ತೋರದೆ
ಇರಲು, ನನಗನುನಯುವ ಪೇಳುವ ಮನದಿ ಬಂದುದ ಮರೆಯುತ |
ಅಂತೆ ನಿನ್ನಿಂದಾದ ದೋಷವನೊಂದನೂ ನೀ ನೆನೆಯದೆ
ಎಲ್ಲ ಬಲ್ಲವನೆನೆಸಿ ಮುನಿವುದದೆಂತು ಸಮನಿಸಿತು ? ||

ಇಲ್ಲಿ ವಾಚ್ಯವಾಗಿರುವ 'ದೋಷಿಯೂ ಬಲ್ಲವನೂ ಆದವನು ಕೋಪಿಸುವುದು ಅಶಕ್ಯ' ಎಂಬ ಸಾಮಾನ್ಯವಾಕ್ಯವು ಪ್ರಕೃತಕ್ಕೆ ಸಂಬಂಧಿಸಿದ ವಿಶೇಷವಾಕ್ಯವನ್ನು ಧ್ವನಿಯ ಮೂಲಕ ಸಮರ್ಥಿಸುತ್ತದೆ.

ಹೀಗೆಯೇ ವ್ಯತಿರೇಕಾಲಂಕಾರ-ಧ್ವನಿಯೂ ಎರಡು ವಿಧ. ಮೊದಲನೆಯದಕ್ಕೆ ಉದಾಹರಣೆಯನ್ನು ಹಿಂದೆಯೇ ಕೊಟ್ಟಿದೆ.[2] ಎರಡನೆಯದಕ್ಕೆ ಉದಾಹರಣೆ :—

ಜಾಏಜ್ಜ ವಣುದ್ದೇಸೇ ಖುಜ್ಜ ವ್ವಿಅ ಪಾಅವೋ ಗಡಿಅವತ್ತೋ |
ಮಾ ಮಾಣುಸಮ್ಮಿ ಲೋಏ ತಾಏಕ್ಕರಸೋ ದರಿದ್ದೋ ಅ ||

---

[1] ಹಣ್ಣು ಮತ್ತು ಕಾರ್ಯಸಿದ್ಧಿ.

[2] ಪುಟ ೬೧ ನ್ನು ನೋಡಿ (ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೨).

ಕಾಡಿನಲಿ ಬೋಳಾದ ಕೀಳಾದ ಮರವಾಗಿ
ಪುಟ್ಟಿದರು ಪುಟ್ಟುವೆನು ವ್ಯಥೆಯಿಲ್ಲದೆ।
ತ್ಯಾಗಬುದ್ಧಿಯ ಜತೆಗೆ ದಾರಿದ್ರ್ಯ ಸೇರಿರುವ
ಮನುಜಜನ್ಮವದೆನಗೆ ಬೇಡವೆಂದೂ ‖

ಇಲ್ಲಿ ತ್ಯಾಗಶೀಲನೂ ದರಿದ್ರನೂ ಆದವನ ಜನ್ಮವನ್ನು ತೆಗಳುವುದೂ ಎಲೆಯಿರದೆ ಬೋಳಾದ ಕುರುಚಲುಗಿಡದ ಜನ್ಮವನ್ನು ಹೊಗಳುವುದೂ ನೇರವಾಗಿ ಶಬ್ದಗಳಿಂದ ವಾಚ್ಯವಾಗುವ ಅರ್ಥ. ಆ ಗಿಡಕ್ಕೂ ಮನುಷ್ಯನಿಗೂ ಒಂದು ಉಪಮಾನೋಪಮೇಯ ಭಾವವು ತೋರುವುದರ ಮೂಲಕ ಉಪಮಾನವು ಉಪಮೇಯಕ್ಕಿಂತಲೂ ಉತ್ತಮ ಎಂಬ 'ವ್ಯತಿರೇಕ'ವು ಧ್ವನಿತವಾಗುತ್ತದೆ. ಅಂತಹ ಮನುಷ್ಯನು ಅತ್ಯಂತ ಶೋಚ್ಯನು ಎಂಬುದೇ ತಾತ್ಪರ್ಯ.

ಉತ್ಪ್ರೇಕ್ಷಾಲಂಕಾರ-ಧ್ವನಿಗೆ ಉದಾಹರಣೆ:—

ಚನ್ದನಾಸಕ್ತಭುಜಗನಿಃಶ್ವಾಸಾನಿಲಮೂರ್ಛಿತಃ।
ಮೂರ್ಛಯತ್ಯೇಷ ಪಥಿಕಾನ್ ಮಧೌ ಮಲಯಮಾರುತಃ ‖

ಚಂದನದ ತರುಗಳೊಳಗಾಶ್ರಯವ ಪಡೆದಿರುವ
ಸರ್ಪಗಳ ನಿಶ್ವಾಸದಿಂದ ಮೂರ್ಛಿತನಾದ।
ಮಲಯಮಾರುತನಿವನು ಪಥಿಕರೆಲ್ಲರನಿಂದು
ಮೂರ್ಛೆವೋಗಿಸುತಿಹನು ಮಧುಮಾಸ ಬಂದಿರಲು ‖

ಇದು ವಸಂತಕಾಲದ ವರ್ಣನೆಯಾದುದರಿಂದ ಪಥಿಕರು ಮೂರ್ಛೆಹೋಗುವುದಕ್ಕೆ ಅವರ ಕಾಮವು ಉದ್ದೀಪಿತವಾಗುವುದೇ ನಿಜವಾದ ಕಾರಣ. ಅದನ್ನೇ ಕವಿಯು ಉತ್ಪ್ರೇಕ್ಷಿಮಾಡಿ ಚಂದನಾಸಕ್ತವಾದ ಹಾವುಗಳ ವಿಷವಾತವು ಮಲಯಮಾರುತದಲ್ಲಿ ಸೇರಿಕೊಂಡುದು ಕಾರಣವೆಂದು ವರ್ಣಿಸಿದ್ದಾನೆ. ವಾಚ್ಯವಾಗಿ ಉತ್ಪ್ರೇಕ್ಷೆಯನ್ನು ('ಇವ' ಮೊದಲಾದ ಶಬ್ದಗಳಿಂದ) ಹೇಳದಿರುವುದರಿಂದ ಅದನ್ನು ವಾಕ್ಯಾರ್ಥದ ಸಾಮರ್ಥ್ಯದಿಂದ ಗಮ್ಯವಾಗುವ ಅನುರಣನರೂಪಧ್ವನಿಯೆಂದೇ ಒಪ್ಪಬೇಕು. ಅಲ್ಲದೆ, ಇಂತಹ ಸ್ಥಳಗಳಲ್ಲಿ 'ಇವ' ಮೊದಲಾದ ಉತ್ಪ್ರೇಕ್ಷಾವಾಚಕ ಶಬ್ದಗಳಿಲ್ಲದಿರುವಾಗ ಉತ್ಪ್ರೇಕ್ಷೆಯ ಸಂಬಂಧವೇ ಬರುವಂತಿಲ್ಲವೆನ್ನುವುದು ಸರಿಯಲ್ಲ; ಏಕೆಂದರೆ ಇಲ್ಲಿ ಉತ್ಪ್ರೇಕ್ಷೆಗೆ ಸರಿಯಾದ 'ಗಮಕ'ಗಳಿವೆ. ಹೀಗೆಯೇ ವಾಚಕ ಶಬ್ದಗಳಿಲ್ಲದಿದ್ದರೂ ಉತ್ಪ್ರೇಕ್ಷೆಯ ತಿಳಿವಳಿಕೆಯು ನಮಗೆ ಬರುವಂತಹ ಎಷ್ಟೋ ಉದಾಹರಣೆಗಳು ಸಿಕ್ಕುತ್ತವೆ. ಹೇಗೆಂದರೆ—

ಈಸಾಕಲುಸಸ್ಸ ವಿ ತುಹ ಮುಹಸ್ಸ ಣಂ ಏಸ ಪುಣ್ಣಿಮಾಚನ್ದೋ |
ಅಜ್ಜ ಸರಿಸತ್ತಣಂ ಪಾವಿಊಣ ಅಙ್ಗೇ ಚಿಅ ಣ ಮಾಇ ||

ಕೋಪಕಲುಷಿತವಾದ ನಿನ್ನ ಮುಖಸಾಮ್ಯವದು
ದೊರೆತಿರಲು ಕೊನೆಗೊಮ್ಮೆ ಹುಣ್ಣಿಮೆಯಲಿ |
ಅನಿತರಿಂದಲೆ ನೋಡು ತನ್ನಂಗದಳತೆಯನು
ಮೀರಿಹನು ಹಿಡಿಸದೆಯೆ ಚಂದ್ರನಿಂದು ||

ಅಥವಾ—

ತ್ರಾಸಾಕುಲಃ ಪರಿಪತನ್ ಪರಿತೋ ನಿಕೇತಾನ್
ಪುಂಭಿರ್ನ ಕೈಶ್ಚಿದಪಿ ಧನ್ವಿಭಿರನ್ವಬಂಧಿ |
ತಸ್ಥೌ ತಥಾಪಿ ನ ಮೃಗಃ ಕ್ವಚಿದಂಗನಾಭಿ-
ರಾಕರ್ಣಪೂರ್ಣನಯನೇಷುಹತೇಕ್ಷಣಶ್ರೀಃ ||

ಮನೆಗಳೆಡೆಯೊಳಗೆ ಭಯದಿಂದ ಪರಿಯುತಿಹ ಹರಿ-
ಣನಂ ಬೆಂಬಳಿವಿಡಿದು ಬಿಲ್ಲುಗಳ ಕೈಕೊಂಡ
ಜನರು ಯಾರೂ ಅಲ್ಲಿ ಬರದಿದ್ದರೂ ತಾನು ಪರಿವುದನು ನಿಲಿಸಲಿಲ್ಲ |
ತನಗಿದ್ದ ಕಣ್ಣ ಚೆಲುವನ್ನೆಲ್ಲ ಸುಂದರಾಂ-
ಗನೆಯರೆಲ್ಲ ತಮ್ಮಯ ಕಿವಿವರೆಗೆ ತಾಕಿ ನೀ-
ಳ್ದ ನಯನಂಗಳ ಬಾಣಘಾತದಿಂ ತಳುವದೆಯೆ ಗಾಸಿಗೊಳಿಸುತ್ತಲಿರಲು ||

ಈ ಶಬ್ದಗಳಿಂದ ಉತ್ಪ್ರೇಕ್ಷೆಗೆ ಪೋಷಕವಾದ ಅರ್ಥವೇ ಧ್ವನಿತವಾಗಿದೆಯೆಂದು ನಾವು ಹೇಳುವುದಕ್ಕೆ ಪ್ರಸಿದ್ಧವಾದ ಕವಿಸಂಪ್ರದಾಯವೇ ಪ್ರಮಾಣ.

ಶ್ಲೇಷಾಲಂಕಾರ-ಧ್ವನಿಗೆ ಉದಾಹರಣೆ :—

ರಮ್ಯಾ ಇತಿ ಪ್ರಾಪ್ತವತೀಃ ಪತಾಕಾಃ
ರಾಗಂ ವಿವಿಕ್ತಾ ಇತಿ ವರ್ಧಯನ್ತೀಃ |
ಯಸ್ಯಾಮಸೇವನ್ತ ನಮದ್ವಲೀಕಾಃ
ಸಮಂ ವಧೂಭಿರ್ವಲಭೀರ್ಯುವಾನಃ ||

ರಮಣೀಯತಾಗುಣಪತಾಕೆ[1]ಯನೆ ಪಡೆಯುತ್ತ,
ವಿವಿಕ್ತತಾ[2]ಕಾರಣದೆ ರಾಗ[3]ವನು ಪೆರ್ಚಿಸುತ |

[1] ಧ್ವಜ ಅಥವಾ ಪ್ರಸಿದ್ಧಿ. [2] ನಿರ್ಜನತೆ ಅಥವಾ ಅಂಗಸೌಷ್ಠವ. [3] ಕೆಂಪು ಅಥವಾ ಪ್ರೀತಿ.

ಪರಿಸಮ್ರುವಲಿ[1]ಗಳಿಂ ಸೊಗಯಿಸುವ ವಲಭಿಗಳ
ವಧುಗಳೊಂದಿಗೆ ಸೇವಿಸಿದರಲ್ಲಿ ಯುವಜನರು ‖

ಇಲ್ಲಿ 'ವಧುಗಳೊಂದಿಗೆ ವಲಭಿಗಳನ್ನು ಸೇವಿಸಿದರು' ಎಂಬ ವಾಕ್ಯಾರ್ಥದ ಪ್ರತೀತಿಯ ನಂತರ 'ವಧುಗಳಂತೆಯೇ ವಲಭಿಗಳಿವೆ' ಎಂಬ ಶ್ಲಿಷ್ಟಾರ್ಥದ ಪ್ರತೀತಿಯು ಶಬ್ದತಃ ಮುಖ್ಯವಾಗಿ ತೋರದಿದ್ದರೂ, ಅರ್ಥ-ಸಾಮರ್ಥ್ಯದಿಂದ ಮುಖ್ಯವಾಗಿಯೇ ಧ್ವನಿತವಾಗುತ್ತದೆ.

ಯಥಾಸಂಖ್ಯಾಲಂಕಾರ-ಧ್ವನಿಗೆ ಉದಾಹರಣೆ :—

ಅಂಕುರಿತಃ ಪಲ್ಲವಿತಃ ಕೋರಕಿತಃ ಪುಷ್ಪಿತಶ್ಚ ಸಹಕಾರಃ ।
ಅಂಕುರಿತಃ ಪಲ್ಲವಿತಃ ಕೋರಕಿತಃ ಪುಷ್ಪಿತಶ್ಚ ಹೃದಿ ಮದನಃ ॥

ಅಂಕುರಿಸಿ ಪಲ್ಲವಿಸಿ ಕೋರಕಿಸಿ ಕುಸುಮಿಸಲು
ಸಹಕಾರತರುನಿವಹವಲ್ಲಿ ಕ್ರಮದಿ ।
ಅಂಕುರಿಸಿ ಪಲ್ಲವಿಸಿ ಕೋರಕಿಸಿ ಕುಸುಮಿಸಿದ-
ನೆಲ್ಲ ಹೃದಯದಲಂದು ರತಿಕಾಂತನು ‖

ಇಲ್ಲಿ 'ಮನ್ಮಥ' ಮತ್ತು 'ಸಹಕಾರತರು'—ಎರಡೂ ಪ್ರಸ್ತುತವಾದುದರಿಂದ 'ತುಲ್ಯಯೋಗಿತಾ' ಮತ್ತು 'ಸಮುಚ್ಚಯ' ಎಂಬಲಂಕಾರಗಳು ವಾಚ್ಯವಾಗಿವೆ. ಆದರೆ ಈ ಅಲಂಕಾರಗಳ ಸೊಗಸಿಗಿಂತಲೂ ಹೆಚ್ಚಾಗಿ, ವಿಶೇಷಣಗಳನ್ನು ಸಹಕಾರ ತರುವಿಗೆ ಕೊಟ್ಟ ಕ್ರಮದಲ್ಲೇ ಮನ್ಮಥನಿಗೂ ಕೊಟ್ಟಿರುವುದರಿಂದ ಅನುರಣನರೂಪವಾಗಿ ಬರುವ ಸೊಗಸು ಮೇಲಾದುದು. ಹೀಗೆಯೇ ಉಳಿದ ಅಲಂಕಾರಧ್ವನಿಗಳಿಗೂ ಯಥೋಚಿತವಾಗಿ ಉದಾಹರಣೆಗಳನ್ನು ವಾಚಕರೇ ಊಹಿಸಿಕೊಳ್ಳಬೇಕು.

ಹೀಗೆ 'ಅಲಂಕಾರ-ಧ್ವನಿ'ಯ ಮಾರ್ಗವನ್ನು ಪ್ರತಿಪಾದಿಸಿಯಾದಮೇಲೆ, ಈಗ ಅದರ ಪ್ರಯೋಜನವನ್ನು ಪ್ರಶಂಸೆಮಾಡಲು ಮುಂದಿನ ಕಾರಿಕೆಯನ್ನು ಹೇಳಿದೆ.

ಕಾರಿಕೆ

ಶರೀರೀಕರಣಂ ಯೇಷಾಂ ವಾಚ್ಯತ್ವೇ ನ ವ್ಯವಸ್ಥಿತಮ್ ।
ತೇಽಲಂಕಾರಾಃ ಪರಾಂ ಛಾಯಾಂ ಯಾನ್ತಿ ಧ್ವನ್ಯಂಗತಾಂ ಗತಾಃ ‖ ೨೮ ‖

[1] ಸೂರುಕಟ್ಟು ಅಥವಾ ಸ್ತ್ರೀಯರ ತ್ರಿವಲಿಗಳು.

ಯಾವ ಅಲಂಕಾರಗಳಿಗೆ ಅವು ವಾಚ್ಯವೆನಿಸಿದಾಗ (ಕಾವ್ಯಾರ್ಥಕ್ಕೆ) ಸುಂದರವಾದ ಶರೀರನಿರ್ಮಾಣಕತ್ವವು ಕೂಡ ವ್ಯವಸ್ಥಿತವಲ್ಲವೋ, ಅವೇ ಅಲಂಕಾರಗಳೇ ಧ್ವನಿಯ ಅಂಗಗಳಾದಾಗ ನೂತನವಾದ ಒಂದು ಸೌಂದರ್ಯಾತಿಶಯವನ್ನು ಹೊಂದುತ್ತವೆ.

ವೃತ್ತಿ

ಧ್ವನಿಗೆ ಅಂಗತ್ವವು ಎರಡು ವಿಧಗಳಿಂದಾಗಬಹುದು :—(೧) ವ್ಯಂಜಕತ್ವದಿಂದ, ಇಲ್ಲವೆ (೨) ವ್ಯಂಗ್ಯತ್ವದಿಂದ. ಅದು ಇಲ್ಲಿ ಸಂದರ್ಭೋಚಿತವಾಗಿ 'ವ್ಯಂಗ್ಯತ್ವದಿಂದ' ಎಂದು ತಿಳಿಯಬೇಕು. ಅಲಂಕಾರಗಳಿಗೆ ವ್ಯಂಗ್ಯತ್ವವಿರುವುದರ ಜತೆಗೆ ಅದರಲ್ಲಿಯೇ ಪ್ರಾಧಾನ್ಯವಿವಕ್ಷೆಯೂ ಇರುವಾಗ ಮಾತ್ರ 'ಧ್ವನಿ'ಯಲ್ಲಿ ಅವು ಅಂತರ್ಗತವಾಗುತ್ತವೆ. ಇಲ್ಲದಿದ್ದರೆ ಅವು 'ಗುಣೀಭೂತವ್ಯಂಗ್ಯ'ದಲ್ಲಿ ಸೇರುವುವೆಂದು ಮುಂದೆ ವಿವರಿಸಲಾಗುತ್ತದೆ. ವ್ಯಂಗ್ಯತ್ವವಿದ್ದರೂ ಸಹ ಅಲಂಕಾರಗಳೇ ಪ್ರಧಾನವೆನಿಸುವೆಡೆಯಲ್ಲಿಯೂ ಅಷ್ಟೆ (='ಗುಣೀಭೂತವ್ಯಂಗ್ಯ'ವೇ).

ಅಲಂಕಾರಗಳಿಗೆ (ಧ್ವನಿಪ್ರಪಂಚದಲ್ಲಿ) ಇರುವ ನೆಲೆಗಳು ಎರಡು :—(೧) 'ವಸ್ತು'ಮಾತ್ರದಿಂದ ವ್ಯಂಗ್ಯವಾಗುವೆಡೆಗಳು ಮತ್ತು (೨) 'ಅಲಂಕಾರ'ದಿಂದ ವ್ಯಂಗ್ಯವಾಗುವೆಡೆಗಳು. ಅವುಗಳಲ್ಲಿ—

ಕಾರಿಕೆ

ವ್ಯಜ್ಯನ್ತೇ ವಸ್ತುಮಾತ್ರೇಣ ಯದಾಲಂಕೃತಯಸ್ತದಾ।
ಧ್ರುವಂ ಧ್ವನ್ಯಂಗತಾ ತಾಸಾಂ

ಯಾವಾಗ ಅಲಂಕಾರಗಳು ವಸ್ತುಮಾತ್ರದಿಂದಲೇ ವ್ಯಂಗ್ಯವಾಗಿರುವುವೋ ಆಗ ಅವು ಸರ್ವಥಾ ಧ್ವನಿಯ ಅಂಗಗಳೇ.

ವೃತ್ತಿ

ಅದಕ್ಕೆ ಕಾರಣವೇನೆಂದರೆ—

ಕಾರಿಕೆಯ ಕೊನೆಯ ಪಾದ

ಕಾವ್ಯವೃತ್ತಿಸ್ತದಾಶ್ರಯಾ ॥ ೨೯ ॥

ಕಾವ್ಯದ ಪ್ರವೃತ್ತಿಯೇ ಅದನ್ನು ಆಶ್ರಯಿಸಿದೆ.

ವೃತ್ತಿ

ಇಂತಹ ವ್ಯಂಗ್ಯಾಲಂಕಾರಗಳನ್ನು ಅಳವಡಿಸಿಕೊಳ್ಳಬೇಕೆಂದೇ ಕಾವ್ಯವು ಹೊರಡುವುದು. ಇಲ್ಲದಿದ್ದರೆ ಅದು ಸುಮ್ಮನೆ ವಾಕ್ಯವಾಗುತ್ತದೆ. ಆ ಅಲಂಕಾರಗಳಿಂದಲೇ—

ಕಾರಿಕೆ

ಅಲಂಕಾರಾನ್ತರವ್ಯಂಗ್ಯಭಾವೇ

ಬೇರೆ ಅಲಂಕಾರಗಳು ವ್ಯಂಗ್ಯವಾಗುತ್ತಿದ್ದರೆ

ವೃತ್ತಿ

ತಿರುಗಿಯೂ—

ಕಾರಿಕೆ

ಧ್ವನ್ಯಂಗತಾ ಭವೇತ್ ।
ಚಾರುತ್ವೋತ್ಕರ್ಷತೋ ವ್ಯಂಗ್ಯಪ್ರಾಧಾನ್ಯಂ ಯದಿ ಲಕ್ಷ್ಯತೇ ॥ ೩೦ ॥

ರಮಣೀಯತಾತಿಶಯದ ದೃಷ್ಟಿಯಿಂದ ವ್ಯಂಗ್ಯವೇ ಪ್ರಧಾನವಾಗಿ ಕಾಣುತ್ತಿದ್ದರೆ, ಧ್ವನಿಯ ಅಂಗತ್ವವು ಬರುತ್ತದೆ.

ವೃತ್ತಿ

ವಾಚ್ಯ ವ್ಯಂಗ್ಯಗಳಲ್ಲಿ ಪ್ರಾಧಾನ್ಯವು ಯಾವುದಕ್ಕೆ ಎಂಬ ವಿಷಯವು ಸೌಂದರ್ಯಾತಿಶಯವನ್ನೇ ಅವಲಂಬಿಸಿರುವುದೆಂದು ಹಿಂದೆಯೇ ಹೇಳಲಾಯಿತು. ವಸ್ತುಮಾತ್ರದಿಂದ ವ್ಯಂಗ್ಯವಾದ ಅಲಂಕಾರಗಳಿಗೂ ಈಗಾಗಲೇ ಕೊಟ್ಟ ಉದಾಹರಣೆಗಳಿಂದಲೇ ವಿಷಯವನ್ನಾರಿಸಿಕೊಳ್ಳಬಹುದು. ಹೀಗೆ ವಸ್ತುಮಾತ್ರದಿಂದಾಗಲಿ, ಇಲ್ಲವೆ ವಿಶಿಷ್ಟಾಲಂಕಾರಸಹಿತವಾದ ವಸ್ತುವಿನಿಂದಾಗಲಿ, ಬೇರೊಂದು ವಸ್ತುವೋ ಇಲ್ಲವೇ ಅಲಂಕಾರವೋ ವ್ಯಂಗ್ಯವಾಗಿದ್ದು, ಸೌಂದರ್ಯಾತಿಶಯವು ಮುಖ್ಯವಾಗಿ ಆ ವ್ಯಂಗ್ಯಾಂಶದಲ್ಲಿಯೇ ಇರುವುದಾದರೆ ಆಗ ಅರ್ಥಶಕ್ತಿಮೂಲ-ಅನುರಣನರೂಪ-ವ್ಯಂಗ್ಯವೆಂಬ ಧ್ವನಿಗೆ ಅದು ಉದಾಹರಣೆಯೆಂದು ತಿಳಿದುಕೊಳ್ಳಬೇಕು.

ಹೀಗೆ ಧ್ವನಿಯ ಪ್ರಭೇದಗಳನ್ನು ಪ್ರತಿಪಾದಿಸಿ, ಈಗ, ಧ್ವನಿಯಲ್ಲದಿದ್ದರೂ ಧ್ವನಿಯೆಂಬ ಭ್ರಮೆಗೆ ಎಲ್ಲಿ ಅವಕಾಶವುಂಟೋ ಅಂತಹ ಕಡೆಗಳಲ್ಲಿ ದಾರಿತಪ್ಪದಂತೆ ಮಾಡಲು ಮುಂದಿನ ಕಾರಿಕೆಯನ್ನು ಹೇಳಿದ್ದಾನೆ—

ಕಾರಿಕೆ

ಯತ್ರ ಪ್ರತೀಯಮಾನೋಽರ್ಥಃ ಪ್ರಕ್ಲಿಷ್ಟತ್ವೇನ ಭಾಸತೇ ।
ವಾಚ್ಯಸ್ಯಾಂಗತಯಾ ವಾಪಿ ನಾಸ್ಯಾಸೌ ಗೋಚರೋ ಧ್ವನೇಃ ॥ ೩೧ ॥

ಎಲ್ಲಿ ವ್ಯಂಗ್ಯಾರ್ಥವು ಕ್ಲಿಷ್ಟಕಲ್ಪನೆಯಿಂದ ಮಾತ್ರ ಕಾಣುವುದೋ, ಅಥವಾ ವಾಚ್ಯಾರ್ಥಕ್ಕೆ ಅಂಗವಾಗಿ ಬರುವುದೋ, ಅದು ಧ್ವನಿಯಲ್ಲಿ ಸೇರುವುದಿಲ್ಲ.

ವೃತ್ತಿ

ವ್ಯಂಗ್ಯಾರ್ಥವು ಎರಡು ವಿಧ—ಸ್ಫುಟ ಮತ್ತು ಅಸ್ಫುಟ, ಎಂದು. ಅದರಲ್ಲಿ ಶಬ್ದಶಕ್ತಿಯಿಂದಾಗಲಿ ಅಥವಾ ಅರ್ಥಶಕ್ತಿಯಿಂದಾಗಲಿ, ಸ್ಫುಟವಾಗಿ ಯಾವುದು ಭಾಸವಾಗುವುದೋ, ಅದು ಮಾತ್ರ ಧ್ವನಿಯಲ್ಲಿ ಸೇರುವುದು, ಅಸ್ಫುಟವಾದುದು ಸೇರುವುದಿಲ್ಲ. ಸ್ಫುಟವಾಗಿದ್ದರೂ ಸಹ ವ್ಯಂಗ್ಯಾರ್ಥವು ವಾಚ್ಯಾರ್ಥಕ್ಕೆ ಅಂಗವಾಗುವುದಾದರೆ, ಆಗ ಅದೂ ಈ ಅನುರಣನರೂಪ-ವ್ಯಂಗ್ಯವಾದ ಧ್ವನಿಯಲ್ಲಿ ಸೇರುವುದಿಲ್ಲ. ಉದಾಹರಣೆ :—

ಕಮಲಾಅರಾ ಣ್ ಮಲಿಆ ಹಂಸಾ ಉಡ್ಡಾವಿಆ ಣ ಅ ಪಿಉಚ್ಛಾ ।
ಕೇಣ ವಿ ಗಾಮತಡಾಏ ಅಬ್ಭಂ ಉತ್ತಾಣಅಂ ಫಲಿಹಮ್ ॥

ಕಮಲರಾಜಿಯ ಕಾಂತಿ ಕಂದಿಲ್ಲವೊಂದಿನಿತು,
ಹಂಸಗಳು ಹಾರಿಹೋಗಿಲ್ಲವತ್ತೆ ! ।
ಅವನಾರೊ ನಾ ಕಾಣೆ ನಮ್ಮೂರ ಕೆರೆಯಲ್ಲಿ
ಮೋಡವನೆ ಬಿಸುಡಿಹನು ಬುಡಸಹಿತದೆ ॥

ಇಲ್ಲಿ ವ್ಯಂಗ್ಯವಾಗಿರುವ ಅಂಶ—'ಮುಗ್ಧವಧುವು ಮೋಡದ ಪ್ರತಿಬಿಂಬವನ್ನು ನೋಡಿದಳು', ಎಂದು. ಇದು ವಾಚ್ಯಕ್ಕೆ ಅಂಗವಾಗಿಯೇ ಇದೆ. ಇತರ ಕಡೆಗಳಲ್ಲಿಯೂ ಹೀಗೆ ವ್ಯಂಗ್ಯಕ್ಕಿಂತಲೂ ವಾಚ್ಯದಲ್ಲಿಯೇ ಸೌಂದರ್ಯಾತಿಶಯವು ಪ್ರತೀತವಾಗುತ್ತಿದ್ದು, ಅದೇ ಪ್ರಧಾನವೆಂದು ಕಾಣುತ್ತಿದ್ದರೆ, ಅಲ್ಲಿ ವ್ಯಂಗ್ಯವು ಅಂಗವಾಗಿ ಮಾತ್ರ ಬರುವುದರಿಂದ ಅದು ಧ್ವನಿಗೆ ವಿಷಯುವಲ್ಲ. ಉದಾಹರಣೆ :—

ವಾಣೀರಕುಡಂಗೋಡ್ಡೀಣ ಸಉಣಿ ಕೋಲಾಹಲಂ ಸುಣನ್ತೀಏ ।
ಘರಕಮ್ಮವಾವಡಾಏ ಬಹುಏ ಸೀಅನ್ತಿ ಅಂಗಾಇಂ ॥

ಒತ್ತಾಗಿ ತಾ ಬೆಳೆದ ಬೆತ್ತಗಳ ಹತ್ತಿರವೆ
ಹಕ್ಕಿಗಳ ಕೂಗಾಟ ಕೇಳಿಬರಲು ।

ಮನೆಗೆಲಸದಲಿ ನಿರತಳಾಗಿದ್ದ ಹೆಂಗಸಿಗೆ
ತನ್ನಂಗಗಳ ಸತ್ವವುಡುಗುತಿಹುದು ‖

ಇಂತಹ ಸ್ಥಲಗಳೆಲ್ಲ 'ಗುಣೀಭೂತವ್ಯಂಗ್ಯ'ಕ್ಕೆ ಉದಾಹರಣೆಗಳೆಂದು ಮುಂದೆ ಹೇಳಲಾಗುತ್ತದೆ. ಆದರೆ ಎಲ್ಲಿ ಸಂದರ್ಭವನ್ನು ಪರ್ಯಾಲೋಚಿಸಿ ವಿಶೇಷಾರ್ಥವನ್ನು ನಿರ್ಧರಿಸಿಯಾದಮೇಲೆ, ವಾಚ್ಯಾರ್ಥವು ಮತ್ತೆ ವ್ಯಂಗ್ಯಾರ್ಥಕ್ಕೆ ಅಂಗವಾಗಿಯೇ ಕಾಣುವುದೋ, ಅದು ಮಾತ್ರ ಈ ಅನುರಣನರೂಪ-ವ್ಯಂಗ್ಯವಾದ ಧ್ವನಿಗೇ ಲಕ್ಷ್ಯ. ಉದಾಹರಣೆ :—

ಉಚ್ಚಿಣಸು ಪಡಿಅ ಕುಸುಮಂ ಮಾ ಧುಣ ಸೇಹಾಲಿಅಂ ಹಲಿಅಸುಹ್ಣೇ |
ಅಹ ದೇ ವಿಸಮವಿರಾವೋ ಸಸುರೇಣ ಸುಓ ವಲಅಸದ್ದೋ ||

ಬಿದ್ದಿರುವ ಹೂಗಳನೆ ಆರಿಸಿಕೊ ಗೌಡಸೊಸೆ
ಶೇಫಾಲಿಕೆಯ ನೀನಲ್ಲಾಡಿಸದೆಯೆ |
ಬಲವಾಗಿ ಬರುತಿರುವ ನಿನ್ನ ಬಳೆಯುಲಿಯನ್ನು
ಕೇಳುತಿರುವನು ನೋಡು ನಿನ್ನ ಮಾವ ‖

ಇಲ್ಲಿ ವಿನಯರಹಿತನಾದ ಪತಿಯೊಡನೆ ರಮಿಸುತ್ತಿರುವ ಸಖಿಯೊಬ್ಬಳು ಹೊರಗೆ ಬಳೆಯ ಕಲಕಲವನ್ನು ಕೇಳಿದ ತನ್ನ ಸಖಿಯಿಂದ ಎಚ್ಚರಿಸಲ್ಪಡುತ್ತಾಳೆ. ವಾಚ್ಯಾರ್ಥ ವನ್ನು ತಿಳಿಯಬೇಕಾದರೆ ಇಷ್ಟನ್ನು ನಾವು ಗ್ರಹಿಸಲೇಬೇಕು. ಹೀಗೆ ವಾಚ್ಯಾರ್ಥವನ್ನು ನಾವು ನಿರ್ಣಯಿಸಿದಮೇಲೆ, ಅವನ ಅವಿನಯವನ್ನು ಮರೆಸಬೇಕೆಂಬ ತಾತ್ಪರ್ಯವೂ ಇಲ್ಲಿದೆಯೆಂದು ತಿಳಿಯುವುದರಿಂದ ಮತ್ತೆ ಅದು ವ್ಯಂಗ್ಯಕ್ಕೆ ಅಂಗವೇ ಆಗುತ್ತದೆ. ಆದುದರಿಂದ ಇದು ಅನುರಣನರೂಪ-ವ್ಯಂಗ್ಯ-ಧ್ವನಿಯಲ್ಲಿ ಅಂತರ್ಗತವಾಗುತ್ತದೆ.

ಹೀಗೆ ವಿವಕ್ಷಿತವಾಚ್ಯ-ಧ್ವನಿಯ ಆಭಾಸ-ವಿವೇಕವನ್ನು ಮಾಡಿಕೊಟ್ಟಮೇಲೆ ಈಗ ಅವಿವಕ್ಷಿತವಾಚ್ಯ-ಧ್ವನಿಗೂ ಅದನ್ನೇ ಮಾಡಿಕೊಡಲು ಹೇಳುತ್ತಾನೆ—

ಕಾರಿಕೆ

ಅವ್ಯುತ್ಪತ್ತೇರಶಕ್ತೇರ್ವಾ ನಿಬಂಧೋ ಯಃ ಸ್ಖಲದ್ಗತೇಃ |
ಶಬ್ದಸ್ಯ ಸ ಚ ನ ಜ್ಞೇಯಃ ಸೂರಿಭಿರ್ವಿಷಯೋ ಧ್ವನೇಃ ‖ ೩೨ ‖

ವ್ಯುತ್ಪತ್ತಿಯಿಲ್ಲದೆ ಇರುವುದರಿಂದಾಗಲಿ ಅಥವಾ ಪ್ರತಿಭೆಯಿಲ್ಲದೆ ಇರುವು ದರಿಂದಾಗಲಿ ಮುಖ್ಯಾರ್ಥವು ಬಾಧಿತವಾಗಿರುವಂತಹ ಶಬ್ದಗಳ ಪ್ರಯೋಗವನ್ನು (ಕವಿಯು) ಮಾಡಿದರೆ, ಅದನ್ನು 'ಧ್ವನಿ'ಯೆಂದು ವಿಮರ್ಶಕರು ತಿಳಿಯಲಾಗದು.

ವೃತ್ತಿ

ಲಾಕ್ಷಣಿಕವಾದ ಶಬ್ದದ ಪ್ರಯೋಗವು ಅವ್ಯುತ್ಪತ್ತಿ ಅಥವಾ ಅಶಕ್ತಿಯಿಂದ ಉಂಟಾಗಿದ್ದಲ್ಲಿ ಅದು ಧ್ವನಿಗೆ ವಿಷಯವಲ್ಲ. ಏಕೆಂದರೆ—

ಕಾರಿಕೆ

ಸರ್ವೇಷ್ವೇವ ಪ್ರಭೇದೇಷು ಸ್ಫುಟತ್ವೇನಾವಭಾಸನಮ್ ।
ಯದ್ವ್ಯಂಗ್ಯಸ್ಯಾಂಗಿಭೂತಸ್ಯ ತತ್ಪೂರ್ಣಂ ಧ್ವನಿಲಕ್ಷಣಮ್ ॥ ೩೩ ॥

ಎಲ್ಲ ಪ್ರಭೇದಗಳಲ್ಲಿಯೂ, ವ್ಯಂಗ್ಯವು ಪ್ರಧಾನವಾಗಿ ಸ್ಫುಟವಾಗಿರುವಂತೆ ಭಾಸವಾಗುತ್ತಿರುವುದೇ ಧ್ವನಿಯ ಪೂರ್ಣವಾದ ಲಕ್ಷಣ.

ವೃತ್ತಿ

ಇದುವರೆಗೆ ಕೊಡಲಾದ ಉದಾಹರಣೆಗಳಿಗೆಲ್ಲ ಅನ್ವಯಿಸುವ ಲಕ್ಷಣವೇ ಇದು.

ಇಲ್ಲಿಗೆ ಶ್ರೀ ರಾಜಾನಕ-ಆನಂದವರ್ಧನಾಚಾರ್ಯ-ವಿರಚಿತವಾದ
'ಧ್ವನ್ಯಾಲೋಕ'ದಲ್ಲಿ ಎರಡನೆಯ ಉದ್ದ್ಯೋತದ ಕನ್ನಡ ಅನುವಾದವು ಮುಗಿದುದು.

ಮೂರನೆಯ ಉದ್ದ್ಯೋತ

ಇಲ್ಲಿಯವರೆಗೂ 'ಧ್ವನಿ'ಯ ಸ್ವರೂಪ ಮತ್ತು ಪ್ರಭೇದಗಳನ್ನು 'ವ್ಯಂಗ್ಯ'ದ ದೃಷ್ಟಿಯಿಂದ ತೋರಿಸಲಾಯಿತು; ಈಗ ಅದನ್ನೇ 'ವ್ಯಂಜಕ'ದ ದೃಷ್ಟಿಯಿಂದ ತೋರಿಸಲಾಗುತ್ತದೆ—

ಕಾರಿಕೆ

ಅವಿವಕ್ಷಿತವಾಚ್ಯಸ್ಯ ಪದವಾಕ್ಯಪ್ರಕಾಶತಾ।
ತದನ್ಯಸ್ಯಾನುರಣನರೂಪವ್ಯಂಗ್ಯಸ್ಯ ಚ ಧ್ವನೇಃ ॥ ೧ ॥

'ಅವಿವಕ್ಷಿತವಾಚ್ಯ' ಮತ್ತು 'ಅನುರಣನರೂಪವ್ಯಂಗ್ಯ'—ಇವೆರಡು ಧ್ವನಿ ಪ್ರಕಾರಗಳೂ 'ಪದ' ಮತ್ತು 'ವಾಕ್ಯ'ಗಳಿಂದ ಧ್ವನಿಸಲ್ಪಡುತ್ತವೆ.

ವೃತ್ತಿ

'ಅವಿವಕ್ಷಿತವಾಚ್ಯ'ದ ಪ್ರಭೇದವಾದ ಅತ್ಯಂತತಿರಸ್ಕೃತವಾಚ್ಯಧ್ವನಿಯಲ್ಲಿ ಪದ-ವ್ಯಂಜಕತ್ವಕ್ಕೆ ಉದಾಹರಣೆಗಳು—(೧) ವ್ಯಾಸಮಹರ್ಷಿಗಳ ಪ್ರಯೋಗ—'ಸಪ್ತೈತಾಃ ಸಮಿಧಃ ಶ್ರಿಯಃ' (=ಇವೇಳೂ ಸಂಪತ್ತಿಗೆ ಸಮಿತ್ತುಗಳು).[1] (೨) ಕಾಳಿದಾಸನ ಪ್ರಯೋಗ—'ಕಃ ಸನ್ನದ್ಧೇ ವಿರಹವಿಧುರಾಂ ತ್ವಯ್ಯುಪೇಕ್ಷೇತ ಜಾಯಾಂ'[2] (=ನೀನು ಸನ್ನದ್ಧನಾಗಿರಲು, ವಿರಹವಿಹ್ವಲೆಯಾದ ಕಾಂತೆಯನ್ನು ಯಾರು ತಾನೆ ಉಪೇಕ್ಷಿಸಿಯಾರು!). (೩) ಕಾಳಿದಾಸನದೇ ಇನ್ನೊಂದು ಪ್ರಯೋಗ—'ಕಿಮಿವ ಹಿ ಮಧುರಾಣಾಂ ಮಂಡನಂ ನಾಕೃತೀನಾಂ'[3] (=ಮಧುರವಾದ ಆಕೃತಿಗಳಿಗೆ ಯಾವುದು ತಾನೆ ಭೂಷಣವಲ್ಲ?). ಈ ಉದಾಹರಣೆಗಳಲ್ಲಿ 'ಸಮಿತ್ತು', 'ಸನ್ನದ್ಧ', 'ಮಧುರ' ಎಂಬ ಪದಗಳು ವ್ಯಂಜಕತ್ವದ ಅಭಿಪ್ರಾಯದಿಂದಲೇ ಪ್ರಯುಕ್ತವಾಗಿವೆ.

ಇದಕ್ಕೇ ಅರ್ಥಾಂತರಸಂಕ್ರಮಿತವಾಚ್ಯಧ್ವನಿಯಲ್ಲಿ ಉದಾಹರಣೆ:—'ರಾಮೇಣ ಪ್ರಿಯಜೀವಿತೇನ ತು ಕೃತಂ ಪ್ರೇಮ್ಣಃ ಪ್ರಿಯೇ ನೋಚಿತಮ್' (=ಪ್ರಿಯೆ,

[1] "ಧೃತಿಃ ಕ್ಷಮಾ ದಯಾ ಶೌಚಂ ಕಾರುಣ್ಯಂ ವಾಗನಿಷ್ಠುರಾ।
ಮಿತ್ರಾಣಾಂ ಚಾನಭಿದ್ರೋಹಃ ಸಪ್ತೈತಾಃ ಸಮಿಧಃ ಶ್ರಿಯಃ॥"

[2] ಮೇಘ ದೂತ.

[3] ಅಭಿಜ್ಞಾನ ಶಾಕುನ್ತಲ.

ಪ್ರಾಣದಲ್ಲಿ ಬಹಳ ಪ್ರೀತಿಯನ್ನಿಟ್ಟ ರಾಮನು ಪ್ರೇಮಕ್ಕೆ ಉಚಿತವಾದುದನ್ನು ಮಾಡಲಿಲ್ಲ). ಇಲ್ಲಿ ಸಾಹಸೈಕಪ್ರಿಯತ್ವವೇ ಮೊದಲಾದ ವ್ಯಂಗ್ಯಾರ್ಥಗಳನ್ನು ಕೊಡುವ 'ರಾಮನು' ಎಂಬ ಪದವು ವ್ಯಂಜಕ. ಅಥವಾ ಇನ್ನೊಂದು ಉದಾಹರಣೆ :—

ಏಮೇಅ ಜಣೋ ತಿಸ್ಸಾ ದೇಉ ಕವೋಲೋಪಮಾಇ ಸಸಿಬಿಂಬಮ್ |
ಪರಮತ್ಥವಿಆರೇ ಉಣ ಚನ್ದೋ ಚನ್ದೋ ವಿಅ ವರಾಕೋ ||

ಆಕೆಯ ಕಪೋಲದುಪಮೆಗೆ
ರಾಕಾಪತಿಬಿಂಬವೊಂದೆಯೆಂಬೀ ನುಡಿಯಂ |
ಲೋಕವೆ ಪೇಳ್ದಿಡಮದನಾ-
ಲೋಕಿಸೆ ಮೇಣ್ ಶಶಿಯೆ ಶಶಿಸಮಾನವರಾಕಂ ||

ಇಲ್ಲಿ ಎರಡನೆಯ 'ಶಶಿ' ಎಂಬ ಪದವು ಅರ್ಥಾಂತರಸಂಕ್ರಮಿತವಾಚ್ಯ.

ಅವಿವಕ್ಷಿತವಾಚ್ಯಧ್ವನಿಯ ಅತ್ಯಂತತಿರಸ್ಕೃತವಾಚ್ಯವೆಂಬ ಪ್ರಭೇದದಲ್ಲಿ ವಾಕ್ಯ ಧ್ವನಿಗೆ ಉದಾಹರಣೆ :—

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ |
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ||

ಇರುಳೆಂದು ಸರ್ವಭೂತಗ-
ಳಿರುವಂದೆಚ್ಚರದಿನಿರುವನಾ ಸಂಯಮಿ ತಾಂ |
ಪೆರರೆಲ್ಲರ್ ಜಾಗರದಿಂ-
ದಿರುವಾಗಳ್ ರಾತ್ರಿಯದುವೆ ಕಾಣುವ ಮುನಿಗೇ ||

ಈ ವಾಕ್ಯದಲ್ಲಿ ಇರುಳೆಂಬರ್ಥವಾಗಲಿ ಜಾಗರಣವೆಂಬರ್ಥವಾಗಲಿ ವಿವಕ್ಷಿತ ವಲ್ಲ. ಹಾಗಾದರೆ ವಿವಕ್ಷಿತವಾದ ಅರ್ಥವೇನು ? ತತ್ವಜ್ಞಾನದಲ್ಲಿ ಅವಧಾನವಿರುವಿಕೆ ಮತ್ತು ತತ್ವವಿಮುಖತೆ—ಇವು ಮುನಿಯಲ್ಲಿ ಹೇಗೆ ಇರುವುವೆಂಬುದು. ಆದುದರಿಂದ ತಿರಸ್ಕೃತವಾಚ್ಯವು ಇಲ್ಲಿ ವ್ಯಂಜಕ.

ಅರ್ಥಾಂತರಸಂಕ್ರಮಿತವಾಚ್ಯದಲ್ಲಿ ವಾಕ್ಯ-ಧ್ವನಿಗೆ ಉದಾಹರಣೆ :—

ವಿಸಮಇಓ ಕಾಣ ವಿ ಕಾಣ ವಿ ವಾಲೇಇ ಅಮಿಅಣಿಮ್ಮಾಓ |
ಕಾಣ ವಿ ವಿಸಾಮಿಅಮಓ ಕಾಣ ವಿ ಅವಿಸಾಮಓ ಕಾಲೋ ||

ವಿಷಮಯವು ತಾನೆನಿಸಿ ಕೆಲವರಿಗೆ ಕಳೆಯುವುದು
ಅಮೃತಮಯದಂತೆ ಕೆಲವರಿಗೆ ಕಾಲ |

ಉಳಿದರಿಗೆ ವಿಷವಮೃತವೆರಡರಾ ಮಿಶ್ರವೆನೆ
ಅಮೃತವಿಷವೇನಿರದು ಕೆಲಜನರಿಗೆ ||

ಇಲ್ಲಿ 'ದುಃಖ', 'ಸುಖ', ಎಂಬರ್ಥದಲ್ಲಿ 'ವಿಷ', 'ಅಮೃತ' ಎಂಬ ಶಬ್ದಗಳು ಸಂಕ್ರಮಿತವಾಚ್ಯಗಳಾಗಿರುವ ಕಾರಣ ಅರ್ಥಾಂತರಸಂಕ್ರಮಿತವಾಚ್ಯಕ್ಕೆ ವ್ಯಂಜಕತ್ವವನ್ನು ಉದಾಹರಿಸಿದಂತಾಯಿತು.

ಇನ್ನು ವಿವಕ್ಷಿತವಾಚ್ಯಧ್ವನಿಯಲ್ಲಿ ಬರುವ ಶಬ್ದಶಕ್ತಿಮೂಲ-ಅನುರಣನರೂಪ-ವ್ಯಂಗ್ಯವೆಂಬ ಪ್ರಭೇದದಲ್ಲಿ ಪದ-ವ್ಯಂಜಕತ್ವಕ್ಕೆ ಉದಾಹರಣೆ:

ಪ್ರಾತುಂ ಧನೈರರ್ಥಿಜನಸ್ಯ ವಾಂಛಾಂ
ದೈವೇನ ಸೃಷ್ಟೋ ಯದಿ ನಾಮ ನಾಸ್ಮಿ |
ಪಥಿ ಪ್ರಸನ್ನಾಂಬುಧರಸ್ತಡಾಗಃ
ಕೂಪೋऽಥವಾ ಕಿಂ ನ ಜಡಃ ಕೃತೋऽಹಮ್ ||

ಬೇಡುವರ ಮನದಾಸೆಯನು ನಾ
ನೀಡಿ ಸಲಿಸಲು ದೈವವೆನ್ನನು
ನಾಡೊಳಗೆ ಪುಟ್ಟಿಸದೆ ಪೋದುದದೆಂದು ನಂಬಿದರೂ |
ನೋಡುವೊಡೆ ವಿಧಿಯೇತಕೆನ್ನನು
ನಾಡೆ ನಿರ್ಮಲಸಲಿಲದಿಂದಲಿ
ಕೂಡಿರುವ ಕೆರೆಬಾವಿಯಾಗಿಯೆ ಜಡನ ನಿರ್ಮಿಸನು ||

ಇಲ್ಲಿ 'ಜಡ' ಎಂಬ ಪದವನ್ನು ನಿರ್ವಿಣ್ಣನಾದ ಕವಿಯು ತನಗೆ ಅನ್ವಯಿಸುವಂತೆ ಪ್ರಯೋಗಿಸಿದ್ದಾನೆ. ಅನುರಣನರೂಪವಾಗಿ ಅದು ಕೆರೆ ಬಾವಿಗಳಿಗೂ ತನ್ನ ಶಕ್ತಿಯಿಂದಲೇ ಅನ್ವಯಿಸುತ್ತದೆ.

ಇದೇ ಪ್ರಭೇದದಲ್ಲೇ ವಾಕ್ಯಧ್ವನಿಗೆ ಉದಾಹರಣೆಯು ಬಾಣಭಟ್ಟನ ಹರ್ಷಚರಿತೆಯಲ್ಲಿ ಬರುವ ಸಿಂಹನಾದನ ವಾಕ್ಯಗಳಲ್ಲಿ ಸಿಕ್ಕುತ್ತದೆ—

'ವೃತ್ತೇऽಸ್ಮಿನ್ಮಹಾಪ್ರಲಯೇ ಧರಣೀಧಾರಣಾಯಾಧುನಾ ತ್ವಂ ಶೇಷಃ'

(='ಈ ಹರ್ಷವಿನಾಶ ಪ್ರಸಂಗವು ಒದಗಿರುವಾಗ ರಾಜ್ಯಭಾರವನ್ನು ವಹಿಸಿಕೊಳ್ಳಲು ಈಗ ಉಳಿದಿರುವವನು ನೀನೇ'—'ಪ್ರಲಯಕಾಲವು ಬಂದೊದಗಿದಾಗ ಭೂಮಿಯ ಭಾರವನ್ನು ಹೊರಲು ಆದಿಶೇಷನೊಬ್ಬನೇ ಹೇಗೆ ಸಮರ್ಥನೋ ಹಾಗೆ').

ಈ ವಾಕ್ಯವು ಅನುರಣನರೂಪವಾದ ಅರ್ಥಾಂತರವನ್ನು ಸ್ಫುಟವಾಗಿ ಶಬ್ದ ಶಕ್ತಿಯಿಂದಲೇ ಧ್ವನಿಸುತ್ತದೆ.

ಇನ್ನು ಕವಿಪ್ರೌಢೋಕ್ತಿಸಿದ್ಧವಾದ ಅರ್ಥಶಕ್ತಿಮೂಲ-ಧ್ವನಿಯೆಂಬ ಪ್ರಭೇದ ದಲ್ಲಿ ಪದ-ಧ್ವನಿಗೆ ಉದಾಹರಣೆ:

ಚೂಅಂಕುರಾವಅಂಸಂ ಛಣಪುಪ್ಪಸರಮಹಘ್ಘಣಮಣಹರಸುರಾವೋಅಮ್ |
ಅಸಮಪ್ಪಿಅಂ ಪಿ ಗಹಿಅಂ ಕುಸುಮಸರೇಣ ಮಹುಮಾಸಲಚ್ಛಿಮುಹಮ್ ||
—ಹರಿವಿಜಯಕಾವ್ಯ.

ಅಸಮರ್ಪಿತಮಾದೊಡಮಾ
ರಸಾಲಾಂಕುರಾವತಂಸಮಂ ಬಂಧುರಗಂ-|
ಧಸುರಭಿಯಂ ಕೈಕೊಂಡಂ
ಕುಸುಮಶರಂ (ಸು)ಮಧುಮಾಸಲಕ್ಷ್ಮೀಮುಖಮಂ ||

'ಮಧುಮಾಸಲಕ್ಷ್ಮಿಯ ಮುಖವನ್ನು ಕುಸುಮಶರನು ಸಮರ್ಪಿತವಾಗ ದಿದ್ದರೂ ಕೈಕೊಂಡನು' ಎನ್ನುವಾಗ, 'ಅಸಮರ್ಪಿತಂ' ಎಂಬ ಸ್ಥಿತಿಮಾತ್ರ-ವಾಚಕವಾದ ಪದವು ಅರ್ಥಶಕ್ತಿಯಿಂದ ಕುಸುಮಶರನ ಬಲಾತ್ಕಾರವನ್ನು ಧ್ವನಿಸುತ್ತದೆ.

ಈ ಪ್ರಭೇದದಲ್ಲಿ ವಾಕ್ಯ-ಧ್ವನಿಗೆ ಈಗಾಗಲೇ ಕೊಟ್ಟಿರುವ 'ಸಜ್ಜೇಇಸುರಹಿ ಮಾಸೋ[1]' ಎಂಬ ಶ್ಲೋಕವೇ ಉದಾಹರಣೆ. ಆ ಶ್ಲೋಕದಲ್ಲಿ 'ವಸಂತಮಾಸವು ಬಾಣಗಳನ್ನು ಸಜ್ಜುಗೊಳಿಸುವುದೇ ಹೊರತು ಮನ್ಮಥನ ಕೈಗಿನ್ನೂ ಕೊಡುವುದಿಲ್ಲ' ಎಂಬ ವಾಕ್ಯಾರ್ಥವು ಕವಿಯ ಪ್ರೌಢೋಕ್ತಿಯ ಪ್ರಭಾವದಿಂದ ಮಾತ್ರ ಸಿದ್ಧ ವಾದುದು. ಅದು ವಸಂತಸಮಯದ ಕಾಮೋದ್ದೀಪಕತೆಯನ್ನು ಧ್ವನಿಸುತ್ತದೆ.

ಸ್ವತಃ-ಸಂಭವಿಯೆಂಬ ಅರ್ಥಶಕ್ತಿ-ಮೂಲಧ್ವನಿಯ ಪ್ರಭೇದದಲ್ಲಿ ಪದ-ಧ್ವನಿಗೆ ಉದಾಹರಣೆ:

ವಾಣಿಅಅ ಹತ್ಥಿದನ್ತಾ ಕುತೋ ಅಮ್ಹಾಣ ಬಾಘಕಿತ್ತೀ ಅ |
ಜಾವ ಲುಲಿಅಲಅಮುಹೀ ಘರಮ್ಮಿ ಪರಿಸಕ್ಕಏ ಸುಹ್ಣಾ ||

ಸೆಟ್ಟಿ, ನಮಗಿನ್ನೆಲ್ಲಿ ಆನೆದಂತಗಳಿರವು,
ಅಂತೆಯೇ ಹುಲಿಯ ತೊಗಲುಗಳ ಮಾತು |
ಮುಂಗುರುಳ ಕೆದರಿಕೊಂಡಿರುತಿರುವ ಸೊಸೆಯಿವಳು
ಮನೆಯಲ್ಲಿಯೇ ಸುಳಿವವರೆಗು ಇಂತು ||

1 ಪುಟ ೨೧ ನ್ನು ನೋಡಿ.

ಇಲ್ಲಿ 'ಮುಂಗುರುಳ ಕೆದರಿಕೊಂಡಿರುತಿರುವ ಮುಖವುಳ್ಳ' ಎನ್ನುವುದಕ್ಕೆ ಮೂಲದಲ್ಲಿ ಪ್ರಯುಕ್ತವಾಗಿರುವ 'ಲುಲಿಆಲಅಮುಹೀ' ಎಂಬ ಪದವು ಸ್ವತಃ ಸಂಭವಿಯಾಗಿರುವುದಲ್ಲದೆ ಅರ್ಥಶಕ್ತಿಯಿಂದ ಆಕೆಯ ಸುರತಕ್ರೀಡಾಸಕ್ತಿಯನ್ನೂ ರಮಣನ ಸತತಸಂಭೋಗಜನಿತ ತನುಕ್ಷಯವನ್ನೂ ಧ್ವನಿಸುತ್ತದೆ.

ಇದೇ ಪ್ರಭೇದದ ವಾಕ್ಯಧ್ವನಿಗೆ ಉದಾಹರಣೆ: "ಸಿಹಿಪಿಂಛ . . ." ಎಂಬ ಈಗಾಗಲೇ ಉದಾಹೃತವಾಗಿರುವ ಶ್ಲೋಕ[1]. ಈ ವಾಕ್ಯದಿಂದಲೂ, ನವಿಲುಗರಿಯ ಕರ್ಣಪೂರದಿಂದ ಶೋಭಿಸುವ ಮತ್ತು ನವೋಢೆಯಾದ ಬೇಡರ ಯುವತಿಯೊಬ್ಬಳ ಸೌಭಾಗ್ಯಾತಿಶಯವು ಧ್ವನಿತವಾಗುತ್ತದೆ. ಅಷ್ಟೇ ಅಲ್ಲದೆ, ಆಕೆಯ ಸಂಭೋಗನಿರತನಾದ ರಮಣನಿಗೆ ಈಗ ನವಿಲನ್ನು ಹೊಡೆಯುವಷ್ಟು ಮಾತ್ರ ಪ್ರಾಣವುಳಿದಿದೆಯೆಂದೂ ಸೂಚಿತವಾಗುವುದರಿಂದ, ಹಿಂದೆ ಮದುವೆಯಾದವರಿಗೆ ಮುತ್ತಿನ ಅಲಂಕಾರಗಳಿದ್ದರೂ—ಇದೇ ವ್ಯಾಧನೇ ಹಿಂದೆ ದೊಡ್ಡ ದೊಡ್ಡ ಆನೆಗಳನ್ನು ಹೊಡೆದು ಮುತ್ತುಗಳನ್ನು ತರುವ ಸಾಮರ್ಥ್ಯವುಳ್ಳವನಾಗಿದ್ದನು—ಇಂದು ಅವರ ದೌರ್ಭಾಗ್ಯಾತಿಶಯವು ಎಷ್ಟೆಂದು ಬಣ್ಣಿಸಿದಂತೆಯೂ ಆಗುತ್ತದೆ.

ಯಾರಾದರೂ ಹೀಗೆ ಆಕ್ಷೇಪಿಸಬಹುದು: 'ಧ್ವನಿಯ ಲಕ್ಷಣವನ್ನು ಹಿಂದೆ ಹೇಳುವಾಗ, ಕಾವ್ಯವಿಶೇಷವೇ ಧ್ವನಿಯೆನ್ನಲಾಯಿತು. ಆದುದರಿಂದ ಅದು ಪದದಲ್ಲಿ ಪ್ರಕಾಶಗೊಳ್ಳುವುದೆಂತು? ಕಾವ್ಯವಿಶೇಷವೆನ್ನುವುದು ಒಂದು ವಿಶಿಷ್ಟಾರ್ಥವನ್ನು ಬೋಧಿಸಬಲ್ಲ ಪದಸಮೂಹವೆಂದು ತಿಳಿಯಬೇಕಲ್ಲವೆ? ಒಂದು ಪದದ ಮೂಲಕ ಅದು ಪ್ರಕಾಶಿಸುವುದೆನ್ನುವಾಗ ಈ ಅರ್ಥವು ಸಮಂಜಸವಾಗುವುದಿಲ್ಲ. ಏಕೆಂದರೆ ಪದಗಳು ವಾಕ್ಯದ ಅರ್ಥಕ್ಕೆ ಸ್ಮಾರಕಗಳೇ ಹೊರತು ವಾಚಕಗಳಲ್ಲ.'

ಇದಕ್ಕೆ ಸಮಾಧಾನವಿಷ್ಟೆ: ಧ್ವನಿಯ ವ್ಯವಹಾರಕ್ಕೆ ವಾಚಕತ್ವವು ನಿಯಾಮಕವಾಗಿದ್ದರೆ ಮೇಲೆ ಹೇಳಿದ ದೋಷ ಬರಬಹುದಾಗಿತ್ತು. ಆದರೆ ವಸ್ತುತಃ ಹೀಗಿಲ್ಲ; ವ್ಯಂಜಕತ್ವವು ಮಾತ್ರ ಧ್ವನಿವ್ಯವಹಾರಕ್ಕೆ ನಿಯಾಮಕವೆಂದು ನಿರ್ಣಯಿಸಲಾಗಿದೆ. ಅದೂ ಅಲ್ಲದೆ, ರಮಣೀಯತೆಯಿಂದೊಡಗೂಡಿದ ಬೇರೆ ಬೇರೆ ಅವಯವಗಳೆಲ್ಲವುಗಳ ಸಮುದಾಯವೇ ಶರೀರಸೌಷ್ಠವಕ್ಕೆ ನಿಜವಾದ ಕಾರಣವಾದರೂ, ಆ ಪ್ರತ್ಯೇಕಾವಯವಗಳಲ್ಲಿ ರಮಣೀಯತೆಯುಂಟೆಂದು ನಾವು ರೂಢಿಯಲ್ಲಿ ಹೇಳುವುದಿಲ್ಲವೆ? ಹಾಗೆಯೇ ಕಾವ್ಯಗಳಲ್ಲಿಯೂ ಕೂಡ, ಇದೇ ಅನ್ವಯ-ವ್ಯತಿರೇಕನಿಯಮವನ್ನು ಮನಸ್ಸಿನಲ್ಲಿಟ್ಟು, ಪದಸಮುದಾಯದಿಂದ ಬರುವ ರಮಣೀಯತೆಗೆ ಪ್ರತ್ಯೇಕಪದಗಳೂ

[1] ಪುಟ ೨೨ ನ್ನು ನೋಡಿ.

ವ್ಯಂಜಕಗಳೆಂದು ತಿಳಿದು, ಧ್ವನಿ ವ್ಯವಹಾರವನ್ನು ನಿರ್ಣಯಿಸುವೆವಾದುದರಿಂದ ಯಾವ ವಿರೋಧಕ್ಕೂ ಅವಕಾಶವಿಲ್ಲ.

ಇದನ್ನೇ ಕೆಳಗಿನ ಪರಿಕರಶ್ಲೋಕಗಳು ಸಂಗ್ರಹವಾಗಿ ಪ್ರತಿಪಾದಿಸುತ್ತವೆ:

ಅನಿಷ್ಟಸ್ಯ ಶ್ರುತಿರ್ಯದ್ವದಾಪಾದಯತಿ ದುಷ್ಟತಾಮ್ ।
ಶ್ರುತಿದುಷ್ಟಾದಿಷು ವ್ಯಕ್ತಂ ತದ್ವದಿಷ್ಟಸ್ಮೃತಿರ್ಗುಣಃ ॥
ಪದಾನಾಂ ಸ್ಮಾರಕತ್ವೇಽಪಿ ಪದಮಾತ್ರಾವಭಾಸಿನಃ ।
ತೇನ ಧ್ವನೇಃ ಪ್ರಭೇದೇಷು ಸರ್ವೇಷ್ವೇವಾಸ್ತಿ ರಮ್ಯತಾ ॥
ವಿಚ್ಛಿತ್ತಿಶೋಭಿನೈಕೇನ ಭೂಷಣೇನೇವ ಕಾಮಿನೀ ।
ಪದದ್ಯೋತ್ಯೇನ ಸುಕವೇರ್ಧ್ವನಿನಾ ಭಾತಿ ಭಾರತೀ ॥

'ಶ್ರುತಿದುಷ್ಟ'ವೇ ಮೊದಲಾದ ದೋಷಗಳಲ್ಲಿ ಉದ್ದೇಶವಿರದಿದ್ದರೂ ಬರುವ ಅಸುಂದರಾರ್ಥದ ಸ್ಮಾರಕತ್ವವು ಹೇಗೆ ದೋಷವೆನಿಸುವುದು ವ್ಯಕ್ತವೋ, ಹಾಗೆಯೇ ಉದ್ದೇಶಪೂರ್ವಕವಾಗಿ ಸುಂದರಾರ್ಥದ ಸ್ಮಾರಕತ್ವವಿರುವುದಾದರೆ ಅದನ್ನು ಗುಣವೆನ್ನಬೇಕು. ಪದಗಳು ಕೇವಲ ಸ್ಮಾರಕಗಳೇ ಆದರೂ, ಪದದಿಂದ ಪ್ರಕಾಶಿತವಾಗುವ ಧ್ವನಿಯ ಎಲ್ಲ ಪ್ರಭೇದಗಳಲ್ಲಿಯೂ ರಮಣೀಯತೆಯಿದ್ದೇ ಇರುವುದು. ರಮಣೀಯವಾದ ಕಾಂತಿಯಿಂದ ಕೂಡಿದ ಒಂದೇ ಒಂದು ಆಭರಣ ದಿಂದ ಶೋಭಿಸುವ ಕಾಮಿನಿಯಂತೆ, ಸುಕವಿಯ ವಾಣಿಯು ಪದಪ್ರಕಾಶಿತವಾದ ಧ್ವನಿಯಿಂದ ಶೋಭಿಸುತ್ತದೆ.

ಕಾರಿಕೆ

ಯಸ್ತ್ವಲಕ್ಷ್ಯಕ್ರಮವ್ಯಂಗ್ಯೋ ಧ್ವನಿರ್ವರ್ಣಪದಾದಿಷು ।
ವಾಕ್ಯೇ ಸಂಘಟನಾಯಾಂ ಚ ಸ ಪ್ರಬಂಧೇಽಪಿ ದೀಪ್ಯತೇ ॥ ೨ ॥

ಆದರೆ ಅಲಕ್ಷ್ಯಕ್ರಮವೆನಿಸುವ ಧ್ವನಿಯು ಅಕ್ಷರ, ಪದವೇ ಮೊದಲಾದುವು, ವಾಕ್ಯ, ಸಂಘಟನೆ, ಪ್ರಬಂಧ—ಈ ಎಲ್ಲವುಗಳಲ್ಲೂ ಪ್ರಕಾಶಿತವಾಗುತ್ತದೆ.

ವೃತ್ತಿ

ಇವುಗಳಲ್ಲಿ ಅಕ್ಷರಗಳಿಗೆ ಅರ್ಥವಿಲ್ಲದ ಕಾರಣ ಅವು ವ್ಯಂಜಕಗಳಾಗುವುದು ಅಸಂಭವವೆಂಬ ಆಶಂಕೆಗೆ ಮುಂದಿನ ಕಾರಿಕೆಯು ಸಮಾಧಾನವನ್ನು ಹೇಳುತ್ತದೆ.

ಕಾರಿಕೆ

ಶಷೌ ಸರೇಫಸಂಯೋಗೋ ಢಕಾರಶ್ಚಾಪಿ ಭೂಯಸಾ।
ವಿರೋಧಿನಃ ಸ್ಯುಃ ಶೃಂಗಾರೇ ತೇನ ವರ್ಣಾ ರಸಚ್ಯುತಃ ‖ ೩ ‖

ತ ಏವ ತು ನಿವೇಶ್ಯನ್ತೇ ಬೀಭತ್ಸಾದೌ ರಸೇ ಯದಾ।
ತದಾ ತಂ ದೀಪಯನ್ತ್ಯೇವ ತೇನ ವರ್ಣಾ ರಸಚ್ಯುತಃ ‖ ೪ ‖

ಶಕಾರ ಷಕಾರಗಳು, ರಕಾರದೊಡನೆ ಸಂಯುಕ್ತವಾದ ಅಕ್ಷರಗಳು, ಢಕಾರ—ಇವೆಲ್ಲವೂ ಶೃಂಗಾರರಸದಲ್ಲಿ ವಿರೋಧಿಗಳಾಗುವುವು. ಆದುದರಿಂದ ಅಕ್ಷರಗಳಿಗೆ ರಸವನ್ನು ಧ್ವನಿಸುವ ಶಕ್ತಿಯುಂಟು.

ಇವೇ ಅಕ್ಷರಗಳೇ ಬೀಭತ್ಸವೇ ಮೊದಲಾದ ರಸಗಳಲ್ಲಿ ಪ್ರಯುಕ್ತವಾದಾಗ ರಸಪುಷ್ಟಿಯನ್ನು ತರುತ್ತವೆ. ಆದುದರಿಂದಲೂ ಅಕ್ಷರಗಳಿಗೆ ರಸವ್ಯಂಜಕತ್ವವುಂಟು.

ವೃತ್ತಿ

ಈ ಎರಡು ಶ್ಲೋಕಗಳಲ್ಲಿ ಅನ್ವಯ, ವ್ಯತಿರೇಕಗಳಿಂದ ಅಕ್ಷರಗಳಿಗೆ ವ್ಯಂಜಕತ್ವವಿರುವುದನ್ನು ತೋರಿಸಿದಂತಾಯಿತು.

ಅಲಕ್ಷ್ಯಕ್ರಮವ್ಯಂಗ್ಯಧ್ವನಿಯಲ್ಲಿ ಪದ-ವ್ಯಂಜಕತ್ವಕ್ಕೆ ಉದಾಹರಣೆ :—

ಉತ್ಕಂಪಿನೀ ಭಯಪರಿಸ್ಖಲಿತಾಂಶುಕಾಂತಾ
ತೇ ಲೋಚನೇ ಪ್ರತಿದಿಶಂ ವಿಧುರೇ ಕ್ಷಿಪನ್ತೀ ।
ಕ್ರೂರೇಣ ದಾರುಣತಯಾ ಸಹಸೈವ ದಗ್ಧಾ
ಧೂಮಾನ್ಧಿತೇನ ದಹನೇನ ನ ವೀಕ್ಷಿತಾಸಿ ‖

ನಡಗುತೆ ನೀನಿರಲ್ಕೆ ಭಯದಿಂದೆ ಪರಿಸ್ಖಲಿತಾಂಶುಕಾಂತೆಯಾ-
ಗೆಡೆಗಳನೆಲ್ಲ ದಿಕ್ಕುಗಳ ತೀವಿರೆ ದೈನ್ಯದೊಳಾ ವಿಲೋಕನಂ।
ಬಿಡದೆಯೆ ಸುಟ್ಟನಗ್ನಿ ದಯೆಯಿಲ್ಲದೆ ದಾರುಣವಾಗಿ ಧೂಮಮಂ-
ದೆಡೆವಿಡದಂತೆ ಬಂದು ಕುರುಡಾಗಿಸೆ ಕಾಣದೆವೋಗುತೇನುಮಂ ‖

ಇಲ್ಲಿ 'ತೆ' ಎಂಬ ಪದವು ರಸಮಯವಾಗಿರುವುದು ಸಹೃದಯರಿಗೆ ಸ್ಫುಟವಾಗಿಯೇ ಕಾಣಿಸುತ್ತದೆ.

ಪದದ ಅವಯವದಲ್ಲಿ ಬರುವ ಧ್ವನಿಗೆ ಉದಾಹರಣೆ :—

ವ್ರೀಡಾಯೋಗಾನ್ನತವದನಯಾ ಸನ್ನಿಧಾನೇ ಗುರೂಣಾಂ
ಬದ್ಧೋತ್ಕಂಪಂ ಕುಚಕಲಶಯೋರ್ಮನ್ಯುಮನ್ತರ್ನಿಗೃಹ್ಯ ।

ತಿಷ್ಠೇತ್ಯುಕ್ತಂ ಕಿಮಿವ ನ ತಯಾ ಯತ್ಸಮುತ್ಸೃಜ್ಯ ಬಾಷ್ಪಂ
ಮಯ್ಯಾಸಕ್ತಶ್ಚಕಿತಹರಿಣೀಹಾರಿನೇತ್ರತ್ರಿಭಾಗಃ ||

ಗುರುಸಾನ್ನಿಧ್ಯದೊಳಾಕೆ ನಾಣಕತದಿಂ ತನ್ನಾನನಂ ತಗ್ಗಿರಲ್
ಭರದಿಂ ಕುಂಭಕುಚಂಗಳಂ ನಡುಗಿಪಾ ದುಃಖಾಳಿಯಂ ನುಂಗುತಾ-|
ದರದಿಂದೆನ್ನೊಳೆ ಕಣ್ಣ ನೀರ ಮಿಡಿಯುತ್ತುಂ ನೆಟ್ಟ ವಿತ್ರಸ್ತಮಾ
ಹರಿಣೀನೇತ್ರೆಯಪಾಂಗವೀಕ್ಷಣಮೆ ತಾಂ ನಿಲ್ಲೆಂದು ಪೇಳಿಲ್ಲಮೇಂ ||

ಮೇಲೆ ಮೂಲಶ್ಲೋಕದಲ್ಲಿ (ಕಡೆಗೆ ಬರುವ ದೀರ್ಘಸಮಾಸವು ಒಂದೇ ಪದ. ಆ ಸಮಾಸಪದದ ಅವಯವವಾದ) 'ತ್ರಿಭಾಗಃ' ಎಂಬಲ್ಲಿ ವ್ಯಂಜಕತ್ವವಿದೆ. (ಹಾಗೆಯೇ ಕನ್ನಡದ ಭಾಷಾಂತರದಲ್ಲಿ 'ಅಪಾಂಗ' ಎಂಬ ಪದಭಾಗದಲ್ಲಿ ವ್ಯಂಜಕತ್ವ ವಿದೆ.)

ವಾಕ್ಯಗತವಾದ ಅಲಕ್ಷ್ಯಕ್ರಮ-ವ್ಯಂಗ್ಯ-ಧ್ವನಿಯು 'ಶುದ್ಧ' ಮತ್ತು 'ಅಲಂಕಾರ ಸಂಕೀರ್ಣ'ವೆಂದು ಎರಡು ಬಗೆ. 'ಶುದ್ಧ'ವೆನಿಸುವ ಧ್ವನಿಗೆ **ರಾಮಾಭ್ಯುದಯ**[1] ದಲ್ಲಿ ಬರುವ ಈ ಶ್ಲೋಕವೇ ಉದಾಹರಣೆ :—

ಕೃತಕಕುಪಿತೈರ್ಬಾಷ್ಪಾಂಭೋಭಿಃ ಸದೈನ್ಯವಿಲೋಕಿತೈ-
ರ್ವನಮಪಿ ಗತಾ ಯಸ್ಯ ಪ್ರೀತ್ಯಾ ಧೃತಾಪಿ ತಥಾಂಬಯಾ |
ನವಜಲಧರಶ್ಯಾಮಾಃ ಪಶ್ಯನ್ ದಿಶೋ ಭವತೀಂ ವಿನಾ
ಕಠಿನಹೃದಯೋ ಜೀವತ್ಯೇವ ಪ್ರಿಯೇ ಸ ತವ ಪ್ರಿಯಃ ||

ತಡೆಯುತ್ತಿರ್ದೊಡಮಬ್ಬೆ, ನೀನು ವನಮಂ ಪ್ರೇಮಾಸ್ಥೆಯಿಂದಾವನಾ
ನಡೆದೈತಂದೆಯೊ ದೈನ್ಯದಿಂ ಪ್ರಣಯಕೋಪೋನ್ಮೇಷದಿಂ ಕಣ್ಣ ನೀ-|
ರ್ಮಿಡಿಯುತ್ತಿರ್ದ ವಿಲೋಕನಂಬೆರಸು, ತಾನಾತಂ ಪ್ರಿಯಂ ನಿರ್ದಯಂ
ನಡೆನೋಡುತ್ತೆ ಪಯೋದನೀಲದಿಶೆಯಂ ನೀಂ ಬಿಟ್ಟೊಡಂ ಜೀವಿಪಂ ||

ಈ ಇಡಿಯ ವಾಕ್ಯವೇ ಪರಸ್ಪರಾನುರಾಗದ ಪರಿಪೋಷವನ್ನು ತೋರಿಸುವುದರ ಮೂಲಕ ರಸ-ಧ್ವನಿಗೆ ಆಶ್ರಯವಾಗಿದೆ.

'ಅಲಂಕಾರಾಂತರ-ಸಂಕೀರ್ಣ'ವೆಂಬ ಬಗೆಗೆ ಉದಾಹರಣೆ :—

ಸ್ಮರನವನದೀಪೂರೇಣೋಢಾಃ ಪುನರ್ಗುರುಸೇತುಭಿ-
ರ್ಯದಪಿ ವಿಧೃತಾಃ ತಿಷ್ಠನ್ತ್ಯಾರಾದಪೂರ್ಣಮನೋರಥಾಃ |

[1] ಈ ಹೆಸರಿನ ನಾಟಕವನ್ನು ಬರೆದವನು ಯಶೋವರ್ಮನೆಂಬ ರಾಜ. (ಇವನು ಭವಭೂತಿಯ ಸಮಕಾಲೀನ.)

ತದಪಿ ಲಿಖಿತಪ್ರಖ್ಯೈರಂಗೈಃ ಪರಸ್ಪರಮುನ್ಮುಖಾ
ನಯನನಲಿನೀನಾಲಾನೀತಂ ಪಿಬನ್ತಿ ರಸಂ ಪ್ರಿಯಾಃ||

ಮದನನದೀಪ್ರವಾಹದೊಳು ತೇಲುತೆ ಮೇಣ್ಗುರು[1]ಸೇತುವಿಂದೆ ತ-
ಮ್ಮೆರ್ದೆ ತಡೆದಂತಿರಾಗೆ ಮುರಿದಾಸೆಯಿನಂತೆಯೆ ನಿಲ್ವರಾದೊಡಂ|
ಬಿದಿಯವರಂಗಮಂ ಬರೆದವೋಲಿರೆ ಮತ್ತೆ ಪರಸ್ಪರೋನ್ಮುಖಾ-
ಸ್ಪದರೆನೆ ನೇತ್ರಪಂಕಜದ ನಾಳಗಳಿಂ ರಸಮಂ ಕುಡಿವರ್ ಸುರಾಗಿಗಳ್ ‖

ಇಲ್ಲಿ ವ್ಯಂಜಕತ್ವವನ್ನೊಳಕೊಂಡ ರೂಪಕಾಲಂಕಾರದ ಮೂಲಕ ರಸವು ಧ್ವನಿತವಾಗಿ ಕಂಗೊಳಿಸುತ್ತದೆ.

ಅಲಕ್ಷ್ಯಕ್ರಮ-ವ್ಯಂಗ್ಯವಾದ ಧ್ವನಿಯು 'ಸಂಘಟನೆ'ಯಲ್ಲಿಯೂ ಪ್ರಕಾಶಿಸುವುದೆಂದು ಹೇಳಲಾಯಿತು. ಈಗ ಸಂಘಟನೆಯ ಸ್ವರೂಪವೇನೆಂದು ನಿರೂಪಿಸಲಾಗುತ್ತದೆ:—

ಕಾರಿಕೆ

ಅಸಮಾಸಾ ಸಮಾಸೇನ ಮಧ್ಯಮೇನ ಚ ಭೂಷಿತಾ।
ತಥಾ ದೀರ್ಘಸಮಾಸೇತಿ ತ್ರಿಧಾ ಸಂಘಟನೋದಿತಾ ‖ ೫ ‖

'ಅಸಮಾಸಾ,' 'ಮಧ್ಯಮಸಮಾಸಾ,' 'ದೀರ್ಘಸಮಾಸಾ'—ಎಂದು ಮೂರು ಬಗೆಯಾಗಿ ಸಂಘಟನೆಯು ನಿರೂಪಿತವಾಗಿದೆ.

ವೃತ್ತಿ

'ಬೇರೆ ಕೆಲವರಿಂದ' ಎಂದು ಅಧ್ಯಾಹಾರ. ಅದನ್ನಿಲ್ಲಿ ಸುಮ್ಮನೆ ಅನುವಾದ ಮಾಡಿಕೊಂಡು ಇದನ್ನು ಹೇಳಲಾಗುತ್ತದೆ—

ಕಾರಿಕೆ

ಗುಣಾನಾಶ್ರಿತ್ಯ ತಿಷ್ಠನ್ತೀ ಮಾಧುರ್ಯಾದೀನ್ ವ್ಯನಕ್ತಿ ಸಾ।
ರಸಾಂಸ್ತನ್ನಿಯಮೇ ಹೇತುರೌಚಿತ್ಯಂ ವಕ್ತೃವಾಚ್ಯಯೋಃ ‖ ೬ ‖

ಆ ಸಂಘಟನೆಯು ಮಾಧುರ್ಯವೇ ಮೊದಲಾದ ಗುಣಗಳನ್ನು ಆಶ್ರಯಿಸಿ ನಿಂತು ರಸಗಳನ್ನು ಧ್ವನಿಸುತ್ತದೆ. ಹೇಳುವ ಮನುಷ್ಯನ ಮತ್ತು ಹೇಳಬೇಕಾದ ವಿಷಯದ ಔಚಿತ್ಯವು ಅದರ ವೈಶಿಷ್ಟ್ಯನಿಯಮಕ್ಕೆ ಕಾರಣ.

---

[1] ಗುರು = 'ಭಾರವಾದ' ಅಥವಾ 'ಹಿರಿಯರೆಂಬ'.

ವೃತ್ತಿ

ಆ ಸಂಘಟನೆಗೆ ರಸಗಳೇ ವ್ಯಂಗ್ಯ, ಗುಣಗಳೇ ಆಶ್ರಯ, ಎಂದಂತಾಯಿತು. ಆದರೆ ಇಲ್ಲಿ ಹೀಗೂ ವಿಷಯವನ್ನು ಕಲ್ಪಿಸಬಹುದು—'ಗುಣ' ಮತ್ತು 'ಸಂಘಟನೆ'—ಇವುಗಳಿಗೆ ಅಭೇದವಿದೆಯೋ ಇಲ್ಲವೆ ಭೇದವೋ? ಭೇದವಿದೆಯೆಂದರೆ ಮತ್ತೆ ಎರಡು ಪಕ್ಷಗಳಿಗೆ ಅವಕಾಶವುಂಟು—ಗುಣಾಶ್ರಿತವಾದುದು ಸಂಘಟನೆಯೇ ಅಥವಾ ಸಂಘಟನಾಶ್ರಿತವಾದುದು ಗುಣವೆ? ಎಂದು. ಅವೆರಡಕ್ಕೂ ಅಭೇದವೇ ಉಂಟೆನ್ನುವ ಪಕ್ಷದಲ್ಲಿ ಮತ್ತು ಸಂಘಟನಾಶ್ರಿತವಾದುದೇ ಗುಣವೆಂಬ ಪಕ್ಷದಲ್ಲಿ, (ಅನುಕ್ರಮವಾಗಿ) ಆತ್ಮಾಭಿನ್ನವಾದ ಅಥವಾ ಆಧೇಯವಾದ ಗುಣಗಳನ್ನು ಆಶ್ರಯಿಸಿ, ಸಂಘಟನೆಯು ರಸಗಳನ್ನು ಧ್ವನಿಸುವುದೆಂದರ್ಥ. ಹಾಗೆಯೇ, ಅವೆರಡೂ ಭಿನ್ನವೆಂಬುದರ ಜತೆಗೆ ಗುಣಾಶ್ರಿತವಾದುದೇ ಸಂಘಟನೆಯೆಂಬ ಪಕ್ಷದಲ್ಲಿ "ಗುಣಗಳನ್ನಾಶ್ರಯಿಸಿ ನಿಂತು" ಎಂಬುದಕ್ಕೆ 'ಗುಣಪರತಂತ್ರವಾದ ಸ್ವಭಾವವುಳ್ಳುದಾಗಿ' ಎಂದರ್ಥ; 'ಗುಣಸ್ವರೂಪವನ್ನೇ ತಳೆದು' ಎಂದಾಗುವುದಿಲ್ಲ. ಹೀಗೆ ನಾನಾ ವಿಕಲ್ಪಗಳನ್ನು ಮಾಡುವುದರಿಂದ ಬರುವ ಲಾಭವೇನು?

ಇದೇ ಉತ್ತರ—

ಗುಣಗಳೂ ಸಂಘಟನೆಯೂ ಒಂದೇ ಎಂದರೂ, ಅಥವಾ ಗುಣಗಳಿಗೆ ಸಂಘಟನೆಯೇ ಆಶ್ರಯವೆಂದರೂ, ಸಂಘಟನೆಯಂತೆ ಗುಣಗಳಿಗೂ ಕೂಡ ಅನಿಯತವಾದ ವ್ಯಾಪ್ತಿಯು ಬಂದೊದಗುತ್ತದೆ. (ಆದರೆ ವಸ್ತುತಃ ಗುಣಗಳ ವ್ಯಾಪ್ತಿಯು ನಿಯತವೇ ಹೊರತು ಅನಿಯತವಲ್ಲ). ಉದಾಹರಣೆಗೆ—'ಕರುಣ' ಮತ್ತು 'ವಿಪ್ರಲಂಭ ಶೃಂಗಾರ,' ಈ ಎರಡು ರಸಗಳ ವಿಷಯದಲ್ಲಿ ಮಾತ್ರ 'ಮಾಧುರ್ಯ' ಮತ್ತು 'ಪ್ರಸಾದ'ಗಳಿಗೆ ವಿಶೇಷವಾದ ಮಹತ್ವವುಂಟು. ಹಾಗೆಯೇ 'ಓಜಸ್ಸು,' 'ರೌದ್ರ' ಮತ್ತು 'ಅದ್ಭುತ' ರಸಗಳನ್ನು ಕುರಿತುದು. ಅಲ್ಲದೆ, 'ಮಾಧುರ್ಯ' ಮತ್ತು 'ಪ್ರಸಾದ'ಗಳು ರಸ, ಭಾವ, ಮತ್ತು ಇವುಗಳ ಆಭಾಸಗಳಿಗೆ ಮಾತ್ರ ಅನ್ವಯಿಸುವುವೆಂಬ ವಿಷಯನಿಯಮವನ್ನೂ ವ್ಯವಸ್ಥೆಮಾಡಲಾಗಿದೆ. ಆದರೆ ಸಂಘಟನೆಯಲ್ಲಿ ಈ ನಿಯಮಗಳು ಅನ್ವಯಿಸುವುದಿಲ್ಲ. ಹೇಗೆಂದರೆ, ಶೃಂಗಾರರಸದಲ್ಲಿಯೂ 'ದೀರ್ಘಸಮಾಸ'ದ ಸಂಘಟನೆಯನ್ನು ಕಾಣಬಹುದು; ರೌದ್ರವೇ ಮೊದಲಾದ ರಸಗಳಲ್ಲಿ 'ಅಸಮಾಸ'ದ ಸಂಘಟನೆಯನ್ನೂ ನೋಡಬಹುದು.

ಶೃಂಗಾರದಲ್ಲಿ 'ದೀರ್ಘಸಮಾಸ'-ಸಂಘಟನೆಗೆ ಉದಾಹರಣೆ:—

"ಮಂದಾರಕುಸುಮರೇಣುಪಿಂಜರಿತಾಲಕಾ"

ಅಥವಾ—

"ಅನವರತನಯನಜಲಲವನಿಪತನಪರಿಮುಷಿತಪತ್ರಲೇಖಾನ್ತಮ್ |
ಕರತಲನಿಷಣ್ಣಮಬಲೇ ವದನಮಿದಂ ಕಂ ನ ತಾಪಯತಿ ||"

ಅನವರತನಯನಜಲಲವ
ವಿನಿಸ್ಸರಣನಷ್ಟಪತ್ರಲೇಖಾಂತಂ ತಾ- |
ನೆನೆ ನಿನ್ನೀ ಕರನಿಹಿತವ-
ದನಮಾವನ ಮಾನಸಾಂತಮಂ ಸುಡದಿರ್ಕುಂ ||

ಹಾಗೆಯೇ ರೌದ್ರವೇ ಮೊದಲಾದ ರಸಗಳಲ್ಲಿ ಬರುವ ಅಸಮಾಸ-ಸಂಘಟನೆಗೆ "ಯೋ ಯಃ ಶಸ್ತ್ರಂ. . . "[1] ಮೊದಲಾದುವು ಉದಾಹರಣೆಗಳು. ಆದುದರಿಂದ ಗುಣಗಳಿಗೂ ಸಂಘಟನೆಗೂ ಅಭೇದವಿಲ್ಲ; ಗುಣಗಳಿಗೆ ಸಂಘಟನೆಯು ಆಶ್ರಯವೂ ಅಲ್ಲ.

'ಸಂಘಟನೆಯು ಗುಣಗಳಿಗೆ ಆಶ್ರಯವಲ್ಲವೆಂದು ಬಿಟ್ಟರೆ, ಇನ್ನು ಬೇರಾವುದನ್ನು ಅವುಗಳಿಗೆ ಆಶ್ರಯವೆನ್ನೋಣ?" ಎಂದು ಪೂರ್ವಪಕ್ಷದವರು ಹೇಳಬಹುದು. ಆದಕ್ಕೆ ನಮ್ಮ ಉತ್ತರವಿಷ್ಟೆ: ಹಿಂದೆಯೇ ಗುಣಗಳ ಆಶ್ರಯವೇನೆಂಬುದನ್ನು ನಾವು ಪ್ರತಿಪಾದಿಸಿಬಿಟ್ಟಿದ್ದೇವೆ, ಎಂದು.[2]

ಅಥವಾ ಗುಣಗಳಿಗೆ 'ಶಬ್ದ'ವೇ ಆಶ್ರಯವೆಂದರೂ ಸರಿಯೆ. ಹಾಗೆಂದ ಮಾತ್ರಕ್ಕೆ ಗುಣಗಳು ಅನುಪ್ರಾಸವೇ ಮೊದಲಾದ ಶಬ್ದಾಲಂಕಾರಗಳಿಗೇನೂ ಸಮವಾಗಿಬಿಡುವುದಿಲ್ಲ. ಏಕೆಂದರೆ, ಅನುಪ್ರಾಸವೇ ಮೊದಲಾದುವು ಅರ್ಥದ ಅಪೇಕ್ಷೆಯೇ ಇಲ್ಲದ ಕೇವಲ ಶಬ್ದದ ಧರ್ಮಗಳೆಂದು ಹಿಂದಿನವರೇ ನಿರೂಪಿಸಿದ್ದಾರೆ. ಆದರೆ ವ್ಯಂಗ್ಯವಿಶೇಷವನ್ನು (=ರಸಾದಿಗಳನ್ನು) ಧ್ವನಿಸುವಂತಹ ವಾಚ್ಯಾರ್ಥವನ್ನು ಬೋಧಿಸಬಲ್ಲ ಸಾಮರ್ಥ್ಯವು ಯಾವ ಶಬ್ದಗಳಿಗುಂಟೋ, ಆ ಶಬ್ದಗಳಿಗೆ ಮಾತ್ರ ಗುಣಗಳು ಧರ್ಮವೆನಿಸುತ್ತವೆ. ವಸ್ತುತಃ ಆತ್ಮಧರ್ಮಗಳಾದರೂ ಶೌರ್ಯಾದಿ ಗುಣಗಳನ್ನು ಶರೀರಧರ್ಮಗಳೆನ್ನುವಂತೆಯೇ, ರಸಧರ್ಮಗಳಾದ ಕಾವ್ಯಗುಣಗಳನ್ನೂ ಶಬ್ದಧರ್ಮಗಳೆಂದು ರೂಢಿಯಲ್ಲಿ ವ್ಯವಹರಿಸುತ್ತೇವೆ.

ಮತ್ತೆ ಪೂರ್ವಪಕ್ಷಕಾರರು ಹೀಗೆ ವಾದಿಸಬಹುದು—'ಗುಣಗಳನ್ನು ಶಬ್ದ ಧರ್ಮಗಳೆಂದೊಡನೆಯೇ ಗುಣಗಳ ಸ್ವರೂಪವು ಸಂಘಟನೆಯ ಸ್ವರೂಪಕ್ಕಿಂತ

---

[1] ಪುಟನ್ನು ೫೨ ನೋಡಿ. ಪ್ರಬುದ್ಧಕರ್ಣಾಟಕ, ಸಂಪುಟ ೩೨, ಸಂಚಿಕೆ ೨

[2] "ತಮರ್ಥಮವಲಂಬನ್ತೇ . . ." ಎಂಬ ಎರಡನೆಯ ಉದ್ಯೋತದ ೬ ನೆಯ ಕಾರಿಕೆಯನ್ನು ನೋಡಿ.

ಬೇರೆಯಲ್ಲವೆಂದು, ಅಥವಾ ಸಂಘಟನೆಯೇ ಗುಣಗಳಿಗೆ ಆಶ್ರಯವೆಂದು, ತಾನೇ ಸಿದ್ಧವಾಗಿ ಹೋಗುವುದು. ಏಕೆಂದರೆ ' ಸಂಘಟಿತ 'ವಲ್ಲದ ಶಬ್ದಗಳು, ಮೇಲೆ ಹೇಳಿದಂತಹ ವಿಶಿಷ್ಟಾರ್ಥಗಳಿಂದ ಗಮ್ಯವಾದ ರಸಾದಿಗಳನ್ನು ಆಶ್ರಯಿಸಿರುವ ಗುಣಗಳಿಗೆ, ಆಶ್ರಯವೆನಿಸುವುದೇ ಸಾಧ್ಯವಿಲ್ಲ. ಸಂಘಟಿತವಲ್ಲದ ಶಬ್ದಗಳಿಗೆ ಗುಣಗಳನ್ನು ಬೋಧಿಸುವ ಶಕ್ತಿಯಿಲ್ಲದಿರುವುದೇ ಕಾರಣ.'

ಈ ವಾದವು ಸರಿಯಲ್ಲ. ಏಕೆಂದರೆ ರಸಾದಿಗಳು ಅಕ್ಷರಗಳಿಂದಲೂ, (ಅಸಂಘಟಿತ) ಪದಗಳಿಂದಲೂ ಕೂಡ ವ್ಯಂಗ್ಯವಾಗುವುವೆಂಬುದನ್ನು ಈಗಾಗಲೇ ಪ್ರತಿಪಾದಿಸಲಾಗಿದೆ.

ಡಾ|| ಕೆ. ಕೃಷ್ಣಮೂರ್ತಿ

(ಸಶೇಷ)

ಕಾವ್ಯಕೃಪೆ

ಹೃದಯಾಂತರಾಳದಲಿ ಹುದುಗಿ ಹೊಮ್ಮುವ ಸೋವ
ಬಡನುಡಿಯಲೆಂತಡಕಿ ತೋರಬಹುದು ?
ಆಂತರಿಕ ಶ್ರೀಮಂತದನುಭವದ ಸಾರವನು
ಸಾಂತಭಾಷೆಯೊಳೆಂತು ಹಿಡಿಯಬಹುದು ?

ಅಂತರಂಗದನಂತ ಶ್ರೀಮಂತ ಲೋಕದಲಿ
ಜಗದ ಶ್ರೀಮಂತಿಕೆಯ ಸವಿಯಬಹುದು.
ತೊದಲು ನುಡಿವಣುಗನೊಲು ಕವಿಜೀವ ನೋಯುತ್ತ
ದಿನದಿನವು ತಪಿಸುತ್ತ ಕೊರಗುತಿಹುದು.

ಹೇಗೊ ಏನೋ ಎಂತೊ ಒಳದನಿಯ ಹೊಮ್ಮಿಸುವ
ಕಾವ್ಯಕೃಪೆಗೆನ್ನೆದೆಯೆ ಮಣಿಯುತಿಹುದು.
ಇನಿತಾದರೂ ಇಂಥ ಶಕ್ತಿಯನು ವ್ಯಕ್ತಿಯಲಿ
ಕೃಪೆಗೈದ ಶಕ್ತಿಗಿದು ನಮಿಸುತಿಹುದು.

ಜಿ. ಎಸ್. ಶಿವರುದ್ರಪ್ಪ.

ಗಂಗು

ಅವಳನ್ನು ಮೊದಲು ಕಂಡದ್ದು ನಮ್ಮ ಮನೆಯಲ್ಲೇ. ಆಗತಾನೇ ನಾನು ಬಚ್ಚಲಮನೆಯಿಂದ ಪದ್ಧತಿಯಂತೆ ತಪ್ಪಿಸಿಕೊಂಡು ಓಡಿಬಂದು ಹೊರಬಾಗಿಲಿನಲ್ಲಿ ನಿಂತಿದ್ದೆ. ಅವಳು ಮೆಟ್ಟಿಲನ್ನು ಹತ್ತಿಬಂದು "ವಕೀಲರು ಇದಾರೆಯೆ?" ಎಂದು ಕೇಳಿದಳು. ನಾನು "ಇದಾರೆ. ಕುಳಿತುಕೊಳ್ಳಿ" ಎಂದು ಉತ್ತರಕೊಡುತ್ತಿರುವಲ್ಲೇ ಅವಳು ಕೊಂಚ ರಭಸದಿಂದಲೇ ನನ್ನನ್ನು ಎತ್ತಿಕೊಂಡಳು. ನಾನು ಸುಮ್ಮನಿದ್ದುದನ್ನು ಕಂಡು ಎರಡು ಕೆನ್ನೆಗೂ ಮುತ್ತುಕೊಟ್ಟು, ತನ್ನ ಸೆರಗನ್ನು ಎಳೆದು ನನ್ನ ಬರಿಮೈಯಿಗೆ ಹೊದಿಸಿಕೊಂಡಳು. ಇದರಿಂದ ನಾನೇನು ನಾಚಿಕೊಳ್ಳಲಿಲ್ಲ; ಗಾಬರಿಯಾಗಲೂ ಇಲ್ಲ. ನಮ್ಮ ಮನೆಗೆ ಆಗಾಗ ಎಷ್ಟೋ ಜನ ಅಪರಿಚಿತ ಕಕ್ಷಿಗಾರರು ಬಂದು ಹೋಗುತ್ತಲೇ ಇದ್ದರು. ಇವರೊಡನೆ ವಿನೋದದ ಮಾತು ಕತೆಗಳನ್ನಾಡಿ ನನಗೆ ಅಭ್ಯಾಸವಾಗಿತ್ತು. ಆದರೂ ಈ ಭರಾಟೆಯ ಪರಿಚಯವು ಹೊಸರೀತಿಯದಾದುದರಿಂದ ನಾನು ಅನುಮಾನದಿಂದ ಅವಳ ನಸುನಗೆಯ ಮುಖವನ್ನು ಕೊಂಚ ದುರುಗುಟ್ಟಿಕೊಂಡೇ ನೋಡಿದೆ. ಆದರೆ ಅದರಲ್ಲಿ ಕಂಡ ಸ್ನೇಹದ ನೋಟವು ನನ್ನನ್ನು ಆಕರ್ಷಿಸಿರಬೇಕು. ಅದಕ್ಕೇ ಸುಮ್ಮನಿದ್ದುಬಿಟ್ಟೆ. ಅವಳು ಅಲ್ಲೇ ಹೊಸಿಲಿನ ಬಳಿಯಲ್ಲಿ ನನ್ನೊಡನೆ ಕುಳಿತುಕೊಂಡಳು.

ಅಮ್ಮನು "ಎಲ್ಲಿ ಹೋದೆಯೋ? ಇವನ್ನ ಹಿಡಿಯೋಹೊತ್ತಿಗೆ ನಂಗೆ ಸಾಕು ಸಾಕಾಗಿ ಹೋಗುತ್ತೆ" ಎನ್ನುತ್ತ, ಕೈಯಲ್ಲೊಂದು ಒಗೆದ ಅಂಗಿಯನ್ನು ಹಿಡಿದು ಬಾಗಿಲಿಗೆ ಬರುವ ಹೊತ್ತಿಗೆ ನಾನು ಇವಳ ತೊಡೆಯ ಮೇಲೆ ಕುಳಿತು, ಎದೆಯನ್ನು ಒರಗಿಕೊಂಡು ಬೆಚ್ಚಗೆ ಕುಳಿತಿದ್ದೆ. ಅಮ್ಮನು ಹತ್ತಿರ ಬಂದರೂ ಕದಲಲೇ ಇಲ್ಲ. ಇದಕ್ಕೆ ಕಾರಣ ಕುಳಿತ ಸ್ಥಳದ ಸುಖವೋ, ಅಮ್ಮನ ಹೆದರಿಕೆಯೋ ಹೇಳಲಾರೆ. ಅಮ್ಮನು ಹುಬ್ಬುಗಂಟಿಕ್ಕಿಕೊಂಡು "ಬಾರೋ ಇಲ್ಲಿ—ನಾಚಿಕೆಕೆಟ್ಟೋನೆ!" ಅಂದಳು. ನಾನು ಸುಮ್ಮನೆ ಅವಳ ಮುಖದಿಂದ ಇವಳ ಮುಖವನ್ನು ನೋಡಿದೆ, ಅಷ್ಟೆ. ಇವಳು ಹಿಂದಿನಂತೆಯೇ ನಸುನಗುತ್ತ "ಅವ್ವ, ಇಲ್ಲೇ ಕೊಡಿ. ನಾನು ತೊಡಿಸುತ್ತೀನಿ" ಎಂದು ಕೈನೀಡಿದಳು. ಅಮ್ಮನು ಅಂಗಿಯನ್ನು ಅಲ್ಲೇ ಹಾಕಿ ಹೊರಟುಹೋದಳು. ಇವಳು "ಬಲು ತುಂಟ ಅಂತ ಕಾಣುತ್ತೆ!" ಎನ್ನುತ್ತ ನನ್ನ ಕೆನ್ನೆಗೆ ತನ್ನ ಬೆರಳುಗಳನ್ನು ಸೋಕಿಸಿ, ಮೃದುವಾಗಿ ಆತುರವಿಲ್ಲದೆ ಅಂಗಿಯನ್ನು ತೊಡಿಸಿದಳು. 'ಇವಳೇ ದಿನವೂ ಏಕೆ ಅಂಗಿ ಹಾಕಬಾರದು?' ಅನ್ನಿಸಿತು ನನಗೆ.

ಇಷ್ಟುಹೊತ್ತಿಗೆ ತಂದೆಯವರು ಬಂದರು. ಇಬ್ಬರೂ ಪರಿಚಿತರಂತೆ ಮಾತಿಗೆ ಮೊದಲು ಮಾಡಿದರು. ವಕೀಲಿಯ ಒಣಸಂಭಾಷಣೆಯು ನನಗೆ ಸೇರಲಿಲ್ಲ. ನನ್ನನ್ನು ಮುಂದಿನ ತೋಟವು ಕೈಬೀಸಿ ಕರೆಯಿತು, ಓಡಿಹೋದೆ.

ಅಲ್ಲಿ ತುಳಸಿಯ ಎಲೆಗಳನ್ನೂ ಸಂದಿಬಟ್ಟಲು ಕಣಿಗಲೆ ಹೂಗಳನ್ನೂ ಕಿತ್ತು ಹರಡಿ, ಅಗಸೆಯ ಮರದ ಮೇಲೆ, ನೆಲ್ಲಿಯ ಮರದ ಕೊಂಬೆಗಳ ಮೇಲೆ ಕುಳಿತಿದ್ದ ಗುಬ್ಬಚ್ಚಿಗಳನ್ನು ಹಾರಾಡಿಸಿ ಕೂಗಾಡಿ ಸೋತು, ಕಡೆಗೆ ನನಗೆ ಬಹಳ ಇಷ್ಟ ವಾಗಿದ್ದ ಗೇಟಿನ ಅಡ್ಡ ಹಲಗೆಯ ಮೇಲೆ ಹತ್ತಿ ನಿಲುವು ಪಟ್ಟಿಗಳನ್ನು ಹಿಡಿದು ನಿಂತು "ಥ್ರೂ! ಪಂ! ಪಾಂ!" ಎನ್ನುತ್ತ ಮೋಟಾರು ಬಿಡುತ್ತಿದ್ದೆ. ಮೋಟಾರು ಇದ್ದಕ್ಕಿಂದ್ದಂತೆಯೇ ರೈಲಾಗಿ 'ಕೂ, ಕುಕ್ಕೋ, ಕುಕ್!' ಎಂದು ಕೂಗಿ 'ಝುಗ್! ಝುಗ್!' ಎಂದು ಹರಿಯಲಾರಂಭಿಸಿತು. ಇನ್ನಷ್ಟು ಹೊತ್ತಿನಲ್ಲಾಗಲೇ ಅದು ಕುದುರೆಯಾಗಿ ಕೆನೆಯುತ್ತ ವಾಯುವೇಗದಿಂದ ಓಡುತ್ತಿತ್ತು. ನನಗೆ ತೃಪ್ತಿ ಯಾಗದೆ ಇನ್ನೂ ಅದನ್ನು ಎಡಗೈಯಿಂದ ಜಾಕಿಯಂತೆ ಬಾರಿಸುತ್ತಲೇ ಇದ್ದೆ. ಅದು ಇನ್ನೇನು ಎತ್ತಿನ ಗಾಡಿಯಾಗಿ ಕ್ರಮವಾಗಿ ಕತ್ತೆಯೂ ಆಗುತ್ತಿದ್ದಿತೋ ಏನೋ; ಇಂತಹ ಘನವಾದ ಸಮಯದಲ್ಲಿ ಯಾರೋ ಹಿಂದಿನಿಂದ ನನ್ನ ಕಂಕುಳಿಗೆ ಕೈಹಾಕಿದರು. ನಾನು ರೇಗಿ ಜೀವ ಹೋಗುವವರೆಗೂ ನನ್ನ ಹಕ್ಕಿಗಾಗಿ ಹೋರಾಡಬೇಕೆಂದು ಮನಸ್ಸುಮಾಡಿ, ಸೆಟಗೊಂಡು, ಪಟ್ಟಿಗಳನ್ನು ಭದ್ರವಾಗಿ ಹಿಡಿದುಕೊಂಡು, ನನ್ನ ಶತ್ರುವು ಯಾರೆಂದು ನೋಡಲು ತಲೆಯನ್ನು ಹಿಂದಕ್ಕೆ ತಿರಿಗಿಸಿದೆ. ಅವಳೇ! ಅವಳು ಇನ್ನೂ ನಸುನಗುತ್ತಲೇ ಮತ್ತೆ ನನ್ನನ್ನು ಎತ್ತಿಕೊಳ್ಳುತ್ತಿದ್ದಳು. ನನ್ನ ಕೈ ಇದ್ದಕ್ಕಿದ್ದಂತೆಯೇ ತಾನಾಗಿ ಸಡಲಿಹೋಯಿತು. ಮರುಕ್ಷಣದಲ್ಲಿ ತಣ್ಣಗೆ ಹಾಯಾಗಿ ಅವಳ ಸೊಂಟದ ಮೇಲೆ ಕುಳಿತಿದ್ದೆ. ಮುಚ್ಚಿದ್ದ ಗೇಟನ್ನು ತೆಗೆದು ಹೊರಗಡೆಗೆ ಹಾಯುತ್ತ ಅವಳು "ಮರಿ, ನಮ್ಮ ಮನೆಗೆ ಬರುತ್ತೀಯ?" ಎಂದು ಕೇಳಿದಳು. ನನಗೆ ಪರರ ಮನೆಯೆಂದರೇನು ಹೊಸ ಅನುಭವವಾಗಿರಲಿಲ್ಲ. ಬೀದಿಯಲ್ಲಿದ್ದ ಮನೆಗಳನ್ನೆಲ್ಲ ದಿನಕ್ಕೊಮ್ಮೆ ಹೊಕ್ಕುಬರುತ್ತಲೇ ಇದ್ದೆ. ಆದುದರಿಂದ ಕೊಂಚವೇ ತಡಮಾಡಿ "ನಿಮ್ಮ ಮನೆ ಎಲ್ಲಿ?" ಎಂದು ಕೇಳಿದೆ. "ಇಲ್ಲೇ ಹತ್ತಿರ" ಎಂದು ಎಲ್ಲೋ ಕೈತೋರಿಸಿದಳು. ನಾನು ಇಷ್ಟಕ್ಕೆ ತೃಪ್ತನಾಗದೆ "ಏನು ಕೊಡುತ್ತೀಯೆ?" ಎಂದು ಕೇಳಿದೆ. ಅವಳ ರೀತಿಯಿಂದ ನನ ಗಾಗಲೇ ಅವಳಲ್ಲಿ ಸದರವು ಹುಟ್ಟಿಬಿಟ್ಟಿದ್ದಿತು. ಅವಳು "ನಿಂಗೆ ಏನುಬೇಕು—ಎಲ್ಲ" ಎಂದು ಭರವಸೆಕೊಟ್ಟಳು. ನಾನು ಏನೇನನ್ನೋ ಯೋಚಿಸಿಕೊಂಡು "ಬೆಕ್ಕಿನ ಮರಿ?" ಎಂದು ಕೇಳಿದೆ. ಅವಳು "ಹೂಂ" ಎಂದು ತಡೆಯಿಲ್ಲದೆ ಹೇಳಿದಳು. ಇದು ನನ್ನನ್ನು

ನಿರ್ಧರಿಸಿತು. ನಾನು ಕೂಡಲೇ ಉತ್ಸಾಹದಿಂದ "ಹುಂ" ಎಂದೆ. ಅವಳು ನನ್ನನ್ನೂ ಹೊತ್ತುಕೊಂಡೇ ನಮ್ಮ ಮನೆಯೊಳಕ್ಕೆ ಮತ್ತೆ ಬಂದಳು. ಹಜಾರದಲ್ಲಿ ತಂದೆಯವರೂ ಅಮ್ಮನೂ ಮಾತನಾಡುತ್ತ ನಿಂತಿದ್ದರು. ನಾವು ಬಂದದ್ದನ್ನು ಕಂಡು ತಂದೆಯವರು "ಮತ್ತೇನು?" ಎಂದು ಅವಳನ್ನು ಕೇಳಿದರು. ಅವಳು "ಮಗೂನ ಮನೆಗೆ ಕರೆದು ಕೊಂಡು ಹೋಗಲೆ?" ಎಂದು ಕೇಳಿದಳು. ತಕ್ಷಣ ಉತ್ತರ ಬರಲಿಲ್ಲ. ಅವಳು "ಬೇಗನೆ ವಾಪಸು ಕರೆತಂದುಬಿಡುತ್ತೀನಿ" ಎಂದು ಕೂಡಿಸಿದಳು. ಅಮ್ಮನು ತಂದೆಯವರ ಗಮನವನ್ನು ಸೆಳೆದು ಏನನ್ನೋ ಸೂಚಿಸುವುದರಲ್ಲಿದ್ದಳು. ಆದರೆ ಅಷ್ಟರೊಳಗಾಗಿ "ಹುಂ; ಅದಕ್ಕೇನು" ಎಂದು ಅವರ ಬಾಯಿಂದ ಹೊರಬಿದ್ದುಬಿಟ್ಟಿದ್ದಿತು. ಆಕ್ಷಣವೇ ಅವಳೂ ಹೊರಟೇಬಿಟ್ಟಳು. ಅಮ್ಮನು "ಇದಕ್ಕೇನು ಹೊಸ ಮುಖ ಅಂತಲೇ ಇಲ್ಲವಲ್ಲ!" ಎಂದುದು ಕೇಳಿಸಿತು. ನಾನು ಹಿಂದಿರಿಗಿ ನೋಡಿದಾಗ ಅಮ್ಮನ ಮುಖವು ಹುಬ್ಬುಗಂಟಿಕ್ಕಿತ್ತು.

ದಾರಿಯಲ್ಲಿ ನಾನು ಇಳಿಯುವುದಕ್ಕೆ ಯತ್ನಿಸಿದರೂ ಅವಳು ಬಿಡಲೇ ಇಲ್ಲ. "ಹಿಂತಿರಿಗಿ ಬರೋವಾಗ ನಡೆಯೋವಂತೆ" ಎನ್ನುತ್ತ ಬೇಗಬೇಗನೆ ನಡೆದಳು.

"ನಿನ್ನ ಹೆಸರೇನಪ್ಪ?" ಅವಳು ಮಾತಿಗೆ ಮೊದಲುಮಾಡಿದಳು.

"ರಂಗ."

"ಮುದ್ದಾದ ಹೆಸರು . . . ಹುಂ. ನಿನ್ನ ಸ್ನೇಹಿತರು ಯಾರು ಯಾರಿದಾರೆ?"

"ರಾಮಾಜೋಯಿಸರ ಮನೆ ರಾಮು, ಶಾಂಭಟ್ಟರ ಮನೆ ಸೀತು, ಶಂಕರಪ್ಪ ನೋರ ಮನೆ ಪಾತು, . . ." ಎಂದು ದೊಡ್ಡ ಪಟ್ಟಿಯನ್ನೇ ಹೇಳಿದೆ.

"ಕಡೆಗೆ ನಾನೊಬ್ಬಳು, ಈಗ."

"ಹೂಂ. ನೀನು ಇಷ್ಟು ದೊಡ್ಡೋಳು!" ನಾನು ಆಶ್ಚರ್ಯದಿಂದ ಹೇಳಿದೆ.

"ಹೂ. ಯಾಕೆ ಆಗಬಾರದು? ಇವತ್ತಿನಿಂದ ನಾನೂ ನೀನೂ ಸ್ನೇಹಿತರು."

"ನಿನ್ನ ಹೆಸರು?" ನಾನು ಗೆಳೆಯತನವನ್ನು ಒಪ್ಪಿಕೊಂಡು ಕೇಳಿದೆ.

"ಗಂಗು."

"ಗಂಗು, ಅಷ್ಟೆ?"

"ಹಾಗೇ ಕೂಗು."

ಹೀಗೇ ಏನೇನನ್ನೋ ಹರಟುತ್ತ ಮೂಲೆಯ ಅಂಗಡಿಯ ಬಳಿಗೆ ಬಂದೆವು. ಅವಳು ಅಂಗಡಿಯನ್ನು ಹೊಕ್ಕು ಚಾಕೊಲೇಟು ಬಿಸ್ಕತ್ತುಗಳನ್ನು ಕೊಂಡು ನನ್ನ ಜೇಬಿಗೆ ತುಂಬಿದಳು. ನಾನು ಅವುಗಳನ್ನು ಬಾಯಿಗೆ ತುಂಬುವುದರಲ್ಲಿ ಆಸಕ್ತನಾದೆ.

ಅವಳ ಮನೆ ಅಂಗಡಿಯಿಂದ ಬಹಳ ದೂರವಾಗಿರಲಿಲ್ಲ. ಚಿಕ್ಕದಾಗಿದ್ದರೂ ಬೆಳ್ಳಗೆ ಶುಭ್ರವಾಗಿತ್ತು. ಅದರ ಮುಂದೆ ನಮ್ಮ ಮನೆಯದಕ್ಕಿಂತಲೂ ಅಂದವಾದ ಕೈತೋಟವಿತ್ತು. ಗಂಗುವು ಇದನ್ನೂ ಮನೆಯ ವರಾಂಡವನ್ನೂ ಹಾಯ್ದು ಬಾಗಿಲಿನ ಬೀಗವನ್ನು ತೆಗೆದು ಕದಗಳನ್ನು ತಳ್ಳಿ "ನೋಡಿ, ನಿಮಗೆ ಏನನ್ನು ತಂದಿದೀನಿ ಅಂತ!" ಎಂದು ಗಟ್ಟಿಯಾಗಿ ಹೇಳುತ್ತ ಚೊಕ್ಕಟವಾದ ಹಜಾರವನ್ನು ಪ್ರವೇಶಿಸಿದಳು. ಅವಳ ಮಾತಿಗೆ ಯಾವ ಉತ್ತರವೂ ಬರಲಿಲ್ಲ. ಇನ್ನೊಂದು ಕ್ಷಣದಲ್ಲಿ ಕಿಟಕಿಯ ಬಳಿ ಇದ್ದ ಗಾಲಿಯ ಕುರ್ಚಿಯೊಂದರ ಪಕ್ಕದಲ್ಲಿ ನಾನು ಇಳಿದು ನಿಂತಿದ್ದೆ. ಗಂಗುವು ಬಲಗೈಯಿಂದ ನನ್ನನ್ನು ತಬ್ಬಿಕೊಂಡು, ಎಡಗೈಯನ್ನು ಕುರ್ಚಿಯ ಮೇಲಿಟ್ಟು, ಮಂಡಿಯೂರಿ ಕುಳಿತುಕೊಂಡು, ಕುರ್ಚಿಯಲ್ಲಿದ್ದ ವ್ಯಕ್ತಿಯಿಂದ ನನ್ನನ್ನೂ ನನ್ನಿಂದ ಅದನ್ನೂ ಹೆಮ್ಮೆ ಸಂತೋಷಗಳಿಂದ ನೋಡುತ್ತಿದ್ದಳು. ಆದರೆ ವ್ಯಕ್ತಿಯು ಚಲಿಸಲಿಲ್ಲ, ಶಬ್ದಮಾಡಲಿಲ್ಲ. ಅದರ ಕಣ್ಣುಗಳು ಮಾತ್ರ ಮಿಟುಕುತ್ತ ಪಳಪಳನೆ ಹೊಳೆದುವು. ಅವಳು ಇದನ್ನು ಕಂಡು "ನೋಡಿದೆಯಾ ನಿನ್ನ ಕಂಡು ಅವರಿಗೆ ಎಷ್ಟು ಆನಂದ!" ಎಂದು ನನ್ನ ಕಡೆಗೆ ನೋಡಿ, ಮತ್ತೆ ವ್ಯಕ್ತಿಯ ಕಡೆಗೇ ತಿರಿಗಿ "ಇವನು ರಂಗ. ನಮ್ಮ ವಕೀಲರ ಮಗ. ಈಗ ನಮ್ಮ ಸ್ನೇಹಿತನಾಗಿದ್ದಾನೆ . . ." ಎಂದು ಮುಂತಾಗಿ ಏನೇನನ್ನೋ ಹೇಳುತ್ತಿದ್ದಳು. ಆದರೆ ನಾನು ಅವಕ್ಕೆ ಗಮನಕೊಡದೆ ವ್ಯಕ್ತಿಯನ್ನೇ ಪರೀಕ್ಷಿಸುತ್ತಿದ್ದೆ. ಅದರ ತಲೆಗೂದಲು ಉದ್ದವಾಗಿ ಇಳಿಬಿದ್ದು ಮಧ್ಯದಲ್ಲಿ ಬೈತಲೆ ತೆಗೆದು ಚೆನ್ನಾಗಿ ಬಾಚಲ್ಪಟ್ಟಿದ್ದಿತು. ಬಾಡಿದ ಸೌಮ್ಯವಾದ ಮುಖದಲ್ಲಿ ಉದ್ದವಾದ ಕಪ್ಪುಗಡ್ಡವಿದ್ದಿತು. ತೊಟ್ಟಿದ್ದ ಶುಭ್ರವಾದ ಬಿಳಿಯ ಅಂಗಿಯಿಂದ ಮುಂಗೈಗಳವರೆಗೆ ಮುಚ್ಚಲ್ಪಟ್ಟಿದ್ದ ಕೈಗಳು ಹೊಟ್ಟೆಯ ಮೇಲೆ ಮಡಿಸಿಕೊಂಡು ಬಿದ್ದಿದ್ದುವು. ಅಷ್ಟೇ ಶುಭ್ರವಾದ ತೆಳು ಪಂಚೆಯನ್ನುಟ್ಟಿದ್ದ ಕಾಲುಗಳು ಎದುರಿನ ಕಾಲುಮಣೆಯೊಂದರ ಮೇಲೆ ನೆಟ್ಟಗೆ ನೀಡಲ್ಪಟ್ಟಿದ್ದುವು. ಅವಳು ಅದರ ಕಾಲುಗಳನ್ನು ಕಾಲುಮಣೆಯಿಂದ ತೆಗೆದು ಕುರ್ಚಿಯ ಪಟ್ಟಿಯ ಮೇಲೆ ನಿಲ್ಲುವಂತೆ ಮಡಿಸಿದಳು. ಕೈಗಳನ್ನು ತೊಡೆಗಳ ಮೇಲೆ ಇರಿಸಿದಳು.

ನನ್ನ ಆಶ್ಚರ್ಯದಿಂದ ಕೊಂಚ ಚೇತರಿಸಿಕೊಂಡ ಮೇಲೆ ನಾನು

"ಇವರು ಯಾರು?" ಎಂದು ಕೇಳಿದೆ. ಗಂಗುವಿನ ಮಾತು ತಟ್ಟನೆ ನಿಂತಿತು. ಅವಳು.

"ಓಹೋ, ನಿಂಗೆ ಹೇಳಲೇ ಇಲ್ಲವೋ? ಇವರು ನಮ್ಮ ಯಜಮಾನರು" ಎಂದು ಉತ್ತರಕೊಟ್ಟಳು.

"ಯಾಕೆ ಹೀಗಿದಾರೆ? ಮಾತಾಡೋದಿಲ್ಲ, ಅಲುಗಾಡೋದಿಲ್ಲ?"

"ಏನು ಹೇಳೋಣಪ್ಪ, ಹಾಳು ಲಕ್ವ . . ."

ಅವಳು ಮಾತನ್ನು ಪೂರ್ತಿಮಾಡದೆ ತಟ್ಟನೆ ನಿಲ್ಲಿಸಿದಳು. ಇಲ್ಲಿಯ ವರೆಗೂ ಅವಳ ಮುಖದಲ್ಲಿ ಮಿನುಗುತ್ತಿದ್ದ ಮುಗುಳುನಗೆಯು ಈಗ ಮಾಯವಾಗಿತ್ತು; ಅದರ ಸ್ಥಳದಲ್ಲಿ ವ್ಯಥೆಯು ಮೂಡಿತ್ತು. ಅವಳು ಯಜಮಾನರ ಕಡೆಗೆ ತಿರಿಗಿದಳು. ನಾನೂ ತಿರಿಗಿದೆ. ಅವರ ಕಣ್ಣಿನಲ್ಲಿ ನೀರು ತುಂಬಿತ್ತು. ಒಂದು ಹನಿ ಹೊರಗೆ ಬಂದಿತ್ತು. ಅವಳು ತನ್ನ ಸೊಂಟದಿಂದ ಬಿಳಿಯ ಚೌಕವನ್ನು ತೆಗೆದು ಯಜಮಾನರ ಕಣ್ಣೀರನ್ನು ಒತ್ತಿದಳು. ಸಡಿಲವಾಗಿ ಅವರ ಹಣೆಯ ಮೇಲೆ ಇಳಿದಿದ್ದ ತಲೆ ಗೂದಲನ್ನು ಸರಿಮಾಡಿದಳು. "ಹುಂ, ನಿಂಗೆ ಬೆಕ್ಕಿನ ಮರಿ ಬೇಕಲ್ಲವೆ? ಚೆನ್ನಿ! ಚೆನ್ನಿ!" ಅವಳು ನಸುನಗೆಯನ್ನು ತಂದುಕೊಂಡು, ಏನನ್ನೋ ನೆನೆಸಿಕೊಂಡಂತೆ ಕೇಳಿ, ಆತುರದಿಂದ ಕೂಗಿದಳು.

ಚೆನ್ನಿಯು 'ಮಿಯಾವ್' ಎನ್ನುತ್ತ ಕೋಣೆಯೊಳಗಿನಿಂದ ಬಂದಿತು. ಅದನ್ನು ಕಂಡು ನನಗೆ ಬಾಕಿಯದೆಲ್ಲವೂ ಮರೆತುಹೋಯಿತು. ಅದು ಮುದ್ದಾದ ಮರಿ. ಮೈಯೆಲ್ಲ ಬಿಳುಪಾಗಿದ್ದಿತು. ಮುಸುಡಿಯು ಮಾತ್ರ ಕೆಂಪಾಗಿದ್ದಿತು. ಮೊದ ಮೊದಲು ಅದು ನನ್ನ ಬಳಿಗೆ ಬರಲೇ ಇಲ್ಲ, ಅವಳ ಬಳಿಯಲ್ಲೇ ಸುತ್ತುತ್ತ, ಅವಳ ಮೈಗೆ ತನ್ನ ಮೈ ತಿಕ್ಕುತ್ತ 'ಮೀಯಾವ್' ಎನ್ನುತ್ತಿತ್ತು. ಅವಳು "ಚೆನ್ನೀ, ಇವನು ನಮ್ಮ ರಂಗ, ನಂಗೆ ನಿಂಗೆ ಸ್ನೇಹಿತ. ಒಳ್ಳೆಯೋನು" ಎನ್ನುತ್ತ ನನ್ನ ತೊಡೆಯ ಮೇಲೆ ಮೃದುವಾಗಿ ಎತ್ತಿಟ್ಟು ನನಗೂ ಚೆನ್ನಿಗೂ ಹೊಂದಿಸಿದಳು. ಇನ್ನೊಂದು ಗಳಿಗೆಯಲ್ಲಿ ನಾನು ಚೆನ್ನಿಯನ್ನು ಹೊತ್ತುಕೊಂಡು ಹಜಾರದಲ್ಲೆಲ್ಲ ಕುಣಿದಾಡುತ್ತಿದ್ದೆ.

ಗಂಗುವು ಒಳಗೆ ಹೋದಾಗ ನಾನು ಅವಳ ಹಿಂದೆಯೇ ಹೋದೆ. ಅವಳು ಅಡಿಗೆಯ ಮನೆಯನ್ನು ಹೊಕ್ಕಳು. ಅದು ನಮ್ಮ ಅಡಿಗೆಯ ಮನೆಯಲ್ಲಿ ಅರ್ಧ ದಷ್ಟೂ ಇರಲಿಲ್ಲ. ಆದರೆ ಸಾಮಾನುಗಳೆಲ್ಲ ಬಹಳ ಅಣಿಯಾಗಿ ಇಡಲ್ಪಟ್ಟಿದ್ದುವು. ನಾನು ಬಾಗಿಲಿನಲ್ಲೇ ನಿಂತುಕೊಂಡೆ.

"ಬಾ ರಂಗ ಒಳಗೆ. ಅಲ್ಲೇ ಯಾಕೆ ನಿಂತುಕೊಂಡೆ?" ಅವಳು ಹಿಂದಿರುಗಿ ನೋಡಿ ಕೇಳಿದಳು.

"ಅಡಿಗೆಮನೆ ಅಲ್ಲವೆ?"

"ಹುಂ. ಆದರೇನು?"

"ನಮ್ಮ ಮನೇಲಿ ಅಡಿಗೆಮನೆಗೆ ದೇವರಮನೆಗೆ ಕಾಲಿಟ್ಟರೆ ಅಜ್ಜಿ ಬಯ್ಯುತಾರೆ; ನೀರೂ ಎರಚುತಾರೆ."

ಅವಳು ಗೊಳ್ಳೆಂದು ನಕ್ಕಳು.

"ಇಲ್ಲಿ ಹಾಗೇನೂ ಇಲ್ಲ. ಬಾ."

ನನಗೆ ಈ ಸ್ವಾತಂತ್ರ್ಯದಿಂದ ಆನಂದವಾಯಿತು. ಧೈರ್ಯದಿಂದ ಒಳಹೊಕ್ಕೆ.

"ನಿಮ್ಮ ದೇವರ ಮನೆ ಎಲ್ಲಿ?" ನಾನು ಸುತ್ತ ನೋಡುತ್ತ ಕೇಳಿದೆ.

"ಇದೆಲ್ಲ ದೇವರಮನೆಯೇ."

ನನಗೆ ಅರ್ಥವಾಗಲಿಲ್ಲ.

"ನಿಮ್ಮ ದೇವರು ಎಲ್ಲಿ ಅಂದೆ."

"ನಮ್ಮ ದೇವರೇ? . . . ನೀನೇ" ಅವಳು ಹಾಸ್ಯಮಾಡಿದಳು.

"ಹೂಂ. ಸುಳ್ಳು. ನಮ್ಮ ಮನೇಲಾದರೆ ದೊಡ್ಡ ಮಂಟಪ ಇದೆ. ಅದರೊಳಗೆ ಬೆಳ್ಳಿದೇವರಿದೆ."

"ಹುಂ. ನೀವು ತುಂಬ ಪುಣ್ಯವಂತರಪ್ಪ."

"ಜೋಯಿಸರು ಬಂದು ದಿನಾ ಪೂಜೆಮಾಡುತ್ತಾರೆ."

"ಯಾಕೆ—ವಕೀಲರು?"

"ಅವರು ಮಡಿ ಅಲ್ಲವಲ್ಲ."

ಅವಳು ಮತ್ತೊಮ್ಮೆ ನಕ್ಕಳು.

ಹಾಗಲ್ಲ ಮರಿ. ವಕೀಲರಿಗೆ ತುಂಬ ಕೆಲಸ. ಪೂಜೆಗೆ ಪುರುಸೊತ್ತಿಲ್ಲ, ಪಾಪ."

ನನ್ನ ಗಮನ ಅವಳು ಬಿಡಿಸುತ್ತಿದ್ದ ಕಿತ್ತಳೆಯ ಹಣ್ಣಿನಮೇಲೆ ಹೋಯಿತು. ಅವಳು ನನಗೆ ಅದರ ತೊಳೆಗಳನ್ನು ಕೊಟ್ಟಳು. ಬೆಕ್ಕನ್ನು ಕೆಳಗೆ ಬಿಟ್ಟು ಹಣ್ಣನ್ನು ತಿಂದೆ. ಗೋಡೆಯ ಬೀರುವಿನಿಂದ ಪಾತ್ರೆಯೊಂದನ್ನು ತೆಗೆದು ಬೆಳ್ಳಿಯ ಬಟ್ಟಲಿಗೆ ಹಾಲನ್ನು ಬಗ್ಗಿಸಿ ಸಕ್ಕರೆಯನ್ನು ಹಾಕಿ ಅದನ್ನೂ ನನಗೆ ಕುಡಿಯಲು ಕೊಟ್ಟಳು. ನಾನು ಕುಡಿದು ಬಾಯಿಯನ್ನು ಒರೆಸಿಕೊಳ್ಳಲು ಅಂಗಿಯನ್ನು ಹತ್ತಿರ ತಂದೆ. ಅವಳು ತಲೆಯಾಡಿಸುತ್ತ "ಇದರಿಂದ ಒರೆಸಿಕೋಬೇಕಪ್ಪ" ಎಂದು ಸಣ್ಣ ಚೌಕವನ್ನು ತೆಗೆದು ಬಾಯೊರಸಿ ಮತ್ತೆ ಮಡಿಸಿ ನನ್ನ ಜೇಬಿನಲ್ಲಿಟ್ಟಳು. ಇನ್ನಷ್ಟು ಹಾಲನ್ನು ದೊಡ್ಡ ಬಟ್ಟಲಿನಲ್ಲಿ ಸಿದ್ಧಪಡಿಸಿ ಹಜಾರಕ್ಕೆ ಬಂದು ಯಜಮಾನರಿಗೆ ಅದನ್ನು ಮಕ್ಕಳಿಗೆ ಕುಡಿಸುವಂತೆ ಚಮಚದ ಮೂಲಕ ಕುಡಿಸಿದಳು. ಅನಂತರ ಕೋಣೆಯಲ್ಲಿ ಮಂಚದಮೇಲೆ ದಪ್ಪ ಮೆತ್ತೆಯ ಹಾಸಿಗೆಯನ್ನು ಕೊಡವಿ ಹಾಸಿದಳು. ಯಜಮಾನರ ಕುರ್ಚಿಯನ್ನು ಅದರ ಸಮೀಪಕ್ಕೆ ತಳ್ಳಿಕೊಂಡು ಹೋಗಿ ಅವರನ್ನು ಎತ್ತಿಕೊಂಡು ಹಾಸಿಗೆಯಮೇಲೆ ಮಲಗಿಸಿ ಅವರ ಕಾಲು ಕೈಗಳನ್ನು ನೀಡಿದಂತೆ ಇಟ್ಟು ದುಬಟಿಯನ್ನು ಹೊದಿಸಿದಳು. ಇವೆಲ್ಲವನ್ನೂ ಅವಳು ಮಾಡುತ್ತಿದ್ದಾಗ ನಾನು ಬೆಕ್ಕನ್ನು

ಪಕ್ಕದಲ್ಲಿ ಇರುಕಿಕೊಂಡು ಅವಳ ಹಿಂದುಮುಂದೇ ಸುಳಿದಾಡುತ್ತಿದ್ದೆ. ಅವಳೂ ನನಗೆ ಬೆಕ್ಕಿನ ಕತೆಯನ್ನು ಸ್ವಾರಸ್ಯವಾಗಿ ಹೇಳುತ್ತಿದ್ದಳು. ನಾನು ಕೇಳಿದ ಲೆಕ್ಕವಿಲ್ಲದಷ್ಟು ಪ್ರಶ್ನೆಗಳಿಗೆ ಸಮಾಧಾನವಾಗಿ ಸಂತೋಷವಾಗಿಯೇ ಉತ್ತರ ಕೊಡುತ್ತಿದ್ದಳು. ಹಾಗೇ ಮಾತನಾಡುತ್ತ ನಾನು "ಈ ಬೆಕ್ಕಿನಮರಿ ಎಲ್ಲಿಂದ ಬಂತು ?" ಎಂದು ಕೇಳಿದೆ.

"ಅದರ ತಾಯಿ ಇಲ್ಲೇ ಮರಿ ಹಾಕಿತು."

"ಹೇಗೆ ಹಾಕಿತು ?"

"ನಿಮ್ಮ ತಾಯಿಯಿಂದ ನೀನು ಹುಟ್ಟಿದ ಹಾಗೆ."

"ನಾನು ಹೇಗೆ ಹುಟ್ಟಿದೆ ಹಾಗಾದರೆ ?"

"ನಿಮ್ಮ ಅಮ್ಮನ್ನ ಕೇಳು, ಹೇಳುತ್ತಾರೆ" ಎಂದು ನಕ್ಕಳು.

"ಇಲ್ಲ, ಅಮ್ಮನ್ನ ತುಂಬ ಕೇಳಿದರೆ 'ನಿಂಗೆ ಯಾರು ಹೇಳುತಾರೆ ಹೋಗೋ' ಅಂತ ಸಿಡಿಗುಟ್ಟುತಾಳೆ" ನಾನು ದೂರಿದೆ.

"ಹಾಗನ್ನಬಾರದು ಮರಿ, ನಿಮ್ಮದು ದೊಡ್ಡಮನೆ. ಅಮ್ಮನಿಗೆ ತುಂಬ ಕೆಲಸ. ಆಯಾಸ ಆಗಿರುತ್ತೆ. ನಮ್ಮದು ನೋಡು, ಎಷ್ಟು ಸಣ್ಣಮನೆ. ಇಬ್ಬರೇ ಇರೋದು. ಕೆಲಸ ಕಡಿಮೆ. ಆಯಾಸವಿಲ್ಲ. ನಾನು ಹೇಳಬಹುದು."

"ನೀನೇ ಹೇಳು ಹಾಗಾದರೆ."

ಅವಳು ಬೆಕ್ಕಿನ ಕತೆಯನ್ನು ಸರಳವಾಗಿ ಹೇಳಿದಳು. ನಾನು ಬಾಯಿಬಿಟ್ಟು ಕೇಳುತ್ತಿದ್ದೆ.

ಯಜಮಾನರ ಕೆಲಸವು ಮುಗಿದಮೇಲೆ ಅವಳು ಬುಟ್ಟಿಯೊಂದನ್ನು ತೆಗೆದು ಕೊಂಡು ನನ್ನನ್ನು ಕರೆದುಕೊಂಡು ಕೈತೋಟಕ್ಕೆ ಬಂದಳು. ಅಲ್ಲಿ ಹೂ ತುಂಬಿದ್ದ ಗುಲಾಬಿ ಗಿಡಗಳಿಂದ ಕೆಂಪು ಹಳದಿಯ ಹೂಗಳನ್ನು ಕಿತ್ತೆವು. ಗೇಟಿನ ಕಂಬಿಗಳ ಮೇಲೆ ಕಮಾನಿನಂತೆ ಹಬ್ಬಿದ್ದ ಜಾಜಿಯ ಗಿಡದಿಂದ ಅವಳೇ ಅಷ್ಟು ಹೂಗಳನ್ನೂ ಮೊಗ್ಗುಗಳನ್ನೂ ಬಿಡಿಸಿ ನನಗೆ ಕೊಟ್ಟು ಬುಟ್ಟಿಗೆ ಹಾಕುವಂತೆ ಹೇಳಿದಳು. ಸಂಪಿಗೆಯ ಮರದಲ್ಲಿ ಕೊಕ್ಕೆಗಳುವಿನಿಂದ ಬೇಕಾದಷ್ಟು ಹೂಗಳನ್ನು ಕೆಡವಿದಳು. ಇವೆಲ್ಲವನ್ನೂ ಬುಟ್ಟಿಗೆ ತುಂಬಿಕೊಂಡು ಒಳಗೆ ಬಂದು ಅವಳು ಬಾಳೆಯ ಎಲೆಯಲ್ಲಿ ಇವನ್ನಿಟ್ಟು ನಾರು ಬಿಗಿದಳು. ಈಗ ಗಡಿಯಾರವು ಹತ್ತುಗಂಟೆ ಹೊಡೆಯಿತು ಅವಳು ಆತುರದಿಂದ ಎದ್ದು, "ನಡಿಯಪ್ಪ, ಇನ್ನು ನಿಮ್ಮ ಮನೆಗೆ ಹೋಗೋಣ" ಅಂದಳು.

"ಬೆಕ್ಕಿನಮರಿ ?" ನನ್ನ ಆತಂಕವನ್ನು ವ್ಯಕ್ತಪಡಿಸಿದೆ.

"ಅದು ನಮ್ಮ ಮನೆ ಬಿಟ್ಟು ಬರೋದಿಲ್ಲ. ಅದಕ್ಕೋಸ್ಕರ ಇಲ್ಲೇ ಇರುತ್ತೀಯ ?"

ನಾನು ಅನುಮಾನಿಸಿದೆ.

"ಇಲ್ಲೇ ಇದ್ದರೆ ಊಟವೋ ?" ಅವಳು ಮತ್ತೆ ಪ್ರಶ್ನಿಸಿದಳು.

"ನಿಮ್ಮ ಮನೇಲಿ ಅಡಿಗೆ ಮಾಡಿಲ್ಲವೆ ?" ನಾನು ಕೇಳಿಯೇಬಿಟ್ಟೆ.

"ಎಲಾ ಕಳ್ಳ! ನೋಡಿದೆಯಾ ನಿನ್ನ !" ಎಂದು ಅವಳು ನಕ್ಕು "ನೀನು ಇಲ್ಲಿ ಉಂಡರೆ ನಿಮ್ಮ ಅಮ್ಮ ನನ್ನ ಸುಮ್ಮನೆ ಬಿಟ್ಟಾರೇ ? . . . ಬಾ, ಮನೇಲಿ ನಿಂಗೋಸ್ಕರ ಕಾದುಕೊಂಡಿದ್ದಾರು. ಆಮೇಲೆ ಮತ್ತೆ ಬರುವೆಯಂತೆ. ಬೆಕ್ಕು ಇಲ್ಲೇ ಇರುತ್ತೆ" ಎಂದು ಪ್ರೋತ್ಸಾಹಿಸಿದಳು.

ಈಗ ನನಗೂ 'ಅಮ್ಮನು ಏನಂದಾಳೋ' ಎನ್ನಿಸಿತು. ನಾವು ಹೊರಟೆವು. ನಮ್ಮ ಗೇಟಿಗೆ ಬಂದಾಗ ಅವಳು "ನಮ್ಮ ಮನೆಗೆ ದಾರಿ ಗೊತ್ತಾಯ್ತೆ ನಿಂಗೆ ?" ಎಂದು ಕೇಳಿದಳು. ನಾನು "ಹೂಂ" ಅಂದೆ. "ಆಗಾಗ ಬಾ. ಮರೀಬೇಡ. ಆ ?" ಎನ್ನುತ್ತ ನನ್ನ ತಲೆಯನ್ನು ಸವರಿ ಹೂವಿನ ಪೊಟ್ಣವನ್ನು ನನ್ನ ಕೈಗೆ ಕೊಟ್ಟು ಗೇಟನ್ನು ತೆಗೆದಳು. ನಾನು ತಲೆಯಾಡಿಸುತ್ತ ಮನೆಗೆ ಹೋದೆ. ನಾನು ಬಾಗಿಲಿನಲ್ಲಿ ಹಿಂತಿರುಗಿ ನೋಡಿದಾಗ ಅವಳೂ ಬೀದಿಯ ಕಡೆಗೆ ತಿರುಗಿದ್ದಳು.

ಹೀಗೆ ಮೊದಲಾಯಿತು, ಗಂಗುವಿನ ನನ್ನ ಪರಿಚಯ. ಇದಾದ ಮೇಲೆ ನಾನು ಅವಳ ಮನೆಗೆ ಆಗಾಗ್ಗೆ ಹೋಗಿಬರುವುದು ನನಗೆ ಅಭ್ಯಾಸವಾಗಿ ಹೋಯಿತು. ನಾಲ್ಕಾರು ದಿನ ನಾನು ಹೋಗದಿದ್ದರೆ ಅವಳೇ ನಮ್ಮ ಮನೆಗೆ ಬಂದು ಕರೆದು ಕೊಂಡು ಹೋಗುತ್ತಿದ್ದಳು. ನಮ್ಮ ಬೀದಿಯ ಇತರ ಮನೆಗಳೂ ಸ್ನೇಹಿತರೂ ನನ್ನನ್ನು ಇನ್ನೂ ಸೆಳೆಯುತ್ತಿದ್ದರೂ ನನಗೆ ಗಂಗುವಿನ ಮನೆಯ ಆಕರ್ಷಣೆಯೇ ಹೆಚ್ಚಾಗಿತ್ತು. ಅಲ್ಲಿನ ಬೆಕ್ಕಿನ ಮರಿಯು ಹಳೆಯದಾದ ಮೇಲೂ ಅವಳ ಮನೆಯ ಮೇಲಿನ ಇಷ್ಟ ನನಗೆ ಕಡಮೆಯಾಗಲಿಲ್ಲ. ಅವಳು ದೊಡ್ಡವಳಾದರೂ ನನ್ನೊಡನೆ ಹುಡುಗಿಯಂತೆಯೇ ಆಟವಾಡುತ್ತಿದ್ದಳು, ಸರಿಸಮವಾಗಿ ಮಾತಾಡುತ್ತಿದ್ದಳು, ಸೊಗಸಾದ ಕತೆಗಳನ್ನು ಹೇಳುತ್ತಿದ್ದಳು. ಬಗೆಬಗೆಯ ತಿಂಡಿಗಳನ್ನು ತಪ್ಪದೆ ಕೊಡುತ್ತಿದ್ದಳು. ಅವಳ ಮನೆಯ ಸ್ವಾತಂತ್ರ್ಯ ನನಗೆ ಹರ್ಷವನ್ನುಂಟುಮಾಡು ತ್ತಿದ್ದಿತು. ಕ್ರಮೇಣ ನನಗೆ ಯಜಮಾನರಲ್ಲಿಯೂ ಸ್ನೇಹವು ಬೆಳೆಯಿತು. ಅವರ ಕಣ್ಣಿನ ಸನ್ನೆಗಳನ್ನು ತಿಳಿಯುವ ಗುಟ್ಟು ನನಗೂ ಸ್ವಲ್ಪ ಗೊತ್ತಾಯಿತು. ಅವರೊಡ ನೆಯೂ ಮಾತುಕತೆಯಾಡುತ್ತಿದ್ದೆ, ಅವರಿಗೆ ಚಿಕ್ಕ ಸಹಾಯಗಳನ್ನು ಮಾಡುತ್ತಿದ್ದೆ.

ಮೊದಲಿನಿಂದಲೂ ಅಮ್ಮನಿಗೆ ನಾನು ಅಲ್ಲಲ್ಲಿ ಪೋಲಿ ತಿರುಗುವುದು ಇಷ್ಟ

ವಿರಲಿಲ್ಲ. ಆಗಾಗ್ಗೆ ಗೊಣಗುತ್ತಲೇ ಇದ್ದಳು. ಈಗಂತೂ ಅವಳಿಗೆ ಸಹಿಸದಾಯಿತೋ ಏನೋ. ಒಂದು ದಿನ ಊಟಕ್ಕೆ ಕುಳಿತಿದ್ದಾಗ ತಂದೆಯವರಲ್ಲಿ "ಇವನು ಈಚೀಚಿಗಂತೂ ಬಹಳ ಕೆಟ್ಟುಹೋಗಿದ್ದಾನೆ. ತಿರುಗುಲ ತಿಪ್ಪ ಆಗಿದ್ದಾನೆ. ಮನೆ ಅಂತ ಸೇರೋದೇ ಇಲ್ಲ. ಹೊತ್ತು ಗೊತ್ತು ಏನೂ ಇಲ್ಲ. ಎಲ್ಲೆಲ್ಲೋ ಹೋಗುತ್ತಾನೆ. ಏನೇನೋ ತಿನ್ನುತ್ತಾನೆ. ಊಟ, ತಿಂಡಿ ಒಂದನ್ನೂ ಸರಿಯಾಗಿ ಮಾಡೋದಿಲ್ಲ. ಏನು ಮಾಡಬೇಕೋ ಗೊತ್ತಿಲ್ಲ" ಎಂದು ನನ್ನ ಮೇಲೆ ದೂರು ಹೇಳಿದಳು. ಆದರೆ ತಂದೆಯವರು ನಸುನಗುತ್ತ "ಹುಡುಗರಿಗೇನು ಬಿಡು. ಎಲ್ಲಿ ಇಷ್ಟವಾದರೆ ಅಲ್ಲಿರಲಿ. ತಂಟೆ ತಕರಾರು ಇಲ್ಲದೆ ಇದ್ದರೆ ಸರಿ" ಅಂದುಬಿಟ್ಟರು.

"ಸರಿ ಸರಿ, ಹೀಗಾದರೆ ಆಯ್ತು. ಇದಕ್ಕೆಲ್ಲ ನೀವೇ ಕಾರಣ. ನಿಮಗೆ ಎಂಥೆಂಥೋರೋ ಕಕ್ಷಿಗಾರರು. ಎಲ್ಲರೂ ಮನೆಗೆ ಬರುತ್ತಾರೆ. ಎಲ್ಲರೂ ಗುರುತಾಗುತ್ತಾರೆ. ಮಕ್ಕಳಿಗೆ ಏನು ಗೊತ್ತು?" ಎಂದು ರೇಗಿದಳು.

"ವಕೀಲನಾದೋನು ಕೇಸುಗಳನ್ನೂ ಕಕ್ಷಿಗಾರರನ್ನೂ ಆರಿಸುತ್ತ ಕುಳಿತರೆ ಅವನಿಗೆ ಉಪವಾಸವೇ ಗತಿ" ತಂದೆಯವರು ಹಾಸ್ಯವಾಡಿದರು.

ಇದರ ಅರ್ಥ ನನಗೆ ಆಗ ಚೆನ್ನಾಗಿ ಆಗದಿದ್ದರೂ ನನ್ನ ತಿರುಗಾಟಕ್ಕೆ ತಂದೆಯವರ ನಿರ್ಬಂಧವಿಲ್ಲವೆಂದುಕೊಂಡು ಸಮಾಧಾನ ಹೊಂದಿದೆ.

ನಮ್ಮ ಮನೆ ತುಂಗಾನದಿಯ ದಡದ ಮೇಲೇ ಇದ್ದಿತು. ನಾನು ಒಂದೊಂದು ದಿನ ಸಂಜೆಯ ಇಳಿಬಿಸಿಲಿನಲ್ಲಿ, ತಿಳಿನೀರಿನ ಪಕ್ಕದ ತಂಪು ಮರಳಿನಲ್ಲಿ ಇತರ ಮಕ್ಕಳೊಡನೆ ಆಟವಾಡುತ್ತಿದ್ದೆ, ಓಡುತ್ತಿದ್ದೆ. ಇಂತಹ ಒಂದು ಸಂಜೆಯಲ್ಲಿ "ರಂಗಾ!" ಎಂದು ದೂರದಿಂದ ಕೂಗಿದ ಶಬ್ದವು ಕೇಳಿಸಿತು. ನಾನು ಗಂಗುವಿನ ಧ್ವನಿಯನ್ನು ಗುರುತಿಸಿ ಆಟವನ್ನು ಬಿಟ್ಟು ಆ ಕಡೆಗೆ ಓಡಿಹೋದೆ. ಅವಳು ಚಿಕ್ಕ ಬಂಡೆಯ ಬಳಿ ಇದ್ದ ಒಗೆಯುವ ಕಲ್ಲಿನಮೇಲೆ ಸಾಬೂನು ಹಾಕಿದ ಬಟ್ಟೆಯನ್ನು ತೀಡುತ್ತ ಕುಳಿತಿದ್ದಳು. ಹತ್ತಿರದಲ್ಲಿ ಕೊಡ, ತಪ್ಪಲೆಗಳಿದ್ದುವು.

"ಯಾಕೆ ಕೂಗಿದೆ?" ನಾನು ಏದುತ್ತ ಕೇಳಿದೆ.

"ಒಬ್ಬಳೇ ಇದ್ದು ಬೇಜಾರಾಗಿತ್ತು."

"ನೀನು ದಿನಾ ಇಲ್ಲಿ ಬರುತ್ತೀಯ?"

"ಹೂಂ."

ನನ್ನನ್ನು ಬಂಡೆಯಮೇಲೆ ಕುಳಿತುಕೊಳ್ಳಹೇಳಿ ಬಟ್ಟೆಯನ್ನು ಒಗೆಯುತ್ತ ಮಧ್ಯೆ ಮಧ್ಯೆ ನಿಲ್ಲಿಸಿ "ಅಲ್ಲಿ ನೋಡು, ಸೂರ್ಯ ಎಷ್ಟು ಕೆಂಪಾಗಿ ಸೌಮ್ಯವಾಗಿ ಇಳೀತಾ ಇದಾನೆ. ಅವನ ಬೆಳಕು ನೋಡು, ಆ ನೀರಿನ ಮೇಲೆ ಹೇಗೆ ಬಿದ್ದು

ಮಿನಿಗುಟ್ಟತಾ ಇದೆ” ಎಂದು ಕೈತೋರಿಸುತ್ತಿದ್ದಳು. “ಇಗೋ ಎಷ್ಟೊಂದು ಹಕ್ಕಿಗಳು ಗುಂಪುಗುಂಪಾಗಿ ಹಾರಿಬರುತ್ತಿವೆ! ಈ ಮರದ ಮೇಲೆ ಅವುಗಳ ಮಾತು ಕೇಳು; ಎಷ್ಟು ಚಿಲಪಿಲ ಅಂತಾ ಇವೆ” ಎಂದು ತಾನೂ ಸುಮ್ಮನೆ ನಿಂತು ಕೇಳುತ್ತಿದ್ದಳು. “ಅಬ್ಬ; ಎಂಥಾ ತಂಪು ಗಾಳಿ! ಆಯಾಸವೆಲ್ಲ ಪರಿಹಾರ ವಾಗುತ್ತೆ” ಎಂದು ದೀರ್ಘವಾಗಿ ಉಸಿರೆಳೆದುಕೊಳ್ಳುತ್ತಿದ್ದಳು. “ಈಗ ನೋಡು ಈ ನೀರು ಕಗ್ಗಲ್ಲಿನ ಮೇಲೆ ಎಣ್ಣೆಯ ಹಾಗೆ ತಿಳಿಯಾಗಿ ಹರಿಯುತ್ತಿದೆಯೋ; ಈಗ ಅದನ್ನು ಹಾಲಿನಹಾಗೆ ಮಾಡುತ್ತೀನಿ” ಎಂದು ಬಟ್ಟೆಯನ್ನು ಕುಕ್ಕಿ ಹಿಂಡುತ್ತ ಹಾಲನ್ನೇ ಹರಿಸುತ್ತಿದ್ದಳು. “ಅಲ್ಲಿ ಮುಂದೆ ಹೋಗಿ ನೋಡೋಣ ಬಾ. ಈ ನೀರು ಅಲ್ಲಿ ಮೆಟ್ಟಿಲಿನಿಂದ ಧುಮುಕಿ ನೊರೆನೊರೆಯಾಗಿ ಮೊರೀತಾ ಇದೆ” ಎಂದು ಕೆಲಸವನ್ನು ಬಿಟ್ಟು ನನ್ನನ್ನು ಕರೆದುಕೊಂಡು ನೀರು ಕೊರಕಲಿಗೆ ಇಳಿಯುತ್ತಿದ್ದ ಬಳಿಗೆ ಹೋಗಿ ತೋರಿಸಿದಳು. ನಾನು ಇಷ್ಟುಬಾರಿ ನದಿಗೆ ಬಂದಿದ್ದರೂ ಇವನ್ನೆಲ್ಲ ಗಮನಿಸಿಯೇ ಇರಲಿಲ್ಲ. ಈಗ ನೋಡಿ ಆಶ್ಚರ್ಯಪಟ್ಟೆ, ಆನಂದಿಸಿದೆ. ಅಂತೂ ಹಾಗೆ ಹೀಗೆ ಆಟದಂತೆ ಬಟ್ಟೆಗಳನ್ನು ಒಗೆದು ನನ್ನ ಬಳಿ ಇಟ್ಟಳು. ನನಗೆ ಯಜಮಾನರ ಮೇಲಿದ್ದ ಶುಭ್ರವಾದ ಬಟ್ಟೆಗಳು ಹೇಗೆ ಬಂದುವೆಂದು ಈಗ ಗೊತ್ತಾಯಿತು. ಅನಂತರ ಅವಳು ಪಾತ್ರೆಗಳನ್ನು ಬೆಳಗಿ ನದಿಯ ದೊಡ್ಡ ಭಾಗದಿಂದ ನೀರನ್ನು ತುಂಬಿ ತಂದು ಬಟ್ಟೆಯ ಪಕ್ಕದಲ್ಲಿ ಇಡುತ್ತ ಕತ್ತೆತ್ತಿ “ಈಗ ನೋಡು ಸೂರ್ಯ ಇಳಿದೇಹೋದ. ಅವನ ಬಣ್ಣ ಮಾತ್ರ ಆ ಮೋಡಗಳ ಮೇಲಿವೆ . . . ಕಿತ್ತಳೆ ಬಣ್ಣ, ಚಿನ್ನದ ಬಣ್ಣ, ಊದ . . . ಎಷ್ಟೊಂದು” ಎಂದು ತೋರಿಸಿ, ಮತ್ತೆ ತಿರುಗಿನೋಡಿ “ಓಹೋ ನಿನ್ನ ಸ್ನೇಹಿತರೆಲ್ಲ ಹೊರಟೇ ಹೋಗಿದಾರಲ್ಲ” ಎಂದಳು.

“ನಾನೇ ಹೋಗುತ್ತೀನಿ” ನಾನು ಧೈರ್ಯವಾಗಿ ಹೇಳಿದೆ.

“ಏನು ಆಟ ಆಡುತ್ತಿದ್ದಿರಿ?”

“ಕಪ್ಪೆಗೂಡು, ಹಿಡಿಯೋ ಆಟ.”

“ಬಾ ನಾನು ನಿಂಗೆ ದೊಡ್ಡ ಕಪ್ಪೆಗೂಡು ಮಾಡಿಕೊಡುತ್ತೀನಿ.”

“ನಾನೂ ಮಾಡುತ್ತೀನಿ.”

ಇಬ್ಬರೂ ಮರಳಿನ ಮೇಲೆ ಅಕ್ಕಪಕ್ಕದಲ್ಲಿ ಕುಳಿತು ಗೂಡುಗಳನ್ನು ಮಾಡಿದೆವು. ನಾನು ಎಷ್ಟೆಷ್ಟು ಮಾಡಿದರೂ ನನ್ನದು ಮುರಿದೇ ಹೋಗುತ್ತಿತ್ತು. ಅವಳು ಸೊಗಸಾಗಿ ಗೂಡನ್ನು ಮಾಡಿ ಇದೇ “ನಿಂಗೆ” ಎಂದಳು. ನಾನು ಹಿಗ್ಗಿದೆ, ಬಗ್ಗಿದೆ, ಕಡೆಗೆ ಅದನ್ನು ಮುರಿದುಹಾಕಿದೆ.

"ನನ್ನನ್ನು ಹಿಡಿಯೋ ಆಟಾನೂ ಬರುತ್ತೇ?" ನಾನು ಅವಳನ್ನು ಕೇಳಿದೆ.

"ಓಹೋ, ಓಡು. ಒಂದೇ ನಿಮಿಷಕ್ಕೆ . . ."

"ಎಲ್ಲಿ ಮತ್ತೆ. ಜೂಟ್!"

ನಾನು ನಗುತ್ತ ಓಡಿದೆ. ಅವಳೂ ನಗುತ್ತಲೇ ನನ್ನನ್ನು ಹಿಂಬಾಲಿಸಿದಳು. ಅಷ್ಟುಹೊತ್ತಾದ ಮೇಲೆ ನನಗೆ ಆಯಾಸವಾಗಿ ಸಿಕ್ಕಿಬಿದ್ದೆ. ಅವಳು ನನ್ನನ್ನು ಹಿಡಿದು ಎತ್ತಿ ಅಪ್ಪಿಕೊಂಡು ಮುತ್ತಿಟ್ಟು ಕೆಳಗೆ ಇಳಿಸಿ "ಬಾಪ್ಪ, ಹೊತ್ತಾಯ್ತು. ನಿನ್ನ ನಿಮ್ಮ ಬೀದೀಲಿ ಬಿಟ್ಟು ಹೋಗುತ್ತೀನಿ" ಎಂದು ತಪ್ಪಲೆಯನ್ನು ತಲೆಯ ಮೇಲೆ ಹೊತ್ತು, ಕೊಡವನ್ನು ಸೊಂಟದ ಮೇಲಿಟ್ಟು, ಬಟ್ಟೆಯ ಸುರುಳಿಗಳನ್ನು ಹೆಗಲ ಮೇಲೆ ಹಾಕಿ ನನ್ನ ಕೈಯನ್ನು ಹಿಡಿದುಕೊಂಡಳು. ಇಬ್ಬರೂ ಹೊರಟೆವು. ನಮ್ಮ ಬೀದಿ ಸಿಕ್ಕಿದಾಗ ಅವಳು.

"ಮನೆಗೆ ಹೋಗುತ್ತೀಯಾ?" ಎಂದು ಕೇಳಿದಳು.

"ಹೂಂ."

"ನಾಳೇನೂ ಹೊಳೆಗೆ ಬರುತ್ತೀಯಾ?"

"ಹೂಂ."

"ನಿಂಗೋಸ್ಕರ ಕಾಗದದ ದೋಣಿ ಮಾಡಿ ತರುತ್ತೀನಿ. ತೇಲಿಬಿಡೋಣ."

"ಓ, ಎಷ್ಟು ಚೆನ್ನಾಗಿರುತ್ತೆ!" ನಾನು ಚಪ್ಪಾಳೆ ತಟ್ಟುತ್ತ ಮನೆಗೆ ಓಡಿದೆ.

ಅಂದಿನಿಂದ ಮರಳಿಗೆ ಹೋದಾಗಲೆಲ್ಲ ಬಂಡೆಯಬಳಿಗೆ ತಪ್ಪುತ್ತಿರಲಿಲ್ಲ.

ಹೀಗೇ ಒಂದು ಸಂಜೆ ನದಿಯಿಂದ ಹಿಂದಿರುಗುತ್ತ ಅವಳನ್ನು ಬೀಳ್ಕೊಳ್ಳುವಾಗ ಅವಳು "ರಂಗ, ನಾಳೆ ಮಧ್ಯಾಹ್ನ ನಮ್ಮ ಮನೆಗೆ ತಪ್ಪದೆ ಬಾ. ಮರೀಬೇಡ!" ಎಂದು ಹೇಳಿದಳು. ಹೀಗೆ ಕರೆದ ಸಂದರ್ಭದಲ್ಲೆಲ್ಲ ಏನಾದರೂ ವಿಶೇಷದ ತಿಂಡಿ ತೀರ್ಥಗಳು ಸಿಕ್ಕುವುದು ಈವರೆಗೆ ನನ್ನ ಮನಸ್ಸಿಗೆ ಬಂದಿದ್ದಿತು. ಆದುದರಿಂದ ನಾನು ಮಾರನೆಯ ದಿನ ತಪ್ಪಲಿಲ್ಲ.

ನಾನು "ಗಂಗೂ" ಎಂದು ಕೂಗಿದೊಡನೆ ತನ್ನ ತಲೆಗೂದಲ ರಾಶಿಯನ್ನು ಬಾಚಿಕೊಳ್ಳುತ್ತಲೇ ಬಂದು "ಬಿಸಿಲಿನಲ್ಲೇ ಬಂದೆಯಲ್ಲ, ಕಂದ" ಎಂದು ಬಾಗಿಲನ್ನು ತೆಗೆದು ತನ್ನ ಸೆರಗಿನಿಂದ ನನ್ನ ಮುಖದ ಬೆವರನ್ನು ಒರೆಸಿದಳು. ನಾವು ಒಳಗೆ ಹೋದೆವು. ಹಜಾರದಲ್ಲಿ ಯಜಮಾನರು ನಾನು ಮೊದಲನೆಯ ದಿನ ಕಂಡಂತೆ ಕುರ್ಚಿಯ ಮೇಲೆ ಕುಳಿತಿದ್ದರು. ಆದರೆ ಇಂದು ಜರಿಯ ಪಂಚೆಯನ್ನು ಉಟ್ಟಿದ್ದರು. ಷರಟಿನ ಮೇಲೆ ಜರಿಯ ಶಲ್ಯವನ್ನೂ ಹೊದ್ದಿದ್ದರು. ಕತ್ತಿನಲ್ಲಿ ಒಂದು ಎಳೆಯ ಚಿನ್ನದ ಸರವಿತ್ತು. ಬಲಗೈಗೆ ಹರಳಿನ ಚಿನ್ನದ ಬಳೆಯು ತೊಡಿಸಲ್ಪಟ್ಟಿದ್ದಿತು.

ನಾನು ಅವರ ಕಡೆಗೇ ನೋಡುತ್ತ "ಯಜಮಾನರು ಝೋಕಾಗಿದಾರೆ, ಇವತ್ತು" ಎಂದು ಹೇಳಿದೆ. ಅವಳೂ ಅವರನ್ನು ನೋಡುತ್ತ ಬಗ್ಗಿ "ಕೇಳಿದಿರಾ?" ಎಂದು ಹೆಮ್ಮೆಯಿಂದ ಹೇಳಿದಳು. ಅವರ ಕಣ್ಣಿನಲ್ಲಿ ಹರ್ಷವು ಹೊಳೆಯಿತು.

ಗಂಗುವೂ ನಾನೂ ಅಡಿಗೆಮನೆಗೆ ಹೋದೆವು. ನಾನು ನಿರೀಕ್ಷಿಸಿದ್ದಂತೆ ಅವಳು ತಟ್ಟೆಯಲ್ಲಿ ತಿನಿಸನ್ನೂ ಬಟ್ಟಲಿನಲ್ಲಿ ಕೀರನ್ನೂ ನನಗೆ ನೈವೇದ್ಯಮಾಡಿ "ನಾನು ಕೋಣೇಲಿ ಇರುತ್ತೀನಿ. ತಿಂದಮೇಲೆ ಕೂಗು. ಕೈತೊಳೆಸುತ್ತೀನಿ" ಎಂದು ಹೇಳಿ ಹೋದಳು. ನಾನು ಕೀರನ್ನು ಕುಡಿಯುವ ಹೊತ್ತಿಗೆ ಚೆನ್ನಿ ಬಂದಿತು. ನಾನು ಅದನ್ನೂ ಅವುಚಿಕೊಂಡು ತಿಂಡಿಯ ತಟ್ಟೆಯನ್ನೂ ಹಿಡಿದುಕೊಂಡು ಕೋಣೆಗೇ ಹೋಗಿ ಕುಳಿತುಕೊಂಡೆ. ಅಲ್ಲಿ ಗಂಗು ಕನ್ನಡಿಯ ಮುಂದೆ ಕುಳಿತು ಎಂದಿಗಿಂತ ಚೆನ್ನಾಗಿ ಜಡೆ ಹಾಕಿಕೊಳ್ಳುತ್ತಿದ್ದಳು. ಜಡೆಯಾದನಂತರ ಮುಂಗುರುಳನ್ನು ತಿದ್ದಿ ಮುಖ ತೊಳೆದು ಒರೆಸಿಕೊಂಡು ಸಣ್ಣ ದುಂಡು ಕುಂಕುಮವನ್ನು ಇಟ್ಟುಕೊಂಡಳು. ಮುತ್ತಿನ ಓಲೆಗಳನ್ನು ತೆಗೆದಿಟ್ಟು ಪೆಟ್ಟಿಗೆಯಿಂದ ವಜ್ರದ ಓಲೆಗಳನ್ನು ತೆಗೆದು ಕಿವಿಗಿಟ್ಟುಕೊಂಡಳು. ಕತ್ತಿಗೆ ಎರಡು ಮೂರು ಸರಗಳನ್ನು ಹಾಕಿಕೊಂಡಳು. ಕೈಗೆ ಕೆಲವು ಚಿನ್ನದ ಬಳೆಗಳನ್ನೂ ಗಾಜಿನ ಬಳೆಗಳನ್ನೂ ತೊಡಿಸಿಕೊಂಡಳು. ಬೆರಳುಗಳಿಗೆ ಉಂಗುರಗಳನ್ನು ಇಟ್ಟುಕೊಂಡಳು. ಉಟ್ಟಿದ್ದ ಹಳೆಯ ಸೀರೆಯ ಬದಲು ಕೇಸರಿ ಬಣ್ಣದ ಜರತಾರಿಯಂಚಿನ ರೇಷ್ಮೆ ಸೀರೆಯನ್ನು ಉಟ್ಟು ಸರಿಪಡಿಸಿಕೊಳ್ಳುತ್ತ "ಮರಿ, ಈ ಸೀರೆ ಚೆನ್ನಾಗಿದೆಯೆ?" ಎಂದು ನನ್ನ ಕಡೆಗೆ ತಿರುಗದೆಯೇ ಕೇಳಿದಳು.

"ಉಹುಂ" ನಾನು ಕಡೆಯ ಚೂರು ತಿಂಡಿಯನ್ನು ನುಂಗುತ್ತ ಹೇಳಿದೆ.

"ಹೋಗೋ ಪೋಲಿ. ನಿಂಗೇನು ಗೊತ್ತು. ಅವರೇ ಇದು ನಂಗೆ ಎಲ್ಲಕ್ಕಿಂತ ಚೆನ್ನಾಗಿ ಒಪ್ಪುತ್ತೇ ಅಂತ ಹೇಳಿದಾರೆ—ಇದು, ಈ ನಿಂಬೇ ಬಣ್ಣದ ರವಕೆ ಜೋಡಿ" ಎಂದು ನನ್ನ ಕಡೆಗೆ ತಿರಿಗಿದಳು. ನಾನು ಈಗ ಅವಳನ್ನು ನೋಡಿ ಬೆರಗಾದೆ.

ನನ್ನ ತಿಂಡಿ ಮುಗಿದಿತ್ತು. ಅವಳು ನನ್ನನ್ನು ಕರೆದುಕೊಂಡು ಹೋಗಿ ಕೈತೊಳೆಸಿ ಒರೆಸಿದಳು. ಹಾಗೇ ಬರುವಾಗ ಹೂವಿನ ಬುಟ್ಟಿಯನ್ನೂ ತಂದು ಜಾಜಿ ಸಂಪಿಗೆಗಳ ದೊಡ್ಡ ದಂಡೆಯನ್ನು ಮುಡಿದು ಮೇಲೆ ಕೆಂಪು ಗುಲಾಬಿಯನ್ನೂ ಜೋಡಿಸಿಕೊಂಡಳು. ನಾನು

"ಇಷ್ಟೊಂದು ಹೂ!" ಎಂದು ಆಶ್ಚರ್ಯಪಟ್ಟೆ.

"ಅವರಿಗೆ ನಾನು ಎಷ್ಟು ಹೂ ಮುಡಿದರೂ ತೃಪ್ತಿಯಿಲ್ಲ. ತಾವೇ ಇನ್ನಷ್ಟು ಇನ್ನಷ್ಟು ಮುಡಿಸುತ್ತಿದ್ದರು. . . . ಈಗ ನೋಡು, ನಾನು ಹೇಗಿದೀನಿ?" ಎಂದು ಹುಡುಗಿಯಂತೆ ಜಡೆಯನ್ನು ಹೆಗಲಿನ ಮೇಲಿನಿಂದ ಮುಂದಕ್ಕೆಳೆದುಕೊಂಡು ನನ್ನ

ಹತ್ತಿರ ಬಂದು ಮಂಡಿಯೂರಿ ಕುಳಿತು ಮುಖವನ್ನು ಮುಂದಕ್ಕೆ ಚಾಚಿ ಕೇಳಿದಳು. ಅಮ್ಮನು ಸಂತೋಷವಾಗಿದ್ದು ಮುದ್ದುಮಾಡುತ್ತಿದ್ದಾಗ ಒಂದೊಂದು ಸಲ ಮುತ್ತು ಕೊಡಿಸಿಕೊಳ್ಳುತ್ತಿದ್ದುದು ನನಗೆ ತಟ್ಟನೆ ನೆನಪಿಗೆ ಬಂತು.

"ನಿಂಗೆ ಮುತ್ತ ಕೊಡಲೇ ?" ಎಂದು ಕೇಳಿದೆ.

"ಅಯ್ಯೋ ನನ್ನಪ್ಪ, ಕೊಡಮ್ಮ" ಎಂದು ನನ್ನನ್ನು ಬಳೆಗಳ ಕಣಕಣದ ಕೈಗಳಿಂದ ಬಾಚಿ ತಬ್ಬಿಕೊಂಡಳು.

ನಾನು ಅವಳ ಕೊರಳನ್ನು ಕೈಗಳಿಂದ ಬಳಸಿ ಎಡಕೆನ್ನೆಗೆ ಮುತ್ತುಕೊಟ್ಟೆ. ಅವಳು ಬಲದ ಕೆನ್ನೆಯನ್ನೂ ತೋರಿಸಿದಳು. ಅದಕ್ಕೂ ಮುತ್ತಿಟ್ಟೆ. ಅವಳು ನನ್ನನ್ನು ಎತ್ತಿಕೊಂಡು ಎದ್ದು ಹಜಾರಕ್ಕೆ ನಡೆದಳು.

"ಎಲ್ಲಿಗೆ ಹೋಗೋದು ?" ನಾನು ಕೇಳಿದೆ. ಅಮ್ಮನು ಹೀಗೆ ಸಿದ್ಧವಾಗುತ್ತಿದ್ದುದು ಎಲ್ಲಾದರೂ ಹೋಗುವಾಗಲೇ.

"ಎಲ್ಲೂ ಇಲ್ಲ."

"ಮತ್ತೆ ಯಾಕೆ ಅಲಂಕಾರ ಮಾಡಿಕೊಂಡಿದಿ ?"

"ಇವತ್ತು ನಮಗೆ ದೊಡ್ಡ ಹಬ್ಬ ಮರಿ. ನಾನೂ ಅವರೂ ಒಂದಾದ ದಿನ. ಅದಕ್ಕೆ ತಿಂಡಿ ಇದು ಎಲ್ಲ. ಆದಿನ ನಾನು ಹೀಗೇ ಸಿಂಗರಿಸಿಕೊಂಡಿದ್ದೆ. ಅವರು ಬಹಳ ಮೆಚ್ಚಿಕೊಂಡರು."

ನಾವು ಯಜಮಾನರ ಬಳಿಗೆ ಹೋದೆವು. ಅವಳು ಅವರ ಬಳಿಗೆ ಹೋಗಿ ಎದುರಿಗೆ ನಿಂತು, ಹತ್ತಿರ ಕುಳಿತು, ಅವರ ಕೈಗಳನ್ನು ಜೋಡಿಸಿ ತನ್ನ ಎದೆಯ ಮೇಲೆ ಇರಿಸಿಕೊಂಡು ಮೆಲ್ಲಗೆ ಅವುಗಳನ್ನು ಸವರಿದಳು. ಅವರ ತಲೆಗೂದಲನ್ನು ನೇವರಿಸಿದಳು. ಇದನ್ನು ನೋಡಿ ನನಗೆ ಏಕೋ ಅಸಮಾಧಾನವಾಯಿತು. ಏನು ಮಾಡಬೇಕೆಂದು ತೋಚಲಿಲ್ಲ. ತೀಕ್ಷ್ಣವಾಗಿ ಯೋಚಿಸಿದೆ. ಅವಳು ಆಗಾಗ ಅವರ ಬಳಿ ಕುಳಿತು ಇಂಪಾಗಿ ವೀಣೆ ನುಡಿಸುತ್ತಿದ್ದುದು ನೆನಪಿಗೆ ಬಂದಿತು. ಕೂಡಲೇ ಅವಳ ಸೆರಗನ್ನು ಎಳೆಯುತ್ತ "ವೀಣೆ ನುಡಿಸು ಬಾ" ಎಂದು ಪೀಡಿಸಿದೆ. ಆದರೆ ಅವಳು ನಸುನಕ್ಕಳೇ ಹೊರತು ಕದಲಲಿಲ್ಲ. ಸ್ವಲ್ಪ ಹೊತ್ತು ಅವರಿಬ್ಬರೂ ಹಾಗೇ ಇದ್ದರು. ಯಜಮಾನರ ಕಣ್ಣು ನೀರು ತುಂಬಿತು. ನಾನು "ಅಳುತ್ತಾರೆ" ಎಂದೆ. ಅವಳು "ಇಲ್ಲ ರಂಗ. ಸಂತೋಷಕ್ಕೂ ಹಾಗೇ ಕಣ್ಣೀರು ಬರುತ್ತೆ" ಎಂದಳು. ಅವಳ ಕಣ್ಣೂ ಒದ್ದೆಯಾಗಿತ್ತು. ಅವಳು ತಟ್ಟನೆ "ಚೆನ್ನಿ ಎಲ್ಲಿ ಮರಿ ?" ಎಂದಳು. ನಾನು ಬೇರೆಯ ಕಡೆ ತಿರುಗಿದೆ. ಅದೆಲ್ಲೋ ಹೋಗಿತ್ತು. ಅವಳು "ಹೋಗಲಿ ಬಿಡು" ಎಂದಳು. ನಾನು ಮತ್ತೆ ತಿರುಗಿ ಅವಳನ್ನು ನೋಡಿದಾಗ ಅವಳು

ನಗುತ್ತಿದ್ದಳು. ಅವಳ ಮುಖವು ಕೆಂಪಾಗಿತ್ತು ಯಜಮಾನರ ಬಿಳಿಚುಕೆನ್ನೆಯೂ ನಸುಗೆಂಪಾಗಿತ್ತು.

ಸ್ವಲ್ಪ ಹೊತ್ತಿನ ಮೇಲೆ ಗಂಗು ಕೋಣೆಗೆ ಹೋಗಿ ಮುಸುಕಿನಲ್ಲಿದ್ದ ವೀಣೆಯನ್ನು ತಂದು ಯಜಮಾನರ ಹತ್ತಿರ ಚಾಪೆಯ ಮೇಲೆ ಕುಳಿತುಕೊಂಡಳು. ನಾನು ಅವಳ ಮುಂದೆ ಕುಳಿತೆ. ಗಂಗುವು ಶಾರದೆಯ ಚಿತ್ರದಂತೆ ಕುಳಿತು ಉಂಗುರದ ಬೆರಳುಗಳಿಂದ ತಂತಿಗಳನ್ನು ಮೀಟುತ್ತ ಮೃದುವಾಗಿ ಮಧುರವಾಗಿ ಎಷ್ಟೋ ಹೊತ್ತು ಹಾಡಿದಳು. ನಾನು ನನ್ನನ್ನೆ ಮರೆತು ಕೇಳುತ್ತಿದ್ದೆ. ಸಂಗೀತವು ಮುಗಿದ ಮೇಲೆ ಅವಳು ವೀಣೆಗೆ ಮುಸುಕನ್ನು ಹಾಕುತ್ತ "ರಂಗ, ನೀನೂ ಹಾಡುತ್ತೀಯಾ?" ಎಂದು ಕೇಳಿದಳು.

"ನಿನ್ನಷ್ಟು ಚೆನ್ನಾಗಿ ಬರೋದಿಲ್ಲ."

"ನನಗೆ ಕಲಿಸಿದ ಗುರುಗಳು ಇವರೇ. ಅವರಿಗೆ ವೀಣೆ ಅಂದರೆ ಪ್ರಾಣ" ಎಂದು ಅವಳು ಯಜಮಾನರ ಕಡೆಗೆ ಕೈತೋರಿಸಿ "ನೀನು ಕೊಂಚ ದೊಡ್ಡೋನಾಗು. ನಾನೇ ನಿಂಗೆ ಹಾಡು ವೀಣೆ ಎರಡನ್ನೂ ಕಲಿಸಿಕೊಡುತ್ತೀನಿ" ಎಂದು ಹೇಳಿದಳು. ನನಗೆ ಆನಂದವಾಯಿತು.

ಈವರೆಗಾಗಲೇ ಮುಸುಕಾಗುತ್ತ ಬಂದಿತ್ತು. ಗಂಗುವು "ಓಹೋ ಇನ್ನೇನು ಕತ್ತಲಾಗುತ್ತೆ. ನೀರನ್ನು ತರಬೇಕು" ಎಂದು ಗಡಿಬಿಡಿಯಿಂದ ಎದ್ದಳು. ವೀಣೆಯನ್ನು ಅದರ ಸ್ಥಳದಲ್ಲಿಟ್ಟು ತನ್ನ ಅಲಂಕಾರವನ್ನೆಲ್ಲ ತೆಗೆದಿಟ್ಟು ಎಂದಿನಂತೆಯೇ ಸಾಧಾರಣ ಸೀರೆ, ಮುತ್ತಿನ ಓಲೆ, ಗಾಜಿನ ಕೈಬಳೆಗಳಿಗೆ ಬದಲಾಯಿಸಿಕೊಂಡಳು. ಕೊಡ ತಪ್ಪಲೆಗಳೊಂದಿಗೆ ತುಂಗೆಗೆ ಹೊರಟೆವು.

ಮುಂದೆಯೂ ನಾನು ಇಂತಹ ಹಬ್ಬದ ಸಂದರ್ಭಗಳನ್ನು ಎಷ್ಟೋ ಬಾರಿ ಅನುಭವಿಸಿದೆ. ಅವಳು ಯಜಮಾನರ ಹುಟ್ಟಿದ ಹಬ್ಬ, ಪುರಂದರದಾಸ ತ್ಯಾಗರಾಜ ಮೀರಾಬಾಯಿ ಇವರ ಜಯಂತಿಗಳನ್ನು ಇದೇ ರೀತಿ ಆಚರಿಸುತ್ತಿದ್ದಳು.

ನಮ್ಮ ಊರಿಗೆ ನಾಟಕದ ಕಂಪನಿ ಬಂದಿದ್ದಾಗ ಒಂದು ರಾತ್ರಿ ನಮ್ಮ ಮನೆಯುವರೆಲ್ಲ ನಾಟಕಕ್ಕೆ ಹೋಗುವರೆಂದು ನಿಶ್ಚಯವಾಗಿತ್ತು. ಆ ದಿನವೆಲ್ಲ ನನಗೆ ಮಹಾ ಸಂಭ್ರಮ. ಇಂತಹ ಸಂದರ್ಭಕ್ಕೆ ಗಂಗುವನ್ನೂ ಕರೆಯಬೇಕೆಂದು ಅದೇ ಮಧ್ಯಾಹ್ನ ಅವಳ ಮನೆಗೆ ಹೋದೆ. ಅವಳು ಹಜಾರದಲ್ಲಿ ಯಜಮಾನರ ಕುರ್ಚಿಯ ಬಳಿ ಕುಳಿತುಕೊಂಡು ತನ್ನಲ್ಲೇ ಮೆಲ್ಲಗೆ ಹಾಡನ್ನು ಹೂಗುಟ್ಟುತ್ತ ಉಲ್ಲನ್ ದಾರದಿಂದ ಕಾಲುಚೀಲವನ್ನು ಹಾಕುತ್ತಿದ್ದಳು. ನಾನು ಕಾಲಿಟ್ಟವನೆ "ಗಂಗೂ . . ." ಎಂದು ಮೊದಲುಮಾಡಿದೆ. ಅವಳು ತಟ್ಟನೆ ಹಾಡನ್ನು ನಿಲ್ಲಿಸಿ, ಕೆಲಸವನ್ನು ಬಿಟ್ಟು

ಬಾಯಿನ ಮೇಲೆ ಬೆರಳಿಟ್ಟುಕೊಂಡು ನನಗೆ ಸದ್ದುಮಾಡದಂತೆ ಸನ್ನೆಮಾಡಿದಳು. ನಾನು ಹತ್ತಿರ ಹೋಗಿ ನೋಡಿದಾಗ ಯಜಮಾನರು ಕಣ್ಣನ್ನು ಮುಚ್ಚಿಕೊಂಡಿದ್ದರು. ಗಂಗು ನನ್ನನ್ನೂ ಕರೆದುಕೊಂಡು ಹಜಾರದಿಂದ ಹೊರಗೆ ಬರುತ್ತ "ಏನು ರಂಗ ಅಂಥಾ ಸಮಾಚಾರ?" ಎಂದು ಪಿಸಿಮಾತಿನಲ್ಲಿ ಕೇಳಿದಳು.

"ನಾಟಕಕ್ಕೆ ಬರುತ್ತೀಯಾ?" ನಾನು ವರಾಂಡದಲ್ಲಿ ಕೇಳಿದೆ.

"ನೀನು ಹೋಗುತ್ತೀಯ?"

"ಹುಂ. ನಾನು ಅಮ್ಮ ಎಲ್ಲ."

ನಾವು ಅಲ್ಲೇ ಕುಳಿತುಕೊಂಡೆವು. ಅವಳು ಉಲ್ಲನ್ನನ್ನು ಹೆಣೆಯುತ್ತ, "ಏನು ನಾಟಕ?" ಎಂದು ಕೇಳಿದಳು.

"ಗೊತ್ತಿಲ್ಲ" ನಾನು ಪೆಚ್ಚಾಗಿ ಹೇಳಿದೆ.

ಶುದ್ಧ ಪೆದ್ದು!" ಅವಳು ನಗುತ್ತ ಹೆಣಿಗೆಯನ್ನು ನಿಲ್ಲಿಸಿ, ನನ್ನ ಕೆನ್ನೆಯನ್ನು ಮೃದುವಾಗಿ ತಿವಿದು ನನ್ನನ್ನು ತನ್ನ ಪಕ್ಕಕ್ಕೆ ಒತ್ತಿಕೊಂಡು "ಯಾವುದಾದರೇನು, ಎಲ್ಲವೂ ಚೆನ್ನಾಗಿರುತ್ತೆ, ನಿಂಗೆ. ನೋಡಿಕೊಂಡು ಬಾ. ನಾಳೆ ಕತೆಯನ್ನು ಹೇಳೋವಂತೆ" ಎಂದು ತೀರ್ಮಾನಿಸಿದಳು.

"ನೀನು?" ನಾನು ಮತ್ತೆ ಕೇಳಿದೆ.

"ಇಲ್ಲಪ್ಪಾ."

"ಯಾಕೆ?"

"ಅವರು ಒಬ್ಬರನ್ನೇ ಅಷ್ಟು ಹೊತ್ತು ಬಿಡೋದಕ್ಕೆ ಆಗುತ್ತೇ? ನೀನೇ ಹೇಳು."

"ನೀನು ನಾಟಕ ನೋಡಿದೀಯ?"

"ನೋಡಿದೀನ? ಪಾರ್ಟು ಮಾಡಿದೀನಿ, ಮರಿ."

"ಪಾರ್ಟು! ಏನು ಪಾರ್ಟು?"

"ಸಾವಿತ್ರಿ, ಸೀತೆ, ತಾರಾಮತಿ, ರತಿ . . . ಇನ್ನು ಯಾವುಯಾವುದೋ."

"ಈಗ ಯಾಕೆ ಮಾಡೋದಿಲ್ಲ?"

"ಈಗಲೇ? ಹುಚ್ಚಪ್ಪ! ಆಗಲೇ ಬಿಟ್ಟುಬಿಟ್ಟೆ—ಎಷ್ಟೋ ವರ್ಷದ ಕೆಳಗೆ"

"ಯಾಕೆ?"

"ಅವರಿಗೆ ಅದು ಇಷ್ಟವಿರಲಿಲ್ಲ ಅಂತ ಕಂಡಿತು."

"ಯಾಕೆ?"

“ಯಾಕೆ? ಯಾಕೆ? ನಿಂಗೆ ಎಷ್ಟು ಉತ್ತರ ಹೇಳೋದು?. . . ರಂಗ, ಅವರು ಸಾಮಾನ್ಯವಲ್ಲಪ್ಪ. ನಾನು ಬೇರೆಯೋರ ಒಳಿ ಹಾಗೆ ಸುಳಿದರೂ ಸಹಿಸುತ್ತಿರಲಿಲ್ಲ. ನನ್ನ ಮೇಲೆ ಅಂಥಾ ಹುಚ್ಚು—ಅವರಿಗೆ. ಅವು ಎಂಥಾ ದಿನಗಳು!”

ನನಗೆ ಏನು ಹೇಳಲೂ ತೋಚಲಿಲ್ಲ. ಅವಳೂ ಮೌನವಾಗಿ ಏನನ್ನೋ ಯೋಚಿಸುತ್ತಿದ್ದಳು.

ಬ್ಯಾಂಡಿನ ಶಬ್ದ ಕೇಳಿಸಿತು. ನಾನು ತಟ್ಟನೆದ್ದು ಗೇಟಿಗೆ ಓಡಿದೆ. ಅದು ನಾಟಕದ ಚೀಟಿ ಹಂಚುವ ಗಾಡಿಯದೆಂದು ನನಗಾಗಲೇ ಗೊತ್ತಿದ್ದಿತು. ಎಷ್ಟೋ ಬಾರಿ ಇತರ ಹುಡುಗರೊಂದಿಗೆ ಗಾಡಿಯ ಹಿಂದೆ ಹೋಗಿ ಚೀಟಿಗಳನ್ನು ತಂದಿದ್ದೆ. ಈಗ ಅವಳೂ ಎದ್ದು ನನ್ನ ಬಳಿಗೆ ಬಂದಳು. ಗಾಡಿ ಹತ್ತಿರ ಬಂದಾಗ ನಾನು ಹೊರಗೆ ಹೋಗಲು ಯತ್ನಿಸಿದೆ. ಅವಳು ತಡೆದು “ಇಲ್ಲೇ ಇರು. ಆ ಗಲಾಟೇಲಿ ಹೋಗಬೇಡ. ನಾನು ಚೀಟಿ ಕೊಡಿಸುತ್ತೀನಿ” ಎಂದು ಭರವಸೆ ಕೊಟ್ಟಳು. ಗಾಡಿಯು ಇದಿರಿಗೆ ಬಂದ ಮೇಲೆ ಸನ್ನೆಮಾಡಿದಳು. ಚೀಟಿ ಹಂಚುವವನು ಅವಳಿಗೊಂದು ಕೆಂಪು ಚೀಟಿಯನ್ನು ತಂದುಕೊಟ್ಟ.

“ನೀನು ನೋಡೋದು ‘ಸತ್ಯ ಹರಿಶ್ಚಂದ್ರ’ನ ನಾಟಕ” ಎಂದು ಅವಳು ಚೀಟಿಯನ್ನು ನನಗೆ ಕೊಟ್ಟು

“ಹರಿಶ್ಚಂದ್ರನ ಕತೆ ನಿಂಗೆ ಗೊತ್ತಿದೆಯೆ?” ಎಂದು ಕೇಳಿದಳು.

“ಉಹುಂ.”

“ಹಾಗಾದರೆ ಬಾ ಹೇಳುತ್ತೀನಿ. ಆಗ ನಿಂಗೆ ನಾಟಕ ಚೆನ್ನಾಗಿ ಗೊತ್ತಾಗುತ್ತೆ” ಎಂದು ಸಂಪಿಗೆಯ ಮರದ ನೆರಳಿಗೆ ಕರೆದುಕೊಂಡು ಹೋದಳು. ಅಲ್ಲಿ ಕುಳಿತು ಕತೆಯನ್ನು ಕೇಳಿದೆ. ಅವಳು ಹೇಳುತ್ತ ಹೇಳುತ್ತ ನನಗೆ ವಿಶ್ವಾಮಿತ್ರನ ದುಷ್ಟತನವು ಸಹಿಸಲಾರದಂತಾಯಿತು. “ಅವನನ್ನು ಪೋಲೀಸಿಗೆ ಕೊಡಬೇಕಾಗಿತ್ತು” ಎಂದು ಗರ್ಜಿಸಿದೆ. ಅವಳು ನಕ್ಕು ಕತೆಯನ್ನು ಮುಂದುವರಿಸಿದಳು. ಶ್ಮಶಾನದಲ್ಲಿ ಹರಿಶ್ಚಂದ್ರನು ಚಂದ್ರಮತಿಯನ್ನು ತಡೆದಾಗ ನನ್ನ ಕಣ್ಣಿನಿಂದ ನೀರು ಹರಿದುಹೋಯಿತು. ಅವಳ ಕಂಠವೂ ತಡೆಯುತ್ತಿತ್ತು, ಕಣ್ಣು ಒದ್ದೆಯಾಗಿತ್ತು. ಕತೆಯು ಮುಗಿದಾಗ ಯಜಮಾನರ ಕೆಮ್ಮಿನ ಶಬ್ದವು ಕೇಳಿಸಿತು. ನಾವು ಒಳಕ್ಕೆ ಹೋದೆವು.

ನನಗೆ ಕೂದಲನ್ನು ಎಂದೋ ಆಗಲೇ ಕತ್ತರಿಸಿ ಕ್ರಾಪುಮಾಡಿಬಿಟ್ಟಿದ್ದರೂ ಅಮ್ಮ ಅಜ್ಜಿಯರ ತೀರ್ಮಾನದಂತೆ ಚೌಲದ ಶಾಸ್ತ್ರವು ವಿಜೃಂಭಣೆಯಿಂದ ನಡೆಯಿತು. ಹಿಂದಿನ ದಿನ ಗಂಗುವಿನ ಮನೆಗೆ ಹೋಗಿ ನನಗಾಗಲಿದ್ದ ಉತ್ಸವವನ್ನು ಸಂಭ್ರಮ

ದಿಂದ ಹೇಳಿಕೊಂಡಿದ್ದೆ. ಸಂಜೆ ಆರತಿಯ ಹೊತ್ತಿನಲ್ಲಿ ಬೆಳಕಿನಿಂದ ತುಳುಕುತ್ತಿದ್ದ ನಮ್ಮ ಹಜಾರವು ಹೆಂಗಸರು ಮಕ್ಕಳಿಂದ ಕಿಕ್ಕಿರಿದು ತುಂಬಿದ್ದಿತು. ಆದರೂ ಇನ್ನೂ ಜನರು ಬರುತ್ತಲೇ ಇದ್ದರು. ಅಮ್ಮನು ಎಲ್ಲರನ್ನೂ ಆದರದಿಂದ ಬರಮಾಡಿಕೊಂಡು ಯೋಗಕ್ಷೇಮವನ್ನು ವಿಚಾರಿಸಿ ಕುಳ್ಳಿರಿಸುತ್ತಿದ್ದಳು. ಹೊರಗೆ ವಾಲಗ, ತಪ್ಪಿದರೆ ಒಳಗಿನ ಹಾಡು ಮನೆಯಲ್ಲೆಲ್ಲಾ ಮೊರೆಯುತ್ತಿದ್ದಿತು. ಈ ಮಹಾ ಸಮಾರಂಭದ ಕೇಂದ್ರ ದೃಶ್ಯವಾಗಿ ನಾನು ಎರಡು ದೀಪಗಳ ಮಧ್ಯೆ ರತ್ನಗಂಬಳಿಯ ಹಸೆಯ ಮೇಲೆ ಹೊಳೆಯುತ್ತಿದ್ದೆ. ಕಲಾಪತ್ತಿನ ಪಂಚೆ, ಸರ್ಜು ಕೋಟು, ಕತ್ತನ್ನು ಜಗಿಯುವಷ್ಟು ಸರಗಳು, ಕ್ಷೌರಿಕನ ಅನಾಹುತವನ್ನು ಮುಚ್ಚಿದ ಜರಿಯ ಟೋಪಿ, ಹಣೆಯ ಕುಂಕುಮ ಇವುಗಳಲ್ಲಿ ನನ್ನನ್ನು ನಾನೇ ಗುರುತಿಸಲಾರದಂತೆ ಬದಲಾಯಿಸಿ ಹೋಗಿ ಪ್ರಕಾಶಿಸುತ್ತಿದ್ದೆ. ಆರತಿಯಾಯಿತು. ಅರಿಸಿನ ಕುಂಕುಮ, ಬಾಗಿನಗಳು ಭರಾಟೆಯಿಂದ ನಡೆದುವು. ಒಬ್ಬೊಬ್ಬರಾಗಿ, ಗುಂಪುಗುಂಪಾಗಿ ಜನರು ಹೊರಟರು. ಅಮ್ಮನು ಅವರನ್ನು ಸ್ವಾಗತಿಸಿದ ಆದರದಿಂದಲೇ ಬೀಳ್ಕೊಳ್ಳುತ್ತಲೂ ಎದ್ದಳು. ನನಗೆ ಸುಮ್ಮನೆ ಕುಳಿತುಕೊಂಡು ಏನು ಮಾಡಬೇಕೋ ತಿಳಿಯದಂತಾಗಿ, ಹೋಗುತ್ತಿದ್ದ ಜನರು ಬಾಗಿಲು ದಾಟುವುದನ್ನು ಕೊಂಚ ಉತ್ಸಾಹದಿಂದಲೇ ನೋಡುತ್ತಿದ್ದೆ.

"ಅಮ್ಮ, ಗಂಗು! ಗಂಗು ಬಂದಿದಾಳೆ" ನಾನು ಆವೇಶದಿಂದ ಕೂಗಿಕೊಂಡು ಹಸೆಯಿಂದ ಅರ್ಧ ಎದ್ದೆ. ಗಂಗುವು ಬಾಗಿಲಿನ ಹೊರಗೇ ನಿಂತು ನಸುನಗುತ್ತ ನನ್ನ ಕಡೆಗೆ ನೋಡುತ್ತಿದ್ದಳು.

"ಕೂತುಕೊಳ್ಳೊ, ಸಾಕು!" ಅಮ್ಮನು ನನ್ನ ಕಡೆಗೆ ತಿರಿಗಿ ಗದರಿಸಿದಳು. ನಾನು ಹಾಗೇ ಕುಕ್ಕರಿಸಿಕೊಂಡೆ. ಅಮ್ಮ ಗಂಗುವಿನ ಕಡೆಗೆ ನೋಡಲೇ ಇಲ್ಲ.

ನಾನು ಮತ್ತೊಮ್ಮೆ ಬಾಗಿಲಿನ ಕಡೆಗೆ ನೋಡಿದಾಗ ಗಂಗುವು ಅಲ್ಲಿರಲಿಲ್ಲ. ನನಗೆ ಅಳು ಬರುವ ಹಾಗಾಯಿತು. ಅಮ್ಮನು ಏನಾದರೂ ಅಂದಾಳೆಂದು ತಡೆದುಕೊಂಡೆ.

ಮಾರನೆಯ ದಿನ ನಾನು ಗಂಗುವಿನ ಮನೆಗೆ ಹೋಗಿದ್ದಾಗ ಎಂದಿನಂತೆ ಬರಮಾಡಿಕೊಂಡು ಕೂಡಲೆ ಕೋಣೆಯೊಳಕ್ಕೆ ಓಡಿಹೋಗಿ ಉಂಗುರವೊಂದನ್ನು ತಂದು ನನ್ನ ಬೆರಳಿಗಿಟ್ಟಳು. ಯಜಮಾನರಲ್ಲಿಗೆ ಕರೆದುಕೊಂಡು ಹೋಗಿ "ನೋಡಿ, ಈ ಪುಟ್ಟಾಣಿ ಬೆರಳಿಗೆ ಈ ಉಂಗರ ಎಷ್ಟು ಚೆನ್ನಾಗಿ ಒಪ್ಪುತ್ತೆ" ಎಂದು ಅವರಿಗೆ ನನ್ನ ಉಂಗುರದ ಬೆರಳನ್ನು ತೋರಿಸಿದಳು. ಅವರ ಕಣ್ಣೂ ಸಂತೋಷವನ್ನು ಸೂಚಿಸಿತು.

ನಾನು ಸ್ಕೂಲಿಗೆ ಸೇರಿದ ಮೇಲೆ ಹಿಂದಿನಂತೆ ನೆನೆಸಿಕೊಂಡಾಗ ಗಂಗುವಿನ ಮನೆಗೆ ಹೋಗುವುದು ಸಾಧ್ಯವಾಗಲಿಲ್ಲ. ಆರತಿಯ ದಿನದಿಂದ ಅವಳೂ ನಮ್ಮ

ಮನೆಗೆ ಬರುತ್ತಿರಲಿಲ್ಲ. ಹೀಗಿದ್ದು ಅವಳನ್ನು ಕಾಣದೆ ಕೆಲವು ದಿನಗಳು ಕಳೆಯು ತ್ತಿದ್ದುವು. ಇದು ನನಗೆ ದೊಡ್ಡ ವ್ಯಥೆಯಾಗಿತ್ತು. ಅನೇಕ ಬಾರಿ ಸ್ಕೂಲಿನಲ್ಲೂ ಅವಳ ಯೋಚನೆ ಬರುತ್ತಿತ್ತು. ಅವಳಲ್ಲಿಗೆ ಹೋಗಬೇಕೆನ್ನಿಸುತ್ತಿತ್ತು. ಒಂದು ದಿನ ಸ್ಲೇಟು ಪುಸ್ತಕಗಳನ್ನು ತೆಗೆದುಕೊಂಡು ಸ್ಕೂಲಿಗಾಗಿ ಹೊರಟವನು ಅವಳ ಮನೆಗೇ ಹೋಗಿಬಿಟ್ಟೆ. ನನ್ನನ್ನು ನೋಡಿ ಅವಳಿಗೆ ಆಶ್ಚರ್ಯವಾಯಿತು. "ಇದೇನು ರಂಗ ಸ್ಕೂಲು ಇಲ್ಲವೆ?" ಎಂದು ಕೇಳಿದಳು. ನಾನು "ಹೋಗೋದಿಲ್ಲ. ಇಲ್ಲೇ ಇರುತ್ತೀನಿ" ಅಂದೆ. ಅವಳು "ಹಾಗುಂಟೆ, ನನ್ನಪ್ಪ. ನಾಳೆ ನೀನೂ ಓದಿ ಬರೆದು ವಕೀಲರ ಹಾಗೆ ಆಗಬೇಕಲ್ಲ. ನಾನು ಅದನ್ನು ನೋಡಬೇಡವೆ? ಜಾ ಚಿನ್ನ. ಬಿಡುವಾದಾಗಲೆಲ್ಲ ಇಲ್ಲೇ ಬರುವೆಯಂತೆ" ಎಂದು, ನನ್ನನ್ನು ತಾನೇ ಸ್ಕೂಲಿಗೆ ಬಿಟ್ಟು ಬಂದಳು. ಅಂದಿನಿಂದ ಸ್ಕೂಲಿಗೆ ತಪ್ಪಿಸಿಕೊಳ್ಳುವ ಯೋಚನೆಯು ನನಗೆ ಬರಲಿಲ್ಲ. ರಜದ ದಿನಗಳಲ್ಲಿ ಅವಳಲ್ಲಿಗೆ ಹೋಗುತ್ತಿದ್ದೆ. ಸ್ಕೂಲಿನಿಂದ ಮನೆಗೆ ಹೋಗುವಾಗಲೂ ಒಮ್ಮೊಮ್ಮೆ ಅವಳ ಮನೆಯ ದಾರಿ ಹಿಡಿಯುತ್ತಿದ್ದೆ. ಈಗ ಆದರ ಉಪಚಾರ ಆಟ ಮಾತುಕತೆಗಳ ಮಧ್ಯೆ ಮಧ್ಯೆ ಅವಳು "ಎಲ್ಲಿ ಏನು ಕಲಿತಿದ್ದೀಯೆ? ಓದು ನೋಡೋಣ. ಅವರಿಗೆ ಬರೆದು ತೋರಿಸು" ಎಂದು ಪ್ರೋತ್ಸಾಹಿಸುತ್ತಿದ್ದಳು. ತಾನೂ ಸಹಾಯವಾಗುತ್ತಿದ್ದಳು. ನಾನು ಹೆಮ್ಮೆಯಿಂದ ನನ್ನ ಪಾಂಡಿತ್ಯವನ್ನು ಪ್ರದರ್ಶಿಸುತ್ತಿದ್ದೆ. ಅವಳು ಹಿಗ್ಗುತ್ತ ಹೊಗಳುತ್ತಿದ್ದಳು. ಹೀಗಿದ್ದರೂ ಅವಳ ಮನೆಗೆ ನನ್ನ ಭೇಟಿಯ ಅಂತರವು ಕ್ರಮೇಣ ದೊಡ್ಡದಾಗು ತ್ತಿತ್ತು. ದಸರಾ, ಕ್ರಿಸ್‌ಮಸ್, ಬೇಸಿಗೆ ಬಂದಾಗ ಹಿಂದಿನ ನಿರಾತಂಕದ ದಿನಗಳು ಹಿಂದಿರುಗುತ್ತಿದ್ದುವು.

ಊರಿಗೆ ಕೊಳಾಯಿ ಹಾಕಿದರು. ಅವಳ ಮನೆಗೂ ನಲ್ಲಿ ಬಂದಿತು. ಆದರಿಂದಾಚೆಗೆ ಆಗಾಗ ಸಂಜೆಯಲ್ಲಿ ನಾನು ಮರಳಿಗೆ ಹೋದರೂ ಅವಳು ಕಾಣು ತ್ತಿರಲಿಲ್ಲ. ನಾನೂ ಅತ್ತಕಡೆ ಹೋಗುವುದನ್ನೇ ಬಿಟ್ಟುಬಿಟ್ಟೆ.

ವರ್ಷಗಳು ಕಳೆದವು. ನಾನು ಲೋಅರ್‌ಸೆಕೆಂಡರಿಯನ್ನು ಮೊದಲನೆಯ ವರ್ಗದಲ್ಲಿ ಪಾಸುಮಾಡಿದೆ. ಅದನ್ನು ಗಂಗುವಿಗೆ ತಿಳಿಸಿದಾಗ ಅವಳ ಸಂತೋಷಕ್ಕೆ ಪಾರವೇ ಇರಲಿಲ್ಲ. ನನ್ನ ಗಲ್ಲವನ್ನು ಸವರಿ ಹಣೆಗೆ ನೆಟಗೆಮುರಿದು "ಚನ್ನಾಗಿ ಮುಂದೂ ಪಾಸುಮಾಡಪ್ಪ. ತಣ್ಣಗೆ ಬಾಳು" ಎಂದು ಹರಸಿದಳು. ನನ್ನನ್ನು ಎಳೆದುಕೊಂಡು ಹೋಗಿ ಯಜಮಾನರ ಮುಂದೆ ನಿಲ್ಲಿಸಿ "ನೋಡಿ ನಮ್ಮ ಹುಡುಗ ಫಸ್ಟ್‌ಕ್ಲಾಸ್ ಹೊಡೆದುಬಿಟ್ಟ" ಎಂದು ಹೆಮ್ಮೆಯಿಂದ ಹೇಳಿದಳು. ಅವರ ಕಣ್ಣು ಅರಳಿತು. ಇದರ ಪ್ರಯುಕ್ತ ನಮ್ಮ ಮನೆಯಲ್ಲಿ ಹೇಗೋ ಹಾಗೆ ಇವಳ ಮನೆ

ಯಲ್ಲಿಯೂ ಸಣ್ಣ ಹಬ್ಬವೇ ಆಗಿಹೋಯಿತು. ಈ ಸಂತೋಷದ ಹಿಂದೆಯೇ ವ್ಯಥೆಯೊಂದು ಬಂದಿತು. ನಾನು ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಶಿವಮೊಗ್ಗೆಗೆ ಹೋಗಬೇಕಾಗಿದ್ದ ಸಂದರ್ಭವು ಎರಡು ಮನೆಯಲ್ಲಿಯೂ ಚಿಂತೆಯನ್ನು ಹುಟ್ಟಿಸಿತು. ಗಂಗುವನ್ನು ಬೀಳ್ಕೊಳ್ಳುವಾಗ ನಾನು ಬಿಕ್ಕಳಿಸಿ ಅತ್ತುಬಿಟ್ಟೆ. ಅವಳು ಇದರ ಹಿಂದೆ ಕೆಲವು ದಿನಗಳಿಂದಲೇ ಸಪ್ಪೆಯಾಗಿದ್ದರೂ, ಈಗ ಮಾತ್ರ ತುಂಬಿದ ಕಣ್ಣೀರನ್ನು ತಡೆಗಟ್ಟುತ್ತ, ನಸುನಗುವನ್ನು ತೋರ್ಪಡಿಸುತ್ತ "ಎಲಾ ಹುಚ್ಚಪ್ಪ, ಇದಕ್ಕೆಲ್ಲ ಆಳುತ್ತಾರೇ? ಬೆಳಗಾದರೆ ದೊಡ್ಡ ರಜಗಳು ಬಂದೇ ಬರುತ್ತವೆ. ಆಗ ಬರುತ್ತೀ ತಾನೆ, ನಮ್ಮ ಮನೆಗೆ? ಇಲ್ಲ ಮರೆತೇಬಿಡುತ್ತೀಯೋ?" ಎಂದು ಹಾಸ್ಯಮಾಡುತ್ತ ನನಗೆ ಧೈರ್ಯವನ್ನು ತುಂಬಿದಳು. ನಾನು ಮಾತಾಡಲಾರದೆ ಹೊರಟುಹೋದೆ.

ರಜದಲ್ಲಿ ಬಂದಾಗಲೆಲ್ಲ ಮೊದಲನೆಯ ದಿನವೇ ಗಂಗುವಿನ ಮನೆಗೆ ತಪ್ಪದೆ ಹೋಗುತ್ತಿದ್ದೆ. ಅನಂತರ ಮತ್ತೆ ಊರನ್ನು ಬಿಡುವವರೆಗೂ ಅನೇಕಸಾರಿ ಭೇಟಿ ಕೊಡುತ್ತಿದ್ದೆ. ಆ ದಂಪತಿಗಳು ಎಂದಿನಂತೆಯೇ ಇರುತ್ತಿದ್ದರು. ಅದೇ ಕಿಟಿಕಿಯ ಬಳಿ ಕುರ್ಚಿ, ಅದರಮೇಲೆ ಶುಭ್ರವಸ್ತ್ರಗಳನ್ನು ಧರಿಸಿ ಹಾಗೆಯೇ ಕುಳಿತಿರುತ್ತಿದ್ದ ಯಜಮಾನರು, ಅವರ ಸುತ್ತಮುತ್ತ ಓಡಾಡಿಕೊಂಡು ಅವಳು, ಅದೇ ವಿಚಕ್ಷಣೆಯ ಮನೆ, ಅದೇ ಆದರ, ಎಲ್ಲ ಹಾಗೆಯೇ. ಅಲ್ಲಿಗೆ ಹೋದಾಗ ನಾನು ಬೆಳೆದಿರುವುದನ್ನೇ ಮರೆಯುತ್ತಿದ್ದೆ. ಆದರೆ ಇದನ್ನು ನೆನಪುಮಾಡುವುದಕ್ಕೋ ಎನ್ನುವಂತೆ ಈಚೆಗೆ ಯಜಮಾನರ ತಲೆಗೂದಲು ಗಡ್ಡಗಳಲ್ಲಿ ನರೆಗೂದಲು ಕಾಣಿಸುತ್ತಿದ್ದುವು; ಗಂಗುವು ನನ್ನನ್ನು 'ರಂಗಪ್ಪ' ಎನ್ನುತ್ತಿದ್ದಳು, ಅಷ್ಟೆ.

ಯಜಮಾನರ ಹುಟ್ಟಿದ ದಿನವು ಬೇಸಿಗೆಯ ದಿನಗಳಲ್ಲಿ ಬರುತ್ತಿದ್ದುದರಿಂದ ಅವೂ ನನಗೆ ತಪ್ಪಲಿಲ್ಲ. ಐದನೆಯ ಫಾರಂನಲ್ಲಿ ಇದ್ದಾಗಲೂ ಹೋಗಿದ್ದೆ. ಪದ್ಧತಿಯಂತೆ ಅವಳೇ ಬಂದು ಬಾಗಿಲನ್ನು ತೆಗೆಯುತ್ತ "ಬಾಪ್ಪ ಬಂದೆಯಲ್ಲ" ಎಂದಳು. ಅವಳಾಗಲೇ ಜಡೆ ಹೆಣೆದು ಕುಂಕುಮವಿಟ್ಟು ಹೂಮುಡಿದು ಕೇಸರಿ ಸೀರೆ ನಿಂಬೆ ರೌಕೆಯನ್ನು ಹಾಕಿಕೊಂಡು ಹೆಚ್ಚು ಕಡಮೆ ಸಿದ್ಧವಾಗಿದ್ದಳು. ಇನ್ನೂ ಸರ, ಚಿನ್ನದ ಬಳೆ, ವಜ್ರದ ಬೆಂಡೋಲೆಗಳು ಬಾಕಿ ಇದ್ದುವು. ನಾನು ಮೊದಲು ಯಜಮಾನರಲ್ಲಿಗೆ ಹೋಗಿ ಕೈಮುಗಿದೆ. ಅವರು ಹಬ್ಬಕ್ಕೆ ತಕ್ಕಂತೆ ಇದ್ದರು. ಅವರ ಶುಭ್ರವಾದ ಶಲ್ಯದಲ್ಲಿ ಒಂದು ಅಡ್ಡಹೊಲಿಗೆಯು ಮಾತ್ರ ಕಾಣಿಸಿತು. ಗಂಗುವು ಒಳಗಿನಿಂದ ತಿಂಡಿ ಕೀರುಗಳನ್ನು ಇಲ್ಲಿಗೇ ತಂದುಕೊಟ್ಟಳು. ನಾನು "ಅಲ್ಲಿಗೇ ಬರುತ್ತಿದ್ದೆನಲ್ಲ" ಎಂದೆ. ಅವಳು "ಉಂಟೇಪ್ಪ, ಈಗ ದೊಡ್ಡ ಮನುಷ್ಯನಾಗುತ್ತಿದ್ದೀಯೆ. ಹಿಂದಿನ ಅಡಿಗೆಯ ಮನೆಯ ಪಾರುಪತ್ಯವನ್ನು ಕಳೆದುಕೊಂಡುಬಿಟ್ಟೆ" ಎಂದು ನಗುತ್ತ

ಕೋಣೆಗೆ ಹೋದಳು. ಒಡವೆಗಳನ್ನು ಇಟ್ಟುಕೊಂಡು ಬರುವಳೆಂದು ನಾನು ತಿಳಿದು ಕೊಂಡೆ. ಆದರೆ ಮರುಕ್ಷಣದಲ್ಲಿ ಅವಳು ವೀಣೆಯನ್ನು ತೆಗೆದುಕೊಂಡೇ ಬಂದು ಬಿಟ್ಟಳು. 'ಬಾಕಿ ಅಲಂಕಾರವೆಲ್ಲಿ?' ಎಂಬ ಪ್ರಶ್ನೆ ನನ್ನ ತುದಿನಾಲಿಗೆಯವರೆಗೂ ಬಂದಿತು. ಆದರೆ ಮುಂದೆ ಹಾಯಲಿಲ್ಲ. ಹೋದವರ್ಷವೇ ಉಂಗುರ ಸರಗಳು ಇಲ್ಲದಿದ್ದುದು ಈಗ ನೆನಪಿಗೆ ಬಂದಿತು. ಸುಮ್ಮನಿದ್ದೆ. ವೀಣೆಯ ಗಾನವು ಎಂದಿನಂತೆಯೇ ಮಧುರವಾಗಿತ್ತು. ಯಾಕೆ, ಇನ್ನೂ ಪಕ್ವವಾಗಿ ಹಿಂದಿನ ವರ್ಷಗಳಿಗಿಂತ ಒಂದುಕೈ ಮೇಲಾಗಿದ್ದಿತೆಂದೇ ಹೇಳಬೇಕು. ಆದರೂ ನನ್ನ ಗಮನವು ಈ ಬಾರಿ ಅದರ ಮೇಲೆಯೇ ಪೂರ್ತಿಯಾಗಿ ನಿಲ್ಲಲಿಲ್ಲ. ಆಗಾಗ ಅವಳ ಬರಿಯ ಕೊರಳು, ಮುತ್ತಿನೋಲೆಯ ಕಿವಿ, ಗಾಜಿನ ಬಳೆಯ ಕೈ, ಉಂಗುರವಿಲ್ಲದ ಬೆರಳು, ಯಜಮಾನರ ಶಲ್ಯದ ಅಡ್ಡಹೊಲಿಗೆ ಇವುಗಳ ಮೇಲೆ ಹರಿದಾಡುತ್ತಿತ್ತು. ಸಂಗೀತವು ಮುಗಿದ ಮೇಲೆ ಗಂಗುವು "ರಂಗಪ್ಪ, ನಿಂಗೆ ವೀಣೆ ಕಲಿಸುವ ಆಸೆಯೊಂದು ಪೂರೈಸಲಿಲ್ಲ" ಎಂದಳು. ನಾನು "ಈ ಓದುಗೀದೆಲ್ಲ ಕಳೆದುಹೋಗಲಿ. ನಾನೇ ಬಂದು ಕಲಿಯುತ್ತೀನಿ" ಎಂದು ಹೇಳಿದೆ. "ಅದು ಯಾವಾಗಲೋ ಏನೋ ನೋಡಿಕೊಳ್ಳೋಣ. ಅಂತೂ ನಿನ್ನನ್ನು ಆಗ ಈಗ ನೋಡುತ್ತಿರುತ್ತೀನಲ್ಲ. ಅಷ್ಟೇ ಸಾಕು" ಎಂದು ನಿಟ್ಟುಸಿರನ್ನು ಬಿಟ್ಟಳು.

ಆ ದಿನ ಮನೆಗೆ ಹಿಂದಿರುಗಿದಾಗ ನಾನು ಕೊಂಚ ಸಪ್ಪೆಯಾಗಿಯೇ ಇದ್ದೆ. ನನ್ನ ಎದೆಯು ಭಾರವಾಗಿತ್ತು. ಅಮ್ಮನು ಬಾಗಿಲಿನಲ್ಲಿ ನಿಂತಿದ್ದಳು. ನಾನು ಬಾಗಿಲನ್ನು ದಾಟುವಾಗ ಅವಳು "ಯಾಕಪ್ಪ, ಮಧ್ಯಾಹ್ನ ತಿಂಡಿಗೇ ಬರಲಿಲ್ಲ?" ಎಂದು ಕೇಳಿದಳು.

"ಗಂಗು ಮನೇಲಿ ಆಯ್ತು . . ." ಅಲ್ಲೇ ನಿಂತು ಹೇಳಿದೆ.

"ಅಲ್ಲಿಗೇ ಹೋಗಿದ್ದೆಯಾ?"

"ಹುಂ. ಅವಳ ಯಜಮಾನರ ಹುಟ್ಟಿದ ಹಬ್ಬ. . . ."

"ಯಜಮಾನರದ್ದೆ?"

"ಅಮ್ಮ, ಅವರು ಹಿಂದಿನಷ್ಟು ಅನುಕೂಲವಾಗಿದ್ದಹಾಗಿಲ್ಲ ಅಂತ ಕಾಣುತ್ತೆ ಪಾಪ. . . ."

"ಅವರು ಅವರನ್ನ ಚೆನ್ನಾಗಿ ನೋಡಿಕೋಬಲ್ಲರು. ನಮಗೆ ಯಾಕೆ ಅವರಿವರ ಪಾಡು."

ನಾನು ಸಾಮಾನ್ಯವಾಗಿ ಅಮ್ಮನೊಡನೆ ಗಂಗುವಿನ ಮನೆಯ ವಿಷಯವನ್ನು ಹೇಳುತ್ತಲೇ ಇರಲಿಲ್ಲ. ಅವಳಿಗೆ ಅದು ಇಷ್ಟವಿಲ್ಲವೆಂದು ನನಗೆ ಎಂದೋ ಗೊತ್ತಾ

ಗಿತ್ತು. ಆದರೂ ಈಗ ಗಂಗುವಿನ ವಿಷಯವು ಬಂದುದರಿಂದಲೋ ಅಥವ ನನ್ನ ಎದೆಯು ಕೊಂಚ ಹಗುರವಾಗಲೆಂದೋ ಹೇಳಿಕೊಂಡೆ. ತಪ್ಪಾಯಿತೆಂದು ಈಗ ಹೊಳೆಯಿತು. ಒಳಗೆ ಹೋದೆ.

ರಾತ್ರಿ ಊಟವು ಮುಗಿಯುತ್ತಿದ್ದಾಗ ತಂದೆಯವರು "ರಂಗ, ಈಗ ನೀನು ಬೆಳೆದಿದ್ದೀಯೆ. ತಿಳಿವಳಿಕೆಯೂ ಬಂದಿದೆ . . ." ಎಂದು ತಡೆದರು.

ಇದು ಏತಕ್ಕೆ ಪೀಠಿಕೆಯೋ ನನಗೆ ತಿಳಿಯಲಿಲ್ಲ. ಸುಮ್ಮನಿದ್ದೆ.

"ಹಿಂದೆಲ್ಲ ಅಂದರೆ ಮಗು; ಏನಾದರೂ ಮಾಡಲಿ ಎಲ್ಲಾದರೂ ಹೋಗಲಿ ಪರವಾಗಿಲ್ಲ ಅಂತ ಇದ್ದಿದ್ದಾಯ್ತು, ಸರಿಯೇ. ಈಗ ಹಾಗಿರೋದಕ್ಕೆ ಆಗುತ್ತೇ? ನೀನೇ ತಿಳಿದುಕೋಬೇಕಪ್ಪ, ಎಲ್ಲೆಲ್ಲಿಗೆ ಹೋಗಬಹುದು ಹೇಗೆ. . ."

"ನಾನು ಎಲ್ಲಿಗೂ ಹೋಗಲಿಲ್ಲವಲ್ಲ. ಗಂಗೂ ಮನೆಗೆ ಮಾತ್ರ. . ."

"ಅದನ್ನೇ ನಾನೂ ಹೇಳುತ್ತ ಇರೋದು. ತಾನಾಗೇ ಬಿಟ್ಟೀತು ಅಂತ ತಿಳಿದಿದ್ದೆ. ಅದು ನಮಗೆ ಇನ್ನು ಮರ್ಯಾದೆಯಲ್ಲ" ತಂದೆಯವರು ಕಠಿಣವಾಗಿ ಹೇಳಿ ಎದ್ದು ಹೋದರು.

ನನಗೆ ಅವಮಾನವಾದಂತಾಯಿತು. ಅನ್ಯಾಯವಾದಂತೆಯೂ ಕಂಡಿತು. ಸಿಟ್ಟೂ ಬಂದಿತು. ಆದರೆ ನನಗೆ ಇದಿರಾಡುವ ಧೈರ್ಯವಿರಲಿಲ್ಲ. ಕೈತೊಳೆದು ಕೋಣೆಗೆ ಹೋಗಿ ತಲೆಯ ಮೇಲೆ ಕೈಯಿಟ್ಟುಕೊಂಡು ಸುಮ್ಮನೆ ಕುಳಿತೆ. ಗಂಗುವಿನ ಮನೆಗೆ ಇನ್ನು ಹೋಗಲಾಗದೆಂಬುದು ನನ್ನ ಎದೆಯನ್ನು ಹಿಂಡುತ್ತಿತ್ತು. ತಂದೆಯವರ ಇಷ್ಟವನ್ನು ವಿರೋಧಿಸುವುದು ನನಗೆ ಸಾಧ್ಯವಿರಲಿಲ್ಲ. ರಜದ ಬಾಕಿಯ ದಿನಗಳನ್ನು ಈ ಮನಸ್ಸಿನ ಹೋರಾಟದಲ್ಲಿ ಕಳೆದೆ. ಸ್ಕೂಲು ತೆರೆದದ್ದು ನನಗೊಂದು ಸಮಾಧಾನವಾಯಿತು.

ಮುಂದಿನ ದಸರಾಕ್ಕೆ ಊರಿಗೆ ಬಂದಾಗಲೂ ಗಂಗುವಿನ ಮನೆಗೆ ಹೋಗಲಿಲ್ಲ. ಆದರೆ ಒಂದು ದಿನ ಪೇಟೆಯಲ್ಲಿ ನನಗೆ ಅವಳ ಭೇಟಿಯಾಯಿತು. ಆಗ ಅವಳು "ಏನು ರಂಗಪ್ಪ, ರಜ ಬಂದರೂ ಮನೆಯ ಕಡೆ ಬರಲೇ ಇಲ್ಲವಲ್ಲಪ್ಪ? ನಮ್ಮನ್ನು ಮರೆತುಬಿಡುತ್ತಿದೀಯಾ?" ಎಂದು ಖಿನ್ನಳಾಗಿದ್ದರೂ ನಸುನಗುತ್ತಲೇ ಕೇಳಿದಳು.

"ಇಲ್ಲ. ಹಾಗೆಲ್ಲಾದರೂ ಉಂಟೆ? ಇದು ದೊಡ್ಡ ಪರೀಕ್ಷೆ ವರ್ಷ. ಬಹಳ ಓದೋದಿದೆ. ಅಷ್ಟೊಂದು ಪುರುಸೊತ್ತಿಲ್ಲ" ನಾನೂ ನಸುನಕ್ಕೆ. ಆದರೆ ನನ್ನ ಮಾತುಗಳು ನನಗೇ ಅರ್ಥವಿಲ್ಲದಂತೆ ಕಂಡವು; ನನ್ನ ನಗು ಕೃತಕವಾಗಿ ತೋರಿತು.

"ಹೋಗಲಿ. ಶುಕ್ರವಾರವಾದರೂ ಬರುತ್ತೀಯ? ನಮ್ಮ ವರ್ಷದ ಹಬ್ಬ, ಗೊತ್ತಿದೆಯಲ್ಲ ನಿಂಗೆ."

"ಹುಂ. ಹುಂ." ನನಗೆ ಚೆನ್ನಾಗಿ ಗೊತ್ತಿದ್ದಿತು.

"ಅವರಿಗೆ ಇತ್ತೀಚೆಗೆ ಅಷ್ಟೊಂದು ಮೈಯಲ್ಲಿ ಚೆನ್ನಾಗಿಲ್ಲ. . ."

"ನಿಜವಾಗಿ ?" ನನಗೆ ನಿಜವಾಗಿಯೂ ಆತಂಕವಾಯಿತು.

"ಹುಂಕಣಪ್ಪ. ಔಷಧಿಗೋಸ್ಕರವೇ ಹೋಗುತ್ತಿದೀನಿ," ಸೆರಗಿನೊಳಗಿದ್ದ ಕೈಯಿನ ಸೀಸೆಯನ್ನು ತೋರಿಸಿದಳು.

"ನಂಗೆ ಗೊತ್ತೇ ಇರಲಿಲ್ಲ" ನನಗೆ ಹೇಗೆ ತಾನೆ ಗೊತ್ತಾಗಬೇಕು ?

"ಏನು ಗಾಬರಿಯಿಲ್ಲ. ಸಾಮಾನ್ಯ. ಎಲ್ಲ ಸರಿಯಾಗುತ್ತೆ. ಅಂತು ಮರೀದೆ ಬರುತ್ತೀಯಾಪ್ಪ ? ನಿನ್ನ ಕಂಡರೆ ಅವರಿಗೆ ಎಷ್ಟೋ ಸಂತೋಷವಾಗುತ್ತೆ" ಅವಳು ದೀನಸ್ವರದಿಂದ ಬೇಡಿಕೊಂಡಳು.

"ಆಗಲಿ, ಬರುತ್ತೀನಿ" ಆ ಗಳಿಗೆಯಲ್ಲಿ ಮಾತುಕೊಟ್ಟೆ.

ಇದರಿಂದ ಅವಳಿಗೆ ಬಹಳ ಸಮಾಧಾನವಾದಂತೆ ತೋರಿತು. ಅವಳ ಹಿಂದಿನ ಗೆಲುವೂ ಕೊಂಚ ಕಾಣಿಸಿಕೊಂಡಿತು. ನನಗಾದರೋ ನನ್ನಲ್ಲೇ ಅಸಮಾಧಾನ ವಾಯಿತು. ನನಗೆ ನಾನೇ ತಪ್ಪಿತಸ್ಥನಂತೆ ಕಂಡೆ. ಇನ್ನಷ್ಟು ಮಾತುಗಳನ್ನಾಡಿ ನಾವು ಬೇರೆಯಾದೆವು.

ಆ ವರ್ಷ ದಸರಾ ಬಂದಿದ್ದರೂ ಮಳೆಯು ಜೋರಾಗಿ ಹುಯ್ಯುತ್ತಲೇ ಇದ್ದಿತು. ತುಂಗೆಯು ದಡವನ್ನು ಮೀರಿ ಹುಚ್ಚು ಹೊಳೆಯಾಗಿ ಹರಿಯುತ್ತಿದ್ದಳು ; ಕಾಫಿಯ ಬಣ್ಣದ ಪ್ರವಾಹದಿಂದ ಮೊರೆಯುತ್ತಿದ್ದಳು. ದೊಡ್ಡ ದೊಡ್ಡ ಮರಗಳನ್ನು ಬೇರುಕಿತ್ತು ವೇಗದಿಂದ ಸಾಗಿಸುತ್ತಿದ್ದಳು. ಎಷ್ಟೋ ಹೊಲ ಹಳ್ಳಿಗಳನ್ನು ಕೊಚ್ಚಿ ಮುಳುಗಿಸಿ ನಷ್ಟಪಡಿಸಿದ್ದಳು. ಅವಳ ದಡದ ಪ್ರದೇಶಗಳಲ್ಲೆಲ್ಲ ಹಾಹಾಕಾರವೆದ್ದಿ ದ್ದಿತು. ಇಷ್ಟಾದರೂ ಈ ಕರಾಳಿಯು ಶಾಂತವಾಗುವುದರ ಸುಳಿವೇ ಕಾಣುತ್ತಿರಲಿಲ್ಲ. ಅದಕ್ಕೆ ಪ್ರತಿಯಾಗಿ ಅವಳ ಆರ್ಭಟವು ಇನ್ನೂ ಹೆಚ್ಚುತ್ತಿತ್ತು. ಇಂತಹ ಅಪಾಯದ ಸನ್ನಿವೇಶಗಳನ್ನು ಮನಸ್ಸಿಗೆ ತಂದುಕೊಂಡೇ ದಡದ ಸಾಲಿನ ನಮ್ಮ ಮನೆಗಳು ಎತ್ತರ ಮಟ್ಟದಲ್ಲಿ ಕಟ್ಟಲ್ಪಟ್ಟಿದ್ದುವು. ಹಾಗೂ ನೀರು ನಮ್ಮ ಹಿಂದಿನ ಮೆಟ್ಟಲುಗಳಲ್ಲಿ ಎರಡನ್ನಾಗಲೇ ಮುಳುಗಿಸಿಬಿಟ್ಟಿದ್ದಿತು. ಇನ್ನು ಬಾಕಿ ಇದ್ದ ನಾಲ್ಕೂ ಕ್ರಮೇಣ ಮುಳುಗಿಹೋಗುವ ಭಯವಿದ್ದಿತು. ನಾರಾಯಣಭಟ್ಟರ ಮನೆಯ ಒಳಕ್ಕಾಗಲೇ ನೀರು ನುಗ್ಗಿದ್ದಿತು. ಶೇಷಶಾಸ್ತ್ರಿಗಳ ಮನೆಯ ಅರ್ಧಭಾಗವು ಬಿದ್ದೇಹೋಗಿದ್ದಿತು. ನರಸಿಂಹಪಂಡಿತರು ಮನೆಯನ್ನು ನದಿಗೆ ಒಪ್ಪಿಸಿ ಬೇರೆಯ ಮನೆಯೊಂದಕ್ಕೆ ಬದಲಾ ಯಿಸಿಕೊಂಡಿದ್ದರು. ರಾಮಾಜೋಯಿಸರಿಗೂ ಅನರ್ಥಕ್ಕೂ ಎರಡೇ ಮೆಟ್ಟಲುಗಳು ಬಾಕಿಯಿದ್ದುವು. ನಮ್ಮ ಮನೆಯಲ್ಲೂ ಎಲ್ಲರೂ ಭೀತರಾಗಿದ್ದರು.

ಇಂತಹ ವಿಷಮಸಂದರ್ಭದಲ್ಲಿ ಏನು ಮಾಡಬೇಕು? ನದಿ ಇಳಿಯುವುದೆಂಬ ನಮ್ಮ ಕುಟುಕು ನಿರೀಕ್ಷೆಯು ನೀರುಪಾಲಾಗಿದ್ದಿತು. ಕ್ಷಣಕಾಲದಲ್ಲಿ ಸಾಮಾನು ಗಳನ್ನು ಸಾಗಿಸಿ ಮನೆಯನ್ನು ಬಿಡುವ ಏರ್ಪಾಡೂ ಸಿದ್ಧವಾಗಿದ್ದಿತು. ಇಂತಹ ನಿರಾಸೆಯಲ್ಲೂ ಜನರಿಗೆ ಬಹುಶಃ ಈಗ ಹೊಳೆ ಏರುವ ರಭಸವು ಕಡಿಮೆಯಾಗ ಬಹುದು. ಇನ್ನೊಂದು ಗಳಿಗೆಯಲ್ಲಿ ಇಳಿತರಹಕ್ಕೆ ಬರಬಹುದು ಎಂಬ ಆಸೆಯು ಹೋಗಿರಲಿಲ್ಲ. ಅಲ್ಲದೆ ಇಂತಹ ಪ್ರಕೃತಿಯ ಇದಿರಿನಲ್ಲಿ ಎಂತೆಂತಹ ನಂಬಿಕೆಗೂ ಪ್ರಾಶಸ್ತ್ಯ ಬರುತ್ತದೆ. ಮಾನವನಿಗೆ ಮೀರಿದಾಗ ದೇವರು ತಾನೆ ಗತಿ? ಹುಂ, ಭಜನೆ ಗಳೂ, ಜಪಗಳೂ, ಪೂಜೆಗಳೂ, ಶಾಂತಿಗಳೂ ಲೆಕ್ಕವಿಲ್ಲದಷ್ಟು ನಡೆಯುತ್ತಿದ್ದುವು. ಇಂತಹ ಕಾರ್ಯಕ್ರಮಗಳು ಹೆಚ್ಚಾಗಿ ಜೋಯಿಸರ ಮನೆಯಲ್ಲೇ ನೆರವೇರುತ್ತಿದ್ದುವು. ಅಲ್ಲಿ ಬೀದಿಯ ಮಹನೀಯರು ಸೇರಿ ಸಹಾಯವಾಗುತ್ತಿದ್ದರು. ವಿಷಯದ ವೈದಿಕ ಲೌಕಿಕ ಭಾಗಗಳನ್ನು ಚರ್ಚಿಸುತ್ತಿದ್ದರು. ಇವಕ್ಕೊಂದಕ್ಕೂ ತುಂಗೆಯು ಉಪಶಮನ ವಾಗದಂತಿದ್ದಾಗ ಜೋಯಿಸರು ಕಡೆಯದಾಗಿ ಒಂದು ವಿಧಿಯನ್ನು ಸೂಚಿಸುತ್ತ ಹೊಳೆಗೆ ಪತಿವ್ರತೆಯ ಸೊಂಕಾದರೆ ಇಳಿಯಬಹುದೆಂದೂ, ಹಿಂದೆ ಅವರ ಮುತ್ತಾತನ ಕಾಲದಲ್ಲಿ ಇಂತಹ ಪರಿಸ್ಥಿತಿಯಲ್ಲಿ ಅದು ಪರಿಣಾಮಕಾರಿಯಾಯಿತೆಂದು ತಾವು ಕೇಳಿದ್ದರೆಂದೂ ಹೇಳಿದರು. ಮತ್ತೆ ಅದೇ ವಿಧಿಯನ್ನು ವಿವರಿಸುತ್ತ "ಪತಿವ್ರತೆಯು ಗಂಡಿನ ತಾಯಾಗಿರಬೇಕು. ಅವಳು ದಿನವೆಲ್ಲ ಉಪವಾಸವಿದ್ದು ಶುದ್ಧ ನಿಯಮ ಗಳನ್ನೆಲ್ಲ ಅನುಸರಿಸಿ ಲಕ್ಷಣವಾಗಿ ಬಂದು ನದಿಯನ್ನು ಪೂಜಿಸಿ ಮಂಗಳಾರತಿ ಮಾಡಿ ಮೂರು ಬೊಗಸೆ ನೀರನ್ನು ತೆಗೆದುಹಾಕಿ ಹೊಳೆಯನ್ನು ಇಳಿಯುವಂತೆ ಪ್ರಾರ್ಥಿಸ ಬೇಕು" ಎಂದು ತಿಳಿಸಿದರು.

ಈ ಸಮಾಚಾರವು ನಮ್ಮ ಬೀದಿಯಲ್ಲೆಲ್ಲ ಕೋಲಾಹಲವನ್ನುಂಟುಮಾಡಿತು. ಗಂಡಸರ ಪೈಕಿ ಕೆಲವರು ಈ ಸೂಚನೆಯಲ್ಲಿ ಅಪನಂಬಿಕೆಯನ್ನು ತೋರಿಸಿದರು. ಇವರಲ್ಲಿ ತಂದೆಯವರೂ ಒಬ್ಬರು. ಇನ್ನು ಕೆಲವರು ಅಪಹಾಸ್ಯವನ್ನೇ ಮಾಡಿದರು. ಇವರಲ್ಲಿ ನಾನೂ ಒಬ್ಬ. ಬಾಕಿಯವರಿಗೆ ಪತಿವ್ರತೆಯನ್ನು ಎಲ್ಲಿಂದ ತರಬೇಕೆಂದು ತೋಚಲಿಲ್ಲ. ಗಂಡನ್ನು ಹೆತ್ತ ಪ್ರತಿ ಹೆಂಗಸೂ ತನಗೆಲ್ಲಿ ಕರೆಯು ಬಂದುಬಿಡುವುದೋ ಎಂದು ಕಳವಳಿಸುತ್ತಿದ್ದಳು. ಇತರ ಹೆಂಗಸರು ಧೈರ್ಯದಿಂದ ಧಾರಾಳವಾಗಿ ಅವರಿವರ ಹೆಸರನ್ನು ಸೂಚಿಸುತ್ತಿದ್ದರು. ಅಂತೂ ಗುರುವಾರ ಮಧ್ಯಾಹ್ನ ಎಲ್ಲಿಲ್ಲೂ ಆಯ್ಕೆಯ ಮೇಲೆ ಚರ್ಚೆಯಾಗಿ ಕಡೆಗೆ ರಾಮಾಜೋಯಿಸರ ಹೆಂಡತಿ ಪಾರ್ವತಮ್ಮನವರೇ ಸರ್ವಾನುಮತದಿಂದ ಆರಿಸಲ್ಪಟ್ಟರು. ಪಾರ್ವತಮ್ಮನವರು ಅರವತ್ತೈದು ವರ್ಷದ ಮುಪ್ಪಿನ ಮುತ್ತೈದೆ. ಮುತ್ತಿನಂತಹ ಮೂರು ಗಂಡುಮಕ್ಕಳ ತಾಯಿ. ಅವರಿಗಿಂತ

ಹಿರಿಯರಾದ ನಮ್ಮ ಅಜ್ಜಿ ಅವರ ವಿಷಯವಾಗಿ "ಅವಳು ನನ್ನ ಕಣ್ಣುಮುಂದಿನ ಹುಡುಗಿ. ಮೊದಲಿಂದಲೂ ವಯಸ್ಸಿಗೆ ತಕ್ಕ ಮಡಿ ಹುಡಿ, ಪೂಜೆ ಪುನಸ್ಕಾರ, ವ್ರತ ಕತೆ, ಆಚಾರ ನೇಮ ಯಾವುದೊಂದನ್ನೂ ಚಾಚೂ ಬಿಟ್ಟೋಳಲ್ಲ. ಗಂಡ ಬೈದರೂ ಅಂದರೂ ಎದುರಾಡಿದೋಳಲ್ಲ. ಹೊಡೆದರೂ ಸೈರಿಸಿಕೊಂಡು ಸುಮ್ಮಸಿರುತ್ತಿದ್ದಳು. ಅವರಲ್ಲಿ ಅಷ್ಟೊಂದು ಭಯ ಭಕ್ತಿ. ಅವಳಿಗಿಂತ ಸರಿಯಾದೋರು ಯಾರಿದಾರೆ—ಇಲ್ಲಿ?" ಎಂದು ಪ್ರಶಂಸಿಸಿದರು. ಪಾರ್ವತಮ್ಮನವರು "ಏನೋ ನೋಡಿ. ನಾನಂತೂ ಪತಿವ್ರತೆ ಅಂತ ಹೇಳಿಕೊಳ್ಳೋದಿಲ್ಲ. ನಂಗೆ ಅಂಥಾ ಪುಣ್ಯವೆಲ್ಲಿ? ಹೇಗೂ ನಾನೇ ಪೂಜೆಮಾಡಬೇಕು ಅಂದರೆ ಮಾಡುತ್ತೀನಿ. ಆ ಮಹಾತಾಯಿ ತುಂಗೆ ಒಪ್ಪಿಕೊಂಡರೆ ಒಪ್ಪಿಕೊಳ್ಳಲಿ" ಎಂದು ಸಹಜವಾದ ನಮ್ರತೆಯಿಂದ ಸಮ್ಮತಿಸಿದರು.

ಶುಕ್ರವಾರ ಬಂದಿತು. ಗಂಗುವಿನ ಬೇಡಿಕೆಯೂ, ಯಜಮಾನರ ಅಸ್ವಸ್ಥತೆಯೂ ಅವಳು ಆಡಿದ ಮಾತೂ ನೆನಪಿಗೆ ಬಂದುವು; ಬಾಧಿಸಿದುವು. ಆದರೆ ನಾನು ಹೋಗಲಿಲ್ಲ.

ಆ ಸಂಜೆ ನದಿಯು ಇನ್ನೂ ಅರ್ಧಮೆಟ್ಟಿಲು ಮೇಲೇರಿದ್ದಿತು. ಇನ್ನೂ ಹತ್ತುತ್ತಿದ್ದಿತು. ದಡದ ಮೇಲೆ ಜನರು ಸಾಲಾಗಿ ಸೇರಿದ್ದರು. ನಮ್ಮ ಮನೆಯ ಸಂದಿಯೂ ಕಿಕ್ಕಿರಿದು ತುಂಬಿತ್ತು. ರಾಮಾಜೋಯಿಸರ ಮನೆಯ ಒಳಗೆ ಹೊರಗೆ ಸುತ್ತುಮುತ್ತ ಎಲ್ಲ ಕಡೆಯಲ್ಲಿಯೂ ನಮ್ಮ ಬೀದಿಯ ಜನರು ನೆರೆದುನಿಂತಿದ್ದರು. ಕುತೂಹಲದ ಗುಜುಗುಜು ನದಿಯ ಮೊರೆತದ ಜೊತೆಗೆ ಸೇರಿದ್ದಿತು. ಆರು ಗಂಟೆಯ ಹೊತ್ತಿಗೆ ಭಟ್ಟರ ಹೆಂಡತಿಯು ಪೂಜಾಸಾಮಗ್ರಿಗಳನ್ನು ಜೋಯಿಸರ ಮನೆಯಿಂದ ಹೊರಗೆ ತಂದು ಮೇಲುಮೆಟ್ಟಿಲಿನ ಮೇಲಿಟ್ಟು ನೀಲಾಂಜನಗಳನ್ನು ಹತ್ತಿಸಿ ಪೂಜೆಗೆ ಎಲ್ಲವನ್ನೂ ಅಣಿಮಾಡಿದರು. ಜೋಯಿಸರೂ ಬಂದು ಹೊಸಿಲಿನ ಬಳಿಯಲ್ಲಿ ಕುಳಿತುಕೊಂಡರು. ಕೆಲವು ನಿಮಿಷಗಳಲ್ಲಿ ಪಾರ್ವತಮ್ಮನವರೂ ಮುಪ್ಪಿನ ಮುತ್ತೈದೆಯ ಲಕ್ಷಣ ಸೌಜನ್ಯಗಳಿಂದ ಹೊರಗೆ ಬಂದು ಕುಳಿತರು. ಜನರೆಲ್ಲ ಸುಮ್ಮನಾಗಿ ಇತ್ತಕಡೆಯೇ ನೋಡುತ್ತಿದ್ದರು. ಜೋಯಿಸರ ಮಂತ್ರಪಠನಕ್ಕೆ ಅನುಸಾರವಾಗಿ ಪೂಜೆಯು ಸಾಗಿತು. ಮಂಗಳಾರತಿಯ ಹೊತ್ತಿನಲ್ಲಿ ಹಲವು ಕಂಠಗಳಿಂದ ಮಂತ್ರಘೋಷಣೆಯಾಗುತ್ತಿತ್ತು. ಪೂಜೆಯು ಮುಗಿದ ಮೇಲೆ ಹೆಂಗಸರು ಹಾಡುಗಳನ್ನು ಹೇಳಿದರು. ಈಗ ಪಾರ್ವತಮ್ಮನವರು ಒಂದು ಮೆಟ್ಟಿಲನ್ನಿಳಿದು ವಿಧಿಯಪ್ರಕಾರ ಮೂರು ಬೊಗಸೆಯ ನೀರನ್ನು ಎತ್ತಿಹಾಕುತ್ತ "ಮಹಾತಾಯಿ ತುಂಗ, ನಿನ್ನ ಕೋಪ ಇಳಿಸಮ್ಮ. ನಿನ್ನ ಮಕ್ಕಳನ್ನು ಉಳಿಸಮ್ಮ" ಎಂದು ಪ್ರಾರ್ಥಿಸಿ ಒಳಕ್ಕೆ ಹೊರಟು

ಹೋದರು. ಜನರೆಲ್ಲ ಇದರ ಪರಿಣಾಮವನ್ನು ಎವೆಯಿಕ್ಕದೆ ನೋಡುತ್ತಿದ್ದರು. ಮಂತ್ರೋಚ್ಚಾರಣೆ, ಹಾಡು, ಬೇಡಿಕೆಗಳು ನಿರಂತರವಾಗಿ ನಡೆಯುತ್ತಿದ್ದುವು. ಆದರೆ ಅನೇಕರು ನಿರೀಕ್ಷಿಸಿದ್ದಂತೆ ನೀರು ಇಳಿಯಲಿಲ್ಲ. ಅದಕ್ಕೆ ಬದಲಾಗಿ ಇನ್ನೂ ಹತ್ತುತ್ತಿದ್ದಂತೆಯೇ ಅವರಿಗೆ ತೋರಿತು. ಜನರು ನಿರಾಶರಾಗಲಿಲ್ಲ. ಕಾಯುತ್ತಲೇ ಇದ್ದರು. ಅರ್ಧಗಂಟೆಯ ಹೊತ್ತಿಗೆ ನೀರು ಮೆಟ್ಟಿಲನ್ನು ಮುಚ್ಚಿತು. ಇನ್ನಷ್ಟು ಕಾಲ. ಜನರು ಒಬ್ಬೊಬ್ಬರಾಗಿ ಕದಲಲು ಮೊದಲುಮಾಡಿದ್ದರು. ಸೂರ್ಯನು ಮುಳುಗುತ್ತಿದ್ದನು.

ಓ, ಈಗ ನದಿ ಹತ್ತುವುದು ನಿಂತಿತು! ಜನರು ಸ್ತಬ್ಧರಾಗಿದ್ದರು. ಈಗ ಒಂದು ಅಂಗುಲ ಮೆಟ್ಟಿಲನ್ನು ಬಿಟ್ಟಿತು! ಜನರು "ಹೋ!" "ತುಂಗಾದೇವಿ" "ಮಹಾತಾಯಿ!" ಮೊದಲಾಗಿ ಒಟ್ಟಿಗೆ ಬೊಬ್ಬೆಯಿಟ್ಟರು. ಈ ಕೂಗು ಕೊನೆಯಾಗುವುದರೊಳಗಾಗಿ ಮತ್ತೊಂದು ಕೂಗು ಎದ್ದಿತು. "ಹೋ! ಯಾರೋ ನೀರಿಗೆ ಬಿದ್ದಿದಾರೆ! ಸತ್ತರು! ಹಿಡೀರಿ! ಎಳೆದುಕೊಂಡು ಬನ್ನಿ! ಅಗೋ! ಅಗೋ!" ಹಲವು ಕಂಠಗಳು ಕಿರಿಚಿಕೊಂಡುವು. ಕೆಲವು ಜನರು ಒಡನೆಯೇ ನೀರಿಗೆ ಧುಮಿಕಿದರು. ಈಸುತ್ತ ಹೋದರು. ಜನರ ಗಮನವೆಲ್ಲ ಅತ್ತಕಡೆಗೆ ಸಾಗಿತ್ತು.

ಕೆಲವು ನಿಮಿಷಗಳು ಒದ್ದಾಡಿದಮೇಲೆ ಧುಮುಕಿದವರ ಪೈಕಿ ಗುಂಡಪ್ಪನು ದೇಹವೊಂದನ್ನು ಎಳೆದುಕೊಂಡು ಬಂದು ದಡವನ್ನು ಸೇರಿದನು. ನಾವೆಲ್ಲರೂ ಅವನನ್ನು ಮುತ್ತಿಕೊಂಡೆವು. ಅದೊಂದು ಹೆಂಗಸಿನ ದೇಹ. ಗುಂಡಪ್ಪನು ಅವಳ ಮುಖವನ್ನು ಮೇಲೆ ಮಾಡಿ ನೋಡಿ "ಇವಳೋ!" ಅಂದು ಹಿಂದೆ ಸರಿದ.

"ಗಂಗು!" ನಾನು ಚೀರಿದೆ.

"ಗಂಗಮ್ಮ—ಪಾಪ!" ಯಾರೋ ಹೇಳಿದರು.

"ಗಂಗಾಸಾನಿ" ಇನ್ನೊಂದು ಧ್ವನಿ.

"ಕ್ಷೇಮವಾಯಿತು" ಮತ್ತೊಂದು.

ನಾನು ಅವಳ ಬಳಿ ಕುಸಿದು ಕೇಸರಿಯ ಸೀರೆಯಿಂದ ಸಿಂಬೆಯ ರವಿಕೆಯನ್ನು ಮುಚ್ಚಿದೆ. ಅವಳ ಕೈ ಮುಟ್ಟಿದೆ. ತಣ್ಣಗಾಗಿ ಹೋಗಿತ್ತು. ನನ್ನ ಗಂಟಲು ಉಬ್ಬಿತು. ಕಣ್ಣು ಕಾಣದಂತಾಯಿತು. ಎದೆ ಒಡೆಯುವಂತಾಯಿತು. ಆದರೆ ಇವಳಿಗಾಗಿ ಅಳುವುದು ಮರ್ಯಾದೆಯಲ್ಲವೇನೋ ಎಂದು ಹೇಗೋ ತಡೆದುಕೊಂಡೆ.

ಯಾರೋ ಡಾಕ್ಟರ ಮನೆಗೆ ಓಡಿದರು. ಡಾ|| ರಾಜಯ್ಯಂಗಾರ್ಯರ ಮನೆ ದೂರವಾಗಿರಲಿಲ್ಲ. ಒಡನೆಯೇ ಬಂದರು. ಆದರೆ ಅವರ ಕೈಗೂ ಅವಳು ಮೀರಿ ಹೋಗಿದ್ದಳು. ಅವರು "ಛೆ, ಈಗ ಸ್ವಲ್ಪಹೊತ್ತಿನಲ್ಲಿ ಈಕೆ ನನ್ನನ್ನು ಮನೆಗೆ

ಕರೆದುಕೊಂಡು ಹೋಗಿದ್ದಳು. ಇವಳ ಗಂಡ ಆಗತಾನೆ ತೀರಿಕೊಂಡಿದ್ದ" ಎಂದು ಮರುಗಿದರು. ನನ್ನ ದುಃಖ ಹೆಚ್ಚುವಂತಿರಲಿಲ್ಲ. ಮಿತಿಯನ್ನಾಗಲೇ ಮುಟ್ಟಿದ್ದಿತು.

ಸಬ್-ಇನ್ಸ್ಪೆಕ್ಟರು ಶಾಮು ಅಯ್ಯರು ಬಂದ ಮೇಲೆ ಹೆಣವನ್ನು ಸಾಗಿಸಿದರು. ಡಾಕ್ಟರೂ ಇತರ ಕೆಲವರೂ ಅದರೊಡನೆ ಹೊರಟರು. ನಾನೂ ಹೋದೆ.

ಮನೆಗೆ ಹಾಕಿದ್ದ ಬೀಗವನ್ನು ಒಡೆಯಲಾಯಿತು. ಒಳಗೆ ಕತ್ತಲೆಯಾಗಿತ್ತು. ನಾನೇ ದೀಪವನ್ನು ಹಚ್ಚಿ ತಂದೆ. ಅದೇ ಹಜಾರವು ಮತ್ತೆ ಕಣ್ಣಿಗೆ ಬಿತ್ತು. ಅಲ್ಲೇ ಅದೇ ಕುರ್ಚಿಯ ಮೇಲೆ ಹಾಗೇ ಇದ್ದರು, ಯಜಮಾನರು. ಮಲಗಿದ್ದಂತೆ. ಅವರ ಕಣ್ಣುಗಳು ಮುಚ್ಚಿದ್ದುವು. ಆ ಕುರ್ಚಿಯ ಪಕ್ಕದಲ್ಲಿ ಕೆಳಗೆ ಅದೇ ಜಮಖಾನೆಯು ಹಾಸಲ್ಪಟ್ಟಿತ್ತು. ವೀಣೆಯೂ ಅಲ್ಲೇ. ನುಡಿಸಲು ಅವಳು ಮಾತ್ರ ಇಲ್ಲ. ವೀಣೆಯ ಸ್ವರವು ನಿಂತುಹೋಗಿತ್ತು . . . ಇದು ಅವರಿಬ್ಬರೂ ಒಂದಾದ ದಿನದ ಏರ್ಪಾಡು.

ಅಯ್ಯೋ, ನಾನು ಎರಡು ಗಂಟೆ ಮುಂಚೆ ಬರದೆ ಹೋದೆನಲ್ಲ! ಅವಳು ಎಷ್ಟು ಸ್ವಲ್ಪವನ್ನು ಬೇಡಿದಳು! ಎಷ್ಟು ದೈನ್ಯದಿಂದ ಬೇಡಿದಳು! ನಾನು ಮೋಸಗೊಳಿಸಿದೆ. ಪಾಪ, ಎಷ್ಟು ನೊಂದಳೋ ಏನೋ. ಮಾನವತೆಯು ಮರ್ಯಾದೆಗೆ ಬಲಿಯಾಯಿತು.

ಆ ಗಳಿಗೆಯಲ್ಲಿ ಹಿಂದಿನ ವರ್ಷಗಳೆಲ್ಲ, ಆ ದಿನಗಳೆಲ್ಲ, ಆ ಹಬ್ಬಗಳೆಲ್ಲ, ಆ ಆದರ, ಪ್ರೇಮ, ನಸುನಗೆ, ಸಂತೋಷ ಎಲ್ಲವೂ ನನ್ನನ್ನು ಸುತ್ತುಗಟ್ಟಿಕೊಂಡು ಅಣಕಿಸಿದವು. ನಾನು ಅಲ್ಲಿ ನಿಲ್ಲಲಾರದೆ ಹೊರಟುಹೋಗುತ್ತಿದ್ದೆ.

"ರಂಗಪ್ಪ!" ಇನ್ಸ್ಪೆಕ್ಟರು ಕೂಗಿದರು.

ನಾನು ನಿಂತು ಹಿಂದಿರಿಗಿದೆ.

"ಇದು ವೀಣೆಯ ಮೇಲೆ ಇತ್ತು. ನಿಂಗೇ ಬರೆದಂತಿದೆ. ನಿಮ್ಮ ತಂದೆಯವರನ್ನು ಕಳಿಸಪ್ಪ."

ಅವರು ಸಣ್ಣ ಚೀಟಿಯೊಂದನ್ನು ಕೊಟ್ಟರು. ಗಂಗು ಅವಸರದಲ್ಲಿ ಬರೆದಂತಿತ್ತು:

"ರಂಗ, ಈ ವೀಣೆ ನಿನ್ನದೇ—ನಮ್ಮಿಬ್ಬರ ಉಡುಗೊರೆ. ಬಾಕಿಯದು ಹೆಚ್ಚೇನೂ ಇಲ್ಲ; ನಿಮ್ಮ ತಂದೆಯವರ ವಿನಿಯೋಗಕ್ಕೇ ಬಿಟ್ಟಿದೆ. ಚೆನ್ನಾಗಿ ಬಾಳಪ್ಪ.

ಗಂಗು."

ನಾನು ಮನೆಗೆ ಹೋದಾಗ ಹಜಾರದಲ್ಲಿ ಅಮ್ಮನೂ ತಂದೆಯುವರೂ ಚರ್ಚಿಸುತ್ತಿದ್ದರು.

"ಕಂಡದ್ದನ್ನೂ ನಂಬೋದಿಲ್ಲ ಅಂದರೆ ಹೇಗೆ?" ಅಮ್ಮನು ವಾದಿಸುತ್ತಿದ್ದಳು.

"ಬರಿ ಕಾಕತಾಳ ನ್ಯಾಯ. ಅದರ ಹೊತ್ತು ಬಂದಿತ್ತು. ಇಳಿದು ಹೋಯ್ತು ಅಷ್ಟೆ" ತಂದೆಯವರು ಒಪ್ಪಲಿಲ್ಲ.

"ನೀವು ಏನಾದರೂ ಹೇಳಿಕೊಳ್ಳಿ. ನಾನಂತೂ ಆ ಮಹಾತಾಯಿ ಪಾರ್ವತಮ್ಮನೋರ ಪುಣ್ಯವೇ ಕಾರಣ ಅಂತೀನಿ" ಅವಳು ನಿರ್ಧರವನ್ನು ಹೇಳಿದಳು.

ನನಗೆ "ಗಂಗು ಸೋಂಕಿನಿಂದಲೇ ತುಂಗ ಶಾಂತವಾದಳು" ಎಂದು ಹೇಳಬೇಕೆನ್ನಿಸಿತು. ಆದರೆ ಅದು ಮರ್ಯಾದೆಯುಲ್ಲವೋ ಏನೋ ಎಂದು ಅನುಮಾನಿಸಿ ಸುಮ್ಮನೆ ಚೀಟಿಯನ್ನು ಕೊಟ್ಟು ಒಳಗೆ ಹೋದೆ.

ಅಶ್ವತ್ಥ.

ಜಾಲಿಯ ಹೂವು

ಜಾಲಿಯ ಮರದಲಿ ಮುಳ್ಳುಂಟೆಂಬುವ
ಅರಿವನೆ ಮರೆಸುವ ರೀತಿಯಲಿ
ಅಚ್ಚನೆ ಅರಿಸಿನ ಬಣ್ಣದ ಹೂಗಳ
ರಾಸಿಯೆ ಮೆತ್ತಿವೆ ಲೀಲೆಯಲಿ
ಅಂಬರ ನೀಲಿಗೆ ಹೊನ್ನಿನ ನೀರು,
ಕಣ್ಣಿಗೆ ನುಣ್ಣನೆ ಬಣ್ಣದ ತೇರು
ಎಂಬೊಲು ಚಿತ್ರವಿಚಿತ್ರದಲಿ
ಮುಳ್ಳಿನ ಜಾಲಿಯು ಮಧುರ ವಿಶಾರದೆ
ಯಾಗಿದೆ ಚೇತನ ಸ್ಪರ್ಶದಲಿ,
ಸೌಂದರ್ಯದ ಹೊಸ ಹರ್ಷದಲಿ!
ನೀಲಿಯ ರೇಶಿಮೆ ಬಣ್ಣದ ರೆಕ್ಕೆಯ
ಚಿಟ್ಟೆಯ ಬಳಗವು ಬಳಸುತಿವೆ,
ಸ್ವರ್ಗದ ಸುಂದರಕನ್ನೆಯರಂದದಿ
ಗಂಧದ ಪರಿಮಳವರಸುತಿವೆ!
ಓಹೋ ವಸಂತನೂಳಿಗದೊಕ್ಕಲು
ಕೋಗಿಲೆಯೂ ಸಹ ಕೂಗುತಿದೆ!
ಆಹಾ ಜುಮ್ಮೆಂದಿದೆ ತರು ನೋಡದೊ
ಪರಾಗದರಿಸಿನ ಉದುರುತಿದೆ!
ಕವಿಗಿದೊ ಚಿಮ್ಮಿದೆ ಆನಂದಾಶ್ರು
ಅನಂತಚೇತನದರ್ಶನದಿ!
ಜಾಲಿಯು ಮುಳ್ಳಾದರೆ ಏನ್ ವಿಶ್ವದ
ಹೃದಯಸ್ಫೂರ್ತಿಯ ಸ್ಪರ್ಶದಲಿ
ಎಂತಹ ಜಡವೂ ಚೇತನವಾಗದೆ
ರಸಸೌಂದರ್ಯ ವಿಕಾಸದಲಿ?
ಪಾತ್ರಾಪಾತ್ರಂ ಎಂಬುವ ಭೇದವು
ಮಾನವನರಿವಿನ ಅಜ್ಞಾನಂ!
ತೃಣ ಚಿಗಿವಾಗಲು ಶಿವಮೂಡುವನೈ
ರಸ ಋಷಿ ಸಂದರ್ಶನ ಧನ್ಯಂ!

ಜಿ. ಗುಂಡಣ್ಣ

ಜಗತ್ತುಗಳ ಹುಟ್ಟು ಸಾವು

೩. ಆಕಾಶ ಕಾಯಗಳ ದೂರ ನಿರ್ಣಯ

೧. ಸೂಚನೆ

ಜಗತ್ತಿನಲ್ಲಿ ನಮ್ಮ ಹಳ್ಳಿಯಂತಿರುವ ಸೌರವ್ಯೂಹದ ಪರಿಚಯವಾದ ಮೇಲೆ ಇತರ ಊರುಗಳೆಂದು ಕರೆಯಬಹುದಾದ ನಕ್ಷತ್ರಗಳ ಪರಿಚಯ ಮಾಡಿಕೊಳ್ಳುವುದು ನಮ್ಮ ಮುಂದಿನ ಹೆಜ್ಜೆ. ಆದರೆ ನಕ್ಷತ್ರಗಳ ಆಯುಸ್ಸಿನ ನಿರ್ಣಯಕ್ಕೆ ಅವುಗಳ ದೂರ, ಗಾತ್ರ ಇತ್ಯಾದಿಗಳ ಅರಿವು ನಮಗೆ ಅವಶ್ಯ. ಆದಕಾರಣ ಇವುಗಳಲ್ಲಿ ಮೊದಲು ದೂರವನ್ನು ಅಳೆಯಲು ವಿಜ್ಞಾನಿಯು ಅನುಸರಿಸಿರುವ ವಿಧಾನಗಳ ತತ್ತ್ವಗಳನ್ನು ಈ ಅಧ್ಯಾಯದಲ್ಲಿ ವಿವೇಚಿಸುತ್ತೇವೆ.

೨. ಭೂಮಿಯ ಗಾತ್ರ

ನಕ್ಷತ್ರಗಳ ದೂರವನ್ನು ಅಳೆಯಲು ನಾವು ಭೂಪಥದ ವ್ಯಾಸವನ್ನು, ಅಂದರೆ ಭೂಮಿ ಸೂರ್ಯರಿಗಿರುವ ದೂರದ ಎರಡರಷ್ಟನ್ನು, ಅಡಿಕಡ್ಡಿಯಾಗಿ ಉಪಯೋಗಿಸ ಬೇಕಾಗುತ್ತದೆ. ಸೂರ್ಯನ ದೂರವನ್ನು ಅಳೆಯಲು ಭೂಮಿಯ ವ್ಯಾಸವು ಅಡಿಕಡ್ಡಿ. ಆದಕಾರಣ ಮೊದಲು ಭೂಮಿಯ ಗಾತ್ರವನ್ನು ಆದಷ್ಟು ನಿಷ್ಕೃಷ್ಟವಾಗಿ ನಿರ್ಣಯಿಸ ಬೇಕು. ಈ ನಿರ್ಣಯವೇ ವಿಶ್ವದ ಎಲ್ಲ ಅಳತೆಗಳಿಗೂ ತಳಹದಿ.

ಭೂಮಿಯನ್ನು ಅಳೆಯುವುದು ಅಷ್ಟೇನೂ ಕಷ್ಟದ ಕೆಲಸವಲ್ಲ. ಒಂದು ಸ್ಥಳದಲ್ಲಿ ಧ್ರುವ ನಕ್ಷತ್ರದ ಕೋನೋನ್ನತಿ[1]ಯನ್ನು ಮೊದಲು ನಿರ್ಣಯಿಸಬೇಕು. ಉದಾ ಹರಣೆಗೆ ಬೆಂಗಳೂರಿನಲ್ಲಿ ಧ್ರುವ ನಕ್ಷತ್ರವು ಕ್ಷಿತಿಜದಿಂದ ೧೩ ಡಿಗ್ರಿಗಳ ಅಂತರದಲ್ಲಿದೆ. ಬೆಂಗಳೂರಿಂದ ನೇರವಾಗಿ ಉತ್ತರದಲ್ಲಿರುವ ಮತ್ತೊಂದು ಸ್ಥಳದಲ್ಲಿಯೂ ಈ ನಕ್ಷತ್ರದ ಕೋನೋನ್ನತಿಯನ್ನು ಅನಂತರ ಅಳೆಯಬೇಕು. ಭೋಪಾಲ್ ಇಂತಹ ಒಂದು ನಗರ. ಈ ಊರಿನಲ್ಲಿ ಧ್ರುವನಕ್ಷತ್ರದ ಕೋನೋನ್ನತಿಯು ೨೩೪ ಡಿಗ್ರಿಗಳು. ಎರಡು ಊರುಗಳಿಗಿರುವ ದೂರವನ್ನು ಈಗ ಅಳೆದರೆ ಭೂಮಿಯ ಗಾತ್ರ ಗೊತ್ತಾಗು ತ್ತದೆ. ಬೆಂಗಳೂರು ಭೋಪಾಲ್‌ಗಳಿಗಿರುವ ದೂರ ೭೦೭ ಮೈಲಿಗಳು. ೧೦೪ ಡಿಗ್ರಿಗಳ ಅಂತರಕ್ಕೆ ೭೦೭ ಮೈಲಿಗಳಾದುದರಿಂದ ಒಂದು ಡಿಗ್ರಿ ಅಕ್ಷಾಂಶಾಂತರಕ್ಕೆ ೬೯

[1] Altitude (angular).

ಮೈಲಿಗಳಾಗುತ್ತವೆ. ಒಂದು ವೃತ್ತದಲ್ಲಿ ೩೬೦ ಡಿಗ್ರಿಗಳಿರುವುದರಿಂದ ಭೂಮಿಯ ಸುತ್ತಳತೆಯು ೬೯ × ೩೬೦ = ೨೪,೮೪೦ ಮೈಲಿಗಳಾದುವು (ಚಿತ್ರ ೩).



ಚಿತ್ರ ೩

ಭೂಮಿಯ ಸುತ್ತಳತೆಯನ್ನು ಕಂಡುಹಿಡಿಯುವ ವಿಧಾನ

ಭೂಮಿಯನ್ನು ಮೊಟ್ಟಮೊದಲು (ಸುಮಾರು ಕ್ರಿ.ಪೂ. ೨೫೦) ಅಳೆದ ಕೀರ್ತಿ ಗಳಿಸಿರುವ ಎರಾಟೊಸ್ತನೀಸನು ಅನುಸರಿಸಿದುದೂ ಈ ವಿಧಾನವನ್ನೇ. ಅವನು ಈಜಿಪ್ಟ ನಿವಾಸಿಯಾಗಿದ್ದುದರಿಂದ ಬೆಂಗಳೂರು—ಭೋಪಾಲ್‌ಗಳ ಸ್ಥಾನದಲ್ಲಿ ಅಸ್ವಾನ್—ಅಲೆಗ್ಸಾಂಡ್ರಿಯಾಗಳ ದೂರವನ್ನು ಆಧಾರ ರೇಖೆ[1]ಯನ್ನಾಗಿ ಮಾಡಿಕೊಂಡನು. ಆಧುನಿಕ ವಿಜ್ಞಾನಿಯೂ ಈ ಮಾರ್ಗವನ್ನೇ ಅನುಸರಿಸುತ್ತಾನೆ. ಆದರೆ ಅವನು ನವೀನ ಸಾಧನಗಳ ಸಹಾಯದಿಂದ ದೂರ ಕೋನಗಳನ್ನು ಹೆಚ್ಚು ನಿಷ್ಕೃಷ್ಟವಾಗಿ ಅಳೆಯಬಲ್ಲನು. ಇಂತಹ ಅಳತೆಗಳನ್ನು ಅನೇಕ ಭೂ ಭಾಗಗಳಲ್ಲಿ ಮಾಡಿರುವುದರ ಫಲವಾಗಿ ಸಮಭಾಜಕ ವೃತ್ತ ಪ್ರದೇಶಗಳಲ್ಲಿ ಒಂದು ಡಿಗ್ರಿ ಅಕ್ಷಾಂಶಕ್ಕೆ ೬೮.೭೧ ಮೈಲಿಗಳು, ಧ್ರುವ ಪ್ರದೇಶಗಳಲ್ಲಿ ಒಂದು ಡಿಗ್ರಿ ಅಕ್ಷಾಂಶಕ್ಕೆ ೬೯.೪೧ ಮೈಲಿಗಳು ಎಂದು ಕಂಡುಬಂದಿದೆ. ಆದುದರಿಂದ ಭೂಮಿಯು ಸಂಪೂರ್ಣ ಗೋಳಾಕಾರವಾಗಿಲ್ಲ, ಧ್ರುವಗಳಲ್ಲಿ ಚಪ್ಪಟೆಯಾಗಿಯೂ ಸಮಭಾಜಕ ವೃತ್ತದಲ್ಲಿ ಉಬ್ಬಿಕೊಂಡೂ ಇದೆ. ಭೂಮಿಯ ದೈನಂದಿನ ಭ್ರಮಣ[2]ವೇ ಈ ಆಕಾರಕ್ಕೆ ಕಾರಣ. ಇತ್ತೀಚಿನ ನಿರ್ಣಯಗಳಿಂದ ನಮ್ಮ ಗ್ರಹದ ಧ್ರುವ ವ್ಯಾಸವು ೭೮೯೯.೯೮ ಮೈಲಿಗಳು ಮತ್ತು ಸಮಭಾಜಕೀಯ ವ್ಯಾಸವು ೭೯೨೬.೬೮ ಮೈಲಿಗಳು ಎಂದು ಗೊತ್ತಾಗಿದೆ.

೩. ಸೂರ್ಯನ ದೂರ

ನಮ್ಮಿಂದ ಸೂರ್ಯನಿರುವ ದೂರವನ್ನು ಅಳೆಯುವುದು ಇಷ್ಟು ಸುಲಭವಲ್ಲ. ನ್ಯೂಟನನ ಗುರುತ್ವಾಕರ್ಷಣ ನಿಯಮದಂತೆ ಪ್ರತಿಯೊಂದು ಗ್ರಹದ ಸೂರ್ಯ ಪ್ರದಕ್ಷಿಣ ಕಾಲದ ವರ್ಗವು ಸೂರ್ಯನಿಂದ ಆ ಗ್ರಹವಿರುವ ದೂರದ ಘನಕ್ಕೆ ಸರಳಾನುಪಾತವಾಗಿರುತ್ತದೆ. ಗ್ರಹಗಳ ಪ್ರದಕ್ಷಿಣ ಕಾಲಗಳು ನಿಷ್ಕೃಷ್ಟವಾಗಿ ತಿಳಿದಿರುವುದರಿಂದ ಅವುಗಳ ದೂರಗಳ ಪ್ರಮಾಣಗಳನ್ನೂ ಅಷ್ಟೇ ನಿಷ್ಕೃಷ್ಟವಾಗಿ ಮೇಲಿನ ನಿಯಮದಿಂದ ಗುಣಿಸಬಹುದು. ಉದಾಹರಣೆಯಾಗಿ ಒಂದು ಗ್ರಹದ ಪ್ರದಕ್ಷಿಣ ಕಾಲವು ೮ ವರ್ಷ (ಭೂ ಪ್ರದಕ್ಷಿಣಕಾಲದ ೮ರಷ್ಟು) ಗಳಾದರೆ ಅದರ ವರ್ಗವು ೬೪ ಆದಕಾರಣ, ಆ ಗ್ರಹದ ದೂರವು ಭೂಮಿ ಸೂರ್ಯರ ದೂರದ ೪ರಷ್ಟಿರಬೇಕು, ಏಕೆಂದರೆ ೪ರ ಘನವು ($೪^{೩}$) ೬೪. ಹೀಗೆ ಗುಣಿಸಿ ಸೌರವ್ಯೂಹದ ಸರಿಯಾದ ನಕ್ಷೆಯನ್ನು ಅಂದರೆ ಸೂರ್ಯನನ್ನೂ, ಪ್ರಮಾಣಾನುಸಾರವಾಗಿ ಗ್ರಹಪಥಗಳನ್ನೂ ಚಿತ್ರಿಸಬಹುದು. ಈಗ ಯಾವುದಾದರೊಂದು ಗ್ರಹದ ದೂರವನ್ನು ನಾವು ಅಳೆದರೆ

[1] Base line. [2] Rotation.



ಚಿತ್ರ ೪-೨

ಸೌರವ್ಯೂಹದ ನಕ್ಷೆ—ಬುಧ, ಶುಕ್ರ, ಭೂಮಿ ಮತ್ತು ಕುಜ ಗ್ರಹಗಳ ಸೂರ್ಯಪ್ರದಕ್ಷಿಣ ಪಥಗಳು. ಗ್ರಹದ ಹೆಸರಿನ ಪಕ್ಕದ ಸಂಖ್ಯೆಯು ಗ್ರಹಪಥದ ವ್ಯಾಸವನ್ನು ತಿಳಿಸುತ್ತದೆ. (ಭೂಪಥವ್ಯಾಸ=1); ಇನ್ನೊಂದು ಪಕ್ಕದಲ್ಲಿ ಆ ಗ್ರಹದ ಜ್ಯೋತಿಷಚಿಹ್ನೆಯನ್ನು ಗುರುತಿಸಿದೆ. ಪಥದ ಪೂರ್ಣರೇಖಾ ಭಾಗವು ಈ ಕಾಗದದ ತಲದಮೇಲಿರುವ (ಉತ್ತರ) ಭಾಗ, ಭಿನ್ನರೇಖೆಯು ಕೆಳಗಿರುವ (ದಕ್ಷಿಣ) ಭಾಗವೆಂದು ತಿಳಿಯಬೇಕು. ಭೂಪಥ ತಲಕ್ಕೂ ಗ್ರಹಪಥತಲಕ್ಕೂ ಇರುವ ಕೋನಾಂತರವನ್ನು ಡಿಗ್ರಿಗಳಲ್ಲಿ ಸೂಚಿಸಿದೆ. ಭೂಮಿಯು ಪ್ರತಿ ತಿಂಗಳೂ ಸಾಗುವ ಪಥಭಾಗವನ್ನು ಜ (ಜನವರಿ), ಫೆ (ಫೆಬ್ರುವರಿ) ಇತ್ಯಾದಿ ಅಕ್ಷರಗಳಿಂದ ಗುರುತಿಸಿದೆ. ಗ್ರಹದ ಪ್ರದಕ್ಷಿಣಕಾಲವನ್ನು ವರ್ಷಗಳಲ್ಲಿ ತಿಳಿಸಿದೆ. ಎಲ್ಲಕ್ಕೂ ಹೊರಗಿನ ವೃತ್ತದಲ್ಲಿ ಹನ್ನೆರಡು ರಾಶಿಗಳನ್ನು ಗುರುತಿಸಿದೆ. ಪಥಗಳಲ್ಲಿ ಗುರುತಿಸಿರುವಂ ಬಿಂದುವು ಗ್ರಹದ ನೀಚಸ್ಥಾನ (ಸಮೀಪತಮಸ್ಥಾನ) ವನ್ನು 0.5 ಬಿಂದುವು ಉಚ್ಚಸ್ಥಾನ (ದೂರತಮ) ವನ್ನು ತೋರಿಸುತ್ತವೆ. ಹೊರವೃತ್ತವು ನಕ್ಷತ್ರಮಂಡಲದ ದ್ವಾದಶರಾಶಿಗಳನ್ನು ಅವುಗಳ ಜ್ಯೋತಿಷ ಸಾಂಕೇತಿಕ ಚಿಹ್ನೆಗಳಿಂದ ಸೂಚಿಸುತ್ತದೆ. ಆಯಾ ಅಯನರಾಶಿಗಳಲ್ಲಿ ಸೂರ್ಯನ ಅಕ್ಷಾಂಶವನ್ನು ಡಿಗ್ರಿಗಳಲ್ಲಿ ಗುರುತಿಸಿದೆ. + ಎಂದರೆ ಉತ್ತರ ಅಕ್ಷಾಂಶ, — ಎಂದರೆ ದಕ್ಷಿಣ ಅಕ್ಷಾಂಶ.

ಚಿತ್ರ ೪-ಬಿ

ಸೌರವ್ಯೂಹದ ನಕ್ಷೆ : ಭೂಮಿ, ಗುರು, ಶನಿ ಗ್ರಹಗಳ ಸೂರ್ಯಪ್ರದಕ್ಷಿಣ ಪಥಗಳು.
(ಇತರ ವಿವರಗಳಿಗೆ ಚಿತ್ರ ೪-ಎ ನೋಡಿ)

ಸಾಕು, ಎಲ್ಲ ದೂರಗಳನ್ನೂ ನಿರ್ಣಯಿಸಿದಂತೆಯೇ ಆಯಿತು. ನಾಲ್ಕನೆಯ ಚಿತ್ರವು ಸೌರವ್ಯೂಹದ ಅಂತಹ ನಕ್ಷೆ.

ಸೂರ್ಯನ ದೂರವನ್ನು ಅಳೆಯಲು ಉಪಯೋಗಿಸಿರುವ ಹಲವು ವಿಧಾನಗಳಲ್ಲಿ ಅತ್ಯಂತ ನಿಷ್ಕೃಷ್ಟವಾದುದೊಂದನ್ನು ಮಾತ್ರ ಇಲ್ಲಿ ವಿವರಿಸುತ್ತೇವೆ. ಚಿತ್ರ ೫ ಎ ಯಲ್ಲಿ B B′ ವೃತ್ತವು ಭೂಮಿಯ ಸಮಭಾಜಕವೃತ್ತವನ್ನು ಸೂಚಿಸುತ್ತದೆ. O ಭೂಮಿಯ ಕೇಂದ್ರ. A ಬಿಂದುವು ಒಂದು ಗ್ರಹವನ್ನೂ BS ರೇಖೆಯು ಆ ಗ್ರಹಕ್ಕೆ ಸಮೀಪದಲ್ಲಿ ಕಾಣುವ ಒಂದು ನಕ್ಷತ್ರದ ದಿಕ್ಕನ್ನೂ ಸೂಚಿಸುತ್ತವೆ. ಗ್ರಹಕ್ಕೆ



ಚಿತ್ರ ೪-ಸಿ

ಸೌರವ್ಯೂಹದ ನಕ್ಷೆ—ಯುರಾನಸ್ ನೆಪ್ಚ್ಯೂನ್ ಮತ್ತು ಪ್ಲುಟೋ ಗ್ರಹಗಳ ಪಥಗಳು 1930, 1940, 1950 ಮತ್ತು 1960 ರಲ್ಲಿ ಈ ಗ್ರಹಗಳ ಸ್ಥಾನಗಳನ್ನು ಗುರುತಿಸಿದೆ.

ಸಾಪೇಕ್ಷವಾಗಿ ನಕ್ಷತ್ರದ ದೂರವನ್ನು ಅನಂತದೂರವನ್ನಾಗಿ ಎಣಿಸಬಹುದಾದ ಕಾರಣ ನಕ್ಷತ್ರವನ್ನೇ ಚಿತ್ರದಲ್ಲಿ ಗುರುತಿಸಿಲ್ಲ, ಅದರ ದಿಕ್ಕನ್ನು ಮಾತ್ರ ಗುರುತಿಸಿದೆ. B ಎಂಬ ಸ್ಥಳದಿಂದ ಒಬ್ಬ ವೀಕ್ಷಕನು ಗ್ರಹಕ್ಕೂ ನಕ್ಷತ್ರಕ್ಕೂ ಇರುವ ಕೋನಾಂತರವಾದ ∠ABS ನ್ನು ಅಳೆಯುತ್ತಾನೆ. ಅದೇ ಕಾಲದಲ್ಲಿಯೇ ಅದೇ ಗ್ರಹನಕ್ಷತ್ರಗಳಿಗಿರುವ ಕೋನಾಂತರವಾದ ∠AB′S′ ನ್ನು B′ ಎಂಬ ಬೇರೊಂದು ಸ್ಥಳದಿಂದ ಇನ್ನೊಬ್ಬ ವೀಕ್ಷಕನು ಅಳೆಯುತ್ತಾನೆ. ನಕ್ಷತ್ರವು ಬಹಳ ದೂರದಲ್ಲಿರುವುದರಿಂದ ಅದು B ಗೆ ಯಾವ ದಿಕ್ಕಿನಲ್ಲಿ ಕಾಣುತ್ತದೆಯೋ B′ ಗೂ ಅದೇ ದಿಕ್ಕಿನಲ್ಲಿಯೇ ಕಾಣುತ್ತದೆ, ಅಂದರೆ B S ಮತ್ತು B′S′ ರೇಖೆಗಳು ಸಮಾನಾಂತರ ರೇಖೆ

ಗಳು, ಅವುಗಳನ್ನು ಬಹುದೂರ ವೃದ್ಧಿಸಿದರೆ ನಕ್ಷತ್ರದಲ್ಲಿ ಸಂಧಿಸುತ್ತವೆ. ಇಬ್ಬರು ವೀಕ್ಷಕರು ಅಳೆದ ABS ಮತ್ತು AB′S′ ಕೋನಗಳ ವ್ಯತ್ಯಾಸವು BAB′ ಕೋನಕ್ಕೆ ಸಮ. ಭೂಮಿಯ ಅಳತೆಯಿಂದ ನಮಗೆ BB′ ದೂರವು ಗೊತ್ತಿರುವುದರಿಂದ AO ದೂರವನ್ನು ಈಗ ಗುಣಿಸಬಹುದು.



ಚಿತ್ರ ೫

ಕ್ಷುದ್ರಗ್ರಹದ ದಿಗ್ವ್ಯತ್ಯಾಸ ನಿರ್ಣಯ

A ಗ್ರಹದ ದೂರ ಕಡಿಮೆಯಾದಂತೆ ನಾವು ಅಳೆಯಬೇಕಾಗಿರುವ BAB′ ಕೋನವು ಹೆಚ್ಚಾಗುತ್ತದೆ. ಕೋನದ ಪರಿಮಾಣವು ಹೆಚ್ಚಾದಂತೆ ಅದನ್ನು ಹೆಚ್ಚು ನಿಷ್ಕೃಷ್ಟವಾಗಿ ಅಳೆಯಬಹುದು. ಆದಕಾರಣ ಈ ಅಳತೆಗೆ ಭೂಮಿಯಿಂದ ಆದಷ್ಟು ಸಮೀಪವಿರುವ ಗ್ರಹವನ್ನು ಆರಿಸಿಕೊಳ್ಳಬೇಕು. ಇದರ ಜೊತೆಗೆ ಗ್ರಹದ ಗಾತ್ರ ಎಷ್ಟು ಕಡಿಮೆ ಇದ್ದರೆ ಅಷ್ಟು ಅನುಕೂಲ. ಏಕೆಂದರೆ ಗ್ರಹವು ನಮಗೆ ಬಿಂದುವಿನಂತೆ ತೋರಿದರೆ ಗ್ರಹ ಬಿಂದುವಿಗೂ ನಕ್ಷತ್ರ ಬಿಂದುವಿಗೂ ಇರುವ ಅಂತರವನ್ನು ಅಸಂದಿಗ್ಧವಾಗಿ ಅಳೆಯಬಹುದು, ಗ್ರಹವು ಬಿಂಬವಾಗಿ ತೋರಿದರೆ ಅಳತೆಗೆ ತೊಂದರೆ ಬರುತ್ತದೆ. ಈ ವಿಧಾನದ ತತ್ತ್ವವನ್ನು ಸರಳವಾಗಿ ತಿಳಿಸುವ ಉದ್ದೇಶದಿಂದ ಇಬ್ಬರು ವೀಕ್ಷಕರು ಬೇರೆ ಬೇರೆ ಸ್ಥಳಗಳಿಂದ ಏಕಕಾಲದಲ್ಲಿ ಕೋನಾಂತರಗಳನ್ನು ನಿರ್ಧರಿಸಬೇಕೆಂದು ಮೇಲೆ ತಿಳಿಸಿತು. ವ್ಯಾವಹಾರಿಕವಾಗಿ ಇದು ಸಾಧ್ಯವಲ್ಲ. ಅದರ ಬದಲು B ವೀಕ್ಷಕನೇ ಮೊದಲು ABS ಕೋನವನ್ನು ನಿರ್ಧರಿಸಿ ಎಂಟು—ಹತ್ತು ಘಂಟೆಗಳು ಕಳೆದ ಮೇಲೆ ಭೂಮಿಯ ದೈನಂದಿನ ಭ್ರಮಣದ ಕಾರಣವಾಗಿ ಅವನು B′ ಸೇರುತ್ತಾ

ನಾದಕಾರಣ ಆಗ ಅವನೇ AB'S' ಕೋನವನ್ನು ಅಳೆಯುತ್ತಾನೆ. ಆದರೆ ಈ ಕಾಲದಲ್ಲಿ A ಗ್ರಹವೂ, ಭೂಮಿಯೂ ತಮ್ಮ ತಮ್ಮ ಸೂರ್ಯ ಪ್ರದಕ್ಷಿಣ ಪಥಗಳಲ್ಲಿ ಸ್ವಲ್ಪದೂರ ಸಾಗಿರುತ್ತವೆ. ಇದಕ್ಕಾಗಿ ಅವನು ನಿರ್ಣಯಿಸಿದ ಕೋನವ್ಯತ್ಯಾಸವನ್ನು ಗಣಿತದ ಮೂಲಕ ತಕ್ಕ ಪ್ರಮಾಣದಲ್ಲಿ ಮಾರ್ಪಡಿಸಿಕೊಳ್ಳುತ್ತಾನೆ.

ಅಳತೆಗೆ ಆರಿಸಿಕೊಳ್ಳುವ ಗ್ರಹವು ದೂರದರ್ಶಿನಿಗೂ ಬಿಂದುವಿನಂತೆ ತೋರ ಬೇಕಾದುದರಿಂದ ಇದಕ್ಕೆ ಒಂದು ಕ್ಷುದ್ರ ಗ್ರಹವೇ ಆಗಬೇಕು. ಸಾವಿರಾರು ಕ್ಷುದ್ರ ಗ್ರಹಗಳಲ್ಲಿ ಎರೋಸ್ ಎಂಬುದು ಬಹಳ ಸಮರ್ಪಕವಾದ ಗ್ರಹ. ಈ ಗ್ರಹದ ಪಥವು ದೀರ್ಘವೃತ್ತಾಕಾರದ್ದು.[1] (ಅಂಡಾಕಾರ). ಇದರ ಕಾರಣವಾಗಿ ಇದು ಕೆಲವು ವೇಳೆ ಭೂಮಿಗೆ ಒಂದೂವರೆ ಕೋಟಿ ಮೈಲಿಗಳಷ್ಟು ಹತ್ತಿರಕ್ಕೆ ಬರುತ್ತದೆ. ಇದು ಕಡಿಮೆ ದೂರವಾಗಿ ನಮಗೆ ತೋರದಿರಬಹುದು, ಆದರೆ ಇದಕ್ಕೂ ಸಮೀಪ ವಾಗಿ ಯಾವ ಗ್ರಹವೂ ಬರುವುದಿಲ್ಲ. ಎರೋಸ್ ಕ್ಷುದ್ರ ಗ್ರಹವು ಹೀಗೆ ೧೯೩೧ ರಲ್ಲಿ ಭೂಮಿಗೆ ಹತ್ತಿರ ಬಂದಿತ್ತು. ಆಗ ಖಗೋಳಜ್ಞರು ಭೂಮಿಯ ಹಲವು ಕೇಂದ್ರ ಗಳಿಂದ ಮೇಲೆ ವಿವರಿಸಿರುವ ಪ್ರಯೋಗಗಳನ್ನು ನಡೆಸಿದರು. ಆಧುನಿಕ ಕಾಲದಲ್ಲಿ ಕೋನಗಳನ್ನು ಕಣ್ಣಿನಿಂದ ಅಳೆದು ನಿರ್ಣಯಿಸುವುದಿಲ್ಲ; ದೂರದರ್ಶಿನಿ, ಛಾಯಾ ಗ್ರಾಹಿ (ಕ್ಯಾಮರ)ಗಳ ಸಹಾಯದಿಂದ ಕ್ಷುದ್ರ ಗ್ರಹವಿರುವ ಖಗೋಳ ಪ್ರದೇಶದ ಚಿತ್ರವನ್ನು ಫಲಕದ ಮೇಲೆ ಹಿಡಿಯುತ್ತಾರೆ. B ಇಂದ ತೆಗೆದ ಚಿತ್ರದಲ್ಲಿ ಗ್ರಹ ನಕ್ಷತ್ರಗಳು A ಮತ್ತು S ಬಿಂದುಗಳಾಗಿ ತೋರಿದರೆ, B' ಇಂದ ತೆಗೆದ ಚಿತ್ರದಲ್ಲಿ A ಮತ್ತು S'ಗಳಾಗಿ ತೋರುತ್ತವೆ (ಚಿತ್ರ ೫ ಬಿ). ಈ ಎರಡು ದೂರಗಳ ವ್ಯತ್ಯಾಸ ದಿಂದ BAB' ಕೋನವನ್ನು ಗುಣಿಸುತ್ತಾರೆ. AS ಮತ್ತು AS'ಗಳಿಗಿರುವ ವ್ಯತ್ಯಾಸವು ಸುಮಾರು ಒಂದಂಗುಲದ ಇಪ್ಪತ್ತನೆಯ ಒಂದು ಭಾಗವೆಂಬುದನ್ನು ಗ್ರಹಿಸಿದರೆ ಈ ಪ್ರಯೋಗವನ್ನು ಎಷ್ಟು ಎಚ್ಚರಿಕೆಯಿಂದ ಸಾಧಿಸಬೇಕೆಂಬುದು ಮನಸ್ಸಿಗೆ ಹಿಡಿದೀತು.

ಭೂಮಿಯ ಹಲವು ವೀಕ್ಷಣ ಕೇಂದ್ರಗಳಲ್ಲಿ ೧೯೩೧ ರಲ್ಲಿ ಈ ಉದ್ದೇಶದಿಂದ ಕೈಕೊಂಡ ಪ್ರಾಯೋಗಿಕ ಅಳತೆಗಳನ್ನು ಗುಣಿಸಿ ಸೂರ್ಯನ ದೂರವನ್ನು ನಿರ್ಧರಿಸಲು ೧೯೪೪ ನೆಯ ವರ್ಷ ಬರಬೇಕಾಯಿತು. ಇದರಿಂದ ಗುಣಿತದ ತೊಡಕು ಎಷ್ಟರಮಟ್ಟಿನ ದೆಂಬುದು ತಿಳಿಯುತ್ತದೆ. ಅಳತೆಯು ನೇರವಾಗಿ BAB' ಕೋನವನ್ನು ತಿಳಿಸಿದರೂ ನಮಗೆ ಬೇಕಾದುದು ಸೂರ್ಯನ ದೂರವಾದುದರಿಂದ ಈ ಕೋನವನ್ನು ಭೂಮಿಯ ತ್ರಿಜ್ಯವು ಸೂರ್ಯಕೇಂದ್ರಕ್ಕೆ ತೋರುವ ಕೋನಾಂತರವನ್ನಾಗಿ (ಚಿತ್ರ ೬) ಗುಣಿತ

[1] Ellipse

ದಿಂದ ಮಾಪನಮಾಡಿಸುತ್ತಾರೆ. ಸೂರ್ಯನನ್ನು ಭೂ ಕೇಂದ್ರದಿಂದಲೂ (O), ಭೂಮಿಯ ಮೇಲಿನ ಯಾವುದಾದರೊಂದು ಸ್ಥಳದಿಂದಲೂ (B) ನೋಡಿದರೆ ಅವನ ಸ್ಥಾನದಲ್ಲಿ ತೋರಿಬರುವ ವ್ಯತ್ಯಾಸವನ್ನು ಈ ಕೋನವು (BSO) ತಿಳಿಸುತ್ತದಾದ ಕಾರಣ ಇದಕ್ಕೆ ಸೌರದಿಗ್ವ್ಯತ್ಯಾಸ[1] ಅಥವಾ ಸೌರಸ್ಥಾನಾಭಾಸ[1]ವೆಂದು ಹೆಸರು. ಸೌರ ದಿಗ್ವ್ಯತ್ಯಾಸವು ೮.೭೯೦ ಕೋನ ಸೆಕೆಂಡುಗಳು. ಒಂದು ಕೋನ ಸೆಕೆಂಡೆಂದರೆ



ಚಿತ್ರ ೬

ಸೌರ ದಿಗ್ವ್ಯತ್ಯಾಸ

ಒಂದು ಡಿಗ್ರಿಯ ೩೬೦೦ ನೆಯ ಒಂದಂಶ. ಸೌರದಿಗ್ವ್ಯತ್ಯಾಸದ ಈ ನಿರ್ಣಯದ ಅರ್ಥ ಭೂಮಿ ಸೂರ್ಯರಿಗಿರುವ ಸರಾಸರಿ ದೂರವು ಭೂಮಿಯ ಸರಾಸರಿ ತ್ರಿಜ್ಯದ ೨೩,೪೭೦ ರಷ್ಟು ಎಂದು. ಅಲ್ಲಿಗೆ ಸೂರ್ಯನ ದೂರವು ೯,೩೦,೦೫,೦೦೦ ಮೈಲಿಗಳಾಗುತ್ತದೆ. ನಕ್ಷತ್ರಗಳ ದೂರ ನಿರ್ಣಯಕ್ಕೆ ಇದು ಆಧಾರ ದೂರವಾದುದರಿಂದ ಇದಕ್ಕೆ ಖಗೋಳಮಾನ[2]ವೆಂದು ಹೆಸರು. ಪ್ರಾಯೋಗಿಕ ಖಗೋಳ ವಿಜ್ಞಾನದ ನಿಯತಾಂಕ[3]ಗಳಲ್ಲಿ ಖಗೋಳ ಮಾನವು ಪ್ರಧಾನವಾದ ನಿಯತಾಂಕ.

ಸೂರ್ಯನ ದಿಗ್ವ್ಯತ್ಯಾಸವನ್ನು ೧೯೪೪ ಕ್ಕೆ ಮುಂಚೆ ೮.೮೦ ಕೋನ ಸೆಕೆಂಡುಗಳೆಂದು ನಿರ್ಣಯಿಸಿದ್ದರು. ಈ ಸಂಖ್ಯೆಯನ್ನು ೮.೭೯೦ ಎಂದು ತಿದ್ದಲು ಖಗೋಳಜ್ಞರು ಲಕ್ಷಾಂತರ ರೂಪಾಯಿಗಳನ್ನೂ ಹನ್ನೆರಡು ವರ್ಷಗಳ ಶ್ರಮವನ್ನೂ ವ್ಯಯಿಸಿದುದು ನ್ಯಾಯ ಸಮ್ಮತವೇ ಎಂದು ನಮಗೆನ್ನಿಸಬಹುದು. ಆದರೆ ವಿಶ್ವದ ಎಲ್ಲ ಅಳತೆಗಳಿಗೂ ಈ ಅಂಕೆಯು ಮೂಲಾಧಾರವಾದುದರಿಂದ ಇನ್ನೊಂದು ಕೋಟಿ ರೂಪಾಯಿಗಳ ವ್ಯಯದಿಂದ ಈ ಸಂಖ್ಯೆಯ ನಾಲ್ಕನೆಯ ದಶಮಾಂಶ ಸ್ಥಾನವನ್ನು ನಿರ್ಧರಿಸಲು ಸಾಧ್ಯವಾದಲ್ಲಿ ಆ ಖರ್ಚು ಹೆಚ್ಚೇನೂ ಅಲ್ಲವೆಂದು ಖಗೋಳಜ್ಞರ ಮತ.

[1] Solar Parallax. [2] Astronomical Unit. [3] Constant.

೪. ಸೂರ್ಯನ ಗಾತ್ರ

ಭೂ ಪಥವು ಸರಿಯಾಗಿ ವೃತ್ತಾಕಾರದಲ್ಲಿಲ್ಲದೆ ಅಂಡಾಕಾರವಾಗಿರುವುದರಿಂದ ಜನವರಿ ೧ ರಲ್ಲಿ ಭೂಮಿಯ ದೂರವು ಜುಲೈ ೧ ರ ದೂರಕ್ಕಿಂತ ೩೦ ಲಕ್ಷ ಮೈಲಿಗಳು ಕಡಿಮೆ ಇರುತ್ತದೆ. ದೂರವು ಹೀಗೆ ವ್ಯತ್ಯಾಸವಾಗುವುದರಿಂದ ಸೂರ್ಯಬಿಂಬದ ವ್ಯಾಸದ ಕೋನಾಂತರವೂ ಹೆಚ್ಚು ಕಡಿಮೆಯಾಗುತ್ತದೆ. ಸೂರ್ಯನ ಸರಾಸರಿ ಕೋನ ವ್ಯಾಸವು[1] ಇತ್ತೀಚಿನ ಅಳತೆಗಳಿಂದ ೩೧ ಕೋನ ನಿಮಿಷ ೫೯.೨೬ ಕೋನ ಸೆಕೆಂಡುಗಳೆಂದು ನಿರ್ಣಯವಾಗಿದೆ. ಸೂರ್ಯನ ಸರಾಸರಿ ದೂರವೂ ತಿಳಿದಿರುವುದರಿಂದ ಸೂರ್ಯನ ವ್ಯಾಸವನ್ನು ಈಗ ಗುಣಿಸಬಹುದು. ಸೂರ್ಯನ ವ್ಯಾಸವು ೮,೬೫,೩೮೦ ಮೈಲಿಗಳು. ಇದು ಭೂಮಿಯ ವ್ಯಾಸದ ೧೦೯ ರಷ್ಟು. ಚಂದ್ರನು ನಮ್ಮಿಂದ ೨,೩೮,೮೫೭ ಮೈಲಿಗಳ ದೂರದಲ್ಲಿದ್ದಾನೆ. ಆದುದರಿಂದ ಭೂಮಿಯನ್ನು ಸೂರ್ಯನ ಕೇಂದ್ರಕ್ಕೆ ಸಾಗಿಸಿದರೆ ಚಂದ್ರನು ಸೂರ್ಯನ ತ್ರಿಜ್ಯದ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ದೂರದಲ್ಲಿ ತಿರುಗುತ್ತಿರುತ್ತಾನೆ.

ಸೂರ್ಯನ ಅಗಾಧ ಗಾತ್ರವನ್ನು ಗ್ರಹಿಸಲು ಭೂಮಿ ಸೂರ್ಯರ ಘನಾವಕಾಶಗಳನ್ನು[2] ಹೋಲಿಸಿ ನೋಡುವುದು ಸೂಕ್ತ. ಗೋಳಗಳ ಘನಾವಕಾಶಗಳು ಅವುಗಳ ವ್ಯಾಸಗಳ ಘನಗಳಿಗನುಪಾತವಾಗಿರುವುದರಿಂದ ಸೂರ್ಯನ ಅವಕಾಶವು ಭೂಮಿಯದರ ೧೩ ಲಕ್ಷದಷ್ಟಾಗುತ್ತದೆ, ಅಂದರೆ ಒಂದು ಸೂರ್ಯನಲ್ಲಿ ೧೩ ಲಕ್ಷ ಭೂಮಿಗಳನ್ನು ಅಡಗಿಸಿಡಬಹುದು.

೫. ದಿಗ್ವ್ಯತ್ಯಾಸ ವಿಧಾನದಿಂದ ನಕ್ಷತ್ರಗಳ ದೂರ

ಸೂರ್ಯನ ದೂರವನ್ನು ಅಥವಾ ಕ್ಷುದ್ರ ಗ್ರಹದ ದೂರವನ್ನು ನಿರ್ಣಯಿಸಲು ಉಪಯೋಗಿಸಿದ ವಿಧಾನದಿಂದಲೇ ನಕ್ಷತ್ರಗಳ ದೂರಗಳನ್ನೂ ಅಳೆಯಬಹುದು. ಆದರೆ ನಕ್ಷತ್ರಗಳು ನಮ್ಮಿಂದ ಬಹಳ ದೂರವಿರುವುದರಿಂದ ಭೂಮಿಯ ಮೇಲಣ ದೂರತಮದ ಎರಡು ಸ್ಥಳಗಳನ್ನು ಆರಿಸಿಕೊಂಡರೂ ನಕ್ಷತ್ರದ ದಿಕ್ಕಿನಲ್ಲಿ ಯಾವ ವ್ಯತ್ಯಾಸವೂ ತೋರಿಬರುವುದಿಲ್ಲ. ಆದಕಾರಣ ಇದಕ್ಕೂ ದೊಡ್ಡದಾದ ಆಧಾರ ರೇಖೆ[3] ನಮಗೆ ಬೇಕು. ಭೂಪಥದ ವ್ಯಾಸಕ್ಕಿಂತ ದೊಡ್ಡದಾದ ಯಾವ ದೂರವೂ ನಮಗೆ ದೊರಕುವುದಿಲ್ಲ. ಭೂಪಥದ ವ್ಯಾಸವನ್ನು ಆಧಾರ ರೇಖೆಯನ್ನಾಗಿ ಮಾಡಿಕೊಂಡು ನಕ್ಷತ್ರದ ದಿಗ್ವ್ಯತ್ಯಾಸವನ್ನು ಕಂಡುಹಿಡಿಯುವ ವಿಧಾನ ಹೀಗೆ. ಯಾವ ನಕ್ಷತ್ರದ ದೂರವನ್ನು ನಿರ್ಣಯಿಸಬೇಕಾಗಿದೆಯೋ ಆ ನಕ್ಷತ್ರ ಪ್ರದೇಶದ ಚಿತ್ರ

---

[1] Angular diameter. [2] Volumes. [3] Base line.

ವನ್ನು ಜನವರಿ ೧ ರಲ್ಲಿ ಛಾಯಾ ಚಿತ್ರದ ಫಲಕದ ಮೇಲೆ ತೆಗೆಯುತ್ತಾರೆ. ಜುಲೈ ೧ ರಲ್ಲಿ ಭೂಮಿಯು ಈ ಸ್ಥಾನದಿಂದ ೧೮,೬೦,೧೦,೦೦೦ ಮೈಲಿಗಳ ದೂರ ಚಲಿಸಿರುತ್ತದೆ. ಆಗ ಅದೇ ಪ್ರದೇಶದ ಮತ್ತೊಂದು ಚಿತ್ರವನ್ನು ತೆಗೆಯುತ್ತಾರೆ. ಎರಡನ್ನೂ ಹೋಲಿಸಿದರೆ ನಕ್ಷತ್ರಗಳ ಸಾಪೇಕ್ಷ ಸ್ಥಾನಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಎಲ್ಲ ನಕ್ಷತ್ರಗಳೂ ನಮ್ಮಿಂದ ಒಂದೇ ದೂರದಲ್ಲಿಲ್ಲ. ಸಾಮಾನ್ಯವಾಗಿ ಬಹಳ ಕ್ಷೀಣ



ಚಿತ್ರ ೭

ತಾರಾ ದಿಗ್ವ್ಯತ್ಯಾಸ ನಿರ್ಣಯ

ಕಾಂತಿಯ ತಾರೆಗಳು ಕಾಂತಿಯುತ ತಾರೆಗಳಿಗಿಂತ ದೂರದಲ್ಲಿವೆ ಎಂದು ಹೇಳಬಹುದು. ಇಂತಹ ಕ್ಷೀಣಕಾಂತಿಯ ಒಂದು ತಾರೆಗೂ ನಮಗೆ ಬೇಕಾದ ತಾರೆಗೂ ಇರುವ ಅಂತರವನ್ನು ಜನವರಿ ೧ ರ ಮತ್ತು ಜುಲೈ ೧ ರ ಎರಡು ಚಿತ್ರಗಳಲ್ಲಿಯೂ ಅಳೆಯುತ್ತಾರೆ (ಚಿತ್ರ ೭). ಈ ಅಂತರಗಳ ವ್ಯತ್ಯಾಸದಿಂದ ಭೂಪಥವ್ಯಾಸಕ್ಕೆ ನಕ್ಷತ್ರವು ತೋರುವ ದಿಗ್ವ್ಯತ್ಯಾಸವನ್ನು ಗುಣಿಸಬಹುದು, ಅಂದರೆ ನಕ್ಷತ್ರವು ನಮ್ಮಿಂದ ಭೂಪಥವ್ಯಾಸದ ಎಷ್ಟರಷ್ಟು ದೂರದಲ್ಲಿದೆ ಎಂದು ಗೊತ್ತಾಗುತ್ತದೆ. ಸೂರ್ಯನ ದೂರವು ನಮಗೆ ತಿಳಿದಿದೆಯಾದ ಕಾರಣ ನಕ್ಷತ್ರದ ದೂರವೂ ತಿಳಿಯುತ್ತದೆ. ಈ ವಿಧಾನದಲ್ಲಿ ಕ್ಷೀಣ ಕಾಂತಿಯ ನಕ್ಷತ್ರದ ದೂರವು ಅನಂತ ದೂರವೆಂದು ಗಣಿಸಲ್ಪಟ್ಟಿದೆ. ಅದರ ಬದಲು ಸಹಜವಾಗಿಯೇ ಇದರ ಕಾಂತಿ ಕಡಿಮೆ ಇದ್ದು ಇದರ ದೂರವು ಅಷ್ಟೇನೂ ಹೆಚ್ಚಿಗೆ ಇಲ್ಲದಿರುವುದೂ ಸಾಧ್ಯವಲ್ಲವೇ ಎಂಬ ಅನುಮಾನವೂ ಬರಬಹುದು. ಈ ಅನುಮಾನ ನಿವಾರಣೆಯ ಮಾರ್ಗವು ಸುಲಭ. ಚಿತ್ರಗಳಲ್ಲಿ ಹಲವಾರು ಕಾಂತಿಹೀನ ತಾರೆಗಳಿಗೂ ಅಳತೆಯ ತಾರೆಗೂ ಇರುವ ಅಂತರಗಳ ವ್ಯತ್ಯಾಸವನ್ನು

ಕಂಡುಹಿಡಿಯುತ್ತಾರೆ. ಒಂದೇ ವ್ಯತ್ಯಾಸವನ್ನು ತೋರುವ ತಾರೆಗಳೆಲ್ಲಾ ಅತಿ ದೂರದ ತಾರೆಗಳು, ಮಿಕ್ಕವು ಅಷ್ಟು ದೂರವಲ್ಲ. ಅವುಗಳ ದೂರವನ್ನೂ ಇದೇ ವಿಧಾನದಿಂದ ನಿರ್ಣಯಿಸಬಹುದು.

ಭೂಪಥವ್ಯಾಸದಷ್ಟು ಹಿರಿದಾದ ಆಧಾರ ರೇಖೆಯಿಂದ ಅಳೆದರೂ ನಕ್ಷತ್ರಗಳ ದಿಗ್ವ್ಯತ್ಯಾಸವು ಅತ್ಯಲ್ಪ ಪರಿಮಾಣದ್ದು. ಭೂಮಿ ಸೂರ್ಯರ ಸರಾಸರಿ ದೂರವು—ಭೂಪಥ ವ್ಯಾಸಾರ್ಧ—ನಕ್ಷತ್ರಕ್ಕೆ ತೋರುವ ಕೋನವನ್ನು ನಕ್ಷತ್ರದ ದಿಗ್ವ್ಯತ್ಯಾಸ[1]ವೆಂದು ಕರೆಯುತ್ತಾರೆ. ನಕ್ಷತ್ರದ ದೂರ ಹೆಚ್ಚಿದಂತೆ ದಿಗ್ವ್ಯತ್ಯಾಸವು ಕಡಿಮೆಯಾಗುತ್ತದೆ. ನಮಗೆ ಅತ್ಯಂತ ಸಮೀಪ ನಕ್ಷತ್ರದ—*α*—Centaurus; ಕಬಂಧ ಬಾಹು—ದಿಗ್ವ್ಯತ್ಯಾಸವು ಮುಕ್ಕಾಲು (೦.೭೬) ಕೋನ ಸೆಕೆಂಡುಗಳು ಮಾತ್ರ; ಅಂದರೆ ಆದರ ದೂರವು ಭೂಮಿ ಸೂರ್ಯರಿಗಿರುವ ದೂರದ ಸುಮಾರು ೩ ಲಕ್ಷದಷ್ಟು. ಇದನ್ನು ಮೈಲಿಗಳಲ್ಲಿ ಬರೆದರೆ ಬಹಳ ದೊಡ್ಡ ಸಂಖ್ಯೆಯಾಗುತ್ತದೆ. ಆದಕಾರಣ ನಕ್ಷತ್ರಗಳ ದೂರವನ್ನು ತಿಳಿಸಲು ಒಂದು ದೊಡ್ಡ ಮಾನವನ್ನು ಉಪಯೋಗಿಸುತ್ತಾರೆ. ಅದಕ್ಕೆ ಜ್ಯೋತಿರ್ವರ್ಷ[2]ವೆಂದು ಹೆಸರು. ಬೆಳಕು ಒಂದು ಸೆಕೆಂಡಿಗೆ ೧,೮೬,೦೦೦ ಮೈಲಿಗಳ ವೇಗದಲ್ಲಿ ಹರಡುತ್ತದೆ. ಈ ವೇಗದಂತೆ ಒಂದು ವರ್ಷದಲ್ಲಿ ಬೆಳಕು ಎಷ್ಟು ದೂರ ಹಾರುತ್ತದೆಯೋ ಆ ದೂರವು ಒಂದು ಜ್ಯೋತಿರ್ವರ್ಷ. ಒಂದು ಜ್ಯೋತಿರ್ವರ್ಷಕ್ಕೆ ಸುಮಾರು ೬ ಲಕ್ಷ ಕೋಟಿ (೬×೧೦^{೧೨}) ಮೈಲಿಗಳು. ನಮ್ಮ ಸಮೀಪತಮ ನಕ್ಷತ್ರದ ದೂರವು ಸುಮಾರು ನಾಲ್ಕೂ ಕಾಲು (೪.೨೮) ಜ್ಯೋತಿರ್ವರ್ಷಗಳಾಗುತ್ತದೆ. ಇದು ಬೆಂಗಳೂರಿಂದ ಮದರಾಸು ಒಂಬತ್ತು ರೈಲು ಗಂಟೆಗಳ ಅಥವಾ ಒಂದು ವಿಮಾನ ಗಂಟೆಯ ದೂರದಲ್ಲಿದೆ ಎಂದ ಹಾಗೆ.

ಖಗೋಳಜ್ಞರು ಮತ್ತೊಂದು ದೂರಮಾನವನ್ನೂ ಬಳಸುತ್ತಾರೆ. ಯಾವ ದೂರಕ್ಕೆ ದಿಗ್ವ್ಯತ್ಯಾಸವು ಸರಿಯಾಗಿ ಒಂದು ಕೋನ ಸೆಕೆಂಡಾಗುತ್ತದೆಯೋ ಅದಕ್ಕೆ ಒಂದು ಪಾರ್ಸೆಕ್ ಎನ್ನುತ್ತಾರೆ. ಒಂದು ಪಾರ್ಸೆಕ್ ಎಂದರೆ ಸುಮಾರು ಮೂರೂ ಕಾಲು (೩.೨೬) ಜ್ಯೋತಿರ್ವರ್ಷಗಳು. ಸೆಕೆಂಡುಗಳಲ್ಲಿ ತಿಳಿಸಿದ ದಿಗ್ವ್ಯತ್ಯಾಸದ ವಿಲೋಮಾಂಕವು[3] ಪಾರ್ಸೆಕ್ ಆಗುತ್ತದೆ. ಸಮೀಪತಮ ನಕ್ಷತ್ರದ ದೂರವು $೧\frac{೧}{೩}$ ಪಾರ್ಸೆಕ್‌ಗಳು ($\frac{೧}{೦.೭೬}$).

ಈ ಅಗಾಧ ದೂರಗಳ ಕಲ್ಪನೆಯಾದರೂ ನಮಗಾಗಬೇಕಾದರೆ ಒಂದು ಉದಾಹರಣೆಯು ಅವಶ್ಯ. ಸೂರ್ಯನನ್ನು ಒಂದು ಅಡಿ ವ್ಯಾಸದ ಗೋಳಕ್ಕೆ—ಒಂದು ಕುಂಬಳಕಾಯಿಯಷ್ಟಕ್ಕೆ—ಇಳಿಸಿದರೆ ಅದರಿಂದ ಸುಮಾರು ೧೧೦ ಅಡಿಗಳ

[1] Stellar parallax [2] Light-year. [3] Reciprocal.

ದೂರದಲ್ಲಿ ೧/೮ ಅಂಗುಲ ವ್ಯಾಸದ—ಹೆಸರು ಕಾಳಿನಷ್ಟು—ಗೋಳವು ಭೂಮಿಯನ್ನು ಸೂಚಿಸುತ್ತದೆ. ಇದಕ್ಕೆ ಸುಮಾರು ೬ ೧/೨ ಅಂಗುಲ ದೂರದಲ್ಲಿ ರಾಗಿಯ ಕಾಳಿಗಿಂತ ಸಣ್ಣ ಕಣವೊಂದು ಚಂದ್ರನನ್ನು ಸೂಚಿಸುತ್ತದೆ. ಸೂರ್ಯನ ಮಾದರಿ ಗೋಳಕ್ಕೆ ಸುಮಾರು ೧ ಮೈಲಿ ದೂರದಲ್ಲಿ ಪ್ಲುಟೋ ಗ್ರಹವು ಚಲಿಸುತ್ತಿರುತ್ತದೆ. ಈ ವ್ಯೂಹದಿಂದ ಸುಮಾರು ೫,೦೦೦ ಮೈಲಿಗಳ ದೂರದಲ್ಲಿ ಇನ್ನೊಂದು ಗೋಳವು ಅತ್ಯಂತ ಹತ್ತಿರದ ನಕ್ಷತ್ರವನ್ನು ಸೂಚಿಸುತ್ತದೆ. ಇತರ ನಕ್ಷತ್ರಗಳು ಇನ್ನೂ ಹೆಚ್ಚು ದೂರದಲ್ಲಿರುತ್ತವೆಯೇ ಅಲ್ಲದೆ ಅವುಗಳ ಪರಸ್ಪರ ದೂರವೂ ೫-೬ ಸಾವಿರ ಮೈಲಿ (೪-೫ ಜ್ಯೋತಿರ್ವರ್ಷ)ಗಳಿಗೆ ಕಡಿಮೆ ಇಲ್ಲದಂತೆ ಹರಡಿರುತ್ತವೆ. ವಿಶ್ವದ ವಿಶಾಲ ಶೂನ್ಯಾಕಾಶದಲ್ಲಿ ಅಲ್ಲೊಂದು ಇಲ್ಲೊಂದು ನಕ್ಷತ್ರವು ಮಿನುಗುತ್ತಿದೆ.

ನಕ್ಷತ್ರದ ದೂರವು ೧೦೦ ಜ್ಯೋತಿರ್ವರ್ಷಗಳೊಳಗಿದ್ದರೆ ದಿಗ್ವ್ಯತ್ಯಾಸದ ವಿಧಾನದಿಂದ ಸಾಕಷ್ಟು ನಿಷ್ಕೃಷ್ಟವಾಗಿ ದೂರವನ್ನು ನಿರ್ಣಯಿಸಬಹುದು. ದೂರವು ೨೦೦ ಜ್ಯೋತಿರ್ವರ್ಷಗಳಿಗಿಂತ ಹೆಚ್ಚಿದ್ದರೆ ದಿಗ್ವ್ಯತ್ಯಾಸವು ತೋರುವುದೇ ಇಲ್ಲ. ಇಂತಹ ನಕ್ಷತ್ರಗಳ ದೂರ ನಿರ್ಣಯಕ್ಕೆ ಬೇರೆ ಮಾರ್ಗಗಳನ್ನನುಸರಿಸಬೇಕು. ಕೆಲವನ್ನು ಈಗ ವಿವರಿಸುತ್ತೇವೆ.

೬. ನಕ್ಷತ್ರಗಳ ಕಾಂತಿವರ್ಗಗಳು[1]

ಕೆಲವು ನಕ್ಷತ್ರಗಳ ಕಾಂತಿ ಹೆಚ್ಚು, ಕೆಲವುಗಳ ಕಾಂತಿ ಕಡಮೆ ಎಂಬುದು ಎಲ್ಲರ ಅನುಭವದ ಸಂಗತಿ. ಖಗೋಳ ವಿಜ್ಞಾನಿಯು ಕಣ್ಣಿಗೆ ಕಾಣುವ ನಕ್ಷತ್ರಗಳನ್ನು ಅವುಗಳ ಕಾಂತಿಗನುಗುಣವಾಗಿ ಆರು ವರ್ಗಗಳಾಗಿ ವಿಂಗಡಿಸಿದ್ದಾನೆ. ವೃಷಭ ರಾಶಿ[2] ಯಲ್ಲಿರುವ ರೋಹಿಣೀ[3] ತಾರೆಯನ್ನು ನಾವು ಪ್ರಥಮ ವರ್ಗದ ತಾರೆಗೆ ದೃಷ್ಟಾಂತವಾಗಿ ತೆಗೆದುಕೊಳ್ಳಬಹುದು. ರೋಹಿಣೀ ತಾರೆಯ ಕಾಂತಿಯ ಸುಮಾರು ೨/೫ ರಷ್ಟು (ನಿಷ್ಕೃಷ್ಟವಾಗಿ ೦.೩೯೮೧) ಕಾಂತಿಯ ತಾರೆಯನ್ನು ದ್ವಿತೀಯ ವರ್ಗದ ತಾರೆಯೆಂದು ಕರೆಯುತ್ತಾರೆ. ಹಾಗೆಯೇ ದ್ವಿತೀಯ ವರ್ಗಾಂಕದ ತಾರೆಯ ೨/೫ ರ ಕಾಂತಿಯುಳ್ಳುದು ತೃತೀಯ ವರ್ಗದ ತಾರೆ. ತಾರೆಯ ಕಾಂತಿವರ್ಗಾಂಕವು ಒಂದು ಏರಿದಂತೆ ಅದರ ಕಾಂತಿಯು ೨/೫ ರಷ್ಟು ಇಳಿಯುತ್ತದೆ, ಹಾಗೂ ಕಾಂತಿವರ್ಗಾಂಕವು ಒಂದು ಇಳಿದರೆ ಕಾಂತಿಯು ಸುಮಾರು ೨ ೧/೨ ಯಷ್ಟು (ನಿಷ್ಕೃಷ್ಟವಾಗಿ ೨.೫೧೨) ವೃದ್ಧಿಯಾಗುತ್ತದೆ. ಆದರೆ ಕಾಂತಿವರ್ಗಾಂಕವು ಎರಡು ಇಳಿದರೆ ಕಾಂತಿಯು ವೃದ್ಧಿಯಾಗುವುದು ಐದರಷ್ಟಲ್ಲ, ಸುಮಾರು ಆರೂಕಾಲರಷ್ಟು (ನಿಷ್ಕೃಷ್ಟವಾಗಿ

---

[1] Stellar magnitudes. [2] Constellation of Taurus. [3] Aldebaran.

೨.೫೧೨ × ೨.೫೧೨ = ೬.೩೧ ರಷ್ಟು) ಎಂಬುದನ್ನು ಗಮನದಲ್ಲಿಡಬೇಕು. ಇದೇ ರೀತಿಯಲ್ಲಿ ಕಾಂತಿವರ್ಗಾಂಕವು ಮೂರು ಇಳಿದರೆ (೫ ರಿಂದ ೨ ಕ್ಕೆ, ೪ ರಿಂದ ೧ ಕ್ಕೆ ಇತ್ಯಾದಿ) ಕಾಂತಿಯು ಸುಮಾರು ೧೬ ರಷ್ಟು ($೨.೫೧೨^{೩}$ = ೧೫.೮೫) ಏರುತ್ತದೆ. ಅಲ್ಲಿಗೆ ಕಾಂತಿ ವರ್ಗಾಂಕಗಳ ಸಮ ವ್ಯತ್ಯಾಸಗಳು ಕಾಂತಿಯ ಸಮಪ್ರಮಾಣಗಳನ್ನು ಸೂಚಿಸುತ್ತವೆ ಎಂದ ಹಾಗಾಯಿತು. ಈ ನಿಯಮದಂತೆ ೬ ನೆಯ ವರ್ಗದ ತಾರೆಯ ಕಾಂತಿಯು ೧ ನೆಯ ವರ್ಗದ ತಾರೆಯ ಕಾಂತಿಯ ೦.೩೯ × ೦.೩೯ × ೦.೩೯ × ೦.೩೯ × ೦.೩೯ = $\frac{೧}{೧೦೦}$ ರಷ್ಟು ಆಗುತ್ತದೆ; ಅಥವಾ ಪ್ರಥಮ ವರ್ಗದ ತಾರೆಯ ಕಾಂತಿಯು ಷಷ್ಠವರ್ಗದ್ದಕಿಂತ ೧೦೦ ರಷ್ಟು ($೨.೫೧೨^{೫}$ = ೧೦೦) ಅಧಿಕ. ಒಂದು ನೂರನ್ನು ಐದು ಸಮ ಪ್ರಮಾಣಗಳಾಗಿ ವರ್ಗಿಸಿದರೆ ೨.೫೧೨ ಆಗುವುದರಿಂದಲೇ ಎರಡು ತಾರೆಗಳ ಕಾಂತಿಪ್ರಮಾಣವು ೨.೫೧೨ ಆದರೆ, ಅವುಗಳ ಕಾಂತಿವರ್ಗಾಂಕಗಳ ವ್ಯತ್ಯಾಸವು ೧ ಇರಲೆಂಬ ನಿರ್ಣಯಕ್ಕೆ ಬಂದಿರುವುದು.

ಒಂದು ತಾರೆಯ ಕಾಂತಿ ವರ್ಗಾಂಕವು ಪೂರ್ಣಾಂಕವಾಗಿಯೇ ಇರಬೇಕೆಂದು ಹೇಗೆ ಹೇಳಲಾದೀತು? ಉದಾಹರಣೆಗೆ ಎರಡು ತಾರೆಗಳ ಕಾಂತಿ ಪ್ರಮಾಣವು $\frac{೮}{೫}$ ಅಥವಾ $\frac{೫}{೮}$ ಆದರೆ ಅವುಗಳ ಕಾಂತಿ ವರ್ಗಾಂಕ ವ್ಯತ್ಯಾಸವು $\frac{೧}{೨}$; ಏಕೆಂದರೆ ೨.೫೧೨ ರ ವರ್ಗಮೂಲವು ೧.೫೮೫ ಅಥವಾ ಸುಮಾರು $\frac{೮}{೫}$, ಹಾಗೆಯೇ ೦.೩೯೮ ರ ವರ್ಗಮೂಲವು ೦.೬೩೦ ಅಥವಾ ಸುಮಾರು $\frac{೫}{೮}$. ನಕ್ಷತ್ರದ ಕಾಂತಿಯು ಹೆಚ್ಚಾದಂತೆ ಅದರ ಕಾಂತಿ ವರ್ಗಾಂಕವು ಕಡಮೆಯಾಗುತ್ತದಷ್ಟೆ. ಆದಕಾರಣ ಶೂನ್ಯ ಮತ್ತು ಋಣಾಂಕದ ತಾರೆಗಳು ಇರುವುದೇನೂ ಆಶ್ಚರ್ಯವಲ್ಲ. ಪ್ರಥಮ ವರ್ಗದ ತಾರೆಗಿಂತ ಎರಡೂವರೆಯಷ್ಟು ಅಧಿಕ ಕಾಂತಿಯಿಂದ ಬೆಳಗುವ ತಾರೆಯ ಕಾಂತ್ಯಂಕವು ಸೊನ್ನೆ, ಆರೂಕಾಲರಷ್ಟು ಕಾಂತಿಯಿಂದ ಹೊಳೆದರೆ ಅದರ ಕಾಂತ್ಯಂಕವು — ೧ ಆಗುತ್ತದೆ. ಈಗ ಹಲವು ಪರಿಚಿತ ಆಕಾಶಕಾಯಗಳ ಕಾಂತಿ ವರ್ಗಾಂಕಗಳನ್ನು ನಾವು ಪರಿಶೀಲಿಸಬಹುದು. ಶ್ರವಣ[1] ತಾರೆಯ ಕಾಂತಿ ವರ್ಗಾಂಕವು ೦.೯, ರೋಹಿಣಿ[2]ಯದು ವಾಸ್ತವವಾಗಿ ೧.೧ (ಉದಾಹರಣೆಯ ಸೌಕರ್ಯಕ್ಕಾಗಿ ಇದುವರೆಗೆ ೧ ಎಂದು ಇಟ್ಟುಕೊಂಡಿತ್ತು), ಸಪ್ತರ್ಷಿ ಮಂಡಲದ ಪ್ರಥಮ ತಾರೆಯಾದ ಕ್ರತು[3]ವಿನದು ೨.೦, ಅರುಂಧತಿ[4]ಯದು ಸುಮಾರು ೪.೫, ಅಭಿಜಿತ್[5] ನಕ್ಷತ್ರದ ವರ್ಗಾಂಕವು ೦.೧ ಮತ್ತು ಲುಬ್ಧಕ[6] ನಕ್ಷತ್ರದ ಕಾಂತಿಯು ಶ್ರವಣದ್ದಕ್ಕಿಂತ ೨$\frac{೧}{೨}$ ವರ್ಗಗಳು ಅಧಿಕವಾದುದರಿಂದ ಅದರ ಕಾಂತಿ ವರ್ಗಾಂಕವು

---

1 Altair. 2 Aldebaran. 3 Dubhe
4 Alcor. 5 Vega. 6 Sirius

೦.೯—೨.೫ ಅಂದರೆ —೧.೬. ಈ ಮಾನದಲ್ಲಿ ಪೂರ್ಣಚಂದ್ರನ ಕಾಂತಿ ವರ್ಗಾಂಕವು —೧೨.೨, ಸೂರ್ಯನದು—೨೬.೭.

ಬರಿಯ ಕಣ್ಣಿಗೆ ೬ ನೆಯ ವರ್ಗಕ್ಕಿಂತ ಹೆಚ್ಚಿನ ವರ್ಗಗಳು ಕಾಣದಿದ್ದರೂ ದೂರದರ್ಶಿನಿಯ ಸಹಾಯದಿಂದ ಅವನ್ನೂ ವೀಕ್ಷಿಸಬಹುದು. ಅಮೆರಿಕದ ವಿಲ್ಸನ್ ಸಮೀಕ್ಷಾ ಮಂದಿರದ ೧೦೦ ಅಂಗುಲ ವ್ಯಾಸದ ದೂರದರ್ಶಿನಿಗೆ ೨೧ ನೆಯ ವರ್ಗದ ವರೆಗಿನ ತಾರೆಗಳೆಲ್ಲ ಗೋಚರಗಳು. ಕೆಳಗಿನ ಪಟ್ಟಿಯಲ್ಲಿ ಕಾಂತಿವರ್ಗಾಂಕಗಳು ಮತ್ತು ಆ ಅಂಕಗಳಿಗೆ ಸರಿಯಾದ ಕಾಂತಿ ಪ್ರಮಾಣಗಳನ್ನು ಕೊಟ್ಟಿದೆ.

ಕಾಂತಿ ವರ್ಗಾಂಕ	ತಾರೆಯ ಕಾಂತಿ / ಪ್ರಥಮ ವರ್ಗದ ತಾರೆಯ ಕಾಂತಿ	ಕಾಂತಿ ವರ್ಗಾಂಕ	ತಾರೆಯ ಕಾಂತಿ / ಪ್ರಥಮ ವರ್ಗದ ತಾರೆಯ ಕಾಂತಿ
—೧೪	೧೦,೦೦,೦೦೦	೧.೫	೦.೬೩೦೮
—೯	೧೦,೦೦೦	೨	೦.೩೯೮೧
—೪	೧೦೦	೩	೦.೧೫೮೫
—೩	೩೯.೮೧	೪	೦.೦೬೩೧
—೨	೧೫.೮೫	೫	೦.೦೨೫೧
—೧	೬.೩೧೩	೬	೦.೦೧
೦	೨.೫೧೨	೧೧	೦.೦೦೦೧
೦.೫	೧.೫೮೫	೧೬	೦.೦೦೦೦೦೧
೧	೧	೨೧	೦.೦೦೦೦೦೦೦೧

ನಕ್ಷತ್ರಗಳು ನಮಗೆ ತೋರುವ ಕಾಂತಿ ವ್ಯತ್ಯಾಸಕ್ಕೆ ಅವುಗಳ ಸಹಜಕಾಂತಿಗಳ ವ್ಯತ್ಯಾಸ ಮುಖ್ಯಕಾರಣವಲ್ಲ, ದೂರ ವ್ಯತ್ಯಾಸವೇ ಪ್ರಧಾನ ಕಾರಣ. ಖಗೋಳ ವಿಜ್ಞಾನಾನ್ವೇಷಣಗಳಲ್ಲಿ ನಿರತರಾಗಿರುವವರಿಗೆ ದೂರ ನಿಮಿತ್ತದ ಈ ತೋರಿಕೆಯ ಕಾಂತಿವರ್ಗ ವಿಂಗಡಣಕ್ಕಿಂತ ಸಹಜಕಾಂತಿ ವರ್ಗ ವಿಂಗಡಣೆಯು ಹೆಚ್ಚು ಪ್ರಯೋಜನಕಾರಿ. ಎಲ್ಲ ನಕ್ಷತ್ರಗಳೂ ನಮ್ಮಿಂದ ೧೦ ಪಾರ್ಸೆಕ್ (೩೨.೬ ಜ್ಯೋತಿರ್ವರ್ಷಗಳ) ಗಳ ದೂರದಲ್ಲಿದ್ದರೆ ಯಾವ ಕಾಂತಿವರ್ಗಾಂಕದವಾಗಿ ತೋರುತ್ತಿದ್ದುವೋ ಅವು ನಕ್ಷತ್ರಗಳ ಸಹಜಕಾಂತಿವರ್ಗಾಂಕಗಳು[1]. ನಕ್ಷತ್ರದ ಕಾಂತಿಯು ಅದರ ದೂರದ ವರ್ಗಕ್ಕೆ ವಿಲೋಮಾನುಪಾತವಾಗಿ ತೋರುವುದರಿಂದ, ತೋರಿಕೆಯ ಕಾಂತಿ ಮತ್ತು ದೂರಗಳು ತಿಳಿದಿದ್ದರೆ ಸಹಜಕಾಂತಿಯನ್ನು ಗುಣಿಸಬಹುದು. ಉದಾಹರಣೆಗೆ ೧೦೦ ಪಾರ್ಸೆಕ್‌ಗಳ ದೂರದಲ್ಲಿರುವ ನಕ್ಷತ್ರದ ಕಾಂತಿವರ್ಗಾಂಕವು

[1] Absolute Stellar magnitudes.

೬ ಎಂದು ನಮಗೆ ಕಂಡುಬಂದರೆ ೧೦ ಪಾರ್ಸೆಕ್‌ಗಳಷ್ಟು ಸಮೀಪ ಆ ನಕ್ಷತ್ರವು ಬಂದಾಗ ಅದರ ಕಾಂತಿಯು ೧೦×೧೦ ಅಥವಾ ನೂರುಮಡಿ ಅಧಿಕವಾಗಿ ತೋರುತ್ತದೆ. ಕಾಂತಿಪ್ರಮಾಣವು ೧೦೦ ಆದರೆ ಕಾಂತಿವರ್ಗಾಂಕ ವ್ಯತ್ಯಾಸವು ೫. ಆದ ಕಾರಣ ಈ ನಕ್ಷತ್ರದ ಸಹಜಕಾಂತಿವರ್ಗವು ೬—೫=೧ ಆಗುತ್ತದೆ. ಈ ನಿಯಮದಂತೆ ಗುಣಿಸಿದ ಸೂರ್ಯನ ಸಹಜಕಾಂತಿಯು ೪.೭, ಲುಬ್ಧಕದ ಸಹಜಕಾಂತಿಯು ೧.೩. ಇದರ ಅರ್ಥ ಲುಬ್ಧಕತಾರೆಯು ಸೂರ್ಯನ ೨೫ ರಷ್ಟು ಪ್ರಕಾಶಮಾನವಾದುದು ಎಂದು.

ಇದುವರೆಗೆ ಸಮೀಕ್ಷೆಗೆ ಸಿಕ್ಕಿರುವ ನಕ್ಷತ್ರಗಳಲ್ಲಿ ಬಹಳ ಪ್ರಕಾಶಮಾನವಾದ ನಕ್ಷತ್ರಗಳ ಸಹಜಕಾಂತಿವರ್ಗಾಂಕವು —೫; ಇವುಗಳ ತೇಜಸ್ಸು ಸೂರ್ಯನ ತೇಜಸ್ಸಿಗಿಂತ ೧೦,೦೦೦ ಪಾಲು ಅಧಿಕ. ಹೀಗೆಯೇ ಕ್ಷೀಣತಮ ಕಾಂತಿಯ ನಕ್ಷತ್ರಗಳ ಸಹಜಕಾಂತಿವರ್ಗಾಂಕವು ೧೯.೫; ಇವುಗಳ ತೇಜಸ್ಸು ಸೂರ್ಯನ ತೇಜಸ್ಸಿನ ಹತ್ತು ಲಕ್ಷಾಂಶದಲ್ಲಿ ಒಂದು ಅಂಶ. ವಿಶ್ವದ ಪ್ರಕಾಶತಮ ತಾರೆಗಳಿಗೂ, ಕ್ಷೀಣತಮ ಕಾಂತಿಯ ತಾರೆಗಳಿಗೂ ಇರುವ ಕಾಂತಿಪ್ರಮಾಣ ಸುಮಾರು ೬೦೦ ಕೋಟಿ.

೭. ನಕ್ಷತ್ರಗಳ ವರ್ಣವರ್ಗ[1]ಗಳು

ನಕ್ಷತ್ರದ ದೂರ, ಕಾಂತಿವರ್ಗಾಂಕಗಳಿಂದ ಸಹಜಕಾಂತಿವರ್ಗಾಂಕವನ್ನು ಗುಣಿಸಬಹುದಾದರೆ, ಸಹಜಕಾಂತಿವರ್ಗಾಂಕ ಕಾಂತಿವರ್ಗಾಂಕಗಳಿಂದ ದೂರವನ್ನೂ ಗುಣಿಸಬಹುದಲ್ಲವೇ? ನಿಜ, ಅದಕ್ಕಾಗಿ ಈಗ ಸಹಜಕಾಂತಿ ನಿರ್ಣಯ ವಿಧಾನವನ್ನು ಪರಿಶೀಲಿಸೋಣ.

ರಾತ್ರಿಯ ಆಕಾಶವನ್ನು ಸ್ವಲ್ಪಹೊತ್ತು ವೀಕ್ಷಿಸಿದರೂ ಸಾಕು, ನಕ್ಷತ್ರಗಳ ವಿವಿಧ ಕಾಂತಿಗಳೇ ಅಲ್ಲದೆ ಅವುಗಳ ವಿವಿಧ ಬಣ್ಣಗಳೂ ನಮ್ಮ ಮನವನ್ನು ಸೆಳೆಯುತ್ತವೆ. ಕೆಲವು ನಕ್ಷತ್ರಗಳು ನೀಲಿವಜ್ರಗಳಂತೆ, ಕೆಲವು ಬಿಳಿ ಮುತ್ತುಗಳಂತೆ, ಕೆಲವು ಪಚ್ಚೆ ಹರಳುಗಳಂತೆ, ಚಿನ್ನದ ಮಣಿಗಳಂತೆ ಕೆಲವು, ಕಿತ್ತಿಳೆಯ ಬಣ್ಣದಿಂದ ಕೆಲವು, ರಕ್ತ ವರ್ಣದಿಂದ ಕೆಲವು ಮಿನುಗುತ್ತವೆ. ಆದುದರಿಂದ ಕಾಂತಿಗನುಣವಾಗಿ ವಿಂಗಡಿಸಿದಂತೆ ತಾರೆಗಳನ್ನು ಬಣ್ಣಕ್ಕನುಗುಣವಾಗಿಯೂ ವಿಂಗಡಿಸಬಹುದು. ಆದರೆ ಬರಿಯ ಕಣ್ಣಿನಿಂದ ನಕ್ಷತ್ರಗಳ ವರ್ಣ ವರ್ಗೀಕರಣ ಸುಲಭವಲ್ಲ, ಫಲಪ್ರದವೂ ಅಲ್ಲ.

ನಮ್ಮಲ್ಲಿ ಕಾಮನಬಿಲ್ಲನ್ನು ನೋಡಿ ಮುಗ್ಧರಾಗಿಲ್ಲದವರು ಯಾರು, ಅದರಲ್ಲಿಯೂ ಚಿಕ್ಕ ವಯಸ್ಸಿನವರು? ಮೋಡಗಳ ನೀರಿನ ಹನಿಗಳು ಸೂರ್ಯನ ಬೆಳಕನ್ನು ಸಪ್ತವರ್ಣ

[1] Spectral types.

ಪ್ರಥಮಪಟ



ವಿವಿಧ ವರ್ಗಗಳ ತಾರೆಗಳ ವರ್ಣಪಟಲಗಳು ಒಂದೊಂದು ತಾರಾವರ್ಗದ ಹೆಸರಿನ ಪಕ್ಕದಲ್ಲಿರುವ ಮೂರು ವರ್ಣಪಟಲಗಳಲ್ಲಿ, ಮಧ್ಯದ್ದು ತಾರೆಯದು, ಮೇಲೆ ಕೆಳಗಿನವು ಭೂಧಾತುಗಳ ವರ್ಣಪಟಲಗಳು. ಅವನ್ನು ಹೋಲಿಕೆಗಾಗಿ ಕೊಟ್ಟಿದೆ

—(ವಿಲ್ಸನ್ ಶಿಖರದ ಅವೇಕ್ಷಣಾಲಯದ ಅಧಿಕಾರಿಗಳ ಕೃಪೆಯಿಂದ)



ಚಿತ್ರ ೧
ಕಾಮನಬಿಲ್ಲು ; ಸೂರ್ಯನ ವರ್ಣಪಟಲ

ಗಳಾಗಿ ವಿಭಜಿಸುವುದೇ ಕಾಮನ ಬಿಲ್ಲಾಗಿ ಫಲಿಸುತ್ತದೆ. ವಿಜ್ಞಾನಿಯು ನೀರಿನ ಹನಿಯ ಬದಲು ಗಾಜಿನ ಪ್ರಿಸ಼ಮ್ (ಮುಪ್ಪಟ್ಟೆ) ಅಥವಾ ವಕ್ರವಿಯೋಗ ರೇಖಾ ಫಲಕ (ಡಿಫ಼್ರಾಕ್‌ಷನ್ ಗ್ರೇಟಿಂಗ್)ವನ್ನು ಉಪಯೋಗಿಸಿ ಬೆಳಕಿನ ವರ್ಣ-

ವಿಭಜನೆಯನ್ನು ಮಾಡುತ್ತಾನೆ. ಈ ವರ್ಣ ವಿಭಜನ ಚಿತ್ರಕ್ಕೆ ವರ್ಣಪಟಲ[1]ವೆಂದು ಹೆಸರು. ಕಾಮನಬಿಲ್ಲು ಸೂರ್ಯನ ಬೆಳಕಿನ ವರ್ಣಪಟಲ (ಚಿತ್ರ ೮). ಪ್ರಿಸಮ್ ಮುಂತಾದ ಉಪಕರಣಗಳಿಂದ ರೂಪುಗೊಳ್ಳುವ ವರ್ಣಪಟಲವು ಕಾಮನಬಿಲ್ಲಿನಂತೆ ವೃತ್ತಾಕಾರವಾಗಿರುವುದಿಲ್ಲ. ಆಯಾ ಕೃತಿಯ ಪಟ್ಟೆಯುದ್ದಕ್ಕೂ ಕಾಮನಬಿಲ್ಲಿನಲ್ಲಿ ಅಡ್ಡಲಾಗಿ ಹರಡಿರುವಂತೆ ವಿವಿಧ ವರ್ಣಗಳು ಕ್ರಮವಾಗಿ ಹರಡಿರುತ್ತವೆ. ವರ್ಣ ವಿಭಜನೆಯ ಉಪಕರಣಕ್ಕೆ ವರ್ಣಪಟಲವನ್ನು ಛಾಯಾಫಲಕದ ಮೇಲೆ ಹಿಡಿಯುವ ಸಾಧನವನ್ನೂ ಸೇರಿಸಿದ್ದರೆ ಅದನ್ನು ವರ್ಣಪಟಲಗ್ರಾಹಕ[2]ವೆಂದು ಕರೆಯುತ್ತಾರೆ.

ನಕ್ಷತ್ರಗಳ ಬೆಳಕನ್ನು ಇಂತಹ ವರ್ಣಪಟಲ ಗ್ರಾಹಕಗಳಿಂದ ವಿಭಜಿಸಿ ವಿಜ್ಞಾನಿಗಳು ವಿಶ್ವಕ್ಕೆ ಸಂಬಂಧಿಸಿದ ಅನೇಕ ಮಹಾ ರಹಸ್ಯಗಳನ್ನು ಭೇದಿಸಿದ್ದಾರೆ. ನಕ್ಷತ್ರಗಳ ವರ್ಣಪಟಲದಲ್ಲಿ ಸಾಮಾನ್ಯವಾಗಿ ಸಪ್ತವರ್ಣಗಳ ಅವಿಚ್ಛಿನ್ನವಾದ ಹಿನ್ನೆಲೆಯ ಮೇಲೆ ಕರಿಯ ಸೂಕ್ಷ್ಮ ರೇಖೆಗಳು ಕಂಡುಬರುತ್ತವೆ; ಕೆಲವು ನಕ್ಷತ್ರಗಳ ವರ್ಣಪಟಲದಲ್ಲಿ ಈ ರೇಖೆಗಳು ಕಾಂತಿಯುತವಾಗಿರುವುದೂ ಉಂಟು. ಇವು ಹೇಗಿದ್ದರೂ ಬೆಳಕಿನ ಉತ್ಪತ್ತಿಸ್ಥಾನವಾದ ದೂರದಲ್ಲಿರುವ ನಕ್ಷತ್ರದಲ್ಲಿ ಯಾವ ಯಾವ ಧಾತುಗಳಿವೆ, ಆ ಧಾತುಗಳ ಸಾಪೇಕ್ಷ ಪ್ರಮಾಣವೆಷ್ಟು ಎಂಬ ಅಂಶಗಳನ್ನು ನಮಗೆ ತಂದೊಪ್ಪಿಸುವ ನಂಬುಗೆಯ ದೂತರಂತೆ ವರ್ತಿಸುತ್ತವೆ ಈ ರೇಖೆಗಳು. ನಕ್ಷತ್ರಗಳ ವರ್ಣಪಟಲಗಳ ಈ ತೆರನಾದ ಪರೀಕ್ಷೆಗಳ ಫಲವಾಗಿ ಭೌತ ಖಗೋಳಜ್ಞ[3]ರು (ಖಭೌತಜ್ಞರು) ತಾರೆಗಳನ್ನು ಹತ್ತು ಸ್ಥೂಲ ವರ್ಣವರ್ಗಗಳಾಗಿ ವಿಂಗಡಿಸಿದ್ದಾರೆ. ಇವುಗಳಿಗೆ ಕ್ರಮವಾಗಿ A, B, C, D, ಇತ್ಯಾದಿ ಸಂಕೇತ ನಾಮಗಳನ್ನಿಡಬಹುದಾಗಿತ್ತು. ಆದರೆ ಅನೇಕ ಕಾರಣಗಳಿಂದ ಹೀಗೆ ಮಾಡಲು ಸಾಧ್ಯವಾಗಲಿಲ್ಲವಾಗಿ ಈಗ ವರ್ಣವರ್ಗಗಳಿಗೆ ಕ್ರಮವಾಗಿ O, B, A, F, G, K, M, R, N, ಮತ್ತು S* ಗಳು ರೂಢಿಯಲ್ಲಿರುವ ಸಂಕೇತಾಕ್ಷರಗಳು. ಒಂದೊಂದು ವರ್ಗವನ್ನೂ

---

[1] Spectrum [2] Spectrograph [3] Astrophysicist

* ಖಗೋಳ ವಿಜ್ಞಾನಿಗಳು ಆಕಾಶ ವೀಕ್ಷಣೆಯಲ್ಲಿಯೇ ಸದಾ ಮಗ್ನರಾಗಿರುವುದರಿಂದ ಮಾನವ ಸಹಜವಾದ ರಸಿಕತೆ, ಹಾಸ್ಯಗಳಲ್ಲಿ ಅವರಿಗೆ ಅಭಿರುಚಿ ಇಲ್ಲವೆಂದು ಸಾಮಾನ್ಯವಾಗಿ ಜನರಲ್ಲಿ ಅಭಿಪ್ರಾಯ ಮೂಡಿರಬಹುದು. ಅಮೆರಿಕದ ಪ್ರಸಿದ್ಧ ಖಗೋಳಜ್ಞನೊಬ್ಬನು ವರ್ಣವರ್ಗಗಳ ಸಂಕೇತಾಕ್ಷರಗಳನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಲು ಈ ವಾಕ್ಯವನ್ನು ರಚಿಸಿದಾನೆ. "Oh Be A Fine Girl, Kiss Me Right Now, Sweet!" ಲಲಿತವಾದ ಕನ್ನಡ ನುಡಿಯಲ್ಲಿ ಈ ಸುಲಭೋಪಾಯವನ್ನು ತಿಳಿಸುವುದಕ್ಕಾಗುವುದಿಲ್ಲವೇ ಎನ್ನುವ ಪಾಠಕರಿದ್ದರೆ ಅವರ ಸಲುವಾಗಿ ವಾಕ್ಯವನ್ನು ಹೀಗೆ ರೂಪಾಂತರಿಸ—ಭಾಷಾಂತರವಲ್ಲ—ಬಹುದು. "ಓ ಬನ್ನಿ, ಎಳೆ ಫಿರಂಗಿ ಗೆಳತಿಯರೇ, ಕಡೆ ಮುತ್ತಿನ ರಸವು ನವ ಸೌರಭದಂತೆ!"

೧೦ ಉಪವರ್ಗಗಳಾಗಿ ವಿಂಗಡಿಸಿದಾರೆ. ಉಪವರ್ಗಗಳನ್ನು O_0, O_1, O_2, . . . O_9 ಎಂದು ಸೂಚಿಸುತ್ತಾರೆ.

ನಕ್ಷತ್ರಗಳಲ್ಲಿ ಶೇಕಡ ೯೯ ರಷ್ಟು B ಇಂದ M ವರೆಗಿನ ಆರು ವರ್ಣವರ್ಗಗಳಲ್ಲೊಂದಕ್ಕೆ ಸೇರುತ್ತವೆ. O ಮತ್ತು B ವರ್ಣವರ್ಗಗಳ ತಾರೆಗಳು ಕಣ್ಣಿಗೆ ನೀಲಿ ಮಿಶ್ರಿತ ಬಿಳಿಯ ತಾರೆಗಳಾಗಿ ಕಾಣುತ್ತವೆ. O ತಾರೆಗಳ ವರ್ಣಪಟಲಗಳಲ್ಲಿ ಜಲಜನಕದ ಕಾಂತಿಯುತ ರೇಖೆಗಳಿವೆ, B ತಾರೆಗಳ ವರ್ಣಪಟಲಗಳಲ್ಲಿ ಹೀಲಿಯಂನ ಕರಿಯ ರೇಖೆಗಳು ಪ್ರಧಾನವಾಗಿ ಕಾಣುತ್ತವೆ, ಜೊತೆಗೆ ಜಲಜನಕದ ಕರಿಯ ರೇಖೆಗಳೂ ಇವೆ. ವ್ಯಾಧ ರಾಶಿಯ ಖಡ್ಗದಲ್ಲಿ ಒತ್ತಾಗಿ ಸೇರಿರುವ ಮೂರು ನಕ್ಷತ್ರಗಳಲ್ಲಿ ಪ್ರಕಾಶಮಾನವಾದ ತಾರೆಯು[1] O ವರ್ಗದ ತಾರೆ. ಅದೇ ವ್ಯಾಧನ ಸೊಂಟದ ಮೂರು ತಾರೆಗಳಲ್ಲಿ ಉತ್ತರಕ್ಕಿರುವ ತಾರೆಯು[2] B ವರ್ಗದ ತಾರೆ. ಮಖಾ[3] ತಾರೆಯೂ B ವರ್ಗಕ್ಕೇ ಸೇರಿದೆ.

A ತಾರೆಗಳು ಬಿಳಿಯ ತಾರೆಗಳು. ಇವುಗಳ ವರ್ಣಪಟಲದಲ್ಲಿ ಜಲಜನಕದ ರೇಖೆಗಳು ಎದ್ದು ಕಾಣುತ್ತವೆಯಾದುದರಿಂದ ಇವನ್ನು ಜಲಜನಕತಾರೆಗಳೆಂದೂ ಕರೆಯುತ್ತಾರೆ. ಜೊತೆಗೆ ಹೀಲಿಯಂ ರೇಖೆಗಳೂ ಕಾಣುತ್ತವೆ. ಲುಬ್ಧಕ ಮತ್ತು ಅಭಿಜಿತ್ ತಾರೆಗಳು ಈ ವರ್ಗದವು. F ತಾರೆಗಳೂ ಬಿಳಿಯ ತಾರೆಗಳು, ಆದರೆ ಸ್ವಲ್ಪ ಹಳದಿ ಬೆರೆತಿರುತ್ತದೆ. ಇವುಗಳ ವರ್ಣಪಟಲದಲ್ಲಿ ಜಲಜನಕ ರೇಖೆಗಳಿದ್ದರೂ ಕ್ಯಾಲ್ಷಿಯಂ ರೇಖೆಗಳದೇ ಪ್ರಮುಖ ಪಾತ್ರ. ದೋಣಿಯಾಕಾರದ ಐದು ತಾರೆಗಳ ಪುನರ್ವಸೂ ನಕ್ಷತ್ರದ ಮಧ್ಯಮ ತಾರೆಯು[4] (ಲಘುಶ್ವಾನದ ಪ್ರಧಾನ ತಾರೆ) F ವರ್ಗಕ್ಕೆ ಸೇರಿದ್ದು. ಅಗಸ್ತ್ಯ[5] ತಾರೆಯೂ F ತಾರೆಯೇ.

ನಮ್ಮ ಸೂರ್ಯನು G ವರ್ಗದ ತಾರೆ. G ತಾರೆಗಳು ಹಳದಿ ತಾರೆಗಳು. ಇವುಗಳ ವರ್ಣಪಟಲದಲ್ಲಿ ಅತ್ಯಂತ ಪ್ರಧಾನವಾದ ರೇಖೆಗಳು ಕ್ಯಾಲ್ಷಿಯಂ ರೇಖೆಗಳು. ಇತರ ಲೋಹಗಳ ರೇಖೆಗಳೂ ಉಂಟು. ಜಲಜನಕದ ರೇಖೆಗಳು ಸ್ವಲ್ಪ ಹಿಂದೆ ಬಿದ್ದಿವೆ. ಬ್ರಹ್ಮಹೃದಯವೂ[6] G ವರ್ಗದತಾರೆ.

ಕಿತ್ತಿಳೆಯ ಕೆಂಪಿನ ಬಣ್ಣವು K ವರ್ಗದ ತಾರೆಗಳ ಗುರುತು. ಇವುಗಳ ವರ್ಣಪಟಲದಲ್ಲಿಯೂ ಕ್ಯಾಲ್ಷಿಯಂ ರೇಖೆಗಳದೇ ಪ್ರಧಾನ ಪಾತ್ರ. ಅನೇಕ ಲೋಹಗಳ ರೇಖೆಗಳೂ ಕಂಡು ಬರುತ್ತವೆ. ವರ್ಣಪಟಲದ ನೀಲಿ ಭಾಗವು ಕಾಂತಿಹೀನವಾಗಿದೆ. ಸ್ವಾತೀ[7] ರೋಹಿಣೀ[8] ತಾರೆಗಳು ಈ ವರ್ಗದ ಮಾದರಿತಾರೆಗಳು.

---

[1] *eta* Orionis. [2] *detla* Orionis. [3] Regulus. [4] Procyon.
[5] Canopus. [6] Capella. [7] Arcturus. [8] Aldebaran.

M ತಾರೆಗಳು ಕೆಂಪುತಾರೆಗಳು. ಇವುಗಳ ವರ್ಣಪಟಲದಲ್ಲಿಯೂ ಕ್ಯಾಲ್ಸಿಯಂ ರೇಖೆಗಳು ಎದ್ದು ಕಾಣುತ್ತವೆ. ಆದರೆ ಟಿಟಾನಿಯಂ ಆಕ್ಸೈಡಿನ ರೇಖಾಸಮೂಹವು ಈ ವರ್ಗದ ವೈಶಿಷ್ಟ್ಯ. ಪಟಲದಲ್ಲಿ ಹಸುರು, ನೀಲಿ ಪ್ರದೇಶಗಳು ಅಳಿಸಿ ಹೋಗಿವೆ. ಆರ್ದ್ರಾ,[1] ಜ್ಯೇಷ್ಠಾ[2] ತಾರೆಗಳು ಈ ವರ್ಗಕ್ಕೆ ಸೇರಿವೆ. R, N ಮತ್ತು S ತಾರೆಗಳೂ ವಿಶೇಷ ಮಾದರಿಯ ಕೆಂಪುತಾರೆಗಳು. ಇವುಗಳ ವರ್ಣಪಟಲದಲ್ಲಿ ಇಂಗಾಲದ ರೇಖೆಗಳಿವೆ.

೮. ವರ್ಣಪಟಲ ತಾರಾ ದಿಗ್ವ್ಯತ್ಯಾಸ[3]

ಒಂದೇ ವರ್ಣವರ್ಗಕ್ಕೆ ಸೇರಿದ, ಬೇರೆ ಬೇರೆ ಸಹಜ ಕಾಂತಿಗಳ ತಾರೆಗಳ ವರ್ಣಪಟಲಗಳ ಪರಿಶೀಲನೆಯಿಂದ ಒಂದು ನಿಯಮವು ಹೊರಬಿದ್ದಿದೆ. ಈ ವರ್ಣಪಟಲಗಳಲ್ಲಿ ಕೆಲವು ಜೊತೆ ರೇಖೆಗಳಿಗಿರುವ ಸಾಪೇಕ್ಷಕಾಂತಿಗಳು ತಾರೆಗಳ ಸಹಜಕಾಂತಿಗಳನ್ನು ಒಂದು ನಿರ್ದಿಷ್ಟ ನಿಯಮಕ್ಕನುಸಾರವಾಗಿ ಅವಲಂಬಿಸುತ್ತವೆ. ದಿಗ್ವ್ಯತ್ಯಾಸವೇನನ್ನೂ ತೋರದಿರುವಷ್ಟು ದೂರದಲ್ಲಿರುವ ತಾರೆಯ ವರ್ಣಪಟಲದ ಈ ಜೊತೆ ರೇಖೆಗಳ ಕಾಂತಿ, ಪ್ರಮಾಣವನ್ನು ಅದೇ ವರ್ಣವರ್ಗದ ಆದರೆ ದೂರ ನಿರ್ಣಯವಾಗಿರುವ ತಾರೆಯೊಂದರ ಅದೇ ಜೊತೆ ರೇಖೆಗಳ ಕಾಂತಿ ಪ್ರಮಾಣದೊಂದಿಗೆ ಹೋಲಿಸಿ ದೂರ ತಾರೆಯ ಸಹಜಕಾಂತಿಯನ್ನು ಗುಣಿಸಬಹುದು. ಇದರ ತೋರಿಕೆಯ ಕಾಂತಿವರ್ಗಾಂಕವು ತಿಳಿದೇ ಇರುವುದರಿಂದ ದೂರವನ್ನೂ ನಿರ್ಣಯಿಸಬಹುದು. ಈ ವಿಧಾನದಿಂದ ಸಾವಿರಾರು ತಾರೆಗಳ ದೂರವನ್ನು ನೇರವಾದ ದಿಗ್ವ್ಯತ್ಯಾಸದಿಂದ ಎಷ್ಟು ನಿಷ್ಕೃಷ್ಟತೆ ಸಾಧ್ಯವೋ ಅಷ್ಟೇ ನಿಷ್ಕೃಷ್ಟವಾಗಿ ನಿರ್ಣಯಿಸಿದಾರೆ. ಇದಕ್ಕೆ ವರ್ಣಪಟಲ ತಾರಾ ದಿಗ್ವ್ಯತ್ಯಾಸ ನಿರ್ಣಯವೆಂದು ಹೆಸರು.

೯. ಯೌಧಿಷ್ಠಿರ ಚಂಚಲ ತಾರೆಗಳು

ನಕ್ಷತ್ರಗಳ ದೂರವನ್ನು ನಿರ್ಣಯಿಸಲು ಮೂರನೆಯ ವಿಧಾನವೂ ಒಂದಿದೆ. ಇದು ಪರಮಾಶ್ಚರ್ಯಕರವಾದ ವಿಧಾನ. ಈ ವಿಧಾನವನ್ನು ಕಂಡುಹಿಡಿದ ಕೀರ್ತಿಯು ಅಮೆರಿಕದ ಖಗೋಳ ವಿದುಷಿ ಮಿಸ್ ಲೀವಿಟ್‌ಗೆ ಸಲ್ಲುತ್ತದೆ.

ಮಾನವಕುಲದ ಜೀವಿತಕಾಲದ ದೃಷ್ಟಿಯಿಂದ ನಕ್ಷತ್ರದ ಕಾಂತಿಯು ನಿಶ್ಚಲ. ಆದರೆ ಈ ಸಾಮಾನ್ಯ ನಿಯಮವನ್ನು ಉಲ್ಲಂಘಿಸುವ ತಾರೆಗಳೂ ಕೆಲವಿವೆ. ಇವುಗಳ ಕಾಂತಿಯು ಕಾಲಕಾಲಕ್ಕೆ ವ್ಯತ್ಯಾಸವಾಗುತ್ತಿರುತ್ತದೆ. ಇಂತಹ ತಾರೆಗಳನ್ನು

---

[1] Betelgeux. [2] Antares. [3] Spectroscopic parallax.

ಚಂಚಲ ತಾರೆ[1]ಗಳೆಂದು ಕರೆಯುತ್ತಾರೆ. ಚಂಚಲ ತಾರೆಗಳಲ್ಲಿಯೂ ಅನೇಕ ವರ್ಗಗಳಿವೆ. ಅವುಗಳಲ್ಲಿ ಈಗ ನಮ್ಮ ಗಮನವನ್ನು ಸೀಫೈಡ್ ಅಥವಾ ಯೌಧಿಷ್ಠಿರ ಚಂಚಲ ತಾರೆಗಳ ಕಡೆಗೆ ತಿರುಗಿಸಬೇಕಾಗಿದೆ. ಈ ಜಾತಿಯ ತಾರೆಗಳಲ್ಲಿ ವಿಜ್ಞಾನಿಯ ವೀಕ್ಷಣೆಗೆ ಸಿಕ್ಕಿದ ಮೊದಲನೆಯ ತಾರೆಯು ಸೀಫ್ಯೂಸ್ ಅಥವಾ ಯುಧಿಷ್ಠಿರ ರಾಶಿಯ ಚತುರ್ಥ ತಾರೆಯಾದುದರಿಂದ ಈ ರಾಶಿನಾಮವೇ ವರ್ಗನಾಮವಾಯಿತು. ಇಲ್ಲಿ ಚತುರ್ಥ ತಾರೆಯೆಂದರೆ ಕಾಂತಿಕ್ರಮದಲ್ಲಿ ನಾಲ್ಕನೆಯ ತಾರೆ ಎಂದರ್ಥ. ಉತ್ತರಾಕಾಶದಲ್ಲಿ ಅಭಿಜಿತ್ ತಾರೆಯ ಪೂರ್ವಕ್ಕಿರುವುದು ರಾಜಹಂಸ[2] ರಾಶಿ; ರಾಜಹಂಸದ ಉತ್ತರಕ್ಕೆ ಧ್ರುವ ತಾರೆಯವರೆಗೂ ವ್ಯಾಪಿಸಿರುವ ರಾಶಿಯೇ ಯುಧಿಷ್ಠಿರ ರಾಶಿ.[3]

ಯೌಧಿಷ್ಠಿರ ಚಂಚಲ ತಾರೆಯ ಮುಖ್ಯ ಲಕ್ಷಣಗಳು ಮೂರು. ತಾರೆಯ ಕಾಂತಿಯು ಆವರ್ತಕವಾಗಿ ಏರುತ್ತದೆ, ಇಳಿಯುತ್ತದೆ. ಆವರ್ತಕಾಲವು ತಾರೆಯಿಂದ ತಾರೆಗೆ ಬೇರೆ ಬೇರೆಯಾದರೂ ಒಂದೊಂದು ತಾರೆಯ ಆವರ್ತಕಾಲವೂ ನಿಷ್ಕೃಷ್ಟವಾಗಿ ನಿಯತಕಾಲ. ಕಾಂತಿವೃದ್ಧಿ ವೇಗವು ಕಾಂತಿಕ್ಷೀಣ ವೇಗಕ್ಕಿಂತ ಯಾವಾಗಲೂ ಹೆಚ್ಚು. ಉದಾಹರಣೆಯಾಗಿ ಈ ವರ್ಗದ ಒಂದು ಮಾದರಿ ತಾರೆಯ ಕಾಂತಿ ವರ್ಗಾಂಕವು ೪೩ ರಿಂದ ೩೭ ಗೆ ಒಂದೂವರೆ ದಿವಸಗಳಲ್ಲಿ ಏರಿ, ಮುಂದಿನ ನಾಲ್ಕು ದಿವಸಗಳಲ್ಲಿ ತಿರುಗಿ ೪೩ ಕ್ಕೆ ಇಳಿಯುತ್ತದೆ. ಇದರ ಆವರ್ತಕಾಲವು ಅಲ್ಲಿಗೆ ೫೩ ದಿನಗಳು. ಯೌಧಿಷ್ಠಿರ ಚಂಚಲ ತಾರೆಗಳು ಆಕಾಶದ ಎಲ್ಲ ಭಾಗಗಳಲ್ಲಿಯೂ ಹರಡಿವೆ, ಅದರಲ್ಲಿಯೂ ತಾರಾ ಗುಚ್ಛಗೋಳಗಳಲ್ಲಿ ಇವು ವಿಪುಲವಾಗಿವೆ. ಈ ತಾರೆಗಳೆಲ್ಲವೂ ಗಾತ್ರದಲ್ಲಿ ಬಹು ದೊಡ್ಡವು, ಬೃಹತ್ತಾರೆಗಳ ವರ್ಗಕ್ಕೆ ಸೇರಿದವು. ಇವುಗಳಲ್ಲಿ ಬಹು ಸಂಖ್ಯೆಯವು F,G ಅಥವಾ K ವರ್ಣವರ್ಗದ ತಾರೆಗಳು. ಈ ಚಂಚಲ ತಾರೆಗಳ ಆವರ್ತಕಾಲಗಳು ಕೆಲವು ಘಂಟೆಗಳಿಂದ ೧೦೦ ದಿನಗಳವರೆಗೂ ಇರಬಹುದು.

೧೦. ಕಾಲ—ಕಾಂತಿ ನಿಯಮ[4]ದಿಂದ ತಾರೆಗಳ ದೂರ ನಿರ್ಣಯ

ದಕ್ಷಿಣಾಕಾಶದಲ್ಲಿ ಅಗಸ್ತ್ಯತಾರೆಯ ದಕ್ಷಿಣಕ್ಕೆ ಸುಮಾರು ೧೫ ಡಿಗ್ರಿಗಳ ಅಂತರದಲ್ಲಿ ಮೋಡದ ಮುರುಕಿನಂತೆ ತೋರುವ ಒಂದು ಬಿಳಿಯ ಮಸುಕು ಮಚ್ಚೆಯಿದೆ. ಇದಕ್ಕೆ ಮ್ಯಾಗೆಲಾನಿನ ಮಹಾಮೇಘ[5]ವೆಂದು ಹೆಸರು. ಈ ಮೇಘದ ಪಶ್ಚಿಮಕ್ಕೆ ಸುಮಾರು ೭೦ ಡಿಗ್ರಿಗಳ ಅಂತರದಲ್ಲಿ ಇದಕ್ಕೂ ಚಿಕ್ಕದಾದ ಇಂತಹ

[1] Variable star. [2] Cygnus. [3] Cepheus. [4] Period—Luminosity Law.
[5] Magellan's Larger Cloud.

ಮತ್ತೊಂದು ಬಿಳಿಯ ಮಚ್ಚೆ ಇದೆ. ಇದಕ್ಕೆ ಮ್ಯಾಗೆಲಾನಿನ ಲಘುಮೇಘ[1]ವೆಂದು ಹೆಸರು. ಈ ಮೇಘಗಳ ದಕ್ಷಿಣ ಅಕ್ಷಾಂಶಗಳು ಸುಮಾರು ೭೦ ಮತ್ತು ೭೩ ಡಿಗ್ರಿಗಳಾದುದರಿಂದ ಉತ್ತರಾರ್ಧಗೋಳದ ಬಹು ಪ್ರದೇಶಗಳಿಗೆ ಇವು ಅಗೋಚರ. ಬೆಂಗಳೂರಲ್ಲಿರುವವರಿಗೆ ಫೆಬ್ರುವರಿ ತಿಂಗಳಲ್ಲಿ ರಾತ್ರಿ ಎಂಟೊಂಬತ್ತು ಘಂಟೆಯ ಹೊತ್ತಿನಲ್ಲಿ ದಕ್ಷಿಣ ದಿಗಂತಕ್ಕೆ ಏಳೆಂಟು ಡಿಗ್ರಿಗಳ ಕೋನೋನ್ನತಿಯಲ್ಲಿ ಮಹಾ ಮೇಘವು ಕಾಣಿಸುತ್ತದೆ. ಬೆಳದಿಂಗಳಿಲ್ಲದ ರಾತ್ರಿಗಳಾದರೆ ನೋಟಕ್ಕೆ ಅನುಕೂಲ. ಲಘುಮೇಘವು ಬೆಂಗಳೂರಿಗೆ ಕಾಣಿಸುವುದಿಲ್ಲ. ದಕ್ಷಿಣಾರ್ಧಗೋಳದ ನಿವಾಸಿಗಳಿಗೆ ಮಾತ್ರ ಅದು ಸುಲಭಗೋಚರ.

ದೂರದರ್ಶಿನಿಯಲ್ಲಿ ಎರಡು ಮೇಘಗಳೂ ಲಕ್ಷಾಂತರ ತಾರೆಗಳ ಗೊಂಚಲುಗಳಾಗಿ ಒಡೆದು ಕಾಣುತ್ತವೆ. ಈ ತಾರೆಗಳಲ್ಲಿ ಅನೇಕ ಯೌಧಿಷ್ಠಿರ ಚಂಚಲ ತಾರೆಗಳಿವೆ. ಲಘುಮೇಘದ ಛಾಯಾ ಚಿತ್ರದ ವೀಕ್ಷಣೆಯಲ್ಲಿ ತೊಡಗಿದ್ದ ಮಿಸ್ ಲೀವಿಟ್‌ಳಿಗೆ ಒಂದು ದಿನ ಈ ಚಿತ್ರದ ಚಂಚಲ ತಾರೆಗಳ ವಿವಿಧ ಕಾಂತಿಗಳಲ್ಲಿ ಒಂದು ನಿಯಮವಿದ್ದುದಾಗಿ ಕಂಡುಬಂದಿತು. ಚಂಚಲ ತಾರೆಗಳ ಆವರ್ತಕಾಲಗಳು ಹೆಚ್ಚಿದಂತೆ ಅವುಗಳ ಕಾಂತಿಗಳೂ ಒಂದು ನಿರ್ದಿಷ್ಟ ನಿಯಮಾನುಸಾರವಾಗಿ ಹೆಚ್ಚುತ್ತವೆಂದು ಆಕೆಯು ತೋರಿಸಿದಳು. ಲಘುಮೇಘದ ಚಂಚಲ ತಾರೆಗಳಲ್ಲಿ ಕೆಲವು ಒಂದರಿಂದ ಮತ್ತೊಂದು ಸಾವಿರಾರು ಜ್ಯೋತಿರ್ವರ್ಷಗಳ ದೂರದಲ್ಲಿದ್ದರೂ ಮೇಘವೇ ಒಟ್ಟಿನಲ್ಲಿ ನಮ್ಮಿಂದ ಬಹುದೂರದಲ್ಲಿರುವುದರಿಂದ ಮೇಘದ ತಾರೆಗಳೆಲ್ಲವೂ ನಮ್ಮಿಂದ ಹೆಚ್ಚು ಕಡಿಮೆ ಸಮದೂರದಲ್ಲಿವೆಯೆಂದು ಎಣಿಸಿದರೆ ಅಷ್ಟೇನೂ ತಪ್ಪಾಗಲಿಕ್ಕಿಲ್ಲ. ಬೆಂಗಳೂರಿನ ಬಸವನಗುಡಿಯೂ ಕಾಕ್ಸ್‌ಟೌನೂ ಎರಡೂ ಮೈಸೂರಿಂದ ೮೬ ಮೈಲಿಗಳ ದೂರದಲ್ಲಿವೆ ಎಂದ ಹಾಗೆ. ತಾರೆಗಳ ದೂರವು ಒಂದೇ ಇರುವಾಗ ಅವುಗಳ ಕಾಂತಿಯು ಸಹಜಕಾಂತಿಗೇ ಸರಳಾನುಪಾತವಾದುದರಿಂದ ಲೀವಿಟ್‌ಳ ನಿಯಮವನ್ನು, ಲಘುಮೇಘದ ಚಂಚಲ ತಾರೆಗಳ ಸಹಜಕಾಂತಿಯು ಹೆಚ್ಚಿದಂತೆ ಅವುಗಳ ಆವರ್ತಕಾಲವೂ ಹೆಚ್ಚುತ್ತದೆ ಎಂಬ ರೂಪದಲ್ಲಿ ಹೇಳಬಹುದು.

ಈ ನಿಯಮವು ಹಾರ್ವರ್ಡ್ ವೀಕ್ಷಣಾ ಮಂದಿರದ ಷೇಪ್ಲಿಯ ಗಮನವನ್ನು ಸೆಳೆಯಿತು. ಈತನು ಅಂತರಿಕ್ಷದ ಬೇರೆ ಬೇರೆ ಭಾಗಗಳಲ್ಲಿರುವ ಯೌಧಿಷ್ಠಿರ ತಾರೆಗಳ ಚಂಚಲ ಕಾಲಗಳಿಗೂ, ದಿಗ್ವ್ಯತ್ಯಾಸ ವಿಧಾನಗಳಿಂದ ನಿರ್ಣಯವಾಗಿದ್ದ ಅವುಗಳ ಸಹಜಕಾಂತಿಗಳಿಗೂ ಇರುವ ಸಂಬಂಧವನ್ನು ಅನ್ವೇಷಣೆಗೀಡುಮಾಡಿದನು. ಇದರ ಫಲವಾಗಿ ಲೀವಿಟ್‌ಳ ನಿಯಮದ ವ್ಯಾಪ್ತಿಯು ಮ್ಯಾಗೆಲಾನಿನ ಲಘುಮೇಘಕ್ಕೆ

[1] Lesser Cloud.

ದ್ವಿತೀಯಪಟ ವಿಲ ಸ್ ಶಿಖರದ ಆವೇಕ್ಷಣಾಲಯದ ವಿಹಂಗಮನೋಟ

ತೃತೀಯಪಟ



೧೦೦ ಅಂಗುಲ ವ್ಯಾಸದ ದೂರದರ್ಶಿನಿ. ದೂರದರ್ಶಿನಿಯ ಭುವನೇಶ್ವರಿಯ ಒಳಭಾಗದ ಪಶ್ಚಿಮ ನೋಟ

—(ವಿಲ್ಸನ್ ಶಿಖರದ ಆವೇಕ್ಷಣಾಲಯದ ಅಧಿಕಾರಿಗಳ ಕೃಪೆಯಿಂದ)

ಮಾತ್ರವಲ್ಲ, ವಿಶ್ವದ ಎಲ್ಲ ಯೌಧಿಷ್ಠಿರ ಚಂಚಲ ತಾರೆಗಳಿಗೂ ಇದು ಅನ್ವಯಿಸುತ್ತದೆ ಎಂದು ನಿರ್ಧರಿಸಿದನು. ನಿಯಮಕ್ಕೆ ಕಾಂತಿ-ಕಾಲ ನಿಯಮವೆಂಬ ಸಂಕ್ಷೇಪ ನಾಮವು ರೂಢಿಗೆ ಬಂದಿದೆ. ಪಟ್ಟಿಯ ರೂಪದಲ್ಲಿ ಈ ನಿಯಮವನ್ನು ಕೆಳಗೆ ತೋರಿಸಿದೆ.

ಷೇಪ್ಲಿಯ ಕಾಲ—ಕಾಂತಿ ನಿಯಮ

ಆವರ್ತಕಾಲ-ದಿನಗಳು	೧	೩	೧೦	೨೦	೬೦	೧೦೦
ಸಹಜಕಾಂತಿ ವರ್ಗಾಂಕ	೦	—೧	—೧.೭೫	—೨.೩	—೩.೪೭	—೪.೭

ಕಾಂತಿ—ಕಾಲ ನಿಯಮವು ಬಹಳ ಪರಿಣಾಮಕಾರಿಯಾದ ನಿಯಮ. ಯೌಧಿಷ್ಠಿರ ತಾರೆಯ ಚಂಚಲಕಾಲವನ್ನು ನಿಷ್ಕೃಷ್ಟವಾಗಿ ನಿರ್ಣಯಿಸಿದರೆ ಈ ನಿಯಮದಿಂದ ಅದರ ಸಹಜಕಾಂತಿಯು ನಿರ್ಣಯವಾಗುತ್ತದೆ. ತೋರಿಕೆಯ ಕಾಂತಿಯನ್ನು ಸುಲಭವಾಗಿ ಅಳೆಯಬಹುದಾದುದರಿಂದ ತಾರೆಯ ದೂರವನ್ನು ಗುಣಿಸಬಹುದು. ಚಂಚಲ ತಾರೆಗೆ ಮಾತ್ರ ನಿಯಮವು ಅನ್ವಯಿಸುವುದರಿಂದಲೂ, ಚಂಚಲತಾರೆಗಳು ಅಪರೂಪವಾದುದರಿಂದಲೂ ಆಕಾಶದ ಅನೇಕ ನಕ್ಷತ್ರಗಳ ದೂರ ನಮಗೆ ಅಜ್ಞಾತವೇ ಎಂದೆನಿಸಬಹುದು. ಆದರೆ ಹಾಗಲ್ಲ. ಯೌಧಿಷ್ಠಿರ ತಾರೆಗಳಿಲ್ಲದ ತಾರಾಗುಚ್ಛ[1]ಗಳಿಲ್ಲವೇ ಇಲ್ಲವೆಂದು ಹೇಳಬಹುದು. ಆದುದರಿಂದ ಒಂದು ತಾರೆಯ ದೂರ ನಿರ್ಣಯವಾದರೂ ಆ ಗುಚ್ಛದ ದೂರ ಗೊತ್ತಾದಂತೆಯೇ. ಈಗ ಗುಚ್ಛದ ಕೋನ ವ್ಯಾಸವನ್ನೂ ಅಳೆದರೆ ಅದರ ವ್ಯಾಸವನ್ನೂ ಗುಣಿಸಬಹುದು. ಕಾಂತಿ-ಕಾಲ ನಿಯಮದ ವಿಶ್ವವ್ಯಾಪಕತ್ವವನ್ನು ಗ್ರಹಿಸಿಯೇ ಸರ್ ಜೇಮ್ಸ್ ಜೀನ್ಸನು ಯೌಧಿಷ್ಠಿರ ಚಂಚಲ ತಾರೆಗಳಿಗೆ ವಿಶ್ವದ ಗಜಕಡ್ಡಿಗಳೆಂಬ ಸಾರ್ಥಕ ನಾಮವನ್ನು ಕೊಟ್ಟಿದ್ದಾನೆ. ಈ ತಾರೆಗಳ ಸಹಾಯದಿಂದ ಹತ್ತುಲಕ್ಷ ಜ್ಯೋತಿರ್ವರ್ಷಗಳ ಅಂತರದಲ್ಲಿರುವ ತಾರಾಗುಚ್ಛಗಳ ಮತ್ತು ಬ್ರಹ್ಮಾಂಡಗಳ ದೂರವನ್ನು ದಿಗ್ವ್ಯತ್ಯಾಸ ವಿಧಾನಗಳಿಂದ ನೂರು ಜ್ಯೋತಿರ್ವರ್ಷಗಳ ದೂರದ ತಾರೆಗಳ ದೂರದಷ್ಟೆ ನಿಷ್ಕೃಷ್ಟವಾಗಿ ನಿರ್ಣಯಿಸಬಹುದು. ಯೌಧಿಷ್ಠಿರ ತಾರೆಗಳ ಕಾಂತಿಯು ಏಕೆ ಆವರ್ತಕವಾಗಿ ವ್ಯತ್ಯಾಸವಾಗುತ್ತದೆಂಬುದನ್ನು ಇನ್ನೊಂದು ಅಧ್ಯಾಯದಲ್ಲಿ ವಿವೇಚಿಸುತ್ತೇವೆ.

೧೧. ರಕ್ತಪಲ್ಲಟ[2]ದಿಂದ ನೀಹಾರಕಗಳ ದೂರ ನಿರ್ಣಯ

ಹತ್ತು ಲಕ್ಷ ಜ್ಯೋತಿರ್ವರ್ಷಗಳಿಗಿಂತ ಹೆಚ್ಚು ದೂರದಲ್ಲಿರುವ ಆಕಾಶಕಾಯಗಳ ದೂರ ನಿರ್ಣಯಕ್ಕೆ ಖಗೋಳ ವಿಜ್ಞಾನಿಯು ಬೇರೊಂದು ವಿಧಾನವನ್ನನುಸರಿಸು

---

[1] Star Cluster. [2] Red shift.

ತ್ತಾನೆ. ವೇಗದಿಂದ ನಮ್ಮನ್ನು ಸಮೀಪಿಸುತ್ತಿರುವ ರೈಲುಗಾಡಿಯು ಸಿಳ್ಳುಹಾಕಿಕೊಂಡು ನಮ್ಮನ್ನು ತಟಾದುಹೋದರೆ ಸಿಳ್ಳಿನ ಸ್ವರದ ಸ್ಥಾಯಿಯು ರೈಲು ನಮ್ಮನ್ನು ಸಮೀಪಿಸುತ್ತಿರುವಾಗ ಏರಿದ್ದಂತೆಯೂ, ನಮ್ಮಿಂದ ದೂರ ಹೋಗುತ್ತಿರುವಾಗ ತಗ್ಗಿದ್ದಂತೆಯೂ ತೋರುತ್ತದೆ. ಈ ಸ್ಥಾಯಿಯ ವ್ಯತ್ಯಾಸದಿಂದ ಅಂದರೆ ಸ್ವರದ ಕಂಪನಾವೃತ್ತಿ ಸಂಖ್ಯೆಗಳ ವ್ಯತ್ಯಾಸದಿಂದ ರೈಲಿನ ವೇಗವನ್ನು ಗುಣಿಸಬಹುದು. ಈ ಪರಿಣಾಮಕ್ಕೆ ಡಾಪ್ಲರ್ ಪರಿಣಾಮ[1]ವೆಂದು ಹೆಸರು. ಲಂಡನ್ ನಗರದ ಪೋಲೀಸಿನವರು ರಸ್ತೆಗಳಲ್ಲಿ ಓಡಾಡುತ್ತಿರುವ ವಾಹನಗಳ ಹಾರನ್ ಧ್ವನಿಗಳ ಸ್ಥಾಯಿಗಳ ವ್ಯತ್ಯಾಸದಿಂದ ಆ ವಾಹನಗಳ ವೇಗಗಳು ನಿಯಮಿತ ಮಿತಿಯೊಳಗಿವೆಯೇ, ಮಿತಿಯನ್ನು ಮೀರಿವೆಯೇ ಎಂದು ನಿರ್ಧರಿಸಬಲ್ಲರಂತೆ.

ಆಕಾಶದಲ್ಲಿರುವ ನಕ್ಷತ್ರಗಳು ರೈಲು ಎಂಜಿನ್‌ನಂತೆ ಸಿಳ್ಳು ಹಾಕದಿದ್ದರೂ ಬೆಳಕನ್ನು ಬೀರುತ್ತವೆ. ಬೆಳಕಿನ ವಿವಿಧ ವರ್ಣಗಳು ಸ್ವರಾಷ್ಟಕದ ವಿವಿಧ ಸ್ವರಗಳಂತೆ. ಪದಾರ್ಥಗಳು ಅಥವಾ ಗಾಳಿಯ ಕಣಗಳು ಕಂಪಿಸಿದರೆ ಧ್ವನಿಯು ಹುಟ್ಟುತ್ತದೆ. ವಿದ್ಯುತ್ಕಾಂತ ಕ್ಷೇತ್ರವು[2] ಕಂಪಿಸಿದರೆ ಬೆಳಕು ಹುಟ್ಟುತ್ತದೆ. ಕ್ಷೇತ್ರದ ಕಂಪನಾವೃತ್ತಿ ಸಂಖ್ಯೆ ಕಡಮೆ ಇದ್ದರೆ ಬೆಳಕಿನ ಬಣ್ಣ ಕೆಂಪಾಗಿ ಕಾಣುತ್ತದೆ, ಹೆಚ್ಚಿದ್ದರೆ ಕಡುನೀಲಿಯಾಗಿ ಕಾಣುತ್ತದೆ. ಈ ಮಧ್ಯೆ ಕಂಪನಾವೃತ್ತಿ ಸಂಖ್ಯೆಗನುಗುಣವಾಗಿ ಕಿತ್ತಿಳೆ ಕೆಂಪು, ಹಳದಿ, ಹಸುರು, ನೀಲಿ, ಕೆನ್ನೀಲಿ ಬಣ್ಣಗಳಿವೆ.

ನಕ್ಷತ್ರಗಳು ನಮ್ಮನ್ನು ಸಮೀಪಿಸುತ್ತಿದ್ದರೆ ಅಥವಾ ನಮ್ಮಿಂದ ದೂರ ಹೋಗುತ್ತಿದ್ದರೆ ಡಾಪ್ಲರ್ ಪರಿಣಾಮಕ್ಕನುಸಾರವಾಗಿ ಅವುಗಳ ಬಣ್ಣ ಹೆಚ್ಚು ನೀಲಿಯಾಗಬೇಕು, ಅಥವಾ ಹೆಚ್ಚು ಕೆಂಪಾಗಿ ತೋರಬೇಕು. ಆದರೆ ಈ ವರ್ಣ ವ್ಯತ್ಯಾಸವನ್ನು ಬರಿಯ ಕಣ್ಣಿನಿಂದ ಪತ್ತೆಮಾಡಲಿಕ್ಕಾಗುವುದಿಲ್ಲ. ನಕ್ಷತ್ರಗಳ ವರ್ಣಪಟಲದಲ್ಲಿ ವಿವಿಧ ವರ್ಣಗಳ ರೇಖೆಗಳು ಕಂಡುಬರುತ್ತವೆಂದೂ ಈ ರೇಖೆಗಳಿಂದ ನಕ್ಷತ್ರದಲ್ಲಿರುವ ಧಾತುಗಳನ್ನು ಗುರುತಿಸಬಹುದೆಂದೂ ಅರಿತಿದ್ದೇವೆ. ಭೂಮಿಯಲ್ಲಿನ ಅದೇ ಧಾತುಗಳ ವರ್ಣಪಟಲದ ರೇಖೆಗಳ ಸ್ಥಾನಗಳನ್ನು ಈಗ ನಕ್ಷತ್ರದ ಅದೇ ರೇಖಾಸ್ಥಾನಗಳೊಂದಿಗೆ ಹೋಲಿಸಿದರೆ, ನಕ್ಷತ್ರ ರೇಖೆಯ ಸ್ಥಾನ ಪಲ್ಲಟವು ಕೆಂಪು ತುದಿಯ ಕಡೆಗಿದ್ದರೆ (ರಕ್ತ ಪಲ್ಲಟ) ನಕ್ಷತ್ರವು ನಮ್ಮಿಂದ ದೂರ ಸರಿಯುತ್ತಿದೆ ಎಂದೂ, ಸ್ಥಾನ ಪಲ್ಲಟವು ನೀಲಿ ತುದಿಯ ಕಡೆಗಿದ್ದರೆ (ನೀಲಿ ಪಲ್ಲಟ) ನಮ್ಮ ಕಡೆಗೇ ಬರುತ್ತಿದೆ ಎಂದೂ ತೀರ್ಮಾನಿಸಬಹುದು. ಸ್ಥಾನ ಪಲ್ಲಟವನ್ನು ಸರಿಯಾಗಿ ಅಳೆದು ನಕ್ಷತ್ರದ ಚಲನವೇಗವನ್ನೂ ಗುಣಿಸಬಹುದು. ಸ್ಥಾನ ಪಲ್ಲಟವೇನೂ ಕಂಡು ಬರದಿದ್ದರೆ

[1] Doppler Effect. [2] Electro-magnetic field.

ನಕ್ಷತ್ರವು ನಮಗೆ ಸಾಪೇಕ್ಷವಾಗಿ ಚಲಿಸುತ್ತಿಲ್ಲವೆಂದು ತೀರ್ಮಾನಿಸಲಿಕ್ಕಾಗುವುದಿಲ್ಲ. ಏಕೆಂದರೆ ಅದು ನಮ್ಮ ದೃಷ್ಟಿಪಥಕ್ಕೆ ಅಡ್ಡಲಾಗಿ ಚಲಿಸುತ್ತಿರಬಹುದು. ವರ್ಣರೇಖೆಯ ಸ್ಥಾನ ಪಲ್ಲಟದಿಂದ ನಮ್ಮ ದೃಷ್ಟಿಪಥದ ದಿಕ್ಕಿನಲ್ಲಿ ತಾರಾವೇಗದ ಅಂಗವೆಷ್ಟೆಂಬುದನ್ನು ನಿರ್ಣಯಿಸಬಹುದು; ಆ ದಿಕ್ಕಿಗೆ ಲಂಬವಾಗಿ ಎಷ್ಟೆಂದು ಹೇಳಲಾಗುವುದಿಲ್ಲ.

ಈ ವಿಧಾನದಿಂದ ತಾರೆಗಳ ಭೂದೃಷ್ಟಿಪಥ ವೇಗಗಳನ್ನು ಅಳೆದಾಗ ನಮಗೆ ಹತ್ತಿರದಲ್ಲಿರುವ ನಕ್ಷತ್ರಗಳಲ್ಲಿ ಕೆಲವು ನಮ್ಮ ಕಡೆಗೇ ಓಡುತ್ತಿರುವಂತೆಯೂ ಕೆಲವು ನಮ್ಮಿಂದ ಆಚೆ ಓಡುತ್ತಿರುವಂತೆಯೂ ಕಂಡುಬಂದಿತು. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಇಲ್ಲಿ ನಮಗೆ ಹತ್ತಿರವೆಂದರೆ ನಮ್ಮಿಂದ ಸುಮಾರು ಒಂದು ಕೋಟಿ ಜ್ಯೋತಿರ್ವರ್ಷಗಳೊಳಗೆ ಎಂದು. ಆದರೆ ಬಹು ದೂರದ ತಾರೆಗಳ ಅಥವಾ ನೀಹಾರಕಗಳ ವೇಗವನ್ನು ಅಳೆದಾಗ ಅವುಗಳ ದೂರಕ್ಕೂ ವೇಗಕ್ಕೂ ಒಂದು ವಿಚಿತ್ರ ಸಂಬಂಧವಿರುವಂತೆ ತೋರಿಬಂದಿತು. ನೀಹಾರಕಗಳ ದೂರ ಹೆಚ್ಚಿದಂತೆ ಅವುಗಳ ವರ್ಣಪಟಲದ ರೇಖೆಗಳ ರಕ್ತಪಲ್ಲಟವೂ ಹೆಚ್ಚಾಯಿತು. ಅಂದರೆ ನೀಹಾರಕಗಳ ದೂರ ಹೆಚ್ಚಿದ ಹಾಗೆಲ್ಲ ಅವುಗಳು ಅಧಿಕತರ ವೇಗಗಳಿಂದ ನಮ್ಮನ್ನು ಅಗಲುತ್ತಿರುವಂತೆ ತೋರುತ್ತದೆ. ನೀಹಾರಕಗಳ ದೂರವು ಪ್ರತಿ ಒಂದು ಕೋಟಿ ಜ್ಯೋತಿರ್ವರ್ಷಗಳಷ್ಟು ಹೆಚ್ಚಿದ್ದಕ್ಕೂ ಅವುಗಳು ಓಡಿಹೋಗುತ್ತಿರುವ ವೇಗವು ಸೆಕಂಡೊಂದಕ್ಕೆ ಸುಮಾರು ಒಂದು ಸಾವಿರ ಮೈಲಿಗಳಂತೆ ವೃದ್ಧಿಯಾಗುತ್ತದೆ.

೧೨. "ಕತ್ತೆ ಬಲ್ಲುದು ಹೊತ್ತ ಕತ್ತುರಿಯ ಪರಿಮಳವ!"

ದೂರ ನೀಹಾರಕಗಳ ಈ ದೂರ-ವೇಗ ನಿಯಮವನ್ನು ಮೊದಲು ಬೆಳಕಿಗೆ ತಂದವರು ಅಮೆರಿಕದಲ್ಲಿರುವ ವಿಲ್ಸನ್ ಶಿಖರದ ವೀಕ್ಷಣಾಮಂದಿರದ ಹಬಲ್ ಮತ್ತು ಹ್ಯುಮಾಸನ್ ಎಂಬ ಖಗೋಳಜ್ಞರಿಬ್ಬರು. ಇವರಲ್ಲಿ ಹ್ಯುಮಾಸನನು ವಿಖ್ಯಾತ ಖಗೋಳಜ್ಞನಾದ ಬಗೆ ವಿಚಿತ್ರವಾದುದು. ಪ್ರಕೃತಿ ಸೌಂದರ್ಯಕ್ಕೆ ನೆಲೆವೀಡೆಂದು ಹೆಸರು ಪಡೆದಿರುವ ಪಶ್ಚಿಮ ಅಮೆರಿಕದ ಕ್ಯಾಲಿಫೋರ್ನಿಯ ಸಂಸ್ಥಾನದ ಫಲಭರಿತವಾದ ಪರ್ವತಾರಣ್ಯಗಳ ನಡುವೆ ಒಂದು ಶಾಂತ, ಸುಂದರ, ನಿರ್ಜನ ಗಿರಿಶಿಖರವನ್ನು ವಿಜ್ಞಾನಿಗಳು ಇದು ವೀಕ್ಷಣಮಂದಿರದ ಸ್ಥಾಪನೆಗೆ ಯೋಗ್ಯವಾದ ಕ್ಷೇತ್ರವೆಂದು ಆರಿಸಿದರು. ಆ ಕ್ಷೇತ್ರವೇ ಈಗ ಜಗದ್ವಿಖ್ಯಾತವಾದ ವಿಲ್ಸನ್ ಶಿಖರದ ವೀಕ್ಷಣಮಂದಿರವಾಗಿದೆ. ಈಗಲೂ ಅಲ್ಲಿ ವಾಸಿಸುತ್ತಿರುವವರು ಮಂದಿರದ ಉದ್ಯೋಗಿಗಳು ಮಾತ್ರವೇ ಆದರೂ ಬೆಟ್ಟದ ತಪ್ಪಲಿನಿಂದ ಮಂದಿರದವರೆಗೆ ಸೊಗಸಾದ ರಾಜ

ಮಾರ್ಗವಿದೆ. ಆದರೆ ಮಂದಿರವನ್ನು ಕಟ್ಟುವಾಗ ಕಟ್ಟಡಕ್ಕೆ ಬೇಕಾದ ಸಾಮಗ್ರಿಗಳನ್ನೂ ಖಗೋಳೀಯ ಯಂತ್ರೋಪಕರಣಗಳನ್ನೂ, ಕಾಡುಹಾದಿಯ ಮಾರ್ಗವಾಗಿ ಕತ್ತೆ ಕುದುರೆಗಳ ಮೇಲೆ, ಬಂಡಿಗಳ ಮೇಲೆ, ಕೂಲಿಗಳ ಹೆಗಲುಗಳ ಮೇಲೆ ಸಾಗಿಸಬೇಕಾಗಿತ್ತು. ಈ ಕೆಲಸಕ್ಕಾಗಿ ನೇಮಕಮಾಡಿಕೊಂಡಿದ್ದ ಕೂಲಿಗಳಲ್ಲಿ ಹ್ಯುಮಾಸನನೂ ಒಬ್ಬನಾಗಿದ್ದನು.

ವಿಲ್ಸನ್ ಶಿಖರದ ಪ್ರಸಿದ್ಧವಾದ ನೂರು ಅಂಗುಲ ವ್ಯಾಸದ ದೂರದರ್ಶಿನಿಯ ಕೆಲವು ಅಂಗಗಳನ್ನೂ ಹ್ಯುಮಾಸನನು ಹೊತ್ತನು. ಹೀಗೆ ಕೂಲಿಗಾಗಿ ಎಷ್ಟೋ ಬಾರಿ ಬೆಟ್ಟವನ್ನು ಹತ್ತಿ ಇಳಿಯುತ್ತಿರುವಾಗ ಅವನ ಮನಸ್ಸು ಹೆಗಲ ಹೊರೆಯಿಂದ ಸೂರ್ಯ, ಚಂದ್ರ, ನಕ್ಷತ್ರಗಳ ಕಡೆಗೆ ವಾಲಿತು; ಅವನಿಗೆ ಖಗೋಳ ವೀಕ್ಷಣೆಯಲ್ಲಿ ಆಸಕ್ತಿ ಹುಟ್ಟಿತು. ಇವನ ಕುತೂಹಲವನ್ನು ನೋಡಿ ಮಂದಿರದ ಅಧಿಕಾರಿಗಳು ಇವನನ್ನು ವೀಕ್ಷಕರ ಸಹಾಯಕನನ್ನಾಗಿ ಕೆಲಸಕ್ಕೆ ಸೇರಿಸಿಕೊಂಡರು. ಬರಬರುತ್ತ ಇವನು ಕೆಲಸದಲ್ಲಿ ತೋರಿದ ಶ್ರದ್ಧೆಯ ಫಲವಾಗಿ ಪ್ರಸಿದ್ಧ ಖಗೋಳಜ್ಞನಾಗಿದಾನೆ ಈಗ. 'ಕತ್ತೆ ಬಲ್ಲುದೆ ಹೊತ್ತ ಕತ್ತುರಿಯ ಪರಿಮಳವ?' ಎಂಬ ಗಾದೆಯನ್ನು ಸುಳ್ಳು ಮಾಡಿದ ಕೀರ್ತಿ ಸಲ್ಲುತ್ತದೆ ಹ್ಯುಮಾಸನನಿಗೆ.

ದೂರ-ವೇಗ ನಿಯಮವನ್ನು ಸುಸ್ಥಾಪಿತವಾದ ನಿಯಮವೆಂದು ನಾವು ಗಣಿಸಿದರೆ, ನೀಹಾರಕಗಳ ವೇಗ ನಿರ್ಣಯದಿಂದ ಅವುಗಳ ದೂರವನ್ನು ಸುಲಭವಾಗಿ ಗುಣಿಸಬಹುದು. ಆದರೆ ನೀಹಾರಕಗಳ ವೇಗವಲ್ಲದೆ ಇತರ ಕೆಲವು ಕಾರಣಗಳಿಂದಲೂ ವರ್ಣಪಟಲದ ರೇಖೆಗಳ ರಕ್ತಪಲ್ಲಟವು ಆಗಬಹುದೆಂದು ತಿಳಿದಿದೆ. ಆದಕಾರಣ ಈ ವಿಧಾನದಿಂದ ಮಾಡಿರುವ ವೇಗ ನಿರ್ಣಯವು ಸ್ವಲ್ಪ ಅನುಮಾನಾಸ್ಪದವಾದುದು. ಈ ಅಧ್ಯಾಯವು ಆಕಾಶಕಾಯಗಳ ದೂರ ನಿರ್ಣಯ ವಿಧಾನಗಳಿಗೆ ಮೀಸಲಾಗಿರುವುದರಿಂದ ಈ ಇತರ ಕಾರಣಗಳನ್ನು ಇನ್ನೊಂದು ಕಡೆ ಅವಗಾಹನೆಗೆ ತೆಗೆದುಕೊಳ್ಳುತ್ತೇವೆ. ಈಗ ವೇಗ ನಿರ್ಣಯವನ್ನು ಆಧಾರವಾಗಿ ಇಟ್ಟುಕೊಳ್ಳದೆ ಅತಿದೂರ ಕಾಯಗಳ ದೂರವನ್ನು ನಿರ್ಣಯಿಸುವ ಮತ್ತೊಂದು ವಿಧಾನವನ್ನು ಪರೀಕ್ಷಿಸೋಣ.

೧೩. ಸಂಖ್ಯಾ ಸಂಗ್ರಹಣ ಮಾರ್ಗ[1]ಗಳಿಂದ ನೀಹಾರಕಗಳ ದೂರ ನಿರ್ಣಯ

ನೀಹಾರಕದ ದೂರವು ಹತ್ತು ಲಕ್ಷ ಜ್ಯೋತಿರ್ವರ್ಷಗಳಿಗಿಂತ ಬಹಳ ಹೆಚ್ಚಾಗಿದ್ದರೆ ಅದರಲ್ಲಿರುವ ತಾರೆಗಳು ಅತ್ಯಂತ ಪ್ರಬಲ ದೂರದರ್ಶಿನಿಗೂ ಒಡೆದು ಕಾಣುವುದಿಲ್ಲ, ಆದಕಾರಣ ಚಂಚಲ ತಾರೆಗಳ ಕಾಲ—ಕಾಂತಿ ನಿಯಮವು ಉಪ

S[1] tatistical methods.

ಯೋಗಕ್ಕೆ ಬರುವುದಿಲ್ಲ. ಹಬಲ್ ಮತ್ತು ಹ್ಯುಮಾಸನರು ಈ ದೂರದೊಳಗಿರುವ ಹಲವು ನೀಹಾರಕಗಳ ಯೌಧಿಷ್ಠಿರ ತಾರೆಗಳ ವೀಕ್ಷಣೆಯಿಂದ ಅವುಗಳ ಸಹಜ ಕಾಂತಿಗಳು —೧೧ ರಿಂದ —೧೭ತ್ತಿ ವರಗೆ ಮಾತ್ರ ವ್ಯಾಪಿಸಿವೆ ಎಂದು ನಿರ್ಧರಿಸಿದರು. ಆದುದರಿಂದ ಎಲ್ಲ ನೀಹಾರಕಗಳ ಸಹಜ ಕಾಂತಿಯೂ ಸರಾಸರಿ —೧೫ ಎಂದು ಇಟ್ಟುಕೊಳ್ಳಬಹುದು. ಈಗ ದೂರ ನೀಹಾರಕಗಳ ತೋರಿಕೆಯ ಕಾಂತಿಯನ್ನು ಅಳೆದು ಅವುಗಳ ಸಹಜಕಾಂತಿ —೧೫ ಎಂದಿಟ್ಟುಕೊಂಡರೆ ಅವುಗಳ ದೂರವನ್ನು ಗುಣಿಸಬಹುದು. ಇದು ಸಂಖ್ಯಾಸಂಗ್ರಹಣ ಮಾರ್ಗ. ಈ ವಿಧಾನದಿಂದ ನಿರ್ಣಯಿಸಿದ ದೂರಕ್ಕೂ ದೂರ—ವೇಗ ನಿಯಮದಿಂದ ಗುಣಿಸಿದ ದೂರಕ್ಕೂ ಅಷ್ಟೇನೂ ವ್ಯತ್ಯಾಸ ಕಂಡುಬಂದಿಲ್ಲ.

ಇದುವರೆಗೆ ರಕ್ತಪಲ್ಲಟದಿಂದ ನಿರ್ಣಯಿಸಿರುವ ವೇಗಗಳಲ್ಲಿ ಸಪ್ತರ್ಷಿ ಮಂಡಲ ದಲ್ಲಿರುವ ಒಂದು ನೀಹಾರಕದ ವೇಗವು ಅಧಿಕತಮವಾದುದು—ಸೆಂಕಂಡೊಂದಕ್ಕೆ ಸುಮಾರು ೩೦ ಸಾವಿರ ಮೈಲಿಗಳು. ಇದರ ದೂರವು ಸಂಖ್ಯಾ ಸಂಗ್ರಹಣ ವಿಧಾನದಿಂದಲೂ ಸುಮಾರು ೩೦ ಕೋಟಿ ಜ್ಯೋತಿರ್ವರ್ಷಗಳೆಂದು ಕಂಡು ಬಂದಿದೆ. ಸಪ್ತರ್ಷಿಮಂಡಲದ ತಾರೆಗಳೆಲ್ಲ ನಮ್ಮ ಸ್ಥಳೀಯ ಬ್ರಹ್ಮಾಂಡಕ್ಕೇ ಸೇರಿವೆ. ಅವುಗಳು ನಮಗೆ ಬಹಳ ಸಮೀಪ, ಸುಮಾರು ೫೦—೧೦೦ ಜ್ಯೋತಿರ್ವರ್ಷಗಳಲ್ಲಿವೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆ ದಿಕ್ಕಿನಲ್ಲಿರುವ ಒಂದು ನೀಹಾರಕವು ಮಾತ್ರ ಮೇಲೆ ತಿಳಿಸಿರುವ ಅಗಾಧ ದೂರದಲ್ಲಿದೆ. ಇಂದಿನವರೆಗೆ ಜಗತ್ತಿನ ಅತ್ಯದ್ಭುತ ದೂರದರ್ಶಿನಿಯಾಗಿದ್ದ ನೂರು ಅಂಗುಲದ ದೂರದರ್ಶಿನಿಯ ದೃಷ್ಟಿಯು ಸುಮಾರು ೫೦ ಕೋಟಿ ಜ್ಯೋತಿರ್ವರ್ಷಗಳ ವರೆಗೂ ವಿಶ್ವವನ್ನು ಭೇದಿಸುತ್ತದೆ ಎಂದು ನಂಬಲಾಗಿದೆ. ಆದರೆ ಈ ಯಂತ್ರಕ್ಕೆ ೨೧ ನೆಯ ಕಾಂತಿವರ್ಗದ್ದಾಗಿ ತೋರುವ ನೀಹಾರಕದ ಸಹಜಕಾಂತಿಯು ಸರಾಸರಿ ಗಣನೆಯಂತೆ—೧೫ ಆಗಿರುವುದರ ಬದಲು ದ್ರೌಪದೀ ನೀಹಾರಕ[1]ದ ಸಹಜ ಕಾಂತಿಯಂತೆ —೧೭ತ್ತಿ ಆಗಿದ್ದರೆ ಅದರ ದೂರವು ೧೫೨ ಕೋಟಿ ಜ್ಯೋತಿರ್ವರ್ಷಗಳಿರಬೇಕಾಗುತ್ತದೆ. ದೂರ-ವೇಗ ನಿಯಮದಂತೆ ಅದರ ವೇಗವು ಸೆಕಂಡೊಂದಕ್ಕೆ ಒಂದೂವರೆ ಲಕ್ಷ ಮೈಲಿಗಳಾಗುತ್ತದೆ!

೧೪. ನೀಹಾರಕಗಳ ದೂರಕ್ಕೆ ಒಂದು ಮಿತಿ

ಈಗ ತಾನೇ ಸ್ಥಾಪಿತವಾಗಿರುವ ೨೦೦ ಅಂಗುಲದ ಪಾಲೋಮಾರ್ ವೀಕ್ಷಣಾಲಯದ ದೂರ ದರ್ಶಿನಿಯ ಸಹಾಯದಿಂದ ಇದಕ್ಕೂ ಹೆಚ್ಚಿನ ದೂರವನ್ನು ಭೇದಿಸಬಹುದು. ಆದರೆ ದೂರವು ೧೫೦ ರ ಬದಲು ೧೮೬ ಕೋಟಿ ಜ್ಯೋತಿರ್ವರ್ಷ

[1] Andromeda nebula.

ಗಳಿಗೆ ಮಾತ್ರ ಹೆಚ್ಚಿದರೂ ದೂರ-ವೇಗ ನಿಯಮದಂತೆ ಆಕಾಶ ಕಾಯವು ಸೆಕಂಡೊಂದಕ್ಕೆ ೧,೮೬.೦೦೦ ಮೈಲಿಗಳಂತೆ ಓಡಿಹೋಗುತ್ತಿರಬೇಕು. ಆಗ ಬೆಳಕಿನ ವೇಗವೂ ಅಷ್ಟೇ ಆದುದರಿಂದ ಅದರಿಂದ ಹೊರಟ ಬೆಳಕು ನಮ್ಮನ್ನು ತಲುಪುವಂತೆಯೇ ಇಲ್ಲ, ಅಂದರೆ ದೂರದರ್ಶಿನಿಯು ಎಂತಹುದಾದರೂ ಇರಲಿ ನಾವು ಆ ನೀಹಾರಕವನ್ನು ನೋಡಲಾರೆವು. ಹೊಸ ದೂರದರ್ಶಿನಿಯಿಂದ ವೀಕ್ಷಣೆಗಳು ನಡೆದ ಮೇಲೆ ಈ ಊಹೆಗಳು ನಿರ್ಧರವಾಗಬೇಕು.

ನಮ್ಮ ಸ್ಥಳೀಯ ಬ್ರಹ್ಮಾಂಡದ ಹೊರಗಿರುವ ನೀಹಾರಕಗಳೆಲ್ಲವೂ ದೂರ ಹೆಚ್ಚಿದಷ್ಟೂ ಹೆಚ್ಚು ವೇಗದಿಂದ ನಮ್ಮನ್ನು ಬಿಟ್ಟು ಏಕೆ ಓಡಿಹೋಗುತ್ತಿವೆ? ನಮ್ಮ ಬ್ರಹ್ಮಾಂಡಕ್ಕೆ ಹೆದರಿಕೊಂಡೇ ಅಥವಾ ಜುಗುಪ್ಸೆ ಪಟ್ಟುಕೊಂಡೇ? ಈ ಪ್ರಶ್ನೆಗಳ ಉತ್ತರಕ್ಕೂ ಇನ್ನೊಂದು ಅಧ್ಯಾಯದವರೆಗೆ ಕಾಯಬೇಕು.

ಆರ್. ಎಲ್. ನರಸಿಂಹಯ್ಯ.

(ಸಶೇಷ)

ಕಾವ್ಯಾವಲೋಕನ

ಸ್ವಾತಂತ್ರ್ಯ ಸೂರ್ಯೋದಯ—ಭಾರತದ ದಾಸ್ಯ ಸಂಕೋಲೆಗಳು ೧೯೪೭ನೆಯ ಆಗಸ್ಟ್ ೧೫ರಂದು ಕಡಿದುಹೋಗಿ ನವೀನ ಭಾರತದ ಉದಯ ವಾಯಿತು. ಈ ಪುಣ್ಯಕಾಲದಲ್ಲಿ ಭಾರತೀಯರ ಹೃದಯ, ನಿಧಿಯನ್ನು ಕಂಡ ದರಿದ್ರನಂತೆ ಪ್ರಫುಲ್ಲವಾಯಿತು. ಇಂತಹ ಸಮಷ್ಟಿಸಂತೋಷದಲ್ಲಿ ಭಾಗಿಗಳಾದ ಶ್ರೀ ಮಾ. ನಂ. ನಂಜಪ್ಪನವರು ರಚಿಸಿರುವ ಚಿಕ್ಕಗ್ರಂಥವೇ ಸ್ವಾತಂತ್ರ್ಯ ಸೂರ್ಯೋದಯ. ಚಾರಿತ್ರಿಕವಾಗಿ ಗ್ರೀಕರಿಂದ ಮೊದಲುಗೊಂಡು ಬ್ರಿಟಿಷರವರೆಗೆ ನಡೆದ ಆಕ್ರಮಣವನ್ನು ಸ್ಥೂಲವಾಗಿ ನಿರೂಪಿಸಿ ಬ್ರಿಟಿಷರ ದಬ್ಬಾಳಿಕೆಯ ವೈಶಿಷ್ಟ್ಯ ವನ್ನು ತಿಳಿಸಿದ್ದಾರೆ. ರಾಷ್ಟ್ರಶಿಲ್ಪಿ ಮಹಾತ್ಮ ಗಾಂಧಿಯವರು ಗುಂಡಿನೇಟಿಗೆ ಆಹುತಿಯಾದ ಪ್ರಸಂಗ ಲೇಖಕರನ್ನು ದುಃಖವಿಸ್ಮಯಮೂಕರನ್ನಾಗಿ ಮಾಡಿದೆ. ಮಹಾತ್ಮರ ವಚನವನ್ನು ನೆನೆದಾಗ ಅವರಿಗೆ ಬಸವೇಶ್ವರರ ವಚನಗಳು ಸ್ಮೃತಿಪಥಕ್ಕೆ ಬರುತ್ತವೆ. ಸ್ವಾತಂತ್ರ್ಯೋದಯದ ಪುಣ್ಯಕಾಲದಲ್ಲಿ ತಮ್ಮ ತನುಮನ ಧನಗಳನ್ನು ಸಮರ್ಪಿಸಿದ ವೀರರೂ ಮೇಧಾವಿಗಳೂ ಪೂಜ್ಯರೂ ಹುತಾತ್ಮರೂ ಆದ ವ್ಯಕ್ತಿಗಳು ಬದುಕಿ ಬಾಳಿ ಭಾಗವಹಿಸಿದ್ದರೆ ಎಂತಹ ಹಬ್ಬವಾಗುತ್ತಿತ್ತು ಎಂದು ಮರುಗಿದ್ದಾರೆ. ಬಹುಕಾಲದ ಹೋರಾಟದಿಂದ ಲಭಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಸಮಷ್ಟಿದೃಷ್ಟಿಯೂ, ನೈತಿಕ ಮನೋನಿಷ್ಠೆಯೂ, ಆತ್ಮವಿಶ್ವಾಸವೂ, ನಿಸ್ವಾರ್ಥ ಸೇವೆಯೂ ಜನರ ಜೀವಮಂತ್ರವಾಗಬೇಕೆಂದು ಹಾರೈಸುವ ಲೇಖಕರ ಆಶಯ ವಂದನೀಯವೇ ಸರಿ.

ಕೆಲವೆಡೆಗಳಲ್ಲಿ ಭಾವದೊಡನೆ ಭಾಷೆಯ ಓಟ ಸಾಗದೆ ಕುಂಟುತ್ತದೆ. ಅಚ್ಚಿನ ರಾಕ್ಷಸನೂ ಅಲ್ಲಲ್ಲಿ ಕಾಣಿಸಿಕೊಂಡಿದ್ದಾನೆ. ಇವೆರಡರ ಕಡೆ ದೃಷ್ಟಿ ಇಟ್ಟಿದ್ದರೆ ಗ್ರಂಥ ಇನ್ನೂ ರಮ್ಯವಾಗುತ್ತಿತ್ತು.

ಉ. ಕಾ. ಸು.

***

ಬಾಬುರಾಜೇಂದ್ರಪ್ರಸಾದ್—ಲೇಖಕರು: ಶ್ರೀ ಎಸ್. ಅನಂತನಾರಾಯಣರು; ಆಕಾರ: ಕ್ರೌನ್ ಅಷ್ಟಪತ್ರ, ಪುಟ ೧೦೬; ಪ್ರಕಟಿಸಿದವರು: ಚೇತನ, ಮೈಸೂರು.

ಶ್ರೀಯುತ ಅನಂತನಾರಾಯಣರು ರಾಜೇಂದ್ರಪ್ರಸಾದರ ಜೀವನ ಚರಿತ್ರೆ ಯನ್ನು ನಿರೂಪಿಸುವುದರ ಜೊತೆಜೊತೆಯಲ್ಲೇ ನಮ್ಮ ನಾಡಿನ ಸ್ವಾತಂತ್ರ್ಯ ಸಂಗ್ರಾ

ಮದ ಕಥೆಯನ್ನೂ ಸಂಗ್ರಹವಾಗಿ ಮತ್ತು ಪ್ರಾಸಂಗಿಕವಾಗಿ ಚಿತ್ರಿಸಿರುವುದನ್ನು ನೋಡಿದರೆ ಭಾರತದೊಳಗಣ ಕಥೆಯನ್ನೆಲ್ಲ ಅಂತರ್ಗತಮಾಡಿ "ಗದಾಯುದ್ಧ" ಮಹಾಕಾವ್ಯವನ್ನು ಬರೆದ ಕವಿ ರನ್ನನ ಸಾಹಸವನ್ನನುಕರಿಸಿರುವರೋ ಎಂದೆನಿಸುತ್ತದೆ. ಸುಮಾರು ನೂರು ಪುಟಗಳ ಈ ಪುಟ್ಟ ಪುಸ್ತಕವನ್ನು ಓದುವ ಅಲ್ಪಾವಧಿಯಲ್ಲೇ ನಮ್ಮ ರಾಷ್ಟ್ರದ ಅರ್ಧಶತಮಾನದ ಅಮರಕಹಾನಿಯನ್ನು ಪ್ರತ್ಯಕ್ಷವಾಗಿ ಕಂಡಂತಾಗುತ್ತದೆ; ಆಗಿನ ಜನತೆಯ ಹೃದಯಪಾತ್ರದಲ್ಲಿ ಹರಿದ ಶೌರ್ಯ, ಸಾಹಸ, ಶ್ರದ್ಧೆ, ಭಕ್ತಿ, ಸಾವು ನೋವು, ವಿಜಯ ವೈಭವಗಳಲ್ಲಿ ನಾವೂ ಒಂದಾಗಿ ಹೋದಂತಾಗುತ್ತದೆ. ಒಂದು ಇಡೀ ಜನಾಂಗವು ಹಗಲೂ ರಾತ್ರಿ ಐವತ್ತರವತ್ತು ವರ್ಷಗಳ ದೀರ್ಘಕಾಲಾವಧಿಯಲ್ಲಿ ತ್ಯಾಗಮಾಡಿ, ಸಾಹಸತೋರಿ, ಕಣ್ಣೀರು ಕರೆದು, ಕೆನ್ನೀರು ಸುರಿದು, ಕಷ್ಟಪಟ್ಟು ಕಟ್ಟಿದ ಸ್ವತಂತ್ರ ರಾಷ್ಟ್ರವನ್ನು ಈಗ ಎಷ್ಟು ಜೋಪಾನವಾಗಿ ಉಳಿಸಿ ಬೆಳೆಸಿಕೊಳ್ಳಬೇಕು, ಹಾಗೆ ಉಳಿಸಿ ಬೆಳೆಸಿಕೊಂಡಂದೇ ಇಂದಿನ ಈ ನಾಡಿನ ಪ್ರಜೆ ತನ್ನ ಪಿತೃಋಣ ಋಷಿಋಣಗಳಿಂದ ವಿಮುಕ್ತವಾದೀತು ಎಂಬ ಎಚ್ಚರಿಕೆಯ ವಾಣಿಯೂ ಈ ಪುಸ್ತಕವನ್ನು ಓದಿದ ಎಲ್ಲರ ಎದೆಯಲ್ಲೂ ಮಾರ್ಮೊಳಗದೇ ಹೋಗದು. ಇಂಥ ಸತ್ಯದರ್ಶನವನ್ನು ಕೊಡುವ, ಧ್ಯೇಯ ಪ್ರಚೋದನೆಯನ್ನುಂಟುಮಾಡುವ ಅಪೂರ್ವ ಜೀವನಚರಿತ್ರೆಯೊಂದನ್ನು ಕನ್ನಡ ಸಾಹಿತ್ಯಶಾರದೆಗೆ ಕಾಣಿಕೆ ಕೊಟ್ಟು ಶ್ರೀಯುತ ಅನಂತನಾರಾಯಣರು ಕೃತಾರ್ಥರಾಗಿದ್ದಾರೆ.

ಭಾರತದ ಯಾವ ಪ್ರಾಂತೀಯ ಭಾಷೆಗಳಲ್ಲೂ ನಮ್ಮ ನೂತನ ಪ್ರಜಾರಾಜ್ಯದ ಪ್ರಪ್ರಥಮಾಧ್ಯಕ್ಷರಾದ ಬಾಬುರಾಜೇಂದ್ರರ ಆದರ್ಶಜೀವನದ ಚರಿತ್ರೆಯು ಇದುವರೆಗೂ ಯಾರಿಂದಲೂ ಲಿಖಿತವಾಗರಲಿಲ್ಲ! ಇದೆಷ್ಟು ಸೋಜಿಗದ ಸಮಾಚಾರ?! ಹೀಗಿರುವಾಗ ಬರಹಗಾರರ ಕುಲಕ್ಕೇ ನಿಷ್ಕ್ರಿಯೆಯ ಕಲಂಕವನ್ನಂಟಿಸುವ ಈ ಆರಕೆ ಕನ್ನಡದಲ್ಲಿ ಮೊದಲನೆಯ ಬಾರಿಗೆ ಪೂರೈಕೆಯಾದದ್ದು ಅನಂತನಾರಾಯಣರ ಲೇಖನಿಯ ಮೂಲಕವೆಂಬುದು ಸಂತೋಷದ ಮತ್ತು ಹೆಮ್ಮೆಯ ವಿಷಯ. ನಾಡಿನ ಹೋರಾಟದ ಉದ್ದಕ್ಕೂ ಮಹಾತ್ಮರ ಅನುಪಮ ಅನುಯಾಯಿಯಾಗಿ ದುಡಿದು, ಸೇವೆ ಸಲ್ಲಿಸಿ, ಕೀರ್ತಿಗಾಗಿ ಕಾಮಿಸದೆ, ನಿಷ್ಕಾಮಕರ್ಮವೀರರೆನಿಸಿಕೊಂಡು ಪ್ರಕಟವಾಗದೆ ಪ್ರಚ್ಛನ್ನವಾಗಿರುವ ಎಲೆಮರೆಯ ಹೂವಿನಂತೆ ಆದರ್ಶ ಜೀವನವನ್ನು ನಡೆಸಿರುವ ಪ್ರಸಾದರ ಈ ಜೀವನ ಚರಿತ್ರೆಯು ಭಾವೀಪ್ರಜೆಗಳಾದ ನಮ್ಮ ಬಾಲಕರು ಓದಲು ಯೋಗ್ಯವಾದದ್ದು. ಶೈಲಿಯು ಸರಳ ಮತ್ತು ಸುಕುಮಾರ: ಅರಳಂಬಿನಂತೆ ಹೃದಯಂಗಮ. ಇಂತಹ ಕಲಾಕೃತಿಯು ನಮ್ಮೆಲ್ಲರ ಸುಕೃತದಿಂದ ಸಿಕ್ಕಿದೆ—ಸವಿಯಬೇಕು.

ಪ್ರಸ್ತುತ ಗ್ರಂಥಕರ್ತರಾದ ಶ್ರೀಯುತ ಅನಂತನಾರಾಯಣರು ವಯಸ್ಸಿನಲ್ಲಿ ಕಿರಿಯರಾದರೂ ವಾಙ್ಮಯಪ್ರಪಂಚದಲ್ಲಿ ಹಿರಿಯರು. ಅವರು ಈಗಾಗಲೇ ತಮ್ಮ ಅನೂನಪ್ರತಿಭಾಪ್ರಭೆಯಿಂದ ಸಾಹಿತ್ಯೋದ್ಯಾನದಲ್ಲಿ ಕಾದಂಬರಿಯ ಕಮಲಗಳನ್ನರಳಿಸಿದ್ದಾರೆ; ಕವನಸಂಗ್ರಹಗಳ ಸುರಹೊನ್ನೆಗೆ ಕಚಗುಳಿ ಕೊಟ್ಟಿದ್ದಾರೆ; ಸಣ್ಣಕಥೆಗಳ ಸೂಜಿಮಲ್ಲಿಗೆಯ ಅಂಟನ್ನು ಹಬ್ಬಿಸಿದ್ದಾರೆ; ವಿಮರ್ಶೆಯ ಕೇದಗೆಯನ್ನು ಕೆರಳಿಸಿದ್ದಾರೆ; ನಾಟಕದ ಲತಾಕುಂಜಗಳನ್ನೆಬ್ಬಿಸಿದ್ದಾರೆ. ಅನುವಾದ, ಗ್ರಂಥಸಂಪಾದನೆಯಂತಹ ಕೇವಲ ವಿದ್ವಜ್ಜನಸಾಧ್ಯ ಉದ್ಯೋಗಗಳಲ್ಲೂ ವಿಹರಿಸಿ, "ಆಧುನಿಕ ಚೀನ" ದಂತಹ ವಿಚಾರಪ್ರಧಾನ ಕೃತಿಗಳಲ್ಲಿ ವಿಶ್ರಮಿಸಿದ್ದಾರೆ. ತರುಣ ಲೇಖಕರಲ್ಲಿ ಈ ಬಹುಮುಖತೆಯು ಬಹುಮುಖವಾಗಿ ಬೆಳೆಯಬೇಕಾಗಿರುವುದು ನಮ್ಮ ಕನ್ನಡಜೀವನಕ್ಕೆ ಅತ್ಯಾವಶ್ಯಕ. ಲೇಖಕರ ಈ ರೀತಿಯ ಅಮರದಾಹದ ಧೀರಜೀವನ ಹಿರಿಯರ ಆಶೀರ್ವಾದಕ್ಕೆ ಕಿರಿಯರ ಆದರ್ಶಕ್ಕೆ ಪಾತ್ರವಾದದ್ದು. ನಾವಾದರೋ ಸಾಹಸಾಂಕ ಶ್ರೀಯುತ ಅನಂತನಾರಾಯಣರಿಂದ ವಿಷಯ ಪ್ರತಿಪಾದನೆಯಲ್ಲಿ ಏಕಾಗ್ರತೆಯನ್ನೂ, ಶೈಲಿಯಲ್ಲಿ ಅರ್ಥವ್ಯಕ್ತಿತ್ವವನ್ನೂ, ಕೃತಿಯಲ್ಲಿ ಅಕೃತ್ರಿಮತೀವ್ರವೇದನೆಯನ್ನೂ, ಉಕ್ತಿಯಲ್ಲಿ ಶಕ್ತಿಯನ್ನೂ ಇತೋಪ್ಯತಿಶಯವಾಗಿ ನಿರೀಕ್ಷಿಸುತ್ತೇವೆ. ಪ್ರಸ್ತುತ ಲೇಖಕರ ಬರಲಿರುವ ಕೃತಿರತ್ನಗಳು ಈ ಸಾಣೆಗೆ ಸಿಕ್ಕಿ ವೈತಿಕ್ಕಿ ಕೆಲವು ಮುಖದಲ್ಲೇ ಹಲವು ಬಣ್ಣವುಕ್ಕುವಂತಾಗಿ ಬರಲೆಂದು ಹಾರೈಸುತ್ತೇವೆ.

"ಬ. ಲಿ."

***

ಭಾಸಕವಿ (ಕವಿವಿಚಾರ ಮತ್ತು ಕಾವ್ಯವಿಮರ್ಶೆ)—ಲೇಖಕರು: ಪ್ರೊ|| ಎ. ಆರ್. ಕೃಷ್ಣಶಾಸ್ತ್ರೀ; ಪ್ರಕಾಶಕರು: ಕನ್ನಡ ಕವಿ ಕಾವ್ಯಮಾಲೆ, ಮೈಸೂರು; ಆಕಾರ: ಕ್ರೌನ್ ಅಷ್ಟದಳ, ಪುಟಗಳು viii + ೧೭೩; ಬೆಲೆ, ರೂ. ೨-೮-೦.

ಹದಿನೇಳು ವರ್ಷಗಳ ಹಿಂದೆ ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದಿಂದ ಪ್ರಕಾಶಿತವಾದ ಗ್ರಂಥದ ಪುನರ್ಮುದ್ರಣವೇ ಇದು. ಕನ್ನಡದಲ್ಲಿ ಕವಿವಿಮರ್ಶೆಗಳ ಅತ್ಯಂತಾಭಾವವಿದ್ದ ಕಾಲದಲ್ಲಿ ಉತ್ತಮ ವಿಮರ್ಶೆಗಳನ್ನು ಬರೆದು ಮುಂದಿನವರಿಗೆಲ್ಲ ಮಾರ್ಗದರ್ಶಿಗಳಾದ ಕೀರ್ತಿಯು ಶ್ರೀ. ಕೃಷ್ಣಶಾಸ್ತ್ರಿಗಳವರದು. ಈಚೆಗೆ ಇತರರ ಎಷ್ಟೋ ವಿಮರ್ಶಾತ್ಮಕ ಗ್ರಂಥಗಳು ಕನ್ನಡದಲ್ಲಿ ಬಂದಿವೆಯಾದರೂ ಶ್ರೀ ಕೃಷ್ಣಶಾಸ್ತ್ರಿಗಳ ಬರೆವಣಿಗೆಯು ತನ್ನ ಆಕರ್ಷಣೆಯನ್ನು ಸ್ವಲ್ಪವೂ ಕಳೆದುಕೊಂಡಿಲ್ಲ. ಒಂದು ಉತ್ತಮ ಕಾವ್ಯವು ಸೃಷ್ಟಿಯಾಗುವುದು ಎಷ್ಟು ಅಸಾ

ಧಾರಣವೋ ಒಂದು ಉತ್ತಮ ವಿಮರ್ಶಾಕೃತಿಯು ಹುಟ್ಟುವುದೂ ಅಷ್ಟೇ ಅಸಾಮಾನ್ಯ. ಕಾಲದೇಶಾತೀತವಾದ ಕೀರ್ತಿಯು ಬರೆವಣಿಗೆಗೆ ಸಿದ್ಧಿಸಬೇಕಾದರೆ ಅನೇಕ ಗುಣಗಳು ಒಂದೆಡೆಯಲ್ಲಿ ಸೇರಬೇಕಾಗುತ್ತದೆ. ಅಸ್ಖಲಿತವಾದ ಪಾಂಡಿತ್ಯದೊಡನೆ ಅಪಾರವಾದ ಪ್ರತಿಭೆಯೂ, ಬಹುಶ್ರುತತ್ವದೊಂದಿಗೆ ರಸಿಕತೆಯೂ, ಸಹೃದಯತ್ವದೊಂದಿಗೆ ರಸಮಯವಾದ ಭಾಷಾರಚನಪಾಟವವೂ ಒಂದೇ ಎಡೆಯಲ್ಲಿ ಸಮರಸವಾಗಿ ಸಮ್ಮಿಳಿತವಾಗುವುದು ಉತ್ತಮ ವಿಮರ್ಶೆಯ ರಚನೆಗೆ ಎಷ್ಟು ಅಗತ್ಯವೋ ಅಷ್ಟೇ ಅಪೂರ್ವ. ಆದರೆ ಈ ಎಲ್ಲ ಗುಣಗಳೂ ಕೃಷ್ಣಶಾಸ್ತ್ರಿಗಳ ಬರೆವಣಿಗೆಯಲ್ಲಿ ಸುಂದರವಾದ ಪರಿಪಾಕವನ್ನು ಪಡೆದಿರುವುದರಿಂದ ಅವರ ವಿಮರ್ಶೆಯು ಕೇವಲ ವಿಮರ್ಶೆಯಾಗಿಯೇ ಉಳಿಯದೆ ಸಾಹಿತ್ಯದ ಸೂನ್ನತ ಸೋಪಾನವನ್ನೇರುತ್ತದೆ. ಗಹನವೂ ವಾದಗ್ರಸ್ತವೂ ಆದ ವಿಷಯಗಳನ್ನು ವಿದ್ವತ್ಪೂರ್ಣವಾಗಿ ಚರ್ಚಿಸುವಾಗ ಪೂರ್ವೋತ್ತರಪಕ್ಷಗಳನ್ನು ಸ್ಫುಟವಾಗಿ ಪ್ರತಿಪಾದಿಸುವುದರಲ್ಲಿ ಅವರ ನಿಷ್ಪಕ್ಷಪಾತ ದೃಷ್ಟಿಯೂ ತಿಳಿಯಾದ ಶೈಲಿಯೂ ಎಂದಿಗೂ ಮಾದರಿಗಳಾಗುವಂತಿವೆ; ಹಾಗೆಯೇ ಕವಿಯ ಕೃತಿಗಳ ವೈಶಿಷ್ಟ್ಯವನ್ನು ಅಳೆಯುವಾಗ ಅವರು ತೋರಿಸುವ ಸಮತೋಲ ಬುದ್ಧಿಯೂ ರಸಿಕತೆಯೂ ಯಾರನ್ನಾದರೂ ತಲೆದೂಗಿಸುತ್ತವೆ. ಗ್ರಂಥದಲ್ಲಿ ಅತ್ಯುತ್ಸಾಹದ ಬಿಸಿಲೂ ಇಲ್ಲ; ನಿರುತ್ಸಾಹದ ಶೈತ್ಯವೂ ಇಲ್ಲ. ಅಂಧಶ್ರದ್ಧೆಯ ಅತಿಶಯೋಕ್ತಿಗಳಿಲ್ಲ; ಅಶ್ರದ್ಧೆಯ ಕಟೂಕ್ತಿಗಳೂ ಇಲ್ಲ. ಹಾಸ್ಯಪ್ರಿಯತೆಯ ವ್ಯಾಮೋಹವಿಲ್ಲ; ಶ್ರೀಮದ್ಗಾಂಭೀರ್ಯದ ಗರ್ವಮುದ್ರೆಯೂ ಇಲ್ಲ. ಅವರ ಗ್ರಂಥವನ್ನೋದಲು ಹೊರಟರೆ ರಮಣೀಯವಾದ ಚಂದ್ರಿಕೆಯಲ್ಲಿ ಮಂದಮಾರುತನನ್ನು ಸೇವಿಸುತ್ತ ಮಿತ್ರರೊಡನೆ ವನವಿಹಾರಕ್ಕೆ ಹೊರಟ ಅನುಭವವಾಗುತ್ತದೆ. ಭಾಸನ ಮೃದುಮಧುರವಾದ ಮನೋಧರ್ಮವು ನಿಜವಾಗಿಯೂ ಸಮಾನಹೃದಯರಾದ ಕೃಷ್ಣಶಾಸ್ತ್ರಿಗಳ ಬರೆಹದ ಮೂಲಕ ಓದುಗನನ್ನು ಸೆರೆಗೆಯ್ಯುತ್ತದೆ. 'ಸ್ವಪ್ನವಾಸವದತ್ತ,' 'ಪ್ರತಿಮಾ ನಾಟಕ,' 'ಪಂಚರಾತ್ರ' ಈ ಮೂರು ನಾಟಕಗಳ ವಿಮರ್ಶೆಗಳೂ ಮೂರು ರತ್ನಗಳಿದ್ದಂತೆ. ಭಾಸನ ನಾಟಕಚಕ್ರದಲ್ಲಿಯೂ ಸಹ ಅವೇ ರತ್ನಪ್ರಾಯವಾದುವು. ಏಕಾಂಕನಾಟಕಗಳ ವೈಶಿಷ್ಟ್ಯವನ್ನೂ ಲೇಖಕರು ಸ್ಪಷ್ಟಪಡಿಸಿರುವರಲ್ಲದೆ ಉಳಿದ ನಾಟಕಗಳ ಲೋಪದೋಷಗಳನ್ನೂ ಚೆನ್ನಾಗಿ ವಿವೇಚಿಸಿದ್ದಾರೆ.

ಈ ಎರಡನೆಯ ಮುದ್ರಣಕ್ಕೆ ಹೊಸದಾಗಿ ಬರೆದಿರುವ ಮುನ್ನುಡಿಯಲ್ಲಿ ಭಾಸನ ಬಗೆಗೆ ಹೊಸದಾಗಿ ತಿಳಿದುಬಂದಿರುವ ಅಂಶಗಳನ್ನು ಉಲ್ಲೇಖಿಸಿದ್ದಾರೆ. ಆದರೆ ಒಂದು ಮಾತನ್ನು ಸೇರಿಸಬಹುದಾಗಿದ್ದಿತು—'ಇತ್ತೀಚೆಗೆ ವಿದ್ವಾಂಸರ ಅಭಿ

ಪ್ರಾಯವು (ಉದಾ—ಡಾ ‖ ಎಂ. ವಿಂಟರ್‌ನಿಟ್ಸ್—‘ ಭಗವದಜ್ಜುಕೀಯ ’ದ ಪೀಠಿಕೆ, ಡಾ ‖ ಎಸ್. ಕೆ. ಡೇ—*History of Sanskrit Literature*, Vol. I. (Calcutta University) ಉಪಲಬ್ಧನಾಟಕಗಳಾವುವೂ ಭಾಸನು ಬರೆದ ರೂಪದಲ್ಲಿಲ್ಲವೆಂಬ ಪಕ್ಷದ ಕಡೆಗೇ ಓಲುತ್ತಿವೆ, ಪ್ರಾಯಶಃ ಇವು ಕ್ರಿ.ಶ. ೭ನೆಯ ಶತಮಾನಕ್ಕೆ ಮುಂಚೆ ಹುಟ್ಟಿರಲಾರವು ” ಎಂದು.

ಮೊದಲ ಮುದ್ರಣದಂತೆಯೇ ಈ ಮುದ್ರಣವೂ ಚೆನ್ನಾಗಿದೆ. ಪುನರ್ಮುದ್ರಣದ ಹೊಣೆಯನ್ನು ಹೊತ್ತ ಕವಿಕಾವ್ಯಮಾಲೆಯ ಸಂಪಾದಕರು ಅಭಿನಂದನಾರ್ಹರು.

***

ಮೈಥಿಲೀ (ಸಣ್ಣ ಕಥೆಗಳು)—ಲೇಖಕರು: ಶ್ರೀ ಎಸ್. ಅನಂತನಾರಾಯಣ; ಪ್ರಕಾಶಕರು: ಕನ್ನಡ ಕವಿ ಕಾವ್ಯಮಾಲೆ, ಮೈಸೂರು; ಆಕಾರ: ಕ್ರೌನ್ ಅಷ್ಟದಳ; ಪುಟಗಳು ೫+೧೦೪; ಬೆಲೆ, ರೂ. ೧-೮-೦.

ಸಣ್ಣ ಕಥೆಗಳೆಂದರೆ ಒಂದು ಗಂಟೆಯ ಬೇಸರವನ್ನು ಕಳೆಯುವ ಸಾಧನಗಳೆಂದಷ್ಟೇ ಭಾವಿಸುವವರಿಗೆ ಈ ಕಥೆಗಳು ನೀರಸವಾಗಿ ತೋರಬಹುದು. ಆದರೆ ಇತರ ಸಾಹಿತ್ಯ-ಪ್ರಕಾರಗಳಂತೆಯೇ ಸಣ್ಣ ಕಥೆಯೂ ಬಹುಮುಖವಾದ ಬಾಳಿನ ಆಳಗಳನ್ನಳೆಯಬೇಕೆಂದು ಬಯಸುವವರಿಗೆ ಕಥೆಗಳು ಮೆಚ್ಚಾಗಬಹುದು. ಜೀವನದಲ್ಲಿ ಪಾಪ-ಪುಣ್ಯ, ಧರ್ಮ-ಅಧರ್ಮ, ನ್ಯಾಯ-ಅನ್ಯಾಯ, ಇವೇ ಮೊದಲಾದ ಗಹನ ಪ್ರಕ್ರಿಯೆಗಳ ಸ್ವರೂಪವನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ನಿರ್ಧರಿಸಿಕೊಳ್ಳುವುದಲ್ಲದೆ ತಮ್ಮ ಅಭಿಪ್ರಾಯವೊಂದೇ ಸರಿಯೆಂಬ ದುರಾಗ್ರಹವನ್ನೂ ತೋರಿಸುತ್ತಾರೆ. ಆದರ ಸತ್ಯವು ಎಲ್ಲೋ ಹೋಗಿ ಗುಹೆಯಲ್ಲಡಗಿರುವುದನ್ನು ಯಾರೂ ಗಮನಿಸುವುದಿಲ್ಲ. ಈ ಧರ್ಮಸಂಕಟವೇ ಇಲ್ಲಿರುವ ಐದು ಕಥೆಗಳಿಗೂ ಒಂದಿಲ್ಲೊಂದು ರೀತಿಯಿಂದ ಸಾಮಗ್ರಿಯನ್ನೊದಗಿಸುತ್ತದೆ. ಮೊದಲನೆಯ ಕಥೆಯಾದ ‘ ಮೈಥಿಲಿ ’ಯಲ್ಲಿ ಲೋಕಾನುಭವಶೂನ್ಯನಾದ ಶಿಷ್ಯನಿಗೆ ಪಾಪ-ಪುಣ್ಯಗಳಲ್ಲಿ ತೋರುವ ಅಂತರವು ಕ್ರಮೇಣ ಅನುಭವದ ಬೆಳಕಿನಲ್ಲಿ ಅಳಿದು ಹೋಗುತ್ತದೆ. ಅಭಾವ ವೈರಾಗ್ಯದಿಂದ ಸಮ್ಯಗ್ಜ್ಞಾನವು ಲಭಿಸಲಾರದೆಂದು ಸ್ಪಷ್ಟವಾಗುತ್ತದೆ; ಎಷ್ಟೋ ಪೌರಾಣಿಕ ವ್ಯಕ್ತಿಗಳ ವಿಮರ್ಶೆಯಲ್ಲಿ ಇತಿಹಾಸವು ಸಂಕುಚಿತದೃಷ್ಟಿಯಿಂದ ಸತ್ಯವನ್ನು ದೂರೀಕರಿಸಿರಬಹುದೆಂಬುದು ‘ ಜೂಡಾಸ್ ’ ಎಂಬ ಕಥೆಯಲ್ಲಿ ವ್ಯಕ್ತವಾಗುತ್ತದೆ. ಲೋಕದಲ್ಲಿ ಪ್ರೇಮಕಾತರವಾದ ಮೃದು ಹೃದಯಕ್ಕೆ ಭಾವಶೂನ್ಯವಾದ ಬಾಹ್ಯಪ್ರಶಂಸೆಯಿಂದುಂಟಾಗುವ ನೋವನ್ನು ‘ ಕಲಾವಿದ ’ ಎಂಬ ಕಥೆಯು ಚಿತ್ರಿಸುತ್ತದೆ. ಬಾಳೇ ಒಂದು ವಿಷಚಕ್ರವೆಂದು

ಅದೇ ಹೆಸರಿನ ಕಥೆಯು ಸೂಚಿಸುತ್ತದೆ. ಒಂದು ಸಂಸಾರದಲ್ಲಿ ಕೆಲವರ ದುರ್ವಿಕಲ್ಪಗಳಿಂದ ಇತರರ ಜೀವನವು ಹೇಗೆ ವಿಷಮಯವಾಗುವುದೆಂಬುದನ್ನು 'ತಾಯಿ-ಬಂಜೆ' ಎಂಬ ಕಥೆಯು ಮನಮರುಗುವಂತೆ ಬಣ್ಣಿಸುತ್ತದೆ.

ಲೇಖಕರ ದೃಷ್ಟಿಯಲ್ಲಿ ನಾವೀನ್ಯವಿದೆ; ವಿಷಯದಲ್ಲಿ ಗಾಂಭೀರ್ಯವಿದೆ. ಕಥೆಗಳಿಗೆ ಯಥೋಚಿತವಾದ ವಾತಾವರಣವನ್ನು ಕಲ್ಪಿಸುವುದರಲ್ಲಿವರು ಕುಶಲರು; ಇವರ ಶೈಲಿಯು ಸಂದರ್ಭಕ್ಕೆ ತಕ್ಕಂತೆ ಲಲಿತವೂ ಓಜೋಮಯವೂ ಆಗಬಲ್ಲುದು. ನೊಂದ ಜೀವನದ ವೇದನೆಯನ್ನು ಇವರು ಕರುಳು ಕರಗುವಂತೆ ಚಿತ್ರಿಸಬಲ್ಲರು. ಆದರೂ ಘಟನೆಗಳಲ್ಲಿ ಸ್ವಾರಸ್ಯವು ತಾನೇ ತಾನಾಗಿ ಬಂದಿಲ್ಲ; ಪಾತ್ರಚಿತ್ರಣವೂ ಕೂಡ ಸಂಪೂರ್ಣವಾಗಿದೆಯೆನಿಸುವುದಿಲ್ಲ. ಒಟ್ಟಿನಲ್ಲಿ ವಾಸ್ತವಿಕತೆಗಿಂತಲೂ ಕಾಲ್ಪನಿಕತೆಯು ಹೆಚ್ಚು; ಕಥಾಸಂವಿಧಾನಕೌಶಲಕ್ಕಿಂತಲೂ ಭಾವಪ್ರಕಟನೆಗೆ ಹೆಚ್ಚಿನ ಪ್ರಾಶಸ್ತ್ಯ.

***

ಸಂಸ್ಕೃತಸ್ತವನಮಂಜರೀ—ಲೇಖಕರು: ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿ, ಸಂಪಾದಕರು: ಎಂ. ಜಿ. ನಂಜುಡಾರಾಧ್ಯ; ಪ್ರಕಾಶಕರು: ಪ್ರಬೋಧಪುಸ್ತಕಮಾಲೆ, ಬೆಂಗಳೂರು ಸಿಟಿ; ಪುಟಗಳು ಡೆಮ್ಮಿ xv+೮೮; ಬೆಲೆ, ರೂ. ೧-೦-೦.

ಇದು 'ತ್ರಿಷಷ್ಟಿಪುರಾತನಗಣಸ್ತವ', 'ಶಿವಾಷ್ಟಕಮ್', 'ಅಂಬಾಷೋಡಶಮಂಜರೀ', 'ಶಿವಭಕ್ತಿಸುಧಾತರಂಗಿಣೀ' ಮತ್ತು 'ಆರ್ಯಾಶತಕಮ್' ಎಂಬ ಐದು ಸಂಸ್ಕೃತ ಸ್ತೋತ್ರಗಳ ಸಂಕಲನ. ಸಂಪಾದಕರು ವಿಚಾರಪೂರ್ಣವಾದ ಮುನ್ನುಡಿಯನ್ನು ಬರೆದಿರುವುದಲ್ಲದೆ ಇವುಗಳಿಗೆ ಭಾವಾರ್ಥವನ್ನೂ ಕನ್ನಡದಲ್ಲಿ ಕೊಟ್ಟಿದ್ದಾರೆ. ಬಸವಪ್ಪಶಾಸ್ತ್ರಿಗಳ ತಲೆಮಾರಿನಲ್ಲಿ ಛಂದೋಮಯವಾದ ರಚನೆಗೆ ಬಹಳ ಪ್ರಾಶಸ್ತ್ಯವಿದ್ದಿತು. ನಿರರ್ಗಳವಾಗಿ ನೂರಾರು ವೃತ್ತಗಳನ್ನು ಹೆಣೆಯಬಲ್ಲವರು ಮಹಾ ಕವಿಗಳೆಂದು ಜನರು ಒಪ್ಪುತ್ತಿದ್ದರು. ವಿವಿಧ ಛಂದೋಬಂಧಗಳ ಪ್ರಾಗಲ್ಭ್ಯವು ಇಂದಿನವರಿಗೆ ಅಷ್ಟಾಗಿ ರುಚಿಸದಿರುವುದಕ್ಕೆ ಜನತೆಯ ಅಭಿರುಚಿಯಲ್ಲಿ ಬಂದಿರುವ ಪರಿವರ್ತನೆಯೇ ಕಾರಣ. ಹಿಂದಿನ ಸಂಸ್ಕೃತ ಸ್ತೋತ್ರ ಸಾಹಿತ್ಯದಲ್ಲಿ ನಿರ್ಭರ ಭಕ್ತಿರಸಾವೇಶದಿಂದ ಮೈಮರೆತು ಹಾಡಿರುವ ಕೃತಿಗಳಿರುವಂತೆಯೇ ಕೇವಲ ಶಬ್ದಜಾಲಗಳಿಂದ ಬೆರಗುಗೊಳಿಸುವ ಚಿತ್ರವಿಚಿತ್ರ ರಚನೆಗಳಿಗೂ ಉದಾಹರಣೆಯಿದೆ. ಪ್ರಕೃತ ಗ್ರಂಥವು ಈ ಎರಡನೆಯ ಬಗೆಯ ಗ್ರಂಥಗಳ ಅನುಕರಣ. ಛಂದಸ್ಸಿನ ಓಟಕ್ಕೆ ಕೊರತೆಯಿಲ್ಲ; ಆದರೆ ಅರ್ಥದ ಓಟ ಮಾತ್ರ ಅಲ್ಪ. ಅರ್ಥಾಲಂಕಾರಕ್ಕಿಂತ ಶಬ್ದಾಲಂಕಾರಕ್ಕೇ ಹೆಚ್ಚಿನ ಸ್ಥಾನ. ಒಂದು ಉದಾಹರಣೆ:—

ಕನಕಪಟೀ ಕಲಿತಕಟೀ ಕಂಠತಟೀಹಾರಲಸದುರೋಜಘಟೀ |
ಕಂತುಕುಟೀರಭ್ರುಕುಟೀ ಕವಿರಟೀಶಯತು ಮಾಂ ಮೃಡವಧೂಟೀ ||

ಬಸವಪ್ಪಶಾಸ್ತ್ರಿಗಳ ವ್ಯಕ್ತಿತ್ವದ ಪೂರ್ಣಪರಿಚಯಕ್ಕೆ ಈ ಗ್ರಂಥಪ್ರಕಟನೆಯಿಂದ ಉಪಕಾರವಾಗಿದೆ.

***

ಕೆಲವು ಹೊಸ ಕವಿತೆಗಳು

೧. **ಹರಪಾರ್ವತಿ**—ಲೇಖಕರು : ಶ್ರೀ ಎಂ. ರಾಮರಾವ್ ; ಪ್ರಕಾಶಕರು : ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು ; ಪುಟ ೭೫ ; ಬೆಲೆ, ರೂ. ೧-೪-೦.

೨. **ಭಾವಜೀವಿ**—ಲೇಖಕರು : ಚೆನ್ನವೀರ ಕಣವಿ ; ಪ್ರಕಾಶಕರು : ಪ್ರಗತಿಶೀಲ ಸಾಹಿತ್ಯ ಮಾಲೆ, ಧಾರವಾಡ ; ಪುಟ ೮+೨೯ ; ಬೆಲೆ, ರೂ. ೦-೮-೦.

೩. **ನಕ್ಷತ್ರಗಾನ**—ಲೇಖಕರು : ಶ್ರೀ ಡಿ. ಎಸ್. ಕರ್ಕಿ ; ಪ್ರಕಾಶಕರು : ಕರ್ನಾಟಕ ಪುಸ್ತಕ ಮಂದಿರ, ಬನಹಟ್ಟಿ ; ಪುಟ+೧೦೪ ; ಬೆಲೆ, ರೂ. ೧-೮-೦.

೪. **ಮಾಯಾಮಂದಿರ**—ಲೇಖಕರು: ಭುಜೇಂದ್ರ ಮಹಿಷವಾಡಿ; ಪ್ರಕಾಶಕರು : ಶಾಂತಿಸೇವಾಸದನ, ಸೇಡಬಾಳ ; ಪುಟ vi+೨೫ ; ಬೆಲೆ, ರೂ. ೧-೮-೦.

೫. **ಸತೀ ಬೃಂದಾ**—ಲೇಖಕರು: ಶ್ರೀಮತಿ ಎಂ. ಬಿ. ಗೌರಮ್ಮ ಅಚ್ಯುತರಾವ್; ಪ್ರಕಾಶಕರು: ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು; ಪುಟ ii+೭೧ ; ಬೆಲೆ, ರೂ. ೧-೦-೦.

೬. **ಕನ್ನಡ ವೈರಾಗ್ಯಶತಕ**—ಲೇಖಕರು : ಶ್ರೀ ಎಂ. ಎಸ್. ಸುಬ್ಬಣ್ಣ ; ಪ್ರಕಾಶಕರು : ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು ; ಪುಟ ೧೭ ; ಬೆಲೆ, ರೂ. ೦-೫-೬.

೭. **ಯುಗವಾಣಿ**—ಕವನ ಸಂಗ್ರಹ ; ಪ್ರಕಾಶಕರು : ಶರಣಸಾಹಿತ್ಯ ಗ್ರಂಥಮಾಲಾ, ಬೆಂಗಳೂರು ; ಪುಟ ೮೦ ; ಬೆಲೆ, ರೂ. ೧-೦-೦.

೮. **ಹೂವಾಡಿಗಿತ್ತಿ**—ಲೇಖಕರು : ಶ್ರೀ ರಾ. ಸು. ಮಣಿ ; ಪ್ರಕಾಶಕರು : ಎಚ್. ಆರ್. ಸುಬ್ರಹ್ಮಣ್ಯ, ೨೨೦೦, ಓಲ್ಡ್ ವುಡ್‌ಯಾರ್ಡ್, ಕೃಷ್ಣರಾಜ ಮೊಹಲ್ಲ, ಮೈಸೂರು ; ಪುಟ ೬೭ ; ಬೆಲೆ, ರೂ. ೧-೮-೦.

೯. **ಗಾಂಧಿ ಗೀತೆಗಳು**—ಲೇಖಕರು : ಶ್ರೀ ಬ. ಶಿವಮೂರ್ತಿಶಾಸ್ತ್ರೀ ; ಪ್ರಕಾಶಕರು : 'ವಿದ್ಯಾರ್ಥಿ' ಗ್ರಂಥಮಾಲೆ, ಚಾಮುಂಡಿಪುರಂ, ಮೈಸೂರು ; ಪುಟ ೧೨ ; ಬೆಲೆ, ರೂ. ೦-೪-೦.

೧೦. **ಸೇತುಭಂಗ**—ಲೇಖಕರು : ಶ್ರೀ ಗೋಪಾಲಕೃಷ್ಣ ಪಾಲೆಪ್ಪಾಡಿ ; ಪ್ರಕಾಶಕರು : ಲೇಖಕರು : ಸೆಂಟ್ ಆಗ್ನೇಸ್ ಕಾಲೇಜು, ಮಂಗಳೂರು ; ಪುಟ ೨೨ ; ಬೆಲೆ, ರೂ. ೦-೮-೦.

೧೧. **ವೀರವಿಲಸಿತೆ**—ಲೇಖಕರು : ಶ್ರೀ ತೆಕ್ಕುಂಜ ಗೋಪಾಲಕೃಷ್ಣ ; ಪ್ರಕಾಶಕರು : (?) ಪುಟ : ೩೪ ; ಬೆಲೆ, ರೂ. ೦-೬-೦.

೧೨. ಶ್ರೀ ಬಸವೇಶ್ವರರ ಲಾವಣಿ ಪದ—ಲೇಖಕರು: ಶ್ರೀ ಕುಲಕರ್ಣಿ ಕೇಶವ ರಾಯರು; ಪ್ರಕಾಶಕರು: ಮಿಂಚಿನಬಳ್ಳಿ, ಧಾರವಾಡ (?); ಪುಟ ೧೫; ಬೆಲೆ, ರೂ. ೦-೪-೦.

೧೩. ಕನಸು-ನೆನಸು—ಲೇಖಕರು: ಚಿದಾನಂದ; ಪ್ರಕಾಶಕರು: ಪರ್ಣಕುಟಿ ಗ್ರಂಥ ಮಾಲಾ, ಧಾರವಾಡ; ಪುಟ ೫೧; ಬೆಲೆ, ರೂ. ೧-೦-೦.

ಕನ್ನಡ ಕವಿತೆಯ ಕ್ಷೇತ್ರದಲ್ಲಿ ಕೃಷಿಮಾಡುವವರಿಗೇನೂ ಕೊರತೆಯಿಲ್ಲವೆನ್ನುವುದು ಮೇಲಿನ ಪಟ್ಟಿಯಿಂದಲೇ ಸ್ಪಷ್ಟವಾಗುತ್ತದೆ. ಹೊಸ ಛಂದಸ್ಸಿನ ಭಾವಗೀತೆ ಷಟ್ಪದೀ, ಕಥೆ, ಹಳೆಯ ವೃತ್ತಗಳಲ್ಲಿ ಸಂಸ್ಕೃತದಿಂದ ಅನುವಾದ, ಲಾವಣಿ, ಹಾಡು, ಬಾಲರಿಗಾಗಿ ಬರೆದ ಪರಿಕಥೆಗಳು—ಹೀಗೆ ಕವಿತೆಗಳ ವಿಷಯದಲ್ಲಿಯೇ ಇಂದಿನ ಸಾಹಿತ್ಯಸೃಷ್ಟಿಯ ವೈವಿಧ್ಯವೂ ವ್ಯಕ್ತವಾಗುತ್ತದೆ. ಆದರೆ ಇವೆಲ್ಲಕ್ಕೂ ಎಷ್ಟರ ಮಟ್ಟಿಗೆ ಸಾಹಿತ್ಯವೆಂಬ ಹೆಸರು ಸಲ್ಲಬಹುದೆಂಬುದು ಇನ್ನೊಂದು ಪ್ರಶ್ನೆ. ಸಾಹಿತ್ಯ ದಲ್ಲಿ ಒಂದು ಉತ್ತಮ ಕೃತಿಯು ಹುಟ್ಟಿದರೆ ಅದಕ್ಕೆ ಸಾವಿರ ಅನುಕರಣಗಳು ನಾಯಿ ಕೊಡೆಗಳಂತೆ ಬೆಳೆದುಕೊಳ್ಳುತ್ತವೆ. ಆದರೆ ಅಂತಹ ಅನುಕರಣದ ಪ್ರಯತ್ನವನ್ನೇ ಮಾಡದೆ ಒಬ್ಬನು ಸ್ವತಂತ್ರವಾದ ಮಹಾಕೃತಿಯನ್ನು ರಚಿಸುವುದೂ ಕೂಡ ಅಸಂಭವ. ಲಕ್ಷ್ಮಿಯನ್ನಾರಾಧಿಸಿ ಒಲಿಸಿಕೊಳ್ಳುವುದು ಕಷ್ಟಸಾಧ್ಯವೆಂದರೆ ಸರಸ್ವತಿಯ ಉಪಾಸನೆಯಲ್ಲಿ ಸಿದ್ಧಿಯನ್ನು ಪಡೆಯುವುದು ಇನ್ನೂ ಕಠಿನ. ಅದಕ್ಕೆ ಏಕಾಗ್ರ ನಿಷ್ಠೆಯು ಇನ್ನೂ ಹೆಚ್ಚಿನಮಟ್ಟದಲ್ಲಿರಬೇಕಾಗುತ್ತದೆ. ಒಂದು ಹೊಸ ಕವಿತಾಸಂಗ್ರಹ ವನ್ನು ಓದುವಾಗ ವಿಮರ್ಶಕನು ಹಿಂದಿನ, ಇಂದಿನ, ಎಲ್ಲ ದೊಡ್ಡ ಕವಿತೆಗಳೊಂದಿಗೆ ಇದನ್ನು ಹೋಲಿಸಿ ನೋಡುತ್ತಾನೆ; ವಿಷಯದಲ್ಲಿ, ಅಥವಾ ನಿರೂಪಣೆಯ ಭಂಗಿ ಯಲ್ಲಿ, ಅಲಂಕಾರದ ಯೋಜನೆಯಲ್ಲಿ, ಅಥವಾ ರಸವಿಲಾಸದಲ್ಲಿ ಏನಾದರೂ ಹೊಸದಾದ ಈ ಕವಿಯ ವೈಶಿಷ್ಟ್ಯವು ಕಾಣುವುದೇ ಎಂದು ತನ್ನ ಅನುಭವವನ್ನು ಹುಡುಕಿ ನೋಡುತ್ತಾನೆ. ಕವಿಯೂ ಪ್ರಕಟನಾಲಯಕ್ಕೆ ಧಾವಿಸುವ ಮೊದಲು ತನ್ನ ಕೃತಿಯ ಬಗೆಗೆ ತಾನೇ ವಿಮರ್ಶಕನಾಗುವುದು ಒಳ್ಳಿತು. ಕೇವಲ ಕೀರ್ತಿಯ ಪ್ರಲೋಭನಕ್ಕೆ ಮರುಳಾಗಬಾರದು. "ಕವಿತೆಯನ್ನೇ ಬರೆಯದಿದ್ದರೆ ಧರ್ಮ ಹೋಗುವುದಿಲ್ಲ, ರೋಗ ಬರುವುದಿಲ್ಲ; ಯಾರೂ ಶಿಕ್ಷೆಮಾಡುವುದೂ ಇಲ್ಲ; ಆದರೆ ಕುಕವಿತ್ವವನ್ನು ಜೀವನ್ಮರಣವೆಂದು ಬಲ್ಲವರು ಬಗೆಯುತ್ತಾರೆ" ಎಂದು ಸಾವಿರವರ್ಷಗಳ ಹಿಂದೆಯೇ ಭಾಮಹನು ಹೇಳಿದ ಮಾತು ಇಂದಿಗೂ ಸತ್ಯವಾಗಿಯೇ ಇದೆ. 'ತಾಳಿದವನು ಬಾಳಿಯಾನು' ಎಂಬುದು ಕವಿಯಶಃಪ್ರಾರ್ಥಿಗಳೆಲ್ಲರಿಗೂ ಅಕ್ಷರಶಃ ಅನ್ವಯಿಸುತ್ತದೆ.

ಈ ಹದಿಮೂರು ಕವಿತಾಸಂಗ್ರಹಗಳ ಕಟ್ಟಿನಲ್ಲಿ ನಿಜವಾದ ಕವಿತಾಗುಣಗಳಿರು

ವುದು ಕೆಲವಲ್ಲಿ ಮಾತ್ರ :—ಮೊದಲನೆಯದಾದ 'ಹರ-ಪಾರ್ವತಿ'ಯನ್ನು ಇವುಗಳೆಲ್ಲ ಗುಣದಲ್ಲೂ ಮೊದಲನೆಯದೆನ್ನಬಹುದು. ಶ್ರೀ ರಾಮರಾಯರ ದೃಷ್ಟಿಯಲ್ಲಿ ನೂತನತೆಯಿದೆ, ಕಲ್ಪನೆಯಲ್ಲಿ ಮೋಹಕತೆಯಿದೆ, ಭಾಷೆಯಲ್ಲಿ ಲಾಲಿತ್ಯವಿದೆ.

'ಜನರ ಬಾಳ್ಕೆಯ ಕಡಲ ಹಿರಿಯಾಳವೆಲ್ಲವನು
ನಾ ಹೊಕ್ಕು ಅಲೆದಲೆದು ಅರಿಯಬೇಕು . . .'

ಎಂಬ ಅವರ ಆಸೆಯು ಕೃತಿಯಲ್ಲಿ ಫಲಿಸಿದೆಯೆಂದು ಹೇಳಲಾಗದಿದ್ದರೂ, ಅನ್ಯಕವಿ ಜನಪ್ರಸಿದ್ಧವಾದ ಮಧುರಭಾವಗಳಿಗೆ ಅವರು ಕೊಟ್ಟಿರುವ ಮೆರುಗು ಮನೋಹರವಾಗಿದೆ. ಪ್ರಕೃತಿಯಲ್ಲಿ ಅವರು ಕಾಣುವ ಶಾಂತಿಸುಖಸಂದೇಶವು ಸಹಜವಾಗಿ ಬಂದಿದೆ. ಬಾಳಿನ ಸಿಹಿಯು ಇಲ್ಲಿ ಕಾಣುವುದೇ ಹೊರತು ಕಹಿಯ ಪ್ರಸ್ತಾಪವಿಲ್ಲ. ಅಲ್ಲಲ್ಲಿ ಪು. ತಿ. ನ. ಅವರ ಛಾಯೆಯೂ ಕಾಣುತ್ತದೆ.

ಶ್ರೀ ಚೆನ್ನವೀರ ಕಣವಿಯವರ ಕವನವನ್ನೋದಿದೊಡನೆಯೇ ಅವರಿಗೆ ಕವಿಹೃದಯವಿದೆಯೆಂಬುದು ನಿಸ್ಸಂದೇಹವಾಗಿ ವ್ಯಕ್ತವಾಗುವುದು. ತನ್ನ ನೇರವಾದ ಅನುಭವದ ಅಂತರಾಳದಲ್ಲಿ ಮಾತ್ರ ಕವಿಯು ಒಂದು ಒಳ್ಳೆಯ ಕವನಕ್ಕೆ ಸಾಮಗ್ರಿಯನ್ನು ಪಡೆಯಬಹುದು ; ಬುದ್ಧಿಸಂಸ್ಕಾರದಿಂದ, ಇತರ ಕೃತಿಗಳ ಅನುಸಂಧಾನದಿಂದ, ಇರುವ ಅನುಭವಕ್ಕೆ ದೃಷ್ಟಿ ಸಿಕ್ಕುವುದೇ ಹೊರತು, ಸ್ವಂತ ಅನುಭವಕ್ಕೆ ಪ್ರತಿಯಾಗಿ ಅದೇ ಕಾವ್ಯಸಾಮಗ್ರಿಯನ್ನೊದಗಿಸಲಾರದು. ಈ ದೃಷ್ಟಿಯಿಂದ 'ಭಾವಜೀವಿ' ಎಂಬ ಕವನವು, ಉತ್ತಮಕೃತಿಗಳು ಇವರಿಂದ ಬರಬಲ್ಲುವೆಂಬ ನಿರೀಕ್ಷೆಯನ್ನು ಓದುಗನಲ್ಲಿ ತರುತ್ತದೆ. ಪ್ರಕೃತಿಮಾತೆಯ ಮಡಿಲಾದ ಹಳ್ಳಿಯಲ್ಲಿ ಕಳೆದ ಬಾಲ್ಯದ ಅನುಭವ—ಧಾರವಾಡದಲ್ಲಿ ಕಾಲೇಜು ಜೀವನ, ಲೋಕದ ಡೊಂಕಿನ ಪರಿಚಯ—'ನನ್ನೊಡಲ ಬ್ರಹ್ಮಾಂಡ ನನ್ನ ಲೋಕ' ಎಂಬ ತತ್ವ—ಪ್ರೇಮ ಮಂದಾಕಿನಿಯ ಸ್ಪರ್ಶ, ಗೆಳೆತನ—ಕಾವ್ಯಪರಿಚಯ—ಭಾವಜೀವನ—ಈ ರೀತಿ ಕವನವು ಕವಿಯ ವ್ಯಕ್ತಿತ್ವದ ವಿಕಾಸವನ್ನು ರಮಣೀಯವಾದ ಮಾತುಗಳಲ್ಲಿ ಚಿತ್ರಿಸುತ್ತದೆ. ಸಾಲುಗಳು ತಡೆಬಡೆಯಿಲ್ಲದೆ ಓಡುತ್ತವೆ. ಶಬ್ದಾರ್ಥಗಳ ಸಾಹಿತ್ಯವು ಸೊಗಸಾಗಿದೆ, ಸಹಜವಾಗಿ ಅಲಂಕಾರಗಳು ಅದಕ್ಕೆ ಕಳೆಯೇರಿಸುತ್ತವೆ :

ಸಖ್ಯವಿಲ್ಲದ ಜೀವ ಲಕ್ಷ್ಯವಿಲ್ಲದ ಬಾಣ ;
ಜೊತೆಯಿಲ್ಲದಾ ಬಾಳ ಗೋಳರಿದೆನು ;
ಸನ್ಮತಿಸುವಾಸಿನಿಯ ಪ್ರೇಮಸೀಮಂತಿನಿಯ
ಜೊತೆ ಬೇಕು ಬೇಕೆಂದು ಅಲ್ಪರಿದೆನು.

'ನಕ್ಷತ್ರಗಾನ'ದಲ್ಲಿ ೪೨ ಕವನಗಳಿವೆ. ಎಲ್ಲವೂ ಒಂದೇ ದರ್ಜೆಯ ಉನ್ನತ ಮಟ್ಟದಲ್ಲಿಲ್ಲ. ಎಷ್ಟೋ ಕಡೆ ಶ್ರೀ ಡಿ. ಎಸ್. ಕರ್ಕಿಯವರ ಆಳವಾದ ಅನುಭವವು ಅವರೇ ಹೇಳುವಂತೆ 'ಅನುಭಾವಕ್ಕೆ ತಿರುಗದೆ' ಹೋಗಿದೆಯೆನ್ನಿಸುತ್ತದೆ. ಗದ್ಯ ರೂಪದಲ್ಲಿ ಬಂದ ಭಾವನೆಗಳನ್ನು ಮಾತ್ರಾಬದ್ಧವಾದ ಛಂದಸ್ಸಿನಲ್ಲಿ ಹಾಕಿದಂತೆ ಭಾಸವಾಗುತ್ತದೆ—ಅನೇಕ ಕವಿಗಳಲ್ಲಿ. ಆದರೆ ಕವಿತ್ವಬೀಜವಾದ ಪ್ರತಿಭೆಯು ಇಲ್ಲದೆ ಇಲ್ಲ. ಪ್ರಕೃತಿಯ ಚಿತ್ರಗಳನ್ನು ವರ್ಣಿಸುವಾಗ ಕವಿತೆಗಳಲ್ಲಿ ನಿಜವಾದ ಕಾವು ಕಾಣಿಸುತ್ತದೆ; ಪದಪ್ರಯೋಗದಲ್ಲಿ ಜಾಣ್ಮೆಯಿದೆ:

'ಚಂದ್ರಕಾಂತಿಯಲಿ ಜಲದ ಶಾಂತಿ ನೆರೆ
ಬೆರೆದು ನಲಿಯುತಿತ್ತು
ಜಲತರಂಗದೊಡನಂತರಂಗ ಕಳೆ
ಬೆಳೆಸಲೆಳಸುತಿತ್ತು'.

(ಕೆರೆಯ ದಂಡೆಯಲಿ)

'ಮಾಯಾ ಮಂದಿರ'ದಲ್ಲಿ ಬಾಳಿನ ರಹಸ್ಯವನ್ನು ಕುರಿತ ಕವಿತೆಗಳೇ ಹೆಚ್ಚಾಗಿವೆ. ತತ್ವನಿರ್ದೇಶಕ್ಕೆ ಪ್ರಾರಂಭದಲ್ಲೇ ಹೊರಡುವುದು ಉತ್ಸಾಹದ ಲಕ್ಷಣವೇ ಹೊರತು ಅರಿವಿನ ಕುರುಹಲ್ಲ. ಪ್ರಕೃತಿವರ್ಣನೆಯೂ ಇದೆ. ಇವರ ಅನುಭವವು ಪಕ್ವವಾದಂತೆಲ್ಲ ಇನ್ನೂ ಉತ್ತಮ ಕೃತಿಗಳು ಶ್ರೀ ಭುಜೇಂದ್ರ ಮಹಿಷವಾಡಿಯವರಿಂದ ಬರಬಹುದು. ಕವಿತೆಗಳ ಬಹಿರಂಗವೆಲ್ಲವೂ ಸಮರ್ಪಕವಾಗಿದೆ. ಪದಮೈತ್ರಿಯೂ ಅರ್ಥವ್ಯಕ್ತಿಯೂ ರಮ್ಯವಾಗಿವೆ. ಗೋಳಿನ ಮಧ್ಯದಲ್ಲಿದ್ದುಕೊಂಡೇ ಒಂದು ನಿಶ್ಚಲ ಧೈರ್ಯದಿಂದ ಬಾಳಿನ ಸಮಸ್ಯೆಗಳನ್ನೆದುರಿಸಬೇಕೆಂಬ ಭಾವವು ಕವಿತೆಗಳ ಉದ್ದಕ್ಕೂ ಬರುವ ಮೂಲಸೂತ್ರ. ಇದು ಅಭಿನಂದನೀಯವಾದುದು.

'ಸತೀ ಬೃಂದಾ' ಎಂಬುದು ಬಸವಪ್ಪಶಾಸ್ತ್ರಿಗಳ 'ಸಾವಿತ್ರೀ ಚರಿತ್ರೆ'ಯ ಮಾದರಿಯಲ್ಲಿ ಬರೆದ ಪುರಾಣ ಕಥೆ. ಭಾಮಿನೀ ಷಟ್ಪದಿಯಲ್ಲಿದೆ. ಶ್ರೀಮತಿ ಗೌರಮ್ಮನವರು ಸುಂದರವಾದ ಷಟ್ಪದಿಗಳ ಮೂಲಕ ಕಥೆಯನ್ನು ರಸಭರಿತವಾಗಿ ಹಾಡಿದ್ದಾರೆ. ಹೆಣ್ಣುಮಕ್ಕಳ ಶಾಲೆಗಳಲ್ಲಿ ಇದು ಪಠ್ಯಪುಸ್ತಕವಾಗಲು ಯೋಗ್ಯವಾಗಿದೆ.

ಶ್ರೀ ಎಂ. ಎಸ್. ಸುಬ್ಬಣ್ಣನವರು ಭರ್ತೃಹರಿಯ ವೈರಾಗ್ಯಶತಕವನ್ನು ಸಂಸ್ಕೃತದಿಂದ ಕನ್ನಡಕ್ಕೆ ಕಂದ ವೃತ್ತಗಳಲ್ಲಿ ಪರಿವರ್ತಿಸಿದ್ದಾರೆ. ಮೂಲವನ್ನೋದದವರಿಗೆ ಕಂದ ವೃತ್ತಗಳು ಸರಳವಾಗಿ ತಿಳಿಯುವಂತಿಲ್ಲ. ಮೂಲದ ಸೊಗಸಾದ ಲಾಲಿತ್ಯವು ಲುಪ್ತವಾಗಿರುವುದಲ್ಲದೆ ಕನ್ನಡಶಬ್ದಗಳಿಗೂ ಅನೇಕ ಏರುಪೇರುಗಳಾಗಿವೆ. ಒಟ್ಟಿನಲ್ಲಿ ಬಸವಪ್ಪಶಾಸ್ತ್ರಿಗಳ ಪರಿವರ್ತನವಿರುವಾಗ ಇದಕ್ಕೆ ಪ್ರಶಂಸೆ ದೊರೆಯಲಾರದು.

'ಯುಗವಾಣಿ'ಯನ್ನು ಮುಖಪತ್ರದ ಮೇಲೆ ಕವನ ಸಂಗ್ರಹವೆಂದು ಕರೆದಿದ್ದರೂ ಇದರಲ್ಲಿ ಕವನಗಳಲ್ಲದೆ 'ಬಸವನ ಆದರ್ಶ ಮಾರ್ಗ,' 'ನವರಾತ್ರಿ' ಮೊದಲಾದ ಗದ್ಯ ಪ್ರಬಂಧಗಳೂ ಇವೆ. ವೀರಶೈವ ಧರ್ಮದ ಮೂಲತತ್ವಗಳನ್ನು ಕುರಿತ ಕವಿತೆಗಳಲ್ಲದೆ ಇತರ ಕವಿತೆಗಳೂ ಇವೆ. ಸಾಮಾನ್ಯವಾಗಿ ಎಲ್ಲರೂ ಕಾವ್ಯನಾಮಗಳಿಂದಲೇ ಬರೆದಿದ್ದಾರೆ. ಕವಿತೆಗಳು ಓದಲು ಚೆನ್ನಾಗಿವೆ.

'ಹೂವಾಡಿಗಿತ್ತಿ'ಯ ಲೇಖಕರು ಇದನ್ನು ಆತುರದಲ್ಲಿ ಅಚ್ಚು ಹಾಕಿಸಿದ್ದಾರೆ. ಶ್ರೀ ಮಣಿಯವರು ತಮಗೆ ಬರುವ ಭಾವಗಳನ್ನು ಇನ್ನೂ ಸ್ವಲ್ಪ ನಯವಾದ ಭಾಷೆಯಲ್ಲಿ ಬರೆದಲ್ಲದೆ ಕವಿತೆಯೆನಿಸುವುದಿಲ್ಲ. ಕನ್ನಡ ಪದಗಳಲ್ಲಿ ಇನ್ನೂ ಇದರ ಪ್ರಭುತ್ವ ಸಾಲದು. ಕೆಲವು ಸುಂದರವಾದ ಕಲ್ಪನೆಗಳಿವೆ, ಆದರೆ ಭಾಷೆಯ ಸ್ಖಾಲಿತ್ಯಗಳು ಎಲ್ಲವನ್ನೂ ಕೆಡಿಸಿಬಿಡುತ್ತವೆ. ಪ್ರಣಯಗೀತವು ಉತ್ತಮವಾಗ ಬೇಕಾದರೆ ಗ್ರಾಮ್ಯತೆಯು ಎಲ್ಲಿಯೂ ಬರಬಾರದು. ಇಲ್ಲಿ ಆ ದೋಷವೂ ಅಲ್ಲಲ್ಲಿ ಇಣಿಕಿನೋಡುತ್ತದೆ.

ಶ್ರೀ ಶಿವಮೂರ್ತಿಶಾಸ್ತ್ರಿಗಳು ಇಂದಿನ ಮಹಾವ್ಯಕ್ತಿಗಳನ್ನೂ ಘಟನೆಗಳನ್ನೂ ಕುರಿತು ಹಿಂದಿನ ಸಂಪ್ರದಾಯದ ಪ್ರಕಾರ ರಚಿಸಿರುವ ಕೃತಿಗಳೇ 'ಗಾಂಧೀ ಗೀತೆಗಳು'; ಓದಲು ಹಿತವಾಗಿದೆ.

ಶ್ರೀ ಗೋಪಾಲಕೃಷ್ಣ ಪಾಲೆಪ್ಪಾಡಿಯವರ 'ಸೇತುಭಂಗ'ವು ಟಾರ್ಕ್ವಿನಿಯಸ್ಸನ ಮುತ್ತಿಗೆಯನ್ನು ತಪ್ಪಿಸುವುದಕ್ಕೆಂದು ದೇಶರಕ್ಷಣೆಗಾಗಿ ಟೈಬರ್‌ನದಿಯ ಸೇತುವೆಯನ್ನು ಕೆಡವಿ ದೇಹತ್ಯಾಗಮಾಡಿದ ರೋಮಿನ ಧೀರನಾದ 'ಹರೇಶ'ನ ಸಾಹಸವನ್ನು ವರ್ಣಿಸುತ್ತದೆ. ಬಾಲಕರಿಗೆ ದೇಶಭಕ್ತಿಯ ಆದರ್ಶವನ್ನು ಬೋಧಿಸುತ್ತದೆ.

ಹಾಗೆಯೇ ಶ್ರೀ ತೆಕ್ಕುಂಜ ಗೋಪಾಲಕೃಷ್ಣಭಟ್ಟರ 'ವೀರವಿಲಸಿತವು' ಲವ-ಕುಶರ ಕಥೆಯನ್ನು ನೀತಿಬೋಧಕವಾಗಿ ವರ್ಣಿಸುತ್ತದೆ. ಛಂದಸ್ಸನ್ನು ಲೇಖಕರು ಪಿರಿಯಕ್ಕರವೆಂದಿದ್ದರೂ ಆ ಹಳೆಯ ಛಂದಸ್ಸಿನಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾರೆ.

ಶ್ರೀ ಕುಲಕರ್ಣಿ ಕೇಶವರಾಯರ ಈ ಲಾವಣಿಪದಗಳೂ ಅವರ ಇತರ ಲಾವಣಿಗಳಂತೆಯೇ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ, ಹಾಡಲು ಯೋಗ್ಯವಾಗಿವೆ.

'ಕನಸು-ನೆನಸು'—ಈ ಕವನ ಸಂಗ್ರಹಕ್ಕೆ ಕವಿಗಳೇ ಸಂದರ್ಭಸೂಚನೆಯನ್ನೂ ಸೇರಿಸಿದ್ದಾರೆ. ಇದು ಉಪಯುಕ್ತವಾಗಿದೆ. ಈ ಭಾವಗೀತೆಗಳಲ್ಲಿ ಆಗಾಗ ಕಲ್ಪನಾವಿಲಾಸವು ಮಿಂಚಿನಂತೆ ಹೊಳೆಯುತ್ತದೆ. ಆದರೆ ಬಂಧದಲ್ಲಿ ಬಿಕ್ಕಟ್ಟಿಗಿಂತಲೂ

ಶೈಥಿಲ್ಯ ಹೆಚ್ಚು. 'ಅಜ್ಜಾನು ಅಜ್ಜ ವರುಷಗಳಿಂದ' ಮೊದಲಾದ ಅಪಪ್ರಯೋಗ ಗಳೂ ಬಂದಿವೆ.

ಒಟ್ಟಿನಲ್ಲಿ ಹೇಳುವುದಾದರೆ ಮೇಲಿನ ಕವನಸಂಗ್ರಹಗಳು ಇಂದಿನ ತರುಣ ರಲ್ಲಿರುವ ಭಾವಗೀತೆಯ ವ್ಯಾಮೋಹವನ್ನು ಪ್ರತಿಬಿಂಬಿಸುತ್ತವೆ. ಭಾವಗೀತೆಗಳು ನಮಗೆ ಬೇಡವೆಂದಲ್ಲ. ಆದರೆ ಉಳಿದ ಕಾವ್ಯಪ್ರಕಾರಗಳೂ ಹಿಂದುಳಿಯದಂತೆ ನೋಡಿಕೊಳ್ಳುವ ಭಾರವೂ ಸಾಹಿತಿಗಳಿಗೇ ಸೇರಿದೆ. ಸರ್ವಕಾಲಕ್ಕೂ ಸ್ಥಿರವಾಗಿ ನಿಲ್ಲಬಲ್ಲ ಭಾವಗೀತೆಗಳಲ್ಲಿ ಇದಕ್ಕೂ ಹೆಚ್ಚಿನ ಅನುಭವವೂ ಕಲೆಯೂ ಇರಬೇಕಾಗು ತ್ತದೆ. ತಮ್ಮ ಪ್ರತಿಭಾಂಕುರವನ್ನು ಸರಿಯಾಗಿ ಪೋಷಿಸಿಕೊಂಡು ಕವಿಗಳು ಕನ್ನಡ ಸಾಹಿತ್ಯವನ್ನು ಇತೋಽಪ್ಯತಿಶಯವಾಗಿ ಅಲಂಕರಿಸಲೆಂದು ಹಾರೈಸುತ್ತೇವೆ.

—ಡಾ|| ಕೆ. ಕೃಷ್ಣಮೂರ್ತಿ.

***

ಶಿಲ್ಪಿ—ಶ್ರೀ ಅ. ನ. ಕೃಷ್ಣರಾಯರು; ಪ್ರಕಾಶಕರು: ಆನಂದ್ ಬ್ರದರ್ಸ್, ಬೆಂಗಳೂರು; ಪುಟಗಳು ೯೫; ಬೆಲೆ, ರೂ. ೧-೪-೦.

ಶ್ರೀಮಾನ್ ಅ.ನ. ಕೃಷ್ಣರಾಯರ ಆರು ಕಥೆಗಳ ಸಂಕಲನ ಇದು. ಮೊದಲನೆಯ ಕಥೆಯೇ 'ಶಿಲ್ಪಿ'. ಪರಿಪೂರ್ಣ ಸೌಂದರ್ಯವನ್ನು ಕಲೆಯ ಎರಕದಲ್ಲಿ ಹೊಯ್ಯ ಬೇಕೆಂಬ ಸಂಕಲ್ಪದಿಂದ ಹೊರಟು—ಇಡುವ ಅಡಿ ತಪ್ಪಿ—ನಿರಾಶನಾಗಿ ಆತ್ಮಹತ್ಯ ಮಾಡಿಕೊಂಡ ಶಿಲ್ಪಿಯೊಬ್ಬನ ಕಥೆ. ಅತ್ಯುತ್ತಮ ಕಲಾವಿದ ಆತ. ಆದರೆ ಕಲೆ—ಕಲಾವಿದನ ಶ್ರೀಮಂತ ಪ್ರತಿಭೆಯಿಂದ ಮೂಡುವುದು ಎಂಬುದನ್ನರಿಯದೆ ನಾನಾ ಭಾಗಗಳನ್ನು ಕೃತಕವಾಗಿ ಕೂಡುವುದು ಎಂದು ಹೊರಟ ಶಿಲ್ಪಿಗೆ ಸೋಲು ಅನಿರೀಕ್ಷಿತ ವಾದುದೇನಲ್ಲ. ಶಿಲ್ಪಿ ಆತ್ಮಹತ್ಯಮಾಡಿಕೊಂಡ—ಕಲೆ ಉಳಿಯಿತು. ಈ ಒಂದು ಸಾಮಾನ್ಯ ತತ್ವಪ್ರತಿಪಾದನೆಗಾಗಿ ಕಥೆ ಹೆಣೆದಂತಿದೆ. ಕಾಶ್ಮೀರದಿಂದ ಶಿಲ್ಪಿ ಕರೆದು ತಂದ ಮೈನಳ ಪಾತ್ರ ಅತ್ಯುತ್ತಮವಾಗಿ ಮೂಡಿದೆ. ಶಿಲ್ಪಿಯ ಸೇವೆಗಾಗಿ ಆಕೆ ಸರ್ವಸ್ವಾರ್ಪಣಮಾಡಿದ್ದಾಳೆ. ಅವನಲ್ಲಿ ಆಕೆ ಕಾಣುವುದು ತನ್ನ ದೇವರನ್ನು ಮಾತ್ರ. ಆತನ ದಾಸಿಯಾಗಿರುವುದರಲ್ಲಿ ಆಕೆಗೆ ತೃಪ್ತಿ. ಕಲಾಶಾಲೆಯಿಂದ ಕೇಳಿಬರುವ ಶಿಲ್ಪಿಯ ಹೆಜ್ಜೆಯಧ್ವನಿ ಅವಳಿಗೆ ಮಧುರಸಂಗೀತ. ಕತೆಗಾರರ ಉದ್ದೇಶ ಓದುಗರ ಮನದಿಂದ ಮರೆಯಾಗುವಷ್ಟರಮಟ್ಟಿಗೆ ಮೈನಳ ಪಾತ್ರ ಬೆಳೆದು ನಿಂತಿದೆ.

'ಒಂದು ಸಂಜೆ' ಒಂದು ಹಾಸ್ಯ ಚಿತ್ರ. ನಾಡಿನಗಲ ಮತವೈಷಮ್ಯದ ಮಹಾ ಜ್ವಾಲೆ ಆವರಿಸಿ ಅನರ್ಥಪರಂಪರೆ ನಡೆಯುತ್ತಿದ್ದಾಗ—ಅದೇ ವಿಷಯ ಮಾತನಾಡಿ

ಕೊಂಡು ಸಂಜೆ ಲಾಲ್‌ಬಾಗಿಗೆ ಹೋದ ಸ್ನೇಹಿತರಿಗೆ ಸಹಾಯಕ್ಕಾಗಿ ಕರೆ ಕೇಳಿ ಬರುತ್ತದೆ. ಓಡಿನೋಡಿದರೆ ಮಂತ್ರಹಾಕಿದ ತೆಂಗಿನಕಾಯಿ ಹಿಡಿದು ಕೆರೆಗೆ ಹಾಕಲು ಹೋಗುತ್ತಿದ್ದವನೊಬ್ಬನನ್ನು—ಇನ್ನೊಬ್ಬ ಆತ್ಮಹತ್ಯಮಾಡಿಕೊಂಡಾನು ಎಂದು ಹಿಡಿದುನಿಲ್ಲಿಸಿದ್ದ. ಅವನದೇ ಕೂಗು. 'ಜೀವನದ ಕಾರ್ಮೋಡದ ಮೇಲೆ ಈ ದೃಶ್ಯ ಬೆಳ್ಳಿಯ ಬೆಳಕಿನಂತೆ ಮಿಂಚಿದೆ.' ಪಾಶ್ಚಾತ್ಯ ಕಥೆಗಳನ್ನೋದಿದವರಿಗೆ ಓ. ಹೆನ್ರಿಯ ನೆನಪು ಬರುತ್ತದೆ.

ಶ್ರೀಮಂತ ಚಂದ್ರ ಮಿತ್ರರಾಜುವಿನ ದಯೆಯಿಂದ—ಪತ್ನಿ ಜಾನಕಿಯಂತಹ ಲಕ್ಷ್ಮಿಯನ್ನು ಬಿಟ್ಟು ಯಾವಳೋ ಬೀದಿಯ ಹೆಣ್ಣಿನ ಹಿಂದೆ ಹೋದುದೇ 'ಬೀದಿಯ ಹೆಣ್ಣು' ಕಥೆಯ—ವಸ್ತು. ಜಾನಕಿಯ ಅಣ್ಣ ಕೋರ್ಟಿನಲ್ಲಿ ಚಂದ್ರನಿಗೆ ಹುಚ್ಚು ಎಂದು ಹೇಳಿ ಆಸ್ತಿ ಉಳಿಸಿ ಜಾನಕಿಯ ಮಕ್ಕಳು ಬೀದಿಯ ಭಿಕಾರಿಗಳಾಗುವುದನ್ನು ತಪ್ಪಿಸಿದರು—ಚಂದ್ರ ಹುಚ್ಚಾಸ್ಪತ್ರೆ ಸೇರಿದ—ಹುಚ್ಚೇ ಹಿಡಿಯಿತು. ಕಡೆಗೆ ಒಂದು ದಿನ ಮಾಯವಾದ. ಕಥಾ ಪ್ರಪಂಚದಲ್ಲಿ ಇಂತಹ ಕಥೆಗಳು ಎಷ್ಟೋ ಬಂದಾಗಿವೆ. ಸಮಸ್ಯೆ ಹಳೆಯದೇ. ಉತ್ತರ ಯಾರಿಗೂ ಹೊಳೆಯದೇನೋ.

ತುಂಬಿದ ಗರ್ಭಿಣಿಯಾದ ಹೆಂಡತಿಗೆ ವೈದ್ಯಸಹಾಯ ದೊರಕಿಸಲು ಲೇಖಕ ಸುಂದರಮೂರ್ತಿ ತನ್ನ "ಕೋಟಾ" ಕಾಗದವನ್ನು ಕರಿಪೇಟೆಯಲ್ಲಿ ಮಾರಿದ. ಇವನನ್ನು ನೋಡಿ ದೇವಿ 'ಗೌರಿ ನಕ್ಕಳು' ಧರ್ಮ-ಅಧರ್ಮಗಳ ಒಳತೋಟಿಯನ್ನು ಉತ್ತಮವಾಗಿ ಮೂಡಿಸಿರುವ ಸುಂದರವಾದ ಕಥೆ ಇದು. ಗೌರಿಯ ನಗು ಅನಂತ ಅರ್ಥಪೂರ್ಣವಾಗಿದೆ.

ಉಳಿದೆರಡು ಕಥೆಯ ವಿಷಯ ಹೆಚ್ಚು ಹೇಳುವಂತಹುದೇನಿಲ್ಲ. ಕತೆಯನ್ನು ಆರಂಭ ಮಾಡುವ ನೂತನ ರೀತಿ—ಕಲಾಮಯಲಾವಣ್ಯ ಕಥೆಗಾರರಿಗೆ ಸಿದ್ಧಿಸಿದೆ. ಯಾವಕಥೆ ಯಲ್ಲಾದರೂ ಇದನ್ನು ಸುಲಭವಾಗಿ ಗುರುತಿಸಬಹುದು. ಆದರೂ 'ಬೀದಿಯ ಹೆಣ್ಣು' ಕಥೆಯಲ್ಲಿ ಎದ್ದುಕಾಣುವಂತಿದೆ. ಕತೆಯ ಯಾವ ಪುಟ ತೆರೆದರೂ ಕಥೆಗಾರರು ಸಂಭಾಷಣೆಯನ್ನು ಎಷ್ಟು ಅತ್ಯುತ್ತಮವಾಗಿ ನೆರವೇರಿಸಬಲ್ಲರು ಎಂಬುದು ಗೋಚರ ವಾಗುತ್ತದೆ.

ಭಕ್ತನ ಮನಸ್ಸು ಜೇನುನೊಣದಂತೆ-ಅದು ಬರಿಯ ಹೂವಿನ ಮೇಲೆ ಮಾತ್ರ ಕುಳಿತು ಮಧು ಹೀರುತ್ತದೆ; ಲೌಕಿಕನ ಮನಸ್ಸು ಸಾಮಾನ್ಯ ನೊಣದಂತೆ-ಸಿಕ್ಕ ಲ್ಲೆಲ್ಲ ಕೂರುತ್ತದೆ. ಹೂವಿನಮೇಲೂ ಕೂತೀತು- ಎನ್ನುತ್ತಿದ್ದರು ಪರಮಹಂಸರು. ಸಾಹಿತಿ-ಜನಮನವನ್ನು ಮೇಲೆತ್ತುತ್ತೇನೆಂಬ ಸಾಹಿತಿ ಇದನ್ನು ಗಮನಿಸಿದರೆ ಒಳ್ಳಿತು ಎಂದು ಎನಿಸುತ್ತದೆ.

ಭಾವಚಿತ್ರ—ಶ್ರೀ ಯು. ನಾರಾಯಣ ಭಟ್ಟ; ಪ್ರಕಾಶಕರು: ಹರ್ಷ ಮುದ್ರಣಾಲಯ, ಪುತ್ತೂರು; ೫೮ ಪುಟಗಳು; ಬೆಲೆ, ರೂ. ೧-೦-೦.

ಇದೊಂದು ನೀಳ್ಗತೆ, ಹಳ್ಳಿಯ ತಾರಾನಾಥ ವ್ಯಾಸಂಗಕ್ಕಾಗಿ ಮುಂಬೈಗೆ ನಡೆದು-ಅಲ್ಲಿ ಹೇಮಲತೆಯೆಂಬುವಳನ್ನು-ಎಲ್ಲಕಥೆಗಳಂತೆ-ಬಹಳ ಕಷ್ಟದನಂತರ ಮದುವೆ ಯಾಗುತ್ತಾನೆ. ಪ್ರಸವದ ದಿನ ಆಕೆ ಕಣ್ಣುಮುಚ್ಚುತ್ತಾಳೆ. ಈ ದುಃಖದಿಂದ ಮೂಡಿದ ಕವನಗಳನ್ನು 'ಬಾಷ್ಪಾಂಜಲಿ' ಎಂಬ ಹೆಸರಿನಿಂದ ಹೇಮಲತೆಯ ಭಾವ ಚಿತ್ರದೊಂದಿಗೆ ಪ್ರಕಟಿಸಿದ. ಅಷ್ಟೇ ಔಚಿತ್ಯ ಈ ಕಥೆಯ ತಲೆಬರಹಕ್ಕೆ. ಕಲಿಯದ ಹೆಣ್ಣಿನ ಬಗ್ಗೆ ತಿರಸ್ಕಾರ-ಕಲಿತ ಹೆಣ್ಣಿನ ಬಗ್ಗೆ ಅಂಥ ಅಭಿಮಾನವನ್ನು ಅಳತೆಮೀರಿ ವ್ಯಕ್ತಪಡಿಸಿದ್ದಾರೆ ಲೇಖಕರು. ಸಂಸ್ಕೃತಿ-ಸಾಹಿತ್ಯ ಇವುಗಳ ಆಳವಾದ ಅಭ್ಯಾಸ ಲೇಖಕರ ಮನಸ್ಸಿಗೆ ಪರಿಪಕ್ವತೆಯನ್ನು ತಂದುಕೊಟ್ಟೀತು. ದೀರ್ಘ ಆಲೋಚನೆ ಸಾಹಿತ್ಯವನ್ನು ಉಳಿಸೀತು.

ಯಾರು ಹೊಣೆ?—ಶ್ರೀ ಬಿ. ಆರ್. ವಾಡಪ್ಪಿ; ಪ್ರಕಾಶಕರು: ದ. ಬಾ. ಕುಲಕರ್ಣಿ, ಮನೋಹರ ಗ್ರಂಥಭಾಂಡಾರ, ಧಾರವಾಡ; ಪುಟಗಳು ೫೨; ಬೆಲೆ, ರೂ. ೧-೦-೦.

ಲೇಖಕರು ಇದನ್ನು ಕಥಾಸಂಕಲನ ಎಂದು ಕರೆದಿದ್ದಾರೆ. ಆದರೆ ವಾಸ್ತವ ವಾಗಿ ಇಲ್ಲಿರುವುವು ಹೆಚ್ಚುಕಡಿಮೆ ವ್ಯಕ್ತಿಚಿತ್ರಗಳು. ಚಿತ್ರಿಸ ಹೊರಟಿರುವ ಪಾತ್ರ ಗಳಾದರೂ ಸ್ಪಷ್ಟವಾಗಿ ಮೂಡಿಲ್ಲ. ಬರವಣಿಗೆಯಲ್ಲಿ ಶಕ್ತಿಸಾಲದು. 'ಗಂಗೆ ಅಳಿದ ಗಂಗಮ್ಮ' ಈ ಸಂಗ್ರಹದಲ್ಲಿ ಉತ್ತಮವಾದದ್ದು. ಹೆಚ್ಚು ಪ್ರಯತ್ನಪಟ್ಟರೆ ಉತ್ತಮ ವಾದ ಶೈಲಿ ಸಿದ್ಧಿಸೀತು.

—ಪ್ರಭುಶಂಕರ್

***

ರಂಗಣ್ಣನ ಕನಸಿನ ದಿನಗಳು—ಗ್ರಂಥಕರ್ತರು: ಶ್ರೀಮಾನ್ ಎಂ. ಆರ್. ಶ್ರೀನಿವಾಸ ಮೂರ್ತಿಗಳು; ಪ್ರಕಾಶಕರು: ಸತ್ಯಶೋಧನ ಪ್ರಕಟನಮಂದಿರ, ಕೋಟೆ, ಬೆಂಗಳೂರು ನಗರ; ಬೆಲೆ, ಸಾದಾಪ್ರತಿ ರೂ. ೪-೦-೦, ಕ್ಯಾಲಿಕೋಪ್ರತಿ ರೂ. ೬-೦-೦.

ಈ ಗ್ರಂಥದಲ್ಲಿ ಗ್ರಂಥಕರ್ತರೇ ಮುನ್ನುಡಿಯಲ್ಲಿ ಸೂಚಿಸಿರುವಂತೆ ನಮ್ಮ ದೇಶದ ಪ್ರಾಥಮಿಕ ವಿದ್ಯಾಭ್ಯಾಸಕ್ರಮದಲ್ಲಿರುವ ಲೋಪದೋಷಗಳು, ಅವುಗಳನ್ನು ತಿದ್ದಿಕೊಳ್ಳಬಹುದಾದ ಮಾರ್ಗಗಳು, ಉಪಾಧ್ಯಾಯರ ಬಡತನದ ಜೀವನ, ಅವರ ಕಷ್ಟಕಾರ್ಪಣ್ಯಗಳು, ಅವರ ಶೀಲಸ್ವಭಾವಗಳು, ಸಾರ್ವಜನಿಕ ಮುಖಂಡರಲ್ಲಿ ಸಾರ್ಥಿಗಳು, ನಿಸ್ವಾರ್ಥಿಗಳು, ಹಳ್ಳಿಯ ಜನ, ಕೆಲವು ಸಂಸಾರಚಿತ್ರ ಮೊದಲಾದುವು

ಅಡಕವಾಗಿವೆ. ಭರತಖಂಡದಲ್ಲಿ ಬಹುವರ್ಷಗಳಿಂದ ಸಾರ್ವತ್ರಿಕ ವಿದ್ಯಾಭ್ಯಾಸವು ಒಂದು ಜಟಿಲವಾದ ಸಮಸ್ಯೆಯಾಗಿಯೆ ಉಳಿದಿದೆ. ವರ್ಷವರ್ಷವೂ ಇದರ ಆವಶ್ಯಕತೆಯನ್ನರಿತು ಸರಕಾರವು ಕೋಟ್ಯಂತರ ರೂಪಾಯಿಗಳನ್ನು ವೆಚ್ಚಮಾಡುತ್ತಿದೆ. ಪಾಠಶಾಲೆಗಳು ಹೆಚ್ಚಿವೆ, ಉಪಾಧ್ಯಾಯರ ಸಂಬಳ ಹೆಚ್ಚಿದೆ. ಶಾಲೆಯ ಕಟ್ಟಡಗಳು ಹೆಚ್ಚಿವೆ. ಇನ್‌ಸ್ಪೆಕ್ಟರುಗಳ ಸಂಖ್ಯೆ ಹೆಚ್ಚಿದೆ. ಪೀಠೋಪಸ್ಕರಗಳು ಹೆಚ್ಚಿವೆ. ಪಾಠೋಪಕರಣಗಳು ಯಥೇಷ್ಟವಾಗಿವೆ. ಉಪಾಧ್ಯಾಯರ ಶಿಕ್ಷಣ ಶಾಲೆಗಳಿಗೆ ಕಡಿಮೆಯಿಲ್ಲ; ಆದರೂ ನಿರೀಕ್ಷಿಸಬಹುದಾದ ಫಲ ಮಾತ್ರ ಲಭ್ಯವಾಗಿಲ್ಲವೆಂಬುದು ತಜ್ಞರ ಅಭಿಪ್ರಾಯ. ಇದಕ್ಕೆ ಕಾರಣವೇನಿರಬಹುದು? ದೋಷವೆಲ್ಲಿರಬಹುದು? ಎಂಬುದು ಸಂಬಂಧಪಟ್ಟವರ ಅನವರತ ಪರಿಶೀಲನೆಯಲ್ಲಿದೆ. ಈ ಪ್ರಶ್ನೆಗಳಿಗೆ ಪ್ರಸಕ್ತಗ್ರಂಥದಲ್ಲಿ ಸೂಕ್ತಪರಿಹಾರವು ದೊರಕುತ್ತದೆ. ಪಾಠಶಾಲೆಗೆ ಉಪಾಧ್ಯಾಯರೇ ಜೀವ. ಯೋಗ್ಯರಾದ ಆತ್ಮಗೌರವದಿಂದ ಕೂಡಿದ ಶ್ರದ್ಧಾಳುಗಳಾದ ಉಪಾಧ್ಯಾಯರನ್ನೆ ಎಲ್ಲ ಶಾಲೆಗಳಲ್ಲಿಯೂ ನೇಮಕಮಾಡಬೇಕು. ಅವರ ಸಾಮಾನ್ಯ ಜೀವನಕ್ಕೆ ಸಾಕಾಗುವಷ್ಟು ಸಂಬಳ ಸಲ್ಲಬೇಕು. ಉಪಾಧ್ಯಾಯರಿಗೂ ಅಧಿಕಾರಿಗಳಿಗೂ ಮಧುರ ಬಾಂಧವ್ಯ ಬೆಳೆದುಬರಬೇಕು. ಉಪಾಧ್ಯಾಯರಿಗೆ ತಿಳಿವಳಿಕೆಯನ್ನು ಕೊಟ್ಟು ಸಹಾಯಮಾಡತಕ್ಕವರು ಇನ್‌ಸ್ಪೆಕ್ಟರಾಗಿ ನೇಮಕವಾಗಬೇಕು. ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳು ಕನ್ನಡ, ಸಂಸ್ಕೃತ ಸಾಹಿತ್ಯಗಳನ್ನು ಚೆನ್ನಾಗಿ ಬಲ್ಲವರಾಗಿ ಶಿಕ್ಷಣಶಾಸ್ತ್ರ, ವ್ಯವಸಾಯಶಾಸ್ತ್ರ, ಸಹಕಾರತತ್ತ್ವ ಮೊದಲಾದುವುಗಳಲ್ಲಿ ಪೂರ್ಣಪಾಂಡಿತ್ಯವನ್ನು ಸಂಪಾದಿಸಿ ಗ್ರಾಮಾಂತರದಲ್ಲಿ ಸಂಚಾರಮಾಡುವಾಗ ಹಳ್ಳಿಯವರಿಗೆ ಭಾಷಣಗಳ ಮೂಲಕ ಪ್ರಚಾರಮಾಡಬೇಕು. ಹಳ್ಳಿಯವರು ಸ್ವಭಾವತಃ ಕೆಟ್ಟವರಲ್ಲ. ಅವರಲ್ಲಿ ಅನೂಚಾನವಾದ ಡೊಂಕು ಇಲ್ಲದೇನೂ ಇಲ್ಲ. ಅವರ ಲೋಪದೋಷಗಳಿಗೆ ಅವರ ಸಹವಾಸವೂ ಸನ್ನಿವೇಶವೂ ಕಾರಣ. ಸಹಾನುಭೂತಿಯಿಂದ ಅವರಿಗೆ ಯೋಗ್ಯವಾದ ವಿದ್ಯಾಭ್ಯಾಸವನ್ನು ಕೊಟ್ಟು ಸತ್ಪ್ರಜೆಗಳನ್ನಾಗಿ ಮಾಡುವುದು ಅಸಾಧ್ಯವೇನೂ ಅಲ್ಲ ಎಂಬುದು ಈ ಗ್ರಂಥದ ಪ್ರಧಾನ ಸಂದೇಶ.

ಪ್ರಸಕ್ತ ಗ್ರಂಥವು ಒಂದು ಚಿತ್ರಕಾದಂಬರಿ. ಕಥೆಯಾದರೂ ನಿಷ್ಕೃಷ್ಟವಾದ ವಸ್ತುವಿಲ್ಲ. ಇಂಗ್ಲೀಷಿನಲ್ಲಿರುವ ಕ್ರಿಸ್‌ಮಸ್ ಕಥೆಯ ಮಾದರಿಯದು. ಇದರಲ್ಲಿ ಬರುವ ಅನೇಕ ವ್ಯಕ್ತಿಚಿತ್ರಗಳು ಪ್ರಧಾನನಾಯಕನಾದ ರಂಗಣ್ಣನ ಅನುಭವತಂತುವಿನಿಂದ ಬಂಧಿತವಾಗಿವೆ. ಒಂದೊಂದೂ ಪ್ರತ್ಯೇಕಚಿತ್ರವಾಗಿಯೇ ಉಳಿಯಲೂ ಯೋಗ್ಯವಾದುದು. ಕಾದಂಬರಿಯ ಉದ್ದಕ್ಕೂ ಪರಿಚಯವಾಗುವ ಕ್ಷೌರಕಜಾತಿಯ ಮೇಷ್ಟ್ರು ಮುನಿಸಾಮಿ, ಅಗಸರಜಾತಿಯ ಮೇಷ್ಟ್ರು

ರಂಗಪ್ಪ, ಮೇಷ್ಟ್ರು ವೆಂಕಟಸುಬ್ಬಯ್ಯ, ಆವಲಹಳ್ಳಿ ಬೋರೇಗೌಡ, ರಂಗನಾಥಪುರದ ಗಂಗೇಗೌಡ, ರಾಜಕೀಯ ಮುಖಂಡರಾದ ಕಲ್ಲೇಗೌಡ ಮತ್ತು ಕರೀಗೌಡರು, ಅವರ ಏಜೆಂಟಾದ ಮೇಷ್ಟ್ರು ಉಗ್ರಪ್ಪ—ಒಬ್ಬೊಬ್ಬರೂ ಪ್ರತಿದಿನದ ಜೀವನದಲ್ಲಿ ಪ್ರತ್ಯಕ್ಷವಾಗಿ ಕಾಣಬಹುದಾದ ಮಾದರಿಯ ಸಜೀವವ್ಯಕ್ತಿಗಳು. ಅವರ ಕಾರ್ಯ ಗಳೂ ಶೀಲಗಳೂ ಅವರಿಗೆ ಪೂರ್ಣವಾಗಿ ಒಪ್ಪತಕ್ಕವು. ಅವರ ಪರಿಚಯದಿಂದ ಪೂರ್ಣಲೋಕಾನುಭವವುಂಟಾಗುವುದು.

ಪ್ರಧಾನವ್ಯಕ್ತಿಯಾದ ರಂಗಪ್ಪ ಆದರ್ಶ ಇನ್ಸ್‌ಪೆಕ್ಟರು. ತನ್ನ ಸ್ನೇಹಿತನಾದ ತಿಮ್ಮರಾಯಪ್ಪನಿಂದ ಇನ್ಸ್‌ಪೆಕ್ಟರ್‌ಗಿರಿಯ ವ್ಯಾಮೋಹವನ್ನು ಹೊಂದಿ ಬಹು ಉತ್ಸಾಹದಿಂದ ಕನಸನ್ನು ನನಸಾಗಿಸಿಕೊಂಡು ಕಾರ್ಯೋನ್ಮುಖನಾಗುತ್ತಾನೆ. ಅವನಿಗೆ ಇನ್ಸ್‌ಪೆಕ್ಟರಾಗುವುದಕ್ಕೆ ಬೇಕಾದ ಎಲ್ಲ ಯೋಗ್ಯತೆಗಳೂ ಇವೆ. ಸಮಯೋಪಾಯ ಸರಸ್ವತಿಯಾದ ಗೃಹಿಣಿಯಿದ್ದಾಳೆ. ಆವಶ್ಯಕವಾದ ಉತ್ಸಾಹವಿದೆ. ತಿಮ್ಮರಾಯಪ್ಪನ ಉಪದೇಶವಿದೆ. ಆದರೂ ಅನುಭವ ಸಾಲದು. ಅದುವರೆಗೆ ಕೆಲವು ಕಡೆ 'ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳೆಂದರೆ ಅರಳಿಟ್ಟಿನ ಇನ್ಸ್‌ಪೆಕ್ಟರೆಂದೋ ಅವಲಕ್ಕಿ ಇನ್ಸ್‌ಪೆಕ್ಟರೆಂದೋ ಹಾಸ್ಯಕ್ಕೀಡಾಗಿದ್ದುದನ್ನು ತಪ್ಪಿಸಿ ತಾನು ಎಲ್ಲರಿಗೂ ಮೇಲ್ಪಂಕ್ತಿಯಾಗಿರಬೇಕೆಂಬುದು ಅವನ ಮಹತ್ವಾಕಾಂಕ್ಷೆ. ಒಟ್ಟಿನಲ್ಲಿ ಸರೀಕರಲ್ಲಿ ತನ್ನ ಗೌರವವನ್ನುಳಿಸಿಕೊಂಡು ಇಲಾಖೆಯ ಗೌರವವನ್ನೂ ಹೆಚ್ಚಿಸಬೇಕೆಂಬುದು ಅವನ ಇಚ್ಛೆ.' ಅದಕ್ಕನುಗುಣವಾಗಿ ದುಡಿಯಲು ತೊಡಗುತ್ತಾನೆ. ಪ್ರಾರಂಭದ ಸಂರಂಭಗಳೂ ಗೃಹಿಣಿಯು ಸರ್ಕೀಟಿಗೆ ಸಿದ್ಧಪಡಿಸುವ ಓಮುಪುಡಿ, ತೆಂಕೊಳಲು, ಮೈಸೂರುಪಾಕು, ಚಿರಮಾಲಾಡು, ಗ್ರಾಮಸ್ಥರಿಂದ ದೊರೆಯಬಹುದಾದ ಹಾರ ತುರಾಯಿಗಳು, ಬಾಳೆಹಣ್ಣು, ಎಳನೀರು, ಹಲಸಿನಹಣ್ಣು ಬಹು ಆಕರ್ಷಕವಾಗಿದ್ದರೂ ಸ್ವಲ್ಪಕಾಲದಲ್ಲಿಯೇ ಗ್ರಾಮಾಂತರಗಳ ಸಂಚಾರದ ತೊಂದರೆಗಳೂ, ಹಳ್ಳಿಗರ ಅನೂಚಾನವಾದ ಡೊಂಕುಮನೋಭಾವವೂ ಚಿರದರಿದ್ರರಾದ ಉಪಾಧ್ಯಾಯರ ಜೀವನಕಷ್ಟವೂ ಪ್ರತ್ಯಕ್ಷಪರಿಚಯವಿಲ್ಲದ ಮೇಲಿನಧಿಕಾರಿಗಳ ಔದಾಸೀನ್ಯವೂ ಸ್ವಾರ್ಥಿಗಳಾದ ಮುಖಂಡರ ಅಪಪ್ರಚಾರವೂ ಅವನ ಉತ್ಸಾಹಕ್ಕೆ ಭಂಗತರುತ್ತವೆ. ಆದರೂ ರಂಗಣ್ಣನು ಬಹುಶ್ರದ್ಧೆಯಿಂದ ಉಪಾಧ್ಯಾಯರಲ್ಲಿ ತಿಳಿವಳಿಕೆಯನ್ನೂ ಆತ್ಮಗೌರವವನ್ನೂ ಉಂಟುಮಾಡಿ ಸಭೆಗಳ ಮೂಲಕ ಅವರಿಗೆ ಸರಿಯಾದ ಶಿಕ್ಷಣ ನಿಯಮಗಳನ್ನು ತಿಳಿಯಪಡಿಸಿ ಒಂದುಕಡೆ ಉಪಾಧ್ಯಾಯರಿಗೂ ಹಳ್ಳಿಯವರಿಗೂ ಮತ್ತೊಂದುಕಡೆ ಉಪಾಧ್ಯಾಯರಿಗೂ ಮೇಲಿನಧಿಕಾರಿಗಳಿಗೂ ಮಧುರಬಾಂಧವ್ಯ ವನ್ನು ಬೆಳಸಿ, ಉಪಾಧ್ಯಾಯರನ್ನು ಸಹಾನುಭೂತಿಯಿಂದ ಸ್ನೇಹಿತರಂತೆ ಭಾವಿಸಿ,

ಅವರನ್ನು ಶಿಕ್ಷಿಸುವುದು ಹೇಡಿತನವೆಂದು ತಿಳಿದು ಅವಶ್ಯಬಂದಾಗ ತಪ್ಪಿತಸ್ಥ ರಾದವರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಿ ತನ್ನ ಕಾರ್ಯ್ಯದಲ್ಲಿ ಕೃತಕೃತ್ಯನಾಗಿರು ವುದಲ್ಲದೆ ಎಲ್ಲರ ಪ್ರೀತಿಗೂ ಪಾತ್ರನಾಗುತ್ತಾನೆ. ಆದರೂ ಆತನಿಗೆ ಜೀವನದ ಕಹಿಯ ಅನುಭವವಾಗದಿರಲಿಲ್ಲ. ಅಷ್ಟು ಕರ್ತವ್ಯಪರನಾದರೂ ಆತನಿಗೆ 'ಟ್ಯಾಕ್ಟ್' ಸಾಲದೆಂಬ ಆಕ್ಷೇಪಣೆ ಸಾಹೇಬರಿಂದ ಬಂದೇ ಬಂತು. ಅವನ ಹೆಂಡತಿಯಿಂದಲೂ ಅದು ನಿಜವೆಂಬುದು ಸ್ಥಾಪಿತವಾಯಿತು. ಜಂಬದ ಕೋಳಿಯಾಗಿ ಮೊದಲು ಮಾಡಿದ ರಂಗಪ್ಪ ಎರಡುವರುಷದ ಅವಧಿಯಲ್ಲಿ ನೂರಾರು ಪೆಟ್ಟುಗಳನ್ನು ತಿಂದು ಪ್ರೇಮವು,—ಸ್ನೇಹವು,—ವಿವೇಕವು ನಿಜವಾದ ಅಭಿವೃದ್ಧಿಗೆ ಕಾರಣವೆಂದು ಅರಿತು ಸರ್ವಸಖನಾಗುವನು.

ಇಲ್ಲಿ ಬರುವ ವರ್ಣನೆಗಳು ಬಹು ಸಹಜವಾಗಿವೆ. ಭಾಷೆ ಲಲಿತವಾಗಿಯೂ ಸರಳವಾಗಿಯೂ ಇದೆ. ಮೊದಲಿಂದ ಕೊನೆಯವರೆಗೆ ಆಸಕ್ತಿ ಎಲ್ಲಿಯೂ ಕಡಮೆ ಯಾಗುವುದಿಲ್ಲ. ತಿಪ್ಪೇನಹಳ್ಳಿಯ ಮೇಷ್ಟರ ಚಿತ್ರ ಎಂತಹವರ ಕರುಳನ್ನಾದರೂ ಕೊರೆಯುವಂತಹುದು. ಆವಲಹಳ್ಳಿ ಸಭೆಯ ವಿವರ ಕೋಮುವಾರ ಭಯಂಕರತೆ ಯನ್ನು ಕಣ್ಣುಮುಂದಿಡುವುದು. ಗರುಡನಹಳ್ಳಿ ಹನುಮನಹಳ್ಳಿಯ ಪ್ರಸಂಗ ಹಳ್ಳಿಗಳ ದುರಂತಸ್ಥಿತಿಯನ್ನು ದೃಢಪಡಿಸುವುದು; ಆದರೂ ಮಧ್ಯೆ ಮಧ್ಯೆ ಹೊಟ್ಟೆ ಹುಣ್ಣಾಗುವಷ್ಟು ನಗಿಸುವ ಪ್ರಸಂಗಗಳಿಲ್ಲದೇ ಇಲ್ಲ. ಉಗ್ರಪ್ಪನು ಶಾಂತವೀರಸ್ವಾಮಿ ಯಾದುದು ಅದ್ಭುತಪವಾಡವೇ ಸರಿ.

ಒಟ್ಟಿನಲ್ಲಿ ಇದನ್ನು ಪ್ರಾಥಮಿಕ ವಿದ್ಯಾಭ್ಯಾಸದ ಕೈಪಿಡಿಯೆಂದು ಕರೆಯ ಬಹುದು. ಪ್ರಾಥಮಿಕ ವಿದ್ಯಾಭಿವೃದ್ಧಿಗೆ ಅನೇಕ ತಜ್ಞರ ಗೋಷ್ಠಿಗಳಿಗಿಂತ, ವರದಿ ಗಳಿಗಿಂತ ಈ ಪುಸ್ತಕದಿಂದ ಹೆಚ್ಚು ಉಪಯೋಗವಾಗುವುದೆಂದು ನಿಸ್ಸಂದೇಹವಾಗಿ ಹೇಳಬಹುದು. ಅಲ್ಲದೆ ಇದೊಂದು ಅನುಭವಾಮೃತ. ಪ್ರಾಸಂಗಿಕವಾಗಿ ಇದರಲ್ಲಿ ಅನುಕೂಲದಾಂಪತ್ಯದ ಮರ್ಮ, ದ್ವಿತೀಯ ವಿವಾಹದ ತೊಡಕುಗಳು, ಪ್ರೇಮದ ರಹಸ್ಯ, ರಾಜಕೀಯ ಜೀವನದ ಸಾಧಕಬಾಧಕಗಳು, ಅಧಿಕಾರಿಗಳ ದುರ್ನಡತೆ, ಹಳ್ಳಿಯವರ ಶಾಂತಜೀವನ, ನಿಜವಾದ ದೇಶಭಕ್ತರ ಗುಪ್ತಸೇವೆ ಮೊದಲಾದುವು ಹೃದಯಂಗಮವಾಗಿ ವರ್ಣಿತವಾಗಿವೆ. ಇನ್ಸ್ಪೆಕ್ಟರುಗಳಿಗೆ ಹಳ್ಳಿಯವರಿಂದ ದೊರೆಯ ಬಹುದಾದ ಉಪಾಹಾರ ಫಲಾಹಾರ ಮಾನ್ಯತೆ ಸಂಭಾವನಾದಿಗಳು ಆಕರ್ಷಕ ವಾಗಿಯೂ ಪ್ರಾಚೀನ ಭಾರತ ಸಂಸ್ಕೃತಿಯ ತಿರುಳನ್ನು ಪರಿಚಯಮಾಡಿಸತಕ್ಕ ವಾಗಿಯೂ ಇವೆ.

ಕವಿಗಳೂ, ನಾಟಕಕಾರರೂ, ವಿಮರ್ಶಕರೂ, ಅನುಭಾವಿಗಳೂ, ಭಾಷಣ

ಕಾರರೂ, ಆದ ಶ್ರೀಮಾನ್ ಎಂ. ಆರ್. ಶ್ರೀನಿವಾಸಮೂರ್ತಿಗಳು ಈ ಕಾದಂಬರಿಯನ್ನು ಬರೆದು ಕನ್ನಡಸಾಹಿತ್ಯಕ್ಕೂ ಶಿಕ್ಷಣಪ್ರಪಂಚಕ್ಕೂ ವಿಶೇಷ ಸಹಾಯ ಮಾಡಿದ್ದಾರೆ. ಅವರಿಂದ ಇಂತಹ ಇನ್ನೂ ಅನೇಕ ಗ್ರಂಥಗಳು ಹೊರಬೀಳಲೆಂದು ಹಾರೈಸುತ್ತೇವೆ.

ರೈತನ ಸಮಾಜ—ಲೇಖಕರು ಮತ್ತು ಪ್ರಕಾಶಕರು: ಡಿ. ಕೃಷ್ಣಯ್ಯಂಗಾರ್, ಎಂ.ಎ.; ಬೆಲೆ, ರೂ. ೧-೧೨-೦.

ಇದು ಗ್ರಂಥಕರ್ತರಿಂದ ಈಗಾಗಲೇ ಪ್ರಕಟವಾಗಿರುವ 'ರೈತನ ಪ್ರಪಂಚ' 'ರೈತನ ಏಳಿಗೆ' 'ರೈತನ ಬಾಳು' ಎಂಬ ಗ್ರಂಥಮಾಲೆಯ ಕೊನೆಯ ಗ್ರಂಥ. ಅವುಗಳ ಅನುಬಂಧವಿದ್ದಂತೆಯೇ ಇದೆ. ಮೊದಲನೆಯ ಮೂರು ಗ್ರಂಥಗಳು ರೈತನ ಆರ್ಥಿಕ ಪುನರುದ್ಧಾರಕ್ಕೆ ಸಂಬಂಧಪಟ್ಟವು. ಪ್ರಸಕ್ತ ಗ್ರಂಥವು ಸಾಮಾಜಿಕ ಪುನರುದ್ಧಾರದ ವಿಷಯವಾದುದು. ಇದರಲ್ಲಿ ರೈತನೆಂಬ ಪದದ ವ್ಯಾಪ್ತಿ ಬಹಳ ವಿಸ್ತಾರವಾಗಿದೆ. ಭರತಖಂಡದ ಹಳ್ಳಿಯಲ್ಲಿ ವಾಸಮಾಡುವವರೆಲ್ಲರೂ ರೈತರೆಂದು ಭಾವಿಸಿರುವುದರಿಂದ ಇದರಲ್ಲಿ ಪ್ರಸ್ತಾಪಿಸಿರುವುದು ಅಖಂಡ ಭಾರತದ ಸಾಮಾಜಿಕ ಪುನರುದ್ಧಾರದ ವಿಷಯ. ಮಾನವಶಾಸ್ತ್ರ, ಮಾನವನ ಉದಯ, ಸಮಾಜ, ಸಮಾಜ ರಚನೆ, ದೇವರು ಧರ್ಮ, ಮನೆ—ಪ್ರೇಮ,—ಸಂಸಾರ, ಸಂಸ್ಥೆ, ಶಿಕ್ಷಣ, ಸಂಸ್ಕೃತಿ, ಸ್ತ್ರೀಯರು, ಗಾಂಧೀಯುಗ, ರಾಷ್ಟ್ರೀಯಪುನರುಜ್ಜೀವನ, ಎಂಬ ಹನ್ನೆರಡು ಪ್ರಕರಣದಲ್ಲಿ ಗ್ರಂಥಕರ್ತರು ಭಾರತೀಯ ಸಂಸ್ಕೃತಿಯ ಮೂಲ, ಬೆಳವಣಿಗೆ, ಸದ್ಯಸ್ಥಿತಿ, ಪುನರುಜ್ಜೀವನದ ಸ್ವರೂಪ ಮೊದಲಾದುವನ್ನು ಕೂಲಂಕಷವಾಗಿ ವಿಚಾರಮಾಡಿದ್ದಾರೆ. ಪ್ರಾರಂಭದಲ್ಲಿ ಪೀಠಿಕೆಯೂ ಗ್ರಂಥಾಂತ್ಯದಲ್ಲಿ ಟಿಪ್ಪಣಿಯೂ ಇವೆ. ಭಾರತ ಕೇಂದ್ರಸರ್ಕಾರದ ವಾರ್ತಾಸಚಿವರಾದ ಶ್ರೀ ರಾಮಚಂದ್ರ ರಂಗನಾಥ ದಿವಾಕರರವರು ಇದಕ್ಕೆ ಮುನ್ನುಡಿಯನ್ನು ಬರೆಯುತ್ತಾ ಗ್ರಂಥದ ವಿಷಯವಾಗಿ ಹೀಗೆಂದಿರುವರು. "ಶ್ರೀಮಾನ್ ಡಿ. ಕೃಷ್ಣಯ್ಯಂಗಾರ್ಯರು ಒಳ್ಳೆ ನುರಿತ ಲೇಖಕರು, ಕನ್ನಡಿಗರಿಗೆ ಚಿರಪರಿಚಿತರು. . . ಅವರು ಬರೆದ ಪುಸ್ತಕಗಳು ಈಗಾಗಲೇ ಪ್ರಸಿದ್ಧವಾಗಿ ಲೋಕಪ್ರಿಯವಾಗಿವೆ. ಅವುಗಳಲ್ಲಿ ಅವರ ಸಹಾನುಭೂತಿ, ಅವಲೋಕನ ಶಕ್ತಿ, ಸುಲಭಶೈಲಿ ಇವು ಸ್ಪಷ್ಟವಾಗಿ ವ್ಯಕ್ತವಾಗಿವೆ. . . . ಇದರಲ್ಲಿಯೂ ನಾವು ಈ ಎಲ್ಲಗುಣಗಳನ್ನೂ ಕಾಣುವೆವು." ಗ್ರಂಥ ಪರಿಚಯಕ್ಕೆ ಇದಕ್ಕಿಂತ ಹೆಚ್ಚಿನ ವಿಮರ್ಶೆ ಅನವಶ್ಯಕ. ಶ್ರೀಮಾನ್ ಕೃಷ್ಣಯ್ಯಂಗಾರ್ಯರಿಂದ ಇಂತಹ ಅನೇಕ ಗ್ರಂಥಗಳು ಪ್ರಸಿದ್ಧವಾಗಿ ಸಂಸ್ಕೃತಿಯ ಪುನರುಜ್ಜೀವನಕ್ಕೆ ನೆರವಾಗಲಿ ಎಂದು ಹಾರೈಸುತ್ತೇವೆ.

ಯಾಮುನಾಚಾರ್ಯವಿರಚಿತಂ **ಸ್ತೋತ್ರರತ್ನಂ** ಮತ್ತು **ಚತುಶ್ಲೋಕಿ**—ಕನ್ನಡ ಪದ್ಯಾನುವಾದಕರು: ಶ್ರೀ ಹೆಮ್ಮಿಗೆ ದೇಶಿಕಾಚಾರ್ಯರು. ಚತುಶ್ಲೋಕಿ ಗದ್ಯಾನುವಾದಕರು: ವಿದ್ವಾನ್ ಚೆನ್ನಪಟ್ಟಣಂ ಶಿಲ್ವಪಿಳ್ಳೈಶರ್ಮ; ಮುನ್ನುಡಿಕಾರರು ಮತ್ತು ಪ್ರಕಾಶಕರು: ಶ್ರೀ ಎಸ್. ಎಸ್. ರಾಘವಾಚಾರ್ಯರು.

ಶ್ರೀ ಯಾಮುನಾಚಾರ್ಯರು ದಕ್ಷಿಣ ಭಾರತದಲ್ಲಿ ಸುಮಾರು ೧೦—೧೧ ನೆಯ ಶತಮಾನದಲ್ಲಿ ಮೆರೆದ ದಿವ್ಯಜ್ಯೋತಿಗಳಲ್ಲೊಬ್ಬರು. ನಾಥಮುನಿಗಳ ಪೌತ್ರರು. ನಾಥಮುನಿಗಳ ಶಿಷ್ಯಪರಂಪರೆಗೆ ಸೇರಿದ ಶ್ರೀರಾಮಮಿಶ್ರರಿಂದ ನಾಥಮುನಿಗಳ ಕುಲಧನವಾದ ಶ್ರೀರಂಗನಾಥಸ್ವಾಮಿಯನ್ನು ಸ್ವೀಕರಿಸಿ ಆತ್ಮಸಿದ್ಧಿಯನ್ನು ಪಡೆದು, ಭಕ್ತಿಜೀವನವನ್ನು ಪ್ರವೇಶಿಸಿ ನಾಥಮುನಿಗಳ ಸಂಪ್ರದಾಯಕ್ಕೆ ಕುಲಪತಿಗಳಾದರು. ನಾಥಮುನಿಗಳ ಸತ್ಸಂಪ್ರದಾಯವು ವೃದ್ಧಿಹೊಂದಿ ಇವರ ಶಿಷ್ಯರಾದ ಶ್ರೀ ರಾಮಾನುಜಾಚಾರ್ಯರಿಂದ ಸರ್ವತೋಮುಖವಾದ ವ್ಯಾಪ್ತಿಯನ್ನು ಹೊಂದಿತು.

ಯಾಮುನಾಚಾರ್ಯರು 'ಸಿದ್ಧಿತ್ರಯ' 'ಆಗಮಪ್ರಾಮಾಣ್ಯ', 'ಗೀತಾರ್ಥಸಂಗ್ರಹ', 'ಚತುಶ್ಲೋಕೀ' ಮತ್ತು 'ಸ್ತೋತ್ರರತ್ನ' ಎಂಬ ಗ್ರಂಥಗಳನ್ನು ಅನುಗ್ರಹಿಸಿದ್ದಾರೆ. ಇವುಗಳಲ್ಲಿ ಸ್ತೋತ್ರರತ್ನವು ಶ್ರೀ ಕುಲಶೇಖರಾಳ್ವಾರವರ 'ಮುಕುಂದಮಾಲೆ'ಯಂತೆಯೇ ಭಕ್ತಿಸಾಹಿತ್ಯದಲ್ಲಿ ಬಹು ಉತ್ತಮಸ್ಥಾನವನ್ನು ಪಡೆದಿದೆ. ಇದರಲ್ಲಿ ಅನಂತಕಲ್ಯಾಣಗುಣಪರಿಪೂರ್ಣನಾದ ಭಗವಂತನ ದಿವ್ಯಮಂಗಳವಿಗ್ರಹಾನುಭವ, ಪರತತ್ವಚಿಂತನೆ ಮತ್ತು ಭಕ್ತನ ಹೃದಯ ನಿವೇದನೆ ಇವು ಬಹು ಸಮಂಜಸವಾಗಿ ಹೊಂದಿಕೊಂಡಿವೆ. ಇದರಲ್ಲಿ ೬೫ ಶ್ಲೋಕಗಳಿವೆ. ಒಂದೊಂದೂ ಒಂದು ಭಕ್ತಿಸೋಪಾನದಂತಿದ್ದು ಕಾವ್ಯದ ಸೌಂದರ್ಯದರ್ಶನದ ಯಥಾರ್ಥತೆ, ಪೂಜೆಯ ಪಾವನತ್ವ ಮತ್ತು ಉಪಾಸನೆಯ ಅನುಭವಾವಿರ್ಭಾವ ಮೊದಲಾದುವುಗಳಿಂದ ಪೂರ್ಣವಾಗಿವೆ. ಪರಮ ಪಂಡಿತರುಗಳಾದ ಶ್ರೀಮನ್ಮಧ್ವಾಚಾರ್ಯರು ಅಪ್ಪಯ್ಯದೀಕ್ಷಿತರು, ವೇದಾಂತಾಚಾರ್ಯರು, ಜಗನ್ನಾಥ ಜೀವಗೋಸ್ವಾಮಿ ಮೊದಲಾದ ಪಂಡಿತವರ್ಯರು, ಸ್ತೋತ್ರರತ್ನದ ಮಾಧುರ್ಯಕ್ಕೆ ಮಾರುಹೋಗಿದ್ದಾರೆ.

ಚತುಶ್ಲೋಕಿಯು ಲಕ್ಷ್ಮಿಯ ವಿಷಯಕವಾದ ನಾಲ್ಕು ಸುಂದರ ಶ್ಲೋಕಗಳು. ಮುಂದಿನ ಅನೇಕ ಸ್ತೋತ್ರಗಳಿಗೆ ಇದು ಮಾರ್ಗದರ್ಶಕವಾಗಿದೆ.

ಇಂತಹ ಉತ್ತಮ ಸ್ತೋತ್ರಗಳನ್ನು ಮುನ್ನುಡಿ, ಪದ್ಯಗದ್ಯಾನುವಾದಗಳೊಡನೆ ಪ್ರಸಿದ್ಧಿಪಡಿಸಿದ ಪ್ರಕಾಶಕರು ಧನ್ಯರು. ಮುನ್ನುಡಿ ವಿದ್ವತ್ಪೂರ್ಣವಾಗಿದೆ.

ಸ್ತೋತ್ರರತ್ನಕ್ಕೂ ಗದ್ಯಾನುವಾದವನ್ನೇ ಕೊಟ್ಟಿದ್ದರೆ ಹೆಚ್ಚು ಪ್ರಯೋಜನವಾಗುತ್ತಿತ್ತೆಂಬುದು ನಮ್ಮ ಅಭಿಪ್ರಾಯ. ಪದ್ಯಗಳು ಛಂದೋಬದ್ಧವಾಗಿ ಪಾಂಡಿತ್ಯದಿಂದ ತುಂಬಿವೆ. ಮೂಲದಲ್ಲಿರುವ ಭಾವನಾತರಂಗದ ಪ್ರತಿಚ್ಛಾಯೆಯನ್ನು ಪ್ರದರ್ಶಿಸಲು ಅನುವಾದಕರು ತೋರ್ಪಡಿಸಿರುವ ಶ್ರದ್ಧೆ, ಆಸಕ್ತಿ, ಪಾಂಡಿತ್ಯ ಸ್ತುತ್ಯ. ಚತುಶ್ಲೋಕಿಯ ಗದ್ಯಪದ್ಯಾನುವಾದಗಳು ಸರಳವಾಗಿವೆ. ಭಾವಪೂರ್ಣವಾಗಿವೆ. ಮೂಲದ ಪರಿಚಯಕ್ಕೆ ಸಹಾಯಕವಾಗಿವೆ.

ಮುದ್ರಣದ ವಿಷಯದಲ್ಲಿ ಅನಿವಾರ್ಯವಾಗಿ ಒಂದು ಮಾತನ್ನಾಡಬೇಕಾಗಿದೆ. ಸಂಸ್ಕೃತ ಶ್ಲೋಕಗಳಲ್ಲಿಯೂ ಕನ್ನಡ ಪದ್ಯಗದ್ಯಗಳಲ್ಲಿಯೂ ಪ್ರಕಾಶಕರು ಪದ ವಿಭಾಗದ ವಿಷಯದಲ್ಲಿ ಮುಂದಿನ ಮುದ್ರಣದಲ್ಲಿಯಾದರೂ ಹೆಚ್ಚು ಆಸಕ್ತಿಯನ್ನು ವಹಿಸಬೇಕು.

ಈ ಮಾಲೆಯು ವಿಶೇಷವಾಗಿ ಬೆಳೆದು ಪ್ರಾಚೀನ ಜ್ಞಾನಭಂಡಾರವು ಸಾರ್ವತ್ರಿಕವಾಗ ಉಪಯೋಗವಾಗಲೆಂದು ಹಾರೈಸುತ್ತೇವೆ.

ಸ್ವಚ್ಛಂದಂ.

ವಸ್ತುಕೋಶ

ಶಿಕ್ಷಣಕ್ರಮದಲ್ಲಿನ ಭಾಷಾಸಮಸ್ಯೆಗೆ ಪ್ರೊ|| ಕೆ. ವಿ. ಪುಟ್ಟಪ್ಪನವರ ಸಲಹೆಗಳು

ಭಾರತದ ಅತ್ಯಂತ ಜಟಿಲಸಮಸ್ಯೆಗಳಲ್ಲಿ ಒಂದಾದ ಭಾಷಾಸಮಸ್ಯೆ ಇತ್ತೀಚೆಗೆ ಅನೇಕರ ಗಮನವನ್ನು ಸೆಳೆದಿದೆ. ಕೇಂದ್ರಸರ್ಕಾರ ಮತ್ತು ಪ್ರಾಂತ್ಯ ಸರ್ಕಾರಗಳ ಆಡಳಿತಭಾಷೆ ಒಂದೇ ಆಗಿರಬೇಕೆಂದು ಕೆಲವರು ಸೂಚಿಸಿದ್ದಾರೆ. ಈ ಭಾಷೆ ಹಿಂದಿ ಆಗಬೇಕೆಂದು ಬಲವಾದ ಪ್ರಯತ್ನಗಳಾಗುತ್ತಿವೆ. ಇದೇರೀತಿ ಶಾಲಾ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯದ ಅಂತಸ್ಥಿನಲ್ಲಿ ಯಾವಯಾವ ಭಾಷೆಗಳನ್ನು ಕಲಿಸಬೇಕು ಎಂಬುದು ವಿವಾದಸ್ಪದವಾಗಿದೆ. ಈ ಬಗ್ಗೆ ಭಾರತ ರಾಜ್ಯಾಂಗ ಕೆಲವು ನಿರ್ಧಾರಗಳನ್ನು ಮಾಡಿದೆ. ಶಿಕ್ಷಣ ಮತ್ತು ವಿಶ್ವವಿದ್ಯಾನಿಲಯಗಳ ಭಾಷಾಸಮಸ್ಯೆಯನ್ನು ಪರಿಹರಿಸಲು ಕೇಂದ್ರಸರ್ಕಾರವು ಸರ್ ರಾಧಾಕೃಷ್ಣನ್ ಸಮಿತಿಯನ್ನು ನಿಯಮಿಸಿ ಭಾರತಾದ್ಯಂತ ಆ ಸಮಿತಿಯ ವರದಿಯಮೇಲಿನ ಪ್ರತಿಕ್ರಿಯೆಯನ್ನು ಅಭ್ಯಾಸಮಾಡುತ್ತಿದೆ. ಮೈಸೂರಿನಲ್ಲಿ ಕೂಡ ವಿಶ್ವವಿದ್ಯಾನಿಲಯದ ಪ್ರೊ ಛಾನ್ಸಲರ್ ಡಾ|| ರೆಡ್ಡಿಯವರು ಒಂದು ವರದಿಯನ್ನು ಹೊರಗೆಡವಿದ್ದಾರೆ. ಈ ಸಮಯದಲ್ಲಿ ಶಿಕ್ಷಣಕ್ರಮದಲ್ಲಿನ ಭಾಷಾಸ್ಥಾನಗಳನ್ನು ಕುರಿತು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರೊಫೆಸರರೂ ಮತ್ತು ಕನ್ನಡ ಸುಪ್ರಸಿದ್ಧ ಕವಿಗಳೂ ಆದ ಶ್ರೀ ಕೆ. ವಿ. ಪುಟ್ಟಪ್ಪನವರು ಮತ್ತು ಮಹಾರಾಜಾ ಕಾಲೇಜಿನ ರಾಜಕೀಯಶಾಸ್ತ್ರಬೋಧಕರಾದ ಶ್ರೀ ಗ. ಸ. ಹಾಲಪ್ಪನವರೂ ಕೆಲವು ಸಮಯೋಚಿತವಾದ ಮತ್ತು ಅಂಗೀಕಾರಾರ್ಹವಾದ ಸಲಹೆಗಳನ್ನು ಒಂದು ಕಿರಿಹೊತ್ತಿಗೆಯಲ್ಲಿ ಪ್ರಕಟಿಸಿದ್ದಾರೆ. ಅವರ ಸಲಹೆಯ ಮುಖ್ಯಾಂಶಗಳಿವು.

ಪ್ರಾಥಮಿಕ ವಿದ್ಯಾಭ್ಯಾಸ

ಮಾತೃಭಾಷೆಯಮೂಲಕವೇ ಶಿಕ್ಷಣವಾಗಬೇಕು ಎಂಬ ಸರ್ವಾಂಗೀಕಾರವಾದ ತತ್ವವನ್ನು ಒಪ್ಪಿಕೊಳ್ಳಲಾಗಿದೆ. ಆದರೆ, ಆಡಳಿತ ಸಂಕೀರ್ಣತೆ ಮತ್ತು ಹಣಕಾಸಿನ ಅಂಶವನ್ನು ಗಮನಿಸಿ ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ತಾ|| ೨೨-೮-೪೯ರಲ್ಲಿ ನಿರ್ಣಯಿಸಿದಂತೆ ಕ್ರಮ ಕೈಕೊಳ್ಳುವುದು ಸೂಕ್ತವೆಂದು ತಿಳಿಸಲಾಗಿದೆ. ಈ ದೃಷ್ಟಿಯಿಂದ ಯಾವತೊಡಕೂ ಇಲ್ಲದಂತೆ ಮೈಸೂರಿನಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳನ್ನು ಮಾತ್ರ ಇಟ್ಟುಕೊಂಡರೆ ವಿಹಿತ.

ಪ್ರೌಢಶಿಕ್ಷಣ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಮೈಸೂರು ಇತ್ತೀಚಿನ ಮದರಾಸ್ ಸರ್ಕಾರದ ಭಾಷಾ ಧೋರಣೆಯನ್ನು ವಹಿಸುವುದು ಸರ್ವಮಾನ್ಯ ಪರಿಹಾರ. ಇದರಂತೆ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಬೋಧಕ ಭಾಷೆ ಕನ್ನಡಮಾತ್ರ. ಇಂಗ್ಲೀಷನ್ನು ಒತ್ತಾಯವಾಗಿ ಕಲಿಸಬೇಕು. ಕನ್ನಡವನ್ನು ಬೋಧಕ ಭಾಷೆಯಾಗಿ ಮಾತ್ರವಲ್ಲದೆ ಪ್ರಥಮ ಭಾಷೆಯಾಗಿ ಕಲಿಸಬೇಕು. ಇಲ್ಲಿ ಎರಡುಭಾಗಗಳನ್ನಾಗಿ ಮಾಡಿ ಮೊದಲನೇ ಭಾಗವನ್ನು ಒತ್ತಾಯಮಾಡಬೇಕು. ದ್ವಿತೀಯಭಾಗದಲ್ಲಿ ಕನ್ನಡ ತೆಗೆದುಕೊಳ್ಳದವರು ಸಂಸ್ಕೃತ ತಮಿಳು ತೆಲುಗು ಉರ್ದು ಅಥವಾ ಯಾವುದೇ ಭಾರತೀಯ ಭಾಷೆಯನ್ನು ಕಲಿಯಲು ಅವಕಾಶ ವಿರಬೇಕು.

ಮೂರನೆಯದಾಗಿ ಹಿಂದಿ ಅಥವಾ ವೃತ್ತಿಶಿಕ್ಷಣ (Craft or Activity) ಪಡೆಯಲು ಅವಕಾಶವಿರಬೇಕು. ಈಪ್ರಕಾರ ದೇಶಭಾಷೆಗೆ ಪ್ರಥಮಸ್ಥಾನ ಸಿಕ್ಕು ವುದು. ಇಂಗ್ಲೀಷನ್ನೂ ಇಟ್ಟುಕೊಳ್ಳಲಾಗುವುದು. ಒಟ್ಟು ನಾಲ್ಕು ಭಾಷೆಗಳನ್ನು ಕಲಿಯಲೇಬೇಕೆಂಬ ಒತ್ತಾಯವಿಲ್ಲ. ಆದರೆ ಇಷ್ಟವುಳ್ಳವರು ಹಿಂದಿಯನ್ನು ಅಥವಾ ಇತರ ಭಾಷೆಗಳನ್ನು ಆರಿಸಿಕೊಳ್ಳಲು ಅವಕಾಶವಿದೆ.

ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣಮಾಧ್ಯಮವನ್ನು ಕುರಿತು ಶ್ರೀಯುತರು ಅತ್ಯಂತ ಸಮಂಜಸವಾದ ಮತ್ತು ದೂರದೃಷ್ಟಿಯ ಅಮೂಲ್ಯ ಯೋಜನೆಗಳನ್ನು ಸೂಚಿಸಿರುತ್ತಾರೆ. ಈಕೂಡಲೇ ಅತ್ಯವಸರದಲ್ಲಿ ಕಾಲೇಜುಗಳಲ್ಲಿ ಕನ್ನಡವನ್ನು ಶಿಕ್ಷಣಮಾಧ್ಯಮವನ್ನಾಗಿ ಮಾಡಿ ಎಂದು ಈ ಯೋಜನೆ ಒತ್ತಾಯಪಡಿಸುವುದಿಲ್ಲ, ಅಥವಾ ಅನಿರ್ದಿಷ್ಟ ವರ್ಷಗಳವರೆಗೆ ಈಗಿರುವ "ಯಥಾಸ್ಥಿತಿ" ಯನ್ನೇ ಮುಂದು ವರಿಸಿಕೊಂಡು ಹೋಗಬೇಕೆಂಬ ತಟಸ್ಥಧೋರಣೆಯನ್ನೇ ಮಾನ್ಯಮಾಡುವುದಿಲ್ಲ. ೧೯೬೩ ನೇ ವರ್ಷದ ಹೊತ್ತಿಗೆ ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಕಲಾ ಮತ್ತು ವಿಜ್ಞಾನ ಪರೀಕ್ಷೆಗಳೂ ಕನ್ನಡದ ಮೂಲಕ ಪೂರ್ತಿಯಾಗಿ ನಡೆಯುವಂತೆ ಏರ್ಪಡಿಸುವ ಈ ಯೋಜನೆಯು ಅತ್ಯಂತ ಸುವರ್ಣಮಾಧ್ಯಮವಾಗಿದೆ. ಈ ಕೆಳಗೆ ಕಂಡಂತೆ ಈ ಯೋಜನೆಗಳನ್ನು ಸರ್ಕಾರವು ಕಾರ್ಯಗತ ಮಾಡಬೇಕೆಂದು ಸೂಚಿ ಸಲಾಗಿದೆ.

(೧) ಕ್ರಮಕ್ರಮವಾಗಿ ಇವರ ಯೋಜನೆಯಂತೆ ೧೯೫೩ ಮತ್ತು ೫೪ರಲ್ಲಿ ಮೈಸೂರಿನಲ್ಲಿರುವ ಉರ್ದು, ತಮಿಳು, ಮತ್ತು ತೆಲುಗು ಮಾಧ್ಯಮಿಕ ಶಾಲೆಗಳನ್ನು ರದ್ದುಗೊಳಿಸುವುದು.

(೨) ೧೯೫೭–೫೮ರಿಂದ ಹೈಸ್ಕೂಲುಗಳಲ್ಲಿ ಕನ್ನಡ ಮಾತ್ರ ಬೋಧಕಭಾಷೆಯಾಗಿರುವುದು.

(೩) ಎಂ.ಬಿ., ಬಿ.ಎಸ್. ನಂತಹ ಪಾರಿಭಾಷಿಕ ಶಿಕ್ಷಣವನ್ನುಳಿದು ಇತರ ಎಲ್ಲಾ ವಿಷಯಗಳನ್ನೂ ಕನ್ನಡದಲ್ಲಿ ಕಲಿಸುವ ವ್ಯವಸ್ಥೆಯಾಗಬೇಕೆಂಬ ತತ್ವವನ್ನು ಈ ಯೋಜನೆಯು ಎತ್ತಿಹಿಡಿಯುತ್ತದೆ. ಆದಷ್ಟು ಬೇಗ ಈ ಯೋಜನೆಯನ್ನು ಜಾರಿಗೆ ತರುವ ದೃಷ್ಟಿಯಿಂದ ನಡುವೆ ದೊರಕುವ ಅವಧಿಯಲ್ಲಿ ಪಠ್ಯಪುಸ್ತಕಗಳನ್ನು ಪ್ರಕಟಿಸಲು ಸರ್ವಪ್ರಯತ್ನ ಮಾಡಬೇಕು. ಮೈಸೂರು ವಿಶ್ವವಿದ್ಯಾನಿಲಯ ಭಾಷಾಂತರಶಾಖೆಯನ್ನು ತೆರೆಯಬೇಕು. ಕರ್ಣಾಟಕ ವಿಶ್ವವಿದ್ಯಾನಿಲಯದ ಸಹಕಾರ ಪಡೆದು ಪಂಡಿತರಿಂದ ಅಧಿಕೃತ ಗ್ರಂಥಗಳನ್ನು ಪ್ರಕಟಿಸಿ ಗ್ರಂಥಸಿದ್ಧತೆ ಮಾಡಿಕೊಳ್ಳಬೇಕು. ಈ ಕಾರ್ಯಕ್ಕೆ ಕೇಂದ್ರಸರ್ಕಾರದ ದ್ರವ್ಯಸಹಾಯವನ್ನು ಸುಲಭವಾಗಿ ಪಡೆಯಬಹುದು.

ಈ ಯೋಜನೆ ಕಾರ್ಯಗತವಾದರೆ ಮೈಸೂರಿನ ಪ್ರತಿ ವಿದ್ಯಾರ್ಥಿಯೂ ದೇಶಭಾಷೆಯ ಪೂರ್ಣಪರಿಜ್ಞಾನ ಪಡೆದು ಆಡಳಿತ ಮತ್ತು ಜನಜೀವನದಲ್ಲಿ ಯೋಗ್ಯಪಾತ್ರವಹಿಸಲು ಸಹಾಯಕವಾಗುವುದಲ್ಲದೆ, ಮೈಸೂರಿನ ತರುಣರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಜೀವನದಲ್ಲಿ ಸಹ ಕೀರ್ತಿಗಳಿಸಬಲ್ಲರು. ಅಲ್ಲದೆ ಆತ್ಮರಹಿತವಾದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಂದು ವ್ಯಕ್ತಿತ್ವ ಮತ್ತು ಶೋಭೆ ಒದಗಿ ಮೈಸೂರಿನ ಪ್ರಯೋಗ ಇತರರಿಗೆ ಮೇಲ್ಪಂಕ್ತಿಯಾಗುವುದರಲ್ಲಿ ಸಂದೇಹವಿಲ್ಲ.

ಮೈಸೂರು ಸರ್ಕಾರವು ಕ್ಷಿಪ್ರದಲ್ಲಿಯೇ ಭಾಷಾವಿಷಯದಲ್ಲಿ ಒಂದು ನಿರ್ಣಯವನ್ನು ಕೈಗೊಳ್ಳಲಿದೆಯೆಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ಮೇಲ್ಕಂಡ ಸೂಚನೆಗಳನ್ನು ಸರ್ಕಾರವು ಪೂರ್ಣವಾಗಿ ಗಮನಿಸಿ ಸೂಕ್ತ ನಿರ್ಧಾರ ಕೈಕೊಳ್ಳಬಹುದಾಗಿದೆ. ಈ ಅಮೂಲ್ಯ ಸಲಹೆಗಳನ್ನು ಸಮಯೋಚಿತವಾಗಿ ಮಾಡಿರುವ ಶ್ರೀಯುತರು ಅಭಿನಂದನಾರ್ಹರು.

ಶಿಕ್ಷಣ ಮಾಧ್ಯಮದ ಸಮಸ್ಯೆಗೆ ಸೂಚಿಸಿರುವ ಈ ಯೋಜನೆಯನ್ನು ಭಾರತದ ಎಲ್ಲಾ ಇತರ ವಿಶ್ವವಿದ್ಯಾನಿಲಯಗಳೂ ಅಂಗೀಕರಿಸಬಹುದಾಗಿದೆ. ಅದರಲ್ಲಿಯೂ ಬಹುಕಾಲದಿಂದ ಬೆಳೆದುಬಂದಿರುವ ದೇಶಭಾಷಾಪ್ರದೇಶಗಳ ವಿಶ್ವವಿದ್ಯಾನಿಲಯಗಳು ಈ ಯೋಜನೆಯನ್ನು ಸುಲಭವಾಗಿ ಒಪ್ಪಿ ಕಾರ್ಯಗತ ಮಾಡಬಹುದು. ಅನೇಕ ದೇಶಭಾಷೆಗಳುಳ್ಳ ಭಾರತ ಇಂದಿನ ಮನ್ವಂತರದಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವುದು ವಿಹಿತಮಾರ್ಗವಾಗಿದೆ.

ಈ ಸಮಯದಲ್ಲಿ ಶ್ರೀಯುತರ ಈ ಅಮೂಲ್ಯ ಯೋಜನೆಗಳ ಕಿರಿಹೊತ್ತಿಗೆಯನ್ನು ಪ್ರಕಟಿಸಿ ಉಪಕಾರವೆಸಗಿದ ವಿಶ್ವವಿದ್ಯಾನಿಲಯ ಕರ್ಣಾಟಕ ಸಂಘವನ್ನೂ ಅಭಿನಂದಿಸಬೇಕಾಗಿದೆ. ಹೆಚ್. ಗಂಗಾಧರನ್

***

ಕಂಬನಿ

ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಸಂಸ್ಕೃತಪ್ರಾಧ್ಯಾಪಕರಾಗಿ ವಿಶ್ರಾಂತಿಪಡೆದಿದ್ದ ಶ್ರೀಮಾನ್ ಪ್ರೊ. ಎಂ. ಹಿರಿಯಣ್ಣನವರು ತಾ. ೧೯-೯-೫೦ ನೆಯ ದಿನ ದಿವಂಗತರಾದುದು ವಿದ್ವತ್ಪ್ರಪಂಚಕ್ಕೆ ವಿಶೇಷ ದುಃಖವನ್ನುಂಟುಮಾಡಿದೆ. ದಿವಂಗತರಿಗೆ ಅವಸಾನಕಾಲದಲ್ಲಿ ೭೯ ವರ್ಷ. ಶ್ರೀಮಾನರು ತಮ್ಮ ೨೦ ನೆಯ ವರ್ಷದಲ್ಲಿ ಮೈಸೂರು ಪ್ರಾಚ್ಯಕೋಶಾಗಾರದಲ್ಲಿ ಕೆಲಸಕ್ಕೆ ಸೇರಿ ಮುಂದೆ ಸರ್ಕಾರದ ವಿದ್ಯಾಭ್ಯಾಸದ ಇಲಾಖೆ, ಉಪಾಧ್ಯಾಯರ ಶಿಕ್ಷಣ ಶಾಲೆ, ಮಹಾರಾಜರವರ ಕಾಲೇಜು ಮೊದಲಾದೆಡೆಗಳಲ್ಲಿ ಕೆಲಸಮಾಡಿ ೧೯೧೭ ರಲ್ಲಿ ಸಂಸ್ಕೃತದ ಪ್ರಾಧ್ಯಾಪಕರಾದರು. ಶ್ರೀಮಾನ್ ಹಿರಿಯಣ್ಣನವರು ಬಹು ಉಪಶಾಂತರು, ಸತ್ಯಸಂಧರು. ಆದರ್ಶ ಆಚಾರ್ಯರು, ವಿದ್ವನ್ಮಣಿಗಳು, ಬಹು ನಿಷ್ಕೃಷ್ಟವಾದ ನಡತೆಯುಳ್ಳವರು. ತಮ್ಮ ವಿದ್ಯಾರ್ಥಿಗಳ ಗೌರವಾಭಿಮಾನಗಳಿಗೆ ಪಾತ್ರರಾದವರು. ನಿರಾಡಂಬರವಾಗಿ ಅಮೌಲ್ಯವಾದ ಸಾಹಿತ್ಯಸೇವೆಯನ್ನು ನಡೆಸಿದವರು. ಈಶಾವಾಸ್ಯ, ಕಠ, ಬೃಹದಾರಣ್ಯಕೋಪನಿಷತ್ತುಗಳನ್ನು ಶಂಕರಭಾಷ್ಯದೊಡನೆ ಇಂಗ್ಲೀಷಿಗೆ ಭಾಷಾಂತರಮಾಡಿದ್ದಾರೆ. ವೇದಾಂತಸಾರವೂ ಅವರಿಂದ ಭಾಷಾಂತರಿತವಾಗಿದೆ. ನೈಷ್ಕರ್ಮ್ಯಸಿದ್ಧಿ, ಇಷ್ಟಸಿದ್ಧಿ ಎಂಬ ಗ್ರಂಥಗಳನ್ನು ಶಾಸ್ತ್ರೀಯವಾಗಿ ಪರಿಶೋಧಿಸಿ ಪ್ರಕಾಶಪಡಿಸಿದ್ದಾರೆ, 'ಔಟ್‌ಲೈನ್ಸ್ ಆಫ್ ಇಂಡಿಯನ್ ಫಿಲಾಸಫಿ' (*Outlines of Indian Philosophy*) 'ಎಸನ್ಷಿಯಲ್ಸ್ ಆಫ್ ಇಂಡಿಯನ್ ಫಿಲಾಸಫಿ' *Essentials of Indian Philosophy* ಎಂಬ ಸ್ವತಂತ್ರ ಗ್ರಂಥಗಳನ್ನು ರಚಿಸಿದ್ದಾರೆ. ೧೯೩೯ ರಲ್ಲಿ ಹೈದರಾಬಾದ್ ನಗರದಲ್ಲಿ ನಡೆದ ಅಖಿಲಭಾರತ ತತ್ತ್ವಶಾಸ್ತ್ರವೇತ್ತರ ಸಮ್ಮೇಳನದಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದರು. ೧೯೫೧ ನೆಯ ವರ್ಷದ ಅಖಿಲಭಾರತ ಪ್ರಾಚ್ಯ ಸಮ್ಮೇಳನದಲ್ಲಿ ಅಧ್ಯಕ್ಷತೆಯನ್ನು ವಹಿಸಬೇಕೆಂಬ ಪ್ರಾರ್ಥನೆಯೂ ಬಂದಿತ್ತು. ಅನಾರೋಗ್ಯದ ನಿಮಿತ್ತ ನಿರಾಕರಿಸಬೇಕಾಯಿತು. ಇಂತಹ ಪಂಡಿತವರ್ಯರ ನಿಧನದಿಂದ ಸಂಸ್ಕೃತ ಸಾಹಿತ್ಯಪ್ರಪಂಚಕ್ಕೆ ವಿಶೇಷ ನಷ್ಟವುಂಟಾಗಿದೆ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲಿ.

ಪುರುಷಾರ್ಥಗಳ (Values) ವಿಷಯಕರವಾದ ಮತ್ತೊಂದು ಸ್ವತಂತ್ರ ಗ್ರಂಥವೂ ಅವರಿಂದ ರಚಿತವಾಗಿದೆ. ಅದೂ ಇಷ್ಟರಲ್ಲಿಯೇ ಪ್ರಕಾಶವಾಗಲಿದೆ.

ಸಾದರ ಸ್ವೀಕಾರ

೧. **ಕಳ್ಳರಕೂಟ** (ಕಥೆ)—ಬರೆದವರು : ಶ್ರೀ 'ದೇವುಡು' ಅವರು ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು-೨ ; ಕ್ರೌನ್ ಅ. ಪು. ೫೫ ; ಬೆಲೆ, ಹದಿಮೂರಾಣೆ.

೨. **ಸೋಲೋ ಗೆಲುವೋ** (ಕಥೆಗಳು)—ಬರೆದವರು : ಶ್ರೀ 'ದೇವುಡು' ಅವರು ; ಪ್ರಕಾಶಕರು : ಅನಂದ್ ಬ್ರದರ್ಸ್, ಬೆಂಗಳೂರು-೨ ; ಕ್ರೌನ್ ಅ. ಪು. ೧೦೮ ; ಬೆಲೆ, ಒಂದೂವರೆ ರೂಪಾಯಿ.

೩. **ಮದುವೆಯೋ ಮನೆಹಾಳೋ** (ನಾಟಕ)—ಬರೆದವರು : ಶ್ರೀ ಅ. ನ. ಕೃಷ್ಣರಾಯರು ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು-೨ ; ಕ್ರೌನ್ ಅ. ಪು. ೯೧ ; ಬೆಲೆ, ಒಂದೂವರೆ ರೂಪಾಯಿ.

೪. **ಅಮರ ಆಗಸ್ಟ್** (ಕಾದಂಬರಿ)—ಬರೆದವರು : ಶ್ರೀ ಅ. ನ. ಕೃಷ್ಣರಾಯರು ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು-೨ ; ಕ್ರೌನ್ ಅ. ಪು. ೧೪೧ ; ಬೆಲೆ, ಎರಡು ರೂಪಾಯಿ.

೫. **ಮುಂಜಾವಿನಿಂದ ಮುಂಜಾವು** (ಕಾದಂಬರಿ)—ಬರೆದವರು : ಶ್ರೀ ತ. ರಾ. ಸು ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು-೨ ; ಕ್ರೌನ್ ಅ. ಪು. ೨೫೭.

೬. **ಚಿರವಿರಹಿ** (ಸಾಮಾಜಿಕ ಕಾದಂಬರಿ)—ಬರೆದವರು : ಶ್ರೀ ಬೆಳ್ಳಿರಾಮಚಂದ್ರ ರಾಯರು ; ಪ್ರಕಾಶಕರು : ಲಲಿತಸಾಹಿತ್ಯಮಾಲೆ, ಧಾರವಾಡ ; ಕ್ರೌನ್ ಅ. ಪು. ೩೪೬ ; ಬೆಲೆ, ನಾಲ್ಕು ರೂಪಾಯಿ.

೭. **ಕನ್ನಡ ಕುಮಾರಸಂಭವ**—ಲೇಖಕರು : ಅಮ್ಮೆಂಬಳ ಶಂಕರನಾರಾಯಣ, ವಿದ್ವಾನ್ ; ಪ್ರಕಾಶಕರು : ಸಾಹಿತ್ಯಾಂಜಲಿ ಗ್ರಂಥಮಾಲೆ ಆನಂದಾಶ್ರಮ, ಕೋಟೆಕಾರ್, ದ.ಕ. ; ಕ್ರೌನ್ ಅ. ಪು. ೭೪ ; ಬೆಲೆ, ಒಂದು ರೂಪಾಯಿ ನಾಲ್ಕಾಣೆ.

೮. **ಪದ್ಮಪರಾಗ** (ಕಥಾಸಂಕಲನ)—ಬರೆದವರು : ಶ್ರೀ ಬಿ. ಪದ್ಮನಾಭ ಸೋಮಯಾಜಿ. ವಿದ್ವಾನ್, ಸುರತ್ಕಲ್ ; ಪ್ರಕಾಶಕರು : ಸಾಹಿತ್ಯಾಂಜಲಿ ಗ್ರಂಥಮಾಲೆ, ಆನಂದಾಶ್ರಮ, ಕೋಟೆಕಾರ್ (ದ.ಕ.) ; ಕ್ರೌನ್ ಅ. ಪು. ೧೦೨ ; ಬೆಲೆ, ಒಂದು ರೂಪಾಯಿ ಎಂಟಾಣೆ.

೯. **ಪ್ರಣಯದರ್ಶನ** (ನಾಟಕಸಂಕಲನ)—ಬರೆದವರು : ಶ್ರೀ ಅಮ್ಮೆಂಬಳ ಶಂಕರ ನಾರಾಯಣ, ವಿದ್ವಾನ್, ಮಂಗಳೂರು ; ಪ್ರಕಾಶಕರು : ಸಾಹಿತ್ಯಾಂಜಲಿ ಗ್ರಂಥಮಾಲೆ, ಆನಂದಾಶ್ರಮ, ಕೋಟೆಕಾರ್ (ದ. ಕ.) ; ಕ್ರೌನ್ ಅ. ಪು. ೮೮ ; ಬೆಲೆ, ಒಂದು ರೂಪಾಯಿ ಎಂಟಾಣೆ.

೧೦. **ಅರೆಯಾಳು**—ಕತೆಗಾರರು ಶ್ರೀ ಕುಲಕರ್ಣಿ ಬಿಂದುಮಾಧವ ; ಪ್ರಕಾಶಕರು : ಶಾಂತಿಸಾಹಿತ್ಯಮಾಲೆ, ಬಾದಾಮಿ, (ಬಿಜಾಪೂರ ಜಿಲ್ಲೆ) ; ಕ್ರಾನ್ ಅ. ಪು. ೧೨೪ ; ಬೆಲೆ, ಒಂದು ರೂಪಾಯಿ ಎಂಟಾಣೆ.

೧೧. ರೈತನ ಸಮಾಜ—ಬರೆದವರು : ಶ್ರೀ ಡಿ. ಕೃಷ್ಣ ಐಯ್ಯಂಗಾರ್, ಎಂ.ಎ. ಅವರು ; ಪ್ರಕಟನಕಾರರು : ಗ್ರಂಥಕರ್ತರು—ಟಿ. ನರಶಿಪುರ ; ಕ್ರೌನ್ ಅ. ಪು. xi+೧೭+ix ; ಬೆಲೆ, ಒಂದು ರೂಪಾಯಿ ಹನ್ನೆರಡಾಣೆ.

೧೨. ಕಾಣ್ವತ್ರಿಸಂಧ್ಯಾರ್ಥ (ಸಂಧ್ಯಾವಂದನೆಯ ಅರ್ಥವಿವರಣೆ)—ಪ್ರಕಾಶಕರು : ವಿದ್ವಾನ್ ಶ್ರೀ ಜಿ. ಎಸ್. ಆಚಾರ್ಯ ; ಕೊಂದೇವಿ "ಶ್ರೀಯನಂದಾಶ್ರಮ" ನರ್ಗರಪೇಟೆ, ಬೆಂಗಳೂರು ನಗರ ; ಕ್ರೌನ್ ಅ. ಪು. ೩೦ ; ಬೆಲೆ, ಎಂಟಾಣೆ.

೧೩. ಸರ್ವಜ್ಞಮೂರ್ತಿ (ಕವಿ-ಕಾವ್ಯವಿಮರ್ಶೆ)—ಬರೆದವರು : ಆಸ್ಥಾನವಿದ್ವಾನ್ ಪಂಡಿತರತ್ನಂ ಕೀರ್ತನಾಚಾರ್ಯ, ಶ್ರೀ ಶಿವಮೂರ್ತಿಶಾಸ್ತ್ರಿಗಳು ; ಪ್ರಕಾಶಕರು : ವಿದ್ಯಾರ್ಥಿ ಪ್ರಕಟನಮಂದಿರ, ಬಳೇಪೇಟೆ, ಬೆಂಗಳೂರು-೨ ; ಕ್ರೌನ್ ಅ. ಪು. vii+೭೨+x ; ಬೆಲೆ, ಸಾದಾಪ್ರತಿ ಒಂದು ರೂಪಾಯಿ, ಉತ್ತಮಪ್ರತಿ ಒಂದು ರೂಪಾಯಿ ನಾಲ್ಕಾಣೆ.

೧೪. ಸಂಕ್ಷಿಪ್ತ ಶಿವಪೂಜಾವಿಧಿ—ರಚಿಸಿದವರು : ಜಗದಾಚಾರ್ಯ ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರ್ ನಿಜಸಿಂಹಾಸನಾಧ್ಯಕ್ಷರು, ಚೌಡಯ್ಯದಾನಪುರ ; ಪ್ರಕಾಶಕರು : ಆಸ್ಥಾನ ವಿದ್ವಾನ್ ಪಂಡಿತರತ್ನಂ ಕೀರ್ತನಾಚಾರ್ಯ ಶ್ರೀ ಬ. ಶಿವಮೂರ್ತಿಶಾಸ್ತ್ರಿ (ಹುಲುಕುಂಟೆ ಮಠ) ಕ್ರೌನ್ ಅ. ಪು. ೬೧ ; ಬೆಲೆ, ಒಂದು ರೂಪಾಯಿ.

೧೫. ಘನಲಿಂಗದೇವರ ವಚನ—ಸಂಪಾದಕರು ಮತ್ತು ಪ್ರಕಾಶಕರು : ಆಸ್ಥಾನ ವಿದ್ವಾನ್ ಕೀರ್ತನಾಚಾರ್ಯ ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿಶಾಸ್ತ್ರಿ (ಹುಲುಕುಂಟೆ ಮಠ) ; ಡೆಮ್ಮಿ ಪುಟ ೩೮+೮+೪ ; ಬೆಲೆ, ಒಂದುರೂಪಾಯಿ.

೧೬. ತುರುಗಾಹಿರಾಮಣ್ಣನ ವಚನಗಳು—ದೊರೆಕಿಸಿಕೊಟ್ಟವರು: ಶ್ರೀ ಡಿ. ಎಲ್. ನರಸಿಂಹಾಚಾರ್, ಎಂ.ಎ. ಅವರು ; ಪ್ರಕಾಶಕರು : "ಶರಣಸಾಹಿತ್ಯ" ಕಾರ್ಯಾಲಯ, ಬಳೇಪೇಟೆ, ಬೆಂಗಳೂರು-೨ ; ಡೆಮ್ಮಿ ಪುಟ ೧೦ ; ಬೆಲೆ, ನಾಲ್ಕಾಣೆ.

೧೭. ಯುಗವಾಣಿ (ಕವನಸಸಂಗ್ರಹ) ಪ್ರಕಾಶಕರು : ಆಸ್ಥಾನವಿದ್ವಾನ್ ಪಂಡಿರತ್ನಂ ಕೀರ್ತನಾಚಾರ್ಯ ಶ್ರೀ ಬ. ಶಿವಮೂರ್ತಿಶಾಸ್ತ್ರಿಗಳು ; ಕ್ರೌನ್ ಅ. ಪು. ೮೦ ; ಬೆಲೆ, ಒಂದು ರೂಪಾಯಿ.

೧೮. ಬಡವರ ಬಾಪೂಜಿ—ಕವಿ—ಎ. ಕೃಷ್ಣಭಟ್ಟ; ಸತ್ಯನಾರಾಯಣ ಹೈಸ್ಕೂಲ್, ಪೆರ್ಲ, ದ.ಕ. ; ಕ್ರೌನ್ ಅ. ಪು. ೯೩.

೧೯. ಪೂಜಾ (ಗದ್ಯಗೀತೆಗಳು)—ಬರೆದವರು: ಶ್ರೀ ಸಿಂಪಿಲಿಂಗಣ್ಣನವರು; ಪ್ರಕಾಶಕರು: ಶಾಂತಿಸಾಹಿತ್ಯಮಾಲೆ, ಬಾದಾಮಿ ; ಕ್ರೌನ್ ಅ. ಪು. ೩೬ ; ಬೆಲೆ, ಹನ್ನೆರಡಾಣೆ.

೨೦. ಐರಾವತ (ಕುಮಾರವ್ಯಾಸ ವಿರಚಿತ)—ಸಂಪಾದಕರು : ವಿದ್ಯಾರತ್ನ ಶ್ರೀ ಆರ್. ಎಸ್. ಪಂಚಮುಖಿ, ಎಂ.ಎ. ಅವರು ; ಪ್ರಕಾಶಕರು : ಶ್ರೀ ಆರ್. ಎಸ್. ಪಂಚಮುಖಿ, ಎಂ.ಎ. ಡೈರೆಕ್ಟರ್ ಆಫ್ ಕನ್ನಡ ರಿಸರ್ಚ ಮತ್ತು ಸೆಕ್ರೆಟರಿ, ಕನ್ನಡ ರಿಸರ್ಚ್ ಬೋರ್ಡು, ಧಾರವಾಡ ; ಡೆಮ್ಮಿ, ಪುಟ ೧೬+೧೦೦+೭ ; ಬೆಲೆ, ಒಂದೂವರೆ ರೂಪಾಯಿ.

೨೧. ಭಾರತೀಯ ಮಹಾಕುಲವೃದ್ಧ ದಾದಾಭಾಯಿ ನವರೋಜಿ (ಜೀವನ ಚರಿತ್ರೆ)—ಬರೆದವರು: ಶ್ರೀ ಡಿ.ವಿ.ಜಿ. ಅವರು ; ಪ್ರಕಟನಕಾರರು : ಗೋಖಲೆ ಸಾರ್ವಜನಿಕ

ವಿಚಾರ ಸಂಸ್ಥೆಯ ವ್ಯಾಸಂಗಗೋಷ್ಠಿ, ಬಸವನಗುಡಿ, ಬೆಂಗಳೂರು; ಫೂಲ್ಸ್‌ಕ್ಯಾಪ್, ೪೨ ಪುಟಗಳು; ಬೆಲೆ, ನಾಲ್ಕಾಣೆ.

೨೨. ನಗೀನವಿಲು—ಬರೆದವರು: ಶ್ರೀ ಎನ್. ಎಸ್. ಗದಗಕರ; ಪ್ರಕಾಶಕರು: ದ. ಬಾ. ಕುಲಕರ್ಣಿ, ಮನೋಹರಗ್ರಂಥ ಭಾಂಡಾರ, ಧಾರವಾಡ; ಕ್ರೌನ್ ಅ. ಪು. ೫೬; ಬೆಲೆ, ಹದೆನ್ಯೆದು ಆಣೆ.

೨೩. ಸಾಹಿತ್ಯಾಂಕ (ಕುವೆಂಪು: ಶ್ರೀರಂಗ: ಅ.ನ.ಕೃ.)—ಸಂಪಾದಕರು ಮತ್ತು ಪ್ರಕಾಶಕರು: ಎಚ್. ಬಿ. ಕುಲಕರ್ಣಿ, ಕಾರ್ಯದರ್ಶಿ, ಕುವೆಂಪು ಸಾಹಿತ್ಯ ಸಮಿತಿ, ಹುಬ್ಬಳ್ಳಿ; ಕ್ರೌನ್ ಅಷ್ಟಪತ್ರ ಪುಟ ೯೬+೫೩+೫೭; ಬೆಲೆ, ಎರಡು ರೂಪಾಯಿ.

೨೪. ಹೂದೋಣಿ—ಬರೆದವರು: ಶ್ರೀ ಎಸ್. ಜಿ. ಪ್ರಭಾಚಂದ್ರ; ಡೆಮ್ಮಿ ೪೭ ಪುಟಗಳು; ಬೆಲೆ, ಹನ್ನೆರಡಾಣೆ. ದೊರೆಯುವ ಸ್ಥಳ—ಪರೀಕ್ಷಾದರ್ಪಣ ಆಫೀಸ್, ಚಿಕ್ಕಬಳ್ಳಾಪುರ.

೨೫. ಹಿಗ್ಗು—ಬರೆದವರು: ಶ್ರೀ ವಿನಾಯಕ: ಪ್ರಕಾಶಕರು: ಪ್ರೊ. ರಂ. ಶ್ರೀ ಮುಗಳಿ, ವಿಶ್ರಾಮಭಾಗ, ಸಾಂಗಲಿ; ಕ್ರೌನ್ ಅಷ್ಟಪತ್ರ ೯೨; ಬೆಲೆ, ಸಾದಾಪ್ರತಿ ರೂ. ೧-೧೨-೦, ಉತ್ತಮಪ್ರತಿ ರೂ. ೨-೦-೦.

೨೬. ಪ್ರಾಂತವಾದ—ಬರೆದವರು ಮತ್ತು ಪ್ರಕಾಶಕರು: ಎಸ್. ಎಂ. ಹುನಶಾಳ, ಎಂ.ಎ., ಬಿ.ಟಿ, ಶಿವಪೂರ ಬ್ರದರ್ಸ್, ಧಾರವಾಡ.

೨೭. ಶ್ರೀ ಪಂತ ಮಹಾರಾಜ ಬಾಳೆಕುಂದ್ರಿ ಇವರ ಚರಿತ್ರೆ—ಮೂಲ ಲೇಖಕರು: ಶ್ರೀ ಕೈ. ವಾ. ಶ್ರೀ. ಕೇಶವರಾಮಚಂದ್ರ ದಿವೇಕರರು; ಅನುವಾದಕರು: ಶ್ರೀ ಕೃಷ್ಣರಾವ್ ವಿನಾಯಕ ಗೋಕಾಕ, ಸವಣೂರು; ಪ್ರಕಾಶಕರು: ಶ್ರೀಪಾದ ಗೋಪಾಳರಾವ ಪಂತ ಬಾಳೆಕುಂದ್ರಿ, ಬಿ.ಎ., ಎಲ್ಎಲ್.ಬಿ., ವಕೀಲರು, ಬೆಳಗಾವಿ; ಡೆಮ್ಮಿ ಪುಟ ೬೪೬; ಬೆಲೆ, ಎಂಟು ರೂಪಾಯಿಗಳು.

೨೮. ಶ್ರೀ ಯಾಮುನಾಚಾರ್ಯ ವಿರಚಿತಂ **ಸ್ತೋತ್ರರತ್ನಂ** ಮತ್ತು **ಚತುಶ್ಲೋಕಿ:** ಅನುವಾದಕರು: ಶ್ರೀ ಹೆಮ್ಮಿಗೆ ದೇಶಿಕಾಚಾರ್ಯರು ಮತ್ತು ಚೆನ್ನಪಟ್ಣಂ ಶೆಲ್ವಪಿಳ್ಳೆ ಶರ್ಮ; ಮುನ್ನುಡಿಕಾರರು ಮತ್ತು ಪ್ರಕಾಶಕರು: ಶ್ರೀ ಎಸ್. ಎಸ್. ರಾಘವಾಚಾರ್; ಬೆಲೆ, ೦-೮-೦.

೨೯. ಬಾಳಿಗೊಂದು ನಂಬಿಕೆ—ಬರೆದವರು: ಶ್ರೀ ಡಿ. ವಿ.ಜಿ. ಅವರು; ಪ್ರಕಾಶಕರು: ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಕೃಷ್ಣಮೂರ್ತಿಪುರಂ. ಮೈಸೂರು; ಕ್ರೌನ್ ಅ. ಪು. ೯೨; ಬೆಲೆ, ಒಂದು ರೂಪಾಯಿ.

ಪ್ರಾಚ್ಯಲೇಖನಮಾಲೆ

Brahmavidya (The Adyar Library Bulletin)—Vol. XIII, pt. 3.

೧. ಅಮೃತಾನಂದಯೋಗಿಯ 'ಅಲಂಕಾರ ಸಂಗ್ರಹ'ವೆಂಬ ಗ್ರಂಥಪ್ರಕಟನೆಯು ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ. ಈ ಸಂಚಿಕೆಯಲ್ಲಿ ನಾಲ್ಕನೆಯ ಪರಿಚ್ಛೇದದ ೮—೫೪ ಕಾರಿಕೆಗಳೂ ಅದರ ಉದಾಹರಣೆಗಳೂ ಇವೆ. ಅಲಂಕಾರಶಾಸ್ತ್ರದ ಪ್ರಕಾರ ಧೀರೋದಾತ್ತಾದಿ ನಾಯಕರ ಭೇದ—ಪ್ರಭೇದಗಳೂ ಸಾಮಾನ್ಯ ವಿಶೇಷ ಗುಣಗಳೂ, ಹಾಗೆಯೇ ನಾಯಿಕೆಯರ ವಿಭಾಗಗಳೂ ಈ ಪರಿಚ್ಛೇದದ ವಿಷಯ. ಕಾಳಿದಾಸ, ಅಮರುಕ, ಮೊದಲಾದ ಮಹಾಕವಿಗಳ ಶೃಂಗಾರವರ್ಣನೆಯಿಂದ ಉದಾಹರಣೆಗಳ ನ್ನಾರಿಸಿಕೊಳ್ಳಲಾಗಿದೆ.

ಜೈನಸಿದ್ಧಾಂತ ಭಾಸ್ಕರ—ಭಾಗ ೧೭, ಕಿರಣ ೧.

೧. 'ಚಂದ್ರಗುಪ್ತ ಮತ್ತು ಚಾಣಕ್ಯ'—ಲೇಖಕ: ಜ್ಯೋತಿ ಪ್ರಸಾದ ಜೈನ್, ಎಂ.ಎ., ಎಲೆಲ್.ಬಿ., (ಲಕ್ನೋ)

ಜೈನ ಮತ್ತು ಬೌದ್ಧರ ಪುರಾಣ ಕಥೆಗಳಿಂದ ಚಾಣಕ್ಯ—ಚಂದ್ರಗುಪ್ತರ ವಿಷಯವಾಗಿ ತಿಳಿದುಬರುವ ಹೊಸ ಅಂಶಗಳು ಈ ಲೇಖನದಲ್ಲಿವೆ: "ಚಾಣಕ್ಯನು ಗೊಲ್ಲದೇಶದ ಚಣಯವೆಂಬ ಊರಿನವನು. ಹುಟ್ಟುವಾಗಲೇ ಇವನ ಬಾಯಲ್ಲಿ ಎರಡು ಸಾಲು ಹಲ್ಲುಗಳೂ ಬೆಳೆದಿದ್ದುವು. ಇದನ್ನು ನೋಡಿ ಜೋಯಿಸರು ಅವನು ರಾಜನಾಗುವ ನೆಂಬ ಆದೇಶವನ್ನು ಹೇಳಿದರು. ಆದರೆ ವೈರಾಗ್ಯಪ್ರಿಯನಾದ ಚಾಣಕ್ಯನ ತಂದೆಯು ಈ ಹಲ್ಲುಗಳನ್ನು ಕೀಳಿಸಿಬಿಟ್ಟನು. ಆಗ ಜೋಯಿಸರು ಮತ್ತೆ—'ಈತನು ಎರಡನೆಯವನ ಮೂಲಕ ರಾಜ್ಯವನ್ನು ಮಾಡಿಸುತ್ತಾನೆ' ಎಂದು ನುಡಿದರು"—ಇಂತಹ ಅನೇಕ ಕಥೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

೨. 'ಮುನಿವಂಶಾಭ್ಯುದಯ'—(ಐತಿಹಾಸಿಕಕಾವ್ಯ)—ಲೇಖಕ: ಆಚಾರ್ಯ ದೇಶಭೂಷಣ ಮಹಾರಾಜ್.

ಇದು ಚಿದಾನಂದನೆಂಬ ಜೈನಕವಿಯ ಕನ್ನಡ ಕಾವ್ಯ. ಇದರ ಮುಖ್ಯವಿಷಯವು ಜೈನಮುನಿಗಳ ವಂಶವರ್ಣನೆಯೇ ಆದರೂ ಪ್ರಾಸಂಗಿಕವಾಗಿ ಚಿಕ್ಕದೇವರಾಜ ಒಡೆಯರ ವರೆಗಿನ ಮೈಸೂರ ಅರಸರ ವಂಶವರ್ಣನೆಯೂ ಇದೆ. ಮುಖ್ಯವಾಗಿ ಶ್ರವಣ ಬೆಳಗೊಳದ ಗೋಮಟೇಶ್ವರನ ಮೂರ್ತಿಯು ಅನಾದಿಯೆಂದೂ ಶ್ರೀರಾಮ, ಅರ್ಜುನ, ಭೀಮ ಮೊದಲಾದವರೆಲ್ಲರೂ ಅದನ್ನು ಪೂಜಿಸಿದ್ದರೆಂದೂ, ಭೀಮನು ಇತರರಿಗೆ ಅದು ಕಾಣದಂತೆ ಕಲ್ಲುಗಳಿಂದ ಅದನ್ನು ಮುಚ್ಚಿಬಿಟ್ಟದ್ದನೆಂದೂ, ಚಾಮುಂಡರಾಯನು ಬಾಣಗಳಿಂದ ಆ ಕಲ್ಲುಗಳನ್ನು ಉರುಳಿಸಿ ಮತ್ತೆ ಮೂರ್ತಿಯು ಕಾಣುವಂತೆ ಮಾಡಿದನೆಂದೂ ಹೇಳಿದೆ.

The Jaina Antiquary—Vol. XVI, No 1.

'Jaina Gurus of the name of Pūjyapāda'—by SHRI JYOTI PRASAD JAIN, M.A., LL.B., Luknow.

ಈ ಲೇಖನದ ಒಂದು ಭಾಗ ಮಾತ್ರ ಇಲ್ಲಿ ಪ್ರಕಟವಾಗಿದೆ. ಇದರಲ್ಲಿ 'ಜೈನೇಂದ್ರ ವ್ಯಾಕರಣ', 'ಸರ್ವಾರ್ಥಸಿದ್ಧಿ', 'ಸಮಾಧಿಶತಕ' ಇವುಗಳನ್ನು ಬರೆದ ಆದಿ ಪೂಜ್ಯಪಾದನಿಂದ ಹಿಡಿದು ಮುಂದೆ ಬಂದ ಅದೇ ಹೆಸರಿನ ಇಪ್ಪತ್ತೊಂದು ಪೂಜ್ಯಪಾದರ ಉಲ್ಲೇಖಗಳನ್ನು ಸಂಗ್ರಹಿಸಿದೆ.

Edited by N. Anantharangachar, M.A., B.T. and T. S. Shama Rao, B.A. (Hons.)
Published by The University of Mysore, Mysore. Printed by J. Brown
at the Wesley Press and Publishing House, Mysore City.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦, ಸಾದಾ ೧೨ ಆಣೆ.

ಪ್ರಧಾನಸಂಪಾದಕರು :
- ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೩ ರವರೆಗೆ
- ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೩ರಿಂದ ೧೯೪೭ರ ವರೆಗೆ
- ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ತೃತೀಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. ***ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು**(ಸಚಿತ್ರ)—ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾ ವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣ ಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. ***ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತ ರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. ಹದಿಬದೆಯ ಧರ್ಮ—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. *ಪುರಾಣನಾಮಚೂಡಾಮಣಿ—ಲೇಖಕರು: ಬೆನಗಲ್ ರಾಮರಾವ್, ಎಂ.ಎ., ಎಲ್ ಎಲ್.ಬಿ., ಮತ್ತು ಪಾನ್ಯಂ ಸುಂದರಶಾಸ್ತ್ರಿ; ಬೆಲೆ, ರೂ.೩-೪-೦

೧೬. ಯಶೋಧರ ಚರಿತೆಯ ಸಂಗ್ರಹ—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. *ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೧೮. ಹಿಂದೂ ದೇಶದ ಭೂಚರಿತ್ರೆ—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. ವಚನಧರ್ಮಸಾರ—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. ಪ್ರಾಣಿಶಾಸ್ತ್ರ—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧. *ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು—ಜಿ. ಹನುಮಂತರಾವ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೨೨. ಕನ್ನಡ ಕೈಪಿಡಿ (ಭಾಗ ೫, ಸಾಹಿತ್ಯ ಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. ಇಸ್ಲಾಂ ಸಂಸ್ಕೃತಿ—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

ಸೂಪರಿಂಟೆಂಡೆಂಟ್,
ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು.

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎಣ್. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ.ಬಿ.ಎಸ್., ಎಂ.ಪಿ.ಎಚ್.

೯. *ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ.ಬಿ.ಎಸ್., ಡಿ.ಪಿ.ಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರಿ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. ವಿದ್ಯುಚ್ಛಕ್ತಿಯ ಉಪಯೋಗ—ಮ. ಭೀ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್) ಸಿ.ಪಿ., ಇ.ಟಿ. (ಐ.ಐ.ಎಸ್.)

೧೨. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

೧೩. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.

೧೪. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,
ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧.*ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩.*ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪.*ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫.*ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯.*ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧.*ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨.*ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪.*ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦.*ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧.*ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨.*ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫.*ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬.*ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦.*ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೩೪.*ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬.*ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ವಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧.*ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨.*ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫.*ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬.*ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭.*ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್ಸಿ.
೪೮.*ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್ಸಿ., ಎಲ್‌ಎಲ್.ಬಿ.
೪೯. ಮುದ್ದಣ—ತ. ಸು. ಶಾಮರಾವ್, ಬಿ.ಎ. (ಆನರ್ಸ್).
೫೦.*ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್ಸಿ.
೫೧.*ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್ಸಿ.
೫೨.*ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ
೫೩.*ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪.*ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್ಸಿ.
೫೫.*ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್ಸಿ.

ಸಾಧಾರಣ ಪ್ರತಿ ೩ ಆಣೆ.
ಉತ್ತಮ ಪ್ರತಿ ೪ ಆಣೆ

ಕಾರ್ಯದರ್ಶಿ,
ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು

* ಈ ಪುಸ್ತಕಗಳು ಮುಗಿದುಹೋಗಿವೆ.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

ಇನ್ನುಮುಂದೆ 'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯ ಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

೧೯೫೦–೫೧ ನೆಯ ಸಾಲಿನ ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳಿಹಿಸಬಹುದು.)

ಪ್ರಬುದ್ಧ ಕರ್ಣಾಟಕಕ್ಕೆ ಚಂದಾದಾರರನ್ನು ಒದಗಿಸಿಕೊಡುವ ಪುಸ್ತಕ ವ್ಯಾಪಾರಿಗಳಿಗೂ ವೃತ್ತಪತ್ರಿಕೆಗಳ ಮಾರಾಟಗಾರರಿಗೂ ಶೇಕಡ ೧೨½ ಯಂತೆ ಕಮಿಷನ್ ಕೊಡಲಾಗುವುದು. ಪಾಠಶಾಲಾ ಸಂಸ್ಥೆಗಳಿಗೆ ಪ್ರಚಾರ ಶಾಖೆಯ ಕಾರ್ಯದರ್ಶಿಗಳೇ ನೇರವಾಗಿ ಗಮನಕೊಡುವರು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಫಸ್ಟ್‌ಗ್ರೇಡ್ ಕಾಲೇಜು, ಮೈಸೂರು) ರಿಗೆ ಕಳಿಸಬೇಕು.

ಕಾರ್ಯದರ್ಶಿ

ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕನ್ನಡ ನುಡಿ', ಬೆಂಗಳೂರು; 'ಕಂಠೀರವ', ಮಂಗಳೂರು; 'ತಾಯಿನಾಡು', ಬೆಂಗಳೂರು; 'ನವಸಂದೇಶ', ಬಳ್ಳಾರಿ; 'ವಿಶ್ವಕರ್ಣಾಟಕ' ಬೆಂಗಳೂರು; 'ಸ್ವದೇಶಾಭಿಮಾನಿ' ಮಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಜನಶಕ್ತಿ', ಹುಬ್ಬಳ್ಳಿ; 'ವಾಹಿನಿ', ಬೆಂಗಳೂರು; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ' ಧಾರವಾಡ; 'ಜಯಂತಿ', ಧಾರವಾಡ; 'ಭಾರತಿ' (ತೆಲುಗು), ಮದರಾಸು; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿಮಾ ವಾಣಿಜ್ಯ', ಬೆಂಗಳೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ವಾಣಿ', ಬೆಂಗಳೂರು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ; 'ಶ್ರೀಮನ್ ಮಹಾರಾಜರವರ ಸಂಸ್ಕೃತ ಮಹಾಪಾಠಶಾಲಾ ಪತ್ರಿಕಾ,' ಮೈಸೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ

ಮೈಸೂರು ಮಹಾರಾಜರವರ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟನೆಗಳು

ನಾಗಾನಂದನಾಟಕ (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)—
ಬೆಲೆ ರೂ. ೧–೦–೦

ಕಿರಿಯಕಾಣಿಕೆ (ಎರಡನೆಯ ಮುದ್ರಣ)— ಕ್ಯಾಲಿಕೊ ಪ್ರತಿ ರೂ. ೧–೮–೦

ಮಾರಾಟಗಾರರು :

ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

ಆಷಾಢಭೂತಿ (ಶ್ರೀ ಎ. ಎನ್. ಮೂರ್ತಿರಾವ್, ಎಂ.ಎ. ಅವರಿಂದ)—
ಕ್ಯಾಲಿಕೊ ಪ್ರತಿ ರೂ. ೧–೮–೦

ಸಾವಿನ ಸಮಸ್ಯೆ (ಶ್ರೀ ವೆಂಬಾರ್ ವೆಂಕಟಾಚಾರ್ಯ, ಎಂ.ಎ., ಬಿ.ಕಾಮ್., ಎಲ್‌ಎಲ್.ಬಿ. ಅವರಿಂದ)— ಸಾದಾ ಪ್ರತಿ ರೂ. ೦–೧೨–೦

ಮಾರಾಟಗಾರರು :

ಕೃಷ್ಣ ಮತ್ತು ಕಂಪನಿ, ಮೈಸೂರು

ಕರ್ಣಾಟಕ ಮೃಚ್ಛಕಟಿಕಪ್ರಕರಣಂ (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦

ಮಾರಾಟಗಾರರು :

ಶ್ರೀ ರಾಮಚಂದ್ರ ಬುಕ್ ಡಿಪೊ,
ದೇವರಾಜ ಮಾರ್ಕೆಟ್, ಮೈಸೂರು

Edited by N. Anantharangachar, M.A., B.T. and T. S. Shama Rao, B.A. (Hon.)
Published by The University of Mysore, Mysore. Printed by J. Brown
at the Wesley Press and Publishing House, Mysore City

ಪ್ರಬುದ್ಧ ಕರ್ಣಾಟಕ

ಸಂಪುಟ ೩೨—ಸಂಚಿಕೆ ೪

೧೨೬

ವಿಕೃತಿ ಸಂವತ್ಸರ

ಪುಷ್ಯ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೧

ವಿಷಯ ಸೂಚಿಕೆ

ವಿಷಯ	ಲೇಖಕರು	ಪುಟ
	ಶ್ರೀಯುತರಾದ	
೧. ವಿಶ್ವವಿದ್ಯಾನಿಲಯೆ ಭಗವತಿ ಶ್ರೀ ಸರಸ್ವತಿಗೆ	—ಕುವೆಂಪು	೧
೨. ರುದ್ರಭಟ್ಟ	—ಡಿ. ಎಲ್. ನರಸಿಂಹಾಚಾರ್	೭
೩. ಕನ್ನಡ ಧ್ವನ್ಯಾಲೋಕ	—ಡಾ|| ಕೆ. ಕೃಷ್ಣಮೂರ್ತಿ	೧೫
೪. ಮಾವಿನ ಹೂ	—ಗೋಪಾಲ—ಹಿರೇಕೋಟ್ಲು	೭೨
೫. ದವನದ ಹುಣ್ಣಿವೆ	—ದೇಸಾಯಿ ಪಾಂಡುರಂಗರಾಯರು	೭೩
೬. ಸೇತುವೆಗಳ ನಿರ್ಮಾಣ ಶಿಲ್ಪ	—ಎಂ. ಜಿ. ಶಿಂಗ್ರಯ್ಯಂಗಾರ್	೮೮
೭. ಭಾರತ ರಾಜ್ಯ ನಿಬಂಧನೆ ಅಥವಾ ಸಂವಿಧಾನ	—ಎಚ್. ಕೃಷ್ಣರಾವ್	೮೯
೮. ಕಾವ್ಯಾವಲೋಕನ	....	೧೩೭
೯. ಸಂಪಾದಕೀಯ	....	೧೪೫
೧೦. ಸಾದರ ಸ್ವೀಕಾರ	....	೧೪೯

ಪ್ರಬುದ್ಧ ಕರ್ಣಾಟಕ

ವಿಕೃತಿ ಸಂವತ್ಸರ | ೧೨೬ | ಪುಷ್ಯ ಸಂಚಿಕೆ

ವಿಶ್ವವಿದ್ಯಾನಿಲಯೆ ಭಗವತಿ ಶ್ರೀ ಸರಸ್ವತಿಗೆ*

೧

ಓಂ
ಅಸತ್ತಿನಿಂದೆ ಸತ್ತಿನೆಡೆಗೆ
ತಮಸ್ಸಿನಿಂದೆ ಜ್ಯೋತಿಯೆಡೆಗೆ
ಮೃತ್ಯುವಿಂದೆ ಅಮೃತದೆಡೆಗೆ
ಕರೆದೊಯ್ಯುವ ತಾರಿಣಿ,
ವಿದ್ಯೆಯಾಗಿ ಮುಕ್ತಿಯೀವ
ಅವಿದ್ಯಾಪರಿಹಾರಿಣಿ,
ಬಂಧನಭವತಾರಿಣಿ,
ನಮೋ
ಸಕಲ ರಸಾನಂದ ಕಲಾ
ಕ್ಷೇತ್ರರೂಪಧಾರಿಣಿ,
ನಮೋ ನಮೋ ನಮೋ
ಹೇ ತಮೋಹಾರಿಣಿ!

---

* ಮೈಸೂರು ಮಹಾರಾಜಾ ಕಾಲೇಜಿನ ಶತಮಾನೋತ್ಸವ ಸಂದರ್ಭದಲ್ಲಿ ರಚಿತವಾದದ್ದು.

೨

ಏಳು, ಬ್ರಹ್ಮಹೃದಯು ಸದ್ಮೆ,
ರಸಋುಷಿ ಕವಿ ಪ್ರಾಣಪದ್ಮೆ :
ಹೇಳು, ಎಲ್ಲ ಬಲ್ಲ ಜಾಣೆ,
ನಿಖಿಲ ಜಗಜ್ಜೀವ ವೀಣೆ
ನೀನಿಲ್ಲದೆ ನಾನು ಕಾಣೆ
ಸೃಷ್ಟಿಯ ಪರಮಾರ್ಥವ.
ಓ ಪ್ರಾಚ್ಯೆ, ಪಾಶ್ಚಾತ್ಯೆ,
ಔತ್ತರೇಯೆ, ದಾಕ್ಷಿಣಾತ್ಯೆ,
ಸರ್ವಮಿಥ್ಯೆ, ಪೂರ್ಣಸತ್ಯೆ,
ಕಲಿಸು, ಚಿದಾನಂದಚಿತ್ತೆ,
ಬಾಳ್ವೆಯ ಪುರುಷಾರ್ಥವ.

೩

ಹೇ ಅನಕ್ಷರೇ,
ಹುಟ್ಟುವಂದು ತಾಯಿಯಾದೆ;
ಹೊರೆಯುವಂದು ತೊಟ್ಟಿಲಾದೆ;
ಬೆಳೆಯುವಂದು ಗದ್ದೆ, ತೋಟ,
ಸಹ್ಯಾದ್ರಿಯ ಚೆಲುವುನೋಟ,
ಬಾಸು, ಮುಗಿಲು, ಬೆಟ್ಟ, ಕಾಡು,
ಹುಲಿಯ ಬೀಡು, ಹಕ್ಕಿಹಾಡು,
ಹೊಳೆಯ ಮಳೆಯ ಮಲೆಯ ನಾಡು—
ನೂರು ರೂಪ ನೂರು ಭಾವಗಳಲಿ ಕಾವ್ಯಬೋಧೆ
ಹೃದಯದಲ್ಲಿ ಸ್ಫುರಿಸುವಂತೆ ಪ್ರಕೃತಿಮಾತೆಯಾದೆ,
ಭವ್ಯಸೃಷ್ಟಿರೂಪಿಣಿ,
ಹೇ ಗುರುಸ್ವರೂಪಿಣಿ !

೪

ರಸಕ್ಷೀರಶರಧಿಯಲ್ಲಿ ನಿನ್ನ ದಿವ್ಯಹಸ್ತ
ಕಡೆಯುತಿರಲು ಮೂಡಿತೊಂದು ಮೇರುಸದೃಶ ಹುತ್ತ :
ಸುಪ್ತಫಣಿಯು ಗುಪ್ತರೋಷವಾಗುವಂತೆ ತಪ್ತ

ಸುರುಳಿಬಿಚ್ಚುತಿತ್ತು ಅಲ್ಲಿ ಆದಿಕವಿಯ ಚಿತ್ತ!
ಹೇ ಅರೂಪಮೋಹಿನಿ,
ನಿನ್ನ ಸುಳಿಗೆ ಸೆಳೆದ ಮನಸು
ಹಸುಳೆಯುಸಿರ ಹೊನ್ನ ಕನಸು
ಹೊಸತು ರಸದ ಹಸಿವೆಯಿಂದ ಸುಳಿದುದತ್ತ ಇತ್ತ:
ಜೀವಮಧುಪ ಕುಟಜಕೋಟಿಗಳಲಿ ವಿಹರಿಸುತ್ತ
ಪುಷ್ಪಲಕ್ಷವಕ್ಷಗಳನು ಚುಂಬಿಸುತ್ತ
ಹೀರಿ ಹಾರಿ ಝೇಂಕರಿಸಿತು ಮಕರಂದ ನಿಮಿತ್ತ.
ಸೇರ್ವೆಯಾಯ್ತು ಮಧುಪಟಲದಿ
ಜೇನ್‌ಗಣ್ಣಿನ ಶತಜಟಿಲದಿ
ಕರ್ಣಾಟಕ ಸರಸ್ವತಿಯು ಜಿಹ್ವೆಯಮೃತ ವಿತ್ತ!

೫

ಹೇ ಮೃತ್ಯುಮಾಧುರೀ,
ಸಾವಿನೊಂದು ನೋವಿನೊಂದು ಹಾವಿನಂತೆ ಬಂದೆ;
ಹುತ್ತಹೊಕ್ಕು ಕವಿಯನೆಳೆದು ದೂರ ಕರೆದು ತಂದೆ:
ಸಹ್ಯಶಿಶುಗೆ ಚಾಮುಂಡಿಯೆ ಸ್ತನ್ಯವಾಗೆ ನಿಂದೆ!
ಹೊಸತೆ ಹುಟ್ಟಿದೆಳೆಯ ಕರು
ತಾಯ್ಗೆಚ್ಚಲನರಸುವೋಲ್
ಕವಿಯಾತ್ಮದ ತೃಷೆಯ ತರು
ತಡವಿ ಹುಡುಕಿ ಚಾಚಿರೆ ತೋಳ್,
ಕೃಪಾಮಯೀ ಜಗಜ್ಜನನಿ
ಜ್ಞಾನಾಮೃತ ದಿವ್ಯಸ್ತನಿ,
ನಿನ್ನ ವಕ್ಷದಮೃತಕಲಶ ಹಸಿದ ತುಟಿಗೆ ತಾಗಿ
ರಸವನೀಂಟಿದತಲ ಭೋಗಿ
ಅತುಲ ವೈನತೇಯನಾಗಿ
ಅಮರಗಂಗೆ ಭಗೀರಥಗೆ ಒಲಿದಳಪಗೆಯಾಗಿ!
ಗಂಗೆಯೊಡನೆ ಥೇಂಸಿಗಾಯ್ತು ಗಹನ ಗಗನಸಂಗಮ;
ಸೆರೆಯುಕ್ಕಿದ ಕಾವೇರಿಗೆ ಸೊಗಸಿದುವು ವಿಹಂಗಮ:
ವಂದಿಸುತ್ತ ಸಂಧಿಸಿದುವು ಧನ್ಯ ಪೂರ್ವಪಶ್ಚಿಮ!

೬

ಏನದ್ಭುತ, ಏನ್ ಸಾಹಸ, ಕೃತಿಲೋಕಾಕರ್ಷಣ :
ಶತಚಿಂತನ ರಸಭಾವನ ರೋಮಾಂಚನ ಘರ್ಷಣ !
ಕ್ಷೀರಾಬ್ಧಿಯ ದೇವಾಸುರ ಫಣಿಮಂಥನ ಮಂದರ,
ಐರಾವತ ಉಚ್ಚೈಃಶ್ರವ ಅಮೃತ ಲಕ್ಷ್ಮಿ ಬಂಧುರ,
ಹಾಲಾಹಲ ವಿಷಘೋರವನೀಂಟುವ ಶಿವ ಸುಂದರ :
ಏನದ್ಭುತ, ಏನ್ ಸಾಹಸ, ಕೃತಿಲೋಕಾಕರ್ಷಣ !
ಕವಿಧಮನಿಯ ರಕುತದಲ್ಲಿ
ತೇಲಾಡಿತು ಹಿಮಾಲಯ ;
ಉಚ್ಛ್ವಾಸದಿ ಸ್ಪಂದಿಸಿತಾ
ಸಹ್ಯಾದ್ರಿಯ ಅರಣ್ಯಾಚಯ !
ಶತ ಶತ ಶತ ವಿಕಸಿತ ದಲವಾದುದು ಋಷಿಹೃನ್ನಿಲಯ :
ಅವತರಿಸಿತು ತವ ಚರಣದ ಮಧುಛಂದೋ ನಾಟ್ಯಲಯ ;
ವಿಶ್ವಪ್ರಜ್ಞೆಗೆ ವೇದಿಕೆಯಾದುದು ಶ್ರೀ ವಿದ್ಯಾನಿಲಯ !

೭

ಚಿದ್ರೂಪಿಣಿ ಭವತಾರಿಣಿ ಉತ್ತರೋತ್ತರೇ
ಕವಿಯನೆತ್ತಿ ರಕ್ಷಿಸಲ್ಕೆ
ಬಂದಳಿತ್ತ ದಕ್ಷಿಣಕ್ಕೆ
ಶ್ರೀ ವಿವೇಕ ಪರಮಹಂಸ ದಕ್ಷಿಣೇಶ್ವರೇ :
ಕಣ್ದೆರೆಯಿತು ಬೋಧನಾ
ಗರಿಗೆದರಿತು ಸಾಧನಾ
ಆಲೋಕಲೋಕ ಯಾತ್ರೆಯಾಯ್ತು ದಿವ್ಯದರ್ಶನ.
ಲಲಿತಾದ್ರಿಯ ಲಲಿತಸಂಗ
ಚಾಮುಂಡಿಯ ರುದ್ರರಂಗ
ಕಾರಂಜಿಯ ಜಲತರಂಗ
ತಾವಾದುವು ವಿದ್ಯಾಂಬಿಕೆಯಂತರಂಗ !
ಬಾನಾದುದು ಭಗವಂತನ ಮಾನಸ ಚಿದ್ರೂಪ ;
ಬುವಿಯಾದುದು ಭಗವತಿಯಾ ಮೈತ್ರಿಯ ಮೃದ್ರೂಪ ;
ಜಗವೆಲ್ಲವು ತಾನಾದುದು ರಸಲೀಲಾರೂಪ !

ರಸದೃಷ್ಟಿಗೆ ಬ್ರಹ್ಮಾಂಡವೆ ಋತಚಿನ್ಮಯ ಕಾವ್ಯಮಯ;
ಅನುಭಾವದ ವಿಜ್ಞಾನಕೆ ಅನ್ನವು ಆನಂದಮಯ!

೮

ಆಕಾಶದ ಆನಂತ್ಯದಿ, ಹೇ ಅನಂತೇ,
ಗರಿಗೆದರಿದೆ ಜಗಚೇತನ ಚಿದಾನಂದ ಚಿಂತೆ.
ಹಾರುತ್ತಿದೆ! ಏರುತ್ತಿದೆ!
ಅಗ್ನಿಗೆ ಬಳಿಸಾರುತ್ತಿದೆ!
ಸುಗಿಯದವೋಲ್ ಶೂನ್ಯತೆಗೀ ಮಮಕಾರದ ಚಿಕ್ಕೆ,
ಋತಚಿನ್ಮಯಿ, ಕ್ರತುದೀಕ್ಷಿತೆ, ನಿನ್ನಯ ಕೃಪೆಯಕ್ಕೆ
ಸಾಧನದೀ ಸಾಹಸಕ್ಕೆ
ಸೋಲದವೋಲ್ ರೆಕ್ಕೆ!
ಪೂರ್ಣತೆಯಿಂದೈತಂದೀ ಪೂರ್ಣಸೃಷ್ಟಿ
ಪೂರ್ಣತೆಯಿಂ ಪಡೆಯುವಂತೆ ಪೂರ್ಣತೃಪ್ತಿ
ಅರವಿಂದದವೋಲ್ ಅರಳಲೆಮಗೆ ಯೋಗಪೂರ್ಣದೃಷ್ಟಿ!
ಓಂ ಶಾಂತಿಃ ಶಾಂತಿಃ ಶಾಂತಿಃ

ಕುವೆಂಪು.

ರುದ್ರಭಟ್ಟ*

ಕನ್ನಡ ನಾಡನ್ನು ಆಳಿದ ರಾಜಮನೆತನಗಳಲ್ಲಿ ದ್ವಾರಸಮುದ್ರದ ಹೊಯ್ಸಳರು ಬಹಳ ಪ್ರಸಿದ್ಧರಾಗಿದ್ದರು. ೧೨ನೆಯ ಶತಮಾನದ ಕೊನೆಯಲ್ಲೂ ೧೩ನೆಯ ಶತಮಾನದ ಆರಂಭದಲ್ಲೂ ರಾಜ್ಯವಾಳುತ್ತಿದ್ದ ವೀರಬಲ್ಲಾಳನೂ, ಅವನ ಮಗ ಎರಡನೆ ನರಸಿಂಹನೂ ಈ ವಂಶದ ದೊರೆಗಳಲ್ಲಿ ಪ್ರಖ್ಯಾತಿಯನ್ನು ಹೊಂದಿದವರು. ಇವರ ಕಾಲದಲ್ಲಿ ಕೃಷ್ಣಾನದಿಯಿಂದ ಹಿಡಿದು ರಾಮೇಶ್ವರದವರೆಗಿರುವ ಪ್ರದೇಶದ ಬಹುಭಾಗ ಇವರ ಆಳ್ವಿಕೆಗೆ ಒಳಪಟ್ಟಿತ್ತು. ದಕ್ಷಿಣದಲ್ಲಿ ರಾಜ್ಯವಾಳುತ್ತಿದ್ದ ಚೋಳರು ಇವರಿಗೆ ಅಧೀನರಾಗಿದ್ದರು. ಶತ್ರುರಾಜರಿಂದ ಚೋಳರಿಗೆ ಉಂಟಾಗುತ್ತಿದ್ದ ಕಷ್ಟಗಳನ್ನು ಈ ಹೊಯ್ಸಳ ದೊರೆಗಳು ತಮ್ಮ ಸಹಾಯದಿಂದ ನಿವಾರಿಸುತ್ತಿದ್ದರು. ದೇಶದಲ್ಲಿ ಶಾಂತಿಯೂ, ಸುಭಿಕ್ಷವೂ ನೆಲಸಿದ್ದವು. ಶಿಲ್ಪ, ಸಂಗೀತ, ಸಾಹಿತ್ಯ ಮುಂತಾದ ಕಲೆಗಳು ರಾಜರಿಂದ ದೊರೆತ ಪ್ರೋತ್ಸಾಹ ಕಾರಣವಾಗಿ ಏಳಿಗೆಯನ್ನು ಹೊಂದುತ್ತಿದ್ದುವು.

ಶ್ರವಣಬೆಳಗೊಳದ ಅಕ್ಕನ ಬಸದಿ, ಹೀರೆಮಗಳೂರಿನ ಕೋದಂಡರಾಮ ದೇವಸ್ಥಾನ, ಹಳೇಬೀಡಿನ ಕೇದಾರೇಶ್ವರ ದೇವಾಲಯ, ಅರಸೀಕೆರೆಯ ಸಹಸ್ರಕೂಟ ಬಸದಿ ಮುಂತಾದ ಉತ್ಕೃಷ್ಟ ಶಿಲ್ಪನಿರ್ಮಿತಿಗಳು ಈ ದೊರೆಗಳ ಕಾಲದಲ್ಲಿ ನಡೆದುವು. ವೀರಬಲ್ಲಾಳನಲ್ಲಿ ಮಂತ್ರಿಯಾಗಿದ್ದ ಚಂದ್ರಮೌಳಿ ಎಂಬ ಪಂಡಿತನು ಕವಿಗಳಿಗೆ ಆಶ್ರಯದಾತನಾಗಿದ್ದಂತೆ ಕಾಣುತ್ತದೆ. ಸಂಸ್ಕೃತ ಕನ್ನಡ ಕವಿಗಳೂ ಈ ಕಾಲದಲ್ಲಿ ಹಲವರು ಇದ್ದರು. "ಗದ್ಯ ಕರ್ಣಾಮೃತ"ವೆಂಬ ಸಂಸ್ಕೃತ ಕಾವ್ಯವನ್ನು ಬರೆದ ಸಕಲ ವಿದ್ಯಾ ಚಕ್ರವರ್ತಿ ಎಂಬಾತನು ಈ ಕಾಲದಲ್ಲಿ ಇದ್ದವನು. ಕನ್ನಡದ ಪ್ರಸಿದ್ಧ ಕವಿಗಳಾದ ಜನ್ನ, ತ್ರಿವಿಕ್ರಮ ಪಂಡಿತ, ಅಗ್ಗಳ, ಹರಿಹರ, ಮುಂತಾದವರು ೧೧೮೦ ರಿಂದ ಹಿಡಿದು ೧೨೨೦ರ ಈ ಕಾಲದಲ್ಲಿ ತಮ್ಮ ಕಾವ್ಯಗಳನ್ನು ರಚಿಸಿದರು. ಇವರಲ್ಲೆಲ್ಲಾ ಅತಿ ಶ್ರೇಷ್ಠನಾದವನು ಹರಿಹರ ಕವಿ. ಮೇಲೆ ಹೇಳಿದ ಅಂಶಗಳನ್ನು ನೋಡಿದರೆ ಕನ್ನಡದ ಸಾಹಿತ್ಯ ಈ ದೊರೆಗಳ ಕಾಲದಲ್ಲಿ ಎಷ್ಟು ಉನ್ನತಿಯಲ್ಲಿದ್ದಿತೆಂಬುದು ಕಾಣುತ್ತದೆ. ರುದ್ರಭಟ್ಟನೂ ಕೂಡ ಈ ಕಾಲಕ್ಕೆ ಸೇರಿದ ಉತ್ತಮ ಕವಿಗಳಲ್ಲಿ ಒಬ್ಬನು.

---

* 'ಆಕಾಶವಾಣಿ'ಯ ಕೃಪೆಯಿಂದ: ಭಾಷಣ ೮-೪-೧೯೫೦.

ರುದ್ರಭಟ್ಟನು "ಜಗನ್ನಾಥ ವಿಜಯ"ವೆಂಬ ಹದಿನೆಂಟು ಆಶ್ವಾಸಗಳನ್ನುಳ್ಳ ಪ್ರೌಢಚಂಪೂ ಕಾವ್ಯವನ್ನು ರಚಿಸಿದ್ದಾನೆ. "ರಸಕಲಿಕೆ" ಎಂಬ ಇನ್ನೊಂದು ಗ್ರಂಥ ಇವನಿಂದ ಸಂಸ್ಕೃತದಲ್ಲಿ ರಚಿತವಾಯಿತೆಂದು ತಿಳಿದುಬರುತ್ತದೆ. ಆದರೆ ಇದು ಅಷ್ಟು ಪ್ರಸಿದ್ಧವಾಗಿಲ್ಲ. ರುದ್ರಭಟ್ಟನ ಖ್ಯಾತಿ ನಿಂತಿರುವುದು ಅವನ ಚಂಪೂಕಾವ್ಯದಿಂದ. ಈ ಗ್ರಂಥವನ್ನು "ಚಂದ್ರಮೌಳಿ ಪ್ರಮುಖ ನಿಖಿಲ ವಿದ್ವಜ್ಜನರು" ಮೆಚ್ಚುವಂತೆ ಕವಿ ರಚಿಸಿದ್ದಾನೆ. ಪಂಪನ "ವಿಕ್ರಮಾರ್ಜುನ ವಿಜಯ"ವನ್ನೂ ರನ್ನನ "ಸಾಹಸಭೀಮ ವಿಜಯ"ವನ್ನೂ ನೋಡಿದವರಿಗೆ, ಗ್ರಂಥಗಳ ಆಯಾ ಹೆಸರುಗಳ ಔಚಿತ್ಯವನ್ನು ತಿಳಿದುಕೊಂಡವರಿಗೆ, "ಜಗನ್ನಾಥ ವಿಜಯ" ಎಂಬ ಹೆಸರಿನ ಸಾರ್ಥಕತೆಯೂ ವೇದ್ಯವಾಗುತ್ತದೆ. ಪಂಪ ರನ್ನರು ಮೇಲೆ ಹೇಳಿದ ತಮ್ಮ "ವಿಜಯ" ಗ್ರಂಥಗಳಲ್ಲಿ ತಮ್ಮ ಪೋಷಕರಾದ ದೊರೆಗಳನ್ನು ಹೊಗಳಿರುವಂತೆಯೇ ಅವರು ಮಾಡಿರುವ ಸಾಹಸ ಕಾರ್ಯಗಳನ್ನು ಸೂಚಿಸಿರುವಂತೆಯೇ, ರುದ್ರಭಟ್ಟನೂ ತನ್ನ ಪೋಷಕನಾದ ವೀರಬಲ್ಲಾಳನನ್ನು ಸ್ತುತಿಸಿದ್ದಾನೆ. ಅವನ "ವಿಜಯ" ವನ್ನೂ ಅಲ್ಲಲ್ಲಿ ಪ್ರತ್ಯಕ್ಷವಾಗಿಯೋ ಮುಚ್ಚಿಯೋ ಹೇಳಿದ್ದಾನೆ. ವೀರಬಲ್ಲಾಳನು ಕಾಮದೇವನೆಂಬ ದೊರೆಯನ್ನು ಗೆದ್ದುದರಿಂದ "ಅರಿಕಾಮಧ್ವಂಸಿಯಾದನಂತೆ." ರಾಜರಾಜನೆಂಬ ಚೋಳ ದೊರೆಯನ್ನು ಸಿಂಹಾಸನದಲ್ಲಿ ಪ್ರತಿಷ್ಠಿಸಿದ್ದರಿಂದ "ರಾಜರಾಜ ಪ್ರತಿಷ್ಠಾನಿರತ"ನಾದನಂತೆ. ಅವನ ರಾಣಿ ಉಮಾದೇವಿಯಾಗಿದ್ದುದ್ದರಿಂದ 'ಉಮಾಕಾಮಿನೀಜೀವಿತೇಶ'ನಾದನಂತೆ. ಹೀಗೆ ರುದ್ರಭಟ್ಟನು ತನ್ನ ದೊರೆಯನ್ನು "ಜಗನ್ನಾಥ"ನೊಡನೆ ಸಮೀಕರಿಸಿ ಅಲ್ಲಲ್ಲಿ ಹೊಗಳಿರುವುದೂ ಕಂಡುಬರುತ್ತದೆ. ಚರಿತ್ರೆಯ ದೃಷ್ಟಿಯಿಂದ ಜಗನ್ನಾಥವಿಜಯ ಎಂಬ ಹೆಸರಿನ ಸಾರ್ಥಕತೆ ಹೀಗಿದೆ.

"ಜಗನ್ನಾಥ ವಿಜಯ"ವು ಶ್ರೀ ಕೃಷ್ಣನ ಚರಿತ್ರೆಯನ್ನು ಹೇಳುವ ಕಾವ್ಯ. ವಿಷ್ಣುಪುರಾಣದ ಐದು, ಆರನೆಯ ಸ್ಕಂಧಗಳಲ್ಲಿ ಅಡಕವಾಗಿರುವ ಕೃಷ್ಣನ ಕಥೆಯನ್ನು ಇಲ್ಲಿ ನಿರೂಪಿಸಿದ್ದಾನೆ. ಪಂಡಿತರು ಕೃಷ್ಣನ ಕಥೆಯನ್ನು ಹೇಳು ಎಂದು ಕವಿಯನ್ನು ಕೇಳಿದಾಗ ಕಾವ್ಯಯೋಗದಲ್ಲಿ ಪರಂಜ್ಯೋತಿಸ್ವರೂಪನಾದ ಕೃಷ್ಣನು ತನ್ನ ಮನಸ್ಸಿನಲ್ಲಿ ನಿಲ್ಲಲು ಈ ಪ್ರಬಂಧವನ್ನು ಹೇಳಿದನಂತೆ.

ಕನ್ನಡದ ವೈಷ್ಣವ ಕವಿಗಳಲ್ಲಿ ಇದುವರೆಗೆ ತಿಳಿದಿರುವಮಟ್ಟಿಗೆ ರುದ್ರಭಟ್ಟನು ಮೊದಲನೆಯವನು. ಶ್ರೀ ಕೃಷ್ಣನ ಮಹಿಮಾವಿಲಾಸವನ್ನು ರುದ್ರಭಟ್ಟನು ಅಪರಿಮಿತಭಕ್ತಿಯಿಂದ ಹೇಳಿದ್ದಾನೆ. ಸರ್ವಜ್ಞನಾದ ವಿಷ್ಣುವಿನ ಮಹತ್ವವು ಬ್ರಹ್ಮಾದಿ ದೇವತೆಗಳಿಗೂ ಅಗೋಚರವಾಗಿರುವಾಗ ಮನುಷ್ಯಮಾತ್ರನಾದ ತಾನು ಅದನ್ನು ನಿರೂಪಿಸಲು ತೊಡಗುವುದು ದಿಟ್ಟತನವೆಂದು ಕವಿಯ ಹೇಳಿಕೆ. ಇದನ್ನು ನೋಡಿದರೆ

ಕಥಾನಾಯಕನಾದ ಕೃಷ್ಣನಲ್ಲಿ ಕವಿಗೆ ಇದ್ದ ಗೌರವ ಪೂಜ್ಯಬುದ್ಧಿಗಳು ಮಿಗಿಲಾದುವೆಂದು ಹೇಳಬಹುದು. ಇವನ ಕವಿತಾರಸವು ಕಥೆಯ ಮಹತ್ವಮಾತ್ರದಿಂದಲೇ ಅಲ್ಲದೆ ರೀತಿಯ ಚಮತ್ಕಾರದಿಂದಲೂ ಸಜ್ಜನರ ಮನಸ್ಸನ್ನು ಸೂರೆಗೊಳ್ಳುವುದಂತೆ; ತನ್ನ ಕಾವ್ಯದ ಮೇಲ್ಮೆಯನ್ನು ಕುರಿತು "ಇನಿಯಳ ಸೋಂಕಿನಂತೆ ಪೊಸ ಮಾವಿನ ಪೂವಿನ ಜೊಂಪದಂತೆ ಚಂದನ ರಸದಣ್ಪಿನಂತೆ ನನೆಯೇಱಿದ ಮಲ್ಲಿಗೆಯಂತೆ ಪೂರ್ಣಚಂದ್ರನ ಸಿರಿಯಂತೆ ಬಂದೆಸೆವ ತೆಂಕಣ ತಂಬೆಲರಂತೆ" ಸುಖವನ್ನೂ, ಹರ್ಷವನ್ನೂ ಓದುಗರಿಗೆ ಕೊಡುತ್ತದಂತೆ. ಈ ಮಾತಿನ ಸತ್ಯತೆಯನ್ನು ಕಾವ್ಯವನ್ನೇ ನೋಡಿ ವಿಮರ್ಶಿಸಿ ತಿಳಿಯಬೇಕು.

ಶ್ರೀ ಕೃಷ್ಣನ ಚರಿತ್ರೆ ಲೋಕಪ್ರಸಿದ್ಧವಾದದ್ದು. ಆತನ ಜನನದಿಂದ ಮೊದಲುಗೊಂಡು ಆತನು ಸಾಲ್ವವಧೆಯನ್ನು ಮಾಡಿ ದ್ವಾರಕಾಪಟ್ಟಣದಲ್ಲಿ ನೆಲಸಿದ್ದರವರೆಗೆ ಇರುವ ಆತನ ಕಥೆ ಈ ಕಾವ್ಯದಲ್ಲಿ ಚಿತ್ರಿತವಾಗಿದೆ. ಇಲ್ಲಿ ಬರುವ ಹಲವು ಸಂದರ್ಭಗಳಲ್ಲಿ ಒಂದೆರಡನ್ನು ಮಾತ್ರ ವಿಶದವಾಗಿ ನೋಡಿದರೆ ಸಾಕು, ರುದ್ರಭಟ್ಟನ ಕಾವ್ಯದ ಸ್ವಾರಸ್ಯಗ್ರಹಣಕ್ಕೆ.

ಮೊದಲು ಕೃಷ್ಣಜನನದ ವೃತ್ತಾಂತವನ್ನೂ ಅವನ ಬಾಲಲೀಲೆಯನ್ನೂ ತೆಗೆದುಕೊಳ್ಳಬಹುದು. ದುಷ್ಟಜನರ ಭಾರವನ್ನು ಹೊರಲಾರದೆ ಭೂಮಿದೇವಿ ಬ್ರಹ್ಮನಿಗೆ ಬಿನ್ನಹ ಮಾಡಿಕೊಂಡಾಗ ಆತನು ಆಕೆಯನ್ನು ಕರೆದುಕೊಂಡು ಹಾಲ್ಗಡಲಲ್ಲಿ ಮಲಗಿದ್ದ ಹರಿಯ ಬಳಿಗೆ ಬಂದು ನಮಸ್ಕರಿಸಿ ಸ್ತೋತ್ರಮಾಡಿ ಭೂದೇವಿಗೆ ಉಂಟಾದ ಕಷ್ಟವನ್ನು ವಿಜ್ಞಾಪಿಸಲು, ವಿಷ್ಣುವು ಪ್ರಸನ್ನನಾಗಿ, ಶಿಶುಪಾಲ, ದಂತವಕ್ರ, ಬಾಣಾಸುರ, ಸಾಲ್ವ ಮುಂತಾದ ಖಳರನ್ನು ಮರ್ದಿಸಿ ಭೂಭಾರವನ್ನು ಹಗುರವಾಗಿಸುವೆನೆಂದು ನುಡಿದು, ದೇವಕಿಗೆ ಮಗನಾಗಿ ಹುಟ್ಟಿ ಕೆಲವುಕಾಲ ಗೋಕುಲದಲ್ಲಿ ವಿಹರಿಸಿ ಕಂಸಾದಿ ಖಳರನ್ನು ಕೊಲ್ಲುತ್ತೇನೆಂದು ಅಭಯವನ್ನು ಕೊಟ್ಟು ಕಳುಹಿಸಿದನು. ಅಂತೆಯೇ ವಿಷ್ಣುವು ಕೃಷ್ಣಾವತಾರವನ್ನೂ ಮಾಡಲು ತೊಡಗಿದನು.

ಯಮುನಾನದಿಯ ತೀರದಲ್ಲಿದ್ದ ಮಥುರಾಪುರಕ್ಕೆ ದೊರೆ ಉಗ್ರಸೇನ. ಅವನ ಮಗ ಕಂಸ. ಮೋಡದಲ್ಲಿ ಸಿಡಿಲೂ, ಹಾಲ್ಗಡಲಲ್ಲಿ ಹಾಲಾಹಲವೂ, ಕಾಡಿನಲ್ಲಿ ಕಿಚ್ಚೂ ಉದ್ಭವಿಸುವಂತೆ ಈ ಕಂಸದೈತ್ಯನು ಹುಟ್ಟಿ ತಂದೆಯನ್ನು ಸೆರೆಯಲ್ಲಿ ಇಟ್ಟು ರಾಜ್ಯವಾಳುತ್ತಿದ್ದನು. ಇವನ ತಂಗಿಯಾದ ದೇವಕಿ ವಸುದೇವನಿಗೆ ರಾಣಿಯಾಗಿ ಇದ್ದಳು. ಒಂದು ದಿನ ನಾರದನು ಕಂಸನ ಬಳಿಗೆ ಬಂದು "ವಿಷ್ಣುವು ದೇವಕಿಯ ಗರ್ಭದಲ್ಲಿ ಹುಟ್ಟಿ ನಿನ್ನನ್ನು ಕೊಲ್ಲುತ್ತಾನೆ" ಎಂಬ ಸುದ್ದಿಯನ್ನು ತಿಳಿಸಿ ಹೊರಟು ಹೋದನು. ಕಂಸನು ವಸುದೇವನನ್ನೂ, ದೇವಕಿಯನ್ನೂ ಹಿಡಿದುತರಿಸಿ ತಂಗಿಯನ್ನು

ಕೊಲ್ಲಲಾಗದ ಕಾರಣದಿಂದ, ಇಬ್ಬರನ್ನೂ ಸೆರೆಯಲ್ಲಿಡಿಸಿ ಹುಟ್ಟಿದ ಮಕ್ಕಳನ್ನು ಒಂದೊಂದಾಗಿ ಕಾಲುಹಿಡಿದು ಕಲ್ಲಿಗೆ ಅಪ್ಪಳಿಸಿ ಕೊಂದನು. ಹೀಗೆ ಆರು ಮಕ್ಕಳನ್ನೂ ಕಂಸನು ಯಮನಿಗೆ ಆಹುತಿಕೊಡಲು, ದೇವಕಿ ಬಹು ಖಿನ್ನಳಾಗಿ ಅತ್ತಳು. ಆದರೆ ಕಂಸನ ಮನಸ್ಸು ಮಾತ್ರ ಕರಗಲಿಲ್ಲ. ದೇವಕಿಗೆ ಏಳನೆಯ ಗರ್ಭವಾದಾಗ ಮಾಯಾದೇವಿ ಬಂದು ಆಕೆಗೆ ಗರ್ಭಸ್ರಾವವಾಯಿತೆಂದು ಸುದ್ದಿಯನ್ನು ಹುಟ್ಟಿಸಿ ಬಸಿರ ಕೂಸನ್ನು ತೆಗೆದುಕೊಂಡು ಹೋಗಿ ಗೋಕುಲದಲ್ಲಿದ್ದ ರೋಹಿಣಿಯ ಗರ್ಭದಲ್ಲಿಟ್ಟಳು. ರೋಹಿಣಿಯಿಂದ ಬಲರಾಮನು ಹೀಗೆ ಹುಟ್ಟಿದನು. ಎಂಟನೆಯ ಗರ್ಭದಲ್ಲಿಯೇ ಶ್ರೀ ಕೃಷ್ಣನು ಹುಟ್ಟಿ ಬಂದದ್ದು. ಹುಟ್ಟಿದ ಮಗುವನ್ನು ವಸುದೇವನು ಕೊಂಡುಹೋಗಿ ಗೋಕುಲದಲ್ಲಿಟ್ಟು, ಯಶೋದೆಗೆ ಹುಟ್ಟಿದ ಮಗುವನ್ನು ತಂದು ದೇವಕಿಯ ಮಗ್ಗುಲಲ್ಲಿ ಮಲಗಿಸಿದನು. ಆ ಕೂಸು ಅತ್ತಾಗ ಕಂಸನು ಬಂದು ಅದರ ಹಿಂಗಾಲನ್ನು ಹಿಡಿದುಕೊಂಡು ವಧ್ಯಶಿಲೆಯಲ್ಲಿ ಕುಕ್ಕಲು ಕೈಯೆತ್ತಿದಾಗ ಅದು ಸಿಡಿದು ಆಕಾಶಕ್ಕೆ "ನೆಗೆದು ನಿನ್ನನಾಂ ಕಂಸ ರಾಕ್ಷಸ ಕೇಳ್ ಕೊಲ್ವೊಡೆ ಕಾವರಾರೆಲವೊ ಮಾಣ್ ನಿನ್ನಂ ಕೊಲಲ್ವೇಡಿ ಪುಟ್ಟಿ ಸರೋಜೇಕ್ಷಣನ್ ಅತ್ತಲೊಂದೆಡೆಯೊಳಾಯಿರ್ದಪ್ಪನೆಮ್ಮಗ್ರಜಂ" ಎಂದು ನುಡಿದು ಮಾಯವಾಯಿತು. ಅತ್ತಕಡೆ ಗೋಕುಲದಲ್ಲಿ ಕೃಷ್ಣನು ಬೆಳೆಯುತ್ತಿದ್ದನು.

ಮಗುವಾಗಿದ್ದಾಗಲೇ ಶ್ರೀ ಕೃಷ್ಣನು ಪೂತನಿಯನ್ನು ಹೀರಿ ಕೊಂದನು. ಶಕಟಾಸುರನನ್ನು ಮುರಿದನು. ಎರಡು ಮತ್ತಿ ಮರಗಳನ್ನು ಮುರಿದನು. ಗೋಪಿಗಳ ಮನೆಗೆ ಹೊಕ್ಕು ಹಾಲ್ಮೊಸರು ಬೆಣ್ಣೆಗಳನ್ನು ಕದ್ದನು. ಇವನನ್ನು ತೊಟ್ಟಲಲ್ಲಿಟ್ಟು ಯಶೋದೆ ತೂಗಿದಾಗ;

> ಚಾರಿಮೆಟ್ಟುವ ಭಂಗಿ ದೋರ್ವಲನಂ ಮನಂಗೊಳೆ ಮಂಜುಮಂ
> ಜೀರಕಂಕಣ ಕಿಂಕಣೀರುತಿ ಪೊಣ್ಮೆ ವಕ್ತ್ರಿತಕಂದರಂ।
> ಸ್ಮೇರವಕ್ತ್ರ ಸರೋರುಹಂ ಲಲಿತಾಯತೇಕ್ಷಣನಾಗಿ ಸಂ
> ಸಾರನಾಟಕಸೂತ್ರಧಾರಿ ಮುರಾರಿ ಕೈಪಱೆಗಾಡಿದಂ ||
>
> ಕ್ಷೀರಲಂಪಟನಾಡಿದಂ ನವನೀತಚೋರಕನಾಡಿದಂ
> ದಾರಕವ್ರಜಮಲ್ಲನಾಡಿದನಾಡಿದಂ ಹರಿಗೋಕುಲಾ।
> ಧಾರನಾಡಿದನೆಂದು ಗೋಪಿಯರಾಡಿಸುತ್ತುಮಿರಲ್ಕೆ ಸಂ
> ಸಾರನಾಟಕಸೂತ್ರಧಾರಿ ಮುರಾರಿ ಕೈಪಱೆಗಾಡಿದಂ ||

ಒಂದು ದಿನ ಬಲರಾಮನು ಕೃಷ್ಣ ಮಣ್ಣು ತಿಂದನೆಂದು ಯಶೋಧೆಗೆ ಚಾಡಿ ಹೇಳಿದನು. ಅವಳು ಕೈಯಲ್ಲಿ ಬೆತ್ತವನ್ನು ಹಿಡಿದು ಬೆದರಿಸುತ್ತಾ:

ಹರಿ ನೀಂ ಮಣ್ತಿಂದೆ ತಿನ್ನೆಂ ಜನನಿ ಪುಸಿದನೆಮ್ಮಗ್ರಜಂ ತೋರುವಕ್ತ್ರಾಂ
ತರಮಂ ನೋಡೆಂದು ಬಾಯಂ ತೆಱೆವುದುಮದಱೊಳ್ ವಾರ್ಧಿಯೇೞುಂ ಕುಲೋರ್ವೀ|
ಧರಮೇೞುಂ ದ್ವೀಪಮೇೞುಂ ಬೆರಸು ಜಗಮನೀರೇೞುಮಂ ಕೂಡೆ ಕಂಡ
ಚ್ಚರಿವಟ್ಟಂ ಮುಚ್ಚು ಮುಚ್ಚಾನನಮನೆನುತುಮಾ ಕಾಂತೆ ವಿಭ್ರಾಂತೆಯಾದಳ್ ||

ಮತ್ತೊಂದು ದಿನ ಕೃಷ್ಣ ರಚ್ಚು ಹಿಡಿದಾಗ ಗೋಪಿ ಕಥೆಯನ್ನು ಹೇಳುತ್ತಾ ಇರಲು :

ಕತೆಯಂ ಕೇಳಲೆ ಕಂದ ಹುಂ ರಘುಜನೆಂಬಂ ಹುಂ ಸಕಾಂತಂ ವನ
ಸ್ಥಿತನಾದಂ ಗುರುಪೇಡೆ ಹುಂ ದಶಶಿರಂ ಕೊಂಡುಯ್ದನಾ ರಾಮನಾ|
ಸತಿಯಂ ತಾನೆನೆ ಪೂರ್ವಮಂ ನೆನೆಯುತುಂ ಹುಂಕೊಳ್ಳದುತ್ಕೋಪಹುಂ
ಕೃತಿಯಂ ಮಾಡತುಮೌಂಡುಗರ್ಚಿ ಕಿಸುಗಣ್ಬಿಟ್ಟಚ್ಯುತಂ ರಂಜಿಕುಂ ||

ಕೃಷ್ಣನ ಬಾಲಲೀಲೆಯನ್ನು ರುದ್ರಭಟ್ಟ ಕವಿ ಸೊಗಸಾಗಿ ನಿರೂಪಿಸಿದ್ದಾನೆ.

ಇನ್ನೊಂದು ಸಂದರ್ಭ ಕಷ್ಣನಾಡಿದ ರಾಸಕ್ರೀಡೆ; ಸುತ್ತಲೂ ಗೋಪಿಯರು ಬಳಸಿರಲು ಪರಿವೇಷದ ನಡುವಣ ಚಂದ್ರನಂತಿದ್ದ ಕೃಷ್ಣ ಕೊಳಲನ್ನು ಊದಿದನಂತೆ. ಅದರ ವರ್ಣನೆ ಹೀಗೆ:

ರಸಭಾವಂ ಪೆರತೋಜೆ ಬೇಱೆ ಜತಿ ಮತ್ತೊಂದಿಂಪಪೂರ್ವಂ ನಯಂ
ಪೊಸತೆಂಬಂತಿರೆ ನಾಳಿಕೇರರಸಧಾರಾವೃಷ್ಟಿ ಜೇನೆಯ್ಯಸೋ|
ನೆ ಸುಧಾಸಾರವಿದೆತ್ತಣಿಂ ಪಸರಿಸಿತ್ತೆಂಬಂತು ದೈತ್ಯಾರಿ ಬಾ
ಜಿಸಿದಂ ಬಣ್ಣಿಸೆ ವಾಸವಂ ಮಧುರನಾದಾವಾಸವಂ ವಾಸವಂ||

ಆ ಕೊಳಲಿನ ಇನಿದನಿಯನ್ನು ಕೇಳಿ ಇಂದ್ರನಿಗೆ ಸಾವಿರ ಕಣ್ಣುಗಳ ಬದಲು ಸಾವಿರ ಕಿವಿಗಳಿದ್ದರೆ ಚೆನ್ನಾಗಿತ್ತಲ್ಲ ಎಂಬ ಭಾವನೆ ಬಂತಂತೆ. ಸುತ್ತುಗಟ್ಟಿದ ಗೋಪಿಯರು ನರ್ತಿಸಿದ ರೀವಿ ಹೀಗೆ :

ಇನಿಸಂ ಕೀಬ್ಮಾಡಿ ಭೃಂಗೀರುತಿಯನಿಟಿಸಿ ಪುಷ್ಪಾಯುಧಜ್ಯಾಲತಾನಿ
ಸ್ವನಮಂ ವಾಣೀವಿಪಂಚೀರವಮನಲಿದು ಗೇಯಸ್ವನಂ ಪೂಣ್ಮೆ ಗೋವಿಂ|
ದನೆ ನಾನಾರೀತಿಯಿಂ ಕತ್ತುರಿಯ ಸೆಳೆಯನಲ್ಲಾಡಿದೊಂದಂದಿಂದಂ ವಾ
ಸನೆಯಾದತ್ತೆಂಬಿನಂ ಪಾಡಿದುದೆಸೆಯೆ ನಟದ್ಗೋಪಕಾಂತಾಕದಂಬಂ||

ಈ ನಟಿಯಂತರಂಗಮೆ ಮುಕುಂದನ ಚಿತ್ತಮೆ ಬಲ್ಲುದೀಕೆಗಿಂ
ತೀ ನಯದಿಂದೆ ನರ್ತಿಪುದನೆಂಬಿನೆಗಂ ರಸಭಾವ ರಮ್ಯಸಂ|
ಸ್ಥಾನಕ ನೃತ್ಯಮಾ ಪರಮತತ್ವಸುಖಕ್ಕೆಣೆಯಾಗಿ ತೋಱೆ ಗೋ
ಪೀನಟಿ ತೊಱೆದಳ್ ಮಿಸುಗುವೋಲೆಯ ತೂಕಮೆ ತೋಱೆ ನೃತ್ಯಮಂ||

ಈ ರಾಸಕ್ರೀಡೆಯ ಮನೋಹರವಾದ ವಿವಿಧ ವಿನೋದಗಳನ್ನು ರುದ್ರಭಟ್ಟನು ಮೈತುಂಬಿ ವರ್ಣಿಸಿದ್ದಾನೆ. ಇದರಲ್ಲಿ ಇವನ ಕವಿತಾಶಕ್ತಿ ತಕ್ಕಮಟ್ಟಿಗೆ ಅರಳಿದೆ.

ಗೋಕುಲದಲ್ಲಿ ಹೀಗೆ ಬೆಳೆಯುತ್ತಿದ್ದ ಕೃಷ್ಣನ ಸುದ್ದಿಯನ್ನು ಕೇಳಿ ಅವನನ್ನು ಹೇಗಾದರೂ ಕೊಲ್ಲಬೇಕೆಂಬ ಸಂಕಲ್ಪದಿಂದ ಕಂಸನು ತನ್ನ ಪಟ್ಟಣದಲ್ಲಿ ಮಾಡುವ ಬಿಲ್ಲಿನ ಹಬ್ಬಕ್ಕೆ ಕೃಷ್ಣನೂ ಬಲರಾಮನೂ ಬರಬೇಕೆಂದು ಅಕ್ರೂರನೊಡನೆ ಹೇಳಿ ಕಳುಹಿಸುತ್ತಾನೆ. ಪರಮಭಾಗವತನಾದ ಅಕ್ರೂರನು ನಂದಗೋಪನನ್ನೂ ಯಶೋದೆಯನ್ನೂ ಹೇಗೋ ಒಪ್ಪಿಸಿ ರಾಮಕೃಷ್ಣರನ್ನು ಗೋಕುಲದಿಂದ ಕರೆತರುತ್ತಾನೆ. ರಾಮಕೃಷ್ಣರು ಮಧುರಾಪುರಕ್ಕೆ ಬಂದು ಕಂಸನು ತಮ್ಮನ್ನು ಕೊಲ್ಲುವುದಕ್ಕಾಗಿ ಹೂಡಿದ ತಂತ್ರಗಳೆಲ್ಲವನ್ನೂ ಭಂಗಿಸಿ ಅರಮನೆಯನ್ನು ಪ್ರವೇಶಿಸುತ್ತಾರೆ. ಚಾಣೂರನೇ ಮುಂತಾದ ಮಲ್ಲರು ದ್ವಂದ್ವಯುದ್ಧದಲ್ಲಿ ಕೃಷ್ಣನನ್ನು ಕೊಲ್ಲಲು ಪ್ರಯತ್ನಿಸಿ ಕೃಷ್ಣನಿಂದಲೇ ಹತರಾಗುತ್ತಾರೆ. ಇವರ ಕಾಳಗವನ್ನು ಎತ್ತರವಾದ ಸ್ಥಳದಲ್ಲಿ ಕುಳಿತು ನೋಡುತ್ತಿದ್ದ ಕಂಸನನ್ನು ಕೃಷ್ಣ,

ಪ್ರಕಟಂ ಸಿಂಹಸ್ಫುರಲ್ಲಂಘನಮೆಸೆಯೆ ತವಂಗಕ್ಕೆ ಧೀಂಕಿಟ್ಟು ಕೃಷ್ಣಂ
ಮಕುಟಾಗ್ರಾಸ್ಫಾಲನಂಗೆಯ್ದೆಳೆ ರವಿಯನಾ ರಾಹುವೀಂಟಿತ್ತನಲ್ ಕಾ|
ತುಕಮಾಯ್ತೆಂದಭ್ರದೊಳ್ ಬೊಬ್ಬಿಱಿಯೆ ದಿವಿಜರಾ ಮಾಡದಿಂ ಕಂಸನಂ ಮ
ಲ್ಲಕಳಕ್ಕೆತ್ತಿಕ್ಕಿ ತಾಂ ಮೇಲೆಬಿಗಿದನೆಬಿಗಲ್ ಸ್ವರ್ಗದಿಂ ಪುಷ್ಪವರ್ಷಂ||

ಹೀಗೆ ಕೃಷ್ಣನು ಕಂಸನನ್ನು ಸಂಹಾರಮಾಡಿ ವಸುದೇವ ದೇವಕಿಯರನ್ನು ಸೆರೆಯಿಂದ ಬಿಡಿಸಿ ಅವರಿಗೆ ಸಂತೋಷವನ್ನುಂಟುಮಾಡಿದನು.

ಕೊನೆಯದಾಗಿ ಕೃಷ್ಣನಿಂದ ನಡೆದ ಶಿಶುಪಾಲವಧೆಯನ್ನು ನೋಡಬಹುದು. ಧರ್ಮರಾಜನು ಕೈಕೊಂಡು ಮಾಡಿದ ರಾಜಸೂಯ ಯಜ್ಞದಲ್ಲಿ ಅಗ್ರಪೂಜೆಗೆ ಅರ್ಹನಾದವನು ಕೃಷ್ಣನೊಬ್ಬನೇ ಎಂದು ಭೀಷ್ಮಾದಿಗಳು ಒಪ್ಪಿ ಅವನಿಗೆ ಅಗ್ರಪೂಜೆಯ ಗೌರವವನ್ನು ಸಲ್ಲಿಸುತ್ತಾರೆ. ವಾದ್ಯಗಳು ಮೊಳಗುತ್ತಿರಲು ಚಿನ್ನದ ತಟ್ಟೆಯಲ್ಲಿ ಸಹದೇವನು ಹರಿಗೆ ಅಗ್ರಪೂಜೆಯನ್ನು ಎತ್ತಿದಾಗ ಶಿಶುಪಾಲನಿಗೆ ಕಿಚ್ಚಿನಂತಹ ಕೋಪ ಪ್ರಜ್ವಲಿಸಿತು:

ದಾರುಣಕೋಪವಹ್ನಿ ವಿಕಟಭ್ರುಕುಟೀಕೃತಧೂಮಲೇಖೆ ದಂ
ಷ್ಟ್ರಾರುಚಿವಿಸ್ಫುಲಿಂಗನಿವಹಂ ರಸನಾಶಿಖಿ ದಳ್ಳಿಸಲ್ ಜಗ|
ನ್ಮಾರಣಹೋಮಕುಂಡಮೆನೆ ತುಂಡಗುಹಾಂತರವುರ್ಬಿಸಲ್ಕೆ ದು
ರ್ವಾರ ಕಠೋರವಾಕ್ಛಟಚಟತ್ಕೃತಮುತ್ಕಟವಾಯ್ತು ಚೈದ್ಯನಾ||

ಶಿಶುಪಾಲನು ಧರ್ಮರಾಜ ಭೀಷ್ಮಾದಿಗಳನ್ನು ನಿಂದಿಸಿ ಕೃಷ್ಣನ ಕಡೆಗೆ ತಿರುಗಿ ಅವನು ಎತ್ತಿದ ದಶಾವತಾರಗಳ ಡೊಂಬರಾಟವನ್ನು ಪರಿಹಾಸಮಾಡಿ ತೆಗಳುತ್ತಾನೆ.

ಭುವನಾಪಹಾಸ್ಯಮೆನಲ
ರ್ಣವದೊಳ್ ನೀಂ ಮತ್ಸ್ಯನಾಗಲಾನಂದು ಸಮು |
ದ್ಭವಿಸಿದೆನಪ್ಪೊಡದಂ ಗಾ
ಣವಿಕ್ಕಿ ಪಿಡಿದೆನ್ನ ಬಾಣಸಕ್ಕೊಪ್ಪಿಸೆನೇ ||

ನೀಂ ಪೆಸರ ಪಂದಿಯಾದಂ
ದಾಂ ಪುಟ್ಟಿದೆನಪ್ಪೊಡಂದೆ ಬೇಂಟೆಯನೆವದಿಂ |
ದಂ ಪಿಡಿದು ತಂದು ಪಂದಿಗ
ಲಂಪಿಂ ಸಂಬರಮನಱೆಯಿಸದೆ ಮಾಣ್ಬಪೆನೇ ||

"ಕೃಷ್ಣನೇ, ನಿನ್ನಂತಹ ಶೂರರು ಯಾರಾದರೂ ಉಂಟೇ ಲೋಕದಲ್ಲಿ? ಹೆಂಗಸರನ್ನೂ ಕತ್ತೆಯನ್ನೂ ಎತ್ತನ್ನೂ ಕೊಂದ ನೀನು ಮಹಾ ಶೂರನೇ ಸರಿ, ಹಾವಾಡಿಗರಂತೆ ಹಾವನ್ನು ಹಿಡಿದು ನೀನು ಸುಭಟನಾದೆಯಾ?" ಎಂದು ನಾನಾ ರೀತಿಯಾಗಿ ತೆಗಳಿ ಮಾತನಾಡಿದಾಗ ನೆರೆದ ಸಭೆಯಲ್ಲಿ ಕೋಲಾಹಲವುಂಟಾಯಿತು. ಕೃಷ್ಣ ಕೋಪಗರ್ಭಿತವಾದ ನಗುವಿನಿಂದ ಶಿಶುಪಾಲನಿಗೆ:

ಎನಗೆ ನಿಜಜನನಿ ಕೈಮುಗಿ
ದು ನೂಱು ಸೂೞ್ವರಮುಪೇಂದ್ರ ಶಿಶುಪಾಲನ ಪೊ |
ಲ್ಲನುಡಿಗೆ ಸೈರಿಪುದೆನಲಂ
ದಿನಮಾತಂ ಸಲಿಸಲಿನ್ನೆಗಂ ಸೈರಿಸಿದೆಂ ||

ತೀವಿದುದು ಶಪನಶತವಿಂ
ತೀವಿದುದದಱೊಡನೆ ಚೈದ್ಯ ನಿನ್ನಾಯುಷ್ಯಂ |
ತೀವುಗುವಿಗಾಗಳೆ ನಿನ್ನ ವ
ಧೂವರ್ಗದ ರೋದನಸ್ವನಂ ದಿಕ್ತಟದೊಳ್ ||

ಎಂದು ಹೇಳುತ್ತ ನಿಂದಿಸಿದ ನಾಲಗೆಯನ್ನು ತಕ್ಷಣ ನಿಲ್ಲಿಸುತ್ತೇನೆಂದು ಅರ್ಘ್ಯದ ತಟ್ಟೆಗೆ ಕೈಚಾಚಿ ಕೃಷ್ಣನು ಅದನ್ನು ತಿರುಗಿಸಿ ಬೀಸಿಬಿಡಲು:

ಶಿರವಾಕಾಶತಳಕ್ಕೆ ಪಾಱೆ ಗಳರಂಧ್ರೋದ್ದೇಶದಿಂ ಪಾಯ್ವ ನಿ
ರ್ಭರ ರಕ್ತೋನ್ಮುಖಧಾರೆ ವಾರಿಜಭವಾಂಡಕ್ಕೆಯ್ದಿ ತದ್ಬ್ರಹ್ಮವಿ |
ಷ್ಟರಪದ್ಮಾರುಣನಾಳದಂಡಮೆನಿಸಿತ್ತತ್ತಟ್ಟೆ ಘೋಟಿಟ್ಟುಮು
ರ್ವರೆಯೊಳ್ ತೊಟ್ಟನೆ ಬಿಟ್ಟು ಬೀೞ್ವತೆಱದಿಂ ಬಿದ್ದತ್ತು ಚೇದೀಶನಾ ||

ಹೀಗೆ ಶಿಶುಪಾಲನ ಮಸ್ತಕ ನೆಲಕ್ಕೆ ಬಿದ್ದು ಮಣ್ಣುಪಾಲಾಯಿತು. ಕೃಷ್ಣನು ಶಿಶುಪಾಲನ ತಾಯಿಗೆ ಕೊಟ್ಟ ಮಾತನ್ನು ನಡೆಸಿ ರಾಜಸೂಯಾ ಯಾಗವನ್ನು ಸಫಲಗೊಳಿಸಿ ನಂಬಿದ ಭಕ್ತರಾದ ಪಾಂಡವರನ್ನು ಉದ್ಧರಿಸಿದನು.

ರುದ್ರಭಟ್ಟನ ದೃಷ್ಟಿಯಲ್ಲಿ ಶ್ರೀ ಕಷ್ಣನು ಮಹಾಮಹಿಮನು, ಅತರ್ಕ್ಯವಾದ ಪರಾಕ್ರಮವುಳ್ಳವನು, ಅವನೇ ಪರಾತ್ಪರ ವಸ್ತು. ಆತನಿಗಿಂತ ಮಿಗಿಲಾದ ದೇವತೆಗಳು ಯಾರೂ ಇಲ್ಲ. ಅವನ ಸ್ತುತಿ ಮುಕ್ತಿದಾಯಕ. ಭೂಭಾರವನ್ನು ಕಡಿಮೆ ಮಾಡಲೋಸುಗ ವೈಕುಂಠದಿಂದಿಳಿದು ಬಂದು ನೆಲದಮೇಲೆ ಮಾನವರಲ್ಲಿ ಮಾನವನಾಗಿ ಓಡಾಡಿದ ಶ್ರೀ ಮೂರ್ತಿಯೇ ಶ್ರೀ ಕೃಷ್ಣನು. ದುಷ್ಟನಿಗ್ರಹ, ಶಿಷ್ಟಪರಿಪಾಲನೆ ಅವನ ಕಾರ್ಯ. ಶ್ರೀ ಕೃಷ್ಣನ ಚರಿತ್ರೆಯನ್ನು ಭಕ್ತಿಭಾವದಿಂದ ಪುಲಕಿತನಾಗಿ ರುದ್ರಭಟ್ಟನು ರಮ್ಯವಾಗಿ ರಚಿಸಿದ್ದಾನೆ.

ರುದ್ರಭಟ್ಟನ ಶೈಲಿ ಬಹಳ ಪ್ರೌಢವಾದುದು. ಇದುವರೆಗೆ ಇಲ್ಲಿ ಓದಿರುವ ಪದ್ಯಗಳಿಂದಲೇ ಇದು ವ್ಯಕ್ತವಾಗಿರಬೇಕು. ದೀರ್ಘವಾದ ಸಮಾಸಪದಗಳೂ ಅಪೂರ್ವವಾದ ಸಂಸ್ಕೃತ ಶಬ್ದಗಳೂ ಇವನ ಪದ್ಯಗಳ ತುಂಬ ಆನೆಗಳಂತೆ ಓಡಾಡುತ್ತಿವೆ. ಒಂದೊಂದು ಎಡೆಯಲ್ಲಿ ಮಾತ್ರ ತಿಳಿಯಾದ ಕನ್ನಡ ಪದಗಳನ್ನೇ ಬಳಸಿ ಅರ್ಥಕ್ಕೆ ಯಾರೂ ಕ್ಲೇಶಪಡಲಾಗದಂತೆ ಪದ್ಯಗಳನ್ನು ಬರೆಯಲೂ ಬಲ್ಲನು. ಕಾವ್ಯದ ತುಂಬ ಅಲ್ಲಲ್ಲಿ ಬರುವ ಹದಿನೆಂಟು ವರ್ಣನೆಗಳಲ್ಲಿಯೂ ಸಂದರ್ಭಗಳನ್ನು ಬೆಳಸಿ ನಿರೂಪಿಸುವುದರಲ್ಲಿಯೂ ರುದ್ರಭಟ್ಟನಿಗೆ ಸಾಕಷ್ಟು ಶಕ್ತಿಯಿದೆ. ಕನ್ನಡದ ಚಂಪೂ ಶೈಲಿಯಲ್ಲಿ ರುದ್ರಭಟ್ಟನು ತನ್ನ ಅಗ್ಗಳಿಕೆಯನ್ನು ತೋರಿಸಿದ್ದಾನೆ.

ಇವನ ಕಾವ್ಯವನ್ನು ಓದುತ್ತಿದ್ದರೆ ಹಿಂದಿನ ಕವಿಗಳಾದ ಪಂಪ, ರನ್ನ, ನಾಗಚಂದ್ರರ ನೆನಪು ಮನಸ್ಸಿನಲ್ಲಿ ಮರುಗೊಳಿಸಿ ಆ ಪೂರ್ವಸಾಹಿತ್ಯವನ್ನು ಕೊಂಚ ಮಟ್ಟಿಗೆ ತಿರುಗಿ ಪರಿಚಯಮಾಡಿಕೊಂಡಂತೆ ಆಗುತ್ತದೆ. ಪ್ರಾಚೀನ ಕವಿಗಳ ಪ್ರಭಾವ ರುದ್ರಭಟ್ಟನಲ್ಲಿ ಹೇರಳವಾಗಿ ಕಾಣುತ್ತದೆ. ಹಾಗೆಯೇ ಈಚಿನ ಕವಿಗಳಲ್ಲಿ ಇವನ ಪ್ರಭಾವವೂ ಕಾಣುತ್ತದೆ.

ಡಿ. ಎಲ್. ನರಸಿಂಹಾಚಾರ್

ಕನ್ನಡ ಧ್ವನ್ಯಾಲೋಕ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಅದು ಹಾಗಿರಲಿ; ವಾಕ್ಯದಿಂದ ರಸವು ವ್ಯಂಗ್ಯವಾಗುವ ಕಡೆಯನ್ನೇ ಬೇಕಾದರೂ ತೆಗೆದುಕೊಳ್ಳೋಣ. ಅಲ್ಲಿ ಕೂಡ ಗುಣಗಳಿಗೆ ಆಶ್ರಯವೆನಿಸುವಂತಹ ಯಾವ ನಿಯತವಾದ ಸಂಘಟನೆಯೂ ಇಲ್ಲವಲ್ಲ! ಆದುದರಿಂದ ಯಾವ ಸಂಘಟನಾ ನಿಯಮಕ್ಕೂ ಒಳಗಾಗದ, ಆದರೆ ವ್ಯಂಗ್ಯವಿಶೇಷಗಳಿಗೆ ಪೋಷಕಗಳಾದ, ಶಬ್ದಗಳನ್ನು ಮಾತ್ರ ಗುಣಗಳಿಗೆ ಆಶ್ರಯವೆನ್ನಬೇಕು.

ಇದಕ್ಕೆ ಇತರರು ಹೀಗೆ ವಾದಿಸಬಹುದು: 'ಮಾಧುರ್ಯಗುಣದಲ್ಲೇನೋ ಹೀಗೆ ಹೇಳುವುದಾದರೆ ಹೇಳಿಕೊಳ್ಳಿ. ಆದರೆ ಓಜೋಗುಣದಲ್ಲಿ ಸಂಘಟನಾ ನಿಯಮಕ್ಕೆ ಒಳಪಡದ ಶಬ್ದಗಳನ್ನು ಆಶ್ರಯವೆಂದು ಹೇಳುವುದು ಹೇಗೆ? ಎಲ್ಲಿಯಾದರೂ ಸಮಾಸವಿಲ್ಲದ ಶಬ್ದಸಂಘಟನೆಯಿಂದ ಓಜೋಗುಣವು ಹುಟ್ಟುವುದೆ?' ಎಂದು.

ನಮ್ಮ ಉತ್ತರವಿದು: 'ಪೂರ್ವಪ್ರಸಿದ್ಧಿಯೆಂಬ ಗ್ರಹವು ನಿಮಗೆ ಹಿಡಿದಿದ್ದರೆ ನಾವು ಏನೂ ಹೇಳುವ ಹಾಗಿಲ್ಲ. ಹಾಗಿಲ್ಲದಿದ್ದರೆ, ಅಲ್ಲಿಯೂ ಏಕಾಗಬಾರದೆಂದೇ ಕೇಳುತ್ತೇವೆ. ಸಮಾಸವಿಲ್ಲದ ಶಬ್ದಸಂಘಟನೆಯು ಓಜಸ್ಸಿಗೆ ಆಶ್ರಯವೇಕಾಗ ಬಾರದು? ನಾವು ಮೊದಲೇ ಹೇಳಲಿಲ್ಲವೆ—ಓಜಸ್ಸೆಂದರೆ ಬೇರೇನೂ ಅಲ್ಲ; ರೌದ್ರವೇ ಮೊದಲಾದ ರಸಗಳನ್ನು ಪ್ರಕಾಶಿಸಬಲ್ಲ ಕಾವ್ಯದ ದೀಪ್ತಿಯೇ ಅದು, ಎಂದು? ಆ ಓಜಸ್ಸು ಸಮಾಸವಿಲ್ಲದ ಸಂಘಟನೆಯಲ್ಲಿಯೂ ಇದ್ದರೆ ತಪ್ಪೇನು? ಅದರಿಂದ ಸೌಂದರ್ಯಲೋಪವಾವುದೂ ಸಹೃದಯರಾದವರ ಹೃದಯಕ್ಕೆ ಭಾಸವಾಗುವುದಿಲ್ಲ. ಆದುದರಿಂದ ನಿಯತ ಸಂಘಟನೆಗೊಳಪಡದ ಶಬ್ದಗಳನ್ನೇ ಗುಣಗಳಿಗಾಶ್ರಯವೆನ್ನುವುದರಿಂದ ಯಾವ ಹಾನಿಯೂ ಇಲ್ಲ. ಅಷ್ಟೇ ಅಲ್ಲದೆ, ಕಣ್ಣೇ ಮೊದಲಾದ ಇಂದ್ರಿಯಗಳಿಗೆ ತಮ್ಮ ತಮ್ಮ ಪ್ರತ್ಯಕ್ಷವಿಷಯವು ಹೇಗೆ ನಿಯತವಾಗಿರುವುದೋ, ಹಾಗೆಯೇ ಗುಣಗಳಿಗೂ ತಮ್ಮ ತಮ್ಮ ರಸವಿಷಯವು ನಿರ್ದಿಷ್ಟವಾಗಿಯೇ ಇರುವುದು. ಈ ವಿಷಯ ನಿಯಮಕ್ಕೆ ಯಾವಾಗಲೂ ಭಂಗ ಬರುವುದಿಲ್ಲ. ಆದುದರಿಂದ ಸಂಘಟನೆಯೇ ಬೇರೆ, ಗುಣಗಳೇ ಬೇರೆ. ಸಂಘಟನೆಯನ್ನಾಶ್ರಯಿಸಿಕೊಂಡೇ ಗುಣಗಳಿರುತ್ತವೆಂದರೆ ಇದನ್ನೇ ಹೇಳಿದಂತಾಗುವುದಿಲ್ಲ. ಅಥವಾ ರಸಾನುಗುಣವಾಗಿ ಶಬ್ದಗಳು ಸಂಘಟನೆಗಳನ್ನು ತಳೆಯುವುದನ್ನೇ 'ಗುಣ'ವೆಂದು ಹೇಳಿದರೂ ಹೇಳಬಹುದು.'

ಪೂರ್ವಪಕ್ಷಕಾರರು ಇನ್ನೂ ಒಂದು ಮಾತನ್ನು ಹೇಳಿದ್ದಾರೆ: 'ಸಂಘಟನೆಯು ಅನಿಯತ ವಿಷಯವಾಗುವುದಾದರೆ, ಗುಣಗಳೂ ಅನಿಯತ ವಿಷಯಗಳೇ ಆಗುತ್ತವೆ—ಲಕ್ಷ್ಯಗಳಲ್ಲಿ ಸಾಂಕರ್ಯ ಬರುವುದರಿಂದ', ಎಂದು. ಅದಕ್ಕೆ ನಾವು ಹೇಳುವುದಿಷ್ಟೆ: 'ನಿಮ್ಮ ಪೂರ್ವಾಗ್ರಹದೋಷದಿಂದ ಲಕ್ಷ್ಯಗಳಲ್ಲಿ ವೈರೂಪ್ಯ ಕಂಡರೆ, ಕಂಡುಕೊಳ್ಳಲಿ!' ಎಂದು. 'ಸಹೃದಯರಿಗೆ ಆ ಲಕ್ಷ್ಯಗಳಲ್ಲಿ ಸೌಂದರ್ಯಹಾನಿಯು ಕಾಣದೆ ಹೋಗುವುದು ಹೇಗೆ?' ಎಂದು ಮತ್ತೆ ಕೇಳಿದರೆ, 'ಕವಿಪ್ರತಿಭೆಯ ಪ್ರಭಾವದಿಂದ' ಎಂದು ನಾವು ಉತ್ತರಕೊಡುತ್ತೇವೆ. ದೋಷಗಳಲ್ಲಿ ಎರಡು ಬಗೆ—ಕವಿಯ ವ್ಯುತ್ಪತ್ತಿಯ ಕೊರತೆಯಿಂದಾದುದು ಮತ್ತು ಕವಿಯ ಪ್ರತಿಭೆಯ ಕೊರತೆಯಿಂದಾದುದು, ಎಂಬುದಾಗಿ. ಇವುಗಳಲ್ಲಿ ಅವ್ಯುತ್ಪತ್ತಿಯಿಂದಾದ ದೋಷವು ಪ್ರತಿಭೆಯಿಂದ ಮುಚ್ಚಿಹೋಗಿ ಒಮ್ಮೊಮ್ಮೆ ಲಕ್ಷ್ಯಕ್ಕೆ ಬಾರದಿರುವುದೂ ಉಂಟು. ಆದರೆ ಪ್ರತಿಭಾದಾರಿದ್ರ್ಯದಿಂದಾದ ದೋಷವು ಥಟ್ಟನೆ ಕಣ್ಣಿಗೆ ಬೀಳುತ್ತದೆ. ಇದನ್ನೇ ಕೆಳಗಿನ ಪರಿಕರಶ್ಲೋಕವು ಸಂಗ್ರಹವಾಗಿ ಹೇಳುತ್ತದೆ:

> **ಅವ್ಯುತ್ಪತ್ತಿಕೃತೋ ದೋಷಃ ಶಕ್ತ್ಯಾ ಸಂವ್ರಿಯತೇ ಕವೇಃ |**
> **ಯಸ್ತ್ವಶಕ್ತಿಕೃತಸ್ತಸ್ಯ ಸ ಝಟಿತ್ಯವಭಾಸತೇ ||**

ಇದಕ್ಕೆ ಉದಾಹರಣೆಗಳನ್ನು ನೋಡೋಣ: ಮಹಾಕವಿಗಳೂ ಕೂಡ ಉತ್ತಮರಾದ ದೇವತೆಗಳ ವಿಷಯದಲ್ಲಿ ಮನುಷ್ಯಪ್ರಸಿದ್ಧವಾದ ಸಂಭೋಗಶೃಂಗಾರವನ್ನು ಬಣ್ಣಿಸಿ ಅನೌಚಿತ್ಯದೋಷಕ್ಕೆ ಪಕ್ಕಾಗಿದ್ದರೂ, ಅವರ ಪ್ರತಿಭೆಯು ಆ ದೋಷವನ್ನು ಮರೆಸುವುದರಿಂದ ಅದು ಗ್ರಾಮ್ಯವೆಂದು ತೋರುವುದಿಲ್ಲ. **'ಕುಮಾರಸಂಭವ'** ದಲ್ಲಿರುವ ದೇವೀಸಂಭೋಗವರ್ಣನೆಯೇ ಇದಕ್ಕೆ ನಿದರ್ಶನ. ಇಂತಹ ಕಡೆಗಳಲ್ಲಿ ಔಚಿತ್ಯಕ್ಕೆ ಹೇಗೆ ಹಾನಿ ಬಂದಿಲ್ಲವೆಂಬುದನ್ನು ಮುಂದೆ ತೋರಿಸಲಾಗಿದೆ. ಪ್ರತಿಭೆಯು ದೋಷವನ್ನು ಮರೆಸಿದೆಯೋ ಇಲ್ಲವೋ ಎಂಬುದನ್ನು ಅನೇಕ ಸಮಾನ ಮತ್ತು ವಿಭಿನ್ನದೃಷ್ಟಾಂತಗಳ ಪರೀಕ್ಷೆಯಿಂದ ನಿರ್ಣಯಿಸಬೇಕು. ಹೇಗೆಂದರೆ, ಪ್ರತಿಭೆಯ ಕೊರತೆಯುಳ್ಳ ಕವಿಯೊಬ್ಬನು ಇಂತಹ ದೇವತೆಗಳ ಶೃಂಗಾರವನ್ನು ಚಿತ್ರಿಸಿದ್ದಿದ್ದರೆ ಅದು ಸ್ಪಷ್ಟವಾಗಿ ದೋಷವೆಂದೇ ಎದ್ದು ಕಾಣುತ್ತಿದ್ದಿತು.

ಮೇಲೆ ಹೇಳಲಾದ 'ಸಂಘಟನಾರೂಪವೇ ಗುಣಗಳು' ಎಂಬ ಪಕ್ಷದ ಪ್ರಕಾರ 'ಯೋ ಯಃ ಶಸ್ತ್ರಂ ಬಿಭರ್ತಿ—' ಮೊದಲಾದ ಉದಾಹರಣೆಗಳಲ್ಲಿ ಆಗಿರುವ ಸೌಂದರ್ಯಹಾನಿಯೇನು? 'ಯಾರೂ ಅರಿಯಲಾಗದಂತಹುದು' ಎಂದೇ ನಾವು ಆರೋಪಿಸುತ್ತೇವೆ. ಆದುದರಿಂದ ಸಂಘಟನೆಯು ಗುಣಗಳಿಗಿಂತ ಬೇರೆಯೇ

ಆಗಿರಲಿ, ಗುಣಗಳ ರೂಪವೇ ಆಗಿರಲಿ, ಸಂಘಟನೆಯ ನಿಯಮಕ್ಕೆ ಬೇರೊಂದು ಕಾರಣವನ್ನು ಹೇಳಲೇಬೇಕಾಗುತ್ತದಾದ ಕಾರಣ ಅದನ್ನೀಗ ವಿವರಿಸುತ್ತೇವೆ.

'ಹೇಳುವ ಮನುಷ್ಯ'[1]ನೆಂದರೆ ಕವಿಯಾಗಬಹುದು; ಅಥವಾ ಕವಿಕೃತವಾದ ಪಾತ್ರವಾಗಬಹುದು. ಕವಿಕೃತವಾದ ಪಾತ್ರವು ಸಹ ರಸಭಾವರಹಿತನಾಗಿರಬಹುದು ಅಥವಾ ರಸಭಾವಸಮನ್ವಿತನಾಗಿರಬಹುದು. ಹಾಗೆಯೇ ರಸವು ಕಥಾನಾಯಕನಲ್ಲಿ ಆಶ್ರಯವನ್ನು ಪಡೆಯಬಹುದು ಅಥವಾ ಪ್ರತಿನಾಯಕನನ್ನಾಶ್ರಯಿಸಬಹುದು. ಕಥಾನಾಯಕರಲ್ಲಿಯೂ 'ಧೀರೋದಾತ್ತ'ನೇ ಮೊದಲಾದ ಭೇದಗಳಂತೆ 'ಮುಖ್ಯ ನಾಯಕ' ಅಥವಾ 'ಉಪನಾಯಕ' ಇವೇ ಮೊದಲಾದ ವೈವಿಧ್ಯಗಳೂ ಇರುತ್ತವೆ. ಹಾಗೆಯೇ 'ಹೇಳಬೇಕಾದ ವಿಷಯ' ಎಂಬುದು ಧ್ವನ್ಯಾತ್ಮಕವಾದ ರಸಕ್ಕೆ ಇಲ್ಲವೆ ರಸಾಭಾಸಕ್ಕೆ ಅಂಗವಾಗಬಹುದು; ರಂಗಸ್ಥಳದ ಮೇಲೆ ಅಭಿನಯಯೋಗ್ಯವಾಗಿರಬಹುದು ಅಥವಾ ಇಲ್ಲದಿರಬಹುದು; ಉತ್ತಮ ಪಾತ್ರಗಳನ್ನು ಕುರಿತಿರಬಹುದು ಇಲ್ಲವೆ ಮಧ್ಯಮಾಧಮ ಪಾತ್ರಗಳನ್ನು ಕುರಿತಿರಬಹುದು; ಹೀಗೆ ಇದೂ ಕೂಡ ಬಹು ಪ್ರಕಾರಗಳನ್ನೊಳಗೊಳ್ಳುತ್ತದೆ. ಇವುಗಳ ಪೈಕಿ, ರಸಭಾವಶೂನ್ಯನಾದ ಕವಿಯು ಯಾವಾಗ 'ಹೇಳುವವ'ನಾಗುತ್ತಾನೋ ಆಗ ಸಂಘಟನೆಗೆ ಯಾವ ನಿಯಮವೂ ಇರುವುದಿಲ್ಲ; ರಸಭಾವರಹಿತನಾದ ಕವಿಕೃತ ಪಾತ್ರವು 'ಹೇಳುವವ'ನಾದಾಗಲೂ ಅಷ್ಟೆ. ಆದರೆ ಯಾವಾಗ 'ಹೇಳುವವ'ನು ರಸಭಾವಸಮನ್ವಿತನಾದ ಕವಿ ಇಲ್ಲವೆ ಕವಿನಿರ್ಮಿತ ಪಾತ್ರನಾಗಿ, ರಸವು ಕೂಡ ಪ್ರಧಾನವೆನಿಸುವಂತೆ ಧ್ವನ್ಯಾತ್ಮಕವಾಗಿರುವುದೋ, ಆಗ ನಿಯತವಾಗಿ ಸಮಾಸವಿಲ್ಲದ ಮತ್ತು ಅಲ್ಪ ಸಮಾಸವಿರುವ ಸಂಘಟನೆಗಳು ಮಾತ್ರ ಬರುವುವು. ಅದರಲ್ಲಿಯೂ ಕರುಣರಸ ಮತ್ತು ವಿಪ್ರಲಂಭಶೃಂಗಾರರಸಗಳಿರುವೆಡೆಯಲ್ಲಿ ಸಮಾಸವಿಲ್ಲದ ಸಂಘಟನೆಯೊಂದೇ ಬರುವುದು. ಹೇಗೆಂದರೆ, ಅದಕ್ಕೆ ಕಾರಣವಿಷ್ಟೆ: ರಸವನ್ನೇ ಪ್ರಧಾನವಾಗಿ ಪ್ರತಿಪಾದಿಸಬೇಕಾದರೆ, ರಸಪ್ರತೀತಿಗೆ ವಿಘ್ನಕಾರಿಗಳಾದ ಮತ್ತು ವಿರೋಧಿಗಳಾದ ಅಂಶಗಳನ್ನೆಲ್ಲ ಸರ್ವಥಾ ಪರಿಹರಿಸಿಕೊಳ್ಳಬೇಕಾಗುತ್ತದೆ. ಹೀಗಿರುವಲ್ಲಿ ದೀರ್ಘಸಮಾಸದ ಸಂಘಟನೆಯು ಬಂದರೆ, ಸಮಾಸಗಳನ್ನು ಅನೇಕಪ್ರಕಾರಗಳಲ್ಲಿ ಅರ್ಥಮಾಡಿಕೊಳ್ಳುವ ಸಂಭವವಿರುವುದರಿಂದ, ಅದು ರಸಪ್ರತೀತಿಗೆ ಅಡ್ಡವಾಗಿಯೇ ನಿಲ್ಲುತ್ತದೆ. ಆದುದರಿಂದ ಅದರಲ್ಲಿ ಕವಿಗೆ ವಿಶೇಷವಾದ ಆಸಕ್ತಿಯಿದ್ದರೆ ಶೋಭಿಸುವುದಿಲ್ಲ. ಅದರಲ್ಲಿಯೂ ಅಭಿನಯಕ್ಕಾಗಿ ಬರೆದ ಕಾವ್ಯದಲ್ಲಿ ಖಂಡಿತ ಒಪ್ಪುವುದಿಲ್ಲ; ಅಭಿನಯಕ್ಕಾಗಿ ಬರೆಯದ ಎಂದರೆ ಶ್ರವ್ಯಕಾವ್ಯದಲ್ಲಿಯೂ ಕೂಡ ಕರುಣ ಮತ್ತು ವಿಪ್ರಲಂಭಶೃಂಗಾರ

[1] ಹಿಂದೆ ೬ ನೆ ಕಾರಿಕೆಯ ಉತ್ತರಾರ್ಧವನ್ನು ನೋಡಿ.

ಗಳನ್ನು ಪ್ರತಿಪಾದಿಸುವಾಗ ಇದು ಸ್ವಲ್ಪವೂ ಸರಿಯಲ್ಲ. ಅವೆರಡು ರಸಗಳು ಉಳಿದೆಲ್ಲ ರಸಗಳಿಗಿಂತಲೂ ಸುಕುಮಾರಗಳಾದ ಕಾರಣ, ಶಬ್ದಾರ್ಥಗಳಲ್ಲಿ ಎಳ್ಳಷ್ಟು ಅಸ್ಪಷ್ಟತೆ ಯುಂಟಾದರೂ ರಸಪ್ರತೀತಿಯು ಕುಂಟುತ್ತದೆ. ರೌದ್ರವೇ ಮೊದಲಾದ ಇತರ ರಸಗಳನ್ನು ಪ್ರತಿಪಾದಿಸುವಾಗ ಮಧ್ಯಮಸಮಾಸದ ಸಂಘಟನೆಯನ್ನು ಸರ್ವಥಾ ಬಿಡುವ ಕಾರಣವಿಲ್ಲ; ಒಮ್ಮೊಮ್ಮೆ ಧೀರೋದ್ಧತನಾಯಕನ ವ್ಯಾಪಾರಗಳನ್ನು ವರ್ಣಿಸುವ ಸಮಯದಲ್ಲಿ ದೀರ್ಘಸಮಾಸದ ಸಂಘಟನೆಯನ್ನೂ ಕೂಡ ಸಂಪೂರ್ಣ ವಾಗಿ ಬಿಟ್ಟುಬಿಡಬೇಕಾಗಿಲ್ಲ; ಏಕೆಂದರೆ, ಇಲ್ಲಿ ಈ ಸಂಘಟನೆಗಳು ಕೂಡ ನಿರ್ದಿಷ್ಟ ರಸವನ್ನು ಪೋಷಿಸುವ ವಾಚ್ಯಾಂಶಕ್ಕಿಂತ ಯಾವ ಗುಣದಲ್ಲೂ ಕಡಿಮೆಯೆನಿಸು ವುದಿಲ್ಲ. ಈ ಎಲ್ಲ ಬಗೆಯ ಸಂಘಟನೆಗಳಲ್ಲಿಯೂ 'ಪ್ರಸಾದ'ಗುಣವು ಮಾತ್ರ ಒಂದೇ ಸಮನಾಗಿ ಕಂಗೊಳಿಸುತ್ತದೆ. ಅದು ಎಲ್ಲ ರಸಗಳಂತೆ ಎಲ್ಲ ಸಂಘಟನೆಗಳಿಗೂ ಸಾಧಾರಣವಾದುದೆಂದು ಹಿಂದೆಯೇ ಹೇಳಲಾಯಿತು. ಪ್ರಸಾದಗುಣವಿಲ್ಲದೆ ಹೋದರೆ ಸಮಾಸವಿಲ್ಲದ ಸಂಘಟನೆಯು ಕೂಡ ಕರುಣ ಮತ್ತು ವಿಪ್ರಲಂಭಶೃಂಗಾರಗಳನ್ನು ಧ್ವನಿಸಲಾರದು. ಪ್ರಸಾದಗುಣವು ತುಂಬಿದ್ದರೆ ಮಧ್ಯಮಸಮಾಸದ ಸಂಘಟನೆಯೇ ಆದರೂ ಆ ರಸಗಳನ್ನು ಧ್ವನಿಸದೆ ಇರಲಾರದು. ಆದುದರಿಂದ ಎಲ್ಲೆಡೆಗಳಲ್ಲಿಯೂ ಪ್ರಸಾದಗುಣವನ್ನು ಅನುಸರಿಸಲೇಬೇಕು. ಆದುದರಿಂದಲೇ "**ಯೋ ಯಃ ಶಸ್ತ್ರಂ ಬಿಭರ್ತಿ**—" ಮೊದಲಾದ ಉದಾಹರಣೆಗಳಲ್ಲಿ ಓಜೋಗುಣವಿದೆಯೆಂದು ಹೇಳಲಿಷ್ಟ ವಿಲ್ಲದಿದ್ದರೆ, ಪ್ರಸಾದಗುಣವಿದೆಯೆಂದಾದರೂ ಹೇಳಬೇಕೇ ಹೊರತು, ಮಾಧುರ್ಯ ಗುಣವುಂಟೆನ್ನಲಾಗದು. ಹೀಗೆಂದರೂ ಸೌಂದರ್ಯಲೋಪಕ್ಕೆ ಅವಕಾಶವೇ ಇಲ್ಲ— ಅಭಿಪ್ರೇತವಾದ ರಸವು ಧ್ವನಿತವಾಗುವುದೆಂದು ಒಪ್ಪಲೇಬೇಕಾದುದರಿಂದ. ಆದಕಾರಣ, ಸಂಘಟನೆಯು ಗುಣಗಳಿಗಿಂತ ಬೇರೆಯಲ್ಲವೆನ್ನಲಿ, ಬೇರೆಯೇ ಎನ್ನಲಿ, ಮೇಲೆ ವಿವರಿಸಿದ 'ಔಚಿತ್ಯ'ದಿಂದ ಅದರ ವಿಷಯವು ನಿಯಮಿತವಾಗುವುದರಿಂದ, ಅದಕ್ಕೂ ರಸಗಳನ್ನು ಧ್ವನಿಸುವ ಸಾಮರ್ಥ್ಯವುಂಟು. ಇಲ್ಲಿಯವರೆಗೆ ರಸಾಭಿವ್ಯಕ್ತಿಗೆ ನಿಮಿತ್ತವಾದ ಸಂಘಟನೆಗೆ ಯಾವ ನಿಯಾಮಕವಾದ ಔಚಿತ್ಯವನ್ನು ಹೇಳಲಾಯಿತೋ, ಅದೇ ಗುಣಗಳಿಗೂ ನಿಯಾಮಕವಾದುದರಿಂದ, ಗುಣಗಳನ್ನಾಶ್ರಯಿಸಿಕೊಂಡೇ ಸಂಘಟನೆಯಿರುವುದೆಂದರೂ ನಮ್ಮ ಸಿದ್ಧಾಂತಕ್ಕೆ ಯಾವ ತೊಂದರೆಯೂ ಇಲ್ಲ.

ಕಾರಿಕೆ

ವಿಷಯಾಶ್ರಯಮಪ್ಯನ್ಯದೌಚಿತ್ಯಂ ತಾಂ ನಿಯಚ್ಛತಿ।
ಕಾವ್ಯಪ್ರಭೇದಾಶ್ರಯತಃ ಸ್ಥಿತಾ ಭೇದವತೀ ಹಿ ಸಾ ॥ ೭ ॥

ಅಲ್ಲದೆ ವಿಷಯದ ಔಚಿತ್ಯವೂ ಕೂಡ ಸಂಘಟನೆಗೆ ನಿಯಾಮಕವಾಗುತ್ತದೆ. ಕಾವ್ಯದ ಪ್ರಭೇದಗಳನ್ನು ಆಶ್ರಯಿಸುವುದರ ಮೂಲಕ ಸಂಘಟನೆಯಲ್ಲಿಯೂ ಬೇರೆ ಬೇರೆ ಬಗೆಗಳಾಗುತ್ತವೆ.

ವೃತ್ತಿ

'ಹೇಳುವವ'ನ ಮತ್ತು 'ಹೇಳುವುದ'ರ ಔಚಿತ್ಯದ ಜತೆಗೆ 'ವಿಷಯ'ದ ಔಚಿತ್ಯವೂ ಸಂಘಟನೆಯನ್ನು ನಿಯಮಿಸುತ್ತದೆ. ಹೇಗೆಂದರೆ ಕಾವ್ಯದಲ್ಲಿ ಅನೇಕ ಪ್ರಭೇದಗಳುಂಟು :—ಸಂಸ್ಕೃತ, ಪ್ರಾಕೃತ ಮತ್ತು ಅಪಭ್ರಂಶ ಭಾಷೆಗಳಲ್ಲಿ ರಚಿತವಾದ 'ಮುಕ್ತಕ', 'ಸಂದಾನಿತಕ', 'ವಿಶೇಷಕ', 'ಕಲಾಪಕ', 'ಕುಲಕ'ಗಳು ; 'ಪರ್ಯಾಯಬಂಧ', 'ಪರಿಕಥಾ', 'ಖಂಡಕಥಾ', 'ಸಕಲಕಥಾ', 'ಸರ್ಗಬಂಧ', 'ಅಭಿನೇಯಾರ್ಥ', 'ಆಖ್ಯಾಯಿಕಾ', 'ಕಥಾ', ಇತ್ಯಾದಿಗಳು. ಈ ಕಾವ್ಯ ಪ್ರಭೇದಗಳ ಆಶ್ರಯದಿಂದಲೂ ಸಂಘಟನೆಯಲ್ಲಿ ವೈಶಿಷ್ಟ್ಯವು ಬರುತ್ತದೆ:—ಮುಕ್ತಕಗಳಲ್ಲಿ ರಸಪ್ರತಿಪಾದನೆಗೆಂದೇ ಹೊರಟ ಕವಿಯು ರಸಾಶ್ರಿತವಾದ ಔಚಿತ್ಯವನ್ನು ಪಾಲಿಸುತ್ತಾನೆ. ಇದೇನೆಂಬುದನ್ನು ಆಗಲೇ ತೋರಿಸಲಾಯಿತು. ರಸದೃಷ್ಟಿಯಿಲ್ಲದೆಡೆಗಳಲ್ಲಿ ಕವಿಯು ಯಾವ ನಿಯಮವನ್ನೂ ಪಾಲಿಸಬೇಕಾಗಿಲ್ಲ.

ಪ್ರಬಂಧಗಳಲ್ಲಿ ಹೇಗೋ ಮುಕ್ತಕಗಳಲ್ಲಿಯೂ ಹಾಗೆಯೇ ಕವಿಗಳು ರಸಪ್ರತಿಪಾದನೆಯ ದೃಷ್ಟಿಯೊಂದನ್ನೇ ಇಟ್ಟುಕೊಂಡಿರುವುದನ್ನು ನೋಡಬಹುದು. ಉದಾಹರಣೆಗೆ ಅಮರುಕ ಕವಿಯ ಮುಕ್ತಕಗಳು ಶೃಂಗಾರರಸವನ್ನು ಸ್ರವಿಸುತ್ತಾ ಪ್ರಬಂಧಗಳಂತಿರುವುದು ಸುಪ್ರಸಿದ್ಧವಾಗಿಯೇ ಇದೆ. 'ಸಂದಾನಿತಕ'ವೇ ಮೊದಲಾದುವಲ್ಲಿ ವಿಕಟಬಂಧವೇ ಉಚಿತವಾಗುವುದರಿಂದ ಮಧ್ಯಮ ಸಮಾಸ ಮತ್ತು ದೀರ್ಘ ಸಮಾಸದ ಸಂಘಟನೆಗಳೇ ಬರುತ್ತವೆ. ಆದರೆ ಅವೇ ಒಂದು 'ಪ್ರಬಂಧ'ದ ಭಾಗಗಳಾಗಿ ಬಂದರೆ ಆಗ ಪ್ರಬಂಧಕ್ಕೆ ಅನ್ವಯಿಸುವ ಔಚಿತ್ಯವೇ ಅವಕ್ಕೂ ಅನ್ವಯಿಸುತ್ತದೆ. 'ಪರ್ಯಾಯ ಬಂಧ'ದಲ್ಲಿ ಸಮಾಸವಿಲ್ಲದ ಮತ್ತು ಮಧ್ಯಮ ಸಮಾಸದ ಸಂಘಟನೆಗಳು ಮಾತ್ರ ಬರುತ್ತವೆ. ಒಂದು ವೇಳೆ ಅರ್ಥದ ಔಚಿತ್ಯ ದೃಷ್ಟಿಯಿಂದ ದೀರ್ಘ ಸಮಾಸದ ಸಂಘಟನೆಯು ಬಂದರೂ, ಅಲ್ಲಿ ಸಹ 'ಪರುಷಾ' ಮತ್ತು 'ಗ್ರಾಮ್ಯಾ' ಎಂಬ 'ವೃತ್ತಿ'ಗಳನ್ನು ಪರಿತ್ಯಜಿಸಬೇಕಾಗುತ್ತದೆ. 'ಪರಿಕಥೆ'ಯಲ್ಲಿ ಮಾತ್ರ ಯಾವ ನಿರ್ಬಂಧವೂ ಇಲ್ಲ; ಏಕೆಂದರೆ ಅಲ್ಲಿ ಕಥೆಯ ಘಟನೆಗಳ ನಿರೂಪಣೆಯಿರುವುದೇ ಹೊರತು ರಸಪ್ರತಿಪಾದನೆಯು ಮುಖ್ಯ ಧ್ಯೇಯವಾಗಿರುವುದಿಲ್ಲ. ಪ್ರಾಕೃತ ಭಾಷೆಯಲ್ಲಿ ಪ್ರಸಿದ್ಧವಾದ 'ಖಂಡಕಥೆ' ಮತ್ತು 'ಸಕಲಕಥೆ'ಗಳಲ್ಲಿ 'ಕುಲಕ'ವೇ ಮೊದಲಾದುವು ಹೆಚ್ಚಾಗಿ ಬರುವುದರಿಂದ, ದೀರ್ಘ

ಸಮಾಸದ ಸಂಘಟನೆಯಾದರೂ ದೋಷವಿಲ್ಲ. 'ವೃತ್ತಿ'ಯು ಔಚಿತ್ಯವನ್ನು ರಸಗಳಿಗನುಗುಣವಾಗಿ ತೀರ್ಮಾನಿಸಬೇಕು. 'ಸರ್ಗಬಂಧ'ವು ಮುಖ್ಯವಾಗಿ ರಸಪ್ರತಿಪಾದನೆಗೆ ಹೊರಟಿದ್ದರೆ ರಸಾನುಗುಣವಾದ ಔಚಿತ್ಯವೇ ಅದರ ಸಂಘಟನೆಗೆ ನಿಯಾಮಕವಾಗುತ್ತದೆ; ಇಲ್ಲದಿದ್ದರೆ ಯಾವ ನಿಯಮವೂ ಇಲ್ಲ. ಈ ಎರಡು ಮಾರ್ಗಗಳಲ್ಲಿಯೂ 'ಸರ್ಗಬಂಧ'ವನ್ನು ಬರೆದಿರುವವರನ್ನೇನೋ ನೋಡಬಹುದಾದರೂ ರಸತಾತ್ಪರ್ಯವಿರುವುದೇ ಶ್ರೇಷ್ಠವಾದ ಮಾರ್ಗ. 'ಅಭಿನೇಯಾರ್ಥ' (ಅಥವಾ ನಾಟ್ಯ)ದಲ್ಲಿ ಮಾತ್ರ ಸರ್ವಥಾ ರಸವೊಂದರಲ್ಲಿಯೇ ತಾತ್ಪರ್ಯವಿರಬೇಕು. 'ಆಖ್ಯಾಯಿಕೆ' ಮತ್ತು 'ಕಥೆ'ಗಳು ಗದ್ಯದಲ್ಲಿಯೇ ವಿಶೇಷವಾಗಿ ರಚಿತವಾಗಿರುವುದರಿಂದಲೂ, ಗದ್ಯದಲ್ಲಿ ಛಂದೋಬಂಧಗಳಲ್ಲಿನ ನಿಯಮವು ಅನ್ವಯಿಸದೆ ಇರುವುದರಿಂದಲೂ, ಗದ್ಯದ ಸಂಘಟನೆಯ ನಿಯಮಗಳನ್ನು ಹಿಂದಿನವರು ಯಾರೂ ಹೇಳದೆ ಇದ್ದರೂ ಸಹ, ಈಗ ನಾವು ಸಂಕ್ಷೇಪವಾಗಿ ತೋರಿಸುತ್ತೇವೆ:

ಕಾರಿಕೆ

ಏತದ್ಯಥೋಕ್ತಮೌಚಿತ್ಯಮೇವ ತಸ್ಯಾ ನಿಯಾಮಕಮ್ ।
ಸರ್ವತ್ರ ಗದ್ಯಬನ್ಧೇಽಪಿ ಛನ್ದೋನಿಯಮವರ್ಜಿತೇ ॥ ೮ ॥

ಛಂದೋನಿಯಮಗಳಿಲ್ಲದ ಗದ್ಯಬಂಧದಲ್ಲಿಯೂ ಮೇಲೆ ಹೇಳಲಾದ ಔಚಿತ್ಯವೇ ಸಂಘಟನೆಗೆ ನಿಯಾಮಕ.

ವೃತ್ತಿ

ಗದ್ಯವು ಛಂದೋನಿಯಮಗಳಿಗೊಳಗಾಗದಿದ್ದರೂ, ಗದ್ಯದ ಸಂಘಟನೆಗೂ ಕೂಡ ಮೇಲೆ ಹೇಳಲಾದ ಔಚಿತ್ಯವೇ—ಎಂದರೆ 'ಹೇಳುವವನ' ಔಚಿತ್ಯ, 'ಹೇಳುವುದರ' ಔಚಿತ್ಯ ಮತ್ತು 'ವಿಷಯ'ದ ಔಚಿತ್ಯ—ನಿಯಾಮಕ. ಇಲ್ಲಿಯೂ ಸಹ ಕವಿಯಾಗಲಿ, ಕವಿನಿರ್ಮಿತನಾದ ನಾಯಕನಾಗಲಿ ರಸಭಾವರಹಿತನಾಗಿ 'ಹೇಳುವವ'ನಾದರೆ ಸಂಘಟನೆಗೆ ನಿಯಮವಿಲ್ಲ. ಆದರೆ 'ಹೇಳುವವನು' ರಸಭರಿತನಾದರೆ, ಹಿಂದೆ ಹೇಳಿದಂತೆ ಸಂಘಟನೆಯಲ್ಲಿ ನಿಯಮಗಳಿರುತ್ತವೆ. ಅದರಲ್ಲಿಯೂ ವಿಷಯದ ಔಚಿತ್ಯವು ಹೆಚ್ಚಿನದು. 'ಆಖ್ಯಾಯಿಕೆ' ಯಲ್ಲಿ ವಿಶೇಷವಾಗಿ ಮಧ್ಯಮಸಮಾಸದ ಮತ್ತು ದೀರ್ಘಸಮಾಸದ ಸಂಘಟನೆಗಳೇ ಇರುತ್ತವೆ. ಗದ್ಯವು ವಿಕಟ ಬಂಧದ ಆಶ್ರಯದಿಂದ ಸೌಂದರ್ಯವನ್ನು ತಳೆಯುವುದೇ ಅದಕ್ಕೆ ಕಾರಣ. ಮೇಲಾಗಿ ಆಖ್ಯಾಯಿಕೆಯಲ್ಲಿ ವಿಕಟಬಂಧದ ಪ್ರಕರ್ಷವೂ ಉಂಟು. 'ಕಥೆ'ಯಲ್ಲಿ ಮಾತ್ರ

ವಿಕಟಬಂಧದ ಪ್ರಾಚುರ್ಯವಿದ್ದರೂ ಗದ್ಯದಲ್ಲಿ ರಸಪ್ರತಿಪಾದನೆಯ ಔಚಿತ್ಯವನ್ನೇ ಅನುಸರಿಸಬೇಕು.

ಕಾರಿಕೆ

ರಸಬಂಧೋಕ್ತಮೌಚಿತ್ಯಂ ಭಾತಿ ಸರ್ವತ್ರ ಸಂಶ್ರಿತಾ।
ರಚನಾ ವಿಷಯಾಪೇಕ್ಷಂ ತತ್ತು ಕಿಂಚಿದ್ವಿಭೇದವತ್ ॥ ೯ ॥

ರಸಪ್ರತಿಪಾದನೆಯನ್ನು ಕುರಿತು ಹೇಳಿದ ಔಚಿತ್ಯವನ್ನು ಅನುಸರಿಸುವ ಸಂಘಟನೆಯು ಎಲ್ಲೆಡೆಗಳಲ್ಲಿಯೂ ಶೋಭಿಸುತ್ತದೆ. ಅದು ವಿಷಯದ ಔಚಿತ್ಯವನ್ನನುಸರಿಸುವುದರಿಂದ ಅಲ್ಪಸ್ವಲ್ಪ ಭೇದವನ್ನು ತಳೆಯುತ್ತದೆ.

ವೃತ್ತಿ

ಅಥವಾ ಪದ್ಯಬಂಧದಂತೆ ಗದ್ಯಬಂಧದಲ್ಲಿಯೂ ಸಂಘಟನೆಯು ರಸದ ಔಚಿತ್ಯವನ್ನೇ ಸರ್ವತ್ರ ಆಶ್ರಯಿಸುತ್ತದೆ. ಆದರೆ ವಿಷಯದ ವ್ಯತ್ಯಾಸದಿಂದ ಸ್ವಲ್ಪ ವೈಶಿಷ್ಟ್ಯವನ್ನೂ ಪಡೆಯುತ್ತದೆ; ಸಂಪೂರ್ಣವಾದ ವ್ಯತ್ಯಾಸವನ್ನಲ್ಲ. ಉದಾಹರಣೆಗೆ, ಗದ್ಯಬಂಧದಲ್ಲಿ ಕೂಡ, ಅದು ಆಖ್ಯಾಯಿಕೆಯೇ ಆಗಿದ್ದರೂ, ವಿಪ್ರಲಂಭಶೃಂಗಾರ ಮತ್ತು ಕರುಣರಸಗಳನ್ನು ಪ್ರತಿಪಾದಿಸುವಾಗ ಅತಿದೀರ್ಘಸಮಾಸದ ಸಂಘಟನೆಯು ಶೋಭಿಸುವುದಿಲ್ಲ. 'ರೌದ್ರ', 'ವೀರ' ಮೊದಲಾದ ರಸಗಳನ್ನು ವರ್ಣಿಸುವಾಗಲೂ ಕೂಡ ನಾಟಕಗಳಲ್ಲಿ ಸಮಾಸವಿಲ್ಲದ ಸಂಘಟನೆಯೇ ಬರುತ್ತದೆ. ವಿಷಯದ ಔಚಿತ್ಯವು ರಸದ ಔಚಿತ್ಯಕ್ಕಿಂತ ಬೆಲೆಯಲ್ಲಿ ಕಿರಿಯದೂ ಹೌದು; ಹಿರಿಯದೂ ಹೌದು. ಆಖ್ಯಾಯಿಕೆಯಲ್ಲಿ, ಶೃಂಗಾರಕರುಣಗಳನ್ನು ವರ್ಣಿಸುವಾಗಲೂ ಸಮಾಸವೇ ಇಲ್ಲದ ಸಂಘಟನೆಯು ಬರುವುದಿಲ್ಲ; ಹಾಗೆಯೇ ರೌದ್ರಾದಿಗಳನ್ನು ವರ್ಣಿಸುವಾಗಲೂ ನಾಟಕಾದಿಗಳಲ್ಲಿ ಅತಿದೀರ್ಘಸಮಾಸದ ಸಂಘಟನೆಯು ಬರುವುದೇ ಇಲ್ಲ. ಈ ರೀತಿಯಾಗಿ ಸಂಘಟನೆಯ ಪರಿಯನ್ನು ಊಹಿಸಿಕೊಳ್ಳಬೇಕು.

ಸಂಗ್ರಹಶ್ಲೋಕ[1]

ಇತಿ ಕಾವ್ಯಾರ್ಥವಿವೇಕೋ ಯೋಽಯಂ ಚೇತಶ್ಚಮತ್ಕೃತಿವಿಧಾಯೀ।
ಸೂರಿಭಿರನುಸೃತಸಾರೈರಸ್ಮದುಪಜ್ಞೋ ನ ವಿಸ್ಮಾರ್ಯಃ ॥

ಬುದ್ಧಿಗೆ ವಿಕಾಸವನ್ನು ಮಾಡುವಂತಹ ಈ ಕಾವ್ಯಾರ್ಥ ವಿವೇಕವನ್ನು ನಾವು ಹೀಗೆ ವಿಶದವಾಗಿ ವಿವರಿಸಿದ್ದೇವೆ. ಸಾರಗ್ರಾಹಿಗಳಾದ ಪಂಡಿತರು ಇದನ್ನೆಂದೂ ಮರೆಯಬಾರದು.

---

[1] ಇದು ಕೆಲವು ಪ್ರತಿಗಳಲ್ಲಿಲ್ಲ.

ಪ್ರಬಂಧಗತವಾದ ಅಲಕ್ಷ್ಯ-ಕ್ರಮ-ವ್ಯಂಗ್ಯ-ಧ್ವನಿಯು ರಾಮಾಯಣ, ಮಹಾಭಾರತ, ಮೊದಲಾದುವುಗಳಲ್ಲಿ ಪ್ರಕಾಶಿಸುತ್ತಿರುವುದು ಪ್ರಸಿದ್ಧವಾಗಿದೆಯಷ್ಟೆ! ಅದು ಹೇಗೆ ಪ್ರಕಾಶಿಸುತ್ತದೆಂಬುದನ್ನು ಈಗ ಪ್ರತಿಪಾದಿಸಲಾಗುತ್ತದೆ—

ಕಾರಿಕೆ

ವಿಭಾವಭಾವಾನುಭಾವಸಂಚಾರ್ಯೌಚಿತ್ಯಚಾರುಣಃ।
ವಿಧಿಃ ಕಥಾಶರೀರಸ್ಯ ವೃತ್ತಸ್ಯೋತ್ಪ್ರೇಕ್ಷಿತಸ್ಯ ವಾ ॥ ೧೦ ॥

ಇತಿವೃತ್ತವಶಾಯಾತಾಂ ತ್ಯಕ್ತ್ವಾನನುಗುಣಾಂ ಸ್ಥಿತಿಮ್।
ಉತ್ಪ್ರೇಕ್ಷ್ಯಾಪ್ಯಂತರಾಭೀಷ್ಟರಸೋಚಿತಕಥೋನ್ನಯಃ ॥ ೧೧ ॥

ಸಂಧಿಸಂಧ್ಯಂಗಘಟನಂ ರಸಾಭಿವ್ಯಕ್ತ್ಯಪೇಕ್ಷಯಾ।
ನ ತು ಕೇವಲಯಾ ಶಾಸ್ತ್ರಸ್ಥಿತಿಸಂಪಾದನೇಚ್ಛಯಾ ॥ ೧೨ ॥

ಉದ್ದೀಪನಪ್ರಶಮನೇ ಯಥಾವಸರಮನ್ತರಾ।
ರಸಸ್ಯಾರಬ್ಧವಿಶ್ರಾನ್ತೇರನುಸಂಧಾನಮಂಗಿನಃ ॥ ೧೩ ॥

ಅಲಂಕೃತೀನಾಂ ಶಕ್ತಾವಪ್ಯಾನುರೂಪ್ಯೇಣ ಯೋಜನಮ್।
ಪ್ರಬಂಧಸ್ಯ ರಸಾದೀನಾಂ ವ್ಯಂಜಕತ್ವೇ ನಿಬಂಧನಮ್ ॥ ೧೪ ॥

ಹಿಂದೆ ನಡೆದ ಸಂಗತಿಯನ್ನೇ ಆಗಲಿ ಅಥವಾ ಕವಿಯು ಕಲ್ಪಿಸಿಕೊಂಡ ಸಂಗತಿಯನ್ನೇ ಆಗಲಿ ಕಥಾಶರೀರವಾಗಿ ಮಾಡಿಕೊಳ್ಳುವಾಗ ವಿಭಾವ, ಭಾವ, ಅನುಭಾವ, ಸಂಚಾರಿಭಾವ, ಇವುಗಳೆಲ್ಲವುಗಳ ಔಚಿತ್ಯವನ್ನೂ ಗಮನಿಸಿ ಸೌಂದರ್ಯವನ್ನು ತರುವುದು—ಪ್ರಸಿದ್ಧವಾದ ಕಥೆಯನ್ನು ಆಶ್ರಯಿಸುವಾಗ, ಅದರಲ್ಲಿ ಉದ್ದಿಷ್ಟ ರಸಕ್ಕೆ ಅನನುಗುಣವಾದ ಘಟನೆಗಳು ಇದ್ದಪಕ್ಷದಲ್ಲಿ ಅವುಗಳನ್ನು ಬಿಟ್ಟು, ಅಭೀಷ್ಟ ರಸಕ್ಕೆ ಪೋಷಕಗಳಾಗುವಂತಹ ವಸ್ತುವನ್ನೇ ಕಲ್ಪಿಸಿಕೊಂಡಾದರೂ ಕಥೆಯನ್ನು ಬೆಳೆಸುವುದು—'ಸಂಧಿ' 'ಸಂಧ್ಯಂಗ'ಗಳನ್ನು ರಸಾಭಿವ್ಯಕ್ತಿಯ ದೃಷ್ಟಿಯಿಂದ ರಚಿಸುವುದೇ ಹೊರತು ಸುಮ್ಮನೆ ಶಾಸ್ತ್ರನಿಯಮಗಳನ್ನು ಪಾಲಿಸುವ ಅಭಿಪ್ರಾಯದಿಂದ ರಚಿಸದೆ ಇರುವುದು—ರಸದ ದೀಪ್ತಿ ಮತ್ತು ಶಾಂತಿಗಳನ್ನು ಯಥೋಚಿತವಾಗಿ ಕಾವ್ಯದ ಮಧ್ಯದಲ್ಲಿಯೂ ತರುವುದು—ಪ್ರಧಾನರಸವನ್ನು ಮಾತ್ರ ಆರಂಭದಿಂದ ಹಿಡಿದು ಅಂತ್ಯದವರೆಗೂ ಅನುಸಂಧಾನಮಾಡುವುದು—ಅಲಂಕಾರಗಳನ್ನು ಪ್ರಯೋಗಿಸುವ ಸಾಮರ್ಥ್ಯವಿದ್ದರೂ ಮಿತಿಮೀರದೆ ಅನುರೂಪವಾಗುವಂತಹವನ್ನು ಮಾತ್ರ

ಪ್ರಯೋಗಿಸುವುದು—ಇವೆಲ್ಲವೂ ಪ್ರಬಂಧವು ರಸಾದಿಗಳನ್ನು ಧ್ವನಿಸುವುದಕ್ಕೆ ನಿಯಾಮಕಗಳು.

ವೃತ್ತಿ

ಪ್ರಬಂಧವೂ ಕೂಡ ರಸಾದಿಗಳಿಗೆ ವ್ಯಂಜಕವಾಗುವುದೆಂದು ಹೇಳಲಾಯಿತು. ಅದರ ವ್ಯಂಜಕತ್ವದ ನಿಯಮಗಳನ್ನಿಲ್ಲಿ ಹೇಳಿದೆ: (೧) ಉದ್ದಿಷ್ಟವಾದ ರಸ-ಭಾವಗಳನ್ನನುಲಕ್ಷಿಸಿ ಅದಕ್ಕೆ ಉಚಿತವಾದ ವಿಭಾವ, ಭಾವ, ಅನುಭಾವ, ಸಂಚಾರಿ ಭಾವಗಳ ಯೋಜನೆಯಿಂದ ಸೌಂದರ್ಯವು ಬರುವಂತೆ ಕಥಾಶರೀರವನ್ನು ರಚಿಸುವುದು—ಇವುಗಳಲ್ಲಿ ವಿಭಾವದ ಔಚಿತ್ಯವು ಸುಪ್ರಸಿದ್ಧವಾಗಿದೆ. ಭಾವದ ಔಚಿತ್ಯವು 'ಪ್ರಕೃತಿ' ಅಥವಾ ಪಾತ್ರರಚನೆಯ ಔಚಿತ್ಯದಿಂದ ಬರುತ್ತದೆ. 'ಪ್ರಕೃತಿ'ಯಲ್ಲಿ 'ಉತ್ತಮ', 'ಮಧ್ಯಮ', 'ಅಧಮ' ಮತ್ತು 'ದಿವ್ಯ', 'ಮಾನುಷ' ಇವೇ ಮೊದಲಾದ ಭೇದಗಳಿವೆ. ಈ 'ಪ್ರಕೃತಿ'ಯನ್ನು ಯಥೋಚಿತವಾಗಿ ಕಲ್ಪಿಸಿ ಸ್ವಲ್ಪವೂ ಸಾಂಕರ್ಯ ಬರದಂತೆ ಸ್ಥಾಯಿಭಾವವನ್ನು ಪ್ರತಿಪಾದಿಸಿದರೆ ಔಚಿತ್ಯವುಂಟಾಗುತ್ತದೆ, ಅದಿಲ್ಲದೆ ಕೇವಲ ಮಾನುಷನಾದ 'ಪ್ರಕೃತಿ'ಗೆ ದಿವ್ಯವಾದ ಉತ್ಸಾಹಾದಿಗಳನ್ನೂ, ಕೇವಲ ದಿವ್ಯನಾದ 'ಪ್ರಕೃತಿ'ಗೆ ಸಾಮಾನ್ಯ ಮನುಷ್ಯನ ಕಾರ್ಯಗಳನ್ನೂ ವರ್ಣಿಸಿದರೆ ಅನೌಚಿತ್ಯವೊದಗುತ್ತದೆ. ಉದಾಹರಣೆಗೆ, ಕೇವಲ ಮನುಷ್ಯರೇ ಆದ ರಾಜಾದಿಗಳನ್ನು ವರ್ಣಿಸುವಾಗ ಸಪ್ತಸಾಗರೋಲ್ಲಂಘನವೇ ಮೊದಲಾದ ಕಾರ್ಯಗಳನ್ನು ಚಿತ್ರಿಸಿದರೆ, ಅವು ವಸ್ತುತಃ ಸೊಗಸಾಗಿದ್ದರೂ, ಸರ್ವಥಾ ನೀರಸಗಳೇ ಆಗುತ್ತವೆ. ಅದಕ್ಕೆ ಅನೌಚಿತ್ಯವೇ ಕಾರಣ.

ಯಾರಾದರೂ ಕೇಳಬಹುದು :—'ಸಾತವಾಹನನೇ ಮೊದಲಾದ ರಾಜರು ನಾಗಲೋಕಕ್ಕೆ ಹೋಗಿ ಬಂದರೆಂದು ಮುಂತಾಗಿ ಕೇಳಿದ್ದೇವೆ. ನಿಖಿಲಭೂಮಂಡಲಾಧಿಪರಾದ ಭೂಪರ ಅಸಾಧಾರಣ ಪ್ರಭಾವಾತಿಶಯವನ್ನು ವರ್ಣಿಸುವುದರಲ್ಲಿ ಅನೌಚಿತ್ಯವೆಲ್ಲಿ ಬರುವುದು ?' ಎಂದು. ಇದು ಸರಿಯಲ್ಲ. ರಾಜರ ಪ್ರಭಾವಾತಿಶಯವನ್ನು ವರ್ಣಿಸುವುದೇ ತಪ್ಪೆಂದು ನಾವೇನೂ ಹೇಳುವುದಿಲ್ಲ. ಆದರೆ ಕೇವಲ ಮನುಷ್ಯನೊಬ್ಬನನ್ನು ಕುರಿತು ಕವಿಯು ಕಥೆಯನ್ನು ಹೊಸದಾಗಿ ಕಲ್ಪಿಸುತ್ತಿರುವಾಗ, ಅದರಲ್ಲಿ ದಿವ್ಯಚರಿತೆಯನ್ನು ತರಬಾರದು. ಪೂರ್ವದ ಕಥೆಯಲ್ಲಿಯೇ ದಿವ್ಯಮನುಷ್ಯಚರಿತೆಗಳೆರಡೂ ಪ್ರಸಿದ್ಧವಾಗಿದ್ದರೆ ಎರಡರ ಔಚಿತ್ಯವನ್ನೂ ಧಾರಾಳವಾಗಿ ತರಬಹುದು. ಪಾಂಡವಾದಿಗಳ ಕಥೆಯೇ ಉದಾಹರಣೆ. ಸಾತವಾಹನನೇ ಮೊದಲಾದವರ ಚರಿತ್ರೆಯಲ್ಲಿಯೂ ಸಹ ಎಷ್ಟರಮಟ್ಟಿಗೆ ಅವರ ದಿವ್ಯಕಾರ್ಯಗಳು ಪುರಾಣಪ್ರಸಿದ್ಧವಾಗಿವೆಯೋ ಅಷ್ಟನ್ನು ಮಾತ್ರ ಅನುಸರಿಸುವುದು ಯುಕ್ತವೆಂದು

ನಮಗೆ ತೋರುತ್ತದೆ. ಪುರಾಣದಲ್ಲಿ ಇಲ್ಲದುದನ್ನು ವರ್ಣಿಸುವುದು ಅನುಚಿತವೇ. ಆದುದರಿಂದ ಈ ವಿಷಯದಲ್ಲಿ ಪರಮರಹಸ್ಯವಿಷ್ಟೆ :—

ಪರಿಕರಶ್ಲೋಕ

ಅನೌಚಿತ್ಯಾದೃತೇ ನಾನ್ಯದ್ರಸಭಂಗಸ್ಯ ಕಾರಣಮ್ ।
ಪ್ರಸಿದ್ಧೌಚಿತ್ಯಬಂಧಸ್ತು ರಸಸ್ಯೋಪನಿಷತ್ಪರಾ ॥

ರಸಭಂಗಕ್ಕೆ ಅನೌಚಿತ್ಯವನ್ನು ಬಿಟ್ಟು ಬೇರಾವುದೂ ಕಾರಣವಲ್ಲ. ಪ್ರಸಿದ್ಧವಾದ ಔಚಿತ್ಯದ ಪಾಲನೆಯೇ ರಸದ ಪರಮ ರಹಸ್ಯ.

ಆದುದರಿಂದಲೇ ನಾಟಕದಲ್ಲಿ ಪ್ರಖ್ಯಾತವಾದ ವಸ್ತುವೂ ಪ್ರಖ್ಯಾತನಾದ ಉದಾತ್ತನಾಯಕನೂ ಅವಶ್ಯವಾಗಿ ಇರಬೇಕೆಂದು ಭರತನು ವಿಧಿಸಿರುವುದು. ಈ ವಿಧಿಯನ್ನು ಪಾಲಿಸಿದರೆ ಕವಿಯು ನಾಯಕನ ಔಚಿತ್ಯ ಮತ್ತು ಅನೌಚಿತ್ಯದ ವಿಷಯದಲ್ಲಿ ತಪ್ಪುಮಾಡಲಾರನು. ಆದರೆ ಸ್ವಬುದ್ಧಿಕಲ್ಪಿತವಾದ ಕಥೆಯುಳ್ಳ ನಾಟಕಾದಿಗಳನ್ನು ಬರೆಯುವಾಗ ಅಪ್ರಸಿದ್ಧವೂ ಅನುಚಿತವೂ ಆದ ನಾಯಕ-ಸ್ವಭಾವವರ್ಣನೆಯಿಂದ ಬಹಳ ದೊಡ್ಡ ತಪ್ಪಾಗುವುದು.

ಯಾರಾದರೂ ಮತ್ತೆ ಹೀಗೆನ್ನಬಹುದು: "'ಉತ್ಸಾಹ'ವೇ ಮೊದಲಾದ ಭಾವಗಳನ್ನು ವರ್ಣಿಸಬೇಕಾದಾಗೇನೋ ದಿವ್ಯ, ಮಾನುಷ್ಯ, ಎಂಬ ಔಚಿತ್ಯ ಪರೀಕ್ಷೆಯನ್ನು ಮಾಡುವುದಾದರೆ ಮಾಡಿಕೊಳ್ಳಿ. ಆದರೆ 'ರತಿ'ಯೇ ಮೊದಲಾದ ಭಾವಗಳಿಗೆ ಈ ಔಚಿತ್ಯಪರೀಕ್ಷೆಯಿಂದಾಗುವ ಪ್ರಯೋಜನವೇನು? ದೇವತೆಗಳ 'ರತಿ'ಯನ್ನು ವರ್ಣಿಸಿಸಬೇಕಾದರೂ ಭಾರತವರ್ಷದ ಮನುಷ್ಯರ ವ್ಯವಹಾರವನ್ನೇ ನಾವು ಆಶ್ರಯಿಸಬೇಕಲ್ಲವೆ?' ಎಂದು. ಇದು ತಪ್ಪು. ಅಲ್ಲಿಯೂ ಔಚಿತ್ಯವನ್ನು ಮೀರುವುದು ದೊಡ್ಡ ಪ್ರಮಾದವೇ. ಉದಾಹರಣೆಗೆ, ಅಧಮ 'ಪ್ರಕೃತಿ'ಯ ಔಚಿತ್ಯವನ್ನನುಸರಿಸಿ ಉತ್ತಮ 'ಪ್ರಕೃತಿ'ಯ ಶೃಂಗಾರವನ್ನು ವರ್ಣಿಸಿದರೆ ಹಾಸ್ಯಾಸ್ಪದವಾಗುವುದಿಲ್ಲವೆ? ಭಾರತವರ್ಷದಲ್ಲಿ ಕೂಡ ಶೃಂಗಾರದ ವಿಷಯವಾಗಿ ಮೂರು ಬಗೆಯ 'ಪ್ರಕೃತಿ'ಗಳ ಔಚಿತ್ಯವುಂಟು. ಅವುಗಳಲ್ಲಿ ದಿವ್ಯ'ಪ್ರಕೃತಿ'ಯ ಔಚಿತ್ಯವು ನಮಗೆ ಉಪಯೋಗವಿಲ್ಲವೆಂದು ಕೆಲವರು ಹೇಳಬಹುದು. ಆದರೆ ಶೃಂಗಾರದ ವಿಷಯವಾಗಿ ಬೇರೊಂದು ದಿವ್ಯವಾದ ಔಚಿತ್ಯವುಂಟೆಂದೇ ನಾವು ಹೇಳುವುದಿಲ್ಲ. ಅದಕ್ಕೆ ಪ್ರತಿಯಾಗಿ ಭಾರತವರ್ಷದ ಉತ್ತಮ ನಾಯಕರಾದ ರಾಜಾದಿಗಳಲ್ಲಿ ಯಾವ ರೀತಿ ಶೃಂಗಾರವನ್ನು ವರ್ಣಿಸುವೆವೋ ಅದೇ ರೀತಿ ದೇವತೆಗಳ ಶೃಂಗಾರವನ್ನು ವರ್ಣಿಸಿದರೂ ಶೋಭಿಸುವುದೆನ್ನುತ್ತೇವೆ. ರಾಜಾದಿಗಳಲ್ಲಿ

ಅತ್ಯಂತ ಗ್ರಾಮ್ಯ ಶೃಂಗಾರವನ್ನು ಚಿತ್ರಿಸಿರುವುದನ್ನು ನಾವು ನಾಟಕಾದಿಗಳಲ್ಲೆಲ್ಲಿಯೂ ಕಾಣೆವು. ಹಾಗೆಯೇ ದೇವತೆಗಳ ವರ್ಣನೆಯಲ್ಲಿಯೂ ಅದನ್ನು ತ್ಯಜಿಸಬೇಕು. ಒಂದು ವೇಳೆ—'ನಾಟಕಗಳು ಅಭಿನಯಕ್ಕಾಗಿ ಇರತಕ್ಕುವು; ಸಂಭೋಗ ಶೃಂಗಾರದ ಅಭಿನಯವು ಅಸಭ್ಯವಾದುದರಿಂದ ನಾಟಕಗಳಲ್ಲಿ ಮಾತ್ರ ಅದನ್ನು ಬಿಡುತ್ತೇವೆ', ಎಂದರೂ ನಾವು ಒಪ್ಪುವುದಿಲ್ಲ. ಈ ವಿಧವಾದ ಅಭಿನಯದಲ್ಲಿ ಅಸಭ್ಯತೆಯು ಬರುವುದಾದ ಮೇಲೆ, ಇದೇ ವಿಧವಾದ ಕಾವ್ಯದಲ್ಲಿಯೂ ಬರುವ ಅಸಭ್ಯತೆಯನ್ನು ಇಲ್ಲವೆನ್ನುವುದು ಹೇಗೆ? ಆದುದರಿಂದ ಅಭಿನಯಕ್ಕಾಗಿರುವ ನಾಟಕದಲ್ಲಾಗಲಿ, ಅಭಿನಯಕ್ಕಲ್ಲದಿರುವ ಕಾವ್ಯದಲ್ಲಿಯೇ ಆಗಲಿ, ಉತ್ತಮ ಪ್ರಕೃತಿಗಳಾದ ರಾಜಾದಿಗಳು ಉತ್ತಮ ಪ್ರಕೃತಿಗಳೇ ಆದ ನಾಯಿಕೆಯರೊಡನೆ ಗ್ರಾಮ್ಯ ಸಂಭೋಗನಿರತರಾಗಿರುವುದನ್ನು ವರ್ಣಿಸಿದರೆ ಅದು ತಂದೆತಾಯಿಗಳ ಸಂಭೋಗ ವರ್ಣನೆಯಷ್ಟೇ ಅಸಭ್ಯವಾಗುತ್ತದೆ. ಉತ್ತಮ ದೇವತೆಗಳ ವಿಷಯದಲ್ಲಿ ಅದನ್ನು ವರ್ಣಿಸಿದರೂ ಅಷ್ಟೆ.

ಸಂಭೋಗ ಶೃಂಗಾರಕ್ಕೆಲ್ಲ ಸುರತವೊಂದೇ ಪ್ರಕಾರವೇನೂ ಅಲ್ಲ. ಪರಸ್ಪರವಾದ ಪ್ರೇಮ, ದರ್ಶನ, ಇವೇ ಮೊದಲಾದ ಬೇರೆ ಪ್ರಭೇದಗಳೂ ಇವೆ. ಇವುಗಳನ್ನು ಕೂಡ ಉತ್ತಮ ಪ್ರಕೃತಿಗಳ ವಿಷಯದಲ್ಲಿ ಏಕೆ ವರ್ಣಿಸಬಾರದು? ಆದುದರಿಂದ ಉತ್ಸಾಹದಂತೆ ರತಿಯ ವರ್ಣನೆಯಲ್ಲಿಯೂ 'ಪ್ರಕೃತಿ'ಯ ಔಚಿತ್ಯವನ್ನು ಪಾಲಿಸಲೇಬೇಕು. ವಿಸ್ಮಯಾದಿ ಭಾವಗಳಿಗೂ ಹೀಗೆಯೇ. 'ಈ ವಿಷಯದಲ್ಲಿ ಮಹಾಕವಿಗಳೂ ಕೂಡ ವಿಚಾರಶೂನ್ಯರಾಗಿರುವುದು ಲಕ್ಷ್ಯಗಳಲ್ಲಿ ಕಾಣುವುದಲ್ಲ!', ಎನ್ನಬಹುದು. ಆದರೆ ಅದೂ ತಪ್ಪೇ. ಅದರ ಪ್ರತಿಭಾತಿಶಯದಿಂದ ಅದು ಮುಚ್ಚಿ ಹೋಗಿರುವುದರಿಂದ ಮೇಲೆದ್ದು ಕಾಣುವುದಿಲ್ಲವೆಂದು ಹಿಂದೆಯೇ ಹೇಳಲಾಯಿತು. ಅನುಭಾವದ ಔಚಿತ್ಯವು ಭರತನೇ ಮುಂತಾದವರ ಗ್ರಂಥದಲ್ಲಿ ಪ್ರಸಿದ್ಧವಾಗಿದೆ.

ಆದರೂ ಇಷ್ಟನ್ನು ಮಾತ್ರ ಹೇಳುತ್ತೇವೆ:—ಭರತನೇ ಮುಂತಾದವರು ಬರೆದಿರುವ ನಿಯಮಗಳನ್ನು ಪಾಲಿಸುವುದರ ಜತೆಗೆ ಮಹಾಕವಿಗಳ ಪ್ರಬಂಧಗಳನ್ನೂ ಪರ್ಯಾಲೋಚಿಸುವ, ತನ್ನ ಪ್ರತಿಭೆಯನ್ನು ಅನುಸರಿಸುವುದಲ್ಲದೆ ಜಾಗರೂಕನೂ ಆಗಿರುವ ಕವಿಯು ವಿಭಾವಾದಿಗಳ ಅನೌಚಿತ್ಯವನ್ನು ತ್ಯಜಿಸಲು ಸರ್ವಪ್ರಯತ್ನವನ್ನೂ ಮಾಡಬೇಕು. 'ಪ್ರಸಿದ್ಧವಾಗಿರಲಿ, ಕಲ್ಪಿತವೇ ಆಗಿರಲಿ, ಔಚಿತ್ಯವುಳ್ಳ ಕಥಾಶರೀರವನ್ನು ಮಾತ್ರ ಪರಿಗ್ರಹಿಸಬೇಕು' ಎಂದು ಹೇಳಿರುವುದರಿಂದ ಹೀಗೆಂದಂತಾಗುತ್ತದೆ: ಇತಿಹಾಸವೇ ಮುಂತಾದುವಲ್ಲಿ ರಸವತ್ತಾದ ಅನೇಕ ಕಥೆಗಳಿದ್ದರೂ, ಯಾವುದರಲ್ಲಿ ವಿಭಾವಾದ್ಯೌಚಿತ್ಯಸಂಪನ್ನವಾದ ಕಥಾಶರೀರವಿರುವುದೋ, ಅದನ್ನು

ಮಾತ್ರ ಕವಿಯು ಆರಿಸಿಕೊಳ್ಳಬೇಕು, ಉಳಿದುವನ್ನಲ್ಲ, ಎಂದು. ಪ್ರಸಿದ್ಧವಾದುದಕ್ಕಿಂತಲೂ ಕಲ್ಪಿತವಾದ ಕಥಾಶರೀರದ ವಿಷಯದಲ್ಲಿ ಕವಿಯು ವಿಶೇಷ ಪ್ರಯತ್ನವನ್ನು ವಹಿಸಬೇಕಾಗುತ್ತದೆ. ಇದರಲ್ಲಿ ಅಜಾಗರೂಕತೆಯಿಂದ ಕವಿಯು ಎಡವಿದರೆ ಅವನ ಅವ್ಯುತ್ಪತ್ತಿಯು ಅಪಾರವಾದುದೆಂಬ ಊಹೆಗೆ ಆಸ್ಪದವಾಗುತ್ತದೆ. ಇದನ್ನೇ ಸಂಗ್ರಹಿಸುವ ಪರಿಕರ ಶ್ಲೋಕಗಳಿವು :—

ಕಥಾಶರೀರಮುತ್ಪಾದ್ಯವಸ್ತು ಕಾರ್ಯಂ ತಥಾ ತಥಾ ।
ಯಥಾ ರಸಮಯಂ ಸರ್ವಮೇವ ತತ್ಪ್ರತಿಭಾಸತೇ ॥

ಕಲ್ಪಿತವಾದ ಕಥಾಶರೀರವನ್ನು ನಿರ್ಮಿಸುವಾಗ ಎಲ್ಲವೂ ರಸಮಯವಾಗಿ ಹೊಳೆಯುವಂತೆಯೇ ನಿರ್ಮಿಸಬೇಕು.

ಚೆನ್ನಾಗಿ ವಿಭಾವಾದಿಗಳ ಔಚಿತ್ಯವನ್ನು ಪಾಲಿಸುವುದೇ ಇದಕ್ಕೆ ಉಪಾಯ. ಅದನ್ನು ಈಗಾಗಲೇ ವಿವರಿಸಲಾಗಿದೆ. ಮತ್ತೇನೆಂದರೆ :—

ಸನ್ತಿ ಸಿದ್ಧರಸಪ್ರಖ್ಯಾ ಯೇ ಚ ರಾಮಾಯಣಾದಯಃ ।
ಕಥಾಶ್ರಯಾ ನ ತೈರ್ಯೋಜ್ಯಾ ಸ್ವೇಚ್ಛಾ ರಸವಿರೋಧಿನೀ ॥

ರಾಮಾಯಣವೇ ಮೊದಲಾದ ಪ್ರಬಂಧಗಳ ರಸಗಳು ಪ್ರಸಿದ್ಧವಾಗಿವೆ. ಅವುಗಳನ್ನವಲಂಬಿಸಿ ಕಥೆಯನ್ನು ರಚಿಸುವಾಗ ರಸವಿರೋಧ ಬರುವಂತೆ ಮನಸ್ವಿಯಾಗಿ ಕಲ್ಪಿಸಿಕೊಳ್ಳಬಾರದು.

ಅಂತಹ ಪ್ರಸಿದ್ಧವಾದುದನ್ನಾಶ್ರಯಿಸಿ ಬರೆದ ಕಥೆಗಳಲ್ಲಿ ಸ್ವೇಚ್ಛೆಯನ್ನು ಹರಿಯಬಿಡಲೇ ಆಗದು. "ಕಥೆಯ ಮಾರ್ಗದಲ್ಲಿ ಸ್ವಲ್ಪವೂ ಅತಿಕ್ರಮವಿರಲಾಗದು" ಎಂದು ಹಿಂದಿನವರೇ ಹೇಳಿದ್ದಾರೆ. ಒಂದು ವೇಳೆ ಸ್ವೇಚ್ಛೆಗೆ ಆಸ್ಪದವಿತ್ತರೂ ಅದು ರಸಕ್ಕೆ ವಿರೋಧವನ್ನು ತರಗೊಡಬಾರದು.

(೨) ರಸದ ಅಭಿವ್ಯಂಜಕತ್ವಕ್ಕೆ ಇನ್ನೊಂದು ನಿಯಾಮಕವೆಂದರೆ ಇದು: ಪ್ರಸಿದ್ಧವಾದ 'ಇತಿವೃತ್ತ'ದಲ್ಲಿ ಪ್ರಸಂಗವಶಾತ್ ಸೇರಿಕೊಂಡಿರಬಹುದಾದ ರಸಾನುಗುಣವಲ್ಲದ ವೃತ್ತಾಂತಗಳನ್ನು ಹೇಗಾದರೂ ಬಿಡುವುದಲ್ಲದೆ ಬೇರೆ ಘಟನೆಗಳನ್ನು ಕಲ್ಪಿಸಿಕೊಂಡಾದರೂ ಅಭೀಷ್ಟರಸಕ್ಕೆ ಉಚಿತವಾದ ಕಥೆಯನ್ನು ಬೆಳೆಸುವುದು. **ಕಾಳಿದಾಸನ** ಪ್ರಬಂಧಗಳೇ ಉದಾಹರಣೆ. ಹಾಗೆಯೇ **ಸರ್ವಸೇನನ ಹರಿವಿಜಯ**ವಾದರೂ; ನಾನೇ ಬರೆದಿರುವ **ಅರ್ಜುನಚರಿತ**ವೆಂಬ ಮಹಾಕಾವ್ಯವೂ ಇದನ್ನೇ ನಿದರ್ಶಿಸುತ್ತದೆ. ಕಾವ್ಯವನ್ನು ರಚಿಸುವ ಕಾಲದಲ್ಲಿ ಕವಿಯು ಎಲ್ಲ ರೀತಿಯಲ್ಲೂ

ರಸಪರತಂತ್ರನಾಗಿಯೇ ಇರಬೇಕು. ಪೂರ್ವದ ಇತಿವೃತ್ತದಲ್ಲಿ ರಸಕ್ಕೆ ಅನುಗುಣ ವಲ್ಲದ ಕಥಾಭಾಗವು ಕಂಡುಬಂದರೆ ಅದನ್ನು ಮುರಿದಾದರೂ ರಸಾನುಗುಣವಾಗು ವಂತಹ ಕಥಾಂತರವನ್ನು ಸ್ವತಂತ್ರವಾಗಿ ಸೃಷ್ಟಿಸಿಕೊಳ್ಳಬೇಕು. ಕೇವಲ ಇತಿವೃತ್ತ ವನ್ನು ಇದ್ದಂತೆ ಹೇಳಿಬಿಟ್ಟರೆ ಕವಿಗೆ ಯಾವ ಪ್ರಯೋಜನವೂ ಇಲ್ಲ, ಇತಿಹಾಸಾದಿ ಗಳೇ ಆ ಕೆಲಸವನ್ನು ಮಾಡಿಬಿಟ್ಟಿರುತ್ತವೆ.

(೩) ರಸಾಭಿವ್ಯಕ್ತಿಗೆ ಮತ್ತೊಂದು ಮುಖ್ಯವಾದ ನಿಯಮವೆಂದರೆ—'ಮುಖ', 'ಪ್ರತಿಮುಖ', 'ಗರ್ಭ', 'ಅವಮರ್ಶ', 'ನಿರ್ವಹಣ' ಎಂಬ ಪಂಚಸಂಧಿಗಳನ್ನೂ 'ಉಪಕ್ಷೇಪ'ವೇ ಮೊದಲಾದ ಸಂಧ್ಯಂಗಗಳನ್ನೂ **ರತ್ನಾವಳೀ ನಾಟಕ**ದಲ್ಲಿರುವಂತೆ ಕೇವಲ ರಸಾಭಿವ್ಯಕ್ತಿಯ ದೃಷ್ಟಿಯಿಂದಲೇ ರಚಿಸುವುದು ಮತ್ತು ಶಾಸ್ತ್ರದ ನಿಯಮ ವನ್ನು ಪಾಲಿಸುವ ದೃಷ್ಟಿಯೊಂದರಿಂದಲೇ ಕಲ್ಪಿಸದೆ ಇರುವುದು. ಉದಾಹರಣೆಗೆ **ವೇಣೀಸಂಹಾರ ನಾಟಕ**ದ ಎರಡನೆಯ ಅಂಕದಲ್ಲಿ 'ವಿಲಾಸ'ವೆಂಬ ಪ್ರತಿಮುಖ ಸಂಧಿಯ ಅಂಗವು ಅಭೀಷ್ಟರಸಕ್ಕೆ ಅನನುಗುಣವಾಗಿದ್ದರೂ ಕೇವಲ ಶಾಸ್ತ್ರನಿಯಮ ಪಾಲನೆಯ ನಿರ್ಬಂಧದಿಂದ ಪ್ರಯುಕ್ತವಾಗಿದೆ.

(೪) ರಸವ್ಯಂಜಕತ್ವಕ್ಕೆ ಇನ್ನೂ ಒಂದು ಕಾರಣವೆಂದರೆ—ಸಂದರ್ಭಾನುಸಾರ ವಾಗಿ ಮಧ್ಯೆ ಮಧ್ಯೆ ರಸದ ದೀಪ್ತಿ ಪ್ರಶಮನಗಳನ್ನು ತರುವುದು;—ಇದಕ್ಕೂ ರತ್ನಾವಳೀ ನಾಟಕವೇ ಉದಾಹರಣೆ—ಅಲ್ಲದೆ ಆರಂಭದಿಂದ ಅಂತ್ಯದವರೆಗೂ ಪ್ರಧಾನ ರಸಕ್ಕೆ ಪುಷ್ಟಿಯನ್ನು ತರುವುದು. ಇದಕ್ಕೆ **ತಾಪಸವತ್ಸರಾಜನಾಟಕ**ವು ಉದಾಹರಣೆ.

(೫) ನಾಟಕವೇ ಮುಂತಾದ ವಿಶಿಷ್ಟಪ್ರಬಂಧಗಳಲ್ಲಿ ರಸಾಭಿವ್ಯಕ್ತಿಗೆ ಇನ್ನೂ ಒಂದು ನಿಮಿತ್ತವಿದೆ: ಅದೇನೆಂದರೆ, ಅಲಂಕಾರಗಳನ್ನು ಹೇರಳವಾಗಿ ಬಳಸುವ ಶಕ್ತಿ ಯಿದ್ದರೂ, ಅನುಗುಣವಾದವುಗಳನ್ನಷ್ಟೇ ಆರಿಸಿಕೊಳ್ಳುವುದು. ಅನೇಕ ವೇಳೆ ಅಲಂಕಾರನಿರ್ಮಾಣದಲ್ಲಿ ನಿಪುಣನಾದ ಕವಿಯು ಅದೊಂದೇ ಉದ್ದೇಶದಿಂದ ರಸ ವನ್ನು ಮರೆತು ಪ್ರಬಂಧವನ್ನು ಬರೆಯತೊಡಗುತ್ತಾನೆ. ಅಂತಹವನ ಉಪದೇಶಕ್ಕಾಗಿ ಈ ಮಾತನ್ನು ಹೇಳಿದೆ. ತಮ್ಮ ಪ್ರಬಂಧಗಳಲ್ಲಿ ಅಲಂಕಾರಗಳನ್ನು ಪ್ರಯೋಗಿಸುವ ಒಂದೇ ಆಸೆಯಿಂದ ರಸಗಳನ್ನು ನಿರ್ಲಕ್ಷ್ಯಮಾಡುವ ಕವಿಗಳನ್ನು ಬೇಕಾದಹಾಗೆ ನೋಡಬಹುದು! ಅಷ್ಟೇ ಅಲ್ಲದೆ—

ಕಾರಿಕೆ

ಅನುಸ್ವಾನೋಪಮಾತ್ಮಾಪಿ ಪ್ರಭೇದೋ ಯ ಉದಾಹೃತಃ।
ಧ್ವನೇರಸ್ಯ ಪ್ರಬಂಧೇಷು ಭಾಸತೇ ಸೋಽಪಿ ಕೇಷುಚಿತ್ ॥ ೧೫ ॥

ಅನುರಣನ ರೂಪವಾದ ಈ ಧ್ವನಿಯ ಯಾವ ಪ್ರಭೇದವನ್ನು ಹಿಂದೆಯೇ ಉದಾಹರಿಸಲಾಯಿತೋ, ಅದು ಒಮ್ಮೊಮ್ಮೆ ಪ್ರಬಂಧಗಳಲ್ಲಿಯೂ ಮಿನುಗುತ್ತದೆ.

ವೃತ್ತಿ

ಈ ವಿವಕ್ಷಿತಾನ್ಯಪರವಾಚ್ಯಧ್ವನಿಯಲ್ಲಿ ಅನುರಣನರೂಪವ್ಯಂಗ್ಯವೆನಿಸುವ ಎರಡು ಬಗೆಯಾದ ಪ್ರಭೇದವನ್ನು ಹಿಂದೆ ಹೇಳಲಾಯಿತಷ್ಟೆ! ಅದು ಒಮ್ಮೊಮ್ಮೆ ಪ್ರಬಂಧಗಳಲ್ಲಿಯೂ ಕಂಗೊಳಿಸುತ್ತದೆ. ಇದಕ್ಕೆ **ಮಧುಮಥನವಿಜಯ**ದಲ್ಲಿ ಬರುವ ಪಾಂಚಜನ್ಯನ ಮಾತುಗಳು ಉದಾಹರಣೆ. ನನ್ನ ಕಾವ್ಯವೇ ಆದ **ವಿಷಮಬಾಣಲೀಲೆ**ಯಲ್ಲಿ ಬರುವ ಕಾಮದೇವನ ಸಹಚರಸಮಾಗಮದ ಸನ್ನಿವೇಶವು ಇನ್ನೊಂದು ಉದಾಹರಣೆ. ಹಾಗೆಯೇ **ಮಹಾಭಾರತ**ದಲ್ಲಿ ಬರುವ ಗೃಧ್ರ-ಗೋಮಾಯು—ಸಂವಾದವೇ ಮೊದಲಾದುವುಗಳೂ.

ಕಾರಿಕೆ

ಸುಪ್ತಿಙ್‌ವಚನಸಂಬಂಧೈಸ್ತಥಾ ಕಾರಕಶಕ್ತಿಭಿಃ।
ಕೃತ್ತದ್ಧಿತಸಮಾಸೈಶ್ಚ ದ್ಯೋತ್ಯೋಽಲಕ್ಷ್ಯಕ್ರಮಃ ಕ್ವಚಿತ್ ॥ ೧೬ ॥

ವಿಭಕ್ತಿಪ್ರತ್ಯಯಗಳು, ಆಖ್ಯಾತಪ್ರತ್ಯಯಗಳು, ವಚನ, ಸಂಬಂಧ, ಕಾರಕಶಕ್ತಿ, ಕೃತ್ಪ್ರತ್ಯಯ, ತದ್ಧಿತಪ್ರತ್ಯಯ, ಸಮಾಸ—ಎಲ್ಲವೂ ಅಲಕ್ಷ್ಯಕ್ರಮವಾದ ಧ್ವನಿಯನ್ನು ಸೂಚಿಸುತ್ತವೆ.

ವೃತ್ತಿ

ಅಲಕ್ಷ್ಯಕ್ರಮಧ್ವನಿಯ ಆತ್ಮವಾದ ರಸವೇ ಮುಂತಾದುದು ವಿಶಿಷ್ಟವಾದ ನಾಮ, ಆಖ್ಯಾತ, ವಚನ, ಕಾರಕ, ಕೃತ್, ತದ್ಧಿತ, ಸಮಾಸಗಳೆಲ್ಲವುಗಳಿಂದಲೂ ಧ್ವನಿತವಾಗುತ್ತದೆ. ಕಾರಿಕೆಯಲ್ಲಿ 'ಚ' ಎಂದು ಹೇಳಿರುವುದಕ್ಕೆ ಉಪಸರ್ಗ, ಕಾಲ ಮೊದಲಾದುವುಗಳೂ ವ್ಯಂಜಕಗಳಾಗಬಹುದೆಂದಭಿಪ್ರಾಯ. ಉದಾಹರಣೆ:

ನ್ಯಕ್ಕಾರೋ ಹ್ಯಯಮೇವ ಮೇ ಯದರಯಸ್ತತ್ರಾಪ್ಯಸೌ ತಾಪಸಃ
ಸೋಽಪ್ಯತ್ರೈವ ನಿಹನ್ತಿ ರಾಕ್ಷಸಕುಲಂ ಜೀವತ್ಯಹೋ ರಾವಣಃ।
ಧಿಕ್ ಧಿಕ್ ಶಕ್ರಜಿತಂ ಪ್ರಬೋಧಿತವತಾ ಕಿಂ ಕುಂಭಕರ್ಣೇನ ವಾ
ಸ್ವರ್ಗಗ್ರಾಮಟಿಕಾವಿಲುಂಠನವೃಥೋಚ್ಛೂನೈಃ ಕಿಮೇಭಿರ್ಭುಜೈಃ॥

ಅವಮಾನಂ ಗಡ ಶತ್ರುಗಳ್ ತನಗೆನಲ್ ಕೀಳ್ತಾಪಸಂ ತಾನಿವಂ
ತವೆ ಕೊಲ್ವಂ ದನುಜಾಳಿಯಂ ಸ್ವಪುರದೊಳ್ ಮೇಣ್ಜೀವಿಪಂ ರಾವಣಂ।

ದಿವಿಜೇಂದ್ರಾರಿಗಮಂತೆ ಧಿಕ್ ! ನಿರುಪಯುಕ್ತಂ ಕುಂಭಕರ್ಣಂ ವಲಂ
ದಿವಕುಗ್ರಾಮವಿನಾಶದಿಂ ಬರಿದೆ ನೀಳ್ದೀ ತೋಳ್ಗಳಿಂದೀಗಳೇಂ ‖

ಈ ಶ್ಲೋಕದಲ್ಲಿರುವ ಪ್ರಯೋಗಗಳೆಲ್ಲವೂ ಸ್ಫುಟವಾದ ವ್ಯಂಜಕತ್ವವನ್ನು ಹೊಂದಿವೆ. 'ಮೇ ಯದರಯಃ' ಎಂಬಲ್ಲಿ ಸುಪ್, ಸಂಬಂಧ, ವಚನಗಳು ವ್ಯಂಜಕವಾಗಿವೆ. 'ತತ್ರಾಪ್ಯಸೌ ತಾಪಸಃ' ಎಂಬಲ್ಲಿ ತದ್ಧಿತನಿಪಾತಗಳು. 'ಸೋಽಪ್ಯತ್ರೈವ ನಿಹನ್ತಿ ರಾಕ್ಷಸಕುಲಂ ಜೀವತ್ಯಹೋ ರಾವಣಃ' ಎಂಬಲ್ಲಿ ಆಖ್ಯಾತ ಮತ್ತು ಕಾರಕಶಕ್ತಿಗಳು. 'ಧಿಕ್ ಧಿಕ್ ಶಕ್ರಜಿತಂ' ಎಂದು ಮೊದಲಾಗುವ ಶ್ಲೋಕಾರ್ಧದಲ್ಲಿ ಕೃತ್, ತದ್ಧಿತ, ಸಮಾಸ, ಉಪಸರ್ಗಗಳು. ಈ ವಿಧವಾದ ವ್ಯಂಜಕತ್ವಬಾಹುಳ್ಯವು ಸೇರಿಕೊಂಡರೆ ಕಾವ್ಯಕ್ಕೆ ನಿರತಿಶಯವಾದ ಬಂಧ—ಚ್ಛಾಯೆಯು ಬರುತ್ತದೆ. ವ್ಯಂಜಕತ್ವಯುಕ್ತವಾದ ಒಂದೇ ಪದವು ಕಾವ್ಯದಲ್ಲಿ ಆವಿರ್ಭವಿಸಿದರೂ ಬಂಧಚ್ಛಾಯೆಯು ಸುಂದರವಾಗುವುದೆನ್ನುವಾಗ ಅಂತಹ ಹಲವಾರು ಸೇರಿಕೊಂಡರೆ ಹೇಳುವುದೇನಿದೆ? ಇದೇ ತಾನೇ ಉದಾಹರಿಸಿದ ಶ್ಲೋಕವೇ ಅದಕ್ಕೆ ಸಾಕ್ಷಿ. ಇಲ್ಲಿ 'ರಾವಣ' ಎಂಬ ಪದದಲ್ಲಿ ಅರ್ಥಾಂತರ-ಸಂಕ್ರಮಿತ-ವಾಚ್ಯವೆಂಬ ಧ್ವನಿಪ್ರಭೇದದ ಸೊಗಸಿರುವುದರ ಜತೆಗೆ ಮೇಲೆ ತೋರಿಸಲಾದ ಇತರ ಪ್ರಯೋಗಗಳ ವ್ಯಂಜಕತ್ವವೂ ತುಂಬಿಕೊಂಡಿದೆ. ಪ್ರತಿಭಾ-ವಿಶೇಷಸಂಪನ್ನರಾದ ಮಹಾತ್ಮರ ಕೃತಿಗಳಲ್ಲಿ ಈ ರೀತಿಯಾದ ಬಂಧ ಪ್ರಕಾರಗಳು ಬೇಕಾದಷ್ಟು ಸಿಕ್ಕುತ್ತವೆ: **ಮಹರ್ಷಿ ವ್ಯಾಸರಿಂದ** ಒಂದು ಉದಾಹರಣೆ :—

ಅತಿಕ್ರಾಂತಸುಖಾಃ ಕಾಲಾಃ ಪ್ರತ್ಯುಪಸ್ಥಿತದಾರುಣಾಃ ।
ಶ್ವಃ ಶ್ವಃ ಪಾಪೀಯದಿವಸಾ ಪೃಥಿವೀ ಗತಯೌವನಾ ॥

ವಿಗತಸುಖಂಗಳ್ ಬಹುಲೋ-
ಪಗತಮಹಾದುಃಖಸಂಘಗಳ್ ಕಾಲಂಗಳ್ ।
ಮಿಗಿಲೆನೆ ದಿನದಿನಕುಂ ಪಾ-
ಪಗಣಂ, ಗತಯೌವನಾಂಗಿ ಧಾರಿಣಿಯಿರ್ಪಳ್ ॥

ಇಲ್ಲಿ ಕೃತ್, ತದ್ಧಿತ, ವಚನಗಳಿಂದ ಅಲಕ್ಷ್ಯಕ್ರಮವ್ಯಂಗ್ಯವೂ 'ಪೃಥಿವೀ ಗತಯೌವನಾ' ಎಂಬಾಗ ಅತ್ಯಂತತಿರಸ್ಕೃತವಾಚ್ಯಧ್ವನಿಯೂ ಪ್ರಕಾಶಿಸುತ್ತವೆ.

ನಾಮಪದಗಳೇ ಮುಂತಾದುವಲ್ಲಿ ಒಂದೊಂದಕ್ಕೂ ಮತ್ತು ಒಟ್ಟಾಗಿಯೂ ವ್ಯಂಜಕತ್ವವಿರುವುದನ್ನು ಮಹಾಕವಿಗಳ ಪ್ರಬಂಧಗಳಲ್ಲಿ ಪ್ರಾಯಿಕವಾಗಿ ನೋಡಬಹುದು. ನಾಮಪದದ ವ್ಯಂಜಕತ್ವಕ್ಕೆ ಉದಾಹರಣೆ :—

. . . ತಾಲೈಃ ಶಿಂಜದ್ವಲಯಸುಭಗೈಃ ಕಾಂತಯಾ ನರ್ತಿತೋ ಮೇ
ಯಾಮಧ್ಯಾಸ್ತೇ ದಿವಸವಿಗಮೇ ನೀಲಕಂಠಃ ಸುಹೃದ್ವಃ || (—ಮೇಘದೂತ)

ಬಳೆಯಿಂಚರದಿಂ ಬಂಧುರ-
ವಿಳಾಸಮಂ ಮೆರೆವಿನಿಯಳ ತಾಳಗಳಿಂ ತಾಂ|
ಘಳಿಲನೆ ಕುಣಿವಾ ನವಿಲದು
ಕಳೆಯೆ ದಿನಂ ಕಾಂಬುದಲ್ಲಿ ಕಾಂಚನತಟದೊಳ್ ||

ಕ್ರಿಯಾಪದದ ವ್ಯಂಜಕತ್ವಕ್ಕೆ ಉದಾಹರಣೆ:—

ಅವಸರ ರೋಉಂ ಚಿಅ ಣಿಮ್ಮಿಆಇಂ ಮಾ ಪುಂಸ ಮೇ ಹಅಚ್ಛೀಇಂ|
ದಂಸಂಣಮೆತ್ತುಮ್ಮತ್ತೇಹಿಂ ಜೇಹಿಂ ಹಿಅಅಂ ತುಹ ಣ ಣಾಅಮ್ ||

ಪೊರಮಡು ಗೋಳಿಡಲೆಂದೇ
ನೆರೆದೆನ್ನೀ ಕೆಟ್ಟ ಕಣ್ಗಳಂ ಗೋಳಿಸದಿರ್ |
ಬರಲುನ್ಮಾದಂ ನಿನ್ನಯ
ದರುಶನದಲೆ, ಕಾಂಬವೆಂತು ನಿನ್ನಯ ಬಗೆಯಂ ||

ಅಥವಾ—

ಮಾ ಪಂಥಂ ರುಂಧೀಓ ಅವೇಹಿ ಬಾಲಅ ಅಹೋಸಿ ಅಹಿರೀಓ |
ಅಮ್ಹೇಅ ಣಿರಿಚ್ಛಾಓ ಸುಣ್ಣಘರಂ ರಕ್ಖಿದವ್ವಂ ಣೋ ||

ದಾರಿಗಡ್ಡ ನಿಲ್ಲಬೇಡ ದೂರ ಸರಿಯೊ ಬಾಲಕ !
ಅಬ್ಬ ! ನಿನಗೆ ಲಜ್ಜೆಯಿನಿತು ಇಲ್ಲವೆನ್ನುವಂತಿದೆ|
ಅಸ್ವತಂತ್ರರೀಗ ನಾವದೇಕೆಯೆಂದು ಕೇಳ್ವೆಯೊ
ಶೂನ್ಯಗೃಹವು ನಮ್ಮದುಂಟು ಕಾಯಬೇಕು ತಪ್ಪದೆ ||

ಸಂಬಂಧದ ವ್ಯಂಜಕತ್ವಕ್ಕೆ ಉದಾಹರಣೆ:—

ಅಣ್ಣತ್ತ ವಚ್ಚ ಬಾಲಅ ಹ್ಣಾಅನ್ತಿಂ ಕಿಂ ಮಂ ಪುಲೋಏಸಿ ಏಅಮ್ |
ಭೋ ಜಾಅಭೀರುಆಣಂ ತಡಂ ವಿಅಣ ಹೋಇ ||

ಬೇರೆಡೆ ಬಾಲಕ ಹೋಗೆಲೊ ನೀನು
ಸ್ನಾನವ ಮಾಡುವ ನನ್ನನ್ನು |
ನೋಡುತಲೀಪರಿ ನಿಲ್ಲುವೆಯೇಕೆ ?
ಮಡದಿಗೆ ನಡುಗುವ ಪೋರರಿಗೆ
ದಡವೇ ನಿಲ್ಲುವ ಎಡೆಯಲ್ಲ ||

ಪ್ರಾಕೃತದಲ್ಲಿ ‘ಕ’—ಪ್ರತ್ಯಯವನ್ನು ಸೇರಿಸುವುದರ ಮೂಲಕ ಬರುವ ತದ್ಧಿತ ರೂಪಗಳಿಗೆ ವ್ಯಂಜಕತ್ವವು ತಿಳಿದೇ ತಿಳಿಯುತ್ತದೆ (ಉದಾ: ಲಘು>ಲಘುಕ> ಹಲುಕ>ಹಲ್ಕ). ತಿರಸ್ಕಾರಾತಿಶಯವನ್ನು ಸೂಚಿಸುವಾಗಲೇ ಈ ‘ಕ’ ಪ್ರತ್ಯಯವು ಬರುವುದು. ‘ವೃತ್ತಿ’ಯ ಔಚಿತ್ಯವನ್ನರಿತು ಸೇರಿಸಿದಾಗ ಸಮಾಸಗಳಿಗೂ ವ್ಯಂಜಕತ್ವವು ಬರುತ್ತದೆ. ನಿಪಾತಗಳ ವ್ಯಂಜಕತ್ವಕ್ಕೆ ಕೆಳಗಿನ ಶ್ಲೋಕದ ಚಕಾರವು ಉದಾಹರಣೆ :—

ಅಯಮೇಕಪದೇ ತಯಾ ವಿಯೋಗಃ ಪ್ರಿಯಯಾ ಚೋಪನತಃ ಸುದುಃಸಹೋ ಮೇ |
ನವವಾರಿಧರೋದಯಾದಹೋಭಿರ್ಭವಿತವ್ಯಂ ಚ ನಿರಾತಪಾರ್ಧರಮ್ಯೈಃ ||
(—ವಿಕ್ರಮೋರ್ವಶೀಯ)

ದಾರುಣಕಾಂತಾವಿರಹ-
ಪ್ರಾರಂಭಂ ಸಾರ್ದುದಂತೆ ಕಾರ್ಮುಗಿಲುಂ ತಾಂ |
ತೋರಿತ್ತೀಗಳ್ ದಿನಗಳ್
ದೂರಾತಪಗಳ್ ವಿಲಾಸದರೆಯಂ ಮೆರೆಗುಂ ||

ಅಥವಾ ಕೆಳಗಿನ ಉದಾಹರಣೆಯಲ್ಲಿ ‘ತು’ ಎಂಬ ನಿಪಾತವನ್ನು ನೋಡಿ—

ಮುಹುರಂಗುಲಿಸಂವೃತಾಧರೋಷ್ಠಂ ಪ್ರತಿಷೇಧಾಕ್ಷರವಿಕ್ಲವಾಭಿರಾಮಮ್ |
ಮುಖಮಂಸವಿವರ್ತಿ ಪಕ್ಷ್ಮಲಾಕ್ಷ್ಯಾಃ ಕಥಮಪ್ಯುನ್ನಮಿತಂ ನ ಚುಂಬಿತಂ ತು ||

ಅಡಿಗಡಿಗಂಗುಳೀದಳಗಳಿಂದಧರೋಷ್ಠಗಳಂ ಮುಸುಂಕುತುಂ
ಬಿಡು ಬಿಡು ಬೇಡ ಬೇಡೆನಿಪ ಸಲ್ನುಡಿಗಳ್ ಕಿವಿಗಳ್ಗೆ ಸೌಖ್ಯಮಂ |
ಕುಡೆ ಹರಿಣಾಕ್ಷಿ ತನ್ನ ಪೆಗಲತ್ತ ತಿರುಂಗಿಸಿದಾಸ್ಯಪದ್ಮಮಂ
ಪಿಡಿದತಿಕಷ್ಟದಿಂ ನೆಗಪಿಯುಂ ನೆರೆ ಚುಂಬಿಸದಾದೆನಾನದಂ[1] ||

ಬೇರೆ ವಿಧವಾದ ವ್ಯಂಜಕತ್ವವು ನಿಪಾತಗಳಿಗೆ ಪ್ರಸಿದ್ಧವಾಗಿರುವುದೇನೋ ಸರಿಯೆ. ಆದರೆ ನಾವು ಇಲ್ಲಿ ಹೇಳುತ್ತಿರುವುದು ರಸಾನುಗುಣವಾದ ವ್ಯಂಜಕತ್ವವನ್ನು ಮಾತ್ರ. ಉಪಸರ್ಗಗಳ ವ್ಯಂಜಕತ್ವಕ್ಕೆ ಉದಾಹರಣೆ :—

ನೀವಾರಾಃ ಶುಕಗರ್ಭಕೋಟರಮುಖಭ್ರಷ್ಟಾಸ್ತರೂಣಾಮಧಃ
ಪ್ರಸ್ನಿಗ್ಧಾಃ ಕ್ವಚಿದಿಂಗುದೀಫಲಭಿದಃ ಸೂಚ್ಯಂತ ಏವೋಪಲಾಃ |
ವಿಶ್ವಾಸೋಪಗಮಾದಭಿನ್ನಮತಯಃ ಶಬ್ದಂ ಸಹತೇ ಮೃಗಾ-
ಸ್ತೋಯಾಧಾರಪಥಾಶ್ಚ ವಲ್ಕಲಶಿಖಾನಿಷ್ಯಂದಲೇಖಾಂಕಿತಾಃ ||

---

[1] ಶಾಕುಂತಲ, ಬಸವಪ್ಪ ಶಾಸ್ತ್ರಿಗಳ ಭಾಷಾಂತರ.

ಆರಯೆ ಸೂಚಿಕುಂ ಗಿಳಿಗಳಿರ್ಪಗಕೋಟರದಿಂ ಜಗುಳ್ದ ನೀ-
ವಾರಮುಮಿಂಗುದೀಫಲವಿಭೇದದೆ ಸುಣ್ಪಿಡಿದಿರ್ಪ ಕಲ್ಗಳುಂ।
ತೇರಿನ ಶಬ್ದಮಂ ಸಹಿಸಿ ಸಂಬುಗೆಯಿಂ ಸುಳಿವೇಣಬೃಂದಮುಂ
ನಾರುಡೆಯುಂಚಿನಿಂದಿಳಿದ ನೀರ್ಗೆರೆಯಾಂತ ತಟಾಕಮಾರ್ಗಮುಂ[1] ॥

ಎರಡು ಮೂರು ಉಪಸರ್ಗಗಳನ್ನು ಒಂದೇ ಪದಕ್ಕೆ ಜೋಡಿಸುವುದೂ ಸಹ ರಸಾಭಿವ್ಯಕ್ತಿಗೆ ಅನುಗುಣವಾಗಿದ್ದರೆ ಮಾತ್ರ ನಿರ್ದೋಷ. ಉದಾಹರಣೆ:—

ಪ್ರಭ್ರಶ್ಯತ್ಯುತ್ತರೀಯತ್ವಿಷಿ ತಮಸಿ ಸಮುದ್ವೀಕ್ಷ್ಯ ವೀತಾವೃತೀನ್ ಪ್ರಾಕ್ ಜಂತೂನ್ . . .

ಅಥವಾ—**ಮನುಷ್ಯವೃತ್ತ್ಯಾ ಸಮುಪಾಚರನ್ತಮ್ . . .**, ಇವೇ ಮುಂತಾದುವು. ನಿಪಾತಗಳಿಗೂ ಸಹ ಇದೇ ನಿಯಮವೇ ಅನ್ವಯಿಸುತ್ತದೆ. **ಅಹೋ ಬತಾಸಿ ಸ್ಪೃಹಣೀಯವೀರ್ಯಃ . . .** ಇತ್ಯಾದಿಗಳು ಉದಾಹರಣೆಗಳು. ಹಾಗೆಯೇ—

ಯೇ ಜೀವನ್ತಿ ನ ಮಾನ್ತಿ ಯೇ ಸ್ಮ ವಪುಷಿ ಪ್ರೀತ್ಯಾ ಪ್ರನೃತ್ಯನ್ತಿ ಚ
ಪ್ರಸ್ಯನ್ದಿಪ್ರಮದಾಶ್ರವಃ ಪುಲಕಿತಾ ದೃಷ್ಟೇ ಗುಣಿನ್ಯೂರ್ಜಿತೇ ।
ಹಾ ಧಿಕ್ಕಷ್ಟಮಹೋ ಕ್ವ ಯಾಮಿ ಶರಣಂ ತೇಷಾಂ ಜನಾನಾಂ ಕೃತೇ
ನೀತಾನಾಂ ಪ್ರಲಯಂ ಶಠೇನ ವಿಧಿನಾ ಸಾಧುದ್ವಿಷಃ ಪುಷ್ಯತಾ ॥

ಜೀವಿಪೆವೆಂಬರಾರೊ ಮುದದಿಂ ಬಿರಿಯುತ್ತೆ, ಸಮಂತು ನೃತ್ಯಮಂ
ಗೈವರದಾರೊ ಬಾಷ್ಪಪುಲಕಂಗಳೆ ಪೊಣ್ಮೆ, ಗುಣೋರ್ಜಿತೇಕ್ಷಣಂ।
ತೀವಿದುದೆಂದು ; ಮೇಣವರೆ ಚಿಃ ಶಠನಿಂ ವಿಧಿಯಿಂ ಗುಣಾರಿಯಿಂ-
ದೇವಕೆ ಪಾತ್ರರಾಗೆ, ಪೊರೆಯಲ್ಕವರಂ ಮಗುಳ್ದಿತ್ತ ಪೋದಪೆಂ ॥

ಇವೇ ಮುಂತಾದುವೂ ಉದಾಹರಣೆಗಳು.

ಪದಪೌನರುಕ್ತ್ಯವೂ ವ್ಯಂಜಕತ್ವದ ದೃಷ್ಟಿಯಿಂದಾಗಿದ್ದರೆ ಶೋಭಾವಹವೇ ಆಗುತ್ತದೆ. ಅದಕ್ಕೆ—

ಯದ್ವಂಚನಾಹಿತಮತಿರ್ಬಹುಚಾಟುಗರ್ಭಂ
ಕಾರ್ಯೋನ್ಮುಖಃ ಖಲಜನಃ ಕೃತಕಂ ಬ್ರವೀತಿ ।
ತತ್ ಸಾಧವೋ ನ ನ ವಿದನ್ತಿ ವಿದನ್ತಿ ಕಿಂತು
ಕರ್ತುಂ ವೃಥಾಪ್ರಣಯಮಸ್ಯ ನ ಪಾರಯನ್ತಿ ॥

---

[1] ಶಾಕುಂತಲ, ಬಸವಪ್ಪ ಶಾಸ್ತ್ರಿಗಳ ಭಾಷಾಂತರ.

ವಂಚನೆಯೊಂದರೊಳ್ ಕೃತವಿನಿಶ್ಚಯರಾಗಿರುತುಂ ಸ್ವಕಾರ್ಯಮಾ-
ತ್ರೋಚಿತಮಪ್ಪ ಜೇನ್ನುಡಿಗಳಂ ತವೆ ಕೈತವದಿಂದೆ ದುರ್ಜನರ್ ।
ಸೂಚಿಪರಿಂಬುದಂ ನಿಜದೆ ಕಾಣರೆ? ಕಾಂಬರು ಸಜ್ಜನರ್ಕಳಾ-
ಲೋಚನೆಯಾದೊಡಿಲ್ಲ ಸಟೆಯಿಂ ಪ್ರಣಯೋತ್ಕರಮಂ ಪ್ರಕಾಶಿಸಲ್ ॥

ಇವೇ ಮುಂತಾದುವು ಉದಾಹರಣೆಗಳು.

ಕಾಲದ ವ್ಯಂಜಕತ್ವಕ್ಕೆ ಉದಾಹರಣೆ:—

ಸಮವಿಸಮಣಿವ್ವಿಸೇಸಾ ಸಮಂತಓ ಮಂದಮಂದಸಂಆರಾ ।
ಅಇರಾ ಹೋಹಿನ್ತಿ ಪಹಾ ಮಣೋರಹಾಣಂ ಪಿ ದುಲ್ಲಂಘಾ ॥

ಸಮವಿಷಮಸಮಾಸಂಗಳ್
ಸುಮಂದಸಂಚಾರಕಾರಣಂಗಳ್ ಬೇಗಂ ।
ಗಮನಾತೀತಂಗಳ್ಜನ-
ದ ಮನೋರಥಕಮೆನಿಪುವೀ ಪಂಥಾನಂಗಳ್ ॥

ಇಲ್ಲಿ 'ಅಇರಾ ಹೋಹಿನ್ತಿ ಸಹಾ' ಎನ್ನುವಾಗ ಹೋಹಿನ್ತಿ ಎಂಬ ಕಾಲವಿಶೇಷ ವಾಚಕಪ್ರತ್ಯಯವು ರಸಪರಿಪೋಷಕ್ಕೆ ಕಾರಣವಾಗುತ್ತದೆ. ಈ ಗಾಥೆಯ ತಾತ್ಪರ್ಯವು ಪ್ರವಾಸವಿಪ್ರಲಂಭ-ಶೃಂಗಾರಕ್ಕೆ ವಿಭಾವವೆಂದು ಭಾವಿಸಿದರೆ ಸ್ವಾರಸ್ಯವು ಸ್ಪಷ್ಟವಾಗುತ್ತದೆ. ಇಲ್ಲಿ ಪ್ರತ್ಯಯಾಂಶವು ವ್ಯಂಜಕವಾಗಿರುವಂತೆಯೇ ಕೆಲವೆಡೆಗಳಲ್ಲಿ ಪ್ರಕೃತಿಯ ಅಂಶವೂ ವ್ಯಂಜಕವಾಗಿರುತ್ತದೆ. ಉದಾಹರಣೆ:—

ತದ್ಗೇಹಂ ನತಭಿತ್ತಿ ಮಂದಿರಮಿದಂ ಲಬ್ಧಾವಗಾಹಂ ದಿವಃ
ಸಾ ಧೇನುರ್ಜರತೀ ಚರನ್ತಿ ಕರಿಣಾಮೇತಾ ಘನಾಭಾ ಘಟಾಃ ।
ಸ ಕ್ಷುದ್ರೋ ಮುಸಲಧ್ವನಿಃ ಕಲಮಿದಂ ಸಂಗೀತಕಂ ಯೋಷಿತಾ-
ಮಾಶ್ಚರ್ಯಂ ದಿವಸೈರ್ದ್ವಿಜೋಽಯಮಿಯತೀಂ ಭೂಮಿಂ ಸಮಾರೋಪಿತಃ ॥

ಮುರಿದ ಗೋಡೆಗಳಂದಿನಾ ಮನೆಯೆಲ್ಲಿಯೆಲ್ಲಿಯುದಿಂದಿನ
ಸ್ವರ್ಗಸೀಮೆಯನಡರುತಿರುವೀ ಕಲಶರಂಜಿತ ಮಂದಿರ!
ಮುತ್ತಮುದಿಯಾಗಿರ್ದ ಧೇನುವದೆಲ್ಲಿಂಯೆಲ್ಲಿಯುದಿಂದಿನ
ಗರ್ಜಿಸುತ್ತಿಹ ಮೇಘವರ್ಣದ ಮದಗಜಗಳೀ ಮೋಹರ!
ಒನಕೆಪೆಟ್ಟಿನ ಗಡುಸು ಶಬ್ದವದೆಲ್ಲಿಯೆಲ್ಲಿಯುದಿಂದಿನ
ನಾಡೆ ಚೆಲುವೆಯರೊಸೆದು ಪಾಡುವ ಮಧುರವಾದೀ ಗಾನವು!
ಏನಿದಚ್ಚರಿಯಿನಿತೆ ದಿನಗಳಲಿಂತು ಪಾರ್ವಗೆ ಬಡವಗೆ
ಬಂದಿತೀಪರಿಯೆಲ್ಲ ಭಾಗ್ಯವು ಭೋಗವಂತೆಯೆ ಮಾನವು ॥

ಈ ಶ್ಲೋಕದಲ್ಲಿ ದಿವಸೈಃ ಎಂಬ ಪದದ ಪ್ರಕೃತಿಭಾಗವು ವ್ಯಂಜಕವಾಗಿದೆ. ಸರ್ವನಾಮಗಳ ವ್ಯಂಜಕತ್ವವನ್ನು ಕೂಡ ಈ ಶ್ಲೋಕದಲ್ಲಿಯೇ ನೋಡಬಹುದು. ಈ ಸರ್ವನಾಮಗಳ ವ್ಯಂಜಕತ್ವವನ್ನು ಮನಸ್ಸಿನಲ್ಲಿಟ್ಟುಕೊಂಡೇ, ಕವಿಯು ಮೂಲ ಶ್ಲೋಕದಲ್ಲಿ 'ಎಲ್ಲಿ' ಎಂದು ಮುಂತಾದ ಶಬ್ದಗಳನ್ನು ವಾಚ್ಯವಾಗಿ ಹೇಳಿಲ್ಲ. ಇದೇ ರೀತಿಯಾಗಿ ಮಿಕ್ಕ ವ್ಯಂಜಕವಿಶೇಷಗಳನ್ನೂ ಸಹೃದಯರು ಊಹಿಸಿಕೊಳ್ಳಬೇಕು. ಪದ, ವಾಕ್ಯ, ರಚನೆಗಳಲ್ಲಿಯೂ ವ್ಯಂಜಕತ್ವವುಂಟೆಂದು ಹೇಳಿದುದರಲ್ಲಿಯೇ ಈ ಅಂಶಗಳೆಲ್ಲವೂ ಗತಾರ್ಥವಾಗಿದ್ದರೂ, ಮತ್ತೆ ಅವುಗಳನ್ನು ಬಿಡಿಸಿ ಹೇಳಿದುದಕ್ಕೆ ವಿಶಾಲವಾದ ವ್ಯುತ್ಪತ್ತಿಯುಂಟಾಗಲೆಂಬ ಉದ್ದೇಶವೇ ಕಾರಣ.

ಇದಕ್ಕೆ ಯಾರಾದರೂ ಹೀಗೆ ಆಕ್ಷೇಪಿಸಬಹುದು—'ಅರ್ಥದ ಸಾಮರ್ಥ್ಯದಿಂದ ಮಾತ್ರ ರಸಾದಿಗಳು ಅಭಿವ್ಯಕ್ತವಾಗುವುವೆಂದು ಹಿಂದೆ ಹೇಳಿದಿರಿ; ಈಗ ನಾಮವಿಭಕ್ತಿಪ್ರತ್ಯಯಗಳೇ ಮೊದಲಾದ (ನಿರರ್ಥಕ) ಅಂಶಗಳಿಗೂ ವ್ಯಂಜಕತ್ವವನ್ನು ಹೇಳುವುದು ಅಸಂಗತವೇ ಅಲ್ಲವೇ?' ಎಂದು, ಇದಕ್ಕೆ ಉತ್ತರವನ್ನು ಪದಗಳಿಗೂ ವ್ಯಂಜಕತ್ವವುಂಟೆಂದು ನಿರ್ಣಯಿಸುವಾಗಲೇ ಹೇಳಿಯಾಗಿದೆ. ಒಂದು ವೇಳೆ ಅರ್ಥವಿಶೇಷಗಳು ಮಾತ್ರವೇ ರಸಾದಿಗಳನ್ನು ಧ್ವನಿಸುವುವೆಂದರೂ, ಆ ಅರ್ಥವಿಶೇಷಗಳು ವ್ಯಂಜಕಶಬ್ದಗಳೊಡನೆ ಅತ್ಯಂತ ನಿಕಟವಾದ ಸಂಬಂಧವನ್ನು ಹೊಂದಿರುವುದರಿಂದ, ಮೇಲೆ ಸೂಚಿಸಿದ ವ್ಯಂಜಕಶಬ್ದಸ್ವರೂಪನಿರೂಪಣೆಯು ಪ್ರಕಾರಾಂತರದಿಂದಾದರೂ ಉಪಯುಕ್ತವೇ ಆಗುತ್ತದೆ. ಕೆಲವು ಶಬ್ದವಿಶೇಷಗಳು ಇಂತಿಂತಹ ಸ್ಥಳಗಳಲ್ಲಿ ಶೋಭಿಸುವುವೆಂದು ಬೇರೆ ಗ್ರಂಥಗಳಲ್ಲಿ[1] ಹೇಳಿರುವ ವಿಭಾಗವೂ ಕೂಡ ವ್ಯಂಜಕತ್ವವನ್ನು ಅವಲಂಬಿಸಿಯೇ ಹೊರಟಿರುವುದೆಂದು ತಿಳಿಯಬೇಕು.

ಎಷ್ಟೋ ಕಡೆಗಳಲ್ಲಿ ಈ ಶಬ್ದವಿಶೇಷಗಳಿಗೆ ರಸವ್ಯಂಜಕತ್ವವು ಕಾಣುವುದಿಲ್ಲವಲ್ಲಾ? ಎನ್ನಬಹುದು. ಅಂತಹ ಸ್ಥಳಗಳಲ್ಲಿಯೂ ಒಂದು ವಿಧವಾದ ಸೌಷ್ಠವವು ಅವುಗಳಿಗೆ ಇರುವುದೆಂದು ಹೇಳಲೇಬೇಕಾಗುತ್ತದೆ. ಏಕೆಂದರೆ ನಾವು ರಸವ್ಯಂಜಕತ್ವವು ಅಧಿಕವಾಗಿರುವ ಬೇರೆ ಕವಿಪ್ರಯೋಗಗಳಲ್ಲಿ ಶಬ್ದವಿಶೇಷಗಳಿಗೆ ವ್ಯಂಜಕತ್ವವಿಶೇಷವನ್ನು ಕಲ್ಪಿಸಿಕೊಂಡಿರುತ್ತೇವೆ. ಆ ಆನುಪೂರ್ವಿಯು ಈಗ ತಪ್ಪಿದ್ದರೂ, ಎಂದರೆ ಅವು ಈಗ ಬಿಡಿಬಿಡಿಯಾಗಿ ಉಳಿದ ಶಬ್ದಗಳ ಸಹಕಾರವಿಲ್ಲದೆ ಬಂದರೂ ಸಹ, ಅವುಗಳಿಗೆ ನಾವು ಅಭ್ಯಾಸಬಲದಿಂದ ವ್ಯಂಜಕತ್ವವಿಶೇಷವನ್ನು ತಂದುಕೊಳ್ಳುತ್ತೇವೆ. ಇಲ್ಲದೆ ಹೋದರೆ ಸಮಾನವಾದ ವಾಚ್ಯಾರ್ಥವನ್ನು ಬೋಧಿಸುವ ಶಬ್ದಗಳಿಗೆ ಸೌಂದರ್ಯದ ದೃಷ್ಟಿಯಿಂದ ವೈಷಮ್ಯವನ್ನು ತರಬಲ್ಲ ಬೇರಾವ

---

[1] ಉದ್ಭಟನ 'ಭಾಮಹವಿವರಣ'ದಲ್ಲಿ ಎಂದು ಅಭಿನವಗುಪ್ತರ ವ್ಯಾಖ್ಯಾನ.

ಕಾರಣವನ್ನು ತಾನೆ ಹೇಳುವುದು ಸಾಧ್ಯ? ಆ ಕಾರಣವು ಸಹೃದಯರಿಗೆ ಮಾತ್ರ ವೇದ್ಯವೆನ್ನುವುದಾದರೆ ನಾವು ಪ್ರತಿಯಾಗಿ ಕೇಳಬೇಕಾಗುತ್ತದೆ:—ಸಹೃದಯತ್ವವೆಂದರೇನು? ಎಂದು. ರಸಭಾವಗಳ ಪರಿವೆಯೇ ಇಲ್ಲದ ಕಾವ್ಯವನ್ನು ಕುರಿತು ಕೆಲವೊಂದು ಸಾಂಪ್ರದಾಯಿಕನಿಯಮಗಳನ್ನು ಬಲ್ಲವರು ಸಹೃದಯರೇ? ಅಥವಾ ರಸಭಾವಾದಿಮಯವಾದ ಕಾವ್ಯದ ಸ್ವರೂಪಪರಿಜ್ಞಾನದಲ್ಲಿ ನಿಪುಣರಾದವರು ಸಹೃದಯರೇ? ಮೊದಲನೆಯ ಪಕ್ಷವು ನಿಜವಾದರೆ ಅಂತಹ ಸಹೃದಯರು 'ಸುಂದರ' ವೆಂದು ವ್ಯವಸ್ಥೆಮಾಡಿದ ಶಬ್ದವಿಶೇಷಗಳಿಗೆ ಸೌಂದರ್ಯನಿಯಮವೇನೂ ಇರಲಾರದು; ಏಕೆಂದರೆ ಹೊಸದೊಂದು ಸಂಪ್ರದಾಯವನ್ನು ಸ್ಥಾಪಿಸಿಕೊಂಡು ಬೇರೆ ವಿಧವಾಗಿ ನಿಯಮಗಳನ್ನು ಹೇಳುವುದೇನೂ ಅಸಂಭವವಲ್ಲ. ಎರಡನೆಯ ಪಕ್ಷದ ಪ್ರಕಾರ ರಸಜ್ಞತೆಯೇ ಸಹೃದಯತ್ವ. ಹಾಗೆ ರಸಜ್ಞರಾದ ಸಹೃದಯರಿಗೆ ವೇದ್ಯವಾಗುವ ಶಬ್ದಗಳ ನೈಸರ್ಗಿಕ ವಿಶೇಷವೆಂದರೆ ರಸಾದಿಗಳನ್ನು ಅಭಿವ್ಯಕ್ತಿಗೊಳಿಸಬಲ್ಲ ವ್ಯಂಜಕತ್ವವೇ. ಅದನ್ನಾಶ್ರಯಿಸಿಯೇ ಅವುಗಳಿಗೆ ಸೌಂದರ್ಯವು ಮುಖ್ಯವಾಗಿ ಸಿದ್ಧವಾಗುತ್ತದೆ. ಅದರ ಬದಲು ವಾಚಕತ್ವವನ್ನಾಶ್ರಯಿಸಿಯೇ ಅವುಗಳ ವಿಶೇಷವನ್ನು ಪರೀಕ್ಷಿಸುವುದಾದರೆ, ಅರ್ಥದೃಷ್ಟಿಯಿಂದ 'ಪ್ರಸಾದ' ಗುಣವನ್ನು ಮಾತ್ರ ನೋಡಬಹುದು; ಅರ್ಥದೃಷ್ಟಿಯೂ ಇಲ್ಲದಿದ್ದರೆ 'ಅನುಪ್ರಾಸ'ವೇ ಮೊದಲಾದ ಅಲಂಕಾರಗಳನ್ನು ಮಾತ್ರ ಗುರುತಿಸಬಹುದು; ಅಷ್ಟೆ.

ಹೀಗೆ ರಸಾದಿಗಳ ವ್ಯಂಜಕಸ್ವರೂಪವನ್ನು ತಿಳಿಸಿ ಈಗ ರಸಪ್ರತಿಬಂಧಕಗಳ ಸ್ವರೂಪವನ್ನು ವಿವರಿಸುವುದಕ್ಕಾಗಿ ಮುಂದಿನ ಕಾರಿಕೆಯನ್ನು ಹೇಳಿದೆ:—

ಕಾರಿಕೆ

ಪ್ರಬಂಧೇ ಮುಕ್ತಕೇ ವಾಪಿ ರಸಾದೀನ್ ಬಂದ್ಧುಮಿಚ್ಛತಾ।
ಯತ್ನಃ ಕಾರ್ಯಃ ಸುಮತಿನಾ ಪರಿಹಾರೇ ವಿರೋಧಿನಾಮ್ ॥ ೧೭ ॥

ಪ್ರಬಂಧದಲ್ಲಿಯೇ ಆಗಲಿ, ಮುಕ್ತಕದಲ್ಲಿಯೇ ಆಗಲಿ, ರಸಗಳನ್ನು ಸೂಚಿಸಬೇಕೆಂಬ ಇಷ್ಟವಿರುವ ಕವಿಯು ಪ್ರತಿಬಂಧಕಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನ ಮಾಡಬೇಕು.

ವೃತ್ತಿ

ಪ್ರಬಂಧದಲ್ಲಾಗಲಿ ಮುಕ್ತಕದಲ್ಲಾಗಲಿ ರಸಭಾವಗಳು ಸಮಾವಿಷ್ಟವಾಗಬೇಕೆಂದು ಬಯಸುವ ಕವಿಯು ರಸಪ್ರತಿಬಂಧಕಗಳನ್ನು ದೂರೀಕರಿಸಲು ಸರ್ವಪ್ರಯತ್ನವನ್ನೂ ಮಾಡಬೇಕು. ಇಲ್ಲದೆ ಹೋದರೆ ಒಂದೇ ಒಂದು ರಸಮಯವಾದ ಶ್ಲೋಕ

ವನ್ನು ಕೂಡ ಅವನು ರಚಿಸಲಾರದೆ ಹೋಗುತ್ತಾನೆ. ಹೀಗೆ ಪ್ರಯತ್ನಪಟ್ಟು ಕವಿಯು ಪರಿಹರಿಸಿಕೊಳ್ಳಬೇಕಾದ ವಿರೋಧಿಗಳಾವುವೆಂದರೆ ಇವು :—

ಕಾರಿಕೆ

ವಿರೋಧಿರಸಸಂಬಂಧಿವಿಭಾವಾದಿಪರಿಗ್ರಹಃ ।
ವಿಸ್ತರೇಣಾನ್ವಿತಸ್ಯಾಪಿ ವಸ್ತುನೋಽನ್ಯಸ್ಯ ವರ್ಣನಮ್ ॥ ೧೮ ॥

ಅಕಾಂಡ ಏವ ವಿಚ್ಛಿತ್ತಿರಕಾಂಡೇ ಚ ಪ್ರಕಾಶನಮ್ ।
ಪರಿಪೋಷಂ ಗತಸ್ಯಾಪಿ ಪೌನಃಪುನ್ಯೇನ ದೀಪನಮ್ ।
ರಸಸ್ಯ ಸ್ಯಾದ್ವಿರೋಧಾಯ ವೃತ್ತ್ಯನೌಚಿತ್ಯಮೇವ ಚ ॥ ೧೯ ॥

ವಿರುದ್ಧ ರಸದ ವಿಭಾವಾದಿಗಳನ್ನು ವರ್ಣಿಸುವುದು, ದೂರಾನ್ವಿತವಾದ ವಸ್ತುವಾವುದೋ ಒಂದನ್ನು ಬೆಳೆಸುವುದು, ಅಕಾಲದಲ್ಲಿ ರಸವನ್ನು ಮೊಟಕುಮಾಡುವುದು ಮತ್ತು ಅಕಾಲದಲ್ಲಿ ಅದನ್ನು ವಿಸ್ತರಿಸುವುದು, ಪರಿಪೋಷವನ್ನು ಆಗಲೇ ಪಡೆದಾಗಿದ್ದರೂ ಮತ್ತೆ ಮತ್ತೆ ಅತಿಯಾಗಿ ಅದನ್ನು ಹೆಚ್ಚಿಸುವುದು, ಮತ್ತು 'ವೃತ್ತಿ'ಯ ಅನೌಚಿತ್ಯ—ಇವೆಲ್ಲವೂ ರಸದ ವಿರೋಧಕ್ಕೆ ಕಾರಣಗಳಾಗುತ್ತವೆ.

ವೃತ್ತಿ

(೧) ಪ್ರಸ್ತುತರಸಕ್ಕೆ ವಿರುದ್ಧವಾದ ರಸವಾವುದುಂಟೋ ಅದರ ವಿಭಾವ, ಭಾವ, ಅನುಭಾವಗಳನ್ನೇ ಚಿತ್ರಿಸುವುದು ರಸಭಂಗಕ್ಕೆ ಕಾರಣವೆಂದು ತಿಳಿಯಬೇಕು. ವಿರುದ್ಧರಸದ ವಿಭಾವಪರಿಗ್ರಹಕ್ಕೆ ಉದಾಹರಣೆ: ಶಾಂತರಸದ ವಿಭಾವಗಳನ್ನು ಯಥೋಚಿತವಾಗಿ ವರ್ಣಿಸಿಯಾದಮೇಲೆ, ಒಡನೆಯೇ ಅದೇ ವಿಭಾವಗಳನ್ನೇ ಶೃಂಗಾರರಸಕ್ಕೂ ವಿಭಾವಗಳೆಂದು ವರ್ಣಿಸುವುದು. ವಿರುದ್ಧರಸದ ಭಾವಪರಿಗ್ರಹಕ್ಕೆ ಉದಾಹರಣೆ: ಪ್ರಿಯನೊಡನೆ ಪ್ರಣಯಕಲಹದಿಂದ ಕುಪಿತೆಯರಾದ ಕಾಮಿನಿಯರನ್ನು ವೈರಾಗ್ಯದ ಕಥೆಗಳ ಮೂಲಕ ಒಲಿಸಿಕೊಳ್ಳಲು ಯತ್ನಿಸುವುದು. ವಿರುದ್ಧರಸದ ಅನುಭಾವಪರಿಗ್ರಹಕ್ಕೆ ಉದಾಹರಣೆ: ಪ್ರಣಯಕುಪಿತೆಯಾದ ಕಾಂತೆಯು ಪ್ರಸನ್ನಳಾಗದೆ ಹೋದಾಗ ಕೋಪಾವೇಶವಿವಶನಾದ ನಾಯಕನ ರೌದ್ರಾಟೋಪದ ವರ್ಣನೆ.

(೨) ಪ್ರಸ್ತುತರಸಕ್ಕೆ ಬಹಳ ದೂರದ ಸಂಬಂಧವಿರುವ ಯಾವುದೋ ವಸ್ತುವನ್ನು ವಿಸ್ತರಿಸುವುದು ಎರಡನೆಯ ರಸಭಂಗಕಾರಣ. ಉದಾಹರಣೆ: ವಿಪ್ರಲಂಭ

ಶೃಂಗಾರದ ನಾಯಕನೊಬ್ಬನನ್ನು ವರ್ಣಿಸಲು ಹೊರಟು, ಯಮಕವೇ ಮುಂತಾದ ಶಬ್ದಾಲಂಕಾರಗಳ ವ್ಯಾಮೋಹದಿಂದ ಕವಿಯು ಪರ್ವತಾದಿಗಳನ್ನು ವಿಸ್ತಾರವಾಗಿ ವರ್ಣಿಸುವುದು.

(೩) ಅಕಾಲದಲ್ಲಿ ರಸವನ್ನು ಮೊಟಕುಮಾಡುವುದು ಮತ್ತು ಅಕಾಲದಲ್ಲಿ ವಿಸ್ತರಿಸುವುದು ಮೂರನೆಯ ರಸಭಂಗಕಾರಣ. ಅಕಾಲದಲ್ಲಿ ರಸವಿರಾಮಕ್ಕೆ ಉದಾಹರಣೆ: ನಾಯಕನಿಗೂ ಸಮಾಗಮಯೋಗ್ಯಳಾದ ನಾಯಿಕೆಗೂ ಅಂಕುರಿತವಾದ ಅನುರಾಗವನ್ನು ವರ್ಣಿಸಿ, ಅವರ ಶೃಂಗಾರಕ್ಕೆ ಪರಿಪೋಷವನ್ನೂ ತಂದು, ಪರಸ್ಪರ ಅನುರಾಗವನ್ನು ತಿಳಿಸಿದ ಮೇಲೆ, ಅವರ ಸಮಾಗಮೋಚಿತವಾದ ಉಪಾಯಚಿಂತೆಯನ್ನಾಗಲಿ ಕಾರ್ಯವನ್ನಾಗಲಿ ವರ್ಣಿಸುವುದಕ್ಕೆ ಪ್ರತಿಯಾಗಿ, ಕಾರ್ಯಾಂತರಗಳನ್ನು ಸ್ವೇಚ್ಛೆಯಿಂದ ವರ್ಣಿಸುವುದು. ಅಕಾಲದಲ್ಲಿ ರಸಪ್ರತಿಪಾದನೆಗೆ ಉದಾಹರಣೆ: ಸರ್ವವೀರವಿಲಯಕಾರಿಯಾದ ಪ್ರಲಯಘೋರ ಸಂಗ್ರಾಮವು ಸಂಪ್ರಾಪ್ತವಾಗಿರುವಾಗ, ವಿಪ್ರಲಂಭಶೃಂಗಾರದ ಪ್ರಸಕ್ತಿಯೇ ಇಲ್ಲದಿದ್ದರೂ ರಾಮಚಂದ್ರನಂತಹ ನಾಯಕನೂ ಸಹ ಅಕಾರಣವಾಗಿ ಶೃಂಗಾರಕಥೆಗಳಲ್ಲಿ ಆಸಕ್ತನಾದನೆಂದು ವರ್ಣಿಸುವುದು. ಇಂತಹ ಸಂದರ್ಭಗಳಲ್ಲಿ ವಿಧಿಯು ಕಥಾನಾಯಕನ ಬುದ್ಧಿಯನ್ನು ಮಂಕುಗೊಳಿಸಿತೆಂದು ಸಮಾಧಾನ ಹೇಳುವುದೇನೂ ಸರಿಯಲ್ಲ; ಏಕೆಂದರೆ ರಸಪ್ರತಿಪಾದನೆಯ ದೃಷ್ಟಿಯೊಂದನ್ನೇ ಮುಖ್ಯವಾಗಿಟ್ಟುಕೊಂಡು ಕವಿಯು ಬರೆಯುವುದು ಯುಕ್ತ. ಇತಿವೃತ್ತವು ಅದಕ್ಕೆ ಒಂದು ಉಪಾಯ ಮಾತ್ರವೆಂದು ಹಿಂದೆಯೇ ಹೇಳಲಾಯಿತು—'ಆಲೋಕಾರ್ಥೀ ಯಥಾ ದೀಪಶಿಖಾಯಾಂ ಯತ್ನವಾನ್ ಜನಃ,'[1] ಇದೇ ಮೊದಲಾದ ಕಾರಿಕೆಗಳಲ್ಲಿ.

ಹೀಗಿರುವುದರಿಂದಲೇ, ಕೇವಲ ಇತಿವೃತ್ತವನ್ನು ಮಾತ್ರ ವರ್ಣಿಸಲು ಮುಖ್ಯವಾಗಿ ಹೊರಟಾಗ ಅಂಗಾಂಗಿಭಾವವಿಲ್ಲದ ರಸಗಳನ್ನು ಪ್ರತಿಪಾದಿಸಬೇಕಾಗುವುದರಿಂದ, ಕವಿಗಳು ಈ ವಿಧವಾದ ತಪ್ಪುಗಳಿಗೆ ಗುರಿಯಾಗುತ್ತಾರೆ. ಆದುದರಿಂದ ಅವರಿಗೆ ರಸಾದಿಗಳನ್ನು ಧ್ವನಿಸುವುದರಲ್ಲಿಯೇ ಮುಖ್ಯತಾತ್ಪರ್ಯವಿರುವುದು ಯುಕ್ತವೆಂಬುದನ್ನು ತೋರಿಸಬೇಕೆಂದು ನಾವು ಈ ಗ್ರಂಥವನ್ನು ಬರೆಯತೊಡಗಿದೆವೇ ಹೊರತು, ಕೇವಲ 'ಧ್ವನಿ'ಯೆಂಬ ಒಂದು ತತ್ವವನ್ನು ಮಾತ್ರ ಪ್ರಚಾರಮಾಡಬೇಕೆಂಬ ಉತ್ಕಟೇಚ್ಛೆಯಿಂದೇನೂ ಅಲ್ಲ.

(೪) ರಸವು ಪರಿಪುಷ್ಟಿಯನ್ನು ಪಡೆದಿದ್ದರೂ ಮತ್ತೆ ಮತ್ತೆ ವಿಸ್ತರಿಸುವುದು

---

[1] ಕಾರಿಕೆ I. ೯, ಪುಟ ೨೭ (ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೨)

ನಾಲ್ಕನೆಯ ರಸಭಂಗ ಕಾರಣ. ಸಕಲ ಸಾಮಗ್ರಿಗಳೂ ಸಾಕಷ್ಟು ಪುಷ್ಟಿಯನ್ನು ಕೊಡುತ್ತಿರುವಾಗ ಸಂಪೂರ್ಣವಾಗಿ ಆಸ್ವಾದವನ್ನು ಕೊಟ್ಟ ರಸವು, ಮತ್ತೆ ಮತ್ತೆ ಅತಿಯಾಗಿ ಒತ್ತಿದರೆ ಹಿಸುಕಿದ ಹೂವಿನಂತಾಗುತ್ತದೆ.

(೫) ಹಾಗೆಯೇ 'ವೃತ್ತಿ'ಯ ಅನೌಚಿತ್ಯವೂ ರಸಭಂಗಕ್ಕೆ ಕಾರಣವಾಗುತ್ತದೆ. ಉದಾಹರಣೆ: ನಾಯಕನನ್ನು ಕುರಿತು ನಾಯಿಕೆಯೊಬ್ಬಳು ಉಚಿತ ರೀತಿಯನ್ನು ತ್ಯಜಿಸಿ ತಾನೇ ಸಂಭೋಗಾಭಿಲಾಷೆಯನ್ನು ಬಾಯಿಬಿಟ್ಟು ಹೇಳುವುದು. ಅಥವಾ 'ವೃತ್ತಿ'ಯೆಂದರೆ **ಭರತನ ಗ್ರಂಥ**ದಲ್ಲಿ ಪ್ರಸಿದ್ಧವಾಗಿರುವ ಕೈಶಿಕಿಯೇ ಮೊದಲಾದುವು ಇಲ್ಲವೆ ಇತರ ಕಾವ್ಯಾಲಂಕಾರಕಾರರು ಹೇಳುವ ಉಪನಾಗರಿಕಾ ಮುಂತಾದುವು—ಇವುಗಳನ್ನು ಅನನುರೂಪವಾಗಿ ಪ್ರಯೋಗಿಸುವ ಅನೌಚಿತ್ಯವೂ ರಸಭಂಗಕ್ಕೆ ಕಾರಣ. ಈ ಎಲ್ಲ ರಸಭಂಗಕಾರಣಗಳನ್ನೂ ಮತ್ತು ಹೀಗೆಯೇ ಊಹಿಸಿಕೊಳ್ಳಬಹುದಾದ ಇತರ ಕಾರಣಗಳನ್ನೂ ಪರಿಹರಿಸಿಕೊಳ್ಳಲು ಸತ್ಕವಿಗಳು ಬಹಳ ಜಾಗರೂಕರಾಗಿರಬೇಕು. ಇದನ್ನು ಸಂಕ್ಷೇಪದಲ್ಲಿ ಹೇಳುವ ಪರಿಕರ ಶ್ಲೋಕಗಳಿವು:

ಮುಖ್ಯಾ ವ್ಯಾಪಾರವಿಷಯಾಃ ಸುಕವೀನಾಂ ರಸಾದಯಃ।
ತೇಷಾಂ ನಿಬಂಧನೇ ಭಾವ್ಯಂ ತೈಃ ಸದೈವಾಪ್ರಮಾದಿಭಿಃ॥

ನೀರಸಸ್ತು ಪ್ರಬಂಧೋ ಯಃ ಸೋಽಪಶಬ್ದೋ ಮಹಾನ್ ಕವೇಃ।
ಸ ತೇನಾಕವಿರೇವ ಸ್ಯಾದನ್ಯೇನಾಸ್ಮೃತಲಕ್ಷಣಃ॥

ಪೂರ್ವೇ ವಿಶೃಂಖಲಗಿರಃ ಕವಯಃ ಪ್ರಾಪ್ತಕೀರ್ತಯಃ।
ತಾನ್ಸಮಾಶ್ರಿತ್ಯ ನ ತ್ಯಾಜ್ಯಾ ನೀತಿರೇಷಾ ಮನೀಷಿಣಾ॥

ವಾಲ್ಮೀಕಿವ್ಯಾಸಮುಖ್ಯಾಶ್ಚ ಯೇ ಪ್ರಖ್ಯಾತಾಃ ಕವೀಶ್ವರಾಃ।
ತದಭಿಪ್ರಾಯಬಾಹ್ಯೋಽಯಂ ನಾಸ್ಮಾಭಿರ್ದರ್ಶಿತೋ ನಯಃ॥

ರಸಾದಿಗಳನ್ನು ಪ್ರತಿಪಾದಿಸುವುದೇ ಸುಕವಿಗಳ ಮುಖ್ಯ ಕೆಲಸ. ಅವುಗಳನ್ನು ಪ್ರತಿಪಾದಿಸುವಾಗ ಅವರು ಒಂದು ತಪ್ಪೂ ಆಗದಂತೆ ಸದಾ ಜಾಗರೂಕರಾಗಿರಬೇಕು. ನೀರಸವಾದ ಪ್ರಬಂಧವೇ ಕವಿಗೆ ಎಲ್ಲಕ್ಕಿಂತಲೂ ದೊಡ್ಡ 'ಅಪಶಬ್ದ.' ಈ ದೋಷದಿಂದ ಅವನು 'ಅಕವಿ'ಯೆನಿಸುತ್ತಾನೆ. ಒಬ್ಬನೂ ಅವನ ಹೆಸರನ್ನು

ಮುಂದೆ ಸ್ಮರಿಸುವುದಿಲ್ಲ. ಹಿಂದೇನೋ ಸ್ವೇಚ್ಛೆಯಾಗಿ ಬರೆದ ಕವಿಗಳೂ ಕೂಡ ಕೀರ್ತಿಯನ್ನು ಗಳಿಸಿಬಿಟ್ಟರು. ಆದರೆ ಅವರನ್ನು ಅನುಸರಿಸಿ ಈಗ ಹೇಳಿದ ನೀತಿಯನ್ನು ಮತಿವಂತರಾರೂ ಬಿಡಬಾರದು. ವಾಲ್ಮೀಕಿ, ವ್ಯಾಸ, ಮೊದಲಾದ ಪ್ರಖ್ಯಾತ ಕವೀಶ್ವರರ ಅಭಿಪ್ರಾಯಕ್ಕೆ ವಿರುದ್ಧವಾದ ನೀತಿಯನ್ನೇನೂ ನಾವು ತೋರಿಸಿಲ್ಲ.

ಕಾರಿಕೆ

ವಿವಕ್ಷಿತೇ ರಸೇ ಲಬ್ಧಪ್ರತಿಷ್ಠೇ ತು ವಿರೋಧಿನಾಮ್ ।
ಬಾಧ್ಯಾನಾಮಂಗಭಾವಂ ವಾ ಪ್ರಾಪ್ತಾನಾಮುಕ್ತಿರಚ್ಛಲಾ ॥ ೨೦ ॥

ವಿವಕ್ಷಿತವಾದ ರಸವು ಸ್ಥಿರವಾಗಿ ಪ್ರತಿಷ್ಠಿತವಾದಮೇಲೆ ಆ ರಸದಿಂದ ಬಾಧ್ಯವಾಗುವಂತೆ, ಅಥವಾ ಆ ರಸಕ್ಕೆ ಗೌಣವಾಗಿ ವಿರೋಧಿಗಳು ಬರುವಂತೆ, ಬರೆದರೂ ತಪ್ಪಿಲ್ಲ.

ವೃತ್ತಿ

ಸಾಮಗ್ರಿಗಳೆಲ್ಲವೂ ಸೇರಿ ವಿವಕ್ಷಿತ ರಸವು ಪರಿಪುಷ್ಟವಾಗಿರುವಾಗ, ವಿರೋಧಿರಸದ ಅಂಗಗಳು ಬಾಧ್ಯವಾಗಿಯೋ ಇಲ್ಲವೇ ಅಂಗವಾಗಿಯೋ ಬರುವಂತೆ ಬರೆದರೂ ದೋಷವಿಲ್ಲ. ಬಾಧ್ಯತ್ವವೆಂದರೆ ತಮ್ಮ ಶಕ್ತಿಯನ್ನು ಕಳೆದುಕೊಳ್ಳುವಿಕೆ, ಅಷ್ಟೆ. ಆದಕಾರಣ ಅಂತಹ ವಿರೋಧಿಗಳಿಂದ ಪ್ರಸ್ತುತವಾದ ರಸಕ್ಕೆ ಪರಿಪೋಷವೇ ದೊರೆಯುತ್ತದೆ. ಅಂಗತ್ವವನ್ನು ಪಡೆದುಬಿಟ್ಟಾಗ ಅವುಗಳಿಗೆ ವಿರೋಧಿತ್ವವೇ ಉಳಿಯುವುದಿಲ್ಲ. ಈ ಅಂಗತ್ವಪ್ರಾಪ್ತಿಯು ಅವುಗಳಿಗೆ ಸ್ವಾಭಾವಿಕವಾಗಿರಬಹುದು ಇಲ್ಲವೆ ಆರೋಪಿತವಾಗಿರಬಹುದು. ಸ್ವಾಭಾವಿಕವಾದ ಅಂಗತ್ವವುಳ್ಳುವನ್ನು ಹೇಳುವಾಗ ವಿರೋಧವಿಲ್ಲವೇ ಇಲ್ಲ. ಉದಾಹರಣೆಗೆ, ವಿಪ್ರಲಂಭಶೃಂಗಾರದಲ್ಲಿ ಅದಕ್ಕೆ ಅಂಗಗಳಾದ ವ್ಯಾಧಿಯೇ ಮೊದಲಾದುವುಗಳನ್ನು ಮಾತ್ರ ವರ್ಣಿಸುವಾಗ ದೋಷವಿಲ್ಲ. ಅದಕ್ಕೆ ಅಂಗಗಳಲ್ಲದವನ್ನು (=ಮರಣಾದಿಗಳನ್ನು) ವರ್ಣಿಸಿದರೆ ದೋಷವೇ. ಒಂದುವೇಳೆ ಮರಣಕ್ಕೂ ಅದರ ಅಂಗತ್ವವುಂಟೆಂದು ಒಪ್ಪಿದರೂ, ಅದನ್ನು ವರ್ಣಿಸುವುದು ಯುಕ್ತವಲ್ಲ. ಆಶ್ರಯದ ವಿಚ್ಛೇದದಿಂದ ರಸಕ್ಕೂ ಅತ್ಯಂತ ವಿಚ್ಛೇದವು ಬರುವುದೇ ಕಾರಣ. 'ಕರುಣರಸಕ್ಕೆ ಇಂತಹ ವಿಷಯಗಳು ಪರಿಪೋಷವನ್ನೇ ತರುತ್ತವಲ್ಲಾ?' ಎನ್ನಬಹುದು. ಆದರೆ ಕರುಣರಸವು ಇಲ್ಲಿ ಅಪ್ರಸಕ್ತವಾದುದರಿಂದಲೂ ಪ್ರಕೃತರಸಕ್ಕೆ ವಿಚ್ಛೇದವೇ ಬರುವುದರಿಂದಲೂ ಇದು ತಪ್ಪು. ಕರುಣರಸವೇ ಪ್ರಧಾನವಾಗಿರುವ ಕಾವ್ಯದಲ್ಲಿ ಮಾತ್ರ ಹೀಗೆ ಹೇಳಿದರೆ ವಿರೋಧವಿಲ್ಲ. ಶೃಂಗಾರದಲ್ಲಿಯೂ ಸಹ ಮರಣಾನಂತರ ಬಹಳ ಬೇಗವೇ ಪುನರ್ಮಿಲನದ

ಸಂಭವವಿದ್ದರೆ ಒಮ್ಮೊಮ್ಮೆ ಮರಣವನ್ನು ವರ್ಣಿಸುವುದೂ ಅತ್ಯಂತ ವಿರೋಧಿಯೆನಿಸುವುದಿಲ್ಲ. ಹೆಚ್ಚು ಕಾಲ ಕಳೆದಮೇಲೆ ಪುನರ್ಮಿಲನದ ಪ್ರಸಕ್ತಿಯಿದ್ದರೂ ಸಹ, ಪ್ರವಾಹರೂಪವಾದ ಪ್ರಣಯಕ್ಕೆ ಇದರಿಂದ ಮಧ್ಯದಲ್ಲಿಯೇ ವಿಚ್ಛೇದವುಂಟಾಗುವುದರಿಂದ, ರಸಪ್ರತಿಪಾದನೆಯಲ್ಲಿಯೇ ಮುಖ್ಯವಾದ ಆಸಕ್ತಿಯುಳ್ಳ ಕವಿಯು ಇವುಗಳನ್ನು ಬಿಡಬೇಕು.

ವಿವಕ್ಷಿತವಾದ ರಸವು ಪರಿಪುಷ್ಟವಾಗಿರುವಾಗ ವಿರೋಧಿರಸಾಂಗಗಳು ಬಾಧ್ಯವಾಗುವ ರೀತಿಯಲ್ಲಿ ಬಂದು ದೋಷವೆನಿಸದಿರುವುದಕ್ಕೆ ಉದಾಹರಣೆ:—

ಕ್ವಾಕಾರ್ಯಂ ಶಶಲಕ್ಷ್ಮಣಃ ಕ್ವ ಚ ಕುಲಂ ಭೂಯೋಽಪಿ ದೃಶ್ಯೇತ ಸಾ
ದೋಷಾಣಾಂ ಪ್ರಶಮಾಯ ಮೇ ಶ್ರುತಮಹೋ ಕೋಪೇಽಪಿ ಕಾಂತಂ ಮುಖಮ್ ।
ಕಿಂ ವಕ್ಷ್ಯಂತ್ಯಪಕಲ್ಮಷಾಃ ಕೃತಧಿಯಃ ಸ್ವಪ್ನೇಽಪಿ ಸಾ ದುರ್ಲಭಾ
ಚೇತಃ ಸ್ವಾಸ್ಥ್ಯಮುಪೈಹಿ ಕಃ ಖಲು ಯುವಾ ಧನ್ಯೋಽಧರಂ ಪಾಸ್ಯತಿ ॥

ಎಲ್ಲಿಯಕಾರ್ಯಮೆಲ್ಲಿ ಶಶಿಯಾ ಸುಕುಲಂ! ಪ್ರಿಯೆ ಮತ್ತೆ ಕಾಂಬಳೇ
ಪೊಲ್ಲದನೊತ್ತಲಲ್ತೆ ತಿಳಿವೀ ಮೊಗಮೇಂ ಮುನಿದುಂ ಮನೋಹರಂ।
ಬಲ್ಲರಕಲ್ಮಷರ್ ನುಡಿವರೇಂ ಕನಸಲ್ಲಿಯುಮೀಕೆ ಕಾಣಳಿ-
ನ್ನಿಲ್ಲಿ ಸುಧೀರನಾಗು ಮನವೇ!—ಮಿಗೆ ಚುಂಬಿಪ ಧನ್ಯನಾವನೋ ॥

ಹಾಗೆಯೇ ಮಹಾಶ್ವೇತೆಯಲ್ಲಿ ನಿರ್ಭರಾನುರಕ್ತನಾದ ಪುಂಡರೀಕನಿಗೆ ದ್ವಿತೀಯ ಮುನಿಕುಮಾರನು ಮಾಡುವ ಉಪದೇಶವು ಇನ್ನೊಂದು ಉದಾಹರಣೆ[1]. ಸ್ವಾಭಾವಿಕವಾದ ಅಂಗಭಾವವನ್ನು ಪಡೆದಿರುವ ರಸವಿರೋಧಿಗಳ ನಿರ್ದುಷ್ಟ ಪ್ರಯೋಗಕ್ಕೆ ಉದಾಹರಣೆ:—

"ಭ್ರಮಿಮರತಿಮಲಸಹೃದಯತಾಂ . . ." ಎಂಬ ಶ್ಲೋಕ.[2] ವಿರೋಧಿ ರಸಗಳು ಆರೋಪಿತವಾದ ಅಂಗಭಾವವನ್ನು ಪಡೆದು ನಿರ್ದುಷ್ಟವೆನಿಸುವ ಪ್ರಯೋಗಗಳು:

೧. ಪಾಂಡುಕ್ಷಾಮಂ ವದನಂ ಹೃದಯಂ ಸರಸಂ ತವಾಲಸಂ ಚ ವಪುಃ ।
ಆವೇದಯತಿ ನಿತಾಂತಂ ಕ್ಷೇತ್ರಿಯರೋಗಂ ಸಖಿ ಹೃದಂತಃ ॥

ವದನಂ ಬಿಳಿದುಂ ಕೃಶಮುಂ
ಹೃದಯಂ ಸರಸಂ ಶರೀರಮಲಸಂ ನಿನ್ನಾ।
ಸುದತಿಯೆ ಬಿಡದೆಲ್ಲವ ಪೇ-
ಳ್ವುದು ಹೃದಯೊದೊಳಿರ್ಪ ಯಕ್ಷ್ಮರೋಗದ ಪರಿಯಂ ॥

---

[1] ಬಾಣಭಟ್ಟನ ಕಾದಂಬರೀಕಥೆ.

[2] ಹಿಂದೆ ಪುಟ ೧೨ ನ್ನು ನೋಡಿ. ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೩.

೨. ಕೋಪಾತ್ಕೋಮಲಲೋಲ . . .[3].

ಇವೇ ಮುಂತಾದ ಶ್ಲೋಕಗಳು.

ಈ ಅಂಗತ್ವಪ್ರಾಪ್ತಿಯು ಇನ್ನೊಂದು ಬಗೆಯಿಂದಲೂ ಆಗಬಹುದು. ಯಾವುದೋ ಒಂದು ವಾಕ್ಯಾರ್ಥವು 'ಆಧಿಕಾರಿಕ' ಅಥವಾ ಮುಖ್ಯವಾಗಿರುವಾಗ, ಪರಸ್ಪರ ವಿರುದ್ಧಗಳಾದ ಎರಡು ರಸಗಳೋ ಇಲ್ಲವೆ ಎರಡು ಭಾವಗಳೋ ಆ ಮುಖ್ಯವಾದ ರಸಾಂತರಕ್ಕೆ ಮತ್ತೆ ಅಂಗಭಾವವನ್ನು ಪಡೆಯಬಹುದು. ಹೀಗಾದರೂ ದೋಷವಿಲ್ಲ. ಇದಕ್ಕೆ ಈಗಾಗಲೇ ಹೇಳಲಾದ 'ಕ್ಷಿಪ್ತೋ ಹಸ್ತಾವಲಗ್ನಃ . . .'[4] ಮೊದಲಾದುವು ಉದಾಹರಣೆಗಳು. 'ಅಲ್ಲಿ ಅವಿರೋಧ ಹೇಗೆ?' ಎಂದು ಕೇಳಬಹುದು. ಎರಡನ್ನೂ ಅನ್ಯಪರವೆಂದು ನಾವು ತೀರ್ಮಾನಮಾಡುವುದೇ ಅದಕ್ಕೆ ಕಾರಣವೆಂದು ಉತ್ತರ. 'ಅನ್ಯಪರಗಳೇ ಆದರೂ ಪರಸ್ಪರ ವಿರೋಧಿಗಳಿಗೆ ವಿರೋಧನಿವೃತ್ತಿಯಾಗುವುದೆಂತು?' ಎಂದು ಮತ್ತೆ ಕೇಳಿದರೆ ಅದಕ್ಕೂ ಈ ಉತ್ತರವನ್ನು ಹೇಳುತ್ತೇವೆ:—ಹೊಸದಾಗಿ ವಿಧಿಯನ್ನು ವಿಧಿಸುವಾಗ ಎರಡು ಪರಸ್ಪರ ವಿರುದ್ಧವಾದ ಉಕ್ತಿಗಳಿದ್ದರೆ ದೋಷವಾಗುವುದೇ ಹೊರತು ಹಿಂದೆ ಆದುದರ ಅನುವಾದ ಮಾಡುವಾಗ ದೋಷವಾಗುವುದಿಲ್ಲ. ಉದಾಹರಣೆ:—

ಏಹಿ ಗಚ್ಛ ಪತೋತ್ತಿಷ್ಠ ವದ ಮೌನಂ ಸಮಾಚರ |
ಏವಮಾಶಾಗ್ರಹಗ್ರಸ್ತೈಃ ಕ್ರೀಡನ್ತಿ ಧನಿನೋಽರ್ಥಿಭಿಃ ||

ಬಾ ಪೋ ಸಾರ್ ನಿಲ್ ನುಡಿ ಸ-
ಲ್ಲಾಪವನುಳಿಯೆಂದು ಮೇಣ್ದುರಾಶಾಗ್ರಹಸಂ- |
ಘೋಪಹತರ್ ಧನಿಗಳ್ ಕ್ರೀ-
ಡಾಪರತೆಯನಾಳ್ವರಲ್ತೆ ಯಾಚಕಜನದೊಳ್ ||

ಇವೇ ಮೊದಲಾದುವಲ್ಲಿ ಹೇಗೆ ವಿಧಿ, ಪ್ರತಿಷೇಧಗಳೆರಡೂ ಒಟ್ಟಿಗೇ ಬಂದರೂ ಕೇವಲ ಅನುವಾದರೂಪವಾದುದರಿಂದ ದೋಷವಿಲ್ಲವೋ ಹಾಗೆಯೇ ಕ್ಷಿಪ್ತೋ ಹಸ್ತಾವಲಗ್ನಃ . . . ಮೊದಲಾದ ಕಡೆಗಳಲ್ಲಿಯೂ ದೋಷವಿಲ್ಲ. ಈ ಶ್ಲೋಕದಲ್ಲಿ ಈರ್ಷ್ಯಾ-ವಿಪ್ರಲಂಭಶೃಂಗಾರ ಮತ್ತು ಕರುಣರಸಗಳನ್ನು ವಿಧಿಸುವುದಿಲ್ಲ. ತ್ರಿಪುರಾರಿಯ ಪ್ರಭಾವಾತಿಶಯವೇ ಪ್ರಧಾನವಾದ ತಾತ್ಪರ್ಯಾರ್ಥ. ಅದಕ್ಕೆ ಇವುಗಳನ್ನು ಅಂಗವೆಂದೇ ವ್ಯವಸ್ಥೆಮಾಡಲಾಗಿದೆ.

---

[3] ಹಿಂದೆ ಪುಟ ೬೩ ನ್ನು ನೋಡಿ. ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೨.

[4] ಪುಟ ೪೬ ನ್ನು ನೋಡಿ. ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೨.

ರಸಗಳ ವಿಷಯದಲ್ಲಿ ವಿಧಿ-ಅನುವಾದ ಮೊದಲಾದ ವ್ಯವಹಾರವೇ ಅಸಂಭವವೆಂದು ಹೇಳುವುದು ಶಕ್ಯವಿಲ್ಲ. ಏಕೆಂದರೆ ಅವೂ ವಾಕ್ಯಾರ್ಥಗಳೆಂದು ಎಲ್ಲರೂ ಒಪ್ಪುತ್ತಾರೆ. ವಾಕ್ಯಾರ್ಥಕ್ಕೂ ವಾಚ್ಯಕ್ಕೂ ಇರುವ ವಿಧಿ-ಅನುವಾದಗಳು ಆ ವಾಕ್ಯಾರ್ಥ ಮತ್ತು ವಾಚ್ಯಗಳಿಂದಲೇ ಧ್ವನಿತವಾಗುವ ರಸಗಳಿಗೂ ಬರುವುದನ್ನು ತಪ್ಪಿಸಲು ಯಾರಿಗೆ ಸಾಧ್ಯ? ರಸಗಳೇ ಸಾಕ್ಷಾತ್ತಾಗಿ ಕಾವ್ಯಾರ್ಥಗಳೆಂದು ಕೆಲವರು ಒಪ್ಪದೆ ಇರಬಹುದು. ಅವರಾದರೂ ಕಾವ್ಯಾರ್ಥವು ರಸಪರ್ಯವಸಾಯಿಯೆಂದು ಒಪ್ಪಲೇಬೇಕು. ಹಾಗೆಂದರೂ ಈ ಶ್ಲೋಕದಲ್ಲಿ ವಿರೋಧವೇನೂ ಇಲ್ಲ. ಏಕೆಂದರೆ ಅಭೀಷ್ಟವಾದ ರಸಕ್ಕೆ ಕಾರಣಗಳಾದ ಎರಡು ಅಂಗಗಳನ್ನು ಅನುವಾದ ಮಾಡುತ್ತಿರುವೆವೆಂದರೂ, ಮುಖ್ಯವಾದ ಶಿವಪ್ರಭಾವಾತಿಶಯದ ಪ್ರತೀತಿಯು ಅಡ್ಡಿಯಿಲ್ಲದೆ ಬಂದೇ ಬರುತ್ತದೆ. ಒಂದೇ ಕಾರಣವು ಏಕಕಾಲದಲ್ಲಿ ಎರಡು ವಿರುದ್ಧ ಫಲಗಳನ್ನು ಕೊಡುತ್ತದೆಂದರೆ ವಿರೋಧ ಬರುವುದೇ ಹೊರತು ವಿರುದ್ಧವಾದ ಎರಡು ಅಂಶಗಳು ಸಹಕಾರಿಗಳಾಗಿ ಒಂದೇ ಫಲವನ್ನು ಕೊಡುತ್ತವೆಂದರೆ ಯಾವ ವಿರೋಧವೂ ಇಲ್ಲ. ಹಾಗಾದರೆ ನಾಟಕಗಳಲ್ಲಿ ಇಂತಹ ವಿರುದ್ಧಾರ್ಥಧ್ವನಿಯು ಬಂದರೆ ಅಭಿನಯಿಸುವುದು ಹೇಗೆಂದು ಕೇಳಬಹುದು. ಅದಕ್ಕೆ ನಮ್ಮ ಉತ್ತರವಿಷ್ಟೆ: ಈ ವಿಧವಾದ ವಾಚ್ಯಾರ್ಥಗಳನ್ನು ಹೇಗೆ ಅಭಿನಯಿಸುವರೋ ಹಾಗೆಯೇ ಇದನ್ನೂ ಅಭಿನಯಿಸಬಹುದು, ಎಂದು. ಹೀಗೆ 'ವಿಧಿ'—'ಅನುವಾದ'ಗಳ ನ್ಯಾಯವನ್ನಾಶ್ರಯಿಸುವುದರಿಂದ ಶ್ಲೋಕದಲ್ಲಿ ವಿರೋಧವು ಪರಿಹೃತವಾದಂತಾಯಿತು.

ಅದೂ ಅಲ್ಲದೆ ಅಭಿನಂದನೀಯನೂ ಅಭ್ಯುದಯಸಂಪನ್ನನೂ ಆದ ನಾಯಕನೊಬ್ಬನ ಪ್ರಭಾವಾತಿಶಯವನ್ನು ವರ್ಣಿಸುತ್ತಿರುವಾಗ ಅವನ ಪ್ರತಿಪಕ್ಷದವರ ಕರುಣರಸವು ಸಹೃದಯರ ಮನಸ್ಸಿಗೆ ಆತಂಕವನ್ನುಂಟುಮಾಡುವುದಿಲ್ಲ; ಅದಕ್ಕೆ ಬದಲಾಗಿ ಸಂತೋಷಾತಿಶಯವನ್ನೇ ಉಂಟುಮಾಡುತ್ತದೆ. ಹೀಗೆ ಕರುಣರಸದ ಶಕ್ತಿಯು ಕುಂದಿಬಿಡುವುದರಿಂದ ಅದರ ವಿರುದ್ಧವಾದ ಶೃಂಗಾರವನ್ನು ವರ್ಣಿಸುವುದರಿಂದ ಯಾವ ದೋಷವೂ ಇಲ್ಲ. ಆದುದರಿಂದ ಮುಖ್ಯತಾತ್ಪರ್ಯವಾದ ರಸ ಅಥವಾ ಭಾವಕ್ಕೆ ಯಾವುದು ವಿರೋಧಿಯೋ ಅದನ್ನು ಮಾತ್ರ ರಸವಿರೋಧಿಯೆನ್ನುವುದು ನ್ಯಾಯವೇ ಹೊರತು, ಗೌಣವಾದುದಾವುದನ್ನೂ ಹಾಗೆನ್ನಬಾರದು.

ಅಥವಾ ಹೀಗೂ ವಿರೋಧವನ್ನು ಪರಿಹರಿಸಬಹುದು:—ಶ್ಲೋಕದ ಮುಖ್ಯತಾತ್ಪರ್ಯವು ಉತ್ಪ್ರೇಕ್ಷಿತವಾದ ಕರುಣರಸವೇ. ಶೃಂಗಾರವರ್ಣನೆಯು ಭಂಗಿವಿಶೇಷದಿಂದ ಸೂಚಿತವಾಗುವುದು ಸರಿಯಷ್ಟೆ! ಅದನ್ನು ಆ ಮುಖ್ಯವಾದ ಕರುಣರಸಕ್ಕೆ ಅಂಗವೆಂದು ಯೋಜನೆಮಾಡಿಕೊಂಡರೆ ಕರುಣರಸಕ್ಕೆ ಇನ್ನೂ ಹೆಚ್ಚಿನ

ಪರಿಪೋಷವೇ ಸಿಕ್ಕಿದಂತಾಗುತ್ತದೆ. ಏಕೆಂದರೆ ಸ್ವಭಾವಮಧುರವಾದ ಪದಾರ್ಥಗಳು ಶೋಚನೀಯವಾದ ಸ್ಥಿತಿಗೆ ಬಂದಾಗ ಅವುಗಳ ಹಿಂದಿನ ವಿಲಾಸಗಳೆಲ್ಲ ವಿಶೇಷವಾಗಿ ನೆನಪಿಗೆ ಬಂದು ಮತ್ತೂ ಹೆಚ್ಚಿನ ಶೋಕಾವೇಶವನ್ನುಂಟುಮಾಡುತ್ತವೆ. ಉದಾಹರಣೆ:—

ಅಯಂ ಸ ರಶನೋತ್ಕರ್ಷೀ ಪೀನಸ್ತನವಿಮರ್ದನಃ |
ನಾಭ್ಯೂರುಜಘನಸ್ಪರ್ಶೀ, ನೀವೀವಿಸ್ರಂಸನಃ ಕರಃ ||

ಇದೆ ರಶನೋತ್ಕರ್ಷಣಪಟು-
ವಿದೆ ಪೀನಕುಚಾವಮರ್ದನಾಧಿಕರಸಿಕಂ |
ಚದುರಂ ನಾಭ್ಯೂರುಜಘನ-
ಪದದೊಳ್ ನೀವೀವಿಚಾಲಕಂ ವರಹಸ್ತಂ ||

ಇದೇ ಮುಂತಾದುವು. ಹಾಗೆಯೇ ಪ್ರಕೃತದಲ್ಲಿಯೂ ಶಂಭುವಿನ ಶರಾಗ್ನಿಯು ಆದ್ರಾರ್ಪರಾಧನಾದ ಕಾಮಿಯಂತೆಯೇ ವ್ಯವಹರಿಸಿದನೆಂದು ಹೇಳುವಾಗ ಕರುಣರಸ ಪುಷ್ಟಿಯೇ ಬರುವುದರಿಂದಲೂ ವಿರೋಧವು ತಪ್ಪುತ್ತದೆ. ಆದುದರಿಂದ ನಾವು ಯಾವ ಯಾವ ರೀತಿಗಳಿಂದ ನೋಡುವೆವೋ ಆಯಾ ರೀತಿಗಳಿಗನುಸಾರವಾಗಿಯೇ ದೋಷವಿಲ್ಲವೆಂಬುದೂ ಸ್ಪಷ್ಟವಾಗುತ್ತದೆ. ಎಂದ ಮೇಲೆ—

ಕ್ರಾಮನ್ತ್ಯಃ ಕ್ಷತಕೋಮಲಾಂಗುಲಿವಲದ್ರಕ್ತೈಃ ಸದರ್ಭಾಃ ಸ್ಥಲೀಃ
ಪಾದೈಃ ಪಾತಿತಯಾವಕೈರಿವ ಪತದ್ಬಾಷ್ಪಾಂಬುಧೌತಾನನಾಃ |
ಭೀತಾ ಭರ್ತೃಕರಾವಲಂಬಿತಕರಾಸ್ತ್ವದ್ವೈರಿನಾರ್ಯೋಽಧುನಾ
ದಾವಾಗ್ನಿಂ ಪರಿತೋ ಭ್ರಮನ್ತಿ ಪುನರಪ್ಯುದ್ಯದ್ವಿವಾಹಾ ಇವ ||

ಭರದಿಂದುಳ್ಕುವ ರಕ್ತಮೇ ಕುಶಗಳೊಳ್ ಪಾದಾಬ್ಜದಾ ಗಾಯದಿಂ
ವರಲಾಕ್ಷಾರಸಮಾಗೆ ಬಾಷ್ಪನಿವಹಂ ತಾಂ ತೊಯ್ಯೆ ವಕ್ತ್ರಾಂತಮಂ |
ಕರಮಂ ಭೀತಿಯಿನಿಟ್ಟು ಕಾಂತಕರದೊಳ್ ದಾವಾಗ್ನಿಯಂ ಸುತ್ತುವರ್
ಮರೆವರ್ ಮತ್ತೆ ವಿವಾಹಲೀಲೆಯನೆನಲ್ ತ್ವದ್ವೈರಿನಾರೀಜನಂ ||

ಇವೇ ಮುಂತಾದ ಲಕ್ಷ್ಯಗಳೆಲ್ಲವೂ ನಿರ್ದುಷ್ಟವೆಂದೇ ತಿಳಿಯಬೇಕು.

ಇಲ್ಲಿಯವರೆಗೂ ರಸಾದಿಗಳು ವಿರೋಧಿರಸಾದಿಗಳೊಡನೆ ಎಲ್ಲಿ ಸೇರಬಹುದು, ಎಲ್ಲಿ ಸೇರಬಾರದು, ಎಂಬ ವಿಷಯವಿಭಾಗವನ್ನು ತೋರಿಸಲಾಯಿತು. ಇನ್ನು ಒಂದೇ ಪ್ರಬಂಧದಲ್ಲಿ ಅವುಗಳನ್ನು ಸೇರಿಸುವುದಾದರೆ ಯಾವುದು ಸರಿಯಾದ ಕ್ರಮವೋ ಅದನ್ನು ಮುಂದಿನ ಕಾರಿಕೆಯು ತೋರಿಸುತ್ತದೆ:—

ಕಾರಿಕೆ

ಪ್ರಸಿದ್ಧೇऽಪಿ ಪ್ರಬನ್ಧಾನಾಂ ನಾನಾರಸನಿಬನ್ಧನೇ।
ಏಕೋ ರಸೋऽಙ್ಗೀ ಕರ್ತವ್ಯಸ್ತೇಷಾಮುತ್ಕರ್ಷಮಿಚ್ಛತಾ ॥ ೨೧ ॥

ಪ್ರಬಂಧಗಳಲ್ಲಿ ಅನೇಕರಸಗಳಿರಬೇಕೆಂಬ ಪ್ರಸಿದ್ಧಿಯಿದ್ದರೂ ಆ ಪ್ರಬಂಧಗಳ ಉತ್ಕರ್ಷವನ್ನು ಅಪೇಕ್ಷಿಸುವವನು ಒಂದೇ ರಸವನ್ನು ಪ್ರಧಾನವಾಗುವಂತೆ ಮಾಡಬೇಕು.

ವೃತ್ತಿ

ಮಹಾಕಾವ್ಯಗಳಲ್ಲಿಯೂ ನಾಟಕಗಳಲ್ಲಿಯೂ ವಿವಿಧವಾಗಿ ಇಲ್ಲವೆ ಅಂಗಾಂಗಿ ಭಾವದಿಂದ ಅನೇಕರಸಗಳನ್ನು ಸೇರಿಸಬೇಕೆಂಬ ಪ್ರಸಿದ್ಧಿಯೇನೋ ಇದ್ದೇ ಇರುವುದಾದರೂ, ಪ್ರಬಂಧಗಳ ಚಮತ್ಕಾರಾತಿಶಯಲಾಭವನ್ನು ಬಯಸುವವನು ಯಾವುದಾದರೊಂದು ವಿವಕ್ಷಿತವಾದ ರಸವನ್ನು ಅವುಗಳ ನಡುವೆ ಪ್ರಧಾನವನ್ನಾಗಿ ಇಡಬೇಕೆಂಬುದು ಇನ್ನೂ ಯುಕ್ತವಾದ ಮಾರ್ಗ.

ಅನೇಕರಸಗಳು ಪರಿಪುಷ್ಟಿಯನ್ನು ಪಡೆದಿರುವಾಗ ಅವುಗಳಲ್ಲೊಂದಕ್ಕೆ ಪ್ರಾಧಾನ್ಯವು ಹೇಗೆ ನಿರ್ದುಷ್ಟವಾಗುತ್ತದೆಂಬ ಆಶಂಕೆಗೆ ಕೆಳಗಿನ ಕಾರಿಕೆಯು ಸಮಾಧಾನವನ್ನು ಹೇಳುತ್ತದೆ:

ಕಾರಿಕೆ

ರಸಾನ್ತರಸಮಾವೇಶಃ ಪ್ರಸ್ತುತಸ್ಯ ರಸಸ್ಯ ಯಃ।
ನೋಪಹನ್ತ್ಯಙ್ಗಿತಾಂ ಸೋऽಸ್ಯ ಸ್ಥಾಯಿತ್ವೇನಾವಭಾಸಿನಃ ॥ ೨೨ ॥

ಸ್ಥಾಯಿಯಾಗಿ ಪ್ರಕಾಶಿಸುವ ಪ್ರಸ್ತುತ ರಸದ ಪ್ರಧಾನ್ಯಕ್ಕೆ ರಸಾಂತರಗಳ ಸಮಾವೇಶದಿಂದ ಯಾವ ಹಾನಿಯೂ ಬರುವುದಿಲ್ಲ.

ವೃತ್ತಿ

ಪ್ರಬಂಧಗಳಲ್ಲಿ ಎಲ್ಲಕ್ಕೂ ಮೊದಲು ಪ್ರಸ್ತುತವಾಗಿ ಮತ್ತೆ ಮತ್ತೆ ಅನುಸಂಧಾನಕ್ಕೆ ಪಾತ್ರವಾಗುವ, ಮತ್ತು ಸ್ಥಾಯಿಯೂ ಸಕಲಪ್ರಬಂಧವ್ಯಾಪಿಯೂ ಆದ ರಸದ ಪ್ರಾಧಾನ್ಯಕ್ಕೆ ನಡುವೆ ಬರುವ ರಸಾಂತರಗಳ ಘಟನೆಯಿಂದ ಯಾವ ಅಡ್ಡಿಯೂ ಇಲ್ಲ. ಇದನ್ನೇ ಮುಂದಿನ ಕಾರಿಕೆಯಲ್ಲಿ ಸಕಾರಣವಾಗಿ ವಿವರಿಸಿದೆ:—

ಕಾರಿಕೆ

ಕಾರ್ಯಮೇಕಂ ಯಥಾ ವ್ಯಾಪಿ ಪ್ರಬಂಧಸ್ಯ ವಿಧೀಯತೇ।
ತಥಾ ರಸಸ್ಯಾಪಿ ವಿಧೌ ವಿರೋಧೋ ನೈವ ವಿದ್ಯತೇ ॥ ೨೩ ॥

ಒಂದೇ ಕಥಾಶರೀರವು ಪ್ರಬಂಧವನ್ನೆಲ್ಲಾ ವ್ಯಾಪಿಸುವಂತೆ ಹೇಗೆ ನಿರ್ಮಿತವಾಗುವುದೋ ಹಾಗೆಯೇ ಒಂದೇ ರಸವು ಪ್ರಬಂಧವ್ಯಾಪಿಯಾಗಿ ಪ್ರತಿಪಾದಿತವಾದರೂ ದೋಷವಿಲ್ಲ.

ವೃತ್ತಿ

ಸಂಧ್ಯಾಕಾಲದ ವರ್ಣನೆಯೇ ಮೊದಲಾದ ಒಂದೇ ಕಥಾಶರೀರವು ಪ್ರಬಂಧದುದ್ದಕ್ಕೂ ಅನುಸ್ಯೂತವಾಗಿಯೂ ವ್ಯಾಪಕವಾಗಿಯೂ ಬರುವಾಗ, ಬೇರೆ ಪ್ರಾಸಂಗಿಕ ವರ್ಣನೆಗಳಲ್ಲಿ ಅದು ಹೇಗೆ ಕಲಸಿಕೊಳ್ಳುವುದಿಲ್ಲವೋ, ಮತ್ತು ಒಂದು ವೇಳೆ ಕಲಸಿಕೊಂಡರೂ ಅದರ ಪ್ರಾಧಾನ್ಯವು ಹೇಗೆ ಕಡಮೆಯಾಗುವುದಿಲ್ಲವೋ, ಹಾಗೆಯೇ ಒಂದೇ ರಸವನ್ನು ಪ್ರಧಾನವಾಗಿ ಪ್ರತಿಪಾದಿಸುವಾಗಲೂ ಯಾವ ತೊಂದರೆಯೂ ಇಲ್ಲ. ಅದಕ್ಕೆ ಪ್ರತಿಯಾಗಿ ಸೂಕ್ಷ್ಮವಿವೇಚಕರೂ ಅನುಸಂಧಾನಶೀಲರೂ ಆದ ಸಹೃದಯರಿಗೆ ಅದರಿಂದ ಆನಂದಾತಿಶಯವೇ ಉಕ್ಕುತ್ತದೆ.

ಕೆಲವರು ಈ ಪೂರ್ವಪಕ್ಷವನ್ನೆತ್ತಬಹುದು :—'ವೀರ-ಶೃಂಗಾರ, ಶೃಂಗಾರ-ಹಾಸ್ಯ, ರೌದ್ರ-ಶೃಂಗಾರ, ವೀರ-ಅದ್ಭುತ, ವೀರ-ರೌದ್ರ, ರೌದ್ರ-ಕರುಣ, ಶೃಂಗಾರ-ಅದ್ಭುತ, ಇಂತಹ ಪರಸ್ಪರ ವಿರೋಧವಿಲ್ಲದ ರಸಗಳನ್ನು ಪ್ರತಿಪಾದಿಸುವಾಗ ಅವುಗಳ ಅಂಗಾಂಗಿಭಾವವು ಬಂದರೆ ಬರಲಿ. ಆದರೆ ಪರಸ್ಪರ ಬಾಧ್ಯ-ಬಾಧಕಗಳಾದ ರಸಗಳನ್ನು—ಶೃಂಗಾರ-ಬೀಭತ್ಸ, ವೀರ-ಭಯಾನಕ, ಶಾಂತ-ರೌದ್ರ, ಶಾಂತ-ಶೃಂಗಾರ—ಪ್ರತಿಪಾದಿಸುವಾಗ ಅದು ಹೇಗೆ ಸರಿಯಾದೀತು?' ಎಂದು. ಇದಕ್ಕೆ ಮುಂದಿನ ಕಾರಿಕೆಯಲ್ಲಿ ಸಮಾಧಾನವಿದೆ.

ಕಾರಿಕೆ

ಅವಿರೋಧೀ ವಿರೋಧೀ ವಾ ರಸೋಽಙ್ಗಿನಿ ರಸಾನ್ತರೇ।
ಪರಿಪೋಷಂ ನ ನೇತವ್ಯಸ್ತಥಾ ಸ್ಯಾದವಿರೋಧಿತಾ ॥ ೨೪ ॥

ಪ್ರಬಂಧದಲ್ಲಿ ಪ್ರಧಾನವಾಗಿ ಒಂದು ರಸವು ಬಂದಿರುವಾಗ ಅದಕ್ಕೆ ಅವಿರುದ್ಧವಾಗಿರಲಿ, ವಿರುದ್ಧವಾಗಿರಲಿ, ಬೇರಾವ ರಸಕ್ಕೂ ಪರಿಪೋಷವನ್ನು ತರಲಾಗದು. ಹೀಗೆ ಮಾಡಿದರೆ ದೋಷವು ತಪ್ಪುತ್ತದೆ.

ವೃತ್ತಿ

ಶೃಂಗಾರವೇ ಮೊದಲಾದ ಯಾವುದಾದರೊಂದು ಪ್ರಧಾನರಸವು ಪ್ರಬಂಧದಲ್ಲಿ ವ್ಯಂಗ್ಯವಾಗುತ್ತಿರುವಾಗ, ಅವಿರುದ್ಧವೋ ವಿರುದ್ಧವೋ, ಬೇರೆ ಯಾವ ರಸಕ್ಕೂ ಪರಿಪೋಷ ಕೊಡಬಾರದು. (೧) ಈ ಪರಿಪೋಷಪರಿಹಾರದಲ್ಲಿ ಅವಿರುದ್ಧರಸಕ್ಕೆ ಪ್ರಧಾನರಸಕ್ಕಿಂತ ಮಿಗಿಲಾದ ಆಧಿಕ್ಯವನ್ನು ಕೊಡಬಾರದೆಂಬುದು ಮೊದಲನೆಯ ಬಗೆ. ಎರಡಕ್ಕೂ ಸಮಾನವಾದ ಉತ್ಕರ್ಷವನ್ನು ಕೊಟ್ಟರೂ ಅಡ್ಡಿಯಿಲ್ಲ. ಉದಾಹರಣೆ :

ಏಕತ್ತೋ ರುಅಇ ಪಿಆ ಅಣ್ಣತ್ತೋ ಸಮರತೂರಣಿಗ್ಘೋಸೋ |
ಣೇಹೇಣ ರಣರಸೇಣ ಅ ಭಡಸ್ಸ ದೋಲಾಇಅಂ ಹಿಅಅಮ್ ||

ಒಂದೆಡೆ ವಲ್ಲಭೆಯುಂ ಮ-
ತ್ತೊಂದೆಡೆ ರಣತೂರ್ಯಘೋಷಮುಂ ಚೀರುತಿರಲ್ |
ಕುಂದದ ರಸದಿಂ ರಣರಸ-
ದಿಂದಂ ತೂಗುಯ್ಯಲಾದುದಾ ಭಟಹೃದಯಂ ||

(೨) ಪ್ರಧಾನರಸಕ್ಕೆ ವಿರುದ್ಧವಾದ ಸಂಚಾರಿಭಾವಗಳನ್ನು ಅತಿಯಾಗಿ ಹೇಳದಿರುವುದೂ, ಹೇಳಿದರೂ ಒಡನೆಯೇ ಮುಖ್ಯರಸದ ಸಂಚಾರಿಭಾವಗಳನ್ನೇ ವರ್ಣಿಸುವುದೂ, ಎರಡನೆಯ ಬಗೆ.

(೩) ಅಂಗರಸದ ಪರಿಪೋಷವನ್ನೇ ತೋರಿಸಬೇಕಾಗಿ ಬಂದರೂ ಸಹ ಮತ್ತೆ ಮತ್ತೆ ಅದರ ಅಂಗತ್ವಕ್ಕೆ ಹಾನಿಯೊದಗದಂತೆ ನೋಡಿಕೊಳ್ಳುವುದು ಮೂರನೆಯ ಬಗೆ. ಇದೇ ರೀತಿ ಇತರ ಪ್ರಕಾರಗಳನ್ನೂ ವಾಚಕರೇ ಊಹಿಸಿಕೊಳ್ಳಬಹುದು.

ವಿರುದ್ಧರಸವು ಅಂಗರಸವಾದರೆ ಆಗ ಪ್ರಧಾನರಸಕ್ಕಿಂತ ಅದಕ್ಕೆ ನ್ಯೂನತೆಯುಂಟಾಗುವಂತೆ ಮಾಡಬೇಕು. ಉದಾಹರಣೆಗೆ, ಶಾಂತವು ಪ್ರಧಾನವಾದರೆ ಶೃಂಗಾರಕ್ಕೂ ಶೃಂಗಾರವು ಪ್ರಧಾನವಾದರೆ ಶಾಂತಕ್ಕೂ ಕಡಮೆಯ ಸ್ಥಾನವಿರಬೇಕು. ಪರಿಪೋಷವನ್ನು ಪಡೆಯದ ರಸವು ರಸವೆನಿಸುವುದು ಹೇಗೆ ಎಂದು ಕೇಳದಿರಲೆಂದೇ 'ಪ್ರಧಾನರಸಕ್ಕಿಂತ' ಎಂಬ ಮಾತನ್ನು ವೃತ್ತಿಯಲ್ಲಿ ಸೇರಿಸಿರುವುದು. ಪ್ರಧಾನವಾದ ರಸಕ್ಕೆ ಎಷ್ಟು ಪುಷ್ಟಿಯನ್ನು ಕೊಡಲಾಗಿದೆಯೋ ಅಷ್ಟೇ ಪುಷ್ಟಿಯನ್ನು ಅಂಗರಸಕ್ಕೆ ಕೊಡಬಾರದೆಂದು ಅಭಿಪ್ರಾಯ. ಅಂಗರಸಕ್ಕೆ ಸ್ವಭಾವಸಿದ್ಧವಾಗಿ ಬರುವ ಪರಿಪೋಷವನ್ನು ಇಲ್ಲವೆನ್ನುವವರಾರು? ಹೀಗೆ ಪ್ರಬಂಧದಲ್ಲಿ ಬಹುರಸಗಳಿದ್ದರೂ ಒಂದು ರಸಕ್ಕೆ ಮಾತ್ರ ಪ್ರಕರ್ಷಾತಿಶಯವುಂಟೆಂಬುದನ್ನು ಯಾರೂ—

ರಸಗಳಿಗೆ ಪ್ರಧಾನಗೌಣಭೇದವನ್ನು ಒಪ್ಪದವರೂ ಸಹ—ನಿರಾಕರಿಸುವಂತಿಲ್ಲ. ಈ ರೀತಿಯಿಂದಲೂ, ಅವಿರುದ್ಧ ಅಥವಾ ವಿರುದ್ಧರಸಗಳನ್ನೂ ಪ್ರಧಾನಗೌಣಭಾವ ವುಳಿಯುವಂತೆ ಪ್ರಬಂಧಗಳಲ್ಲಿ ಪ್ರತಿಪಾದಿಸಿದರೆ ದೋಷವೇನೂ ಬರುವುದಿಲ್ಲ. ಮೇಲೆ ಹೇಳಿದುದೆಲ್ಲವೂ ರಸವು ರಸಾಂತರಕ್ಕೆ ಸಂಚಾರಿ ಭಾವವೆನಿಸಬಹುದೆಂಬ ಸಿದ್ಧಾಂತ ವನ್ನೊಪ್ಪುವವರ ದೃಷ್ಟಿಯಿಂದ ಬರೆದುದು. ಈ ಸಿದ್ಧಾಂತವನ್ನು ಒಪ್ಪದವರು ರಸಗಳ ಸ್ಥಾಯಿಭಾವಗಳನ್ನೇ ಲಕ್ಷಣೆಯಿಂದ ರಸಗಳೆನ್ನುವುದರಿಂದ, ಅವರ ಅರ್ಥದಲ್ಲಿ ರಸಗಳಿಗೆ ಅಂಗತ್ವವು ಲಭಿಸುವುದಕ್ಕೆ ತೊಂದರೆಯೇ ಇಲ್ಲ.

ಇಲ್ಲಿಯವರೆಗೆ ಪ್ರಬಂಧದಲ್ಲಿರುವ ಪ್ರಧಾನರಸಕ್ಕೂ, ಅವಿರುದ್ಧವೋ ವಿರುದ್ಧವೋ ಆದ ಮಿಕ್ಕ ರಸಗಳಿಗೂ ವಿರೋಧ ಬರದಂತಾಗಲು ಉಪಾಯಗಳೇನೆಂದು ವಿವರಿಸ ಲಾಯಿತು. ಈಗ ಕೇವಲ ವಿರುದ್ಧರಸಗಳ ವಿರೋಧಪರಿಹಾರೋಪಾಯವನ್ನು ಹೇಳಲಾಗುತ್ತದೆ:—

ಕಾರಿಕೆ

ವಿರುದ್ಧೈಕಾಶ್ರಯೋ ಯಸ್ತು ವಿರೋಧೀ ಸ್ಥಾಯಿನೋ ಭವೇತ್ ।
ಸ ವಿಭಿನ್ನಾಶ್ರಯಃ ಕಾರ್ಯಸ್ತಸ್ಯ ಪೋಷೇಽಪ್ಯದೋಷತಾ ॥ ೨೫ ॥

ಮುಖ್ಯರಸಕ್ಕೆ ವಿರುದ್ಧವಾದ ರಸವು ಒಂದೇ ಆಶ್ರಯದಲ್ಲಿಯೇ ಬಂದುಬಿಡುವಂತಿ ದ್ದರೆ, ಆಗ ಆ ವಿರೋಧಿರಸಕ್ಕೆ ಬೇರೊಂದು ಆಶ್ರಯವನ್ನು ಕಲ್ಪಿಸಬೇಕು. ಹೀಗೆ ಮಾಡಿದ ಮೇಲೆ ಅದನ್ನು ಬೆಳೆಸಿದರೂ ದೋಷವಿಲ್ಲ.

ವೃತ್ತಿ

ವಿರೋಧಿಗಳು ಎರಡು ಬಗೆ: ಒಂದೇ ಆಶ್ರಯದಲ್ಲಿರುವಾಗ ವಿರುದ್ಧವಾಗ ತಕ್ಕವು ಮತ್ತು ಅಕ್ಕಪಕ್ಕದಲ್ಲಿ ಬಂದಾಗ ವಿರುದ್ಧವಾಗತಕ್ಕವು, ಎಂದು. ಪ್ರಬಂಧ ದಲ್ಲಿರುವ ಮುಖ್ಯರಸದ ಔಚಿತ್ಯವನ್ನು ದೃಷ್ಟಿಯಲ್ಲಿಟ್ಟರೆ, ಆ ರಸದ ಆಶ್ರಯದಲ್ಲಿಯೇ ಬೇರೊಂದು ವಿರುದ್ಧರಸವು ಬರುವುದನ್ನು—ಉದಾಹರಣೆಗೆ ವೀರವು ಮುಖ್ಯರಸ ವಾದಾಗ ಭಯಾನಕ—ತಪ್ಪಿಸಿ ಆ ವಿರುದ್ಧರಸಕ್ಕೆ ಬೇರೊಂದು ಆಶ್ರಯವನ್ನು ಕಲ್ಪಿಸ ಬೇಕು. ಎಂದರೆ ವೀರಕ್ಕೆ ಆಶ್ರಯನಾದ ಕಥಾನಾಯಕನನ್ನೇ ಭಯಾನಕಕ್ಕೂ ಆಶ್ರಯನನ್ನಾಗಿ ಮಾಡದೆ, ಅವನ ಪ್ರತಿನಾಯಕನನ್ನು ಭಯಾನಕಕ್ಕೆ ಆಲಂಬನ ವನ್ನಾಗಿ ಮಾಡಬೇಕು. ಹೀಗೆ ಮಾಡಿದಮೇಲೆ ಆ ವಿರೋಧಿರಸಕ್ಕೆ ಪುಷ್ಟಿಯನ್ನು ತಂದರೂ ದೋಷವಿಲ್ಲ. ಶತ್ರುಪಕ್ಷದಲ್ಲಿ ಭಯಾತಿಶಯವನ್ನು ವರ್ಣಿಸುವುದರಿಂದ ನಾಯಕನ ನೀತಿಸಂಪತ್ತೂ ಪರಾಕ್ರಮಾತಿಶಯವೂ ಮತ್ತೂ ಹೆಚ್ಚಾಗಿ ಪ್ರಕಾಶಿಸು

ತ್ತವೆ. ಇದು ನನ್ನ ಅರ್ಜುನಚರಿತವೆಂಬ ಕಾವ್ಯದಲ್ಲಿ ಅರ್ಜುನನ ಪಾತಾಲಾವ್ಯತರಣವನ್ನು ವರ್ಣಿಸುವಾಗ ವಿಶದವಾಗಿ ನಿದರ್ಶಿತವಾಗಿದೆ.

ಪ್ರಬಂಧದ ಮುಖ್ಯರಸಕ್ಕೆ ಏಕಾಶ್ರಯಗತವಾದ ವಿರುದ್ಧರಸಗಳಿಂದ ಬರುವ ವಿರೋಧವನ್ನು ತಪ್ಪಿಸಿ ಅಭೀಷ್ಟರಸಕ್ಕೆ ಸಾಧಕವೇ ಆಗುವಂತೆ ಹೇಗೆ ಮಾಡಬಹುದೆಂಬುದನ್ನು ತೋರಿಸಲಾಯಿತು. ಎರಡನೆಯ ಬಗೆಯ ವಿರೋಧಿರಸಗಳ ವಿಷಯದಲ್ಲೂ ಇದು ಹೇಗೆ ಸಾಧ್ಯವೆಂಬುದನ್ನು ಕೆಳಗಿನ ಕಾರಿಕೆಯು ಹೇಳುತ್ತದೆ:—

ಕಾರಿಕೆ

ಏಕಾಶ್ರಯತ್ವೇ ನಿರ್ದೋಷೋ ನೈರನ್ತರ್ಯೇ ವಿರೋಧವಾನ್ ।
ರಸಾನ್ತರವ್ಯವಧಿನಾ ರಸೋ ವ್ಯಂಗ್ಯಃ ಸುಮೇಧಸಾ ॥ ೨೬ ॥

ಏಕಾಶ್ರಯದಲ್ಲಿದ್ದರೆ ವಿರೋಧವಿಲ್ಲದೆ ಅಕ್ಕಪಕ್ಕದಲ್ಲಿ ಬರುವಾಗ ವಿರೋಧ ತೋರುವಂತಹ ರಸವನ್ನು ಎರಡರ ನಡುವೆ ಮತ್ತೊಂದು ರಸವನ್ನು ತರುವುದರ ಮೂಲಕ ಪ್ರಕಟಿಸಬೇಕು.

ವೃತ್ತಿ

ಒಬ್ಬನೇ ನಾಯಕನಲ್ಲಿರುವುದರಲ್ಲಿ ಯಾವ ವಿರೋಧವೂ ಇಲ್ಲದಿದ್ದರೂ, ಒಂದಾದಮೇಲೊಂದು ಬರುವುದರಲ್ಲಿಯೇ ವಿರೋಧ ಕಾಣುವಂತಹ ರಸವಿದ್ದರೆ, ಆಗ ಅವೆರಡರ ನಡುವೆ ಮತ್ತೊಂದು ರಸವು ಬಂದು ಅವುಗಳ ನೈರಂತರ್ಯವನ್ನು ತಪ್ಪಿಸುವಂತೆ ಪ್ರಬಂಧವನ್ನು ರಚಿಸಬೇಕು. **ನಾಗಾನಂದ ನಾಟಕದಲ್ಲಿ** ಬರುವ ಶಾಂತಶೃಂಗಾರಗಳ ಯೋಜನೆಯೇ ಇದಕ್ಕೆ ಉದಾಹರಣೆ:—

ತೃಷ್ಣಾಕ್ಷಯದಿಂದ ಬರುವ ಸುಖದ ಪರಿಪೋಷವೇ ಶಾಂತ. ಆ ಹೆಸರಿನ ರಸವೊಂದು ಅನುಭವಕ್ಕೆ ಬಂದೇ ಬರುತ್ತದೆ. ಅದಕ್ಕೇ ಹಿಂದಿನವರು ಹೇಳಿರುವುದು:—

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ಸುಖಮ್ ।
ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಂ ॥

ಲೋಕಗತ ಕಾಮಸುಖಮುಂ
ನಾಕೋಚಿತಮಾದಪಾರಸೌಖ್ಯಮುಮೆಲ್ಲಂ ।
ಲೋಕದಿ ತೃಷ್ಣಾಕ್ಷಯಸುಖ-
ದಾ ಕೆಲಕೆಂದುಮಿರಲಮ್ಮವಂಶಾಂಶದೊಳಂ ॥

ಒಂದುಪಕ್ಷ ಸರ್ವಜನರ ಅನುಭವಕ್ಕೆ ಅದು ಗೋಚರವಲ್ಲವೆನ್ನೋಣ. ಅಷ್ಟರಿಂದಲೇ ಅಸಾಧಾರಣಪುರುಷರಾದ ಮಹಾನುಭಾವರ ಚಿತ್ತವೃತ್ತಿಯು ಇದಲ್ಲವೆಂದು ಹೇಳುವುದು ಸರಿಯಲ್ಲ. ವೀರರಸದಲ್ಲಿಯೇ ಅದು ಅಂತರ್ಗತವಾದುದೆಂದು ಹೇಳುವುದೂ ಯುಕ್ತವಲ್ಲ. ಏಕೆಂದರೆ ವೀರವು ಅಭಿಮಾನಮಯವಾದುದೆಂದು ವ್ಯವಸ್ಥಿತವಾಗಿದೆ; ಇದಾದರೋ ಅಹಂಕಾರದ ಪ್ರಶಮವೆಂಬ ಒಂದೇ ಸ್ವರೂಪವನ್ನುಳ್ಳುದು. ಅವೆರಡಕ್ಕೂ ಇಷ್ಟು ವ್ಯತ್ಯಾಸವಿದ್ದರೂ ಐಕ್ಯವನ್ನೇ ಕಲ್ಪಿಸುವುದಾದರೆ ಆಗ ವೀರರೌದ್ರಗಳಿಗೂ ಐಕ್ಯವನ್ನು ಹೇಳಬೇಕಾಗಿಬರುತ್ತದೆ. ದಯಾವೀರವೇ ಮೊದಲಾದ ಚಿತ್ತವೃತ್ತಿವಿಶೇಷಗಳು ಸರ್ವಾತ್ಮನಾ ಅಹಂಕಾರಶೂನ್ಯವಾಗಿರುವಾಗ ಶಾಂತರಸದ ಪ್ರಭೇದಗಳೆಂದೂ, ಉಳಿದೆಡೆಗಳಲ್ಲಿ ವೀರರಸದ ಪ್ರಭೇದಗಳೆಂದೂ ನಿಶ್ಚಯಿಸಿಕೊಂಡರೆ ಯಾವ ವಿರೋಧವೂ ಇಲ್ಲ. ಆದುದರಿಂದ ಶಾಂತವೆಂಬ ರಸವುಂಟೇ ಉಂಟು. ಅದಕ್ಕೆ ವಿರೋಧಿಯಾದ ರಸವೂ ಕೂಡ ಪ್ರಬಂಧದಲ್ಲಿದ್ದರೂ ಅವೆರಡರ ನಡುವೆ ಒಂದು ಅವಿರುದ್ಧವಾದ ರಸವು ಬಂದುಬಿಟ್ಟರೆ ಯಾವ ದೋಷವೂ ಇಲ್ಲ. ಉದಾಹರಣೆಯನ್ನಾಗಲೇ ಕೊಟ್ಟಾಗಿದೆ. ಇದನ್ನೇ ಇನ್ನೂ ಸ್ಥಿರೀಕರಿಸಲು ಮುಂದಿನ ಕಾರಿಕೆಯನ್ನು ಹೇಳಿದೆ:—

ಕಾರಿಕೆ

ರಸಾನ್ತರಾನ್ತರಿತಯೋರೇಕವಾಕ್ಯಸ್ಥಯೋರಪಿ ।
ನಿವರ್ತತೇ ಹಿ ರಸಯೋಃ ಸಮಾವೇಶೇ ವಿರೋಧಿತಾ ॥ ೨೭ ॥

ಬೇರೊಂದು ರಸವು ನಡುವೆ ಬರುವುದರಿಂದ ಒಂದೇ ವಾಕ್ಯದಲ್ಲಿರುವ ಎರಡು ವಿರುದ್ಧ ರಸಗಳ ವಿರೋಧವೂ ಸಹ ಹೊರಟುಹೋಗುತ್ತದೆ.

ವೃತ್ತಿ

ರಸಾಂತರವು ನಡುವೆ ಬರುವುದರಿಂದ ಒಂದು ಪ್ರಬಂಧದಲ್ಲಿರುವ ಎರಡು ವಿರುದ್ಧರಸಗಳ ವಿರೋಧವು ತಪ್ಪುವುದೆನ್ನುವುದರಲ್ಲಿ ಯಾವ ಭ್ರಾಂತಿಯೂ ಇಲ್ಲ. ಏಕೆಂದರೆ ಒಂದೇ ವಾಕ್ಯದಲ್ಲಿರುವ ರಸವಿರೋಧವು ಕೂಡ ಮೇಲೆ ಹೇಳಿದ ನ್ಯಾಯದಿಂದಲೇ ತಪ್ಪಿಹೋಗುತ್ತದೆ. ಉದಾಹರಣೆ:—

ಭೂರೇಣುದಿಗ್ಧಾನ್ನವಪಾರಿಜಾತಮಾಲಾರಜೋವಾಸಿತಬಾಹುಮಧ್ಯಾಃ ।
ಗಾಢಂ ಶಿವಾಭಿಃ ಪರಿರಭ್ಯಮಾಣಾನ್ ಸುರಾಂಗನಾಶ್ಲಿಷ್ಟಭುಜಾಂತರಾಲಾಃ ॥

ಸಶೋಣಿತೈಃ ಕ್ರವ್ಯಭುಜಾಂ ಸ್ಫುರದ್ಭಿಃ ಪಕ್ಷೈಃ ಖಗಾನಾಮುಪವೀಜ್ಯಮಾನಾನ್ ।
ಸಂವೀಜಿತಾಶ್ಚಂದನವಾರಿಸೇಕೈಃ ಸುಗಂಧಿಭಿಃ ಕಲ್ಪಲತಾದುಕೂಲೈಃ ॥

ವಿಮಾನಪರ್ಯಙ್ಕತಲೇ ನಿಷಣ್ಣಾಃ ಕುತೂಹಲಾವಿಷ್ಟತಯಾ ತದಾನೀಮ್ |
ನಿರ್ದಿಶ್ಯಮಾನಾನ್ ಲಲನಾಙ್ಗುಲೀಭಿರ್ವೀರಾಃ ಸ್ವದೇಹಾನ್ ಪತಿತಾನಪಶ್ಯನ್ ||

ಭೂರೇಣುದೂಷಿತ ನಿಜಶ-
ರೀರಗಳಂ ಪಾರಿಜಾತಸುರಭಿತಹೃದಯರ್ |
ಘೋರಶಿವಾಶ್ಲಿಷ್ಟಗಳಂ
ವೀರೋಚಿತದಿವ್ಯಸುಂದರೀಪರಿರಬ್ಧರ್ ||

ಅರುಣಜಲಸೇಕದಿಂದಂ
ಪಿರಿತಿನಿ ಖಗಪಕ್ಷವೀಜಿತಂಗಳನಾಗಳ್ |
ವರಚಂದನವಾರಿಗಳಿಂ
ಸುರುಚಿರಸುರವೃಕ್ಷವಲ್ಕವೀಜಿತದೇಹರ್ ||

ಅಂದು ವಿಮಾನಾಂತರದೊಳ್
ನಿಂದಿರೆ ವೀರರ್ ಕುತೂಹಲಾವಿಷ್ಟಮನರ್ |
ಸುಂದರಿಯರ್ ತೋರಿಸೆ ಬೆರ-
ಳಿಂದಂ, ಕಂಡರ್ ಸ್ವದೇಹಮಂ ಕೊಳುಗುಳದೊಳ್ ||

ಇವೇ ಮುಂತಾದುವು. ಇಲ್ಲಿ ಶೃಂಗಾರ ಮತ್ತು ಬೀಭತ್ಸಗಳ ಅಥವಾ ಅವುಗಳ ಅಂಗಗಳ ನಡುವೆ ವೀರರಸವು ಬರುವುದರಿಂದ ವಿರೋಧವು ದೂರವಾಗುತ್ತದೆ.

ಕಾರಿಕೆ

ವಿರೋಧಮವಿರೋಧಂ ಚ ಸರ್ವತ್ರೇತ್ಥಂ ನಿರೂಪಯೇತ್ |
ವಿಶೇಷತಸ್ತು ಶೃಂಗಾರೇ ಸುಕುಮಾರತಮೋ ಹ್ಯಸೌ || ೨೮ ||

ರಸಗಳ ವಿರೋಧಾವಿರೋಧಗಳನ್ನು ಮೇಲೆ ಹೇಳಿದಂತೆ ಎಲ್ಲೆಡೆಗಳಲ್ಲಿಯೂ ಗಮನಿಸಬೇಕು; ಅದರಲ್ಲಿಯೂ ಶೃಂಗಾರರಸದಲ್ಲಿ ಮಾತ್ರ ವಿಶೇಷವಾಗಿ ಗಮನಿಸಬೇಕು. ಏಕೆಂದರೆ ಇದು ರಸಗಳಲ್ಲೆಲ್ಲ ಅತ್ಯಂತ ಸುಕುಮಾರವಾದುದು.

ವೃತ್ತಿ

ಪ್ರಬಂಧದಲ್ಲಾಗಲಿ ಉಳಿದ ಕಡೆಗಳಲ್ಲಾಗಲಿ ಎಲ್ಲ ರಸಗಳ ವಿರೋಧಾವಿರೋಧಗಳನ್ನು ಮೇಲೆ ಹೇಳಿದ ಲಕ್ಷಣಾನುಸಾರವಾಗಿ ಸಹೃದಯನು ಗಮನಿಸಬೇಕು. ಅದರಲ್ಲಿಯೂ ಶೃಂಗಾರದ ವಿಷಯದಲ್ಲಿ ವಿಶೇಷ ಗಮನವನ್ನು ಕೊಡಬೇಕು. ಏಕೆಂದರೆ ಶೃಂಗಾರವು ರತಿಯ ಪರಿಪೋಷದಿಂದಾಗತಕ್ಕುದು. ಒಂದಿಷ್ಟು ವ್ಯತ್ಯಾಸ

ವಾದರೂ ರತಿಯು ಭಂಗವಾಗುವ ಸಂಭವ ಹೆಚ್ಚು. ರಸಗಳಲ್ಲೆಲ್ಲ ಶೃಂಗಾರವು ಸುಕುಮಾರತಮವಾದುದರಿಂದ ಎಳ್ಳಷ್ಟು ವಿರೋಧಿಸಂಪರ್ಕವನ್ನೂ ಸಹಿಸುವುದಿಲ್ಲ.

ಕಾರಿಕೆ

ಅವಧಾನಾತಿಶಯವಾನ್ ರಸೇ ತತ್ರೈವ ಸತ್ಕವಿಃ।
ಭವೇತ್ತಸ್ಮಿನ್ ಪ್ರಮಾದೋ ಹಿ ಝಟಿತ್ಯೇವೋಪಲಕ್ಷ್ಯತೇ ॥ ೨೯ ॥

ಆ ರಸದ ವಿಷಯದಲ್ಲಿ ಸತ್ಕವಿಯು ವಿಶೇಷ ಜಾಗರೂಕತೆಯನ್ನು ವಹಿಸಬೇಕು. ಏಕೆಂದರೆ ಅದರಲ್ಲಿ ಬರುವ ಪ್ರಮಾದವು ತಟ್ಟನೆ ಎದ್ದು ಕಾಣುತ್ತದೆ.

ವೃತ್ತಿ

ರಸಗಳಲ್ಲೆಲ್ಲ ಅತ್ಯಂತ ಸೌಕುಮಾರ್ಯಾತಿಶಯವನ್ನು ಪಡೆದಿರುವ ಆ ರಸದ ವಿಷಯದಲ್ಲಿ ಕವಿಯು ವಿಶೇಷಪ್ರಯತ್ನವನ್ನು ತೋರಿಸಬೇಕು. ಅಲ್ಲಿ ಸ್ವಲ್ಪ ಪ್ರಮಾದವಾದರೂ ಕವಿಗೆ ಸಹೃದಯರ ಗುಂಪಿನಲ್ಲಿ ಅನಾದರವು ಬರುತ್ತದೆ. ಶೃಂಗಾರರಸವು ಸಂಸಾರಿಗಳೆಲ್ಲರ ಅನುಭವಕ್ಕೆ ಪಾತ್ರವಾಗಿರುವ ಕಾರಣ ರಸಗಳಲ್ಲೆಲ್ಲ ಅದೇ ಅತ್ಯಂತ ರಮಣೀಯವೂ, ಅತ ಏವ, ಪ್ರಧಾನವೂ ಆದುದು. ಹೀಗಿರುವಲ್ಲಿ—

ಕಾರಿಕೆ

ವಿನೇಯಾನುನ್ಮುಖೀಕರ್ತುಂ ಕಾವ್ಯಶೋಭಾರ್ಥಮೇವ ವಾ।
ತದ್ವಿರುದ್ಧರಸಸ್ಪರ್ಶಸ್ತದಙ್ಗಾನಾಂ ನ ದುಷ್ಯತಿ ॥ ೩೦ ॥

ಜನರಿಗೆ ಹಿತೋಪದೇಶವು ರುಚಿಸುವಂತೆ ಮಾಡುವುದಕ್ಕೂ ಕಾವ್ಯದ ಸೌಂದರ್ಯವು ಹೆಚ್ಚುವುದಕ್ಕೂ ಶೃಂಗಾರರಸದ ಅಂಗಗಳು ವಿರುದ್ಧರಸಗಳ ಸ್ಪರ್ಶವನ್ನು ಪಡೆದರೂ ದೋಷವಿಲ್ಲ.

ವೃತ್ತಿ

ರಸದ ಅವಿರೋಧ ಲಕ್ಷಣಗಳಿಗೆ ಅನುಸಾರವಾಗಿರುವಾಗ ಮಾತ್ರವೇ ಅಲ್ಲ, ಹಿತೋಪದೇಶವು ರುಚಿಕರವಾಗುವಂತೆ ಮಾಡುವ ಉದ್ದೇಶವಿರುವಾಗಲೂ, ಹಾಗೆಯೇ ಕಾವ್ಯದ ಸೌಂದರ್ಯವನ್ನು ಹೆಚ್ಚಿಸಬೇಕೆಂಬ ಇಚ್ಛೆಯಿರುವಾಗಲೂ ಕೂಡ, ಶೃಂಗಾರದ ಅಂಗಗಳಿಗೆ ಶೃಂಗಾರವಿರುದ್ಧವಾದ ರಸಗಳ ಸಂಸ್ಪರ್ಶವು ಬರುವುದು ದೋಷವಾಗುವುದಿಲ್ಲ. ಶೃಂಗಾರರಸದ ಅಂಗಗಳ ಮೂಲಕ ಜನರನ್ನು ಮೊದಲು ಉನ್ಮುಖರನ್ನಾಗಿ ಮಾಡಿಕೊಂಡರೆ ಆಮೇಲೆ ಅವರಿಗೆ ಹಿತೋಪದೇಶವೂ ಹಿಡಿಸುತ್ತದೆ. ನಾಟಕವೇ ಮೊದಲಾದ ಗೋಷ್ಠಿಗಳನ್ನು ಮುನಿಗಳು ಪ್ರಚಾರ

ಮಾಡಿರುವುದು ವಿದ್ಯಾಭ್ಯಾಸವು ಅವಶ್ಯವಾದವರಿಗೆ ಸದಾಚಾರದ ಉಪದೇಶವು ಸುಲಭವಾಗಿ ಸಾಧಿಸಲೆಂಬ ಉದ್ದೇಶದಿಂದಲೇ. ಅಲ್ಲದೆ, ಸಕಲಜನರ ಮನಸ್ಸನ್ನೂ ಸೆಳೆಯುವ ಸೌಂದರ್ಯವು ಶೃಂಗಾರದಲ್ಲಿರುವುದರಿಂದ ಅದರ ಅಂಗಗಳ ಸಮಾವೇಶವು ಕಾವ್ಯಕ್ಕೆ ಶೋಭಾತಿಶಯವನ್ನು ತರುತ್ತದೆಂಬ ಕಾರಣದಿಂದಲೂ, ವಿರುದ್ಧರಸದ ಸಂಸ್ಪರ್ಶವು ಶೃಂಗಾರಕ್ಕೆ ಬಂದರೂ ಅಡ್ಡಿಯಿಲ್ಲ. ಆದುದರಿಂದಲೇ—

ಸತ್ಯಂ ಮನೋರಮಾ ರಾಮಾಃ ಸತ್ಯಂ ರಮ್ಯಾ ವಿಭೂತಯಃ |
ಕಿಂತು ಮತ್ತಾಂಗನಾಪಾಂಗಭಂಗಲೋಲಂ ಹಿ ಜೀವಿತಮ್ |

ನಿರುತಂ ರಮಣಿಯರಿನಿಯರ್
ನಿರುತಂ ಕಮನೀಯಮುಪ್ಪುದೈಸಿರಿ ತಾನೆಂ-|
ದರುಮೀ ಜೀವಿತಮೆಂದುಂ
ಪರಿಕಿಸೆ ಮತ್ತಾಂಗನಾಕಟಾಕ್ಷವಿಲೋಲಂ ||

ಇವೇ ಮೊದಲಾದ ಪ್ರಯೋಗಗಳಲ್ಲಿ ರಸವಿರೋಧದ ದೋಷವಿಲ್ಲ.

ಕಾರಿಕೆ

ವಿಜ್ಞಾಯೇತ್ಥಂ ರಸಾದೀನಾಮವಿರೋಧವಿರೋಧಯೋಃ |
ವಿಷಯಂ ಸುಕವಿಃ ಕಾವ್ಯಂ ಕುರ್ವನ್ಮುಹ್ಯತಿ ನ ಕ್ವಚಿತ್ || ೩೧ ||

ಈ ರೀತಿಯಾಗಿ ರಸಾದಿಗಳ ಅವಿರೋಧ-ವಿರೋಧಗಳ ಸ್ವರೂಪವನ್ನು ತಿಳಿದುಕೊಂಡು ಸುಕವಿಯು ಕಾವ್ಯವನ್ನು ಬರೆದರೆ ಎಲ್ಲಿಯೂ ತಪ್ಪುವುದಿಲ್ಲ.

ವೃತ್ತಿ

ಮೇಲೆ ಹೇಳಿದ ಕ್ರಮದಲ್ಲಿ ರಸ, ಭಾವ, ರಸಾಭಾಸ, ಭಾವಾಭಾಸಗಳ ಪರಸ್ಪರ ವಿರೋಧ-ಅವಿರೋಧಗಳ ವಿಷಯವನ್ನು ಚೆನ್ನಾಗಿ ತಿಳಿದುಕೊಂಡು, ಪ್ರತಿಭಾತಿಶಯ ಸಂಪನ್ನನಾದ ಕವಿಯು ಕಾವ್ಯವನ್ನು ಬರೆದರೆ ಎಲ್ಲಿಯೂ ತಪ್ಪು ಮಾಡಲಾರನು.

ಹೀಗೆ ರಸಾದಿಗಳ ವಿರೋಧ-ಅವಿರೋಧಗಳ ನಿರೂಪಣೆಯ ಉಪಯೋಗವನ್ನು ವಿವರಿಸಿ, ಈಗ ರಸವ್ಯಂಜಕಗಳಾಗುವ ವಾಚ್ಯವಾಚಕಗಳ ನಿರೂಪಣೆಯ ಉಪಯೋಗವನ್ನು ವಿವರಿಸಲಾಗುತ್ತದೆ:—

ಕಾರಿಕೆ

ವಾಚ್ಯಾನಾಂ ವಾಚಕಾನಾಂ ಚ ಯದೌಚಿತ್ಯೇನ ಯೋಜನಮ್ |
ರಸಾದಿವಿಷಯೇಣೈತತ್ ಕರ್ಮ ಮುಖ್ಯಂ ಮಹಾಕವೇಃ || ೩೨ ||

ರಸಾದಿಗಳಿಗೆ ಅನುಗುಣವಾಗುವಂತೆ ವಾಚ್ಯ ಮತ್ತು ವಾಚಕಗಳನ್ನು ಯಥೋಚಿತವಾಗಿ ಸಂಯೋಜಿಸುವುದೇ ಮಹಾಕವಿಯಾದವನ ಮುಖ್ಯ ಕಾರ್ಯ.

ವೃತ್ತಿ

ವಾಚ್ಯಗಳ (ಎಂದರೆ ಕಥಾವಸ್ತುಗಳ) ಮತ್ತು (ಅವುಗಳನ್ನು ಬೋಧಿಸುವ) ವಾಚಕಗಳ ಸಂಯೋಜನೆಯು ಯಥೋಚಿತವಾಗಿ ರಸಾದಿಗಳಿಗನುಗುಣವಾಗುವಂತೆ ಗಮನಿಸುವುದೇ ಮಹಾಕವಿಯ ಮುಖ್ಯ ಕೆಲಸ. ರಸಾದಿಗಳನ್ನು ಮಾತ್ರ ಮುಖ್ಯವಾಗಿ ಕಾವ್ಯಾರ್ಥವಾಗುವಂತೆ ಮಾಡಿ, ಅವುಗಳನ್ನು ಧ್ವನಿಸಬಲ್ಲ ಶಬ್ದಾರ್ಥಗಳನ್ನು ಮಾತ್ರ ಉಪಯೋಗಿಸಿಕೊಳ್ಳುವುದೇ ಮಹಾಕವಿಯೆನಿಸುವವನ ಮುಖ್ಯ ಕಾರ್ಯವೆಂದಭಿಪ್ರಾಯ. ಹೀಗೆ ರಸಾದಿಗಳನ್ನೇ ಮುಖ್ಯ ತಾತ್ಪರ್ಯವಾಗಿಟ್ಟುಕೊಂಡು ಕಾವ್ಯರಚನೆ ಮಾಡಬೇಕೆಂಬುದು **ಭರತನ ಗ್ರಂಥವೇ** ಮುಂತಾದುವುಗಳಲ್ಲಿ ಸುಪ್ರಸಿದ್ಧವಾಗಿಯೇ ಇರುವುದೆಂಬುದನ್ನು ಮುಂದಿನ ಕಾರಿಕೆಯು ಹೇಳುತ್ತದೆ:—

ಕಾರಿಕೆ

ರಸಾದ್ಯನುಗುಣತ್ವೇನ ವ್ಯವಹಾರೋಽರ್ಥಶಬ್ದಯೋಃ ।
ಔಚಿತ್ಯವಾನ್ಯಸ್ತಾ ಏತಾ ವೃತ್ತಯೋ ದ್ವಿವಿಧಾಃ ಸ್ಥಿತಾಃ ॥ ೩೩ ॥

ರಸಾದಿಗಳಿಗನುಗುಣವಾಗಿ ಶಬ್ದಾರ್ಥಗಳನ್ನು ಔಚಿತ್ಯದಿಂದ ಪ್ರಯೋಗಿಸುವುದನ್ನನುಸರಿಸಿಯೇ 'ವೃತ್ತಿ'ಗಳು ಎರಡು ವಿಧಗಳಾಗುತ್ತವೆ.

ವೃತ್ತಿ

(ಅರ್ಥಶಬ್ದಗಳ) ವ್ಯವಹಾರವನ್ನೇ 'ವೃತ್ತಿ' ಯೆನ್ನುತ್ತೇವೆ. ರಸಾನುಗುಣವೂ ಔಚಿತ್ಯಯುಕ್ತವೂ ಆದ ವಾಚ್ಯಗಳ ವ್ಯವಹಾರವೇ 'ಕೈಶಿಕಿ' ಮುಂತಾದ 'ವೃತ್ತಿ'ಗಳೆನಿಸುತ್ತದೆ. ವಾಚಕಗಳ ವ್ಯವಹಾರವು 'ಉಪನಾಗರಿಕಾ' ಮೊದಲಾದ 'ವೃತ್ತಿ'ಗಳೆನಿಸುತ್ತದೆ. ಹೀಗೆ ರಸಾದಿಗಳಿಗನುಗುಣವಾಗಿ ಪ್ರಯೋಗಿಸಿದ ವೃತ್ತಿಗಳು ನಾಟ್ಯಕ್ಕೂ ಕಾವ್ಯಕ್ಕೂ ಶೋಭಾತಿಶಯವನ್ನು ತರುತ್ತವೆ. ಈ ಎರಡು ಬಗೆಯ ವೃತ್ತಿಗಳಿಗೂ ರಸಾದಿಗಳೇ ಪ್ರಾಣಗಳು. ಕಥಾವಸ್ತುವೇ ಮೊದಲಾದುವು ಶರೀರಗಳು ಮಾತ್ರ.

ಇದಕ್ಕೆ ಕೆಲವರು ಹೀಗೆ ಆಕ್ಷೇಪಿಸಬಹುದು :—'ರಸಾದಿಗಳಿಗೂ ಕಥಾವಸ್ತುಗಳಿಗೂ ಇರುವ ಸಂಬಂಧವನ್ನು ಗುಣ-ಗುಣಿಗಳ ಸಂಬಂಧವೆನ್ನುವುದು ಯುಕ್ತವೇ ಹೊರತು ಜೀವ-ಶರೀರಗಳ ಸಂಬಂಧವೆನ್ನುವುದು ಸರಿಯಲ್ಲ. ರಸಾದಿಮಯವಾದ ವಾಚ್ಯವು ಅನುಭವವೇದ್ಯವೇ ಹೊರತು, ರಸ ಮತ್ತು ವಾಚ್ಯಗಳು ಬೇರೆ ಬೇರೆಯಾಗಿ

ಕಾಣುವುದೇ ಇಲ್ಲ', ಎಂದು. ಅದಕ್ಕೆ ಉತ್ತರವಿದು:—ಶರೀರವು ಹೇಗೆ ಗೌರತ್ವಮಯವೆನಿಸಬಹುದೋ ಹಾಗೆಯೇ ವಾಚ್ಯವು ರಸಾದಿಮಯವೆನಿಸುವುದೆ? ಹಾಗೆನಿಸುವುದಾದರೆ ಶರೀರವನ್ನು ಕಂಡೊಡನೆಯೇ ಎಲ್ಲರಿಗೂ ಗೌರತ್ವವು ಸ್ಫುಟವಾಗಿ ಕಾಣಿಸುವಂತೆ ವಾಚ್ಯದ ಜತೆಯಲ್ಲಿಯೇ ರಸಾದಿಗಳೂ ಕೂಡ ಸಹೃದಯ-ಅಸಹೃದಯರೆಲ್ಲರಿಗೂ ಒಂದೇ ಸಮನಾಗಿ ಕಾಣಿಸಬೇಕಾಗುತ್ತದೆ. ಹೀಗೆ ಕಾಣಿಸುವುದಿಲ್ಲ. ಇದನ್ನು **ಮೊದಲನೆಯ ಉದ್ದ್ಯೋತದಲ್ಲಿಯೇ** ವಿವರಿಸಲಾಗಿದೆ.

ಹೀಗೂ ಇತರರು ಹೇಳಬಹುದು:—'ರತ್ನಗಳ ಶ್ರೇಷ್ಠತೆಯು ಹೇಗೆ ವಿಶಿಷ್ಟ ಪರೀಕ್ಷಕರಿಗೆ ಮಾತ್ರ ತಿಳಿಯುವುದೋ ಹಾಗೆಯೇ ವಾಚ್ಯಗಳ ರಸಾದಿಮಯತ್ವವೂ ಕೂಡ ಸಹೃದಯರಿಗೆ ಮಾತ್ರ ವೇದ್ಯವಾಗುವುದು', ಎಂದು. ಇದೂ ಸರಿಯಲ್ಲ. ಏಕೆಂದರೆ ಶ್ರೇಷ್ಠವಾದ ರತ್ನದ ಶ್ರೇಷ್ಠತೆಯು ಹೇಗೆ ರತ್ನದ ಸ್ವರೂಪದಿಂದ ಬೇರೆಯಾಗಿರುವುದಿಲ್ಲವೋ ಹಾಗೆಯೇ ರಸಾದಿಗಳಾದರೂ ವಿಭಾವ, ಅನುಭಾವ, ಮುಂತಾದ ವಾಚ್ಯಗಳ ಸ್ವರೂಪದಿಂದ ಬೇರೆಯಲ್ಲದೆಯೇ ಕಾಣಬೇಕಾಗುತ್ತದೆ. ಆದರೆ ವಸ್ತುತಃ ಹೀಗೆ ಕಾಣುವುದಿಲ್ಲ. ವಿಭಾವ, ಅನುಭಾವ, ಸಂಚಾರಿಭಾವಗಳೇ ರಸಗಳೆಂದು ಯಾರಿಗೂ ಎನಿಸುವುದಿಲ್ಲ. ಆದುದರಿಂದಲೇ ರಸಾದಿಗಳ ಪ್ರತೀತಿಗೆ ವಿಭಾವಾದಿಗಳ ಪ್ರತೀತಿಯು ಪ್ರಧಾನಕಾರಣವೆನ್ನಬೇಕು. ಆ ಎರಡು ಪ್ರತೀತಿಗಳಿಗೂ ಕಾರ್ಯ—ಕಾರಣಭಾವವನ್ನು ಒಪ್ಪಲೇಬೇಕಾದಮೇಲೆ ಅವುಗಳಿಗೆ ಕಾಲಭೇದವನ್ನೂ ಅವಶ್ಯವಾಗಿ ಒಪ್ಪಲೇಬೇಕಾಗುತ್ತದೆ. ಆದರೆ ಆ ಕಾಲದ ಅಂತರವು ಅತ್ಯಂತ ಸೂಕ್ಷ್ಮವಾದುದರಿಂದ ಗಮನಕ್ಕೆ ಬರುವುದಿಲ್ಲ. ಅದರಿಂದಲೇ 'ರಸಾದಿಗಳು ಅಲಕ್ಷ್ಯಕ್ರಮಗಳಾದ ವ್ಯಂಗ್ಯಗಳು' ಎಂದು ಹಿಂದೆ ಹೇಳಿದುದು.

ಮತ್ತೆ ಈ ಪೂರ್ವಪಕ್ಷವು ಬರಬಹುದು:—'ಪ್ರಕರಣವೇ ಮೊದಲಾದುವುಗಳಿಂದೊಡಗೂಡಿದ ಶಬ್ದವೇ ವಾಚ್ಯ-ವ್ಯಂಗ್ಯಗಳ ಪ್ರತೀತಿಯನ್ನು ಏಕಕಾಲದಲ್ಲಿ ತರುತ್ತದೆ. ಅದಕ್ಕೆ ಕಾಲಕ್ರಮವನ್ನು ಕಲ್ಪಿಸುವುದೇತಕ್ಕೆ? ಶಬ್ದವು ವ್ಯಂಜಕವಾಗಬೇಕಾದರೆ ಅರ್ಥಪ್ರತೀತಿಯ ಪರಾಮರ್ಶವು ಇರಲೇಬೇಕೆಂಬ ನಿಯಮವೇನೂ ಇಲ್ಲ. ಸಂಗೀತದಲ್ಲಿ ಕೇವಲ ಶಬ್ದಗಳಿಂದಲೇ ರಸಾಭಿವ್ಯಕ್ತಿಯು ಬರುವುದನ್ನು ಎಲ್ಲರೂ ನೋಡಿದ್ದೇವೆ. ಅಲ್ಲಿ ಶಬ್ದಕ್ಕೂ ರಸಕ್ಕೂ ನಡುವೆ ಅರ್ಥಪರಾಮರ್ಶವೇ ಇಲ್ಲ', ಎಂದು. ಇದಕ್ಕೆ ನಮ್ಮ ಉತ್ತರವಿಷ್ಟು:—ಪ್ರಕರಣಾದಿಗಳಿಂದೊಡಗೂಡಿದ ಶಬ್ದಗಳಿಗೆ ಮಾತ್ರ ವ್ಯಂಜಕತ್ವವುಂಟೆಂಬ ಮಾತು ನಮಗೂ ಸಮ್ಮತವೇ. ಆದರೆ ಆ ವ್ಯಂಜಕತ್ವವು ಕೆಲವೆಡೆಗಳಲ್ಲಿ ಶಬ್ದಗಳ ಸ್ವರೂಪವಿಶೇಷದಿಂದ ಬರುತ್ತದೆ; ಕೆಲವೆಡೆಗಳಲ್ಲಿ ವಾಚಕತ್ವಶಕ್ತಿಯ ಬಲದಿಂದ ಬರುತ್ತದೆ. ಹೀಗೆ ವಾಚಕತ್ವಶಕ್ತಿಯ

ಬಲದಿಂದ ವ್ಯಂಜಕತ್ವವು ಸಿದ್ಧಿಸುವ ಶಬ್ದಗಳಿರುವೆಡೆಯಲ್ಲಿ, ಕೇವಲ ಅವುಗಳ ಸ್ವರೂಪಜ್ಞಾನದಿಂದಲೇ ರಸಗಳು ಅಭಿವ್ಯಕ್ತವಾಗಿಬಿಡುವುದಾದರೆ, ಆಗ ಅವುಗಳಿಗೆ ವಾಚಕತ್ವಶಕ್ತಿಯ ಪ್ರಭಾವವೇ ಇಲ್ಲದೆ ಹೋಗಬೇಕಾಗುತ್ತದೆ. ಆದರೆ ಅದಕ್ಕೆ ವ್ಯಂಜಕತ್ವವು ಸಿದ್ಧಿಸುವುದೇ ವಾಚಕತ್ವಶಕ್ತಿಯಿಂದ. ಎಂದ ಮೇಲೆ ವಾಚ್ಯವಾಚಕ-ಭಾವಪ್ರತೀತಿ ಬಂದ ನಂತರವೇ ವ್ಯಂಗ್ಯಪ್ರತೀತಿಯು ಬರಬೇಕೆಂದು ಒಪ್ಪಲೇ ಬೇಕಾಗುತ್ತದೆ.

ಆ ಕ್ರಮವು ಅತಿಸೂಕ್ಷ್ಮವಾದುದರಿಂದ ಲಕ್ಷ್ಯಕ್ಕೆ ಬರದಿದ್ದರೆ ನಾವೇನು ಮಾಡೋಣ! ನಿಜವಾಗಿಯೂ ಅರ್ಥಜ್ಞಾನದ ಅಗತ್ಯವೇ ಇಲ್ಲದೆ ಪ್ರಕರಣಾದಿಗಳಿಂದೊಡಗೂಡಿದ ಶಬ್ದಗಳಿಂದಲೇ ರಸಾದಿಗಳ ಪ್ರತೀತಿಯು ಸಾಧ್ಯವಾಗಿದ್ದರೆ, ಆಗ ಪ್ರಕರಣವನ್ನು ಮಾತ್ರ ತಿಳಿದವರಿಗೆಲ್ಲ-ಎಂದರೆ ಶಬ್ದಾರ್ಥಗಳ ವ್ಯುತ್ಪತ್ತಿಯೂ ಇಲ್ಲದ ಪಾಠಕರಿಗೂ ಸಹ—ಕಾವ್ಯದ ಶ್ರವಣಮಾತ್ರದಿಂದಲೇ ರಸಾನುಭವವು ಬರಬೇಕಾಗಿದ್ದಿತು. ವಾಚ್ಯ-ರಸಗಳೆರಡರ ಪ್ರತೀತಿಯೂ ಏಕಕಾಲದಲ್ಲಾಗುತ್ತಿದ್ದರೆ ವಾಚ್ಯಪ್ರತೀತಿಗೆ ಉಪಯೋಗವೇ ಇರುವುದಿಲ್ಲ. ಅದಕ್ಕೆ ಉಪಯೋಗವುಂಟೆನ್ನುವುದಾದರೆ ಅವೆರಡೂ ಏಕಕಾಲದಲ್ಲಿ ಪ್ರತೀತವಾಗುವುದು ಸಾಧ್ಯವಿಲ್ಲ. ಸಂಗೀತದ ಶಬ್ದಗಳಿಗೆ ಸ್ವರೂಪವಿಶೇಷಪ್ರತೀತಿಯಿಂದಲೇ ವ್ಯಂಜಕತ್ವವಿರುವುದು ಸರಿಯೆ; ಆದರೆ ಅಲ್ಲಿಯೂ ಸಹ ಆ ಸ್ವರೂಪಪ್ರತೀತಿಗೂ ವ್ಯಂಗ್ಯವಾದ ರಸಪ್ರತೀತಿಗೂ ನಡುವೆ ಅವಶ್ಯವಾಗಿ ಕಾಲಕ್ರಮವು ಇದ್ದೇ ಇರುತ್ತದೆ. ಆದರೆ ಶಬ್ದಗಳಲ್ಲಿರುವ ಈ ಕ್ರಿಯೆಗಳ ಪೌರ್ವಾಪರ್ಯವು ರಸಗಳು ವ್ಯಂಗ್ಯವಾದಾಗ ಲಕ್ಷ್ಯಕ್ಕೆ ಬರುವುದಿಲ್ಲ. ಏಕೆಂದರೆ ರಸಾದಿಗಳು ವಾಚ್ಯಕ್ಕೆ ವಿರೋಧಿಗಳೂ ಅಲ್ಲ, ಶಬ್ದದ ಅರ್ಥಾಂತರದಂತೆ ಬೇರೆಯಾಗಿ ಕಾಣುವುವೂ ಅಲ್ಲ; ರಸಾಭಿವ್ಯಕ್ತಿಯು ಅನ್ಯಸಾಧ್ಯವೂ ಅಲ್ಲ; ಅದಕ್ಕಿರುವ ಸಾಧಕಗಳೆಲ್ಲವೂ ಅತ್ಯಂತ ವೇಗದಿಂದ ಒಟ್ಟುಗೂಡಿಕೊಂಡು ಕೆಲಸಮಾಡುತ್ತವೆ.

ಆದರೆ ಕೆಲವೆಡೆಗಳಲ್ಲಿ ಲಕ್ಷ್ಯಕ್ಕೆ ಬಂದೇ ಬರುತ್ತದೆ. ಅನುರಣನರೂಪವಾದ ವ್ಯಂಗ್ಯಪ್ರತೀತಿಯಿರುವ ಕಡೆಗಳೇ ಉದಾಹರಣೆ. ಅದು ಹೇಗೆಂದು ಕೇಳಬಹುದು. ಅರ್ಥಶಕ್ತಿಮೂಲ-ಅನುರಣನರೂಪ-ವ್ಯಂಗ್ಯ-ಧ್ವನಿಯಲ್ಲಿ ಎರಡು ಅರ್ಥಗಳ ಪ್ರತೀತಿಯಿರುತ್ತದೆ. ಒಂದು ವಾಚ್ಯಾರ್ಥ; ಇನ್ನೊಂದು ವಾಚ್ಯಸಾಮರ್ಥ್ಯದಿಂದ ವ್ಯಂಗ್ಯವಾದ, ಮತ್ತು ವಾಚ್ಯವೇ ಆದ ಅರ್ಥಾಂತರಕ್ಕಿಂತ ವಿಲಕ್ಷಣವಾದ, ಅರ್ಥ. ಇವೆರಡು ಅರ್ಥಪ್ರತೀತಿಗಳಿಗೂ ಕಾರ್ಯಕಾರಣಭಾವವನ್ನು ಯಾರೂ ಮುಚ್ಚಿಡುವಂತಿಲ್ಲವಾದುದರಿಂದ ಪೌರ್ವಾಪರ್ಯವು ಸ್ಫುಟವಾಗಿಯೇ ಇದೆ. **ಮೊದಲನೆಯ ಉದ್ದ್ಯೋತದಲ್ಲಿ** ವ್ಯಂಗ್ಯಾರ್ಥದ ಅಸ್ತಿತ್ವವನ್ನು ಸಾಧಿಸಲೆಂದು ಕೊಟ್ಟ ಪ್ರಾಕೃತ

ಗಾಥೆಗಳೇ ಉದಾಹರಣೆಗಳು. ಅಂತಹ ಉದಾಹರಣೆಗಳಲ್ಲಿ ವಾಚ್ಯಕ್ಕೂ ವ್ಯಂಗ್ಯಕ್ಕೂ ಅತಿಯಾದ ಅಂತರವಿರುವುದರಿಂದ ಒಂದರ ಪ್ರತೀತಿಯೆ ಇನ್ನೊಂದರ ಪ್ರತೀತಿಯೂ ಆಗುವುದೆಂದು ಹೇಳುವುದು ಶಕ್ಯವಿಲ್ಲ. ಆದರೆ ಶಬ್ದಶಕ್ತಿಮೂಲ-ಅನುರಣನರೂಪ ವ್ಯಂಗ್ಯ-ಧ್ವನಿಯಲ್ಲಿ ಮಾತ್ರ—'ಗಾವೋ ವಃ ಪಾವನಾನಾಂ. . .'[1] ಮೊದಲಾದುವು ಉದಾಹರಣೆಗಳು—ಶಬ್ದಜನ್ಯವೇ ಆದ ಅರ್ಥದ್ವಯದ ಪ್ರತೀತಿಯಾಗುವಾಗ, ಆ ಎರಡು ಅರ್ಥಗಳಿಗೂ ಉಪಮಾನೋಪಮೇಯಭಾವವು ವ್ಯಂಗ್ಯವಾಗಿರುತ್ತದೆ. ಉಪಮಾವಾಚಕವಾದ ಪದವು ಇಲ್ಲದಿರುವ ಪ್ರಯುಕ್ತ, ಅರ್ಥದ ಸಾಮರ್ಥ್ಯ ಬಲದಿಂದಲೇ ಇದು ವ್ಯಂಗ್ಯವೆಂದೂ ಹೇಳಬೇಕಾಗುತ್ತದೆ. ಹೀಗೆ ಅಲ್ಲಿ ಕೂಡ ವಾಚ್ಯಾರ್ಥದ ಪ್ರತೀತಿಗೂ ವ್ಯಂಗ್ಯವಾದ ಅಲಂಕಾರದ ಪ್ರತೀತಿಗೂ ಕಾಲದ ಪೌರ್ವಾಪರ್ಯವುಂಟೆಂಬುದು ಸ್ಪಷ್ಟ.

ಪದದಲ್ಲಿ ಪ್ರಕಾಶಿಸುವ ಶಬ್ದಶಕ್ತಿಮೂಲ-ಅನುರಣನರೂಪವ್ಯಂಗ್ಯಧ್ವನಿಯಲ್ಲಿ ಕೂಡ ವಾಚ್ಯಾರ್ಥ ಪ್ರತೀತಿಗೂ ಅದರ ಸಾಮರ್ಥ್ಯದಿಂದ ವ್ಯಂಗ್ಯವಾದ ಅಲಂಕಾರ ಪ್ರತೀತಿಗೂ ಇರುವ ಪೌರ್ವಾಪರ್ಯವು ಸುವ್ಯಕ್ತವಾಗಿಯೇ ಇರುತ್ತದೆ. ಹೇಗೆಂದರೆ, ಅಲ್ಲಿ ವಿಶೇಷಣಪದಕ್ಕೆ ಉಭಯಾರ್ಥಗಳು ಬರುವಂತಿರುತ್ತದೆ. ಅಲ್ಲಿ ಇನ್ನೊಂದು ಅರ್ಥಕ್ಕೆ ಇನ್ನೊಂದು ಪದವನ್ನು ಅಧ್ಯಾಹಾರ ಮಾಡದೆಯೇ, ಒಂದೇ ಪದದಿಂದ ಇನ್ನೊಂದು ಅರ್ಥವನ್ನೂ ಗ್ರಹಿಸುತ್ತೇವೆ. ಆ ಅರ್ಥವು ಪ್ರತ್ಯೇಕಶಬ್ದಜನ್ಯವಲ್ಲ ವಾದುದರಿಂದ ಅದನ್ನು ಅರ್ಥಜನ್ಯವೆಂದೇ ತಿಳಿಯಬೇಕು. ಹೀಗೆ ವ್ಯಂಗ್ಯದ ಪ್ರತೀತಿಯು ಅರ್ಥಜನ್ಯವೇ ಆದರೂ ಅದು ಉಭಯಾರ್ಥಬೋಧಕವಾದ ಶಬ್ದದ ಸಾಮರ್ಥ್ಯದಿಂದಲೇ ಸಾಧಿತವಾದುದೆಂಬುದನ್ನು ದೃಷ್ಟಿಯಿಟ್ಟು ಅದನ್ನು ಶಬ್ದಶಕ್ತಿ ಮೂಲವೆಂದು ಕರೆಯುತ್ತೇವೆ.

ಅವಿವಕ್ಷಿತವಾಚ್ಯಧ್ವನಿಯಲ್ಲಿಯೂ ಪ್ರಸಿದ್ಧವಾದ ಶಬ್ದಾರ್ಥವು ನಿರುಪಯುಕ್ತ ವೆಂಬ ಪ್ರತೀತಿ ಬಂದನಂತರವೇ ವ್ಯಂಗ್ಯಾರ್ಥದ ಪ್ರತೀತಿಯುಂಟಾಗುವುದರಿಂದ ಎರಡು ಪ್ರತೀತಿಗಳಿಗೂ ಪೌರ್ವಾಪರ್ಯವು ನಿಸ್ಸಂಶಯವಾಗಿ ಕಾಣುತ್ತದೆ. ಅಲ್ಲಿ ವಾಚ್ಯವು ಅವಿವಕ್ಷಿತವಾದುದರಿಂದಲೇ, ವಾಚ್ಯದ ಜತೆಯಲ್ಲಿ ವ್ಯಂಗ್ಯದಪ್ರತೀತಿ ಯಾಗಬಹುದೇ ಇಲ್ಲವೆ ಎಂಬ ವಿಚಾರಕ್ಕೆ ಮುಂಚೆ ಹೋಗಲಿಲ್ಲ. ಆದುದರಿಂದ ಶಬ್ದಾರ್ಥ ಪ್ರತೀತಿಗಳಿಗೆ ಹೇಗೆ ಕಾರ್ಯ-ಕಾರಣಭಾವವಿರುವ ಮೂಲಕ ನಿಯತ ವಾದ ಪೌರ್ವಾಪರ್ಯ-ಕ್ರಮವಿರುವುದೋ ಹಾಗೆಯೇ ವಾಚ್ಯ-ವ್ಯಂಗ್ಯಪ್ರತೀತಿ

[1] ಹಿಂದೆ ಪುಟಗಳ-೧೫ ನ್ನು ನೋಡಿ (ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೩).

ಗಳಿಗೂ ಕಾರ್ಯ-ಕಾರಣ ಭಾವವೂ ಕ್ರಮವೂ ಇದ್ದೇ ಇರುವುದು. ಮೇಲೆ ಹೇಳಿದಂತೆ ಅದು ಕೆಲವೆಡೆಗಳಲ್ಲಿ ಕಣ್ಣಿಗೆ ಬೀಳುತ್ತದೆ; ಕೆಲವೆಡೆಗಳಲ್ಲಿ ಬೀಳುವುದಿಲ್ಲ!

ಹೀಗೆ ವ್ಯಂಜಕತ್ವದ ದೃಷ್ಟಿಯಿಂದ ಧ್ವನಿಯ ಬೇರೆ ಬೇರೆ ಪ್ರಕಾರಗಳನ್ನು ನಾವು ಪ್ರತಿಪಾದಿಸುವುದನ್ನು ನೋಡಿ ಯಾರಾದರೂ ಈ ಆಕ್ಷೇಪಣೆಯನ್ನು ತರಬಹುದು :—'ಈ ವ್ಯಂಜಕತ್ವವೆನ್ನುವುದು ಯಾವುದು? ವ್ಯಂಗ್ಯಾರ್ಥವನ್ನು ಬೋಧಿಸುವ ಶಕ್ತಿಗೆ ವ್ಯಂಜಕತ್ವವೆಂಬ ಹೊಸ ಹೆಸರು ಬೇಕಾಗಿಲ್ಲ. ಅರ್ಥಕ್ಕೆ ವ್ಯಂಜಕತ್ವವು ಬರಬೇಕಾದರೆ ಶಬ್ದಕ್ಕೆ ವ್ಯಂಜಕತ್ವಸಿದ್ಧಿಯಾಗಬೇಕು, ವ್ಯಂಜಕತ್ವಸಿದ್ಧಿಯಾಗಬೇಕಾದರೆ ವ್ಯಂಗ್ಯಾರ್ಥವು ಮೊದಲಿರಬೇಕು. ಹೀಗೆ ಅನ್ಯೋನ್ಯಾಶ್ರಯವೆಂಬ ದೋಷವು ಬರುವುದರಿಂದ ಯಾವುದೂ ನಿಶ್ಚಿತವಾಗುವುದಿಲ್ಲ', ಎಂದು. ಅದಕ್ಕೆ ನಾವು ಪ್ರತಿಯಾಗಿ ಕೇಳುತ್ತೇವೆ—ವಾಚ್ಯಕ್ಕಿಂತ ಬೇರೆಯಾದ ವ್ಯಂಗ್ಯವೊಂದಿರುವುದನ್ನು ಮೊದಲೇ ಸಾಧಿಸಿಯಾಗಿದೆಯಲ್ಲ ನಾವು! ಅದು ಸಿದ್ಧಿಸಿದಮೇಲೆ ವ್ಯಂಜಕವೂ ಸಿದ್ಧಿಸಿಯೇ ಸಿದ್ಧಿಸುತ್ತದೆ. ಎಂದ ಮೇಲೆ ನಿಮ್ಮ ಆಕ್ಷೇಪಣೆಗೆ ಇನ್ನು ಅವಕಾಶವೆಲ್ಲಿ?

ಮತ್ತೆ ಪೂರ್ವಪಕ್ಷಕಾರನು ಹೀಗೆ ವಾದಿಸಬಹುದು :—'ನೀವು ಹೇಳುವುದು ನಿಜ, ಮೊದಲು ಕೊಟ್ಟಿರುವ ಯುಕ್ತಿಗಳಿಂದ ವಾಚ್ಯಕ್ಕಿಂತ ಬೇರೆಯಾದ ವ್ಯಂಗ್ಯವೊಂದುಂಟೆಂದು ಸಾಧಿತವಾಗಿದೆ. ಆದರೆ ಆ ಅರ್ಥವನ್ನು 'ವ್ಯಂಗ್ಯ'ವೆಂಬ ಹೆಸರಿನಿಂದಲೇ ಏಕೆ ಕರೆಯಬೇಕು? ಎಲ್ಲಿ ಅದು ಪ್ರಧಾನವಾಗಿರುವುದೋ ಅಲ್ಲಿ ಅದನ್ನು 'ವಾಚ್ಯ'ವೆಂಬ ಹೆಸರಿನಿಂದ ಕರೆಯುವುದೇ ಯುಕ್ತ; ಏಕೆಂದರೆ ಅದನ್ನು ಬೋಧಿಸಬೇಕೆಂಬುದೇ ವಾಕ್ಯದ ಉದ್ದೇಶ. ಹೀಗೆ ಆ ಅರ್ಥವನ್ನು ಬೋಧಿಸುವ ವಾಕ್ಯದಲ್ಲಿ ವಾಚಕತ್ವವೆಂಬ ವ್ಯಾಪಾರವೇ ಇರುವುದರಿಂದ ವಾಕ್ಯಕ್ಕೆ ಇನ್ನೊಂದು ವ್ಯಾಪಾರವನ್ನು ಕಲ್ಪಿಸುವುದರಿಂದಾಗುವುದೇನು? ಆದುದರಿಂದ ಯಾವ ಅರ್ಥವು ವಾಕ್ಯಕ್ಕೆ ತಾತ್ಪರ್ಯವಾಗಿರುವುದೋ ಅದು ಮುಖ್ಯವಾಗಿ 'ವಾಚ್ಯ'ವೇ. ತಾತ್ಪರ್ಯವು ತಿಳಿಯುವುದಕ್ಕೆ ಮುಂಚೆ ನಡುನಡುವೆ ಬರುವ ಅರ್ಥಾಂತರಪ್ರತೀತಿಯು ಆ ತಾತ್ಪರ್ಯದ ಪ್ರತೀತಿಗೆ ಸಾಧಕ. ವಾಕ್ಯದ ಅರ್ಥಗ್ರಹಣೆಗೆ ಪದಗಳ ಅರ್ಥಪ್ರತೀತಿಯು ಹೇಗೆ ಸಾಧಕವೋ ಹಾಗೆ,' ಎಂದು.

ಇದಕ್ಕೆ ಈಗ ಉತ್ತರಕೊಡುತ್ತೇವೆ: ಒಂದು ಶಬ್ದವು ತನ್ನ ಮುಖ್ಯಾರ್ಥವನ್ನು ಬೋಧಿಸಿದ ಮೇಲೆ ಮತ್ತೊಂದು ಅರ್ಥವನ್ನು ಬೋಧಿಸುವ ಸ್ಥಳವನ್ನು ತೆಗೆದುಕೊಳ್ಳೋಣ. ಅಲ್ಲಿ ಶಬ್ದಕ್ಕಿರುವ ಮುಖ್ಯಾರ್ಥಬೋಧಕತ್ವ ಮತ್ತು ಅರ್ಥಾಂತರಸೂಚಕತ್ವಗಳಿಗೆ ಏನೂ ವ್ಯತ್ಯಾಸವೇ ಇಲ್ಲವೆ ಅಥವಾ ಏನಾದರೂ

ವ್ಯತ್ಯಾಸವುಂಟೆ? ಏನೇನೂ ವ್ಯತ್ಯಾಸವಿಲ್ಲವೆಂದು ಹೇಳಲು ಶಕ್ಯವಿಲ್ಲ; ಏಕೆಂದರೆ ಆ ಎರಡು ವ್ಯಾಪಾರಗಳ ವಿಷಯಗಳು ಬೇರೆ ಬೇರೆ, ಸ್ವರೂಪಗಳೂ ಬೇರೆ ಬೇರೆಯೇ. ಹೇಗೆಂದರೆ, ಶಬ್ದದ ವಾಚಕತ್ವವ್ಯಾಪಾರಕ್ಕೆ ತನ್ನ ಮುಖ್ಯಾರ್ಥವು ವಿಷಯ; ಗಮಕತ್ವವ್ಯಾಪಾರಕ್ಕೆ ಅರ್ಥಾಂತರವು ವಿಷಯ. ಹೀಗೆ ವಾಚ್ಯವು ಶಬ್ದಕ್ಕೆ 'ಸ್ವಕೀಯ'ವಾದ ಅರ್ಥವೆಂದೂ ವ್ಯಂಗ್ಯವು 'ಪರಕೀಯ'ವಾದ ಅರ್ಥವೆಂದೂ ಹೇಳುವುದನ್ನು ಅಲ್ಲವೆನ್ನಲು ಸಾಧ್ಯವಿಲ್ಲ. ಒಂದರ ಪ್ರತೀತಿಯು ನೇರವಾಗಿ ಶಬ್ದದೊಡನೆ ಸಂಬಂಧ ಹೊಂದಿರುತ್ತದೆ; ಇನ್ನೊಂದರ ಪ್ರತೀತಿಯು ಪರಂಪರೆಯಿಂದ ಶಬ್ದಸಂಬಂಧಿಗೆ (=ಅರ್ಥಕ್ಕೆ) ಸಂಬಂಧಿಸಿರುತ್ತದೆ. ವಾಚ್ಯಾರ್ಥವು ನೇರವಾಗಿ ಶಬ್ದದೊಡನೆ ಸಂಬಂಧ ಹೊಂದಿರುತ್ತದೆ. ವ್ಯಂಗ್ಯಾರ್ಥವು ವಾಚ್ಯಾರ್ಥದ ಸಾಮರ್ಥ್ಯದಿಂದ ಸೂಚಿತವಾಗುವ ಕಾರಣ ಶಬ್ದಸಂಬಂಧಿಗೆ ಸಂಬಂಧಿಸುತ್ತದೆ. ಆ ವ್ಯಂಗ್ಯಾರ್ಥಕ್ಕೂ ಶಬ್ದದೊಡನೆ ಸಾಕ್ಷಾತ್ತಾದ ಸಂಬಂಧವೇ ಇದ್ದುಬಿಟ್ಟಿದ್ದ ಪಕ್ಷದಲ್ಲಿ ಆಗ ಅದನ್ನು ಅರ್ಥಾಂತರವೆಂದು ಕರೆಯುವ ಕಾರಣವೇ ಇರುತ್ತಿರಲಿಲ್ಲ. ಹೀಗೆ ಅವೆರಡಕ್ಕೂ ವಿಷಯಭೇದವಿರುವುದು ಸ್ಥಿರವಾದಂತಾಯಿತು. ಹಾಗೆಯೇ ಅವೆರಡರ ಸ್ವರೂಪಭೇದವೂ ಸ್ಪಷ್ಟವಾಗಿದೆ: ಯಾವುದು ವಾಚಕಶಕ್ತಿಯೋ ಅದೇ ಎಂದಿಗೂ ವ್ಯಂಜಕಶಕ್ತಿಯಾಗಲಾರದು. ವಾಚಕವೇ ಅಲ್ಲದ ಸಂಗೀತಶಬ್ದಗಳಲ್ಲಿಯೂ ರಸಾದಿಗಳ ವ್ಯಂಜಕಶಕ್ತಿಯಿರುವುದನ್ನು ನಾವು ನೋಡುವುದೇ ಕಾರಣ. ಕೊನೆಗೆ ಶಬ್ದವೇ ಅಲ್ಲದ ಅಭಿನಯಾದಿಗಳಿಗೂ ಸಹ ವಿಶಿಷ್ಟಾರ್ಥಗಳನ್ನು ಸೂಚಿಸುವ ಶಕ್ತಿಯಿರುವುದು ಪ್ರಸಿದ್ಧವಾಗಿಯೇ ಇದೆ. ಉದಾಹರಣೆಗೆ 'ವ್ರೀಡಾಯೋಗಾನ್ನತವದನಯಾ . . .'[1] ಎಂಬ ಶ್ಲೋಕದಲ್ಲಿ ಬರುವ ಕಟಾಕ್ಷವೀಕ್ಷಣವು ಅರ್ಥವಿಶೇಷ ಸೂಚಕವಾಗುವಂತೆ ಕವಿಯಿಂದ ವರ್ಣಿತವಾಗಿದೆ. ಹೀಗೆ ವಿಷಯವು ಬೇರೆಯಾಗಿ, ಸ್ವರೂಪವೂ ಬೇರೆಯಾಗಿರುವುದರಿಂದ ಶಬ್ದದ ಸ್ವಾರ್ಥಬೋಧಕತ್ವಶಕ್ತಿಗೂ ಅರ್ಥಾಂತರಾವಗಮನಶಕ್ತಿಗೂ ಭೇದವಿರುವುದು ಸುಸ್ಪಷ್ಟ. ವ್ಯತ್ಯಾಸವಿರುವುದೆಂದೊಪ್ಪುವುದಾದರೆ ವಾಚ್ಯದ ಸಾಮರ್ಥ್ಯದಿಂದ ಧ್ವನಿತವಾಗುವ ಆ ಅರ್ಥಾಂತರಕ್ಕೆ ವಾಚ್ಯತ್ವವನ್ನು ಹೇಳುವುದು ಸರಿಯಾಗುವುದಿಲ್ಲ. ಅದೂ ಕೂಡ ಶಬ್ದವ್ಯಾಪಾಕ್ಕೆ ಗೋಚರವೇ ಹೌದೆಂಬ ಅಂಶವು ನಮಗೂ ಸಮ್ಮತವೇ. ಆದರೆ ಅದು ವ್ಯಂಗ್ಯವಾಗಿ ತೋರುವುದೆಂದು ಹೇಳುವೆವೇ ಹೊರತು ವಾಚ್ಯವಾಗಿ ತೋರುವುದೆಂದಲ್ಲ. ನಿಘಂಟುಗಳಲ್ಲಿ ಪ್ರಸಿದ್ಧವಾದ ಮತ್ತೊಂದು ಶಬ್ದವು ಆ ಅರ್ಥಾಂತರಕ್ಕೆ ಹೆಚ್ಚು ಔಚಿತ್ಯದಿಂದ ವಾಚಕವೆನ್ನಬಹುದಾದಂತಹ ಅರ್ಥಾಂತರವನ್ನು, ತನ್ನ ಮುಖ್ಯಾರ್ಥವನ್ನು

---

[1] ಹಿಂದೆ ಪುಟ ೪೨-೩ ನ್ನು ನೋಡಿ, (ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೩).

ಮಾತ್ರ ನೇರವಾಗಿ ಬೋಧಿಸಬಲ್ಲ ಶಬ್ದವೇ ಸೂಚಿಸುತ್ತಿದ್ದರೆ, ಅಂತಹ ಕಡೆಗಳಲ್ಲಿ 'ವ್ಯಂಜಕತ್ವ'ವೆಂಬ ಹೆಸರೇ ಯುಕ್ತವಾದುದು.

ವಾಚ್ಯ-ವ್ಯಂಗ್ಯಗಳಿಗೆ ಪದಾರ್ಥ-ವಾಕ್ಯಾರ್ಥದ ದೃಷ್ಟಾಂತವೂ ಅನ್ವಯಿಸುವುದಿಲ್ಲ. ಏಕೆಂದರೆ ಕೆಲವು ವಿದ್ವಾಂಸರ ಮತದಲ್ಲಿ ಪದದಿಂದ ಬರುವ ಅರ್ಥಪ್ರತೀತಿಯೇ ಅಸತ್ಯ. ಹೀಗೆ ಅಸತ್ಯತ್ವವನ್ನು ಒಪ್ಪದವರೂ ಕೂಡ ವಾಕ್ಯಾರ್ಥ-ಪದಾರ್ಥಗಳಿಗೆ ಗಡಿಗೆ ಮತ್ತು ಅದರ ಉಪಾದಾನಕಾರಣವಾದ ಹೋಳುಗಳಿಗಿರುವ ಸಂಬಂಧವನ್ನೇ ಒಪ್ಪಬೇಕಾಗುತ್ತದೆ. ಗಡಿಗೆಯು ಹುಟ್ಟಿದ ಮೇಲೆ ಅದರ ಉಪಾದಾನಕಾರಣಗಳಾದ ಹೋಳುಗಳು ಬೇರೆಯಾಗಿ ಹೇಗೆ ಕಾಣಿಸುವುದಿಲ್ಲವೋ ಹಾಗೆಯೇ ವಾಕ್ಯದ ಅಥವಾ ಅದರ ತಾತ್ಪರ್ಯದ ಪ್ರತೀತಿಯಾದ ಮೇಲೆ ಪದ ಮತ್ತು ಅದರ ಅರ್ಥಗಳು ಬೇರೆಯಾಗಿ ಕಾಣಿಸುವುದು ಸಾಧ್ಯವಿಲ್ಲ; ಹಾಗೆ ಬೇರೆಯಾಗಿ ಕಾಣಿಸುವುದಾದರೆ ವಾಕ್ಯಾರ್ಥದ ಪ್ರತೀತಿಯೇ ದೂರವಾಗಿಬಿಡಬೇಕಾಗುತ್ತದೆ. ಈ ನ್ಯಾಯವು ವಾಚ್ಯ-ವ್ಯಂಗ್ಯಗಳಿಗೆ ಅನ್ವಯಿಸುವುದಿಲ್ಲ. ವ್ಯಂಗ್ಯವು ಪ್ರತೀತವಾಗುವಾಗ ವಾಚ್ಯದ ಪ್ರತೀತಿಯು ದೂರವಾಗುವುದಿಲ್ಲ. ವಾಚ್ಯದ ಪ್ರತೀತಿಯ ಜತೆಯಲ್ಲಿಯೇ ವ್ಯಂಗ್ಯದ ಪ್ರತೀತಿಯೂ ಉಂಟಾಗುವುದೇ ಅದಕ್ಕೆ ಕಾರಣ. ಆದುದರಿಂದ ಅವುಗಳಿಗೆ ಗಡಿಗೆ ಮತ್ತು ದೀಪದ ನ್ಯಾಯವನ್ನು ಹೇಳಬಹುದು. ದೀಪದ ಮೂಲಕ ಗಡಿಗೆಯ ಪ್ರತೀತಿಯು ಬಂದೊಡನೆಯೇ ಹೇಗೆ ದೀಪದ ಬೆಳಕು ಮರೆಯಾಗುವುದಿಲ್ಲವೋ, ಹಾಗೆಯೇ ವ್ಯಂಗ್ಯದ ಪ್ರತೀತಿಯ ಕಾಲದಲ್ಲಿ ವಾಚ್ಯವೂ ಭಾಸವಾಗುತ್ತಲೇ ಇರುತ್ತದೆ. **ಮೊದಲನೆಯ ಉದ್ದ್ಯೋತದಲ್ಲಿ** "ಯಥಾ ಪದಾರ್ಥದ್ವಾರೇಣ . . ." ಎಂದು ಹೇಳಿರುವುದಕ್ಕೆ ಎರಡರ ಸಾಧನತ್ವದ ಸಾಮ್ಯವು ಮಾತ್ರ ವಿವಕ್ಷಿತವೇ ಹೊರತು ಉಳಿದ ಅಂಶಗಳಲ್ಲ.

'ಹೀಗೆ ಹೇಳಿದರೆ ಒಂದು ವಾಕ್ಯಕ್ಕೆ ಏಕಕಾಲದಲ್ಲಿ ಎರಡು ಅರ್ಥಗಳ ಯೋಗವಿದೆಯೆಂದಂತಾಗುವುದಲ್ಲ! ಅದು ನಿಜವಾದರೆ ಅದರ ವಾಕ್ಯತ್ವಕ್ಕೆ ಹಾನಿಯೊದಗಿಬಿಡುತ್ತದೆ. ಒಂದು ಅರ್ಥವನ್ನು ಮಾತ್ರ ಬೋಧಿಸಬಲ್ಲುದನ್ನಲ್ಲವೆ ವಾಕ್ಯವೆನ್ನುವುದು?' ಎಂದು ಯಾರಾದರೂ ಕೇಳಬಹುದು. ಆದರೆ ವಸ್ತುತಃ ಇದು ದೋಷವಲ್ಲ. ಏಕೆಂದರೆ ಈ ಎರಡು ಅರ್ಥಗಳಲ್ಲಿ ಒಂದನ್ನು ಗೌಣವೆಂದೂ ಇನ್ನೊಂದನ್ನು ಪ್ರಧಾನವೆಂದೂ ವ್ಯವಸ್ಥೆಮಾಡಲಾಗಿದೆ. ಕೆಲವೆಡೆಗಳಲ್ಲಿ ವ್ಯಂಗ್ಯವು ಪ್ರಧಾನವಾಗಿದ್ದು ವಾಚ್ಯವು ಗೌಣವಾಗಿರುತ್ತದೆ. ಮಿಕ್ಕ ಕಡೆಗಳಲ್ಲಿ ವಾಚ್ಯವೇ ಪ್ರಧಾನವಾಗಿದ್ದು ವ್ಯಂಗ್ಯವು ಗೌಣವಾಗಿರುತ್ತದೆ. ವ್ಯಂಗ್ಯವು ಪ್ರಧಾನವಾಗಿರುವಾಗ 'ಧ್ವನಿ'ಕಾವ್ಯವೆನ್ನಬೇಕೆಂದು ಆಗಲೇ ಹೇಳಲಾಯಿತು. ವಾಚ್ಯವು ಪ್ರಧಾನ

ವಾಗಿರುವಾಗ ಅದು ಮುಂದೆ ನಿದರ್ಶಿಸಲಿರುವ ಪ್ರಕಾರಾಂತರವಾಗುತ್ತದೆ. ಆದುದರಿಂದ ಇಷ್ಟು ಮಾತ್ರ ಸಿದ್ಧಾಂತವಾದಂತಾಯಿತು:—ಕಾವ್ಯವು ವ್ಯಂಗ್ಯಪರವಾಗಿರುವಾಗ ವ್ಯಂಗ್ಯವು ಎಂದಿಗೂ ವಾಚ್ಯವೆನಿಸಲಾರದು; ಅದು ಸರ್ವಥಾ ವ್ಯಂಗ್ಯವೇ.

ಮತ್ತೂ ಒಂದು ವಿಷಯ: ವ್ಯಂಗ್ಯವೇ ಪ್ರಧಾನವೆಂಬ ವಿವಕ್ಷೆಯಿಲ್ಲದಿರುವ ಸ್ಥಳದಲ್ಲಿ ಅದನ್ನು ನೀವು ವಾಚ್ಯವೆನ್ನುವುದಕ್ಕೂ ಅವಕಾಶವಿಲ್ಲದೆಹೋಗುತ್ತದೆ; ಏಕೆಂದರೆ ಶಬ್ದಕ್ಕೆ ಅದನ್ನು ಬೋಧಿಸುವ ಉದ್ದೇಶವೇ ಇರುವುದಿಲ್ಲ. ಈ ರೀತಿಯಾಗಿಯೂ ಶಬ್ದಗಳಿಗೆ ವ್ಯಂಗ್ಯವೆಂಬ ಒಂದು ವಿಷಯವಿರುವುದು ಸಿದ್ಧವಾಗುತ್ತದೆ. ಇಷ್ಟಾದ ಮೇಲೆ ವ್ಯಂಗ್ಯವೇ ಎಲ್ಲಿ ಪ್ರಧಾನವಾಗಿರುವುದೋ ಅಲ್ಲಿಯೂ ಅದುಂಟೆಂದು ಹೇಳುವ ಬದಲು ಅದರ ಸ್ವರೂಪವನ್ನು ಮರೆಮಾಚುವುದೇಕೆ? ಹೀಗೆ ವ್ಯಂಜಕತ್ವವು ವಾಚಕತ್ವಕ್ಕಿಂತಲೂ ಬೇರೆಯೇ. ಇನ್ನೂ ಒಂದು ಕಾರಣವನ್ನು ಹೇಳಬಹುದು:—ವಾಚಕತ್ವವು ಕೇವಲ ಶಬ್ದಗಳನ್ನಷ್ಟೇ ಅವಲಂಬಿಸಿಕೊಂಡಿರುವುದು; ಆದರೆ ವ್ಯಂಜಕತ್ವವು ಶಬ್ದ, ಅರ್ಥಗಳೆರಡಕ್ಕೂ ಇರುವುದೆಂದು ಪ್ರತಿಪಾದಿಸಿರುವುದರಿಂದ ಶಬ್ದಾಶ್ರಯವಾಗುವಂತೆಯೇ ಅರ್ಥಾಶ್ರಯವಾಗಿಯೂ ಇರುವುದು.

ಗುಣವೃತ್ತಿಯು ಕೂಡ 'ಉಪಚಾರ' ಮತ್ತು ಲಕ್ಷಣೆಗಳ ಮೂಲಕ ಉಭಯಾಶ್ರಯವಾಗುವುದು ಸರಿಯೆ. ಆದರೆ ಗುಣವೃತ್ತಿಗೂ ವ್ಯಂಜಕತ್ವಕ್ಕೂ ಸ್ವರೂಪದಲ್ಲಿ ಭೇದವಿದೆ; ವಿಷಯದಲ್ಲಿಯೂ ಭೇದವಿದೆ. ಸ್ವರೂಪಭೇದವಾವುದೆಂದರೆ ಇದು—ಗುಣವೃತ್ತಿಯೆನ್ನುವುದು ಅಮುಖ್ಯವಾದ ಶಬ್ದವ್ಯಾಪಾರದ ಹೆಸರೆಂಬುದು ಸುಪ್ರಸಿದ್ಧ; ವ್ಯಂಜಕತ್ವವಾದರೋ ಮುಖ್ಯವೇ ಆದ ಶಬ್ದವ್ಯಾಪಾರ. ಅರ್ಥದಿಂದ ಧ್ವನಿತವಾಗುವ ಮೂರು ಬಗೆಯ ವ್ಯಂಗ್ಯದ ಪ್ರತೀತಿಯು ಎಂದಿಗೂ ಸ್ವಲ್ಪವಾಗಲಿ ಅಮುಖ್ಯವೆಂದು ತೋರಲಾರದು.

ಇದು ಸ್ವರೂಪದಲ್ಲಿರುವ ಇನ್ನೊಂದು ಭೇದ:—ಅಮುಖ್ಯವೆಂದು ವ್ಯವಸ್ಥಿತವಾದ ಗುಣವೃತ್ತಿಯನ್ನು ವಾಚಕತ್ವವೆಂದೇ ಪರಿಗಣಿಸಬಹುದು. ಆದರೆ ವ್ಯಂಜಕತ್ವವು ವಾಚಕತ್ವಕ್ಕಿಂತ ಬಹಳ ಭಿನ್ನವಾದುದೆಂಬುದನ್ನು ಈಗಾಗಲೇ ವಿವರಿಸಿದೆ. ಮತ್ತೊಂದು ಭೇದವಿದು:—ಗುಣವೃತ್ತಿಯ ಮೂಲಕ ಒಂದರ್ಥವು ಅರ್ಥಾಂತರವನ್ನು ಸೂಚಿಸುವಾಗ, ಆ ಸೂಚ್ಯವಾದ ಅರ್ಥದಲ್ಲಿಯೇ ತಾನೂ ಸೇರಿಕೊಂಡು ಅದೇ ಆಗಿಬಿಡುತ್ತದೆ. 'ಗಂಗೆಯಲ್ಲಿ ಹಳ್ಳಿ', ಇವೇ ಮೊದಲಾದುವು ಉದಾಹರಣೆಗಳು. ಆದರೆ ವ್ಯಂಜಕತ್ವದ ಮೂಲಕ ಒಂದರ್ಥವು ಅರ್ಥಾಂತರವನ್ನು ಧ್ವನಿಸುವಾಗ ಅರ್ಥವು ತನ್ನ ಸ್ವರೂಪವನ್ನು ಉಳಿಸಿಕೊಂಡೇ ಮತ್ತೊಂದನ್ನೂ ಸೂಚಿಸುತ್ತದೆ—

ದೀಪವು ಹೇಗೋ ಹಾಗೆ. 'ಲೀಲಾಕಮಲಪತ್ರಾಣಿ ಗಣಯಾಮಾಸ ಪಾರ್ವತೀ'[1] ಮುಂತಾದುವೇ ಉದಾಹರಣೆಗಳು. ಒಂದು ಪಕ್ಷ, ತನ್ನ ಸ್ವರೂಪವನ್ನು ಕಳೆದು ಕೊಳ್ಳದೆ ಅರ್ಥವು ಅರ್ಥಾಂತರವನ್ನು ಬೋಧಿಸುವ ಸಂದರ್ಭಗಳಿಗೆ ಲಕ್ಷಣೆಯೆಂಬ ಹೆಸರನ್ನೇ ಕೊಡುವುದಾದರೆ ಆಗ ಲಕ್ಷಣೆಯೇ ಮುಖ್ಯವಾದ ಶಬ್ದವ್ಯಾಪಾರವೆಂದು ಹೇಳಬೇಕಾದ ಪ್ರಸಂಗ ಬರುತ್ತದೆ. ಏಕೆಂದರೆ ಪ್ರಾಯಿಕವಾಗಿ ಎಲ್ಲ ವಾಕ್ಯಗಳಿಗೂ ವಾಚ್ಯಾರ್ಥವಲ್ಲದೆ ತಾತ್ಪರ್ಯಾರ್ಥವನ್ನು ಬೋಧಿಸುವ ಶಕ್ತಿಯೂ ಉಂಟೇ ಉಂಟು.

'ಆಗಲಿ; ನಿಮ್ಮ ಪಕ್ಷದ ಪ್ರಕಾರ ಅರ್ಥವು ತ್ರಿವಿಧವಾದ ವ್ಯಂಗ್ಯವನ್ನು ಧ್ವನಿಸುವಾಗ ಶಬ್ದಕ್ಕೆ ಯಾವ ವ್ಯಾಪಾರವನ್ನು ಹೇಳುತ್ತೀರಿ?' ಎಂದು ಕೇಳ ಬಹುದು. ಇದೇ ಉತ್ತರ:—ಪ್ರಕರಣಾದಿಗಳಿಂದೊಡಗೂಡಿದ ಶಬ್ದದ ಪ್ರಭಾವ ದಿಂದಲೇ ಅರ್ಥಕ್ಕೆ ಆ ಬಗೆಯಾದ ವ್ಯಂಜಕತ್ವವುಂಟಾಗುವುದು; ಅನ್ಯಥಾ ಅಲ್ಲ. ಆದುದರಿಂದ ಅಲ್ಲಿ ಶಬ್ದಕ್ಕಿರುವ ಉಪಯೋಗವನ್ನು ಒಪ್ಪದಿರುವುದು ಹೇಗೆ?

ಗುಣವೃತ್ತಿ ಮತ್ತು ವ್ಯಂಜಕತ್ವಗಳಿಗೆ ವಿಷಯಭೇದವೂ ಸ್ಪಷ್ಟವಾಗಿಯೇ ಇದೆ. ಹೇಗೆಂದರೆ ವ್ಯಂಜಕತ್ವದ ವಿಷಯವು ಮೂರನ್ನೊಳಗೊಂಡಿದೆ: ರಸಾದಿಗಳು, ಅಲಂಕಾರವಿಶೇಷಗಳು ಮತ್ತು ವ್ಯಂಗ್ಯರೂಪವನ್ನು ಪಡೆದ ವಸ್ತುಗಳು. ಇವುಗಳಲ್ಲಿ ರಸಾದಿಗಳ ಪ್ರತೀತಿಯನ್ನು ಗುಣವೃತ್ತಿಯೆಂದು ಯಾರೂ ಹೇಳುವುದಿಲ್ಲ; ಹೇಳಲು ಸಾಧ್ಯವೂ ಇಲ್ಲ. ವ್ಯಂಗ್ಯವಾದ ಅಲಂಕಾರಗಳ ಪ್ರತೀತಿಯಾದರೂ ಅಷ್ಟೆ. ಒಂದು ವಸ್ತುವಿನಲ್ಲಿ ಸ್ವಶಬ್ದದಿಂದ ಹೇಳಲಾಗದ ಸೌಂದರ್ಯಪ್ರತೀತಿಯು ಬರಲೆಂಬ ಉದ್ದೇಶದಿಂದ ಕವಿಯು ಯಾವುದನ್ನು ಪ್ರಕಾರಾಂತರದಿಂದ ಪ್ರತಿಪಾದಿಸುತ್ತಾನೋ ಅದು ವ್ಯಂಗ್ಯ. ಅದೆಲ್ಲವೂ ಗುಣವೃತ್ತಿಗೆ ವಿಷಯವಾಗುವುದು ಸಾಧ್ಯವಿಲ್ಲ. ಏಕೆಂದರೆ ಕೇವಲ ಪ್ರಸಿದ್ಧಿ ಮತ್ತು ರೂಢಿಗಳ ಆಧಾರದ ಮೇಲೆಯೂ ಇರುವ ಎಷ್ಟೋ ಗೌಣಶಬ್ದಗಳ ಪ್ರಯೋಗವನ್ನು ನಾವೇ ನೋಡುತ್ತೇವೆ. ಇದನ್ನು ಮೊದಲೇ ವಿವರಿಸಿದೆ. ಅಲ್ಲದೆ ಗುಣವೃತ್ತಿಯ ವಿಷಯದಲ್ಲಿ ಏನಾದರೂ ಅಷ್ಟಿಷ್ಟು ಸೌಂದರ್ಯವು ಬರುವುದಕ್ಕೂ ವ್ಯಂಜಕತ್ವದ ಸಂಪರ್ಕವೇ ಕಾರಣ. ಆದುದರಿಂದ ಗುಣವೃತ್ತಿಗೂ ವ್ಯಂಜಕತ್ವಕ್ಕೂ ಬಹಳವಾದ ವ್ಯತ್ಯಾಸವಿದೆ. ಹೀಗೆ ವಾಚಕತ್ವ ಮತ್ತು ಗುಣವೃತ್ತಿ ಗಳೆರಡಕ್ಕಿಂತಲೂ ವಿಲಕ್ಷಣವಾಗಿರುವುದಲ್ಲದೆ ಅದು ಅವೆರಡನ್ನೂ ಆಶ್ರಯಿಸಿ ಕೊಂಡೇ ಇರುವುದೆಂದೂ ನಿಶ್ಚಯಿಸಿಕೊಳ್ಳಬೇಕು.

ವಿವಕ್ಷಿತಾನ್ಯಪರವಾಚ್ಯ-ಧ್ವನಿಯೇ ಮೊದಲಾದ ಕಡೆಗಳಲ್ಲಿ ವ್ಯಂಜಕತ್ವವು ವಾಚಕತ್ವವನ್ನಾಶ್ರಯಿಸಿಕೊಂಡಿರುತ್ತದೆ; ಅವಿವಕ್ಷಿತವಾಚ್ಯ-ಧ್ವನಿಯೇ ಮೊದಲಾ

---

[1] ಹಿಂದೆ ಪುಟ ೧೮ ನ್ನು ನೋಡಿ, (ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೩).

ದೆಡೆಗಳಲ್ಲಿ ಗುಣವೃತ್ತಿಯನ್ನಾಶ್ರಯಿಸಿಕೊಂಡಿರುತ್ತದೆ. ಹೀಗೆ ಉಭಯಾಶ್ರಯತ್ವ ವನ್ನು ವ್ಯಂಜಕತ್ವಕ್ಕೆ ಪ್ರತಿಪಾದಿಸುವ ಉದ್ದೇಶದಿಂದಲೇ ಮೊಟ್ಟಮೊದಲು ಧ್ವನಿಗೆ ಈ ಎರಡು ಭೇದಗಳನ್ನು ನಿರೂಪಿಸಲಾಯಿತು. ಹೀಗೆ ಆ ಎರಡನ್ನೂ ಆಶ್ರಯಿಸುವ ವ್ಯಂಜಕತ್ವವು ಅವುಗಳಲ್ಲೊಂದರೊಡನೆ ಐಕ್ಯವನ್ನು ಪಡೆಯುವುದೆಂದು ಹೇಳುವುದು ಶಕ್ಯವಿಲ್ಲ. ಕೆಲವುಸಾರಿ ಲಕ್ಷಣೆಯನ್ನೂ ಆಶ್ರಯಿಸಿಕೊಂಡಿರುವುದರಿಂದ ಅದು ವಾಚಕತ್ವವೊಂದರೊಡನೆ ಐಕ್ಯವಾಗುವುದಿಲ್ಲ. ಕೆಲವುಸಾರಿ ವಾಚಕತ್ವವನ್ನು ಆಶ್ರಯಿಸಿಕೊಂಡಿರುವುದರಿಂದ ಅದು ಲಕ್ಷಣೆಯೊಂದರೊಡನೆ ಐಕ್ಯಹೊಂದುವುದಿಲ್ಲ. ಹೀಗೆ ಎರಡರ ಧರ್ಮವೂ ತನ್ನಲ್ಲಿರುವುದರಿಂದ ಅದು ಅವುಗಳಾವುದೊಂದರಲ್ಲೂ ಐಕ್ಯವಾಗುವುದಿಲ್ಲವೆಂದಷ್ಟೇ ಅಲ್ಲ. ವಾಚಕತ್ವ, ಲಕ್ಷಣೆಗಳ ಸ್ಪರ್ಶವೇ ಇಲ್ಲದೆ ಶಬ್ದದ ಧರ್ಮವು ಕೂಡ ಅದರಲ್ಲಿರುವುದೆನ್ನುವುದು ಇನ್ನೂ ಒಂದು ಕಾರಣ. ಸಂಗೀತದಲ್ಲಿರುವ ಶಬ್ದಗಳಿಗೆ ರಸಾದಿಗಳ ವಿಷಯವಾದ ವ್ಯಂಜಕತ್ವವಿರುವುದೇ ನಿದರ್ಶನ. ಅವುಗಳಿಗೆ ಸ್ವಲ್ಪವಾಗಲಿ ವಾಚಕತ್ವವೂ ಲಕ್ಷಣೆಯೂ ಕಾಣುವುದಿಲ್ಲ. ಅದೂ ಅಲ್ಲದೆ ಶಬ್ದವೇ ಅಲ್ಲದೆಡೆಗಳಲ್ಲಿಯೂ ವ್ಯಂಜಕತ್ವವು ಕಾಣುವುದರಿಂದ ಅದು ವಾಚಕತ್ವವೇ ಮೊದಲಾದ ಶಬ್ದಧರ್ಮಗಳ ಪ್ರಕಾರವೆಂದು ಹೇಳುವುದು ಯುಕ್ತ ವಲ್ಲ. ಒಂದುವೇಳೆ ವಾಚಕತ್ವ, ಲಕ್ಷಣೆಯೇ ಮೊದಲಾದ ಪ್ರಸಿದ್ಧ ಶಬ್ದವ್ಯಾಪಾರಗಳಿ ಗಿಂತ ಬೇರೆಯಾಗಿರುವುದಾದರೂ ವ್ಯಂಜಕತ್ವವನ್ನು ಅವುಗಳ ಪ್ರಕಾರಾಂತರವೆಂದೇ ಭಾವಿಸುವೆವೆನ್ನುವುದಾದರೆ, ಅದನ್ನು ಶಬ್ದವ್ಯಾಪಾರದ ಪ್ರಕಾರವೆನ್ನುವುದಕ್ಕಿಂತ ಶಬ್ದದ ಪ್ರಕಾರವೆಂದೇ ಏಕೆ ಹೇಳಿಬಿಡಬಾರದು? ಆದಕಾರಣ ಶಬ್ದ-ವ್ಯವಹಾರದಲ್ಲಿ ಮೂರು ಪ್ರಕಾರಗಳನ್ನೊಪ್ಪಲೇಬೇಕು:—ವಾಚಕತ್ವ, ಗುಣವೃತ್ತಿ ಮತ್ತು ವ್ಯಂಜಕತ್ವ. ವ್ಯಂಜಕತ್ವದಲ್ಲಿ ವ್ಯಂಗ್ಯವೇ ಪ್ರಧಾನವಾಗಿರುವಾಗ 'ಧ್ವನಿ'ಯೆಂಬ ಹೆಸರು ಸಲ್ಲುತ್ತದೆ. ಆ ಧ್ವನಿಗೆ ಅವಿವಕ್ಷಿತವಾಚ್ಯ ಮತ್ತು ವಿವಕ್ಷಿತಾನ್ಯಪರವಾಚ್ಯ ವೆಂಬ ಮುಖ್ಯವಾದ ಎರಡು ಪ್ರಭೇದಗಳಾಗುತ್ತವೆ. ಎಲ್ಲಕ್ಕೂ ಮೊದಲೇ ಇವು ಗಳನ್ನು ವಿಸ್ತಾರವಾಗಿ ನಿರೂಪಿಸಲಾಗಿದೆ.

ಪೂರ್ವಪಕ್ಷಕಾರನು ಹೀಗೆ ಹೇಳಬಹುದು:—'ವಿವಕ್ಷಿತಾನ್ಯಪರವಾಚ್ಯ-ಧ್ವನಿಯಲ್ಲಿ ಗುಣವೃತ್ತಿಯ ಸ್ವರೂಪವಿಲ್ಲವೆಂದು ಹೇಳಿದಿರಿ; ಅದು ಸರಿ. ಏಕೆಂದರೆ ಒಂದು ಶಬ್ದದಿಂದ ಒಂದು ಅರ್ಥವು ಪ್ರತೀತವಾದಮೇಲೆಯೂ ಇನ್ನೊಂದರ್ಥವು ಪ್ರತೀತವಾಗುತ್ತಿದ್ದರೆ ಅದನ್ನು ಗುಣವೃತ್ತಿಯೆಂದು ಕರೆಯಲು ಸಾಧ್ಯವೇ ಇಲ್ಲ. ಗುಣವೃತ್ತಿಯಲ್ಲಿ ಎರಡು ಬಗೆಗಳನ್ನು ನೋಡಬಹುದು: (೧) ಏನಾದರೂ ಕಾರಣ ದಿಂದ ಶಬ್ದವನ್ನು ಅರ್ಥಾಂತರದಲ್ಲಿ ಪ್ರಯೋಗಿಸುವುದು—ಇಲ್ಲಿ ಮುಖ್ಯಾರ್ಥವು

ಅತ್ಯಂತತಿರಸ್ಕೃತವಾಗಿರುತ್ತದೆ—. ಉದಾ:—'ಈ ವಟುವು ಅಗ್ನಿಯೇ'. (೨) ಶಬ್ದವು ತನ್ನ ಮುಖ್ಯಾರ್ಥವನ್ನು ಅಂಶತಃ ಉಳಿಸಿಕೊಂಡೇ ಅದಕ್ಕೆ ಸಂಬಂಧಿಸಿದ ಇನ್ನೊಂದು ಅರ್ಥಕ್ಕೂ ಬೋಧಕವಾಗುವುದು. ಉದಾ:—'ಗಂಗೆಯಲ್ಲಿ ಹಳ್ಳಿ.' ಇವೆರಡು ಬಗೆಗಳಲ್ಲಿಯೂ ವಾಚ್ಯಾರ್ಥಕ್ಕೆ ಪೂರ್ಣವಿವಕ್ಷೆಯಿಲ್ಲ. ಆದುದರಿಂದ ವಾಚ್ಯಾರ್ಥಕ್ಕೆ ಪೂರ್ಣವಿವಕ್ಷೆಯೂ ಇದ್ದು ಅದಕ್ಕೆ ವಾಚಕವಾದ ಶಬ್ದದಿಂದಲೇ ಬೇರೊಂದರ್ಥದ ಧ್ವನಿಯೂ ಇರುವ ವಿವಕ್ಷಿತಾನ್ಯಪರವಾಚ್ಯಧ್ವನಿಯಲ್ಲಿ ವ್ಯಂಜಕತ್ವ ವನ್ನು ಮಾತ್ರ ಹೇಳಬೇಕೆಂಬುದು ಯುಕ್ತಿಯುಕ್ತವಾಗಿದೆ. ತನ್ನ ಸ್ವರೂಪವನ್ನೂ ಪ್ರಕಾಶಿಸುತ್ತಲೇ ಮತ್ತೊಂದನ್ನು ಯಾವುದು ಬೆಳಗಬಲ್ಲದೋ ಅದನ್ನು ವ್ಯಂಜಕ ವೆನ್ನುತ್ತೇವೆ. ಅಂತಹ ಕಡೆಗಳಲ್ಲಿ ವಾಚಕತ್ವಕ್ಕೆ ವ್ಯಂಜಕತ್ವವೂ ಇರುವುದರಿಂದ ಗುಣವೃತ್ತಿಯೆಂಬ ಹೆಸರನ್ನು ಸರ್ವಥಾ ಕೊಡುವುದು ಶಕ್ಯವಿಲ್ಲ.

ಆದರೆ ಅವಿವಕ್ಷಿತವಾಚ್ಯ-ಧ್ವನಿಗೂ ಗುಣ-ವೃತ್ತಿಗೂ ಇರುವ ಭೇದವೇನು? ಗುಣವೃತ್ತಿಯಲ್ಲಿ ಯಾವ ಎರಡು ಬಗೆಗಳಿವೆಯೋ ಅವೇ ಎರಡು ಬಗೆಗಳು ಆ ಧ್ವನಿಯಲ್ಲಿಯೂ ಇವೆ' ಎಂದು.

ಇದರಲ್ಲಿಯೂ ಕೂಡ ತಪ್ಪೇನೂ ಇಲ್ಲ. ಏಕೆಂದರೆ ಅವಿವಕ್ಷಿತವಾಚ್ಯಧ್ವನಿಯು ಗುಣವೃತ್ತಿಯ ಮಾರ್ಗವನ್ನೇ ಆಶ್ರಯಿಸಿದರೂ ಸಹ ಗುಣವೃತ್ತಿಯೇ ಆಗಿಬಿಡುವು ದಿಲ್ಲ. ಏಕೆಂದರೆ ವ್ಯಂಜಕತ್ವವು ಸರ್ವಥಾ ಇಲ್ಲದಿರುವ ಗುಣವೃತ್ತಿಯನ್ನೂ ನೋಡ ಬಹುದು. ಆದರೆ ಹಿಂದೆ ಹೇಳಿದಂತೆ ಸೌಂದರ್ಯಾತಿಶಯಕಾರಣವಾದ ವ್ಯಂಗ್ಯ ವಿಲ್ಲದೆ ವ್ಯಂಜಕತ್ವವಿರಲೇ ಆರದು. ಗುಣವೃತ್ತಿಯ ಮೊದಲನೆಯ ಬಗೆಯಾದ ಅಭೇದೋಪಚಾರವು ಕೇವಲ ವಾಚ್ಯಾರ್ಥದ ಧರ್ಮವನ್ನಾಶ್ರಯಿಸುತ್ತದೆ; ಇಲ್ಲವೆ ಯಾವುದೋ ಒಂದು—ಎಂದರೆ ಸೌಂದರ್ಯಾತಿಶಯವಿಲ್ಲದ—ವ್ಯಂಜಕತ್ವವನ್ನಾ ಶ್ರಯಿಸುತ್ತದೆ. ಉದಾ:—ತೀಕ್ಷ್ಣತೆಯ ಕಾರಣದಿಂದ ವಟುವು 'ಅಗ್ನಿ'ಯಾಗು ತ್ತಾನೆ; ಆಹ್ಲಾದಕತ್ವವಿರುವುದರಿಂದ ನಾಯಿಕೆಯ ಮುಖವು 'ಚಂದ್ರ'ನಾಗುತ್ತದೆ. "... ಪ್ರಿಯಜನಕೆ ಪುನರುಕ್ತಿ ಮಾತ್ರ ತಾನಿಲ್ಲ"[1] ಮೊದಲಾದುವೂ ಉದಾಹರಣೆ ಗಳು. ಗುಣವೃತ್ತಿಯ ಎರಡನೆಯ ಬಗೆಯಾದ ಲಕ್ಷಣೆಯು ಕೂಡ ಲಕ್ಷಣೀಯವಾದ ಅರ್ಥದ ಸಂಬಂಧವೊಂದಿದ್ದುಬಿಟ್ಟರೆ, ಸೌಂದರ್ಯಾತಿಶಯದ್ಯೋತಕವಾದ ವ್ಯಂಗ್ಯದ ಪ್ರತೀತಿಯಿಲ್ಲದಿದ್ದರೂ, ಬಂದೇ ಬರುತ್ತದೆ. "ಮಂಚಗಳು ಕಿರಲುತ್ತವೆ", ಮೊದಲಾದುವು ಉದಾಹರಣೆಗಳು.

ಆದರೆ ಗುಣವೃತ್ತಿಯು ಕೆಲವೆಡೆಗಳಲ್ಲಿ ಸೌಂದರ್ಯಾತಿಶಯಸೂಚಕವಾದ

---

[1] ಹಿಂದೆ ಪುಟ ೩೭ ನ್ನು ನೋಡಿ (ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೨).

ವ್ಯಂಗ್ಯಪ್ರತೀತಿಗೆ ಕಾರಣವಾಗುವುದಲ್ಲ! ಎಂದರೆ, ಅಲ್ಲಿಯೂ ವಾಚಕತ್ವಕ್ಕೆ ಸೌಂದರ್ಯದ್ಯೋತಕತ್ವವು ಬರುವಾಗ ಹೇಗೋ ಹಾಗೆಯೇ ವ್ಯಂಜಕತ್ವವು ಸೇರಿಕೊಳ್ಳುವುದೇ ಕಾರಣ. ಅಸಂಭವವಾದ ಅರ್ಥಗಳ ವರ್ಣನೆಯಿರುವೆಡೆಗಳಲ್ಲಿ—"ಕಾಂಚನವ ಕುಸುಮಿಸುವ ಧರೆಯನ್ನೆ . . ."[1] ಇತ್ಯಾದಿಗಳು ಉದಾಹರಣೆಗಳು—ಈ ವಿಧವಾದ ವರ್ಣನೆಯು ಔಚಿತ್ಯಕ್ಕೆ ಸೌಂದರ್ಯಾತಿಶಯಸೂಚಕವಾದ ವ್ಯಂಗ್ಯಪ್ರತೀತಿಯೇ ಮುಖ್ಯಕಾರಣವಾದುದರಿಂದ, ಅಲ್ಲಿ ಗುಣವೃತ್ತಿಯಿದ್ದರೂ ಧ್ವನಿಯೆಂದು ಕರೆಯುವುದೇ ಯುಕ್ತಿಯುಕ್ತ. ಆದುದರಿಂದ ಅವಿವಕ್ಷಿತವಾಚ್ಯಧ್ವನಿಯ ಎರಡು ಪ್ರಭೇದಗಳಲ್ಲಿಯೂ ವ್ಯಂಜಕತ್ವವಿಶೇಷದಿಂದ ಕೂಡಿದ ಗುಣವೃತ್ತಿಯಿರುತ್ತದೆ. ಗುಣವೃತ್ತಿಯೂ ಇದೂ ಒಂದೇ ಎನಿಸದೆ ಬೇರೆಯಾಗಿಯೇ ಭಾಸವಾಗುತ್ತಾ ಸಹೃದಯರ ಹೃದಯಾಹ್ಲಾದವನ್ನು ತರುತ್ತದೆ. ಅಷ್ಟೇ ಅಲ್ಲ; ವ್ಯಂಜಕತ್ವವಿಲ್ಲದ ಲಕ್ಷ್ಯಗಳಲ್ಲಿಯೂ ಗುಣವೃತ್ತಿಯು ಮಾತ್ರ ಬರುತ್ತದೆ. ಇದೆಲ್ಲವನ್ನೂ ಹಿಂದೆಯೇ ಸೂಚಿಸಿಯಾಗಿದ್ದರೂ ಮತ್ತಷ್ಟು ಸ್ಫುಟವಾಗಿ ತಿಳಿಯಲೆಂದು ಮತ್ತೆ ಹೇಳಲಾಯಿತು.

ಮತ್ತೇನೆಂದರೆ—ವ್ಯಂಜಕತ್ವವೆಂಬ ಶಬ್ದಾರ್ಥಗಳ ವ್ಯಾಪಾರವು ಪ್ರಸಿದ್ಧವಾದ ಶಬ್ದಾರ್ಥಸಂಕೇತವನ್ನು ಹಿಂಬಾಲಿಸಿಯೇ ಬರುತ್ತದೆಂಬುದು ನಿರ್ವಿವಾದ. (ಕೋಶಾದಿಗಳಲ್ಲಿ) ಪ್ರಸಿದ್ಧವಾಗಿರುವ ಶಬ್ದಾರ್ಥಸಂಬಂಧವನ್ನು ವಾಚ್ಯವಾಚಕಭಾವವೆನ್ನುತ್ತೇವೆ. ಇದನ್ನು ಹಿಂಬಾಲಿಸಿಕೊಂಡೇ, ವ್ಯಂಜಕತ್ವವ್ಯಾಪಾರವು ಬರುವುದು. ಆಮೇಲೆ ಬೇರೆ ಸಾಮಗ್ರಿಗಳ ಸಂಪರ್ಕದಿಂದ ಅದು 'ಔಪಾಧಿಕ' ಅಥವಾ ವೈಶಿಷ್ಟ್ಯಯುತವಾಗಿ ಪರಿಣಮಿಸುತ್ತದೆ. ಆದುದರಿಂದಲೇ ವಾಚಕತ್ವಕ್ಕೂ ವ್ಯಂಜಕತ್ವಕ್ಕೂ ವ್ಯತ್ಯಾಸವಿರುವುದು. ಒಂದೊಂದು ಶಬ್ದದ ವಾಚಕತ್ವವೂ ನಿಯತವಾದುದು. ಭಾಷೆಯ ಪ್ರಥಮಾಭ್ಯಾಸದ ಕಾಲದಿಂದ ಹಿಡಿದು ಎಲ್ಲ ಸಮಯದಲ್ಲೂ ಈ ಶಬ್ದಕ್ಕೆ ಈ ಅರ್ಥವೇ ಎಂದು ಸುನಿಶ್ಚಿತವಾಗಿರುತ್ತದೆ. ಆದರೆ ಶಬ್ದದ ವ್ಯಂಜಕತ್ವವು ಹೀಗೆ ನಿಯತವಲ್ಲ; ಅದು ಔಪಾಧಿಕವಾಗಿರುವುದೇ ಕಾರಣ. ಪ್ರಕರಣಾದಿಗಳೆಲ್ಲವೂ ಸಹಕರಿಸಿದಾಗ ಮಾತ್ರ ಅದರ ಪ್ರತೀತಿಯಾಗುತ್ತದೆ; ಅನ್ಯಥಾ ಆಗುವುದೇ ಇಲ್ಲ. ಅನಿಯತವಾದ ಅಂಶದ ಸ್ವರೂಪವನ್ನು ಪರೀಕ್ಷಿಸುವುದು ತಾನೆ ಏಕೆ? ಎನ್ನಬಹುದು. ಪರೀಕ್ಷಿಸುವುದು ದೋಷವೇನೂ ಅಲ್ಲ. ಏಕೆಂದರೆ ಶಬ್ದದ ದೃಷ್ಟಿಯಿಂದ ಅದಕ್ಕೆ ಅನಿಯತತ್ವವಿರುವುದೇ ಹೊರತು ತನ್ನ ಮುಖ್ಯವಿಷಯವಾದ ವ್ಯಂಗ್ಯಾರ್ಥದ ದೃಷ್ಟಿಯಿಂದಲ್ಲ. 'ಅನುಮಾನ'ದಲ್ಲಿ ಸಾಧಕವಾದ 'ಲಿಂಗ'ಕ್ಕಿರುವ ವರ್ತನೆಯನ್ನೇ ವ್ಯಂಜಕತ್ವದಲ್ಲಿಯೂ ನೋಡಬಹುದು. ಹೇಗೆಂದರೆ 'ಅನುಮಾನ'ವು ಒಬ್ಬನ

[1] ಹಿಂದೆ ಪುಟ ೩೫ನ್ನು ನೋಡಿ (ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೨).

ಇಚ್ಛೆಯನ್ನು ಅನುಸರಿಸುವುದರಿಂದ, ಅನುಮಾನಮಾಡುವ ಇಚ್ಛೆಯಿಲ್ಲದಿರುವಾಗ 'ಲಿಂಗತ್ವ'ವು 'ಲಿಂಗ'ದಲ್ಲಿ ಅನಿಯತವೇ. ಆದರೂ ತನ್ನ ಮುಖ್ಯವಿಷಯವಾದ ಸಾಧ್ಯದ ದೃಷ್ಟಿಯಿಂದ ಅದು ಸರ್ವದಾ ನಿಯತವೇ. ಮೇಲೆ ವಿವರಿಸಿದ ವ್ಯಂಜಕತ್ವವಿರುವು ದಾದರೂ ಹೀಗೆಯೇ. ಶಬ್ದದ ವಿಷಯದಲ್ಲಿ ಅದಕ್ಕೆ ಅನಿಯತತ್ವವಿರುವ ಮಾತ್ರ ದಿಂದಲೇ ಅದನ್ನು ವಾಚಕತ್ವದ ಪ್ರಕಾರವೆಂದುಬಿಡುವುದು ಸಾಧ್ಯವಿಲ್ಲ. ಅದು ನಿಜವಾಗಿಯೂ ವಾಚಕತ್ವದ ಪ್ರಕಾರವಾಗಿದ್ದ ಪಕ್ಷದಲ್ಲಿ ವಾಚಕತ್ವದಂತೆ ಅದಕ್ಕೂ ಶಬ್ದದ ವಿಷಯದಲ್ಲಿ ನಿಯತತ್ವವೇ ಇರಬೇಕಾಗಿದ್ದಿತು.

ಹೀಗೆ ಶಬ್ದಗಳಿಗೆ ವ್ಯಂಜಕತ್ವವೆಂಬ ಔಪಾಧಿಕಧರ್ಮವೊಂದಿರುವುದೆಂಬುದನ್ನು ಮೀಮಾಂಸಕನು ಖಂಡಿತ ಒಪ್ಪಲೇಬೇಕು. ಏಕೆಂದರೆ ಇವನ ಸಿದ್ಧಾಂತದ ಪ್ರಕಾರ ಶಬ್ದ ಮತ್ತು ಅರ್ಥಗಳಿಗಿರುವ ಸಂಬಂಧವು ನಿತ್ಯವಾಗಿರುವುದಲ್ಲದೆ ಪೌರುಷೇಯ ವಾಕ್ಯಕ್ಕೂ ಅಪೌರುಷೇಯ ವಾಕ್ಯಕ್ಕೂ ವ್ಯತ್ಯಾಸ ಬೇರೆ ಇದೆ. ಅವನು ಶಬ್ದಗಳ ಔಪಾಧಿಕಧರ್ಮವನ್ನು ಒಪ್ಪದೆ ಹೋದರೆ, ಶಬ್ದಾರ್ಥಗಳ ಸಂಬಂಧವನ್ನು ನಿತ್ಯವೆಂದು ಬಿಟ್ಟಿರುವುದರಿಂದ, ಪೌರುಷೇಯವಾಕ್ಯಕ್ಕೂ ಅಪೌರುಷೇಯವಾಕ್ಯಕ್ಕೂ ಅರ್ಥದಲ್ಲಿ ವ್ಯತ್ಯಾಸವೇ ಇಲ್ಲದೆ ಹೋಗಬೇಕಾಗುತ್ತದೆ. ಆದರೆ ಅದನ್ನು ಒಪ್ಪಿದರೆ ಮಾತ್ರ ಪೌರುಷೇಯ ವಾಕ್ಯದಲ್ಲಿ ತಪ್ಪು ಬರುವುದಕ್ಕೆ ಕಾರಣವನ್ನು ಕೊಡಬಹುದು. ಹೇಗೆಂದರೆ ವಾಕ್ಯಗಳಿಗೆ ತಮ್ಮ ತಾತ್ಪರ್ಯಾರ್ಥದೊಡನೆ ಇರುವ ಸಂಬಂಧವು ನಿತ್ಯವೆಂದರೂ, ಪುರುಷನ ಇಚ್ಛಾನುಗುಣವಾದ ಭ್ರಾಂತಿಯೇ ಮೊದಲಾದ ಔಪಾಧಿಕ ಧರ್ಮಗಳನ್ನು ಆರೋಪಿಸುವುದಕ್ಕೂ ಅವಕಾಶವಿರುತ್ತದೆ.

ತಮ್ಮ ಹುಟ್ಟುಗುಣಗಳನ್ನು ಕಳೆದುಕೊಳ್ಳದಿದ್ದರೂ ಎಷ್ಟೋ ವಸ್ತುಗಳು ಬೇರೆ ಸಾಮಗ್ರಿಗಳೊಡನೆ ಉಂಟಾದ ಸಂಪರ್ಕದ ಫಲವಾಗಿ ಔಪಾಧಿಕವಾದ ಗುಣಗಳನ್ನು ತಳೆದು ವಿರುದ್ಧವಾದ ಕ್ರಿಯೆಗಳನ್ನೇ ಕೊಡುವ ಉದಾಹರಣೆಗಳು ಬೇಕಾದಷ್ಟಿವೆ. ಹಿಮಾಂಶುವಾದ ಚಂದ್ರನು ಸಕಲಜೀವಲೋಕಕ್ಕೂ ತಾಪನಿವಾರಣೆಮಾಡುವಂತಹ ಶೀತಲತ್ವವನ್ನು ಹೊಂದಿರುವುದು ಸರಿಯಷ್ಟೆ! ಆದರೆ ಅದೇ ತಣ್ಗದಿರನನ್ನು ಪ್ರಿಯಾ ವಿರಹವೆಂಬ ಅಗ್ನಿಯಲ್ಲಿ ಬೇಗುದಿಗೊಳುತ್ತಿರುವ ವಿರಹಿಗಳು ನೋಡಿದರೆ ಅವರಿಗೆ ಸಂತಾಪವೇ ಹೆಚ್ಚುವುದೆಂಬುದೂ ಪ್ರಸಿದ್ಧವಾಗಿಯೇ ಇದೆ. ಆದುದರಿಂದ ಶಬ್ದಾರ್ಥಸಂಬಂಧವು ಸ್ವೈಸರ್ಗಿಕ ಅಥವಾ ನಿತ್ಯವೆನ್ನುವವನು ಪೌರುಷೇಯ ವಾಕ್ಯಗಳಲ್ಲಿ ಅಸತ್ಯತೆ ಬರುವುದನ್ನು ಸಮರ್ಥಿಸಬೇಕಾದರೆ, ವಾಚಕತ್ವಕ್ಕಿಂತ ಬೇರೆಯಾದ ಯಾವುದಾದರೊಂದು ಔಪಾಧಿಕ ಶಕ್ತಿಯನ್ನು ಹೇಳಲೇಬೇಕು. ಅದು ವ್ಯಂಜಕತ್ವವಲ್ಲದೆ ಬೇರೆಯಲ್ಲ. ವ್ಯಂಗ್ಯವನ್ನು ಪ್ರಕಾಶಿಸುವ ಶಕ್ತಿಯೇ

ವ್ಯಂಜಕತ್ವ. ಪೌರುಷೇಯವಾದ ವಾಕ್ಯಗಳೆಲ್ಲವೂ ಮುಖ್ಯವಾಗಿ ಪುರುಷನ ಅಭಿಪ್ರಾಯವನ್ನೇ ಪ್ರಕಾಶಿಸುತ್ತವೆ. ಆ ಅಭಿಪ್ರಾಯವು ವ್ಯಂಗ್ಯವೇ ಹೊರತು ವಾಚ್ಯವಲ್ಲ. ಏಕೆಂದರೆ ಆ ಅಭಿಪ್ರಾಯಕ್ಕೂ ಶಬ್ದಕ್ಕೂ ವಾಚ್ಯವಾಚಕಸಂಬಂಧವು ಇಲ್ಲವೇ ಇಲ್ಲ. 'ಈ ನ್ಯಾಯದ ಪ್ರಕಾರ ಲೋಕದಲ್ಲಿರುವ ವಾಕ್ಯಗಳಿಗೆಲ್ಲ ಧ್ವನಿಯೆಂಬ ಹೆಸರು ಬರಬೇಕಾಗುವುದಲ್ಲ! ಏಕೆಂದರೆ ಲೋಕದಲ್ಲಿರುವ ವಾಕ್ಯಗಳೆಲ್ಲ ಈ ರೀತಿಯ (ಎಂದರೆ ಪುರುಷನ ಅಭಿಪ್ರಾಯದ) ವ್ಯಂಜಕಗಳೇ!' ಎನ್ನಬಹುದು. ಇದು ನಿಜವೇ. ವಕ್ತೃವಿನ ಅಭಿಪ್ರಾಯವನ್ನು ಪ್ರಕಾಶಿಸುವ ವ್ಯಂಜಕತ್ವವು ಎಲ್ಲ ಲೌಕಿಕ ವಾಕ್ಯಗಳಿಗೂ ಒಂದೇ ಸಮವೆನ್ನಲಡ್ಡಿಯಿಲ್ಲ. ಆದರೆ ಈ ಬಗೆಯ ವ್ಯಂಜಕತ್ವಕ್ಕೂ ವಾಚಕತ್ವಕ್ಕೂ ಯಾವ ವ್ಯತ್ಯಾಸವೂ ಇಲ್ಲ, ಅಷ್ಟೆ. ಅಲ್ಲಿರುವ ವ್ಯಂಗ್ಯವೂ ವಾಚ್ಯವೂ ಒಂದನ್ನೊಂದು ಬಿಟ್ಟಿರಲಾರದಂತಹ ಸಮವಾಯಸಂಬಂಧದಿಂದ ಸೇರಿಕೊಂಡಿರುತ್ತವೆ. ವ್ಯಂಗ್ಯವು ಅಲ್ಲಿ ಪ್ರಧಾನವೆಂಬ ವಿವಕ್ಷೆಯಿರುವುದೇ ಇಲ್ಲ. ಆದರೆ ಎಲ್ಲಿ ವಿವಕ್ಷಿತವಾಗಿರುವ ವ್ಯಂಗ್ಯವಿರುವುದೋ ಅಂತಹ ವ್ಯಂಜಕತ್ವವು ಮಾತ್ರ 'ಧ್ವನಿ' ಯೆಂಬ ಹೆಸರನ್ನು ಕೊಡಲು ಕಾರಣವಾಗುತ್ತದೆ. ಶಬ್ದಾರ್ಥಗಳ ಮೂಲಕ ಪ್ರಕಾಶಿಸುವ ಅಭಿಪ್ರಾಯವಿಶೇಷವೆಂಬ ವ್ಯಂಗ್ಯವು ವಿವಕ್ಷಿತವೆನಿಸಬೇಕಾದರೆ ಅದೊಂದನ್ನೇ ಗುರಿಯಾಗಿಟ್ಟುಕೊಂಡು ಶಬ್ದಾರ್ಥಗಳೆರಡೂ ಹೊರಟಿರಬೇಕು. ಇಷ್ಟಾದರೂ, ನಾವು 'ಧ್ವನಿ'ಯೆಂದು ಹೇಳುವ ಕಡೆಗಳಲ್ಲೆಲ್ಲ ಈ ರೀತಿಯ ವ್ಯಂಜಕತ್ವವೊಂದೇ ಸಾಕಷ್ಟು ಕಾರಣವಾಗಲಾರದು. ಏಕೆಂದರೆ 'ಧ್ವನಿ'ಯ ಕ್ಷೇತ್ರವು ಅಪರಿಮಿತವಾದುದು; ಈ ವ್ಯಂಜಕತ್ವವು ಪರಿಮಿತವಾದುದು. ಆದುದರಿಂದ ಅದು ಅಭಿಪ್ರಾಯರೂಪವಾಗಿರಲಿ, ಅಭಿಪ್ರಾಯರೂಪವಲ್ಲದೆ ಇರಲಿ, ಮೇಲೆ ಹೇಳಿದ ಮೂರು ಬಗೆಯ ವ್ಯಂಗ್ಯಗಳು ಪ್ರಧಾನವಾಗಿ ಪ್ರಕಾಶಿತವಾಗುತ್ತಿದ್ದರೆ, ಅದೇ 'ಧ್ವನಿ'ಯೆಂಬ ವ್ಯವಹಾರಕ್ಕೆ ಸಮರ್ಪಕವಾದ ಆಧಾರ. ಇಂತಹ ವಿಶಿಷ್ಟವ್ಯಂಜಕತ್ವವನ್ನೊಳಗೊಂಡ ಧ್ವನಿಲಕ್ಷಣದಲ್ಲಿ ಅತಿವ್ಯಾಪ್ತಿ ಅಥವಾ ಅವ್ಯಾಪ್ತಿದೋಷಗಳು ಬರಲಾರವು. ಆದುದರಿಂದ **ಮೀಮಾಂಸಕರ ಸಿದ್ಧಾಂತ**ದಲ್ಲಿ ವ್ಯಂಜಕತ್ವವೆಂಬ ಹೆಸರಿನ ಶಬ್ದವ್ಯಾಪಾರವು ಬಾಧಕವಾಗುವುದಿಲ್ಲ; ಅದಕ್ಕೆ ಬದಲು ಅತ್ಯಂತ ಸಾಧಕವೇ ಆಗುತ್ತದೆ.

ಈ 'ಧ್ವನಿ'ಯೆಂಬ ನಮ್ಮ ವ್ಯವಹಾರಕ್ಕೆ ನಿತ್ಯವೂ ನಿರ್ವಿಕಲ್ಪವೂ ಆದ ಶಬ್ದಬ್ರಹ್ಮವಾದವನ್ನು ಹೇಳುವ ವಿದ್ವಾಂಸರ (= **ವೈಯಾಕರಣರ**) ಮತವೇ ಆಧಾರವಾಗಿರುವ ಕಾರಣ, ಅವರೊಡನೆ ಇದು ವಿರುದ್ಧವೆ, ಅವಿರುದ್ಧವೆ ಎಂಬ ಚರ್ಚೆಯೇಕೆ?

ಹಾಗೆಯೇ ಶಬ್ದಾರ್ಥಗಳ ಸಂಬಂಧವು ಕೃತ್ರಿಮವೆನ್ನುವ **ತಾರ್ಕಿಕ**ರಿಗೂ ಶಬ್ದ ಮತ್ತು ಅರ್ಥಗಳಿಗಿರುವ ವ್ಯಂಜಕತ್ವವು ಅನುಭವಸಿದ್ಧವೇ ಆದುದರಿಂದ ಅವರ

ಸಿದ್ಧಾಂತಕ್ಕೂ ಇದಕ್ಕೂ ವಿರೋಧವೇ ಬರುವುದಿಲ್ಲ. ಅವರನ್ನು ಖಂಡಿಸಬೇಕಾದ ಪ್ರಮೇಯವೂ ಇಲ್ಲ.

ತಾರ್ಕಿಕರು ವಾಚಕತ್ವದ ವಿಷಯದಲ್ಲಿ ಬೇಕಾದಹಾಗೆ ಭಿನ್ನಾಭಿಪ್ರಾಯಗಳನ್ನು ಕೊಡಬಹುದು : ಇದು ಶಬ್ದಗಳಿಗೆ ಸ್ವಾಭಾವಿಕವೆ? ಅಥವಾ ಸಾಂಕೇತಿಕವೆ? ಎಂದು ಮುಂತಾಗಿ. ಆದರೆ ವಾಚಕತ್ವದ ಹಿಂದುಗಡೆ ಇರುವ ಮತ್ತು ವಾಚಕತ್ವವಿಲ್ಲದ ಕಡೆಗಳಲ್ಲೂ ಬರುವ, ಲೋಕಪ್ರಸಿದ್ಧವಾದ ವ್ಯಂಜಕತ್ವದ ಬಗೆಗೆ ಅವರಿಗೂ ಭಿನ್ನಾಭಿಪ್ರಾಯವಿರುದಕ್ಕೇ ಆಸ್ಪದವಿಲ್ಲ. ತಾರ್ಕಿಕರ ಸಕಲ ಭಿನ್ನಾಭಿಪ್ರಾಯಗಳು ಬರುವುದೂ ಅಲೌಕಿಕವಾದ ವಿಷಯಗಳಲ್ಲಿಯೇ ಹೊರತು ಲೌಕಿಕವಾದ ವಿಷಯಗಳಲ್ಲಲ್ಲ. 'ಇದು ಕಪ್ಪು', 'ಇದು ಸಿಹಿ', ಇವೇ ಮೊದಲಾದ ಪ್ರತ್ಯಕ್ಷ ವಿಷಯಗಳಲ್ಲಿ, ಯಾವ ಸಂದೇಹವೂ ಇಲ್ಲದಿರುವಾಗ, ತಾರ್ಕಿಕರು ಪರಸ್ಪರ ಭಿನ್ನಾಭಿಪ್ರಾಯವನ್ನೆಂದಿಗೂ ಪ್ರಕಟಿಸುತ್ತಾ ಹೊರಡುವುದಿಲ್ಲ. ಯಾವ ಬಾಧಕವೂ ಇಲ್ಲದ ಕರಿಯ ವಸ್ತುವೊಂದನ್ನು ನೋಡಿ 'ಇದು ಕಪ್ಪು' ಎಂದು ಒಬ್ಬನು ಹೇಳಿದರೆ, ಇನ್ನೊಬ್ಬ ತಾರ್ಕಿಕನು 'ಇದು ಕಪ್ಪಲ್ಲ; ಹಳದಿ' ಎಂದು ಎಂದಿಗೂ ವಾದಿಸುವುದಿಲ್ಲ. ಹಾಗೆಯೇ ವ್ಯಂಜಕತ್ವವು ಕೂಡ ವಾಚಕವಾದ ಶಬ್ದಗಳಿಗೂ, ವಾಚಕಗಳಲ್ಲದ ಸಂಗೀತಶಬ್ದಗಳಿಗೂ, ಕೊನೆಗೆ ಶಬ್ದವೇ ಅಲ್ಲದ ಅಭಿನಯಾದಿಗಳಿಗೂ ಇರುವುದು ಎಲ್ಲರ ಅನುಭವಸಿದ್ಧವಾಗಿರುವಾಗ ಅದನ್ನು ಯಾರು ತಾನೆ ಇಲ್ಲವೆಂದಾರು? ವಾಚ್ಯವಲ್ಲದ ರಮಣೀಯಾರ್ಥಗಳನ್ನು ಸೂಚಿಸುವಂತಹ ಎಷ್ಟೋ ಪ್ರಸಿದ್ಧ ಹಾಗು ಅಪ್ರಸಿದ್ಧ ಮಾತುಗಾರಿಕೆಗಳನ್ನೂ ಮಾತಿನ ಭಂಗಿಗಳನ್ನೂ ವಿದಗ್ಧರ ಗೋಷ್ಠಿಗಳಲ್ಲಿ ನಾವು ನೋಡಿಲ್ಲವೆ? ಇದನ್ನು ನಗೆಗೀಡಾಗದೆ ಅರ್ಥಮಾಡಿಕೊಳ್ಳದ ಸಹೃದಯನಾರು?

'ಅವನ್ನು ಅರ್ಥಮಾಡಿಕೊಳ್ಳುವುದೇನೋ ನಿಜ; ಏಕೆಂದರೆ ಶಬ್ದಗಳಿಗೆ, ಅಲ್ಲಿ ವ್ಯಂಜಕತ್ವವಿದೆ. ಆದರೆ ಈ ವ್ಯಂಜಕತ್ವವು ಮತ್ತೇನೂ ಅಲ್ಲ, 'ಗಮಕತ್ವ'ವೇ. 'ಗಮಕತ್ವ'ವೆಂದರೆ 'ಲಿಂಗತ್ವ.' ಆದುದರಿಂದ ವ್ಯಂಗ್ಯದ ಪ್ರತೀತಿಯೆಂದರೆ 'ಲಿಂಗಿ' (=ಸಾಧ್ಯ) ಪ್ರತೀತಿಯೇ ಹೊರತು ಬೇರೆಯಲ್ಲ. ವ್ಯಂಗ್ಯವ್ಯಂಜಕಗಳ ಸಂಬಂಧವೆಂದರೂ ಲಿಂಗಿ-ಲಿಂಗಭಾವವೆಂದಂತೆಯೇ ಆಯಿತು. ಇದನ್ನು ನೀವು ಅವಶ್ಯವಾಗಿ ಒಪ್ಪಲೇಬೇಕೆನ್ನಲು ಇನ್ನೂ ಒಂದು ಕಾರಣವಿದೆ. ಏಕೆಂದರೆ ಈಗತಾನೇ ವಕ್ತೃವಿನ ಅಭಿಪ್ರಾಯದ ದೃಷ್ಟಿಯಿಂದ ಶಬ್ದಗಳಿಗೆ ವ್ಯಂಜಕತ್ವವಿರುವುದೆಂದು ನೀವೇ ಬಾಯಿಬಿಟ್ಟು ವಿವರಿಸಿರುವಿರಿ. ಮಾತಾಡುವವನ ಅಭಿಪ್ರಾಯವು ಎಂದಿಗೂ ಅನುಮೇಯವೆಂಬುದೇ ನಮ್ಮ ಸಿದ್ಧಾಂತ'—ಹೀಗೆ ತಾರ್ಕಿಕರು ಪೂರ್ವಪಕ್ಷವನ್ನು ಹೇಳಬಹುದು.

ಅವರಿಗೆ ಈಗ ಸಮಾಧಾನವನ್ನು ಹೇಳಲಾಗುತ್ತದೆ:—ಒಂದು ವೇಳೆ ನೀವು ಹೇಳುವಂತೆಯೇ ಆದರೂ ನಮಗಾದ ನಷ್ಟವೇನು? ನಾವು ಸ್ಥಾಪಿಸಬೇಕಾದುದಿಷ್ಟೆ: ವಾಚಕತ್ವ, ಗುಣವೃತ್ತಿಗಳೆರಡಕ್ಕಿಂತಲೂ ಬೇರೆಯಾದ ವ್ಯಂಜಕತ್ವವೆಂಬ ಶಬ್ದ ವ್ಯಾಪಾರವೊಂದುಂಟು, ಎಂದು. ನೀವು ಹೇಳುವುದನ್ನೊಪ್ಪಿದರೂ ನಮ್ಮ ಸಿದ್ಧಾಂತಕ್ಕೆ ಯಾವ ಹಾನಿಯೂ ಇಲ್ಲ. ಆ ವ್ಯಾಪಾರವನ್ನು ವ್ಯಂಜಕತ್ವವೆನ್ನಲಿ, ಲಿಂಗತ್ವವೆನ್ನಲಿ, ಅಥವಾ ಮತ್ತಾವುದೋ ಹೆಸರಿಂದಲೇ ಕರೆಯಲಿ, ಸರ್ವಥಾ ಮೂರನೆಯ ಶಬ್ದ ವ್ಯಾಪಾರವೊಂದಿರುವುದೂ, ಅದು ಪ್ರಸಿದ್ಧವಾದ ಶಬ್ದವ್ಯಾಪಾರಗಳಿಗಿಂತ ವಿಲಕ್ಷಣ ವಾಗಿರುವುದೂ ಸಿದ್ಧವೇ ಆಗುವುದರಿಂದ ನಮ್ಮ ನಡುವೆ ವಿವಾದವೇ ಇರಬೇಕಾಗಿಲ್ಲ. ಆದರೆ ವಸ್ತುತಃ ವ್ಯಂಜಕತ್ವವೇ ಲಿಂಗತ್ವವಲ್ಲ; ವ್ಯಂಗ್ಯಪ್ರತೀತಿಯೆಲ್ಲವೂ ಲಿಂಗಿ ಪ್ರತೀತಿಯೂ ಅಲ್ಲ.

ಯದ್ಯಪಿ ನಮ್ಮ ಮಾತನ್ನೇ ಅನುವಾದಮಾಡಿ, ನಿಮ್ಮ ಪಕ್ಷಕ್ಕೆ ಅದನ್ನು ಅನುಗುಣವಾಗುವಂತೆ ಯೋಜಿಸಿಕೊಂಡಿರುವಿರಿ; ಹೇಳುವವನ ಅಭಿಪ್ರಾಯವು ವ್ಯಂಗ್ಯವೆಂದೊಪ್ಪಿದ ಮೇಲೆ, ಅದನ್ನು ಪ್ರಕಾಶಿಸುವ ಶಬ್ದಗಳಿಗೆ ಲಿಂಗತ್ವವೇ ಉಂಟೆಂದುಬಿಟ್ಟಿರಿ. ಆದರೆ ನಾವು ಹೇಳಿದುದಕ್ಕೆ ನಮ್ಮ ಅರ್ಥವೇನೆಂಬುದನ್ನು ಈಗ ಇನ್ನೂ ಬಿಡಿಸಿ ವಿವರಿಸುತ್ತೇವೆ, ಕೇಳಬಹುದು:—ಶಬ್ದಗಳಿಗೆ ಎರಡು ವಿಷಯ ಗಳಿವೆ; ಒಂದು 'ಅನುಮೇಯ', ಎರಡನೆಯದು 'ಪ್ರತಿಪಾದ್ಯ'. ಇವುಗಳಲ್ಲಿ ವಿವಕ್ಷೆಯ ರೂಪವಾಗಿರುವುದೇ 'ಅನುಮೇಯ'. ವಿವಕ್ಷೆಯು ಕೂಡ ಎರಡು ಬಗೆಯಾಗಿರುತ್ತದೆ: (೧) ಶಬ್ದದ ಸ್ವರೂಪವನ್ನು ಪ್ರಕಾಶಿಸುವ ಇಚ್ಛೆ ಮತ್ತು (೨) ಶಬ್ದದಿಂದ ಅರ್ಥವನ್ನು ಪ್ರಕಾಶಿಸುವ ಇಚ್ಛೆ, ಎಂಬುದಾಗಿ. ಇವುಗಳಲ್ಲಿ ಮೊದಲನೆಯದು ಮನುಷ್ಯರ ಶಬ್ದವ್ಯವಹಾರಕ್ಕೆ ಪ್ರಯೋಜಕವಲ್ಲ. ಏಕೆಂದರೆ ಪ್ರಾಣಿಮಾತ್ರವೆಂಬ ಜ್ಞಾನವಷ್ಟೇ ಅದರಿಂದಾಗುವ ಫಲ. ಆದರೆ ಎರಡನೆಯದು (ನೇರವಾಗಿ ಪ್ರವರ್ತಿಸದೆ) ಶಬ್ದವಿಶೇಷಗಳ ಅರ್ಥಜ್ಞಾನದವರೆಗೆ ಇನ್ನೂ ಅನೇಕ ವಿಷಯಗಳಿಂದ ವ್ಯವಹಿತವಾಗಿದ್ದರೂ, ಶಬ್ದಜನ್ಯವಾದ ಅರ್ಥಮಯ ವ್ಯವಹಾರಕ್ಕೆ ಪ್ರಯೋಜಕ. ಹೀಗೆ ಈ ಎರಡೂ ಶಬ್ದಗಳಿಗೆ 'ಅನುಮೇಯ'ವೆನಿಸುವ ವಿಷಯ. 'ಪ್ರತಿಪಾದ್ಯ'ವಾದರೋ ಹೇಳುವವನ ಅರ್ಥಪ್ರತಿಪಾದನೇಚ್ಛೆಗೆ ಲಕ್ಷ್ಯವಾದ ಅರ್ಥ; (ಶಬ್ದವಲ್ಲ).

ಆ ಅರ್ಥವೂ ಎರಡು ವಿಧ: (೧) 'ವಾಚ್ಯ' ಮತ್ತು (೨) 'ವ್ಯಂಗ್ಯ'. ಹೇಳುವವನು ಕೆಲವು ವೇಳೆ ತನ್ನ ಅರ್ಥವನ್ನು ನೇರವಾದ ಶಬ್ದಗಳಿಂದಲೇ ತಿಳಿಸಲು ಇಚ್ಛಿಸುತ್ತಾನೆ; ಮತ್ತೆ ಕೆಲವು ವೇಳೆ ನೇರವಾದ ಶಬ್ದಗಳಿಂದ ತಿಳಿಸಲಾರದಂತಹ

ತನ್ನ ಅರ್ಥವನ್ನು ಬೇರಾವುದೋ ಪ್ರಯೋಜನದ ದೃಷ್ಟಿಯಿಂದ, ಸೂಚಿಸಲು ಇಚ್ಛಿಸುತ್ತಾನೆ. ಶಬ್ದಗಳ ಈ ಎರಡು 'ಪ್ರತಿಪಾದ್ಯ' 'ವಿಷಯಗಳೂ 'ಲಿಂಗಿ'ಯ ಸ್ವರೂಪದಲ್ಲಿರುವಂತೆ ಕಾಣುವುದಿಲ್ಲ (ಎಂದರೆ ಶಬ್ದಗಳಿಂದ ಅನುಮಿತವಾಗುವುದಿಲ್ಲ); ಅದಕ್ಕೆ ಬದಲು ಅನಿತ್ಯವೋ, ನಿತ್ಯವೋ ಆದ ಬೇರೊಂದು ಸಂಬಂಧದಲ್ಲಿರುವುದೇ ಕಾಣುತ್ತದೆ (ಎಂದರೆ ಶಬ್ದಗಳ ಅಭಿಧೆ ಅಥವಾ ಧ್ವನಿಯೆಂಬ ವ್ಯಾಪಾರಗಳಿಂದ ಬೋಧಿತವಾಗುತ್ತದೆ). ಆ ಅರ್ಥದ ವಿವಕ್ಷೆಯ ಅಂಶವು ಮಾತ್ರ ಶಬ್ದಗಳಿಗೆ 'ಲಿಂಗಿ'ಯಾಗುವುದೇ ಹೊರತು, ಅರ್ಥಸ್ವರೂಪವೇ ಲಿಂಗಿಯೆನಿಸುವುದಿಲ್ಲ. ನಿಜವಾಗಿಯೂ ಶಬ್ದಗಳು ಅಲ್ಲಿ ಅರ್ಥದ ಸ್ವರೂಪವನ್ನೇ 'ಲಿಂಗಿ'ಯಾಗಿಟ್ಟುಕೊಂಡು ಪ್ರವರ್ತಿಸುತ್ತಿದ್ದರೆ, ಆಗ ಯಾವ ಶಬ್ದಾರ್ಥದ ವಿಷಯದಲ್ಲಿಯೂ 'ಸರಿ', 'ತಪ್ಪು', ಇವೇ ಮುಂತಾದ ವಿವಾದಗಳೇ ಹುಟ್ಟಬಾರದಾಗಿದ್ದಿತು; ಹೊಗೆಯೆಂಬ 'ಲಿಂಗ'ದಿಂದ' ಬೆಂಕಿಯೆಂಬ 'ಲಿಂಗಿ'ಯನ್ನು ಅನುಮಾನಮಾಡಿದಾಗ ಬೆಂಕಿಯ ವಿಷಯದಲ್ಲಿ ಯಾವ ವಿವಾದಕ್ಕೂ ಹೇಗೆ ಅವಕಾಶವೇ ಇಲ್ಲವೋ ಹಾಗೆ. ವ್ಯಂಗ್ಯಾರ್ಥವು ವಾಚ್ಯಾರ್ಥದ ಸಾಮರ್ಥ್ಯದಿಂದಲೇ ಧ್ವನಿತವಾಗುವುದರಿಂದ, ವಾಚ್ಯಾರ್ಥವು ಹೇಗೆ ಶಬ್ದದೊಡನೆ ಸಂಬಂಧಿಸುವುದೋ ಹಾಗೆಯೇ, ತಾನೂ ಶಬ್ದದೊಡನೆ ಸಂಬಂಧಿಸುವುದು. ನೇರವಾಗಿರುವುದು ಇಲ್ಲವೆ ದೂರವಾಗಿರುವುದು ಸಂಬಂಧದ ಅಸ್ತಿತ್ವವನ್ನು ನಿರ್ಣಯಿಸಲು ಸಾಧಕವಲ್ಲ. ವ್ಯಂಜಕತ್ವವು ವಾಚ್ಯವಾಚಕಭಾವವನ್ನಾಶ್ರಯಿಸಿರುವುದೆಂಬುದನ್ನು ಮೊದಲೇ ತೋರಿಸಲಾಗಿದೆ. ಆಧುದರಿಂದ ಹೇಳುವವನ ಅಭಿಪ್ರಾಯರೂಪವಾದ ವ್ಯಂಗ್ಯವನ್ನು ಮಾತ್ರ ಸೂಚಿಸುವಲ್ಲಿ ಶಬ್ದಗಳಿಗೆ 'ಲಿಂಗತ್ವ' ವ್ಯಾಪಾರವುಂಟು. ಆ ಅಭಿಪ್ರಾಯಕ್ಕೆ ಲಕ್ಷ್ಯವಾದ ಅರ್ಥರೂಪವ್ಯಂಗ್ಯವನ್ನು ಸೂಚಿಸುವಲ್ಲಿ ಶಬ್ದಗಳಿಗೆ 'ಪ್ರಕಾಶಕತ್ವ'ವೆಂಬ ವ್ಯಾಪಾರವುಂಟು, (ಲಿಂಗತ್ವವಲ್ಲ). ಇಂತಹ ಪ್ರತೀಯಮಾನವಾದ ವ್ಯಂಗ್ಯಾರ್ಥವು ಅಭಿಪ್ರಾಯರೂಪವಾಗಿರಬಹುದು, ಅಭಿಪ್ರಾಯರೂಪವಲ್ಲದೆ ಇರಬಹುದು. ಇಂತಹ ಕಡೆಗಳಲ್ಲೆಲ್ಲ ವಾಚಕತ್ವವೊಂದೇ ಶಬ್ದವ್ಯಾಪಾರವೆನ್ನಬಹುದೆ? ಅಥವಾ ಸಂಬಂಧಾಂತರವನ್ನೂ ಒಪ್ಪಬೇಕೆ? ವಾಚಕತ್ವವೊಂದೇ ವ್ಯಾಪಾರವಾಗಲಾರದೆಂದು ಮೊದಲೇ ತೋರಿಸಿದೆ. ಆದುದರಿಂದ ಸಂಬಂಧಾಂತರವನ್ನು ಒಪ್ಪುವುದೆಂದರೆ ವ್ಯಂಜಕತ್ವವನ್ನೇ ಒಪ್ಪಬೇಕು. ಈ ವ್ಯಂಜಕತ್ವದ ಸ್ವರೂಪವೂ ಲಿಂಗತ್ವದ ಸ್ವರೂಪವೂ ಒಂದೇ ಅಲ್ಲ; ಏಕೆಂದರೆ ಬೆಳಕೇ ಮೊದಲಾದ ನಿದರ್ಶನಗಳಲ್ಲಿ ಇವುಗಳ ಸ್ವರೂಪವು ಬೇರೆಯೆಂಬುದು ವ್ಯಕ್ತವಾಗುತ್ತದೆ. ಆದುದರಿಂದ ಶಬ್ದಗಳ ವಾಚ್ಯಾರ್ಥವು ಹೇಗೆ 'ಲಿಂಗಿತ್ವ'ದೊಡನೆ ಸಂಬಂಧಿಸುವುದಿಲ್ಲವೋ, ಹಾಗೆಯೇ ವ್ಯಂಗ್ಯಾರ್ಥವೂ ಕೂಡ ಸಂಬಂಧಿಸುವುದಿಲ್ಲ.

'ಲಿಂಗಿತ್ವ'ದೊಡನೆ ಮೇಲೆ ತೋರಿಸಿದಂತೆ ಯಾವ ಶಬ್ದದ ಅಂಶಗಳು ಸಂಬಂಧಿಸುವುವೋ, ಅವು ವಾಚ್ಯವಾದ ಅಂಶವಾಗಿ ತೋರುವುದಿಲ್ಲ, ಆದರೆ ಔಪಾಧಿಕವಾದ ಅಂಶಗಳಾಗಿ ತೋರುತ್ತವೆ. ಪ್ರತಿಪಾದ್ಯವಾದ ಅರ್ಥವೂ 'ಲಿಂಗಿ'ಯಾಗಿಬಿಟ್ಟರೆ ಅದರ ಬಗೆಗೆ ಈಗ ಲೋಕದಲ್ಲಿರುವಂತೆ ಭಿನ್ನಾಭಿಪ್ರಾಯಗಳೊಂದೂ ಸಹ ಇಲ್ಲದೆಯೇ ಇರಬೇಕಾಗುತ್ತದೆ. ಇದನ್ನೂ ಆಗಲೇ ಹೇಳಲಾಯಿತು.

ವಾಚ್ಯಾರ್ಥದ ಸತ್ಯತ್ವವನ್ನೇ ಆಗಲಿ ನಿರ್ಧರಿಸಬೇಕೆಂದು ಹೊರಟಾಗ (ಅನುಮಾನವೇ ಮೊದಲಾದ) ಇತರ ಪ್ರಮಾಣಗಳನ್ನೂ ಆಶ್ರಯಿಸುತ್ತೇವೆ; ಹೀಗೆ ಅದು ಪ್ರಮಾಣಾಂತರಕ್ಕೆ ಲಕ್ಷ್ಯವಾಗಿಬಿಟ್ಟ ಮಾತ್ರದಿಂದಲೇ ಅದು ಶಬ್ದವ್ಯಾಪಾರಕ್ಕೆ ಮುಖ್ಯವಾದ ವಿಷಯವೆಂಬುದು ಎಂದಾದರೂ ಕುಂದುತ್ತದೆಯೆ? ಹಾಗೆಯೇ ವ್ಯಂಗ್ಯಾರ್ಥವಾದರೂ. ಆದರೆ ವಸ್ತುತಃ ಕಾವ್ಯದಲ್ಲಿ ವ್ಯಂಗ್ಯಾರ್ಥಗಳು ಸತ್ಯವೆ, ಅಸತ್ಯವೇ ಎಂಬ ಚರ್ಚೆಯೇ ಅಪ್ರಯೋಜಕ. ಹೀಗಿರುವಾಗ ಬೇರೆ ಬೇರೆ ಪ್ರಮಾಣಗಳ ಪ್ರವೃತ್ತಿಯನ್ನು ಚರ್ಚಿಸುವುದು ಹಾಸ್ಯಾಸ್ಪದವೇ ಆಗುತ್ತದೆ. ಅಂತೂ 'ಲಿಂಗಿ'-ಪ್ರತೀತಿಯೇ ಎಲ್ಲೆಡೆಗಳಲ್ಲೂ ವ್ಯಂಗ್ಯಪ್ರತೀತಿಯೆಂದು ಹೇಳುವುದು ಸಾಧ್ಯವಿಲ್ಲ.

ಅದಲ್ಲದೆ, ಅನುಮೇಯರೂಪವಾಗಿಯೂ ಇರತಕ್ಕ ಒಂದು ವ್ಯಂಗ್ಯಾಂಶವು ಶಬ್ದಗಳಲ್ಲಿರುವುದೆಂದೂ ಅದನ್ನೂ ವ್ಯಂಜಕತ್ವವೆನ್ನಬಹುದೆಂದೂ ನಾವು ಹೇಳಿದುದೇನೋ ಉಂಟು. ಆದರೆ ನಮ್ಮ ಧ್ವನಿಸಿದ್ಧಾಂತಕ್ಕೆ ಈ ವ್ಯಂಜಕತ್ವವು ಸಾಧಕವೆಂದು ನಾವೇ ಭಾವಿಸುವುದಿಲ್ಲ. ಅದನ್ನು ನಾವು ಹೇಳಿದುದಕ್ಕೆ ಬೇರೆ ಕಾರಣವಿದೆ. ಶಬ್ದಾರ್ಥಸಂಬಂಧವನ್ನು ನಿತ್ಯವೆನ್ನುವ ಮೀಮಾಂಸಕರೂ ವ್ಯಂಜಕತ್ವವೆಂಬೊಂದು ಶಬ್ದವ್ಯಾಪಾರವನ್ನು ಒಪ್ಪಲೇಬೇಕೆಂದು ವಾದಿಸುವುದಕ್ಕೋಸ್ಕರ ಅದನ್ನು ಹೇಳಿದೆವು, ಅಷ್ಟೆ. ಆ ವ್ಯಂಜಕತ್ವವು ಒಮ್ಮೊಮ್ಮೆ ಶಬ್ದಗಳ ಲಿಂಗತ್ವದಿಂದಲೂ ಒಮ್ಮೊಮ್ಮೆ ರೂಪಾಂತರಗಳಿಂದಲೂ ಪ್ರತೀತವಾಗುತ್ತದೆ. ಒಮ್ಮೊಮ್ಮೆ ವಾಚಕಗಳಾದ ಶಬ್ದಗಳ ಮೂಲಕ ಬಂದರೆ ಒಮ್ಮೊಮ್ಮೆ ವಾಚಕಗಳೇ ಅಲ್ಲದ ಶಬ್ದಗಳ ಮೂಲಕವೂ ಪ್ರತೀತವಾಗುತ್ತದೆ. ಹೀಗಿರುವುದರಿಂದ ಯಾವ ವಾದಿಗಳೂ ಅದನ್ನು ವಿರೋಧಿಸಬಾರದೆಂದು ತೋರಿಸುವುದಕ್ಕಾಗಿಯೇ ನಾವು ಇಷ್ಟು ಪ್ರಯತ್ನಪಟ್ಟಿರುವುದು. ಆದುದರಿಂದ ಗುಣವೃತ್ತಿ, ವಾಚಕತ್ವ, ಇವೇ ಮೊದಲಾದ ಶಬ್ದವ್ಯಾಪಾರಗಳೆಲ್ಲವುಗಳಿಂದಲೂ ವಿಲಕ್ಷಣವಾದುದೇ ವ್ಯಂಜಕತ್ವ. ಇಷ್ಟಾದರೂ ವ್ಯಂಜಕತ್ವವು ಅವುಗಳಲ್ಲಿಯೇ ಅಂತರ್ಗತವಾಗುವುದೆಂದು ವಾದಿಗಳು ಹಟ ಹಿಡಿಯಬಹುದು; ಆದರೂ ಆ ವ್ಯಂಜಕತ್ವದ ವೈಶಿಷ್ಟ್ಯವನ್ನು ವಿವರಿಸುವ ನಮ್ಮ ಧ್ವನಿತತ್ವವು

ಅನೇಕ ಭಿನ್ನಾಭಿಪ್ರಾಯಗಳನ್ನು ದೂರಮಾಡುವುದೆಂದೂ ಸಹೃದಯರ ವ್ಯುತ್ಪತ್ತಿಗೆ ಕಾರಣವಾಗುವುದೆಂದೂ, ನಮ್ಮ ಪ್ರಯತ್ನವನ್ನು ಆದರಿಸಿಯೇ ಆದರಿಸುವರೆಂದು ನಂಬುತ್ತೇವೆ. ಆಗಲೇ ಸಾಮಾನ್ಯವಾದ ಲಕ್ಷಣಗಳಿರುವುವೆಂದು ಉಪಯುಕ್ತವಾದ ವಿಶೇಷ ಲಕ್ಷಣಗಳನ್ನು ಯಾರೂ ನಿಂದಿಸುವುದಿಲ್ಲ. ಹೀಗೆ ನಿಂದಿಸುವುದಾದರೆ ಅಸ್ತಿತ್ವದ ಸಾಮಾನ್ಯಲಕ್ಷಣವನ್ನು ಹೇಳಿದ ದಾರ್ಶನಿಕರು ಮುಂದೆ ಹೇಳುವ ಸಕಲ ಸದ್ವಸ್ತುಗಳ ಲಕ್ಷಣವೂ ಪುನರುಕ್ತವೆಂದು ಹೇಳಬೇಕಾಗುತ್ತದೆ. ಹೀಗೆ—

ವಿಮತಿವಿಷಯೋ ಯ ಆಸೀನ್ಮನೀಷಿಣಾಂ ಸತತಮವಿದಿತಸತತ್ವಃ।
ಧ್ವನಿಸಂಜ್ಞಿತಃ ಪ್ರಕಾರಃ ಕಾವ್ಯಸ್ಯ ವ್ಯಂಜಿತಃ ಸೋಽಯಮ್ ॥

ಮತಿವಂತರಿಗುಂ ತಾಂ ಸಂ-
ತತಮವಿದಿತತತ್ವಮಾಗಿ ವಿಮತಿಯನಾಂತಾ।
ನುತಕಾವ್ಯದ ಧ್ವನಿಯೆಂಬೊಂ-
ದುತೆರಂ ಸಲೆ ವಿವೃತಮಾಯ್ತುದಿಂತೀ ಪರಿಯಿಂ ॥

ಡಾ॥ ಕೆ. ಕೃಷ್ಣಮೂರ್ತಿ

(ಸಶೇಷ)

ಮಾವಿನ ಹೂ

ಒಲಿಯುವ ಹೂವಿಗೆ ಒಲಿದಿಹ ದುಂಬಿಯು
ಪ್ರೇಮದ ಕತೆಗಳನೊರೆಯುತಿದೆ.
ಇನಿಯನನೊಲಿಸುವವೊಲು ಹೂ ದುಂಬಿಗೆ
ಹೃದಯದ ಮಧುವನು ಎರೆಯುತಿದೆ.

ಮುಂಬಹ ಸಾವಿರ ಸುಗ್ಗಿಯ ಕನಸವು
ಇದರೊಡಲೊಳು ಅಡಗಿ
ಸಡಗರದಿಂದಲಿ ಝುಣಗುಡುತಿರುವೊಲು
ಮೆರೆಯುತಲಿದೆ ಬಾಗಿ.

ನನ್ನೊಲಿ ನೀನೂ ನಲಿಯುವೆಯೇನು
ಸುಗ್ಗಿಯ ಕನಸುಗಳನು ಕಟ್ಟಿ ?
ಎನ್ನುತ ಮೇಗಡೆ ಕುಳಿತಿಹ ಗಿಳಿಯನು
ಕೇಳುವ ತೆರನಿದೆ ತಲೆಯೆತ್ತಿ

ಎಲ್ಲವ ತನ್ನೊಳಗಡಗಿಸಿಕೊಂಡಿಹ
ಬ್ರಹ್ಮಾಂಡವೊ ಎನೆ ತೋರುತಿದೆ
ಸುಂದರಸೃಷ್ಟಿಯ ಪ್ರತೀಕವೆಂದೆನೆ
ಕಿರುಹೂ ಕಿರುನಗೆ ಬೀರುತಿದೆ !

ಚೆಲುವ ಸಾರಲು ಹೊರಟ ಮೂಕಗೀತೆಯದೊಂದು
ಹೊಮ್ಮಿ ನಿನ್ನೆದೆಯಿಂದ ಸುತ್ತಮುತ್ತಿನ ಬಯಲ
ನಾವರಿಸಿದಂತಿಹುದು ! ಬನವೆಲ್ಲ ಭಾವವಶ
ವಾದಂದೆ ಮೌನದಿಂ ನಿನಗಿಲ್ಲಿ ಕಾಣಿಕೆಯ
ನೀವವೊಲು ಕಾಣಿತಿದೆ !

ತೆರೆಯಾಗಿ ಚಿಮ್ಮಿಸು, ಅಲೆಯಾಗಿ ಉಕ್ಕಿಸು,
ಗಾನದಿಂಪಿಗೆ ಮೈಯ ನೆರೆ ಮರೆಯಿಸು.
ಹಾಲಾಗಿ ಹರಿಯಿಸು, ಜೇನಾಗಿ ಸುರಿಯಿಸು
ಅದನೆಲ್ಲರೆದೆಗಳಲಿ ನೆಲೆಗೈಯಿಸು.

ನಿನ್ನ ಮೌನದ ಗಾನ ದೆಸೆದೆಸೆಗಳನು ಹಬ್ಬಿ
ಕಡಲುಕ್ಕಿ ಮೊರೆವಂತೆ ಭೋರ್ಗರೆಯಿಸು.
ನಿನ್ನ ಗಾನದ ಮಹಾಪುಣ್ಯಪ್ರವಾಹದೊಳು
ಪಾಮರರ ಮೀಯಿಸುತ ಶುಚಿಗೈಯಿಸು.

ಗೋಪಾಲ—ಹಿರೀಕೋಟ್ಲ

ದವನದ ಹುಣ್ಣಿವೆ

೩

(ಚಾರಿತ್ರಿಕ ಪರಿಶೀಲನೆ)

೧ ಸಾಮಾನ್ಯ ವಿವೇಚನೆ

ಜನಾಂಗದ ಸಂಸ್ಕೃತಿಯ ವ್ಯಾಸಂಗವು ಬಹು ಮುಖ್ಯವಾದುದು. ಅದರಲ್ಲಿ ಜನಜೀವನದ ವಿವಿಧ ಅಂಗಗಳ ಪರಿಶೀಲನೆಗೆ ಪ್ರಮುಖಸ್ಥಾನವು ಇರಬೇಕಾದುದು. ಕನ್ನಡ ಜನಾಂಗದ ಸಂಸ್ಕೃತಿ ಕನ್ನಡ ಜನಗಳು ತಲತಲಾಂತರಗಳಿಂದ ಪಾಲಿಸುತ್ತ ಬಂದಿರುವ ಆಚಾರವಿಚಾರಗಳು, ಕುಲಸಂಪ್ರದಾಯಗಳು, ಧಾರ್ಮಿಕ ರೂಢಿಗಳು, ಸಾಮಾಜಿಕ ಸಮಾರಂಭಗಳು ಇವುಗಳಲ್ಲಿ ಕೆಲಮಟ್ಟಿಗೆ ಪ್ರತಿಬಿಂಬಿತವಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಇಂತಹ ಕೆಲವು ಧಾರ್ಮಿಕ ಮತ್ತು ಸಾಮಾಜಿಕ ಉತ್ಸವಗಳನ್ನು ಕುರಿತು ಚಾರಿತ್ರಕವಾಗಿ ವಿಮರ್ಶಿಸಲಿದೆ.

ಉತ್ಸವ ಎನ್ನುವುದಕ್ಕೆ ಸಾಮಾನ್ಯವಾಗಿ ಹಬ್ಬ ಎಂಬ ಮಾತು ಬಳಕೆಯಲ್ಲಿ ಇದೆ. ಇದಾದರೂ ಮೂಲದಲ್ಲಿ ಸಂಸ್ಕೃತಪದ; ಪರ್ವನ್ ಎಂಬುದರಿಂದ ಬಂದುದು. ಪರ್ವನ್ ಎಂಬುದರಿಂದ ಮುಂದುವರಿದ ಪರುವ ಎಂಬ ಶಬ್ದವಾದರೂ ಉತ್ಸವ, ಸಮಾರಂಭ ಎಂಬ ಅರ್ಥದಲ್ಲಿ ಕೆಲವೆಡೆ ಪ್ರಯೋಗವಾಗುತ್ತದೆ. ಚಾಂದ್ರಮಾಸದಂತೆ ನಿಯಮಿತಕಾಲಗಳಲ್ಲಿ ನಡೆಯುವ ಧಾರ್ಮಿಕ ಕ್ರಮಗಳಿಗೆ ಸಾಮಾನ್ಯವಾಗಿಯೂ ಪೂರ್ಣಿಮೆ ಮತ್ತು ಅಮಾವಾಸ್ಯೆ ಈ ದಿವಸಗಳಲ್ಲಿಯ ವಿಧಾನಗಳಿಗೆ ವಿಶೇಷವಾಗಿಯೂ ಮೊದಮೊದಲು ಅನ್ವಯಿಸುತ್ತಿದ್ದ ಪರ್ವನ್ ಎಂಬ ಪದವು ಮುಂದೆ ಮುಂದೆ ಸಾರ್ವತ್ರಿಕವಾಗಿ ಎಲ್ಲ ಬಗೆಯ ಹಬ್ಬಗಳಿಗೂ ಅನ್ವಯಿಸುವುದಾಗಿ ಅರ್ಥವ್ಯಾಪ್ತಿಯುನ್ನು ಪಡೆದಂತೆ ತೋರುತ್ತದೆ. ಪ್ರಾಕೃತಿಕ ಸನ್ನಿವೇಶದ ಮೂಲಕ ಪ್ರಾಚೀನ ಕಾಲದಿಂದ ಹುಣ್ಣಿವೆ ಮತ್ತು ಅಮಾವಾಸ್ಯೆ ದಿನಗಳಿಗೆ ಭಾರತೀಯರ ಧಾರ್ಮಿಕ ಜೀವನದಲ್ಲಿ ಪ್ರಾಮುಖ್ಯತೆ ಉಂಟಾಗಿದೆ. ಈ ದಿನಗಳಲ್ಲಿ ಇಂದಿಗೂ ದೇವಾಲಯವೇ ಮೊದಲಾದ ಧರ್ಮಸ್ಥಳಗಳಲ್ಲಿ ಮತ್ತು ಮನೆಮನೆಗಳಲ್ಲಿ ಹಾಗೂ ಸಾಮಾಜಿಕವಾಗಿ ನಡೆಯುವ ಉತ್ಸವ ವಿಶೇಷಗಳಿಂದ ಈ ಅಂಶವು ಸ್ಪಷ್ಟವಾಗುತ್ತದೆ. ಕರ್ನಾಟಕದ ಮಟ್ಟಿಗೆ ನೋಡಿದರೆ ಈ ಉತ್ಸವಗಳು ಒಂದುಬಗೆಯ ವಿಶಿಷ್ಟತೆಯಿಂದ ಕೂಡಿಕೊಂಡು ಪಾರಂಪರ್ಯವಾಗಿ ನಡೆದುಬಂದಂತೆ ತೋರುತ್ತದೆ. ನಮ್ಮ ನಾಡಿನ ಬಹುಭಾಗದಲ್ಲಿ ಈ ಹನ್ನೆರಡು ಹುಣ್ಣಿವೆ ಮತ್ತು ಅಮಾವಾಸ್ಯೆಗಳಿಗೆ ವಿಶಿಷ್ಟ

ಹೆಸರುಗಳು ಪ್ರಚಲಿತವಾಗಿವೆ. ಮುಂದಿನ ವಿವೇಚನೆಯ ಸೌಕರ್ಯಕ್ಕಾಗಿ ಅವುಗಳನ್ನು ಇಲ್ಲಿ ಕಾಣಿಸುವುದು ಉಚಿತ.

ತಿಂಗಳು	ಹುಣ್ಣಿವೆ	ಅಮಾವಾಸ್ಯೆ
೧. ಚೈತ್ರ	ದವನದ	ಅಕ್ಷತದಿಗೆ
೨. ವೈಶಾಖ	ಅಗಿ	ಬಾದಮಿ
೩. ಜ್ಯೇಷ್ಠ	ಕಾರ	ಮಣ್ಣೆತ್ತಿನ
೪. ಆಷಾಢ	ಕಡಲೆಗಡಬಿನ	ನಾಗರ
೫. ಶ್ರಾವಣ	ನೂಲ	ಬೆನಕನ
೬. ಭಾದ್ರಪದ	ಅನಂತ	ಮಹಾನವಮಿ
೭. ಆಶ್ವಿನ	ಸೀಗೀ	ದೀಪಾವಳಿ
೮. ಕಾರ್ತಿಕ	ಗೌರಿ	ಛಟ್ಟಿ
೯. ಮಾರ್ಗಶೀರ್ಷ	ಹೊಸ್ತಿಲ	ಎಳ್ಳ
೧೦. ಪುಷ್ಯ	ಬಂದ	ಅವರಾತ್ರಿ
೧೧. ಮಾಘ	ಭಾರತ	ಶಿವರಾತ್ರಿ
೧೨. ಫಾಲ್ಗುಣ	ಹೋಳಿ	ಯುಗಾದಿ

ಈ ಎಲ್ಲ ಹೆಸರುಗಳು ಎಲ್ಲ ಭಾಗಗಳಲ್ಲಿಯೂ ಪ್ರಚುರವಾಗಿಲ್ಲ. ಇವು ಸಾಮಾನ್ಯವಾಗಿಯೂ ವಿಶೇಷವಾಗಿಯೂ ಉತ್ತರ ಕರ್ನಾಟಕದಲ್ಲಿ ಸಿಕ್ಕುತ್ತವೆ. ಮಿಕ್ಕ ಭಾಗಗಳಲ್ಲಿ ಇವುಗಳು ಅಂಶತಃ ಬಳಕೆಯಲ್ಲಿ ಇವೆ.

ಈ ಉತ್ಸವಗಳಲ್ಲಿ ಕೆಲವು ವಿಶೇಷ ಪ್ರಮಾಣದಲ್ಲಿ ನಡೆಯುವ ಅಖಿಲ ಭಾರತೀಯ ಹಬ್ಬಗಳಾಗಿದ್ದು ಅವುಗಳ ಆಚರಣೆ ಬೇರೆ ಪ್ರಾಂತಗಳಲ್ಲಿಯೂ ಸಿಕ್ಕುತ್ತದೆ. ಆದರೆ ಕೆಲವು ಮಾತ್ರ ಕರ್ನಾಟಕದ ಜನಜೀವನದಲ್ಲಿ ಬೆರೆತುಕೊಳ್ಳುವಾಗ ಮಾರ್ಪಾಟುಗಳನ್ನು ಹೊಂದಿ ತಮ್ಮದೆ ಆದ ವೈಶಿಷ್ಟ್ಯವನ್ನು ಮೈಗೂಡಿಸಿಕೊಂಡಿವೆ. ಈ ಉತ್ಸವಗಳ ಸಾಮಾನ್ಯ ಸ್ವರೂಪ ಎಂತಹುದು, ಅವುಗಳು ಕನ್ನಡ ನಾಡಿನಲ್ಲಿ ಪಡೆದ ವಿಶಿಷ್ಟತೆ ಯಾವುದು, ಮೇಲಿನ ಹೆಸರುಗಳ ವಿಚಾರವಾಗಿ ಸಾಮಾನ್ಯ ಜನರು ಹೇಳುವ ಸ್ಪಷ್ಟೀಕರಣವೇನು, ಅದರ ಯುಕ್ತಾಯುಕ್ತತೆಯೆಂತಹುದು ಮುಂತಾದ ಅಂಶಗಳನ್ನು ಇದೀಗ ಸಂಕ್ಷೇಪವಾಗಿ ಪರಾಮರ್ಶಿಸುವ.

ಚೈತ್ರದ ಹುಣ್ಣಿವೆ ಚಿತ್ರಾಪೂರ್ಣಿಮೆ. ಈ ದಿನ ದೇವರಿಗೆ ದವನವನ್ನು ಏರಿಸುವ ದವನೋತ್ಸವವು ದೇವಾಲಯಗಳಲ್ಲಿ ಸರ್ವತ್ರ ನಡೆಯುವುದು. ಆದುದರಿಂದ ಅದಕ್ಕೆ ಶ್ರೀಶೈಲದಲ್ಲಿಯ ಈ ಉತ್ಸವದ ನಿಮಿತ್ತ, ದವನಹುಣ್ಣಿವೆ ಎಂಬ ಹೆಸರು ಬಂದಿತು. ಈ ಸ್ಪಷ್ಟೀಕರಣವು ಸಾಧುವಾದುದೆ. ವೈಶಾಖ ಶುದ್ಧ ತೃತೀಯೆ

ಅಕ್ಷಯ ತೃತೀಯಾ. ಇದು ತ್ರೇತಾಯುಗದ ಆರಂಭದಿನವೂ ಪರಶುರಾಮ ಜಯಂತಿಯೂ ಆಗಿದೆ. ಆದುದರಿಂದ ಈ ದಿನದ ಹಿನ್ನೆಳಲು ಚೈತ್ರದ ಅಮಾವಾಸ್ಯೆಯ ಮೇಲೆ ಬಿದ್ದು, ಅದಕ್ಕೆ ಅಕ್ಷಯತೃತೀಯ ಅಮಾವಾಸ್ಯೆ ಇಲ್ಲವೆ ಅಕ್ಷತದಿಗೆ ಅಮಾಶಿ (ಸಂಕ್ಷಿಪ್ತ ತದ್ಭವರೂಪ) ಎಂಬ ಹೆಸರು ಜನರ ಬಾಯ ಬಳಕೆಯಲ್ಲಿ ಬಂದಿತು. ಅಕ್ಷಯತೃತೀಯಾ ದಿನದ ಮಹತ್ತ್ವವು ಸಾರ್ವತ್ರಿಕವಾಗಿದ್ದರೂ ಚೈತ್ರ ಅಮಾವಾಸ್ಯೆಯ ಈ ಹೆಸರು ಮಾತ್ರ ಕನ್ನಡ ನಾಡಿನಲ್ಲಿ ಪ್ರಚುರವಾಗಿದೆ.

ಬೇಸಾಯಗಾರರು ಬಿತ್ತನೆಗಾಗಿ ಅಗಿಗಳನ್ನು ಸಿದ್ಧಪಡಿಸುವ ಸಮಯವಿದಾದುದರಿಂದ ವೈಶಾಖ ಪೂರ್ಣಿಮೆಗೆ ಅಗಿ ಇಲ್ಲವೆ ಆಗಿ ಹುಣ್ಣಿವೆ ಎಂಬ ಹೆಸರು ಬಂದಿತು ಎಂದು ಜನರು ಹೇಳುವರು. ಈ ಸ್ಪಷ್ಟೀಕರಣವು ಚಿಂತ್ಯವಾದುದು. ಇದು ಉರಿಬಿಸಿಲಿನ ಕಾಲವಾದುದರಿಂದ 'ಅಗ್ನಿ'ಯ ತದ್ಭವ 'ಅಗಿ' ಎಂಬುದಾಗಿ ಅಗಿ ಹುಣ್ಣಿವೆ ಎಂಬ ಹೆಸರು ಉಂಟಾಗಿರಬಾರದೇಕೆ? ವೈಶಾಖ ಪೂರ್ಣಿಮೆ ಅನ್ಯತ್ರ ಆಚರಣೆಯಲ್ಲಿದ್ದರೂ ಅದರ ಈ ಪರಿಯ ಹೆಸರು ಮಾತ್ರ ಬೇರೆಡೆ ಪರಿಚಿತವಾದುದಿಲ್ಲ. ಬಾದಾಮಿಯ ಬಳಿಯಲ್ಲಿ ಬನಶಂಕರೀ ದೇವಿಗೆ ವೈಶಾಖ ಅಮಾವಾಸ್ಯೆಯ ದಿನ ವಿಶೇಷ ಪೂಜೋತ್ಸವವು ನಡೆಯುವುದರ ಮೂಲಕ ಈ ಅಮಾವಾಸ್ಯೆಗೆ ಬಾದಮಿ ಅಮಾಶಿ ಎಂಬ ಹೆಸರು ಪ್ರಾಪ್ತವಾಯಿತು ಎಂದು ಜನರು ಹೇಳುವರು. ಈ ವಿವರಣೆಯಾದರೂ ವಿಚಾರಣೀಯವಾಗಿದೆ.

ಜ್ಯೇಷ್ಠದಲ್ಲಿ ಮುಂಗಾರು ಮಳೆ ಪ್ರಾರಂಭವಾಗುತ್ತದೆ. ಒಕ್ಕಲಿಗನಿಗೆ ಇದು ಹಬ್ಬ; ಕೃಷಿಗೆ ಆಧಾರವಾದ ಎತ್ತುಗಳಿಗೆ ಇದೀಗ ಹೆಚ್ಚಿನ ಗೌರವ. ಆದುದರಿಂದ ಜ್ಯೇಷ್ಠ ಪೂರ್ಣಿಮೆ ವೃಷಭಪೂಜೆಗೆ ಮೀಸಲಾಯಿತು. ಕನ್ನಡಿಗರಿಗೆ ಇದು ಕಾರ ಹುಣ್ಣಿವೆ ಎನ್ನಿಸಿತು. ಇದರ ಮಾರನೆಯ ದಿನ ಹಲವೆಡೆಗಳಲ್ಲಿ ಎತ್ತುಗಳ ಮೆರವಣಿಗೆ ಮತ್ತು ಪಂದ್ಯಾಟಗಳು ನಡೆಯುವುವು. ಇದಕ್ಕೆ 'ತರಿ ಹರಿಯುವುದು' ಎಂಬ ಹೆಸರು. ಈ ಒಂದು ಹಬ್ಬವು ಸಾಲದು ಎನ್ನುವಂತೆ ಕರ್ನಾಟಕದಲ್ಲಿ ಜ್ಯೇಷ್ಠ ಅಮಾವಾಸ್ಯೆಯ ದಿನ ಮತ್ತೆ 'ಮಣ್ಣೆತ್ತಿನ ಅಮಾಶಿ' ಎಂಬುದಾಗಿ ಮಣ್ಣಿನ ಎತ್ತುಗಳನ್ನು ಪೂಜಿಸುವ ಹಬ್ಬವನ್ನು ಆಚರಿಸುವರು. ಇದಕ್ಕೆ ಬಸವನ ಅಮಾವಾಸ್ಯೆ ಎಂಬ ಇನ್ನೊಂದು ಹೆಸರೂ ಇದೆ. ಇಂತು ಜ್ಯೇಷ್ಠದ ಎರಡು ಹಬ್ಬಗಳೂ ಕೃಷಿ ಜೀವನದ ಪ್ರಾಧಾನ್ಯಸೂಚಕವಾದುವು. ಇದಲ್ಲದೆ ಜ್ಯೇಷ್ಠ ಪೂರ್ಣಿಮೆಯ ದಿನ ಕನ್ನಿಕೆಯರು ವಟಸಾವಿತ್ರಿಯ ವ್ರತವನ್ನು ಆಚರಿಸುವರು. ಆದುದರಿಂದ ಅದಕ್ಕೆ ವಟಪೂರ್ಣಿಮಾ ಎಂಬ ಇನ್ನೊಂದು ಹೆಸರು ಬಂದಿದೆ. ಈ ವ್ರತವನ್ನು ಜ್ಯೇಷ್ಠ ಅಮಾವಾಸ್ಯೆಯ ದಿನವೂ ಕೆಲವರು ಆಚರಿಸುವಂತೆ ತೋರುತ್ತದೆ.

ಆಷಾಢದಿಂದ ಚಾತುರ್ಮಾಸ್ಯಾರಂಭ. ಮೇಲಿನ ವರ್ಗದವರು ಆಷಾಢ ಹುಣ್ಣಿವೆಗೆ ವ್ಯಾಸಪೂರ್ಣಿಮೆ ಎಂಬ ಹೆಸರನ್ನು ಕೊಟ್ಟಿರುವರು. ಆದರೆ ಸಾಮಾನ್ಯ ಜನರು ಮಾತ್ರ ಇದನ್ನು ಕಡಲೆಗಡಬಿನ ಹುಣ್ಣಿವೆ ಎಂಬ ಶುದ್ಧ ದೇಶ್ಯ ಪದದಿಂದಲೇ ಗುರುತಿಸುವರು. ಕಡಲೆಬೇಳೆಯ ಹೂರಣ ಕಡಬುಗಳನ್ನು ದೇವಿಗೆ ಸಮರ್ಪಿಸು ವುದರ ಮೂಲಕವೂ ಇಂತಹ ಕಡಬುಗಳ ಸರವನ್ನು ಎತ್ತುಗಳ ಕೊರಳಲ್ಲಿ ಕಟ್ಟುವ ಮೂಲಕವೂ ಈ ಹೆಸರು ಸಾರ್ಥಕವಾಗಿದೆ ಎಂದು ಈ ನಾಮಕರಣದಮೇಲೆ ಭಾಷ್ಯ ಹೇಳುವರು. ಇದು ಹೆಚ್ಚಾಗಿ ಲೌಕಿಕ ಮತ್ತು ಪ್ರಾಕೃತ ಹಬ್ಬವೆಂದು ತೋರುತ್ತದೆ. ಆಷಾಢ ಅಮಾವಾಸ್ಯೆ ನಾಗರ ಅಮಾವಾಸ್ಯೆ. ಇದರ ಮೇಲೆ ಮುಂಬರುವ ನಾಗಪಂಚಮಿ ಹಬ್ಬದ ಛಾಯೆ ಹರಡಿದೆ. ಇದರ ಇನ್ನೊಂದು ಹೆಸರು ದೀವಶಿ ಅಮಾವಾಸ್ಯೆ. ಕೆಲವೆಡೆ ಭೀಮನ ಅಮಾವಾಸ್ಯೆ ಎಂದೂ ಹೇಳುವರು.

ಶ್ರಾವಣ ಪೂರ್ಣಿಮೆ ನೂಲಹುಣ್ಣಿವೆ. ಇದು ವೈದಿಕ ಹಬ್ಬ. ಈ ದಿನ ದೇವರಿಗೂ ದ್ವಿಜರಿಗೂ ಹೊಸ ನೂಲಿನ ಎಂದರೆ ನೂತನ ಯಜ್ಞೋಪವೀತಧಾರಣ ನಡೆಯುತ್ತದೆ. ಇದಕ್ಕೆ ರಾಖೀಪೌರ್ಣಿಮಾ, ನಾರಳೀಪೌರ್ಣಿಮಾ ಎಂಬ ಬೇರೆ ಹೆಸರುಗಳೂ ನಡವಳಿಕೆಗಳೂ ಬೇರೆಡೆ ಸಿಕ್ಕುತ್ತವೆ. ಶ್ರಾವಣ ಅಮಾವಾಸ್ಯೆಗೆ ಬೆನಕನ ಇಲ್ಲವೆ ಚೌತಿಯ ಅಮಾವಾಸ್ಯೆ ಎಂದು ಹೇಳುವ ಹೆಸರು ಮುಂದಿನ ಶ್ರೀ ಗಣೇಶನ ಉತ್ಸವದ ಮೂಲಕವೆಂಬುದು ಸ್ಪಷ್ಟವಾಗಿದೆ. ಬೇರೆಡೆ ಇದಕ್ಕೆ ಪಿಠೋರಿ ಅಮಾವಾಸ್ಯೆ ಎನ್ನುವರು. ಈ ದಿನ ಮಕ್ಕಳನ್ನು ಬಯಸುವವರು ಪಿಠೋರಿ ಎಂಬ ದೇವಿಯನ್ನು ಆರಾಧಿಸುವರು.

ಭಾದ್ರಪದ ಪೂರ್ಣಿಮೆಗೆ ಪ್ರೌಷ್ಠಪದೀ ಎಂಬುದು ಗಡುಸಾದ ವೈದಿಕ ಹೆಸರು. ಸಾಮಾನ್ಯವಾಗಿ ಅನಂತನ ಹುಣ್ಣಿವೆ ಎಂದು ಇದು ಪರಿಚಿತವಾಗಿದೆ. ಏಕೆಂದರೆ ಇದರ ಹಿಂದಿನ ದಿನವು ಅನಂತನ ವ್ರತಕ್ಕೆ ಮೀಸಲಾದುದು. ಅನಂತನ ವ್ರತವು ವೈದಿಕ ಸಂಪ್ರದಾಯದವರಂತೆ ಜೈನರಲ್ಲಿಯೂ ಪ್ರಚಲಿತವಾದುದು. ಒಂದು ಕಾಲದಲ್ಲಿ ಅನಂತನ ಉತ್ಸವವು ಈಗಿನದಕ್ಕಿಂತ ಹೆಚ್ಚು ಜನಪ್ರಿಯ ವಾಗಿದ್ದಿರಬೇಕು ಎಂದು ಈ ಹಬ್ಬದ ಪ್ರಸಿದ್ಧಿಯ ಮೂಲಕ ಊಹಿಸುವಂತಿದೆ. ಗಜಾನನನ ಪ್ರತಿಸ್ಪರ್ಧಿಯಾದ ಜೋಕುಮಾರ ಎಂಬವನನ್ನು ಮೆರೆಸುವ ಮೂಲಕ ಗ್ರಾಮ್ಯ ಜನಗಳಲ್ಲಿ 'ಜೋಕ್ಯಾನ ಹುಣ್ಣಿವೆ' ಎಂಬುದಾಗಿ ಈ ಪೂರ್ಣಿಮೆಯ ಹೆಸರು ಬಳಕೆಯಾಗಿದೆ. ಭಾದ್ರಪದ ಅಮಾವಾಸ್ಯೆಯ ಮಹಾಲಯ ಮತ್ತು ಸರ್ವಪಿತ್ರೀ ಎಂಬ ಹೆಸರುಗಳು ಆ ತಿಂಗಳ ಕೃಷ್ಣಪಕ್ಷವು ಪಿತೃಗಳ ಶ್ರಾದ್ಧಕ್ಕೆ ಮೀಸಲಾದುದರಿಂದ ಬಂದುವು; ಮಹಾನವಮಿ ಮತ್ತು ನವರಾತ್ರ ಅಮಾವಾಸ್ಯೆ

ಎಂಬ ನಾಮಕರಣವು ಮುಂಬರುವ ನವರಾತ್ರೋತ್ಸವದ ನಿಮಿತ್ತ ಪ್ರಾಪ್ತವಾದುದು. ಇದಕ್ಕೆ ಕೆಲವೆಡೆ ಎಳ್ಳ ಅಮಾವಾಸ್ಯೆ ಎಂದೂ ಹೇಳುವರು.

ಅಶ್ವಿನಿ ಪೂರ್ಣಿಮೆ ಕೌಮುದೀ ಉತ್ಸವದ ದಿನ. ಈ ಹೊತ್ತಿಗೆ ಹೊಸ ಧಾನ್ಯವು ಬರುವುದರಿಂದ ಇದಕ್ಕೆ ನವಾನ್ನ ಪೂರ್ಣಿಮಾ ಎಂಬ ಹೆಸರೂ ಬಂದಿದೆ. ಕೆಲವೆಡೆ ಇದನ್ನು ಕೋಜಾಗರೀ ಪೂರ್ಣಿಮಾ ಎಂದೂ ಕರೆವರು. ಈ ದಿನ ಲಕ್ಷ್ಮೀ ಮತ್ತು ಇಂದ್ರನ ಆರಾಧನೆ ನಡೆಯುವುದು. ಒಂದು ಕಾಲದಲ್ಲಿ ಬೇರೆಡೆಯಲ್ಲಿಯಂತೆ ಕರ್ನಾಟಕದಲ್ಲಿಯೂ ಇಂದ್ರನ ಉತ್ಸವವು ನಡೆಯುತ್ತಿದ್ದಿತು ಎನ್ನುವುದಕ್ಕೆ ೧೦ ನೆಯ ಶತಮಾನದ ಶಾಸನಗಳಲ್ಲಿ ನಿರ್ದೇಶಗಳು ಸಿಕ್ಕುತ್ತವೆ. ಧಾರವಾಡ ಜಿಲ್ಲೆಯ ರೋಣಗ್ರಾಮದ ಒಂದು ಶಾಸನದಲ್ಲಿ ಇಂದ್ರೋತ್ಸವಕ್ಕಾಗಿ ದತ್ತಿಯನ್ನು ಬಿಟ್ಟಂತೆ ಹೇಳಿದೆ (B. K., No. 172 of 1926-27). ಬಳ್ಳಾರಿ ಜಿಲ್ಲೆಯ ಕುಡುತಿನಿ ಗ್ರಾಮದ ಒಂದು ಶಾಸನದಲ್ಲಿ ಇಂದ್ರನ ದೀಪಸ್ತಂಭವುಳ್ಳ ಸಭಾ ಮಂಟಪದ ಸಂದರ್ಭವು ಉಕ್ತವಾಗಿದೆ (*South Indian Inscripions* Vol. IX, pt. i, No. 197). ಇದೇ ಮೇರೆಗೆ ಒಂದು ಕಾಲದಲ್ಲಿ ಸೂರ್ಯನ ದೇವಾಲಯಗಳು ನಮ್ಮ ನಾಡಿನಲ್ಲಿ ಇದ್ದುವು. ಮುಂದೆ ಈ ದೇವತೆಗಳ ಉಪಾಸನೆ ಲುಪ್ತವಾಯಿತು. ಇರಲಿ. ಈ ಹಬ್ಬದ ಇನ್ನೊಂದು ಹೆಸರು ಸೀಗೀ ಹುಣ್ಣಿವೆ. ಇದನ್ನು ಕುರಿತು ಮುಂದೆ ಚರ್ಚಿಸಲಿರುವೆ. ಇದರ ಮುಂದಿನ ಅಮಾವಾಸ್ಯೆ ದೀಪಾವಳಿಯ ಹಬ್ಬದಲ್ಲಿ ಅಡಕವಾಗಿದೆ. ಕೃಷಿ ಜೀವಿವರ್ಗದವರಿಗೆ ಇದು ಹಟ್ಟಿಹಬ್ಬವೆಂದು ಪರಿಚಿತವಾಗಿದೆ.

ಕಾರ್ತಿಕ ಪೂರ್ಣಿಮೆ ತ್ರಿಪುರೀ ಪೂರ್ಣಿಮೆ ಎಂಬುದಾಗಿ ಪ್ರಸಿದ್ಧಿವೆತ್ತಿದೆ. ಇದುವೇ ಹಿರಿಯ ಗೌರಿಯ ಹಬ್ಬವಾಗಿ ಗೌರೀಹುಣ್ಣಿವೆ ಎಂದು ಜನತೆಗೆ ಪ್ರಿಯವಾಯಿತು. ಕಾರ್ತಿಕ ಅಮಾವಾಸ್ಯೆ ಛಟ್ಟಿ ಅಮಾವಾಸ್ಯೆ. ಮಾರ್ಗಶೀರ್ಷ ಶುದ್ಧ ಷಷ್ಠೀ ಸ್ಕಂದ ಇಲ್ಲವೆ ಮಲ್ಲಾರಿ ದೇವತೆಯ ಉತ್ಸವದ ದಿನ. ಈ ದೇವತೆಗೆ ಚಂಪಾ ಎಂದರೆ ಸಂಪಗೆ ಹೂ ಇಷ್ಟವಾದುದರಿಂದ ಈ ದಿನಕ್ಕೆ ಸ್ಕಂದಷಷ್ಠೀ ಮತ್ತು ಚಂಪಾಷಷ್ಠೀ ಎಂಬ ಹೆಸರುಗಳು ರೂಢವಾದಂತೆ ತೋರುತ್ತದೆ. ಈ ಎರಡನೆಯ ಹೆಸರಿನ ಸಂಕ್ಷಿಪ್ತ ರೂಪ ಛಟ್ಟಿ. ಈ ಹೆಸರು ಅದರ ಹಿಂದಿನ ಅಮಾವಾಸ್ಯೆಗೆ ಅಂಟಿಕೊಂಡಿತು. ಈ ಹೆಸರಿನ ಪ್ರಸಿದ್ಧಿಯ ಮೂಲಕ ಈ ದೇವತೆಯ ಉತ್ಸವವು ಕರ್ನಾಟಕದಲ್ಲಿ ಹೆಚ್ಚಿನ ಮಾನ್ಯತೆಯನ್ನು ಪಡೆದ ಸಂಗತಿ ಮನವರಿಕೆಯಾಗುತ್ತದೆ. ಚಾರಿತ್ರಿಕ ಅನ್ವೇಷಣವನ್ನು ನಡೆಸಿದರೆ ಈ ಉತ್ಸವವನ್ನು ಕುರಿತು ಕೆಲವು ಮನೋರಂಜಕ ಅಂಶಗಳು ವೇದ್ಯವಾಗುವುವು. ಅವುಗಳ ವಿಚಾರವಾಗಿ ಮುಂದೆ ಚರ್ಚಿಸಲಿರುವೆ.

ಮನೆಯ ಹೊಸ್ತಿಲುಗಳನ್ನು ಅಲಂಕರಿಸಿ ಪೂಜಿಸುವ ನಿಮಿತ್ತ ಮಾರ್ಗಶೀರ್ಷ ಪೂರ್ಣಿಮೆಗೆ ಹೊಸ್ತಿಲ ಹುಣ್ಣಿಮೆ ಎಂಬ ಹೆಸರನ್ನು ಲೌಕಿಕರು ಕೊಟ್ಟಿರುವರು. ಈ ಸ್ಪಷ್ಟೀಕರಣವು ತೃಪ್ತಿಕರವಾಗಿಲ್ಲ. ಈ ದಿನ ದಕ್ಷಿಣ ದೇಶದಲ್ಲಿ ಶಿವನ ಪೂಜೆಯೂ ಆದ್ರಾ್ರ ಎಂಬ ಉತ್ಸವವೂ ನಡೆಯುವುದು. ಈ ದಿವಸ ಸವದತ್ತಿಯ ದೇವಿ ಎಲ್ಲಮ್ಮ ವಿಧವೆಯಾಗುವಳು ಎಂಬ ಸಂಪ್ರದಾಯವನ್ನು ಅನುಸರಿಸಿ ಸಾಮಾನ್ಯ ಜನರು ಇದಕ್ಕೆ ರಂಡೆಹುಣ್ಣಿವೆ ಎಂಬ ಗ್ರಾಮ್ಯ ಹೆಸರನ್ನು ತಂದಿರುವರು. ಮುಂದು ಪುಷ್ಯ ದಲ್ಲಿ ಬರುವ ಮಕರ ಸಂಕ್ರಮಣದ ಸಂಪರ್ಕದಿಂದ ಮಾರ್ಗಶೀರ್ಷ ಅಮಾವಾಸ್ಯೆಗೆ ಸಂಕ್ರಾಂತಿ ಅಮಾವಾಸ್ಯೆ ಇಲ್ಲವೆ ಎಳ್ಳ ಅಮಾವಾಸ್ಯೆ ಎಂಬ ನಾಮಕರಣವು ಉಂಟಾಗಿದೆ.

ಪುಷ್ಯದ ಪೂರ್ಣಿಮೆ ಬಂದ ಹುಣ್ಣಿವೆ. ಇದು ಬನದ ಇಲ್ಲವೆ ಬನದ ದೇವಿಯ ಹುಣ್ಣಿವೆ ಎಂಬುದರ ಸಂಕ್ಷಿಪ್ತರೂಪ. ಪುಷ್ಯ ಶುಕ್ಲಪಕ್ಷದ ಉತ್ತರಾರ್ಧವು ಬನದ ದೇವಿಯ ಆರಾಧನೆಗೆ ಕಾಯ್ದಿರಿಸಿದುದು. ಪ್ರಕೃತಿಯ ಉಪಾಸನೆಯಲ್ಲಿ ಈ ದೇವಿಯ ಉಗಮವನ್ನು ಕಂಡುಹಿಡಿಯುವಂತಿದೆ. ಈ ಅಂಶವನ್ನು ಮುಂದಿನ ಚಾರಿತ್ರಕ ಅನ್ವೇಷಣದಲ್ಲಿ ಚರ್ಚಿಸಲಿರುವೆ. ಬನಶಂಕರಿಯ ಆರಾಧನೆ ಹೆಚ್ಚಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರದೇಶಗಳಲ್ಲಿ ಪ್ರಚಲಿತವಾಗಿದೆ. ಈ ದೇವಿ ಯನ್ನು ಕುರಿತು ನವರಾತ್ರ ಇಲ್ಲವೆ ತ್ರಿರಾತ್ರ ಉತ್ಸವವನ್ನು ಆಚರಿಸುವರು. ಅದರ ಪರಿಸಮಾಪ್ತಿ ಈ ಪೂರ್ಣಿಮೆಯ ದಿನ ಆಗುವುದು. ಪುಷ್ಯದಅಮಾವಾಸ್ಯೆಗೆ ಬಂದಿರುವ ಅವರಾತ್ರಿ ಇಲ್ಲವೆ ಅವರ್ತ ಎಂಬ ಹೆಸರಿನ ಸ್ಪಷ್ಟೀಕರಣವು ದೊರೆವುದಿಲ್ಲ. ಇದನ್ನು ಕುರಿತು ಮುಂದೆ ವಿಮರ್ಶಿಸಲಿರುವೆ. ಈ ದಿನಕ್ಕೆ ನವರಾತ್ರಿ ಅಮಾವಾಸ್ಯ ಎಂಬ ಇನ್ನೊಂದು ಹೆಸರು ಕೆಲವೆಡೆ ರೂಢಿಯಲ್ಲಿ ಇದ್ದಂತೆಯೂ ಅದರಿಂದ ಬನಶಂಕರಿಯ ನವರಾತ್ರ ಉತ್ಸವದೊಡನೆ ಇವರ ಸಂಬಂಧವನ್ನು ಸೂಚಿಸಿದಂತೆಯೂ ತೋರುತ್ತದೆ.

ಮಾಘ ಪೂರ್ಣಿಮೆ ದೊಡ್ಡ ದಿನವೇ. ಕನ್ನಡನಾಡಿನಲ್ಲಿ ಇದಕ್ಕೆ ಉಂಟಾಗಿ ರುವ ಭಾರತ ಇಲ್ಲವೆ ಭಾರತೀ ಹುಣ್ಣಿವೆ ಮತ್ತು ಗುಡಿಹುಣ್ಣಿವೆ ಎಂಬ ಹೆಸರುಗಳು ಭಾರತವಾಚನದ ಮೂಲಕವೂ ಗುಡಿಯೊಳಗಿನ ದೇವರು ಭಕ್ತರ ಮನೆಗೆ ಹೋಗುವರು ಎಂಬ ನಂಬುಗೆಯ ಮೂಲಕವೂ ಬಂದುವು ಎಂದು ಹೇಳುವರು. ಈ ಸ್ಪಷ್ಟೀಕರಣದ ಸಮರ್ಪಕತೆಯನ್ನು ನಿರ್ಧರಿಸಬೇಕಾದುದು. ಶಿವರಾತ್ರಿಯ ನಿಮಿತ್ತ ಮಾಘ ಅಮಾವಾಸ್ಯೆ ಶಿವರಾತ್ರಿ ಅಮಾವಾಸ್ಯೆ ಎಂದು ಹೆಸರುವೆತ್ತುದು ಯುಕ್ತವೇ.

ಕಾಮದಹನದ ಕುರುಹಾಗಿ ಫಾಲ್ಗುನ ಪೂರ್ಣಿಮೆ ಹುತಾಶನೀ, ಹೋಲಿಕಾ, ಹೋಳಿಹುಣ್ಣಿವೆ ಎಂಬ ನಾಮಕರಣವನ್ನು ಪಡೆದಿದೆ. ಕಾಮನ ಹುಣ್ಣಿವೆ, ಕಾಮನ

ಹಬ್ಬ ಎಂಬ ಹೆಸರುಗಳಾದರೂ ಇದಕ್ಕೆ ಅನುರೂಪವಾದುವೇ. ಈ ಹಬ್ಬವು ಹಲವೆಡೆ ಜನಪ್ರಿಯವಾಗಿದ್ದು ಕೆಲವೆಡೆ ಗ್ರಾಮ್ಯತೆಗೆ ಇಳಿದಿದೆ. ಮುಂಬರುವ ನೂತನ ವರ್ಷಾರಂಭದಿನದ ಸಾಹಚರ್ಯದಿಂದ ಫಾಲ್ಗುನ ಅಮಾವಾಸ್ಯೆಗೆ ಯುಗಾದಿ ಅಮಾವಾಸ್ಯೆ ಎಂಬ ಹೆಸರು ಬಂದಿದೆ. ಇಲ್ಲಿ ಯುಗ ಎಂದರೆ ಕಾಲ, ವರ್ಷ ಎಂಬ ಅನಿರ್ದಿಷ್ಟ ಅರ್ಥವನ್ನು ಮಾಡಿಕೊಳ್ಳಬೇಕಾಗುತ್ತದೆ. ಸಂವತ್ಸರಪಾಡ್ಯ ಅಮಾವಾಸ್ಯೆ ಎಂದೂ ಕೆಲವರು ಹೇಳುವರು.

ಚಿಕಿತ್ಸಕದೃಷ್ಟಿಯಿಂದ ಈ ಉತ್ಸವಗಳನ್ನು ಕುರಿತು ವಿಚಾರಿಸಿದರೆ ಇವುಗಳಲ್ಲಿ ನಮ್ಮ ಜನಾಂಗದ ಧರ್ಮನಿಷ್ಠೆ, ದೈವಭಕ್ತಿ, ಸಾಮಾಜಿಕ ಪ್ರವೃತ್ತಿ, ಔದ್ಯಮಿಕ ಆಸಕ್ತಿ, ಜೀವನದಲ್ಲಿ ಸೊಗಸು ಮೊದಲಾದ ಸಂವಿಧಾನಗಳನ್ನು ಕಂಡು ಗುರುತಿಸ ಬಹುದಾಗಿದೆ. ನಾಗರಪಂಚಮಿ, ಶಿವರಾತ್ರಿ ಮೊದಲಾದ ಹಬ್ಬಗಳ ಪ್ರಾಮುಖ್ಯತೆಯನ್ನು ನೋಡಿದರೆ ಪ್ರಾಚೀನಕಾಲದಿಂದ ನಮ್ಮ ಜನಜೀವನದಲ್ಲಿ ಬೆರೆತುಬಂದಿರುವ ನಾಗಪುಜೆ, ಶಿವಭಕ್ತಿ, ಗಣೇಶನಿಷ್ಠೆ, ದೇವೀಉಪಾಸನೆ ಮೊದಲಾದ ಸಂಸ್ಕಾರಗಳು ಗೋಚರವಾಗುತ್ತವೆ. ಕಾರಹುಣ್ಣಿವೆ, ಮಣ್ಣೆತ್ತಿನ ಅಮಾವಾಸ್ಯೆ, ಸೀಗೀ ಹುಣ್ಣಿವೆ, ಹಟ್ಟಿ ಹಬ್ಬ ಇವುಗಳಿಂದ ನಮ್ಮ ನಾಡಿನ ಕೃಷಿಪ್ರಧಾನಜೀವನವು ನಿದರ್ಶನಕ್ಕೆ ಬರುತ್ತದೆ.

೨ ಚಾರಿತ್ರಿಕ ಅನ್ವೇಷಣ

ಇನ್ನು ಈ ಹಬ್ಬಗಳ ಯಥಾರ್ಥವಾದ ಮೂಲವನ್ನು ಕಂಡುಹಿಡಿಯುವುದು ಸಾಧ್ಯವೇ? ಇವುಗಳ ಪ್ರಾಚೀನತೆ ಎಷ್ಟು ದೂರಕ್ಕೆ ಹೋಗುತ್ತದೆ? ಇವುಗಳಲ್ಲಿ ತಮ್ಮ ಪ್ರಾಚೀನಸ್ವರೂಪ ಮತ್ತು ನಾಮಗಳನ್ನು ಅನೂಚಾನವಾಗಿ ಉಳಿಸಿಕೊಂಡು ಬಂದುವು ಯಾವುವು? ಕಾಲಕ್ರಮದಲ್ಲಿ ವ್ಯತ್ಯಾಸವನ್ನು ಹೊಂದಿದುವು ಯಾವುವು? ಮುಂತಾದ ಪ್ರಶ್ನೆಗಳು ಈ ವಿಷಯವನ್ನು ಸೂಕ್ಷ್ಮವಾಗಿ ವಿಮರ್ಶಿಸುವವನನ್ನು ಇದುರಿಸದೆ ಇರಲಾರವು. ಅದಕ್ಕಾಗಿ ಚಾರಿತ್ರಿಕ ಅನ್ವೇಷಣದ ಆವಶ್ಯಕತೆ ಉಂಟಾಗುತ್ತದೆ. ಸುದೈವದಿಂದ ಇಂತಹ ಅನ್ವೇಷಣಕ್ಕೆ ಸಹಕಾರಿಯಾದ ಸಾಧನಗಳು ನಮ್ಮ ನಾಡಿನಲ್ಲಿ ದೊರೆಯುತ್ತವೆ. ಅವು ಶಾಸನಗಳು. ಈ ಶಾಸನಗಳು ನಮ್ಮ ನಾಡಿನ ಚರಿತ್ರೆಯ ಮುಖ್ಯಾಂಶಗಳನ್ನು ತಿಳಿದುಕೊಳ್ಳಲಿಕ್ಕೆ ಪ್ರಮಾಣಭೂತವಾಗಿರುವಂತೆ, ನಮ್ಮ ಪ್ರಾಚೀನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ಕೆಲಮಟ್ಟಿಗೆ ಅರಿತುಕೊಳ್ಳಲು ನೆರವನ್ನು ನೀಡುವುವು ಎಂಬ ಅಂಶವನ್ನು ನಾವು ವಿಶೇಷವಾಗಿ ಲಕ್ಷಿಸಬೇಕಾದುದು. ಆದುದರಿಂದ ಇದೀಗ ಶಾಸನಗಳನ್ನು ಒಳಹೊಕ್ಕು ನೋಡುವ.

ಸುಮಾರು ೫೦ ವರ್ಷಗಳ ಹಿಂದೆ ಕನ್ನಡನಾಡಿನ ಚರಿತ್ರೆಯ ಕ್ಷೇತ್ರದಲ್ಲಿ

ಅನ್ವೇಷಣಗಳನ್ನು ನಡೆಯಿಸಿ ನಾಮಾಂಕಿತರೂ ಆದರಣೀಯರೂ ಆಗಿದ್ದ ದಿವಂಗತ ಸರ್ ಜಾನ್ ಫೆಥಫುಲ್ ಫ್ಲೀಟರು ಈ ಶಾಖೆಯಲ್ಲಿಯೂ ಸ್ವಲ್ಪಮಟ್ಟಿಗೆ ಬೆಳಕಿಟ್ಟು ತೋರಿಸಿದ್ದಾರೆ (*Epigraphia Indica*, Vol. V, pp. 11-15). ಅವರ ತರುವಾಯ ಈಚೆಗೆ ಅನೇಕ ಶಾಸನಗಳು ಪ್ರಕಾಶಿತವಾದುದರಿಂದ ಈ ವಿಷಯದ ವ್ಯಾಸಂಗಕ್ಕೆ ಸೌಕರ್ಯವು ಒದವಿದೆ. ಈ ವಿಚಾರದಲ್ಲಿ ನಾನು ಮಾಡಿದ ಅತ್ಯಲ್ಪ ಪರಿಶ್ರಮದ ಫಲವನ್ನು ಈ ಮುಂದೆ ಸಂಕ್ಷೇಪವಾಗಿ ವಿವರಿಸುವೆ. ಈ ಮುಂದಿನ ವಿವರಣೆಗೆ ಸಹಾಯಕವಾದ ಶಾಸನಗಳು ಸಾಧಾರಣವಾಗಿ ೧೧ ರಿಂದ ೧೩ ನೆಯ ಶತಮಾನದ ಕಾಲಕ್ಕೆ ಸಂಬಂಧಿಸಿದುವು ಆಗಿವೆ.

ಶಾಸನಗಳಲ್ಲಿ ಮತ್ತೆ ಮತ್ತೆ 'ಚೈತ್ರ-ಪವಿತ್ರ'ಕ್ಕಾಗಿ ದತ್ತಿಯನ್ನು ಬಿಟ್ಟ ನಿರ್ದೇಶಗಳು ಸಿಕ್ಕುತ್ತವೆ. ಇದರಲ್ಲಿ ಎರಡು ಹಬ್ಬಗಳು ಅಡಕವಾಗಿವೆ ಎಂದು ದಿವಂಗತ ಆರ್. ನರಸಿಂಹಾಚಾರ್ಯರು ತೋರಿಸಿದ್ದಾರೆ; ಒಂದು 'ಚೈತ್ರದ ಉತ್ಸವ' ಇನ್ನೊಂದು 'ಪವಿತ್ರದ ಉತ್ಸವ' (*Indian Antiuary*, Vol. XXXVIII, pp. 52-53). ಪವಿತ್ರದ ಉತ್ಸವವನ್ನು ಕುರಿತು ಆಮೇಲೆ ವಿವೇಚಿಸುವೆ. ಈ ನಿರ್ದೇಶಗಳಿಂದ ಚೈತ್ರಮಾಸದಲ್ಲಿ ಒಂದು ಉತ್ಸವವು ನಮ್ಮ ನಾಡಿನ ಎಲ್ಲ ಭಾಗಗಳಲ್ಲಿ ವಿಜೃಂಭಣೆಯಿಂದ ನಡೆಯುತ್ತಿದ್ದಿತು ಎಂದು ತಿಳಿಯುತ್ತದೆ. ಈ ಉತ್ಸವಕ್ಕೆ 'ವನದ ಪರ್ವ' ಎಂಬ ಹೆಸರು ಇದ್ದಿತು. ಈ ಹಬ್ಬವು ಹುಣ್ಣಿವೆಯ ದಿನ ಆಚರಿಸಲಾಗುತ್ತಿತ್ತು ಎಂದು ನಿರ್ಧರಿಸಲೂ ಆಧಾರವು ದೊರೆಯುತ್ತದೆ. ಒಂದೆಡೆ ಈ ದಿನವನ್ನು 'ಬನದ ಪುಣ್ಣಮಿ' ಎಂದು ನಿರ್ದೇಶಿಸಿದೆ. ಈ ಉತ್ಸವದ ಸ್ವರೂಪ ಎಂತಹದು ಮುಂತಾದ ವಿವರಗಳು ದೊರೆಯುವುದಿಲ್ಲ. ಆದರೆ ಇದು ವನಕ್ಕೆ ಸಂಬಂಧಪಟ್ಟ ಉತ್ಸವವೆಂಬುದು ಇದರ ಹೆಸರಿನಿಂದ ಊಹಿಸಬಹುದಾಗಿದೆ. ವನದ ಪರ್ವ ಇಲ್ಲವೆ ವನದ ಹಬ್ಬ ಮತ್ತು ಬನದ ಹುಣ್ಣಿವೆ ಎಂಬ ಹೆಸರುಗಳು ಹಿಂದುಳಿದು ವನ ಹುಣ್ಣಿವೆ ಎಂಬ ಹೆಸರು ಹೇಗೆ ಮತ್ತು ಯಾವಾಗ ಬಳಕೆಯಲ್ಲಿ ಬಂದಿತು ಎಂಬ ಅಂಶವು ವಿಚಾರಣೀಯವಾಗಿದೆ (*South Indian Inscriptions*, Vol. IX, pt. I, Nos. 162 and 158.). ಚೈತ್ರದ ಅಮಾವಾಸ್ಯೆಗೆ 'ಅಕ್ಷಯ ತೃತೀಯಾ ಅಮಾವಾಸ್ಯೆ' ಎಂಬ ಹೆಸರು ಸಾಕಷ್ಟು ಪ್ರಚುರವಾಗಿದ್ದಿತು ಎಂದು ತೋರಿಸಲು ಅನೇಕ ಶಾಸನಗಳ ಸಾಕ್ಷ್ಯವು ದೊರೆಯುತ್ತದೆ (*Ep. Ind.*, Vol. V, p. 14; *S. I. I.* Vol. IX, pt. I, No. 158). ಈಚೆಗೆ ಶೋಧಿತವಾದ ಧಾರವಾಡ ಜಿಲ್ಲೆಯ ಬಂಕಾಪುರ ತಾಲೂಕಿನ ನೀರಲಗಿ, ಹಿರೆ ಬೆಂಡಿಗೇರಿ ಮುಂತಾದ ಗ್ರಾಮಗಳಲ್ಲಿಯ ಶಾಸನಗಳು,—ಇ.)

ವೈಶಾಖದ 'ಅಗಿ—ಆಗಿ' ಹುಣ್ಣಿವೆ ಎಂಬ ಹೆಸರು ಶಾಸನಗಳಲ್ಲಿ ನನಗೆ ದೊರೆತಿಲ್ಲ. ಇದು ಈಚೆಯ ನಾಮಕರಣವಾಗಿರಬೇಕು. ತಮಿಳನಾಡಿನಲ್ಲಿ ಈ ಸುಮಾರಿಗೆ ಉರಿಬಿಸಿಲಿನ ಮೂಲಕ ಅಗ್ನಿ ನಕ್ಷತ್ರಬರುವುದು ಎಂದು ಹೇಳುವರು. ಅದೇ ಬಗೆಯಾಗಿ ಅಗ್ನಿಯ ಹುಣ್ಣಿವೆಯಿಂದ ಆಗಿ ಹುಣ್ಣಿವೆ ಎಂಬ ನಾಮಕರಣವು ಉಂಟಾಗಿರುವುದು ಅಸಂಭವನೀಯವಾಗಿಲ್ಲ. ವೈಶಾಖದ ಬಾದಾಮಿ ಅಮಾವಾಸ್ಯೆ— ಈ ಹೆಸರಿನ ಸ್ಪಷ್ಟೀಕರಣವು ಇನ್ನೂ ಅತೃಪ್ತಿಕರವೆಂದು ನನಗೆ ತೋರುತ್ತದೆ. ಬಾದುಬೆ—ಬಾದುಬ್ಬೆ—ಮತ್ತು ಬಾದುಬೆಯಮಾವಾಸ್ಯೆ ಎಂಬೀ ಹೆಸರುಗಳು ಶಾಸನಗಳಲ್ಲಿ ದೊರೆಯುತ್ತವೆ. ಇವು ವೈಶಾಖ ಅಮಾವಾಸ್ಯೆಗೆ ಅನ್ವಯಿಸುತ್ತವೆ. ಲಕ್ಕುಂದಿಯ ಒಂದು ಶಾಸನದಲ್ಲಿ ದೀಪಾವಳಿ ಮತ್ತು ಕಾರಹುಣ್ಣಿವೆಯ ಜೊತೆಯಲ್ಲಿ 'ಬಾದುಬೆ' ಎಂಬುದೂ ಒಂದು 'ಪರ್ವ'ವೆಂದು ಹೇಳಿದೆ. (*Bombay Karnatak Inscriptions*, Vol. I, pt, I, Nos. 52 and 92; *S. I. I.* Vol. IX, pt. I, No. 198,)

ಆದರೆ ಈ ಹೆಸರಿನ ಮೂಲ ಯಾವುದು? ಬಾದಬೆ, ಬಾದುಬ್ಬೆ ಎಂಬ ಪದಕ್ಕೆ ಅರ್ಥವೇನಾದರೂ ಇದೆಯೆ? ಎಂಬುದನ್ನು ಸ್ವಲ್ಪ ವಿಮರ್ಶಿಸುವ. ಈ ಶಬ್ದಕ್ಕೆ ಬಾದುಂಬೆ ಎಂಬ ಇನ್ನೊಂದು ರೂಪವು ಇದ್ದಂತೆ ತೋರುತ್ತದೆ. ಈ ಪದವಾದರೂ ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು, ಇವು 'ಬಾದುಬ್ಬೆಯ ಪಾಳು' 'ಬಾದುಂಬೆಯ ಹಳ್ಳ' ಮತ್ತು 'ಬಾದುಂಬೆಯ ತಟ್ಟೆ' ಮುಂತಾದ ಸ್ಥಳಸೂಚಕ ಹೆಸರುಗಳಲ್ಲಿ ಹೆಚ್ಚಾಗಿ ದೊರೆಯುತ್ತದೆ (*Bomb. karn. Ins.*, Vol. I, pt. I, No. 116; *S. I. I*, Vol. IX, pt. I, Nos. 165 and 329). ಇದರಿಂದಲೂ ಜಾಡು ದೊರೆಯುವುದಿಲ್ಲ. ಅದಕ್ಕಾಗಿ ಇನ್ನೊಂದು ಶಾಸನವನ್ನು ಎತ್ತಿಕೊಳ್ಳುವ. ಧಾರವಾಡ ಜಿಲ್ಲೆಯ ಹಾನಗಲ್ಲ ತಾಲೂಕಿನ ಬಾಳೂರ್ ಎಂಬ ಗ್ರಾಮದ ಒಂದು ಶಾಸನದಲ್ಲಿ ಆ ವೂರ ಬರ್ಮಗಾವುಂಡನು ಬಾದುಂಬೆಯನ್ನು ಪ್ರತಿಷ್ಠೆ ಮಾಡಿದ ಸಂಗತಿ ಉಕ್ತವಾಗಿದೆ (*B. K.*, No. 14 of 1945-46). ಈ ಶಾಸನಶಿಲೆಯ ಮೇಲೆ ಒಬ್ಬ ದೇವತೆಯ ಆಕೃತಿ ಇದ್ದು, ಆ ಕಲ್ಲನ್ನು ಕೆರೆಯ ತೂಬಿನ ಮೇಲೆ ನೆಟ್ಟಿದೆ. ಇಲ್ಲಿ ಆ ದೇವತೆಯನ್ನು ಕುರಿತು 'ಬಾದುಂಬೆ' ಎಂದು ಸಂಬೋಧಿಸಿದ ಸಂಗತಿ ಸ್ಪಷ್ಟವಿದೆ. ಈ ಬೆಳಕನ್ನು ಎತ್ತಿಕೊಂಡು, ಬಾದುಂಬೆ ಇಲ್ಲವೆ ಬಾದುಬ್ಬೆ ಎಂಬ ಮಾತು ಯಾವುದೋ ಒಂದು ದೇವತೆಯ (ಅದು ಪ್ರಾಚೀನ ಗ್ರಾಮದೇವತೆಯಾಗಿರಬಹುದೆ?) ಹೆಸರು ಆಗಿದ್ದು, ಅದರ ಮೂಲಕ ಬೇರೆ ಹೆಸರಗಳು ಉಂಟಾದುವು ಎಂದು ಇಟ್ಟುಕೊಂಡರೆ ಸರಿಯಾದೀತು. ಇಲ್ಲಿ ನಾವು 'ಬಾದುಂಬೆ'ಯಲ್ಲಿ "ಅಂಬೆ' ಎಂಬುದರ ತುಟಿತ

ರೂಪವನ್ನು ಗುರುತಿಸಬಹುದಾಗಿದೆ. ಇದು ಯಾವದೇವತೆ? ವಸಂತಾಂಬೆ ಆಗಿರಬಹುದೇ? ಅಂತೂ ಒಂದು ಕಾಲದಲ್ಲಿ ಈ ದಿನ ಈ ದೇವತೆಯ ಉತ್ಸವಕ್ಕೆ ಮೀಸಲಾಗಿದ್ದು, 'ಬಾದುಂಬೆ' ಅಮಾಮಾಸ್ಯೆಯಿಂದ 'ಬಾದಮಿ' ಅಮಾವಾಸ್ಯೆ ಎಂಬ ಹೆಸರುಬಂದಿತು ಎಂದು ಹೇಳಿದರೆ ಅದು ಚಾರಿತ್ರಿಕವೂ ಸಯುಕ್ತಿಕವೂ ಆಗಿ ತೋರೀತು. ಇನ್ನು ಇದಕ್ಕೂ ಒಂದು ಹೆಜ್ಜೆ ಮುಂದುವರಿದು, ಬಾದಾಮಿ ಎಂಬ ಹೆಸರೇ ಬಾದುಂಬೆಯಿಂದ ಬಂದಿದ್ದು, ವಾತಾಪಿ ಎಂಬುದು ಅದರ ಅನಂತರದ ಸಂಸ್ಕೃತೀಕರಣವೆಂದು ಸೂಚಿಸಬಹುದೆ?

ಕಾರಹುಣ್ಣಿವೆಯ ಪರಂಪರೆ ಶಾಸನಕಾಲದಲ್ಲಿ ದೊರೆಯುತ್ತದೆ (*Bamb. Karn. Ins.*, Vol. I, pt. I, No. 52). ಆದರೆ ಇದನ್ನು ಯಾವ ವಿಧವಾಗಿ ಆಚರಿಸುತ್ತಿದ್ದರು ಎಂದು ತಿಳಿದುಕೊಳ್ಳಲು ಅವಕಾಶವಿಲ್ಲ. ಇದೇ ಮೇರೆಗೆ ಮಣ್ಣೆತ್ತಿನ ಅಮಾವಾಸ್ಯೆ, ಕಡಲೆಗಡಬಿನ ಹುಣ್ಣಿವೆ ಮತ್ತು ನಗರ ಅಮಾವಾಸ್ಯೆ ಎಂಬೀ ನಾಮಕರಣಗಳಾದರೂ ಶಾಸನಸ್ಥವಾಗಿ ನನಗೆ ದೊರೆತಿಲ್ಲ. ಇದೀಗ ಹಿಂದೆ ಸೂಚಿಸಿದ, ಶಾಸನಗಳಲ್ಲಿ ಬಹುವಾಗಿ ತಲೆದೋರುವ ಪವಿತ್ರೋತ್ಸವವನ್ನು ಕುರಿತು ವಿಚಾರಿಸುವ. ಇಲ್ಲಿ 'ಪವಿತ್ರ'ವೆಂದರೆ ಪವಿತ್ರವಾದ ನೂಲು, ಯಜ್ಞೋಪವಿತ ಎಂದು ಅರ್ಥವಾಗುತ್ತದೆ. ದೇವರಿಗೆ ಹೊಸ ನೂಲನ್ನು ತೊಡಿಸುವ ಸಂದರ್ಭದಲ್ಲಿ ಈ ಸಮಾರಂಭವನ್ನು ಆಚರಿಸುತ್ತಿದ್ದರು ಎಂದು ವ್ಯಕ್ತವಾಗುತ್ತದೆ. ಈ ಸಮಾರಂಭದ ಆಚರಣೆಯ ದಿನದ ವಿಚಾರವಾಗಿ ಸ್ವಲ್ಪ ಭಿನ್ನಾಧಾರಗಳು ಇವೆ. ಒಂದು ಆಗಮೋಕ್ತಿಯಂತೆ ಇದು ಜ್ಯೇಷ್ಠದಿಂದ ಮುಂದಿನ ನಾಲ್ಕು ತಿಂಗಳಲ್ಲಿ ಯಾವಾಗಲಾದರೂ ನೆರವೇರಬಹುದು. ಇನ್ನೊಂದು ಶಾಸ್ತ್ರ ಪ್ರಮಾಣದಂತೆ ಇದರ ಅವಧಿ ಆಷಾಢ ಪೂರ್ಣಿಮೆಯಿಂದ ಕಾರ್ತ್ತಿಕ ಪೂರ್ಣಿಮೆಯವರೆಗೆ. ಪವಿತ್ರೋತ್ಸವದ ಕನ್ನಡ ನಾಮಾಂತರ ನೂಲಪರ್ವ. ಇದು ಶಾಸನಗಳಲ್ಲಿ ದೊರೆಯುತ್ತದೆ. ಆದರೆ ಈ ಹಬ್ಬವನ್ನು ಹಿಂದೆ ಆಷಾಢ ಹುಣ್ಣಿವೆಯ ದಿನ ಆಚರಿಸುತ್ತಿದ್ದಂತೆ ತೋರುತ್ತದೆ. (*Ep. Ind.*, Vol. V, p. 9; *Ind. Ant.*, Vol. XXXVIII, pp. 52-53). ಈ 'ನೂಲಪರ್ವ'ದ ಆಚರಣೆ ಮುಂದೆ ಆಷಾಢದಿಂದ ಶ್ರಾವಣ ಹುಣ್ಣಿವೆಗೆ ಸರಿದು ಬಂದಿರಬೇಕು. ನೂಲಹಬ್ಬ, ನೂಲಹುಣ್ಣಿವೆ ಎಂಬುವು ಆಮೇಲಿನ ಹೆಸರುಗಳು,

ಬೆನಕನ ಅಮಾವಾಸ್ಯೆ, ಅನಂತನ ಹುಣ್ಣಿವೆ ಮತ್ತು ಮಹಾನವಮಿ ಅಮಾವಾಸ್ಯೆ ಈ ನಾಮಕರಣಗಳಿಗೆ ನನಗೆ ಶಾಸನಾಧಾರಗಳು ದೊರೆತಿಲ್ಲ. ಹೆಚ್ಚು ಶೋಧಿಸಿದರೆ ದೊರೆಯಬಹುದೇನೋ. ಈ ಮುಂದಿನ ಸೀಗೀ ಇಲ್ಲವೆ ಬೀಗಿಹುಣ್ಣಿವೆಯ ವಿವೇಚನೆ ತೊಡಕಿನದಾಗಿದೆ. ಧಾರವಾಡ ಜಿಲ್ಲೆಯ ಹಾನಗಲ್ಲ ತಾಲೂಕಿನ ಕರಗುದರಿ

ಗ್ರಾಮದ ಒಂದು ಶಾಸನದಲ್ಲಿ 'ಹೆಜ್ಜುರ್ಗಿಗ್ಗಿಯ ಪುಣ್ಣಮಿ' ಎಂಬ ನಿರ್ದೇಶವು ಬರುತ್ತದೆ. ಈ ಶಾಸನಕಾಲ ಕ್ರಿ. ವ. ೧೧೧೦೮. (*Ind. Ant.*, Vol. X, p. 252). ಬೆಳಗಾವ ಜಿಲ್ಲೆಯ, ಹುಕ್ಕೇರಿ ತಾಲೂಕಿನ, ಅರ್ಜುನವಾಡ ಎಂಬ ಗ್ರಾಮದಲ್ಲಿಯ, ೧೨೬೦ ನೆಯ ಕ್ರಿ. ವರ್ಷದ ಇನ್ನೊಂದು ಶಾಸನದಲ್ಲಿ ದತ್ತಿಯ ವಿವರವನ್ನು ನಿರೂಪಿಸುವಾಗ 'ಹೆಜ್ಜುಗ್ಗಿಯ ಹಬ್ಬ ಒಂಬತ್ತು ದಿನ' ಎಂಬ ಮಾತು ಬರುತ್ತದೆ (*Ep. Ind.*, Vol. XXI, p. 14). ಈ ಶಾಸನಗಳಲ್ಲಿಯ 'ಹೆಜ್ಜುರ್ಗಿಗ್ಗಿಯ ಪುಣ್ಣಮಿ' ಮತ್ತು 'ಹೆಜ್ಜುಗ್ಗಿಯ ಹಬ್ಬ' ಎಂಬೀ ಎರಡು ನಿರ್ದೇಶಗಳು ಒಂದೇ ಉತ್ಸವವನ್ನು ಲಕ್ಷಿಸುತ್ತವೆ ಎಂಬುದು ಸ್ಪಷ್ಟವಿದೆ. ಆದರೆ ಈ ಹಬ್ಬವು ಯಾವ ತಿಂಗಳಲ್ಲಿ ನಡೆಯುತ್ತಿದ್ದಿತು ಎಂಬುದನ್ನು ಅರಿತುಕೊಳ್ಳಲು ಅವುಗಳಲ್ಲಿ ಸೂಚನೆ ಸಿಕ್ಕುವುದಿಲ್ಲ. ಈ ಸಂದರ್ಭದಲ್ಲಿ 'ಹೆಜ್ಜುಗ್ಗಿ' ಎಂಬ ಹೆಸರು ಇಂದಿಗೂ ಕೆಲವೆಡೆ ಬಳಕೆಯಲ್ಲಿದ್ದು, ಅದು ಸೀಗೀ ಹುಣ್ಣಿವೆಗೆ ಅನ್ವಯಿಸುತ್ತದೆ ಎಂಬ ಅಂಶವು ಉಪಯುಕ್ತವಾಗಿದೆ. ಈ ಮೂಲಕ ಹಿಂದೆ ಆಶ್ವಿನ ಪೂರ್ಣಿಮೆಯ ಅಕ್ಕಪಕ್ಕದಲ್ಲಿ 'ಹೆಜ್ಜುಗ್ಗಿ'ಯ ಉತ್ಸವವು ಹೆಚ್ಚಿನ ವಿತರಣೆಯಿಂದ ಒಂಬತ್ತು ದಿನಗಳವರೆಗೆ ನಡೆಯುತ್ತಿದ್ದಿತು ಎಂದು ಇಟ್ಟುಕೊಳ್ಳಬಹುದು. ಶಾಸಗಳಲ್ಲಿ ಬರುವ, ಹಿರಿದು+ಸುಂಕ=ಹೆಜ್ಜುರ್ಂಕ, ಎಂಬ ಪದಸಂತೆ 'ಹೆಜ್ಜುರ್ಗಿಗ್ಗಿ' ಎಂಬ ಪದವು, ಹಿರಿದು ಮತ್ತು ಸುಗ್ಗಿ ಎಂಬೀ ಶಬ್ದಗಳಿಂದ ಕೂಡಿದದು ಆಗಿದೆ ಎಂದು ಸುಲಭವಾಗಿ ತಿಳಿಯಬಹುದಾಗಿದೆ.

ಈ 'ಹಿರಿಯ ಸುಗ್ಗಿ' ಯಾವುದು? ನಮ್ಮ ನಾಡಿನ ಬಹುಭಾಗದಲ್ಲಿ ಮುಂಗಾರ ಬೆಳೆಯೇ ದೊಡ್ಡ ಪಯಿರು. ಈ ಪಯಿರು ಆಶ್ವಿನ ಪೂರ್ಣಿಮೆಯುಷ್ಟರಲ್ಲಿ ಪಕ್ವವಾಗಿ ಫಲಿಸಿ ರಾಶಿಯಾಗಿ ಮನೆಗೆ ಬರುವ ಸಮಯ. ಕೃಷಿಜೀವಿಗಳಾದ ನಮ್ಮ ನಾಡಿನ ಬಹುಜನರಿಗೆ ಇದು ಅತ್ಯಂತ ಸಂತೋಷದ ಸಂನಿವೇಶ. ಈ ನಿಮಿತ್ತ ದೇವತಾರಾಧನೆಯೂ ಉತ್ಸವವೂ ನಡೆಯುವ ಪದ್ಧತಿ ನಮ್ಮಲ್ಲಿ ಬಳಕೆಗೆ ಬಂದಿರಬೇಕು. ಈ ಹುಣ್ಣಿವೆಗೆ ಸಂಸ್ಕೃತದಲ್ಲಿ ಹೇಳುವ 'ನವಾನ್ನ ಪೂರ್ಣಿಮಾ' ಎಂಬ ಹೆಸರಿನಿಂದಲೂ ಇದೇ ಸನ್ನಿವೇಶವು ಸೂಚಿತವಾಗುತ್ತದೆ. ಇದೀಗ ಈ ಹಬ್ಬದ ಆ ವೈಭವವು ತುಂಬಿದೆ. ಹಿಂದೆ ಈ ಉತ್ಸವದ ದಿನಗಳಲ್ಲಿ ಒಬ್ಬ ದೇವತೆಯನ್ನು ಪ್ರತಿಷ್ಠೆ ಮಾಡಿ ನವರಾತ್ರದಂತೆ ಒಂಬತ್ತು ದಿನಗಳ ಸಂತೋಷ ಸಮಾರಂಭವನ್ನು ಆಚರಿಸುತ್ತಿದ್ದರು ಎಂದು ಊಹಿಸಬಹುದಾಗಿದೆ. ಈ ಹಬ್ಬವು ಬರುಬರುತ್ತ ಮಹಾನವಮಿ ಹಬ್ಬದಲ್ಲಿ ಸೇರ್ಪಡಿಯಾಗಿರಬೇಕು.

ಈ ಉತ್ಸವದ ಅವಶೇಷವು ಇಂದಿಗೂ ನಮ್ಮ ಜನಗಳಲ್ಲಿ ಬಾಳಿದೆ. ಆಶ್ವಿನ ಹುಣ್ಣಿವೆಗೆ ಪಾರಂಪರ್ಯವಾಗಿ ಬಂದಿರುವ ಸೀಗೀ ಹುಣ್ಣಿವೆ ಎಂಬ ನಾಮಕರಣವೂ

ಮತ್ತು ಆ ಹೊತ್ತಿಗೆ ಬರಮಾಡಿಕೊಳ್ಳುವ 'ಸೀಗೀಗೌರೀ' ಎಂಬ ದೇವತೆಯ ಪೂಜಾವಿಧಾನವೂ ಇವುಗಳಲ್ಲಿ ಹಿಂದಿನ 'ಹೆಬ್ಬುಗ್ಗಿ' ಉತ್ಸವದ ಕುರುಹುಗಳೂ ಇಂದೂ ಕೆಲವೆಡೆಗಳಲ್ಲಿ ಪ್ರಸಿದ್ಧವಾಗಿವೆ. ಸೀಗೀಗೌರಿಯ ವಿಗ್ರಹವನ್ನು ಮಣ್ಣಿನಿಂದ ರಚಿಸುವರು. ಈಕೆಗೆ ಮುಖ, ಕೈ, ಕಾಲು ಮೊದಲಾದ ಅವಯವಗಳಾಗಲಿ, ವಾಹನ ಆಯುಧಗಳಾಗಲಿ ಇರುವುದಿಲ್ಲ. ಬುಡದಲ್ಲಿ ಅಗಲವಾಗಿ, ಮೇಲು ಮೇಲಕ್ಕೆ ಹೋದಂತೆ ಸಣ್ಣದಾಗುವ ದುಂಡಸೆಯ ಗೋಪುರಾಕೃತಿಯ ವಿಗ್ರಹ. ಈಕೆಯ ಎಡಬಲದಲ್ಲಿ ಹಲವಾರು ಕೊಂತೆಮ್ಮಗಳು; ಕೊಂತೆಮ್ಮ ಎಂದರೆ ಕೆಳಗೆ ಹರವಾಗಿ ನಿಂತ ಮಣ್ಣಿನ ಚೌರಸ ಆಕೃತಿ. ಕೊಂತೆಮ್ಮನಿಗೂ ಮುಖ, ಮೊದಲಾದ ನಿಶ್ಚಿತ ಅವಯವಗಳು ಇರುವುದಿಲ್ಲ. ಇಂತಹ ಈ ಗೌರಿ ತನ್ನ ಪರಿವಾರದೊಂದಿಗೆ ಸಾಯಂಕಾಲ ಅಡವಿಯಿಂದ ಮನೆಗೆ ಬರುವಳು. ಪ್ರತಿಷ್ಠೆ, ಆವಾಹನ ಮುಂತಾದ ಹೆಚ್ಚಿನ ಉಪಚಾರಗಳು ಆಕೆಗೆ ಬೇಕಿಲ್ಲ. ಅರಿಶಿನ, ಕುಂಕುಮ, ಎಂತಹವೋ ಹೂ, ಕೊಬ್ಬರಿ ಬೆಲ್ಲ ಇವು ಆಕೆಯ ಪೂಜಾಸಾಹಿತ್ಯ. ಮನೆಯ ಹೆಂಗಳೆಯರು, ಹುಡುಗಿಯರು ಆಕೆಗೆ ಆರತಿಮಾಡುವರು; ಪ್ರಸಾದ ಹಂಚುವರು. ಆರತಿಯನ್ನು ಮಾಡುವಾಗ ಹಾಡುವ ಹಾಡಿನ ಅಭಿಪ್ರಾಯವು ಹೀಗೆ: "ಗೆಳತಿಯರೆ, ಬನ್ನಿ! ಈ ಅರಸಿ ಗೌರಮ್ಮನಿಗೆ ಅರಿಶಿನ ಕುಂಕುಮವನ್ನು ಸಲ್ಲಿಸುವ. ಮಹಾಲಿಂಗನ ಮಡದಿಗೆ ಆರತಿ ಎತ್ತುವ. ವನದೇವತೆಯರೇ, ಬನ್ನಿ! ಕೋಲನ್ನು ಹಾಕಿರಿ—ಇ."

ಇಲ್ಲಿ ಈ ಸೀಗೀಗೌರಮ್ಮನನ್ನು 'ಮಹಾಲಿಂಗನ ಮಡದಿ' ಎಂದು ಸಂಭೋಧಿಸಿದರೂ ಆಕೆಯ ನಿಜಸ್ವರೂಪ ಪಾರ್ವತಿಯದಲ್ಲ ಎಂಬುದು ಸ್ಪಷ್ಟವಿದೆ. ಎಂತಹ ದೇವತೆಯಲ್ಲಿಯೂ ಗೌರವಭಾವನೆಯನ್ನು ತಳೆದು 'ಗೌರೀ, ಲಕ್ಷ್ಮೀ' ಎಂದು ಕರೆಯುವುದು ನಮ್ಮವರ ಒಂದು ಸುಸಂಸ್ಕಾರ. ಹಾಗಾದರೆ ಈ 'ಸೀಗೀಗೌರಿ' ಯಾರು? ಮೇಲೆ ವಿವರಿಸಿದ ಈಕೆಯ ಮತ್ತು ಪರಿವಾರದ ಆಕೃತಿ ವಿಶೇಷದಿಂದ ಈಕೆ ಕೃಷಿಫಲ ಎಂದರೆ ಧಾನ್ಯದ ರಾಶಿ ಮತ್ತು ಇಂತಹ ಸಮೃದ್ಧಿಯಿಂದ ಬೆಳೆಯುವ ಜೀವನದ ಸುಖಸಂಪತ್ತಿಯ ವಿಸ್ತಾರ ಇವುಗಳ ಪ್ರತೀಕವಾಗಿರುವಳು ಎಂದು ಹೇಳಬಹುದು. ಕೊಂತೆಮ್ಮನೆಂದರೆ ಪಂಚಪಾಂಡವರ ತಾಯಿಯಾದ ಕುಂತಿ; ಬಹು ಪುತ್ರವತಿಯೆಂಬ ಸಂಕೇತ. ಈ ದೇವತೆಯ ಉತ್ಸವದ ವೈಭವವು ಕುಂದಿದಂತೆ ಈಕೆಯ ಹೆಸರಿನಲ್ಲಿಯೂ ಅಪಕರ್ಷವಾದುದನ್ನು ನೋಡಬಹುದು. ಅದು ಹೀಗೆ:— ಈ ಹೆಸರು ಮೊದಲು 'ಹಿರಿಯ ಸುಗ್ಗಿಯ ಗೌರಿ'ಯಾಗಿದ್ದಿತು. ಮುಂದೆ 'ಸುಗ್ಗಿಯ ಗೌರಿ' ಎಂಬುದಾಗಿ ಕುಗ್ಗಿತು. ಅದು ಇದೀಗ 'ಸೀಗೀಗೌರಿ' ಎಂಬ ವಿಕೃತರೂಪದಿಂದ ನಿಂತುಕೊಂಡಿದೆ.

ದೀಪಾವಳಿ ಅಮಾವಾಸ್ಯೆಯ ಉಲ್ಲೇಖಗಳು ಶಾಸನಗಳಲ್ಲಿ ಸಾಕಷ್ಟು ದೊರೆಯುತ್ತವೆ. ಹಟ್ಟಿಹಬ್ಬ ಎಂಬ ಇದರ ಜಾನಪದ ಹೆಸರು ಮಾತ್ರ ದೊರೆತಿಲ್ಲ. ಅದೇ ಮೇರೆಗೆ ಗೌರೀ ಹುಣ್ಣಿವೆ, ಛಟ್ಟಿ ಅಮಾವಾಸ್ಯೆ ಮತ್ತು ಹೊಸ್ತಿಲ ಹುಣ್ಣಿವೆ ಇವುಗಳ ಪ್ರಯೋಗವನ್ನು ಶಾಸನ ಸಾಹಿತ್ಯದಲ್ಲಿ ಕಂಡುದಿಲ್ಲ. ಆದರೆ ಛಟ್ಟಿಯ ಹೆಸರು ಯಾವೊಂದು ಉತ್ಸವದ ಮೂಲಕ ಪ್ರಾಪ್ತವಾಗಿರುವದೋ ಆ ಉತ್ಸವವು ಮಾತ್ರ ಪ್ರಾಚೀನವಾಗಿದ್ದು ಅದು ಭಿನ್ನ ಭಿನ್ನ ಸ್ವರೂಪದಲ್ಲಿ ಪ್ರಚಾರದಲ್ಲಿ ಇದ್ದಂತೆ ತೋರುತ್ತದೆ.

ನಾಸಿಕ ಜಿಲ್ಲೆಯಲ್ಲಿ ದೊರೆತ ಒಂದು ತಾಮ್ರಶಾಸನದಲ್ಲಿ, ವಿಷ್ಣುದೈವತವನ್ನು ಕುರಿತು ಮಾರ್ಗಶೀರ್ಷ ಮಾಸದಲ್ಲಿ ಹದಿನೈದುದಿನಗಳವರೆಗೆ ನಡೆಯುವ ಒಂದು ಉತ್ಸವದ ನಿರ್ದೇಶವು ಬರುತ್ತದೆ (*Ep. Ind..* Vol. XXI, p. 229). ಈ ಶಾಸನದ ಕಾಲ ಎಂಟನೆಯ ಶತಮಾನ. ಮಲ್ಲಯ್ಯ ಮತ್ತು ಮಲ್ಲಾರಿ ಎಂಬ ಹೆಸರಿನ ಒಂದು ದೈವತವು ಕನ್ನಡನಾಡಿನಲ್ಲಿ ಲೋಕಪ್ರಿಯವಾಗಿದೆ. ಈ ದೇವತೆಯ ಮೂಲ ಮತ್ತು ಪ್ರಾಚೀನತೆ ಸಂದಿಗ್ಧವಾಗಿದ್ದು ಹಲವಾರು ಊಹೆಗಳಿಗೆ ಎಡೆಕೊಟ್ಟಿದೆ. ಮಹಾರಾಷ್ಟ್ರದಲ್ಲಿ ಈ ದೇವನಿಗೆ ಖಂಡೋಬನೆಂದು ಹೆಸರು. ಈ ದೇವನ ಉತ್ಸವವು ಮಾರ್ಗಶೀರ್ಷ ಮಾಸದಲ್ಲಿ ಬರುವುದು; ಅದರಲ್ಲಿ ಶುದ್ಧಷಷ್ಠಿಗೆ ಪ್ರಾಧಾನ್ಯವಿರುವುದು. ಹಲವರು ಈ ದೇವನನ್ನು ಕುರಿತು ನವರಾತ್ರವನ್ನೂ ಆಚರಿಸುವರು. ಈ ದೇವನು ಶಿವನೆಂದು ಕೆಲರು ಹೇಳುವರು. ಖಂಡೋಬ ಎಂಬ ಹೆಸರಿನಿಂದ ಈತನು ಶಿವನ ಮಗನಾದ ಸ್ಕಂದನಾಗಿರಬೇಕು ಎಂದು ಕೆಲರು ಊಹಿಸುವರು. ಆದರೆ ಮಲ್ಲಯ್ಯ—ಮಲ್ಲಾರಿ ಎಂಬವನು ವೈದಿಕದೇವತೆಯಾಗಿದ್ದು ಈತನಲ್ಲಿ ರುದ್ರ ಮತ್ತು ಇಂದ್ರನ ಸಂಯೋಗವನ್ನು ಕಾಣುವಂತಿದೆ ಎಂದು ಶ್ರೀ. ಜೋಶಿ ಶಂಕರರಾಯರು ಪ್ರತಿಪಾದಿಸಿದ್ದಾರೆ (ಕರ್ನಾಟಕದ ವೀರಕ್ಷತ್ರಿಯರು, ಪು. ೧೦೪). ಮೇಲಿನ ಶಾಸನದಂತೆ ಮಾರ್ಗಶೀರ್ಷ ಮಾಸದಲ್ಲಿ ಒಂದು ದೈವತವನ್ನು ಉದ್ದೇಶಿಸಿ ಅನೂಚಾನವಾಗಿ ಒಂದು ಉತ್ಸವದ ಪರಂಪರೆ ಪ್ರಾಚೀನಕಾಲದಿಂದ ನಡೆದುಬಂದಿದೆ ಎಂದು ಇಟ್ಟುಕೊಂಡರೆ ಆ ದೇವತೆಯ ಸ್ವರೂಪವು ದೇಶ ಮತ್ತು ಕಾಲಕ್ಕೆ ಅನುಗುಣವಾಗಿ ಪರಿವರ್ತನಹೊಂದಿದೆ ಎಂದೂ ಹೇಳಬಹುದು.

ಪುಷ್ಯ ಪೂರ್ಣಿಮೆಯ ಹೆಸರು ಬನದ ದೇವಿಯ ಹುಣ್ಣಿವೆಯ ಸಂಕ್ಷಿಪ್ತ ರೂಪ ಎಂಬುದನ್ನು ಹಿಂದೆ ಹೇಳಿದೆ. ಬನಶಂಕರಿಗೆ ಶಾಕಂಬರಿ, ಬನಾಯಿತ್ತಿ ಮೊದಲಾದ ಬೇರೆ ಹೆಸರುಗಳೂ ಪ್ರಯೋಗದಲ್ಲಿವೆ. ಈ ದೇವತೆ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಹೆಚ್ಚಾಗಿ ಜನಪ್ರಿಯತೆಯನ್ನು ಪಡೆದಿದ್ದಾಳೆ. ಈಕೆಯ ಭಕ್ತರು

ಬೇರೆ ಪ್ರಾಂತ್ಯದಲ್ಲಿಯೂ ಇದ್ದಾರೆ. ಆದರೆ ಈಕೆಯ ಮೂಲಸ್ಥಾನವು ಕರ್ನಾಟಕ ವಾಗಿದ್ದು, ಬಾದಾಮಿಯ ಬಳಿಯ ಬನಶಂಕರಿಯೆ ಈ ದೇವತೋಪಾಸನೆಯ ಮುಖ್ಯ ಕೇಂದ್ರವಾಗಿದ್ದಂತೆ ತೋರುತ್ತದೆ. ಬನಶಂಕರಿ ಗ್ರಾಮದಲ್ಲಿ ದೊರೆತ, ೧೧ನೆಯ ಶತಮಾನದ ಎರಡು ಶಾಸನಗಳಲ್ಲಿ ಈಕೆಯನ್ನು 'ಬನದ ದೇವಿ'ಯೆಂದು ಹೆಸರಿಸಿದೆ (*Bomb. Karn. Inscriptions*, vol. I,No. 501 and 60). 'ಬನದ ದೇವಿ' ವನಕ್ಕೆ ಅಧಿಷ್ಠಾತ್ರಿಯಾದ ವನದೇವತೆ. ಇಂತು ಈಕೆಯ ಉಪಾಸನೆಯ ಉಗಮವು ನಿಸರ್ಗಪೂಜೆಯಲ್ಲಿ ಪ್ರಾರಂಭವಾಗಿರಬೇಕು. ಮುಂದೆ ಈ ವನದೇವತೆಯಲ್ಲಿ ಶಂಕರೀ ಎಂದರೆ ಪಾರ್ವತಿಯ ಅಧಿಷ್ಠಾನವು ಆರೋಪಿತವಾಗಿರಬೇಕು. ಬನದ ಆಯಿ (ಆರ್ಯೆ) ಬನಾಯಿ, ಶಾಕಾಂಬರಿ (ಶಾಕಂಬರಿ) ಎಂದರೆ ಎಲೆಗಳ ಉಡುಪಿನವಳು ಎಂಬೀ ಹೆಸರುಗಳಾದರೂ ಈಕೆಯೆ ಮೂಲ ಸ್ವರೂಪವನ್ನು ಸೂಚಿಸುತ್ತವೆ. ಈಕೆಯ ಪೂಜಾವಿಧಾನದಲ್ಲಿಯೂ ಈಕೆಯ ಪ್ರಾಕೃತಿಕ ಮೂಲವನ್ನು ಕಾಣಬಹುದು.

ಪುಷ್ಯ ಅಮಾವಾಸ್ಯೆಯ ಅವರಾತ್ರಿ (ಇದರ ವಿಲರೂಪ 'ಅವರ್ತೆ') ಅಮಾವಾಸ್ಯೆ ಎಂಬ ನಾಮಕರಣದ ಯಥಾರ್ಥತೆಯನ್ನು ಕಂಡುಹಿಡಿಯುವುದು ಕಠಿನ ವಾಗಿದೆ. ಶಿವರಾತ್ರಿ ಅಮಾವಾಸ್ಯೆಯ ಹಿಂದಿನ ಅಮಾವಾಸ್ಯೆಯಾದುದರಿಂದ 'ಅವರ (=ಪೂರ್ವದ) ರಾತ್ರಿ' ಎಂಬುದರಿಂದ ಈ ಮಾತು ಬಂದಿರಬಹುದು ಎಂದು ಸೂಚಿಸಬಹುದಾದರೂ ಈ ಸೂಚನೆಯ ಸಮರ್ಪಕತೆ ಸರ್ವಮಾನ್ಯವಾಗಲಿಕ್ಕಿಲ್ಲ. ವಿಜಾಪುರ ಜಿಲ್ಲೆಯ ಐಹೊಳೆ ಗ್ರಾಮದ ಒಂದು ಶಾಸನದಲ್ಲಿ ಈ ಮುಂದೆ ಕಾಣಿಸಿದಂತೆ ತೇದಿ ಉಕ್ತವಾಗಿದೆ:—ಚಾಳುಕ್ಯ ವಿಕ್ರಮ ವರ್ಷದ ೮೨ ಈಶ್ವರ ಸಂವತ್ಸರ ಅವರೆ ವಸತಟಿ ಅಮವಾಸೆಯ ಮುಂದಣ ೧೩ ಮಂಗಳವಾರ' (*B. K.* No. 16 of 1928-29.) ಗುಣಿಸಿ ನೋಡಿದರೆ ಈ 'ಅವರೆ ವಸತಟಿ ಅಮವಾಸೆ' ಪುಷ್ಯ ಅಮಾವಾಸ್ಯೆಗೆ ಹೊಂದಿಕೆಯಾಗುತ್ತದೆ. 'ಅವರೆ ವಸತಟಿ' ಎಂಬೀ ಮಾತು ಇಂದಿನ ಅವರಾತ್ರಿ ಎಂಬುದನ್ನು ಹೋಲುತ್ತಿದ್ದು, ಇದರ ಮೂಲವೂ ಆಗಿರಬೇಕು ಎಂದು ತೋರುತ್ತದೆ. ಆದರೆ 'ಅವರೆ ವಸತಟಿ' ಎಂದರೆ ಏನು ? 'ಅವರೆ ಹೊಸತಟಿ' ಎಂಬುದರ ವಿಕೃತರೂಪ ಎಂದು ಹೇಳಿ ಅವರೆ ಧಾನ್ಯವು ಹೊಸದಾಗಿ ಬರುವ ಕಾಲ ಎಂದು ಅರ್ಥ ಮಾಡಬಹುದೆ ?

ಭಾರತ ಹುಣ್ಣಿವೆ, ಶಿವರಾತ್ರಿ ಅಮಾವಾಸ್ಯೆ, ಹೋಳಿ ಹುಣ್ಣಿವೆ ಮತ್ತು ಯುಗಾದಿ ಅಮಾವಾಸ್ಯೆ ಈ ಹೆಸರುಗಳು ಶಾಸನಸ್ಥವಾಗಿ ನನಗೆ ದೊರೆತಿಲ್ಲ. ಶಿವರಾತ್ರಿ ಅಮಾವಾಸ್ಯೆಗೆ ೧೨ನೆಯ ಶತಮಾನದ, ಲಕ್ಕುಂಡಿ ಗ್ರಾಮದ (ಧಾರವಾಡ ಜಿ.) ಒಂದು ಶಾಸನದಲ್ಲಿ 'ಕಾಮನ ಅಮಾವಾಸ್ಯೆ' ಎಂಬ ಹೆಸರು

ಉಕ್ತವಾಗಿದೆ (*B. K.* No. 42 of 1926-27). ಇದು ಕುತೂಹಲ ಪೂರ್ಣ ವಾಗಿದೆ. ಹಾಗಾದರೆ ಈಗ ಪ್ರಚುರವಾಗಿರುವ ಶಿವರಾತ್ರಿ ಅಮಾವಾಸ್ಯೆ ಎಂಬ ನಾಮಕರಣವು ಈಚೆಗೆ ರೂಢಿಯಲ್ಲಿ ಬಂದುದೆ? ಕಾಮನಿಗೇಕೆ ಈ ಹಿರಿಮೆ? ಎಂದು ಶಿವಭಕ್ತರು ಆತನನ್ನು ತಳ್ಳಿಹಾಕಿದರೆ? ಸುಮಾರು ಅದೇ ಶತಮಾನದ ಬಳ್ಳಾರಿ ಜಿಲ್ಲೆಯ ಬಾಗಲಿ ಗ್ರಾಮದ ಒಂದು ಶಾಸನವು ಫಾಲ್ಗುನ ಅಮಾವಾಸ್ಯೆ ಯನ್ನು 'ತಳಿತಮಾವಾಸ್ಯೆ' ಎಂದು ನಿರ್ದೇಶಿಸುತ್ತಗೆ. (*S. I. I.*, vol. IX, pt. I, No. 201). ಈ ಹೆಸರು ಪ್ರಾಕೃತಿಕ ದೃಷ್ಟಿಯಿಂದ ಸುಂದರವೂ ಸಮರ್ಪಕವೂ ಆಗಿದೆ.

ಮೇಲಿನ ವಿವೇಚನೆ ಸಂಕ್ಷಿಪ್ತವಾಗಿದೆ; ಅಪೂರ್ಣವಾಗಿದೆ. ಸಹಜವಾಗಿ ನನ್ನ ವ್ಯಾಸಂಗದಲ್ಲಿ ಇದಿರಾದ ಸಂಗತಿಗಳನ್ನು ಕೆಲಮಟ್ಟಿಗೆ ಶೋಧಿಸಿ ಚರ್ಚಿ ಸಿದ್ದೇನೆ. ಈ ಚರ್ಚೆ ಸಾಹಿತ್ಯ ಮತ್ತು ಶಾಸನಸಾಹಿತ್ಯಗಳ ಕೂಲಂಕಷ ಅಧ್ಯಯನದ ಫಲಗಳಿಂದ ಕೂಡಿದುದಾಗಿಲ್ಲ. ನಮ್ಮ ನಾಡಿನ ಬೇರೆಬೇರೆ ಭಾಗಗಳ ವಿವರಗಳೂ ಇದರಲ್ಲಿ ಬಂದಿಲ್ಲ. ನಮ್ಮ ನೆರೆಯ ಮಹಾರಾಷ್ಟ್ರ, ಆಂಧ್ರ ಮತ್ತು ತಮಿಳ ನಾಡಿನೊಡನೆ ಹೋಲಿಸಿ ನೋಡಿ, ಈ ಸಾಂಸ್ಕೃತಿಕ ಅವಶೇಷಗಳ ಅಸ್ತಿತ್ವ, ಅಭಾವ, ಸಾಮ್ಯ, ವೈಶಿಷ್ಟ್ಯ, ವೈಷಮ್ಯ ಮುಂತಾದ ವಿವರಗಳನ್ನು ಸೂಕ್ಷ್ಮವಾಗಿ ಕಂಡುಹಿಡಿಯುವುದು ಮನೋರಂಜಕವೂ ಉದ್ಬೋಧಕವೂ ಆಗಬಹುದಾದ ವಿಷಯ. ಇದು ಒಂದು ಸ್ವತಂತ್ರ ಗ್ರಂಥದ ವಸ್ತುವಾದೀತು. ಪ್ರಸ್ತುತ ಪ್ರಬಂಧವು ಇಂತಹ ಭಾವೀವ್ಯಾಸಂಗಕ್ಕೆ ದಿಗ್ದರ್ಶನ ಮಾತ್ರ.

ದೇಸಾಯಿ ಪಾಂಡುರಂಗರಾಯರು.

ಸೇತುವೆಗಳ ನಿರ್ಮಾಣ ಶಿಲ್ಪ

'ಶಿಲ್ಪ ತತ್ವರಹಸ್ಯ' ವೆಂಬ ಒಂದು ಪ್ರಾಚೀನ ಕನ್ನಡ ಗ್ರಂಥದಲ್ಲಿ ಹದಿನೆಂಟು ಶಿಲ್ಪರಹಸ್ಯ ವಿಷಯಗಳು ಅಡಕವಾಗಿವೆ. ಅವುಗಳಲ್ಲಿ ಒಂದೊಂದೂ ಅದ್ಭುತವಾದ ಶಿಲ್ಪವಿಜ್ಞಾನವನ್ನು ಪ್ರದರ್ಶಿಸುತ್ತದೆ. ಮಾದರಿಗಾಗಿ ಸೇತುವೆಗಳ ನಿರ್ಮಾಣ ಶಿಲ್ಪವನ್ನು ಇಲ್ಲಿ ಉದ್ಧರಿಸಿಕೊಟ್ಟಿದೆ.

"ಮಹಾಪಾತಕ ಕಡಲ್ಗಳಂ ಕಡೆಹಾಯಲು ವೇದ ಶಾಸ್ತ್ರ ಪುರಾಣಂಗಳೇ ಸೇತುಕಲ್ಪವು. ಈ ಸೇತುಕಲ್ಪ ಸೂತ್ರಾಂಶಗಳನರಿವುದೇ ಶಿಲ್ಪಕಲ್ಪವು"—ಇದು ಒಂದು ತತ್ವರಹಸ್ಯ.

ಇದರ ಬಾಹ್ಯಾರ್ಥ ಜೀವನತತ್ವಕ್ಕೆ ಸಂಬಂಧಪಟ್ಟುದು. ಗೂಢಾರ್ಥ ಶಿಲ್ಪ ತತ್ವವನ್ನು ಪ್ರಕಾಶಿಸತಕ್ಕದು. ಪಂಚಮಹಾಪಾತಕಗಳೆಂಬ ಸಮುದ್ರವನ್ನು ದಾಟಲು ವೇದ ಶಾಸ್ತ್ರ ಪುರಾಣಗಳಲ್ಲಿ ಹೇಳಿರುವ ನಡೆವಳಿಕೆಗಳೇ ಸೇತುವೆಯಂತಿದೆ ಎಂಬುದು ಅದರ ಮೇಲ್ಮಯ್ಯಲ್ಲಿ ಕಾಣುವ ಅರ್ಥ. ಆದರೆ ಅದರ ಶಿಲ್ಪರಹಸ್ಯದ ರೀತಿ ಬೇರೆ.—ಸೇತುವೆಯ ನಿರ್ಮಾಣಕ್ಕೆ ಸಂಬಂಧಪಟ್ಟ ಬೇರೆ ಬೇರೆ ಅಳತೆಗಳನ್ನು ಇದರಲ್ಲಿ ಸಾಂಕೇತಿಕವಾಗಿ ನಿರೂಪಿಸಿದೆ. ಮಹಾಪಾತಕ=೫, ಕಡಲುಗಳು=೭, ವೇದ=೪ ಶಾಸ್ತ್ರ=೬, ಪುರಾಣಗಳು=೧೮ ಈ ಸಂಖ್ಯೆಗಳು ಸೇತುವೆಯ ಯಾವ ಭಾಗದ ಅಳತೆಯ ಅಂಶಗಳು ಎಂಬುದನ್ನು ತಿಳಿಯುವುದೇ ಶಿಲ್ಪರಹಸ್ಯ. ಸೇತುವೆಯ ಕಮಾನಿನ ಉದ್ದದ ೧/೪ ರಿಂದ ೧/೫ ಭಾಗವು ಕಡೆಯ ಕಂಬಗಳ ದಪ್ಪ; ೧/೬ ರಿಂದ ೧/೭ ಭಾಗವು ಮಧ್ಯದ ಕಂಭಗಳ ದಪ್ಪ, ೧/೫ ರಿಂದ ೧/೬ ಭಾಗವು ಎತ್ತರ; ಕಮಾನಿನ ದಪ್ಪವು ೧/೧೮ ಅಂಶ. ಈ ರೀತಿ ಕಟ್ಟಿದ ಸೇತುವೆಯು ಅತ್ಯುತ್ತಮವಾದುದು.

ಈ ಅಳತೆಗಳು ಆಧುನಿಕ ಶಿಲ್ಪಶಾಸ್ತ್ರಜ್ಞರ ಚಿರಪರಿಶೋಧಿತವಾದ ಅಳತೆಗಳಿಗೆ ಸರಿಸಮನಾಗಿವೆ. ಇದರಿಂದ ನಮ್ಮ ಪ್ರಾಚೀನರ ಶಿಲ್ಪಶಾಸ್ತ್ರಜ್ಞಾನದ ಉಚ್ಚ ಮಟ್ಟವನ್ನು ಸುಲಭವಾಗಿ ಊಹಿಸಿಕೊಳ್ಳಬಹುದು.

ಎಂ. ಜಿ. ಶಿಂಗ್ರಯ್ಯಂಗಾರ್.

ಭಾರತ ರಾಜ್ಯನಿಬಂಧನೆ ಅಥವಾ ಸಂವಿಧಾನ

ಅಧ್ಯಾಯ ೧

ಭಾರತ ಸಂವಿಧಾನದ ಹಿನ್ನೆಲೆ—ಅವಿಚ್ಛಿನ್ನವಾಗಿ ಬೆಳೆದು ಬಂದಿರುವ ರಾಜ್ಯಗಳಲ್ಲಿ ಭಾರತ ಒಂದು ಸುಪ್ರಸಿದ್ಧ ರಾಜ್ಯ. ಈ ದೇಶ ಎಷ್ಟು ಪುರಾತನವೋ ಅದರ ಸಂಸ್ಕೃತಿ ಅಷ್ಟೇ ಹಳೆಯದು ಹಾಗೂ ಪ್ರಖ್ಯಾತವಾದದ್ದು. ಇದರ ರಾಜಕೀಯ ಸೂತ್ರ ಒಂದೊಂದು ಕಾಲದಲ್ಲಿ ಒಂದೊಂದು ಬುಡಕಟ್ಟಿನ ಜನರ ವಶವಾಗಿ ಸಾಮಾಜಿಕ ಸ್ಥಿತಿಗತಿಗಳನ್ನು ಆಗಿಂದಾಗ್ಯೆ ಬದಲಾಯಿಸಿರುವುದು ಈ ದೇಶದ ಚರಿತ್ರೆಯ ವೈಶಿಷ್ಟ್ಯ. ಬ್ರಿಟಿಷರು ಭಾರತವನ್ನು ವಶಪಡಿಸಿಕೊಂಡು ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಿದ್ದು ಇಂಥ ವಿಪರ್ಯದ ಒಂದು ಮುಖ್ಯವಾದ ಘಟ್ಟ. ಇಂಗ್ಲೆಂಡಿನ ಸರ್ಕಾರದ ಅಪ್ಪಣೆಯ ಮೇರೆಗೆ ಸ್ಥಾಪಿತವಾದ ಈಸ್ಟ್ ಇಂಡಿಯ ಕಂಪೆನಿ ಎಂಬ ವಾಣಿಜ್ಯ ಸಂಸ್ಥೆ ಈ ದೇಶಕ್ಕೆ ಬಂದು, ಸೂರತ್, ಮದರಾಸ್, ಬೊಂಬಾಯಿ, ಕಲ್ಕತ್ತಾಗಳಲ್ಲಿ ಠಾಣ್ಯವನ್ನು ಹೂಡಿ, ಮೊಗಲರ ಸಾಮ್ರಾಜ್ಯವೂ ಮರಾಠರ ಆಧಿಪತ್ಯವೂ ಕೊನೆಗಂಡ ಮೇಲೆ ರಾಜಕೀಯ ರಂಗವನ್ನು ಪ್ರವೇಶಿಸಿತು. ಬಂಗಾಳದ ನವಾಬನ ಮೇಲೆ ಜಯಗಳಿಸಿದ ಕಂಪೆನಿಗೆ ಬರ್ದವಾನ್, ಚಿತ್ತಗಾಂಗ್, ಮಿಡ್ನಾಪುರ ಇವು ವಶವಾದುವು. ಈ ಪ್ರಾಂತಗಳ ಕಂದಾಯ (ದಿವಾನಿ) ವಸೂಲ್ ಮಾಡುವ ಹಕ್ಕು ಕಂಪೆನಿಗೆ ದೊರೆತದ್ದರಿಂದ ಅಪಾರ ದ್ರವ್ಯ ಲಭಿಸಿತು. ಕಂಪೆನಿಯ ನೌಕರರು ವ್ಯಾಪಾರದಿಂದ ಕುಬೇರರಾದರು. ಕಂಪೆನಿಯ ರಾಷ್ಟ್ರವೂ ಕ್ರಮೇಣ ಬೆಳೆಯುತ್ತಾ ಬಂತು.

ಈಸ್ಟ್ ಇಂಡಿಯ ಕಂಪೆನಿಗೆ ಸೇರಿದ ಪ್ರಾಂತಗಳ ಆಡಳಿತ ಬಹು ಮುಖ್ಯವೆಂದು ಭಾವಿಸಿ ಆಂಗ್ಲೇಯ ಸರ್ಕಾರ 'ರೆಗ್ಯುಲೇಟಿಂಗ್ ಆಕ್ಟ್' ಎಂಬ ಶಾಸನವನ್ನು ಆಚರಣೆಗೆ ತಂದಿತು. ಬಂಗಾಳದಲ್ಲಿ ಒಂದು ಕೇಂದ್ರ ಸರ್ಕಾರ ಏರ್ಪಾಡಾಗಿ ವಾರನ್ ಹೇಸ್ಟಿಂಗ್ಸನು ಮೊದಲನೆಯ ಗೌರ್ನರ್ ಜನರಲ್ ಆದನು. ಕಂಪೆನಿಯ ರಾಷ್ಟ್ರಗಳ ಮೇಲಿನ ಅಧಿಕಾರ ಇವನ ವಶವಾಯಿತು. ಇವನ ಸಹಾಯಕ್ಕಾಗಿ ನಾಲ್ಕು ಸದಸ್ಯರಿಂದ ಕೂಡಿದ ಸಮಿತಿ ಸ್ಥಾಪಿತವಾಯಿತು. ಜೊತೆಗೆ ಗೌರ್ನರ್ ಜನರಲ್ಲಿನ ನಿರಂಕುಶ ಪ್ರಭುತ್ವವೂ ಪ್ರಾರಂಭವಾಯಿತು. ಈ ಏರ್ಪಾಡು ಅಸಮರ್ಪಕವೆಂದು ತಿಳಿದ ಇಂಗ್ಲೆಂಡಿನ ಮಂತ್ರಿ ಪಿಟ್ಟನು ಇನ್ನೊಂದು ಇಂಡಿಯ ಶಾಸನವನ್ನು ರೂಢಿಗೆ ತಂದನು. ಇದರ ಪರಿಣಾಮವಾಗಿ ಪಾರ್ಲಿಮೆಂಟಿನಿಂದ ಸ್ಥಾಪಿತವಾದ ಆರು

ಸದಸ್ಯರಿಂದ ಕೂಡಿದ 'ಬೋರ್ಡ್ ಆಫ್ ಕಂಟ್ರೋಲ್' ಎಂಬ ಸಮಿತಿ ಕಂಪೆನಿಯ ಹಣಕಾಸಿನ ಮೇಲಿನ ಹಾಗೂ ಸೈನ್ಯ ಇಲಾಖೆಯ ಕಾಗದ ಪತ್ರಗಳ ಮೇಲಿನ ಅಧಿಕಾರವನ್ನು ವಹಿಸಿತು. ಗೌರ್ನರ್ ಜನರಲ್ಲಿನ ಮತ್ತು ಪ್ರಾಂತಗಳ ಕಾರ್ಯಾಂಗದ ಸಲಹಾ ಸಮಿತಿಗೆ ಮೂರು ಸದಸ್ಯರಿರಬೇಕೆಂದು ವಿಧಾಯಕವಾಯಿತು. ೧೭೯೩ ರಲ್ಲಿ ಪಾರ್ಲಿಮೆಂಟ್ ಕಂಪೆನಿಗೆ ೨೦ ವರ್ಷ ಜೀವದಾನ ಕೊಟ್ಟು ಅದರ ಅಧಿಕಾರವನ್ನು ಮೊಟಕುಮಾಡಿತು. ೧೮೧೩ ನೆಯ ಇಸ್ವಿಯ ಸನ್ನದಿನ ಪ್ರಕಾರ ಕಂಪೆನಿಯ ರಾಷ್ಟ್ರಗಳು ಬ್ರಿಟಿಷ್ ಸರ್ಕಾರಕ್ಕೆ ಸೇರಬೇಕೆಂದೂ ೧೮೩೩ ನೆಯ ಇಸ್ವಿಯ ಸನ್ನದಿನ ಪ್ರಕಾರ ಕಂಪೆನಿ ವಾಣಿಜ್ಯವನ್ನು ಬಿಟ್ಟು ರಾಜಕೀಯದ ಕಡೆಗೆ ತನ್ನ ಗಮನವನ್ನು ತಿರುಗಿಸಬೇಕೆಂದೂ ಆಂಗ್ಲೇಯ ಸರ್ಕಾರ ವಿಧಿಸಿತು. ಗೌರ್ನರ್ ಜನರಲ್ಲಿನ ಸಮಿತಿಯ ಸದಸ್ಯರ ಸಂಖ್ಯೆ ನಾಲ್ಕು ಇರಬೇಕೆಂದೂ ಇವರಲ್ಲಿ ಒಬ್ಬನು ನ್ಯಾಯ ಶಾಸ್ತ್ರಜ್ಞನಾಗಿರಬೇಕೆಂದೂ ವ್ಯವಸ್ಥೆಯಾಯಿತು. ಈ ಸ್ಥಾನಕ್ಕೆ ಬಂದು ತನ್ನ ನೇತೃತ್ವದಲ್ಲಿ ದಂಡನೆಯ ಕಾನೂನುಗಳನ್ನು ಕ್ರೋಢೀಕರಿಸಿದವನೇ ಸುಪ್ರಸಿದ್ಧನಾದ ಮಕಾಲೆ. ಇದೇ ಸಮಯದಲ್ಲಿ ಕಂಪೆನಿಯ ಪರವಾಗಿ ಕಾನೂನುಗಳನ್ನು ರಚಿಸುವ ಹಾಗೂ ರದ್ದುಗೊಳಿಸುವ ಅಧಿಕಾರ ಗೌರ್ನರ್ ಜನರಲ್ಲಿಗೆ ದೊರೆಯಿತು. ೧೮೫೩ ನೆಯ ಇಸ್ವಿಯ ಸನ್ನದು ಗೌರ್ನರ್ ಜನರಲ್ಲಿನ ಸಮಿತಿಯ ಸದಸ್ಯರ ಸಂಖ್ಯೆ ೧೨ ಇರಬೇಕೆಂದೂ ಇನ್ನು ಮುಂದೆ ಆಡಳಿತಾಧಿಕಾರಿಗಳನ್ನು ಬ್ರಿಟಿಷ್ ಸರ್ಕಾರವೇ ನೇಮಿಸಬೇಕೆಂದೂ ನಿರ್ಧರಿಸಿತು.

೧೮೫೭ ನೆಯ ಇಸ್ವಿಯಲ್ಲಿ ನಡೆದ ಸಿಪಾಯಿದಂಗೆ ಅಥವಾ ಭಾರತೀಯರ ಪ್ರಥಮ ಸ್ವಾತಂತ್ರ್ಯದ ಹೋರಾಟವು ಪರಿಣಾಮಕಾರಿಯಾದ ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಗಳಿಗೆ ಅಸ್ತಿಭಾರಹಾಕಿತು. ಕಂಪೆನಿಯ ರಾಷ್ಟ್ರಗಳ ಆಡಳಿತವು ಬ್ರಿಟಿಷ್ ರಾಜನಿಗೆ ವರ್ಗಾಯಿಸಲ್ಪಟ್ಟು ಅಂದಿನಿಂದ ಕಂಪೆನಿಯ ನಿಯೋಜಿತಾಧಿಕಾರದ ಸ್ಥಾನದಲ್ಲಿ ಬ್ರಿಟಿಷ್ ರಾಜನ ಸಾರ್ವಭೌಮತ್ವಾಧಿಕಾರ ಪ್ರಾರಂಭವಾಯಿತು. ೧೮೫೮ ನೆಯ ಇಸ್ವಿಯ ಶಾಸನದ ಪ್ರಕಾರ ಈ ದೇಶದ ಆಡಳಿತದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಸೆಕ್ರೆಟರಿ ಆಫ್ ಸ್ಟೇಟ್ ಎಂಬ ಉನ್ನತಾಧಿಕಾರಿಯ ಸ್ಥಾನವೂ, ಅವನ ಸಹಾಯಕ್ಕಾಗಿ ೧೫ ಸದಸ್ಯರಿಂದ ಕೂಡಿದ ಒಂದು ಸಲಹಾ ಸಮಿತಿಯೂ ಸ್ಥಾಪಿತವಾದುವು; ಗೌರ್ನರ್ ಜನರಲ್ಲಿನ ನೇರವಾದ ಆಡಳಿತ ಸೆಕ್ರೆಟರಿ ಆಫ್ ಸ್ಟೇಟಿನ ಮತ್ತು ಪಾರ್ಲಿಮೆಂಟಿನ ಹತೋಟಿಗೆ ಒಳಪಟ್ಟಿತು. ಇಂಗ್ಲಿಷರು ಭಾರತವನ್ನು ಇಂಗ್ಲೆಂಡಿನಿಂದಲೇ ಆಳಲುಪಕ್ರಮಿಸಿದರು. ಭಾರತೀಯರ ಸಲಹೆ, ಸಹಾಯ, ಸಹಕಾರಗಳನ್ನು ಅಪೇಕ್ಷಿಸಲು ಇಂಗ್ಲಿಷರು ಯತ್ನಿಸಲಿಲ್ಲ. ಬ್ರಿಟಿಷರ

ಆಳಿಕೆ ಪ್ರಜಾಪ್ರಭುತ್ವ ತತ್ವ ಮತ್ತು ಪ್ರಜಾಭಿಪ್ರಾಯಗಳಿಂದ ಸ್ವಲ್ಪಮಟ್ಟಿಗೆ ಮೃದು ಮಾಡಲ್ಪಟ್ಟಿದ್ದರೂ ಒಟ್ಟಿನಲ್ಲಿ ಆಡಳಿತ ಪದ್ಧತಿ ನಿರಂಕುಶ ಪ್ರಭುತ್ವದ ಮಾರ್ಗವನ್ನೇ ಹಿಡಿದಿತ್ತು.

ಬ್ರಿಟಿಷರ ಆಳಿಕೆ ಪ್ರಜಾಮತಕ್ಕನುಸಾರವಾಗಿಲ್ಲದಿದ್ದರೂ ಪ್ರಜಾನುರಾಗ ಸಂಪಾದಿಸದಿದ್ದರೂ, ದಕ್ಷತೆಯನ್ನೂ ದರ್ಪವನ್ನೂ ತೋರಿ ಸಾಮಾಜಿಕ ಸ್ಥಿತಿಗತಿಗಳನ್ನು ಭದ್ರಪಡಿಸಿ ದೇಶದಾದ್ಯಂತದಲ್ಲೆಲ್ಲಾ ಶಾಂತಿಯನ್ನೂ ಶಿಸ್ತನ್ನೂ ಸ್ಥಾಪಿಸಿತು. ೧೮೬೧ ರಲ್ಲಿ 'ಇಂಡಿಯ ಹೈಕೋರ್ಟು ಶಾಸನ' ಜಾರಿಗೆ ಬಂದು ಮುಖ್ಯಪ್ರಾಂತಗಳಲ್ಲಿ ಹೈಕೋರ್ಟುಗಳು ಸ್ಥಾಪಿತವಾದುವು. 'ಇಂಡಿಯ ಕೌನ್ಸಿಲ್ ಆಕ್ಟ್' ಆಚರಣೆಗೆ ಬಂದುದರಿಂದ ಎಲ್ಲಾ ಪ್ರಾಂತಗಳಲ್ಲಿಯೂ ನ್ಯಾಯವಿಧಾಯಕ ಸಭೆಗಳು ಸ್ಥಾಪಿತವಾದುವು ಅಥವಾ ಪುನರ್ರಚಿತವಾದುವು. ಈ ಸಭೆಗಳಿಗೆ ಖಾಸಗಿ ಸದಸ್ಯರನ್ನು ನೇಮಿಸುವ ಸಂಪ್ರದಾಯ ಪ್ರಾರಂಭವಾಯಿತು. ೧೮೯೨ರಲ್ಲಿ ಗೌರ್ನರ್ ಜನರಲ್ಲಿನ ಸಮಿತಿಯ ಸದಸ್ಯರ ಸಂಖ್ಯೆ ೧೬ಕ್ಕೆ ಏರಿತು. ಇವರಲ್ಲಿ ೧೦ ಮಂದಿ ಅಧಿಕಾರಿಗಳು, ೬ ಮಂದಿ ಖಾಸಗಿ ಸದಸ್ಯರೂ ಇದ್ದರು. ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣಪಡೆಯಲು ಭಾರತೀಯರಿಗೆ ಉತ್ತೇಜನ ದೊರಕಿದುದರಿಂದ ಕೆಲವು ಮೇಧಾವಿಗಳು ಆಂಗ್ಲೇಯ ತತ್ವಶಾಸ್ತ್ರ, ರಾಜ್ಯಶಾಸ್ತ್ರಗಳನ್ನು ಮನನಮಾಡಿ ಅವುಗಳಲ್ಲಿ ಅಡಕವಾಗಿದ್ದ ಉದಾತ್ತ ತತ್ವಗಳನ್ನೂ ಧ್ಯೇಯಗಳನ್ನೂ ಅನುಷ್ಠಾನಕ್ಕೆ ತರಲು ಯತ್ನಿಸಿದರು. ಭಾರತೀಯರಿಗೆ ಹುರಿದುಂಬಿಸಿದ ಶಾಸ್ತ್ರಗ್ರಂಥಗಳಲ್ಲಿ ಎಡ್‌ಮೆಂಡ್ ಬರ್ಕ್, ಜಾನ್‌ಸ್ಟೂಯರ್ಟ್‌ಮಿಲ್, ಮಕಾಲೆ ಇವರ ಗ್ರಂಥಗಳು ಮುಖ್ಯವಾದುವು. ಈ ಈ ಗ್ರಂಥಗಳಿಂದ ಹೊಸ ತತ್ವಗಳನ್ನು ಕಲಿತ ಕೆಲವು ವ್ಯಕ್ತಿಗಳು ತಮ್ಮ ಗಮನವನ್ನು ರಾಜಕೀಯದ ಕಡೆಗೆ ತಿರುಗಿಸಿ ಬ್ರಿಟಿಷರ ದಬ್ಬಾಳಿಕೆಯ ನೀತಿಯನ್ನೂ ಜನತೆಯ ದೈನಂದಿನ ಜೀವನದಲ್ಲಿ ಅವರು ತೋರಿಸುತ್ತಿದ್ದ ಅನುಪಯುಕ್ತವಾದ ಅಧಿಕಾರಿಗಳ ವರ್ತನೆಯನ್ನೂ ಪ್ರತಿಭಟಿಸಿ ಪ್ರತಿನಿಧಿ ಸರ್ಕಾರ ಮತ್ತು ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಒತ್ತಾಯಪಡಿಸಲುಪಕ್ರಮಿಸಿದರು. ಈ ಚಳುವಳಿಗಳ ಗೊಂದಲದಲ್ಲಿ ೧೮೮೫ ರಲ್ಲಿ 'ಇಂಡಿಯನ್ ನ್ಯಾಷನಲ್ ಕಾಂಗ್ರೆಸ್' ಜನ್ಮವೆತ್ತಿತು. ಬ್ರಿಟಿಷರ ಸಹಾಯದಿಂದ ಇದು ಜನ್ಮವೆತ್ತಿದರೂ ಭಾರತೀಯರನ್ನು ಬ್ರಿಟಿಷರ ಪರಾಧೀನತೆಯ ಸಂಕೋಲದಿಂದ ಬಿಡಿಸಿ ದೇಶದಲ್ಲಿ ಸ್ವತಂತ್ರ ಸರ್ಕಾರ ಹೂಡುವುದು ಇದರ ಪರಮ ಧ್ಯೇಯವಾಗಿ ಪರಿಣಮಿಸಿತು. ಲಾರ್ಡ್ ಕರ್ಜನ್ ಮಹಾಶಯನ ಅಧಿಕಾರ ದರ್ಪ, ಸಾಮ್ರಾಜ್ಯವಾದಿತ್ವ, ಬಂಗಾಳ ದ್ವಿಭಜನೆ ಇವೇ ಮೊದಲಾದವುಗಳಿಂದ ಜನತೆಯ ಅಸಮಾಧಾನ, ಅತೃಪ್ತಿ, ಆಕ್ರೋಶಗಳು ಮತ್ತಷ್ಟು ಹೆಚ್ಚಿದವು.

ರಾಜನೀತಿಪಟುಗಳಾದ ಇಂಗ್ಲಿಷರು ಉದ್ರೇಕಗೊಂಡ ಜನರನ್ನು ಸಮಾಧಾನಗೊಳಿಸಲು ೧೯೦೯ನೆಯ ವರುಷದ 'ಇಂಡಿಯ ಶಾಸನ'ವನ್ನು (ಮಿಂಟೊ-ಮಾರ್ಲಿ ಸುಧಾರಣೆಯನ್ನು) ಆಚರಣೆಗೆ ತಂದರು. ಆಡಳಿತದ ವಿವಿಧ ಭಾಗಗಳಲ್ಲಿ ಇಂಗ್ಲಿಷರ ಹಕ್ಕೋಟೆಯನ್ನು ಬಲಪಡಿಸಿ, ಆಳಿಕೆಯನ್ನು ತಕ್ಕಮಟ್ಟಿಗೆ ಜನರಂಜಕವನ್ನಾಗಿ ಮಾಡುವುದು, ನ್ಯಾಯವಿಧಾಯಕ ಸಭೆಗಳ ಸದಸ್ಯರ ಸಂಖ್ಯೆಯನ್ನೂ ಜನತೆಯ ವಿವಿಧ ಪಂಗಡಗಳ ಪ್ರಾತಿನಿಧ್ಯವನ್ನೂ ಹೆಚ್ಚಿಸುವುದು, ಈ ಶಾಸನದ ಗುರಿ; ಜವಾಬ್ದಾರಿ ಸರ್ಕಾರ ಸ್ಥಾಪನೆಯಲ್ಲ. ಮದರಾಸ್, ಬೊಂಬಾಯ್ ಸಭೆಗಳಿಗೆ ೫೦ ಪ್ರತಿನಿಧಿಗಳು, ಪಂಜಾಬ್, ಬಂಗಾಳ ಸಭೆಗಳಿಗೆ ೩೦ ಪ್ರತಿನಿಧಿಗಳು, ಕೇಂದ್ರ ನ್ಯಾಯವಿಧಾಯಕ ಸಭೆಗೆ ೬೦ ಪ್ರತಿನಿಧಿಗಳು ಎಂದು ಈ ಶಾಸನ ವಿಧಿಸಿತು. ಸ್ವಲ್ಪ ಕಾಲದಲ್ಲಿಯೇ ಕೇಂದ್ರ ಸಭೆಯ ಸದಸ್ಯರ ಸಂಖ್ಯೆ ೬೮ಕ್ಕೆ ಏರಿತು. ಇವರಲ್ಲಿ ೪೧ ನಾಮಕರಣ ಸದಸ್ಯರೂ ೨೭ ಚುನಾಯಿತ ಸದಸ್ಯರೂ ಇದ್ದರು (ಗೌರ್ನರ್ ಜನರಲ್ಲಿನ ಕಾರ್ಯಾಂಗ ಸಮಿತಿಯ ೬ ಸದಸ್ಯರು, ಪ್ರಧಾನ ಸೇನಾನಾಯಕ, ಪ್ರಾಂತಗಳ ಒಬ್ಬ ಪ್ರತಿನಿಧಿ, ೩೩ ನಾಮಕರಣ ಸದಸ್ಯರು ಒಟ್ಟು ೪೧ ಮಂದಿ ನಾಮಕರಣ ಸದಸ್ಯರು; ೧೩ ಪ್ರಾಂತೀಯ ಚುನಾಯಿತ ಸದಸ್ಯರು, ೬ ಜಮೀನು ದಾರರ ಪ್ರತಿನಿಧಿಗಳು, ೬ ಮುಸಲ್ಮಾನರ ಪ್ರತಿನಿಧಿಗಳು, ಬೊಂಬಾಯಿ, ಕಲ್ಕತ್ತ ವಾಣಿಜ್ಯ ಸಂಸ್ಥೆಗಳ ೩ ಪ್ರತಿನಿಧಿಗಳು ಒಟ್ಟು ೨೭ ಚುನಾಯಿತ ಸದಸ್ಯರು). ಕೋಮುವಾರು ಪ್ರಾತಿನಿಧ್ಯ ಪದ್ಧತಿಯನ್ನು ಪ್ರಾರಂಭಿಸಿ ಸಮಾಜವನ್ನು ಒಡೆಯುವ ವಿಷಬೀಜವನ್ನು ಮಾರ್ಲಿ ಮಹಾಶಯ ಬಿತ್ತಿದನು. ಸೆಕ್ರೆಟರಿ ಆಫ್ ಸ್ಟೇಟಿನ ಸಲಹಾಸಮಿತಿಗೆ ಇಬ್ಬರು ಭಾರತೀಯರು, ಗೌರ್ನರ್‌ಜನರಲ್ಲಿನ ಕಾರ್ಯಾಂಗ ಸಮಿತಿಗೆ ಒಬ್ಬ ಭಾರತೀಯ, ಪ್ರಾಂತಗಳ ಕಾರ್ಯಾಂಗ ಸಮಿತಿಗೆ ಒಬ್ಬೊಬ್ಬ ಭಾರತೀಯ ಸದಸ್ಯರಿರಬೇಕೆಂದು ಹೊಸ ಶಾಸನ ವಿಧಿಸಿತು. ಮಧ್ಯಮ ಮಾರ್ಗಗಾಮಿಯಾದ ಜಿ. ಕೆ. ಗೋಖಲೆ ತನ್ನ ಕಾಂಗ್ರೆಸ್ಸಿನ ಅಧ್ಯಕ್ಷ ಭಾಷಣದಲ್ಲಿ ಮೇಲ್ಕಂಡ ಸುಧಾರಣೆಯನ್ನು ಸಮರ್ಥಿಸಿದರೂ ಅದು ಪ್ರಜಾನಾಯಕರನ್ನು ಸಂತೋಷಗೊಳಿಸಲಿಲ್ಲ.

೧೯೧೪ರಲ್ಲಿ ಮಹಾಯುದ್ಧ ಪ್ರಾರಂಭವಾದಾಗ ಭಾರತೀಯರು ತಮ್ಮ ತನು, ಮನ, ಧನಗಳಿಂದ ಸಹಾಯ ನೀಡಬೇಕೆಂದು ಇಂಗ್ಲಿಷರು ಅಪೇಕ್ಷಿಸಿದರು. ಸಂದರ್ಭಕ್ಕೆ ತಕ್ಕ ಯೋಗ್ಯತೆಯನ್ನೂ ಉದಾರತೆಯನ್ನೂ ಸಾಮರ್ಥ್ಯವನ್ನೂ ತೋರಿಸಲು ಭಾರತೀಯರು ಹಿಂಜರಿಯಲಿಲ್ಲ. ಇಂಗ್ಲಿಷರ ಪಕ್ಷಕ್ಕೆ ಜಯವಾಯಿತು. ಆದರೇನು? ಭಾರತೀಯರು ನಿರೀಕ್ಷಿಸಿದಂತೆ ದೇಶಕ್ಕೆ ಸ್ವಾತಂತ್ರ್ಯ ದೊರೆಯಲಿಲ್ಲ. ಇದಕ್ಕೆ

ಬದಲಾಗಿ ಇಂಗ್ಲಿಷ್ ಸರ್ಕಾರ ೧೯೧೭ ರಲ್ಲಿ ಒಂದು ಘೋಷಣೆಯನ್ನು ಹೊರಡಿಸಿತು. ಇಂಡಿಯ ಆಡಳಿತದ ವಿವಿಧ ಭಾಗಗಳನ್ನು ಹೆಚ್ಚಾಗಿ ಭಾರತೀಯರ ನೇರವಾದ ಸಹಾಯ ಸಹಕಾರಗಳಿಂದ ನಡೆಸಬೇಕು; ಸ್ವರಾಜ್ಯಾಧಿಕಾರವುಳ್ಳ ಸಂಸ್ಥೆಗಳನ್ನು ದೇಶದಲ್ಲಿ ಹೆಚ್ಚಿಸಿ ವೃದ್ಧಿಗೊಳಿಸಬೇಕು; ದೇಶವನ್ನು ಬ್ರಿಟಿಷ್ ಚಕ್ರಾಧಿಪತ್ಯದ ಅಂಗವನ್ನಾಗಿಟ್ಟುಕೊಂಡು ಜನತೆಯ ಜವಾಬ್ದಾರಿ ಸರ್ಕಾರದ ಮನೋರಥವನ್ನು ಮೆಟ್ಟಲಿನಿಂದ ಮೆಟ್ಟಲಿಗೆ ಹೋಗುವಂತೆ ನಿಧಾನವಾಗಿ ಸಾಧಿಸಬೇಕು ಎಂಬುವು—ಈ ಘೋಷಣೆಯ ಸಾರಂಶ. ಹೀಗೆಂದ ಮೇಲೆ, ಜವಾಬ್ದಾರಿ ಸರ್ಕಾರಸ್ಥಾಪನೆ ಸದ್ಯದ ಫಲವಲ್ಲ, ಅಂತಿಮಫಲ; ಭಾರತೀಯರ ಹಿತಸಾಧನೆ ಭಾರತೀಯರಿಗೆ ಸೇರಿದ್ದಲ್ಲ, ಇಂಗ್ಲಿಷರಿಗೆ ಸೇರಿದ್ದು; ಆಡಳಿತದ ಮಾರ್ಪಾಡು ಯಾವ ಕಾಲದಲ್ಲಾಗಬೇಕು, ಯಾವ ಪ್ರಮಾಣದಲ್ಲಾಗಬೇಕು ಎಂಬುದನ್ನು ನಿರ್ಧರಿಸುವರು ದೇಶದ ಜನರಲ್ಲ, ಬ್ರಿಟಿಷರು; ಭಾರತೀಯರು ಬ್ರಿಟಿಷರೊಡನೆ ಆಡಳಿತದ ವಿಚಾರದಲ್ಲಿ ಹೇಗೆ ಸಹಕರಿಸುವರು, ಹೇಗೆ ಜವಾಬ್ದಾರಿಯ ಭಾರವನ್ನು ಹೊರುವರು ಎಂಬುದನ್ನು ಅರಿತು, ಅವರ ಯೋಗ್ಯತೆಗನುಸಾರವಾಗಿ ಬ್ರಿಟಿಷರು ಆಡಳಿತದ ಸುಧಾರಣೆಗಳನ್ನು ನಿರ್ಧರಿಸುವರು ಎಂಬ ಅಂಶಗಳು ವ್ಯಕ್ತವಾದ ಹಾಗಾಯಿತು. ಈ ಘೋಷಣೆಯ ಫಲವಾಗಿ '೧೯೧೯ ನೆಯ ವರ್ಷದ 'ಇಂಡಿಯ ಶಾಸನ'ವೂ ಹೊರಬಿದ್ದಿತು. ಎಂಟು ಪ್ರಾಂತಗಳಲ್ಲಿ 'ದ್ವಿಮುಖ ಸರ್ಕಾರ' (ಡಯಾರ್ಕಿ) ಪದ್ಧತಿಯನ್ನು ಆಚರಣೆಗೆ ತಂದು ರೆವಿನ್ಯು, ನ್ಯಾಯಾಂಗ, ಪೋಲೀಸ್ ಇವೇ ಮೊದಲಾದ ಮೀಸಲಾದ ಆಡಳಿತದ ವಿಷಯಗಳನ್ನು ಗೌರ್ನರು ಮತ್ತು ಕೌನ್ಸಿಲರುಗಳ ವಶಕ್ಕೂ ವ್ಯವಸಾಯ, ಸಾರ್ವಜನಿಕ ಆರೋಗ್ಯ, ವಿದ್ಯಾಭ್ಯಾಸ, ಸ್ಥಳೀಯ ಸರ್ಕಾರ ಇವೇ ಮೊದಲಾದ 'ವರ್ಗಾಯಿಸಲ್ಪಟ್ಟ' ಆಡಳಿತದ ವಿಷಯಗಳನ್ನು ಗೌರ್ನರು ಮತ್ತು ಮಂತ್ರಿಗಳ ವಶಕ್ಕೂ ವಹಿಸತಕ್ಕದ್ದು; ಮಂತ್ರಿಗಳನ್ನು ಮಾತ್ರ ಪ್ರಾಂತೀಯ ಶಾಸನಾಂಗಕ್ಕೆ ಜವಾಬ್ದಾರರನ್ನಾಗಿ ಮಾಡತಕ್ಕದ್ದು; ಕೇಂದ್ರಸರ್ಕಾರದ ಸ್ವರೂಪವನ್ನು ಬದಲಾಯಿಸದೆ ರಾಷ್ಟ್ರಋಣ, ಉಪ್ಪಿನಮೇಲಿನ ತೆರಿಗೆ, ಆದಾಯದ ಮೇಲಿನ ತೆರಿಗೆ, ವ್ಯಾಪಾರ, ಸೈನ್ಯ, ನಾಣ್ಯ ಮೊದಲಾದ ೪೭ ವಿಷಯಗಳನ್ನು ಕೇಂದ್ರಸರ್ಕಾರದ ವ್ಯಾಪ್ತಿಗೂ ಸ್ಥಳೀಯ ಸರ್ಕಾರ, ಪೋಲೀಸ್, ವಿದ್ಯಾಭ್ಯಾಸ, ಸಾರ್ವಜನಿಕ ಆರೋಗ್ಯ, ವ್ಯವಸಾಯ, ಕ್ಷಾಮನಿವಾರಣೆ ಮೊದಲಾದ ೫೧ ವಿಷಯಗಳನ್ನು ಪ್ರಾಂತೀಯ ಸರಕಾರಗಳ ವ್ಯಾಪ್ತಿಗೂ ಸೇರಿಸತಕ್ಕದ್ದು; ಗೌರ್ನರ್ ಜನರಲ್ಲಿನ ಕಾರ್ಯಾಂಗಸಮಿತಿ, ನ್ಯಾಯವಿಧಾಯಕ ಸಭೆಗಳನ್ನು ಪ್ರತ್ಯೇಕಗೊಳಿಸಿ ಕೌನ್ಸಿಲ್ ಆಫ್ ಸ್ಟೇಟ್ ಮತ್ತು ಶಾಸನಸಭೆಗಳೆಂಬ ಎರಡು ಸಭೆಗಳಿಂದ ಕೂಡಿದ ಶಾಸನಾಂಗವನ್ನು ಪುನರ್ರಚಿಸ

ತಕ್ಕದ್ದು; ಕೌನ್ಸಿಲ್ ಆಫ್ ಸ್ಟೇಟಿನ ಸದಸ್ಯರ ಸಂಖ್ಯೆ ೬೦ ರಂತೆಯೂ, ಅಧಿಕಾರಾವಧಿ ೫ ವರ್ಷಗಳಂತೆಯೂ, ಶಾಸನಸಭೆಯ ಸದಸ್ಯರ ಸಂಖ್ಯೆ ೧೪೫ ರಂತೆಯೂ, ಅಧಿಕಾರಾವಧಿ ೩ ವರ್ಷಗಳಂತೆಯೂ ಇರತಕ್ಕದ್ದು; ಜೊತೆಗೆ ಕೌನ್ಸಿಲಿನಲ್ಲಿ ೩೪ ಚುನಾಯಿತ ಸದ್ಯರೂ (ಮುಸ್ಲಿಮೇತರರು ೧೭, ಮುಸ್ಲಿಮರು ೧೦, ಸಿಕ್ಕರು ೧, ಇತರರು ೩, ವಾಣಿಜ್ಯ ಪ್ರತಿನಿಧಿಗಳು ೩) ೨೬ ನಾಮಕರಣ ಸದಸ್ಯರೂ (೨೦ ಅಧಿಕಾರಿಗಳು, ೬ ಖಾಸಗಿ ಜನರು) ಶಾಸನಸಭೆಯಲ್ಲಿ ೧೦೫ ಚುನಾಯಿತ ಸದಸ್ಯರೂ, ೪೦ ನಾಮಕರಣ ಸದಸ್ಯರೂ ಇರತಕ್ಕದ್ದು; ಕೇಂದ್ರ ಶಾಸನಸಭೆಗೆ ಚುನಾಯಿತ ಅಧ್ಯಕ್ಷನಿರತಕ್ಕದ್ದು ಎಂಬದಾಗಿ ಹೊಸ ಶಾಸನ ವಿಧಿಸಿತು. ಆದರೆ ಶಾಸನಾಂಗದ ಕ್ಷೇತ್ರಾಧಿಕಾರ ಮಾತ್ರ ಹೆಚ್ಚಾಗಲಿಲ್ಲ. ಉದಾಹರಣೆಗಾಗಿ ರಾಷ್ಟ್ರಋಣ, ಸೈನ್ಯ, ನಾವೆ, ವಿಮಾನದಳ ಇವುಗಳ ವಿಷಯವಾಗಿ ಗೌರ್ನರ್ ಜನರಲ್ಲಿನ ಅಪ್ಪಣೆಯಿಲ್ಲದೆ ಮಸೂದೆಯನ್ನು ಮಂಡಿಸಲು ಯಾರಿಗೂ ಅವಕಾಶ ದೊರೆಯಲಿಲ್ಲ. ಗೌರ್ನರ್ ಜನರಲ್ಲಾದರೋ ಆರ್ಡಿನೆನ್ಸ್ ಎಂಬ ಹೆಸರಿನಿಂದ ವಿಶೇಷಾಜ್ಞೆಗಳನ್ನು ಹೊರಡಿಸಲು ಅಧಿಕಾರ ಪಡೆದನು. ಗೌರ್ನರ್ ಜನರಲ್ಲಿನ ಕಾರ್ಯಾಂಗ ಸಮಿತಿಯ ಸದಸ್ಯರ ಸಂಖ್ಯೆ ಆರಕ್ಕೆ ಏರಬೇಕೆಂದೂ ಇವರಲ್ಲಿ ಮೂರು ಮಂದಿ ಭಾರತೀಯರಾಗಿರಬೇಕೆಂದೂ ಸೆಕ್ರೆಟರಿ ಆಫ್ ಸ್ಟೇಟಿನ ಕಛೇರಿಯ ಖರ್ಚನ್ನು ಇನ್ನು ಮುಂದೆ ಬ್ರಿಟಿಷ್ ಸರ್ಕಾರವೇ ವಹಿಸತಕ್ಕದ್ದೆಂದೂ ಹೊಸ ಶಾಸನ ವಿಧಿಸಿತು. ಜನತೆಯ ಅಭಿಲಾಷೆಗೆ ವಿರುದ್ಧವಾದ ಈ ಶಾಸನಕ್ಕೆ ಎಲ್ಲಿಯೂ ಸ್ವಾಗತ ದೊರೆಯಲಿಲ್ಲ. ಆದರೂ ಪ್ರಾಂತಗಳಲ್ಲಿ ದ್ವಿಮುಖಸರ್ಕಾರಪದ್ಧತಿ ಆಚರಣೆಗೆ ಬಂತು. ಸರ್ಕಾರಾಧಿಕಾರದ ಎರಡು ಭಾಗಗಳಲ್ಲಿ ಭಿನ್ನಾಭಿಪ್ರಾಯ ಬಂದರೆ, ಗೌರ್ನರು ಇವೆರಡರ ಸಂಯುಕ್ತಸಭೆಯನ್ನು ಸೇರಿಸಿ ತೀರ್ಪು ಪಡೆಯಬೇಕೆಂದು ಶಾಸನ ಸೂಚಿಸಿದ್ದರೂ ಆಚರಣೆಯಲ್ಲಿ ಇದು ಸರಿಹೋಗಲಿಲ್ಲ. ಪ್ರಾರಂಭದಲ್ಲಿಯೇ ತಿಕ್ಕಾಟಗಳಿಗೆ ಉಪಕ್ರಮವಾಯಿತು. ಈ ಪದ್ಧತಿಯಿಂದ ಸರ್ಕಾರದ ಕೆಲಸಗಳೂ ಸುಗಮವಾಗಿ ಜರಗಲಿಲ್ಲ, ಜನರಿಗೂ ಪ್ರಯೋಜನವಾಗಲಿಲ್ಲ.

೧೯೨೭—ಅಮೃತಸರದ ನಿಘಾತ, ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಅಸಹಕಾರ, ಅತೃಪ್ತರಾದ ರಾಜಕೀಯ ಪಕ್ಷಗಳ ಪ್ರಮುಖರಿಂದ ತಯಾರಾದ ರಾಜ್ಯನಿಬಂಧನೆಯ ಕರಡುಪ್ರತಿ, ಇಂಡಿಯಾಕ್ಕೆ ಡೊಮಿನಿಯನ್ ಸ್ಥಾನ ಕೊಡಬೇಕೆಂಬ ಇಂಪೀರಿಯಲ್ ಕಾನ್ಫರೆನ್ಸಿನ ಶಿಫಾರಸ್ಸು ಇವೇ ಮೊದಲಾದವು ಬ್ರಿಟಿಷರ ಗಮನವನ್ನು ಸೆಳೆದವು. ಸೈಮನ್ನಿನ ಅಧ್ಯಕ್ಷತೆಯಲ್ಲಿ ಒಂದು ನಿಯೋಗ ಇಂಡಿಯಾಕ್ಕೆ ಬಂತು. ಪ್ರಾಂತಗಳಲ್ಲಿ ಪೂರ್ಣಜವಾಬ್ದಾರಿ ಸರ್ಕಾರವಿರಬೇಕು, ಪೋಲೀಸ್, ನ್ಯಾಯಾಂಗಗಳ

ಆಡಳಿತವನ್ನು ಮಂತ್ರಿಗಳಿಗೆ ವಹಿಸಬೇಕು; ಶಾಸನ ಸಭೆಗಳಲ್ಲಿದ್ದ ಅಧಿಕಾರಿಗಳ ಗುಂಪನ್ನೂ ಪ್ರಾಬಲ್ಯವನ್ನೂ ರದ್ದುಗೊಳಿಸಬೇಕು; ಭಾರತವನ್ನು ಸಂಯುಕ್ತ ರಾಜ್ಯವನ್ನಾಗಿ ಪುನರ್ರಚಿಸಬೇಕು ಎಂದು ನಿಯೋಗ ಶಿಫಾರಸ್ಸುಮಾಡಿತು. ಆದರೆ ಈ ನಿಯೋಗದಲ್ಲಿ ಭಾರತೀಯರಿಗೆ ಸ್ಥಾನವೂ ಇರಲಿಲ್ಲ, ಇದರ ಶಿಫಾರಸ್ಸುಗಳನ್ನು ಯಾರೂ ಸ್ವೀಕರಿಸಲೂ ಇಲ್ಲ. ಎಂದಿನಂತೆ ಕಾಂಗ್ರೆಸ್ಸಿನ ಚಳುವಳಿ ಮುಂದು ವರಿಯಿತು.

೧೯೩೦-೨—ಭಾರತದ ರಾಜಕೀಯ ಸಮಸ್ಯೆಯನ್ನು ಹೊಸದಾಗಿ ಪರಿಶಿಲಿಸಲು ವಿವಿಧ ರಾಜಕೀಯ ಪಕ್ಷಗಳಿಂದ ಕೂಡಿದ ಒಂದು 'ಚಕ್ರಗೋಷ್ಠಿ'ಯನ್ನು ಬ್ರಿಟಿಷ್‌ಸರ್ಕಾರ ಲಂಡನ್ನಿನಲ್ಲಿ ಏರ್ಪಡಿಸಿತು. ಏತನ್ಮಧ್ಯೆ ಕಾರಣಾಂತರಗಳಿಂದ ಸಂಶಯಗೊಂಡು ಸಂಯುಕ್ತರಾಜ್ಯವನ್ನು ಸೇರಲು ಇಚ್ಛಿಸದೆ ತಾಟಸ್ಥ್ಯದಿಂದಿದ್ದ ಸಂಸ್ಥಾನಾಧೀಶರು ಇದ್ದಕ್ಕಿದ್ದಹಾಗೆ ಸಂಯುಕ್ತರಾಜ್ಯವನ್ನು ಸೇರಲು ತಮ್ಮ ಅಪೇಕ್ಷೆಯನ್ನು ಸೂಚಿಸಿದರು. ಈ ಮನೋವೃತ್ತಿಯ ಬದಲಾವಣೆಗೆ ರಾಜರ ಆತ್ಮ ಸಂತೋಷಕಾರಣವೋ ಅಥವಾ ತೆರೆಯಮರೆಯಿಂದ ಇವರಿಗೆ ಯಾರಾದರೂ ಉತ್ತೇಜನಕೊಟ್ಟರೋ ಹೇಳುವುದು ಕಷ್ಟ. ಇದೇ ಸಮಯದಲ್ಲಿ ಮಹಾತ್ಮ ಗಾಂಧೀಜಿಯವರಿಗೂ ಲಾರ್ಡ್ ಇರ್ವಿನ್ ಅವರಿಗೂ ಒಂದು ಒಪ್ಪಂದ ನಡೆದು ಮಹಾತ್ಮರು ಚಕ್ರಗೋಷ್ಟಿಯಲ್ಲಿ ಹಾಜರಿರಲು ಒಪ್ಪಿದರು. ಚಕ್ರಗೋಷ್ಟಿಯಲ್ಲಿ ಭಾರತವನ್ನು ಸಂಯುಕ್ತ ರಾಜ್ಯವನ್ನಾಗಿ ಪುನರ್ರಚಿಸುವುದು, ಪ್ರಾಂತಗಳಿಗೆ ಪೂರ್ಣಸ್ವಾತಂತ್ರ್ಯಕೊಡುವುದು, ಕೇಂದ್ರದಲ್ಲಿ ಜವಾಬ್ದಾರಿಸರ್ಕಾರ ಸ್ಥಾಪಿಸುವುದು ಇವುಗಳಿಗೆ ಕಾಂಗ್ರೆಸ್ ಒಪ್ಪಿಗೆ ಕೊಟ್ಟಿತು. ಅಲ್ಲದೆ ಚಕ್ರಗೋಷ್ಟಿ ಅನೇಕ ಸಲಹೆಗಳನ್ನೊಳಗೊಂಡ ಶ್ವೇತಪತ್ರವೊಂದನ್ನು ಹೊರಡಿಸಿತು. ಇದರಲ್ಲಿ ಅಡಕವಾಗಿದ್ದ ಅಂಶಗಳನ್ನು ಸಂಯುಕ್ತ ಪಾರ್ಲಿಮೆಂಟರಿ ಸಮಿತಿ ಭಾರತದ ಪಂಚಾಯಿತದಾರರ ಸಹಾಯದಿಂದ ಮತ್ತೊಮ್ಮೆ ಪರಿಶೀಲಿಸಿತು. ಇದರ ವರದಿಯ ಆಧಾರದಮೇಲೆ ೧೯೩೫ ನೆಯ ವರುಷದ 'ಇಂಡಿಯ ಸರ್ಕಾರದ ಶಾಸನ' ಹೊರಬಿದ್ದಿತು.

ಈ ಶಾಸನದಲ್ಲಿ ಸಂಯುಕ್ತರಾಜ್ಯರಚನೆಗೆ ಅನ್ವಯಿಸುವ ಕೆಲವು ಲಕ್ಷಣಗಳಿದ್ದರೂ ಪ್ರಧಾನವಾದ ಲಕ್ಷಣಗಳಿರಲಿಲ್ಲವಾಗಿ ಇದಕ್ಕೆ ರಾಜಕೀಯ ಪಕ್ಷಗಳ ನಾಯಕರಿಂದಾಗಲೀ ರಾಜ್ಯಶಾಸ್ತ್ರಜ್ಞರುಗಳಿಂದಾಗಲಿ ಬೆಂಬಲ ದೊರೆಯಲಿಲ್ಲ. ಇದರಲ್ಲಿ ಸಂಸ್ಥಾನಗಳ ಮತ್ತು ಪ್ರಾಂತಗಳ ಸರ್ಕಾರ ಪದ್ಧತಿಗಳ ವೈವಿಧ್ಯತೆಗೆ ಅವಕಾಶವಿತ್ತು. ಇವುಗಳನ್ನು ಸಂಯುಕ್ತರಾಜ್ಯಕ್ಕೆ ಸೇರಿಸಿಕೊಳ್ಳುವುದರಲ್ಲಿಯೂ ಕೇಂದ್ರಸರ್ಕಾರ ಮತ್ತು ಅಂಗರಾಜ್ಯಗಳ ಪರಸ್ಪರ ಸಂಬಂಧ ಮತ್ತು ಅಧಿಕಾರ

ವ್ಯಾಪ್ತಿ ಇವುಗಳ ವಿಚಾರದಲ್ಲಿಯೂ ಭೇದಕಾರಕ ವರ್ತನೆಗಳಿದ್ದುವು. ರಾಜ್ಯನಿಬಂಧನೆಯ ತಿದ್ದುಪಡಿಯ ಮೇಲಿನ ಅಧಿಕಾರವನ್ನು ಭಾರತೀಯರಿಗೆ ವಹಿಸದೆ ಪಾರ್ಲಿಮೆಂಟಿಗೆ ವಹಿಸಿತ್ತು. ಗೌರ್ನರ್ ಜನರಲ್ಲನ ಅಧಿಕಾರವನ್ನು ವಿಶೇಷವಾಗಿ ಹೆಚ್ಚಿಸಿ ಕೇಂದ್ರ ಶಾಸನಾಂಗದ ಅಧಿಕಾರವ್ಯಾಪ್ತಿಯನ್ನು ಬಹುಮಟ್ಟಿಗೆ ಕಡಿಮೆಮಾಡಿತ್ತು. ಈ ಕಾರಣಗಳಿಂದ ಭಾರತ ಸರ್ಕಾರ ಸಂಯುಕ್ತರಾಜ್ಯಪದ್ಧತಿಗನುಸಾರವಾಗಿ ಪುನರ್ರಚಿತವಾಗಲೇ ಇಲ್ಲ. ಆದರೆ ಪ್ರಾಂತೀಯ ಸರ್ಕಾರಗಳ ಸ್ಥಿತಿ ಸ್ವಲ್ಪಮಟ್ಟಿಗೆ ಉತ್ತಮಗೊಂಡಿತು. ಅನೇಕ ಪ್ರಾಂತಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಸೂತ್ರವಹಿಸಿ ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಆಚರಣೆಗೆ ತಂದಿತು.

ಎರಡನೆಯ ಮಹಾಯುದ್ಧ ಪ್ರಾರಂಭವಾದಾಗ ಹಿಂದಿನಂತೆ ಬ್ರಿಟಿಷರು ಭಾರತೀಯರ ಸಹಾಯವನ್ನು ಅಪೇಕ್ಷಿಸಿದರು. ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯಕೊಡುವ ವಿಚಾರದಲ್ಲಿ ಪ್ರಜಾನಾಯಕರಿಗೆ ಸಂಶಯವಿದ್ದುದರಿಂದ ಕಾಂಗ್ರೆಸ್ ಪಕ್ಷ ಯುದ್ಧ ವಿಚಾರದಲ್ಲಿ ತನ್ನ ಅಸಹಕಾರವನ್ನು ತೋರಿಸಿ ಸರ್ಕಾರದ ಅಧಿಕಾರಸೂತ್ರವನ್ನು ಬ್ರಿಟಿಷರಿಗೆ ವಹಿಸಿಕೊಟ್ಟಿತು. ಚಳುವಳಿ ಪುನಃ ಬಿರುಸಾಗಿ ಪ್ರಾರಂಭವಾಗಿ ರಾಜಕೀಯ ವಾತಾವರಣ ದಿನೇದಿನೆ ಕೆಡಲುಪಕ್ರಮಿಸಿತು. 'ಭಾರತದ ಸಂಸ್ಕೃತಿಗನುಗುಣವಾದ ರಾಜ್ಯನಿಬಂಧನೆಯನ್ನು ರಚಿಸಬೇಕೆಂದಿರವುದು ಭಾರತೀಯರ ಸ್ವಾಭಾವಿಕ ಆಶೆ. ಇದಕ್ಕೆ ಬ್ರಿಟಿಷ್ ಸಾರ್ವಭೌಮ ಸರ್ಕಾರ ಮನ್ನಣೆಕೊಡಲು ಸಿದ್ಧವಾಗಿದೆ. ಉಭಯತ್ರರ ನಿಕಟಸಂಬಂಧ, ಸೌಹಾರ್ದಗಳಿಗೆ ಕಳಂಕ ಬರದಂತೆ ರಾಜ್ಯನಿಬಂಧನೆಯನ್ನು ಭಾರತೀಯರು ರಚಿಸಬೇಕೆಂಬುದೇ ಬ್ರಿಟಿಷ್ ಸರ್ಕಾರದ ನೀತಿ' ಎಂದು ಗೌರ್ನರ್ ಜನರಲ್ ಘೋಷಣೆ ಹೊರಡಿಸಿದನು. ಇದಕ್ಕೂ ಸ್ವಾಗತ ದೊರೆಯಲಿಲ್ಲ. ಸಂಧಾನಕ್ಕಾಗಿ ಬ್ರಿಟಿಷ್ ಸರ್ಕಾರ್ ಸರ್‌ಸ್ಟಾಫರ್ಡ್ ಕ್ರಿಪ್ಸನನ್ನು ಇಂಡಿಯಾಕ್ಕೆ ಕಳುಹಿಸಿತು. ಸಂಧಾನದಲ್ಲಿ ತಿರುಳಿರಲಿಲ್ಲವಾದ್ದರಿಂದ ಅದೂ ವಿಫಲವಾಯಿತು. ಇದೇ ಸಮಯದಲ್ಲಿ ಜಪಾನರು ಯಾವ ಕ್ಷಣದಲ್ಲಿ ಈ ದೇಶವನ್ನು ಮುತ್ತುವರೋ ಎಂಬ ಭೀತಿ ದಿನೇದಿನೆ ಹೆಚ್ಚಿತು. ಯುದ್ಧಾನಂತರ ಭಾರತದ ಸಮಸ್ಯೆಯನ್ನು ಬಗೆಹರಿಸಬೇಕೆಂಬುದು ಇಂಗ್ಲಿಷರ ವಾದವಾಗಿತ್ತು. ಇಂಥ ಪರಿಸ್ಥಿತಿಯಲ್ಲಿಯೂ ಸ್ವಾತಂತ್ರ್ಯ ತಮಗೆ ಸಿಗದಿದ್ದರೆ ಅದು ಯಾವ ಕಾಲದಲ್ಲಿಯೂ ದೊರೆಯುವದೇ ಇಲ್ಲವೆಂಬುದು ಕಾಂಗ್ರೆಸ್ಸಿನ ಮನೋಭಾವವಾಗಿತ್ತು. ಈ ಹಿನ್ನೆಲೆಯಲ್ಲಿ ಬ್ರಿಟಿಷರು ಕೂಡಲೇ ಅಧಿಕಾರ ತ್ಯಜಿಸಬೇಕೆಂಬ ಮಹಾತ್ಮಜಿಯವರ ಮಹಾಮಂತ್ರ ದೇಶವನ್ನೆಲ್ಲಾ ವ್ಯಾಪಿಸಿತು. ನಾಯಕರಿಗೆಲ್ಲಾ ಕಾರಾಗೃಹ ಪ್ರವೇಶವೂ ಆಯಿತು. ಆದರೂ ಚಳುವಳಿಗಳು ಮಾತ್ರ ಕಡಿಮೆಯಾಗಲಿಲ್ಲ. ಜನಗಳೇ

ಮುಂದಾಳಾಗಿ ನಿಲ್ಲಲುಪಕ್ರಮಿಸಿದರು. ಜೊತೆಗೆ ಆರ್ಥಿಕ ಕ್ಷೇತ್ರಗಳಲ್ಲಿ ಆಂದೋಳನ, ಬಂಗಾಳದಲ್ಲಿ ಕ್ಷಾಮ, ಕಾರ್ಮಿಕರ ಮುಷ್ಕರಗಳು, ಕೆಂಪುಕೋಟೆಯಲ್ಲಿ ಆಜಾದ್ ಸೈನಿಕರ ತನಿಖೆವಿಚಾರಣೆ, ಸೈನ್ಯ ನಾವೆಗಳಲ್ಲಿ ಅಶಾಂತಿ ಇವೇ ಮೊದಲಾದ ಘಟನೆಗಳಿಂದ ಬ್ರಿಟಿಷರ ಧೈರ್ಯ ಕುಗ್ಗಿದ್ದೂ ಆಶ್ಚರ್ಯವೇನೂ ಅಲ್ಲ. ಪ್ರಧಾನಿ ಅಟ್ಲಿ ಹೇಳಿದಂತೆ ಆಗಿನಭಾರತ ಅಸದೃಶವಾದ ಶಕ್ತಿಯಿಂದ ಕೂಡಿದ ಒಂದು ಅಗ್ನಿ ಪರ್ವತದಂತಿತ್ತು.

೧೯೪೬.—ಭಾರತದ ಸಮಸ್ಯೆಯನ್ನು ಸಂಧಾನೋಪಾಯದಿಂದಲೇ ಬಗೆಹರಿಸಬೇಕು; ಭಾರತೀಯರ ಸ್ವಾತಂತ್ರ್ಯಾಪೇಕ್ಷೆಗೆ ಮನ್ನಣೆಕೊಡಬೇಕು ಎಂಬದಾಗಿ ಇಂಗ್ಲೆಂಡಿನ ಕಾರ್ಮಿಕಪಕ್ಷ ಅಭಿಪ್ರಾಯಪಟ್ಟು ಕ್ಯಾಬಿನೆಟ್ ನಿಯೋಗವನ್ನು ಇಂಡಿಯಾಕ್ಕೆ ಕಳಿಹಿಸಿತು. ೩೮೫ ಪ್ರತಿನಿಧಿಗಳಿಂದ ಕೂಡಿದ ರಾಜ್ಯಾಂಗ ರಚನಾ ಸಭೆಯನ್ನು ಕೂಡಲೆ ಏರ್ಪಡಿಸಬೇಕು, ಈ ಸಭೆ ಬ್ರಿಟಿಷ್ ಸರ್ಕಾರ ನಿರ್ಧರಿಸುವ ಮೂಲತತ್ವಗಳಿಗನುಸಾರವಾಗಿ ರಾಜ್ಯನಿಬಂಧನೆಯನ್ನು ರಚಿಸಬೇಕು ಎಂದು ಈ ನಿಯೋಗ ಶಿಫಾರಸ್ಸು ಮಾಡಿತು. ಹೊಸದಾಗಿ ಏರ್ಪಡಿಸುವ ಕೇಂದ್ರಸರ್ಕಾರಕ್ಕೆ ವಿದೇಶಾಂಗಾಡಳಿತ, ರಕ್ಷಣೆ, ಸಂಚಾರಸೌಕರ್ಯಗಳು ಮಾತ್ರ ಸೇರತಕ್ಕದ್ದು; ಉಳಿದವು ಪ್ರಾಂತೀಯ ಮತ್ತು ಸಂಸ್ಥಾನಗಳ ಸರ್ಕಾರಗಳಿಗೆ ಸೇರಬೇಕು; ಪ್ರಾಂತಗಳು ತಮ್ಮ ಇಷ್ಟಾನುಸಾರ ಗುಂಪುಗಳನ್ನು ಮಾಡಿಕೊಳ್ಳಬಹುದು; ಅಲ್ಪಸಂಖ್ಯಾತರ ರಕ್ಷಣೆಗೆ ತಕ್ಕ ಭದ್ರತೆ ಇರತಕ್ಕದ್ದು ಎಂಬುವು ನಿಯೋಗದ ಉಳಿದ ಶಿಫಾರಸುಗಳು. ಈ ನಿಯೋಗದ ಶಿಫಾರಸ್ಸುಗಳಲ್ಲಿ ರಾಷ್ಟ್ರದ ಸ್ವಾತಂತ್ರ್ಯದ ಸಾಧನೋಪಾಯಗಳಿಗಿಂತ ಪ್ರತಿಬಂಧಕಗಳೇ ವಿಶೇಷವಾಗಿದ್ದುದರಿಂದ ಇವುಗಳನ್ನು ಯಾವ ಪಕ್ಷವೂ ಒಪ್ಪಲಿಲ್ಲ. ಆದರೆ ಪ್ರಾಂತಗಳನ್ನು ಒಟ್ಟುಗೂಡಿಸಿ ಗುಂಪುಮಾಡಿಕೊಳ್ಳುವಂತೆಯೇ ರಾಷ್ಟ್ರವಿಚ್ಛೇದನಕ್ಕೆ ಸಹಕಾರಿಯಾದ ವಿಷಬೀಜವನ್ನು ಬಿತ್ತಿದರು. ಕಾಂಗ್ರೆಸ್ಸಿಗೂ, ಲೀಗಿಗೂ ಭಿನ್ನಾಭಿಪ್ರಾಯ ಬಂದಿತು. ದೇಶವನ್ನು ಒಂದುಗೂಡಿಸಬೇಕೆಂಬುದು ಕಾಂಗ್ರೆಸ್ಸಿನ ಧ್ಯೇಯವಾಗಿಯೂ ದೇಶವನ್ನು ಇಬ್ಭಾಗಮಾಡಬೇಕೆಂಬುದು ಲೀಗಿನ ಧ್ಯೇಯವಾಗಿಯೂ ಪರಿಣಮಿಸಿತು. ಲೀಗಿನನಾಯಕರು ಕಂಠೋಕ್ತವಾಗಿ ನಿಯೋಗದ ಶಿಫಾರಸ್ಸುಗಳನ್ನು ತಿರಸ್ಕರಿಸಿದುದಲ್ಲದೆ, ಬ್ರಿಟಿಷ್ ಸರ್ಕಾರವನ್ನು ಒತ್ತಾಯಗೊಳಿಸಿ ಪಾಕೀಸ್ಥಾನವನ್ನು ಸಾಧಿಸಬೇಕು ಮತ್ತು ನೇರವಾದ ಕ್ರಿಯೆಯನ್ನು ಕೂಡಲೆ ಪ್ರಾರಂಭಿಸಬೇಕು ಎಂದು ನಿರ್ಧರಿಸಿದರು. 'ವಾಣಿಜ್ಯ ಸೌಕರ್ಯಗಳನ್ನು ಪಡೆಯಬೇಕೆಂಬ ಸ್ವಾರ್ಥದಿಂದ ನಮ್ಮ ಸ್ವಾತಂತ್ರ್ಯವನ್ನು ಇತರರಿಗೆ ಬ್ರಿಟಿಷರು ವಿಕ್ರಯಿಸುವುದಾದರೆ ಅಥವಾ ಭಾರತ ಒಂದಾಗಿರಬೇಕು, ಸರ್ಕಾರ ಒಂದಾಗಿರಬೇಕು

ಎಂಬುದನ್ನು ಒಪ್ಪಬೇಕೆಂದು ನಮ್ಮನ್ನು (ಮುಸಲ್ಮಾನರನ್ನು) ಬಲಾತ್ಕರಿಸುವುದಾದರೆ ಹಿಂದೆ ಯಾವಾಗಲೂ ನಡೆಯದಿದ್ದ ಅಪಘಾತವನ್ನೂ ರಕ್ತಪ್ರವಾಹವನ್ನೂ ಪ್ರಪಂಚ ನೋಡಬೇಕಾದಿತು' ಎಂಬುದಾಗಿ ಸರ್ ಫಿರೋಜ್ ಖಾನ್ ನೂನ್ ಘೋಷಣೆ ಹೊರಡಿಸಿ ಮುಸಲ್ಮಾನರನ್ನು ಉದ್ರೇಕಗೊಳಿಸಿದನು.

೧೯೪೬ ನೆಯ ಅಗಸ್ಟ್ ೧೬—ತೆರೆಯ ಮರೆಯಲ್ಲಿ ಲಾರ್ಡ್ ವೇವಲ್ಲಿನ ಮಾತಿಗೆ ಮರುಳಾದ ಪಂಡಿತ ನೆಹರು ಮುಸ್ಲಿಂರ ಸಹಾಯವಿಲ್ಲದೆ ತಾತ್ಕಾಲಿಕ ಸರ್ಕಾರ ರಚಿಸಲು ಒಪ್ಪಿದನು. ಮುಸ್ಲಿಂರ ಅಸಮಾಧಾನ ಇನ್ನಿಷ್ಟು ಹೆಚ್ಚಿತು. ಆಗಿನ ಸ್ವಾತಂತ್ರ್ಯ ದಿನಾಚರಣೆಯ ದಿವಸ ಕಲ್ಕತ್ತಾದಲ್ಲಿ ನೂರಾರು ಮಂದಿ ಹಿಂದುಗಳು ಮುಸಲ್ಮಾನರ ಹಾವಳಿಗೆ ಬಲಿಯಾದರು. ಈ ಭೀಕರ ದೃಶ್ಯವನ್ನು ಕಣ್ಣಾರ ನೋಡಿದ ವೇವಲ್ ಜಿನ್ನಾವೊಡನೆ ಸಂಧಾನ ನಡೆಸಿ ಐದು ಮುಸ್ಲಿಂ ಪ್ರತಿನಿಧಿಗಳನ್ನು ತಾತ್ಕಾಲಿಕ ಸರ್ಕಾರಕ್ಕೆ ಸೇರಿಸಿದನು. ಆದರೆ ಇವರಾರೂ ಪಂಡಿತ ನೆಹರುವಿನ ನಾಯಕತ್ವವನ್ನು ಒಪ್ಪಲಿಲ್ಲ. ಮಂತ್ರಿಮಂಡಲಿಯೊಡನೆ ಸೌಹಾರ್ದದಿಂದ ವರ್ತಿಸಲಿಲ್ಲ. ರಾಜ್ಯಾಂಗರಚನಾ ಸಭೆಯ ಅಧಿವೇಶನಕ್ಕೆ ಸಹಕಾರವನ್ನು ತೋರಿಸಲಿಲ್ಲ. ಮಂತ್ರಿಮಂಡಲಿಯಲ್ಲಿ ತಿಕ್ಕಾಟಗಳಾಗುತ್ತಿರುವಾಗ ನೌಕಾಲಿಯಲ್ಲಿ ಘೋರವಾದ ಅಮಾನುಷಕೃತ್ಯಗಳು ನಡೆದು ಹಿಂದುಗಳ ಗುಂಪುಗುಂಪುಗಳೇ ನಿರ್ಮೂಲವಾದುವು; ಅವರ ಆಸ್ತಿಪಾಸ್ತಿಗಳು ಲೂಟಿಯಾದುವು; ಹಿಂದುಗಳು ಬಲಾತ್ಕಾರದಿಂದ ಮತಾಂತರ ಮಾಡಲ್ಪಟ್ಟರು; ಸ್ತ್ರೀಯರು ಅಪಹರಿಸಲ್ಪಟ್ಟು ಮುಸಲ್ಮಾನರ ಜನಾನಗಳನ್ನು ಸೇರಿದರು. ಬೀಹಾರಿನ ಹಿಂದುಗಳು ಇವುಗಳಿಗೆ ಪ್ರತಿಕ್ರಿಯೆ ತೋರಿಸಲುಪಕ್ರಮಿಸಿದರು. ಆದರೆ ಕ್ಷಿಪ್ರದಲ್ಲಿಯೇ ಮಹಾತ್ಮ ಗಾಂಧಿಜಿಯವರ ಸಹಾಯದಿಂದ ಎಲ್ಲವೂ ಶಾಂತವಾದುವು.

ಪ್ರತ್ಯೇಕ ತತ್ವಾನುಯಾಯಿಗಳಿಂದ ಒಂದು ನಿರ್ದಿಷ್ಟಲಕ್ಷ್ಯಸಾಧನೆಗೋಸ್ಕರ ತಾತ್ಕಾಲಿಕವಾಗಿ ಒಂದುಗೂಡಿದ ಸರ್ಕಾರ ಯಾವ ಕಾರ್ಯವನ್ನೂ ನಿರ್ವಹಿಸಲಿಲ್ಲವಾಗಿ ಬ್ರಿಟಿಷ್ ಸರ್ಕಾರ, ಪಂಡಿತ ನೆಹರು ಮತ್ತು ಜಿನ್ನ ಅವರನ್ನು ಲಂಡನ್ನಿಗೆ ಬರಮಾಡಿಕೊಂಡು ಸಂಧಾನ ನಡೆಸಿತು. 'ಪ್ರಾಂತಗಳು ಒಟ್ಟುಗೂಡಿ ಗುಂಪು ಮಾಡಿಕೊಳ್ಳುವ ವಿಚಾರದಲ್ಲಿ ಲೀಗ್ ಮಾಡಿರುವ ವ್ಯಾಖ್ಯಾನವನ್ನು ಕಾಂಗ್ರೆಸ್ ಒಪ್ಪಬೇಕು; ಉಭಯ ಪಕ್ಷಗಳ ಒಪ್ಪಿಗೆ ದೊರೆಯುವ ಮುಂದಿನ ಕಾರ್ಯಕ್ರಮವನ್ನು ಎರಡು ಪಕ್ಷಗಳೂ ಸೂಚಿಸಬೇಕು; ಬಹುಮಂದಿ—ಅದರಲ್ಲಿಯೂ ಮುಸ್ಲಿಂರು—ಭಾಗವಹಿಸದಿರುವ ರಾಜ್ಯಾಂಗ ರಚನಾಸಭೆ ನಿರ್ಧರಿಸುವ ರಾಜ್ಯ ನಿಬಂಧನೆಯನ್ನು ಒಪ್ಪಲೇಬೇಕೆಂದು ಎಲ್ಲರನ್ನೂ ಕಾಂಗ್ರೆಸ್ ಬಲಾತ್ಕರಿಸಕೂಡದು'

ಎಂಬುದಾಗಿ ಬ್ರಿಟಿಷ್ ಸರ್ಕಾರ ತೀರ್ಪುಕೊಟ್ಟಿತು. ಇದರಿಂದ ಬ್ರಿಟಿಷರ ಸಹಾಯವನ್ನು ಪೂರ್ಣವಾಗಿ ನಂಬಿದ್ದ ಕಾಂಗ್ರೆಸ್ಸಿಗೆ ಬಲವಾದ ಪೆಟ್ಟು ಬಿತ್ತು; ಜೊತೆಗೆ ಅದಕ್ಕೆ ದ್ರೋಹವಾದಂತೆಯೂ ಆಯಿತು. ಮುಸ್ಲಿಂರು ಸುಲಭೋಪಾಯದಿಂದ ಜಯಭೇರಿ ಹೊಡೆದರು.

೧೯೪೭ ನೆಯ ಫೆಬ್ರವರಿ ೨೦—ಆದರೇನು? ಭಾರತ ಸಮಸ್ಯೆ ಇನ್ನೂ ಬಗೆಹರಿಯಲೇ ಇಲ್ಲ. ಇದನ್ನು ನೋಡಿದ ಪ್ರಧಾನಿ ಅಟ್ಲಿ 'ಭಾರತದ ಆಡಳಿತವನ್ನು ಜವಾಬ್ದಾರಿಯಿಂದ ಕೂಡಿರುವ ಭಾರತೀಯರಿಗೆ ೧೯೪೮ ನೆಯ ಜನವರಿಯೊಳಗಾಗಿ ವರ್ಗಾಯಿಸಲು ಬ್ರಿಟಿಷ್ ಸರ್ಕಾರ ನಿರ್ಧರಿಸಿದೆ' ಎಂದು ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಟ್ಟನು. ಈ ಅಂತಿಮ ನಿರ್ಧಾರವೂ ಕೂಡ ಫಲಕಾರಿಯಾಗಲಿಲ್ಲ. ಇದಕ್ಕೆ ಕೆಲವು ಕಾರಣಗಳೂ ಇದ್ದವು. ಆಡಳಿತವನ್ನು ಭಾರತದ ಕೇಂದ್ರಸರ್ಕಾರದ ಯಾವುದಾದರೂ ಒಂದು ಭಾಗಕ್ಕಾಗಲಿ ಅಥವಾ ಪ್ರಾಂತ ಸರ್ಕಾರಗಳ ಒಂದು ಭಾಗಕ್ಕಾಗಲಿ ವಹಿಸುತ್ತೇವೆ ಅಥವಾ ನ್ಯಾಯಬದ್ಧವಾದ, ಜನತೆಯ ಹಿತಸಾಧನೆಗೆ ಅನುಕೂಲವಾದ ಇನ್ನಾವ ಉಪಾಯವನ್ನಾದರೂ ಕಂಡುಹಿಡಿಯುತ್ತೇವೆ—ಎಂಬ ಬ್ರಿಟಿಷರ ಹೇಳಿಕೆಯಲ್ಲಿ ಸ್ಪಷ್ಟತೆಯಿರಲಿಲ್ಲ, ಸಂದೇಹಗಳಿದ್ದವು.

೧೯೪೭ ನೆಯ ಜೂನ್—ಪ್ರಜಾನಾಯಕರ ನಿರುತ್ಸಾಹವನ್ನು ನೋಡಿದ ಪ್ರಧಾನಿ ಅಟ್ಲಿ ಯಾವ ಪ್ರಕಾರದಿಂದಾದರೂ ಸಮಸ್ಯೆಯನ್ನು ಬಗೆಹರಿಸಲೇಬೇಕೆಂದು ಅಂತಿಮ ನಿರ್ಧರಮಾಡಿ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಇಂಡಿಯಾಕ್ಕೆ ಕಳಿಹಿಸಿದನು. ಆಡಳಿತವನ್ನು ಭಾರತೀಯರಿಗೆ ವರ್ಗಾಯಿಸುವ ಯೋಜನೆಯೂ ಹೊರಬಿತ್ತು. ಮುಸ್ಲಿಂ ಬಹು ಸಂಖ್ಯಾತರಿರುವ (ಅಂದರೆ ಸೇಕಡ ೭೦) ಪ್ರಾಂತಗಳು ಇಷ್ಟಪಟ್ಟರೆ ಈಗಿರುವ ರಾಜ್ಯಾಂಗರಚನಾ ಸಭೆಯನ್ನು ಒಪ್ಪಬಹುದು, ಇಲ್ಲವಾದರೆ ಬೇರೆ ಸಭೆಯನ್ನು ಏರ್ಪಡಿಸಿಕೊಳ್ಳಬಹುದು ಎಂಬ ಘೋಷಣೆ ಪ್ರಕಟವಾಯಿತು. ಆಗಬೇಕಾದದ್ದು ಆಗಿಯೇಹೋಯಿತು. ದೇಶ ಇಬ್ಭಾಗವಾಗಿ ಭಾರತ ಮತ್ತು ಪಾಕಿಸ್ಥಾನಗಳೆಂಬ ಎರಡು ಸ್ವತಂತ್ರ ರಾಷ್ಟ್ರಗಳಾದುವು. ಈ ಕಾಲದಲ್ಲಿ ರಚಿಸಿದ ಭಾರತ ಸ್ವಾತಂತ್ರ್ಯಶಾಸನದ ಫಲವಾಗಿ ಹಿಂದೆ ಕ್ಯಾಬಿನೆಟ್ ನಿಯೋಗ ಸ್ಥಾಪಿಸಿದ್ದ ರಾಜ್ಯಾಂಗರಚನಾ ಸಭೆಗೆ ಸ್ವಾತಂತ್ರ್ಯ ಬಂತು. ನೂತನ ರಾಜ್ಯನಿಬಂಧನೆಯನ್ನು ರಚಿಸಲು ಸರ್ವಸಿದ್ಧತೆಗಳಾದುವು. ಇದುವರೆಪಿಗೆ ಭಾರತದ ಮೇಲಿದ್ದ ಬ್ರಿಟಿಷರ ಸಾರ್ವಭೌಮತ್ವ, ಸರ್ವಾಧಿಕಾರ ಕೊನೆಗಂಡು ಪರಾಧೀನತೆಯ ಶೃಂಖಲೆ ಕಳಚಿಕೊಂಡಿತು.

೧೯೪೭ ನೆಯ ಆಗಸ್ಟ್ ೧೫—ಪುನರ್ರಚಿತವಾದ ಸಂವಿಧಾನ ಸಭೆಗೆ ಕಾಂಗ್ರೆಸ್

ಪಾರ್ಲಿಮೆಂಟರಿ ಬೋರ್ಡು ದೇಶದ ವಿವಿಧ ಪಕ್ಷಗಳಿಂದ, ಪ್ರಾಂತಗಳಿಂದ ಗಣ್ಯ ರಾದ ಭಾರತೀಯರನ್ನು ಸದಸ್ಯರನ್ನಾಗಿ ಆರಿಸಿತು. ಈ ಏರ್ಪಾಡಿನಿಂದ ರಾಜಕೀಯ ಪರಿಶ್ರಮವಿಲ್ಲದವರು ಕೆಲವರು ಸದಸ್ಯರಾದರೂ ಅನೇಕ ಸುಪ್ರಸಿದ್ಧರಾದ, ಪ್ರಖ್ಯಾತ ರಾದ, ರಾಜನೀತಿಪಟುಗಳು ಭಾಗವಹಿಸಿದರು. ಸಭೆಯಲ್ಲಿ ೩೦೦ ಸದಸ್ಯರಿದ್ದರೂ ಕಾರ್ಯಕಲಾಪಗಳು ಯಶಸ್ವಿಯಾಗಿ, ಕಾಲವಿಳಂಬವಿಲ್ಲದೆ ನೆರವೇರಿದುವು. ನೂತನ ರಾಜ್ಯಕ್ಕೆ ಬೇಕಾದ ತತ್ವಗಳನ್ನು, ಧ್ಯೇಯಗಳನ್ನು, ಆದರ್ಶಗಳನ್ನು ಇಡೀಸಭೆ ಸಾವಧಾನದಿಂದ ಪರಿಶಿಲಿಸಿ ನಿರ್ಧರಿಸಿತು. ರಾಜ್ಯನಿಬಂಧನೆಯ ವಿವರಗಳನ್ನು ಸಭೆಯ ಸಮಿತಿಗಳು ಕೂಲಂಕಷವಾಗಿ ಪರಿಶೀಲಿಸಿ ವರದಿಗಳನ್ನೂ ಶಿಫಾರಸ್ಸುಗಳನ್ನೂ ಸಭೆಯ ಮುಂದೆ ಮಂಡಿಸಿದುವು.

ತನಗೆ ವಹಿಸಿದ್ದ ಕಾರ್ಯಕಲಾಪಗಳನ್ನು ಅಂದರೆ ಭಾರತದ ಮತ್ತು ರಾಜ್ಯಗಳ ರಾಜ್ಯನಿಬಂಧನೆ, ಇವುಗಳ ಪರಸ್ಪರ ಸಂಬಂಧ, ಪ್ರಜೆಗಳ ಮೂಲಭೂತ ಹಕ್ಕುಗಳು, ರಾಷ್ಟ್ರಧ್ಯೇಯ, ರಾಷ್ಟ್ರಧ್ವಜ, ರಾಷ್ಟ್ರಭಾಷೆ ಮೊದಲಾದವುಗಳನ್ನು ಸಂವಿಧಾನ ಸಭೆ ನಾಲ್ಕು ಅಧಿವೇಶನಗಳಲ್ಲಿ ಯಶಸ್ವಿಯಾಗಿ ನಿರ್ವಹಿಸಿತು.

ರಾಜ್ಯನಿಬಂಧನಕಾರರು ಅಮೆರಿಕ, ಕೆನಡ, ಆಸ್ಟ್ರೇಲಿಯ, ಐರಿಷ್ ಸ್ವತಂತ್ರ ರಾಜ್ಯ, ೧೯೩೫ನೆಯ ವರುಷದ ಇಂಡಿಯ ಸರ್ಕಾರದ ಶಾಸನ ಇವುಗಳಲ್ಲಿರುವ ಪ್ರಧಾನಾಂಶಗಳನ್ನು ಉಪಯೋಗಿಸಿಕೊಂಡಿರುವರೇ ಹೊರತು ಭಾರತ ಸಂಸ್ಕೃತಿ, ರಾಜನೀತಿ, ಸಂಪ್ರದಾಯ, ಸಂಸ್ಥೆ, ಶಿಷ್ಟಾಚಾರ ಇವುಗಳನ್ನು ಕಣ್ಣೆತ್ತಿಯೂ ನೋಡಿಲ್ಲವೆಂಬದಾಗಿ ಕೆಲವರು ಹೊಸ ರಾಜ್ಯನಿಬಂಧನೆಯನ್ನು ಟೀಕಿಸುವರು. ಇವರ ವಾದದಲ್ಲಿ ನಿಜಾಂಶವಿಲ್ಲದೆ ಇಲ್ಲ. ಆದರೆ ಇದನ್ನು ದೊಡ್ಡದು ಮಾಡುವುದು ಅಪ್ರಕೃತ. ಭಾರತ ಸಂಸ್ಕೃತಿಯ ವೈಶಿಷ್ಟ್ಯ, ಹಿರಿಮೆಯ ವಿಚಾರದಲ್ಲಿ ವಾದವೇ ಇಲ್ಲ. ರಾಜ್ಯನಿಬಂಧನೆ ಹೇಗಿದ್ದರೂ ಹಿಂದಿನಿಂದ ಬಂದಿರುವ ಸಂಸ್ಕೃತಿಯನ್ನು ಜನ ಬಿಡುವುದು ಸಾಧ್ಯವೂ ಅಲ್ಲ ಸಾಧುವೂ ಅಲ್ಲ. ಪಾಶ್ಚಾತ್ಯ ಪ್ರಪಂಚವಾದರೋ ರಾಜ ಕೀಯದಲ್ಲಿ ಬಹುಮಟ್ಟಿಗೆ ಮುಂದುವರಿದಿದೆ; ಅದರ ತತ್ವಗಳು, ಆದರ್ಶಗಳು, ಸಂಪ್ರ ದಾಯಗಳು ಇತರರಿಗೆ ಮಾರ್ಗದರ್ಶಿಯಾಗಿವೆ; ಇವುಗಳ ಪ್ರಯೋಜನಗಳನ್ನು ತಿಳಿದು ಇವುಗಳನ್ನು ತ್ಯಜಿಸುವುದೂ ಜಾಣತನವಲ್ಲ. ಈ ಉದ್ದೇಶದಿಂದಲೇ ರಾಜ್ಯನಿಬಂಧನ ಕಾರರು ಉದಾತ್ತವಾದ ತತ್ವಗಳನ್ನೂ ಆದರ್ಶಗಳನ್ನೂ ಪಾಶ್ಚಾತ್ಯ ಸಂಸ್ಕೃತಿ ಯಿಂದ ಆರಿಸಿ ಅವುಗಳ ಆಧಾರದಮೇಲೆ ರಾಜ್ಯನಿಬಂಧನೆಯನ್ನು ರಚಿಸಿರುವರು. ಇದರಿಂದ ಜನತೆಗೆ ಅನಾನುಕೂಲವಾಗುವುದಕ್ಕೆ ಬದಲು ಹೆಚ್ಚು ಪ್ರಯೋಜನ ಗಳಾಗಿವೆ. ಸರಕಾರದ ಭದ್ರತೆ, ಜವಾಬ್ದಾರಿ, ಧ್ಯೇಯ, ಧ್ಯೇಯಸಾಧನೋಪಾಯ

ಗಳು, ಪ್ರಜೆಗಳ ಸಮಾನತ್ವ, ಸ್ವಾತಂತ್ರ್ಯ ಮೊದಲಾದ ಮೂಲ ಹಕ್ಕುಗಳ ವಿಚಾರ ದಲ್ಲಿ ಭಾರತ ರಾಜ್ಯನಿಬಂಧನೆ ಇನ್ನಾವ ರಾಜ್ಯನಿಬಂಧನೆಗೂ ಕಡಿಮೆಯಾಗಿಲ್ಲ—ಕೀಳಾಗಿಲ್ಲ.

ಕೊನೆಯದಾಗಿ, ಬ್ರಿಟಿಷರ ಆಳಿಕೆ ಸರ್ವವಿಧದಲ್ಲಿಯೂ ಸಮರ್ಪಕವಾಗಿರಲಿಲ್ಲ ವಾದರೂ ಅಷ್ಟು ಅಪ್ರಯೋಜಕವೆನಿಸಲಿಲ್ಲ. ಬ್ರಿಟಿಷರು ಭಿನ್ನಭಿನ್ನವಾಗಿದ್ದ ದೇಶ ವನ್ನು ಒಟ್ಟುಗೂಡಿಸಿ ದಕ್ಷತೆಯಿಂದ, ದರ್ಪದಿಂದ ಆಳಿ ಶಾಂತಿ ಶಿಸ್ತುಗಳನ್ನು ಸ್ಥಾಪಿಸಿದರು; ರಚನಾತ್ಮಕ ಕಾರ್ಯಗಳಲ್ಲಿ ತೊಡಗಲು ಪ್ರಜೆಗಳಿಗೂ, ಸಾಮಾಜಿಕ ಸುಧಾರಣೆಗಳ ಕಡೆಗೆ ತಿರುಗಲು ಪ್ರಜಾನಾಯಕರಿಗೂ ಅವಕಾಶ ಕಲ್ಪಿಸಿದರು; ಇಂಗ್ಲಿಷ್ ಭಾಷೆಯ ಬಳಕೆಯಿಂದ ಪಾಶ್ಚಾತ್ಯ ಸಂಸ್ಕೃತಿಯ ಹಿರಿಮೆ ಜನರಿಗೆ ವಿಶದ ವಾಯಿತು; ಅದರ ತತ್ವಗಳು ಜನತೆಯನ್ನು ಹುರಿದುಂಬಿಸಿದವು. ಜನತೆಯ ಸ್ವಾತಂತ್ರ್ಯದ ಹೋರಾಟಕ್ಕೆ ಉತ್ತೇಜನ ದೊರೆಯಿತು. ಅನಿರೀಕ್ಷಿತ ಘಟನೆಗಳು, ರಾಜಕೀಯ ಸಮಸ್ಯೆಯ ಜಟಿಲತ್ವ ಇವುಗಳ ಒತ್ತಡದಿಂದ ಬ್ರಿಟಿಷರ ಹೃದಯ ಪರಿವರ್ತನೆಯಾಗಿ ಅವರ ಆಡಳಿತ ನೀತಿ ಬದಲಾಯಿಸಿತು, ಅಂತ್ಯದಲ್ಲಿ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯವೂ ಲಭಿಸಿತು. ಬ್ರಿಟಿಷರ ಆಳಿಕೆ ನಮ್ಮನ್ನು ಬಿಟ್ಟರೂ ಅವರ ರಾಜಕೀಯ ಜೀವನದ ರಹಸ್ಯ, ರಾಜಕೀಯ ತತ್ವಗಳ ಮಹತ್ವ ಇವು ನಮ್ಮನ್ನು ಬಿಡುವಂತಿಲ್ಲ. ಬ್ರಿಟಿಷರಿಗೆ ಜೀವದುಸಿರಿನಂತಿರುವ ಸ್ವರಾಜ್ಯಾಧಿಕಾರ ತತ್ವ, ಜವಾಬ್ದಾರಿ ಸರ್ಕಾರಪದ್ಧತಿ ಇವುಗಳ ಆಧಾರದಮೇಲೆಯೇ ನಮ್ಮ ನೂತನ ರಾಜ್ಯ ನಿಬಂಧನೆ ರಚಿತವಾಗಿದೆ. ಈ ತತ್ವಗಳನ್ನು ಅಕ್ಷರಶಃ ಅನುಷ್ಠಾನಕ್ಕೆ ತರುವುದ ರಿಂದಲೇ ನಮ್ಮ ದೇಶ ಮುಂದುವರಿಯಬೇಕಾಗಿದೆ. ಆದಪ್ರಯುಕ್ತ ಈ ತತ್ವಗಳ ಆಧಾರದಮೇಲೆ ರಚಿತವಾಗಿರುವ ಸಂವಿಧಾನದ ರೂಪರೇಖೆಗಳು ಏನು ಎಂಬುದನ್ನು ಅರಿಯುವುದು ಪ್ರಜೆಗಳೆಲ್ಲರ ಕರ್ತವ್ಯವಾಗಿರುವುದರಿಂದ ಅವುಗಳನ್ನು ಮುಂದುವರಿಸ ಲಾಗಿದೆ.

ಅಧ್ಯಾಯ ೨

ಭಾರತ ರಾಜ್ಯನಿಬಂಧನೆಯ ಅಥವಾ ಸಂವಿಧಾನದ ರೂಪರೇಖೆಗಳು

ಭಾರತ ಸರ್ಕಾರದ ಸ್ವರೂಪ—ಇಂದಿನ ಭಾರತಕ್ಕೆ ಪ್ರಜಾಸತ್ತಾತ್ಮಕ ಸ್ವತಂತ್ರಸಮಷ್ಟಿರಾಜ್ಯ ಅಥವಾ ಗಣರಾಜ್ಯವೆಂದು ಹೆಸರು. ಇದು ಅನೇಕ ರಾಜ್ಯಗಳಿಂದ ಕೂಡಿರುವ ಸಂಯುಕ್ತ ರಾಜ್ಯ. ಇದಕ್ಕೆ ಸೇರಿದ ರಾಷ್ಟ್ರಗಳನ್ನು

ಸಂವಿಧಾನದ ಒಂದನೆಯ ಅನುಸೂಚಿಯ ಎ.ಬಿ.ಸಿ.ಡಿ. ಭಾಗಗಳು ನಿರೂಪಿಸುವುವು. 'ಎ'ಭಾಗ ತಿಳಿಸುವ ಅಸ್ಸಾಂ, ಬೀಹಾರ್, ಬೊಂಬಾಯಿ, ಮಧ್ಯಪ್ರದೇಶ, ಮದರಾಸ್, ಒರಿಸ್ಸ, ಪಂಜಾಬ್, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಇವು ಗೌರ್‍ನರ (ರಾಜ್ಯಪಾಲರ) ಆಳಿಕೆಗೂ, 'ಬಿ'ಭಾಗ ತಿಳಿಸುವ ಹೈದರಾಬಾದ್, ಮಧ್ಯಭಾರತ, ಮೈಸೂರು, ಪಾಟಿಯಾಲ ಮತ್ತು ಪೂರ್ವ ಪಂಜಾಬ್ ರಾಜ್ಯಗಳ ಒಕ್ಕೂಟ, ರಾಜಾಸ್ಥಾನ, ಸೌರಾಷ್ಟ್ರ, ತಿರುವಾಂಕೂರ್-ಕೊಚಿನ್ ಇವು ರಾಜಪ್ರಮುಖರ ಆಳಿಕೆಗೂ 'ಸಿ'ಭಾಗದಲ್ಲಿ ನಮೂದಾಗಿರುವ ಅಜ್ಮೀರ್ ಭೋಪಾಲ್, ಬಿಲಾಸ್ ಪುರ್, ಕೂಚ್-ಬಿಹಾರ್, ಕೊಡಗು, ದೆಹಲಿ, ಹಿಮಾಚಲ ಪ್ರದೇಶ, ಕಚ್, ಮಣಿಪುರ, ತ್ರಿಪುರ ಇವು ಲೆಫ್ಟಿನೆಂಟ್ ಗೌರ್‍ನರ್ (ಉಪರಾಜ್ಯಪಾಲ) ಅಥವಾ ಚೀಫ್ ಕಮಿಷನ್ನರ (ಮುಖ್ಯ ಆಯುಕ್ತರ) ಆಳಿಕೆಗೂ 'ಡಿ'ಭಾಗ ತಿಳಿಸುವ ಅಂದಮಾನ್ ಮತ್ತು ನಿಕೋಬಾರ್ ದ್ವೀಪಗಳು ಅಧ್ಯಕ್ಷ ಅಥವಾ ಅವನಿಂದ ನೇಮಿತವಾದ ಚೀಫ್‌ಕಮಿಷನ್ನರ (ಮುಖ್ಯ ಆಯುಕ್ತರ) ಆಳಿಕೆಗೂ ಒಳಪಟ್ಟಿವೆ.

ಭಾರತಕ್ಕೆ ಹೊಸ ರಾಷ್ಟ್ರಗಳನ್ನು ವಿಧಿಪೂರ್ವಕವಾಗಿಯೂ ಷರತ್ತುಗಳಿಗನುಸಾರವಾಗಿಯೂ ಸೇರಿಸಿಕೊಳ್ಳಲು ಪಾರ್ಲಿಮೆಂಟಿಗೆ (ಸಂಸದಿಗೆ) ಅಧಿಕಾರವಿದೆ. ದೊಡ್ಡ ರಾಜ್ಯವನ್ನು ಒಡೆದು ಸಣ್ಣ ರಾಜ್ಯಗಳನ್ನಾಗಿ ಮಾಡುವುದು, ಎರಡು ಅಥವಾ ಅನೇಕ ರಾಜ್ಯಗಳನ್ನು ಒಟ್ಟುಗೂಡಿಸುವುದು, ಹೊಸ ರಾಜ್ಯವನ್ನು ಸ್ಥಾಪಿಸುವುದು, ಹಳೆಯ ರಾಜ್ಯವನ್ನು ವಿಸ್ತರಿಸುವುದು ಅಥವಾ ಕಡಿಮೆಮಾಡುವುದು, ರಾಜ್ಯಗಳ ಸೀಮೆಯನ್ನೂ ಹೆಸರುಗಳನ್ನೂ ಬದಲಾಯಿಸುವುದು—ಇವು ಪಾರ್ಲಿಮೆಂಟಿನ ವ್ಯಾಪ್ತಿಗೆ ಸೇರಿವೆ. ಆದರೆ ಮೇಲ್ಕಂಡ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಮುಂಚಿತವಾಗಿ ಸಂಬಂಧಪಟ್ಟ ರಾಜ್ಯಗಳ ವಿಧಾನಮಂಡಲದ ಮತ್ತು ಅಧ್ಯಕ್ಷನ ಒಪ್ಪಿಗೆಯನ್ನು ಪಾರ್ಲಿಮೆಂಟ್ ಪಡೆಯಬೇಕು.

ಭಾರತ ಸಂವಿಧಾನದ ವೈಶಿಷ್ಟ್ಯ—ಭಾರತವನ್ನು ಪ್ರಜಾಸತ್ತಾತ್ಮಕ ಸ್ವತಂತ್ರ ಸಮಷ್ಟಿ ರಾಜ್ಯವೆಂದು ಸಂವಿಧಾನ ಘೋಷಿಸಿರುವುದು. ಇದರ ಪರಮಾಧಿಕಾರಕ್ಕೆ ಪ್ರಜೆಗಳೇ ಮೂಲ.

೧. **ಪ್ರಸ್ತಾವನೆ**—ಆರ್ಥಿಕ ಮತ್ತು ರಾಜಕೀಯ ವ್ಯವಹಾರಗಳಲ್ಲಿ ನ್ಯಾಯವನ್ನೂ ಆಲೋಚನೆ, ಪ್ರಕಟಣೆ, ಮತಶ್ರದ್ಧೆ, ದೈವೋಪಾಸನೆಗಳಲ್ಲಿ ಸ್ವಾತಂತ್ರ್ಯವನ್ನೂ ಜೀವನದ ಅಂತಸ್ತು ಅವಕಾಶಗಳ ವಿಚಾರದಲ್ಲಿ ಸಮಾನತೆಯನ್ನೂ ಪ್ರಜಾವ್ಯಕ್ತಿಯ ಘನತೆಯನ್ನೂ ಜನಪದದ ಐಕಮತ್ಯವನ್ನೂ ಪ್ರತಿಷ್ಠಿತಗೊಳಿಸುವುದು ರಾಜ್ಯದ ಪರಮಧ್ಯೇಯ ಎಂಬುದನ್ನು ಸಂವಿಧಾನದ ಪ್ರಸ್ತಾವನೆ ನಿರೂಪಿಸುವುದು.

ರಾಷ್ಟ್ರಾಧ್ಯಕ್ಷನು ನಿರ್ವಾಚಿತಾಧಿಕಾರಿಯಾಗಿರುವುದರಿಂದ ಭಾರತ ಸಂವಿಧಾನಕ್ಕೆ ಗಣರಾಜ್ಯವೆಂಬ ಹೆಸರು ವಾಸ್ತವವಾಗಿ ಸಲ್ಲುವುದು.

೨. **ಸಂಯುಕ್ತರಾಜ್ಯ**—ರಚನೆಯಲ್ಲಿ ಭಾರತ ಒಂದು ಸಂಯುಕ್ತರಾಜ್ಯ. ಇದರಲ್ಲಿ ಕೇಂದ್ರಸರ್ಕಾರ, ರಾಜ್ಯಗಳ ಸರ್ಕಾರಗಳು ಎಂಬ ಎರಡು ವಿಧ ಸರ್ಕಾರಗಳಿವೆ. ಇವು ತಮ್ಮ ತಮ್ಮ ಕ್ಷೇತ್ರಾಧಿಕಾರಕ್ಕೆ ಸೇರಿದ ವಿಷಯಗಳ ಮೇಲೆ ಪೂರ್ಣಾಧಿಕಾರ ನಡೆಸುವುವು. ಭಾರತವನ್ನು ರಾಜ್ಯಗಳ ಯೂನಿಯನ್ ಅಥವಾ ಸಂಘವೆಂದು ಸಂವಿಧಾನ ವಿವರಿಸಿದೆ. ಸಂವಿಧಾನ 'ಸಂಯುಕ್ತ' ಶಬ್ದವನ್ನು ಉಪಯೋಗಿಸದಿದ್ದರೂ ಅದರ ಮೂಲಾರ್ಥದ ದೃಷ್ಟಿಯಲ್ಲಿ ಭಾರತವನ್ನು ಸಂಯುಕ್ತ ರಾಜ್ಯವೆಂದೇ ಪರಿಗಣಿಸಬೇಕು. ಅಮೆರಿಕ, ಕೆನಡ, ಆಸ್ಟ್ರೇಲಿಯಾಗಳಂತೆ ಭಾರತ ಸಂಯುಕ್ತರಾಜ್ಯವಾಗಿದ್ದರೂ ಇದರಲ್ಲಿ ಎರಡು ವಿಧ ಸರ್ಕಾರಗಳಿದ್ದರೂ ದೇಶವನ್ನು ಒಡೆಯದೆ ಒಟ್ಟುಗೂಡಿಸಿ, ಬಲಪಡಿಸಲು ಸಂವಿಧಾನ ಅವಕಾಶ ಕಲ್ಪಿಸಿ ಕೆಲವು ಮೂಲ ವಿಷಯಗಳಲ್ಲಿ ಏಕರೂಪತೆಗೆ ಪ್ರಾಶಸ್ತ್ಯ ಕೊಟ್ಟಿದೆ. ಉದಾಹರಣೆಗಾಗಿ ಭಾರತದಲ್ಲಿ ಎರಡು ವಿಧ ಪೌರತ್ವ (ನಾಗರೀಕತಾಧಿಕಾರ)ವಿಲ್ಲ, ಎರಡು ವಿಧ ನ್ಯಾಯಸ್ಥಾನಗಳಿಲ್ಲ, ಸಿವಿಲ್ ಮತ್ತು ಕ್ರಿಮಿನಲ್ ಕಾನೂನುಗಳಲ್ಲಿ ಪ್ರತ್ಯೇಕತ್ವ ವೈವಿಧ್ಯತೆಗಳಿಲ್ಲ. ಇವು ಏಕರೂಪತೆಯನ್ನು ತಾಳಿ ಇಡೀ ದೇಶಕ್ಕೆ ಅನ್ವಯಿಸುವುವು. ಎಲ್ಲಾ ಸರ್ಕಾರಗಳ ಪ್ರಯೋಜನಕ್ಕಾಗಿ ಒಂದೇ ವಿಧ ಉತ್ತಮ ಪದಾಧಿಕಾರಿವರ್ಗ ಏರ್ಪಡಿಸಲ್ಪಟ್ಟಿದೆ. ವಿತ್ತೀಯ ಪ್ರಶಾಸನ ಮತ್ತು ನಿಯಂತ್ರಣಗಳಲ್ಲಿ ಏಕರೂಪತೆಯಿದೆ. ಕೇಂದ್ರವನ್ನು ತ್ಯಜಿಸಲು ರಾಜ್ಯಗಳಿಗೆ ಅವಕಾಶಕೊಟ್ಟಿಲ್ಲ.

ಇತರ ಸಂಯುಕ್ತ ರಾಜ್ಯಗಳ ಸಂವಿಧಾನಗಳಂತೆ ನಮ್ಮ ಸಂವಿಧಾನದಲ್ಲಿ ಕಾಠಿಣ್ಯತೆಯಿಲ್ಲ. ಇದನ್ನು ಇಷ್ಟಬಂದಾಗ ಸಂಶೋಧನೆಮಾಡುವುದು ಸುಲಭಸಾಧ್ಯ. ಅಮೆರಿಕದಲ್ಲಿರುವ ದುರ್ಬಲತೆ, ಸಂಪ್ರದಾಯ ಪಾಲನೆ, ಅತಿಸೂತ್ರತೆ ಮೊದಲಾದುವು ನಮ್ಮ ಸಂವಿಧಾನದಲ್ಲಿಲ್ಲ. ಸಾಮಾನ್ಯವಾಗಿ ಸಂಯುಕ್ತರಾಜ್ಯಗಳಿಗೆ ತಮ್ಮ ಸಂವಿಧಾನದ ಮೂಲಸ್ವರೂಪವನ್ನೂ ವಿವಿಧ ಸರ್ಕಾರಗಳ ಅಧಿಕಾರವ್ಯಾಪ್ತಿಯನ್ನೂ ಬದಲಾಯಿಸುವುದು ಕಷ್ಟ. ನಮ್ಮ ಸಂವಿಧಾನದಲ್ಲಾದರೋ ಒಂದು ವಿಧ ಸರಳತೆಯಿದೆ, ಮೃದುತ್ವವಿದೆ. ಅಧಿಕಾರವಿಭಜನೆ ಮತ್ತು ಆಡಳಿತ ವಿಷಯಗಳ ಹಂಚಿಕೆ ಪ್ರತಿಯೊಂದು ಸಂಯುಕ್ತರಾಜ್ಯದ—ಅದರಲ್ಲೂ ಅಮೆರಿಕದ—ವಿಶೇಷ ಲಕ್ಷಣ. ಇವುಗಳನ್ನು ಕದಲಿಸುವುದು, ಬದಲಾಯಿಸುವುದು ಬಹು ಕಷ್ಟ. ಕೇಂದ್ರ ಸರ್ಕಾರದ ವ್ಯಾಪ್ತಿಗೆ ಸೇರುವ ವಿಷಯಗಳ ಮೇಲೆ ಅಂಗರಾಜ್ಯಗಳಿಗೆ ಪ್ರವೇಶವಿಲ್ಲ. ಅಂಗರಾಜ್ಯಗಳ ವ್ಯಾಪ್ತಿಗೆ ಸೇರುವ ವಿಷಯಗಳ ಮೇಲೆ ಕೇಂದ್ರಸರ್ಕಾರಕ್ಕೆ

ಅಧಿಕಾರವಿಲ್ಲ. ಇದರಂತೆ ಅಂಗತ್ರಯಗಳ ಅಧಿಕಾರವ್ಯಾಪ್ತಿಯ ವಿಚಾರದಲ್ಲಿಯೂ ಒಂದು ವಿಧ ಪ್ರತ್ಯೇಕತ್ವವಿದೆ. ಅಮೆರಿಕದಲ್ಲಿ ಸಂವಿಧಾನವನ್ನು ಉಲ್ಲಂಘಿಸಿ ವರ್ತಿಸಲು ಯಾರಿಗೂ ಅವಕಾಶ ಕೊಡದಂತೆ ಅದನ್ನು ಪ್ರಧಾನ ನ್ಯಾಯಾಂಗ ರಕ್ಷಿಸುವುದು. ಹೀಗೆಂದ ಮೇಲೆ ಸಂವಿಧಾನದ ಅರ್ಥನಿರೂಪಣೆ ಮತ್ತು ವ್ಯಾಖ್ಯಾನ, ಪ್ರಧಾನ ನ್ಯಾಯಾಂಗದ ಕೈಸೇರಿ, ದೇಶದಲ್ಲಿ ನ್ಯಾಯಾಂಗದ ಪ್ರಾಶಸ್ತ್ಯ, ಅತಿ ಸೂತ್ರತೆ ಇವು ಹೆಚ್ಚಿರುವುದು ಸಹಜವೆಂಬುದು ವ್ಯಕ್ತವಾಗುತ್ತದೆ. ಈ ಬಗೆಯ ದೋಷವನ್ನು ತಪ್ಪಿಸಲು ಭಾರತ ರಾಜ್ಯನಿಬಂಧನಕಾರರು ಕೆಲವು ಪ್ರಕರಣಗಳನ್ನು ನಿರೂಪಿಸಿ ೪೭ ಆಡಳಿತ ವಿಷಯಗಳ ಮೇಲೆ ಕೇಂದ್ರ ಸರ್ಕಾರ ಮತ್ತು ರಾಜ್ಯಗಳು ವಿಧಿಗಳನ್ನು ರಚಿಸಬಹುದೆಂಬ ಅಂಶವನ್ನು ಸ್ಪಷ್ಟಪಡಿಸಿರುವರು. ಭಾರತಸರ್ಕಾರ ಜವಾಬ್ದಾರಿಸರ್ಕಾರವಾದ್ದರಿಂದ ಅಂಗತ್ರಯಗಳ ಪ್ರತ್ಯೇಕತ್ವಕ್ಕೆ ಸಂವಿಧಾನ ಅವಕಾಶವನ್ನೇ ಕೊಟ್ಟಿಲ್ಲ.

ಶಾಂತಿಕಾಲದಲ್ಲಿ ಸಂಯುಕ್ತರಾಜ್ಯದ ಸಂಪ್ರದಾಯಗಳಂತೆ ರಾಜ್ಯಗಳನ್ನು ಪ್ರತ್ಯೇಕವಾಗಿ ಆಳುವುದಕ್ಕೂ, ಆಪತ್ಕಾಲದಲ್ಲಿ ರಾಜ್ಯಗಳನ್ನೆಲ್ಲ ಒಟ್ಟುಗೂಡಿಸಿ ಯೂನಿಟರಿ ರಾಜ್ಯದಂತೆ ಆಳುವುದಕ್ಕೂ ಅವಕಾಶವಿರುವುದು ಭಾರತ ಸಂವಿಧಾನದ ಮತ್ತೊಂದು ವೈಶಿಷ್ಟ್ಯ. ಭಾರತದ ಶ್ರೇಷ್ಠಾಧಿಕಾರಿಗೆ ರಾಷ್ಟ್ರಾಧ್ಯಕ್ಷನೆಂಬ (ಪ್ರೆಸಿಡೆಂಟ್) ಹೆಸರಿದ್ದರೂ ನಮ್ಮ ಸರ್ಕಾರ ಅಮೆರಿಕ ಸಂಯುಕ್ತರಾಜ್ಯದ ಪ್ರೆಸಿಡೆಂಟ್‌ಷಿಯಲ್ ಸರ್ಕಾರಕ್ಕೆ ಹೋಲಿಕೆಯಲ್ಲ. ಇಂಗ್ಲೆಂಡಿನ ಪಾರ್ಲಿಮೆಂಟರಿ ಅಥವಾ ಜವಾಬ್ದಾರಿ ಸರ್ಕಾರ ಪದ್ಧತಿಯನ್ನೇ ಅನುಸರಿಸಿರುವುದು. ಪ್ರಶಾಸನ ಅಧ್ಯಕ್ಷನ ಹೆಸರಿನಲ್ಲಿ ನಡೆದರೂ ಪ್ರಶಾಸನೀಯ ವಿಷಯಗಳಿಗೆ ಇವನು ಜವಾಬ್ದಾರನಲ್ಲ. ಇವನ ಸಲಹೆಗಾರರಾದ ಮಂತ್ರಿಗಳೇ ಸಂಸದಕ್ಕೆ ಜವಾಬ್ದಾರರು. ಮಂತ್ರಿಗಳು ಪ್ರಜೆಗಳ ನಿರ್ವಾಚಿತ ಪದಾಧಿಕಾರಿಗಳಾಗಿರುವದರಿಂದಲೂ ಸಂಸದಕ್ಕೆ ಜವಾಬ್ದಾರರಾಗಿರುವುದರಿಂದಲೂ ಸರ್ಕಾರ ನಿರ್ವಹಿಸುವ ಕಾರ್ಯಗಳಿಗೆ ಪ್ರಜೆಗಳ ಮತ್ತು ಅವರ ಪ್ರತಿನಿಧಿಗಳ ಅನುಮತಿ ಇದೆ ಎಂಬುದು ವ್ಯಕ್ತವಾಗುವುದು. ಪ್ರಾಂತಗಳ ಹಿಂದಿನ ಅನುಭವ, ದೇಶದ ಪುರಾತನ ಸಂಸ್ಕೃತಿ ಇವುಗಳ ಹಿನ್ನೆಲೆಯಲ್ಲಿ ಜವಾಬ್ದಾರಿ ಸರ್ಕಾರಪದ್ಧತಿಯನ್ನು ನಿಬಂಧನಕಾರರು ಆಚರಣೆಗೆ ತಂದಿರುವರು.

೩. ಭಾರತ ಸಂವಿಧಾನದ ಗಾತ್ರ—ಭಾರತ ಸಂವಿಧಾನದಲ್ಲಿ ೩೯೫ ಅನುಚ್ಛೇದಗಳು ೮ ಅನುಸೂಚಿಗಳಿರುವುದನ್ನು ನೋಡಿ ಕೆಲವರು ಇದು ಎಲ್ಲಾ ಸಂವಿಧಾನಗಳಿಗಿಂತ ಬಹಳ ದೊಡ್ಡದು ಎಂಬದಾಗಿ ಟೀಕಿಸುವರು. ಒಂದು ಖಂಡದಂತೆ ವಿಸ್ತಾರವಾಗಿರುವ ಈ ದೇಶದ ಹಿತ, ವಿವಿಧ ಗುಂಪುಗಳ ಪ್ರತ್ಯೇಕ ಸಂಸ್ಕೃತಿ,

ಅನೇಕಾನೇಕ ವೃತ್ತಿಗಳ ಹಿತರಕ್ಷಣೆ ಇವೇ ಮೊದಲಾದವುಗಳನ್ನು ರಕ್ಷಿಸುವುದು ಸಂವಿಧಾನದ ಮುಖ್ಯ ಗುರಿಯಾದ್ದರಿಂದ ಇದು ದೊಡ್ಡದಾಗಿಲ್ಲದಿದ್ದರೆ ಗತ್ಯಂತರವೇ ಇಲ್ಲ. ಜೊತೆಗೆ ಹೊಸದಾಗಿ ಜನ್ಮ ತಾಳಿರುವ ನಮ್ಮ ಪ್ರಜಾಸರ್ಕಾರ ಶಾಶ್ವತವಾಗಿ ನಿಲ್ಲಬೇಕಾದರೆ ಅದರ ಅಂಗೋಪಾಂಗಗಳ ಸ್ವಭಾವ ಲಕ್ಷಣಗಳೇನು ಅವುಗಳ ಕ್ಷೇತ್ರಾಧಿಕಾರವೇನು, ಕರ್ತವ್ಯಗಳೇನು ಎಂಬ ವಿಷಯಗಳನ್ನು ವಿವರಿಸುವುದು ಅತ್ಯವಶ್ಯಕ.

೪. **ಮೂಲ ಹಕ್ಕುಗಳು**—ಸಂವಿಧಾನ ಪ್ರಜೆಗಳ ಮೂಲ ಹಕ್ಕುಗಳನ್ನು ನಿರೂಪಿಸುವುದು ಅನೇಕ ರಾಜ್ಯಗಳ ಸಂಪ್ರದಾಯ. ಈ ಹಕ್ಕುಗಳು ಉದಾತ್ತ ಧ್ಯೇಯದಿಂದ ಕೂಡಿದ ಮಹತ್ವಪೂರ್ಣವಾದ ಒಂದು ರಾಜಕೀಯ ಸನ್ನದು. ಸಾರ್ವಜನಿಕ ನೀತಿಯ ದೃಷ್ಟಿಯಲ್ಲಿ ಸರ್ಕಾರ ಯಾವ ಕೆಲಸವನ್ನು ಮಾಡುವುದು ಉತ್ತಮ ಎಂಬುದನ್ನು ನಿರ್ಧರಿಸಿ ಸರ್ಕಾರಕ್ಕೆ ಪ್ರಜಾಮತದ ಬೆಂಬಲ ದೊರಕಿಸುವ ಸಾಧನೋಪಾಯ. ರಾಷ್ಟ್ರದ ಮತ್ತು ವಿಶ್ವದ ಶಾಂತಿಗೆ, ಭದ್ರತೆಗೆ ನೆರವಾಗಲು ಪ್ರಜೆಗಳಿಗೆ ಉತ್ತೇಜನ ಕೊಡುವ ಉಪಕರಣವಿಶೇಷ. ಈ ಕಾರಣಗಳಿಂದ ಭಾರತ ಸಂವಿಧಾನ ಮೂಲಹಕ್ಕುಗಳನ್ನು ನಿರೂಪಿಸಿ ಕಾಪಾಡಲು ಏರ್ಪಡಿಸಿರುವುದು.

ಮೂಲ ಹಕ್ಕುಗಳ ವಿವರವನ್ನು—ವಿವಿಧ ಅಂಶಗಳನ್ನು ಭಾರತ ಸಂವಿಧಾನ ತಿಳಿಸಿರುವಂತೆ ಇನ್ನಾವ ಸಂವಿಧಾನವೂ ತಿಳಿಸಿಲ್ಲ. ಇತರ ದೇಶಗಳ ರಾಜ್ಯನಿಬಂಧನೆಕಾರರು ತಮ್ಮ ಪ್ರಜೆಗಳಿಗೆ ಕೊಟ್ಟಿರುವ ಮೂಲಹಕ್ಕುಗಳನ್ನೂ ಆ ಪ್ರಜೆಗಳ ಅನುಭವವನ್ನೂ ಎಡರುತೊಡರುಗಳನ್ನೂ ಅವುಗಳ ರಕ್ಷಣಾಕ್ರಮವನ್ನೂ ಗಮನದಲ್ಲಿಟ್ಟು ಭಾರತರಾಜ್ಯನಿಬಂಧನಕಾರರು ಮೂಲ ಹಕ್ಕುಗಳು ಪ್ರಜೆಗಳಿಗೆ ಸುಲಭವಾಗಿ ದೊರೆಯುವಂತೆಯೂ ಪ್ರಯೋಜನವಾಗುವಂತೆಯೂ ಏರ್ಪಡಿಸಿ, ಇವುಗಳ ರಕ್ಷಣೆಯ ಕಾರ್ಯವನ್ನು ಪ್ರಧಾನ ನ್ಯಾಯಸ್ಥಾನಕ್ಕೆ ವಹಿಸಿರುವರು.

೫. **ಪ್ರಶಾಸನೀಯ ತತ್ವಗಳು**—ಸಾರ್ವಜನಿಕ ಪ್ರಶಾಸನೀಯ ನೀತಿಯನ್ನು (ಪ್ರೇರಕತ್ವವನ್ನು) ನಿರ್ದೇಶಿಸಿ, ಪ್ರತಿಯೊಂದು ಸರ್ಕಾರ ಆವಶ್ಯಕವಾಗಿ ಮಾಡಬೇಕಾದ ಕೆಲಸಗಳು ಯಾವುವು ಎಂಬುದನ್ನೂ ತ್ಯಜಿಸಬೇಕಾದ ಕಾರ್ಯಗಳು ಯಾವುವು ಎಂಬುದನ್ನೂ ವಿವರಿಸಿರುವುದು ಭಾರತ ಸಂವಿಧಾನದ ಮತ್ತೊಂದು ವಿಶೇಷ ಲಕ್ಷಣ. ಈ ಪ್ರೇರಕ ತತ್ವಗಳನ್ನು ಗಮನದಲ್ಲಿಟ್ಟು ಸೂಕ್ತ ವಿಧಿಗಳನ್ನು ರಚಿಸಿ ಅನುಷ್ಠಾನಕ್ಕೆ ತರಲು ಪ್ರತಿಯೊಂದು ಸರ್ಕಾರ ಯತ್ನಿಸಬೇಕೆಂಬುದೇ ಸಂವಿಧಾನದ ಗುರಿ. ಈ ತತ್ವಗಳು ಮಹತ್ವಪೂರ್ಣವಾದ ನೈತಿಕ ತತ್ವಗಳಾಗಿರುವುದರಿಂದಲೂ ಪ್ರಜೆಗಳ ಅಭ್ಯುದಯಕ್ಕೂ ಪ್ರಗತಿಗೂ ನೆರವಾಗಿರುವುದರಿಂದಲೂ ರಾಜ್ಯಗಳು ಇವುಗಳನ್ನು ಅಲಕ್ಷ್ಯದಿಂದ ನೋಡುವುದು ಸಾಧ್ಯವಲ್ಲ, ಸಾಧುವೂ ಅಲ್ಲ.

(೬) ಸಂವಿಧಾನದ ಸಂಶೋಧನೆ—ಸಂವಿಧಾನವನ್ನು ಸಂಶೋಧನಮಾಡಲು ಸೌಲಭ್ಯಗಳನ್ನು ಕಲ್ಪಿಸಿರುವುದು ಭಾರತದ ಇನ್ನೊಂದು ವೈಶಿಷ್ಟ್ಯ. ಕಾಂಗ್ರೆಸ್ ಮತ್ತು ೪೮ ರಾಜ್ಯಗಳ ವಿಧಾನಮಂಡಲಗಳ ಪ್ರತಿನಿಧಿಗಳಿಂದ ಕೂಡಿದ ಪ್ರತ್ಯೇಕ ಸಭೆಯ ಒಪ್ಪಿಗೆ ಪಡೆಯುವ ಅಮೆರಿಕ ರಾಜ್ಯನಿಬಂಧನೆಯ ಕಷ್ಟ ನಮ್ಮ ಸಂವಿಧಾನದಲ್ಲಿಲ್ಲ, ಚರ್ಚಾಸ್ಪದವಾದ ಸ್ವಿಟ್ಸರ್‌ಲೆಂಡಿನ ಪ್ರಜಾನಿರ್ಧಾರ ಪದ್ಧತಿಯನ್ನು ಉಪಯೋಗಿಸುವ ಆಗತ್ಯವೂ ಇಲ್ಲ. ಮುಖ್ಯ ವಿಷಯಗಳನ್ನು ಅಂದರೆ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟುಗಳಿಗೆ ಅನ್ವಯಿಸುವ ವಿಷಯ, ಕೇಂದ್ರ ಸರ್ಕಾರ ಮತ್ತು ರಾಜ್ಯಗಳಿಗೆ ವಿಧಿ ರಚನೆಯ ಕಾರ್ಯವನ್ನು ಹಂಚುವ ವಿಚಾರ, ಸಂಸದಿನಲ್ಲಿ ರಾಜ್ಯಗಳಿಗಿರುವ ಪ್ರಾತಿನಿಧ್ಯದ ವಿಚಾರ ಇವುಗಳನ್ನು ಬದಲಾಯಿಸಬೇಕಾದರೆ ಎರಡು ಸಭೆಗಳ ಬಹುಮತದ ಒಪ್ಪಿಗೆಯೂ, ಕನಿಷ್ಟಪಕ್ಷ ಅರ್ಧ ರಾಜ್ಯಗಳ ವಿಧಾನಮಂಡಲದ ಬಹುಮತದ ಒಪ್ಪಿಗೆಯೂ ಅತ್ಯಾವಶ್ಯಕ. ಉಳಿದ ವಿಷಯಗಳನ್ನು ಸಂಶೋಧನಮಾಡುವುದಕ್ಕೆ ಸಂಸದಿನ ಎರಡು ಪ್ರತ್ಯೇಕ ಸಭೆಗಳ ಬಹುಮತ (ಅಂದರೆ ಸಭೆಗಳಲ್ಲಿ ಹಾಜರಿದ್ದವರಲ್ಲಿ ಮೂರನೆಯ ಎರಡು ಭಾಗಕ್ಕಿಂತ ಕಡಿಮೆ ಇಲ್ಲದೆ ಬಹುಮತ) ದೊರೆತರೆ ಸಾಕು.

ರಾಷ್ಟ್ರಕತ್ವ, ನಾಗರಿಕತಾಧಿಕಾರ ಮತ್ತು ಪ್ರಜೆಗಳ ಮೂಲಹಕ್ಕುಗಳು

ನಾಗರಿಕತಾಧಿಕಾರ—ಭಾರತ ಸಂವಿಧಾನ ಆಚರಣೆಗೆ ಬಂದಾಗ ಯಾರು ಈ ದೇಶದ ನಿವಾಸಿಗಳಾಗಿರುವರೋ ಯಾರು ಹಾಗೂ ಯಾರ ತಂದೆತಾಯಿಗಳು ಈ ದೇಶದಲ್ಲಿ ಹುಟ್ಟಿದವರೋ ಅಥವಾ ಐದು ವರ್ಷಗಳ ಮುಂಚಿನಿಂದ ಇಲ್ಲಿ ನೆಲಸಿದವರೋ ಅಂಥವರು ನಾಗರಿಕತಾಧಿಕಾರಕ್ಕೆ ಅರ್ಹರು. ಯಾರು ಪಾಕಿಸ್ಥಾನದಿಂದ ಭಾರತಕ್ಕೆ ೧೯೪೮ ನೆಯ ಜುಲೈ ೧೯ ನೆಯ ತಾರೀಖಿಗೆ ಮುಂಚೆ ವಲಸೆ ಬಂದವರೋ ಮತ್ತು ಯಾರು ಅಥವ ಯಾರ ಮಾತಾಪಿತೃಗಳು ಅಥವ ಅಜ್ಜ ಅಜ್ಜಿಯವರು ಈ ದೇಶದಲ್ಲಿ ಹುಟ್ಟಿದವರೋ ಅಥವ ಯಾರು ೧೯೪೮ನೆಯ ಜುಲೈ ೧೯ ನೆಯ ತಾರೀಖು ಆದಮೇಲೆ ಇಲ್ಲಿಗೆ ವಲಸೆಬಂದು ಇಲ್ಲಿಯೇ ಖಾಯಂ ಆಗಿ ವಾಸಿಸಲಿಚ್ಛಿಸುವೆವೆಂದು ವಿಧಿಪೂರ್ವಕವಾಗಿ ಭಾರತಸರ್ಕಾರದ ಪದಾಧಿಕಾರಿಗಳ ಸಮ್ಮುಖದಲ್ಲಿ ತಮ್ಮ ಹೆಸರುಗಳನ್ನು ಅಧಿಕೃತ ಪಟ್ಟಿಯಲ್ಲಿ ಸೇರಿಸಿಕೊಳ್ಳುವರೋ ಅಂಥವರಿಗೂ ನಾಗರಿಕತಾಧಿಕಾರವಿದೆ. ಯಾರು ಅಥವಾ ಯಾರ ಮಾತಾಪಿತೃಗಳು ಅಥವಾ ಅಜ್ಜ ಅಜ್ಜಿಯವರು ಈ ದೇಶದಲ್ಲಿ ಜನಿಸಿ ಪರದೇಶದಲ್ಲಿ ವಾಸಮಾಡುತ್ತಾ ಆ ಪರದೇಶದಲ್ಲಿರುವ ಭಾರತ

ರಾಯಭಾರಿಯ ಸಮ್ಮುಖದಲ್ಲಿ ಭಾರತದ ಪ್ರಜೆಯಾಗಿರಲು ಇಚ್ಛಿಸುವೆವೆಂದು ತಮ್ಮ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸಿಕೊಳ್ಳುವರೋ ಅಂಥವರೂ ಭಾರತದ ಪ್ರಜೆಗಳು. ಇಲ್ಲಿಂದ ಪಾಕಿಸ್ಥಾನಕ್ಕೆ ವಲಸೆಹೋಗುವವರೂ ಪರರಾಷ್ಟ್ರದ ರಾಷ್ಟ್ರಕತ್ವವನ್ನು ಸ್ವೀಕರಿಸುವವರೂ ಈ ದೇಶದ ರಾಷ್ಟ್ರಕತ್ವವನ್ನು ಕಳೆದುಕೊಳ್ಳುವರು. ಈ ರಾಜ್ಯದಿಂದ ದೊರೆಯುವ ಹಕ್ಕುಬಾಧ್ಯತೆಗಳನ್ನು ಅವಿಚ್ಛಿನ್ನವಾಗಿ ಅಡ್ಡಿಆತಂಕಗಳಿಲ್ಲದೆ ಅನುಭವಿಸಿ ಕೊಂಡಿರಲು ಭಾರತದ ಪ್ರಜೆಗಳೆಲ್ಲರಿಗೆ ಅವಕಾಶವಿದೆ. ನಾಗರಿಕತಾಧಿಕಾರಕ್ಕೆ ಸಂಬಂಧಿಸುವ ವಿವಿಧ ವಿಷಯುಗಳಮೇಲೆ ಸಂಸದಿಗೆ ಪೂರ್ಣಾಧಿಕಾರವಿದೆ.

ಮೂಲಹಕ್ಕುಗಳು—ವ್ಯಕ್ತಿಯ ಬೆಳವಣಿಗೆಗೂ ವಿಕಾಸತೆಗೂ ಸಮಾನತ್ವವೂ ಸ್ವಾತಂತ್ರ್ಯವೂ ಮೂಲಾಧಾರವೆಂಬುದನ್ನು ಗಮನದಲ್ಲಿಟ್ಟು ಭಾರತ ರಾಜ್ಯನಿಬಂಧನೆಕಾರರು ಈ ಹಕ್ಕುಗಳು ಸಮಸ್ತ ಪ್ರಜೆಗಳಿಗೆ ಲಭಿಸುವಂತೆಯೂ ಇವು ಅವರ ಜೀವನದ ನಾನಾ ಅಂಶಗಳನ್ನು ವ್ಯಾಪಿಸುವಂತೆಯೂ ತಕ್ಕ ಸೌಕರ್ಯಗಳನ್ನು ಕಲ್ಪಿಸಿರುವರು. ನ್ಯಾಯದ ದೃಷ್ಟಿಯಲ್ಲಿಯೂ ವಿಧಿಗಳಿಂದ ಪ್ರಯೋಜನ ಪಡೆಯುವ ವಿಚಾರದಲ್ಲಿಯೂ ಪ್ರಜೆಗಳಲ್ಲಿ ಸರ್ವಸಮಾನತೆ ಇದೆ. ಮತ, ಜಾತಿ, ಲಿಂಗಭೇದಗಳ ಕಾರಣಗಳಿಂದ ಪ್ರಜೆಗಳಲ್ಲಿ ಯಾವ ಸರ್ಕಾರವೂ ಪಕ್ಷಪಾತ ತೋರಿಸಕೂಡದು ; ಯಾರಿಗೂ ಯಾವವಿಧ ಅಡ್ಡಿ ಆತಂಕಗಳನ್ನೂ ಒಡ್ಡಕೂಡದು. ಅಂದರೆ ಅಂಗಡಿ, ಹೋಟಲು, ಕ್ರೀಡಾರಂಗ, ಭಾವಿ, ಕೆರೆ, ರಸ್ತೆ, ವಿಹಾರಸ್ಥಾನ ಇವುಗಳನ್ನು ಉಪಯೋಗಿಸುವ ವಿಚಾರದಲ್ಲಿ ಯಾವ ನಿರ್ಬಂಧಗಳೂ ಇರಕೂಡದು. ಈ ವಿಚಾರಗಳಲ್ಲಿ ಸ್ತ್ರೀಯರಿಗೂ, ಮಕ್ಕಳಿಗೂ ಪ್ರತ್ಯೇಕ ಏರ್ಪಾಡುಗಳನ್ನು ಮಾಡುವುದು ಮೇಲು. ಸಾರ್ವಜನಿಕ ಪ್ರಶಾಸನೀಯ ಸ್ಥಾನಗಳನ್ನು ಯಾವ ಪಂಗಡಕ್ಕೂ ಮೀಸಲಾಗಿಡಕೂಡದು. ವಿಶೇಷ ಸಂಧರ್ಭಗಳಲ್ಲಿ ಕೆಲವು ಹುದ್ದೆಗಳಿಗೆ (ಪದಗಳಿಗೆ) ಸ್ಥಳವಂದಿಗರು ಇರುವುದು ಮೇಲೆಂದು ತೋರಿದರೆ ಅಂಥ ಸಂದರ್ಭಗಳಲ್ಲಿ ಮಾತ್ರ ಪಾರ್ಲಿಮೆಂಟ್ ಸೂಕ್ತವಿಧಿಗಳನ್ನು ರಚಿಸಬಹುದು. ಹಿಂದುಳಿದವರಿಗೆ ಸರಿಯಾದ ಪ್ರಾತಿನಿಧ್ಯವಿಲ್ಲದಿದ್ದರೆ ಕೆಲವು ಪದಗಳನ್ನು ಅವರಿಗೆ ಕೊಡತಕ್ಕದ್ದು. ಯಾವ ರೀತಿಯಲ್ಲಿಯೂ ತಲೆದೋರದಂತೆ ಅಸ್ಪೃಶ್ಯತೆಯನ್ನು ನಿರ್ಮೂಲಗೊಳಿಸಬೇಕು. ಅಸ್ಪೃಶ್ಯತೆಯ ಕಾರಣದಿಂದ ಪ್ರತಿಬಂಧಕಗಳನ್ನೊಡ್ಡುವ ಪ್ರಜೆಗಳನ್ನು ಅಪರಾಧಿಗಳೆಂದು ಪರಿಗಣಿಸಬೇಕು. ಸೈನ್ಯಪ್ರಶಸ್ತಿ ವಿದ್ವತ್ಪ್ರಶಸ್ತಿಗಳು ವಿನಾ ಉಳಿದ ಯಾವವಿಧ ಪ್ರಶಸ್ತಿಗಳನ್ನೂ ರಾಜ್ಯ ಯಾರಿಗೂ ಕೊಡಕೂಡದು. ಪರರಾಷ್ಟ್ರಗಳು ಭಾರತೀಯರಿಗೆ ಪ್ರಶಸ್ತಿಗಳನ್ನು ಕೊಡಲೂ ಅನುಮತಿ ಕೊಡಕೂಡದು. ಈ ಆಜ್ಞೆ ಭಾರತ ಸರ್ಕಾರದ ಪದಾಧಿಕಾರಗಳಲ್ಲಿರುವ ಪರದೇಶದವರಿಗೂ ಅನ್ವಯಿಸುವುದು. ಇವರಾಗಲಿ ಪದಾಧಿ

ಕಾರಗಳಲ್ಲಿರುವ ಭಾರತೀಯರಾಗಲಿ ಅಧ್ಯಕ್ಷನ ಅಪ್ಪಣೆಯಿಲ್ಲದೆ ಇನ್ನೊಂದು ರಾಜ್ಯದಿಂದ ಯಾವ ಪ್ರತಿಫಲವನ್ನೂ ಬಹುಮಾನವನ್ನೂ ಸ್ವೀಕರಿಸಕೂಡದು.

ಸ್ವಾತಂತ್ರ್ಯ—ಭಾರತದ ಸಮಸ್ತ ಪ್ರಜೆಗಳಿಗೂ ಭಾಷಣ, ಪ್ರಕಟಣ, ಸಂಘಸ್ಥಾಪನೆ, ನಿರಾತಂಕವಾದ ಸಂಚಾರ, ತಂಗುವುದು, ನೆಲಸುವುದು, ಆಸ್ತಿಪಾಸ್ತಿಗಳನ್ನು ಸಂಪಾದಿಸಿ ಅನುಭವಿಸಿ ಪರಭಾರೆಮಾಡುವುದು, ಬೇಕಾದ ವೃತ್ತಿಗಳನ್ನವಲಂಬಿಸುವುದು ಇವುಗಳ ವಿಚಾರದಲ್ಲಿ ಸ್ವಾತಂತ್ರ್ಯವಿದೆ. ಈ ಸ್ವಾತಂತ್ರ್ಯದ ಹೆಸರಿನಲ್ಲಿ ಪ್ರಜೆಗಳು ಇತರರಿಗೆ ತೊಂದರೆ ಅವಮಾನಗಳನ್ನುಂಟುಮಾಡದಿರುವುದು ಬಹು ಮುಖ್ಯವಾದ್ದರಿಂದ ಅಪಭಾಷಣ, ದೂರು, ಅವಮಾನಕರವಾದ ಮಾತು, ನ್ಯಾಯಸ್ಥಾನಗಳಿಗೆ ತೋರಿಸುವ ಅಗೌರವ, ಸಾರ್ವಜನಿಕ ನಡತೆಗೆ, ಸಮಾಜ ಶಾಂತಿಗೆ ಕಳಂಕವನ್ನುಂಟುಮಾಡುವ ವರ್ತನೆ, ಸರ್ಕಾರವನ್ನುರುಳಿಸುವ ಪ್ರಯತ್ನ ಇವೇ ಮೊದಲಾದ ದುಷ್ಕೃತ್ಯಗಳನ್ನು ತಡೆಗಟ್ಟಲು ಸೂಕ್ತ ವಿಧಿಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರ ಕೊಟ್ಟಿದೆ. ಸಾರ್ವಜನಿಕ ಹಿತಕ್ಕನ್ವಯಿಸುವ ವೃತ್ತಿಗಳನ್ನು ಅವಲಂಬಿಸುವವರಿಗೆ ತಕ್ಕ ಯೋಗ್ಯತೆಯಿರಬೇಕೆಂದು ವಿಧಿಸುವುದಕ್ಕೂ ರಾಜ್ಯಕ್ಕೆ ಅಧಿಕಾರವಿದೆ. ಯಾವ ಕೃತ್ಯವನ್ನು ಮಾಡುವುದು ಅಪರಾಧವೆಂದು ವಿಧಿ ನಿರ್ದೇಶಿಸುವುದೋ ಅಂಥ ಕೃತ್ಯವನ್ನು ಮಾಡಿದವರಿಗೆ ಮಾತ್ರ ವಿಧಿ ವಿಧಿಸುವ ರೀತಿಯಲ್ಲಿ, ಪ್ರಮಾಣದಲ್ಲಿ ಸರ್ಕಾರ ಶಿಕ್ಷೆಯನ್ನು ವಿಧಿಸಬೇಕು. ಒಂದು ಅಪರಾಧಕ್ಕೆ ಎರಡಾವರ್ತಿ ಶಿಕ್ಷಿಸುವುದೂ ತನಗೆ ವಿರೋಧವಾಗಿ ಹೇಳಿಕೊಡುವಂತೆ ಅಪರಾಧಿಯನ್ನು ಬಲಾತ್ಕರಿಸುವುದೂ ತಪ್ಪು. ಬಂಧನದ ಕಾರಣವನ್ನು ಜಾಗ್ರತೆಯಾಗಿ ತಿಳಿಸದೆ ಯಾವ ಪ್ರಜೆಯನ್ನೂ ಸರ್ಕಾರ ಬಂಧಿಸಕೂಡದು. ಒಂದು ವೇಳೆ ಪ್ರಜೆಗಳನ್ನು ಬಂಧಿಸುವ ಪ್ರಸಂಗ ಒದಗಿದರೂ ಅಂಥವರನ್ನು ೨೪ ಗಂಟೆಯೊಳಗಾಗಿ ಸಮೀಪದಲ್ಲಿರುವ ಮ್ಯಾಜಿಸ್ಟ್ರೇಟಿನ ಮುಂದಿಡಬೇಕು ಮತ್ತು ವಕೀಲರ ಸಹಾಯವನ್ನು ಬಂಧಿತರಿಗೆ ದೊರಕಿಸಬೇಕು. ಮ್ಯಾಜಿಸ್ಟ್ರೇಟಿನ ಅಪ್ಪಣೆಯಿಲ್ಲದೆ ಯಾರನ್ನೂ ೨೪ ಗಂಟೆಗೆ ಹೆಚ್ಚಾಗಿ ಬಂಧನದಲ್ಲಿಡಕೂಡದು. ಆದರೆ 'ತಡೆಗಟ್ಟುವ' (ನಿವಾರಕ ನಿರೋಧ) ವಿಧಿಗಳ ವ್ಯಾಪ್ತಿಗೆ ಒಳಪಡುವ ಸಂದರ್ಭಗಳಿಗೆ ಮೇಲ್ಕಂಡ ವಿಧಿ ಅನ್ವಯಿಸುವುದಿಲ್ಲ, 'ತಡೆಗಟ್ಟುವ' ವಿಧಿಗೆ ಸಂಬಂಧಪಡುವವನನ್ನು ಮೂರು ತಿಂಗಳಿಗೆ ಹೆಚ್ಚಾಗಿ ಬಂಧನದಲ್ಲಿಡಕೂಡದು. ಈ ಅವಧಿಗೆ ಹೆಚ್ಚಾಗಿ ಅವನನ್ನು ಬಂಧನದಲ್ಲಿಡುವುದು ಆವಶ್ಯಕವೆಂದು ತೋರಿದರೆ ಹೈಕೋರ್ಟಿನ ನ್ಯಾಯಾಧೀಶರ ಯೋಗ್ಯತೆಯಿರುವ ಸದಸ್ಯರಿಂದ ಕೂಡಿದ ಸಲಹಾ ಸಮಿತಿಯನ್ನು ಏರ್ಪಡಿಸಿ ಅದರ ಒಪ್ಪಿಗೆಯನ್ನು ಸರ್ಕಾರ ಪಡೆಯಬೇಕು. 'ತಡೆಗಟ್ಟುವ

ಕಾನೂನು ' ಅನುಸರಿಸಿ ಪ್ರಜೆಗಳನ್ನು ಮೂರು ತಿಂಗಳಿಗಿಂತ ಹೆಚ್ಚಾಗಿ ಬಂಧನದಲ್ಲಿಡುವುದು ಅತ್ಯಾವಶ್ಯಕವೆಂಬ ವಿಶೇಷ ಸಂದರ್ಭಗಳು ಒದಗಿದರೆ ಅಂಥ ಪ್ರಜೆಗಳು ಯಾರು, ಅವರ ಬಂಧನಕ್ಕೆ ಕಾರಣವೇನು, ಬಂಧನದ ಕಾಲಾವಧಿ ಎಷ್ಟು ಇವೇ ಮೊದಲಾದ ವಿವರಗಳನ್ನು ವಿಧಿಗಳ ಮೂಲಕ ಪ್ರಕಟಿಸತಕ್ಕದ್ದು. ಮನುಷ್ಯ ವ್ಯಕ್ತಿಗಳ ಮಾರಾಟ, (ಮಾನವಪಣನ) ಬಿಟ್ಟಿ ಚಾಕರಿ, ನಿರ್ಬಂಧದ ಜೀತ ಇವು ನ್ಯಾಯಕ್ಕೆ ವಿರುದ್ಧವಾದ್ದರಿಂದ ರದ್ದಾಗತಕ್ಕದ್ದು. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಸಮಾಜಕ್ಕೆ ಸೇವೆ ಸಲ್ಲಿಸಬೇಕೆಂದು ಪ್ರಜೆಗಳನ್ನು ಸರ್ಕಾರ ಒತ್ತಾಯಪಡಿಸಬಹುದು. ಹದಿನಾಲ್ಕು ವರ್ಷಗಳಿಗೆ ಕಡಿಮೆ ಇರುವ ಬಾಲಕ ಬಾಲಕಿಯರನ್ನು ಗಿರಣಿ, ಗಣಿ, ಅಪಾಯಕರವಾದ ಕೆಲಸದ ಕ್ಷೇತ್ರಗಳು—ಇವುಗಳಿಗೆ ಸೇರಿಸಿಕೊಳ್ಳುವುದನ್ನು ನಿರ್ಬಂಧಿಸತಕ್ಕದ್ದು.

ಸಾರ್ವಜನಿಕ ಶಾಂತಿ, ನೀತಿ, ಆರೋಗ್ಯಗಳಿಗೆ ಕಳಂಕ ತರದಂತೆ ತಮ್ಮ ಮನಸ್ಸಾಕ್ಷಿಯಾಗಿ ವರ್ತಿಸುವುದು, ಮತವನ್ನವಲಂಬಿಸುವುದು, ಆಚರಣೆಗೆ ತರುವುದು, ಪ್ರಚಾರಪಡಿಸುವುದು ಮತೀಯ ಮತ್ತು ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಪ್ರಶಾಸನ ನಡೆಸುವುದು ಇವೇ ಮೊದಲಾದ ವಿಚಾರಗಳಲ್ಲಿ ಪ್ರಜೆಗಳಿಗೆ ಮತಧರ್ಮ ಸ್ವಾತಂತ್ರ್ಯವಿದೆ. ಆದರೆ ಮತೀಯ ಸಂಸ್ಥೆಗಳ ಆರ್ಥಿಕ ಮತ್ತು ರಾಜಕೀಯ ಚಳುವಳಿಗಳನ್ನು ಕ್ರಮಪಡಿಸಲೂ ಆವಶ್ಯಕ ತೋರಿದಾಗ ನಿರ್ಬಂಧಿಸಲೂ ಸರ್ಕಾರಕ್ಕೆ ಅಧಿಕಾರವುಂಟು. ಪ್ರಜೆಗಳಿಂದ ಬಲಾತ್ಕಾರವಾಗಿ ಹಣವನ್ನು ಶೇಖರಿಸಲು ಯಾವ ಮತೀಯ ಅಥವಾ ಧರ್ಮ ಸಂಸ್ಥೆಗೂ ಅಧಿಕಾರವಿಲ್ಲ. ಸಾರ್ವಜನಿಕ ವಿದ್ಯಾಸಂಸ್ಥೆಗಳು ಮತೀಯ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕೊಡಕೂಡದು. ಆದರೆ ಖಾಸಗಿ ಸಂಸ್ಥೆಗಳು, ಧರ್ಮಕರ್ತರು ಇಷ್ಟಪಟ್ಟರೆ ಮತೀಯ ಶಿಕ್ಷಣಕ್ಕೆ ಏರ್ಪಾಡು ಮಾಡಬಹುದು. ಅಲ್ಲದೆ ವಿದ್ಯಾರ್ಥಿಗಳ ಮಾತಾಪಿತೃಗಳ ಅಪ್ಪಣೆ ಪಡೆದು ವಿದ್ಯಾರ್ಥಿಗಳು ಮತೀಯ ಉಪನ್ಯಾಸಗಳಲ್ಲಿಯೂ ಪೂಜೆಯಲ್ಲಿಯೂ ಭಾಗವಹಿಸಲು ಅವಕಾಶವನ್ನೂ ಕೊಡಬಹುದು.

ಪ್ರತ್ಯೇಕ ಲಿಪಿ, ಭಾಷೆ, ಸಂಸ್ಕೃತಿಗಳನ್ನು ಹೊಂದಿರುವ ಪಂಗಡಗಳನ್ನು ರಕ್ಷಿಸುವುದು; ಸಾರ್ವಜನಿಕ ವಿದ್ಯಾಸಂಸ್ಥೆಗಳನ್ನು ಸೇರಲು ಜಾತಿ, ಮತ, ಭಾಷೆಗಳ ಸಂಬಂಧವಾದ ನಿರ್ಬಂಧಗಳನ್ನು ರದ್ದುಗೊಳಿಸುವುದು (ನಿರಸನಗೊಳಿಸುವುದು); ಪ್ರತ್ಯೇಕ ಮತ, ಭಾಷೆಗಳನ್ನುಳ್ಳ ಅಲ್ಪಸಂಖ್ಯಾತರಿಗೆ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಪ್ರಶಾಸನ ನಡೆಸಲು ಪ್ರೋತ್ಸಾಹ ಕೊಡುವುದು; ನಿಷ್ಪಕ್ಷಪಾತವಾಗಿ ವಿದ್ಯಾಸಂಸ್ಥೆಗಳಿಗೆ ಧನ ಸಹಾಯ ಮಾಡುವುದು ಇವು ಸರ್ಕಾರದ ಕರ್ತವ್ಯ.

ನ್ಯಾಯಸಂಧನಾದ ಪ್ರಜೆಯ ಆಸ್ತಿಯನ್ನು ಸರ್ಕಾರ ಅಪಹರಿಸಕೂಡದು. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಜೆಗಳ ಅಥವಾ ಸಂಸ್ಥೆಗಳ ಆಸ್ತಿಯನ್ನು ಸರ್ಕಾರ ವಿಧಿಗನುಸಾರವಾಗಿ ಸೂಕ್ತಪರಿಹಾರವನ್ನು ಕೊಟ್ಟು ವಶಪಡಿಸಿಕೊಳ್ಳಬಹುದು.

ಮೂಲ ಹಕ್ಕುಗಳ ವಿಚಾರದಲ್ಲಿ ಭಾರತಸಂವಿಧಾನ ಸಂವಿಧಾನಾನುಸಾರವಾದ ಕಷ್ಟ ಪರಿಹಾರ ಮಾರ್ಗವನ್ನು (ಉಪಚಾರವನ್ನು) ನಿರೂಪಿಸಿದೆ. ತೊಂದರೆಗೆ ಈಡಾದ ಪ್ರಜೆಗಳು ಸುಪ್ರೀಂ ಕೋರ್ಟಿಗೆ (ಉಚ್ಚತಮ ನ್ಯಾಯಾಲಯಕ್ಕೆ) ಅರ್ಜಿಯನ್ನು ಸಲ್ಲಿಸಿ, ಪರಿಹಾರ ಪಡೆಯಲವಕಾಶವಿದೆ. ಮೂಲಹಕ್ಕುಗಳನ್ನು ಅನುಷ್ಠಾನಕ್ಕೆ ತರಲು ಸುಪ್ರೀಂಕೋರ್ಟು ಸೂಕ್ತಕಾರ್ಯಕ್ರಮಗಳನ್ನು ಕೈಕೊಳ್ಳತಕ್ಕದ್ದು, ಜೊತೆಗೆ 'ಬಂದೀಪ್ರತ್ಯಕ್ಷೀಕರಣ' **'ಹೇಬಿಅಸ್‌ಕಾರ್ಪಸ್'** (ಒಬ್ಬನನ್ನು ಬಂಧನದಲ್ಲಿಟ್ಟಿರುವದು ನ್ಯಾಯವಿಹಿತವೋ ಅಲ್ಲವೋ ಎಂಬುದನ್ನು ವಿಚಾರಣೆಮಾಡುವುದಕ್ಕಾಗಿ ನ್ಯಾಯಾಧೀಶನ ಮುಂದೆ ವ್ಯಕ್ತಿಯನ್ನು ಸಾಕ್ಷಾತ್ತಾಗಿ ಹಾಜರುಮಾಡಬೇಕೆಂದು ಕೊಡುವ ಆಜ್ಞಾಪತ್ರ) 'ಪರಮಾದೇಶ' **'ಮಾಂಡೇಮುಸ್'** (ಮೇಲಿನ ನ್ಯಾಯಸ್ಥಾನದಿಂದ ಕೆಳಗಿನ ನ್ಯಾಯಸ್ಥಾನಕ್ಕೆ ಅಥವ ಪದಾಧಿಕಾರಿಗೆ ಒಂದು ಸಾರ್ವಜನಿಕ ಕರ್ತವ್ಯವನ್ನು ನೆರವೇರಿಸುವಬಗ್ಗೆ ಕಳುಹಿಸುವ ಆಜ್ಞಾಪತ್ರ), 'ಉತ್ಪ್ರೇಷಣ' **'ಸರ್ಷಿಯೊರೇರೈ'** (ಕೆಳಕೋರ್ಟಿನಲ್ಲಿ ವಿಚಾರಣೆಯಾದ ಮೊಕದ್ದಮೆಯ ಕಟ್ಟನ್ನು ಕಳುಹಿಸಬೇಕೆಂದು ಮೇಲು ಕೋರ್ಟಿನವರು ಕೊಡುವ ಆಜ್ಞಾಪತ್ರ) ಮೊದಲಾದ ಲೇಖ (ರೀಟ್ಸ್)ಗಳನ್ನು ಹೊರಡಿಸತಕ್ಕದ್ದು. ಸುಪ್ರೀಂಕೋರ್ಟು ತನ್ನ ಪರಮಾಧಿಕಾರಕ್ಕೆ ಕಳಂಕಬರದ ರೀತಿಯಲ್ಲಿ ತನ್ನ ಅಧಿಕಾರವನ್ನು ಕೆಳಕೋರ್ಟುಗಳಿಗೆ ವಹಿಸಬಹುದು. ದೇಶದ ಶಾಂತಿಪಾಲನೆ, ರಕ್ಷಣೆಗಳಿಗಾಗಿ ದುಡಿಯುತ್ತಿರುವ ರಕ್ಷಣಾ ಬಲಗಳ ಕೆಲಸ ಕಾರ್ಯಗಳು ತೃಪ್ತಿಕರವಾಗಿ ನೆರವೇರುವುದಕ್ಕೂ ಅವುಗಳ ಶಿಸ್ತನ್ನು ಕಾಪಾಡುವುದಕ್ಕೂ ಮೂಲಹಕ್ಕುಗಳನ್ನು ಸಂದರ್ಭಾನುಸಾರ ಬದಲಾಯಿಸಲು ಅಥವಾ ನಿರಸನಗೊಳಿಸಲು ಪಾರ್ಲಿಮೆಂಟಿಗೆ ಅಧಿಕಾರವಿದೆ. ಸೈನಿಕ ಪ್ರಶಾಸನ (ಮಾರ್ಷಲ್ ಲಾ)ವಿರುವ ಪ್ರದೇಶದಲ್ಲಿ ಮೂಲಹಕ್ಕುಗಳಿಗೆ ಸ್ಥಾನವಿಲ್ಲ.

ಪ್ರಶಾಸನೀಯಸೂತ್ರದ ಪ್ರೇರಕತತ್ವ—ಪ್ರಜೆಗಳಿಗೆ ನ್ಯಾಯ, ಸ್ವಾತಂತ್ರ್ಯ, ಸಮಾನತ್ವಗಳನ್ನು ದೊರಕಿಸುವುದಕ್ಕೂ ವ್ಯಕ್ತಿಗೌರವವನ್ನೂ ಸಮಾಜದ ಸೌಹಾರ್ದವನ್ನೂ ದೇಶದ ಐಕಮತ್ಯವನ್ನೂ ಸಾಧಿಸುವುದಕ್ಕೂ ಪ್ರತಿಯೊಂದು ಸರ್ಕಾರ ಕೆಲವು ಪ್ರೇರಕತತ್ವಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಸಂವಿಧಾನ ನಿರೂಪಿಸಿದೆ. ಅಂದರೆ ಇವುಗಳನ್ನು ಸಾಧ್ಯವಾಗುವಮಟ್ಟಿಗೆ ರೂಢಿಗೆ ತರಬೇಕೆಂಬುದೇ ಸಂವಿಧಾನದ ಗುರಿ. ಪ್ರಜೆಗಳಿಗೆ ಜೀವನೋಪಾಯ ಕಲ್ಪಿಸುವುದು, ಸಮಾಜೋನ್ನತಿಗೆ ಧಕ್ಕೆ ತಗಲ

ದಂತೆ ಸಂಪತ್ಸಾಮಗ್ರಿಗಳನ್ನು ಅಧೀನದಲ್ಲಿಟ್ಟುಕೊಳ್ಳುವುದು, ಪ್ರಶಾಸನವನ್ನು ಕ್ರಮ ಪಡಿಸುವುದು, ನಾಡಿನ ವಿವಿಧ ಸಂಪತ್ತು, ಕಚ್ಚಾ ಪದಾರ್ಥಗಳ ಸರಪರಾಜುಗಳನ್ನು ಸ್ವಲ್ಪ ಜನರ ಕೈವಶ ಮಾಡದಂತೆ ಆರ್ಥಿಕಸ್ಥಿತಿಗಳನ್ನು ಮಾರ್ಪಡಿಸುವುದು, ಶ್ರಮಜೀವಿಗಳ ದುಡಿಮೆಗೆ ತಕ್ಕ ವೇತನ ದೊರಕಿಸುವುದು, ಇವರ ಶಾರೀರಕ ಶಕ್ತಿ, ಆರೋಗ್ಯ, ಇವರ ಮಕ್ಕಳ ಬೆಳವಣಿಗೆ ಇವುಗಳನ್ನು ಗಮನಿಸದೆ ಸ್ವಾರ್ಥ ವನ್ನು ಸಾಧಿಸುವ ಬಂಡವಾಳಶಾಹಿಗಳನ್ನೂ ಗಿರಿಣಿ ಮಾಲೀಕರನ್ನೂ ನಿರ್ಬಂಧಿ ಸುವುದು, ಗ್ರಾಮಪಂಚಾಯತಿ ಪದ್ಧತಿಯನ್ನು ಜೀರ್ಣೋದ್ಧಾರಮಾಡಿ ಪಂಚಾ ಯಿತದಾರರಿಗೆ ತಕ್ಕ ಅಧಿಕಾರ, ಜವಾಬ್ದಾರಿಕೆಗಳನ್ನು ವಹಿಸಿ ಪ್ರತಿಯೊಂದು ಗ್ರಾಮವನ್ನೂ ಸ್ವಯಂಪೂರ್ಣತೆ, ಸ್ವತಂತ್ರಪ್ರಶಾಸನಗಳಿಂದ ಕೂಡಿದ ಒಂದು ಸಣ್ಣ ರಾಜಕೀಯ ಕ್ಷೇತ್ರವನ್ನಾಗಿ ಪುನರ್ರಚಿಸುವುದು, ರಾಷ್ಟ್ರದ ಆರ್ಥಿಕಸ್ಥಿತಿ ಮತ್ತು ಅಭ್ಯುದಯಗಳಿಗನುಸಾರವಾಗಿ ನಿರುದ್ಯೋಗ, ಮುಪ್ಪು, ಕಾಯಿಲೆ, ದುರ್ಬಲತೆಗಳಿಗೆ ತುತ್ತಾಗುವವರಿಗೆ ಆಪತ್ಕಾಲದಲ್ಲಿ ಸೂಕ್ತಸಹಾಯ ನೀಡುವುದು, ಕಾರ್ಮಿಕರು ದುಡಿಯುವ ಪ್ರದೇಶಗಳ ನಿರ್ಮಲತೆ, ಕಾರ್ಯಕ್ರಮದ ಸ್ಥಿತಿ, ಗರ್ಭಿಣಿಯರಾದ ಶ್ರಮಜೀವಿಗಳಿಗೆ ಕಾಲಕ್ಕೆ ತಕ್ಕ ಸೌಲಭ್ಯಗಳು, ವಿವಿಧ ಶ್ರಮಜೀವಿಗಳ ಜೀವನದ ಮಟ್ಟಕ್ಕೆ ತಕ್ಕ ವೇತನ, ಜೀವನಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವ ಸೌಕರ್ಯ ಗಳು, ಕೆಲಸದಿಂದ ದಣಿದ ಶರೀರಗಳಿಗೆ ತಕ್ಕ ವಿಶ್ರಾಂತಿ, ವಿಶ್ರಾಂತಿಯನ್ನು ಸದುಪಯೋಗಗೊಳಿಸುವ ಅನುಕೂಲಗಳು, ಗೃಹಕೈಗಾರಿಕೆಗಳಿಗೆ ತಕ್ಕ ಪ್ರೋತ್ಸಾಹ, ಸಮಸ್ತ ಪ್ರಜೆಗಳಿಗೆ ಅನ್ವಯಿಸುವಂಥ ವಿಧಿಗಳು, ೧೪ ವರ್ಷಗಳಿಗಿಂತ ಕಡಿಮೆ ಯಾಗಿರುವ ಮಕ್ಕಳಿಗೆ ನಿರ್ಬಂಧದ ಉಚಿತ ಪ್ರಾಥಮಿಕ ಶಿಕ್ಷಣ—ಇವುಗಳಿಗೆ ತಕ್ಕ ಏರ್ಪಾಡುಗಳನ್ನು ಮಾಡುವುದು, ಅನುಸೂಚಿಯಲ್ಲಿ ನಮೂದಾಗಿರುವ ಹಿಂದುಳಿ ದವರ ಮತ್ತು ಅನುಸೂಚಿತಜಾತಿ ಜನರಿಗೆ ವಿದ್ಯಾವಕಾಶ ಕೊಟ್ಟು ಅವರನ್ನು ಮುಂದುವರಿಸುವುದು, ಆಹಾರಪುಷ್ಟಿಯ ಮಟ್ಟವನ್ನು ಹೆಚ್ಚಿಸಿ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವುದು, ಮಾದಕ ದ್ರವ್ಯಸೇವನೆಯನ್ನು ನಿರೋಧಿಸುವುದು, ವ್ಯವಸಾಯ ಪಶುಪಾಲನೆಗಳನ್ನು ವೈಜ್ಞಾನಿಕ ಶಾಸ್ತ್ರಕ್ಕನುಗುಣವಾಗಿ ವೃದ್ಧಿ ಗೊಳಿಸುವುದು, ಮುಖ್ಯವಾದ ಪೂರ್ವಜ್ಞಾಪಕ ಸ್ಥಳಗಳನ್ನೂ ಕಲಾವಸ್ತುಗಳನ್ನೂ ಚರಿತ್ರಾರ್ಹವಾದ ವಸ್ತುಗಳನ್ನೂ ಕೆಡಿಸಿದಂತೆ ನಾಶಪಡಿಸದಂತೆ ಸ್ಥಾನಪಲ್ಲಟ ವಾಗದಂತೆ ರಕ್ಷಿಸುವುದು, ಪ್ರತಿಯೊಂದು ಸರ್ಕಾರದ ಕಾರ್ಯಾಂಗವನ್ನು (ಕಾರ್ಯ ಪಾಲಕ) ನ್ಯಾಯಾಂಗ (ನ್ಯಾಯಪಾಲಕ)ದಿಂದ ಪ್ರತ್ಯೇಕಗೊಳಿಸಿ ಒಂದರ ಅಧಿಕಾರಕ್ಕೆ ಮತ್ತೊಂದು ಪ್ರವೇಶಿಸದಂತೆ ಸೂಕ್ತ ಏರ್ಪಾಡು ಮಾಡುವುದು, ವಿಶ್ವಶಾಂತಿ ಭದ್ರತೆ

ಗಳಿಗೆ ಉತ್ತೇಜನ ಕೊಟ್ಟು ಪರರಾಜ್ಯಗಳೊಡನೆ ನ್ಯಾಯದಿಂದ ಗೌರವದಿಂದ ವರ್ತಿಸಿ ವಿದೇಶೀಯ ಕಾರ್ಯವನ್ನು ಅಂತರರಾಷ್ಟ್ರೀಯ ನಿಯಮ ನೀತಿಗಳಿಗನುಸಾರವಾಗಿ ನಡೆಸುವುದು ಮತ್ತು ಅಂತರರಾಷ್ಟ್ರೀಯ ವ್ಯವಹಾರಗಳನ್ನು ಪಂಚಾಯಿತದಾರರ ಸಹಾಯದಿಂದ ಬಗೆಹರಿಸುವ ಸಂಪ್ರದಾಯಕ್ಕೆ ನೆರವಾಗುವುದು ಇವು ಭಾರತ ಸಂವಿಧಾನ ನಿರೂಪಿಸಿರುವ ಮುಖ್ಯವಾದ ಪ್ರಶಾಸನೀಯ ಸೂತ್ರದ ಪ್ರೇರಕತತ್ವಗಳು.

ಅಧ್ಯಾಯ ೩

ಭಾರತ ಗಣರಾಜ್ಯ—ಕಾರ್ಯಾಂಗ (ಕಾರ್ಯಪಾಲಿಕಾ)

ಭಾರತದ ಕೇಂದ್ರಕಾರ್ಯಾಂಗ ಅಧ್ಯಕ್ಷ—ಭಾರತ ಸಂವಿಧಾನದ ಪ್ರಸ್ತಾವನೆಯು ನಿರೂಪಿಸಿರುವ ಧ್ಯೇಯವನ್ನು ಸಾಧಿಸಲು ಮೂರು ಸಂವಿಧಾನಾಂಗಗಳು ನಿರ್ಮಿತವಾಗಿವೆ. ಇವುಗಳಿಗೆ ಕಾರ್ಯಾಂಗ (ಕಾರ್ಯಪಾಲಿಕ) ಶಾಸನಾಂಗ (ವಿಧಾನಮಂಡಲ), ನ್ಯಾಯಾಂಗ (ನ್ಯಾಯಪಾಲಿಕಾ)ಗಳೆಂದು ಹೆಸರು. ಭಾರತ ಕಾರ್ಯಾಂಗದ ಶ್ರೇಷ್ಠಾಧಿಕಾರಿಗೆ ರಾಷ್ಟ್ರಾಧ್ಯಕ್ಷನೆಂದು ಹೆಸರು. ಭಾರತ ಸರ್ಕಾರಕ್ಕೆ ಇವನೇ ಅಧಿಪತಿ. ಪ್ರಶಾಸನೀಯ ಕಾರ್ಯಗಳು ಇವನ ಹೆಸರಿನಲ್ಲಿ ನಡೆಯುವುವು. ದೇಶದ ರಕ್ಷಣಾ ಬಲಗಳಿಗೆ ಇವನೇ ಪ್ರಧಾನ ನಾಯಕ. ರಕ್ಷಣಾ ಬಲಗಳ ಪ್ರಶಾಸನವನ್ನು ನಿಯಮಬದ್ಧವಾಗಿ ನಡೆಸುವುದು ಅಧ್ಯಕ್ಷನ ಕ್ಷೇತ್ರಾಧಿಕಾರಕ್ಕೆ ಸೇರಿದೆ. ಕೇಂದ್ರಶಾಸನಾಂಗ ಯಾವ ವಿಷಯಗಳ ಮೇಲೆ ವಿಧಿಗಳನ್ನು ರಚಿಸಬಲ್ಲದೋ ಆ ವಿಷಯಗಳ ಮೇಲೂ ಕೇಂದ್ರಸರ್ಕಾರ ಇತರ ರಾಜ್ಯಗಳೊಡನೆ ಮಾಡಿಕೊಳ್ಳುವ ಒಪ್ಪಂದಗಳಿಗೆ ಅನ್ವಯಿಸುವ ವಿಷಯಗಳ ಮೇಲೂ ಕೇಂದ್ರ ಕಾರ್ಯಾಂಗಕ್ಕೆ ಅಧಿಕಾರವಿದೆ. ಭಾರತ ಸರ್ಕಾರ ಇಂಗ್ಲೆಂಡಿನ ಪಾರ್ಲಿಮೆಂಟರಿ ಅಥವಾ ಜವಾಬ್ದಾರಿ ಸರ್ಕಾರ ಪದ್ಧತಿಯಂತಿರಬೇಕೆಂಬುದನ್ನು ಸಂವಿಧಾನ ಸ್ಪಷ್ಟವಾಗಿ ನಿರೂಪಿಸದಿದ್ದರೂ ಭಾರತ ಸರ್ಕಾರಕ್ಕೆ ಇಂಗ್ಲೆಂಡಿನ ಸಂಪ್ರದಾಯವೇ ಮೇಲ್ಪಂಕ್ತಿ ಹಾಗೂ ಮಾರ್ಗದರ್ಶಿಯಾಗಿರುವುದು.

ಅಧ್ಯಕ್ಷನ ಚುನಾವಣೆ (ನಿರ್ವಾಚನ)—ನಿರ್ವಾಚಿತ ಪದಾಧಿಕಾರಿಗಳಿಗೆ ಪ್ರಶಾಸನವನ್ನು ವಹಿಸುವುದು ಪ್ರಜಾಸರ್ಕಾರದ ಪ್ರಧಾನ ಲಕ್ಷಣವಾದ್ದರಿಂದ ಈ ಸಂಪ್ರದಾಯ ನಮ್ಮ ದೇಶದಲ್ಲಿಯೂ ಆಚರಣೆಗೆ ಬಂದಿದೆ. ಕೇಂದ್ರ ವಿಧಾನ ಮಂಡಲದ ಅಥವಾ ಸಂಸದಿನ ಮೂರು ಸಭೆಗಳ ಸದಸ್ಯರು, ರಾಜ್ಯಗಳ ವಿಧಾನ ಮಂಡಲಗಳ ನಿರ್ವಾಚಿತ ಸದಸ್ಯರು ಇವರುಗಳಿಂದ ಕೂಡಿದ ಒಂದು ಸಂಸ್ಥೆ ('ಎಲೆಕ್ಟೊರಲ್ ಕಾಲೇಜ್') ಅಧ್ಯಕ್ಷನನ್ನು ನಿರ್ವಾಚನ ಮಾಡುವುದು. ಈ

ನಿರ್ವಾಚನದಲ್ಲಿ ಭಾಗವಹಿಸುವವರೆಲ್ಲರಿಗೂ ಸಮಾನವಾದ ಹಕ್ಕನ್ನು ಕೊಡುವ ಸಲುವಾಗಿ, ಪ್ರತಿಯೊಬ್ಬನಿಗೂ ಎಷ್ಟುಮತ ಕೊಡಬಹುದೆಂಬುದನ್ನು ಸಂವಿಧಾನ ನಿರ್ಧರಿಸಿದೆ. ಉದಾಹರಣೆಗಾಗಿ ಬೊಂಬಾಯಿನ ಜನಸಂಖ್ಯೆ ೨೦,೮೪೯,೮೪೦. ಇದರ ವಿಧಾನ ಮಂಡಲದ ನಿರ್ವಾಚಿತ ಸದಸ್ಯರ ಸಂಖ್ಯೆ ೨೦೯. ಒಟ್ಟು ಜನಸಂಖ್ಯೆ ಯನ್ನು ೨೦೮ ರಿಂದ ಭಾಗಿಸಿ ಬರುವ ಭಾಗಲಬ್ಧವನ್ನು ೧೦೦೦ ದಿಂದ ಭಾಗಿಸಿದರೆ ಕೊನೆಯಲ್ಲಿ ಬರುವ ೧೦೦ ಪ್ರತಿಯೊಬ್ಬ ಸದಸ್ಯ ಕೊಡಬಹುದಾದ ಮತಗಳ ಸಂಖ್ಯೆ ಯನ್ನು ಸೂಚಿಸುವುದು. ಈ ಸಂಖ್ಯೆಗಳನ್ನು ಭಾಗಿಸುವಾಗ ಕೊನೆಯಲ್ಲಿ ಬರುವ ಶೇಷ ೫೦೦ ಕ್ಕೆ ಕಡಿಮೆ ಇದ್ದರೆ ಅದನ್ನು ಪರಿಗಣಿಸಕೂಡದು, ೫೦೦ ಕ್ಕೆ ಅಧಿಕ ವಾಗಿದ್ದರೆ ಅದನ್ನು ಒಂದೆಂದು ಭಾವಿಸಿ ಕೊನೆಯಲ್ಲಿ ಬರುವ ಭಾಗಲಬ್ಧಕ್ಕೆ ಸೇರಿಸು ವುದು. ಅಧ್ಯಕ್ಷನ ನಿರ್ವಾಚನವನ್ನು 'ಪ್ರಮಾಣಾನುಗುಣವಾದ ಹಾಗೂ ವರ್ಗಾಭಿ ಮತ ಪ್ರಾತಿನಿಧ್ಯ' ಅಥವಾ 'ಅನುಪಾತಿ ಪ್ರತಿನಿಧಿತ್ವ' ಪದ್ಧತಿಗನುಸಾರವಾಗಿ ಗೋಪ್ಯವಾಗಿ (ಬ್ಯಾಲೆಟ್ ಅಥವಾ ಶಲಾಕಾ ಪದ್ಧತಿಗನುಸಾರವಾಗಿ) ನಡೆಸ ತಕ್ಕದ್ದು. ಅಧ್ಯಕ್ಷನ ನಿರ್ವಾಚನೆಗೆ ಸಂಸದಿನ ಮೂರು ಸಭೆಯ ನಿರ್ವಾಚಿತ ಸದಸ್ಯರಲ್ಲಿ ಪ್ರತಿಯೊಬ್ಬನು ಕೊಡಬಹುದಾದ ಮತಗಳ ಸಂಖ್ಯೆಯನ್ನು ಈ ರೀತಿ ನಿರ್ಧರಿಸ ತಕ್ಕದ್ದು. ರಾಜ್ಯಗಳ (ಅನುಸೂಚಿ ಭಾಗ 'ಎ' ಮತ್ತು 'ಬಿ'ಯಲ್ಲಿ ನಮೂದಾಗಿರುವ) ವಿಧಾನಮಂಡಲಗಳ ನಿರ್ವಾಚಿತ ಸದಸ್ಯರೆಲ್ಲರಿಗೆ ಅಧ್ಯಕ್ಷನ ನಿರ್ವಾಚನೆಯ ಕಾಲದಲ್ಲಿ ದೊರೆಯುವ ಒಟ್ಟು ಮತಗಳನ್ನು ಸಂಸದಿನ ಎರಡು ಸಭೆಗಳ ನಿರ್ವಾಚಿತ ಸದಸ್ಯರ ಸಂಖ್ಯೆಯಿಂದ ಭಾಗಿಸಿದ ಮೇಲೆ ಬರುವ ಭಾಗಲಬ್ಧ ಪ್ರತಿ ಒಬ್ಬ ಸಂಸದಿನ ಸದಸ್ಯನು ಕೊಡಬಹುದಾದ ಮತಗಳ ಸಂಖ್ಯೆಯನ್ನು ಸೂಚಿಸುವುದು. ಕೊನೆಯಲ್ಲಿ ಬರುವ ಶೇಷ ಭಾಜಕದ ಅರ್ಧಕ್ಕಿಂತ ಕಡಿಮೆಯಾದರೆ ಅದನ್ನು ಪರಿಗಣಿಸಬೇಕಾದ್ದಿಲ್ಲ.

ಅಧ್ಯಕ್ಷನ ಪದಾವಧಿ—ಅಧ್ಯಕ್ಷನ ಪದಾವಧಿ ಐದು ವರ್ಷ. ಉತ್ತರಾಧಿಕಾರಿ ಅಧಿಕಾರವನ್ನು ಸ್ವೀಕರಿಸುವವರಿಗೆ ಅಧ್ಯಕ್ಷನು ಅಧಿಕಾರದಲ್ಲಿರಬಹುದು. ಒಂದಾವರ್ತಿ ಅಧ್ಯಕ್ಷನಾದವನು ಮತ್ತೊಮ್ಮೆ ಇದೇ ಸ್ಥಾನಕ್ಕೆ ಉಮೇದುವಾರನಾಗಿ ನಿಲ್ಲಲೂ ಬಹುದು. ಕೆಲಸಬೇಕಿಲ್ಲದಾಗ ಪದತ್ಯಾಗಮಾಡಲೂ ಅವನಿಗೆ ಅವಕಾಶವಿದೆ. ಪದತ್ಯಾಗದ ಪತ್ರ ಉಪಾಧ್ಯಕ್ಷನ ಕೈಸೇರಿದಮೇಲೆ ಅವನು ಅದನ್ನು ಲೋಕ ಸಭೆಗೆ ತಿಳಿಸಬೇಕು.

ಅಧ್ಯಕ್ಷಸ್ಥಾನಕ್ಕೆ ನಿಲ್ಲುವ ಉಮೇದುವಾರನಿಗೆ ಭಾರತದ ನಾಗರಿಕತಾಧಿಕಾರ ವಿರಬೇಕು, ಕನಿಷ್ಠಪಕ್ಷ ೩೫ ವರ್ಷ ವಯಸ್ಸಾಗಿರಬೇಕು; ಲೋಕಸಭಾಸದಸ್ಯತ್ವದ ಅರ್ಹತೆ ಪಡೆದಿರಬೇಕು; ಅಧ್ಯಕ್ಷ; ಉಪಾಧ್ಯಕ್ಷ, ರಾಜಪ್ರಮುಖ, ಮಂತ್ರಿಗಳು

ಇವರ ಸ್ಥಾನಗಳಲ್ಲಿ ವಿನಾ, ಉಳಿದ ಪ್ರಶಾಸನೀಯ ಸ್ಥಾನಗಳಲ್ಲಿ ಕೆಲಸಮಾಡುತ್ತಿರ ಕೂಡದು. ಉಮೇದುವಾರನು, ವಿಧಾನಮಂಡಲದ ಸದಸ್ಯನಾಗಿದ್ದರೆ ಅಧ್ಯಕ್ಷನಾಗಿ ನಿರ್ವಾಚಿತನಾದ ಕೂಡಲೇ ವಿಧಾನಮಂಡಲದ ಸದಸ್ಯತ್ವದ ಪದತ್ಯಾಗ ಮಾಡಬೇಕು. ಅಧ್ಯಕ್ಷನಿಗೆ ತಿಂಗಳಿಗೆ ರೂ. ೧೦,೦೦೦ ವೇತನ, ತಕ್ಕ ಭತ್ಯೆ, ವಾಸಕ್ಕೆ ಯೋಗ್ಯವಾದ ಭವನ ಇವು ಸಲ್ಲುವುವು. ಮುಖ್ಯನ್ಯಾಯಾಧಿಪತಿಯ ಸಮ್ಮುಖದಲ್ಲಿ ಪ್ರಮಾಣ ವಚನಕೊಟ್ಟು ಅಧ್ಯಕ್ಷನು ಅಧಿಕಾರಸೂತ್ರ ವಹಿಸಬೇಕು.

ಅಧ್ಯಕ್ಷನ ಮಹಾಭಿಯೋಗದ ಕ್ರಮ—ಭಾರತ ಸಂವಿಧಾನಕ್ಕೆ ವಿರೋಧ ವಾಗಿ ವರ್ತಿಸುವ ಅಧ್ಯಕ್ಷನನ್ನು ವಿಚಾರಣೆಗೆ ಗುರಿಮಾಡಿ ಪದಚ್ಯುತನನ್ನಾಗಿ ಮಾಡುವ ಅಧಿಕಾರ ಸಂಸದಕ್ಕೆ ಸೇರಿದೆ. ಅಧ್ಯಕ್ಷನ ಮೇಲಿನ ದೋಷಾರೋಪಗಳನ್ನು ಸಂಸದನ ಸದಸ್ಯರು ಯಾವ ಸಭೆಯಲ್ಲಾದರೂ ಮಂಡಿಸಬಹುದು. ವಿಚಾರಣೆ ನಡೆಯ ಬೇಕೆಂದು ೧೪ ದಿವಸಗಳ ಮುಂಚಿತವಾಗಿ ಸೂಚನೆ ಕೊಡಬೇಕು. ವಿಚಾರಣೆಯಾಗ ಬೇಕೆಂದು ಅಪೇಕ್ಷಿಸುವ ಸಭೆಯ ಸದಸ್ಯರ ಪೈಕಿ ಕನಿಷ್ಠಪಕ್ಷ ನಾಲ್ಕನೆಯ ಒಂದು ಭಾಗ ಈ ಸೂಚನೆಯನ್ನು ಅನುಮೋದಿಸಬೇಕು. ವಿಚಾರಣೆಯ ಕ್ರಮ ನಡೆಯಲೇ ಬೇಕೆಂಬುದಕ್ಕೆ ಆ ಸಭೆಯ ಬಹುಮತ (ಅಂದರೆ ೨/೩ ಭಾಗಕ್ಕೆ ಕಡಿಮೆ ಇಲ್ಲದೆ, ಒಪ್ಪಿಗೆ) ದೊರೆಯಬೇಕು. ಈ ಕ್ರಮವನ್ನು ಅನುಸರಿಸಿ ಒಂದು ಸಭೆ ಒಪ್ಪಿಗೆಕೊಟ್ಟ ವಿನಿಶ್ಚಯ ವನ್ನು ಅಂದರೆ ಅಧ್ಯಕ್ಷನ ವಿಚಾರಣೆಯನ್ನು ಇನ್ನೊಂದು ಸಭೆ ಕೂಲಂಕಷವಾಗಿ ಪರಿಶೀಲಿಸಿ ಅಧ್ಯಕ್ಷನ ಅಥವಾ ಅವನ ಪ್ರತಿನಿಧಿಯ ಹೇಳಿಕೆಗೆ ಅವಕಾಶಕೊಟ್ಟು ಕೊನೆ ಯಲ್ಲಿ ವಿನಿಶ್ಚಯ ಮಾಡಬೇಕು. ಈ ತೀರ್ಪಿಗೂ ವಿಚಾರಣೆ ನಡೆಸುವ ಸಭೆಯ ಬಹುಮತ (ಅಂದರೆ ೨/೩ ಭಾಗಕ್ಕೆ ಕಡಿಮೆಯಿಲ್ಲದ ಮತ) ದೊರೆಯುವುದು ಆವಶ್ಯಕ. ಅಧ್ಯಕ್ಷನು ಅಪರಾಧಿ ಎಂಬ ತೀರ್ಪು ಹೊರಬಿದ್ದ ಕೂಡಲೆ ಅಧ್ಯಕ್ಷನು ಪದಾಧಿಕಾರ ವನ್ನು ತ್ಯಜಿಸಬೇಕು.

[ಅಧ್ಯಕ್ಷನ ಮಹಾಭಿಯೋಗದ ಕ್ರಮ ಅಷ್ಟು ತೃಪ್ತಿಕರವಾಗಿಲ್ಲವೆಂದು ಕೆಲವರು ಅಭಿಪ್ರಾಯಪಡುವರು : ಏತಕ್ಕಂದರೆ ಅಧ್ಯಕ್ಷನ ವಿಚಾರಣೆ ಲೋಕಸಭೆಯಲ್ಲಿ ನಡೆದರೆ ಸಭೆಯ ಅಧ್ಯಕ್ಷ ಅಗ್ರಾಸನ ವಹಿಸಬೇಕು, ರಾಜ್ಯಪರಿಷತ್ತಿನಲ್ಲಿ ನಡೆದರೆ ಉಪಾಧ್ಯಕ್ಷ ಅಗ್ರಾಸನ ವಹಿಸಬೇಕು ಎಂಬ ನಿಯಮವಿದೆ. ಸಾಮಾನ್ಯವಾಗಿ ಇವರಿಬ್ಬರೂ ಅಧ್ಯಕ್ಷನ ರಾಜಕೀಯ ಪಕ್ಷದ ಅನುಯಾಯಿಗಳು. ಅಲ್ಲದೆ ಅಧ್ಯಕ್ಷನ ಸ್ಥಾನ ಖಾಲಿಯಾದರೆ ಈ ಸ್ಥಾನಕ್ಕೆ ಬರುವ ಹಕ್ಕು ಉಪಾಧ್ಯಕ್ಷನಿಗಿದೆ. ಈ ಕಾರಣದಿಂದ ಮಹಾಭಿಯೋಗದ ತೀರ್ಪಿನಲ್ಲಿ ಪಕ್ಷಪಾತ ತೋರಿಸುವುದಕ್ಕೂ ಅವಕಾಶವಿದೆ ಎಂಬುದು ಕೆಲವರ ವಾದ. ಆದರೆ ಸಭೆ ಕೊಡುವ ತೀರ್ಪು ಅಗ್ರಾಸನಾಧಿಪತಿಯ ಅಭಿಪ್ರಾಯ ಒಂದೇ ಅಲ್ಲ. ಸಭೆಯಲ್ಲಿ ಭಿನ್ನಾಭಿಪ್ರಾಯಗಳಿರುವ ನೂರಾರು ಸದಸ್ಯರಿರುವರು. ಅಗ್ರಾಸನಾಧಿಪತಿ ಕೊಡುವ

ತೀರ್ಪಿಗೆ ಬಹುಮತದ ಒಪ್ಪಿಗೆಯೂ ದೊರೆಯಬೇಕು. ಮೇಲಾಗಿ ಇಂಥ ಸಂದರ್ಭದಲ್ಲಿ ಸಂಸದಿನ ಸದಸ್ಯರ ಅಭಿಪ್ರಾಯಗಳನ್ನಲ್ಲದೆ, ಇಡೀ ಜನತೆಯ ಅಭಿಮತವನ್ನೂ ಅಭಿಪ್ರಾಯವನ್ನೂ ಸಂಸದ್ ಪರಿಶೀಲಿಸಿ ನಿಜಾಂಶವನ್ನು ತಿಳಿಯಬೇಕಾಗಿರುವುದು. ಅಷ್ಟೇ ಅಲ್ಲದೆ ಒಂದು ವೇಳೆ ಸಂವಿಧಾನದಲ್ಲಿ ಎಡರು ತೊಡರುಗಳಿದ್ದರೂ ಅವುಗಳನ್ನು ರಾಜಕೀಯ ಸಂಪ್ರದಾಯಗಳ ಸಹಾಯದಿಂದ ಬಗೆಹರಿಸುವುದು ಕಷ್ಟವೂ ಅಲ್ಲ. ಆದ್ದರಿಂದ ಅಧ್ಯಕ್ಷನ ಮಹಾಭಿಯೋಗದ ಕ್ರಮವನ್ನು ಹೆಚ್ಚಾಗಿ ಟೀಕಿಸುವುದು ಅನವಶ್ಯಕ.]

ಅಧ್ಯಕ್ಷನ ಕ್ಷೇತ್ರಾಧಿಕಾರ—ಅಪರಾಧಿಗಳನ್ನು ಕ್ಷಮಿಸುವುದು, ನ್ಯಾಯಾಧೀಶರು ಅಪರಾಧಿಗಳಿಗೆ ವಿಧಿಸುವ ಶಿಕ್ಷೆಯನ್ನು ಪ್ರವಿಲಂಬನಮಾಡುವುದು, ಪರಿಹಾರ ಕೊಡಿಸುವುದು, ನಿಲಂಬನಗೊಳಿಸುವುದು, ಲಘೂಕರಣಮಾಡುವುದು ಇವು ಅಧ್ಯಕ್ಷನ ಕ್ಷೇತ್ರಾಧಿಕಾರಕ್ಕೆ ಸೇರಿವೆ. ಸಂಸದ್ ಅಧಿವೇಶನದಲ್ಲಿ (ಸತ್ರದಲ್ಲಿ) ಇಲ್ಲದಿರುವಾಗ ಅಥವಾ ಆವಶ್ಯಕವೆಂದು ತನಗೆ ತೋರಿದಾಗ, ಅಧ್ಯಕ್ಷನು ಸ್ವವಿವೇಕದಿಂದ ಅಧ್ಯಾದೇಶಗಳನ್ನು (ಆರ್ಡಿನೆನ್ಸ್) ಹೊರಡಿಸಬಹುದು. ಆಚರಣೆಯಲ್ಲಿ ಈ ಅಧ್ಯಾದೇಶಗಳಿಗೂ ವಿಧಿಗಳಿಗೂ ವ್ಯತ್ಯಾಸವಿಲ್ಲ. ಆದರೆ ಇಂಥ ಅಧ್ಯಾದೇಶಗಳನ್ನು ಅಧ್ಯಕ್ಷನು ಸಂಸದಿನ ಮುಂದೆ ಮಂಡಿಸಬೇಕು; ಅದರ ಸತ್ರ ಪ್ರಾರಂಭವಾದ ಆರು ವಾರಗಳ ಮೇಲೆ ಅಥವ ಅದರ ಸಭೆಗಳು ಅಧ್ಯಾದೇಶಗಳನ್ನು ನಿಲಂಬನಗೊಳಿಸಬೇಕೆಂದು ನಿರ್ಧರಿಸಿದ ಮೇಲೆ ಅಥವ ಅಧ್ಯಕ್ಷನು ಇಷ್ಟಪಟ್ಟಾಗ ಇವುಗಳನ್ನು ನಿಲಂಬನಗೊಳಿಸಬೇಕು. ದೇಶದಲ್ಲಿ ಅನಿರೀಕ್ಷಿತ ಘಟನೆಗಳು ಒದಗಿದರೆ (ಅಂದರೆ ಯುದ್ಧ, ಪರರಾಜ್ಯಗಳ ಧಾಳಿ, ದೇಶದ ಅಂತಃಕ್ರಾಂತಿ) ಹಾಗೂ ಇಡೀ ದೇಶಕ್ಕಾಗಲೀ ಅಥವ ಕೆಲವು ಭಾಗಗಳಿಗಾಗಲೀ ಅಪಾಯ ಸಂಭವಿಸುವುದೆಂದು ಅಧ್ಯಕ್ಷನಿಗೆ ತೋರಿದರೆ ಅಂಥ ಸಂದರ್ಭಗಳಲ್ಲಿ ಅಧ್ಯಕ್ಷನು ಒಂದು ಉದ್ಘೋಷಣವನ್ನು ಹೊರಡಿಸಬಹುದು. ಇಂಥ ಉದ್ಘೋಷಣವನ್ನು ಅಧ್ಯಕ್ಷನು ಸಂಸದಿನ ಮುಂದೆ ಮಂಡಿಸಬೇಕು. ಅದರ ಅಪ್ಪಣೆಪಡೆದು ಎರಡು ತಿಂಗಳವರಿಗೆ ಮಾತ್ರ ಅದನ್ನು ಆಚರಣೆಯಲ್ಲಿಡಬಹುದು. ಲೋಕಸಭೆಯ ಸತ್ರ ಮುಕ್ತಾಯಗೊಂಡಾಗ ಇಂಥ ಉದ್ಘೋಷಣ ಹೊರಬಿದ್ದರೆ ಅಥವ ಇದು ಹೊರಬಿದ್ದ ಎರಡು ತಿಂಗಳೊಳಗೆ ಲೋಕಸಭೆಯ ಸತ್ರ ಮುಕ್ತಾಯವಾದರೆ ಅಥವ ಇಂಥ ಉದ್ಘೋಷಣೆಗೆ ರಾಜ್ಯಪರಿಷತ್ತಿನ ಒಪ್ಪಿಗೆ ದೊರೆತು ಪ್ರಕಟಣೆಗೆ ಬಂದ ಎರಡು ತಿಂಗಳೊಳಗಾಗಿ ಲೋಕಸಭೆಯ ಒಪ್ಪಿಗೆ ದೊರೆಯದಿದ್ದರೆ ಉದ್ಘೋಷಣೆಯನ್ನು ಹೊರಬಿದ್ದ ೩೦ ದಿವಸಗಳೊಳಗಾಗಿ (ಅಂದರೆ ಪುನರ್ರಚಿತವಾದ ಲೋಕಸಭೆಯ ಸತ್ರ ಪ್ರಾರಂಭವಾದ ೩೦ ದಿವಸಗಳೊಳಗಾಗಿ) ನಿಲಂಬನಗೊಳಿಸತಕ್ಕದ್ದು. ಸಂವಿಧಾನದ ಉಪನಿಬಂಧಗಳಿಗನುಸಾರವಾಗಿ ಅಧ್ಯಕ್ಷನು ದೇಶಕ್ಕೆ ಅಪಾಯಸಂಭವಿಸಿದಾಗ ಅಥವ ಸಂಭವಿಸಬಹುದೆಂದು

ತೋರಿದಾಗ ಉದ್ಘೋಷಣೆಯನ್ನು ಪ್ರಕಟಿಸಿ ಆಚರಣೆಗೆ ತರಬಹುದು. ಇದು ಆಚರಣೆಯಲ್ಲಿರುವಾಗ, ಕೇಂದ್ರಸರ್ಕಾರದ ಕ್ಷೇತ್ರಾಧಿಕಾರ ರಾಜ್ಯಗಳಲ್ಲೆಲ್ಲಾ ವ್ಯಾಪಿಸುವುದು—ಅಂದರೆ ರಾಜ್ಯಗಳು ಮಾಡಬೇಕಾದ ಕೆಲಸಗಳನ್ನು ಕೇಂದ್ರ ಸರ್ಕಾರವೇ ನಿರ್ದೇಶಿಸುವುದು. ಸಂದರ್ಭಾನುಸಾರ ಆವಶ್ಯಕವಾದ ವಿಧಿಗಳನ್ನು ಸಂಸದ್ ರಚಿಸಿ ಇಡೀ ದೇಶದಲ್ಲಿ ಆಚರಣೆಗೆ ತರುವುದು. ನಂಬಿಕೆಯಿದ್ದವರಿಗೆ ಯಾವ ಅಧಿಕಾರವನ್ನಾದರೂ ವಹಿಸುವುದು. ಅವಶ್ಯಕವಾದ ಕೆಲಸಗಳನ್ನು ಮಾಡಲೇ ಬೇಕೆಂದು ಪ್ರಜೆಗಳಿಗೂ ರಾಜ್ಯಗಳಿಗೂ ವಿಧಿಸುವುದು.

ಭಾರತಗಣರಾಜ್ಯಕ್ಕೆ ಸೇರಿದ ಯಾವುದಾದರೂ ಒಂದು ರಾಜ್ಯದ ಸ್ಥಿತಿ ಹದಗೆಟ್ಟು ದೈನಂದಿನ ಕೆಲಸಗಳ ನಿರ್ವಹಣೆಗೆ ತೊಂದರೆ ಬಂದಿದೆ ಎಂದು ರಾಜ್ಯದ ರಾಜ್ಯಪಾಲ ಅಥವ ರಾಜಪ್ರಮುಖ ಇವರು ಅಧ್ಯಕ್ಷನಿಗೆ ವರದಿಯನ್ನು ಕಳುಹಿಸಿದರೆ ಅಂಥ ರಾಜ್ಯದ ಪ್ರಶಾಸನೀಯಾಧಿಕಾರವನ್ನು ಅಥವ ಅದರ ಸ್ವಲ್ಪಭಾಗವನ್ನು (ಅಂದರೆ ನ್ಯಾಯಾಂಗದ ಕೆಲಸವನ್ನು ಹೊರತು, ಉಳಿದ ಕೆಲಸಗಳನ್ನು) ಕೇಂದ್ರಸರ್ಕಾರಕ್ಕೆ ಅಧ್ಯಕ್ಷ ವಹಿಸಬಹುದು. ಇಂಥ ಸಂದರ್ಭದಲ್ಲಿ ಅಧ್ಯಕ್ಷನು ಒಂದು ಉದ್ಘೋಷಣೆಯನ್ನು ಹೊರಡಿಸಿ ವಿವರಗಳನ್ನು ಸೂಕ್ಷ್ಮವಾಗಿ ಪ್ರಕಟಿಸಬೇಕು. ಇಂಥ ಘೋಷಣೆಯನ್ನು ಹೊರಡಿಸುವ ಅಧ್ಯಕ್ಷನ ಕ್ಷೇತ್ರಾಧಿಕಾರ ಹಿಂದೆ ತಿಳಿಸಿದ ಉಪ ನಿಬಂಧಗಳ ಕಟ್ಟಿಗೆ ಒಳಪಟ್ಟಿವೆಯೆ ಎಂದು ತಿಳಿಯಬೇಕು. ಕ್ರಮಬದ್ಧವಾಗಿ ಹೊರ ಬಿದ್ದ ಉದ್ಘೋಷಣೆಯ ಕಾಲಾವಧಿ ಆರು ತಿಂಗಳು ಮಾತ್ರ. ಇದೇ ಪ್ರಕಾರ ಸಂಸದಿನ ಒಪ್ಪಿಗೆಪಡೆದು ಒಂದು ಸಲಕ್ಕೆ ಆರು ತಿಂಗಳು ಮೀರದಂತೆ ಅಧ್ಯಕ್ಷನು ಉದ್ಘೋಷಣೆ ಯನ್ನು ಆಚರಣೆಗೆ ತರಬಹುದು. ಆದರೆ ಯಾವ ಕಾರಣಗಳಿಂದಲೂ ಇಂಥ ಘೋಷ ಣೆಯ ಕಾಲಾವಧಿ ಮೂರು ವರ್ಷಗಳಿಗೆ ಹೆಚ್ಚಾಗಿರಕೂಡದು. ಈ ಬಗೆಯ ಘೋಷಣೆ ಆಚರಣೆಯಲ್ಲಿರುವಾಗ, ಸಂಬಂಧಪಟ್ಟ ರಾಜ್ಯದ ಪ್ರಜೆಗಳ ಮೂಲಹಕ್ಕುಗಳನ್ನು ಅಧ್ಯಕ್ಷನು ತನ್ನ ಅಧ್ಯಾದೇಶಗಳ ಮೂಲಕ ಕಡಿಮೆಮಾಡಬಹುದು ಅಥವ ನಿಲಂಬನ ಗೊಳಿಸಬಹುದು. ಇದೇ ರೀತಿಯಲ್ಲಿ ಯಾವುದಾದರೂ ಒಂದು ರಾಜ್ಯದ ಹಣಕಾಸಿನ ಸ್ಥಿತಿ ಕೆಟ್ಟಿದೆ ಎಂದು ಅಧ್ಯಕ್ಷನಿಗೆ ವರದಿಬಂದರೆ, ಆ ರಾಜ್ಯದ ಹಣಕಾಸಿನ ಪ್ರಶಾಸನ ವನ್ನು ಕ್ರಮಪಡಿಸಲು ಅಧ್ಯಕ್ಷನು ಸೂಕ್ತಕಾರ್ಯಗಳನ್ನು ಕೈಗೊಳ್ಳಬಹುದು.

ಅಧ್ಯಕ್ಷನು ನಿರ್ವಹಿಸುವ ಕೆಲಸಕಾರ್ಯಗಳ ಮೇಲೆ ಯಾವ ನ್ಯಾಯ ಸ್ಥಾನಕ್ಕೂ ಅಧಿಕಾರವಿಲ್ಲ. ಆದರೆ ಸಕಾರಣವಾದ ದೋಷಾರೋಪಗಳನ್ನು ಯಾವ ಪ್ರಜೆ ಅಥವ ಸಂಸ್ಥೆಯಾದರೂ ಕೇಂದ್ರ ಸರ್ಕಾದ ಮೇಲೆ ತರಲವಕಾಶವಿದೆ. ಅಧ್ಯಕ್ಷನು ಪದಾಧಿಕಾರದಲ್ಲಿರುವಾಗ ಅವನ ಮೇಲೆ ಯಾರೂ ಯಾವ ವಿಧವಾದ

(ಅಂದರೆ ಸಿವಿಲ್ ಅಥವ ಕ್ರಿಮಿನಲ್) ವ್ಯವಹಾರಗಳನ್ನು ಮಾಡಕೂಡದು; ಅವನನ್ನು ಬಂಧನದಲ್ಲಿಡಕೂಡದು. ಆದರೆ ಕದಾಚಾರದಿಂದಲೂ ಕ್ರಮಮಿಾರಿಯೂ ವರ್ತಿಸುವ ಅಧ್ಯಕ್ಷನ ಮೇಲೆ ಹಿಂದೆ ತಿಳಿಸಿದಂತೆ ಸಂಸದ್ ಕ್ರಮಜರಗಿಸಲು ಅವಕಾಶವಿದೆ. ಅಧ್ಯಕ್ಷನ ಪದಾವಧಿ ಮುಗಿದ ಮೂರು ತಿಂಗಳುಗಳಾದ ಮೇಲೆ ಕ್ರಮವಾದ ಸೂಚನಾಪತ್ರವನ್ನು ಕೊಟ್ಟು ಇವನ ಮೇಲೆ ವ್ಯವಹಾರಗಳನ್ನು ಯಾರು ಬೇಕಾದರೂ ಮಾಡಬಹುದು. ಇಂಥ ಸೂಚನಾಪತ್ರದಲ್ಲಿ ವ್ಯವಹಾರದ ಕಾರಣ, ವ್ಯವಹಾರ ಮಾಡುವವನ ಹೆಸರು, ಅವನಿಗೆ ಬರಬೇಕಾದ ಪರಿಹಾರ ಮೊದಲಾದ ವಿವರಗಳನ್ನು ತಿಳಿಸಬೇಕು. ಅಧ್ಯಕ್ಷನ ಆತ್ಮರಕ್ಷಣೆ, ಗೌರವ ರಕ್ಷಣೆಗಳ ವಿಷಯಗಳಿಗೆ ಸಂಬಂಧಪಡುವ ಉಪಬಂಧಗಳು ರಾಜ್ಯಗಳ ಶ್ರೇಷ್ಠಾಧಿಕಾರಿಗಳಿಗೆಲ್ಲಾ (ರಾಜ್ಯಪಾಲ ಮತ್ತು ರಾಜಪ್ರಮುಖರಿಗೆ) ಅನ್ವಯಿಸುವುವು.

ಉಪಾಧ್ಯಕ್ಷ—ಅಧ್ಯಕ್ಷನಂತೆ ಉಪಾಧ್ಯಕ್ಷನೂ ನಿರ್ವಾಚನಾಧಿಕಾರಿ. ಇವನನ್ನು ಸಂಸದಿನ ಎರಡು ಸಭೆಗಳು ಒಟ್ಟುಸೇರಿ ನಿರ್ವಾಚನ ಮಾಡುವುವು. ನಿರ್ವಾಚನ 'ಪ್ರಮಾಣಾನುಗುಣವಾದ ಹಾಗೂ ವರ್ಗಾಭಿಮಿತಪ್ರಾತಿನಿಧ್ಯಪದ್ಧತಿ' (ಅನುಪಾತೀ ಪ್ರತಿನಿಧಿತ್ವ) ಗನುಸಾರವಾಗಿ ಗೋಪ್ಯವಾಗಿ (ಬ್ಯಾಲೆಟ್—ಶಾಲಕ) ನಡೆಯುವುದು. ಉಪಾಧ್ಯಕ್ಷನ ಪದಕ್ಕೆ ನಿಲ್ಲುವ ಉಮೇದುವಾರನು ಯಾವ ವಿಧಾನಮಂಡಲದ ಸದಸ್ಯನೂ ಆಗಿರಕೂಡದು. ಆಗಿದ್ದರೆ ಉಪಾಧ್ಯಕ್ಷ ಪದಕ್ಕೆ ನಿರ್ವಾಚಿತನಾದಕೂಡಲೆ ವಿಧಾನಮಂಡಲದ ಸದಸ್ಯತ್ವದ ಪದತ್ಯಾಗಮಾಡಬೇಕು. ಉಮೇದವಾರನು ಭಾರತದ ಪ್ರಜೆಯಾಗಿಯೂ, ೩೫ ವರ್ಷಕ್ಕೆ ಕಡಿಮೆಯಿಲ್ಲದವನಾಗಿಯೂ, ರಾಜ್ಯಪರಿಷತ್ತಿನ ಸಧಸ್ಯತ್ವದ ಪದಾಧಿಕಾರಗಳಲ್ಲಿ ವಿನಾ ಉಳಿದ ಪದಗಳಲ್ಲಿ ನಿಯೋಜಿತನಲ್ಲದವನೂ ಆಗಿರಬೇಕು.

ಉಪಾಧ್ಯಕ್ಷನು ತನ್ನ ಸ್ವಾಧಿಕಾರದಿಂದ 'ರಾಜ್ಯಪರಿಷತ್ತಿನ' ಅಗ್ರಾಸನಾಧಿಪತಿಯಾಗಿರತಕ್ಕದ್ದು. ಮರಣ, ಪದತ್ಯಾಗ ಮೊದಲಾದ ಕಾರಣಗಳಿಂದ ವಿರಾಮವಾಗುವ ಅಧ್ಯಕ್ಷನ ಸ್ಥಾನದಲ್ಲಿ ಹೊಸ ಅಧ್ಯಕ್ಷ ಅಧಿಕಾರಸೂತ್ರವಹಿಸುವವರೆಗೂ ದೇಹಾಲಸ್ಯ ಮೊದಲಾದ ಅನಿವಾರ್ಯದಿಂದ ಅಧ್ಯಕ್ಷ ಕೆಲಸಕ್ಕೆ ಬಾರದಿದ್ದಾಗಲೂ ಉಪಾಧ್ಯಕ್ಷನು ಅಧ್ಯಕ್ಷನ ಕೆಲಸಗಳನ್ನು ನಿರ್ವಹಿಸಬೇಕು. ಇಂಥ ಸಂದರ್ಭದಲ್ಲಿ ಉಪಾಧ್ಯಕ್ಷನು ರಾಜ್ಯಪರಿಷತ್ತಿನ ಅಗ್ರಾಸನವನ್ನು ವಹಿಸಕೂಡದು. ಇದಕ್ಕೆ ಸಲ್ಲುವ ವೇತನ, ಭತ್ಯ ಮೊದಲಾದವುಗಳನ್ನು ಸ್ವೀಕರಿಸಕೂಡದು, ಅಧ್ಯಕ್ಷನ ಪರವಾಗಿ ಕೆಲಸ ನಿರ್ವಹಿಸುವವರೆಗೆ ಅಧ್ಯಕ್ಷನ ಪದಕ್ಕೆ ಸಲ್ಲುವ ಅಧಿಕಾರ, ಪ್ರತಿಫಲಗಳನ್ನು ಅನುಭವಿಸಲು ಉಪಾಧ್ಯಕ್ಷನಿಗೆ ಅವಕಾಶವಿದೆ.

ಪದಾವಧಿ—ಉಪಾಧ್ಯಕ್ಷನ ಪದಾವಧಿ ಐದು ವರ್ಷ. ಆತ್ಮಸಂತೋಷದಿಂದ ಇವನು ಪದತ್ಯಾಗವನ್ನು ಲಿಖಿತ ಮೂಲಕ ಅಧ್ಯಕ್ಷನಿಗೆ ಕೊಡಬಹುದು. ಅದಕ್ಷಾತ್ತೆ, ಅಪನಂಬಿಕೆಗಳಿಗೆ ಗುರಿಯಾಗುವ ಉಪಾಧ್ಯಕ್ಷನನ್ನು ಸಂಸದ್ ಪದಚ್ಯುತನನ್ನಾಗಿ ಮಾಡಬಹುದು. ಇವನ ಮೇಲೆ ಬರುವ ದೋಷಾರೋಪಗಳನ್ನು ಮೊದಲು ರಾಜ್ಯ ಪರಿಷತ್ ಬಹುಮತದಿಂದ ಒಪ್ಪಬೇಕು. ಆ ಮೇಲೆ ಈ ಒಪ್ಪಿಗೆಗೆ ಲೋಕಸಭೆ ತನ್ನ ಅನುಮತಿಕೊಡಬೇಕು. ಆಗಲೀಗ ಉಪಾಧ್ಯಕ್ಷನನ್ನು ಪದಚ್ಯುತನನ್ನಾಗಿ ಮಾಡುವದು ಸಾಧ್ಯವಾಗುವುದು. ಇಂಥ ಅವಿಶ್ವಾಸ ಪ್ರಸ್ತಾಪವನ್ನು ತರುವ ಸದಸ್ಯ ಅಥವ ಸದಸ್ಯರು ೧೪ ದಿನಗಳ ಮುಂಚಿತವಾಗಿ ತಮ್ಮ ಸಭೆಗೆ ಸೂಚನಾಪತ್ರವನ್ನು ಕೊಡತಕ್ಕದ್ದು.

ಅಧ್ಯಕ್ಷ ಮತ್ತು ಉಪಾಧ್ಯಕ್ಷರ ನಿರ್ವಾಚನೆಗೆ ಸಂಬಂಧಿಸುವ ಸಂದೇಹ, ವ್ಯವಹಾರಗಳನ್ನು ಪರಿಶೀಲಿಸಿ ನಿರ್ಣಯಕೊಡಲು ಸುಪ್ರೀಂಕೋರ್ಟಿಗೆ (ಉಚ್ಚತಮ ನ್ಯಾಯಾಲಯಕ್ಕೆ) ಅಧಿಕಾರವಿದೆ. ಇವರ ನಿರ್ವಾಚನ ಅಕ್ರಮವೆಂದು ನಿರ್ಣಯ ಕೊಡುವುದರಿಂದ ಇವರು ಈ ನಿರ್ಣಯಕ್ಕೆ ಮುಂಚೆ ಅಧಿಕೃತವಾಗಿಮಾಡಿದ ಕೆಲಸ ಕಾರ್ಯಗಳು ಯಾವುವೂ ನಿಲಂಬನವಾಗುವುದಿಲ್ಲ.

ಮಂತ್ರಿಮಂಡಲಿ—ಭಾರತಸರ್ಕಾರ ಪಾರ್ಲಿಮೆಂಟರಿ ಸರ್ಕಾರ ಪದ್ಧತಿ ಮತ್ತು ಜವಾಬ್ದಾರಿಸರ್ಕಾರಪದ್ಧತಿಗಳಿಗನುಸಾರವಾಗಿರುವುದರಿಂದಲೂ ಮಂತ್ರಿಗಳ ಸಲಹೆಯಿಲ್ಲದೆ ಅಧ್ಯಕ್ಷನು ಯಾವ ಪ್ರಶಾಸನೀಯ ಕಾರ್ಯವನ್ನು ನಿರ್ವಹಿಸುವುದಿಲ್ಲವಾದುದರಿಂದಲೂ ಮಂತ್ರಿಮಂಡಲಿಗೆ ಸಂವಿಧಾನದಲ್ಲಿ ಬಹಳ ಮುಖ್ಯವಾದ ಸ್ಥಾನ ದೊರೆತಿದೆ. ಅಧ್ಯಕ್ಷನಿಗೆ ಸಹಾಯಮಾಡುವುದೂ ಸಲಹೆನೀಡುವುದೂ ಮಂತ್ರಿಮಂಡಲಿಯ ಮುಖ್ಯಕರ್ತವ್ಯ. ಅಧ್ಯಕ್ಷನಿಗೆ ಮಂತ್ರಿಗಳು ಕೊಡುವ ಸಲಹೆ ಎಂಥಹದು, ಅದು ನ್ಯಾಯವೆ, ಅನ್ಯಾಯವೆ ಎಂಬುದನ್ನು ಪ್ರಶ್ನಿಸಲು ಯಾವ ನ್ಯಾಯಸ್ಥಾನಕ್ಕೂ ಅಧಿಕಾರವಿಲ್ಲ. ಇಂಗ್ಲೆಂಡಿನ ಕ್ಯಾಬಿನೆಟ್ಟಿನಲ್ಲಿರುವಂತೆ ಇಲ್ಲಿಯೂ ಪ್ರಧಾನಿಗೆ ಮಂತ್ರಿಮಂಡಲಿಯಲ್ಲಿ ಗಣ್ಯಸ್ಥಾನವಿದೆ. ಅಧ್ಯಕ್ಷನು ಪ್ರಧಾನಿಯನ್ನೂ ಪ್ರಧಾನಿಯ ಸಲಹೆಯಿಂದ ಉಳಿದ ಮಂತ್ರಿಗಳನ್ನೂ ನೇಮಿಸುವನು. ಅಧ್ಯಕ್ಷನು ಇಚ್ಛೆಪಡುವವರೆಗೆ ಮಂತ್ರಿಗಳು ಅಧಿಕಾರದಲ್ಲಿರುವರು. ಇದು ಔಪಚಾರಿಕದ ಮಾತು. ಜವಾಬ್ದಾರಿಸರ್ಕಾರ ಆಚರಣೆಗೆ ಬಂದಿರುವುದರಿಂದ ಮಂತ್ರಿಗಳ ಪದಾವಧಿಗೆ ಇವರ ಕಾರ್ಯತತ್ಪರತೆ, ಇವರಮೇಲೆ ಸಂಸದಕ್ಕಿರುವ ವಿಶ್ವಾಸ ಮತ್ತು ನಂಬಿಕೆಗಳೇ ಮುಖ್ಯಕಾರಣಗಳೆಂದು ತಿಳಿಯಬೇಕು. ಅಧಿಕಾರಸೂತ್ರವಹಿಸುವುದಕ್ಕೆ ಮುಂಚೆ ಮಂತ್ರಿಗಳು ಅಧ್ಯಕ್ಷನ ಸಮ್ಮುಖದಲ್ಲಿ ಪ್ರಮಾಣವಚನವನ್ನು ಸ್ವೀಕರಿಸ

ಬೇಕು. ಅಧಿಕಾರಕ್ಕೆ ಬಂದ ೬ ತಿಂಗಳುಗಳೊಳಗಾಗಿ ಸಂಸದಿನ ಸದಸ್ಯರಾಗಿ ಸಿರ್ವಾಚಿತರಾಗಬೇಕು. ಇಲ್ಲವಾದರೆ ಮಂತ್ರಿ ಪದವಿಗಳನ್ನು ಇವರು ಕಳೆದುಕೊಳ್ಳ ಬೇಕಾಗುವುದು. ಮಂತ್ರಿಗಳು ಒಟ್ಟಿಗೆ ಲೋಕಸಭೆಗೆ ಪ್ರಶಾಸನೀಯ ವಿಚಾರದಲ್ಲಿ ಜವಾಬ್ದಾರರಾಗಿರುವರು. ಮಂತ್ರಿಗಳ ವೇತನ, ಭತ್ಯ ಮೊದಲಾದವುಗಳನ್ನು ಸಂಸದ್ ನಿರ್ಧರಿಸುವುದು. ಪ್ರಕೃತ ಮಂತ್ರಿಗಳಿಗೆ ೩೦೦೦ ರೂಪಾಯಿ ವೇತನ ದೊರೆಯು ತ್ತಿರುವುದು. ಇತ್ತೀಚೆಗೆ ಪ್ರಶಾಸನೀಯ ಸೌಕರ್ಯಕ್ಕಾಗಿ ಕೆಲವು ಉಪಮಂತ್ರಿ ಗಳನ್ನು ಕೇಂದ್ರಸರ್ಕಾರ ನೇಮಿಸಿ ಒಬ್ಬೊಬ್ಬ ಉಪಮಂತ್ರಿಗೆ ತಿಂಗಳಿಗೆ ೨,೦೦೦ ರೂಪಾಯಿ ವೇತನ ಕೊಡುತ್ತಿರುವುದು.

ಹಿಂದೆ ತಿಳಿಸಿದಂತೆ ಸರ್ಕಾರದ ಕೆಲಸಕಾರ್ಯಗಳು ಅಧ್ಯಕ್ಷನ ಹೆಸರಿನಲ್ಲಿ ನಡೆಯುವುವು. ಎಲ್ಲಾ ಆಜ್ಞೆಗಳೂ ಅಧಿಕೃತ ಕಾಗದಪತ್ರಗಳೂ ಇವನು ನಿರ್ಧರಿಸುವ ನಿಯಮಗಳಿಗನುಸಾರವಾಗಿ ಹೊರಬೀಳುವುವು. ಮಂತ್ರಿಗಳ ಸಲಹೆ, ಸಹಾಯ ಸಹಕಾರಗಳಿಲ್ಲದೆ ಯಾವ ಮುಖ್ಯ ಕೆಲಸವೂ ನಡೆಯದಿರುವ ಇಂಗ್ಲೆಂಡಿನ ಸಂಪ್ರದಾಯದಂತೆಯೇ ಭಾರತದಲ್ಲಿಯೂ ಮಂತ್ರಿಗಳು ನೇರವಾಗಿ ದೇಶವನ್ನು ಆಳುವ ಜವಾಬ್ದಾರಿ ಸರ್ಕಾರ ಪದ್ಧತಿ ಅನುಷ್ಠಾನಕ್ಕೆ ಬಂದಿದೆ. ಸರ್ಕಾರದ ಕಾರ್ಯಗಳ ನಿರ್ವಹಣೆಯ ಸೌಕರ್ಯಕ್ಕಾಗಿಯೂ ಮಂತ್ರಿಗಳಲ್ಲಿ ಕೆಲಸಗಳನ್ನು ವಿಂಗಡಿಸುವ ಸಲುವಾಗಿಯೂ ಅಧ್ಯಕ್ಷನು ಸೂಕ್ತ ನಿಯಮಗಳನ್ನು ರಚಿಸುವನು.

ಅಧ್ಯಕ್ಷನಿಗೆ ಮಂತ್ರಿಮಂಡಲಿಯ ವಿನಿಶ್ಚಯಗಳನ್ನೂ ಹೊಸ ವಿಧಿಗಳ ಆವಶ್ಯಕತೆ ಯನ್ನೂ ಪ್ರಧಾನಿ ಆಗಿಂದಾಗ್ಯೆ ತಿಳಿಸುವನು. ಅಧ್ಯಕ್ಷ ಅಪೇಕ್ಷಿಸುವ ಪ್ರಶಾಸ ನೀಯ ವಿಷಯಗಳನ್ನೂ ಅವನು ಸೂಚಿಸುವ ಹೊಸ ವಿಧಿ ರಚನೆಗೆ ಬೇಕಾಗುವ ಅಂಕಿ ಅಂಶಗಳನ್ನೂ ಪ್ರಧಾನಿ ಅಧ್ಯಕ್ಷನಿಗೆ ಒದಗಿಸುವನು. ಮಂತ್ರಿಗಳು ತಮ್ಮ ಇಲಾಖೆಗಳಿಗೆ ಸಂಬಂಧಿಸುವ ವಿಷಯಗಳ ಮೇಲೆ ಕೊಡುವ ವಿನಿಶ್ಚಯಗಳನ್ನು ಮಂತ್ರಿಮಂಡಲಿಯ ಮುಂದೆ ರಾಷ್ಟ್ರಾಧ್ಯಕ್ಷನು ಅಪೇಕ್ಷಿಸಿದಾಗ ಪ್ರಧಾನಿ ಮಂಡಿಸಿ ಅದರ ವಿನಿಶ್ಚಯವನ್ನು ಅಧ್ಯಕ್ಷನಿಗೆ ತಿಳಿಸಬೇಕು.

ಮಹಾನ್ಯಾಯವಾದಿ—(ಅಟಾರ್ನಿಜನರಲ್) ಪ್ರಶಾಸನೀಯ ವಿಚಾರದಲ್ಲಿ ನ್ಯಾಯಶಾಸ್ತ್ರಜ್ಞರ ಸಹಾಯ ಅತ್ಯವಶ್ಯಕವಾದುದರಿಂದ, ರಾಜ್ಯನಿಬಂಧನಕಾರರು 'ಅಟಾರ್ನಿಜನರಲ್' (ಮಹಾನ್ಯಾಯವಾದಿ) ಎಂಬ ಉನ್ನತ ನ್ಯಾಯಶಾಸ್ತ್ರಜ್ಞನ ಪದಕ್ಕೆ ಏರ್ಪಾಡುಮಾಡಿರುವರು. ಈ ಪದಾಧಿಕಾರಿಗೆ ಉಚ್ಚತಮನ್ಯಾಯಾಲಯದ ನ್ಯಾಯಾಧೀಶರಿಗಿರುವ ಅರ್ಹತೆ ಆವಶ್ಯಕ. ಇವನನ್ನು ಅಧ್ಯಕ್ಷನೇ ನೇಮಿಸುವನು. ಸಂವಿಧಾನದ ವಿಧಿಗಳ ನಿರ್ವಚನಗಳನ್ನೂ ಇತರ ಶಾಸ್ತ್ರಸಂಬಂಧವಾದ ಸಲಹೆ

ಗಳನ್ನೂ ರಾಷ್ಟ್ರಾಧ್ಯಕ್ಷನು ಅಪೇಕ್ಷಿಸುವಾಗ ನೀಡುವುದು ಇವನ ಕರ್ತವ್ಯ. ಜೊತೆಗೆ ಸಂಸದ್ ವಹಿಸುವ ಕಾರ್ಯಗಳನ್ನು ಮಾಡಲೂ ಇವನು ಸಿದ್ಧನಾಗಿರಬೇಕು. ಭಾರತದಲ್ಲಿರುವ ನ್ಯಾಯಾಲಯಗಳ ಕೆಲಸಕಾರ್ಯಗಳನ್ನು ಅಧೀಕ್ಷಣ ಮಾಡುವುದೂ (ಪರಿಶೀಲಿಸುವುದು) ಇವನ ಕೆಲಸ. ಮಹಾನ್ಯಾಯವಾದಿಯ ವೇತನವನ್ನು ಅಧ್ಯಕ್ಷನೇ ನಿರ್ಧರಿಸುವನು. ಇವನ ಪದಾವಧಿಗೆ ಅಧ್ಯಕ್ಷನ ವಿಶ್ವಾಸ ನಂಬಿಕೆಗಳೇ ಮುಖ್ಯಕಾರಣ.

೪. ಅಧ್ಯಾಯ

ಭಾರತಗಣರಾಜ್ಯ—ಶಾಸನಾಂಗ (ವಿಧಾನಮಂಡಲ)

ಕೇಂದ್ರವಿಧಾನಮಂಡಲ ಮತ್ತು ರಚನೆ—ರಾಷ್ಟ್ರಾಧ್ಯಕ್ಷ, ರಾಜ್ಯಪರಿಷತ್, ಲೋಕಸಭೆಗಳಿಂದ ಕೂಡಿದ ಕೇಂದ್ರಶಾಸನಾಂಗಕ್ಕೆ ಸಂಸದ್ ಎಂದು ಹೆಸರು.

ರಾಜ್ಯಪರಿಷತ್—(ಕೌನ್ಸಿಲ್ ಆಫ್ ಸ್ಟೇಟ್ಸ್) ಪರಿಷತ್ತಿನ ಸದಸ್ಯರ ಸಂಖ್ಯೆ ೨೫೦. ಇವರಲ್ಲಿ ನಾಮಕರಣ ಸದಸ್ಯರು ೧೨. ನಿರ್ವಾಚಿತ ಸದಸ್ಯರು ೨೩೮ ಕ್ಕೆ ಮೀರದವರು. ಸಾಹಿತ್ಯ, ಕಲೆ, ವಿಜ್ಞಾನಶಾಸ್ತ್ರ, ವ್ಯವಸಾಯ, ವಸ್ತುಶಾಸ್ತ್ರ, ಸಾಮಾಜಿಕ ಪ್ರಶಾಸನ, ಸಾಮಾಜಿಕಸೇವೆ ಇವುಗಳಲ್ಲಿ ಪ್ರಖ್ಯಾತರಾದವರಲ್ಲಿ ೧೨ ಜನಗಳನ್ನು ಪರಿಷತ್ತಿನ ಸದಸ್ಯರ ಸ್ಥಾನಗಳಿಗೆ ಅಧ್ಯಕ್ಷ ನಾಮನಿರ್ದೇಶನ ಮಾಡುವನು. ಸಂವಿಧಾನದ ಒಂದನೆಯ ಅನುಸೂಚಿಯ ಎ. ಬಿ. ಸಿ ಭಾಗಗಳಲ್ಲಿ ಸೂಚಿತವಾಗಿರುವ ರಾಜ್ಯಗಳ ವಿಧಾನಸಭೆಗಳು ತಮ್ಮ ಪ್ರತಿನಿಧಿಗಳನ್ನು ಪರಿಷತ್ತಿಗೆ ನಿರ್ವಾಚನಮಾಡುವುವು. 'ಎ' ಭಾಗದ ರಾಜ್ಯಗಳಿಗೆ ೧೪೫ ಸ್ಥಾನಗಳೂ 'ಬಿ' ಭಾಗದ ರಾಜ್ಯಗಳಿಗೆ ೫೩ ಸ್ಥಾನಗಳೂ 'ಸಿ' ಭಾಗದ ರಾಜ್ಯಗಳಿಗೆ ೭ ಸ್ಥಾನಗಳೂ ಇವೆ. ಪರಿಷತ್ತಿನ ಕಾಲಾವಧಿ ಶಾಶ್ವತ; ಆದರೆ ಅದರ ಸದಸ್ಯರಪೈಕಿ $\frac{೧}{೩}$ ಭಾಗವನ್ನು ೩ ವರ್ಷಗಳಿಗೊಂದಾವರ್ತಿ ಬದಲಾಯಿಸತಕ್ಕದ್ದು.

ಲೋಕಸಭೆ—(ಹೌಸ್ ಆಫ್ ಪೀಪಲ್ಸ್) ಈ ಸಭೆಯ ಸದಸ್ಯರ ಸಂಖ್ಯೆ ೫೦೦ ಕ್ಕೆ ಮೀರಕೂಡದು. ಭಾರತಕ್ಕೆ ಸೇರಿದ ಪ್ರಾಪ್ತವಯಸ್ಕರಾದ ಸ್ತ್ರೀಪುರುಷರು ಸದಸ್ಯರನ್ನು ಪ್ರತ್ಯಕ್ಷವಾಗಿ ನಿರ್ವಾಚನಮಾಡುವರು. ನಿರ್ವಾಚನೆಯ ಸೌಕರ್ಯಕ್ಕಾಗಿ ಸಣ್ಣರಾಜ್ಯಗಳನ್ನು ಒಟ್ಟುಗೂಡಿಸಿ ಒಂದು ದೊಡ್ಡ ನಿರ್ವಾಚನ ಕ್ಷೇತ್ರವನ್ನಾಗಿಯೂ ದೊಡ್ಡರಾಜ್ಯಗಳನ್ನೊಡದು ಅನೇಕ ಸಣ್ಣ ನಿರ್ವಾಚನಕ್ಷೇತ್ರಗಳನ್ನಾಗಿಯೂ ಮಾಡಲವಕಾಶವಿದೆ. ಪ್ರತಿಯೊಂದು ೭೫೦,೦೦೦ ಮತದಾರರಿಗೆ ಒಬ್ಬನಾದರೂ

ಪ್ರತಿನಿಧಿ ಇರುವಂತೆ ಸಂವಿಧಾನ ಸದಸ್ಯರ ಸಂಖ್ಯೆಯನ್ನು ನಿರ್ಧರಿಸಿದೆ. ಅಂದರೆ ನಿರ್ವಾಚನಕ್ಷೇತ್ರಗಳಿಗೆ ನಿರ್ಧರಿಸಿರುವ ಪ್ರತಿನಿಧಿಗಳ ಸಂಖ್ಯೆ ಅವುಗಳ ಜನಸಂಖ್ಯೆ ಮತ್ತು ಪ್ರಮಾಣ ಇವುಗಳಿಗನುಗುಣವಾಗಿರುತ್ತದೆ. ಪ್ರತಿಯೊಂದು ಜನಗಣನೆ ಮುಗಿದನಂತರ, ಪ್ರತಿನಿಧಿಗಳ ಸಂಖ್ಯೆಯಲ್ಲಾಗಬೇಕಾದ ಬದಲಾವಣೆಗಳನ್ನು ಸರ್ಕಾರ ಮಾಡುವುದು. ಒಂದನೆಯ ಅನುಸೂಚಿ 'ಸಿ' ಭಾಗದ ರಾಜ್ಯಗಳ ಪ್ರತಿನಿಧಿಗಳ ಸಂಖ್ಯೆಯನ್ನು ಸಂಸದ್ ನಿರ್ಧರಿಸುವುದು. ಸದಸ್ಯರನ್ನು ನಿರ್ವಾಚನಮಾಡುವ ಹಕ್ಕು ಕನಿಷ್ಠಪಕ್ಷ ೨೧ ವರ್ಷ ವಯಸ್ಸಾಗಿರುವ ಸ್ತ್ರೀಪುರುಷರಿಗೆ ಅಂದರೆ ಬುದ್ಧಿಸ್ವಾಧೀನವಿಲ್ಲದವರು, ಅಪರಾಧಿಗಳು ಇವರನ್ನು ವಿನಾ, ಉಳಿದವರಿಗೆಲ್ಲ ಇದೆ. ಲೋಕಸಭೆಯ ಕಾಲಾವಧಿ ೫ ವರ್ಷ. ಕಾರಣಾಂತರಗಳಿಂದ ಇದಕ್ಕೆ ಮುಂಚಿತವಾಗಿ ಇದರ ಸತ್ರ ಮುಕ್ತಾಯವಾಗುವುದೂ ಉಂಟು. ಆಕಸ್ಮಿಕ ಘಟನೆಗಳ ದೆಶೆಯಿಂದ ಅಧ್ಯಕ್ಷನು ಉದ್ಘೋಷಣೆಯನ್ನು ಹೊರಡಿಸಿದಾಗ ಲೋಕಸಭೆಯ ಸತ್ರವನ್ನು ಸಂಸದ್ ಸತ್ರಾವಸಾನ ಮಾಡಬಹುದು; ಅಂದರೆ ಒಂದುಸಲಕ್ಕೆ ಒಂದು ವರ್ಷ ಮೀರದಂತೆಯೂ ಅಧ್ಯಕ್ಷನ ಉದ್ಘೋಷಣೆಯ ಕಾಲಾವಧಿ ಮುಗಿದಮೇಲೆ ೬ ತಿಂಗಳಿಗೆ ಮೀರದಂತೆಯೂ ಸತ್ರಾವಸಾನಮಾಡಬಲ್ಲದು.

ಸಂಸದಿನ ಸದಸ್ಯರ ಅರ್ಹತೆ—ಸದಸ್ಯಸ್ಥಾನಗಳಿಗೆ ನಿಲ್ಲುವ ಉಮೇದುವಾರರು ಭಾರತದ ನಾಗರಿಕತಾಧಿಕಾರಪಡೆದಿರಬೇಕು. ಲೋಕಸಭೆಯ ಉಮೇದುವಾರರಿಗೆ ಕನಿಷ್ಠಪಕ್ಷ ೨೫ ವರ್ಷವೂ, ಪರಿಷತ್ತಿನ ಉಮೇದುವಾರರಿಗೆ ೩೦ ವರ್ಷವೂ ಆಗಿರಬೇಕು. ಜೊತೆಗೆ ಸಂಸದ್ ನಿರ್ಧರಿಸುವ ಉಳಿದ ಅರ್ಹತೆಗಳನ್ನೂ ಪಡೆದಿರಬೇಕು.

ಸಂಸದಿನ ಸತ್ರ—ವರ್ಷಕ್ಕೆರಡುಸಲ ಸಂಸದಿನ ಸತ್ರಗಳಿವೆ. ಒಂದು ಸತ್ರಕ್ಕೂ ಇನ್ನೊಂದು ಸತ್ರಕ್ಕೂ ೬ ತಿಂಗಳಿಗಿಂತ ಹೆಚ್ಚಿನ ಅಂತರವಿರಕೂಡದು. ತನಗೆ ಸೂಕ್ತವೆಂದು ತೋರಿದಾಗ ಸಂಸದಿನ ಒಂದು ಅಥವ ಎರಡು ಸಭೆಗಳನ್ನೂ ಅಧ್ಯಕ್ಷನು ಆಹ್ವಾನಿಸಬಹುದು; ಸತ್ರವನ್ನು ಮುಂದುವರಿಸಬಹುದು; ಲೋಕಸಭೆಯ ಸತ್ರವನ್ನು ವಿಘಟನಗೊಳಿಸಬಹುದು, ಸಭೆಗಳಿಗೆ ಪ್ರತ್ಯೇಕವಾಗಿ ಅಥವ ಒಟ್ಟಿಗೆ ಸಂದೇಶ ಕಳುಹಿಸಬಹುದು; ಇಂಥ ಸಂದೇಶಗಳಿಗೆ ಸದಸ್ಯರು ಗೌರವತೋರಿಸಿ ಅವುಗಳನ್ನು ಕಾರ್ಯರೂಪಕ್ಕೆ ತರಬೇಕು.

ಸಂಸದಿನ ಪ್ರಥಮ ಸತ್ರದಲ್ಲಿ ಎರಡು ಸಭೆಗಳನ್ನೂ ಸೇರಿಸಿ ಅಧ್ಯಕ್ಷನು ಆರಂಭಭಾಷಣಮಾಡಿ ಪ್ರಶಾಸನೀಯ ನೀತಿಯನ್ನು ವಿವರಿಸುವನು. ಈ ಭಾಷಣ ಬಹಳ ಮುಖ್ಯವಾದ್ದರಿಂದ ಇದನ್ನು ಸಾವಧಾನದಿಂದ ಸದಸ್ಯರು ಪರಿಶೀಲಿಸಿ ಸೂಕ್ತ

ಕಾರ್ಯವನ್ನು ಕೈಕೊಳ್ಳಬೇಕು. ಮಂತ್ರಿಗಳೂ ಮಹಾನ್ಯಾಯವಾದಿಯೂ ಸಂಸದಿನ ಸಭೆಗಳಲ್ಲಿಯೂ ತಮಗೆ ಸದಸ್ಯತ್ವವಿರುವ ಸಂಸದಿನ ಸಮಿತಿಗಳಲ್ಲಿಯೂ ಹಾಜರಾಗಿರುವುದಕ್ಕೂ ಭಾಷಣಮಾಡುವುದಕ್ಕೂ, ಪ್ರಶ್ನೆಗಳಿಗೆ ಉತ್ತರಕೊಡುವುದಕ್ಕೂ ಪ್ರಶಾಸನೀಯ ನೀತಿಯನ್ನು ಸಮರ್ಥಿಸುವುದಕ್ಕೂ ಅವಕಾಶವಿದೆ. ಆದರೆ ಮತಗಳನ್ನು ಕೊಡಲು ಇವರಿಗೆ ಅಧಿಕಾರವಿಲ್ಲ.

ಸಂಸದಿನ ಅಧಿಕಾರಿಗಳು—ಸಂಸದಿನ ಕಾರ್ಯನಿರ್ವಹಣೆಗಾಗಿ ಸಭೆಗಳಿಗೆ ಪ್ರತ್ಯೇಕವಾಗಿ ಅಧಿಕಾರಿಗಳಿರುವರು. ಭಾರತದ ಉಪಾಧ್ಯಕ್ಷನೇ ರಾಜ್ಯಪರಿಷತ್ತಿನ ಸಭಾಪತಿ. ಪ್ರಥಮ ಸತ್ರದಲ್ಲಿ ಪರಿಷತ್ ಒಬ್ಬ ಉಪಸಭಾಪತಿಯನ್ನು ನಿರ್ವಾಚನ ಮಾಡುವುದು. ಈ ಎರಡುಸ್ಥಾನಗಳು ಖಾಲಿಬಿದ್ದಕೂಡಲೆ ಹೊಸ ನಿರ್ವಾಚನವಾಗತಕ್ಕದ್ದು. ಇವರು ಪರಿಷತ್ತಿನ ಸದಸ್ಯಸ್ಥಾನಗಳನ್ನು ಕಳೆದುಕೊಂಡರೆ ಪದಾಧಿಕಾರಗಳನ್ನೂ ಕಳೆದುಕೊಳ್ಳುವರು. ತಮಗೆ ಬೇಕಿಲ್ಲದಾಗ ಪದತ್ಯಾಗಮಾಡಲು ಸದಸ್ಯರಿಗೆ ಅವಕಾಶವಿದೆ. ಪರಿಷತ್ತಿನ ವಿಶ್ವಾಸ ಮತ್ತು ನಂಬಿಕೆಗಳನ್ನು ಕಳೆದುಕೊಂಡರೆ ಇವರಿಗೆ ಪದಾಧಿಕಾರದಿಂದ ಪದತ್ಯಾಗವೂ ಆಗುವುದು. ಅವಿಶ್ವಾಸ ಪ್ರಸ್ತಾವವನ್ನು ಮಂಡಿಸುವವರು ೧೪ ದಿವಸಗಳ ಮುಂಚಿತವಾಗಿ ಸಭೆಗೆ ಸೂಚನಾ ಪತ್ರ ಕೊಡಬೇಕು. ಇಂಥ ವಿಧೇಯಕಕ್ಕೆ ಬಹುಮತದ ಒಪ್ಪಿಗೆ ದೊರೆಯಬೇಕು. ಪರಿಷತ್ತಿನ ಸಭಾಪತಿ ದೇಹಾಲಸ್ಯ ವೊದಲಾದ ಅನಿವಾರ್ಯಗಳಿಂದ ಪರಿಷತ್ತಿಗೆ ಬರದಿದ್ದರೆ ಇವನ ಕೆಲಸವನ್ನು ಉಪಸಭಾಪತಿ ನೋಡಿಕೊಳ್ಳತಕ್ಕದ್ದು, ಇವನೂ ಹಾಜರಿಲ್ಲದಿದ್ದರೆ ಕಾರ್ಯಕ್ರಮದ ನಿಯಮಕ್ಕನುಸಾರವಾಗಿ ನೇಮಿಸಲ್ಪಡುವ ಸದಸ್ಯನು ಸಭಾಪತಿಯಾಗಿರತಕ್ಕದ್ದು, ಇಂಥವನೂ ದೊರೆಯದಿದ್ದರೆ ಪರಿಷತ್ ನಿರ್ವಾಚನೆಮಾಡುವ ಸದಸ್ಯನು ಸಭಾಪತಿಯಾಗಿರತಕ್ಕದ್ದು. ಸಭಾಪತಿಯ ಪದ ಖಾಲಿಯಾಗಿದ್ದರೆ ಅಥವ ಅವನು ರಾಷ್ಟ್ರಾಧ್ಯಕ್ಷನ ಸ್ಥಾನದಲ್ಲಿ ಕೆಲಸಮಾಡುತ್ತಿದ್ದರೆ ಉಪಸಭಾಪತಿ ಸಭಾಪತಿಯ ಕೆಲಸವನ್ನು ನಿರ್ವಹಿಸತಕ್ಕದ್ದು, ಇವನೂ ದೊರೆಯದಿದ್ದರೆ ಅಧ್ಯಕ್ಷ ನೇಮಿಸುವ ಸದಸ್ಯನು ಸಭಾಪತಿಯ ಪದದಲ್ಲಿ ಕೆಲಸಮಾಡಬೇಕು. ಪರಿಷತ್ತಿನ ಸಭಾಪತಿಯನ್ನು ಪದಚ್ಯುತನನ್ನಾಗಿ ಮಾಡಬೇಕೆಂಬ ವಿಧೇಯಕ ಪರಿಷತ್ತಿನ ಮುಂದಿದ್ದಾಗ ಸಭಾಪತಿ ಅಗ್ರಾಸನ ವಹಿಸಕೂಡದು ಉಪಸಭಾಪತಿಯಮೇಲಿನ ಅವಿಶ್ವಾಸಪ್ರಸ್ತಾವ ಪರಿಷತ್ತಿನ ಮುಂದಿದ್ದಾಗ ಇವನೂ ಅಗ್ರಾಸನ ವಹಿಸಕೂಡದು. ಆದರೆ ಆ ಅವಿಶ್ವಾಸಪ್ರಸ್ತಾವದ ವಿಧೇಯಕ ಚರ್ಚೆಯಾಗುತ್ತಿರುವಾಗ ಅವರು ಪರಿಷತ್ತಿನಲ್ಲಿ ಹಾಜರಿರಬಹುದು; ಭಾಗವಹಿಸಬಹುದು; ಮತವನ್ನು ಮಾತ್ರ ಕೊಡಕೂಡದು.

ಲೋಕಸಭೆಯು ಪ್ರಥಮ ಸತ್ರದಲ್ಲಿ ಸದಸ್ಯರು ಒಬ್ಬ ಅಧ್ಯಕ್ಷನನ್ನೂ, ಒಬ್ಬ ಉಪಾಧ್ಯಕ್ಷನನ್ನೂ ನಿರ್ವಾಚನಮಾಡುವರು. ಈ ಸ್ಥಾನಗಳು ಖಾಲಿಬಿದ್ದಹಾಗೆ ಹೊಸ ನಿರ್ವಾಚನವಾಗತಕ್ಕದ್ದು. ಇವರು ಸಭೆಯ ಸದಸ್ಯತ್ವವನ್ನು ಕಳೆದುಕೊಂಡರೆ ತಮ್ಮ ಅಧಿಕಾರವನ್ನೂ ಕಳೆದುಕೊಳ್ಳುವರು. ಈ ಅಧಿಕಾರಿಗಳಿಗೆ ಕೆಲಸ ಬೇಕಿಲ್ಲದಾಗ ಪದತ್ಯಾಗ ಮಾಡಲೂ ಅವಕಾಶವಿದೆ. ಸಭೆಯ ವಿಶ್ವಾಸವನ್ನು ಕಳೆದುಕೊಳ್ಳುವ ಅಧಿಕಾರಿಗಳನ್ನು ಸಂಸದ್ ಪದಚ್ಯುತರನ್ನಾಗಿ ಮಾಡಲೂ ಅವಕಾಶವಿದೆ. ಇಂಥ ವಿಧೇಯಕಕ್ಕೆ ೧೪ ದಿವಸಗಳ ಮುಂಚೆ ಸೂಚನಾಪತ್ರಕೊಟ್ಟು ಅನಂತರ ವಿಧೇಯಕ ವನ್ನು ಮಂಡಿಸಿ ಚರ್ಚಿಸಬೇಕು. ವಿಧೇಯಕಕ್ಕೆ ಸಭೆಯ ಬಹುಮತ ದೊರೆತರೆ ಅಧಿಕಾರಿಗಳು ಅಧಿಕಾರಸ್ಥಾನಗಳನ್ನು ಕಳೆದುಕೊಳ್ಳುವರು. ಹೊಸಸಭೆ ಅಧ್ಯಕ್ಷ ನನ್ನು ನಿರ್ವಾಚನ ಮಾಡುವವರಿಗೆ ಹಳೆಯ ಅಧ್ಯಕ್ಷ ಅಧಿಕಾರದಲ್ಲಿರುವನು. ಅಧ್ಯಕ್ಷನ ಸ್ಥಾನ ಖಾಲಿಯಾಗಿದ್ದರೆ ಇವನ ಕೆಲಸವನ್ನು ಉಪಾಧ್ಯಕ್ಷ ನೋಡಿಕೊಳ್ಳತಕ್ಕದ್ದು. ಇವನ ಸ್ಥಾನವೂ ಖಾಲಿಯಾಗಿದ್ದರೆ ರಾಷ್ಟ್ರಾಧ್ಯಕ್ಷ ನೇಮಿಸುವ ಸದಸ್ಯನು ಸಭೆಯ ಅಧ್ಯಕ್ಷನಾಗಿರತಕ್ಕದ್ದು. ಅನಿವಾರ್ಯದಿಂದ ಸಭಾಧ್ಯಕ್ಷ ಹಾಜರಿಲ್ಲದಿದ್ದರೆ ಇವನ ಕೆಲಸವನ್ನು ಉಪಾಧ್ಯಕ್ಷ ನಿರ್ವಹಿಸಬೇಕು. ಇವನೂ ಹಾಜರಿಲ್ಲದಿದ್ದರೆ ಕಾರ್ಯ ಕ್ರಮದ ನಿಯಮಕ್ಕನುಸಾರವಾಗಿ ನೇಮಿಸಲ್ಪಡುವ ಸದಸ್ಯನು ಈ ಕೆಲಸವನ್ನು ನಡೆಸಬೇಕು. ಇದೂ ಸಾಧ್ಯವಾಗದಿದ್ದರೆ ಸಭೆಯಿಂದ ನಿರ್ವಾಚಿತನಾದ ಸದಸ್ಯನು ಸಭಾಧ್ಯಕ್ಷನ ಕೆಲಸವನ್ನು ನಿರ್ವಹಿಸತಕ್ಕದ್ದು. ಪರಿಷತ್ತಿನ ಸಭಾಪತಿ ಮತ್ತು ಉಪಸಭಾಪತಿ ಇವರನ್ನು ಕೆಲಸದಿಂದ ತೆಗೆಯುವ ಸಂದರ್ಭದಲ್ಲಿ ಅನುಸರಿಸುವ ಕಾರ್ಯಕ್ರಮದ ನಿಯಮಗಳು ಲೋಕಸಭಾಧ್ಯಕ್ಷ ಮತ್ತು ಉಪಾಧ್ಯಕ್ಷ ಇವರುಗಳಿಗೂ ಅನ್ವಯಿಸುವುವು.

ಪರಿಷತ್ತಿನ ಮತ್ತು ಲೋಕಸಭೆಯ ಅಧಿಕಾರಿಗಳ ವೇತನವನ್ನು ಸಂಸದ್ ನಿರ್ಧರಿಸುವುದು. ಈ ಅಧಿಕಾರಿಗಳಲ್ಲದೆ ಸಭೆಗಳಿಗೆ ಪ್ರತ್ಯೇಕವಾಗಿ ಕಾರ್ಯದರ್ಶಿಗಳೂ ಗುಮಾಸ್ತರೂ ಇರುವರು. ಸಂಸದ್ ಇಷ್ಟಪಟ್ಟರೆ ೨ ಸಭೆಗಳಿಗೂ ಅನ್ವಯಿಸುವ ಒಂದೇ ಪ್ರಶಾಸನೀಯ ಅಧಿಕಾರಿವರ್ಗವನ್ನು ಏರ್ಪಡಿಸಲೂಬಹುದು. ಈ ಪ್ರಶಾಸ ನೀಯಪದಗಳಿಗೆ ಬರುವವರ ಯೋಗ್ಯತೆ, ಅರ್ಹತೆ, ವೇತನ ಮೊದಲಾದವುಗಳನ್ನು ನಿರ್ಧರಿಸುವ ಅಧಿಕಾರ ಸಂಸದಕ್ಕೆ ಸೇರಿದೆ.

ಸಂಸದಿನ ಕಾರ್ಯನಿರ್ವಹಣೆಯ ಕ್ರಮ—ಮೊದಲು ಸಂಸದಿನ ಸದಸ್ಯರು ರಾಷ್ಟ್ರಾಧ್ಯಕ್ಷನ ಅಥವ ಪ್ರತಿನಿಧಿಯ ಸಮ್ಮುಖದಲ್ಲಿ ಪ್ರಮಾಣವಚನ ಕೊಟ್ಟು ಪದಾಧಿಕಾರಸ್ಥಾನಗಳಿಗೆ ಬರಬೇಕು. ಸಂಸದಿನ ವಿನಿಶ್ಚಯವೆಂದರೆ ೨ ಸಭೆಗಳು

ಪ್ರತ್ಯೇಕವಾಗಿ ಅಥವ ಒಟ್ಟಿಗೆ ಬಹುಮತದಿಂದ ಕೊಡುವ ವಿನಿಶ್ಚಯ. ಈ ಎರಡು ಸಭೆಗಳ ಅಗ್ರಾಸನಾಧಿಪತಿಗಳು ಸಾಮಾನ್ಯವಾಗಿ ತಮ್ಮ ಮತಗಳನ್ನು ಕೊಡ ಕೂಡದು. ಸದಸ್ಯರ ಮತ ಸಮನಾದರೆ ಆಗ ತಮ್ಮ ನಿರ್ಣಾಯಕ ಮತವನ್ನು (ಕ್ಯಾಸ್ಟಿಂಗ್ ಓಟನ್ನು) ಕೊಟ್ಟು ಸಭೆಯ ಮುಂದಿರುವ ವಿಷಯವನ್ನು ತೀರ್ಮಾ ನಿಸಬಹುದು. ಸದಸ್ಯರಲ್ಲಿ ಕೆಲವರು ಸಭೆಯಲ್ಲಿ ಹಾಜರಿಲ್ಲದಿದ್ದರೆ ಅದರ ಕಾರ್ಯ ಕಲಾಪಗಳನ್ನು ನಿಲ್ಲಿಸಬೇಕಾದುದಿಲ್ಲ. ಸದಸ್ಯರಲ್ಲದವರು ಆಕಸ್ಮಿಕವಾಗಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಮತಗಳನ್ನು ಕೊಟ್ಟರೂ ಸಭೆ ನಿರ್ಧರಿಸುವ ನಿರ್ಣಯಗಳು ವ್ಯತ್ಯಾಸವಾಗಬೇಕಾದುದೂ ಇಲ್ಲ. ಆದರೆ ಸಭೆಗೆ ಬಂದಿರುವ ಸದಸ್ಯರ ಸಂಖ್ಯೆ ಅದರ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ೧/೧೦ ಭಾಗಕ್ಕಿಂತ ಕಡಿಮೆಯಿದ್ದರೆ ಸಭಾಧ್ಯಕ್ಷನು ಸಭೆಯ ಕೆಲಸವನ್ನು (ಕೋರಂ—ಗಣಪೂರ್ತಿ) ಸಂಖ್ಯಾಪೂರ್ಣ ವಾಗುವವರೆಗೆ ನಿಲ್ಲಿಸಬೇಕು.

ಸಂಸದಿನ ೨ ಸಭೆಗಳಿಗೆ ಯಾರೂ ಏಕಕಾಲದಲ್ಲಿ ಸದಸ್ಯರಾಗಿರಕೂಡದು. ಒಂದುವೇಳೆ ಹಾಗೆ ನಿರ್ವಾಚಿತರಾದವರನ್ನು ಸಂಸದ್ ಯಾವುದಾದರೂ ಒಂದು ಸಭೆಯ ಸದಸ್ಯತ್ವದಿಂದ ತೆಗೆಯಬಹುದು. ಯಾರೂ ಏಕಕಾಲದಲ್ಲಿ ಒಂದನೆಯ ಅನುಸೂಚಿಯ 'ಎ' ಮತ್ತು 'ಬಿ' ಭಾಗ ರಾಜ್ಯಗಳ ವಿಧಾನಮಂಡಲದ ಸದಸ್ಯತ್ವ ವನ್ನೂ ಸಂಸದಿನ ಸದಸ್ಯತ್ವವನ್ನೂ ಅಂಗೀಕರಿಸಕೂಡದು. ಹೀಗೆ ಎರಡು ವಿಧಾನ ಮಂಡಲದ ಸದಸ್ಯರಾಗಿ ನಿರ್ವಾಚಿತರಾಗುವವರ ಸಂಸದಿನ ಸದಸ್ಯತ್ವ ರಾಷ್ಟ್ರಾಧ್ಯ ಕ್ಷನು ನಿರ್ಧರಿಸುವ ಅವಧಿ ಮುಗಿದ ಕೂಡಲೆ ಕೊನೆಗಾಣುವುದು. ಸಂಸದಿನ ಸದಸ್ಯತ್ವವನ್ನು ಉಳಿಸಿಕೊಳ್ಳಬೇಕೆಂದಿರುವವನು ರಾಜ್ಯದ ವಿಧಾನಮಂಡಲದ ಸದಸ್ಯ ತ್ವಕ್ಕೆ ಮುಂಚಿತವಾಗಿ ಪದತ್ಯಾಗ ಮಾಡಬೇಕು. ಸಂಸದಿನ ಸದಸ್ಯತ್ವಕ್ಕೆ ಅರ್ಹನಲ್ಲ ದವನೂ ಪದತ್ಯಾಗ ಮಾಡಿರುವವನೂ ತನ್ನ ಸದಸ್ಯಸ್ಥಾನವನ್ನು ಕಳೆದುಕೊಳ್ಳುವನು. ಯಾವ ಸಂಸದಿನ ಸದಸ್ಯನು ತನ್ನ ಸಭೆಯ ಅಪ್ಪಣೆಯಿಲ್ಲದೆ ಅವಿಚ್ಛಿನ್ನವಾಗಿ ೬೦ ದಿವಸಗಳು ಸಭೆಯಲ್ಲಿ ಹಾಜರಿರುವುದಿಲ್ಲವೋ ಅಂಥವನು ತನ್ನ ಸದಸ್ಯತ್ವವನ್ನು ಕಳೆದುಕೊಳ್ಳುವನು. ಕೇಂದ್ರಸರ್ಕಾರದಲ್ಲಿ ಅಥವ ರಾಜ್ಯಗಳಲ್ಲಿ ವೇತನ ಅಥವ ಪ್ರತಿಫಲ ದೊರೆಯುವ ಪದಾಧಿಕಾರದಲ್ಲಿರುವವರೂ (ಅಂದರೆ ಮಂತ್ರಿಪದವಿ ವಿನಾ ಉಳಿದ ಸ್ಥಾನಗಳು) ಬುದ್ಧಿಸ್ವಾಧೀನವಿಲ್ಲವೆಂದು ನ್ಯಾಯಸ್ಥಾನದಿಂದ ನಿರ್ಣಯಪಡೆ ದಿರುವವರೂ ಋಣಮುಕ್ತನಾಗದಿರುವ ದಿವಾಳಿಗಳೂ ಭಾರತದ ಪ್ರಜೆಯಲ್ಲದವರೂ ಇತರ ರಾಜ್ಯದ ನಾಗರಿಕಾಧಿಕಾರವನ್ನು ಅಂಗೀಕರಿಸಿ ಅದಕ್ಕೆ ವಿಧೇಯತೆಯನ್ನು ತೋರಿಸುತ್ತಿರುವವರೂ ಸಂಸದಿನ ವಿಧಿಗಳ ದೃಷ್ಟಿಯಲ್ಲಿ ಅನರ್ಹರಾಗಿರುವವರೂ

ಸಂಸದಿನ ಸದಸ್ಯತ್ವಕ್ಕೆ ಅನರ್ಹರು. ಸದಸ್ಯತ್ವದ ಅರ್ಹತೆಯ ವಿಚಾರವಾಗಿ ಬರುವ ಸಂದೇಹಗಳನ್ನೂ ವ್ಯವಹಾರಗಳನ್ನೂ ರಾಷ್ಟ್ರಾಧ್ಯಕ್ಷನು 'ನಿರ್ವಾಚನಾಯೋಗ' ('ಚುನಾವಣೆಯ ಕಮಿಷನ್') ಎಂಬ ಸಮಿತಿಯ ಸಲಹೆ ಪಡೆದು ತೀರ್ಮಾನಿಸುವನು. ಪ್ರಮಾಣವಚನ ಕೊಡದೆಯೂ ಸದಸ್ಯತ್ವದ ಅರ್ಹತೆಯಿಲ್ಲದೆಯೂ ಸಂಸದಿನ ಭಾಗಗಳಲ್ಲಿ ಹಾಜರಾಗಿದ್ದು ತಮ್ಮ ಮತಗಳನ್ನು ಕೊಡುವವರು ದಿನವೊಂದಕ್ಕೆ ೫೦೦ ರೂಪಾಯಿನಂತೆ ಸರ್ಕಾರಕ್ಕೆ ಜುಲ್ಮಾನೆಕೊಡಬೇಕು. ಇಂಥ ಜುಲ್ಮಾನೆ ಸರ್ಕಾರಕ್ಕೆ ಕೊಡಬೇಕಾದ ಸಾಲವೆಂದು ಪರಿಗಣಿಸಲ್ಪಡುವುದು.

ಇಂಗ್ಲೆಂಡಿನ ಹೌಸ್ ಆಫ್ ಕಾಮನ್ಸಿನ ಸದಸ್ಯರಿಗಿರುವ ವಾಕ್ ಸ್ವಾತಂತ್ರ್ಯ, ತಮ್ಮ ಅಭಿಮತ ಅಥವ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಾಗೂ ಲಿಖಿತ ಮೂಲಕ ವರದಿಯನ್ನು ಒಪ್ಪಿಸುವ ಸ್ವಾತಂತ್ರ್ಯ ಮೊದಲಾದುವು ಭಾರತದ ಸಂಸದಿನ ಸದಸ್ಯರಿಗೂ ಇದೆ. ಈ ಸದಸ್ಯರ ಭಾಷಣ, ವರದಿ, ಅಭಿಮತಗಳಮೇಲೆ ಯಾವ ನ್ಯಾಯ ಸ್ಥಾನಕ್ಕೂ ವಿಚಾರಣೆ ನಡೆಸುವ ಅಧಿಕಾರವಿಲ್ಲ. ಸಂಸದಿನ ಸದಸ್ಯರ ವೇತನ, ಭತ್ಯ ಇವುಗಳನ್ನು ಸಂಸದೇ ನಿರ್ಧರಿಸುವುದು.

ವಿಧಿರಚನಾಕ್ರಮ—ವಿತ್ತವಿಧೇಯಕಗಳು ವಿನಾ ಉಳಿದ ವಿಧೇಯಕಗಳನ್ನು ಸಂಸದಿನ ಸದಸ್ಯರು ಯಾವ ಸಭೆಯ ಮುಂದಾದರೂ ಮೊದಲು ಮಂಡಿಸಬಹುದು. ಸಂಶೋಧನೆಗಳಿಲ್ಲದ, ಅಥವ ೨ ಸಭೆಗಳು ಒಪ್ಪಿಗೆ ಕೊಡುವ ಸಂಶೋಧನೆಗಳಿಂದ ಕೂಡಿದ, ವಿಧೇಯಕಗಳಿಗೆ ೨ ಸಭೆಗಳ ಒಪ್ಪಿಗೆ ದೊರೆತರೆ ಅವುಗಳಿಗೆ ಸಂಸದಿನ ಒಪ್ಪಿಗೆ ದೊರೆಯಿತೆಂದರ್ಥ. ಸಂಸದಿನ ಮುಂದಿರುವ ವಿಧೇಯಕಗಳು ಸಂಸದಿನ ಸತ್ರಾವಸನವಾಗುವುದರಿಂದ ರದ್ದಾಗುವುದಿಲ್ಲ. ಲೋಕಸಭೆಯ ಒಪ್ಪಿಗೆ ಪಡೆಯದೆ ಪರಿಷತ್ತಿನ ಮುಂದಿರುವ ಮಸೂದೆ ಲೋಕಸಭೆಯ ಸತ್ರ ವಿಘಟನವಾಗುವುದರಿಂದ ಬಿದ್ದುಹೋಗುವುದಿಲ್ಲ. ಲೋಕಸಭೆಯ ಮುಂದಿರುವ ವಿಧೇಯಕ ಅಥವ ಲೋಕಸಭೆ ಒಪ್ಪಿ ಪರಿಷತ್ತಿನ ಮುಂದಿರುವ ವಿಧೇಯಕ ಲೋಕಸಭೆಯ ಸತ್ರ ವಿಘಟನವಾಗುವುದರಿಂದ ಬಿದ್ದುಹೋಗುವುದು.

ಸಂಸದಿನ ಸಂಯುಕ್ತ ಸತ್ರ—ಒಂದು ವಿಧೇಯಕವನ್ನು ಒಂದು ಸಭೆ ಒಪ್ಪಿ ಇನ್ನೊಂದು ಒಪ್ಪದಿದ್ದರೆ ಅಥವ ಸಂಶೋಧನೆಯ ವಿಚಾರದಲ್ಲಿ ೨ ಸಭೆಗಳಿಗೆ ಭಿನ್ನಾಭಿಪ್ರಾಯ ಬಂದರೆ ಅಥವ ಒಂದು ಸಭೆ ಒಪ್ಪಿದ ವಿಧೇಯಕವನ್ನು ಇನ್ನೊಂದು ಸಭೆ ಒಪ್ಪದೆ ೬ ತಿಂಗಳು ಸುಮ್ಮನೆ ಇಟ್ಟುಕೊಂಡಿದ್ದರೆ ರಾಷ್ಟ್ರಾಧ್ಯಕ್ಷನು ಸಂದೇಶ ಕಳುಹಿಸಿ ಅಥವ ಪ್ರಕಟಿಸಿ ಸಂಯುಕ್ತಸತ್ರವನ್ನು ಏರ್ಪಡಿಸಬಹುದು. ಆದರೆ, ಇಂಥ ವಿಧೇಯಕ ವಿತ್ತಕ್ಕೆ ಅನ್ವಯಿಸಿರಕೂಡದು. ಅಧ್ಯಕ್ಷನ ಸಂದೇಶ ಹೊರಬಿದ್ದ

ಮೇಲೆ ಸಭೆಗಳು ಇಂಥ ವಿಧೇಯಕಗಳನ್ನು ಚರ್ಚಿಸಲೂಕೂಡದು. ವಿಧೇಯಕಕ್ಕೂ ಅದರ ಸಂಶೋಧನಗಳಿಗೂ ಸಂಯುಕ್ತಸಭೆ ಬಹುಮತದಿಂದ ಒಪ್ಪಿಗೆ ಕೊಟ್ಟರೆ ವಿಧೇಯಕಕ್ಕೆ ಸಂಸದಿನ ಒಪ್ಪಿಗೆ ದೊರೆಯಿತೆಂದರ್ಥ. ಹಿಂದೆ ಒಂದು ಸಭೆ ಒಪ್ಪಿದ ವಿಧೇಯಕವನ್ನು ಇನ್ನೊಂದು ಸಭೆ ಒಪ್ಪದೆ ಅದನ್ನೂ ಅದರ ಸಂಶೊಧನೆಗಳನ್ನೂ ಹಿಂದಕ್ಕೆ ಕಳುಹಿಸಿದ್ದರೆ, ಅಂಥ ಸಂದರ್ಭದಲ್ಲಿ ಸಂಯುಕ್ತಸಭೆಯಲ್ಲಿ ಯಾರೂ ಯಾವ ಸಂಶೋಧನೆಗಳನ್ನೂ ಮಂಡಿಸಕೂಡದು. ಆದರೆ ಕಾಲವಿಳಂಬದಿಂದ ಅತ್ಯಾವಶಕ ವೆಂದು ತೋರುವ ಸಂಶೋಧನೆಗಳನ್ನು ಮಾತ್ರ ಮಂಡಿಸಬಹುದು.

ಸಂಸದಿನ ಸಭೆಗಳು ಪ್ರತ್ಯೇಕವಾಗಿ ಕಾರ್ಯಕ್ರಮ, ಕಾರ್ಯನಿರ್ವಹಣೆಗಳಿಗೆ ಸಂಬಂಧಪಡುವ ನಿಯಮಗಳನ್ನು ರಚಿಸಿಕೊಳ್ಳಬಹುದು. ಸಂಯುಕ್ತಸತ್ರಕ್ಕೆ ಬೇಕಾಗುವ ನಿಯಮಗಳನ್ನು ರಾಷ್ಟ್ರಾಧ್ಯಕ್ಷನು ಲೋಕಸಭಾಧ್ಯಕ್ಷ ಮತ್ತು ಪರಿಷತ್ತಿನ ಸಭಾಪತಿ ಇವರ ಸಲಹೆಯಿಂದ ರಚಿಸಬಹುದು. ಸಂಯುಕ್ತಸತ್ರದಲ್ಲಿ ಲೋಕಸಭಾಧ್ಯಕ್ಷ ಅಗ್ರಾಸನ ವಹಿಸಬೇಕು. ಇವನು ಹಾಜರಿಲ್ಲದಿದ್ದರೆ, ಕಾರ್ಯ ಕ್ರಮದ ನಿಯಮವನ್ನು ಅನುಸರಿಸಿ ಬೇರೊಬ್ಬನನ್ನು ಈ ಸ್ಥಾನಕ್ಕೆ ನೇಮಿಸತಕ್ಕದ್ದು. ಸಂಸದಿನ ಕಾರ್ಯಕಲಾಪಗಳನ್ನು ಹಿಂದಿ ಅಥವ ಇಂಗ್ಲಿಷಿನಲ್ಲಿ ನಡೆಸಬಹುದು. ಇವೆರಡು ಭಾಷೆಯನ್ನರಿಯದವರು ತಮ್ಮ ಮಾತೃಭಾಷೆಯನ್ನು ಉಪಯೋಗಿಸ ಬಹುದು. ಬೇರೆ ರೀತಿಯಲ್ಲಿ ಸಂಸದ್ ನಿರ್ಧರಿಸದಿದ್ದರೆ ಸಂವಿಧಾನ ಆಚರಣೆಗೆ ಬಂದ ೧೫ ವರ್ಷಗಳನಂತರ ಇಂಗ್ಲಿಷ್ ಭಾಷೆಯ ಪ್ರಯೋಗ ಕೊನೆಗಾಣುವುದು. ನ್ಯಾಯಾಧೀಶರ ನಡತೆಯನ್ನು ಸಂಸದ್ ಚರ್ಚಿಸಕೂಡದು. ಆವಶ್ಯಕವಿದ್ದರೆ ವಿಧಿಪೂರ್ವಕವಾಗಿ ಇವರಮೇಲೆ ಮಹಾಭಿಯೋಗದ ಕ್ರಮವನ್ನು ಜರಗಿಸಬಹುದು. ಸಂಸದ್ ನಿರ್ವಹಿಸಿದ ಕೆಲಸಗಳು ಕ್ರಮಬದ್ಧವಾಗಿರಲಿಲ್ಲವೆಂದು ಅವುಗಳನ್ನು ಪ್ರಶ್ನಿಸಲು ಯಾರಿಗೂ ಅಧಿಕಾರವಿಲ್ಲ. ಸಂಸದಿನ ಕಾರ್ಯಗಳನ್ನು ನಿರ್ವಹಿಸುವ ಅಥವ ಕ್ರಮಪಡಿಸುವ ಅಥವ ಶಿಸ್ತನ್ನು ಸ್ಥಾಪಿಸುವ ಅಧಿಕಾರವನ್ನು ಸಂವಿಧಾನ ದಿಂದ ಪಡೆದಿರುವ ಅಧಿಕಾರಿಗಳಮೇಲೆ ಅಥವ ಸದಸ್ಯರಮೇಲೆ ನ್ಯಾಯಸ್ಥಾನ ಗಳಿಗೆ ವಿಚಾರಣೆ ನಡೆಸುವ ಅಧಿಕಾರವೂ ಇಲ್ಲ.

ವಿತ್ತವಿಧೇಯಕಗಳ ವಿಚಾರದಲ್ಲಿ ಸಂಸದ್ ಅನುಸರಿಸಬೇಕಾದ ವಿಶೇಷ ಕಾರ್ಯಕ್ರಮ—ವಿತ್ತವಿಧೇಯಕವನ್ನು ಮೊದಲು ಲೋಕಸಭೆಯಲ್ಲಿ ಮಂಡಿಸಿ ಅದರ ಒಪ್ಪಿಗೆ ಪಡೆದು ಅದನ್ನು ಶಿಫಾರಸ್ಸಿಗಾಗಿ ಪರಿಷತ್ತಿಗೆ ಕಳುಹಿಸತಕ್ಕದ್ದು. ವಿಧೇಯಕ ತಲಪಿದ ೧೪ ದಿವಸಗಳೊಳಗಾಗಿ ಪರಿಷತ್ ತನ್ನ ಶಿಫಾರಸ್ಸುಗಳೊಡನೆ ಅದನ್ನು ಹಿಂದಕ್ಕೆ ಕಳುಹಿಸಬೇಕು. ಪರಿಷತ್ತಿನ ಶಿಫಾರಸ್ಸುಗಳನ್ನು ಪೂರ್ಣವಾಗಿ,

ಅಥವ ಸ್ವಲ್ಪಮಟ್ಟಿಗೆ ಅಂಗೀಕರಿಸುವುದಕ್ಕೂ ತಿರಸ್ಕರಿಸುವುದಕ್ಕೂ ಲೋಕಸಭೆಗೆ ಅಧಿಕಾರವಿದೆ. ಪರಿಷತ್ತಿನ ಶಿಫಾರಸ್ಸುಗಳನ್ನೂ ಅದು ಸೂಚಿಸುವ ಸಂಶೋಧನೆಗಳನ್ನೂ ಲೋಕಸಭೆ ಒಪ್ಪಿದರೆ ಆಗ ವಿತ್ತವಿಧೇಯಕಕ್ಕೆ ಸಂಸದಿನ ಒಪ್ಪಿಗೆ ದೊರೆಯಿತೆಂದರ್ಥ. ಪರಿಷತ್ತಿನ ಶಿಫಾರಸ್ಸುಗಳನ್ನು ಲೋಕಸಭೆ ಒಪ್ಪದಿದ್ದರೆ ಆಗಲೂ ವಿಧೇಯಕಕ್ಕೆ (ಅಂದರೆ ಲೋಕಸಭೆ ಒಪ್ಪಿಗೆಕೊಟ್ಟ ಮತ್ತು ಪರಿಷತ್ತಿನ ಸಂಶೋಧನೆಗಳಿಂದ ವರ್ಜಿತವಾದ ವಿಧೇಯಕಕ್ಕೆ ಸಂಸದಿನ ಒಪ್ಪಿಗೆ ದೊರೆಯಿತೆಂದರ್ಥ. ವಿಧೇಯಕವನ್ನು ಲೋಕಸಭೆ ಒಪ್ಪಿ ಪರಿಷತ್ ಒಪ್ಪದೆ ಅಥವ ೧೪ ದಿವಸಗಳೊಳಗಾಗಿ ಹಿಂದಕ್ಕೆ ಕಳಿಹಿಸದೆ ಇದ್ದರೆ ಆಗಲೂ ವಿಧೇಯಕಕ್ಕೆ) ಸಂಸದಿನ ಒಪ್ಪಿಗೆ ದೊರೆಯಿತು ಎಂದರ್ಥ. ಅಂದರೆ ವಿತ್ತವಿಧೇಯಕಗಳಮೇಲೆ ಲೋಕಸಭೆಗೆ ಪೂರ್ಣಾಧಿಕಾರವಿದೆ ಎಂಬುದು ವ್ಯಕ್ತ.

'**ವಿತ್ತವಿಧೇಯಕ**'ದಲ್ಲಿ ಅಡಕವಾಗಿರುವ ಮುಖ್ಯ ಅಂಶಗಳು ಯಾವುವೆಂದರೆ:—ಕರಗಳನ್ನು ಆರೋಪಣೆಮಾಡುವುದು, ನಿಲಂಬನಗೊಳಿಸುವುದು, ಪರಿಹಾರ ಕೊಡುವುದು, ಹೆಚ್ಚುಕಡಿಮೆಮಾಡುವುದು, ಕ್ರಮಪಡಿಸುವುದು; ರಾಷ್ಟ್ರೀಯ ಋಣಸಂಬಂಧವಾದ ವಿವಿಧ ವಿಚಾರಗಳು; ಕೇಂದ್ರಸಂಚಿತ ನಿಧಿ. ಆಕಸ್ಮಿಕತಾ ನಿಧಿಗಳ ಸಂಬಂಧವಾದ ವಿಷಯಗಳು,—ಅಂದರೆ ಈ ನಿಧಿಗಳಿಗೆ ದ್ರವ್ಯವನ್ನು ಒದಗಿಸುವುದು, ಇವುಗಳಿಂದ ಪ್ರಶಾಸನಕ್ಕೆ ವಿತ್ತವಿನಿಯೋಗಮಾಡುವುದು, ಇವುಗಳನ್ನು ರಕ್ಷಿಸುವುದು, ಸಂಚಿತ ನಿಧಿಯಮೇಲೆ ಬೀಳುವ ಪ್ರಶಾಸನೀಯ ವಿಷಯಗಳನ್ನು ನಿರ್ಧರಿಸುವುದು ಇವೇ ಮೊದಲಾದುವು. ಪ್ರಜೆಗಳ ಮೇಲೆ ಆರೋಪಣೆಮಾಡುವ ಜುಲ್ಮಾನೆ, ಇತರವಿಧವಾದ ದಂಡ, ಲೈಸೆನ್ಸುಗಳ (ಅನುಜ್ಞಪ್ತಿ) ಸಂಬಂಧವಾದ ಹಣ, ಸೇವೆಸಲ್ಲಿಸಿದ್ದಕ್ಕಾಗಿ ಸರ್ಕಾರಕ್ಕೆ ಬರಬೇಕಾದ ಅಥವ ಸರ್ಕಾರ ಕೊಡಬೇಕಾದ ಹಣ, ಸ್ಥಾನೀಯ ಸರ್ಕಾರಗಳು ವಿಧಿಸುವ ಕರ ಇವುಗಳು ಮಾತ್ರ ವಿತ್ತವಿಧೇಯಕಕ್ಕೆ ಸೇರಿದ ಅಂಶಗಳೆಂದು ತಿಳಿಯಕೂಡದು. ವಿಧೇಯಕ ವಿತ್ತಸಂಬಂಧವಾದದ್ದೇ ಅಲ್ಲವೇ ಎಂಬ ಸಂದೇಹವನ್ನು ಪರಿಹರಿಸಲು ಲೋಕಸಭಾಧ್ಯಕ್ಷನಿಗೆ ಪೂರ್ಣಾಧಿಕಾರವಿದೆ. ವಿತ್ತವಿಧೇಯಕಗಳನ್ನು ಪರಿಷತ್ತಿಗೆ ಅಥವ ಅಧ್ಯಕ್ಷನಿಗೆ ಕಳುಹಿಸುವಾಗ ಅವುಗಳ ಮೇಲೆ 'ವಿತ್ತವಿಧೇಯಕಗಳು' ಎಂದು ಲೋಕಸಭಾಧ್ಯಕ್ಷ ಸ್ಪಷ್ಟವಾಗಿ ಬರೆದು ತನ್ನ ಸಹಿ ಹಾಕಿ ಕಳುಹಿಸಬೇಕು.

ರಾಷ್ಟ್ರಾಧ್ಯಕ್ಷನು ಪ್ರತಿವರ್ಷ ಸರ್ಕಾರದ ವಾರ್ಷಿಕ ವಿತ್ತೀಯ ಆಯವ್ಯಯದ ಅಂದಾಜು ಪಟ್ಟಿಯ ವಿವರವನ್ನು ಸಂಸದಿನ ಸಭೆಗಳ ಮುಂದೆ ಮಂಡಿಸತಕ್ಕದ್ದು. ಈ ಪಟ್ಟಿಯಲ್ಲಿ ಅಡಕವಾಗಿರುವ ಖರ್ಚಿನ ಅಂದಾಜನ್ನೂ ಪ್ರತ್ಯೇಕವಾಗಿ,

ಅಂದರೆ ಯಾವ ಪ್ರಶಾಸನೀಯ ವಿಷಯಗಳ ಖರ್ಚು ಸಂಚಿತ ನಿಧಿಯಮೇಲೆ ಬೀಳಬೇಕೆಂದು ಸಂವಿಧಾನ ನಿರ್ಧರಿಸಿರುವುದೋ ಆ ವಿಷಯಗಳ ಅಂದಾಜನ್ನೂ ಪರ್ಯಾಲೋಚನೆಗಾಗಿ ಸಂಸದಿನ ಮುಂದಿಡಬೇಕಾಗಿರುವ ಉಳಿದ ವಿಷಯಗಳ ಖರ್ಚಿನ ಅಂದಾಜನ್ನೂ ತೋರಿಸಬೇಕು. ಅಂದರೆ, ದೇಶದ ಉತ್ಪತ್ತಿಯಮೇಲೆ ಬೀಳುವ ಖರ್ಚನ್ನೂ, ಉಳಿದ ಖರ್ಚನ್ನೂ, ಬೇರೆಬೇರೆಯಾಗಿ ತೋರಿಸಬೇಕು.

ರಾಷ್ಟ್ರಾಧ್ಯಕ್ಷ, ಸಂಸದಿನ ಪದಾಧಿಕಾರಿಗಳು, ಉಚ್ಚತಮನ್ಯಾಯಾಲಯದ ನ್ಯಾಯಾಧೀಶರು, ಮಹಾಲೇಖಾಪರೀಕ್ಷಕ ಇವರ ವೇತನ ಮತ್ತು ಭತ್ತ್ಯ, ರಾಷ್ಟ್ರೀಯ ಋಣದ ಬಡ್ಡಿ, ಇದನ್ನು ತೀರಿಸುವ ನಿಧಿಗಾಗಿ ಕಾದಿಡುವ ಹಣ, ಇದಕ್ಕಾಗಿ ತಗಲುವ ಇತರ ಖರ್ಚು, ಕೋರ್ಟ್ ಡಿಕ್ರಿ(ಆಜ್ಞಪ್ತಿ)ಗಳಿಗಾಗಿ ಸರ್ಕಾರ ಕೊಡಬೇಕಾಗುವ ಹಣ, ಸಂಸದ್ ನಿರ್ಧರಿಸುವ ಇತರ ಖರ್ಚು ಇವು ಸಂಚಿತ ನಿಧಿಯಮೇಲೆ ಬೀಳುವ ಖರ್ಚುಗಳು. ಇವುಗಳನ್ನು ಸಂಸದಿನ ಮುಂದೆ ಮಂಡಿಸುವ ಅಗತ್ಯವಿಲ್ಲ; ಸಂಸದ್ ಒಪ್ಪಬೇಕಾದುದೂ ಇಲ್ಲ. ಆದರೆ ಈ ಖರ್ಚಿನ ವಿಷಯಗಳ ವಿವರಗಳನ್ನು ಸಂಸದ್ ಚರ್ಚಿಸಲವಕಾಶವಿದೆ. ಇವುಗಳಲ್ಲದೆ ಉಳಿದ ಪ್ರಶಾಸನೀಯ ವಿಷಯಗಳ ಖರ್ಚಿನ ಅಂದಾಜನ್ನು ಬೇಡಿಕೆರೂಪದಲ್ಲಿ ಮೊದಲು ಲೋಕಸಭೆಯ ಮುಂದೆ ಸರ್ಕಾರ ಮಂಡಿಸಬೇಕು. ಇವುಗಳಲ್ಲಿ ಅಡಕವಾಗಿರುವ ಅಂಶಗಳನ್ನು ಸದಸ್ಯರು ಒಪ್ಪಬಹುದು, ತಿರಸ್ಕರಿಸಬಹುದು, ಕಡಿಮೆಮಾಡಬಹುದು. ವಿತ್ತಪ್ರಶಾಸನ ಸುಗಮವಾಗಿ ನಡೆಯುವುದರಸಲುವಾಗಿ ಇಂಗ್ಲೆಂಡಿನಲ್ಲಿರುವಂತೆ ಇಲ್ಲಿಯೂ ಹಣಕಾಸಿನ ಅಂದಾಜನ್ನು ಪರಿಶೀಲಿಸಲು 'ಆಂಕಸಮಿತಿ' (ಕಮಿಟಿ ಆಫ್ ಎಸ್ಟಿಮೇಟ್ಸ್) ಎಂಬ ಪ್ರತ್ಯೇಕ ಸಮಿತಿ ಇದೆ. ಈ ಸಮಿತಿ ಕೊಡುವ ವರದಿಯನ್ನು, ಸಲಹೆಗಳನ್ನು, ಪರಿಶೀಲಿಸಿ ವಿನಿಶ್ಚಯಮಾಡಲು ಲೋಕಸಭೆಗೆ ಅಧಿಕಾರವಿದೆ. ಮೇಲಾಗಿ ರಾಷ್ಟ್ರಾಧ್ಯಕ್ಷನ ಅಪ್ಪಣೆಯಿಲ್ಲದೆ ಹಣಕಾಸಿನ ಬೇಡಿಕೆಯ ವಿಧೇಯಕವನ್ನು ಲೋಕಸಭೆಯ ಮುಂದೆ ಮಂಡಿಸುವುದನ್ನು ಸಂವಿಧಾನ ನಿಷೇಧಿಸಿದೆ.

ಮೇಲ್ಕಂಡ ಬೇಡಿಕೆಗಳಿಗೆ ಲೋಕಸಭೆಯ ಒಪ್ಪಿಗೆ ದೊರೆತಮೇಲೆ, ಸಂಚಿತ ನಿಧಿಯಿಂದ ವಿತ್ತ ವಿನಿಯೋಗ ಮಾಡಿಕೊಳ್ಳುವ ಸಲುವಾಗಿ ವಿತ್ತವಿನಿಯೋಗವಿಧೇಯಕವನ್ನು (ಅಪ್ರೋಪ್ರಿಯೇಷನ್ ಬಿಲ್) ಸರ್ಕಾರ ಮಂಡಿಸಬೇಕು. ಖರ್ಚಿನ ಮೊಬಲಗನ್ನು ಅಥವ ಉದ್ದೇಶವನ್ನು ಬದಲಾಯಿಸುವಂಥ ಅಥವ ಸಂಚಿತ ನಿಧಿಯಮೇಲೆ ಬೀಳುವ ಹೊರೆಯನ್ನು ಹೆಚ್ಚಿಸುವಂಥ ಸಂಶೋಧನಗಳನ್ನು ಯಾರೂ ಸೂಚಿಸಕೂಡದು. ಯಾವ ಸಂಶೋಧನ ಕ್ರಮಬದ್ಧ, ಯಾವುದು ಅಲ್ಲ ಎಂಬುದನ್ನು ತೀರ್ಮಾನಿಸಲು ಸಭೆಯ ಅಗ್ರಾಸನಾಧಿಪತಿಗೆ ಅಧಿಕಾರವಿದೆ. ಈ ಸಂದರ್ಭಗಳು ವಿನಾ ಉಳಿದವೇಳೆ

ಗಳಲ್ಲಿ ಸಂಸದಿನ ಅಪ್ಪಣೆಯಿಲ್ಲದೆ ಸಂಚಿತನಿಧಿಯ ವಿತ್ತವನ್ನು ಉಪಯೋಗಿಸಲು ಯಾರಿಗೂ ಅಧಿಕಾರವಿಲ್ಲ.

ಮೇಲ್ಕಂಡ ನಿಯಮ, ಕ್ರಮಗಳಿಗನುಸಾರವಾಗಿ ಸಂಸದಿನ ಒಪ್ಪಿಗೆ ಪಡೆದ ವಿತ್ತವಿನಿಯೋಗವಿಧೇಯಕ ವಿಧಿರೂಪದಲ್ಲಿ ಆಚರಣೆಗೆ ಬರುವುದು. ಒಂದುವೇಳೆ ಅಧಿಕೃತವಾಗಿ ಕೊಡಲ್ಪಟ್ಟ ಹಣ, ಕೆಲವು ವಿಷಯುಗಳಿಗೆ ಸಾಲದಿದ್ದರೆ, ಅಥವ ಅನಿರೀಕ್ಷಿತ ಘಟನೆಗಳು ಒದಗಿದರೆ, ಅಥವ ಕೆಲವು ವಿಷಯುಗಳಿಗೆ ಕೊಟ್ಟ ಹಣಕ್ಕಿಂತ ಹೆಚ್ಚಾಗಿ ಖರ್ಚಾದರೆ, ರಾಷ್ಟ್ರಾಧ್ಯಕ್ಷನು ಸಂಸದಿನಮುಂದೆ ಹೆಚ್ಚಿಗೆ ಹಣ ಪಡೆಯಲು ಒಂದು ಪಟ್ಟಿಯನ್ನು ತಯಾರಿಸಿ ಮಂಡಿಸಬೇಕು. ಮತ್ತು ಹೆಚ್ಚು ಖರ್ಚಿಗೆ ಸಂಸದಿನ ಒಪ್ಪಿಗೆ ಪಡೆಯಬೇಕು. ಯಾವ ವಿಷಯಗಳ ಖರ್ಚನ್ನು ಮೊದಲೇ ನಿರ್ಧರಿಸುವುದು ಕಷ್ಟವೋ ಅಂಥ ಸಂದರ್ಭಗಳಲ್ಲಿ ಲೋಕಸಭೆಯು ಮುಂಗಡವಾಗಿ ಹಣ ಕೊಡಬಹುದಾದ ಅಧಿಕಾರ ಪಡೆದಿದೆ. ಯಾವ ವಿಷಯುಗಳ ಖರ್ಚನ್ನು ಮೊದಲೇ ನಿರ್ಧರಿಸುವುದು ಕಷ್ಟವೋ ಅಂಥ ಸಂದರ್ಭಗಳಲ್ಲಿಯೂ ಅನಿರೀಕ್ಷಿತವಾಗಿ ಒದಗುವ ಖರ್ಚುಗಳಿಗಾಗಿಯೂ ಲೋಕಸಭೆ ಮುಂಗಡವಾಗಿ ಹಣ ಮಂಜೂರುಮಾಡಲು ಅಧಿಕಾರಪಡೆದಿದೆ. ಈ ಬಾಬುಗಳಿಗೆ ಬೇಕಾಗುವ ಹಣವನ್ನು ಸಂಚಿತ ನಿಧಿಯಿಂದ ತೆಗೆದುಕೊಳ್ಳಲು ಸೂಕ್ತವಿಧಿಗಳನ್ನು ಸಂಸದ್ ರಚಿಸುವುದು.

ಅಧ್ಯಕ್ಷನಿಗೆ ವಿಧಿರಚನೆಯಲ್ಲಿರುವ ಅಧಿಕಾರ—ಸಂಸದಿನ ಸಭೆಗಳು ಒಪ್ಪಿದ ವಿಧೇಯಕವನ್ನು ಅಧ್ಯಕ್ಷನು ಒಪ್ಪಬಹುದು ಅಥವ ತಿರಸ್ಕರಿಸಬಹುದು. ವಿತ್ತವಿಧೇಯಕಗಳು ವಿನಾ ಉಳಿದ ವಿಧೇಯಕಗಳನ್ನು ಒಪ್ಪಲು ಇಷ್ಟವಿಲ್ಲದಿದ್ದರೆ ಅಧ್ಯಕ್ಷನು ಅವುಗಳನ್ನು ತನ್ನ ಸಂಶೋಧನೆಗಳಿಂದ ಕೂಡಿದ ಸಂದೇಶದೊಡನೆ ಸಂಸದಕ್ಕೆ ಜಾಗ್ರತೆಯಾಗಿ ಕಳುಹಿಸಬೇಕು. ಅಧ್ಯಕ್ಷನ ಸಲಹೆಗಳನ್ನು ಒಪ್ಪುವುದಕ್ಕೂ ತಿರಸ್ಕರಿಸುವುದಕ್ಕೂ ಸಂಸದಕ್ಕೆ ಅಧಿಕಾರವಿದೆ. ಈ ಸಲಹೆಗಳನ್ನು ಅಂಗೀಕರಿಸದೆ ಮತ್ತೊಮ್ಮೆ ಈ ವಿಧೇಯಕಗಳನ್ನು ಸಂಸದ್ ಒಪ್ಪಿ ಅಧ್ಯಕ್ಷನಿಗೆ ಕಳುಹಿಸಿದರೆ ಅಧ್ಯಕ್ಷನು ಅವುಗಳಿಗೆ ತನ್ನ ಒಪ್ಪಿಗೆಯನ್ನು ಕೊಡಲೇಬೇಕು.

ಮಹಾಲೇಖಾಪರೀಕ್ಷಕ (ಕಂಟ್ರೋಲರ್ ಮತ್ತು ಆಡಿಟರ್ ಜನರಲ್)—ಕೇಂದ್ರಸರ್ಕಾರದ ವಿತ್ತೀಯಪ್ರಶಾಸನದ ದಕ್ಷತೆಗೆ ಲೋಕಸಭೆಗೆ ಸೇರಿದ ಸಾರ್ವಜನಿಕ ಲೇಖಾಸಮಿತಿ, ('ಪಬ್ಲಿಕ್ ಅಕೌಂಟ್ಸ್ ಕಮಿಟಿ,') ಮಹಾಲೇಖಾಪರೀಕ್ಷಕ (ಕಂಟ್ರೋಲರ್ ಮತ್ತು ಆಡಿಟರ್ ಜನರಲ್) ಇವರ ನಿಯಂತ್ರಣ ಮತ್ತು ಅಧೀಕ್ಷಣ ಇವು ಮುಖ್ಯ ಕಾರಣ. ಮಹಾಲೇಖಾಪರೀಕ್ಷಕನನ್ನು ನೇಮಿಸುವುದು, ರಾಷ್ಟ್ರಾಧ್ಯಕ್ಷನಿಗೆ ಸೇರಿದೆ. ಇವನನ್ನು ಕೆಲಸದಿಂದ ತೆಗೆಯಬೇಕಾದರೆ ಉಚ್ಚತಮ ನ್ಯಾಯಾಲ

ಯದ ನ್ಯಾಯಾಧೀಶರನ್ನು ಕೆಲಸದಿಂದ ತೆಗೆಯುವ ಕಾರ್ಯಕ್ರಮವನ್ನು ಸಂಸದ್ ಅನುಸರಿಸಬೇಕು. ಇವನ ವೇತನ, ಭತ್ಯಗಳನ್ನು ನಿರ್ಧರಿಸುವ ಅಧಿಕಾರ ಸಂಸದಕ್ಕೆ ಸೇರಿದೆ. ನಿವೃತ್ತನಾದಮೇಲೆ ಮಹಾಲೇಖಾಪರೀಕ್ಷಕನು ಸರ್ಕಾರದ ಯಾವ ಪದವನ್ನೂ ಸ್ವೀಕರಿಸಕೂಡದು.

ಕೇಂದ್ರಸರ್ಕಾರ ಮತ್ತು ರಾಜ್ಯಗಳ ವಿತ್ತಪ್ರಶಾಸನವನ್ನೂ ಸಂಸದ್ ನಿರ್ಧರಿಸುವ ಇತರ ಸಂಸ್ಥೆಗಳ ವಿತ್ತಪ್ರಶಾಸನವನ್ನೂ ಸಂಸದಿನ ನಿಯಮಗಳನ್ನನು ಸರಿಸಿ ಮಹಾಲೇಖಾಪರೀಕ್ಷಕನು ನೋಡಿಕೊಳ್ಳಬೇಕು. ಇವುಗಳ ಪ್ರಶಾಸನವನ್ನು ಕ್ರಮಪಡಿಸಲೂ ಅವನಿಗೆ ಅಧಿಕಾರವಿದೆ. ಪ್ರತಿಯೊಂದು ಸರ್ಕಾರ ತನ್ನ ವಿತ್ತ ಪ್ರಶಾಸನವನ್ನು ಮಹಾಲೇಖಾಪರೀಕ್ಷಕ ವಿಧಿಸುವ ನಿಯಮ ಮತ್ತು ಎಲ್ಲ ಆಜ್ಞೆ ಗಳಿಗನುಸಾರವಾಗಿ ನಡೆಸಬೇಕು. ಸರ್ಕಾರದ ಲೇಖಗಳನ್ನು ಪರೀಕ್ಷೆಮಾಡಿಸು ವುದೂ ಇದರ ಮೇಲಿನ ವರದಿಯನ್ನು ಆಯಾಯ ಸರ್ಕಾರದ ಶ್ರೇಷ್ಠಾಧಿಕಾರಿಗೆ ಕಳುಹಿಸುವುದೂ ಇವನ ಕರ್ತವ್ಯ. ಇಂಥ ವರದಿಯನ್ನು ರಾಜ್ಯಗಳ ಶ್ರೇಷ್ಠಾಧಿಕಾರಿ ಗಳು ತಮ್ಮ ವಿಧಾನಮಂಡಲದ ಮುಂದೆ ಮಂಡಿಸಬೇಕು. ಸೂಕ್ಷ್ಮವಾಗಿ ಹೇಳ ಬಹುದಾದರೆ ಭಾರತಕ್ಕೆ ಸೇರಿದ ಎಲ್ಲ ರಾಜ್ಯಗಳ ವಿತ್ತಪ್ರಶಾಸನದ ಏಕರೂಪತೆ, ದಕ್ಷತೆ ಇವುಗಳಿಗೆ ಮಹಾಲೇಖಾಪರೀಕ್ಷಕನ ಮತ್ತು ಇವನ ಸಹೋದ್ಯೋಗಿಗಳ ಕಾರ್ಯತತ್ಪರತೆ, ನಿಸ್ಪೃಹತೆ ಮುಖ್ಯವಾದ ಕಾರಣಗಳಾಗಿರುವುದರಿಂದಲೂ ಸಮಾ ಜೋನ್ನತಿಯ ಸಾಧನೆಗೆ ವಿತ್ತಪ್ರಶಾಸನ ಬಲವಾದ ಆಧಾರವಾಗಿರುವುದರಿಂದಲೂ ಮಹಾಲೇಖಾಪರೀಕ್ಷಕನ ಪದಾಧಿಕಾರ ಸಂವಿಧಾನದಲ್ಲಿ ಬಹುಮುಖ್ಯವಾದದ್ದೆಂದು ತಿಳಿಯಬೇಕು.

ಭಾರತನ್ಯಾಯಾಂಗ (ನ್ಯಾಯಪಾಲಿಕಾ)—ಭಾರತದ ಉಚ್ಚತಮನ್ಯಾಯಾ ಲಯ (ಸುಪ್ರೀಂಕೋರ್ಟ್) ಸರ್ಕಾರದ ಮೂರನೆಯ ಅಂಗ. ಇದರಲ್ಲಿ ಒಬ್ಬ ಮುಖ್ಯ ನ್ಯಾಯಾಧಿಪತಿಯೂ ಏಳುಮಂದಿ ಸಾಮಾನ್ಯ ನ್ಯಾಯಾಧೀಶರೂ ಇರುವರು. ಇವರನ್ನು ಅಧ್ಯಕ್ಷ ತನ್ನ ಸಹಿಹಾಕಿದ ಅಧಿಪತ್ರಮೂಲಕ ನೇಮಿಸುವನು. ಮುಖ್ಯ ನ್ಯಾಯಾಧಿಪತಿಯನ್ನು ನೇಮಿಸುವಾಗ ಸುಪ್ರೀಂಕೋರ್ಟಿನ ನ್ಯಾಯಾಧೀಶರ ಮತ್ತು ರಾಜ್ಯಗಳ ಹೈ ಕೋರ್ಟುಗಳ ನ್ಯಾಯಾಧೀಶರ ಸಲಹೆಯನ್ನೂ ಉಳಿದ ಏಳು ಮಂದಿ ಸಾಮಾನ್ಯ ನ್ಯಾಯಾಧೀಶರನ್ನು ನೇಮಿಸುವಾಗ ಮುಖ್ಯ ನ್ಯಾಯಾಧಿಪತಿಯ ಸಲಹೆಯನ್ನೂ ಪಡೆಯುವನು. ೬೫ ವರ್ಷ ವಯಸ್ಸಾಗುವವರೆಗೆ ಅಧಿಕಾರದಲ್ಲಿರು ವುದಕ್ಕೂ ಕೆಲಸ ಬೇಕಿಲ್ಲದಾಗ ಲಿಖಿತ ಮೂಲಕ ಅಧ್ಯಕ್ಷನಿಗೆ ತಿಳಿಸಿ ಪದತ್ಯಾಗ ಮಾಡುವುದಕ್ಕೂ ನ್ಯಾಯಾಧೀಶರೆಲ್ಲರಿಗೂ ಅವಕಾಶವಿದೆ. ಮುಂದೆ ತಿಳಿಸುವಂತೆ

ಅವಿಶ್ವಾಸಪ್ರಸ್ತಾವವನ್ನು ತಂದು ನ್ಯಾಯಾಧೀಶರನ್ನು ಕೆಲಸದಿಂದ ತೆಗೆಯಲು ಪಾರ್ಲಿಮೆಂಟಿಗೆ (ಸಂಸದಕ್ಕೆ) ಅಧಿಕಾರವಿದೆ. ನ್ಯಾಯಸ್ಥಾನಗಳಿಗೆ ಬರಲಿರುವ ಉಮೇದುವಾರರು ಭಾರತದ ನಾಗರಿಕತೆಯ ಅಧಿಕಾರ ಪಡೆದಿರಬೇಕು; ಒಂದು ಅಥವ ಎರಡು ಮೂರು ಹೈಕೋರ್ಟುಗಳಲ್ಲಿ ಕನಿಷ್ಠಪಕ್ಷ ೫ ವರ್ಷ ನ್ಯಾಯಾಧೀಶ ರಾಗಿದ್ದಿರಬೇಕು; ಹೈಕೋರ್ಟುಗಳ ಮುಂದೆ ವಾದಿಸುವ ಅರ್ಹತೆಯಿರುವ ವಕೀಲ ವೃತ್ತಿಯಲ್ಲಿ ೧೦ ವರ್ಷಗಳಾದರೂ ಕೆಲಸಮಾಡಿರಬೇಕು; ಅಲ್ಲದೆ ಪ್ರಖ್ಯಾತರಾದ ನ್ಯಾಯಶಾಸ್ತ್ರಜ್ಞರೆಂದು ಅಧ್ಯಕ್ಷನಿಂದ ಪರಿಗಣಿಸಲ್ಪಡಬೇಕು.

ಸುಪ್ರೀಂಕೋರ್ಟಿನ ನ್ಯಾಯಾಧೀಶರನ್ನು ಕೆಲಸದಿಂದ ತೆಗೆಯಬೇಕಾದರೆ ಅವರ ವರ್ತನೆ ಸಮರ್ಪಕವಲ್ಲವೆಂಬುದಕ್ಕೆ ಸಾಕಷ್ಟು ರುಜುವಾತು ದೊರೆಯಬೇಕು. ಅವರ ಮೇಲಿನ ಅವಿಶ್ವಾಸಪ್ರಸ್ತಾವವನ್ನು ಸಂಸದಿನ ೨ ಸಭೆಗಳು ಪ್ರತ್ಯೇಕವಾಗಿ ಒಂದೇ ಅಧಿವೇಶನದಲ್ಲಿ ಬಹುಮತದಿಂದ (ಅಂದರೆ ಒಟ್ಟುಸಂಖ್ಯೆಯಲ್ಲಿ ಬಹುಸಂಖ್ಯಾತರ ಮತ ಹಾಗೂ ಹಾಜರಿದ್ದವರ ಪೈಕಿ ⅔ ಭಾಗಕ್ಕೆ ಕಡಿಮೆಯಿಲ್ಲದ ಸದಸ್ಯರ ಮತ) ಒಪ್ಪಬೇಕು. ಎರಡು ಸಭೆಗಳು ಪ್ರತ್ಯೇಕವಾಗಿ ಅವಿಶ್ವಾಸ ಪ್ರಸ್ತಾವವನ್ನು ಬಿನ್ನವತ್ತಳೆಯ ರೂಪದಲ್ಲಿ ಅಧ್ಯಕ್ಷನಿಗೆ ಒಪ್ಪಿಸಬೇಕು. ತಪ್ಪಿತಸ್ಥರೆಂದು ನಿರ್ದಿಷ್ಟ ವಾಗಿ ಗೊತ್ತಾದ ನ್ಯಾಯಾಧೀಶರು ಕೂಡಲೆ ಕೆಲಸ ಬಿಡಬೇಕೆಂದು ಅಧ್ಯಕ್ಷನು ಆಜ್ಞೆಯನ್ನು ಹೊರಡಿಸಬೇಕು. ಬಿನ್ನವತ್ತಳೆ ಒಪ್ಪಿಸುವ ವಿಧಾನ, ನ್ಯಾಯಾಧೀಶರ ಮೇಲಿನ ಆಪಾದನೆಗಳಿಗೆ ರುಜುವಾತು ಕಂಡುಹಿಡಿಯುವ ಕ್ರಮ ಇವುಗಳನ್ನು ಸಂಸದ್ ನಿರ್ಧರಿಸುವುದು. ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ನ್ಯಾಯಾಧೀಶರೆಲ್ಲರೂ ಅಧ್ಯಕ್ಷನ ಅಥವ ಅವನ ಪ್ರತಿನಿಧಿಯ ಸಮ್ಮುಖದಲ್ಲಿ ಪ್ರಮಾಣವಚನ ಕೊಡತಕ್ಕದ್ದು. ಸುಪ್ರೀಂಕೋರ್ಟಿನಲ್ಲಿ ನ್ಯಾಯಾಧೀಶರಾಗಿದ್ದವರು ಭಾರತದ ಉಳಿದ ನ್ಯಾಯಸ್ಥಾನ ಗಳಲ್ಲಿ ಅಧಿಕಾರ ಸ್ವೀಕರಿಸಕೂಡದು ಮತ್ತು ಯಾರ ಪರವಾಗಿಯೂ ವಾದಿಸಕೂಡದು. ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧಿಪತಿಗೆ ತಿಂಗಳಿಗೆ ೫೦೦೦ ರೂಪಾಯಿಗಳೂ ಉಳಿದ ನ್ಯಾಯಾಧೀಶರಿಗೆ ೪೦೦೦ ರೂಪಾಯಿಗಳೂ ವೇತನ ಸಲ್ಲುವುದು. ಪುನಃ ಕೆಲಸಕ್ಕೆ ಬರುವ ನಿವೃತ್ತ ನ್ಯಾಯಾಧೀಶರಿಗೆ ಅವರ ನಿವೃತ್ತಿವೇತನ ಕಳೆದು ಉಳಿ ಯುವ ಮೊಬಲಗನ್ನು ವೇತನವನ್ನಾಗಿ ಕೊಡಬೇಕು. ನ್ಯಾಯಾಧೀಶರ ವಾಸಕ್ಕೆ ಯೋಗ್ಯವಾದ ಮನೆಗಳನ್ನು ಸರ್ಕಾರ ಉಚಿತವಾಗಿ ಒದಗಿಸಿಕೊಡುವುದು. ಇವರ ಭತ್ಯ, ವಿಶೇಷಾಧಿಕಾರ, ರಜ, ನಿವೃತ್ತಿವೇತನ ಇವುಗಳನ್ನು ಪಾರ್ಲಿಮೆಂಟ್ ನಿರ್ಧರಿ ಸುವುದು. ನ್ಯಾಯಾಧೀಶರ ವೇತನ ಮೊದಲಾದ ಸೌಕರ್ಯಗಳನ್ನು ಅವರ ಪದಾಧಿ ಕಾರಾವಧಿಯಲ್ಲಿ ಬದಲಾಯಿಸಲವಕಾಶವಿಲ್ಲ.

ಮುಖ್ಯನ್ಯಾಯಾಧಿಪತಿಯ ಸ್ಥಾನ ಖಾಲಿಯಾಗಿದ್ದಾಗಲೂ ಅನಿವಾರ್ಯದಿಂದ ಅವನು ಕೆಲಸಕ್ಕೆ ಬಾರದಿದ್ದಾಗಲೂ ಅವನ ಕೆಲಸವನ್ನು ಅಧ್ಯಕ್ಷನಿಂದ ನೇಮಿತನಾಗುವ ನ್ಯಾಯಾಧೀಶ ನಿರ್ವಹಿಸುವನು. ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವಾಗಲೂ ನಿರ್ಣಯಕೊಡುವ ವೇಳೆಯಲ್ಲಿಯೂ ನ್ಯಾಯಾಧೀಶರಲ್ಲಿ ಗಣಪೂರ್ತಿ (ಕೋರಂ) ಇಲ್ಲದಿದ್ದರೆ ಮುಖ್ಯ ನ್ಯಾಯಾಧಿಪತಿ ಅಧ್ಯಕ್ಷನ ಮತ್ತು ವ್ಯಾಜ್ಯಕ್ಕೆ ಸಂಬಂಧಪಡುವ ಉಚ್ಚನ್ಯಾಯಾಲಯದ (ಹೈಕೋರ್ಟಿನ) ನ್ಯಾಯಾಧೀಶರ ಸಲಹೆಯನ್ನು ಪಡೆದು **ತದರ್ಥ** (ಆಡ್‌ಹಾಕ್) ನ್ಯಾಯಾಧೀಶರನ್ನು (ಅಂದರೆ ಹೈಕೋರ್ಟುಗಳ ನಾಯಾಧೀಶರ ಪೈಕಿ ಎಷ್ಟು ಮಂದಿ ಆವಶ್ಯಕವೋ ಅಷ್ಟು ಮಂದಿಯನ್ನು) ನೇಮಿಸಬಹುದು. ಇಂಥ ಕರೆಗೆ ಗೌರವಕೊಡುವುದು ಪ್ರತಿಯೊಬ್ಬ ನ್ಯಾಯಾಧೀಶನ ಕರ್ತವ್ಯ. ತಾತ್ಕಾಲಿಕವಾಗಿ ಈ ಪ್ರಕಾರ ಕೆಲಸಕ್ಕೆ ಬರುವ ನ್ಯಾಯಾಧೀಶರಿಗೆ ಖಾಯಂ ನ್ಯಾಯಾಧೀಶರಿಗೆ ಸಲ್ಲುವ ವೇತನ, ಅಧಿಕಾರ ಮೊದಲಾದುವು ಸಲ್ಲುವುವು.

ಮುಖ್ಯ ನ್ಯಾಯಾಧಿಪತಿ ತನಗೆ ಆವಶ್ಯಕವೆಂದು ತೋರಿದಾಗ ಅಧ್ಯಕ್ಷನ ಅಪ್ಪಣೆಪಡೆದು ಸುಪ್ರೀಂಕೋರ್ಟಿನಿಂದ ನಿವೃತ್ತರಾದವರೂ ಇದಕ್ಕೆ ಒಪ್ಪುವರೂ ಆದ ನ್ಯಾಯಾಧೀಶರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬಹುದು. ಇಂಥವರಿಗೂ ಖಾಯಂ ನ್ಯಾಯಾಧೀಶರಿಗೆ ಸಲ್ಲುವ ವೇತನ ಮೊದಲಾದುವು ಸಲ್ಲುವುವು. ಸುಪ್ರೀಂ ಕೋರ್ಟು ಭಾರತದ **'ಅಭಿಲೇಖ ನ್ಯಾಯಾಲಯ'** (ಕೋರ್ಟ್ ಆಫ್ ರಿಕಾರ್ಡ್ಸ್). ಅವಮಾನಮಾಡುವವರನ್ನು ಶಿಕ್ಷಿಸುವ ಅಧಿಕಾರ ಮೊದಲ್ಗೊಂಡು ವಿಶಿಷ್ಟ ಅಧಿಕಾರ ಇದಕ್ಕೆ ಸೇರಿದೆ. ಈ ಉಚ್ಚತಮನ್ಯಾಯಾಲಯ ದೆಹಲಿಯಲ್ಲಿ ಅಥವ ಮುಖ್ಯ ನ್ಯಾಯಾಧಿಪತಿ ಮತ್ತು ಅಧ್ಯಕ್ಷ ತೀರ್ಮಾನಿಸುವ ಇತರಕಡೆಗಳಲ್ಲಿ ಕಾರ್ಯ ನಿರ್ವಹಿಸುವುದು.

ಸುಪ್ರೀಂಕೋರ್ಟಿನ ಕ್ಷೇತ್ರಾಧಿಕಾರ—ವ್ಯವಹಾರಗಳ **ಪ್ರಾಥಮಿಕ ವಿಚಾರಣೆ** ಮತ್ತು **ಪುನರ್ವಿಚಾರಣೆ** ಇವು ಇದರ ಕ್ಷೇತ್ರಾಧಿಕಾರಕ್ಕೆ ಸೇರಿದೆ. ಕೇಂದ್ರಸರ್ಕಾರ ಮತ್ತು ರಾಜ್ಯ ಇವುಗಳಿಗೆ ಬರಬಹುದಾದ ವ್ಯವಹಾರ ವಿಷಯಗಳು ಕೇಂದ್ರಸರ್ಕಾರ ಮತ್ತು ಒಂದೆರಡು ಅಂಗರಾಜ್ಯಗಳಿಗೂ ಉಳಿದ ಕೆಲವು ಅಂಗರಾಜ್ಯಗಳಿಗೂ ಉಂಟಾಗಬಹುದಾದ ವ್ಯಾವಹಾರಿಕ ವಿಷಯಗಳು, ರಾಜ್ಯಗಳ ಪರಸ್ಪರ ವ್ಯಾವಹಾರಿಕ ವಿಷಯಗಳು ಇವುಗಳನ್ನು ವಿಚಾರಿಸಿ ನಿರ್ಣಯ ಕೊಡುವ ಅಧಿಕಾರ ಪ್ರಾಥಮಿಕ ವಿಚಾರಣಾಧಿಕಾರವನ್ನು ಉದಹರಿಸುವುದು. ಒಂದನೆಯ ಅನುಸೂಚಿ 'ಬಿ' ಭಾಗದ ರಾಜ್ಯಗಳೂ ಭಾರತ ಸರ್ಕಾರವೂ ಒಪ್ಪಿ ಆಚಣೆಗೆ ತಂದಿರುವ ಸಂಧಿ,

ಒಪ್ಪಂದ, ಕರಾರು, ಸನ್ನದು ಇವುಗಳಿಗೆ ಅನ್ವಯಿಸುವ ವ್ಯಾವಹಾರಿಕ ವಿಷಯುಗಳು ಸುಪ್ರೀಂಕೋರ್ಟಿನ ಕ್ಷೇತ್ರಾಧಿಕಾರಕ್ಕೆ ಒಳಪಡುವುದಿಲ್ಲ. ಆದರೆ ಆ ವಿಷಯಗಳ ಮೇಲಿನ ಅಭಿಪ್ರಾಯವೇನೆಂಬುದನ್ನು ಅಧ್ಯಕ್ಷನು ಸುಪ್ರೀಂಕೋರ್ಟಿನ ಸಲಹೆಯ ಮೂಲಕ ತಿಳಿಯಬಹುದು. ಭಾರತ ಸರ್ಕಾರ ರಾಜ್ಯಗಳೊಡನೆ ಸಂಧಿ ಮೊದಲಾದುವು ಗಳನ್ನು ಮಾಡಿಕೊಂಡಾಗ, ಯಾವ ವ್ಯಾವಹಾರಿಕ ವಿಷಯಗಳನ್ನು ಸುಪ್ರೀಂ ಕೋರ್ಟಿನ ಕ್ಷೇತ್ರಾಧಿಕಾರಕ್ಕೆ ಒಳಪಡಿಸಕೂಡದೆಂದು ಒಪ್ಪಂದ ಮಾಡಿಕೊಂಡಿರು ವುದೋ ಅಂಥ ವಿಷಯಗಳೂ ಸುಪ್ರೀಂಕೋರ್ಟಿನ ಕ್ಷೇತ್ರಾಧಿಕಾರಕ್ಕೆ ಒಳಪಡು ವುದಿಲ್ಲ.

ಪುನರ್ವಿಚಾರಣಾಧಿಕಾರ—ರಾಜ್ಯಗಳ ಹೈಕೋರ್ಟುಗಳು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಿಗೆ ಕೊಡುವ ನಿರ್ಣಯ, ಡಿಕ್ರಿ, ಕಟ್ಟಕಡೆಯ ಆಜ್ಞೆ ಇವುಗಳ ಮೇಲೆ ಸುಪ್ರೀಂಕೋರ್ಟಿಗೆ ಯಾರುಬೇಕಾದರೂ ಅಪೀಲುಮಾಡ ಬಹುದು. ಇಂಥ ಸಂದರ್ಭಗಳಲ್ಲಿ ಅಪೀಲುಮಾಡುವುದಕ್ಕೆ ಬೇಕಾಗುವ ಕಾರಣಗಳು ವ್ಯವಹಾರಗಳಲ್ಲಿ ಅಡಕವಾಗಿರಬೇಕು. ಸಂವಿಧಾನದಲ್ಲಿ ಸೂಚಿಸಿರುವ ಮತ್ತು ಆ ಮೊಕದ್ದಮೆಗಳಿಗೆ ಸಂಬಂಧಿಸುವ ಕೆಲವು ವಿಧಿಗಳ ನಿರ್ವಚನ ಅತ್ಯಗತ್ಯವೆಂದು ಸಂಬಂಧ ಪಟ್ಟ ಹೈಕೋರ್ಟು ಪ್ರಮಾಣಪತ್ರವನ್ನು ಕೊಡಬೇಕು. ಒಂದುವೇಳೆ ಇಂಥ ಪ್ರಮಾಣಪತ್ರವನ್ನು ಹೈಕೋರ್ಟು ಕೊಡದಿದ್ದರೂ ಸಂವಿಧಾನದಲ್ಲಿ ಅಡಕವಾಗಿರುವ ಮತ್ತು ಈ ಮೊಕದ್ದಮೆಗೆ ಸಂಬಂಧಿಸುವ ಕೆಲವು ವಿಧಿಗಳ ನಿರ್ವಚನ ಆವಶ್ಯಕ ವೆಂದು ಸುಪ್ರೀಂಕೋರ್ಟು ಅಭಿಪ್ರಾಯಪಟ್ಟರೆ, ಅಪೀಲ್ ಹಿಡಿಯಬಹುದೆಂಬ ವಿಶೇಷಾಜ್ಞೆಯನ್ನು ಸುಪ್ರೀಂಕೋರ್ಟು ಹೊರಡಿಸಬಹುದು. ಮೊಕದ್ದಮೆಗೆ ಅನ್ವಯಿ ಸುವ ವಿಧಿಗಳ ಅರ್ಥ ಸಂದೇಹಾಸ್ಪದವಾಗಿರುವುದೆಂದೂ ಅವುಗಳ ನಿರ್ವಚನ ಅತ್ಯಗತ್ಯವೆಂದೂ ವ್ಯವಹಾರದಲ್ಲಿ ಅಡಕವಾಗಿರುವ ಮತ್ತು ಕೆಲವು ವಿಷಯಗಳ ಅರ್ಥ ಸಂದೇಹಾಸ್ಪದವಾಗಿರುವುದರಿಂದ ಇವುಗಳ ಅನುಮಾನ ಪರಿಚ್ಛೇದವಾಗ ಬೇಕೆಂದೂ ವಾದಿ ಅಥವ ಪ್ರತಿವಾದಿ ಸುಪ್ರೀಂಕೋರ್ಟಿಗೆ ತಮ್ಮ ಬೇಡಿಕೆ ಕಳುಹಿಸ ಬಹುದು. ಅಲ್ಲದೆ ಮೊಕದ್ದಮೆಗೆ ಮೂಲಕಾರಣವಾಗಿರುವ ಆಸ್ತಿಪಾಸ್ತಿಗಳ ಬೆಲೆ ೨೦,೦೦೦ ರೂಪಾಯಿ ಅಥವ ಅದಕ್ಕಿಂತ ಹೆಚ್ಚಾಗಿದ್ದರೆ ಅಪೀಲಿಗೆ ಬೇಕಾಗುವ ಕಾರಣಗಳು ವ್ಯವಹಾರದಲ್ಲಿದ್ದರೆ, ಮೊಕದ್ದಮೆಗೆ ಸಂಬಂಧಿಸುವ ವಿಧಿಗಳ ಅರ್ಥ ಸ್ಪಷ್ಟವಾಗಿಲ್ಲದಿದ್ದರೆ ಹೈಕೋರ್ಟುಗಳ ನಿರ್ಣಯ ತೃಪ್ತಿಕರ ಮತ್ತು ನ್ಯಾಯಬದ್ಧ ವಾಗಿಲ್ಲದಿದ್ದರೆ, ಸುಪ್ರೀಂಕೋರ್ಟಿನಲ್ಲಿ ಅಪೀಲ್ ವ್ಯಾಜ್ಯಹೂಡಲು ವಾದಿಗಾಗಲೀ ಪ್ರತಿವಾದಿಗಾಗಲೀ ಅವಕಾಶವಿರುವುದು.

ಅಪರಾಧಿಕ ವಿಷಯಗಳ (ಕ್ರಿಮಿನಲ್ ಮೊಕದ್ದಮೆಗಳ) ಸಂಬಂಧವಾಗಿ ಹೈಕೋರ್ಟುಗಳು ಮಾಡುವ ನಿರ್ಣಯ, ಕೊಡುವ ಕಟ್ಟಕಡೆಯ ಆಜ್ಞೆ, ವಿಧಿಸುವ ಶಿಕ್ಷೆ ಇವುಗಳಮೇಲೆ ಸುಪ್ರೀಂಕೋರ್ಟು ಪುನಃ ವಿಚಾರಣೆ ನಡೆಸಬಹುದು. ಇಂಥ ಅಪೀಲಿಗೆ ಸಂಬಂಧಿಸುವ ಕೆಲವು ಷರತ್ತುಗಳಿವೆ. ಪ್ರಥಮ ವಿಚಾರಣೆ ನಡೆಸಿದ ಕೋರ್ಟು ಕೊಟ್ಟ ನಿರ್ಣಯದಮೇಲೆ ಹೈಕೋರ್ಟ್ ಅಪೀಲ್ ವಿಚಾರಣೆ ನಡೆಸಿದಾಗ ಅಪರಾಧಿಗೆ ಕೆಳಕೋರ್ಟು ಕೊಟ್ಟಿದ್ದ ಬಿಡುಗಡೆ ಆಜ್ಞೆಗೆ ಬದಲಾಗಿ ಮರಣದಂಡನೆ ವಿಧಿಸಿದರೆ, ಅಥವ ಮೊಕದ್ದಮೆಯನ್ನು ಕೆಳಕೋರ್ಟು ವಿಚಾರಿಸಲು ಅವಕಾಶಕೊಡದೆ ಹೈಕೋರ್ಟು ವಿಚಾರಿಸಿ ಅಪರಾಧಿಗೆ ಮರಣದಂಡನೆಯನ್ನು ವಿಧಿಸಿದರೆ, ಅಥವ ಅಪೀಲಿಗೆ ಸಾಕಾಗುವಷ್ಟು ಕಾರಣಗಳು ಮೊಕದ್ದಮೆಯಲ್ಲಿ ಅಡಕವಾಗಿವೆ ಎಂದು ಹೈಕೋರ್ಟು ಪ್ರಮಾಣಪತ್ರ ಕೊಟ್ಟರೆ ಸುಪ್ರೀಂಕೋರ್ಟು ಅಪೀಲನ್ನು ಹಿಡಿಯ ಬಹುದು. ಕೆಲವು ಕ್ರಿಮಿನಲ್ ಮೊಕದ್ದಮೆಗಳಿಗೆ ಹೈಕೋರ್ಟುಗಳು ಕೊಡುವ ನಿರ್ಣಯದಮೇಲೆ ಸುಪ್ರೀಂಕೋರ್ಟ್ ಅಪೀಲ್ ವಿಚಾರಣೆ ನಡೆಸಬೇಕೆಂದು ಪಾರ್ಲಿ ಮೆಂಟ್ ವಿಧಿಪೂರ್ವಕವಾಗಿ ತಿಳಿಸುವುದೂ ಉಂಟು.

ಪಾರ್ಲಿಮೆಂಟ್ ಬೇರೆ ವಿಧಿಗಳನ್ನು ರಚಿಸುವವರಿಗೆ ನೂತನ ಸಂವಿಧಾನಕ್ಕೆ ಹಿಂದೆ ಇದ್ದ ಫೆಡರಲ್ ಕೋರ್ಟಿನ ಕ್ಷೇತ್ರಾಧಿಕಾರಕ್ಕೆ ಒಳಪಟ್ಟಿದ್ದ ವಿಷಯಗಳು ಮೇಲಿನ ೨ ಅನುಚ್ಛೇದಗಳಿಗೆ ಅನ್ವಯಿಸದಿದ್ದರೂ ಸುಪ್ರೀಂಕೋರ್ಟಿನ ಕ್ಷೇತ್ರಾಧಿ ಕಾರಕ್ಕೇ ಒಳಪಡುವುವು. ಭಾರತದ ನ್ಯಾಯಾಲಯಗಳು ಯಾವ ಮೊಕದ್ದಮೆಯ ವಿಚಾರದಲ್ಲಾಗಲೀ ಕೊಡುವ ನಿರ್ಣಯ, ವಿಧಿಸುವ ಶಿಕ್ಷೆ, ಹೊರಡಿಸುವ ಆಜ್ಞೆ ಇವುಗಳ ಮೇಲೆ ಸುಪ್ರೀಂಕೋರ್ಟು ಸ್ವವಿವೇಕದಿಂದ ಅಪೀಲ್ ಹಿಡಿಯಲು ಅಧಿಕಾರ ಪಡೆದಿದೆ. ಆದರೆ ಈ ಷರತ್ತುಗಳು ರಕ್ಷಣಾಬಲಗಳಿಗೆ ಅನ್ವಯಿಸುವ ನ್ಯಾಯಾಲಯ ಗಳಿಗೆ ಸಂಬಂಧಿಸುವುದಿಲ್ಲ. ಕೆಲವು ಸಂದರ್ಭಗಳಲ್ಲಿ ತಾನೇ ಕೊಟ್ಟ ನಿರ್ಣಯ, ಹೊರಡಿಸಿದ ಆಜ್ಞೆ ಇವುಗಳನ್ನು ಸುಪ್ರೀಂಕೋರ್ಟು ಪುನಃ ವಿಲೋಕಿಸುವುದೂ ಉಂಟು. ಏಳನೆಯ ಅನುಸೂಚಿ ಒಂದನೆಯ ಪಟ್ಟಿಯಲ್ಲಿ ಅಡಕವಾಗಿರುವ ವಿಷಯಗಳ ಮೇಲೆ ಈಗಿರುವ ಕ್ಷೇತ್ರಾಧಿಕಾರಕ್ಕಿಂತ ಹೆಚ್ಚಿನ ಅಧಿಕಾರವನ್ನು ವಿಧಿಗನುಸಾರವಾಗಿ ಪಾರ್ಲಿಮೆಂಟ್ ಸುಪ್ರೀಂಕೋರ್ಟಿಗೆ ವಹಿಸಬಹುದು. ಭಾರತಸರ್ಕಾರ ಮತ್ತು ರಾಜ್ಯಗಳು ವಿಶೇಷ ಒಪ್ಪಂದಗಳನ್ನು ಮಾಡಿಕೊಂಡು ಇವುಗಳ ಪರಿಣಾಮವಾಗಿ ಸುಪ್ರೀಂಕೋರ್ಟಿನ ಅಧಿಕಾರವನ್ನು ಹೆಚ್ಚಿಸುವುದೂ ಉಂಟು. ಇದಕ್ಕೆ ಮುಂಚಿತ ವಾಗಿ ಪಾರ್ಲಿಮೆಂಟಿನ ಒಪ್ಪಿಗೆಯೂ ಅದರ ವಿಧಿಗಳೂ ಅತ್ಯಾವಶ್ಯಕ.

ತನ್ನ ನಿರ್ದೇಶವನ್ನೂ ಆಜ್ಞೆಗಳನ್ನೂ ಬಂದೀಪ್ರತ್ಯಕ್ಷೀಕರಣ (ಹೇಬಿಯಸ್

ಕಾರ್ಪಸ್) ಪರಮಾದೇಶ (ಮಾಂಡೆಮಸ್) ಪ್ರತಿಷೇಧ (ಪ್ರೊಹಿಬಿಷನ್) ಅಧಿಕಾರ ಪೃಚ್ಛೆ (ಕೊವರಾಂಟೋ) ಉತ್ಪ್ರೇಷಣ (ಸರ್ಷಿಯೋರಾರೈ) ಮೊದಲಾದ ಲೇಖಗಳನ್ನೂ ಪ್ರಕಟಿಸಲು ಸುಪ್ರೀಂಕೋರ್ಟಿಗೆ ವಿಶೇಷಾಧಿಕಾರವನ್ನು ಪಾರ್ಲಿಮೆಂಟ್ ವಿಧಿಪೂರ್ವಕವಾಗಿ ಕೊಡಬಲ್ಲದು. ಭಾರತ ಸಂವಿಧಾನಕ್ಕೆ ವಿರೋಧ ಬರದಂತೆಯೂ ಸುಪ್ರೀಂಕೋರ್ಟಿನ ಕಾರ್ಯನಿರ್ವಹಣೆಗೂ ಕ್ಷೇತ್ರಾಧಿಕಾರಕ್ಕೂ ಅಡಚಣೆಯಾಗದಂತೆಯೂ ಸೂಕ್ತರೀತಿಯಲ್ಲಿ ಸುಪ್ರೀಂಕೋರ್ಟಿನ ಅಧಿಕಾರವ್ಯಾಪ್ತಿಯನ್ನು ವಿಧಿಪೂರ್ವಕವಾಗಿ ಪಾರ್ಲಿಮೆಂಟ್ ಹೆಚ್ಚಿಸಲು ತಕ್ಕ ಅಧಿಕಾರವನ್ನೂ ಪಡೆದಿದೆ. ಸುಪ್ರೀಂಕೋರ್ಟಿನಿಂದ ಹೊರಡುವ ವಿಧಿಗಳನ್ನು ಭಾರತದಲ್ಲಿರುವ ನ್ಯಾಯಾಲಯಗಳೆಲ್ಲವೂ ಗೌರವಿಸಬೇಕೆಂಬ ನಿರ್ಬಂಧವಿದೆ. ತನ್ನ ಕಾರ್ಯನಿರ್ವಹಣೆಯ ಪರಿಣಾಮವಾಗಿ ಸುಪ್ರೀಂಕೋರ್ಟ್ ಹೊರಡಿಸುವ ನಿರ್ಣಯ, ಆಜ್ಞೆಗಳು ಇಡೀ ದೇಶಕ್ಕೆ ಹೇಗೆ ಅನ್ವಯಿಸಬೇಕು, ಹೇಗೆ ಅವುಗಳನ್ನು ಪ್ರಜೆಗಳು ಪಾಲಿಸಬೇಕು ಎಂಬ ವಿವರಗಳನ್ನು ಪಾರ್ಲಿಮೆಂಟ್ ವಿಧಿಗಳ ರೂಪದಲ್ಲಿ ತಿಳಿಸುವುದು. ಇದು ಹಾಗೆ ತಿಳಿಸುವವರಿಗೆ ಅಧ್ಯಕ್ಷನ ಆಜ್ಞೆಯನ್ನು ಸರ್ವರೂ ಗೌರವಿಸಬೇಕು. ಕಾರ್ಯನಿರ್ವಹಣೆಯಸಲುವಾಗಿ ಸುಪ್ರೀಂಕೋರ್ಟು ಯಾವ ಪ್ರಜೆಯನ್ನಾದರೂ ಬರಮಾಡಿಕೊಳ್ಳಬಹುದು; ಯಾವ ಕಾಗದಪತ್ರ ಯಾರಲ್ಲಿದ್ದರೂ ಅದನ್ನು ತರಿಸಿಕೊಳ್ಳಬಹುದು; ತನಗೆ ಅವಮಾನಮಾಡುವವರನ್ನು ಶಿಕ್ಷಿಸಬಹುದು. ಸಾರ್ವಜನಿಕಹಿತಸಾಧನೆಗೆ ಅನ್ವಯಿಸುವ ವಿಧಿಗಳ ಮತ್ತು ಇತರ ವಿಷಯಗಳ ವಿಚಾರವಾಗಿ ಸುಪ್ರೀಂಕೋರ್ಟಿನ ಸಲಹೆ ಪಡೆಯುವುದರಲ್ಲಿ ಔಚಿತ್ಯವಿದೆಯೆಂದು ಅಧ್ಯಕ್ಷನು ಅಭಿಪ್ರಾಯಪಟ್ಟರೆ ಆ ವಿಷಯಗಳನ್ನು ಸುಪ್ರೀಂಕೊರ್ಟು ಪರಿಶೀಲಿಸಿ ತನ್ನ ವರದಿಯನ್ನಾಲೀ ಶಿಫಾರಸ್ಸುಗಳನ್ನಾಗಲೀ ಅಧ್ಯಕ್ಷನಿಗೆ ಒಪ್ಪಿಸಬೇಕು. ಭಾರತದಲ್ಲಿ ಸೈನಿಕ ಅಧಿಕಾರಿಗಳೆಲ್ಲರೂ ಸುಪ್ರೀಂಕೋರ್ಟಿನ ಗೌರವವನ್ನು ಕಾಪಾಡಿ ಅದಕ್ಕೆ ನೆರವಾಗಬೇಕು. ಪಾರ್ಲಿಮೆಂಟಿನ ವಿಧಿಗಳನ್ನತಿಕ್ರಮಿಸದೆ ಅಧ್ಯಕ್ಷನ ಅನುಮತಿ ಪಡೆದು ದೇಶದ ನ್ಯಾಯಾಲಯಗಳ ಕಾರ್ಯಕಲಾಪಗಳನ್ನು ಕ್ರಮಪಡಿಸಲೋಸುಗ ನಿಯಮಗಳನ್ನು ರಚಿಸಿ, ಆಚರಣೆಗೆ ತರಲು ಸುಪ್ರೀಂಕೋರ್ಟು ಅಧಿಕಾರ ಪಡೆದಿದೆ. ಈ ಸಂದರ್ಭಗಳು ಯಾವುವೆಂದರೆ:—ವಕೀಲವೃತ್ತಿಗೆ ಅನ್ವಯಿಸುವ ವಿಷಯಗಳು; ಅಪೀಲು ಮೊಕದ್ದಮೆಗಳಿಗೆ ಸಂಬಂಧಿಸುವ ಕಾರ್ಯಕ್ರಮಗಳು; ಮೂಲಹಕ್ಕುಗಳನ್ನು ಅನುಷ್ಠಾನಕ್ಕೆ ತರುವ ಸಲುವಾಗಿ ನ್ಯಾಯಾಲಯಗಳು ಅನುಸರಿಸಬೇಕಾದ ಕಾರ್ಯಕ್ರಮಗಳು; ಕ್ರಿಮಿನಲ್ ಮೊಕದ್ದಮೆಗಳ ಅಪೀಲು ವಿಚಾರದಲ್ಲಿ ಹೈಕೋರ್ಟುಗಳು ಸುಪ್ರೀಂಕೋರ್ಟಿಗೆ ಒಪ್ಪಿಸುವ ಪ್ರಮಾಣಪತ್ರದ ವಿವರ; ಕೆಳಕೋರ್ಟುಗಳು ಕೊಡುವ ನಿರ್ಣಯ, ಆಜ್ಞೆ ಇವುಗಳನ್ನು ಪುನಃ ವಿಲೋಕಿಸಲು

ಆವಶ್ಯಕವಾಗಿ ಬೇಕಾಗುವ ಷರತ್ತುಗಳು, ಕಾಲಾವಧಿ ಇತ್ಯಾದಿ; ನ್ಯಾಯಾಲಯುಗಳಿಂದ ವ್ಯಾವಹಾರಿಕವಿಷಯಗಳಮೇಲೆ ನಿರ್ಣಯ ಪಡೆಯುವುದಕ್ಕಾಗಿ ಪ್ರಜೆಗಳಿಗೆ ತಗಲುವ ಖರ್ಚು, ಕೋರ್ಟು ಖರ್ಚು ಇತ್ಯಾದಿ; ಜಾಮೀನು ಕೊಡುವ ವಿವರ; ನ್ಯಾಯಸ್ಥಾನಗಳು ನಿರ್ಣಯ ಕೊಡುವಾಗ ಅನುಸರಿಸುವ ಕ್ರಮ, ಹೆಚ್ಚು ಸಾವಕಾಶವಿಲ್ಲದೆ ನಿರ್ಣಯ ಕೊಡುವ ಸಂದರ್ಭಗಳು, ತಿಳಿಗೇಡಿತನದಿಂದ ಮತ್ತು ಕಾಲಹರಣಮಾಡಬೇಕೆಂಬ ದುರುದ್ದೇಶದಿಂದ ಜನರು ತರುವ ಮೊಕದ್ದಮೆಗಳಿಗೆ ಸಂಬಂಧಪಡುವ ವಿಷಯಗಳು, ಲೋಕಸೇವಾಯೋಗದ (ಪಬ್ಲಿಕ್ ಸರ್ವಿಸ್ ಕಮಿಷನ್ನಿನ) ಸದಸ್ಯರ ಮೇಲಿನ ತನಿಖೆ ವಿಚಾರಣೆಯಲ್ಲಿ ಅನುಸರಿಸಬೇಕಾದ ಕಾರ್ಯಕ್ರಮ ಇವೇ ಮೊದಲಾದುವು. ಸಂವಿಧಾನದ ವಿಧಿಗಳ ಅರ್ಥವನ್ನು ಸ್ಪಷ್ಟಪಡಿಸುವಾಗಲೂ, ಇಂಥ ವಿಧಿಗಳಿಗೆ ಅನ್ವಯಿಸುವ ಮೊಕದ್ದಮೆಗಳು ವಿಚಾರಣೆಗೆ ಇರುವಾಗಲೂ, ಅಧ್ಯಕ್ಷನು ಸುಪ್ರೀಂಕೋರ್ಟಿನ ಸಲಹೆಯನ್ನು ಅಪೇಕ್ಷಿಸುವಾಗಲೂ ಕನಿಷ್ಠಪಕ್ಷ ಐದುಮಂದಿ ನ್ಯಾಯಾಧೀಶರಾದರೂ ನ್ಯಾಯಾಲಯದಲ್ಲಿ ಹಾಜರಿರಬೇಕು. ತನ್ನ ನಿರ್ಣಯಗಳನ್ನು ಸುಪ್ರೀಂಕೋರ್ಟ್ ಯಾವಾಗಲೂ ಬಹಿರಂಗವಾಗಿ ಕೊಡತಕ್ಕದ್ದು. ವಿಚಾರಣೆ ನಡೆಸುವ ನ್ಯಾಯಾಧೀಶರು ಬಹುಮತದಿಂದ ಕೊಡುವ ನಿರ್ಣಯವೇ ಅಧಿಕೃತ ನಿರ್ಣಯ. ಇದಕ್ಕೆ ವಿರೋಧವಾಗಿರುವ ನ್ಯಾಯಾಧೀಶರು ತಮ್ಮ ಅಭಿಪ್ರಾಯವನ್ನು ಬರವಣಿಗೆಯಲ್ಲಿಡಲು ಅಧಿಕಾರ ಪಡೆದಿರುವರು.

ಸುಪ್ರೀಂಕೋರ್ಟಿಗೆ ಸೇರಿದ ವಿವಿಧ ಪದಾಧಿಕಾರಿಗಳನ್ನು ಮುಖ್ಯ ನ್ಯಾಯಾಧಿಪತಿ ಅಥವ ಅವನಿಂದ ಗೊತ್ತುಮಾಡಲ್ಪಟ್ಟ ಇತರ ನ್ಯಾಯಾಧೀಶ ಅಥವ ಪದಾಧಿಕಾರಿ ನೇಮಿಸುವನು. ಸುಪ್ರೀಂಕೋರ್ಟಿಗೆ ಸಂಬಂಧವಿಲ್ಲದವರನ್ನು ಹೊಸ ಕೆಲಸಗಳಿಗೆ ನೇಮಿಸುವ ಸನ್ನಿವೇಶ ಒದಗಿದರೆ ಆಗ ಲೋಕಸೇವಾಯೋಗದ ಅನುಮತಿ ಪಡೆಯಬೇಕು. ಈ ನ್ಯಾಯಾಲಯದ ಉದ್ಯೋಗಮಂಡಲಿಗೆ ಸೇರುವ ವಿವಿಧ ವಿಷಯಗಳನ್ನು ಮುಖ್ಯ ನ್ಯಾಯಾಧಿಪತಿ ಅಥವ ಅವನ ಪ್ರತಿನಿಧಿ ಪಾರ್ಲಿಮೆಂಟಿನ ವಿಧಿಗಳಿಗೂ ಅಧ್ಯಕ್ಷನ ಅನುಮತಿಗೂ ವಿರೋಧ ಬರದಂತೆ ನಿರ್ಧರಿಸಬಹುದು. ಸುಪ್ರೀಂಕೋರ್ಟಿಗೆ ತಗಲುವ ವಿಶಿಷ್ಟ ಖರ್ಚು ಭಾರತಸರ್ಕಾರದ ಸಂಚಿತ ನಿಧಿಯಮೇಲೆ ಬೀಳುವುದು. ಹಾಗೆಯೆ ನ್ಯಾಯಾಲಯಗಳ ವರಮಾನ ಈ ನಿಧಿಗೆ ಸೇರತಕ್ಕದ್ದು.

ಎಚ್. ಕೃಷ್ಣರಾವ್

(ಸಶೇಷ)

ಕಾವ್ಯಾವಲೋಕನ

೫

ತಪೋನಂದನ—ಲೇಖಕರು : ಕುವೆಂಪು ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು, ೧೨೫ ; ಬೆಲೆ, ರೂ. ೧-೧೨-೦.

ಈ ಗ್ರಂಥವು ಈಗಾಗಲೇ 'ಪ್ರಬುದ್ಧ ಕರ್ಣಾಟಕ' ಮುಂತಾದುವಲ್ಲಿ ಪ್ರಕಟವಾಗಿರುವ 'ಮಹಾಶ್ವೇತೆಯ ತಪಸ್ಸು' ಮೊದಲಾದ ಎಂಟು ವಿಮರ್ಶಾತ್ಮಕ ಪ್ರಬಂಧಗಳ ಸಂಕಲನ. "ಗದ್ಯಂ ಕವೀನಾಂ ನಿಕಷಂ ವದಂತಿ" ಎಂದು ನಮ್ಮ ಹಿಂದಿನವರು ಹೇಳಿದ್ದರೂ, ಇಂದಿನ ಕನ್ನಡಗದ್ಯದ ಇತಿಹಾಸದಲ್ಲಿ ಕಾವ್ಯಗುಣಗಳಿರುವ ಗ್ರಂಥಗಳು ಅತ್ಯಂತ ವಿರಳವೆನ್ನಲಡ್ಡಿಯಿಲ್ಲ. ಇಂತಹ ಕಾವ್ಯಮಯವಾದ ಆಧುನಿಕ ಗದ್ಯನಿರ್ಮಾತೃಗಳಲ್ಲಿ 'ಕುವೆಂಪು' ಅವರಿಗೆ ಅಗ್ರಸ್ಥಾನವನ್ನು ಕೊಡಬಹುದು. ಪ್ರತಿನಿತ್ಯವೂ ಮುದ್ರಣಾಲಯಗಳಿಂದ ಮಣಗಟ್ಟಲೆ ಗದ್ಯರಚನೆಗಳು ಹೊರಬೀಳುತ್ತಿರುವುವಾದರೂ ಕೇವಲ ಸಾಹಿತ್ಯದೃಷ್ಟಿಯಿಂದ ನೋಡಿದರೆ ಚಿರಕಾಲ ನಿಲ್ಲತಕ್ಕವೆಂದೆನಿಸುವಂತಹ ಬರೆವಣಿಗೆಗಳು ಅತ್ಯಲ್ಪ ; ಅದರಲ್ಲಿಯೂ ಸಾಹಿತ್ಯ ವಿಮರ್ಶೆಯನ್ನು ಕುರಿತ ಗ್ರಂಥಗಳ ಸಂಖ್ಯೆ ಸಣ್ಣದು ; ಅದರಲ್ಲಿಯೂ ಪ್ರಾಚೀನ ಸಾಹಿತ್ಯದ ನೂತನವಿಮರ್ಶೆಗಾಗಿ ಹೊರಟ ಗ್ರಂಥಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಈ ಯಂತ್ರಯುಗದಲ್ಲಿ, ವಿಜ್ಞಾನದ ವ್ಯಾಮೋಹದಿಂದ ಜೀವನವನ್ನೂ ಒಂದು ಯಂತ್ರವನ್ನಾಗಿ ಮಾರ್ಪಡಿಸಿಕೊಳ್ಳುವವರ ಸಂಖ್ಯೆಯೇ ಹೆಚ್ಚು. ಬಹುಜನರ ಕಲಾಭಿರುಚಿಯೆಲ್ಲವೂ ಸೌಂದರ್ಯಾನುಭವವನ್ನು ದುಡ್ಡಿನಿಂದ ಕೊಳ್ಳುವುದರಲ್ಲಿಯೇ ಮುಗಿದುಹೋಗುತ್ತದೆ. ಸಾಹಿತ್ಯದ ಆಸ್ವಾದವು ಪತ್ತೇದಾರಿ ಅಥವಾ ಸಾಮಾಜಿಕ ಕಥೆ ಕಾದಂಬರಿಗಳನ್ನು ಕೊಂಡು ಓದುವುದರಲ್ಲಿ ಪರ್ಯವಸಾನವಾಗುತ್ತದೆ. ಅಭಿರುಚಿಗೆ ತಕ್ಕಂತೆ ಬರೆಹಗಾರರು ನೂರಾರು ಮಂದಿ ಇದ್ದಾರೆ. ಕಾಸಿಗೆ ಕೊಂಡ ಕಜ್ಜಾಯವಾದರೂ ಅಷ್ಟಿಷ್ಟು ಸಿಹಿಯಾಗಿರಬಹುದು ; ಆದರೆ ಕಾಸಿಗೆ ಕೊಳ್ಳುವ ಸಾಹಿತ್ಯಕ್ಕೆ ಏನೆನ್ನಬೇಕು !

ವಿಚಾರಮಾಡುವ ದಂದುಗಕ್ಕೊಳಗಾಗದೆ ಹೀಗೆ ಜೀವನವನ್ನು 'ಆನಂದಮಯವಾಗಿ ಸವೆಸುತ್ತಿರುವವರು ಏನನ್ನು ತಾವು ಕಳೆದುಕೊಳ್ಳುತ್ತಿರುವರೆಂಬುದು ತಿಳಿಯಬೇಕಾದರೆ ಅವಶ್ಯವಾಗಿ ಈ ಪುಸ್ತಕವನ್ನೋದಬೇಕು. ಭಾರತವರ್ಷದ ಆರ್ಷೇಯ ಸಂಸ್ಕೃತಿಯ ಸುಂದರ ಕಲ್ಪನೆಯು ಇದನ್ನು ಓದುವುದರಿಂದಾಗುತ್ತದೆ. ಆ ಸಂಸ್ಕೃತಿಗೆ ಷಡ್ದರ್ಶನಗಳು ಒಂದು ಕಣ್ಣಾದರೆ ಮಹಾಕಾವ್ಯಗಳು ಎರಡನೆಯ

ಕಣ್ಣು. ಎರಡರಲ್ಲೂ ಒಂದೇ ಆಧ್ಯಾತ್ಮಿಕ ತತ್ವವು ವಿಭಿನ್ನಮಾರ್ಗಗಳಿಂದ ಆವಿಷ್ಕೃತವಾಗಿದೆ. ದರ್ಶನಗಳು ತರ್ಕಶತರ್ಕಸಾಧ್ಯವಾದರೆ ಮಹಾಕಾವ್ಯಗಳು ಅನುಭವೈಕವೇದ್ಯ. ನಮಗೀಗ ಸುಪರಿಚಿತವಾಗಿರುವ ಅಸಂಖ್ಯ ಕಾವ್ಯಪ್ರಕಾರಗಳಿಗೂ ಅಜರಾಮರವಾಗಿರುವ ಪುರಾತನ ಮಹಾಕಾವ್ಯಗಳಿಗೂ ಇರುವ ಮಹದಂತರವನ್ನು 'ಕುವೆಂಪು' ಅವರು ಬಹಳ ಹೃದಯಂಗಮವಾಗಿ ಮತ್ತು ಭಾವಪೂರ್ಣವಾಗಿ ತೋರಿಸಿದ್ದಾರೆ. ಮಹಾಶ್ವೇತೆಯ ತಪಸ್ಸು, ಸೌಧರ್ಮೇಂದ್ರನ ಆನಂದತಾಂಡವ, ಅಚ್ಛೋದ ಮತ್ತು ವೈಶಂಪಾಯನ ಸರೋವರಗಳ ಭವ್ಯತೆ, ಶ್ರೀಮದ್ರಾಮಾಯಣದ ಮಾಹಾತ್ಮ್ಯ, ಕಾಳಿದಾಸನ ಪೂರ್ಣದೃಷ್ಟಿ, ಇವೇ ಮೊದಲಾದುವುಗಳ ಸೂಕ್ಷ್ಮವಿವೇಚನೆಯಿಂದ ಪುರಾತನ ಮಹಾಕೃತಿಗಳ ಅನ್ಯಾದೃಶವಾದ ಮೇಲ್ಮೆಯನ್ನು ಸ್ಪಷ್ಟಪಡಿಸಿದ್ದಾರೆ. ಸಂಸ್ಕೃತ ಸಾಹಿತ್ಯದ ಮಹಾಕೃತಿಗಳನ್ನಷ್ಟೇ ಅಲ್ಲ, ಹೋಮರ್, ಡಾಂಟೆ, ಮಿಲ್ಟನ್ ಮೊದಲಾದ ವಿದೇಶೀಯ ಮಹಾಕೃತಿಗಳನ್ನೂ ಕವಿಹೃದಯದಿಂದ ಲೇಖಕರು ಪರಿಶೀಲಿಸಿದ್ದಾರೆ. ಹೀಗೆ ವಿಶ್ವದಲ್ಲೆಲ್ಲ ಆದರಣೀಯವಾಗಿರುವ ಮಹಾಕಾವ್ಯ ಮತ್ತು ಮಹಾನಾಟಕಗಳ ಸ್ವಾರಸ್ಯದ ರಹಸ್ಯವನ್ನು ಸೂಚಿಸುವುದಲ್ಲದೆ ಅವುಗಳನ್ನು ಸರಿಯಾಗಿ ತಿಳಿಯಬೇಕಾದರೆ ಸಹೃದಯನಲ್ಲಿರಬೇಕಾದ ಯೋಗ್ಯತೆಗಳನ್ನು ಸ್ಪಷ್ಟಪಡಿಸಿದ್ದಾರೆ. ಎಲ್ಲಕ್ಕಿಂತಲೂ ಹೆಚ್ಚಾಗಿ, ಈ ಎಲ್ಲ ಮಹಾಕೃತಿಗಳ ಪರಿಶೀಲನೆಯಿಂದ ಹೊರಮೂಡುವ ಸಾಹಿತ್ಯತತ್ವಗಳನ್ನೂ ವಿಶದವಾಗಿ ಪ್ರತಿಪಾದಿಸಿದ್ದಾರೆ. ಹೀಗೆ ಗ್ರಂಥದಲ್ಲಿ ಮಹಾಕಾವ್ಯಪ್ರಶಂಸೆಯೂ ಮಹಾಕಾವ್ಯವಿಮರ್ಶೆಯೂ ಮೊದಲಿನಿಂದ ಕೊನೆಯವರೆಗೂ ಒಡಗೂಡಿವೆ.

ಕಪ್ಪೆಗಳು ತಿಪ್ಪೆಯ ಹಳ್ಳದಲ್ಲಿ ತೃಪ್ತಿಯಿಂದಿರಬಹುದು; ಎಮ್ಮೆಗಳು ಕೆಸರಿನಲ್ಲಿ ಆನಂದದಿಂದ ಮುಳುಗಿ ಏಳಬಹುದು. ಆದರೆ ಮನುಷ್ಯನು ಸ್ನಾನಕ್ಕಾಗಿ ನದಿಯನ್ನು ಹುಡುಕಿಕೊಂಡು ಹೋಗುತ್ತಾನೆ. ಆಚಾರವಂತನಾದರೆ ನದಿಯಲ್ಲಿಯೂ ತೀರ್ಥವನ್ನು ಹುಡುಕುತ್ತಾನೆ. ಜನ್ಮಸಾರ್ಥಕ್ಯದ ಒಂದೇ ಹಂಬಲವಿರುವ ಶ್ರದ್ಧಾಳುವು ಯಾವ ಕಷ್ಟವನ್ನೂ ಲೆಕ್ಕಿಸದೆ ಗಂಗೆಯನ್ನೇ ಹೋಗಿ ತಲಪುತ್ತಾನೆ. ಸಾಹಿತ್ಯದಲ್ಲಿಯೂ ಹಾಗೆಯೇ; ತಾನಾಗಿ ಕಾಲಿಗೆ ತೊಡರಿಕೊಳ್ಳುವುದೆಲ್ಲವೂ ಸಂಜೀವಿನೀಲತೆಯೇ ಆಗಿರುವುದಿಲ್ಲ; ಮನೆಯ ಹಿತ್ತಿಲಲ್ಲಿ ಹರಿಯುವುದೆಲ್ಲವೂ ಗಂಗೆಯಾಗಿರುವುದಿಲ್ಲ. ಅವುಗಳಿಗಾಗಿ ಅಚಲಶ್ರದ್ಧೆಯಿಂದ ಬಹುದೂರ ಅರಸಿಕೊಂಡು ಹೋಗಬೇಕಾಗುತ್ತದೆ; ಕಷ್ಟಪಡಬೇಕಾಗುತ್ತದೆ. ಎಷ್ಟೆಷ್ಟು ಪ್ರಯಾಸಕ್ಕೆ ಮನುಷ್ಯನು ಸಿದ್ಧನಾಗುತ್ತಾನೋ ಅಷ್ಟಷ್ಟೇ ಹೆಚ್ಚಿನ ಪ್ರಮಾಣದಲ್ಲಿ ಸಾಹಿತ್ಯಾಮೃತವು ಅವನ

ದಾಗುತ್ತದೆ. ಮನೋದಾರ್ಢ್ಯವು ನಿಶ್ಚಲವಾಗಿದ್ದರೆ ಕಾವ್ಯದ ಅನುಶೀಲನವೇ ಒಂದು ಯೋಗಾಭ್ಯಾಸವಾಗಿ ಪರಿಣಮಿಸಿ ಬ್ರಹ್ಮಾನಂದಲಾಭವೂ ದೊರೆಯಬಹುದು—ಇದು ಈ ಪುಸ್ತಕವನ್ನೋದಿದಮೇಲೆ ಮನಸ್ಸಿನಲ್ಲಿ ನಿಲ್ಲುವ ಚಿತ್ರ. ಗಂಗಾಸ್ನಾನವನ್ನು ನಿಜವಾಗಿ ಮಾಡಲಾಗದವರು ಕೂಡ ಗಂಗಾಸ್ನಾನದ ಮಹಿಮೆಯನ್ನು ಭಕ್ತಿಯಿಂದ ಕೇಳಿಬಿಟ್ಟರೂ ಅದೇ ಫಲವು ಬರುವುದೆಂದು ಹೇಳುವುದುಂಟು. ಆ ಮಾಹಾತ್ಮ್ಯವನ್ನು ಗಂಗೆಯಲ್ಲಿ ಸ್ನಾನಮಾಡಿ ಬಂದ ಭಕ್ತರ ಬಾಯಿಂದಲೇ ಕೇಳಿದರೆ ಮತ್ತೂ ವಿಶೇಷ. ಹಾಗೆಯೇ ಸಾಹಿತ್ಯಗಂಗೆಯ ಮಾಹಾತ್ಮ್ಯವನ್ನು 'ಕುವೆಂಪು' ಅವರ ವಾಣಿಯಿಂದ ತಿಳಿಯುವುದೂ ಒಂದು ಸುಯೋಗವೇ. ತತ್ವವನ್ನು ತಿಳಿಯದೆ ಬಕಸ್ನಾನವನ್ನು ಗಂಗೆಯಲ್ಲಿ ಮಾಡಿದರೂ ಉಪಯೋಗವಿಲ್ಲ. ಹಾಗೆ ಸ್ನಾನಮಾಡುವುದಕ್ಕೆ ಮೊದಲಲ್ಲದಿದ್ದರೆ ಆಮೇಲಾದರೂ ತಿಳಿದವರಿಂದ ಅದರ ನಿಜವಾದ ಅರ್ಥವನ್ನು ತಿಳಿದುಕೊಂಡ ಹೊರತು ಗಂಗಾಸ್ನಾನದ ಪುಣ್ಯವು ಲಭಿಸುವುದಿಲ್ಲ. ಹಾಗೆಯೇ ಪ್ರಾಚೀನಸಾಹಿತ್ಯದ ಸಾಮಾನ್ಯ ಪರಿಚಯವುಳ್ಳವರೂ ಕೂಡ 'ಕುವೆಂಪು' ಅವರ ಭಾವಪೂರ್ಣವಾದ ವಿಮರ್ಶೆಯನ್ನೋದುವುದರಿಂದ ಪ್ರಯೋಜನವನ್ನು ಪಡೆಯಬಹುದು.

'ತಪೋನಂದನ' ದಲ್ಲಿ 'ಕುವೆಂಪು' ಅವರು ಉತ್ತಮೋತ್ತಮ ಸಾಹಿತ್ಯದ ಮರ್ಮವನ್ನೇನೂ ಇದಂಪ್ರಥಮವಾಗಿ ಪ್ರತಿಪಾದಿಸಿಲ್ಲ. 'ಕಾವ್ಯಸತ್ಯ' ದ ಅವರ ವಿವರಣೆಯನ್ನೋದುವಾಗ ಅರಿಸ್ಟಾಟಲನ ಮಾತುಗಳೂ, 'ಭವ್ಯತೆ' ಯ ನಿರೂಪಣೆಯಲ್ಲಿ ಲಾಂಗಿನಸನ ಪ್ರಕ್ರಿಯೆಯೂ, 'ಪ್ರತಿಮಾವಿಧಾನ' ದ ಪ್ರತಿಪಾದನೆಯಲ್ಲಿ ಶ್ರೀ ಅರೊಬಿಂದೋ ಅವರ ದರ್ಶನದ ಪ್ರಭಾವವೂ, 'ಮಹೋಪಮೆ' ಯ ಪ್ರಸ್ತಾಪದಲ್ಲಿ ಪಾಶ್ಚಾತ್ಯ ಆಲಂಕಾರಿಕರ ಪ್ರತಿಧ್ವನಿಯೂ, 'ಪೂರ್ಣದೃಷ್ಟಿ' ಯ ಪ್ರಕಟನೆಯಲ್ಲಿ 'ನಾನೃಷಿ: ಕುರತೇ ಕಾವ್ಯಂ' ಎಂದು ಮುಂತಾಗಿ ಹೇಳಿದ ಭಟ್ಟತಾತನ ವಿಚಾರಸರಣಿಯೂ ಸ್ಪಷ್ಟವಾಗಿಯೇ ಕಾಣಿಸುತ್ತವೆ. ಆದರೆ ಇದು ದೋಷವೇನೂ ಅಲ್ಲ. ಅದಕ್ಕೆ ಬದಲಾಗಿ, ಎಷ್ಟೇ ದೊಡ್ಡವನಾಗಿರಲಿ, ಇಂದಿನ ವಿಮರ್ಶಕನು ಇತರ ಮಹಾವಿಮರ್ಶಕರ ಸಿದ್ಧಾಂತಗಳನ್ನೆಲ್ಲ ನಿಕೃಷ್ಟಭಾವದಿಂದ ಕಡೆಗಣಿಸುವುದೇ ಔದ್ಧತ್ಯದೋಷವೆನಿಸುತ್ತದೆ. 'ಕುವೆಂಪು' ಅವರು ಈ ಎಲ್ಲ ಪ್ರಸಿದ್ಧತತ್ವಗಳನ್ನೂ ಶುಷ್ಕವಾಗಿ ಸಂಗ್ರಹಿಸಿಲ್ಲ; ತಮ್ಮ ಪುನರ್ವಿಮರ್ಶೆಯಿಂದ ಅವುಗಳೆಲ್ಲಕ್ಕೂ ಒಂದು ಸುಂದರವಾದ ಸಮನ್ವಯವನ್ನು ಕಲ್ಪಿಸಿದ್ದಾರೆ.

ಸಾಹಿತ್ಯವಿಮರ್ಶೆಗೆ ಸಂಬಂಧಿಸಿದ ಇನ್ನೂ ಕೆಲವು ಪ್ರಬಂಧಗಳನ್ನು 'ಕುವೆಂಪು' ಅವರು ಟಿಪ್ಪಣಿಗಳಲ್ಲಿ ಸೂಚಿಸಿದ್ದಾರೆ. ಇವೆಲ್ಲವೂ ಪ್ರಕಟವಾಗುವ

ವರೆಗೆ ಅವರ ತತ್ತ್ವದ ಸಮಗ್ರ ಕಲ್ಪನೆಯು ಬರವಂತಿಲ್ಲವಾದರೂ, ಈ ಪ್ರಬಂಧಗಳ ಮೇಲಿಂದ ಇಷ್ಟನ್ನು ಹೇಳಬಹುದು:—ಮಾನವನ ಗುರಿ ಅಮರತ್ವ; ತಿಳಿದೋ ತಿಳಿಯದೆಯೋ ಮಾನವಕುಲವು ಮರ್ತ್ಯದ ಕಡೆಯಿಂದ ಅಮರ್ತ್ಯದೆಡೆಗೆ ಸಾಗಿದೆ; ಇದನ್ನು ತಿಳಿದು ತಿಳಿಸಬಲ್ಲವರೇ ಋಷಿಗಳು. ಈ ಪರಿಪೂರ್ಣದೃಷ್ಟಿಯು ಭಾರತೀಯರಿಗೆ ಮಾತ್ರ ಹಿಂದೆ ಲಭಿಸಿದ್ದಿತು. ಅಪೂರ್ಣದೃಷ್ಟಿಯವರು ಕೂಡ ಮಹಾಕಾವ್ಯಗಳನ್ನು ವಿದೇಶಗಳಲ್ಲಿ ಬರೆದಿದ್ದಾರೆ. ಋಷಿಗಳಿಗೆ ಹೋಲಿಸಿದಾಗ ಅವರು ಅಪೂರ್ಣಪ್ರಜ್ಞರೆನಿಸಿದರೂ ಇತರ ಸಾಮಾನ್ಯಕವಿಗಳೊಡನೆ ಹೋಲಿಸಿದರೆ ಅವರೂ ಋಷಿಪ್ರಾಯರೇ ಆಗುತ್ತಾರೆ. ಗ್ರಂಥದ ಆದ್ಯಂತವೂ ಅನುಸ್ಯೂತವಾದ ಪೂರ್ಣದೃಷ್ಟಿಯು ಅವರಲ್ಲಿ ಕಾಣದೆಹೋದರೂ ಅನೇಕವೇಳೆ ಅವರ ಪ್ರತಿಭೆಯಲ್ಲಿ ಪೂರ್ಣದೃಷ್ಟಿಯು ಮಿಂಚಿ ಮಾಯವಾಗುತ್ತದೆ. ಪೂರ್ಣದೃಷ್ಟಿಯಿದ್ದಾಗ ಪ್ರತಿಭೆಯನ್ನು ದಿವ್ಯಪ್ರತಿಭೆಯೆಂದೂ ಅದಿಲ್ಲದೆ ಇರುವಾಗ ದೈತ್ಯಪ್ರತಿಭೆಯೆಂದೂ ಹೇಳಬಹುದು. ಇವೆರಡು ಪ್ರಕಾರಗಳೂ ಅಲ್ಪಕವಿಗಳ ಕಲ್ಪನೆಗಿಂತ ಸಾಸಿರ್ಮಡಿ ಮಿಗಿಲಾಗಿರುತ್ತವೆ. ಇಂತಹ ಮಹಾಕವಿಗಳ ಸಂಖ್ಯೆಯನ್ನು ಕೈಬೆರಳುಗಳಿಂದಲೇ ಎಣಿಸಿಬಿಡಬಹುದು: ವಾಲ್ಮೀಕಿ, ವ್ಯಾಸ, ಕಾಳಿದಾಸ, ಬಾಣಭಟ್ಟ; ಪಂಪ, ನಾರಾಣಪ್ಪ; ಹೋಮರ್; ವರ್ಜಿಲ್, ಡಾಂಟೆ; ಷೇಕ್ಸ್‌ಪಿಯರ್, ಮಿಲ್ಟನ್. ಇವರ ಮಹಾಕೃತಿಗಳಲ್ಲೆಲ್ಲ ಇರುವ ಸಾಧಾರಣಗುಣವೆಂದರೆ 'ಭವ್ಯತೆ';—ಅಲೌಕಿಕವಾದ ಮತ್ತು ಬೃಹತ್ತಾದ ಭಾವಕತ್ವವೇ ಭವ್ಯತೆಯ ಲಕ್ಷಣ. ಮಹಾಕವಿಗಳು ತಮ್ಮ ಪ್ರತಿಭಾಮಾತ್ರಗೋಚರವಾದ ಸತ್ಯಗಳನ್ನು ನೇರವಾಗಿ ಹೇಳುವುದಿಲ್ಲ; ಹೇಳಲಾರರು; ಆದರೆ 'ಪ್ರತಿಮೆ'ಗಳ ಅಥವಾ ಪ್ರತೀಕಗಳ ಮೂಲಕ ಧ್ವನಿಸುತ್ತಾರೆ. ಅಲ್ಪರ ಕೃತಿಗಳಲ್ಲಿ ಜೀವನದ ಪ್ರತಿಕೃತಿವಿಧಾನವಿರುವುದೇ ಹೊರತು ಮಹಾಕವಿಗಳ ಪ್ರತಿಮಾವಿಧಾನವಿರುವುದಿಲ್ಲ. ಈ ಪ್ರತಿಮಾವಿಧಾನದಿಂದ ವಿಶ್ವದ ನಿಗೂಢತತ್ವಗಳ ಪ್ರದರ್ಶನವು ಸಾಧ್ಯ; ಪ್ರತಿಮಾವಿಧಾನವು ಪ್ರಬಲವಾಗಿ ಬರುವುದರಿಂದಲೇ ರುದ್ರನಾಟಕಗಳು ಮಹಾನಾಟಕಗಳೆನಿಸುವುದು; ಇದರ ಜೆತೆಗೆ ಪೂರ್ಣದೃಷ್ಟಿಯೂ ಸೇರಿದರೆ ಮಹತ್ತಮವಾದ ನಾಟಕವಾಗುತ್ತದೆ. ಹೋಮರ್ ಮೊದಲಾದವರ ಮಹಾಕಾವ್ಯಗಳಲ್ಲಿ 'ಮಹೋಪಮೆ'ಯು ರಸಪುಷ್ಟಿಯನ್ನುಂಟುಮಾಡುತ್ತದೆ. ಅಲಂಕಾರಗಳಿಗೆಲ್ಲ 'ಭಾವಕೋಶಪುಷ್ಟಿ'ಯೇ ಪ್ರಯೋಜನ. ಮಹಾಕಾವ್ಯಗಳನ್ನು ಓದಿದಾಗ ಸಹೃದಯನಿಗೆ ಬರುವುದೇ ಭೂಮಾನುಭೂತಿ.

ಹಳೆಗನ್ನಡಸಾಹಿತ್ಯದಿಂದಲೂ ಇತರ ಸಾಹಿತ್ಯಗಳಿಂದಲೂ ಸನ್ನಿವೇಶಗಳನ್ನಾರಿಸಿಕೊಂಡು ಈ ತತ್ವಗಳನ್ನೆಲ್ಲಾ ಮನೋಹರವಾಗಿ 'ಕುವೆಂಪು' ಅವರು ವಿವರಿ

ಸಿರುವರಲ್ಲದೆ ಕೆಲವು ಕವಿಗಳ ತುಲನಾತ್ಮಕವಿಮರ್ಶೆಯನ್ನೂ ಮಾಡಿದ್ದಾರೆ. ಅವರ ತತ್ವದಲ್ಲಿ ಬಹುಶ್ರುತತ್ವದ ಕುರುಹಿರುವಂತೆಯೇ ಶೈಲಿಯಲ್ಲಿ ಸಾಹಿತ್ಯಕೌಶಲದ ಹರಹೂ ಇದೆ. ಕೆಲವು ವೇಳೆ ಅಲಂಕಾರಗಳು ಕೃತಕವೆನಿಸುವುವಾದರೂ ನಿರರ್ಥಕ ವೆನಿಸುವುದಿಲ್ಲ. ಅವರ ಸೂತ್ರಪ್ರಾಯವಾದ ವಾಕ್ಯಚಮತ್ಕಾರಕ್ಕೆ ಇವು ಕೆಲವು ಉದಾಹರಣೆಗಳು: "ಅಲ್ಲಿಯ ಶೃಂಗಾರವೂ ತಪೋಮಯವಾಗಿದೆ; ತಪಸ್ಸೂ ಶೃಂಗಾರಪೂರ್ಣವಾಗಿದೆ" (ಪುಟ ೩); "ಸ್ಪಷ್ಟತೆಗೂ ಅಲ್ಪತೆಗೂ ಆತ್ಮಸಂಬಂಧ ವಿರುವಂತೆ ಅಸ್ಪಷ್ಟತೆಗೂ ಭೂಮತೆಗೂ ಅಧ್ಯಾತ್ಮಸಂಬಂಧವಿದೆ" (ಪುಟ ೪೯); "ಹದಿನೆಂಟು ವರ್ಣನೆಗಳಲ್ಲಿ 'ರಾಜೀವಾಕರ'ದ ವರ್ಣನೆಯೂ ಒಂದಿರಬೇಕೆಂದು ಅದರ ವರ್ಣನೆಗೆ ತೊಡಗುವ ಪಂಡಿತನಾದ 'ಪ್ರಯತ್ನಕವಿ'ಗೆ ತನ್ನ ವರ್ಣನೆಯ ವಿಷಯದ 'ಜೀವಾಕರ' ಅಲಕ್ಷಿತ" (ಪುಟ ೭೦).

ಈ ಗ್ರಂಥವನ್ನು ಬರೆದು ಕನ್ನಡ ಕಾವ್ಯವಿಮರ್ಶೆಯ ಸಾಹಿತ್ಯವನ್ನು ಅಲಂಕರಿ ಸಿರುವುದಕ್ಕಾಗಿ 'ಕುವೆಂಪು' ಅವರು ಅಭಿನಂದನೀಯರು. ಓದುವಾಗ ಕಣ್ಣಿಗೆ ಬಿದ್ದ ಅಚ್ಚಿನ ತಪ್ಪುಗಳಿವು: 'ಕಾದಂಬಯ' (ಪುಟ ೭೭, ಸಾಲು ೧೬); 'ಆಶೀರ್ವಾಣ' (ಪುಟ ೧೨೧; ೫-೬).

ಡಾ. ಕೆ. ಕೃಷ್ಣಮೂರ್ತಿ

***

ಗಂಗಾಸಾನಿ (ಸಾಮಾಜಿಕ ಕಾದಂಬರಿ)—ಬರೆದವರು: "ವರಗಿರಿ"; ಪ್ರಕಾಶಕರು: ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ, ೧೯೪೯; ಪುಟಗಳು, ೧೬೨+೬; ಬೆಲೆ, ರೂ. ೧-೧೪-೦.

ಹೆಸರೇ ಹೇಳುವಂತೆ 'ಗಂಗಾಸಾನಿ' ಒಂದು ವೇಶ್ಯೆಯ ಜೀವನವನ್ನು ಕುರಿತ ಕಾದಂಬರಿ ಎಂದು ತಕ್ಷಣ ಹೊಳೆಯುವುದಾದರೂ ವೇಶ್ಯೆಯ ಜೀವನ ಎಂದಾಗ ನಮ್ಮ ಮನಸ್ಸಿನಲ್ಲಿ ಮೂಡುವ ಆ ಕಾಮಮೋಹಗಳ ಶೃಂಗಾರ ಚಿತ್ರಗಳು ಇಲ್ಲಿ ಅಷ್ಟಾಗಿ ಇಲ್ಲದಿರುವುದು ಇದರ ವೈಶಿಷ್ಟ್ಯವೆನ್ನಬೇಕು. ಗಂಗಾಸಾನಿ ಪಾತರದ ಕುಲದವಳು. ವೇಶ್ಯೆ ಆದರೂ ಅವಳ ಮನಸ್ಸು ಪರಿಶುದ್ಧವಾದುದು ಮತ್ತು ತನ್ನ ಗುರಿಯನ್ನು ಕಂಡುಕೊಂಡುದು. ತನ್ನ ಹಿಂದಿನವರಂತೆ ಧಾರವಾಡದಲ್ಲಿ ಇದ್ದು ಕೊಂಡು ಅವಳು ಭೋಗವಿಲಾಸದ ತನ್ನ ಭವ್ಯಮಂದಿರವನ್ನು ಮೆರೆಸಬಹುದಾಗಿದ್ದಿತು. ಆದರೆ ಗಂಗಾಸಾನಿ ಆ ಕೃತಕ ಜೀವನದಿಂದ ದೂರ ಓಡಿಬಂದಳು. ಅವಳ ಮನಸ್ಸು ಶಂಭುಲಿಂಗನ ಬೆಟ್ಟದ ಆ ದೇವರಿಂದ ಆಕರ್ಷಿತವಾಯಿತು. ಆದರೆ ಅವಳಲ್ಲಿ

ಕಾಮ ಸೇರಲಿಲ್ಲವೇ, ಅವಳು ದೇವರಸೇವೆಯಲ್ಲಿ ಮಾತ್ರ ತೊಡಗಿದಳೇ ಎಂದು ಕೇಳಿದಾಗ ಉತ್ತರ ಇಲ್ಲ ಎಂದು ಬರುವುದಿಲ್ಲ. ಶಂಭುಲಿಂಗ ದೇವಸ್ಥಾನದ ಶ್ರೀಕಂಠ ಶಾಸ್ತ್ರಿಗಳಿಂದ ಆಕರ್ಷಿತಳಾಗಿ ಅವರನ್ನು ತನ್ನ ಪತಿಯೆಂದು ಭಾವಿಸಿಕೊಂಡು ಆ ಬೆಟ್ಟದ ಹಳ್ಳಿಯಲ್ಲೇ ಉಳಿದುಕೊಂಡಳು. ಅವಳ ನಿಷ್ಠೆ, ಶ್ರದ್ಧೆ ಮತ್ತು ಭಕ್ತಿ ಗಳು ಅವಳನ್ನು ವಿಲಾಸದ ದಾರಿಯಲ್ಲಿ ಕೊಂಡೊಯ್ಯಲಿಲ್ಲ; ಆದರೆ ಶುದ್ಧ ಪ್ರೇಮದ ದಾರಿಯಲ್ಲಿ ಕೊಂಡೊಯ್ದುವು. ಅವಳಲ್ಲಿ ಆ ಹಳ್ಳಿಯವರೆಲ್ಲ ಒಂದು ರೀತಿಯ ಗೌರವ ನಂಬಿಕೆಗಳನ್ನಿಟ್ಟುಕೊಂಡಿದ್ದರು.

ಅದೇ ಹಳ್ಳಿಯಲ್ಲಿದ್ದ ಶುದ್ಧ ನಿಷ್ಕಪಟ ಸ್ವಭಾವದ ಶಂಕರಭಟ್ಟರ ಮಗಳು ಸುಭಗ ಮದುವೆಯಾದ ಎಳದರಲ್ಲೇ ವಿಧವೆಯಾಗುವಳು. ಯೌವನದಿಂದ ಅರಳಿ ನಿಂತಿದ್ದ ಸುಭಗ ಶ್ರೀಕಂಠಶಾಸ್ತ್ರಿಗಳ ಸೇತಕ್ಕೆ ಸಿಕ್ಕದೆ ಅವರ ಕೋಪಕ್ಕೆ ಪಾತ್ರ ಳಾಗಬೇಕಾಯಿತು. ಆದರೆ ನಾಟಕ ಅಭ್ಯಾಸಮಾಡಿಸಲು ಆ ಹಳ್ಳಿಗೆ ಆಗಂತುಕ ನಾಗಿ ಬಂದಿದ್ದ ತರುಣ ರಾಮುವಿನ ಸೇತಕ್ಕೆ ಸಿಕ್ಕುವಳು, ಗರ್ಭಿಣಿಯೂ ಆಗುವಳು. ಹಿಂದಿನಿಂದ ಬಂದಿದ್ದ ಕಠೋರನೀತಿಯನ್ನು ಸಡಿಲಿಸಲಾರದ ಆ ಹಳ್ಳಿಯ ಸಮಾಜ ರಾಮು ಮತ್ತು ಸುಭಗ ಇವರಿಗೆ ಇನ್ನೆಷ್ಟು ಕಷ್ಟಗಳನ್ನು ಕೊಡಬೇಕಾಗಿದ್ದಿತೋ, ಅವರನ್ನು ಇನ್ನೆಷ್ಟು ನರಳಿಸಬೇಕಾಗಿತ್ತೋ! ಶ್ರೀಕಂಠಶಾಸ್ತ್ರಿಗಳಂಥ ಸಮಾಜಘಾತು ಕರು, ಸ್ವಾರ್ಥಸಾಧಕರು ಪ್ರತಿ ಹಳ್ಳಿಯಲ್ಲಿಯೂ ಇದ್ದೇ ಇರುತ್ತಾರೆ. ಆದರೆ ಇಷ್ಟ ರಲ್ಲಿ ಆ ಊರಿಗೆ ಪ್ಲೇಗು ಬಂದು ಗಂಗಾಸಾನಿ ದೈವಾಧೀನಳಾಗುವಳು. ಆದರೆ ಅವಳು ಸಾಯುವುದಕ್ಕೆ ಮುನ್ನ ರಾಮು ಮತ್ತು ಸುಭಗ ಇವರ ಉದ್ಧಾರಕಳಾಗುವಳು. ಧಾರವಾಡದಲ್ಲಿಯ ತನ್ನ ಆಸ್ತಿಯನ್ನು ಬಿಟ್ಟುಕೊಟ್ಟು ಅವರು ಸ್ವತಂತ್ರವಾಗಿ ಸಮಾಜದ ಕಠೋರತೆಯಿಂದ ಮುಕ್ತರಾಗಿ ಬದುಕಿಕೊಳ್ಳುವಂತೆ, ಬಾಳುವಂತೆ ದಾರಿ ಮಾಡಿಕೊಡುತ್ತಾಳೆ.

ಗಂಗಾಸಾನಿ ವೇಶ್ಯೆಯಲ್ಲ, ಪವಿತ್ರ ನಾರಿಮಣಿಯಾಗಲು ಪ್ರಯತ್ನಿಸಿದ ಸಾಧ್ವಿ. ಇಡೀ ಕಾದಂಬರಿಯನ್ನು ಅವಳದೇ ಆದ ಕಾಂತಿ ಆವರಿಸಿದೆ. ಗಂಗಾಸಾನಿಯ ಮೂಲಕ ಕಾಮದ ಚಿತ್ರವನ್ನು ಅರಳಿಸದೆ ಶುದ್ಧ ಪ್ರೇಮದ ಚಿತ್ರವನ್ನು ಓದುಗರ ಮುಂದಿಡಲಾಗಿದೆ. ಈ ಪ್ರಯತ್ನ ಬಹುಮಟ್ಟಿಗೆ ಸಫಲವಾಗಿದೆ. ಇದಕ್ಕೆ ತೆಗೆದು ಕೊಂಡಿರುವ ಹಿನ್ನೆಲೆ ಉತ್ತರ ಕರ್ಣಾಟಕದ ಒಂದು ಸುಂದರಹಳ್ಳಿ. ಹಳ್ಳಿಯ ಪ್ರಕೃತಿ ಸೌಂದರ್ಯವನ್ನು ಚಿತ್ರಿಸಿರುವಂತೆಯೇ ಆ ಹಳ್ಳಿಯ ಸಮಾಜದ ಸುಂದರ ಕಠೋರ ಚಿತ್ರವನ್ನೂ ಲೇಖಕರು ನಮ್ಮ ಮುಂದೆ ಇಟ್ಟಿದ್ದಾರೆ. ಬಾಳಿನ ಅನುಭವ ವನ್ನು ಏನೂ ಅರಿಯದ ವಿಧವೆಯರ ಬದುಕಿನ ಸಮಸ್ಯೆಯನ್ನು ನಮಗೆ ಕಾಣಿಸ

ಲಾಗಿದೆ. ಆ ಬಾಳಿನ ಸಮಸ್ಯೆಯ ಪರಿಹಾರ ಈ ಕಾದಂಬರಿಯಲ್ಲಿ ಆಗಿರುವಂತೆ ಎಲ್ಲ ಕಡೆಯೂ ಆಗಲು ಸಾಧ್ಯವಿಲ್ಲ. ಗಂಗಾಸಾನಿಯಂಥ ಪವಿತ್ರ ಜೀವದ ಅಮೃತಮಯ ಹಸ್ತ ಎಲ್ಲರಿಗೂ ದೊರಕಲು ಸಾಧ್ಯವಿಲ್ಲ. ಒಂದು ಬದುಕಿನ ಸಮಸ್ಯೆಯ ಪರಿಹಾರ ಆಯಾ ವ್ಯಕ್ತಿಗಳ ಅಂತಃಶಕ್ತಿಯಮೂಲಕ ಆಗುವುದೇ ಶ್ರೇಷ್ಠತಮವಾದದ್ದು. ಅದಕ್ಕೆ ಬಾಹ್ಯಸಾಧನ ಮತ್ತು ನೆರವುಗಳನ್ನು ಎಲ್ಲೆಲ್ಲೂ ದೊರಕಿಸಿಕೊಡಲು ಆಗುವುದಿಲ್ಲ. ಗಂಗಾಸಾನಿಯ ಪಾತ್ರಚಿತ್ರಣದ ಮೂಲಕ ದೊರಕಿರುವ ಸಫಲತೆ ರಾಮು ಮತ್ತು ಸುಭಗ ಇವರ ಬಾಳಿನ ಸಮಸ್ಯೆಯ ಚಿತ್ರಣದ ಮೂಲಕ ಆಗಿಲ್ಲವೆಂದೇ ನನ್ನ ಭಾವನೆ. ಇತ್ತೀಚೆಗೆ ಅದೇಕೋ ಕನ್ನಡದಲ್ಲಿ ಕಾಮಪ್ರವೃತ್ತಿಯನ್ನು ಕೆರಳಿಸುವಂಥ ಕಾದಂಬರಿಗಳು ಅಲ್ಲಲ್ಲಿ ಕಣ್ಣಿಗೆ ಕಾಣಬರುತ್ತಿವೆ. ಆದರೆ ಈ ಕಾದಂಬರಿಯ ಲೇಖಕರು ವೇಶ್ಯೆಯ ಜೀವನದಲ್ಲೂ ಕಾಮುಕತೆಯನ್ನುಳಿದ ಒಂದು ಅಪೂರ್ವ ಸೌಂದರ್ಯವನ್ನು ತೋರಿಸಲು ಸಾಧ್ಯವಿದೆಯೆಂಬುದನ್ನು ಮನಗಾಣಿಸಿದ್ದಾರೆ. ಚಿಕ್ಕದಾಗಿದ್ದರೂ ಚೊಕ್ಕವಾಗಲು ಪ್ರಯತ್ನಿಸಿರುವ ಈ ಕಾದಂಬರಿ ಓದಲು ಯೋಗ್ಯವಾಗಿದೆಯೆನ್ನುವುದರಲ್ಲಿ ಸಂದೇಹವಿಲ್ಲ.

ಕೆ. ಎಸ್. ಕೆ.

*
* *

ಹೆಣ್ಣಿನ ಕಣ್ಣು (ಸಾಮಾಜಿಕ ಕಾದಂಬರಿ)—ಬರೆದವರು : ಶ್ರೀ ರಾ. ವೆಂ. ಶ್ರೀನಿವಾಸ; ಪ್ರಕಾಶಕರು: ಹಂಸ ಲಿಮಿಟೆಡ್, ಮೈಸೂರು, ೧೯೫೦ ; ಪುಟಗಳು, ೨೦೩ ; ಬೆಲೆ, ರೂ. ೧-೧೫-೦.

'ಮಲಮಗಳು' ಮತ್ತು 'ಸವತಿ' ಎಂಬ ಕಾದಂಬರಿಗಳ ಮೂಲಕ ಪರಿಚಿತರಾದ ಶ್ರೀ. ರಾ. ವೆಂ. ಶ್ರೀನಿವಾಸರು ಈ 'ಹೆಣ್ಣಿನ ಕಣ್ಣು' ಕಿರುಕಾದಂಬರಿಯ ಲೇಖಕರು. ವೇಶ್ಯೆಯರ ಬಾಳಿನ ಸಮಸ್ಯೆಗಿಂತ ಬೇರೆಯಾದ, ಆ ವೇಶ್ಯೆಯರ ಆಕರ್ಷಣೆಗೆ ಸಿಕ್ಕಿ ಬಲೆಗೆ ಬೀಳುವ ಸಂಸಾರಿಗಳ ಮತ್ತು ಕೆಲಮಟ್ಟಿಗೆ ಯುವಕರ ಸಮಸ್ಯೆಯ ಮೇಲೆ ಇಲ್ಲಿ ಬೆಳಕು ಬಿದ್ದಿದೆ. ಹೊಸೂರಿನ ಮಾರಿಗುಡಿ ಚೌಕದ, ಅಂದಿಗೆ ಹೆಸರಾದ, ಲಕ್ಷ್ಮಮ್ಮ ಮತ್ತು ಅವಳ ಆಶ್ರಯವನ್ನು ಸೇರಿದ ಸರ್ವಸೌಂದರ್ಯಕ್ಕೂ ಕಣ್ಣೇ ಪ್ರಧಾನವಾಗಿದ್ದ ರತ್ನ ಇವರ ಮೂಲಕ ಹೊಸೂರಿನ ನಾಲ್ಕು ಕಾಸು ಸಂಪಾದಿಸಿದ ಜನ ಮತ್ತು ಕೆಲವು ಯುವಕರು ಹೇಗೆ ಕಾಮಜೀವನಕ್ಕಾಗಿ ಮತ್ತು ಅದರ ವಿಲಾಸಕ್ಕಾಗಿ ಚಡಪಡಿಸುತ್ತಿದ್ದರು ಅಥವಾ ಅವುಗಳನ್ನು ಕೈಗೂಡಿಸಿಕೊಳ್ಳುತ್ತಿದ್ದರು ಎಂಬುದನ್ನು ಇಲ್ಲಿ ಕಾಣಬಹುದಾಗಿದೆ. ಮಹೇಶ್ವರಪ್ಪನಂಥ ಎಲ್ಲ ವಿಚಾರ

ದಲ್ಲೂ ಸುಖಿ ಎನ್ನಿಸಿಕೊಂಡಿದ್ದ ಸಂಸಾರಿಯೂ ಕೂಡ ರತ್ನಳ ಮೋಹಕ್ಕೆ ಬಲಿಯಾದನು. ಅವನು ಅಷ್ಟರಲ್ಲೇ ಎಚ್ಚರಗೊಳ್ಳದೆ ಹೋಗಿದ್ದರೆ ಮತ್ತೆಷ್ಟು ತೊಂದರೆ ಪಡುತ್ತಿದ್ದನೋ ಎನ್ನಿಸುತ್ತದೆ. ವೇಶ್ಯೆಯಾದವಳು ಒಳ್ಳೆಯ ಬುದ್ಧಿವಂತೆಯಾದರೆ ಹೇಗೆ ಇರಬಹುದೋ ಅದನ್ನೆಲ್ಲ ರತ್ನಳಲ್ಲಿ ಕಾಣಬಹುದು. ಪಟ್ಟಣಕ್ಕೆ ಪಟ್ಟಣವೂ ಅಲ್ಲದ, ಹಳ್ಳಿಗೆ ಹಳ್ಳಿಯೂ ಅಲ್ಲದ ಹೊಸೂರಿನಂಥ ಊರಿನಲ್ಲಿ ವೇಶ್ಯೆಯರಿಗೆ ಸಮಾಜದಲ್ಲಿ ಎಂಥ ಸ್ಥಾನವಿರುತ್ತಿದ್ದಿತು ಎಂಬುದನ್ನು ಇಲ್ಲಿ ಕೊಂಚ ಸ್ಪಷ್ಟವಾಗಿ ಮನಗಾಣಬಹುದಾಗಿದೆ. ಜತೆಗೆ ಒಬ್ಬ ಸ್ತ್ರೀ ವೇಶ್ಯೆಯಾಗುವ ಸನ್ನಿವೇಶಗಳು ಹೇಗೆ ಒದಗಬಹುದು ಎಂಬುದನ್ನು ಲಕ್ಷ್ಮಮ್ಮ ಮತ್ತು ರತ್ನ ಇವರ ಮೂಲಕ ನಮಗೆ ಲೇಖಕರು ಪರಿಚಯ ಮಾಡಿಕೊಟ್ಟಿದ್ದಾರೆ. ರತ್ನ ಮತ್ತು ಕಾನ್ಸ್ಟೇಬಲ್ ಕರಿಯಪ್ಪ ಈ ಪಾತ್ರಗಳು ಮೋಹಕರವಾಗಿದೆ. ಒಟ್ಟಿನಲ್ಲಿ ಕಥೆ ಆಕರ್ಷಕವಾಗಿದೆ. ಆದರೆ ಕಥೆಯ ಹೆಣಿಕೆಯಲ್ಲಿ ಶೈಥಿಲ್ಯವೂ ಕೆಲವು ಕಡೆ ಪುನರುಕ್ತಿ ದೋಷವೂ ತಲೆ ಹಾಕಿದೆ. ಕಥೆ ಕೇವಲ ಮನರಂಜನೆಗಾಗಿ ಬರೆದಂತಿದೆಯೇ ಹೊರತು ಅದರ ಹಿಂದೆ ಅಂಥ ಶ್ರೇಷ್ಠ ಉದ್ದೇಶವಾವುದೂ ಕಾಣುವುದಿಲ್ಲ. ಕಾಮದ ಬಾಹ್ಯಾಡಂಬರ ವಿಲಾಸಗಳನ್ನು ಹೆಚ್ಚು ಮಾಡಿ ತೋರಿಸುವುದರಿಂದ ಓದುಗರ ಕಾಮಪ್ರವೃತ್ತಿ ಕೆರಳಿ ಕೆಟ್ಟದಾರಿಗೆ ಅವರನ್ನು ನೂಕಲು, ಕೆಟ್ಟಯೋಚನೆಗೆ ತಳ್ಳಲು ಅವಕಾಶವಾಗಬಹುದು. ಕಾಮವನ್ನು ಶುದ್ಧಗೊಳಿಸಿ ಉತ್ತಮ ಪರ್ಯವಸಾನದ ಮೂಲಕ ಓದುಗರ ಮಟ್ಟವನ್ನು ಎತ್ತುವುದು ಸಾಹಿತ್ಯದ ಉದ್ದೇಶವಾಗಬೇಕು. ಕಾಮವಿಲ್ಲದೆ ಬಾಳಿಲ್ಲವಾದರೂ ಅದರ ಮೂಲಕ ಹಾದು ಹೋದರೂ ಪವಿತ್ರ ಪ್ರೇಮದ ಅಮೃತಪಾನಕ್ಕೆ ದಾರಿಯಾಗಬೇಕು ; ಇಲ್ಲವೇ ಮೇಲ್ಮೆಯ ಮನಃಪರಿವರ್ತನೆಗೆ ಅವಕಾಶವಾಗಬೇಕು. ಕಾಮಪ್ರಚೋದನೆಯನ್ನು ಬಿಟ್ಟು ಪ್ರೇಮದ ಪ್ರಶಾಂತತೆಯನ್ನೂ ಪ್ರಸನ್ನತೆಯನ್ನೂ ಈಯುವುದು ಗುರಿಯಾಗಬೇಕು ಎಂದು ಹೇಳಬೇಕಾಗಿದೆ.

ಕೆ. ಎಸ್. ಕೆ.

ಸಂಪಾದಕೀಯ

ಮಹಾರಾಜರವರ ಕಾಲೇಜಿನ ಶತಮಾನೋತ್ಸವ

ಕನ್ನಡನಾಡಿನ ಜೀವನಾಡಿಯಾಗಿ ಮೈಸೂರು ದೇಶದಾದ್ಯಂತದ ಬೆಳವಣಿಗೆಗೆ ಪ್ರೇರಕವಾಗಿ ಪೌರಸ್ತ್ಯ ಮತ್ತೂ ಪಾಶ್ಚಾತ್ಯ ಜ್ಞಾನ ಸಂಸ್ಕೃತಿ ಕಲೆಗಳ ಪ್ರಸಾರಣೆಗೆ ಸಾಧನವಾಗಿ ಜನಗಳಲ್ಲಿ ನವಚೈತನ್ಯವನ್ನು ತುಂಬಿಯೂ ತುಂಬುತ್ತಲೂ ಇರುವ ಮೈಸೂರು ಮಹಾರಾಜರವರ ಕಾಲೇಜು ತನ್ನ ಶತಮಾನೋತ್ಸವವನ್ನು ಅದು ಸ್ಥಾಪಿತವಾದ ಒಂದುನೂರ ಹದಿನೇಳು ವರ್ಷಗಳಾದಮೇಲೆ ಕಳೆದ ಜನವರಿ ೨೧ ಮತ್ತು ೨೨ನೆಯ ತಾರೀಖಿನಲ್ಲಿ ಅತಿ ವಿಜೃಂಭಣೆಯಿಂದ ನಡೆಸಿತು. ಆ ದಿನಗಳು ಶಾಲೆಯ ಇತಿಹಾಸದಲ್ಲಿ ಸುವರ್ಣಾಕ್ಷರದಿಂದ ಬರೆದಿಡಲು ಯೋಗ್ಯವಾದುವು. ಸಂಬಂಧಪಟ್ಟವರಿಗೆ ಸುಮಾರು ಒಂದು ವಾರದಿಂದಲೇ ವಿಶೇಷ ಸಂಭ್ರಮವಾದರೂ ಮೈಸೂರು ನಗರಕ್ಕೆ ಆ ಎರಡು ದಿನಗಳೂ ಬಹು ಹರ್ಷಜನಕವಾಗಿದ್ದುವು. ಶಾಲಾ ಭವನವು ತಳಿರುತೋರಣಗಳಿಂದಲೂ ಸುಣ್ಣ ಬಣ್ಣಗಳಿಂದಲೂ ಬಹು ಸುಂದರವಾಗಿ ಕಂಗೊಳಿಸುತ್ತಿತ್ತು. ಶಾಲೆಯ ಒಳಗಡೆಯ ಅಂಗಳವು ಎಂದೂ ಇಲ್ಲದ ವೈಭವದಿಂದ ಮೆರೆಯುತ್ತಿತ್ತು. ಮೊದಲನೆಯ ದಿನ ಪ್ರಾತಃಕಾಲ ೧೦ ಘಂಟೆಗೆ ಸುಮಾರು ಐಯ್ದುಸಾವಿರ ಹೊಸ ಮತ್ತು ಹಳೆಯ ವಿದ್ಯಾರ್ಥಿಗಳಿಂದಲೂ ಪುರಪ್ರಮುಖ ರಿಂದಲೂ ಮಹಿಳೆಯರಿಂದಲೂ ಮಕ್ಕಳಿಂದಲೂ ತುಂಬಿ ಸಭೆಯು ಕಿಕ್ಕಿರಿದು ಹೋಗಿತ್ತು. ಹತ್ತುವರೆ ಗಂಟೆಗೆ ಸರಿಯಾಗಿ ಶ್ರೀಮನ್ ಮಹಾರಾಜ ಶ್ರೀ ಜಯ ಚಾಮರಾಜೇಂದ್ರ ಒಡೆಯರವರು ಸಮಸ್ತ ರಾಜಮರ್ಯಾದೆಗಳಿಂದ ದಯಮಾಡಿಸಿ ಶಾಲೆಯ ಮುಂಭಾಗದಲ್ಲಿ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೈನ್ಯದಳದವರಿಂದ ಗೌರವಿಸಲ್ಪಟ್ಟು ಒಳಕ್ಕೆ ದಯಮಾಡಿ ಬಹು ಸುಂದರವಾಗಿ ಅಲಂಕೃತವಾಗಿದ್ದ ಸಭಾ ಭವನದ ಮಧ್ಯೆ ಭದ್ರಾಸನದಲ್ಲಿ ಮಂಡಿತರಾದರು. ಪ್ರಾರ್ಥನೆಯೂ ಸುಶ್ರಾವ್ಯ ವಾದ ಸಂಗೀತವೂ ಆದಮೇಲೆ ಶತಮಾನೋತ್ಸವದ ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಟಿ. ಸಿದ್ಧಲಿಂಗಯ್ಯನವರು ಸ್ವಾಗತಭಾಷಣವನ್ನು ಮಾಡಿದರು, ಉಪಾಧ್ಯಕ್ಷರಾದ ಶ್ರೀಮಾನ್ ವಿ. ಎಲ್. ಡಿಸೌಜಾ ಅವರು ಮಹಾರಾಜರವರಿಗೆ ಶತಮಾನೋತ್ಸವದ ಸಂಚಿಕೆಯನ್ನು ಒಪ್ಪಿಸಿದರು. ಮಹಾರಾಜರವರು ಗಂಭೀರವಾದ ತಮ್ಮ ಅಮೃತವಾಣಿಯಿಂದ ಉದ್ಘಾಟನ ಭಾಷಣವನ್ನು ಮಾಡುತ್ತ ಮಹಾರಾಜ ರವರ ಕಾಲೇಜು ಕಳೆದ ನೂರಾರು ವರ್ಷಗಳಲ್ಲಿ ದೇಶಕ್ಕೆ ಸಲ್ಲಿಸಿದ ಸೇವೆಯನ್ನು

ಸ್ಮರಿಸಿ ಇಂದಿನ ವಿಜ್ಞಾನಯುಗದಲ್ಲಿ ಸಾಹಿತ್ಯ, ಕಲೆ, ತತ್ತ್ವಶಾಸ್ತ್ರ, ಆತ್ಮವಿದ್ಯೆಗಳ ಅಭ್ಯಾಸವು ಹಿಂದಿನ ಕಾಲಕ್ಕಿಂತ ಎಷ್ಟು ಹೆಚ್ಚು ಆವಶ್ಯಕವೆಂಬುದನ್ನೂ ಅವುಗಳ ಶಿಕ್ಷಣದಲ್ಲಿಯೇ ತೊಡಗಿರುವ ಮಹಾರಾಜ ಕಾಲೇಜಿನ ಕಾರ್ಯವು ಎಂತಹ ಪ್ರಮುಖಸ್ಥಾನವನ್ನು ಆಕ್ರಮಿಸಿದೆಯೆಂಬುದನ್ನೂ ತೋರಿಸಿ ಶತಮಾನೋತ್ಸವದ ಕುರುಹಾಗಿ ತಾವು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭಾರತೀಯ ವಿದ್ಯೆಗಳ ಅಭ್ಯಾಸಕ್ಕಾಗಿ ಪ್ರತ್ಯೇಕವಾಗಿ ಒಂದು ವಿದ್ವತ್ ಪೀಠವನ್ನು ಸ್ಥಾಪಿಸಲು ಒಂದು ದತ್ತಿಯನ್ನೂ ಕಲಾಸಂಸ್ಕೃತಿಗಳ ಅಭ್ಯಾಸಕ್ಕೆ ಸಾಧಕವಾಗುವಂತೆ ಒಂದು ದಿವ್ಯಭವನವನ್ನೂ ಅನುಗ್ರಹಿಸಿರುವುದಾಗಿ ತಿಳಿಸಿ ಕಾಲೇಜಿಗೆ ಜಯವಾಗಲೆಂದು ಮುಕ್ತಕಂಠದಿಂದ ಹರಸಿದ್ದಲ್ಲದೆ ಉತ್ಸವದ ಅಂಗವಾಗಿ ಶ್ರೀ ಶಾರದಾದೇವಿಯ ಪ್ರತಿಷ್ಠೆಯನ್ನೂ ಅಶೋಕಸ್ತಂಭದ ಅನಾವರಣವನ್ನೂ ಮೇಲೆ ಸೂಚಿಸಿದ ತಮ್ಮಿಂದಲೇ ದತ್ತವಾದ ತಮ್ಮ ನಾಮಾಂಕಿತವಾದ ಶತಮಾನೋತ್ಸವ ಸ್ಮಾರಕಭವನದ ಶಂಕುಸ್ಥಾಪನೆಯ ಮಹೋತ್ಸವವನ್ನೂ ನೆರವೇರಿಸಿದರು.

ಮಧ್ಯಾಹ್ನ ಎರಡು ಗಂಟೆಯಿಂದ ನಾಲ್ಕುಗಂಟೆಯವರೆಗೆ ಕಾಲೇಜಿನ ಹೊಸ ಮತ್ತು ಹಳೆಯ ವಿದ್ಯಾರ್ಥಿಗಳಿಗೆ ಆಟದ ಪಂದ್ಯಗಳು ನಡೆದುವು. ೫೦ ವರ್ಷವನ್ನು ಮೀರಿದ ಅನೇಕ ಮಹನೀಯರು ಇದರಲ್ಲಿ ಭಾಗವಹಿಸಿದ್ದುದು ಇದರ ವೈಶಿಷ್ಟ್ಯ.

ನಾಲ್ಕುವರೆ ಗಂಟೆಗೆ ಮೊದಲನೆಯ ದರ್ಜೆಯ ಕಾಲೇಜಿನಲ್ಲಿ ಉಪಹಾರ ವೇರ್ಪಡಿಸಿತ್ತು. ಮಹಾರಾಜರವರು ಹಳೆಯ ವಿದ್ಯಾರ್ಥಿಯ ಉಡುಪಿನಲ್ಲಿ ದಯ ಮಾಡಿಸಿ ಎಲ್ಲರೊಡನೆಯೂ ಕಲೆತು ಸರಸಸಲ್ಲಾಪಗಳಿಂದಿದ್ದುದು ಅನೇಕರಿಗೆ ಬಹು ತೃಪ್ತಿಯನ್ನುಂಟುಮಾಡಿತು.

ಸಾಯಂಕಾಲ ೬ ಗಂಟೆಗೆ ಪುನಃ ಸಭೆ. ಡಾ|| ಸಿ. ಆರ್. ರೆಡ್ಡಿ ಅವರು ಅಧ್ಯಕ್ಷರು. ಹಳೆಯ ಮತ್ತು ಹೊಸ ವಿದ್ಯಾರ್ಥಿಗಳ ಸವಿನೆನಪುಗಳಿಂದಲೂ ಭಕ್ತಿ ಪ್ರದರ್ಶನದಿಂದಲೂ ಕೂಡಿದ ಭಾಷಣಗಳು, ಸುಶ್ರಾವ್ಯವಾದ ಸಂಗೀತ, ಅಧ್ಯಕ್ಷರ ಭಾಷಣ, ಮನರಂಜನ ಕಾರ್ಯಗಳು ಮೊದಲಾದವುಗಳಿಂದ ಕೂಡಿ ಬಹು ಚಿತ್ತಾಕರ್ಷಕವಾಗಿದ್ದು ರಾತ್ರಿ ಹತ್ತು ಗಂಟೆಗೆ ಆದಿನದ ಕಾರ್ಯಕಲಾಪಗಳು ಮುಗಿದುವು. ವಿದ್ಯುದಿಲಾಖೆಯವರ ಕೈಚಳಕದಿಂದ ಶಾಲೆಯ ಆವರಣವು ಜ್ಯೋತಿರ್ಮಯವಾಗಿ ಅಪೂರ್ವ ಸೌಂದರ್ಯವನ್ನು ಬೀರುತ್ತಿತ್ತು.

ಮಾರನೆಯ ದಿನ ಹತ್ತೂಮುಕ್ಕಾಲು ಗಂಟೆಗೆ ಶ್ರೀಮನ್ ಮಹಾರಾಜರವರೂ ಕ್ರಾಫರ್ಡ್ ವ್ಯಾಯಾಮಶಾಲೆಯ ಶಂಕುಸ್ಥಾಪನೆಯ ಮಹೋತ್ಸವವನ್ನು ನೆರವೇರಿಸಿದರು.

ಸಾಯಂಕಾಲ ೫-೩೦ ಗಂಟೆಗೆ ಸಾರ್ವತ್ರಿಕ ಸಭೆ ಸೇರಿತು. ಹಣಕಾಸಿನ ಸಚಿವರಾದ ಶ್ರೀಮಾನ್ ಎಚ್. ಸಿ. ದಾಸಪ್ಪನವರು ಅಧ್ಯಕ್ಷರು. ರೆವೆನ್ಯೂ ಮಂತ್ರಿಗಳಾದ ಶ್ರೀ ಸಿದ್ದಯ್ಯನವರು ಶ್ರೀ ಸರ್ ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರವನ್ನೂ ಪ್ರೊಫೆಸರ್ ಎ. ಆರ್. ವಾಡಿಯಾ ಅವರು ದಿವಂಗತ ಶ್ರೀ ಎಂ. ಹಿರಿಯಣ್ಣನವರ ಭಾವಚಿತ್ರವನ್ನೂ ಅವರವರ ಗುಣಕಥನಗಳೊಡನೆ ಅನಾವರಣಮಾಡಿದರು. ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳು ಕೊಡಲ್ಪಟ್ಟವು. ಕಾಲೇಜಿನ ಬಹಳ ಹಳೆಯ ವಿದ್ಯಾರ್ಥಿಗಳಾದ ಅಂಬೈ ಸುಬ್ರಹ್ಮಣ್ಯ ಅಯ್ಯರ್, ಟಿ. ಕೃಷ್ಣರಾವ್, ಸಿ. ನರಸಿಂಹಮ್ಮಯ್ಯ ಇವರುಗಳಿಗೆ ವಿಶೇಷ ಬಹುಮಾನಗಳು ಸಂದವು. ರಾತ್ರಿ ಬಹು ದೀರ್ಘಕಾಲದವರೆಗೆ ಮನರಂಜನಕಾರ್ಯಗಳು ನಡೆದು ಉತ್ಸವದಲ್ಲಿ ಭಾಗಿಗಳಾದವರ ಮನಸ್ಸಿನಮೇಲೆ ಚಿರಸ್ಮರಣೀಯವಾದ ಪ್ರಭಾವವನ್ನು ಬೀರಿವೆ.

ಶತಮಾನೋತ್ಸವದ ನೆನಪು ಶಾಶ್ವತವಾಗಿ ಉಳಿಯುವುದು ಎಲ್ಲದಕ್ಕಿಂತಲೂ ಮಿಗಿಲಾಗಿ ಆ ಸಂಬಂಧದಲ್ಲಿ ಏರ್ಪಡಿಸಿದ್ದ ಸಾಹಿತ್ಯ ಕಲಾ ಪ್ರದರ್ಶನಗಳಿಂದ. ವಿಶ್ವವಿದ್ಯಾನಿಲಯ ಸಂಘದ ಭವನದಲ್ಲಿ ಅಪೂರ್ವವಾದ ಕುಶಲಕಲೆಗಳು, ಪ್ರಾಚ್ಯ ಕೋಶಾಗಾರದ ಮತ್ತು ಶಾಸನದ ಇಲಾಖೆಗೆ ಸಂಬಂಧಪಟ್ಟ ವಸ್ತುಗಳು ಪ್ರದರ್ಶಿತವಾಗಿದ್ದುವು. ಕಾಲೇಜಿನ ಮಹಡಿಯಮೇಲೆ ಮನಶ್ಶಾಸ್ತ್ರ, ಕನ್ನಡ, ಇಂಗ್ಲೀಷ್, ಸಂಸ್ಕೃತ, ಹಿಂದಿ, ಉರ್ದು, ಗಣಿತ, ಭೂಗೋಳ, ಚರಿತ್ರೆ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ಅನೇಕ ವಸ್ತುಗಳು ಪ್ರತ್ಯೇಕ ಕೊಟಡಿಗಳಲ್ಲಿ ತಮ್ಮದೇ ಆದ ವೈಭವದಿಂದ ಪ್ರದರ್ಶಿತವಾಗಿದ್ದುವು. ಇವು ಅನೇಕ ಪ್ರೇಕ್ಷಕರನ್ನು ಮುಗ್ಧರನ್ನಾಗಿ ಮಾಡಿವೆ—ಇವುಗಳಿಂದ ಶತಮಾನೋತ್ಸವಕ್ಕೆ ಪ್ರತ್ಯೇಕ ಕಳೆಯೇರಿದೆಯೆಂದರೆ ಅತ್ಯುಕ್ತಿಯಾಗಲಾರದು.

ಕಾಲೇಜಿಗೆ ಇಂತಹ ಶತಮಾನೋತ್ಸವಗಳನೇಕವನ್ನು ಆಚರಿಸುವ ಸುಯೋಗವು ಲಭಿಸಲೆಂದು ಹಾರೈಸುತ್ತೇವೆ.

***

ಕಂಬನಿ

ಭಾರತದ ಉಪಪ್ರಧಾನಿ ಸರ್ದಾರ್ ವಲ್ಲಭಬಾಯಿ ಪಟೇಲರು ಈಗ ಕೆಲವು ದಿನಗಳ ಕೆಳಗೆ ನಮ್ಮನ್ನಗಲಿ ಕಣ್ಮರೆಯಾದುದು ಇಡೀ ಭರತಖಂಡಕ್ಕೆ ವಿಶೇಷ ದುಃಖವನ್ನುಂಟುಮಾಡಿದೆ.

ಇವರು ಗುಜರಾತಿನ ಒಂದು ಹಳ್ಳಿಯಲ್ಲಿ ಜನ್ಮತಾಳಿದರು. ಬಾಲ್ಯದಲ್ಲಿ

ಸಾಹಸ ಪ್ರಿಯರು. ಚಿಕ್ಕ ವಯಸ್ಸಿನಲ್ಲಿಯೇ ವಕೀಲ ವೃತ್ತಿಯನ್ನು ಕೈಗೊಂಡರು. ಇವರ ಹೆಸರನ್ನು ಕೇಳಿದರೆ ನ್ಯಾಯಸ್ಥಾನದಲ್ಲಿ ಎಲ್ಲರಿಗೂ ನಡುಕಹುಟ್ಟುತ್ತಿತ್ತು. ಒಂದು ದಿನ ಪಟೇಲರು ನ್ಯಾಯಸ್ಥಾನದಲ್ಲಿ ವಾದಮಾಡುತ್ತಿದ್ದಾಗ ಅವರ ಹೆಂಡತಿ ಸತ್ತುಹೋದರೆಂದು ತಂತಿಸಮಾಚಾರ ಬಂದಿತು. ಅದನ್ನು ಓದಿದ ವಲ್ಲಭಬಾಯಿಯವರು ಯಾವ ಉದ್ವೇಗವನ್ನೂ ತೋರದೆ ಎಂದಿನಂತೆ ವಾದವನ್ನು ಮುಂದುವರಿಸಿದರು! ಇಂಗ್ಲೆಂಡಿನಲ್ಲಿ ಇವರು ವಿದ್ಯಾರ್ಥಿಯಾಗಿದ್ದಾಗ ನಾರು ಹುಣ್ಣಾಗಿತ್ತು. ವೈದ್ಯರು ಶಸ್ತ್ರಚಿಕಿತ್ಸೆಗಾಗಿ ಕ್ಲೊರೋಫಾರಂ ಕೊಡಬೇಕೆಂದು ಹೇಳಿದಾಗ ತಮಗೆ ಎಷ್ಟು ನೋವಾಗುವುದಾದರೂ ಸಹಿಸಲು ಸಿದ್ಧರೆಂದೂ ಕ್ಲೋರೋಫಾರಂ ಮಾತ್ರ ಬೇಡವೆಂದೂ ಹೇಳಿದರಂತೆ. ಅವರ ಮನೋದಾರ್ಢ್ಯವನ್ನು ಕಂಡು ವೈದ್ಯರೂ ಚಕಿತರಾದರು.

ಗಾಂಧೀಜಿಯವರು ದಕ್ಷಿಣ ಆಫ್ರಿಕದಿಂದ ಹಿಂತಿರುಗಿದ ಮೇಲೆ ಅಹಮದಾಬಾದು ಅವರ ನಿವಾಸಸ್ಥಾನವಾಯಿತು. ಅಲ್ಲಿಯೇ ವಲ್ಲಭಬಾಯಿಯವರು ಪ್ರವರ್ಧಮಾನಕ್ಕೆ ಬರುತ್ತಿದ್ದ ಬ್ಯಾರಿಸ್ಟರ್ ಆಗಿದ್ದರು. ಗಾಂಧೀಜಿ ವಕೀಲರ ವಿನೋದ ಮಂದಿರದಲ್ಲಿ ತಮ್ಮ ಧ್ಯೇಯಗಳನ್ನು ಕುರಿತು ಮಾತನಾಡುತ್ತಿದ್ದಾಗ ಪಟೇಲರು ಒಂದು ಮೂಲೆಯಲ್ಲಿ ಇಸ್ಪೇಟ್ ಆಡುತ್ತ ಗಾಂಧಿಯವರನ್ನು ಹಾಸ್ಯಮಾಡಿದರಂತೆ! ಇಂತಹ ಪಟೇಲರು ಗಾಂಧೀಜಿಯ ನಚ್ಚಿನ ಅನುಯಾಯಿಗಳಾದರು. ೧೯೨೮ರಲ್ಲಿ ನಡೆದ ಬಾರ್ಡೋಲಿಯ ಸತ್ಯಾಗ್ರಹವು ಯಶಸ್ವಿಯಾಗಿ ಪಟೇಲರಿಗೆ ಕೀರ್ತಿ ತಂದಿತು. ದೇಶವೆಲ್ಲ "ವೀರ ಸರದಾರ" ಎಂದು ಘೋಷಿಸಿತು.

ಭಾರತದ ಸ್ವಾತಂತ್ರ್ಯಕ್ಕಾಗಿ ದುಡಿದ ವೀರರಲ್ಲಿ ಪಟೇಲರ ಹೆಸರು ಶಾಶ್ವತವಾಗಿ ಬೆಳಗುವುದರಲ್ಲಿ ಸಂದೇಹವಿಲ್ಲ, ಅವರು ದೇಶಕ್ಕೆ ಮಾಡಿದ ಸೇವೆ ಬಹುಮುಖವಾದುದು. ಸ್ವಾತಂತ್ರ್ಯೋದಯದನಂತರ ದೇಶವನ್ನು ಕವಿದ ನಿರಾಶ್ರಿತರ ಸಮಸ್ಯೆ, ಹೈದರಾಬಾದಿನ ರಜಾಕರರ ಹಾವಳಿ, ದೇಶೀಯ ಸಂಸ್ಥಾನಗಳ ಸಮಸ್ಯೆ ಇಂತಹ ಪ್ರಬಲ ವಿಷಯಗಳನ್ನು ಬಗೆಹರಿಸಿದ ಕೀರ್ತಿ ಪಟೇಲರಿಗೆ ಸಲ್ಲುತ್ತದೆ. ಅವರು ಕಾರ್ಯಶೀಲರು. ಹೊಂಗನಸಿನಲ್ಲಿ ವಿಹರಿಸುತ್ತ ತೇಲಾಡುವ ಕನಸುಗಾರರಲ್ಲ. ನವಭಾರತವು ರೂಪುಗೊಳ್ಳುತ್ತಿರುವ ಈ ಕಾಲದಲ್ಲಿ ಸರದಾರರನ್ನು ಕಳೆದುಕೊಂಡ ನಾವು ಅಪಾರ ನಷ್ಟವನ್ನು ಹೊಂದಿದ್ದೇವೆ. ಅವರ ತ್ಯಾಗ, ದೇಶಪ್ರೇಮ, ಕಾರ್ಯದಕ್ಷತೆ, ಮನೋದಾರ್ಢ್ಯ, ಸಂಯಮ—ಈ ಶಕ್ತಿಗಳು ನಮ್ಮ ರಾಜಕಾರಣಿಗಳಿಗೆ ಮಾರ್ಗದರ್ಶಕವಾಗಲಿ! ಭಗವಂತನು ವಲ್ಲಭಬಾಯಿಯವರ ಆತ್ಮಕ್ಕೆ ಶಾಂತಿಯನ್ನೀಯಲಿ !!

ಸಾದರ ಸ್ವೀಕಾರ

೧. ಚೀನದ ಬಾಳು ಬದುಕು—(ಚೀನೀ ಆಧುನಿಕ ಸಣ್ಣ ಕತೆಗಳ ಸಂಗ್ರಹ) ಇಂಗ್ಲೀಷಿಗೆ ತಂದ ಮೂಲ ಸಂಪಾದಕರು : "ಎಡ್ಗರ್ ಸ್ನೋ" . . . ; ಕನ್ನಡದ ಅನುವಾದಕರು : ಶ್ರೀ ದ. ರಾ. ಬೇಂದ್ರೆ, ಶ್ರೀ ಗು. ಜ. ಮಂಗಲಗಿ ; ಶ್ರೀ ಕೀರ್ತಿ ಕುರ್ತಕೋಟಿ, ಶ್ರೀ ವರಗಿರಿ ಅವರು ; ಪ್ರಕಾಶಕರು : ಶ್ರೀ ಜಿ. ಬಿ. ಜೋಶಿ, ಮನೋಹರ ಗ್ರಂಥಮಾಲಾ, ಧಾರವಾಡ ; ಕ್ರೌನ್ ಅಷ್ಟಪತ್ರ ; ಪುಟ : ೨೬+೪+೪೦೬ ; ಬೆಲೆ ರೂ. ೭-೦-೦.

೨. ಮೇದಿನಾಪುರದ ಮಲ್ಲ—(ಸಾಹಸ ಜೀವನ ಚಿತ್ರ) ಬರೆದವರು : ಶ್ರೀ ಗುರುರಾಜ ಜೋಶಿ ; ಪ್ರಕಾಶಕರು : ಮನೋಹರ ಗ್ರಂಥಮಾಲಾ, ಧಾರವಾಡ ; ಕ್ರೌನ್ ಅ. ಪು. ೨೧೭ ; ಬೆಲೆ ರೂ. ೨-೧೨-೦.

೩. ಹೊಸ ಸಂಸಾರ—(ಏಕಾಂಕ ನಾಟಕಗಳು) ಬರೆದವರು : ಶ್ರೀ ದ. ರಾ. ಬೇಂದ್ರೆ, ಪ್ರಕಾಶಕರು : ಮನೋಹರ ಗ್ರಂಥಮಾಲಾ, ಧಾರವಾಡ ; ಕ್ರೌನ್ ಅ. ಪು. ೧೭೬, ಬೆಲೆ ರೂ. ೧-೧೪-೦.

೪. ಮಾದನ ಮಗಳು—(ಸಾಮಾಜಿಕ ಕಾದಂಬರಿ) ಬರೆದವರು : ಶ್ರೀ ಎಂ. ವಿ. ಸೀತಾರಾಮಯ್ಯ ; ಪ್ರಕಾಶಕರು : ಮನೋಹರ ಗ್ರಂಥಮಾಲಾ, ಧಾರವಾಡ ; ಕ್ರೌನ್ ಅ. ಪು. ೪೦೦. ಬೆಲೆ ರೂ. ೬-೦-೦.

೫. ಹೆನ್ರಿ ಫೋರ್ಡ್—ಬರೆದವರು : ಶ್ರೀ ಸಿ. ಎನ್. ರಾಘವಾಚಾರ್, ಬಿ.ಎಸ್.ಸಿ., ಬಿ.ಟಿ. ; ಪ್ರಕಾಶಕರು : ಎನ್. ಎಸ್. ವಾಸನ್ ಅಂಡ್ ಕೋ., ಪುಸ್ತಕ ವ್ಯಾಪಾರಿಗಳು, ಅವಿನ್ಯೂ ರಸ್ತೆ, ಬೆಂಗಳೂರು ಸಿಟಿ ; ಕ್ರೌನ್ ಅ. ಪು. ೧೯೨ ; ಬೆಲೆ ರೂ. ೧-೧೨-೦.

೬. ವೈಟ್‌ಮಿನ್ಸ್ ಅಥವಾ ಜೀವ ಸತ್ವಗಳು—ಶ್ರೀ ಕೆ. ಸುಂದರೇಶನ್, ಎಲ್. ಎಂ. ಅಂಡ್ ಎಸ್., ಡಿ. ಒ. ಎಂ.ಎಸ್. ; ಕ್ರೌನ್ ಅ. ಪು. ೫೬+೨+೪+೮ ; ಬೆಲೆ ರೂ. ೧-೦-೦.

೭. ಜವಹರಲಾಲ್ ನೆಹರು—ಗ್ರಂಥಕರ್ತರು : ಶ್ರೀ ಎ. ಕೆ. ಪುಟ್ಟರಾಮು, ಬಿ.ಎ.; ಪ್ರಕಾಶಕರು : ಶ್ರೀ ಎಚ್. ದೊರೆಸ್ವಾಮಿ, ಬಿ.ಎಸ್.ಸಿ ; ಸಾಹಿತ್ಯಮಂದಿರ, ಮೈಸೂರು ; ಕ್ರೌನ್ ಅ. ಪು. iv+೧೪೭ ; ಬೆಲೆ ರೂ. ೨-೦-೦.

೮. ಜನಪ್ರಿಯ ವಾಲ್ಮೀಕಿ ರಾಮಾಯಣ—ಬರೆದವರು : ಶ್ರೀ ಕುವೆಂಪು ; ಪ್ರಕಾಶಕರು : ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಮೈಸೂರು ; ಕ್ರೌನ್ ಅ. ಪು. ೩೮೭.

೯. ಅಮೇರಿಕೆಯ ವೃತ್ತಿ ಮೂಲ ಶಿಕ್ಷಣ—ಬರೆದವರು ಮತ್ತು ಪ್ರಕಾಶಕರು : ಶ್ರೀ ಮೇದಿ ಹುಚ್ಚೇಶ್ವರ, ಹುಬ್ಬಳ್ಳಿ ; ಕ್ರೌನ್ ಅ ಪು. viii+೩೦೪+೩೧ ; ಬೆಲೆ ರೂ. ೬-೦-೦.

೧೦. **ಭಕ್ತಿ ಸುಮನಾಂಜಲಿ**—ಅರ್ಪಿಸಿದವರು: ಶ್ರೀ ದೇಶಪಾಂಡೇ ಮನೋಹರ ರಾಯರು, ಎಂ.ಎ; ಪ್ರಕಾಶಕರು: ಬಿ. ಜಿ. ಅವಧಾನಿ, ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ; ಕ್ರೌ ಅ. ಪು. ೨೧೮+೩; ಬೆಲೆ ರೂ. ೩-೦-೦.

೧೧. **ಗೋಮುಖ ವ್ಯಾಘ್ರ**—(ಕಥಾ ಸಂಕಲನ) ಬರೆದವರು: ಶ್ರೀಗಳಾದ ಶ್ರೀಪತಿ ಮತ್ತು ತಾ. ರಾ. ನಾಗಾರಾಜಾ ಇವರುಗಳು; ಪ್ರಕಾಶಕರು: ಸುದರ್ಶನ ಪ್ರಕಟನಾಲಯ, ಬೆಂಗಳೂರು ನಗರ; ಕ್ರೌ ಅ. ಪು. ೬೯; ಬೆಲೆ ರೂ. ೧-೦-೦.

೧೨. **ಇಂಡೋ ಚೀನಾ ಅಥವಾ ವಿಯಟ್‌ನಾಮ್**—ಬರೆದವರು: ಶ್ರೀ ಕುಮಾರ ವೆಂಕಣ್ಣನವರು; ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ನಗರ; ೨೮ ಪುಟಗಳು; ಬೆಲೆ, ರೂ. ೦-೨-೦.

೧೩. **ಧರ್ಮಚಕ್ರ**—ಬರೆದವರು: ಶ್ರೀ ಕುಮಾರ ವೆಂಕಣ್ಣನವರು; ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ನಗರ; ಕ್ರೌ ಅ. ಪು. ೮೮; ಬೆಲೆ ರೂ. ೧-೦-೦.

೧೪. **ಮಾರಿಯೌತಣ**—(ಕಥಾಸಂಕಲನ) ಬರೆದವರು: ಶ್ರೀ ಇಂದಿರಾತನಯರು; ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ನಗರ; ಕ್ರಾ. ಅ. ಪು ೯೦; ಬೆಲೆ ರೂ. ೧-೦-೦.

೧೫. **ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು**—ಸಂಶೋಧಕರು: ಶ್ರೀಗಳಾದ ಚೆನ್ನಪ್ಪ ಉತ್ತಂಗಿ ಮತ್ತು ಸಂ. ಶ್ರಿ, ಭೂಸನೂರ ಮಠ, ಎಂ.ಎ.; ಪ್ರಕಾಶಕರು: ಶ್ರಿ ವೀರಭದ್ರಪ್ಪ ಹಾಲಬಾವಿ, ನಿವೃತ್ತ ನ್ಯಾಯಾಧೀಶರು, ಕಲಾ ಮಂದಿರ, ಧಾರವಾಡ; ಕ್ರಾ. ಅ. ಪು. ೧೦+೩೨೬; ಬೆಲೆ ಸಾದಾಪ್ರತಿ ರೂ. ೫-೦-೦, ಉತ್ತಮ ಪ್ರತಿ ರೂ. ೬-೦-೦.

೧೬. **ಅಣ್ಣನ ಬದುಕು**—ಬರೆದವರು: ಶ್ರೀ ಜ. ಪ. ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು; ಪ್ರಕಾಶಕರು: ಪ್ರಬೋಧ ಪುಸ್ತಕಮಾಲೆ, ನಂ. ೫, ೩ ನೆಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೨; ಕ್ರೌ xviii+೨೨೩+೫; ಬೆಲೆ ರೂ. ೨-೮-೦.

೧೭. **ಕಾರಣಿಕ ಕುಮಾರಯೋಗಿ**—ಬರೆದವರು: ಶ್ರೀ ಜ. ಪ. ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು; ಪ್ರಕಾಶಕರು: ಪ್ರಬೋಧ ಪುಸ್ತಕಮಾಲೆ, ನಂ. ೫, ೩ ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೨; ಕ್ರಾ ಅ. ಪು. ೮+೨೧೩+೩; ಬೆಲೆ ರೂ. ೨-೦-೦.

೧೮. **ನವ್ಯ ಕವಿತೆಗಳು**—ಬರೆದವರು: ಶ್ರೀ ವಿನಾಯಕರವರು; ಪ್ರಕಾಶಕರು: ಕಾವ್ಯಪ್ರಕಾಶನಾ ಸಮಿತಿ; ಕ್ರೌ ಅ. ಪು. ೩೯.

೧೯. **ಕುಬೇರನ ಕವನಗಳು**—ಲೇಖಕರು ಮತ್ತು ಪ್ರಕಾಶಕರು: ಹೆಚ್. ಡಿ. ನಾರಾಯಣರಾಯರು, ಬೆಳಗೊಳು; ಕ್ರೌ ಅ. ಪು. ೮; ಬೆಲೆ ರೂ. ೦-೨-೦.

೨೦. **ಸಾಹಿತ್ಯ ಶಕ್ತಿ**—ಬರೆದವರು : ಶ್ರೀ ಡಿ. ವಿ. ಜಿ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಕ್ರೌ. ಅ. ಪು, ೨೪೮ ; ಬೆಲೆ ರೂ, ೩-೪-೦.

೨೧. **ನನ್ನ ಹಾಡು**—ಬರೆದವರು ಶ್ರಿ ಬ. ಗ. ಯಲ್ಲಟ್ಟಿ ; ಪ್ರಕಾಶಕರು : ಮಿರ್ಜಿ ಅಣ್ಣಾರಾಯರು, ಸೇಡಬಾಳ ; ಕ್ರೌ೧೬ xiv+೭೫ ; ಬೆಲೆ ರೂ. ೧-೦-೦.

೨೨. **ರಾಷ್ಟ್ರಕವಿ ಗೋವಿಂದಪೈ**—ಬರೆದವರು ಮತ್ತು ಪ್ರಕಾಶಕರು ; ಶ್ರೀ ಕಯ್ಯಾರ ಕಿಞ್ಞಣ್ಣರೈ ; ಕ್ರೌ೧೬ ಅ. ಪು. ೫೧ ; ಬೆಲೆ ೦-೧೨-೦.

೨೩. **ವಿಜಯ ಶ್ರೀ**—ಬರೆದವರು : ಶ್ರೀ ಮಿರ್ಜಿ ಅಣ್ಣಾರಾಯರು ; ಪ್ರಕಾಶಕರು : ಎ. ಪಿ. ಚಾಗುಲೆ, ವೀರಭಾರತ ಮುದ್ರಣಾಲಯ ಬೆಳಗಾಂ ; ಕ್ರೌ೧೬ ಅ. ಪು. ೮೦ ; ಬೆಲೆ ರೂ. ೧-೦-೦.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧.*ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩.*ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪.*ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫.*ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯.*ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧.*ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨.*ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪.*ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦.*ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧.*ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨.*ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫.*ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬.*ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦.*ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೩೪.*ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬.*ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧.*ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨.*ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫.*ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬.*ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭.*ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮.*ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯. ಮುದ್ರಣ—ತ. ಸು. ಶಾಮರಾವ್, ಬಿ.ಎ. (ಆನರ್ಸ್).
೫೦.*ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧.*ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨.*ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ
೫೩.*ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪.*ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫.*ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.
೫೬.*ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

ಸಾಧಾರಣ ಪ್ರತಿ ೩ ಆಣೆ.
ಉತ್ತಮ ಪ್ರತಿ ೪ ಆಣೆ

ಕಾರ್ಯದರ್ಶಿ,
ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦ ; ಸಾದಾ ೧೨ ಆಣೆ.

ಪ್ರಧಾನಸಂಪಾದಕರು :
ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೩ ರ ವರೆಗೆ
ಎ. ಆರ್. ಕೃಷ್ಣ ಶಾಸ್ತ್ರೀ, ಎಂ.ಎ., ೧೯೪೩ರಿಂದ ೧೯೪೭ರ ವರೆಗೆ
ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ತೃತೀಯ ಮುದ್ರಣ)—ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. ***ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು: ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು**(ಸಚಿತ್ರ)—ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು: ಕೆ. ವಿ. ಪುಟ್ಟಪ್ಪ, ಎಂ.ಎ.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು: ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು: ಜಿ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು: ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣ ಪ್ರಪಂಚ**—ಲೇಖಕರು: ವಿ. ಸೀತಾರಾಮಯ್ಯ, ಎಂ.ಎ.

೧೦. ***ಸಂಸ್ಕೃತ ನಾಟಕ**—ಲೇಖಕರು: ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು: ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು: ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ—ಲೇಖಕರು: ಎಚ್. ಕೃಷ್ಣರಾವ್, ಎಂ.ಎ.**

೧೪. ಹದಿಬದೆಯ ಧರ್ಮ—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. *ಪುರಾಣನಾಮ ಚೂಡಾಮಣಿ—ಲೇಖಕರು: ಬೆನಗಲ್ ರಾಮರಾವ್, ಎಂ.ಎ., ಎಲ್ ಎಲ್.ಬಿ., ಮತ್ತು ಪಾನ್ಯಂ ಸುಂದರಶಾಸ್ತ್ರಿ; ಬೆಲೆ, ರೂ.೩-೪-೦

೧೬. ಯಶೋಧರ ಚರಿತೆಯ ಸಂಗ್ರಹ—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. *ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೧೮. ಹಿಂದೂ ದೇಶದ ಭೂಚರಿತ್ರೆ—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. ವಚನಧರ್ಮಸಾರ—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. ಪ್ರಾಣಿಶಾಸ್ತ್ರ—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧. *ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು—ಜಿ. ಹನುಮಂತರಾವ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೨೨. ಕನ್ನಡ ಕೈಪಿಡಿ (ಭಾಗ ೫, ಸಾಹಿತ್ಯ ಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. ಇಸ್ಲಾಂ ಸಂಸ್ಕೃತಿ—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

ಸೂಪರಿಂಟೆಂಡೆಂಟ್,
ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

ಇನ್ನುಮುಂದೆ 'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಡ, ಆಶ್ವಯುಜ, ಪುಷ್ಯ ಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

೧೯೫೦–೫೧ ನೆಯ ಸಾಲಿನ ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳಿಹಿಸಬಹುದು.)

ಪ್ರಬುದ್ಧ ಕರ್ಣಾಟಕಕ್ಕೆ ಚಂದಾದಾರರನ್ನು ಒದಗಿಸಿಕೊಡುವ ಪುಸ್ತಕ ವ್ಯಾಪಾರಿಗಳಿಗೂ ವೃತ್ತಪತ್ರಿಕೆಗಳ ಮಾರಾಟಗಾರರಿಗೂ ಶೇಕಡ ೧೨½ ಯಂತೆ ಕಮಿಷನ್ ಕೊಡಲಾಗುವುದು. ಪಾಠಶಾಲಾ ಸಂಸ್ಥೆಗಳಿಗೆ ಪ್ರಚಾರ ಶಾಖೆಯ ಕಾರ್ಯದರ್ಶಿಗಳೇ ನೇರವಾಗಿ ಗಮನಕೊಡುವರು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಫಸ್ಟ್‌ಗ್ರೇಡ್ ಕಾಲೇಜು, ಮೈಸೂರು) ರಿಗೆ ಕಳಿಸಬೇಕು.

ಕಾರ್ಯದರ್ಶಿ

ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕನ್ನಡ ನುಡಿ', ಬೆಂಗಳೂರು; 'ಕಂಠೀರವ', ಮಂಗಳೂರು; 'ತಾಯಿನಾಡು', ಬೆಂಗಳೂರು; 'ನವಸಂದೇಶ', ಬಳ್ಳಾರಿ; 'ವಿಶ್ವಕರ್ಣಾಟಕ' ಬೆಂಗಳೂರು; 'ಸ್ವದೇಶಾಭಿಮಾನಿ' ಮಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಜನಶಕ್ತಿ', ಹುಬ್ಬಳ್ಳಿ; 'ವಾಹಿನಿ', ಬೆಂಗಳೂರು; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ' ಧಾರವಾಡ; 'ಜಯಂತಿ', ಧಾರವಾಡ; 'ಭಾರತಿ' (ತೆಲುಗು), ಮದರಾಸು; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿಮಾ ವಾಣಿಜ್ಯ', ಬೆಂಗಳೂರು, 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ವಾಣಿ'. ಬೆಂಗಳೂರು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ; 'ಶ್ರೀಮನ್ ಮಹಾರಾಜರವರ ಸಂಸ್ಕೃತ ಮಹಾಪಾಠಶಾಲಾ ಪತ್ರಿಕಾ,' ಮೈಸೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ

ಮೈಸೂರು ಮಹಾರಾಜರವರ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟನೆಗಳು

ನಾಗಾನಂದನಾಟಕ (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)—
ಬೆಲೆ ರೂ. ೧-೦-೦

ಕಿರಿಯಕಾಣಿಕೆ (ಎರಡನೆಯ ಮುದ್ರಣ)— ಕ್ಯಾಲಿಕೊ ಪ್ರತಿ ರೂ. ೧-೮-೦

ಮಾರಾಟಗಾರರು :

ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

ಆಷಾಢಭೂತಿ (ಶ್ರೀ ಎ. ಎನ್. ಮೂರ್ತಿರಾವ್, ಎಂ.ಎ. ಅವರಿಂದ)—
ಕ್ಯಾಲಿಕೊ ಪ್ರತಿ ರೂ. ೧-೮-೦

ಸಾವಿನ ಸಮಸ್ಯೆ (ಶ್ರೀ ವೆಂಬಾರ್ ವೆಂಕಟಾಚಾರ್ಯ, ಎಂ.ಎ., ಬಿ.ಕಾಮ್., ಎಲ್ಎಲ್.ಬಿ. ಅವರಿಂದ)— ಸಾದಾ ಪ್ರತಿ ರೂ. ೦-೧೨-೦

ಮಾರಾಟಗಾರರು :

ಕೃಷ್ಣ ಮತ್ತು ಕಂಪನಿ, ಮೈಸೂರು

ಕರ್ಣಾಟಕ ಮೃಚ್ಛಕಟಿಕಪ್ರಕರಣಂ (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦

ಮಾರಾಟಗಾರರು :

ಶ್ರೀ ರಾಮಚಂದ್ರ ಬುಕ್ ಡಿಪೊ,
ದೇವರಾಜ ಮಾರ್ಕೆಟ್, ಮೈಸೂರು

Edited by N. Anantharangachar, M.A., B.T. and T. S. Shama Rao, B.A. (Hon.)
Published by The University of Mysore, Mysore. Printed by J. Brown
at the Wesley Press and Publishing House, Mysore City

VIJAYA EVENING COLLEGE,
LIBRARY
BANGALORE-4.
ACCN. NO 4583
SECTION
COST
Date 25.5.23 Librarian.

Call No.:

Author : ಪ್ರದಾರು ವಿ.ವಿ.

Title : ಪ್ರಬುದ್ಧ ಕರ್ನಾಟಕ ಸಂ.32

Signature	Borrowing Date

4583